

ಇತಿಹಾಸ ದರ್ಶನ

ಸಂಪುಟ ೧೮/೨೦೦೩

KARNATAKA ITIHASA ACADEMY
कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೧೮ / ೨೦೦೩

[illegible]

ಸಂಪಾದಕರು

ಎಂ.ಜಿ. ನಾಗರಾಜ್

ಡಾ|| ಕೆ.ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೧೮/೨೦೦೩

ಸೆಪ್ಟೆಂಬರ್ ೨೦೦೨ರ ೨೨, ೨೩ ಮತ್ತು ೨೪ರಂದು ಹೊಸನಗರದ
ಶ್ರೀರಾಮಚಂದ್ರಾಪುರ ಮಠದ ಆಶ್ರಯದಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ
ಹದಿನಾರನೆಯ ಸಮ್ಮೇಳನದಲ್ಲಿ ಸದಸ್ಯರು ಮಂಡಿಸಿದ ಪ್ರಬಂಧಗಳ ಸಂಕಲನ

ಸಂಪಾದಕರು
ಎಂ.ಜಿ. ನಾಗರಾಜ್
ಡಾ॥ ಪಿ.ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA

The Volume of the Scholarly papers presented and the General body Proceedings of the Sixteenth Annual Conference of **The Karnataka Itihasa Academy** (Regd.,)
held at Sri Ramachandrapura Mutt, Hosanagara
Shimoga District on 22nd 23rd & 24th September 2002

Volume 18, Septmber - 2003

Edited by : **M. G. Nagaraj**
Dr. P. V. Krishna murthy

Published by : Karnataka Itihasa Academy (Regd.)
Gokhale Institute of Public Affairs Premises
Basavanagudi Road, Narasimharaja Colony
Bangalore - 560 019

Price : **Rs. 200/-**

ಬೆಲೆ : ರೂ. ೨೦೦/-

ಪ್ರಬಂಧಕಾರರ ಗಮನಕ್ಕೆ

*ಈ ಸಂಪುಟದ ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ **ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆ**. ಅವು ಅಕಾದೆಮಿಯ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲ. **ಕರ್ನಾಟಕ ಇತಿಹಾಸದ** ಮೇಲೆ ಹೊಸಬೆಳಕು ಚೆಲ್ಲುವ ಬರಹಗಳಿಗೆ **ಇತಿಹಾಸ ದರ್ಶನ** ಮೀಸಲಾಗಿದೆ. ಲೇಖನಗಳು **ಹಸ್ತಲಿಖಿತ** ೧೦ ಪುಟಗಳ ಪರಿಮಿತಿಯಲ್ಲಿ ಇರುವುದು ಸೂಕ್ತ. ಲೇಖನಗಳನ್ನು ಹಾಳೆಯ ಒಂದೇ ಮಗ್ಗುಲಲ್ಲಿ **ಸ್ಫುಟವಾದ ಅಕ್ಷರಗಳಲ್ಲಿ** ಬರೆದಿರಬೇಕು. **ಬೆರಳಚ್ಚು** ಮಾಡಿಸಿದ್ದರೆ ಅಗತ್ಯವಿರುವಡೆ **ತಿದ್ದುಪಡಿ** ಮಾಡಿರಬೇಕು. ಅಡಿಟಿಪ್ಪಣಿಗಳನ್ನು, ಗ್ರಂಥಲೇಖನಾಧಾರ ವಿವರಗಳನ್ನು ಈಗಾಗಲೇ ಸಂಶೋಧನ ಬರಹಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಕ್ರಮದಲ್ಲಿ ನೀಡುವುದು ಉತ್ತಮ. ಈಗಿನ ೧೭ನೇ ಸಮ್ಮೇಳನದಲ್ಲಿ ಮಂಡಿತ ಪ್ರಬಂಧಗಳನ್ನು ಅನಿವಾರ್ಯ ಕಾರಣಗಳಿಂದ ಅಲ್ಲಿಯೇ ಕೊಡಲಾಗದಿರುವ ಅಕಾದೆಮಿಯ ಸದಸ್ಯ ಲೇಖಕರು, ದಯಮಾಡಿ ತಮ್ಮ ಪೂರ್ಣ ವಿಳಾಸದೊಡನೆ ಸಮ್ಮೇಳನ ಮುಗಿದ ಎರಡು ತಿಂಗಳ ಒಳಗಾಗಿ, **ಸಂಪಾದಕರು, ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾದೆಮಿ, ಗೋಖಲೆ ಸಾರ್ವಜನಿಕ ಸಂಸ್ಥೆ ಆವರಣ, ಬಸವನಗುಡಿ ರಸ್ತೆ, ನರಸಿಂಹರಾಜಾ ಕಾಲೋನಿ, ಬೆಂಗಳೂರು - ೫೬೦ ೦೧೯**, ಈ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿದೆ. ಹಾಗೆಯೇ ಲೇಖನಗಳಲ್ಲಿ ಲೇಖಕರು ತಮ್ಮ **ಈಚಿನ ಸರಿಯಾದ ವಿಳಾಸವನ್ನು** ದಾಖಲಿಸಲು ದಯವಿಟ್ಟು ಮರೆಯಬಾರದೆಂದು ಪ್ರಾರ್ಥಿಸಿದೆ. ಸಮ್ಮೇಳನದಲ್ಲಿ ಮಂಡಿಸಿದ ಲೇಖನಗಳನ್ನು **ಬೇರೆಡೆ ಪ್ರಕಟ ಮಾಡಿದ್ದರೆ ಅಥವಾ ಬೇರೆಡೆ ಪ್ರಕಟನೆಗೆ ಕಳುಹಿಸಿದ್ದರೆ** ದಯವಿಟ್ಟು ತಿಳಿಸಬೇಕೆಂದು ವಿನಂತಿ. ಮಂಡಿತ ಪ್ರಬಂಧಗಳು **ಮೊದಲಿಗೆ ಅಕಾದೆಮಿಗೆ ಮೀಸಲು ಕಾಣಿಕೆ ಅಲ್ಲವೆ!***

ಲಕ್ಷ್ಮಿ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮
ದೂರವಾಣಿ : ೬೬೧೩೧೨೩, ೬೬೧೮೭೫೨

ಅಕಾದೆಮಿಯ ಅಧ್ಯಕ್ಷರ ಮಾತು

ರಾಮಚಂದ್ರಾಪುರ ಮಠದ ಪವಿತ್ರ ವಾತಾವರಣದಲ್ಲಿ ನಡೆದಿದ್ದ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳು ಈ ಬಾರಿ ಇಲ್ಲಿ ಪ್ರಕಟವಾಗುತ್ತಿದೆ. ಈ ಬಾರಿಯ ಸಮ್ಮೇಳನವು ಕರ್ನಾಟಕ ಪ್ರಾಚೀನ ಸಾಮ್ರಾಜ್ಯದ ರಾಜಧಾನಿ ಬಾದಾಮಿಯಲ್ಲಿ ನಡೆಯುತ್ತಿದೆ. ನರ್ಮದೆಯಿಂದ ಕಾವೇರಿಯವರೆಗೆ ಹರಡಿದ ಪ್ರಥಮ ಕರ್ನಾಟಕ ಸಾಮ್ರಾಜ್ಯದ ಕೊನೆಯನ್ನು 'ಕರ್ನಾಟ ಬಲ' ಎಂದು ಕರೆಯಲಾಗಿತು. ಅದನ್ನು 'ಅಜೇಯ' ವೆಂದು ವರ್ಣಿಸಲಾಗಿತ್ತು. ಚಾಳುಕ್ಯ ಮನೆತನದ ರಾಣಿ, ಖ್ಯಾತ ಕವಯಿತ್ರಿ ವಿಜ್ಜಿಕಾಳನ್ನು 'ಕರ್ಣಾಟಿ' ಎಂದು ಅಂದಿನ ಸಾರಸ್ವತಲೋಕ ಕರೆದಿತ್ತು. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳು ಕನ್ನಡಿಗರ ಪ್ರಾಚೀನ ಸಾಂಸ್ಕೃತಿಕ ಸಾಧನೆಗೆ ಹೆಗ್ಗುರುತಾಗಿವೆ. ಕರ್ನಾಟಕ ಇತಿಹಾಸ ಪ್ರೇಮಿಗಳು ಇಲ್ಲಿ ಸೇರುವುದು ಸೂಕ್ತವಾಗಿದೆ. ಸಮ್ಮೇಳನದ ಸಂಘಟಕರು ಇದಕ್ಕೆ ಅವಕಾಶ ಕೊಟ್ಟದ್ದು ಅಭಿನಂದನೀಯ ಉಪಕ್ರಮ.

ಐಹೊಳೆ ಹಾಗೂ ವಿಶೇಷವಾಗಿ ಚಾಳುಕ್ಯ ಕಲೆಯ ಬಗ್ಗೆ ಆಳವಾದ ಅಧ್ಯಯನ ಮಾಡಿದ ಪ್ರೊ॥ ಸಿಂದಗಿ ರಾಜಶೇಖರ ಅವರು ಸಮ್ಮೇಳನಾಧ್ಯಕ್ಷರಾದುದು ಸೂಕ್ತವಾದ ಆಯ್ಕೆ. ಶಾಸನತಜ್ಞ ಡಾ॥ ಬಾ. ರಾ. ಗೋಪಾಲ್ ಸ್ಮಾರಕದ ಪ್ರಶಸ್ತಿಗೆ ಡಾ॥ ದೇವರಕೊಂಡಾರೆಡ್ಡಿಯವರು ಪಾತ್ರರಾಗಿದ್ದಾರೆ. ಡಾ॥ ರೆಡ್ಡಿಯವರು ಶಾಸನಗಳ ಅಧ್ಯಯನ, ಪ್ರಕಟಣೆಗಳಲ್ಲಿ ತೋರಿದ ಅಪಾರ ಉತ್ಸಾಹ ಚಿರಪರಿಚಿತ.

'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದ ಅಂಗವಾಗಿ ಪ್ರಾಚೀನ ಕೆರೆಗಳ ರಕ್ಷಣೆಗೂ ಕರೆನೀಡುತ್ತಿದ್ದೇವೆ. ಅಕಾದೆಮಿಯ ಅಧ್ಯಕ್ಷ ಪ್ರೊ॥ ಜಿ. ಎಸ್. ದೀಕ್ಷಿತರು ಈ ಬಗ್ಗೆ ಮಾಡಿದ ಬರವಣಿಗೆ ಆ ಬಗ್ಗೆ ಸಮ್ಮೇಳನಾಧ್ಯಕ್ಷರಾಗಿ ನೀಡಿದ ಕರೆ ಸ್ಮರಣೀಯ. ಅದರಂತೆ ಸರಕಾರ ಹಳೆಯ ಕೆರೆಗಳ ರಕ್ಷಣೆಗೆ ಮುಂದಾದದ್ದು ಹೆಮ್ಮೆಯ ಸಂಗತಿ. ಒಂದು ವಿಶಿಷ್ಟ ಐತಿಹಾಸಿಕ ಅನುಭವದ ಪುನರುಚ್ಚಾರಣೆ ಜೀವನವನ್ನು ಹಸಿರುಗೊಳಿಸಲು ಇಂಥ ರಕ್ಷಣೆ ಹೇಗೆ ಕಾರಣ ವಾಗುವುದೆಂಬುದಕ್ಕೆ ಇದು ಉದಾಹರಣೆ.

ಪರಂಪರೆ ಉಳಿಸಿ ಚಳವಳಿ ರಂಗ ಕರ್ನಾಟಕದಲ್ಲಿ ಅಕಾದೆಮಿ ನಡೆಸುತ್ತಿರುವ ಬಗ್ಗೆ ಇಡೀ ದೇಶದಲ್ಲಿ ಉತ್ಸಾಹದ ಪ್ರತಿಕ್ರಿಯೆ ಬಂದಿದೆ. ಇತ್ತೀಚೆಗೆ ಬೆಂಗಳೂರಿಗೆ ಬಂದ ಯು 'ಯುನೆಸ್ಕೊ' ತಜ್ಞರು ನಮ್ಮ ಭಿತ್ತಿ ಪತ್ರಗಳನ್ನು ನೋಡಿ ಸಂತಸಪಟ್ಟರು. ಅವನ್ನು ತಮ್ಮ ಜೊತೆ ಪ್ಯಾರಿಸ್ಸಿಗೆ, 'ಯುನೆಸ್ಕೊ' ಕೇಂದ್ರ ಕಚೇರಿಗೆ ಒಯ್ದರು.

ನಮ್ಮ ಪರಂಪರೆ ಉಳಿಸಲು ನಾವು ಶ್ರಮಿಸಿದರೆ ಈ ಪರಂಪರೆಗೆ ನಾವು ಯೋಗ್ಯ ಉತ್ತರಾಧಿಕಾರಿಗಳೆ!

ಎಂದಿನಂತೆ 'ಇತಿಹಾಸದರ್ಶನ' ಸಂಪಾದನಾ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಪ್ರೊ॥ ಎಂ.ಜಿ. ನಾಗರಾಜ ಮತ್ತು ಡಾ॥ಪಿ. ವಿ. ಕೃಷ್ಣ ಮೂರ್ತಿಗಳಿಗೆ ಅಭಿನಂದನೆಗಳು. ಶ್ರದ್ಧೆಯಿಂದ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದವರಿಗೆ ವಂದನೆಗಳು.

ಸೂರ್ಯನಾಥ್ ಕಾಮತ್

ಸಂಪಾದಕೀಯ

ಅಕಾದೆಮಿಗೆ ಈಗ ತುಂಬಿದ ತಾರುಣ್ಯ ಚೇತನ ಹಾಗು ಚೆಲುವು. ಸದಸ್ಯರಲ್ಲಿ ತುಂಬಿದ ಚಟುವಟಿಕೆ. ೧೮ರ ಹರೆಯದಂಥ ಮಾನಸ ಲವಲವಿಕೆ. ಕ್ಷೇತ್ರಕಾರ್ಯ ಮಾಡಿ, ಅಧ್ಯಯನ ನಡೆಸಿ ಸಲ್ಲಿಸಿದ ಪ್ರಬಂಧಗಳಲ್ಲಿ ಇದು ಹೂರಣವಾಗಿ ಬರುತ್ತಿದೆ; ಇತಿಹಾಸ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಇದು ದೃಗ್ಗೋಚರ. ಸಾಮಾಜಿಕ ಸಂಪರ್ಕ, ಸಾಂಸ್ಕೃತಿಕ ಅಡಕ ಇವೆಲ್ಲ ಇತಿಹಾಸದ ಇಡುಗಂಟಿನೊಡನೆ ಮೇಳೈಸಿ ಅಲ್ಲೆಲ್ಲ ನಡೆದು ಬರುತ್ತಿದೆ. ಅಕಾದೆಮಿಯು ಇಟ್ಟ ಇತಿಹಾಸದ ಪುದುಮಟ್ಟಿಗೆ ಉತ್ಸಾಹದ ಉದ್ಭವದ ಸೇರ್ಪಡೆಗಳನ್ನೂ ಮೊತ್ತಗೊಳಿಸುತ್ತಲೇ ಬರುತ್ತಿರುವವರು ಅಕಾದೆಮಿಯ ಸರ್ವಸದಸ್ಯರೆ. ಪರಿಶ್ರಮ, ಜಾಣ್ಮೆ, ವಿದ್ವತ್ತು, ವಿವೇಚನೆ, ಒಲವು, ಸಜ್ಜನಿಕೆ, ಸೌಹಾರ್ದ, ಕೂಡುಬಾಳು, ವಾತ್ಸಲ್ಯ, ಭಾವಗುಣ, ಎದೆಯ ಸೊಂಪು, ಇತ್ಯಾದಿ ಮೌಲಿಕ ನೆಲೆಗಳಿಂದ ಅಕಾದೆಮಿಯ ಬೆಡಗನ್ನು ಬೆಳೆಸುತ್ತಿದ್ದಾರೆ. ಜಂಗಮ ಚೈತ್ಯನ್ಯದ ಹರಿವನ್ನೂ ಸಲಿಲವಾಗಿಸಿದ್ದಾರೆ. ಅಕಾದೆಮಿಯ ತಾರುಣ್ಯದ ಈ ಹಂತಕ್ಕೆ ಇದೆಲ್ಲ ಒಂದು ಶ್ರೇಯಭೋಗ. ಇದನ್ನೂ ಮತ್ತಷ್ಟು ಪಡೆಯಲು ಕರ್ನಾಟಕದ ವಾಸ್ತುಶಿಲ್ಪ ಕಲೆಯು ಅರಳಿದ ನೆಲೆ ಬಾದಾಮಿಯಲ್ಲಿ ಸದ್ಯದ ಸಮ್ಮೇಳನ ಸಂಘಟಿತವಾಗಿರುವುದು ಒಂದು ಸುಯೋಗ; ನಟರಾಜ ದರ್ಶನಕ್ಕೆ ಒದಗಿದ ಯೋಗ. ಶ್ರೀ ವೀರ ಪುಲಿಕೇಶಿ ವಿದ್ಯಾ ಸಂಸ್ಥೆಯ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ ಈ ವಿದ್ವತ್ ಕ್ರೀಡೆ, ವಿಕ್ರಮ ವಿದ್ವತ್ ಕ್ರೀಡೆ ಆಗಲಿ.

ಚಾಲುಕ್ಯರ ಸಾಂಸ್ಕೃತಿಕ ಬೀಡು. ಕೂಡಲಸಂಗಮದ ಆಧ್ಯಾತ್ಮಿಕ ಬೀಸುಗಾಳಿ, ಮುಚಕಂಡಿ (ಮುಸುಗುಂದ ಮನಿಯ ಕ್ಷೇತ್ರ) ವೀರಭದ್ರ ಕ್ಷೇತ್ರ, ಬನಶಂಕರಿಯ ಶಕ್ತಿ ನೆಲೆ ಆದಿಲ್‌ಶಾಹಿಗಳ ವಾಸ್ತುವಿನ ನೆನಪಿನ ನೆಲೆ ಇವೆಲ್ಲದರ ಆವರಣದ ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ವಿಶ್ವಚೇತನ ಸಂಸ್ಥೆಯು ಕರ್ನಾಟಕ ಇತಿಹಾಸ ಅಕಾದೆಮಿಯ ೧೭ನೇ ವಾರ್ಷಿಕ ಸಮ್ಮೇಳನಕ್ಕೆ ಆಸರೆ ನೀಡಿದೆ. ಸಮ್ಮೇಳನವು ೨೦೦೩ನೇ ಸೆಪ್ಟೆಂಬರ್ ೧೩ರಿಂದ ೧೫ರವರೆಗೆ (ಶಾಲಿವಾಹನ ಶಕ ೧೯೨೫ನೇ ಸ್ವಭಾನು ಸಂವತ್ಸರ ಭಾದ್ರಪದ ಬಹುಳ ತೃತೀಯೆಯಿಂದ ಪಂಚಮಿ ದಿವಸೇ ,ರೇವತಿ, ಅಶ್ವಿನಿ, ಮಹಾಭರಣಿ ನಕ್ಷತ್ರೇ-ಶನಿವಾರ, ಭಾನುವಾರ, ಸೋಮವಾರ) ನಡೆಯುತ್ತಿದೆ. ವಿಶ್ವಚೇತನ ಸಂಸ್ಥೆಯ ಈ ಮಣಿಹಕ್ಕೆ ಸ್ಥಳೀಯ ಶಾಸಕರು, ಜಿಲ್ಲಾಪರಿಷತ್ತು, ಶಿಕ್ಷಣಸಂಸ್ಥೆಗಳು, ಗಣ್ಯವಾಣಿಜ್ಯೋದ್ಯಮಿಗಳು-ನಾಗರೀಕರಾದಿಯಾಗಿ ಎಲ್ಲರೂ ಸಮ್ಮೇಳವಾಗಿದ್ದಾರೆ.

ಬಾದಾಮಿ ಚಲುಕ್ಯಚಕ್ರೇಶ್ವರ ಪುಲಕೇಶಿಯ ರಕ್ಷಣಾ ರಾಜಧಾನಿ; ಸಾಂಸ್ಕೃತಿಕ ವಾಸ್ತುಶಿಲ್ಪ ಪ್ರಯೋಗದ ಪಟ್ಟದಕಲ್ಲು; ಶಿಕ್ಷಾ-ವಾಣಿಜ್ಯ ಕೇಂದ್ರವಾಗಿ ಬೆಳೆದ ಐಹೊಳೆ, ಇವೆಲ್ಲ ಕರ್ನಾಟಕವು, ವಿಶ್ವದ ಸಾಂಸ್ಕೃತಿಕ ಮನಸ್ಸುಗಳಿಗೆ ಬೆಡಗು ತೋರಿದ ಸಡಗರದ ಕಲೆಯ ನೆಲೆಗಳು. ಶಿಲ್ಪ ಮತ್ತು ವಾಸ್ತುಗಳ ಪ್ರಯೋಗದಲ್ಲಿ ಪರಿಣತ ಕೌಶಲ್ಯದ ದರ್ಶನ ನಮಗಿಲ್ಲಿ ಆಗುತ್ತದೆ. ಶೈವ, ವೈಷ್ಣವ, ಜೈನ, ಬೌದ್ಧ ಧರ್ಮಗಳ ಅನ್ವಯ ಶಿಲಾಕಲ್ಪ ಇಲ್ಲಿನ ಗುಹಾಲಯಗಳಲ್ಲಿವೆ. ನಾಗರ, ರೇಖಾನಾಗರ, ಕದಂಬನಾಗರ,' ದ್ರಾವಿಡ ಶೈಲಿಯ ವಿನ್ಯಾಸಗಳ ಪರಿತೋದರ್ಶನ ಇಲ್ಲಿ ನಮಗೆ ಒದಗುವ ಕಲಾಯೋಗ. ಅಲ್ಲದೆ ತಮ್ಮ ಪ್ರೀತಿಯ ಚಕ್ರವರ್ತಿ 'ಸತ್ಯಾಶ್ರಯ ಮಹಾರಾಜ ರಣಕೇಸರಿ'ಯಾದ ಇಮ್ಮಡಿ ಪುಲಿಕೇಶಿಗೆ ಬಾದಾಮಿಯ 'ಮಹಾಜನರು' ಸ್ಮಾರಕ ಗುಹಾಲಯ ನಿರ್ಮಿಸಿದ ಶಾಸನೋಕ್ತ ಐತಿಹಾಸಿಕ ನೆಲೆ ಇದು. (ಎಸ್. ವಿ. ಪಾಡಿಗಾರ್) ಇವುಗಳ ಜೊತೆಗೆ ಬಿಜಾಪುರದ ಆದಿಲ್‌ಶಾಹಿ ವಾಸ್ತುಶಿಲ್ಪದ ಗೋಲಗುಂಬಸ್ ಅನ್ನು ನೆನೆಸಿಕೊಳ್ಳುವ ಹವಣು ನಮಗಾಗುತ್ತದೆ. ಕಾರಣ ಬಿಜಾಪುರ ಜಿಲ್ಲೆಯೊಳಗೆ ಮೊದಲಿದ್ದ ಬಾಗಲಕೋಟೆಯ ಕಾರಣ, ಬಿಜಾಪುರದ ನೆನಪೂ ತಾಗುವುದು ಸಹಜ.

ಬಾದಾಮಿ ಬಳಿಯ ಬನಶಂಕರಿ ಜನಪದ ಶಕ್ತಿಯ ಶಾಕ್ತದೇವತೆ. ಬನದಬ್ಬೆ - ಬಾದಬ್ಬೆ-ಬಾದಮ್ಮೆ-ಬಾದಾಮಿಯಾಗಿ ಹೀಗೆ ಬಾದಾಮಿಯ ಸ್ಥಳನಾಮಕ್ಕೆ ಕಾರಣಗಳಾಗಿರುವಂತಿದೆ. ಈಕೆಯ ಜಾತ್ರೆಯೊಂದು ಮಹಾಜಾತ್ರೆ; ಮುಚಕಂಡಿ ವೀರಭದ್ರನದೂ ಬಾಗಲಕೋಟೆಯ ಪಶ್ಚಿಮ ಸುದೂರ ವಿಸ್ತೀರ್ಣದ ನೆಲೆಯಲ್ಲಿರುವ ಮುಸುಕುಂದ ಮುನಿಯ ಮಹಾಕ್ಷೇತ್ರದ ನೆಲೆಯಾಗಿದೆ.

ಕಲ್ಯಾಣದ ಸಂಗನಬಸವಣ್ಣನ ಆಧ್ಯಾತ್ಮಸಾಧನೆಯ ಶ್ರೀಕ್ಷೇತ್ರ ಕೂಡಲಸಂಗಮ, ಸಂಗಮೇಶ್ವರಸನ್ನಿಧಿಯೂ ಆಗಿದೆ; ಜಾತಮೇದ ಮುನಿಗಳ ಸಂಗಮೇಶ್ವರ ಆರಾಧನಾ ನೆಲೆಯೂ ಆಗಿದೆ. ಬಾದಾಮಿಯ ಗುಹೆಯ ಅರ್ಧನಾರೀಶ್ವರ, ಪರಾವಾಸುದೇವ, ತ್ರಿವಿಕ್ರಮ, ಐಹೊಳೆಯ ರಾವಣಪಡಿಯ ನಟರಾಜ, ಮೀನ ಬಸದಿಯ ಬಾಹುಬಲಿ, ಮಹಾವೀರರ ಭವ್ಯಶಿಲ್ಪದರ್ಶನ ಯಾರ ಮನಸ್ಸಿಗೂ ಧನ್ಯತೆ ಮೂಡಿಸುವಂಥವು. ಸೂರ್ಯ ದೇವಾಲಯವನ್ನೂ ಹೊಂದಿದ್ದ ಬಾದಾಮಿ ಆದಿತ್ಯ ಪ್ರಭಾವವನ್ನೂ ಒಂದು ಕಾಲಕ್ಕೆ ತೋರಿತ್ತೆನ್ನಬೇಕು. ಬಾದಾಮಿ ಗುಹೆಯ ನಟರಾಜನ ಬಾಹು ವಿಸ್ತಾರ, ಅಡಕ ಹಾಗು ಪಾದವನೊತ್ತಿ ಎತ್ತಿರುವ ನಾಟ್ಯ ಭಂಗಿ, ವಿಶ್ವದಪ್ಪುಗೆಯ ವಿಶಾಲ ವಿಕ್ರಮದ ಬೆಡಗನ್ನೂ ತೋರುವಂತಿದೆ. ಇದೊಂದು ನಟರಾಜ ಯೋಗ; ದರ್ಶನಕ್ಕೆ ಸದ್ಭಾಗ್ಯ, ಕೃಷಿ ಸಂಸ್ಕೃತಿಯ ಕುರುಹಾದ ಕಾರಹುಣ್ಣಿಮೆ, ಮಣ್ಣೆತ್ತಿನ ಅಮಾವಾಸ್ಯೆ, ಕೂರಗಿ ಪೂಜೆ, ಊರದೇವಿಯ ಉಡಿದುಂಬು, ಸೀಗೆ ಹುಣ್ಣಿಮೆ, ಗೌರಿ ಹುಣ್ಣಿಮೆ ಚರಗ ಚೆಲ್ಲು, ಬಣ್ಣದ ಶರ್ಕರ ಬೊಂಬೆ ದೀಪಗಳನ್ನು ಕೃಷ್ಣೆಗೆ ತೇಲಿ ಬಿಡುವ ಬೆಳಕಿನ ಬೆಡಗು, ನಾಗರಪಂಚಮಿ, ಜೋಕುಮಾರ ಜೋಗುಳ, ಹಿಂದೂ-ಮುಸ್ಲಿಂ ಸಮನ್ವಯಾಚಾರಗಳ ಹಬ್ಬ-ಇವನ್ನೆಲ್ಲ ಮೈಗೂಡಿಸಿಕೊಂಡಿರುವ ಈ ಬಾಗಲಕೋಟೆ-ಬಾದಾಮಿ ಗ್ರಾಮೀಣ ಪರಿಸರ ನಮ್ಮ ಜನಪದ ಇತಿಹಾಸದ ಸಾಂಸ್ಕೃತಿಕ ತುಣುಕುಗಳು ಆಲಮಟ್ಟಿ ಅಣೆಕಟ್ಟು ಕಾರಣ ಕೃಷ್ಣೆಯ ಹಿನ್ನೀರಿನಲ್ಲಿ ಗ್ರಾಮಗಳು ಮುಳುಗಿದರೂ. ಅಲ್ಲಿನ ಸಾಂಸ್ಕೃತಿಕ ಇತಿಹಾಸವನ್ನು ಜತನವಾಗಿಸುವುದು ವಲಸೆ ಬಂದ ನೆಲೆಯಲ್ಲಿನ ಗ್ರಾಮೀಣರಿಗೆ ಒಂದು ಐತಿಹಾಸಿಕ ಹೊಣೆ ಆಗುವಂಥ ಪರಿಸರ ನಿರ್ಮಾಣವಾಗಲಿ. ಇಂಥ ಪರಿಸರದಲ್ಲಿ ನಡೆಯುತ್ತಿರುವ ಅಕಾದೆಮಿಯ ಸಮ್ಮೇಳನದಲ್ಲಿ ಹಿರಿಯ-ಕಿರಿಯ ವಿದ್ವಾಂಸರ, ಹೊಸ ಶೋಧಗಳ, ಇತಿಹಾಸ ಚಿಂತನೆಗಳ, ಅಧ್ಯಯನ ಕುರಿತ ವಿದ್ವತ್ಪ್ರಬಂಧಗಳ ಮಂಡನೆ. ಇದೊಂದು ಮೌಲಿಕ, ಪ್ರತಿಷ್ಠಿತ ಸಂದರ್ಭವೆಂದು ವಿದ್ವಾಂಸರಿಗೆ, ಆಸಕ್ತಿಯುಳ್ಳವರಿಗೆ ಹವ್ಯಾಸಿ ಸಂಶೋಧಕರಿಗೆ ಅನ್ನಿಸಿರುವುದು ಮಂಡಿತವಾಗುತ್ತಿರುವ ಪ್ರಬಂಧದ ವಸ್ತುವಿನಿಂದಲೇ ಹಾಗು ಪಾಲ್ಗೊಳ್ಳುತ್ತಿರುವ ಪ್ರಮಾಣದಿಂದಲೇ ವಿದಿತವಾಗುತ್ತಿದೆ. ಈ ಬಾರಿ **ಇತಿಹಾಸದರ್ಶನ**ದ ೧೮ನೇ ಸಂಪುಟದಲ್ಲಿ ೭೨ ಮಂಡಿತ ಪ್ರಬಂಧಗಳು ಪ್ರಕಟವಾಗಿವೆ. ಮೊದಲಿಗೆ ನಿರ್ದಿಷ್ಟ ವಿಭಾಗವನ್ನಷ್ಟೆ ತಮ್ಮ ಹೊಸ ಶೋಧನೆಗಳನೆಗಳನ್ನೂ, ಅಧ್ಯಯನವನ್ನೂ ಕೇಂದ್ರೀಕರಿಸಿಕೊಳ್ಳುತ್ತಿದ್ದ ನಮ್ಮ ಅಕಾದೆಮಿಯ ಪ್ರಬಂಧಕಾರರು ಇಂದು ಹೊಸ ಆಯಾಮಗಳನ್ನು ಮಿಡಿದಿದ್ದಾರೆ. ಮಾಕ್ರೊ ಅಧ್ಯಯಮನಕ್ಕೆ ಸೀಮಿತಗೊಳ್ಳದೆ ಮೈಕ್ರೋ ಅಧ್ಯಯನಕ್ಕೂ ಸಜ್ಜಾಗಿ ಪರಿಣತಿ ಪಡೆಯುತ್ತಿದ್ದಾರೆ. ಯಾವುದೇ ಒಂದು ಕ್ಷೇತ್ರಕಾರ್ಯದಲ್ಲಿ ಸಮಗ್ರವಾಗಿ ಸೂಕ್ಷ್ಮವಾಗಿ, ತಾಂತ್ರಿಕ ವಿವರಗಳೂ ಸೇರಿದಂತೆ ಪಾರಿಭಾಷಿಕ ಶಬ್ದಗಳನ್ನೂ ಬಳಸಿ ಸಂವಹನಮಾಡುವ ಬರೆಹದ ಕಲೆಯನ್ನೂ ಸಾಧಿಸಿಕೊಳ್ಳುತ್ತಿರುವುದು ಸ್ವಾಗತಾರ್ಹ ವಿಷಯವಾಗಿದೆ. ಸದ್ಯದ ಸಂಪುಟದಲ್ಲಿ ಅದರ ಒಂದು ನೋಟ ಎದ್ದು ಕಾಣುತ್ತದೆ. ಈ ಮಂಡಿತ ಪ್ರಬಂಧಗಳು ಮೊದಲಿಗೆ ಅಕಾದೆಮಿಯ ವಿದ್ವತ್ ಸಂಪುಟವಾದ **ಇತಿಹಾಸದರ್ಶನ**ಕ್ಕೆ ಮೀಸಲು ಕೊಡುಗೆಯಾಗಿರಲಿ ಎಂಬುದು ನೈತಿಕ ಸದಾಶಯ.

ಈ ಬಾರಿಯ ಸಮ್ಮೇಳನಾಧ್ಯಕ್ಷರಾಗಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ತ್ವ ಇಲಾಖೆಯ ಮುಖ್ಯಸ್ಥರಾದ ಅಪೂರ್ವ ಸಜ್ಜನಿಕೆಯ, ವಾಸ್ತು ಶಿಲ್ಪದ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲ, ವಿದ್ವತ್ ಚಿಂತನೆಯ ಪ್ರಾಧ್ಯಾಪಕ ಡಾ॥ ಸಿಂದಗಿ ರಾಜಶೇಖರ್ ಅವರು ಆಯ್ಕೆಗೊಂಡಿರುವುದಕ್ಕೆ ಹಾಗು ಶಾಸನ ಕ್ಷೇತ್ರದಲ್ಲಿ ೨೫ ವರ್ಷಗಳಿಗೂ ಮೀರಿ ಅವಿರತ ಸೇವೆ ಸಲ್ಲಿಸಿ, ಶಾಸನ ಸಂಪುಟಗಳನ್ನೂ ಸಂಪಾದಿಸಿರುವ, ಲಿಪಿಯ ಹುಟ್ಟು ಮತ್ತು ಬೆಳವಣಿಗೆ ಕುರಿತ ವಿಶಿಷ್ಠ ಕೃತಿಯನ್ನು ರಚಿಸಿರುವ ತರುಣ ವಿದ್ವಾಂಸ ಶಾಸನಶಾಸ್ತ್ರ ವಿಭಾಗದ ಪ್ರವಾಚಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ॥ ದೇವರಕೊಂಡಾರೆಡ್ಡಿ ಅವರಿಗೆ ಡಾ.ಬಾ.ರಾ. ಗೋಪಾಲ್‌ದತ್ತಿ ಪ್ರಶಸ್ತಿಯು ಒದಗಿದುದಕ್ಕೆ ಅಭಿನಂದನೆಗಳು. ಹೊಸದಾಗಿ ಪಿಎಚ್.ಡಿ ಪಡೆದಿದ್ದು ಅಕಾದೆಮಿಯಿಂದ ಸನ್ಮಾನಗೊಳ್ಳುವ ಸದಸ್ಯರಿಗೂ ಅಭಿನಂದನೆಗಳು.

ಮಾನ್ಯ ಶ್ರೀ ಬಿ. ಬಿ. ಚಿಮ್ಮನ ಕಟ್ಟಿ, ಶಾಸಕರು ಬಾದಾಮಿ ಅವರು **ಇತಿಹಾಸ ದರ್ಶನದ** ೧೮ನೇ ಸಂಪುಟವನ್ನು (೧೮/೨೦೦೩) ಬಿಡುಗಡೆ ಮಾಡುತ್ತಿರುವುದು ಸಂತೋಷದ ವಿಷಯ. ಸಮ್ಮೇಳನದಲ್ಲಿ ಪಾಲ್ಗೊಳ್ಳುತ್ತಿರುವ ಸರ್ವರಿಗೂ, ನಮ್ಮ ಕಾರ್ಯದಲ್ಲಿ ನೆರವಾಗುತ್ತಿರುವ ಅಕಾದೆಮಿಯ ಸರ್ವಸದಸ್ಯರಿಗೆ, ಸಮ್ಮೇಳನಕ್ಕೆ ಆಸರೆಯಾಗಿರುವ ಬಾದಾಮಿಯ ವಿಶ್ವಚೇತನ ಸಂಸ್ಥೆಗೆ ನಮ್ಮ ಅಭಿಮಾನಗಳು. ಸಂಪುಟವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮಿ ಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕ್ ಕುಮಾರ್ ಡಿಟಿಪಿ ಸಿಬ್ಬಂದಿ ವರ್ಗದ ಮೆನೇಜರ್ ಶ್ರೀ ಕೃಷ್ಣಮೂರ್ತಿ, ಶ್ರೀ ಎಸ್. ಮಂಜುನಾಥ್, ಶ್ರೀಮತಿ ರಾಜೇಶ್ವರಿ, ಶ್ರೀಮತಿ ಆರ್. ಸುನೀತ ಹಾಗು ಸಿಬ್ಬಂದಿವರ್ಗದವರಿಗೂ ನಮ್ಮ ಕೃತಜ್ಞತೆಗಳು.

ಬೆಂಗಳೂರು, ೧೦.೯.೨೦೦೩
ಸ್ವಭಾನು ಸಂವತ್ಸರ
ಭಾದ್ರಪದ ಪೌರ್ಣಮಿ
ಶತಭಿಷ ನಕ್ಷತ್ರ, ಬುಧವಾರ

ಎಂ. ಜಿ. ನಾಗರಾಜ್
ಡಾ॥ ಪಿ. ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.,)

ಬೆಂಗಳೂರು

ಕಾರ್ಯಕಾರಿ ಸಮಿತಿ

(ದಿನಾಂಕ ೨೩.೯.೨೦೦೨ರಲ್ಲಿ ಆಯ್ಕೆಯಾದವರು)

ಆಜೀವ ಗೌರವ ಅಧ್ಯಕ್ಷರು

ಪ್ರೊ॥ ಜಿ.ಎಸ್. ದೀಕ್ಷಿತ್

ಅಧ್ಯಕ್ಷರು

ಡಾ॥ ಸೂರ್ಯನಾಥ ಕಾಮತ್

ಉಪಾಧ್ಯಕ್ಷರು

ಶ್ರೀ ಎಂ.ಜಿ. ನಾಗರಾಜ್

ಡಾ॥ ಎಚ್. ಆರ್. ರಘುನಾಥಭಟ್

ಪ್ರಧಾನ ಕಾರ್ಯದರ್ಶಿ

ಡಾ॥ ಎಚ್.ಎಸ್. ಗೋಪಾಲರಾವ್

ಕಾರ್ಯದರ್ಶಿ

ಡಾ॥ ಕೆ. ವಸಂತಲಕ್ಷ್ಮಿ

ಡಾ॥ ಚೆನ್ನಕ್ಕ ಪಾವಟೆ

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್, *ಬೆಂಗಳೂರು*

ಸದಸ್ಯರು

ಪ್ರೊ॥ ಲಕ್ಷ್ಮಣ್ ತೆಲಗಾವಿ, ಹಂಪಿ

ಡಾ॥ ದೇವರಕೊಂಡಾರೆಡ್ಡಿ, ಹಂಪಿ

ಡಾ॥ ಶೀಲಾಕಾಂತ ಪತ್ತಾರ, ಬಾದಾಮಿ

ಶ್ರೀ ಅಮರೇಶ್ ಯತಗಲ್, ಗುರುಗುಂಟಾ

ಶ್ರೀ ಎಂ.ಕೆ. ದುರುಗಪ್ಪ, ಕನಕಗಿರಿ

ಶ್ರೀಮತಿ ಸ್ಮಿತಾ ಸುರೇಬಾಕರ, ಬೆಳಗಾಂ

ಡಾ॥ ಡಿ.ಎನ್. ಯೋಗೀಶ್ವರಪ್ಪ, ತುಮಕೂರು

ಡಾ॥ ಕೆಳದಿ ವೆಂಕಟೇಶ್ ಜೋಯಿಸ್ ಕೆಳದಿ

ಶ್ರೀ ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ

ಶ್ರೀ ಗುರುಮೂರ್ತಿ ಪೆಂಡಕೂರು, ಹಗರಿಬೊಮ್ಮನಹಳ್ಳಿ

ಶ್ರೀ ಎಂ. ಶಿವಶಂಕರಯ್ಯ, ಹೊನ್ನಾಳಿ

ಡಾ॥ ಎಚ್.ಎಸ್. ಉಷಾರಾಣಿ, ಮೈಸೂರು

ಡಾ॥ ಎಚ್. ಚಂದ್ರಶೇಖರ್ ಬೆಂಗಳೂರು

ಪರಿವಿಡಿ

ಶ್ರೀ ರಾಮಚಂದ್ರಾಪುರ ಮಠದಲ್ಲಿ ನಡೆದ
ಹದಿನಾರನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರು



ಡಾ। ಎ. ಕೆ. ಶಾಸ್ತ್ರಿ



ಕೈ॥ ಕೆ. ಅಭಿಶಂಕರ್ ಅವರ ಸ್ಮರಣಾರ್ಥ ಸಮ್ಮೇಳನಾಧ್ಯಕ್ಷರಿಗೆ ನೀಡುವ ನೆನಪಿನ ಶಿಲ್ಪ ಕಾಣಿಕೆ.
ಪ್ರತಿವರ್ಷ ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನಾಧ್ಯಕ್ಷರಿಗೆ ಈ ಕಾಣಿಕೆ ನೀಡಲು
ಶ್ರೀಮತಿ ವಿಶಾಲಾಕ್ಷಿ ಅಭಿಶಂಕರ್ ಅವರು ಪುದುವಟ್ಟು ಇಟ್ಟಿದ್ದಾರೆ.
(ಶಿಲ್ಪ ಕಲಾವಿದೆ : ಶ್ರೀಮತಿ ಕನಕಮೂರ್ತಿ)



ಪೂಜ್ಯ ಶ್ರೀ ರಾಘವೇಶ್ವರಭಾರತಿಸ್ವಾಮಿಗಳವರು
ಶ್ರೀ ರಾಮಚಂದ್ರಾಪುರ ಮಠ

ಡಾ|| ಬಾ. ರಾ. ಗೋಪಾಲ್ ದತ್ತಿ ಪ್ರಶಸ್ತಿ ಸನ್ಮಾನಿತರು



ಡಾ|| ಕೆ. ವಿ. ರಮೇಶ್
ವರ್ಷ ೨೦೦೧



ಡಾ|| ಶ್ರೀನಿವಾಸ ರಿತ್ತಿ
ವರ್ಷ ೨೦೦೨



ಡಾ|| ದೇವರ ಕೊಂಡಾರೆಡ್ಡಿ
ವರ್ಷ ೨೦೦೩



ಶ್ರೀ ರಾಮಚಂದ್ರಾಪುರ ಮಠದ ಪೂಜ್ಯ
ಶ್ರೀ ರಾಘವೇಶ್ವರಭಾರತಿಸ್ವಾಮಿಗಳವರಿಂದ
ಅಕಾದೆಮಿಯ ೧೬ನೇ ವಾರ್ಷಿಕ ಸಮ್ಮೇಳನ
ಉದ್ಘಾಟನೆ




ಪೂಜ್ಯ ಶ್ರೀಗಳ ಸಾನ್ನಿಧ್ಯದಲ್ಲಿ ಡಾ|| ಅ. ಸುಂದರ
ಅವರಿಂದ ಇತಿಹಾಸ ದರ್ಶನದ ೧೮ನೇ ಸಂಪುಟ
ಬಿಡುಗಡೆ. ಚಿತ್ರದಲ್ಲಿ ಡಾ|| ಸೂರ್ಯನಾಥ ಕಾಮತ್
ಡಾ|| ಎಸ್. ನಾಗರಾಜು, ಸಂಪಾದಕರಾದ
ಎಂ. ಜಿ. ನಾಗರಾಜ್, ಮತ್ತು ಡಾ|| ಪಿ. ವಿ. ಕೃಷ್ಣಮೂರ್ತಿ
ಡಾ|| ಕೆ. ಬಿ. ಸುದರ್ಶನ್



ಸಮ್ಮೇಳನಾಧ್ಯಕ್ಷ ಡಾ. ಎ. ಕೆ. ಶಾಸ್ತ್ರಿ ಅವರಿಗೆ
ಪೂಜ್ಯ ಶ್ರೀಗಳವರಿಂದ ನೆನಪಿನ ಶಿಲ್ಪ ಕಾಣಿಕೆಯ
ಆಶೀರ್ವಾದ

ಪೂಜ್ಯ ಶ್ರೀಗಳವರಿಂದ ಆಶೀರ್ವಚನ ಚಿತ್ರದಲ್ಲಿ
ಸರ್ವಶ್ರೀ ಎಂ.ಜಿ. ನಾಗರಾಜ್ ಡಾ॥ ಅ. ಸುಂದರ
ಡಾ॥ ಎ.ಕೆ. ಶಾಸ್ತ್ರಿ, ಡಾ॥ ಸೂರ್ಯನಾಥ ಕಾಮತ್
ಡಾ॥ ಎಸ್. ನಾಗರಾಜು
ಡಾ॥ ಎಚ್. ಎಸ್ ಗೋಪಾಲರಾವ್





ಗೋಷ್ಠಿಯಲ್ಲಿ ವಿದ್ವಾಂಸರಿಂದ ಪ್ರಬಂಧಮಂಡನೆ
ಪ್ರೊ॥ ಲಕ್ಷ್ಮಣ್ ತೆಲಗಾವಿ
ಶ್ರೀ ಎಸ್.ಎಲ್. ಶ್ರೀನಿವಾಸ ಮೂರ್ತಿ

ಪ್ರೊ॥ ಬಿ. ರಾಜಶೇಖರಪ್ಪ ಅವರ ಅಧ್ಯಕ್ಷತೆಯಲ್ಲಿ
ನಡೆದ ವಿಚಾರ ಗೋಷ್ಠಿಯಲ್ಲಿ ವಿದ್ವಾಂಸರಿಂದ
ಪ್ರಬಂಧ ಮಂಡನೆ



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು



ಕುಣೆಮೆಳ್ಳಿಹಳ್ಳಿ ಸರಕಾರಿ ಪದವಿಪೂರ್ವಕಾಲೇಜು ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ. ಶ್ರೀ ಮಲ್ಲಿಕಾರ್ಜುನ ಪ. ಕಂಬಾರ ಅವರಿಂದ ಭಾಷಣ ಮತ್ತು ಕಾಲೇಜು ವಿದ್ಯಾರ್ಥಿಗಳಿಂದ ಇತಿಹಾಸ ಘೋಷಣೆ



ಬ್ಯಾಡಗಿ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಶ್ರೀ ಜಿ. ಜಿ. ಕರೇಗೌಡ್ರ ಅವರಿಂದ ಐತಿಹಾಸಿಕ ಪರಂಪರೆ ಉಳಿಸಿ ಭಾಷಣ



ಕಲ್ಲೂರು ಈಶ್ವರ ದೇವಸ್ಥಾನದಲ್ಲಿ ನಾಣ್ಯ ಪ್ರದರ್ಶನ ಕಾರ್ಯಕ್ರಮ. ಚಿತ್ರದಲ್ಲಿ ಕೆಳದಿ ರಾಜಗುರು ಪೂಜ್ಯ ಸಿದ್ದಲಿಂಗ ಸ್ವಾಮಿಜಿ, ಮಹಾಮಹತ್ತಿನ ಮಠದ ಶ್ರೀ ಜಯದೇವಪ್ಪ ಜೈನಕೇರಿ, ಕಲ್ಲೂರು ಮೇಘರಾಜ್ ಶ್ರೀ ರಾಮಚಂದ್ರ ಕಾರಂತರು ಮುಂತಾದವರು















ಕಿಟೆಲ್‌ಕಲಾ ಮಹಾವಿದ್ಯಾಲಯ, ಧಾರವಾಡ ಡಾ॥ ಚೇತನ ನಾಯ್ಕ ಅವರಿಂದ ಸಪ್ತಾಹದ ಉದ್ಘಾಟನೆ. ಚಿತ್ರದಲ್ಲಿ ಡಾ॥ ಎಂ. ವೈ. ಸಾಮಂತ ಪ್ರೊ॥ ಎಸ್.ಬಿ. ಪುಜಗ

ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಪಾಠಶಾಲೆ ನಾಗವಾರ ಪಾಳ್ಯ- ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ



ಈವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಹಾಗೂ ಇತರ ವಿವರಗಳು

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೧.	೧೫-೧೭ ಮೇ ೧೯೮೭	ಬೆಂಗಳೂರು	*ಕರ್ನಾಟಕ ಇತಿಹಾಸ ಅಕಾದೆಮಿ*	ಡಾ॥ ಎಂ. ಚಿದಾನಂದಮೂರ್ತಿ	
೨.	೨೩-೨೪ ಅಕ್ಟೋಬರ್ ೧೯೮೮	ತುಮಕೂರು	*ಸಿದ್ಧಗಂಗಾಕ್ಷೇತ್ರ : ಡಾ। ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು*	ಡಾ॥ ಜಿ. ಎಸ್. ಗಾಯಿ	
೩.	೧೦-೧೧ ಜೂನ್ ೧೯೮೯	ಗದಗ	*ಶ್ರೀ ಮ. ನಿ. ಪ್ರ. ಜ॥ ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಗದಗ*	ಡಾ॥ ಶ್ರೀನಿವಾಸ ರಿತ್ತಿ	
೪.	೨೧-೨೨ ಜುಲೈ ೧೯೯೦	ದಾವಣಗೆರೆ	*ಡಾ॥ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ, ದಾವಣಗೆರೆ*	ಡಾ॥ ಎಸ್. ಆರ್. ರಾವ್	
೫.	೧೨-೧೪ ಜುಲೈ ೧೯೯೧	ಚಿತ್ರದುರ್ಗ	*ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ*	ಡಾ॥ ಬಾ. ರಾ. ಗೋಪಾಲ್	
೬.	೧೧-೧೩ ಜುಲೈ ೧೯೯೨	ರಾಯಚೂರು	*ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ ರಾಯಚೂರು*	ಡಾ॥ ಕೆ. ವಿ. ರಮೇಶ್	
೭.	೨೩-೨೫ ಜುಲೈ ೧೯೯೩	ಮೈಸೂರು	*ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೆ. ಎಸ್. ಎಸ್. ಸಂಸ್ಥೆ, ಮೈಸೂರು*	ಡಾ॥ ಅ. ಸುಂದರ	
೮.	೯-೧೦ ಜುಲೈ ೧೯೯೪	ಸೊಂಡೂರು	*ಶ್ರೀ ಎಂ. ವೈ. ಘೋರ್ಪಡೆ ಕರ್ನಾಟಕ ಸೇವಾ ಸಂಘ, ಸೊಂಡೂರು*	ಡಾ॥ ಎಂ. ಎಂ. ಕಲಬುರ್ಗಿ	

ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಆಶ್ರಯ/ಸಹಯೋಗ	ಸರ್ವಾಧ್ಯಕ್ಷರು	
೯.	೯-೧೧ ಸೆಪ್ಟೆಂಬರ್ ೧೯೯೫	ಬೆಳಗಾವಿ	ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರು ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ, ಬೆಳಗಾವಿ	ಡಾ॥ ಎ.ವಿ. ನರಸಿಂಹಮೂರ್ತಿ	
೧೦.	೭-೯ ಜೂನ್ ೧೯೯೬	ಧಾರವಾಡ	ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ. ನಿ. ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ ಧಾರವಾಡ	ಡಾ॥ ಜಿ. ಎಸ್. ದೀಕ್ಷಿತ್	
೧೧.	೨೫-೨೭ ಅಕ್ಟೋಬರ್ ೧೯೯೭	ಸಿರಸಿ	ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಸಿರಸಿ	ಪ್ರೊ॥ ಕೆ. ಅಭಿಶಂಕರ್	
೧೨.	೧೪-೧೬ ನವೆಂಬರ್ ೧೯೯೮	ಬೆಂಗಳೂರು	ಕರ್ನಾಟಕ ಇತಿಹಾಸ ಅಕಾದೆಮಿ	ಡಾ॥ ಎಸ್. ನಾಗರಾಜು	
೧೩.	೧೧-೧೩ ಜೂನ್ ೧೯೯೯	ಹರಪನಹಳ್ಳಿ	ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕರಾದ ಶ್ರೀ ಕುಂ. ಬಾ. ಸದಾಶಿವಪ್ಪ, ಸ್ವಾಗತ ಸಮಿತಿ, ಹರಪನಹಳ್ಳಿ	ಡಾ॥ ಶ್ರೀನಿವಾಸ ಹಾವನೂರ	
೧೪.	೮-೧೦ ಜುಲೈ ೨೦೦೦	ಹಂಪಿ	ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ	ಶ್ರೀ ಸಿ. ಟಿ. ಎಂ. ಕೊಟ್ರಯ್ಯ	
೧೫.	೧೩-೧೫ ಅಕ್ಟೋಬರ್ ೨೦೦೧	ಉಡುಪಿ	ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು ಪೇಜಾವರ ಮಠಾಧೀಶರು, ಉಡುಪಿ	ಡಾ॥ ಜ್ಯೋತ್ಸ್ನಾ ಕಾಮತ್	
೧೬.	೨೨ -೨೪ ಸೆಪ್ಟೆಂಬರ್ ೨೦೦೨	ಶ್ರೀ ರಾಮಚಂದ್ರಾಪುರ ಮಠ ಹೊಸನಗರ	ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು	ಡಾ. ಎ.ಕೆ. ಶಾಸ್ತ್ರಿ	

ಕರ್ನಾಟಕ ಇತಿಹಾಸ ಅಕಾದೆಮಿಯ ಹದಿನಾರನೆಯ ವಾರ್ಷಿಕ ಸಮ್ಮೇಳನ
ಶ್ರೀರಾಮಚಂದ್ರಾಪುರಮಠ
ದಿನಾಂಕ : ೧೨-೧೪ ಸೆಪ್ಟೆಂಬರ್ ೨೦೦೨

ಸಮ್ಮೇಳನಾಧ್ಯಕ್ಷರು
ಡಾ. ಎ. ಕೆ. ಶಾಸ್ತ್ರಿ

ಅಧ್ಯಕ್ಷ ಭಾಷಣ

ಶ್ರೀರಾಮಚಂದ್ರಾಪುರ ಮಠದ ಆಶ್ರಯದಲ್ಲಿ ನಡೆಯುತ್ತಲಿರುವ ಕರ್ನಾಟಕ ಇತಿಹಾಸ ಅಕಾದೆಮಿಯ ಈ ಹದಿನಾರನೇ ಸಮ್ಮೇಳನಕ್ಕೆ ನನ್ನನ್ನು ಸರ್ವಸಮ್ಮತಿಯಿಂದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ ನನ್ನ ಪೂಜ್ಯ ಗುರುಗಳೂ, ಅಕಾದೆಮಿಯ ಗೌರವಾಧ್ಯಕ್ಷರೂ ಆದ ಡಾ|| ಜಿ. ಎಸ್. ದೀಕ್ಷಿತ್, ನನ್ನ ಸನ್ಮಿತ್ರರೂ, ಅಕಾದೆಮಿಯ ಅಧ್ಯಕ್ಷರೂ ಆದ ಡಾ|| ಸೂರ್ಯನಾಥ ಕಾಮತ್ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡಿಸಲೆಂದು ರಾಜ್ಯದ ವಿವಿಧ ಭಾಗಗಳಿಂದ ತಾವೆಲ್ಲ ಇಲ್ಲಿಗೆ ಬಂದಿದ್ದೀರಿ. ಕರ್ನಾಟಕ ಇತಿಹಾಸದಲ್ಲಿ ನಡೆಯುತ್ತಲಿರುವ ಹೆಚ್ಚಿನ ಸಂಶೋಧನೆಗಳ ಬಗ್ಗೆ ಅರಿಯಲು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಶ್ರೀಮಠದ ಶಿಷ್ಯರು, ಈ ಪರಿಸರದಲ್ಲಿರುವ ಮಹನೀಯರು ಮತ್ತು ಮಹಿಳೆಯರು ಕೂಡ ಆಸಕ್ತಿಯಿಂದ ಬಂದಿದ್ದೀರಿ. ತಮ್ಮೆಲ್ಲರನ್ನೂ ಉದ್ದೇಶಿಸಿ, ಈ ಸಂದರ್ಭದಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ವ್ಯಕ್ತಪಡಿಸಲು ಇಚ್ಛಿಸುವೆ. ಕರ್ನಾಟಕ ಇತಿಹಾಸ ಅಕಾದೆಮಿಯ ಹಿಂದಿನ ಸಮ್ಮೇಳನಗಳ ಅಧ್ಯಕ್ಷರುಗಳಿಗೆ ಗೌರವಾರ್ಪಣೆ, ಕರ್ನಾಟಕ ಇತಿಹಾಸ ಅಕಾದೆಮಿ ಶ್ರಮಿಸಿದ ಮಾರ್ಗ, ಸಂಶೋಧನಾ ಕಾರ್ಯದಲ್ಲಿ ಎಡವುತ್ತ, ಬೀಳುತ್ತ ನಾನು ಸಾಗಿ ಬಂದ ಮತ್ತು ಮುನ್ನಡೆಯುತ್ತಲಿರುವ ಪಥ ಮತ್ತು ಕರ್ನಾಟಕ ಇತಿಹಾಸ ಸಂಶೋಧನೆಗೆ ಸಂಬಂಧಿಸಿ ಚಿಂತನೆ, ಎಂಬ ವಿಷಯಗಳ ಸ್ಥೂಲಪರಿಚಯ ಮಾಡಲಿಚ್ಛಿಸುವೆ.

ಜಗತ್ತಿನ ಪ್ರತಿಯೊಬ್ಬ ಖ್ಯಾತ ಟೆನ್ನಿಸ್ ಕ್ರೀಡಾಪಟುವಿನ ಉದ್ದೇಶ, ವಿಂಬಲ್ಡನ್‌ದಲ್ಲಿ ಭಾಗವಹಿಸುವುದು. ಅಲ್ಲಿ ಪ್ರಶಸ್ತಿ ಪಡೆದರಂತೂ, ಆತನಿಗೆ ಸ್ವರ್ಗ ಸಿಕ್ಕಹಾಗೆ. ಅದೇ ರೀತಿ, ಕ್ರಿಕೆಟ್ ಪಟುವಿಗೆ ಇಂಗ್ಲೆಂಡಿನ ಲಾರ್ಡ್ಸ್ ಮೈದಾನ ಕಾಶಿ. ಇಂದು ಕರ್ನಾಟಕ ಇತಿಹಾಸ ಅಕಾದೆಮಿ ಎಷ್ಟು ಘನತೆಗೆ ಏರಿದೆ ಎಂದರೆ, ಕರ್ನಾಟಕದ ಪ್ರತಿಯೊಬ್ಬ ಇತಿಹಾಸ ಸಂಶೋಧಕನು ಕಾಣುವ ಕನಸೆಂದರೆ, ಇತಿಹಾಸ ಸಮ್ಮೇಳನದಲ್ಲಿ ಪ್ರಬಂಧವನ್ನು ಮಂಡಿಸುವುದು. ವಸ್ತುಸ್ಥಿತಿ ಹೀಗಿರುವಾಗ, ಸಮ್ಮೇಳನದ ಅಧ್ಯಕ್ಷನಾದ ನನಗೆ ಅದೆಷ್ಟು ಸಂತೋಷವಾಗಿರಬಹುದೆಂಬುದನ್ನು ನೀವೇ ಊಹಿಸಿರಿ. ಈ ಸ್ಥಾನಕ್ಕೆ ನಾನೆಷ್ಟು ಅರ್ಹ ಎಂದು ಪ್ರಶ್ನಿಸಿಕೊಂಡರೆ, ಅದಕ್ಕೆ ಖಚಿತ ಉತ್ತರವೂ ನನ್ನ ಹತ್ತಿರವೇ ಇದೆ. ಯಾರೇ ಎಷ್ಟು ಪ್ರಶಂಸಿಸಿ ನನ್ನನ್ನು ಈ ಸ್ಥಾನದಲ್ಲಿ ಕುಳ್ಳಿರಿಸಿದರೂ ಕೂಡ, ನನ್ನ ಇತಿಮಿತಿಗಳೆಷ್ಟೆಂಬ ಸ್ಪಷ್ಟ ಚಿತ್ರಣ ನನಗೆ ಗೊತ್ತು. ಬೆಂಗಳೂರಿನಲ್ಲಿ ೧೯೮೭ರಲ್ಲಿ ನಡೆದ ಪ್ರಥಮ ವಾರ್ಷಿಕ ಸಮ್ಮೇಳನದಿಂದ ಹಿಂದಿನ ವರ್ಷದವರೆಗೆ ಸಮ್ಮೇಳನಾಧ್ಯಕ್ಷರಾದವರೆಲ್ಲ ವಯಸ್ಸಿನಲ್ಲಿ ನನಗಿಂತ ಹಿರಿಯರು ಮತ್ತು ವಿದ್ವತ್ತಿನಲ್ಲಿ ನನಗಿಂತ ಶ್ರೇಷ್ಠರೆಂಬುದನ್ನು ನಾನು ಸರಿಯಾಗಿ ಬಲ್ಲೆ. ಕ್ರಮವಾಗಿ, ಸಮ್ಮೇಳನಗಳ ಅಧ್ಯಕ್ಷರಾದ ಡಾ|| ಎಂ. ಚಿದಾನಂದ ಮೂರ್ತಿ, ಡಾ|| ಜಿ. ಎಸ್. ಗಾಯಿ, ಡಾ|| ಶ್ರೀನಿವಾಸ ರಿತ್ತಿ, ಡಾ|| ಎಸ್. ಆರ್. ರಾವ್, ಡಾ|| ಬಾ. ರಾ. ಗೋಪಾಲ, ಡಾ|| ಕೆ. ವಿ. ರಮೇಶ್, ಡಾ|| ಅ. ಸುಂದರ, ಡಾ|| ಎಂ. ಎಂ. ಕಲಬುರ್ಗಿ, ಡಾ|| ಎ. ವಿ. ನರಸಿಂಹ ಮೂರ್ತಿ, ಡಾ|| ಜಿ. ಎಸ್. ದೀಕ್ಷಿತ್, ಶ್ರೀ ಕೆ. ಅಭಿಶಂಕರ್, ಡಾ|| ಎಸ್. ನಾಗರಾಜು, ಡಾ|| ಶ್ರೀನಿವಾಸ ಹಾವನೂರ, ಶ್ರೀ ಸಿ. ಟಿ. ಎಂ. ಕೊಟ್ರಯ್ಯ ಮತ್ತು ಶ್ರೀಮತಿ ಡಾ|| ಜ್ಯೋತ್ಸ್ನಾ ಕಾಮತ್, ಈ ವಿದ್ವನ್ಮಣಿಗಳಿಗೆಲ್ಲ ನನ್ನ ಅನಂತ ನಮನಗಳು. ಸಮ್ಮೇಳನಗಳಲ್ಲಿ ಈ ವಿದ್ವಾಂಸರೆಲ್ಲ ಎಷ್ಟೊಂದು ಉಪಯುಕ್ತ ಮಾತುಗಳನ್ನು ಆಡಿದ್ದಾರೆಂಬುದು, ಪ್ರತಿವರ್ಷ ತಪ್ಪದೇ ಪ್ರಕಟವಾಗುತ್ತಿರುವ 'ಇತಿಹಾಸ ದರ್ಶನ'ದ ಸಂಪುಟಗಳನ್ನು ಓದಿದರೆ ಅರಿವಾಗುತ್ತದೆ.

* ಭವಾನಿ, ಟಿ.ಎಸ್.ಎಸ್. ರೈಸ್ ಮಿಲ್ ಕೆಳಗೆ, ಶಿರಸಿ (ಉ.ಕ.), ಪಿನ - ೫೮೧ ೪೦೨

ಕೆಲವರ ಮಾತುಗಳನ್ನು ಪ್ರಸ್ತುತದಲ್ಲಿ ಮೆಲುಕು ಹಾಕಬಹುದು. ೧೯೮೭ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಥಮ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ॥ ಚಿದಾನಂದ ಮೂರ್ತಿಯವರು "ಇತಿಹಾಸ ಅಧ್ಯಯನದಲ್ಲಿ ಮೂಲಭೂತವಾಗಿ ಆಗಬೇಕಾದದ್ದು - ಸಾಮಗ್ರಿ ಸಂಗ್ರಹಣೆ... ಕರ್ನಾಟಕದ ಚರಿತ್ರೆಯನ್ನು ಬರೆಯುವವರು ಶಾಸನ, ತಾಮ್ರಪಟ, ಕಾಗದದ ದಾಖಲೆಗಳಂತೆಯೇ ಹಸ್ತಪ್ರತಿಗಳ ಲಿಪಿಕಾರರು ಹೇಳಿಕೊಂಡಿರುವ ಎಷ್ಟೋ ಅಮೂಲ್ಯ ವಿಷಯಗಳತ್ತ ಗಮನಕೊಡುವುದು ಅಗತ್ಯ..... ಕನ್ನಡಿಗರ ಬಹುಮುಖ ಜೀವನವನ್ನು ಹಿಂದಿನ ಸಾಹಿತ್ಯವು ತನ್ನದೇ ಆದ ರೀತಿಯಲ್ಲಿ ಹಿಡಿದಿಟ್ಟಿದೆ. ಸಂಗೀತ, ನರ್ತನ, ಚಿತ್ರ ಮೊದಲಾದ ಲಲಿತಕಲೆಗಳು, ಬೇರೆ ಬೇರೆ ವರ್ಗದ ಜನರ ಬದುಕು, ನಂಬಿಕೆಗಳು, ಎಷ್ಟೋ ರಾಜಕೀಯ ವಿವರಗಳು ಸಾಹಿತ್ಯದಲ್ಲಿ ಬಂದಿವೆ... ಇತಿಹಾಸ ಸಾಮಗ್ರಿ ಸಂಗ್ರಹಣೆ ನಡೆದಷ್ಟು, ಅದನ್ನು ಬಳಸಿಕೊಂಡು ಮಾಡಬೇಕಾದ ವ್ಯಾಖ್ಯಾನ, ವಿಮರ್ಶೆ, ಪುನರ್‌ರಚನೆಗಳ ಕಾರ್ಯ ನಡೆದಿಲ್ಲ. ವಿದ್ವಾಂಸರೊಬ್ಬರು ಉದ್ಗಾರ ತೆಗೆದಂತೆ, "ನಾವು ಇಟ್ಟಿಗೆ ತಯಾರು ಮಾಡುವವರಾಗಿದ್ದೇವೆಯೇ ಹೊರತು, ವಾಸ್ತುಶಿಲ್ಪಿಗಳಂತೆ ಕಟ್ಟಡ ನಿರ್ಮಾತೃಗಳಾಗಿಲ್ಲ".... ಕನ್ನಡಿಗರಲ್ಲಿ ತಮ್ಮ ನಾಡು, ನುಡಿಗಳ ಬಗ್ಗೆ ಇರುವ ನಿರಭಿಮಾನವನ್ನು ಹೋಗಲಾಡಿಸಲು ತಮ್ಮ ಇತಿಹಾಸದ ಬಗ್ಗೆ ಅರಿವನ್ನು ಮೂಡಿಸುವದೊಂದೇ ಮಾರ್ಗ. ಕರ್ನಾಟಕವನ್ನು ಮುಸುಕಿರುವ ಮಬ್ಬನ್ನು ಹೊಡೆದೋಡಿಸುವಲ್ಲಿ ಇತಿಹಾಸಕಾರರ ಪ್ರಮುಖ ಪಾತ್ರವಿದೆ. ಕನ್ನಡಿಗರ ಸ್ವಸ್ವರೂಪ ಜ್ಞಾನೋದಯ ಕಾರ್ಯದಲ್ಲಿ ಇತಿಹಾಸಕಾರರು ಶ್ರೀ ಕೃಷ್ಣ ಪರಮಾತ್ಮರಾಗಬೇಕು". ಎಂಬುದಾಗಿ ತಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

"ಭಾರತೀಯ ಇತಿಹಾಸದ ಅಧ್ಯಯನಕ್ಕೆ ಏಕೈಕ ಪ್ರಮುಖ ಮಾರ್ಗದರ್ಶಿಯೆಂದರೆ ಶಾಸನಗಳು. ಯಾವುದೇ ಪ್ರಾಂತ್ಯ, ಕಾಲ ಅಥವಾ ವಂಶದ ಐತಿಹ್ಯವನ್ನು ಪುನಃಪರಿಶೀಲಿಸಲು ಈ ಅಸಂಖ್ಯ ಶಾಸನಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗುವುದು... ನಮ್ಮ ತರುಣ ಇತಿಹಾಸತಜ್ಞರು ಸತ್ಯಾನ್ವೇಷಣೆಯನ್ನೇ ಗುರಿಯಾಗಿರಿಸಿಕೊಂಡು ತಮ್ಮ ಇತಿಹಾಸದ ಅಧ್ಯಯನವನ್ನು ನಡೆಸಿ, ಯಾವುದೇ ಪೂರ್ವಾಗ್ರಹವಿಲ್ಲದೆ ಸತ್ಯವನ್ನು ದಿಟ್ಟವಾಗಿ ಮಹಾಜನತೆಯ ಮುಂದಿಡಬೇಕೆಂದೂ, ತಮ್ಮ ಕೈಂಕರ್ಯದಲ್ಲಿ ಧೃತಿಗೆಡದೆ, ಬೇರೆ ಯಾವ ವ್ಯಕ್ತಿ-ಶಕ್ತಿಗಳಿಂದಲೂ ಪ್ರಭಾವಿತವಾಗಬಾರದೆಂದೂ ವಿನಂತಿಸುತ್ತೇನೆ. ಈ ದಿಶೆಯಲ್ಲಿ, ಕರ್ನಾಟಕ ಇತಿಹಾಸದ ಹಲವಾರು ಅಧ್ಯಾಯಗಳನ್ನು ಹೊಸದಾಗಿ ಬರೆಯಬೇಕಾಗುವುದು", ಎಂದು, ದೇಶದ ಪ್ರಖ್ಯಾತ ಶಾಸನತಜ್ಞರಾಗಿದ್ದ ಡಾ॥ ಜಿ. ಎಸ್. ಗಾಯಿ ಅವರು, ೧೯೮೮ರಲ್ಲಿ ತುಮಕೂರಿನ ಸಿದ್ಧಗಂಗಾಕ್ಷೇತ್ರದಲ್ಲಿ ಜರುಗಿದ ಸಮ್ಮೇಳನದಲ್ಲಿ ನುಡಿದರು.

ದಾವಣಗೆರೆಯಲ್ಲಿ, ೧೯೯೦ರಲ್ಲಿ ನಡೆದ ಸಮ್ಮೇಳನದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ಪುರಾತತ್ವ ಶಾಸ್ತ್ರಜ್ಞ, ಡಾ॥ ಎಸ್. ಆರ್. ರಾವ್ ಅವರು, "ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸ ಸಂಪತ್ತು ನಮ್ಮದಾಗಿದ್ದರೂ, ಬಗೆದಷ್ಟೂ ಮುಗಿಯದ ಇತಿಹಾಸ ಸಾಮಗ್ರಿ, ನಮ್ಮಲ್ಲಿದ್ದರೂ, ಇತಿಹಾಸ ಪ್ರಜ್ಞೆ ಭಾರತೀಯರಲ್ಲಿ ಎಷ್ಟು ಇರಬೇಕಿತ್ತೋ ಅಷ್ಟು ಇರಲಿಲ್ಲ ಎಂಬ ಮಾತನ್ನು ಎಲ್ಲರೂ ಒಪ್ಪಲೇಬೇಕು. ಇತಿಹಾಸವೆಂದರೆ ಹಿಂದೆ ನಮ್ಮ ನಾಡನ್ನು ಆಳಿದ ರಾಜಮನೆತನಗಳ ಕಾಲಾನುಕ್ರಮಣಿಯನ್ನು ಹೇಳುವ ಒಂದು ರಾಜಕೀಯ ಪಟ್ಟಿ ಎಂಬ ಭಾವನೆ ಬಹಳ ಕಾಲದವರೆಗೆ, ಬಹುಶಃ ಪಾಶ್ಚಾತ್ಯರ ಪ್ರಭಾವದಿಂದ ನಮ್ಮಲ್ಲಿತ್ತು. ಇಂದಿಗೂ ಇದೆ. ಒಂದು ನಾಡಿನ ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ, ಜನಜೀವನ, ವಿಜ್ಞಾನ, ನಂಬಿಕೆ, ಮೌಲ್ಯಗಳು ಇತ್ಯಾದಿಗಳ ಅಧ್ಯಯನ ದಾಖಲೆ ವಿಶಾಲಾರ್ಥದಲ್ಲಿ ಇತಿಹಾಸವಾಗುತ್ತದೆ. ಈ ಎಲ್ಲಾ ವಿಷಯಗಳ ಕೂಲಂಕಷ ಅಧ್ಯಯನಕ್ಕೆ ನೆರವಾಗುವ ಅಂಶಗಳು ನಮಗೆ ಶಾಸನಗಳಲ್ಲಿ, ಕಡತಗಳಲ್ಲಿ, ತಾಡವೋಲೆಗಳಲ್ಲಿ, ತಾಮ್ರಪತ್ರಗಳಲ್ಲಿ, ಆಯಾ ಕಾಲದ ಸಾಹಿತ್ಯ ಕೃತಿಗಳಲ್ಲಿ ದೊರೆಯುತ್ತದೆ. ಈ ದೃಷ್ಟಿಯಿಂದ ಇಂತಹ ಇತಿಹಾಸ ಸಾಮಗ್ರಿಗಳನ್ನು, ಅವು ಪೂರ್ತಿಯಾಗಿ ನಶಿಸಿ ಹೋಗುವುದಕ್ಕೆ ಮೊದಲು ರಕ್ಷಿಸಿ, ಅಧ್ಯಯನ ನಡೆಸುವ ಕಾರ್ಯ ತುಂಬ ಮಹತ್ವದ್ದಾಗುತ್ತದೆ... ಇತಿಹಾಸವನ್ನು ವಿಶಾಲ ದೃಷ್ಟಿಯಿಂದ ನೋಡಿ, ಕಲೆ, ತಂತ್ರಜ್ಞಾನ, ತತ್ವ, ಸಾಹಿತ್ಯ ಇವೇ ಮೊದಲಾದವುಗಳಿಗೆ ರಾಜಕೀಯ ವಿಷಯದಷ್ಟೇ ಪ್ರಾಮುಖ್ಯತೆಯನ್ನು ಕೊಟ್ಟು, ಇತಿಹಾಸವು ಜನಾಂಗಗಳ ಅಭಿವೃದ್ಧಿಗೆ ಸಹಾಯಕಾರಿಯಾಗುವಂತೆ ಮಾಡಬೇಕು. ಹೀಗೆ ಮಾಡಲು ಮತ್ತು ಸತ್ಯಾಂಶಗಳು ಹೊರಬೀಳಬೇಕಾದರೆ, ಎಲ್ಲಾ ತರಹದ ಐತಿಹಾಸಿಕ ಆಧಾರಗಳ ಸಂಗ್ರಹಣೆ, ಅಧ್ಯಯನ ಮತ್ತು ಪ್ರಕಾಶನ ಅವಶ್ಯಕ", ಎಂದು ಅರ್ಥವತ್ತಾಗಿ ತಿಳಿಸಿದರು.

"ಕರ್ನಾಟಕ ಇತಿಹಾಸ ಅಕಾದೆಮಿಯ 'ಇತಿಹಾಸ ಸಮ್ಮೇಳನ' ಎಂದಾಕ್ಷಣ, ಕನ್ನಡ ಸಾಹಿತ್ಯ ಪರಿಷತ್ತಿನ 'ಸಾಹಿತ್ಯ ಸಮ್ಮೇಳನ' ನೆನಪಾಗುತ್ತದೆ... ಆದರೆ ಅಕಾದೆಮಿಯ ಸಮ್ಮೇಳನಗಳು ಶುದ್ಧ ಶೈಕ್ಷಣಿಕ ನೆಲೆಯಲ್ಲಿ ಮುನ್ನಡೆಯುತ್ತ ಬಂದುದು, ಈ ಸಮ್ಮೇಳನದ ವೈಶಿಷ್ಟ್ಯವಾಗಿದೆ. ಹೀಗಾಗಿ ಇದರ ಅಧ್ಯಕ್ಷನಾಗುವುದು, ಶೈಕ್ಷಣಿಕ ಕಾಳಜಿಯುಳ್ಳ ಯಾರಿಗಾದರೂ ಹೆಮ್ಮೆಯ ವಿಷಯವೆನಿಸುತ್ತದೆ. ಕಳೆದ ಎಂಟು ವರ್ಷಗಳಲ್ಲಿ ಈ ಸಮ್ಮೇಳನ, ರಾಜ್ಯದ ಮೂಲೆ ಮೂಲೆಗಳಲ್ಲಿ ಚದರಿ ಹೋಗಿದ್ದ ಇತಿಹಾಸಕಾರರನ್ನು ಸಂಘಟಿಸಿದೆ. ತರುಣ ಇತಿಹಾಸಕಾರರ ಸೈನ್ಯವನ್ನು ಸೃಷ್ಟಿಸಿದೆ. ಜನರಲ್ಲಿ ಇತಿಹಾಸ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಲಿದೆ... ಸವಕಲು ಶಬ್ದಗಳ ನ್ನೊಳಗೊಂಡ ಇಂದಿನ ಇತಿಹಾಸ ಬರವಣಿಗೆಯ ಶೈಲಿ ತುಂಬ ಗತಾನುಗತಿಕವಾಗಿದ್ದು,

ಓದಲು ಬೋರ್ ಎನಿಸುತ್ತಿದೆ. ಆದುದರಿಂದ ಸಂಶೋಧನೆಯ ಇನ್ನೊಂದು ರೂಪವಾಗಿರುವ ವಿಮರ್ಶೆಯಂತೆ ಇತಿಹಾಸವೂ ಹೊಸ ಶೈಲಿಯನ್ನು ಅಂದರೆ ಸರಳ, ಆಕರ್ಷಕ ಮತ್ತು ಚಿಂತನಪರ ಶೈಲಿಯನ್ನು ರೂಢಿಸಿಕೊಳ್ಳಬೇಕಾಗಿದೆ. ಯಾವುದೇ ವಿಷಯದ ಸಾರ್ಥಕತೆ ಇರುವದು ಅದರ ಸಂವಹನ ಕ್ರಿಯೆಯಲ್ಲಿ. ಈ ದೃಷ್ಟಿಯಿಂದ ಸಂಶೋಧನೆಯಲ್ಲಿ ಇಂದಿನ ಹೊಸ ಕಾಲಕ್ಕೆ ತಕ್ಕ ಹೊಸ ಭಾಷಾ ಶೈಲಿಯೊಂದು ಹುಟ್ಟಿಬರಬೇಕಾಗಿದೆ... ಇತಿಹಾಸಕಾರರಾದ ನಾವು, ಶಾಸನ- ಪುರಾತತ್ವ ಅವಶೇಷಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಲಿದ್ದರೂ, ಬಿ. ಎಲ್. ರೈಸ್, ಆರ್. ನರಸಿಂಹಾಚಾರ್ಯರ ಕಾಲದ ವೇಗವನ್ನು ಬಹುಶಃ ಗುಣಮಟ್ಟವನ್ನೂ ಇಂದು ಕಳೆದು ಕೊಂಡಿದ್ದೇವೆ. ಅವರಿಗಿಂತ ಅನುಕೂಲತೆ ಹೆಚ್ಚು, ಕೆಲಸ ಕಡಿಮೆ ಎಂಬ ಸ್ಥಿತಿಗೆ ತಲುಪಿದ್ದೇವೆ..." ಎಂಬುದಾಗಿ ನನ್ನ ಸ್ನೇಹಿತ್ರರೂ, ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳೂ ಆದ ಡಾ|| ಎಂ. ಎಂ. ಕಲಬುರ್ಗಿ ಅವರು ೧೯೯೪ರಲ್ಲಿ ಸೊಂಡೂರಿನಲ್ಲಿ ನಡೆದ ಎಂಟನೇ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಬಹು ಕಳಕಳಿಯಿಂದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

೧೯೯೬ರಲ್ಲಿ ಧಾರವಾಡದಲ್ಲಿ ನಡೆದ ಹತ್ತನೆಯ ವಾರ್ಷಿಕ ಇತಿಹಾಸ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ|| ಜಿ. ಎಸ್. ದೀಕ್ಷಿತರು ಮಾಡಿದ ಭಾಷಣ ಒಂದು ಅಪರೂಪದ ಭಾಷಣ ಎಂದೇ ಹೇಳಬೇಕು. ಸಮಸ್ತ ದೇಶವೇ ನೀರಿನ ಸಮಸ್ಯೆ ಎದುರಿಸುತ್ತಿರುವ ಸಂದರ್ಭದಲ್ಲಿ ಡಾ|| ದೀಕ್ಷಿತ್ ಅವರು ಸೂಕ್ತ ಪರಿಹಾರ ಸೂಚಿಸಿದ್ದಾರೆ. "ಬೇಸಿಗೆಯಲ್ಲಿ ನಮ್ಮ ರಾಷ್ಟ್ರದ ಮುಂದಿರುವ ದಾರುಣ ಸಮಸ್ಯೆ ನೀರಿನ ಸರಬರಾಜಿನದು. ಹಿಂದಿನವರು ಕಂಡುಕೊಂಡ ಪರಿಹಾರ ಇಂದಿನವರಿಗೆ ತಕ್ಷಣ ಉಪಯೋಗ ವಾಗಬಲ್ಲದು. ಇತಿಹಾಸ ಸಂಶೋಧನೆಯಲ್ಲಿ ಇದು ಒಂದು ಹೊಸಕ್ಷೇತ್ರ. ಈ ಕ್ಷೇತ್ರದಲ್ಲಿ ಸಂಶೋಧನೆ ಅತ್ಯಂತ ಉಪಯುಕ್ತ. ನಮ್ಮ ಪೂರ್ವಜರು ನೀರಿನ ಸಮಸ್ಯೆಯ ಪರಿಹಾರಕ್ಕೆ ಹೆಚ್ಚಾಗಿ ಕೆರೆಗಳನ್ನು-ಬಾವಿಗಳನ್ನು ಅವಲಂಬಿಸಿದ್ದರು. ಮಳೆ ಚೆನ್ನಾಗಿ ಬಂದರೆ ಕೆರೆ ಬಾವಿಗಳು ತುಂಬಿರುತ್ತವೆ. ಬರಗಾಲ ಬಂದರೂ ಕೆರೆಗಳ ಅಂಗಳದಲ್ಲಿ ಬೆಳೆಗಳನ್ನು ಬೆಳೆದು ಸ್ವಲ್ಪಮಟ್ಟಿಗಾದರೂ ಬರಗಾಲದ ಬವಣೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಮಹಾಪೂರ ಬಂದರೂ ಅದರಿಂದ ಆಗುವ ಹಾನಿಯನ್ನು ಕೆರೆಗಳು ಕಡಿಮೆ ಮಾಡಬಲ್ಲವು. ಕೆರೆಗಳಿಂದ ಬಾವಿಯ ನೀರು ಒಣಗುವದು ಕಡಿಮೆಯಾಗುತ್ತದೆ. ಹೀಗೆ ಎಲ್ಲಾ ಕಾಲಗಳಲ್ಲಿಯೂ, ಸ್ಥಿತಿಗಳಲ್ಲಿಯೂ, ಕೆರೆಗಳು ಉಪಯುಕ್ತ... ನೀರಿನ ಸಮಸ್ಯೆಗೆ ಹೊಚ್ಚಹೊಸದಾದ ಪರಿಹಾರ ಕೊಳವೆ ಬಾವಿಗಳು. ಇದಕ್ಕೆ ಅಷ್ಟು ಖರ್ಚಾಗುವುದಿಲ್ಲ. ಮತ್ತು ಅನೇಕ ಕಡೆಗಳಲ್ಲಿ ಅತಿ ಶೀಘ್ರವಾಗಿ ಅವನ್ನು ನಿರ್ಮಿಸಬಹುದು. ಆದರೂ ಇತ್ತೀಚಿನ ದಿನಗಳಲ್ಲಿ ಅವುಗಳ ಆಳ ದಿನದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತಿದೆ. ಮತ್ತು ಅವುಗಳನ್ನು ನಿರ್ಮಿಸುವಲ್ಲಿ ಲಾಭ ನಷ್ಟಗಳನ್ನು ಮೊದಲೇ ಊಹಿಸುವಹಾಗಿಲ್ಲ. ಅದೊಂದು ಲಾಟರಿಯಾಗಿದೆ. ಆದರೂ ಕೊಳವೆ ಬಾವಿಗಳ ಆಳ ಕಡಿಮೆ ಮಾಡುವ ಉಪಕ್ರಮಗಳನ್ನು ಹುಡುಕಬೇಕೇ ಹೊರತು ಅವುಗಳನ್ನು ಕೈಬಿಡುವಹಾಗಿಲ್ಲ. ಇಂಥ ಉಪಕ್ರಮಗಳಲ್ಲಿ ಮುಖ್ಯವಾದದ್ದು ಹಳೆಯ ಕೆರೆಗಳ ಜೀರ್ಣೋದ್ಧಾರ. ಯಾಕೆಂದರೆ ಕೆರೆಗಳಿಂದಲೇ ಬಾವಿಗಳಲ್ಲಿ ನೀರು ಹೆಚ್ಚಾಗುವುದು. ಈ ಸಂಬಂಧವನ್ನು ನಮ್ಮ ಹಿರಿಯರು ಚೆನ್ನಾಗಿ ಅರಿತಿದ್ದರು. ಅದನ್ನು ಮರೆತು ನಾವು ಕೊಳವೆ ಬಾವಿಗಳ ಆಳವನ್ನು ಹೆಚ್ಚಿಸುತ್ತಾ ಹೋಗುತ್ತಿದ್ದೇವೆ. ಕೆರೆಗಳ ಜೀರ್ಣೋದ್ಧಾರದಿಂದ ಈ ಆಳವನ್ನು ಕಡಿಮೆ ಮಾಡಬಹುದು..... ನಮ್ಮ ಕೆರೆಗಳ ಬಗೆಗೆ ಬ್ರಿಟಿಷರ ಧೋರಣೆಯನ್ನು ನಾವು ತಿಳಿದುಕೊಳ್ಳಬೇಕು. ಅವರು ಮದಗದಂತಹ ಭಾರೀ ಕೆರೆಗಳನ್ನು ಸಂರಕ್ಷಿಸಿದರು. ಕಾರಣ ವೇನೆಂದರೆ. ಅವುಗಳಿಂದ ಕಂದಾಯ ಬರುತ್ತಿತ್ತು. ಸಾವಿರಾರು ಸಣ್ಣ ಕೆರೆಗಳನ್ನು ಅಲಕ್ಷಿಸಿದರು. ಕಾರಣ ಇವುಗಳಿಂದ ವರಮಾನ ವಿರಲಿಲ್ಲ.... ನಮ್ಮ ಕೆರೆಗಳ ಈಗಿನ ದುಸ್ಥಿಗೆ ಇನ್ನೂ ಎರಡು ಕಾರಣಗಳನ್ನು ಹೇಳಬಹುದು. ಒಂದು ಅವುಗಳ ಜಲಾನಯನ ಪ್ರದೇಶ ಕಡಿಮೆಯಾಗಿರುವುದು ಮತ್ತು ಎರಡನೆಯದು ಅವುಗಳ ಸುತ್ತಲೂ ಗಿಡಮರಗಳು ಇಲ್ಲದಿರುವುದು", ಎಂಬುದಾಗಿ ಡಾ|| ದೀಕ್ಷಿತ್ ಅವರು ಪ್ರಸ್ತುತದಲ್ಲಿಯ ನೀರಿನ ಭೀಕರ ಸಮಸ್ಯೆಗೆ ಪರಿಹಾರ ಸೂಚಿಸಿದರು.

ಈ ಸಂದರ್ಭದಲ್ಲಿ ಸಮಯದ ಅಭಾವ ಮತ್ತು 'ಇತಿಹಾಸ ದರ್ಶನ' ದಲ್ಲಿಯ ಸ್ಥಳದ ಅಭಾವದಿಂದಾಗಿ, ಹಿಂದಿನ ಕೆಲವೇ ಅಧ್ಯಕ್ಷರ ಮಹತ್ವದ ನುಡಿಗಳನ್ನು ಮಾತ್ರ ಸಾಂಕೇತಿಕವಾಗಿ ಉಲ್ಲೇಖಿಸಿದ್ದೇನೆ. ಹಾಗೆ ನೋಡಿದಲ್ಲಿ, ಹಿಂದಿನ ಎಲ್ಲ ಸಮ್ಮೇಳನಗಳಲ್ಲಿ ಅಧ್ಯಕ್ಷರೆಲ್ಲ ಆಡಿದ ಮಾತುಗಳು ಅತ್ಯಂತ ಪ್ರಯೋಜನಕಾರಿಯಾಗಿದ್ದು ಅವೆಲ್ಲ ನುಡಿಮುತ್ತುಗಳೇ ಆಗಿವೆ. ಅವರ ನುಡಿಮುತ್ತುಗಳನ್ನು ಸ್ಮರಿಸುವುದರ ಮೂಲಕ ಹಿಂದಿನ ಅಧ್ಯಕ್ಷರಿಗೆಲ್ಲ ನನ್ನ ಗೌರವಾರ್ಪಣೆ.

ನಾನು ಮಾತನಾಡಲಿರುವ ಎರಡನೆಯ ವಿಷಯ - 'ಕರ್ನಾಟಕ ಇತಿಹಾಸ ಅಕಾದೆಮಿ ಕ್ರಮಿಸಿದ ಮಾರ್ಗ'. ಅಕಾದೆಮಿ ಕುರಿತು ಹೆಚ್ಚು ಮಾತನಾಡುವ ಅಗತ್ಯವಿಲ್ಲ. ಏಕೆಂದರೆ ಅದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಆದರೂ ಸ್ವಲ್ಪದರಲ್ಲಿ ನನ್ನ ಅನಿಸಿಕೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಬೇಕಾದರೆ, ಆ ಸಂಸ್ಥೆಯಲ್ಲಿ ದುಡಿಯುವ ವ್ಯಕ್ತಿಗಳ ಪ್ರಾಮಾಣಿಕ ಪರಿಶ್ರಮವನ್ನು ಅವಲಂಬಿಸಿರುತ್ತದೆ. ಭಾರತದ ಅನೇಕ ಇತಿಹಾಸ ತಜ್ಞರಿಗೆ ಗುರುಗಳಾದ ಡಾ|| ಜಿ. ಎಸ್. ದೀಕ್ಷಿತ್ ಅವರಿಂದ ೧೯೮೬ರಲ್ಲಿ ಹುಟ್ಟು ಹಾಕಲ್ಪಟ್ಟ ಕರ್ನಾಟಕ ಇತಿಹಾಸ ಅಕಾದೆಮಿ, ಇಂದು ಹೆಮ್ಮರವಾಗಿ ಬೆಳೆದಿದೆ. ಡಾ|| ದೀಕ್ಷಿತ್‌ರನ್ನು ಸರ್ವರೂ

ಗೌರವದಿಂದ ಅಕಾದೆಮಿಯ ಅಜೀವ ಗೌರವಾಧ್ಯಕ್ಷರನ್ನಾಗಿ ಇರಿಸಿಕೊಂಡಿದ್ದಾರೆ. ಅದೇ ರೀತಿ, ಇಂದು, ನಾಡಿನ ಪ್ರಸಿದ್ಧ ಇತಿಹಾಸ ತಜ್ಞರೂ, ನಡೆದಾಡುವ ವಿಶ್ವಕೋಶದಂತಿರುವ ಡಾ|| ಸೂರ್ಯನಾಥ ಕಾಮತ್‌ರು ಅಕಾದೆಮಿಯ ಸಾರಥ್ಯವಹಿಸಿ, ಅಕಾದಮಿ ಯಶಸ್ಸಿನ ಪಥದಲ್ಲಿ ದಾಪುಗಾಲು ಹಾಕುತ್ತ ಮುನ್ನಡೆಯಲು ಕಾರಣರಾಗಿದ್ದಾರೆ. ಅಕಾದೆಮಿಯ ಔನ್ನತ್ಯಕ್ಕೆ ಡಾ|| ಎಚ್. ಎಸ್. ಗೋಪಾಲರಾವ್. ಶ್ರೀ ಎಂ. ಜಿ. ನಾಗರಾಜ, ಶ್ರೀ ಎಂ. ಬಿ. ಪಾಟೀಲ, ಡಾ|| ಕೆ. ವಸಂತಲಕ್ಷ್ಮಿ, ಡಾ|| ಚೆನ್ನಕ್ಕ ಪಾವಟೆ ಮತ್ತು ಸದಸ್ಯರು ಭಾಜನರಾಗಿದ್ದಾರೆ. ಒಟ್ಟಿನಲ್ಲಿ, ಅಕಾದೆಮಿ ಪ್ರಾರಂಭವಾದಾಗಿನಿಂದ ಇಂದಿನವರೆಗೆ ನಿಸ್ವಾರ್ಥ. ಪ್ರಾಮಾಣಿಕ ಸೇವೆ ಸಲ್ಲಿಸಿದ ಸದಸ್ಯರ ಪರಿಶ್ರಮ ದಿಂದಾಗಿ ಈ ಸಂಸ್ಥೆ ಕೇವಲ ರಾಜ್ಯ ಮಟ್ಟದಲ್ಲಷ್ಟೇ ಅಲ್ಲ, ರಾಷ್ಟ್ರ ಮಟ್ಟದಲ್ಲೂ ಖ್ಯಾತಿಗಳಿಸಿದೆ. ಹಿಂದಿನ ಎಷ್ಟೋ ಸಮ್ಮೇಳನಗಳ ಅಧ್ಯಕ್ಷರು ಮತ್ತು ಪ್ರಬಂಧಗಳನ್ನು ಮಂಡಿಸಿದ ಹಲವಾರು ವಿದ್ವಾಂಸರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಖ್ಯಾತಿ ಹೊಂದಿದ ವರಾಗಿದ್ದಾರೆ. ಸಮ್ಮೇಳನಗಳಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪ್ರತಿವರ್ಷ ತಪ್ಪದೇ 'ಇತಿಹಾಸ ದರ್ಶನ'ದಲ್ಲಿ ಪ್ರಕಟಿಸಲಾಗುತ್ತಿದೆ. ವರ್ಷದಿಂದ ವರ್ಷ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗುತ್ತಲಿದೆ. ಎಲ್ಲ ವಯೋಮಾನದವರೂ ಭಾಗವಹಿಸುತ್ತಲಿದ್ದಾರೆ. ಸಮ್ಮೇಳನದಲ್ಲಿ ನಾವೆಲ್ಲ ಭಾಗಿಗಳಾದಾಗ, ನಾವೆಲ್ಲ ಒಂದೇ ಪರಿವಾರಕ್ಕೆ ಸೇರಿದವರೆಂಬ ಪರಸ್ಪರ ಆತ್ಮೀಯ ಭಾವನೆ ಬಹು ಸೊಗಸಾಗಿ ಬೆಳೆಯುತ್ತಲಿದೆ. ಇಲ್ಲಿ ಸದ್ದುಗದ್ದಲವಿಲ್ಲದೆ ಸಕಲ ಮತ ಧರ್ಮೀಯರಿಗೂ ಮುಕ್ತದ್ವಾರ. ಹಿರಿಯ ವಿದ್ವಾಂಸರ ಗರಡಿಮನೆಯಲ್ಲಿ ತರುಣ ಇತಿಹಾಸ ಸಂಶೋಧಕರ ಪಡೆಯೇ ನಿರ್ಮಾಣವಾಗುತ್ತಲಿದೆ. ಕೆಲವೊಮ್ಮೆ ಹಿರಿಯರಿಗಿಂತಲೂ ಕಿರಿಯರು ಹೆಚ್ಚಿನ ಸಾಧನೆಯನ್ನು ಮಾಡಿದ್ದೂ ಉಂಟು. ಆದರೆ ಎಲ್ಲ ಕಾರ್ಯಗಳೂ ನಡೆಯುವುದು ಕುಟುಂಬದಲ್ಲಿಯ ವ್ಯವಹಾರಗಳಂತೆ. ಅಕಾದೆಮಿ ಹಮ್ಮಿಕೊಂಡಿರುವ ಕಾರ್ಯಗಳನ್ನು ಅವಲೋಕಿಸಿದಾಗ. ಅದರ ಘನತೆ ಮತ್ತು ವೈಶಾಲ್ಯದ ಅರಿವು ಆಗದೇ ಇರದು. ಕರ್ನಾಟಕ ಇತಿಹಾಸದ ಬಗ್ಗೆ ಅಖಿಲ ಕರ್ನಾಟಕದಲ್ಲಿ ಜಾಗೃತಿಯನ್ನುಂಟುಮಾಡಲೆಂದು ಕರ್ನಾಟಕದ ವಿವಿಧ ಭಾಗಗಳಲ್ಲಿ ಸಮ್ಮೇಳನಗಳನ್ನು ಜರುಗಿಸಲಾಗುತ್ತಿದೆ. 'ಐತಿಹಾಸಿಕ ಪರಂಪರೆ ಉಳಿಸಿ', ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಇತಿಹಾಸದ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಲೆಂದು ರಾಜ್ಯ ಮಟ್ಟದಲ್ಲಿ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ, ಶ್ರೇಷ್ಠರಿಗೆ ಬಹುಮಾನಗಳನ್ನು ನೀಡಲಾಗುತ್ತಿದೆ. ಜನರಿಗೆ ಇತಿಹಾಸದ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾಗಲೆಂದು. ರಾಜ್ಯಾದ್ಯಂತ ವಿದ್ವಾಂಸರಿಂದ ಪ್ರವಚನಗಳನ್ನು ಏರ್ಪಡಿಸಲಾಗಿತ್ತಿದೆ. ಒಟ್ಟಿನಲ್ಲಿ, ಇದು ನಾವೆಲ್ಲರೂ ಕಟ್ಟಿ, ಬೆಳೆಸಿದ ಸಂಸ್ಥೆ. ಈ ಭವ್ಯ ಕಟ್ಟಡದ ಪ್ರತಿಯೊಂದು ಇಟ್ಟಿಗೆಯೂ ಅತ್ಯಂತ ಮಹತ್ವದ್ದಾಗಿದೆ. ಸಮಯದ ಅಭಾವದಿಂದಾಗಿ, ಈ ವಿಷಯವನ್ನು ಇಲ್ಲೇ ನಿಲ್ಲಿಸುವೆ. 'ಇತಿಹಾಸ ದರ್ಶನ'ದ ಎಲ್ಲ ಸಂಪುಟಗಳನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿದಲ್ಲಿ, ಇತಿಹಾಸ ಅಕಾದೆಮಿಯ ಭವ್ಯ ಚರಿತ್ರೆಯ ಅರಿವು ಸಹಜವಾಗಿಯೇ ಆಗುತ್ತದೆ. ಕರ್ನಾಟಕ ಇತಿಹಾಸ ಅಕಾದೆಮಿಯ ಚರಿತ್ರೆಯನ್ನೇ ಮುಖ್ಯ ವಿಷಯವನ್ನಾಗಿ ಆಯ್ದುಕೊಂಡು ಒಂದು ಮಹಾಪ್ರಬಂಧವನ್ನೇ ರಚಿಸಬಹುದಾಗಿದೆ.

ಸಂಶೋಧನಾಕ್ಷೇತ್ರದಲ್ಲಿ ನಾನು ಕೈಗೊಂಡ ಕೃಷಿ ಕುರಿತು, ಸ್ವಲ್ಪ ಮುಜುಗರವೆನಿದರೂ, ಸ್ವಲ್ಪದರಲ್ಲಿ ಹೇಳ ಬಯಸುವೆ. ಈ ಸ್ಥಿತಿಗೆ ನಾನು ಹುಟ್ಟನಿಂದ ಇಂದಿನವರೆಗೆ ಅನೇಕ ಪುಣ್ಯಾತ್ಮರು ಕಾರಣರಾಗಿದ್ದಾರೆ. ಅವರೆಲ್ಲರಿಗೆ ನನ್ನ ನಮನಗಳನ್ನು ಸಲ್ಲಿಸುವುದು ನನ್ನ ಆದ್ಯ ಕರ್ತವ್ಯವಾಗಿರುತ್ತದೆ. ಮಗುವಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ ನನಗೆ, ಪರೋಕ್ಷವಾಗಿ ಅವರ ಆಶೀರ್ವಾದವೇ ರಕ್ಷಾಕವಚವಾಯಿತು. ಸಂಸ್ಕೃತದಲ್ಲಿ ಘನ ವಿದ್ವಾಂಸರೆನಿಸಿದ್ದ ನನ್ನ ತಂದೆ ಕೃಷ್ಣಶಾಸ್ತ್ರಿಗಳಿಂದ ಸಂಸ್ಕೃತ ಕಲಿಯುವ ಭಾಗ್ಯ ನನಗೆ ದೊರೆಯಲಿಲ್ಲ. ತಾಯಿ ಭವಾನಿಯ ವಾತ್ಸಲ್ಯ ಮತ್ತು ಪರಿಶ್ರಮದ ಫಲವಾಗಿ ಇಂದು ನಾನು ಹೀಗಿರುವೆ. ಪ್ರಾಥಮಿಕ ಶಾಲಾ ಹಂತದಿಂದ ವಿಶ್ವವಿದ್ಯಾಲಯದವರೆಗೆ ನನ್ನನ್ನು ರೂಪಿಸಿದ ಎಲ್ಲ ಗುರುಗಳಿಗೆ ನನ್ನ ಅನಂತ ನಮನಗಳು. ಜ್ಞಾನಪೀಠ ಪ್ರಶಸ್ತಿ ವಿಜೇತ ಪದ್ಮಶ್ರೀ ಡಾ|| ವಿ. ಕೃ. ಗೋಕಾಕ್. ಪ್ರಾಚಾರ್ಯ ಆರ್ಮಾಂಡೊ ಮೆನೆಝಿಸ್, ಪ್ರಾ|| ವಿ. ಎಂ. ಇನಾಮದಾರ್, ಪ್ರೊ|| ಭಾಸ್ಕರ್ ಹಾಗೂ ಸ್ನಾತಕೋತ್ತರ ಸಮಯದಲ್ಲಿ ಡಾ|| ಬಿ. ಎ. ಸಾಲೆತೊರೆ, ಡಾ|| ಪಿ. ಬಿ. ದೇಸಾಯಿ ಮೊದಲಾದ ಘನ ವಿದ್ವಾಂಸರಿಂದ ಕಲಿಯುವ ಸದವಕಾಶ ನನಗೆ ದೊರೆತಿದ್ದು ನನ್ನ ಪುಣ್ಯ. ಪತ್ತಾರ, ಮುಳಗುಂದ, ಬೀಡಿಕರ, ಹಬ್ಬು, ಎಲ್. ಬಿ. ಕುಲಕರ್ಣಿ, ಕೊನೇರಿ, ಎಸ್. ಜಿ. ನಾಡಗೀರ ಮೊದಲಾದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರನ್ನು ಕೃತಜ್ಞತೆ ಗಳೊಂದಿಗೆ ಸ್ಮರಿಸುವೆ. ಆದರೆ ಒಬ್ಬ ತಂದೆಯಂತೆ ಮತ್ತು ಗುರುವಿನಂತೆ ನನ್ನನ್ನು ವಿದ್ಯಾರ್ಥಿ ಹಂತದಿಂದ ಇಂದಿನವರೆಗೆ ಕೈ ಹಿಡಿದು ನಡೆಸಿಕೊಂಡು ಬಂದವರು ಡಾ|| ಜಿ. ಎಸ್. ದೀಕ್ಷಿತ್. ಅವರಿಗೆ ನಾನು ಚಿರಋಣಿ. ಶೃಂಗೇರಿ, ಸ್ವರ್ಣವಲ್ಲಿ, ಚಿತ್ರಾಪುರ, ರಾಮಚಂದ್ರಾಪುರ, ನೆಲೆಮಾವು, ಚಿತ್ರದುರ್ಗ, ದಾವಣಗೆರೆ, ತೋಂಟದಾರ್ಯ. ರುದ್ರಾಕ್ಷಿ, ಹಂಪೆ ಮೊದಲಾದ ಸ್ಥಳಗಳಲ್ಲಿಯ ಮಠಾಧೀಶರೊಂದಿಗೆ ಸಂಪರ್ಕ ಬಂದ ನನಗೆ ಆ ಗುರುಗಳೆಲ್ಲರ ಆಶೀರ್ವಾದ ಸದಾ ಇದೆ. ಒಟ್ಟಿನಲ್ಲಿ ಸಕಲ ಪಾಠಗಳನ್ನು ಕಲಿಸುವ ಸಮಾಜವೇ ನನಗೆ ಪಾಠಶಾಲೆ, ಶೃಂಗೇರಿ ಮಠದ ಬ್ರಹ್ಮೀಭೂತ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಮತ್ತು ಇಂದಿನ ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳವರು ಮತ್ತು

ಸ್ವರ್ಣವಲ್ಲೀ ಮಠದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ನನಗೆ ಆಕರ ಸಾಮಗ್ರಿಗಳನ್ನು ಒದಗಿಸಿಕೊಟ್ಟು ಅನುಗ್ರಹಿಸಿದ್ದಾರೆ. ಅವರಿಗೆಲ್ಲ ನನ್ನ ಸಾಷ್ಟಾಂಗ ಪ್ರಣಾಮಗಳು.

ಮುಖ್ಯವಾಗಿ ಮೂರು ಕ್ಷೇತ್ರಗಳಲ್ಲಿ ನಾನು ಕೃಷಿ ಮಾಡಿದ್ದೇನೆ: ಮೊದಲನೆಯದಾಗಿ ಕ್ರೀಡಾಕ್ಷೇತ್ರ, ಎರಡನೆಯದಾಗಿ ಅಧ್ಯಾಪನ ಮತ್ತು ಮೂರನೆಯದಾಗಿ, ಇಂದಿನ ಈ ಸ್ಥಾನದಲ್ಲಿರಲು ಮುಖ್ಯವಾಗಿ ಸಂಶೋಧನೆ.

ವಿಶ್ವವಿದ್ಯಾಲಯಕ್ಕೆ ಮೂರು ಅಥ್ಲೆಟಿಕ್ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ, ಹೊಸ ವಿಕ್ರಮ ಸ್ಥಾಪನೆ, ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಕ್ರೀಡಾಕೂಟಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ನಾಯಕ, ರಾಜ್ಯ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ಅಥ್ಲೆಟಿಕ್ ಕೋಚ್ ಆಗಿ ರಾಜ್ಯಕ್ಕೆ ಪ್ರಥಮ, ಇವೆಲ್ಲ ನನ್ನ ವಿದ್ಯಾರ್ಥಿ ಜೀವನದ ಸಾಧನೆಗಳು.

ಸುಮಾರು ಮೂವತ್ತೈದು ವರ್ಷಗಳ ಕಾಲ, ಕಾಲೇಜಿನ ವಿದ್ಯಾರ್ಥಿಗಳಿಗೆ ಅತ್ಯಂತ ವಾತ್ಸಲ್ಯ ಮತ್ತು ಪ್ರಾಮಾಣಿಕತೆಯಿಂದ ಕಲಿಸಿದ್ದೇನೆ. ಆದರೂ ಈ ವಿಷಯದಲ್ಲಿ ವಿದ್ಯಾರ್ಥಿಗಳು ನನ್ನ ಬಗ್ಗೆ ಇರಿಸಿಕೊಂಡ ಅಭಿಪ್ರಾಯವೇ ಸರಿಯಾದುದು.

ಮೂರನೆಯದಾಗಿ ಸಂಶೋಧನೆ. ಕ್ರೀಡೆ ನನ್ನ ಮಟ್ಟಿಗೆ ಹೇಳುವದಾದರೆ, ನನ್ನ ಅಭ್ಯುದಯಕ್ಕೆ ಎಂದೂ ತಡೆಯೊಡ್ಡಿಲ್ಲ, ಕ್ರೀಡೆ, ಅಧ್ಯಾಪನ, ಸಂಶೋಧನೆ, ಇವು ಪರಸ್ಪರ ಪೂರಕ ಎಂದೇ ನನ್ನ ಭಾವನೆ. ಉಪನ್ಯಾಸಕನಾದ ಮೇಲೆ ಇತಿಹಾಸ ಸಂಶೋಧನೆಯಲ್ಲಿ ಆಸಕ್ತಿ ಹುಟ್ಟಿಸಲು ಕಾರಣರಾದವರು ಡಾ|| ಜಿ. ಎಸ್. ದೀಕ್ಷಿತ್. ನಾನೊಬ್ಬ ಕ್ರೀಡಾಪಟುವಾಗಿದ್ದರಿಂದ, ಕೃಷ್ಣದೇವರಾಯನ ಸೈನ್ಯ ಪದ್ಧತಿ ಕುರಿತು ಸಂಶೋಧನೆ ನಡೆಸಲು ಅವರು ನನಗೆ ಆದೇಶಿಸಿದರು. ಆದರೆ ಮತ್ತೊಂದು ಸಂದರ್ಭದಲ್ಲಿ ಶೃಂಗೇರಿಗೆ ನನ್ನನ್ನು ಕರೆದೊಯ್ದು ಅಲ್ಲಿ ಇದ್ದ ಅಪಾರ ಸಂಖ್ಯೆಯ ಕಡತಗಳನ್ನು ಪರಿಚಯಿಸಿದರು. ಹೀಗೆ, ಸುಮಾರು ಮೂರು ದಶಕಗಳ ಹಿಂದೆಯೇ ಪ್ರಾರಂಭವಾದ ನನ್ನ ಸಂಶೋಧನಾ ಕಾರ್ಯ ಇಂದಿಗೂ ಅವ್ಯಾಹತವಾಗಿ ಸಾಗಿ ಬಂದಿದೆ. ನಾನು ಬರೆದ ಎಲ್ಲ ಪುಸ್ತಕಗಳ ಮತ್ತು ಲೇಖನಗಳ ಯಾದಿಯನ್ನು ಪ್ರಸ್ತುತದಲ್ಲಿ ಕೊಡಬಯಸುವುದಿಲ್ಲ. ಆದರೂ, 'ಎ ಹಿಸ್ಟರಿ ಆಫ್ ಶೃಂಗೇರಿ', 'ದಿ ರೆಕಾರ್ಡ್ಸ್ ಆಫ್ ದಿ ಶೃಂಗೇರಿ ಮಠ ರಿಲೇಟಿಂಗ್ ಟು ಕೆಳದಿ', 'ಶೃಂಗೇರಿ ಧರ್ಮಸಂಸ್ಥಾನ.' 'ಶಿರಸಿ ತಾಲೂಕಿನ ಇತಿಹಾಸ, 'ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ', 'ಶ್ರೀ ಮಂಜುಗುಣಿಕ್ಷೇತ್ರದ ಚಾರಿತ್ರಿಕ ದಾಖಲೆಗಳು', ಇತ್ಯಾದಿ ಪುಸ್ತಕಗಳು, ಇತಿಹಾಸ ಸಂಶೋಧಕರಿಗೆ ಮೆಚ್ಚುಗೆಯಾಗಬಹುದಾದ ಕೃತಿಗಳೆಂದು ನಾನು ಭಾವಿಸಿರುವೆ. ಪ್ರಸ್ತುತದಲ್ಲಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಆದೇಶದ ಮೇರೆಗೆ, ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಿಗೆ ಸಂಬಂಧಿಸಿದ ಚಾರಿತ್ರಿಕ ದಾಖಲೆಗಳ ಸಂಗ್ರಹಣೆ ಮತ್ತು ಗ್ರಂಥ ರಚನಾ ಕಾರ್ಯದಲ್ಲಿ ಮಗ್ನನಾಗಿದ್ದೇನೆ. ಜೊತೆಯಲ್ಲಿ ಸ್ವರ್ಣವಲ್ಲೀ ಮಹಾಸಂಸ್ಥಾನದ ಚರಿತ್ರೆಯನ್ನು ಇಂಗ್ಲಿಷ್‌ನಲ್ಲಿ ಬರೆಯಲು ಪ್ರಾರಂಭಿಸಿದ್ದೇನೆ. ಶ್ರೀ ರಾಮಚಂದ್ರಾಪುರ ಮಠದ ಚರಿತ್ರೆಗೆ ಸಂಬಂಧಿಸಿದ ದಾಖಲೆಗಳನ್ನೂ ಸಂಗ್ರಹಿಸುತ್ತಲಿರುವೆ. ಆದರೂ ಕೆಲವು ಅನಿವಾರ್ಯ ಕಾರಣಗಳಿಂದಾಗಿ ಸಂಶೋಧನಾ ಕಾರ್ಯ ಮುಂಚಿನಷ್ಟು ತೀವ್ರಗತಿಯಲ್ಲಿ ಸಾಗುತ್ತಲಿಲ್ಲ. ಶೃಂಗೇರಿ ಮಠದ ಕಡತಗಳಲ್ಲಿಯ ಆಯ್ದ ದಾಖಲೆಗಳ ಸಂಕಲನ ಕೆಲಸವೂ ಮುಂದುವರಿದಿದೆ.

ನಾನು ಕೈಗೊಂಡ ಸಂಶೋಧನಾ ಕಾರ್ಯದಲ್ಲಿ ಬಳಸಿದ ಆಕರಗಳನ್ನು ಸ್ವಲ್ಪದರಲ್ಲಿ ಪರಿಚಯಿಸುವೆ. ಮೊದಲೇ ತಿಳಿಸಿದಂತೆ, ಶೃಂಗೇರಿ ಮಠದೊಂದಿಗೆ ನನ್ನ ಸಂಪರ್ಕ ಕಲ್ಪಿಸಿದವರು ಡಾ|| ದೀಕ್ಷಿತ್. ಮಠದಲ್ಲಿ ಕಡತ, ಕಾಗದಪತ್ರ ಮತ್ತು ತಾಳೆಗರಿಗಳನ್ನು ಅಧಿಕ ಸಂಖ್ಯೆಯಲ್ಲಿ ಸಂಗ್ರಹಿಸಿ ಇಡಲಾಗಿದೆ. ಅಲ್ಲಿಯ ಕಡತ ಮತ್ತು ಕಾಗದದಲ್ಲಿಯ ಹಸ್ತಪ್ರತಿಗಳನ್ನು ಕುರಿತು ನಾನು ವಿಶೇಷ ಅಧ್ಯಯನ ಮಾಡಿ ಶೃಂಗೇರಿಯ ಚರಿತ್ರೆಗೆ ಸಂಬಂಧಿಸಿ ಕೆಲವು ಪುಸ್ತಕಗಳನ್ನು ಬರೆದಿದ್ದೇನೆ. ಹಂಪೆಯಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ ಸಮ್ಮೇಳನದಲ್ಲಿ, ಅಲ್ಲಿಯ ಕುಲಪತಿಗಳಾಗಿದ್ದ ಡಾ|| ಎಂ. ಎಂ. ಕಲಬುರ್ಗಿಯವರು, "ಕರ್ನಾಟಕದಲ್ಲಿ ನನ್ನನ್ನು 'ಶಾಸನದ ಕಲಬುರ್ಗಿ' ಎಂದು ಗುರುತಿಸಿದರೆ, ಡಾ|| ಎ. ಕೆ. ಶಾಸ್ತ್ರೀಯವರನ್ನು 'ಕಡತದ ಶಾಸ್ತ್ರಿ' ಎಂದೇ ಗುರುತಿಸುವರು", ಎಂದು ತಮಾಷೆಯಾಗಿ ನುಡಿದರು.

ಕಾಗದದ ಬಳಕೆಯು ಇಲ್ಲದಾಗ, ಭಾರತೀಯರು ಶಿಲಾಫಲಕ, ತಾಮ್ರಫಲಕ, ತಾಳೆಗರಿ ಮುಂತಾದ ಸಾಮಗ್ರಿಗಳನ್ನು ಬರೆಯಲು ಬಳಸುತ್ತಿದ್ದರು. ಇಂತಹ ಸಾಮಗ್ರಿಗಳಲ್ಲಿ ಕಡತವೂ ಒಂದು. ಬಟ್ಟೆಗೆ ಅಂಟು ಮಿಶ್ರಿತ ಹುಣಸೆಪುಡಿಯನ್ನು ಹಚ್ಚಿ, ಗಾರೆಗಲ್ಲಿನಿಂದ ತಿಕ್ಕಿ, ಕಾಡಿಗೆ ಲೇಪಿಸಿ, ಒಣಗಿಸಿ, ಪುಸ್ತಕ ರೂಪದಲ್ಲಿ ಮಡಿಚಿ, ಹಾಳೆಗಳ ಮೇಲೆ ಸೀಸದಂಥ ಬಳಪದ ಕಲ್ಲಿನಿಂದ ಬರೆಯಲಾಗುತ್ತಿತ್ತು. ಕೆಲವೊಮ್ಮೆ ಸುರುಳಿಸುತ್ತಿ, ಬಿದಿರಂಡೆಯಲ್ಲಿ ಹಾಕಿ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಮಾಚಾರ ಕಳಿಸಲೂ ಕಡತಗಳನ್ನು ಬಳಸಲಾಗುತ್ತಿತ್ತು. "ಮೈಸೂರು ಪ್ರದೇಶದ ವ್ಯಾಪಾರ ವರ್ಗದವರು ತಮ್ಮ ಜಮಾಖರ್ಚಿನ ಪುಸ್ತಕಗಳನ್ನು ಅರಿವೆಯ ಕಪ್ಪುಹಾಳೆಗಳಿಂದ ಸಿದ್ಧಪಡಿಸುತ್ತಿದ್ದರು; ಹೀಗೆ ಸಿದ್ಧಪಡಿಸುವಾಗ ಹುಣಸೆಬೀಜಗಳ ಹುಡಿಯ ಅಂಟನ್ನು ಅರಿವೆಯ ಹಾಳೆಗಳಿಗೆ ಬಡಿದು, ನಂತರ ಅವುಗಳಿಗೆ ಮಸಿ ಬಳಿಯಲಾಗುತ್ತಿತ್ತು." ಎಂದು ಡಾ|| ಡಿ. ಸಿ. ಸರ್ಕಾರ್ ಅವರು 'ಇಂಡಿಯನ್ ಎಪಿಗ್ರಾಫಿ' ಎಂಬ ಪುಸ್ತಕದಲ್ಲಿ ಕಡತಗಳ ಬಗ್ಗೆ ವಿವರಣೆ ನೀಡುವಾಗ ಹೇಳಿದ್ದಾರೆ. 'ಪಟ', 'ಪಟಿಕಾ', 'ಕಾರ್ಪಾಸಿಕ ಪಟ', ಎಂಬುದಾಗಿ ಕಡತವನ್ನು ಸಂಸ್ಕೃತದಲ್ಲಿ ಹೆಸರಿಸಲಾಗಿದೆ.

ನಿರೂಪ ಮತ್ತು ಬಿನ್ನವತ್ತಳೆಗಳಿಗೆ ಸಂಬಂಧಿಸಿದ ಶೃಂಗೇರಿ

ಮಠದ ಸುಮಾರು ೨೦೫ ಕಡತಗಳಲ್ಲಿ ಭೂದಾನಪಟ್ಟೆ, ಕ್ರಯದಾನಪಟ್ಟೆ, ಗೃಹನಿವೇಶನದ ದಾನಪಟ್ಟೆ, ಗ್ರಾಮಗುತ್ತಿಗೆ ಬಿನ್ನವತ್ತಳೆ, ಗೌಡಿಕೆ ಬಿನ್ನವತ್ತಳೆ, ಸಿಸ್ತಿನ ತೋಟದ ಪಟ್ಟೆ ಪ್ರತಿ, ಚರಾದಾಯದ ಗುತ್ತಿಗೆ, ಉಗ್ರಾಣ, ಸುಂಕ, ಮಣೆಯ, ಪಾರುಪತ್ಯ, ನವರಾತ್ರ, ವಸಂತ, ದೀಪಾವಳಿ, ಶಾರದಾಮ್ಮನವರ ಗೋಪುರ ಪ್ರತಿಷ್ಠೆ, ಗುರುಗಳ ತೀರ್ಥಯಾತ್ರೆ ಮತ್ತು ಚಾತುರ್ಮಾಸ್ಯ, ಆಚಾರ-ವಿಚಾರ, ಆಶೀರ್ವಾದ ಪತ್ರಿಕೆ, ಚರಣಕಾಣಿಕೆ, ಅಗ್ರತಾಂಬೂಲ, ಪ್ರಾಯಶ್ಚಿತ್ತ ಕಾಣಿಕೆ, ಮುಂತಾದ ವಿಷಯಗಳನ್ನು ಉಲ್ಲೇಖಿಸಲಾಗಿದೆ. ನಿರೂಪ ಮತ್ತು ಬಿನ್ನವತ್ತಳೆಗಳಿಗೆ ಸಂಬಂಧಿಸಿ ಸುಮಾರು ೨೫,೦೦೦ ದಾಖಲೆಗಳನ್ನು ಈ ಕಡತಗಳಲ್ಲಿ ದಾಖಲಿಸಲಾಗಿದೆ. ಇನ್ನುಳಿದ ಸುಮಾರು ೫೪೮ ಕಡತಗಳಲ್ಲಿ ಜಮಾಖರ್ಚು ಬರೆಯಲಾಗಿದೆ. ಶೃಂಗೇರಿ ಧರ್ಮಸಂಸ್ಥಾನ ದೊಂದಿಗೆ ವಿಜಯನಗರದ ಸಾಮ್ರಾಟರು, ಕೆಳದಿಯ ನಾಯಕರು, ಮರಾಠಾ ದೊರೆಗಳು, ಹೈದರಲಿ, ಟೀಪುಸುಲ್ತಾನ, ನಿಝಾಮ, ಮೈಸೂರಿನ ಒಡೆಯರು, ಬ್ರಿಟಿಷ್ ಕಮೀಷನರ್‌ರು ಮತ್ತು ಅನೇಕ ಸಂಸ್ಥಾನಿಕರು ಇರಿಸಿಕೊಂಡ ಗೌರವಯುತ ಸಂಬಂಧ ವನ್ನರಿಯಲು ಕಡತಗಳು ಮತ್ತು ಕಾಗದ ಪತ್ರಗಳು ಉಪಯುಕ್ತ. ಶೃಂಗೇರಿ ಮಠದ ಕಡತಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದವರು ನಾನು ಬರೆದ, ಕನ್ನಡ ಸಾಹಿತ್ಯಪರಿಷತ್ತು ಪ್ರಕಾಶಿಸಿದ 'ಕನ್ನಡದಲ್ಲಿ ಕಡತಗಳು' ಎಂಬ ಪುಸ್ತಕವನ್ನು ಓದಬಹುದು.

ಶೃಂಗೇರಿ ಮಠದ ಚರಿತ್ರೆಯನ್ನು ಬರೆಯುವಲ್ಲಿ ಕಡತಗಳನ್ನು ಮತ್ತು ಕಾಗದಪತ್ರಗಳನ್ನು ಆಕಾರಸಾಮಗ್ರಿಗಳನ್ನಾಗಿ ಬಳಸಿ ಕೊಂಡಂತೆ, ಶಿರಸಿ, ಸ್ವರ್ಣವಲ್ಲಿ, ಮಂಜುಗುಣಿ, ಇಡಗುಂಜಿ, ಗೋಕರ್ಣ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಚರಿತ್ರೆಯನ್ನು ಬರೆಯುವಲ್ಲಿ ಮುಖ್ಯವಾಗಿ ಕಾಗದಪತ್ರಗಳನ್ನು ಮತ್ತು ಕೆಲವೊಮ್ಮೆ ತಾಳೆಗರಿಗಳನ್ನು ಬಳಸಿಕೊಂಡಿದ್ದೇನೆ. ಪ್ರಸ್ತುತದಲ್ಲಿ ಅವೆಲ್ಲವುಗಳ ವಿವರಣೆ ಅನಗತ್ಯ. ಕಡತ, ತಾಳೆಗರಿ ಮತ್ತು ಕಾಗದ ಪತ್ರಗಳಲ್ಲಿ ಬಳಸಿದ ಅಂಡೆ (ಬಿದಿರು ಕೊಳವೆ), ಸರ್ವಮಾನ್ಯ (ಎಲ್ಲ ಬಗೆಯ ಕಂದಾಯಗಳಿಂದ ಹೊರತಾದ), ಅರ್ಧಮಾನ್ಯ ಭೂಮಿ (ಕಂದಾಯದಲ್ಲಿ ಅರ್ಧರಿಯಾಯಿತಿ ಪಡೆದ ಭೂಮಿ), ಉತ್ತಾರ (ಕಂದಾಯ ರಹಿತ), ಉಪಾಧಿ (ಪೂಜಾರಿಯು ದೇವಸ್ಥಾನದಲ್ಲಿ ಸಲ್ಲಿಸುವ ಸೇವೆ), ಎತ್ತುವಳಿ (ವಸೂಲು ಮಾಡುವದು), ಐವಜು (ಉತ್ಪನ್ನ), ಕಂದಾಚಾರ (ಸೇವೆ), ಕುಮ್ಮಕ್ಕು (ಸಹಾಯ), ಕೊಳಗ, ಖಂಡುಗ, ತುಂಡು ಸಂಬಳ, ದಿಂಡೆತನ (ನೀಚತನ), ಧರ್ಮಸಾಧನ, ನಿರೂಪ (ಅಪ್ಪಣೆ), ಪಟ್ಟೆ (ಭೂಮಿಯ ಬಗ್ಗೆ ಕೊಡುವ ಸನದು ಪತ್ರ), ಪಾರುಪತ್ಯ, ಪ್ರಾಕು (ಪೂರ್ವದ), ಬಿನ್ನವತ್ತಳೆ(ವಿಜ್ಞಾಪನ ಪತ್ರಿಕೆ), ಬುರುಡೆ (ಉರುಟು ಪಾತ್ರೆ), ಗದ್ಯಾಣ, ವರಹ ಹೊನ್ನು, ಹಣ, ಮುಪ್ಪಾಗ, ಅಡ್ಡ ಬೇಳೆ, ಹಾಗ, ವೀಸ, ಅರೆವೀಸ, ಕಾಸು ಭೋಗ್ಯಾಧಿ ಪತ್ರ (ಆಸ್ತಿಯ ಹಕ್ಕನ್ನು ಆಧಾರವಾಗಿ ವಹಿಸಿಕೊಡುವ ಕರಾರು ಪತ್ರ), ಮಕ್ಕಿಗದ್ದೆ (ಎತ್ತರದಲ್ಲಿರುವ ಸಾಗುವಳಿ ಭೂಮಿ), ಮಣೆಯ (ಭೂಕಂದಾಯ), ರಹದಾರಿ (ಅಪ್ಪಣೆ ಚೀಟಿ), ರಾಯಸ (ರಾಜ, ಗುರು ಮುಂತಾದ ಹಿರಿಯರಿಂದ ತರುವ ಪತ್ರ ಅಥವಾ ನಿರೂಪ), ವೆಗ್ಗಳ (ಹೆಚ್ಚು), ಸಿಸ್ತು (ಪ್ರಮಾಣ ಬದ್ಧವಾದ ಭೂಕಂದಾಯ), ಸ್ವಾಸ್ಥ್ಯ (ಆಧೀನದಲ್ಲಿರುವ ಪ್ರದೇಶ), ಹಕ್ಕಲು (ಬೆಳೆಕೊಯ್ದ ಜಮೀನು), ಹರಿಕಾರ (ಸಮಾಚಾರ ಒಯ್ಯುವವ), ಹಾಡ್ಯ (ಒಂದು ಬಗೆಯ ಕುರುಚಲು ಕಾಡು), ಇತ್ಯಾದಿ ಪದಗಳು ಅಂದಿನ ಕನ್ನಡದ ಸಿರಿಯನ್ನು ಪ್ರಕಾಶಿಸುತ್ತವೆ. ಹಿಂದಿನ ದಾಖಲೆಗಳಿಗೆ ಹೋಲಿಸಿದಲ್ಲಿ ತೀರ ಇತ್ತೀಚಿನ ದಾಖಲೆಗಳಿಗೆ ಭಾಷೆಯ ಘನತೆ- ಗಾಂಭೀರ್ಯಗಳಿಲ್ಲ, ಪದಲಾಲಿತ್ಯವಿಲ್ಲ ಮತ್ತು ವಿಷಯ ನಿರೂಪಣೆಯಲ್ಲಿ ಸರಿಯಾದ ಕ್ರಮವಿಲ್ಲ.

ಇನ್ನು ನನ್ನ ಭಾಷಣದ ಕೊನೆಯ ಹಂತ. 'ಕರ್ನಾಟಕ ಇತಿಹಾಸ ಸಂಶೋಧನೆಗೆ ಸಂಬಂಧಿಸಿ ಚಿಂತನೆ. ಪ್ರಾಕ್ತನ ಶಾಸ್ತ್ರ ಅಂದರೆ ಶಾಸನ, ಉತ್ಖನನ, ನಾಣ್ಯ, ಸ್ಮಾರಕಗಳು, ಕಲೆ ಮತ್ತು ವಾಸ್ತು ಶಿಲ್ಪಗಳ ಅಧ್ಯಯನ ಇವುಗಳನ್ನು ಕುರಿತು ನಾನು ಪ್ರಸ್ತಾಪಿಸುತ್ತಿಲ್ಲ. ಸಾಹಿತ್ಯಕ್ಕೆ ಸಂಬಂಧಿಸಿದ ಆಕರಗಳನ್ನೂ ಹೇಳುತ್ತಿಲ್ಲ. ಏಕೆಂದರೆ ಈ ಕ್ಷೇತ್ರಗಳಲ್ಲಿ ನಾನು ಪರಿಣಿತನಲ್ಲ. ಪ್ರಾಕ್ತನ ಶಾಸ್ತ್ರದಲ್ಲಿ ವಿಖ್ಯಾತರೂ, ಹಿಂದಿನ ತಲೆಮಾರಿನವರೂ ಆದ ಮೆಕೆಂಜಿ, ಎಲಿಯಟ್, ಫ್ಲೀಟ್, ರೈಸ್ ರಂಥ ಪಾಶ್ಚಿಮಾತ್ಯರು ಮತ್ತು ನಮ್ಮವರೇ ಆದ ಶ್ರೀ ಆರ್. ನರಸಿಂಹಾಚಾರ್ಯ, ಡಾ|| ಎಂ. ಎಚ್. ಕೃಷ್ಣ, ಪ್ರಾ|| ಕೆ. ಎ. ನೀಲಕಂಠ ಶಾಸ್ತ್ರಿ, ಡಾ|| ಪಿ. ಬಿ. ದೇಸಾಯಿ, ಡಾ|| ಎಸ್. ಶ್ರೀಕಂಠ ಶಾಸ್ತ್ರಿ, ಡಾ|| ಶೇಷಾದ್ರಿ, ಡಾ|| ಜಿ. ಎಸ್. ಗಾಯಿ ಅವರು, ಈ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ನಮ್ಮೊಂದಿಗೇ ಇದ್ದ ದಿ. ಡಾ|| ಬಾ. ರಾ. ಗೋಪಾಲ ಮತ್ತು ಈಗ ನಮ್ಮೊಂದಿಗಿರುವ ಡಾ|| ಕೆ. ವಿ. ರಮೇಶ, ಡಾ|| ಶ್ರೀನಿವಾಸ ರಿತ್ತಿ, ಡಾ|| ಅ. ಸುಂದರ್, ಡಾ|| ಎ. ವಿ. ನರಸಿಂಹ ಮೂರ್ತಿ, ಡಾ|| ಎಸ್. ಶೆಟ್ಟರ, ಡಾ|| ಎಚ್. ಆರ್. ರಘುನಾಥ ಭಟ್ಟ, ಡಾ|| ಎಸ್. ರಾಜಶೇಖರ್, ಡಾ|| ರು. ಮ. ಷಡಕ್ಷರಯ್ಯ, ಡಾ|| ಎಸ್. ಕೆ. ಜೋಶಿ, ಮೊದಲಾದವರು ಪ್ರಾಕ್ತನ ಶಾಸ್ತ್ರದಲ್ಲಿ ತಜ್ಞರಾಗಿದ್ದಾರೆ. ನಮ್ಮ ತರುಣ ವಿದ್ವಾಂಸರು ಹಿಂದಿನ ತಲೆಮಾರಿನವರ ಗ್ರಂಥಗಳನ್ನು ಅಧ್ಯಯನ ಮಾಡಿ, ಈಗಿನ ವಿದ್ವಾಂಸರಿಂದ ನೇರ ಪ್ರಯೋಜನ ಪಡೆಯುವುದು ಸೂಕ್ತ.

ಕಡತ, ಕಾಗದಪತ್ರ ಮತ್ತು ತಾಳೆಗರಿಗಳ ಅಧ್ಯಯನಕ್ಕೆ ಸಂಬಂಧಿಸಿ ಕೆಲವು ಮಾತುಗಳನ್ನು ನಾನು ಆಡಲೇಬೇಕು. ಏಕೆಂದರೆ ಆ ಕ್ಷೇತ್ರದಲ್ಲಿ ನಾನು ಸ್ವಲ್ಪ ಮಟ್ಟಿಗೆ ದುಡಿದಿದ್ದೇನೆ. ಈ ಕ್ಷೇತ್ರದಲ್ಲಿ ದಿ. ಡಾ|| ಬಿ. ಎ. ಸಾಲೆತೊರೆಯವರು ಪ್ರಾತಃಸ್ಮರಣೀಯರು. ಸಾಲೆತೊರೆಯವರ ಆಕರ್ಷಕ ವ್ಯಕ್ತಿತ್ವ, ವಿದ್ವತ್ತು, ಭಾಷಣ ಶೈಲಿ,

ಘನತೆ-ಗಾಂಭೀರ್ಯ, ಎಲ್ಲವೂ ಇಂದು ಕನಸಿನಲ್ಲಿ ಕಂಡಂತಾಗಿದೆ. ಭಾರತದ ಪತ್ರಾಗಾರ ಇಲಾಖೆಯ ನಿರ್ದೇಶಕರಾಗಿ, ನಂತರ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಕನ್ನಡ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಸೇವೆಸಲ್ಲಿಸಿದ ಡಾ॥ ಸಾಲೆತೊರೆ ನಿಜವಾಗಿಯೂ ಪತ್ರಾಗಾರದ ಪಿತಾಮಹ. ಈ ಕ್ಷೇತ್ರದಲ್ಲಿ ಈಗಲೂ ದುಡಿಯುತ್ತಿರುವ ಶ್ರೀ ಕೆಳದಿ ಗುಂಡಾ ಜೋಯ್ಸ, ಡಾ॥ ಸೂರ್ಯನಾಥ ಕಾಮತ್, ಡಾ॥ ಕೆ. ಜಿ. ವಸಂತ ಮಾಧವ ಮೊದಲಾದವರು ಇತಿಹಾಸಕ್ಕೆ ಸಲ್ಲಿಸುತ್ತಿರುವ ಸೇವೆ ಪ್ರಶಂಸನೀಯವಾದದು. ಕನ್ನಡ ಮೋಡಿ ಲಿಪಿಯನ್ನು ನನಗೆ ಪರಿಚಯಿಸಿದವರು ಶ್ರೀ ಗುಂಡಾ ಜೋಯ್ಸರು. ಅವರಿಗೆ ನಾನು ಚಿರಋಣಿ.

ಕಡತ, ಕಾಗದ ಪತ್ರಗಳು ಮತ್ತು ತಾಳೆಗರಿಗಳು ಶಿಲಾ ಮತ್ತು ತಾಳೆಗರಿಗಳು ಶಿಲಾ ಮತ್ತು ತಾಮ್ರ ಶಾಸನಗಳಂತೆ ಬಾಳಿಕೆ ಬರುವ ವಸ್ತುಗಳಲ್ಲ. ಆದ್ದರಿಂದ ಅವುಗಳಿಗೆ ಹೆಚ್ಚಿನ ರಕ್ಷಣೆ ನೀಡುವುದು ಅಗತ್ಯ. ರಾಜ್ಯ ಪತ್ರಾಗಾರ ಇಲಾಖೆ ವಿಧಾನ ಸೌಧದಲ್ಲಿ ಸ್ಥಾಪಿತವಾಗಿರುವುದರಿಂದ, ಅಲ್ಲಿ ಜನಪ್ರತಿನಿಧಿಗಳಿಗೇ ಪೋಲಿಸ್ ಪಡೆ ಹೆಚ್ಚಿನ ರಕ್ಷಣೆ ನೀಡುತ್ತಿರುವದರಿಂದ, ಇತಿಹಾಸ ಸಂಶೋಧಕರಿಗೆ ಪ್ರವೇಶವೇ ಮುಚ್ಚಿದಂತಾಗಿದೆ. ಪತ್ರಾಗಾರ ಇಲಾಖೆಯನ್ನು ಅತಿಶೀಘ್ರವಾಗಿ ಬೇರೆ ಕಟ್ಟಡಕ್ಕೆ ಸ್ಥಳಾಂತರಿಸಿ, ಸಿಬ್ಬಂದಿಗಳನ್ನು ಚುರುಕುಗೊಳಿಸಬೇಕಾಗಿದೆ.

ಹಿರಿಯ ವಿದ್ವಾಂಸರನ್ನು ಕುರಿತು ನಾನು ಏನೂ ಹೇಳಲಾರೆ. ಏಕೆಂದರೆ ಅವರು ವಯಸ್ಸಿನಲ್ಲಿ ಮತ್ತು ವಿದ್ವತ್ತಿನಲ್ಲಿ ನನಗಿಂತ ಹಿರಿಯರು. ಅವರಿಂದ ನಾನು ಕಲಿಯುವುದು ಬಹಳಷ್ಟಿದೆ. ಹೀಗಾಗಿ, ಪ್ರಸ್ತುತದಲ್ಲಿ ನಾನು ಕಿರಿಯ ಸಂಶೋಧಕರನ್ನು ಉದ್ದೇಶಿಸಿ ಕೆಲವು ಮಾತುಗಳನ್ನು ಆಡಲಿಚ್ಛಿಸುವೆ. ಕರ್ನಾಟಕ ಇತಿಹಾಸದಲ್ಲಿಯ ಘಟನೆಗಳನ್ನೆಲ್ಲ ಈ ಸಂದರ್ಭದಲ್ಲಿ ಉಲ್ಲೇಖಿಸಲು ನನಗೆ ಇಷ್ಟವಿಲ್ಲ. ಅದನ್ನು ತಿಳಿಯಲಿಚ್ಛಿಸುವವರು ಪಠ್ಯ ಪುಸ್ತಕ ವನ್ನೋದಿಕೊಳ್ಳ ಬಹುದು. ಆದರೆ ಮಕ್ಕಳಲ್ಲಿ ಇತಿಹಾಸದ ಬಗೆಗೆ ಆಸಕ್ತಿ ಹುಟ್ಟಿಸುವಂತೆ ಮತ್ತು ಐತಿಹಾಸಿಕದ ಪರಂಪರೆಯನ್ನು ಕಾಪಾಡಿಕೊಂಡು ಬರುವಂತೆ ಮಾಡುವುದು ಇತಿಹಾಸವನ್ನು ಕಲಿಸುವವರ ಆದ್ಯ ಕರ್ತವ್ಯವಾಗಿದೆ. ಗತಿಸಿದ ಘಟನೆಗಳನ್ನು ಸ್ವಾರಸ್ಯವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಿ, ಜೀವಕಳೆ ತುಂಬಬೇಕು. ಹಾಗಿಲ್ಲದಿದ್ದರೆ, ಇತಿಹಾಸದ ಪಾಠವೆಂದರೆ ಮಕ್ಕಳಿಗೆ ಬೇಸರವಾಗುತ್ತದೆ.

ನಮ್ಮ ಪ್ರಾಚ್ಯಾವಶೇಷಗಳು ಸ್ವಾತಂತ್ರೋತ್ತರ ಕಾಲದಲ್ಲಿ ಸಾಕಷ್ಟು ವಿರೂಪಗೊಂಡಿವೆ. ಸ್ಮಾರಕಗಳು ವಿರೂಪಗೊಳ್ಳಲು ನಿಸರ್ಗವೊಂದೇ ಕಾರಣವಲ್ಲ. ಈ ನಿಟ್ಟಿನಲ್ಲಿ ದುಷ್ಕರ್ಮಿಗಳ ಪಾತ್ರವೂ ಸಾಕಷ್ಟಿದೆ. ಮೂರು ದಶಕಗಳ ಹಿಂದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಸಮೀಪವಿರುವ ಗೇರಸೊಪ್ಪೆಯಲ್ಲಿ ಕಪ್ಪುಶಿಲೆಯ ಸುಂದರವಾದ ಜೈನ ತೀರ್ಥಂಕರರ ಚತುರ್ಮೂರ್ತಿ ಗಳನ್ನು ನೋಡಿ ಸಂತೋಷಪಟ್ಟಿದ್ದೆ. ಆದರೆ ಕೆಲವು ವರ್ಷಗಳ ಹಿಂದೆ ದುಷ್ಕರ್ಮಿಗಳು ಆ ಮೂರ್ತಿಗಳನ್ನು ಭಗ್ನಗೊಳಿಸಿದರೆಂಬ ಸಮಾಚಾರವನ್ನು ಪತ್ರಿಕೆಯಲ್ಲಿ ಓದಿದಾಗ ದುಃಖಿತನಾದೆ. ಬನವಾಸಿಯ ಸಮೀಪವಿರುವ ಗುಡ್ನಾಪುರದ ಕದಂಬ ರವಿವರ್ಮನ, ದೇಶದಲ್ಲಿಯೇ ಒಂದು ಸುಂದರ ಅಪರೂಪದ ಶಾಸನ ದುಸ್ಥಿತಿಯಲ್ಲಿದೆ. ಶಾಲಾ-ಕಾಲೇಜುಗಳ ಮಕ್ಕಳು ಪ್ರವಾಸಕ್ಕೆಂದು ಐತಿಹಾಸಿಕ ಸ್ಥಳಗಳಿಗೆ ಹೋದಾಗ, ಇಂಥ ಪ್ರಾಚ್ಯಾವಶೇಷಗಳ ಮೇಲೆ ತಾವೂ ಹಮ್ಮುರಾಬಿ, ಅಶೋಕರಂತೆ 'ಶಾಸನ'ಗಳನ್ನು ಕೊರೆದು ಬರುತ್ತಾರೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇಂಥ ಶಾಸನಗಳ ಸಂಖ್ಯೆ ಹೆಚ್ಚಾಗಿದೆ. ವಾಸ್ತುಶಿಲ್ಪ ಶಾಸ್ತ್ರಕ್ಕೆ ವ್ಯತಿರಿಕ್ತವಾಗಿ ಕಂಡ ಕಂಡಲ್ಲಿ ದೇವಸ್ಥಾನ, ಇಗರ್ಜಿ ಮತ್ತು ಮಸೀದಿಗಳನ್ನು ಕಟ್ಟುವ ಕೆಲಸವೂ ಜೋರಾಗಿ ಸಾಗಿದೆ. ಪುರಾತನ ದೇವಾಲಯಗಳ ಜೀರ್ಣೋದ್ಧಾರವಾಗಬೇಕೇ ಹೊರತು, ಕಂಡಕಂಡಲ್ಲಿ ವ್ಯಾಪಾರೀ ಬುದ್ಧಿಯಿಂದ ದೇವಸ್ಥಾನ ಕಟ್ಟುವುದಲ್ಲ. ದೊಡ್ಡ ದೊಡ್ಡ ಶಹರಗಳಲ್ಲಿ, ಮಹತ್ವದ ಕಾರ್ಯವನ್ನು ಕರ್ನಾಟಕ ಇತಿಹಾಸ ಅಕಾದೆಮಿ ಹಮ್ಮಿಕೊಂಡಿರುವುದು ನಿಜವಾಗಿಯೂ ಶ್ಲಾಘನೀಯ. ಆದರೆ ಇದರೊಂದಿಗೆ ಇನ್ನೊಂದು ಮಹತ್ವದ ಕೆಲಸವನ್ನು ನಾವೆಲ್ಲರೂ ಅನಿವಾರ್ಯವಾಗಿ ಮಾಡಲೇಬೇಕಾಗಿದೆ. ತಮ್ಮ ಮನೆಯನ್ನು ಮತ್ತು ಸಾರ್ವಜನಿಕ ಸ್ಥಳಗಳನ್ನು ಶ್ರಮದಾನ ಮಾಡಿ ಸ್ವಚ್ಛವಾಗಿ ಇರಿಸಕೊಳ್ಳಬೇಕೆಂಬ ಭಾವನೆ ಮಕ್ಕಳಲ್ಲಿ ಬರುವಂತೆ ಮಾಡಲು, ಹಿರಿಯರಾದವರು ಕೇವಲ ಉಪದೇಶ ಮಾಡದೆ, ತಾವೂ ಸಕ್ರಿಯವಾಗಿ ಈ ಕಾರ್ಯದಲ್ಲಿ ಪ್ರವೃತ್ತ ರಾಗಬೇಕು. ಆಗ ಮಾತ್ರ ಮಕ್ಕಳು ಸಾರ್ವಜನಿಕ ವಸ್ತುಗಳನ್ನು ತಮ್ಮ ವಸ್ತುಗಳಂತೆಯೇ ಸ್ವಚ್ಛವಾಗಿರಿಸಿ, ಕಾಪಾಡಿ ಕೊಂಡು ಬರುತ್ತಾರೆ.

ಚರಿತ್ರೆಯನ್ನು ವಸ್ತುನಿಷ್ಠವಾಗಿ ಬರೆಯಲು ನಾವಿನ್ನೂ ಯಶಸ್ವಿಯಾಗಿಲ್ಲ. ಅನೇಕ ಕಾರಣಗಳಿಂದಾಗಿ ಪರಂಪರಾಗತವಾಗಿ ಬಂದ ಭಟ್ಟಂಗಿಗಳ ಪದ್ಧತಿಗೆ ಇಂದೂ ನಾವು ಜೋತು ಬಿದ್ದಿದ್ದೇವೆ. ಹನ್ನೆರಡನೆಯ ಶತಮಾನದ ಶ್ರೇಷ್ಠ ಕವಿ ಮತ್ತು ಇತಿಹಾಸ ತಜ್ಞ ಕಲ್ಹಣ, 'ರಾಜತರಂಗಿಣೀ' ಎಂಬ ಚಾರಿತ್ರಿಕ ಕಾವ್ಯದಲ್ಲಿ, "ಶ್ಲಾಘ್ಯಸ್ಸ ಏವ ಗುಣವಾನ್ ರಾಗದ್ವೇಷ ಬಹಿಷ್ಕೃತಾ, ಭೂತಾರ್ಥ ಕಥನೇಯಸ್ಯ ಸ್ಥೇಯಸ್ಸೇವ ಸರಸ್ವತೀ" (ನಡೆದು ಹೋದ ಸತ್ಯಸಂಗತಿಯನ್ನು ನಿರ್ದಾಕ್ಷಿಣ್ಯವಾಗಿ ಹೇಳುವಲ್ಲಿ ಯಾವನ ಮಾತು ರಾಗ-ದ್ವೇಷಗಳಿಂದ ಮುಕ್ತವಾಗಿ ಖಚಿತ ಸ್ಥಿತಿಯಲ್ಲಿರುವದೋ ಅಂತಹ ಗುಣಸಂಪನ್ನನೇ ಸ್ತುತ್ಯ), ಎಂದು ಬಹು ಮಾರ್ಮಿಕ ವಾಗಿ ಹೇಳಿದ್ದಾನೆ. ಕಲ್ಹಣನ ಹೇಳಿಕೆ ಇತಿಹಾಸ ಸಂಶೋಧಕರಿಗೆ ಇಂದಿಗೂ ಪ್ರಸ್ತುತ. ಆದರೆ ಸತ್ಯವನ್ನು ಇದ್ದಂತೆ ಹೇಳುವುದರಲ್ಲಿಯೂ ಒಂದು ಕ್ರಮವಿದೆ. ಹೇಳುವುದರಲ್ಲಿ ಹೆಚ್ಚು-ಕಡಮೆ ಆದರೆ ನಮ್ಮ

ಕಾಲಿಗೇ ಕೊಡಲಿ ಪೆಟ್ಟು ಬಿದ್ದು. ಸಮಾಜದಲ್ಲಿಯೂ ಗೊಂದಲವುಂಟಾಗುತ್ತದೆ;' ಅದರಲ್ಲಿಯೂ ಹಲವಾರು ಜಾತಿ, ಮತ, ಪಂಥಗಳಿರುವ ಭಾರತದಲ್ಲಿ. ಆದ್ದರಿಂದಲೇ ಮನು,

"ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್।
ನ ಬ್ರೂಯಾತ್ ಸತ್ಯಮಪ್ರಿಯಂ॥
ಪ್ರಿಯಂ ಚ ನಾನೃತಂ ಬ್ರೂಯಾತ್।
ಏಷ ದರ್ಮಃ ಸನಾತನಃ॥

(ಸತ್ಯ ವಾದದನ್ನು ಹೇಳತಕ್ಕದ್ದು; ಪ್ರಿಯವಾದದ್ದನ್ನು ಹೇಳತಕ್ಕದ್ದು; ಪ್ರಿಯವಲ್ಲದ ಸತ್ಯವನ್ನು ಹೇಳತಕ್ಕದ್ದಲ್ಲ; ಸತ್ಯವಲ್ಲದ ಪ್ರಿಯವನ್ನೂ ಹೇಳತಕ್ಕದ್ದಲ್ಲ), ಎಂಬ ಜಾಣ್ಮೆಯ ಮಾತುಗಳನ್ನು ನುಡಿದಿದ್ದಾನೆ ಒಟ್ಟಿನಲ್ಲಿ ಸತ್ಯವನ್ನು ಜಾಣ್ಮೆಯಿಂದ, ಜಾಗರೂಕತೆಯಿಂದ ನುಡಿಯಬೇಕಾಗುತ್ತದೆ. ಇದೊಂದು ಸೂಕ್ಷ್ಮ ವಿಷಯ., ಸಂಶೋಧನಾ ಕಾರ್ಯದಲ್ಲಿ ತೊಡಗಿದವರಿಗೆ ಅನೇಕ ತೊಂದರೆಗಳು ಬರುವುದು ಸ್ವಾಭಾವಿಕ. ತಾಳ್ಮೆ, ಪರಿಶ್ರಮ, ಪ್ರಾಮಾಣಿಕತೆ, ವಸ್ತುನಿಷ್ಠ, ದೃಷ್ಟಿಕೋನ, ಅಧ್ಯಯನ, ನಿರ್ದಿಷ್ಟ ಗುರಿ, ಸುಂದರ ನಿರೂಪಣಾ ಶೈಲಿ ಮುಂತಾದ ಗುಣಗಳನ್ನು ಅಳವಡಿಸಿಕೊಂಡಲ್ಲಿ, ಒಬ್ಬ ವ್ಯಕ್ತಿ ಉತ್ತಮ ಇತಿಹಾಸ ಸಂಶೋಧಕನಾಗಬಲ್ಲ. ನಮ್ಮ ತರುಣ ಸಂಶೋಧಕರು ಈ ಗುಣಗಳನ್ನೆಲ್ಲ ಅಳವಡಿಸಿಕೊಂಡು. ಹಿರಿಯರಿಂದ ಮಾರ್ಗದರ್ಶನ ಪಡೆದು, ಇತಿಹಾಸ ಸಂಶೋಧನಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಇನ್ನೂ ಗಮನಕ್ಕೆ ಬಾರದ ಅನೇಕ ಮಹತ್ವದ ಆಕರಗಳನ್ನು ಬೆಳಕಿಗೆ ತಂದು, ಕರ್ನಾಟಕದ ಇತಿಹಾಸವನ್ನು ಈಗಿರುವುದಕ್ಕಿಂತಲೂ ಹೆಚ್ಚು ಸ್ಫುಟವಾಗಿ ಮೂಡಿಸುವರೆಂಬ ಆಶಾಭಾವನೆ ನನಗಿದೆ.

ಆದಿ ಶಂಕರಾಚಾರ್ಯ, ಶ್ರೀ ಸುರೇಶ್ವರಾಚಾರ್ಯ ಮತ್ತು ಶ್ರೀ ವಿದ್ಯಾನಂದಾಚಾರ್ಯರ ಗುರುಪರಂಪರೆ, ಇಂದಿನವರೆಗೂ ಅವಿಚ್ಛಿನ್ನವಾಗಿ ಶ್ರೀ ರಾಮಚಂದ್ರಾಪುರ ಮಠದಲ್ಲಿ ಸಾಗಿಬಂದಿದೆ. ಇಂದು ಪೀಠದಲ್ಲಿ ವಿರಾಜಮಾನರಾಗಿರುವ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳವರು ಪೀಠಕ್ಕೆ ಬಂದು ಕೆಲವೇ ವರ್ಷಗಳಲ್ಲಿ ಅನೇಕ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಜನರನ್ನೂ ಆ ದಿಶೆಯಲ್ಲಿ ಕಾರ್ಯೋನ್ಮುಖರಾಗುವಂತೆ ಮಾಡಿದ್ದಾರೆ. 'ಆರ್ತತ್ರಾಣ ನಿಧಿ', 'ಕಲ್ಯಾಣ ನಿಧಿ', 'ಸಂಜೀವಿನಿ', 'ಶುಭಾಶ್ರಯ', 'ಅಧ್ಯಾತ್ಮಧಾಮ', 'ಅಗ್ನಿಶರಣಂ', 'ವಾನಪ್ರಸ್ಥ', 'ಪುನರುಜ್ಜೀವಿನಿ', 'ಚಿರನೂತನ', 'ಭಾರತೀಯಧಾಮ', 'ಪತ್ರಿಕೆ', ಮುಂತಾದ ಸೇವಾ ಯೋಜನೆಗಳನ್ನು ಶ್ರೀಗಳವರು ಹಮ್ಮಿಕೊಂಡಿದ್ದಾರೆ. ಇಲ್ಲಿ ಸಮ್ಮೇಳನ ನಡೆಸಲು ಕೆಲವು ತೊಂದರೆಗಳಿದ್ದಾಗ್ಯೂ ಶ್ರೀಗಳವರು ನಮ್ಮೆಲ್ಲರನ್ನು ಆತ್ಮೀಯವಾಗಿ ಬರಮಾಡಿಕೊಂಡಿದ್ದಾರೆ. ಶ್ರೀಗಳವರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ, ಕೃತಜ್ಞತೆಗಳನ್ನು ಸಲ್ಲಿಸುವೆ. ಶ್ರೀಮಠದ ಸಿಬ್ಬಂದಿಗಳೆಲ್ಲ ಸಮ್ಮೇಳನ ನಡೆಸಲು ಬಹಳ ಪರಿಶ್ರಮ ಪಟ್ಟಿದ್ದಾರೆ. ಅವರಿಗೆಲ್ಲ ನನ್ನ ಕೃತಜ್ಞತೆಗಳು.

ಶಿರಸಿಯಲ್ಲಿ ೧೯೯೭ರಲ್ಲಿ ನಡೆದ ಹನ್ನೊಂದನೆಯ ಸಮ್ಮೇಳನಕ್ಕೆ ದಿ। ಶ್ರೀ ಕೆ. ಅಭಿಶಂಕರ ಅವರು ಸರ್ವಾಧ್ಯಕ್ಷರಾಗಿದ್ದರು. ನನ್ನ ಹಿರಿಯಣ್ಣನಂತಿದ್ದ ಆ ಸರಳ, ಸಜ್ಜನ ವ್ಯಕ್ತಿಗೆ ನನ್ನ ನಮನಗಳು. ಶ್ರೀಮತಿ ವಿಶಾಲಾಕ್ಷಿ ಅಭಿಶಂಕರ ಅವರು ದಿ। ಕೆ. ಅಭಿಶಂಕರ ಅವರ ಸ್ಮರಣಾರ್ಥ ಸಮ್ಮೇಳನಾಧ್ಯಕ್ಷರಿಗೆ ನೀಡಲಾದ ಈ ಸ್ಮರಣಿಕೆಯನ್ನು ಕೃತಜ್ಞತೆಗಳೊಂದಿಗೆ ಸ್ವೀಕರಿಸುವೆ.

ನನ್ನ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದ ಡಾ॥ ಜಿ. ಎಸ್. ದೀಕ್ಷಿತ್ ಮತ್ತು ಡಾ॥ ಸೂರ್ಯನಾಥ ಕಾಮತ್ ಅವರಿಗೆ, ಸರ್ವಸಮ್ಮತಿಯಿಂದ ನನ್ನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೆ, ನನ್ನನ್ನು ಮೊದಲಿನಿಂದಲೂ ಪ್ರೀತಿ-ವಿಶ್ವಾಸದಿಂದ ಕಾಣುತ್ತ ಬಂದ ಅಕಾದೆಮಿಯ ಸರ್ವಸದಸ್ಯರಿಗೆ ಮತ್ತು ತಮ್ಮೆಲ್ಲರಿಗೆ ನನ್ನ ಅನಂತ ಕೃತಜ್ಞತೆಗಳು.

ಸಮ್ಮೇಳನಾಧ್ಯಕ್ಷ ಡಾ|| ಎ.ಕೆ. ಶಾಸ್ತ್ರಿ
ಬದುಕು-ಬರಹದ ಪಕ್ಷಿ ನೋಟ

ಪೂರ್ಣ ಹೆಸರು	:	ಡಾ|| ಎ.ಕೆ. ಶಾಸ್ತ್ರಿ (ಅನಂತ ಕೃಷ್ಣ ಶಾಸ್ತ್ರಿ)
ಜನ್ಮ ದಿನಾಂಕ	:	ಮಾರ್ಚ್, ೧೭,೧೯೪೦
ಶಿಕ್ಷಣ	:	೧. ಪ್ರಾಥಮಿಕ ಮತ್ತು ಮಾಧ್ಯಮಿಕ : ಕೆ. ಇ. ಬೋರ್ಡ್ಸ್, ಧಾರವಾಡ ೨. ಕಾಲೇಜ್ : ಕರ್ನಾಟಕ ಕಾಲೇಜ್, ಧಾರವಾಡ (ಬಿ.ಎ. ಆನರ್ಸ್) ೧೯೬೧ ೩. ಎಂ.ಎ : ಕರ್ನಾಟಕ ವಿಶ್ವವಿದ್ಯಾಲಯ (ಕನ್ನಡ ಸಂಶೋಧನ ಸಂಸ್ಥೆಯಿಂದ ಶಿಷ್ಯವೇತನ) ೧೯೬೩ ೪. ಪಿಎಚ್.ಡಿ : ಕರ್ನಾಟಕ ವಿಶ್ವವಿದ್ಯಾಲಯ ೧೯೭೬ ವಿಷಯ : ಎ ಹಿಸ್ಟರಿ ಆಫ್ ಶೃಂಗೇರಿ ಮಾರ್ಗದರ್ಶಕರು : ಡಾ|| ಜಿ. ಎಸ್. ದೀಕ್ಷಿತ್
ಸೇವೆ	:	೧. ಪದವಿ ವರ್ಗಗಳಿಗೆ ೩೫ ವರ್ಷ ಕಲಿಸಿದ ಅನುಭವ ನಿವೃತ್ತ ಇತಿಹಾಸದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಶಿರಸಿ ೨. ಸಂಶೋಧನಾ ಯೋಜನೆಯ ಮಾಜಿ ನಿರ್ದೇಶಕರು, ಆಯ್.ಸಿ.ಎಚ್.ಆರ್. ದಿಲ್ಲಿ (೧೯೮೦-೧೯೮೨) ೩. ಪ್ರಸ್ತುತದಲ್ಲಿ, ಪ್ರಧಾನ ಇತಿಹಾಸ ಸಂಶೋಧಕರು, ಬೃಹತ್ ಸಂಶೋಧನಾ ಯೋಜನೆ ಯು.ಜಿ.ಸಿ. ದಿಲ್ಲಿ ೪. ರಾಜ್ಯ ಹಾಗೂ ರಾಷ್ಟ್ರಮಟ್ಟದ ಇತಿಹಾಸ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿ ಗೋಷ್ಠಿಗಳ ಅಧ್ಯಕ್ಷತೆ ವಹಿಸಿದ ಅನುಭವ ೫. ೨೦೦೦ನೇ ಇಸ್ವಿಯಲ್ಲಿ ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ ನಡೆದ ರಾಷ್ಟ್ರಮಟ್ಟದ ಸಮ್ಮೇಳನದಲ್ಲಿ 'ಶ್ರೇಷ್ಠ ಇತಿಹಾಸತಜ್ಞ' ಮತ್ತು 'ಉತ್ತಮವಾಗ್ಮಿ' ಎಂದು ಸನ್ಮಾನ

ಬರೆದ ಪುಸ್ತಕಗಳು (ಇತಿಹಾಸ)

೧. A history of Shringeri
೨. Selections from the Kadatas of the Shringeri Matha
೩. The records of the Shringeri Matha, relating to Keladi
೪. A Catalogue of the Shringeri Records (Two Volumes)
೫. ಶೃಂಗೇರಿ ಧರ್ಮ ಸಂಸ್ಥಾನ
೬. ಶೃಂಗೇರಿ ಇತಿಹಾಸ
೭. ಫ್ರಾನ್ಸ್ ದೇಶದ ಮಹಾಕ್ರಾಂತಿ
೮. ಶಿರಸಿ ತಾಲೂಕಿನ ಇತಿಹಾಸ
೯. ಕನ್ನಡದಲ್ಲಿ ಕಡತಗಳು
೧೦. ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು
೧೧. ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ
೧೨. ಶ್ರೀ ಮಂಜುಗುಣಿ ಕ್ಷೇತ್ರದ ಚಾರಿತ್ರಿಕ ದಾಖಲೆಗಳು
೧೩. ಕದಂಬೋತ್ಸವ, ಸ್ಮರಣ ಸಂಚಿಕೆ (ಸಂಪಾದಕರು)
೧೪. ಶಿರಸಿ ತಾಲೂಕಾ ದರ್ಪಣ (ಸಂಪಾದಕರು)
೧೫. The Karnataka Historical Review (Editor)

ಕವನ ಸಂಗ್ರಹಗಳು

೧. ಉಪಾಖ್ಯಾನ

೨. ಅನಿಸಿಕೆಗಳು

India past and present, Studies in Karnataka History and Culture, The Karnataka Historical Review, Journal of the I.C.H.R.

ಕರ್ನಾಟಕ ಇತಿಹಾಸ ದರ್ಶನ ಮುಂತಾದ ನಿಯತಕಾಲಿಕ ಪತ್ರಿಕೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ೮೦ಕ್ಕೂ ಹೆಚ್ಚು ಸಂಶೋಧನಾತ್ಮಕ ಲೇಖನಗಳ ಪ್ರಕಟಣೆ

ಕರ್ನಾಟಕ ರಾಜ್ಯ ಚಾರಿತ್ರಿಕ ದಾಖಲೆಗಳ ಪರಿವೀಕ್ಷಣಾ ಸಮಿತಿಯ ಮಾಜಿ ಸದಸ್ಯ

ಪಠ್ಯೇತರ ಚಟುವಟಿಕೆಗಳು

೧. ಕರ್ನಾಟಕ ವಿಶ್ವವಿದ್ಯಾಲಯದ ಮೂರು ಅಥ್ಲೆಟಿಕ್ ಪಂದ್ಯಗಳಲ್ಲಿ ಪ್ರಥಮ ಸ್ಥಾನ ಮತ್ತು ಪೋಲ್‌ವಾಲ್ಟ್‌ನಲ್ಲಿ ಹೊಸ ವಿಕ್ರಮ. ೧೯೬೧ರಲ್ಲಿ ಜರುಗಿದ ಅಖಿಲ ಭಾರತ ಅಂತರ್‌ವಿಶ್ವವಿದ್ಯಾಲಯಗಳ ಕ್ರೀಡಾಕೂಟಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ನಾಯಕನಾಗಿ ಆಯ್ಕೆ.

೨. ಕಾಲೇಜ್ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ವಿದ್ಯಾರ್ಥಿ ಪ್ರತಿನಿಧಿ

೩. ೧೯೬-೭೦ರ ಅವಧಿಯಲ್ಲಿ ಎನ್. ಸಿ.ಸಿ. ನೌಕಾದಳದ ಸಬ್-ಲೆಫ್ಟಿನೆಂಟ್

೪. ಕರ್ನಾಟಕದ ಕಾಲೇಜ್‌ನಲ್ಲಿ ಶ್ರಮದಾನಕ್ಕಾಗಿ ಸ್ವರ್ಣ ಪದಕ

೫. ಅಥ್ಲೆಟಿಕ್ ತರಬೇತುದಾರನಾಗಿ ರಾಜ್ಯಕ್ಕೆ ಪ್ರಥಮ, ೧೯೬೫

ಜಯಣ್ಣ ಉಲ್ಲಾನಹಳ್ಳಿ*

ಕೂಡ್ಲಿಗಿ ತಾಲೂಕು ಗುಡೇಕೋಟೆ ಪರಿಸರದ ಪುರಾತತ್ವ ಸಮೀಕ್ಷೆ

ಗುಡೇಕೋಟೆಯು ಕೂಡ್ಲಿಗಿ ತಾಲೂಕು ಕೇಂದ್ರದಿಂದ ಪೂರ್ವಕ್ಕೆ ಸುಮಾರು ೨೮ ಕಿ. ಮೀ. ದೂರದಲ್ಲಿದೆ. ಕೂಡ್ಲಿಗಿ ತಾಲೂಕಿನಲ್ಲಿ ಎರಡು ಪರ್ವತ ಶ್ರೇಣಿಗಳಿದ್ದು, ಒಂದು ಕೂಡ್ಲಿಗಿ ಸುತ್ತ-ಮುತ್ತ ಕಂಡುಬಂದರೆ ಇನ್ನೊಂದು ಗುಡೇಕೋಟೆಯ ಸುತ್ತಮುತ್ತ ಕಂಡುಬರುತ್ತದೆ. ಈ ಗುಡೇಕೋಟೆಯ ಸುತ್ತ-ಮುತ್ತ ಕಂಡು ಬರುವ ಪರ್ವತ ಶ್ರೇಣಿಯು ವಾಯುವ್ಯದ ಚೋರನೂರಿನಿಂದ ಆರಂಭವಾಗಿ ಆಗ್ನೇಯದ ಬೆನ್ನಹಗರಿಯವರೆಗೆ ಹಬ್ಬಿದೆ. ಇಲ್ಲಿರುವ ಗುಡ್ಡಗಳೆಲ್ಲವೂ ಕ್ಲೋಸ್‌ಪೇಟೆ ಗ್ರಾನೈಟ್ ದುಂಡು ಶಿಲೆಗಳಿಂದ ಆವೃತವಾಗಿದ್ದು ಇವುಗಳಲ್ಲಿ ಕರಡಿಗುಡ್ಡ, ದೊರೆಗುಡ್ಡ, ಶರಣರ ಗುಡ್ಡ, ಮಹಾದೇವಪುರ ಗುಡ್ಡಗಳು ಪ್ರಮುಖವಾಗಿವೆ. ಕುರುಚಲ ಕಾಡು ಹಾಗೂ ಗವಿ-ಕಲ್ಲಾಸರೆಗಳಿರುವ ಈ ಪರಿಸರವು ಪ್ರಾಚೀನ ಮಾನವನ ವಾಸಕ್ಕೆ ಯೋಗ್ಯ ನೆಲೆಯಾಗಿತ್ತು. ಇತ್ತೀಚಿನ ದಿನಗಳಲ್ಲಿ ಗುಡೇಕೋಟೆ ಹಾಗೂ ಅದರ ಸುತ್ತಮುತ್ತಲಿನ ಭಾಗಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಪ್ರಾಚೀನ ಮಾನವನ ಆಯುಧಾವಶೇಷಗಳು ಬೆಳಕಿಗೆ ಬಂದಿವೆ.

ಇಲ್ಲಿರುವ ದೊರೆಗುಡ್ಡದಲ್ಲಿ ಚರ್ಟ್, ಆಗೇಟ, ಜಾಸ್ಪರ್, ಚಾಲ್ಸಿಡೋನಿ ಹಾಗೂ ಬೆಣಚುಕಲ್ಲುಗಳಿಂದ ತಯಾರಿಸಿದ ಸೂಕ್ಷ್ಮ ಶಿಲಾಯುಧಗಳು ದೊರೆತಿವೆ. ಅದರಲ್ಲೂ ದೊರೆತ ಹೆಚ್ಚಿನ ಆಯುಧಗಳು ತುಂಡಾದ ಹಾಗೂ ಆಯುಧಗಳನ್ನು ತಯಾರಿಸುವಾಗ ಅವುಗಳಿಂದ ಎಬ್ಬಿಸಿದ ಚಕ್ಕೆಗಳು ಅಧಿಕವಾಗಿವೆ. ಇದರಿಂದ ಈ ಪ್ರದೇಶವು ಈ ಸಂಸ್ಕೃತಿಯ ಆಯುಧಗಳ ತಯಾರಿಕಾ ಕೇಂದ್ರವಾಗಿರಬಹುದು. ಆದರೆ ಪ್ರಾಶಸ್ತ್ಯ ಹಾಗೂ ಅರೆ ಪ್ರಾಶಸ್ತ್ಯ ಶಿಲೆಗಳು ಉತ್ತರದ ಸಂಡೂರು ಪರ್ವತ ಶ್ರೇಣಿಗಳಲ್ಲಿ ದೊರೆಯುವುದರಿಂದ ಈ ಸಂಸ್ಕೃತಿಯ ಜನರು ಅಲ್ಲಿಂದಲೇ ತಂದು ತಮಗೆ ಬೇಕಾದ ಆಯುಧಗಳನ್ನು ರೂಪಿಸಿಕೊಂಡಿರಬಹುದು. ಕರ್ನಾಟಕದ ಇತರ ನೆಲೆಗಳಲ್ಲಿ ಕಂಡು ಬಂದಿರುವಂತೆ ಈ ಸಂಸ್ಕೃತಿಯ ಜನರು ತಾತ್ಕಾಲಿಕವಾಗಿ ಒಂದೆಡೆ ನೆಲೆ ನಿಂತು ಪಶುಸಂಗೋಪನೆ, ಬೇಸಾಯ ಮಾಡುವ ಹಾಗೂ ಚಾಪೆ ಹೆಣೆಯುವ, ಮಡಿಕೆಗಳನ್ನು ತಯಾರಿಸುವ ವಿಧಾನವನ್ನು ಅರಿತುಕೊಂಡು, ವ್ಯವಸ್ಥಿತವಾಗಿ ಶವಸಂಸ್ಕಾರ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಪ್ರಸ್ತುತ ಪ್ರದೇಶದಲ್ಲಿ ಇದರ ಬಗೆಗೆ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ಗುಡೇಕೋಟೆಯಲ್ಲಿ ಉಜ್ಜಿ ನಯಗೊಳಿಸಿದ ಕೊಡಲಿ, ಕಲ್ಲಾಸರೆ ಗವಿವರ್ಣ ಚಿತ್ರಗಳು, ಬೂದಿಯ ಅವಶೇಷ ಹಾಗೂ ಬೂದು ಬಣ್ಣದ ಮಡಿಕೆಗಳು ದೊರೆತಿದ್ದು, ಮಹದೇವಪುರದಲ್ಲಿ ನಯಗೊಳಿಸಿದ ಕಲ್ಲಿನ ಕೊಡಲಿಗಳು ದೊರೆತಿವೆ. ಈ ನಯಗೊಳಿಸಿದ ಕಲ್ಲಿನ ಕೊಡಲಿಗಳನ್ನು ಡೈಕ್‌ಶಿಲೆಯಿಂದ ತಯಾರಿಸಿದ್ದು, ಈ ಡೈಕ್‌ಶಿಲೆಯು ವಡೇರಹಳ್ಳಿಯ (ಮೊಳಕಾಲ್ಮೂರು. ತಾ.) ಬೆಟ್ಟದಲ್ಲಿ ದೊರೆಯುತ್ತದೆ.[೧] ಗುಡೇಕೋಟೆಯ ಸುತ್ತ-ಮುತ್ತಲಿನಲ್ಲಿ ವಾಸವಾಗಿದ್ದ ನೂತನ ಶಿಲಾಯುಗದ ಜನರು ಹಾಗೂ ಬ್ರಹ್ಮಗಿರಿ, ಜಟಂಗರಾಮೇಶ್ವರ, ನಾಗಸಮುದ್ರ, ಹಾನಗಲ್ಲು ಮತ್ತು ಮೊಳಕಾಲ್ಮೂರು ತಾಲೂಕಿನ ಇತರ ನೆಲೆಗಳ ನೂತನ ಶಿಲಾಯುಗದ ಜನರು ತಮಗೆ ಬೇಕಾದ ಆಯುಧಗಳನ್ನು ತಯಾರಿಸಬೇಕಾದ ಕಚ್ಚಾಶಿಲೆಯನ್ನು ಈ ಬೆಟ್ಟದಿಂದ ತಂದು ತಯಾರಿಸಿಕೊಂಡಿರುವ ಸಾಧ್ಯತೆಗಳು ಹೆಚ್ಚಾಗಿದೆ. ಏಕೆಂದರೆ ಈ ಬೆಟ್ಟವು ಈ ಎಲ್ಲಾ ನೆಲೆಗಳಿಗೆ ಹತ್ತಿರದಲ್ಲಿದೆ. ಅಲ್ಲದೆ ಇಲ್ಲಿನ ಕಚ್ಚಾ ಶಿಲೆಯನ್ನು ಸಂಗನಕಲ್ಲು, ಕಪ್ಪಗಲ್ಲು ನೆಲೆಗಳಿಗೂ ತೆಗೆದುಕೊಂಡು ಹೋಗಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಆದ್ದರಿಂದ ವಡೇರಹಳ್ಳಿಯು ಈ ಸಂಸ್ಕೃತಿಯ ನೆಲೆಯಾಗಿದೆ. ಗುಡೇಕೋಟೆಯ ಗುಡ್ಡಗಳಲ್ಲಿರುವ ಗವಿ-ಕಲ್ಲಾಸರೆಗಳಲ್ಲಿ ಕೆಂಪು-ಬಿಳಿ ವರ್ಣದ ಚಿತ್ರಗಳಿದ್ದು, ಅವುಗಳಲ್ಲಿ ಬೇಟೆ ಹಾಗೂ ಗಂಡು-ಹೆಣ್ಣುಗಳ ಚಿತ್ರಗಳಿರುವುದು ವಿಶೇಷವಾಗಿದೆ. ಅಲ್ಲದೆ ಈ ಭಾಗದಲ್ಲಿ ಬೂದಿಯ ಅವಶೇಷವು ಸಹ ಕಂಡು ಬರುತ್ತದೆ.

ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಕಲ್ಗೋರಿಗಳು ಗುಡೇಕೋಟೆ,[೨] ಮಹಾದೇವಪುರ[೩], ವಡೇರಹಳ್ಳಿ[೪], ದೇವರಹಟ್ಟಿ (ಹಾಲಸಾಗರ ಹಾಗೂ ಅಪ್ಪಯ್ಯನಹಳ್ಳಿ ನೆಲೆಗಳು ವರದಿಯಾಗಿವೆ), ಕೆ. ರಾಯಪುರ[೫] ನೆಲೆಗಳಲ್ಲಿವೆ. ಈ ಕಲ್ಗೋರಿಗಳಲ್ಲಿ ಕಿಂಡಿಕೋಣೆ ಹಾಗೂ ಕೈರನ್ ಸಮಾಧಿಗಳು ಹೆಚ್ಚಾಗಿವೆ. ಆದರೆ ಬಹುತೇಕ ಕಲ್ಗೋರಿಗಳು ಕೃಷಿ ಚಟುವಟಿಕೆಯಿಂದ ಹಾಳಾಗಿವೆ. ವಡೇರಹಳ್ಳಿ[೬] ನೆಲೆಯಲ್ಲಿ ಎರಡು ಹಾಗೂ ಕೆ. ರಾಯಪುರ[೭]ದಲ್ಲಿ ಒಂದು ಬೃಹತ್ ಶಿಲಾ ಸಂಸ್ಕೃತಿಗೆ ಸಂಬಂಧಿಸಿದ ಕಬ್ಬಿಣದ ಕುಲುಮೆಗಳು

* ಸಕಲಾಪುರದಹಟ್ಟಿ, ಹುಲಿಕೆರೆ (ಅಂಚೆ), ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ - ೫೮೩ ೨೧೮

ಕಂಡುಬಂದಿವೆ. ಈ ಕಬ್ಬಿಣದ ಕುಲುಮೆಗಳಿರುವ ನೆಲೆಗಳಲ್ಲಿ ಈಗ ಕೆಂಪು-ಕಪ್ಪು ಮಡಿಕೆಗಳು. ಕೆಂಪು ಮಡಿಕೆಗಳು, ಕಬ್ಬಿಣದ ಕಿಟ್ಟ ಹಾಗೂ ಮಣ್ಣಿನಿಂದ ತಯಾರಿಸಿದ ಮೂಸೆ (ಕೊಳವೆ)ಯ ಅವಶೇಷಗಳು ದೊರೆಯುತ್ತವೆ. ಈ ಎಲ್ಲಾ ಕಬ್ಬಿಣದ ಕುಲುಮೆಗಳು ಬ್ರಹ್ಮಗಿರಿಯ ಸುತ್ತ-ಮುತ್ತ ನೆಲೆಗೊಂಡಿರುವುದರಿಂದ ಇಲ್ಲಿ ತಯಾರಾದ ಕಬ್ಬಿಣದ ಆಯುಧಗಳನ್ನು ಬ್ರಹ್ಮಗಿರಿ ಹಾಗೂ ಅದರ ಸುತ್ತ-ಮುತ್ತ ನೆಲೆಗೊಂಡಿದ್ದ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಬಳಸಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ವಡೇರಹಳ್ಳಿಯಲ್ಲಿ ದೊರೆತ ಒಂದು ಕುಲುಮೆಯ ಬಳಿ ಒಂದು ಮಸೆಯುವ ಕಲ್ಲು ದೊರೆತಿದ್ದು, ಇದನ್ನು ಮೊಂಡಾದ ಕಬ್ಬಿಣದ ಆಯುಧಗಳನ್ನು ಮಸೆಯಲು ಉಪಯೋಗಿಸಿರಬಹುದು. ಮೊಂಡಾದ ಆಯುಧಗಳನ್ನು ಮಸೆದಿರುವುದರಿಂದ ಈ ಕಲ್ಲಿನ ಎರಡು ಪಾರ್ಶ್ವಗಳು ನುಣುಪಾಗಿವೆ. ಆಗಿನ ಸಂಸ್ಕೃತಿಯ ಜನರು ಇದನ್ನು ಅಡಿಗಲ್ಲಾಗಿ ಉಪಯೋಗಿಸಿರಬಹುದೆಂದು ಸ್ಥಳೀಯ ಅಭಿಪ್ರಾಯವಾಗಿದೆ. ಆದರೆ ಕಬ್ಬಿಣದಂತಹ ಕಠಿಣ ಲೋಹವನ್ನು ಆ ಅಡಿಗಲ್ಲಿನ ಮೇಲೆ ಇಟ್ಟು (ಕಾಯಿಸಿದ ಕಬ್ಬಿಣವನ್ನು) ಸುತ್ತಿಗೆಯಿಂದ ಹೊಡೆದಿದ್ದರೆ ಈ ಕಲ್ಲು ಒಡೆದು ಹೋಗುವ ಸಾಧ್ಯತೆಯು ಹೆಚ್ಚಾಗಿದೆ. ಆದರೆ ಈ ಕಲ್ಲು ಎಲ್ಲಿಯೂ ಭಗ್ನಗೊಂಡಿರದೆ ನಯವಾಗಿದೆ. ಆದ್ದರಿಂದ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಈ ಕಲ್ಲನ್ನು ಪೂರ್ಣ ಪ್ರಮಾಣದಲ್ಲಿ ಅಡಿಗಲ್ಲಾಗಿ ಉಪಯೋಗಿಸದೇ ಭಾಗಶಃ ಉಪಯೋಗಿಸಿ ಕೊಂಡಿರುವ ಸಾಧ್ಯತೆಯಿದ್ದು, ಈ ಕಲ್ಲನ್ನು ಮೇಲೆ ಪ್ರಸ್ತಾಪಿಸಿದಂತೆ ಕಬ್ಬಿಣದ ಆಯುಧಗಳನ್ನು ಮಸೆಯಲು ಹೆಚ್ಚಾಗಿ ಉಪಯೋಗಿಸಿ ಕೊಂಡಿರಬೇಕು. ಈ ಪ್ರದೇಶದಲ್ಲಿ ಕಬ್ಬಿಣದ ಗಣಿಗಳಿಲ್ಲ, ಕಬ್ಬಿಣದ ಅದಿರು ಚಿತ್ರದುರ್ಗ, ಸಂಡೂರು ಹಾಗೂ ಹೊಸಪೇಟೆಯ ಸುತ್ತ-ಮುತ್ತ ದೊರೆಯುವ ಅದಿರನ್ನು ಉಪಯೋಗಿಸಿಕೊಂಡು ಕಬ್ಬಿಣದ ಆಯುಧಗಳನ್ನು ತಯಾರಿಸಿಕೊಂಡಿರಬಹುದು. ಒಟ್ಟಿನಲ್ಲಿ ಈ ಪ್ರದೇಶದಲ್ಲಿ ಕಂಡುಬರುವ ಬೃಹತ್ ಶಿಲಾಯುಗದ ಕಲ್ಗೋರಿಗಳನ್ನು ಮೊರೆರ ಮನೆಗಳೆಂದು (ತೆಲುಗಿನಲ್ಲಿ ಮೊರೆವರ ಇಂಡ್ಲೂ ಅಥವಾ ಬಂಡ್ಲೂ ಎಂದು ಕರೆಯಲಾಗುವುದು) ಕರೆಯಲಾಗುತ್ತದೆ. ಆದಿ ಇತಿಹಾಸಕಾಲಕ್ಕೆ ಸಂಬಂಧಿಸಿದ ಮಡಿಕೆ-ಕುಡಿಕೆಗಳನ್ನು ಗುಡೇಕೋಟೆ ಹಾಗೂ ಅದರ ಸುತ್ತ- ಮುತ್ತಲ್ಲಿರುವ ಗುಡ್ಡಗಳಲ್ಲಿ ದೊರೆಯುತ್ತವೆ. ಒಟ್ಟಿನಲ್ಲಿ ಗುಡೇಕೋಟೆ ಮತ್ತು ಅದರ ಸುತ್ತ-ಮುತ್ತಲ ಪ್ರದೇಶದಲ್ಲಿ ಈವರೆಗೆ ಸೂಕ್ಷ್ಮ ಶಿಲಾಯುಗದಿಂದ ಹಿಡಿದು ಇಂದಿನವರೆಗೂ ಜನರು ವಾಸಿ ಸುತ್ತಿರುವ ಕುರುಹುಗಳು ಕಂಡುಬಂದಿವೆ.

ಗುಡೇಕೋಟೆಯಲ್ಲಿರುವ ಈಶ್ವರ (ಕಲ್ಲೇಶ್ವರ) ದೇವಾಲಯವು ತ್ರಿಕೂಟ ಶೈಲಿಯಲ್ಲಿದೆ. ಪೂರ್ವಾಭಿಮುಖವಾಗಿರುವ

ಈ ಪ್ರದೇಶದಲ್ಲಿ ದೊರೆತ ವಿವಿಧ ಸಂಸ್ಕೃತಿಯ ನೆಲೆಗಳ ಕೋಷ್ಟಕ

ಕ್ರ. ಸಂ	ನೆಲೆಗಳ ಹೆಸರು	ಸೂಕ್ಷ್ಮ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ಶಿಲಾಯುಗ	ಆದಿ ಇತಿ ಹಾಸ ಕಾಲ
೧	ಗುಡೇಕೋಟೆ	✓	✓	✓	✓
೨.	ಮಹದೇವಪುರ		✓	✓	
೩.	ವಡೇರಹಳ್ಳಿ		✓	✓	
೪.	ಕೆ. ರಾಯಪುರ			✓	

ಗರ್ಭಗೃಹದಲ್ಲಿ ಈಶ್ವರಲಿಂಗವಿದ್ದು, ಸುಖನಾಸಿಯಲ್ಲಿ ನಂದಿಯಿದೆ. ದಕ್ಷಿಣಾಭಿಮುಖದ ಗರ್ಭಗೃಹದಲ್ಲಿ ಪೀಠವಿದ್ದು, ಯಾವುದೇ ಮೂರ್ತಿಶಿಲ್ಪವಿಲ್ಲ. ಗರ್ಭಗೃಹದ ಮುಂದೆ ತೆರೆದ ಮಂಟಪವಿದೆ. ಉತ್ತರಾಭಿಮುಖದ ಗರ್ಭಗೃಹವು ಭಗ್ನಗೊಂಡಿದೆ. ಈ ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಒಂದು ನವರಂಗವಿದೆ. ಇಲ್ಲಿನ ಪೂರ್ವಾಭಿಮುಖವಾದ ಭಿತ್ತಿಯಲ್ಲಿ ಎರಡು ಕಡೆಯ ಗೂಡುಗಳಲ್ಲಿ ಗಣಪತಿ ಹಾಗೂ ವಿಷ್ಣುಮೂರ್ತಿ ಶಿಲ್ಪಗಳಿವೆ. ನವರಂಗದ ನಾಲ್ಕು ಕಂಬಗಳ ಮಧ್ಯದಲ್ಲಿರುವ ವೇದಿಕೆಯಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಇಲ್ಲಿರುವ ಕಂಬಗಳು ಕಲ್ಯಾಣಿ ಚಾಲುಕ್ಯರ ಕಾಲದ ಕಂಬಗಳ ಶೈಲಿಯನ್ನು ಹೋಲುತ್ತಿದ್ದು, ಇಲ್ಲಿನ ವಿತಾನದಲ್ಲಿ ಅರಳಿದ ಪದ್ಮವಿದೆ, ಅಲ್ಲದೆ ಕೆಲವೊಂದು ಉಬ್ಬುಕೆತ್ತನೆಗಳಿವೆ. ಶಿಖರವಿಲ್ಲದ ಈ ದೇವಾಲಯವು ನೆಲಮಟ್ಟ ದಲ್ಲಿದೆ. ಈ ದೇವಾಲಯದಲ್ಲಿರುವ ಕಂಬಗಳು ಕಲ್ಯಾಣ ಚಾಲುಕ್ಯರ ಕಾಲಘಟ್ಟದ ಶೈಲಿಯನ್ನು ಹೋಲುವುದರಿಂದ ಆ ಕಾಲಘಟ್ಟದಲ್ಲಿ ನಿರ್ಮಾಣವಾಗಿರಬಹುದೆಂದು ಅಂದಾಜು ಮಾಡಿದರೂ ಹೇಳಿಕೆಯನ್ನು ಪುಷ್ಟಿ ನೀಡುವಂತಹ ಶಾಸನಾಧಾರಗಳಿಲ್ಲ. ಸರ್ವೋದಯ ಬಳಿಯಿರುವ ಪಂಚಲಿಂಗೇಶ್ವರ ಗುಹಾಲಯವು ಇದೇ ಕಾಲಘಟ್ಟದ ನಿರ್ಮಿತಿಯಾಗಿದೆ. ಉತ್ತರಾಭಿಮುಖ ವಾಗಿರುವ ಪಾರ್ವತಿ-ಪರಮೇಶ್ವರ ದೇವಾಲಯದ ಗರ್ಭಗೃಹದಲ್ಲಿ ಕರಿಶಿಲೆಯಿಂದ ನಿರ್ಮಿಸಿದ ಪಾರ್ವತಿ-ಪರಮೇಶ್ವರ ಮೂರ್ತಿ ಶಿಲ್ಪಗಳಿವೆ (ಪಾರ್ವತಿಯು ಪರಮೇಶ್ವರನ ತೊಡೆಯ ಮೇಲೆ ಕುಳಿತಿದ್ದಾಳೆ). ಪರಮೇಶ್ವರನು ತನ್ನ ಕೈಯಲ್ಲಿ ತ್ರಿಶೂಲ ಡಮರುಗ ಹಿಡಿದಿದ್ದಾನೆ. ಈ ಮೂರ್ತಿ ಶಿಲ್ಪಗಳ ಮೇಲೆ ಸಿಂಹಮುಖದ ಪ್ರಭಾವಳಿಯಿದೆ. ಗರ್ಭಗೃಹದ ಲಲಾಟ ಬಿಂಬದಲ್ಲಿ ಗಣಪತಿ ಹಾಗೂ ಪೇದ್ಯಾಭಾಗದಲ್ಲಿ ಎರಡು ಕಡೆಗಳಲ್ಲಿ ಶೈವ ದ್ವಾರಪಾಲಕರ ಉಬ್ಬು ಕೆತ್ತನೆಗಳಿವೆ. ಸುಖನಾಸಿಯ ಲಲಾಟಬಿಂಬ ದಲ್ಲಿ (ಮಂಗಳ ಫಲಕ) ಪಾರ್ವತಿ-ಪರಮೇಶ್ವರ ಅಲ್ಲದೆ ಎರಡು ಕಡೆ ಆನೆಗಳ ಉಬ್ಬು ಕೆತ್ತನೆಗಳಿವೆ. ಇಲ್ಲಿನ ಬಾಗಿಲುವಾಡದಲ್ಲಿ ಹೂ-ಬಳ್ಳಿಗಳು ಅಲ್ಲದೆ ವಿವಿಧ ಸಂಗೀತ ವಾದ್ಯಗಳನ್ನು ಹಿಡಿದ ಸ್ತ್ರೀ-ಪುರುಷರ ಕೆತ್ತನೆಗಳು, ಪೇದ್ಯಾ ಭಾಗದಲ್ಲಿ ದ್ವಾರಪಾಲಕರ ಕೆತ್ತನೆಗಳಿವೆ. ನವರಂಗದಲ್ಲಿ ಕರಿಶಿಲೆಯ ನಂದಿ, ಮಹಿಷ ಮರ್ದನಿ,

ಗಣಪತಿಗಳ ಮೂರ್ತಿ ಶಿಲ್ಪಗಳಲ್ಲದೆ, ಈ ನವರಂಗದ ಮುಂದೆ ಸಿಂಹ ಮುಖದ ವ್ಯಾಳಿಗಳಿವೆ. ಹೊರಭಿತ್ತಿಯ ಪೂರ್ವಭಾಗದಲ್ಲಿ ಹಸು ಲಿಂಗಕ್ಕೆ ಹಾಲುಣಿಸುವ ದೃಶ್ಯ, ಬಿಲ್ಲುಧಾರಿ ಹುಲಿಯನ್ನು ಕೊಲ್ಲುವ ಚಿತ್ರ, ವಿವಿಧ ವಾದ್ಯಗಾರರ, ಕುದುರೆ, ಒಂಟೆ ಸವಾರರ ಕೆತ್ತನೆಗಳಿವೆ. ಪಶ್ಚಿಮದ ಕಡೆಗಿರುವ ಭಿತ್ತಿಯಲ್ಲಿ ಕುದುರೆ ಸವಾರ, ನಂದಿ, ಮತ್ಸ್ಯ (ಮೀನು), ಇತರ ಸ್ತ್ರೀ-ಪುರುಷರ ಉಬ್ಬು ಕೆತ್ತನಗಳಿವೆ. ಇಟ್ಟಿಗೆ ಗಚ್ಚುಗಾರೆಯಿಂದ ನಿರ್ಮಿಸಿದ ಈ ದೇವಾಲಯದ ಮೇಲಿರುವ ಶಿಖರದಲ್ಲಿ ಕೋಷ್ಟಗಳು, ಸಿಂಹಮುಖಗಳು ಹಾಗೂ ನಂದಿಗಳಿವೆ. ಈ ಶಿಖರವು ವಿಜಯ ನಗರೋತ್ತರ ಶೈಲಿಯಲ್ಲಿದೆ. ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ ಆಂಜನೇಯ ದೇವಾಲಯದ ಗರ್ಭಗೃಹದಲ್ಲಿ ಆಂಜನೇಯನ ಮೂರ್ತಿಶಿಲ್ಪವಿದೆ. ಗರ್ಭಗೃಹದ ಲಲಾಟಬಿಂಬದಲ್ಲಿ ರಾಮಸೀತೆ ಹಾಗೂ ಆನೆಯ ಕೆತ್ತನೆಗಳಿದ್ದು, ಇದರ ಮುಂದಿರುವ ನವರಂಗದಲ್ಲಿ ಸಾಮಾನ್ಯವಾದ ಕಂಬಗಳಿವೆ. ಈ ದೇವಾಲಯದ ಹೊರ ಭಿತ್ತಿಯ ಮೇಲೆ ಆಂಜನೇಯ ಹಾಗೂ ವೀರನೊಬ್ಬ ಆಯುಧದಿಂದ ಎದುರಿನಲ್ಲಿ ಬರುವ ಹುಲಿಯೊಂದಕ್ಕೆ ತಿವಿಯಲು ಸಜ್ಜಾಗಿರುವ ದೃಶ್ಯಗಳಿವೆ. ಶಿಖರವಿಲ್ಲದ ಈ ದೇವಾಲಯವನ್ನು ಈಗ ಗ್ರಾಮಸ್ಥರು ಆಧುನೀಕರಿಸಿದ್ದಾರೆ. ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ ವಿರಕ್ತ ಮಠದ ಗರ್ಭಗೃಹದಲ್ಲಿ ಮೂರ್ತಿಶಿಲ್ಪವಿಲ್ಲ. ಈ ಗರ್ಭ ಗೃಹದ ಮಂಗಳ ಫಲಕದಲ್ಲಿ ಯಾವ ಕೆತ್ತನೆಯಿಲ್ಲ, ದ್ವಾರದ ಪೇದ್ಯಾಭಾಗದಲ್ಲಿ ಕುಂಭಗಳಿವೆ. ನವರಂಗದಲ್ಲಿರುವ ಕಂಬಗಳ ಮೇಲೆ ಲಿಂಗ, ಹಂಸ, ಆನೆ ಅಲ್ಲದೆ ವಿವಿಧ ಉಬ್ಬುಕೆತ್ತನೆಗಳಿವೆ. ನವರಂಗದ ಮುಂದೆ ಸಿಂಹಮುಖದ ವ್ಯಾಳಿಗಳಿವೆ. ಈ ಗ್ರಾಮದಲ್ಲಿರುವ ಕಾಳಮ್ಮನ ಗುಡಿಯು ಕೇವಲ ಗರ್ಭಗೃಹ ಹಾಗೂ ಸುಖನಾಸಿಗಳು ಮಾತ್ರವಿರುವ ಸರಳ ಮಂಟಪವಾಗಿದೆ. ಗರ್ಭಗೃಹದಲ್ಲಿ ಮೂರ್ತಿಶಿಲ್ಪವಿಲ್ಲದೆ, ಕೇವಲ ಪೀಠವಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಕುಂಭಗಳು, ಸುಖನಾಸಿಯ ಬಾಗಿಲುವಾಡದಲ್ಲಿ ಚಾಮರಧಾರಿ ಸ್ತ್ರೀಯರ ಕೆತ್ತನೆಗಳಿವೆ. ಈ ಮಂಟಪದ ಕೆಳಗೆ ಸರಳ ಪ್ರತಿಷ್ಠಾನ ವಿದೆ. ಈ ಗುಡೇಕೋಟೆ ಗ್ರಾಮದಲ್ಲಿರುವ ಇತರ ಮಂಟಪ ಗಳೆಂದರೆ ಬರ್ಮಪ್ಪನ ಮಂಟಪ, ಬಸವೇಶ್ವರ ಮಂಟಪಗಳು ಪ್ರಮುಖವಾಗಿವೆ.

ಊರಿನ ಪಶ್ಚಿಮಕ್ಕಿರುವ ಗುಹೆಯಲ್ಲಿ ಭಗ್ನಗೊಂಡ ಕರಿಶಿಲೆಯ ನುಂಕಪ್ಪನ ಮೂರ್ತಿಶಿಲ್ಪವಿದ್ದು, ಈ ಮೂರ್ತಿ ಶಿಲ್ಪದ ಕೈಗಳಲ್ಲಿ ಡಮರುಗ, ತ್ರಿಶೂಲ, ದೈತಿಯ ತಲೆಯನ್ನು ಹಿಡಿದಿದ್ದಾನೆ. ಇದು ರಾಕ್ಷಸಿಯನ್ನು ಸಂಹರಿಸುವ ಸಂಕೇತವಾಗಿದೆ. (ನಿಧಿಗಳ್ಳರು ಇತ್ತೀಚಿನ ದಿನಗಳಲ್ಲಿ ಭಗ್ನಗೊಳಿಸಿದ್ದಾರೆ). ಅಲ್ಲದೆ ಇಲ್ಲಿ ಬೊಮ್ಮಕ್ಕನ ಮೂರ್ತಿಶಿಲ್ಪ ನಾಗಕನ್ನೆಯರ ಹಾಗೂ ಇತರ ಮೂರ್ತಿ ಶಿಲ್ಪಗಳಿವೆ. ಧಾರ್ಮಿಕ ಕಟ್ಟಡಗಳಂತೆ ಸಾಮಾಜಿಕ ಕಟ್ಟಡಗಳು ಗುಡೇಕೋಟೆ ಗ್ರಾಮದಲ್ಲಿ ಕಂಡುಬರುತ್ತವೆ. ಈ ಊರಿನ ಪಶ್ಚಿಮ ಭಾಗದಲ್ಲಿರುವ ಚೌಕಾಕಾರದ ಎರಡು ಅಂತಸ್ತಿನ ಕಟ್ಟಡವನ್ನು ಸ್ಥಳೀಯರು ಉಪ್ಪರಿಗೆ ಎಂದು ಕರೆಯುತ್ತಾರೆ. ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ ಕೆಳಗಿನ ಅಂತಸ್ತಿನ ಹೊರ ಭಿತ್ತಿಯಲ್ಲಿ ಲಜ್ಜಾಗೌರಿ ಹಾಗೂ ಲೈಂಗಿಕ ಶಿಲ್ಪಗಳಿವೆ. ಇಟ್ಟಿಗೆ ಹಾಗೂ ಗಚ್ಚು-ಗಾರೆಯಿಂದ ನಿರ್ಮಿಸಿದ ಮೇಲು ಅಂತಸ್ತಿನ ಮೂರು (ಪೂರ್ವ, ಉತ್ತರ, ದಕ್ಷಿಣ ದಿಕ್ಕಿಗೆ) ದಿಕ್ಕಿಗೆ ಮುಂಚಾಚಿದ ತೆರೆದ ಕಮಾನಿನ ಮಂಟಪಗಳಿವೆ. ಇದರ ಅಡಿಭಾಗದಲ್ಲಿ ಗ್ರಾನೈಟ್ ಶಿಲೆಯ ನಾಲ್ಕು ಪುಷ್ಪ ಬೋದಿಗೆಗಳಿದ್ದು, ಅವುಗಳ ಮೇಲೆ ಇಟ್ಟಿಗೆ ಮತ್ತು ಗಚ್ಚುಗಾರೆಯಿಂದ ನಿರ್ಮಿಸಿದ ಕಮಾನುಗಳಿವೆ. ಈ ಗ್ರಾಮದ ಪಶ್ಚಿಮದಲ್ಲಿರುವ ದೊರೆಗುಡ್ಡದ ಮೇಲೆ ರಾಗಿ ಮತ್ತು ತುಪ್ಪದ ಕಣಜಗಳಿವೆ. ರಾಗಿಕಣಜವನ್ನು ಗ್ರಾನೈಟ್ ಶಿಲೆ ಹಾಗೂ ಗಚ್ಚು-ಗಾರೆಯಿಂದ ನಿರ್ಮಿಸಿದ್ದು, ಇದು ಸಾಲಾಗಿರುವ ಆರು ಕೊಠಡಿಗಳನ್ನೊಳಗೊಂಡಿದೆ. ಇದರ ಪಕ್ಕದಲ್ಲಿಯೇ ಹುಟ್ಟುಗುಂಡಿನಲ್ಲಿ ಒಂದು ದೊಡ್ಡ ಬಾನಿಯಂತೆ ಕೊರೆದು ಅದರ ಮೇಲೆ ಇಟ್ಟಿಗೆ ಮತ್ತು ಗಚ್ಚು-ಗಾರೆಯಿಂದ ನಿರ್ಮಿಸಿದ ಕೊಠಡಿಯನ್ನು ಸ್ಥಳೀಯರು ತುಪ್ಪದ ಕಣಜವೆಂದು ಕರೆಯುತ್ತಾರೆ. ಈ ಎರಡು ಕಟ್ಟಡಗಳು ಕೋಟೆಯೊಳಗಿವೆ. ರಾಗಿ ಕಣಜದಲ್ಲಿ ರಾಗಿಯನ್ನು, ತುಪ್ಪದ ಕಣಜದಲ್ಲಿ ತುಪ್ಪವನ್ನು ಸಂಗ್ರಹಿಸುತ್ತಿದ್ದು, ಅದರ ಉದ್ದೇಶ ಇಂತಿರಬಹುದು. ಈ ಎರಡು ಕಟ್ಟಡಗಳು ಪಾಳೆಯಗಾರರ ಕಾಲದ ನಿರ್ಮಿತಿಗಳಾಗಿರುವುದರಿಂದ ಆಗಿನ ಕಾಲದಲ್ಲಿ ಶತ್ರುಗಳ ಹಾವಳಿಯಿಂದ ಕೋಟೆಯನ್ನು ರಕ್ಷಿಸುವುದು ಅವಶ್ಯಕವಾಗಿತ್ತು. ಶತ್ರುಗಳು ಕೋಟೆಯನ್ನು ಮುತ್ತಲು ಬಂದಾಗ ಅದನ್ನು ತಡೆಯಲು ಗುಡ್ಡದ ಇಳಿಜಾರು ಬಂಡೆಗಳಿಗೆ ತುಪ್ಪ (ಎಣ್ಣೆ) ಹಾಗೂ ರಾಗಿಯನ್ನು ಹರಡುತ್ತಿದ್ದಿರಬಹುದು. ಇಲ್ಲಿರುವ ರಾಗಿಯನ್ನು ಸೈನಿಕರ ಆಹಾರಕ್ಕಾಗಿ ಬಳಸುತ್ತಿದ್ದರು. ಅಲ್ಲದೆ ಈ ರಾಗಿಯನ್ನು ಸಾಮಾನ್ಯ ಪ್ರಜೆಗಳಿಗೆ ಹಂಚುತ್ತಿದ್ದ ರೆಂಬುದನ್ನು ತಳ್ಳಿ ಹಾಕುವಂತಿಲ್ಲ. ಮೇಲೆ ವಿವರಿಸಿದ ಕಟ್ಟಡಗಳು ಗುಡೇಕೋಟೆ ಪಾಳೆಯಗಾರರ ಕಾಲದಲ್ಲಿ ನಿರ್ಮಿಸ ಲಾಗಿದೆಯೆಂಬ ವಾಡಿಕೆಯಿದ್ದರೂ ನಿಖರ ಮಾಹಿತಿಯಿಲ್ಲ. ಪ್ರಸ್ತುತ ಈ ಪಾಳೆಯಗಾರರ ವಂಶಸ್ಥರು ಗುಡೇಕೋಟೆಯಲ್ಲಿದ್ದಾರೆ. ಈ ಗ್ರಾಮದ ಕಮ್ಮಾರ ಕುಲುಮೆ ಬಳಿಯ ಹುಟ್ಟುಗುಂಡಿನಲ್ಲಿರುವ ವೀರಮಾಸ್ತಿ ಶಿಲೆಯಲ್ಲಿ ಕುದುರೆ ಏರಿದ ವೀರನನ್ನು, ಅವನ ಶತ್ರು ಹಾಗೂ ವೀರನ ಸತಿಯು ಮಹಾಸತಿಯಾದುದನ್ನು ಚಿತ್ರಿಸಲಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕರ್ನಾಟಕ ಪರಂಪರೆ**, ಭಾಗ-೧, ಪು. ೧೦೭.

೨. ಇಲ್ಲಿರುವ ಬೃಹತ್ ಶಿಲಾಯುಗದ ಕಿಂಡಿಕೋಣೆಯನ್ನು ಸ್ಥಳೀಯರು ಫಿರಂಗಿಬಂಡೆ ಎಂದು ಕರೆಯುತ್ತಾರೆ.

೩. ಮಹದೇವಪುರದ (ಗುಡೇಕೋಟೆ) ತಿಪ್ಪೇರುದ್ರಪ್ಪನ ಹೊಲದಲ್ಲಿ ಬೃಹತ್ ಶಿಲಾಸಮಾಧಿಗಳಿವೆ.

೪. ವಡೇರಹಳ್ಳಿಯ ಮ್ಯಾಸರ ಓಬಮ್ಮ ಹಾಗೂ ಬುಡ್ಡೇನಹಳ್ಳಿಯ ತಳವಾರ ಗಂಗಪ್ಪನ ಹೊಲದಲ್ಲಿ ಬೃಹತ್ ಶಿಲಾಯುಗದ ಕಬ್ಬಿಣದ ಕುಲುಮೆಗಳಿವೆ.

೫. ಕೆ. ರಾಯಪುರದ ವಾಯವ್ಯಕ್ಕೆ ಬಳ್ಳಾರಿ ನಾಗೇಂದ್ರಪ್ಪನ ಹೊಲದಲ್ಲಿ ಬೃಹತ್ ಶಿಲಾಸಂಸ್ಕೃತಿಗೆ ಸಂಬಂಧಿಸಿದ ಕಬ್ಬಿಣದ ಕುಲುಮೆ ಇದೆ. ಅಲ್ಲದೆ ಈ ಕುಲುಮೆಯ ಸುತ್ತ-ಮುತ್ತಲಿನ ಕಂಬಾರ್ತಿಯ ಗಂಗನಗೌಡನ ಗದ್ದೆ, ಪುಲಿಮಾತಲಗುಡ್ಡದ ದಕ್ಷಿಣ ತಪ್ಪಲಿನ ಹುಲೆಯ್ಯನ ಹೊಲ ಹಾಗೂ ಬಡಿಗೇರ ಯಲ್ಲಪ್ಪನ ಹೊಲಗಳಲ್ಲಿ ಬೃಹತ್ ಶಿಲಾಸಮಾಧಿಗಳಿವೆ.

(ಈ ಲೇಖನವನ್ನು ಸಿದ್ಧಪಡಿಸಲು ಸಹಕರಿಸಿದ ನನ್ನ ಮಾರ್ಗದರ್ಶಕರಾದ ಡಾ|| ಸಿ. ಎಸ್. ವಾಸುದೇವನ್‌ರವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.)೭

★ ★ ★ ★

ವೃತ್ತ ಶಿಲೆಗಳು ಸುತ್ತುವರಿಯೆ ಆಳದ ಗೋರಿ
ಪ್ರಾಗಿತಿಹಾಸದ ನೆನಪುಗಳ ತೋರಿದ ದಾರಿ



ಡಾ॥ ಕೆ. ಬಿ. ಶಿವತಾರಕ್*

ತುಮಕೂರು ಜಿಲ್ಲಾ ಪ್ರದೇಶದ ಇತಿಹಾಸ ಆರಂಭಕಾಲದ ಅವಶೇಷಗಳು

ಪೀಠಿಕೆ

ಪ್ರಾಚೀನ ಭಾರತದ ಇತಿಹಾಸದಲ್ಲಿ ನಗರೀಕರಣವು ನಾಗರಿಕತೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿರುವುದನ್ನು ಕಾಣಬಹುದಾಗಿದೆ. ಇಂತಹ ಬೆಳವಣಿಗೆಯಲ್ಲಿ ಕರ್ನಾಟಕವೂ ತನ್ನ ಪಾತ್ರವಹಿಸಿರುವುದು ತಿಳಿಯುತ್ತದೆ. ಕ್ರಿಸ್ತಶಕ ಆರಂಭದಲ್ಲಿ ಆದಂತಹ ಒಂದು ಬೆಳವಣಿಗೆಯ ಬಗೆಗೆ ಇಲ್ಲಿ ತಿಳಿಯುವ ಪ್ರಯತ್ನ ಮಾಡಲಾಗಿದೆ. ತುಮಕೂರು ಜಿಲ್ಲಾ ಪ್ರದೇಶದಲ್ಲಿಯೂ ಇತಿಹಾಸ ಆರಂಭಕಾಲದ ಇಂತಹ ಅವಶೇಷಗಳನ್ನು ಶೋಧಿಸಲಾಗಿದ್ದು, ಈ ಪ್ರದೇಶವೂ ಒಂದು ವೇದಿಕೆಯಾಗಿದ್ದುದು ತಿಳಿಯುತ್ತದೆ.

ತುಮಕೂರು ಜಿಲ್ಲೆಯಲ್ಲಿ ಇತಿಹಾಸ ಆರಂಭಕಾಲದ ಅವಶೇಷಗಳು

ತುಮಕೂರು ಜಿಲ್ಲಾ ಪ್ರದೇಶದಲ್ಲಿ ಈ ಕಾಲಮಾನಕ್ಕೆ ಸೇರಿದ ಇಂತಹ ಹಲವು ಅವಶೇಷಗಳನ್ನು ೧೯ ನೆಲೆಗಳಲ್ಲಿ ಗುರುತಿಸಲಾಗಿದ್ದು, ಪ್ರಮುಖವಾಗಿ ಅವು ಮೃತ್‌ಪಾತ್ರೆಗಳಾಗಿವೆ. ಇವುಗಳು ಕೆಂಪುವರ್ಣ ಕೆಂಪುಲೇಪನದಡಿ ಬಿಳಿವರ್ಣದ ಚಿತ್ರಿತ ಕಪ್ಪು-ಕೆಂಪು ವರ್ಣದ ಹಾಗೂ ನಕ್ಷಾಂಕಿತ ಮೃತ್ ಪಾತ್ರೆಗಳಾಗಿವೆ. (rouletted ware). ಜೊತೆಯಲ್ಲಿ ಸುಡಾವೆ ಮಣ್ಣಿನ ಮತ್ತು ಗಾಜಿನಲ್ಲಿ ರೂಪಿಸಿದ ವಿವಿಧ ಆಕಾರದ ಮಣಿಗಳು ಕಂಡುಬಂದಿವೆ. ಇವುಗಳ ಅಧ್ಯಯನದಿಂದ ಈ ಕಾಲಮಾನದಲ್ಲಿ ತುಮಕೂರು ಜಿಲ್ಲಾ ಪ್ರದೇಶ ಒಂದು ಪ್ರಸರಣ ಕ್ಷೇತ್ರಕಾರ್ಯವಾಗಿದ್ದಿತೆಂದು ತಿಳಿಯುತ್ತದೆ. ಜಿಲ್ಲೆಯ ವಾಯುವ್ಯ ಭಾಗದಿಂದ ಆರಂಭವಾಗಿ ಆಗ್ನೇಯ ಭಾಗಕ್ಕೆ ಮುಂದುವರಿದುಕೊಂಡು ಬಂದು ನಂತರದಲ್ಲಿ ಬನಹಳ್ಳಿ (ಇಂ.ಆ.ರಿ: ೧೯೬೭-೬೮; ಪು. ೩೮-೩೯; ೧೯೭೨-೭೩, ಪು. ೨೭-೨೯), ತಿ. ನರಸೀಪುರ (ಶೇಷಾದ್ರಿ. ಎಂ. ೧೯೭೧), ತಲಕಾಡು (ಇಂ.ಆ.ರಿ. ೧೯೯೩-೯೪, ಪು; ೬೬-೬೭) ಮೊದಲಾದ ಕೇಂದ್ರಗಳಲ್ಲಿ ಪ್ರಮುಖವಾಗಿದ್ದುದು ತಿಳಿಯುತ್ತದೆ.

ತುಮಕೂರು ಜಿಲ್ಲಾ ಪ್ರದೇಶದಲ್ಲಿ ದೊರೆತ ಇತಿಹಾಸ ಆರಂಭ ಕಾಲದ ನೆಲೆ

ಕ್ರ ಸಂ	ನೆಲೆ	ತಾಲ್ಲೂಕು	ಸೂಕ್ಷ್ಮ ಶಿಲಾಯುಗದ ನೆಲೆಯ ಜೊತೆಗಿರುವ ನೆಲೆಗಳು	ನೂತನ ಶಿಲಾಯುಗದ ನೆಲೆಯ ಜೊತೆಗಿರುವ ನೆಲೆಗಳು	ಬೃಹತ್ ಶಿಲಾಯುಗದ ನೆಲೆಯ ಜೊತೆಗಿರುವ ನೆಲೆಗಳು
೧	ಕತ್ತಿರಾಜನಹಳ್ಳಿ	ಮಧುಗಿರಿ	✓	✓	✓
೨	ಕೈದಾಳ	ತುಮಕೂರು		✓	✓
೩	ಕೊಡಗೇನಹಳ್ಳಿ	ಕೊರಟಗೆರೆ			
೪	ಗುಟ್ಟೆ	ಮಧುಗಿರಿ	✓		✓
೫	ಗುರಮ್ಮನಕಟ್ಟೆ	ಮಧುಗಿರಿ	✓	✓	✓
೬	ತೆಪ್ಪಸಂದ್ರ	ಕುಣಿಗಲ್ಲು			✓
೭	ತ್ಯಾಗಟೂರು	ಗುಬ್ಬಿ			✓
೮	ದಬ್ಬೇಗಟ್ಟ	ಮಧುಗಿರಿ	✓		
೯	ಪಾವಗಡ	ಪಾವಗಡ		✓	✓
೧೦	ಬುಕ್ಕಾಪಟ್ಣ	ಶಿರಾ		✓	✓
೧೧	ಬೂದಿಬೆಟ್ಟ	ಪಾವಗಡ		✓	✓
೧೨	ಬೆಟ್ಟದಹಳ್ಳಿ	ಗುಬ್ಬಿ			
೧೩	ಮರಿದಾಸನಹಳ್ಳಿ	ಪಾವಗಡ	✓		✓
೧೪	ಮಾರನಾಯನಪಾಳ್ಯ	ತುಮಕೂರು		✓	✓
೧೫	ಮಿಡಿಗೇಶಿ	ಮಧುಗಿರಿ	✓	✓	✓
೧೬	ರಾಚಮಾರನಹಳ್ಳಿ	ಪಾವಗಡ	✓	✓	✓
೧೭	ಯಲ್ಲಪ್ಪನಾಯಕನಹಳ್ಳಿ	ಪಾವಗಡ		✓	✓
೧೮	ಯಲ್ಲಪ್ಪನಾಯಕನ ಹೊಸಕೋಟೆ	ಪಾವಗಡ		✓	✓
೧೯	ಸಿದ್ಧಾಪುರ	ಮಧುಗಿರಿ	✓	✓	✓

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ರಾಚಮಾರನಹಳ್ಳಿ, ಯಲ್ಲಪ್ಪ ನಾಯಕನಹೊಸಕೋಟೆ, ಯಲ್ಲಪ್ಪನಾಯಕನಹಳ್ಳಿ (ಪಾವಗಡ ತಾಲ್ಲೂಕು) ಹೊಳಕಲ್ಲುಬೆಟ್ಟ (ಶಿರಾ ತಾಲ್ಲೂಕು), ಬೆಟ್ಟದಹಳ್ಳಿ (ಗುಬ್ಬಿ ತಾಲ್ಲೂಕು) ಮೊದಲಾದ ಸ್ಥಳಗಳಲ್ಲಿ ದೊರೆತಿರುವ ಮೃತ್ ಪಾತ್ರೆಗಳು ಹಾಗೂ ವಿವಿಧ ಅವಶೇಷಗಳ ಅಧ್ಯಯನ ಈ ಪ್ರದೇಶದಲ್ಲಾದ ಇತಿಹಾಸ ಆರಂಭಕಾಲದ ಬೆಳವಣಿಗೆಯು ಬಗೆಗೆ ತಿಳಿಯಪಡಿಸುತ್ತದೆ.

ನೂತನ ಹಾಗೂ ಬೃಹತ್ ಶಿಲಾ ಸಂಸ್ಕೃತಿಗಳ ನೆಲೆಗಳಲ್ಲಿಯೇ ಇತಿಹಾಸ ಆರಂಭ ಕಾಲದ ಸಂಸ್ಕೃತಿಯ ಅವಶೇಷಗಳು ಇರುವುದು ಗಮನಾರ್ಹ. ಇವುಗಳಲ್ಲಿ ನೂತನ ಶಿಲಾಯುಗದ ಹಂತದಿಂದಲೂ ನಿರಂತರವಾಗಿ ಇತಿಹಾಸ ಆರಂಭ

* ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಎಸ್. ಎಂ. ಎಸ್. ಕಾಲೇಜು, ಬ್ರಹ್ಮಾವರ-೫೭೬ ೨೧೩.

ಕಾಲದ ಕೊನೆಯವರೆಗೆ ಜನವಾಸ್ತವ್ಯವಿದ್ದ ನೆಲೆಗಳೇ ಹೆಚ್ಚು. ಕೇವಲ ಇತಿಹಾಸ ಆರಂಭ ಕಾಲದ ಜನವಸತಿ ಇದ್ದ ನೆಲೆಗಳು ತೀರಾ ಕಡಿಮೆ. ಇವುಗಳಲ್ಲಿ ನೂತನ ಶಿಲಾಯುಗ ಹಂತದಿಂದ ಆದಿ ಇತಿಹಾಸ ಆರಂಭ ಕಾಲದ ಕೊನೆಯವರೆಗೆ ಜನಸಾಂದ್ರತೆಯು ಮತ್ತು ನೆಲೆಗಳು ಹೆಚ್ಚುತ್ತಿರುವುದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಈ ಸಂಸ್ಕೃತಿಯ ವಿಶಿಷ್ಟ ವಸ್ತುಗಳಾದ ಕಂಪುಲೇಪನದಡಿ ಬಿಳಿ ರೇಖಾಚಿತ್ರಗಳಿಂದ ಅಲಂಕೃತವಾದ ಮಣ್ಣಿನ ಮಣಿಗಳು, ಶಂಖದ ಬಳೆಗಳು. ಅತಿ ಅಪರೂಪವಾಗಿ ರೋಮ್ ಪ್ರದೇಶದಿಂದ ಬಂದ ಒಂದು ವಿಶಿಷ್ಟ ತಂತ್ರದಿಂದ ಮೂಡಿಸಿದ ಮಣ್ಣಿನ ಪಾತ್ರೆ ಅವಶೇಷ ಈ ನೆಲೆಗಳಲ್ಲಿ ದೊರೆತಿದೆ. ಆದರೆ ತಕ್ಕ ಮಟ್ಟಿಗೆ ಈ ಸಂಸ್ಕೃತಿಯ ನೆಲೆಗಳಲ್ಲಿ ಇಟ್ಟಿಗೆ ಕಟ್ಟಡದ ಅವಶೇಷಗಳು ಇರುತ್ತವೆ ಉದಾಹರಣೆಗೆ ಅಧ್ಯಯನ ಪ್ರದೇಶದ ಉತ್ತರಕ್ಕಿರುವ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ (ಕೃಷ್ಣ ಎಂ. ಹೆಚ್; ೧೯೨೯, ವೀಲ್ಹರ್, ಆರ್. ಇ. ಎಂ; ೧೯೪೭-೪೮), ವಾಯುವ್ಯಕ್ಕಿರುವ ವಡಗಾವ್ ಮಾಧವಪುರ (ಎ.ಇಂ. ೪ ೧೯೪೭- ೪೮ ಪುಟ; ೩೧೦), ಪಶ್ಚಿಮಕ್ಕಿರುವ ಬನವಾಸಿ (ಇಂ. ಆ. ರಿ. ೧೯೬೮-೬೯, ೧೯೭೦-೭೧, ೧೯೮೩-೮೪, ಈಶಾನ್ಯಕ್ಕಿರುವ ನಾಗಾರ್ಜುನಕೊಂಡ (ಆಂಧ್ರ ಪ್ರದೇಶ) ಸುಬ್ರಹ್ಮಣ್ಯಂ ಆರ್; ೧೯೭೫) ಮೊದಲಾದೆಡೆಗಳಲ್ಲಿ ವಿವಿಧ ಕಟ್ಟಡಗಳೂ ಇವೆ. ಅಷ್ಟೇ ಅಲ್ಲದೆ ಅಪರೂಪವಾಗಿ ರೋಮ್ ದೇಶದ ಚಕ್ರವರ್ತಿಗಳಾಗಿದ್ದ ಅಗಸ್ಟಸ್ (ಕ್ರಿ.ಪೂ. ೨೩ ಕ್ರಿ.ಶ. ೧೪) ಟೈಬೀರಿಯಸ್ (ಕ್ರಿ.ಶ. ೧೪-೩೭) ಮೊದಲಾದವರ ಚಿನ್ನ ಇಲ್ಲವೇ ಬೆಳ್ಳಿ ನಾಣ್ಯಗಳು ಹಾಗೂ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿರುವ ಶಾತವಾಹನ ಅರಸುಗಳಾದ ಗೌತಮಿಪುತ್ರ ಶಾತಕರ್ಣಿ (ಕ್ರಿ.ಶ. ೧೨೮-೧೫೭) ಮೊದಲಾದವರ ತಾಮ್ರ ಇಲ್ಲವೆ ಸತುವಿನ ನಾಣ್ಯ, ಮಣ್ಣಿನ ಗೊಂಬೆಗಳು, ನಾನಾ ಪ್ರಕಾರದ ಉತ್ತಮ ಜಾತಿಯ ಚರ್ಟ್, ಕಾರ್ನೀಲಿಯನ್, ಅಗೇಟ್, ಜಾಸ್ಪರ್ ಮೊದಲಾದ ಉತ್ತಮ ಜಾತಿಯ ಕಲ್ಲುಗಳು, ದಂತದ, ಲೋಹದ ಮಣಿಗಳು ದೊರೆತಿವೆ. ಒಟ್ಟಾರೆ ನಾಗರಿಕ ಸಂಸ್ಕೃತಿ ಕುರುಹುಗಳು ಇರುತ್ತವೆ. ಆದರೆ ಅಧ್ಯಯನ ಪ್ರದೇಶದಲ್ಲಿ ಇಂತಹ ನಗರ ಸಂಸ್ಕೃತಿಯ ಕುರುಹುಗಳು ಇದುವರೆಗೆ ಶೋಧಿಸಿದ ಯಾವುದೇ ನೆಲೆಗಳಲ್ಲಿ ಕಾಣಬರದಿರುವುದು ಕುತೂಹಲಕಾರಿಯಾಗಿದೆ. ಪ್ರಾಯಶಃ ಕೃಷ್ಣಾ, ತುಂಗಭದ್ರಾ, ಕಾವೇರಿ ನದಿಯಂತಹ ನೀರಿನ ಆಸರೆ ಇಲ್ಲದಿರುವುದು ಒಂದು ಮುಖ್ಯ ಕಾರಣವಾಗಿರ ಬಹುದೇನೋ? ಕೇವಲ ಆದಿ ಇತಿಹಾಸ ಆರಂಭ ಕಾಲ ಸಂಸ್ಕೃತಿಯ ಅವಶೇಷಗಳು ಮಾತ್ರ ಇರುವ ನೆಲೆಗಳು ವಿಸ್ತಾರ ಮತ್ತು ಅಳಿದುಳಿದ ಅವಶೇಷಗಳು ಕಡಿಮೆ ಎಂದೇ ಹೇಳಬಹುದು. ಒಟ್ಟಿನಲ್ಲಿ ಹಿಂದಿನ ಹಂತಗಳಲ್ಲಿದ್ದಂತೆ ಈ ನೆಲೆಗಳು ಸುಧಾರಿಸಿದ ಒಂದು ಗ್ರಾಮೀಣ ಸಂಸ್ಕೃತಿಯನ್ನೇ ಸೂಚಿಸುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಶೇಷಾದ್ರಿ ಎಂ., (೧೯೭೧), *Report on the Excavations, at T. Narasipur,* Mysore.

೨. ವೀಲ್ಹರ್ ಆರ್., ಎ.ಇಂ, (೧೯೪೭-೪೮); ಪುಟ : ೧೮೦-೩೧೦.

೩. ಕೃಷ್ಣ ಎಂ. ಹೆಚ್., (೧೯೨೯), *Exacavations at Chandravalli*: Supplement to A.R. Mysore Archaeological Dept. for the year 1929, Bangalore.

೪. ಸುಂದರ, ಅ (ಸಂ)., (೧೯೯೭), **ಕರ್ನಾಟಕ ಚರಿತ್ರೆ**, ಸಂಪುಟ-೧, ಚರಿತ್ರೆ ಮಾಲೆ-೧, ಕನ್ನಡ ವಿ. ವಿ. ಹಂಪಿ, ಕಮಲಾಪುರ.

೫. ಸುಬ್ರಹ್ಮಣ್ಯಂ ಆರ್., (೧೯೭೫), *Nagarjunakonda* (1954-60) Memoris of the Archaeological Survey of India. No 75, New Delhi.

೬. ಇಂ.ಆ.ರಿ. (೧೯೬೮-೬೯)., ಪುಟ. ೨೪.

೭. ಇಂ.ಆ.ರಿ. (೧೯೭೦-೭೧)., ಪುಟ. ೨೯-೩೪.

೮. ಇಂ.ಆ.ರಿ. (೧೯೮೩-೮೪)., ಪುಟ. ೪೬-೪೭.

೯. ಇಂ.ಆ.ರಿ. (೧೯೯೩-೯೪)., ಪು. ೬೬-೬೭.

ಸಾಸಲು ಜೆ. ವಿಶ್ವನಾಥ್*

ಬೃಹತ್ ಶಿಲಾಸಂಸ್ಕೃತಿಯ ಕೆಲವು ಹೊಸ ನೆಲೆಗಳು

ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲವನ್ನು ಕ್ರಿ.ಪೂ. ೧೨೦೦ರಿಂದ ೧೨೫೦ ಎಂದು ಸಂಶೋಧಕರು ನಿರ್ಣಯಿಸಿದ್ದು ಈ ತನಕ ಕರ್ನಾಟಕದ ಮೂಲೆ ಮೂಲೆಯಲ್ಲಿ ನೂರಾರು ಅಂತಹ ಶಿಲಾ ಸಂಸ್ಕೃತಿಯ ನೆಲೆಗಳು ಪತ್ತೆಯಾಗಿ ಅಧ್ಯಯನಗಳು ವಿಶಿಷ್ಟ ರೂಪದಲ್ಲಿ ನಡೆಯುತ್ತಿವೆ. ಪ್ರಸ್ತುತ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯ ಹತ್ತಾರು ನೆಲೆಗಳನ್ನು ಇತ್ತೀಚೆಗೆ ಪತ್ತೆ ಮಾಡಲಾಗಿದೆ. ಈ ಕ್ಷೇತ್ರಕಾರ್ಯದಲ್ಲಿ ದೊರೆತ ಅಮೂಲ್ಯ ವಿಚಾರಗಳೇ ಈ ನವಶೋಧಿತ ನೆಲೆಗಳ ಕುರಿತ ಲೇಖನ.

ಬೆಂಗಳೂರು ದಕ್ಷಿಣ ತಾಲೂಕಿನ ತಾವರೆಕೆರೆ ಹೋಬಳಿ ಬಸವನಬೆಟ್ಟದ ತಪ್ಪಲು ಪ್ರದೇಶದಲ್ಲಿ ೬ ರಂಧ್ರ ಕೋಣೆ ಕಲ್ಗುಪ್ಪೆ ಸಮಾಧಿಗಳು ಪತ್ತೆಯಾಗಿವೆ. ಇವುಗಳಲ್ಲಿ ನಾಲ್ಕು ೧೨ ಅಡಿ ಉದ್ದ ೧೦ ಅಡಿ ಅಗಲ ೧ ಅಡಿದಪ್ಪ ಗ್ರಾನೈಟ್ ಕಣಶಿಲೆಯಿಂದ ನಿರ್ಮಿಸಿದವುಗಳಾಗಿವೆ. ಉಳಿದೆರೆಡು ೧೦ ಅಡಿ ಉದ್ದ ೮ ಅಡಿ ಅಗಲ ೧ ಅಡಿ ದಪ್ಪ ಸ್ವಸ್ತಿಕ್ ಆಕಾರದ ಕಣಶಿಲೆಯಿಂದ ಮಾಡಿದವುಗಳಾಗಿವೆ. ಈ ಸಮಾಧಿಗಳ ಪರಿಸರದಲ್ಲಿ ಕೆಂಪು ಕಪ್ಪು ಮಣ್ಣು ಮಿಶ್ರಿತ ಮಡಿಕೆಯ ಚೂರುಗಳು ದೊರೆತಿವೆ. ಬೆಟ್ಟದ ತಪ್ಪಲು ಪ್ರದೇಶದ ಈ ಸಮಾಧಿಗಳು ಈಗಲೂ ಸುಸ್ಥಿತಿಯಲ್ಲಿದ್ದು ಉತ್ಖನನಕ್ಕೆ ಯೋಗ್ಯವಾಗಿವೆ. ಇದೇ ಪ್ರದೇಶದ ಬಸವನಕಟ್ಟೆ ಸಮೀಪ ೧೦ ಅಡಿ ಉದ್ದ ೯ ಅಡಿ ಅಗಲದ ೧ ಅಡಿ ದಪ್ಪನೆಯ ಮತ್ತೆರಡು ಕಲ್ಗುಪ್ಪೆ ಸಮಾಧಿಗಳಿವೆ. ಇದೇ ಗ್ರಾಮದ ತೂತುಕೆರೆ ಸಮೀಪ ಹಿಂಭಾಗದ ಪರಿಸರದಲ್ಲಿ ೧೪ ಅಡಿ ಉದ್ದ ೧೧ ಅಡಿ ಅಗಲದ ವಿಶಾಲವಾದ ೧೧ರಿಂದ ೧೧/೨ ಅಡಿ ದಪ್ಪನೆಯ ಮತ್ತೆರಡು ಕಲ್ಗುಪ್ಪೆ ಸಮಾಧಿಗಳಿವೆ. ಇವುಗಳ ಪೂರ್ವ ದಿಕ್ಕಿನಲ್ಲಿ ರಂಧ್ರವಿದ್ದು ಪಾಂಡವರ ಮನೆಗಳೆಂದು ಸ್ಥಳೀಯರು ಕರೆಯುತ್ತಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಸಮೀಪದ ಮಾದಾಪಟ್ನದ ಚಿಕ್ಕರಂಗಯ್ಯ ಕೆಂಚಪ್ಪ, ಅಂದಾನಪ್ಪ ಇವರುಗಳ ಹೊಲಗಳ ಪರಿಸರದಲ್ಲಿ ೮ ಶಿಲಾವೃತ್ತವುಳ್ಳ ಸಮಾಧಿಗಳಿವೆ. ಇವುಗಳಲ್ಲಿ ೪ ಏಕ ಶಿಲಾವೃತ್ತ ಸಮಾಧಿಗಳಾಗಿದ್ದರೆ ಉಳಿದ ೩ ಪಂಚ ಶಿಲಾವೃತ್ತಿ ಸಮಾಧಿಗಳಾಗಿವೆ ಹಾಗೂ ೧ ಒಂಭತ್ತು ಶಿಲಾವೃತ್ತವಿರುವ ಅತಿ ದೊಡ್ಡ ಶಿಲಾಸಮಾಧಿಯಾಗಿದೆ. ಶಿಲಾವೃತ್ತಕ್ಕೆ ದಪ್ಪನೆಯ ಚಪ್ಪಡಿಯಾಕಾರದ ಕಲ್ಲುಗಳನ್ನು ಬಳಸಿದ್ದಾರೆ. ಬೆಟ್ಟದ ತಪ್ಪಲು ಪ್ರದೇಶದ ಈ ನೆಲೆಯಿರುವ ಕಾರಣ ಆ ಬೆಟ್ಟದಿಂದ ಗ್ರಾನೈಟ್ ಕಲ್ಲುಗಳನ್ನು ಬಳಸಿಕೊಂಡಿದ್ದಾರೆ. ಮಡಿಕೆ ಚೂರುಗಳು ಹೇರಳವಾಗಿ ದೊರೆತರೂ ಈ ಪರಿಸರದಲ್ಲಿ ಒಂದೂ ನಿಲುವುಗಲ್ಲು ಪತ್ತೆಯಾಗಿಲ್ಲ.

ಬೆಂಗಳೂರು ಗ್ರಾಮಾಂತರಜಿಲ್ಲೆಯ ದೊಡ್ಡಬಳ್ಳಾಪುರದಿಂದ ಗೌರಿಬಿದನೂರು ರಾಜ್ಯಹೆದ್ದಾರಿಯಲ್ಲಿ ಸಾಗುವಾಗ ಮಧ್ಯೆ ಎಡಭಾಗದಲ್ಲಿ ಸಾಲು ಸಾಲು ಬೆಟ್ಟಗಳ ಭೂ ಪ್ರದೇಶವಿದೆ. ಈ ಬೆಟ್ಟದ ತಪ್ಪಲು ಹಾಗೂ ಇಳಿಜಾರಿಗೆ ಸುತ್ತ ಮುತ್ತಲ ಪರಿಸರದಲ್ಲಿ ಮಾಕಳಿ ಬೆಟ್ಟ ಹಾಗೂ ಉಜ್ಜನಿ ಬೆಟ್ಟಗಳಿದ್ದು ಈ ಬೆಟ್ಟ ಪ್ರದೇಶಗಳು ಶಿಲಾಯುಗ ಸಂಸ್ಕೃತಿಯ ಅಪೂರ್ವ ನೆಲೆಗಳಾಗಿವೆ.

ಉಜ್ಜನಿ ಬೆಟ್ಟದ ತಪ್ಪಲಿನಲ್ಲಿ ೧೨ ಅಡಿ ಉದ್ದ ೪ ಅಡಿ ಅಗಲದ ಒಂದು ನಿಲಸುಗಲ್ಲು ಇದೆ. ಈ ನಿಲಸುಗಲ್ಲಿನಿಂದ ಸ್ವಲ್ಪ ಮುಂದೆ ಹೋದರೆ ೩ ಅಡಿ ಉದ್ದದಿಂದ ಹಿಡಿದು ೨೨ ಅಡಿ ಉದ್ದದವರೆಗೆ ೨ ಅಡಿ ಅಗಲದಿಂದ ಹಿಡಿದು ೬ ಅಡಿ ಅಗಲದವರೆಗೆ ಅಲ್ಲಲ್ಲಿ ೨೧ ನಿಲುವುಗಲ್ಲುಗಳಿವೆ. ನಾಲ್ಕೈದು ನಿಲುವು ಗಲ್ಲುಗಳು ಬಿದ್ದಿವೆ. ಆರೇಳು ನಿಲುವುಗಲ್ಲುಗಳು ವಾಲಿವೆ. ೮ ನಿಲುವುಗಲ್ಲುಗಳು ಸುಸ್ಥಿತವಾಗಿ ನಿಂತಿವೆ. ಇಷ್ಟೊಂದು ನಿಲುವುಗಲ್ಲುಗಳು ಒಂದೇ ಪ್ರದೇಶದಲ್ಲಿರುವುದು ಕರ್ನಾಟಕದಲ್ಲಿ ದಾಖಲೆಯೇ ಸರಿ. ಈ ನಿಲುವುಗಲ್ಲುಗಳ ಬೆಟ್ಟ ಶ್ರೇಣಿಯ ದಟ್ಟ ಕಾಡಿನಲ್ಲಿ ಶಿಲಾಯುಗ ಮಾನವ ವಾಸಿಸಿದ ನೈಜ ಚಿತ್ರ ಸ್ವರೂಪ ನಮಗೆಸಿಗುತ್ತಿದೆ. ನೂರಾರು ಶಿಲಾವೃತ್ತ, ಕಲ್ಗುಪ್ಪೆ, ಹಾದಿಕೋಟೆ ಸಮಾಧಿಗಳನ್ನು ನಾವು ಈ ಪ್ರದೇಶದಲ್ಲಿ ಇಂದಿಗೂ ಸುಸ್ಥಿತಿಯಲ್ಲಿ ಕಾಣಬಹುದು.


ಉಜ್ಜನಿಬೆಟ್ಟದ ಬುಡದಲ್ಲಿ ಹೊಂದಿಕೊಂಡ ಹಾಗೆ ಇರುವ ಕಾಡಿನಂಚಿನ ಜಾಲಗೆರೆ ಗ್ರಾಮದ ಪುಂಜಗಪ್ಪನ ಹೊಲದಲ್ಲಿ ೬



* ನಂ. ೮೭೦, ೪ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - ೫೬೦ ೦೪೦

ನಿಲುವುಗಲ್ಲುಗಳಿವೆ ೮ರಿಂದ ೧೧ ಅಡಿ ಉದ್ದ ೨ರಿಂದ ೪ ಅಡಿ ಅಗಲವಾಗಿವೆ. ಇಲ್ಲೂ ಶಿಲಾವೃತ್ತ ಸಮಾಧಿಗಳಿವೆ. ಇದೇ ಪ್ರದೇಶದ ಪಾಂಡವರ ದಿನ್ನೆಯಲ್ಲಿ ೧೨ ಅಡಿ ಉದ್ದ ೨೧/೨ ಅಡಿ ಅಗಲದ ನಿಲುವುಗಲ್ಲು ಒಂದು ವಾಲಿನಿಂತಿದ್ದು ಇದರ ಸುತ್ತ ಮುತ್ತ ಗೆರೆ ಎಳೆದ ಹೆದ್ದಾರಿಯ ೨ ಬದಿಗಳಲ್ಲಿ ನೂರಾರು ಕಲ್ಲುಗುಪ್ಪೆ ಹಾಗೂ ಶಿಲಾವೃತ್ತ ಸಮಾಧಿಗಳಿವೆ. ಈ ಶಿಲಾವೃತ್ತ ಸಮಾಧಿಗಳು ಸ್ವಸ್ತಿಕ್ ಆಕಾರದ ತೊಟ್ಟಿಗಳ ಮಾದರಿಯಲ್ಲಿ ರಚಿತವಾಗಿ ಪೂರ್ವದಿಕ್ಕಿನಲ್ಲಿ ರಂಧ್ರಗಳನ್ನು ಒಳಗೊಂಡಿದೆ. ಇಲ್ಲಿಂದ ಮುಂದೆ ಬುಡ್ಡೆಪ್ಪನ ಹೊಲದಲ್ಲಿ ೬ ಅಡಿ ಉದ್ದ ೨ ಅಡಿ ಅಗಲದ ನಿಲುವುಗಲ್ಲು ಇದ್ದು ಇದರ ಪಕ್ಕ ೧೫ ಕ್ಯಾಪ್‌ಸ್ಟೋನ್ ಸಮಾಧಿಗಳಿವೆ. ಇದೇ ಪರಿಸರದ ಸೂಲುಕುಂಟೆ ಗ್ರಾಮದ ಚೂಡಪ್ಪನ ಹೊಲದಲ್ಲಿ ಮತ್ತೆರಡು ನಿಲುವುಗಲ್ಲುಗಳಿವೆ. ೧೧ ಅಡಿ ಉದ್ದ ೩ ಅಡಿ ಅಗಲವಾಗಿವೆ. ಇಲ್ಲಿ ೮ ಸಮಾಧಿಗಳಿವೆ. ಇದೇ ಪರಿಸರದಲ್ಲಿ ಹಾಲು ಚಿಲುಮೆ ಪ್ರದೇಶವಿದ್ದು ಒಂದು ೧೦ ಅಡಿ ಉದ್ದ ೨ ಅಡಿ ಅಗಲದ ನಿಲುವುಗಲ್ಲು ಇದ್ದು ೬ ಕ್ಯಾಪ್‌ಸ್ಟೋನ್ ಸಮಾಧಿಗಳಿವೆ ಹಾಗೂ ಆದಿ ಮಾನವನ ವಾಸಕ್ಕೆ ಯೋಗ್ಯವಾದ ಕಲ್ಲಾಸರೆಗಳು ಗುಹೆಗಳು ಈ ಬೆಟ್ಟದಲ್ಲಿವೆ. ಈ ಪ್ರದೇಶದ ಬೆಣಚಿನಮಡಗು ಹೊಸಹಳ್ಳಿಯ ಕೆರೆ ಸಮೀಪ ಕಲ್ಲುಂಟೆ ಗ್ರಾಮ. ಏಳಟ್ಟಿ, ಭಕ್ತರಹಳ್ಳಿ ಪ್ರದೇಶದಲ್ಲೂ ಒಂದೊಂದು ನಿಲುವುಗಲ್ಲು ಇದ್ದು ನಿಲುವುಗಲ್ಲಿರುವ ಪರಿಸರದಲ್ಲಿ ಅಲ್ಲಲ್ಲಿ ಕ್ಯಾಪ್‌ಸ್ಟೋನ್ ಹಾಗೂ ಶಿಲಾವೃತ್ತ ಸಮಾಧಿಗಳು ಕಡಿಮೆ ಪ್ರಮಾಣದಲ್ಲಿವೆ.

ಈ ಉಜ್ಜನಿ ಬೆಟ್ಟದ ಕಾಡಿನ ನಡುವೆ ಒಂದು ಗುಡ್ಡದ ಮೇಲೆ ೪-೫ ಚದುರಡಿಯ ದಪ್ಪ ಗ್ರಾನೈಟ್ ಬಂಡೆಗಳ ಮೇಲೆ, ಕಲ್ಲಿನಿಂದ ಕಲ್ಲನ್ನು ಜಜ್ಜಿ ಕೆತ್ತಿದ ೧೭ ರೇಖಾಚಿತ್ರಗಳಿವೆ. ಅವುಗಳಲ್ಲಿ



ನವಿಲು ಆನೆ, ಜಿಂಕೆ, ಕುರಿ, ಮಾನವ, ಗೂಳಿ ಇನ್ನೂ ಅರ್ಥೈಸಲು ಸಾಧ್ಯವಾಗದ ಸಂದಿಗ್ಧ ರೇಖಾ ಚಿತ್ರಗಳು ಇಲ್ಲಿವೆ. ಈ ಎಲ್ಲಾ ಶಿಲಾಯುಗ ನೆಲೆಗಳು ವಸತಿಯ ಯೋಗ್ಯ ನೆಲೆಗಳಾಗಿದ್ದು ಈ ಪ್ರದೇಶದ ನೆಲೆಯ ಸಾಮಾನ್ಯ ಲಕ್ಷಣಗಳನ್ನು ಈ ಕೆಳಕಂಡಂತೆ ಸೂಚಿಸಬಹುದು.

೧. **ಸಮಾಧಿಗಳು**

ಅ. ಶಿಲಾವೃತ್ತ ಸಮಾಧಿಗಳು (೧.೩,೫,೭,೯ ವೃತ್ತಗಳು) ಆ. ಕಲ್ಲುಗುಪ್ಪೆ ಸಮಾಧಿಗಳು ಇ. ಕಲ್ಮನೆ ಸಮಾಧಿಗಳು (ಹಾದಿಕೋಟೆ, ರಂಧ್ರಕೋಣೆ) ಈ. ಚಪ್ಪಡಿ ಮನೆಗಳು ಉ. ಸ್ವಸ್ತಿಕ್ ಆಕಾರದ ಗೋರಿಗಳು.

೨. ಕೆಂಪು ಕಪ್ಪು ಮಿಶ್ರಿತ ಮಡಿಕೆಯ ಚೂರುಗಳು.

೩. ೪೨ ವಿವಿಧ ಅಳತೆಯ ನಿಲಸುಗಲ್ಲುಗಳು. ೪. ಕಲ್ಲಿನ ಪಾತ್ರೆ

೫. ಕಲ್ಲಾಸರೆ ಗುಹೆಗಳು ೬. ಯಾವುದೇ ಶಿಲಾಯುಧ ದೊರೆತಿಲ್ಲ.

೭. ರಂಧ್ರವಿರುವ ಹೂಜಿಯ ಮಣ್ಣಿನ ಮುಚ್ಚಳ

೮. ರೇಖಾಚಿತ್ರಗಳು (ವಿವಿಧ ಪ್ರಾಣಿಗಳವು)

೯. ಯಾವುದೇ ಕಿಟಕಿ ಬಾಗಿಲುಗಳಿಲ್ಲದ ಕಲ್ಲಿನ ಮೇಲೆ ಕಲ್ಲುಪೇರಿಸಿ ನಿರ್ಮಿಸಿದ ಮೇಲ್ಛಾವಣಿ ರಹಿತ ೨ ಕಲ್ಲಿನ ಮನೆಗಳು ಈ ಪ್ರದೇಶದಲ್ಲಿ ದೊರೆತಿದ್ದು ಇದರ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಿದೆ.

ನವಶೋಧಿತ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯ ಶಿಲಾಸಂಸ್ಕೃತಿಯ ನೆಲೆಗಳ ಸೂಚಿ

ಕ್ರಸಂ.	ನೆಲೆಗಳು	ಹೋಬಳಿ	ತಾಲ್ಲೂಕು	ಕಲ್ಲುಗುಪ್ಪೆ	ಕಲ್ಲುವೃತ್ತ	ಕಲ್ಮನೆ	ನಿಲಸುಗಲ್ಲು	ರೇಖಾಚಿತ್ರ	ಕಲ್ಲಾಸರೆ	ಗುಹೆ
೧.	ಬಸವನಬೆಟ್ಟ	ತಾವರೆಕೆರೆ	ಬೆಂ. ದಕ್ಷಿಣ	೧೩	೧೬	೩	-	-	೧	-
೨.	ಮಾದಾಪಟ್ನ	ತಾವರೆಕೆರೆ	ಬೆಂ. ದಕ್ಷಿಣ	೦೯	೧೭	-	-	-	-	-
೩.	ಉಜ್ಜನಿಬೆಟ್ಟ	ಸಾಸಲು	ದೊಡ್ಡಬಳ್ಳಾಪುರ	೮೬	೩೨	೮	೨೬	೧೭	೨	೬
೪.	ಜಾಲಗೆರೆ	ಸಾಸಲು	ದೊಡ್ಡಬಳ್ಳಾಪುರ	೮	೬	೧	೧೬	-	೧	೧
೫.	ಸೂಲುಕುಂಟೆ	ಸಾಸಲು	ದೊಡ್ಡಬಳ್ಳಾಪುರ	೧೨	೧೫	-	೦೮	-	-	-
೬.	ಪಾಂಡವರದಿನ್ನೆ	ಸಾಸಲು	ದೊಡ್ಡಬಳ್ಳಾಪುರ	೧೪೬	೨೭	-	೧೦	-	೩	೬
೭.	ಹಾಲುಚಿಲುಮೆ	ಸಾಸಲು	ದೊಡ್ಡಬಳ್ಳಾಪುರ	೧೬	೮	-	೪	-	೧	-
೮.	ಹೊಸಹಳ್ಳಿ	ಸಾಸಲು	ದೊಡ್ಡಬಳ್ಳಾಪುರ	೧೩	೬	-	೫	-	-	-
೯.	ಬೆಣಚಿನ ಮಡಗು	ಸಾಸಲು	ದೊಡ್ಡಬಳ್ಳಾಪುರ	೮	೩	-	೧	-	-	-
೧೦.	ಕಲ್ಲುಂಟೆ	ಸಾಸಲು	ದೊಡ್ಡಬಳ್ಳಾಪುರ	೩	೬	-	೩	-	-	-
೧೧.	ಅಲಪನಹಳ್ಳಿ	ಸಾಸಲು	ದೊಡ್ಡಬಳ್ಳಾಪುರ	೧	೮	-	೨	-	-	-
೧೨.	ಭಕ್ತರಹಳ್ಳಿ	ಸಾಸಲು	ದೊಡ್ಡಬಳ್ಳಾಪುರ	೧	೬	-	೧	-	-	-
೧೩.	ಏಳಟ್ಟಿ	ಸಾಸಲು	ದೊಡ್ಡಬಳ್ಳಾಪುರ	೧	೪	-	೩	-	-	-

ಪ್ರೊ. ಕೆ. ಸಿ. ಮಲ್ಲಿಗವಾಡ*

ಕಿತ್ತೂರಿನ ಪ್ರಾಚ್ಯಾವಶೇಷಗಳು

ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನಲ್ಲಿ ನೆಲೆನಿಂತ ಗ್ರಾಮ ಕಿತ್ತೂರು. ಇದು ಯರೇಸೀಮೆಯಲ್ಲಿದ್ದ ಊರು. ನವಲಗುಂದದಿಂದ ದಕ್ಷಿಣಕ್ಕೆ ೩೦ಕಿ.ಮೀ. ಅಥವಾ ಅಣ್ಣಿಗೇರಿ ಯಿಂದ ಉತ್ತರಕ್ಕೆ ೧೬ ಕಿ.ಮೀ. ಅಂತರದಲ್ಲಿದೆ. ಎರೆದೊರೆ ಎಂಬ ಖ್ಯಾತಿವೆತ್ತ ಅಣ್ಣಿಗೇರಿ ಗ್ರಾಮವು ಕಲ್ಯಾಣಿ ಚಾಲುಕ್ಯರ ಆಡಳಿತಕ್ಕೊಳಪಟ್ಟು ಹಲವಾರು ಐತಿಹಾಸಿಕ ಕಲಾಸ್ಮಾರಕಗಳನ್ನು ಹೊಂದಿದ ಊರು. ಇದಕ್ಕೆ ಸಮಕಾಲೀನವೆಂಬಂತೆಯೇ ಕಿತ್ತೂರು ಸಹ ತನ್ನ ಒಡಲಾಳದಲ್ಲಿ ಹಲವಾರು ಪ್ರಾಚ್ಯಾವಶೇಷಗಳನ್ನು ಬಚ್ಚಿಟ್ಟುಕೊಂಡು ಪ್ರೇಕ್ಷಕರಿಗೆ, ಇತಿಹಾಸಕಾರನಿಗೆ ಅಚ್ಚರಿಯನ್ನುಂಟು ಮಾಡುವ ಕಲಾ ಚಲುವಿನ ಸ್ಮಾರಕಗಳ ತವರೂರಾಗಿ ಕಂಗೊಳಿಸುತ್ತದೆ.

ಕಿತ್ತೂರಿನ ಇತಿಹಾಸ ಕೆದರಿದಾಗ ಇದೊಂದು ಸ್ಥಾನ ಪಲ್ಲಟವಾಗಿ ಬಂದ ಊರಾಗಿದೆ. ಅಂದರೆ ಕಿತ್ತು ಬಂದ ಊರೇ ಕಿತ್ತೂರು ಅಂದರೆ ಯಾವ ಭಾಗದಿಂದ ಇದು ಕಿತ್ತು ಬಂತು ಎನ್ನುವುದಕ್ಕೆ ಇಲ್ಲಿ ಯಾವ ಪುರಾವೆಗಳೂ ಇಲ್ಲ. ಆದರೂ ಹಿಂದೆ ಬರಗಾಲ ಎದುರಿಸುತ್ತಿದ್ದ ಕಾಲದಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಜನರು ಇಲ್ಲಿಗೆ ಬಂದು ನೆಲೆಸಿರುವ ಸಾಧ್ಯತೆಗಳು ಹೆಚ್ಚಾಗಿ ಕಂಡು ಬರುತ್ತಿವೆ. ಇದು ಸುಮಾರು ೧೦ನೇ ಶತಮಾನಕ್ಕಿಂತಲೂ ಮೊದಲೇ ಪ್ರಚಲಿತವಾದ ಗ್ರಾಮ

ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಅವಶೇಷಗಳು ಇಲ್ಲಿ ಪತ್ತೆ ಆಗಿವೆ. ಇಲ್ಲಿರುವ ಗಜಲಕ್ಷ್ಮಿ ವಿಗ್ರಹ, ಜೈನ ತೀರ್ಥಂಕರ, ಶಿವ ಲಿಂಗ, ಪಾದುಕೆ, ನಂದಿ ವಿಗ್ರಹ, ಹನುಮಂತ ದೇವರ, ತ್ರುಟಿತ ಕಾಮಧೇನು ಶಿಲ್ಪ ಹಾಗು ತ್ರುಟಿತ ಅವಶೇಷಗಳ ಆಗರವೇ ಇಲ್ಲಿರುವಂತೆ ಕಂಡು ಬರುತ್ತದೆ. ಅಲ್ಲಲ್ಲಿ ಚದುರಿದಂತೆ ಬಿದ್ದಿರುವ ಐತಿಹಾಸಿಕ ಅವಶೇಷಗಳು ಕಿತ್ತೂರಿನ ಹಿರಿಮೆಯನ್ನು ಸಾರುತ್ತಿವೆ.

ಗಜಲಕ್ಷ್ಮೀ ವಿಗ್ರಹ : ತ್ರುಟಿತವಾಗಿದ್ದು ಹನುಮಂತ ದೇವರ ಗುಡಿಯಲ್ಲಿ ಮಣ್ಣಿನ ಅಡಿಯಲ್ಲಿ ಸಿಕ್ಕಿ ಕೊಂಡಿತ್ತು, ಊರ ಹಿರಿಯರ ಸಹಾಯದಿಂದ ಇದನ್ನು ಅಗೆದು ಹೊರ ತೆಗೆಯಲಾಗಿ ಇದೊಂದು ಪಟ್ಟಿಕೆಯಾಗಿದ್ದು ಇದನ್ನು ಸ್ಥಳೀಯವಾಗಿ ಹಿರಿಯರ ಕಲ್ಲು, ಆನೆಗಲ್ಲು ಎಂದು ಕರೆಯುತ್ತಾರೆ. ೧೧ನೇ ಶತಮಾನಕ್ಕೆ ಸಂಬಂಧಿಸಿದ ಕಲಾಸ್ಮಾರಕವಾಗಿದ್ದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರಬಹುದಾಗಿದೆ. ಇದೊಂದು ಗಜಲಕ್ಷ್ಮೀ ವಿಗ್ರಹವಾಗಿದೆ. ಸುಮಾರು ೩೮ "ಅಗಲ ೧೩" ಎತ್ತರವಾಗಿದೆ ಮಧ್ಯದಲ್ಲಿ ಲಕ್ಷ್ಮೀ ವಿಗ್ರಹವಿದ್ದು ಎಡ ಬಲಗಳಲ್ಲಿ ಆನೆಗಳಿವೆ. ೧೦' ಎತ್ತರ ೧೮' ಉದ್ದವಾಗಿರುವ ಆನೆಗಳು ಬೆನ್ನ ಮೇಲೆ ಅಂಬಾರಿ ಹೊತ್ತು ಕೆಂಪು ಹಗ್ಗದಿಂದ ಅಲಂಕೃತಗೊಂಡಿವೆ. ಗಜಗಳಿಗೆ ಹರವಾದ ಕಿವಿ ದಪ್ಪವಾದ ಕಾಲುಗಳನ್ನು ಸುಮಾರು ೬' ಉದ್ದವಾದ ಕಾಲನ್ನು ಮುಂದೆ ಮಾಡಿ ಎಡಗಾಲನ್ನು ಮಡಿಸಿ ಹಿಂದಿನ ಕಾಲುಗಳ ಮೇಲೆ ಭಾರ ಹೊತ್ತಿರುವ ಭಂಗಿಯಲ್ಲಿದ್ದು ಸೊಂಡಿಲಿನಲ್ಲಿ ಕುಂಭಗಳನ್ನು ಹಿಡಿದುಕೊಂಡು ಅಭಿಷೇಕ ಮಾಡುತ್ತಿವೆ. ದಪ್ಪವಾದ ಬಾಲವನ್ನು ಮೇಲೆತ್ತಿ ನಿಂತಿವೆ. ಆನೆಯ ಹೊಟ್ಟೆ ೬' ದಪ್ಪವಾಗಿದ್ದು ಅಳತೆಗೆ ತಕ್ಕಂತೆ ಕೆತ್ತಲಾಗಿದೆ. ದೂರದಿಂದ ಇದನ್ನು ನೋಡಿದರೆ ಸಾದಾ ಕಲ್ಲಿನಂತೆ ಕಂಡುಬರುತ್ತದೆ. ಆನೆಗಳ ಮಧ್ಯದಲ್ಲಿ ಕುಳಿತ ಭಂಗಿಯಲ್ಲಿರುವ ಲಕ್ಷ್ಮೀ ವಿಗ್ರಹವು ಮನಮೋಹಕವಾಗಿದೆ. ತಲೆಯ ಮೇಲೆ ಮುಕುಟ ಕೊರಳಲ್ಲಿ ಕಂಠಹಾರ ಕಿವಿಯೋಲೆಗಳನ್ನು ಧರಿಸಿದ್ದು ಜಟಾಧಾರಿಯಾಗಿದ್ದಾಳೆ. ೨ ಭುಜಗಳಿದ್ದು ಬಲ ಹಸ್ತ ಅಭಯ ಹಸ್ತವಿದ್ದು ಮತ್ತೊಂದು ಎಡತೊಡೆಯ ಮೇಲೆ ಐಷಾರಾಮಿಯಾಗಿದೆ.

ನೀಳವಾದ ದೇಹ ಉಬ್ಬಿದ ಎದೆ, ಕೊರಳಲ್ಲಿ ಕಂಠಹಾರ, ಕಾಲಲ್ಲಿ ಕಾಲ್ಗಡಗಗಳಿಂದ ಕೂಡಿದೆ. ಅಂದವಾಗಿ ನಿರ್ಮಾಣ ವಾಗಿರುವ ಈ ವಿಗ್ರಹದಲ್ಲಿ ಅಚ್ಚುಕಟ್ಟುತನ ಕಂಡು ಬರುತ್ತದೆ. ಕಿವಿಯೋಲೆಗಳು ಜೋತು ಬಿದ್ದಿದ್ದು ವಿಗ್ರಹಕ್ಕೆ ಮೆರಗು ತಂದಿವೆ. ಬಲತೊಡೆಯ ಮೇಲೆ ಸೀರೆಯ ಸೆರಗು ಬಂದಿದ್ದು ಅಷ್ಟೊಂದು ಸೂಕ್ಷ್ಮವಾಗಿ ಶಿಲ್ಪಿಯು ವಿಗ್ರಹ ನಿರ್ಮಿಸಿದ್ದಾನೆ. ಕೈಕಡಗ, ತೋಳ್ಬಂದಿಗಳು ವಿಗ್ರಹದ ಆಕರ್ಷಣೆಯನ್ನು ದ್ವಿಗುಣಗೊಳಿಸಿವೆ.


ತ್ರುಟಿತಲಿಂಗ ಶಿವಲಿಂಗ ನಂದಿ ವಿಗ್ರಹಗಳ ಸರಮಾಲೆಯೇ ಇಲ್ಲಿರುವುದು.

೧. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ್ದ ೨೦" ಉದ್ದ ೧೨" ಅಗಲ ೧೮" ಎತ್ತರವಾಗಿರುವ ಶಿವಲಿಂಗವು ನಯನ ಮನೋಹರವಾಗಿದೆ. ಮಧ್ಯಭಾಗದಲ್ಲಿ ಬಾಣಕ್ಕೆ ಕಿಂಡಿ ಇದ್ದೂ ಬಾಣವು ಮಾಯವಾಗಿದೆ.

೨. ಲಿಂಗದ ಪಾನಬಟ್ಟಲಿನ (ಜಲಹರಿ) ಕೆಳಗೆ ಪೀಠವಿದೆ. ೬" ಎತ್ತರವಿದೆ. ಈ ಶಿವಲಿಂಗವು ಅರೆ ಪ್ರಾಚೀನ ವಾಗಿದ್ದು ವೈಶಿಷ್ಟ್ಯ ಪೂರ್ಣವಾಗಿದೆ. ಕೆಳಭಾಗವು ಎಲ್ಲೋ ಬಿದ್ದಿರಬಹುದು. ಈಗ ಇದರ ಜೀರ್ಣೋದ್ಧಾರ ಮಾಡಿ

* ಜಿ.ಇಸಿ. ಜಿ.ಕೆ. ಹಿರೆಗೌಡರ ಸಂಯುಕ್ತ ಪದವಿ ಪೂರ್ವ ಕಾಲೇಜು, ರೊಟ್ಟಿಗವಾಡ, ಕುಂದಗೋಳ ತಾ. ಧಾರವಾಡ ಜಿಲ್ಲೆ.-೫೮೧ ೧೧೩

ಪುನಃ ಪ್ರತಿಷ್ಠಾಪನೆ ಮಾಡಿದ್ದಾರೆ. ನೂತನ ಬಾಣವನ್ನು ಅಳವಡಿಸಿ ಎತ್ತರವಾದ ಪೀಠದ ಮೇಲೆ ಕೂಡಿಸಿದ್ದಾರೆ. ಇದು ದಕ್ಷಿಣಾಭಿಮುಖವಾಗಿದ್ದು ೧೦'x೧೦' ಅಗಲಳತೆಯ ಗರ್ಭಗೃಹದಲ್ಲಿ ಸುಮಾರು ೩ ವಿವಿಧ ಭಂಗಿಯಲ್ಲಿದ್ದ ಹನುಮಂತ ದೇವರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಕುರುಹುಗಳು ಕಂಡು ಬರುತ್ತಿವೆ. ಇದರಲ್ಲಿ ಒಂದು ರೇಖಾ ಚಿತ್ರ ಇನ್ನೊಂದು ಉಬ್ಬು ಚಿತ್ರವಿದೆ. ಹನುಮಂತ ದೇವರು ೬೪" ಎತ್ತರ ೩೨" ಅಗಲವಿದೆ. ಉಬ್ಬಾದ ಗಲ್ಲಗಳು ಬಹು ಎಣ್ಣೆ ಸುರಿದಿದ್ದರಿಂದ ಅವಯಗಳು ಮುಚ್ಚಿಹೋಗಿದ್ದವು. ಮುಖದಲ್ಲಿ ಮೂಗು ಮಾತ್ರ ತುಟಿತಗೊಂಡಿದ್ದು ಬಾಯಿಯೂ ಸಹ ಅಸ್ಪಷ್ಟ ವಾಗಿಯೇ ಗೋಚರಿಸುತ್ತಿದೆ. ನಯನಗಳು ಕಲಾಕೌಶಲ್ಯ ದಿಂದ ಬಿಡಿಸಲ್ಪಟ್ಟಿವೆ. ಇವು ಮುಖಕ್ಕೆ ಮೆರಗು ತರುವಂತೆ ಕಾಣಿಸುತ್ತಿವೆ. ಎಡಗಾಲನ್ನು ಮುಂದೆ ಮಾಡಿ ಬಲಗಾಲು ಹಾಗೂ ಹಿಂದಿನ ಕಾಲನ್ನು ಮಡಿಸಿ ಐಷಾರಾಮಿಯಾಗಿ ಪವಡಿಸಿದ್ದಾನೆ. ಇದೂ ಸಹ ಕಲ್ಯಾಣಿ ಚಾಲುಕ್ಯರ ಸಮಕಾಲೀನವಾದ ವಿಗ್ರಹವಾಗಿದೆ. ಅಳತೆಗೆ ತಕ್ಕಂತೆ ಮುಖ, ಬಾಲ, ಕಾಲು, ಇಣಿ ಸಿರಗಳನ್ನು ಕೆತ್ತಿದ್ದರಿಂದ ಸುಂದರವಾಗಿ ಕಾಣುತ್ತಿದೆ.



ತುಟಿತ ಅಲಂಕಾರಿಕ ಲಿಂಗ (ಬರಮಪ್ಪ ದೇವರು) : ಇದೊಂದು ಊನಗೊಂಡ ಲಿಂಗ. ಮೇಲ್ಭಾಗದಲ್ಲಿ ಬಾಣವಿಲ್ಲದೇ ಈ ಲಿಂಗವು ವೈಶಿಷ್ಟ್ಯವಾಗಿ ನಿರ್ಮಿಸಲ್ಪಟ್ಟಿದೆ. ಲಿಂಗಕ್ಕೆ ಇದ್ದ ಜಲಹರಿಯ ಅಥವಾ ಪಾನಬಟ್ಟಲು ಕೆಳಗೆ ಪೀಠಕವಿದೆ. ೨೨" ಅಗಲ ಹಾಗೂ ೬" ಎತ್ತರವಾದ ಪೀಠದಲ್ಲಿ ಮಧ್ಯಭಾಗದಲ್ಲಿ ೭ ಅಶ್ವಗಳು ಕಾಲನ್ನು ಮೇಲೆತ್ತಿ ನಮಸ್ಕರಿಸುವ ಭಂಗಿಯಲ್ಲಿದೆ ಇದೊಂದು ಪ್ರಾಚೀನ ಶಿವಲಿಂಗವಾಗಿದ್ದು. ಇದನ್ನು ಸ್ಥಳೀಯರು ಬರಮಪ್ಪ ದೇವರು ಅಥವಾ ಬ್ರಹ್ಮದೇವರು ಎಂದೇ ಕರೆಯುತ್ತಾರೆ ಇದೂ ಸಹ ವ್ಯವಸಾಯ ಸಹಕಾರಿ ಬ್ಯಾಂಕಿನ ಬಲಭಾಗದಲ್ಲಿ ಪೂರ್ವಕ್ಕೆ ಮುಖ ಮಾಡಿ ಪ್ರತಿಷ್ಠಾಪಿಸಲ್ಪಟ್ಟಿದೆ. ಪೀಠದ ಮಧ್ಯಭಾಗದಲ್ಲಿ ಮುಂಭಾಗದಲ್ಲಿ ಅವಶ್ಯಗಳನ್ನೂ ಕೆತ್ತಿರುವದು ವೈಶಿಷ್ಟ್ಯಪೂರ್ಣವಾದ ಅಂಶವಾಗಿದೆ. ಇದೂ ಸಹ ಶೈವ ಧರ್ಮದ ಆರಾಧ್ಯ ದೇವರಾಗಿದೆ ಎನ್ನಬಹುದು.

ಇನ್ನೊಂದು ಶಿವಲಿಂಗವು ಹನುಮಂತ ದೇವರ ಗೋಡೆಯಲ್ಲಿ ಕಂಡು ಬರುತ್ತಿದೆ. ಈ ಲಿಂಗವನ್ನು ಕಟ್ಟಡ ನಿರ್ಮಾಣಕ್ಕೆ ಕಲ್ಲನ್ನಾಗಿ ಉಪಯೋಗಿಸಿರುತ್ತಾರೆ. ಆದರೆ ಆ ಲಿಂಗದ ಮೇಲಣ ಬಾಣವು ಮಾಯವಾಗಿದ್ದರಿಂದ ಇದೊಂದು ಸಪಾಟಾದ ಕಲ್ಲಿನಂತೆ ಅಳತೆಗೆ ತಕ್ಕಂತೆ ಗೋಡೆಗೆ ಬಳಸಿದ್ದಾರೆ. ಇದರಲ್ಲಿಯೂ ಸಹ ಪೀಠದ ಮಧ್ಯ ಭಾಗದಲ್ಲಿ ೭ ಅಶ್ವಗಳು ಕಾಲನ್ನು ಮೇಲೆತ್ತಿ ನಿಂತಿರುವ ದೃಶ್ಯ ಗೋಡೆ ಹೊರಭಾಗದಲ್ಲಿ ರಸ್ತೆಗೆ ಕಾಣುತ್ತದೆ.

೧೦-೧೧ನೇ ಶತಮಾನಕ್ಕೆ ಸಂಬಂಧಿಸಿದ ಕಲಾಕೃತಿಯಿವಾಗಿದ್ದು, ಇಲ್ಲಿಗೆ ಸಮೀಪವಾದ ಅಣ್ಣಿಗೇರಿಯಲ್ಲಿ ಶ್ರೀ ಅಮೃತೇಶ್ವರ ದೇವಾಲಯದ ಸಮಕಾಲೀನವಾಗಿರುತ್ತದೆ. ಅಲ್ಲಿ ಕ್ರಿ.ಶ. ೧೧೧೭ರ ಶಾಸನ ತಿಳಿಸುವಂತೆ ಇದರ ಸುತ್ತಲೂ ೨ ಗ್ರಾಮದ ೨೪ ಹರದಾರಿ- ೭.೨ ಮೈಲು ಜೈನ, ಶೈವ ಧರ್ಮದ ಧಾರ್ಮಿಕ ಕೇಂದ್ರಗಳಿವೆ ಎಂದು ಬರೆಯಲಾಗಿದೆ. ಕೆಳಭಾಗದಲ್ಲಿ ಶನಿಮಹಾತ್ಮ ಇದ್ದಾನೆ.

ಜೈನ ತೀರ್ಥಂಕರರ ವಿಗ್ರಹ

ಜೈನ ತೀರ್ಥಂಕರರ ವಿಗ್ರಹವು ಬಹುತೇಕವಾಗಿ ೨೪ನೇ ತೀರ್ಥಂಕರ ಸ್ವಾಮಿ ಮಹಾವೀರನದ್ದಾಗಿರಬಹುದೆಂದು ಅಭಿಪ್ರಾಯ ಪಡಲಾಗಿದೆ. ಇಲ್ಲಿಯೂ ಸಹ ವ್ಯಾಪಕವಾಗಿ ಸಂಘ ಪ್ರಚಲಿತ ವಿದ್ದಿರಬಹುದೆನ್ನಲಾಗಿದೆ. ಕುಳಿತ ತೀರ್ಥಂಕರು ತನ್ನ ಎರಡು ಕೈಗಳನ್ನೂ ಪಾದಗಳ ಮೇಲೆ ಇಟ್ಟು ತದೇಕಚಿತ್ತದಿಂದ ತಪಸ್ಸನ್ನಾಚರಿಸಲು ಬೆತ್ತಲೆಯಾಗಿ ಕುಳಿತಿದ್ದ ವಿಗ್ರಹದ ಮೇಲ್ಭಾಗದಲ್ಲಿ ಸೇವಕಿಯರು ನಿಂತ ಭಂಗಿಯಲ್ಲಿದ್ದು ಕೊರಳಲ್ಲಿ ಕಂಠಹಾರ, ನಡಪಟ್ಟಿ, ರವಿಕೆ, ಭುಜಪಟ್ಟಿಗಳನ್ನು ಧರಿಸಿದ್ದಾರೆ. ಸಡಕ್ಕೆ ಸೀರೆಯುಟ್ಟ ಮೊಳಕಾಲಿನವರೆಗೂ ಸುತ್ತಿಕೊಂಡಿದ್ದಾರೆ. ಇವನ್ನು ಗಮನಿಸಿದರೆ ನೃತ್ಯ ಭಂಗಿಯಲ್ಲಿರುವಂತೆ ಕಂಡುಬರುತ್ತದೆ. ತದೇಕ ಚಿತ್ತದಿಂದ ಈ ಸ್ವಾಮಿಯ ಸೇವೆಗೈಯಲು ಸಜ್ಜಾಗಿ ನಿಂತಿರುವಂತೆ ಗೋಚರಿಸುತ್ತದೆ. ಕಿರಿದಾದ ನಡ ಹರವಾದ ಎದೆ ಇದ್ದು ತಲೆಯ ಮೇಲೆ ಕಿರೀಟ ಧರಿಸಿದ್ದಾರೆ. ಇವೆರಡೂ ವಿಗ್ರಹಗಳೂ ಮನಮೋಹಕವಾಗಿವೆ. ಇಲ್ಲಿ ಪಾದುಕೆಗಳೂ ಪ್ರತ್ಯೇಕವಾಗಿ ಕೆತ್ತಲ್ಪಟ್ಟಿದೆ. ಇದೊಂದು ಚಿತ್ತಾಕರ್ಷಕವಾದ ತೀರ್ಥಂಕರ ವಿಗ್ರಹ ವಾಗಿದ್ದು ಸ್ಥಳೀಯವಾಗಿ ಈ ಮೂರ್ತಿಯನ್ನು ಭರಮಪ್ಪ ದೇವರು ಬರಮದೇವರು ಎಂದೇ ಕರೆಯುತ್ತಾರೆ. ಕಿತ್ತೂರಿನಲ್ಲಿ ಇದೊಂದು ವೈಶಿಷ್ಟ್ಯಪೂರ್ಣವಾದ ವಿಗ್ರಹವಾಗಿದೆ. ಇದು ಮಣ್ಣಿನಲ್ಲಿ ಹೂತು



ಹೋಗಿದ್ದರಿಂದ ಗ್ರಾಮದ ಜನರ ಸಹಕಾರದಿಂದ ಅಗೆದು ಹೊರ ತೆಗೆಯಲಾಯಿತು. ಇದು ಹನುಮಂತ ದೇವರ ಗುಡಿಯಲ್ಲಿ ಲಭ್ಯವಾಗಿದೆ. ಮುಖವೆಲ್ಲ ತ್ರುಟಿತಗೊಂಡಿದ್ದು ಎಡ ಬಲಗಳಲ್ಲಿ ಸೇವಕೀಯರ ವಿಗ್ರಹಗಳು ಪ್ರಭಾವಳಿ ಗೂಡುಗಳಿವೆ. ಇವುಗಳನ್ನೂ ಹೊಂದಿದ ತೀರ್ಥಂಕರ ವಿಗ್ರಹವು ಇಲ್ಲಿ ಲಭ್ಯವಾಗಿದ್ದರಿಂದ ಮೊದಲು ಇವನ್ನು ಇದೇ ದೇವಾಲಯದಲ್ಲಿ ಪ್ರತಿಷ್ಠಾಪನೆಗಿಟ್ಟಿರುವ ಸಾಧ್ಯತೆಗಳಿವೆ. ಮೊದಲು ಇದೊಂದು ಜೈನ ಬಸದಿ ಅಥವಾ ಜಿನಾಲಯವಿರಬಹುದು. ಇಲ್ಲಿ ಮೊದಲಿನ ದೇವಾಲಯದ ಅವಶೇಷಗಳನ್ನು ಪರಿಶೀಲಿಸಿದಾಗ ಜಿನಾಲಯವನ್ನು ಬದಲಾಯಿಸಿ ಮಾರುತಿ ಮಂದಿರ ನಿರ್ಮಿಸಲಾಗಿದೆ. ಪೂರ್ವಕ್ಕೆ ಮುಖಮಾಡಿದೆ. ಈ ಜಿನಾಲಯ ಈಗ ದಕ್ಷಿಣಾಭಿಮುಖವಾಗಿ ನಿರ್ಮಾಣ ಗೊಂಡಿದೆ. ಊರ ಹೊರ ವಲಯದಲ್ಲಿ ವಿಶಾಲವಾದ ಬಯಲಿನಲ್ಲಿ ನಿರ್ಮಾಣಗೊಂಡ ಪ್ರಶಾಂತ ದೇವಾಲಯವಾಗಿದೆ.

ಕುಳಿತ ಭಂಗಿಯಲ್ಲಿದ್ದ, ಅಂದರೆ ಪದ್ಮಾಸನದಲ್ಲಿ ಆಸೀನನಾದ ತೀರ್ಥಂಕರ ವಿಗ್ರಹವು ಪ್ರಾಚೀನ ಕಾಲದಿಂದಲೂ ಇದೇ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ ಎನ್ನಲು ಹಲವಾರು ಸಾಕ್ಷ್ಯಾಧಾರಗಳಿವೆ. ಇದೊಂದು ಶೈವ, ಜೈನ ಧರ್ಮಗಳ ಸಮನ್ವಯ ಕೇಂದ್ರವಾಗಿತ್ತೆಂದು ಹೇಳಬಹುದು.

ತೀರ್ಥಂಕರ ವಿಗ್ರಹವನ್ನು ಪರೀಶಿಲಿಸಿದಾಗ ಇದೊಂದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಲಾಗಿದೆ. ಇದರ ಶೈಲಿ, ನಿರ್ಮಾಣವು ಅಂದಿನ ಕಾಲದ ಸೂಕ್ಷ್ಮತೆಯನ್ನು ತಿಳಿಸುತ್ತಿದೆ. ಜಿನನಾಥನು ಯೋಗ ಮುದ್ರೆಯಲ್ಲಿ ಕುಳಿತಿದ್ದು. ಕಮಲ ಧಾರಕವಾದ ಪೀಠದ ಮೇಲೆ ವಿಗ್ರಹದ ಮೇಲೆ ಪ್ರಭಾವಳಿ ಇದ್ದು ತಲೆಯ ಮೇಲೆ ಗೋಪುರಕಾರಾದ ಗೂಡು ಇದೆ. ತೀರ್ಥಂಕರನ ಎಡಬಲ ಭುಜಗಳ ಮೇಲ್ಭಾಗದಲ್ಲಿ ಸೇವಕಿಯರು ಚಾಮರ ಹಿಡಿದು ಸೇವೆಗೈಯುತ್ತಿದ್ದಾರೆ. ಬಲಗೈ ಧಕ್ಕೆಯಾಗಿ ಮುರಿದು ಬಿತ್ತು. ಅದನ್ನು ಪುನಃ ದುರಸ್ತಿಗೊಳಿಸಿ ಶ್ರೀ ಹನುಮಂತ ದೇವರ ದೇವಾಲಯದ ಎಡಭಾಗದ ಗೋಡೆಯ ಮುಂಭಾಗದಲ್ಲಿ ಪ್ರತಿಷ್ಠಾಪಿಸಲಾಗಿದೆ.

ಜೈನ ತೀರ್ಥಂಕರರ ಮೂರ್ತಿಯು ಪ್ರಭಾವಳಿ ಗೂಡು ಸಹಿತವಾಗಿ ೪೦" ಎತ್ತರ ಹಾಗೂ ೨೨" ಅಗಲವಾಗಿದೆ. ಪ್ರಭಾವಳಿಯಲ್ಲಿ ಕಿರೀಟದಾಕಾರದ ಗೂಡುಗಳಿದ್ದು ಎಡ ಬಲಗಳಲ್ಲಿ ಮಕರ ತೋರಣ ಕಂಗೊಳಿಸುತ್ತಿದೆ. ತಲೆ ಮೇಲೆ ಗುಂಗುರು ಕೂದಲುಗಳು ಸೂಕ್ಷ್ಮವಾಗಿ ಕಾಣುತ್ತಿದ್ದು ಕಿವಿಗಳು ಚಾಕಚಕ್ಯತೆಯಿಂದ ಕೆತ್ತಲ್ಪಟ್ಟಿವೆ.

ಮತ್ತೊಂದು ತ್ರುಟಿತ ಲಿಂಗ

ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದ ಈ ಶಿವಲಿಂಗವು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದಾಗಿದೆ. ೧೧ನೇ ಶತಮಾನದ್ದೆಂದು ನಿರ್ಣಯಿಸಲಾಗಿದೆ. ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಕಟ್ಟಡದ ಹಿಂಭಾಗದಲ್ಲಿ ಇದು ಪತ್ತೆ ಆಗಿದೆ. ಇದು ತ್ರುಟಿತ ಗೊಂಡಿದ್ದು ಗ್ರಾಮಸ್ಥರು ಇದಕ್ಕೆ ಹೊಸ ಆಯಾಮ ನೀಡಿ ಪುನಶ್ಚೇತನಗೊಳಿಸಿ ಬಯಲು ಜಾಗೆಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ಈ ಲಿಂಗವು ೨೦" ಎತ್ತರವಾಗಿದ್ದು. ೧೨"ಅಗಲವಾಗಿದೆ. ಮಧ್ಯ ಭಾಗದಲ್ಲಿ ಬಾಣಕ್ಕೆ ಕಿಂಡಿ ಇದ್ದು ಬೇರೆ ಬಾಣವನ್ನು ಜೋಡಿಸಲಾಗಿದೆ. ಇದು ೪" ಎತ್ತರವಾಗಿದೆ. ಜಲಹರಿ ವೈಶಿಷ್ಟ್ಯ ಪೂರ್ಣವಾಗಿದ್ದು ಹಿಂದಿ ನಿಂದಲೂ ಇದನ್ನು ಈಶ್ವರ ದೇವರ ವಿಗ್ರಹವೆಂದೇ ಕರೆಯುತ್ತಾರೆ ಇದರ ಕೆಳಭಾಗದಲ್ಲಿ ೨ ಜೊತೆ ಪಾದಗಳನ್ನು ಕೆತ್ತಲಾಗಿದೆ. ವಿಗ್ರಹ ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಲ್ಪಟ್ಟಿದೆ. ಇದರ ಎದುರಿಗೆ ಚಿಕ್ಕದಾದ ಶ್ರೀ ನಂದಿ ವಿಗ್ರಹವಿದೆ ಮಲಗಿದ ಭಂಗಿಯಲ್ಲಿದೆ.

ಶಿವಪ್ಪ ನ. ನೀರಲಗಿ*

ತಾಳಿಕೋಟೆಯ ಶಿಲ್ಪಗಳು-ಅವಶೇಷಗಳು

ತಾಳಿಕೋಟೆ ಎಂದೊಡನೆ ನಮ್ಮೆದುರಿಗೆ ಥುತ್ತನೆ ಬಂದು ನಿಲ್ಲುವುದು ಕ್ರಿ.ಶ. ೧೫೬೫ರ ಜನವರಿ ೨೩ರಂದು, ತಾಳಿಕೋಟೆಯ ಹತ್ತಿರವಿರುವ ಕೃಷ್ಣೆಯ ತಡಿಯ ರಕ್ಕಸಗಿ ಮತ್ತು ತಂಗಡಗಿ ಎಂಬ ಎರಡು ಗ್ರಾಮಗಳ ಹತ್ತಿರ ಒಕ್ಕೂಟ; ಮುಸ್ಲಿಂ ದೊರೆಗಳಾದ ಅಹ್ಮದ್‌ನಗರ, ವಿಜಾಪೂರ, ಬೀದರ ಮತ್ತು ಗೋಲ್ಕೊಂಡ ಹಾಗೂ ವಿಜಯ ನಗರದರಸುಗಳ ಮಧ್ಯ ನಡೆದ ಭೀಕರ ಕದನದ ನೆನಪು. ಆದರೆ ತಾಳಿಕೋಟೆಯ ಚರಿತ್ರೆ ಕೇವಲ ತಾಳಿಕೋಟೆಯ ಯುದ್ಧಕ್ಕೆ ಸಿಮೀತವಾಗಿರದೆ ಅದಕ್ಕೂ ಮುಂಚೆ ರಾಷ್ಟ್ರಕೂಟರ ನೊಳಂಬರ ಕಲ್ಯಾಣದ ಚಾಲುಕ್ಯರ, ಕಳಚೂರ್ಯರ, ದೇವಗಿರಿ ಯಾದವರ ಆಳ್ವಿಕೆಯನ್ನು ಕಂಡಿದ್ದು, ನಂತರದಲ್ಲಿ ವಿಜಯನಗರದ ಅರಸರ, ಬಿಜಾಪುರದ ಸುಲ್ತಾನರ ಹಾಗೂ ಮರಾಠ ಪೇಶ್ವೆಗಳ ಮುಂತಾದ ಅರಸು ಮನೆತನಗಳ ಆಳ್ವಿಕೆಗೆ ತಾಳಿಕೋಟೆಯು ಒಳಪಟ್ಟಿತ್ತೆಂಬುದು, ಸುಮಾರು ೮ನೇ ಶತಮಾನದಿಂದ ೧೭ನೇ ಶತಮಾನದವರೆಗಿನ ತಾಳಿಕೋಟೆ ಯಲ್ಲಿ ದೊರೆಯುವ ಶಾಸನಗಳು, ದೇಗುಲಗಳು, ಮೂರ್ತಿ ಶಿಲ್ಪಗಳು, ವೀರಗಲ್ಲುಗಳು, ಕೋಟೆ- ಕೊತ್ತಲಗಳು, ಮಠಗಳು ಹಾಗೂ ಇತರೇ ಚಾರಿತ್ರಿಕ ದಾಖಲೆಗಳಿಂದ ನಮಗೆ ತಿಳಿದು ಬರುವುದು. ತಾಳಿಕೋಟೆಯ ಇಲ್ಲಿಯವರೆಗಿನ ಪ್ರಾಚೀನತೆಯನ್ನು ಗಮನಿಸಿದರೆ ಕ್ರಿ.ಶ. ೧೧೮೧ರ ಕಳಚೂರ್ಯರ ಶಾಸನದಿಂದ ೧೭ನೇ ಶತಮಾನದ ಆನಂದರಾವ್ ರಾಸ್ತೆಯವರೆಗೆ ಇತ್ತೆಂದು ಕಂಡುಬರುತ್ತದೆ.

ತಾಳಿಕೋಟೆಯು ಜಿಲ್ಲಾ ಸ್ಥಳವಾದ ಬಿಜಾಪುರದಿಂದ ದಕ್ಷಿಣಕ್ಕೆ ಸುಮಾರು ೮೦. ಕಿ. ಮೀ. ಹಾಗೂ ತಾಲೂಕು ಸ್ಥಳ ಮುದ್ದೇಬೀಹಾಳದಿಂದ ಈಶಾನ್ಯಕ್ಕೆ ಸುಮಾರು ೩೦. ಕಿ. ಮೀ. ಗಳ ಅಂತರದಲ್ಲಿ ದೋಣಿ ನದಿ ದಡದಲ್ಲಿದೆ. ಈ ಪ್ರದೇಶವು ಕಪ್ಪು ಮೆಕ್ಕಲು ಮಣ್ಣಿನಿಂದ ಕೂಡಿದ್ದು ತುಂಬಾ ಫಲವತ್ತಾಗಿದೆ. ಆದುದರಿಂದಲೆ ಷಾಹಿ ಹಾಗೂ ವಿಜಯನಗರದ ರಾಜರುಗಳ ಮಧ್ಯ ಈ ಕೃಷ್ಣಾ ತುಂಗಾಭದ್ರಾ ಮತ್ತು ದೋಣಿ ನದಿ ತೀರ ಪ್ರದೇಶಗಳ "ದೊಅಬ್‌ಗಾಗಿ" ಮೇಲಿಂದ ಮೇಲೆ ಹಲವಾರು ಕಲಹಗಳು ಜರುಗಿದ್ದುಂಟು. ಈ ಡೆಕ್ಕನ್ ಪ್ರದೇಶದ ಮುದುಗಲ್ಲು, ರಾಯಚೂರು ಮತ್ತು ತಾಳಿಕೋಟೆಗಳು ಹಲವು ದಿನಗಳವರೆಗೆ ಷಾಹಿ-ದೊರೆಗಳ ಒಡೆತನದಲ್ಲಿದ್ದರೆ ಕೆಲವು ದಿನಗಳವರೆಗೆ ವಿಜಯನಗರದ ರಾಜರ ವಶದಲ್ಲಿರುತ್ತಿದ್ದವು.

ಜಾನಪದೀಯ ಮೂಲವೊಂದರ ಪ್ರಕಾರ ಈ ಊರಿನ ಗ್ರಾಮದೇವತೆಯಾದ ದ್ಯಾಮ್ಮವ್ವನು ಮದುವೆಗೆ ಬಡಬಗ್ಗರಿಗೆ ಬೇಡಿದಾಗಲೆಲ್ಲ ತನ್ನ ತಾಳಿಯನ್ನು ಕೊಡುತ್ತಿದ್ದುದರಿಂದ ಈ ಊರಿಗೆ "ತಾಳಿಕೋಟೆ" ಎಂದು ಹೆಸರು ಬಂದಿತ್ತೆಂದು ಇಲ್ಲಿಯ ಸ್ಥಳೀಯರ ಹೇಳಿಕೆಯಾಗಿದೆ. ಇದಕ್ಕೆ ಸಾಕ್ಷಿಯಾಗಿ ತಾಳಿಕೋಟೆಯ ಅಗಸೆ ಬಾಗಿಲಿನಲ್ಲಿರುವ ಸಪ್ತಮಾತೃಕೆಯರ ಹಾಗೂ ಕೋಟೆಯ ಗೋಡೆಯ ಪಕ್ಕದಲ್ಲಿರುವ ಸತಿಕಲ್ಲು ಹಾಗೂ ವೀರಗಲ್ಲನ್ನು ತಾಳಿಕೋಟೆಯ ಜನರು ತೋರಿಸುತ್ತಾರೆ. ನಾಲ್ಕು ಷಾಹಿ ದೊರೆಗಳ ಸೈನಿಕರು ತಾಳಿಕೋಟೆಯಲ್ಲಿ ಠಿಕಾಣಿ ಹೂಡಿದಾಗ ಅವರ ಮೇಲೆ ಯುದ್ಧ ಮಾಡಲು ವಿಜಯನಗರದ ಅರಸರು ದಾಳಿ ಮಾಡಿ ತಮ್ಮ ಬೃಹತ್ ಫಿರಂಗಿಗಳಿಂದ ಕೋಟೆ ಗೋಡೆಯನ್ನು ಒಡೆಯಲು ಪ್ರಯತ್ನಿಸಿದರು. ಸುಲ್ತಾನರ ಸೈನಿಕರು ಸಮರ್ಥವಾಗಿ ಈ ದಾಳಿಯನ್ನು ತಡೆದುದರಿಂದ ಈ ಊರಿಗೆ "ತಡೆಯ ಕೋಟೆ" ಎಂದು ಕರೆದ್ದುದರಿಂದ ಮುಂದೆ ಅದು ಜನರ ಬಾಯಿಯಲ್ಲಿ ಬರು ಬರುತ್ತಾ ತಾಳಿಕೋಟೆಯಾಯಿತ್ತೆಂದು ಈ ಊರಿನ ಕೆಲವು ಹಿರಿಯರ ಹೇಳಿಕೆ. ತಾಳಿಕೋಟೆಯ ಈಗಿನ ಸೇದಿಕಲ್ಲಿನಿಂದ ಕಟ್ಟಿರುವ ವಿಶಾಲವಾದ ಕೋಟೆಗಿಂತಲೂ ಮೊದಲೇ ಈ ಪ್ರದೇಶದಲ್ಲಿ ಕರಿ-ಕಲ್ಲಿನಿಂದ ಕಟ್ಟಿದ ಕೋಟೆಯೊಂದನ್ನು ರಾಷ್ಟ್ರಕೂಟರು ಕಟ್ಟಿದ್ದಿರಬಹುದು. ಆದುದರಿಂದಲೇ ಇನ್ನೂ ತಾಳಿಕೋಟೆಯಲ್ಲಿ ಅನೇಕ ಕಡೆಗೆ ದೊಡ್ಡ ದೊಡ್ಡ ಕರಿ-ಕಲ್ಲಿನಿಂದ ಕಟ್ಟಿದ ಇಮಾರತುಗಳು ಕೋಟೆಯ ಗೋಡೆಯ ಬುನಾದಿಗಳು ಮತ್ತು ಕರಿಕಲ್ಲಿನಿಂದ ತಯಾರಿಸಿದ ಭವ್ಯವಾದ ಮೂರ್ತಿಗಳು ನಮಗೆ ನೋಡಲು ಅಲ್ಲಲ್ಲಿ ಸಿಗುತ್ತವೆ. ಆ ಕಾಲದಲ್ಲಿ ದೋಣಿ ನದಿ ದಡದಲ್ಲಿ ವಿಪುಲವಾಗಿ ತಾಳೆ ಮರಗಳು ಬೆಳೆಯುತ್ತಿದ್ದುದ ರಿಂದ ಈ ದೋಣಿನದಿ ತೀರದಲ್ಲಿಯೇ ರಾಷ್ಟ್ರಕೂಟರು ಈ ಕೋಟೆಯನ್ನು ಕಟ್ಟಿದ್ದರಿಂದ ಈ ಊರಿಗೆ ಅಲ್ಲಿಯ ಜನಪದೀಯರು "ತಾಳಿಯ ಕೋಟೆ"ಎಂದೂ ಕರೆದಿರಬಹುದು, ಇದಕ್ಕೆ ಸಾಕ್ಷಿಯಾಗಿ ೧೨ನೆ ಶತಮಾನದ ಶಾಸನವೊಂದರಲ್ಲಿ ಸ್ಪಷ್ಟವಾಗಿ ಈ ಊರಿನ ಹೆಸರು ತಾಳಿಯಕೋಟೆ ಎಂದೇ ಪ್ರಯೋಗವಾಗಿದೆ. ಅಲ್ಲದೆ ಈಗಿನ ರಾಸ್ತೆವಾಡದಲ್ಲಿರುವ ರಾಷ್ಟ್ರಕೂಟ ದೊರೆಗಳ ದೇಗುಲವು

* ಉಪವಿದ್ಯುತ್ ಪರಿವೀಕ್ಷಕರ ಕಾರ್ಯಾಲಯ, ರಾಘವೇಂದ್ರ ಕಾಲೋನಿ, ಬೀದರ್ - ೫೮೫ ೪೦೧

ಸುಂದರವಾದ ಗಿರಿಕಿ ಹಿಡಿದ ಕಂಬಗಳಿಂದ ಅಲಂಕೃತಗೊಂಡಿದ್ದು, ಅದರ ಮಕರತೋರಣವು ಅತ್ಯಂತ ಸುಂದರವಾಗಿದೆ. ಈ ದೇಗುಲದ ಕಾಲವು ಸುಮಾರು. ಕ್ರಿ.ಶ. ೯೪೫ ಎಂದೂ ವಾಸ್ತುಶಿಲ್ಪ ಲಕ್ಷಣಗಳಿಂದ ಹೇಳಬಹುದಾಗಿದೆ. ಹೀಗಾಗಿ ರಾಷ್ಟ್ರಕೂಟರ ಕಾಲಕ್ಕಾಗಲೇ ತಾಳಿಕೋಟೆಯು ಭದ್ರವಾದ ಕೋಟೆ ಇರುವ ಊರಾಗಿತ್ತೆಂದು ತಿಳಿಯುತ್ತದೆ.

ಮಾರ್ತಾಂಡ ಭೈರವನ ಶಿಲ್ಪಗಳು : ತಾಳಿಕೋಟೆಯ ಪಶ್ಚಿಮಕ್ಕೆ ದೋಣಿನದಿ ದಡದಲ್ಲಿರುವ ಭಾವಿಯೊಂದರ ಗೋಡೆಗೆ ಒರಗಿಸಿಟ್ಟಿರುವ ಈ ಚತುರ್ಭುಜ ಮಾರ್ತಾಂಡ ಭೈರವ ಅಥವಾ ಮಲ್ಲಯ್ಯನ ಹಾಗೂ ಭೈರವಿ (ಮಾಳಚಾದೇವಿ, ಕೆಂಪುಮಾಳಿ)ಯ ಶಿಲ್ಪಗಳು ಅತ್ಯಂತ ಸುಂದರವಾಗಿವೆ. ಮೂರ್ತಿಯ ಬಲಗೈಗಳಲ್ಲಿ ಡಮರುಗ ಹಾಗೂ ಹಿಂದೆ ಸ್ವಲ್ಪ ಬಾಗಿದ ಖಡ್ಗವಿದೆ. ಮಾರ್ತಂಡ ಭೈರವನು ತನ್ನ ಎಡಗೈಯೊಂದನ್ನು ಭೈರವಿಯ ಹೆಗಲ ಮೇಲೆ ಇರಿಸಿದ್ದಾನೆ. ಇನ್ನೊಂದು ಕೈಯಲ್ಲಿ ತ್ರಿಶೂಲವಿದೆ. ಮಾರ್ತಂಡ ಭೈರವನ ಮೂರ್ತಿಯನ್ನು ಬಲಗೈಯಿಂದ ಭೈರವಿಯ ಸೊಂಟವನ್ನು ಬಳಸಿದಂತೆ ಮೂರ್ತಿಯನ್ನು ಕಂಡರಿಸಲಾಗಿದೆ. ಎರಡೂ ಮೂರ್ತಿಗಳ ಕೈಗಳಲ್ಲಿ ಕೈಗಡಗ. ಕಾಲಲ್ಲಿ ಕಾಲ್ಗಡಗ ಎದೆಯ ಮೇಲೆ ಕಂಠಿಹಾರವನ್ನು ಧರಿಸಿವೆ. ಎರಡೂ ಮೂರ್ತಿಗಳ ತಲೆಯ ಮೇಲೆ ಕರಂಡ ಮುಕುಟವನ್ನು ಧರಿಸಿವೆ. ಮಾರ್ತಾಂಡ ಭೈರವನ ಬಲ ಭಾಗದಲ್ಲಿ ಅವನ ವಾಹನವಾದ ಕುದುರೆಯು ತನ್ನ ಎರಡು ಮುಂಗಾಲುಗಳನ್ನೆತ್ತಿಕೊಂಡು ಮಾರ್ತಾಂಡ ಭೈರವನತ್ತ ಮುಖ ಮಾಡಿಕೊಂಡು ನಿಂತಿದೆ. ಇಲ್ಲಿಯವರೆಗೆ ಕರ್ನಾಟಕದಲ್ಲಿ ದೊರೆತಿರುವ ಮಾರ್ತಾಂಡ ಭೈರವನ ಮೂರ್ತಿಗಳಲ್ಲಿಯೇ ಅತ್ಯಂತ ಸುಂದರವಾದದ್ದೆಂದು ಈ ಮೂರ್ತಿಯ ಬಗ್ಗೆ ವಿದ್ವಾಂಸರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಈ ಮೂರ್ತಿಯ ಪಕ್ಕದಲ್ಲಿಯೇ ಸುಂದರವಾದ ಸಪ್ತಮಾತೃಕೆಯರ ಶಿಲ್ಪ ಇದ್ದು, ಅದರಲ್ಲಿ ಐದು ಮೂರ್ತಿಗಳು ಮಾತ್ರ ಇವೆ. ಉಳಿದೆರಡು ಮೂರ್ತಿಗಳು ಭಗ್ನಗೊಂಡಿವೆ. ಊರಿನ ದಕ್ಷಿಣ ಭಾಗದ ಹಾಳಾದ ದೇಗುಲ ವೊಂದರ ಪ್ರಾಕಾರದಲ್ಲಿ ತುಂಬಾ ಭಗ್ನವಾಗಿದ್ದರೂ, ಸುಂದರ ವಾದದ್ದೊಂದು ಮಾರ್ತಂಡ ಭೈರವ ಭೈರವಿಯ ಷಡ್ಭುಜಾಕಾರದ ಮೂರ್ತಿ ಇದೆ. ಮೂರ್ತಿಯ ಎಡಭಾಗದ ಕೈಗಳಲ್ಲಿ ಡಮರುಗ ಖಡ್ಗ ಹಿಡಿದಿದ್ದು ಇನ್ನೊಂದು ಕೈಯಲ್ಲಿ ಭೈರವನ ವಾಹನವಾದ ನಾಯಿಯೊಂದನ್ನು ಹಗ್ಗ ಕಟ್ಟಿ ಎಳೆಯುವಂತೆ ಮೂರ್ತಿಯನ್ನು ಕೆತ್ತಲಾಗಿದೆ. ಬಲಭಾಗದ ಕೈಗಳಲ್ಲಿ ತ್ರಿಶೂಲವಿದ್ದು, ಇನ್ನೊಂದು ಕೈಯಿಂದ ಕೆಂಪಮಾಳಿ (ಮಾಳಚಾದೇವಿ) ಭುಜವನ್ನು ಬಳಸಿ ಕೊಂಡತಿದೆ. ಮಾಳಚಾದೇವಿಯು ಭೈರವನ ಎಡಪಾರ್ಶ್ವದಲ್ಲಿದ್ದು ಜಟಾಮುಕುಟ ಧಾರಿಯಾಗಿದ್ದಾಳೆ. ಸೊಂಟಕ್ಕೆ ಡಾಬ, ಕಾಲಲ್ಲಿ ಕಾಲ್ಗಡಗ ಹಾಗೂ ಲಂಗಾದಾಕಾರದ ವಸ್ತ್ರವನ್ನು ಧರಿಸಿದ್ದಾಳೆ.

ಕರ್ನಾಟಕದ ಶಾಸನಗಳು ಕ್ರಿ.ಶ. ಸುಮಾರು ೧೦ನೇ ಶತಮಾನದಿಂದ ಮೈಲಾರದೇವರ ಆರಾಧನೆ ಕರ್ನಾಟಕದಲ್ಲಿ ಇತ್ತೆಂದು ತಿಳಿಸುತ್ತವೆ. ಆದುದರಿಂದ ೧೦ನೇ ಶತಮಾನದಲ್ಲಿ ತಾಳಿಕೋಟೆ ಮತ್ತು ಬಿಜಾಪೂರ ಜಿಲ್ಲೆಗಳಲ್ಲಿ ಮೈಲಾರ ದೇವನ ಆರಾಧನೆ ಇತ್ತೆಂದು ಹಾಗೂ ತಾಳಿಕೋಟೆಯು ಒಂದು ಪ್ರಬಲವಾದ ಮಾರ್ತಂಡ ಭೈರವನ ಅಥವಾ ಮಲ್ಲಣ್ಣನ ಆರಾಧನಾ ಕೇಂದ್ರವಾಗಿತ್ತೆಂದು ನಮಗೆ ತಿಳಿದು ಬರುವುದು. ರೂಪಮಂಡನವು ವಟುಕ ಭೈರವನ ಬಗ್ಗೆ ತಿಳಿಸುತ್ತಾ ೮ ಅಥವಾ ೬ ಕೈಗಳುಳ್ಳ ಭೈರವನ ಕೈಗಳಲ್ಲಿ ಕ್ರಮವಾಗಿ ಖಟ್ವಾಂಗ, ಪಾಶ, ತ್ರಿಶೂಲ, ಡಮರು, ಕಪಾಲ ಮತ್ತು ಸರ್ಪಗಳಿರುತ್ತವೆ. ಹಾಗೂ ಇವನ ಬಳಿ ಕಪ್ಪು ನಾಯಿ ಇರುತ್ತದೆಂದು ತಿಳಿಸುತ್ತದೆ. ದಕ್ಷಿಣ ದೇಶದಲ್ಲಿ ಸಾತ್ವಿಕ ರೂಪವೆ ಹೆಚ್ಚು ಬಳಕೆಯಲ್ಲಿದ್ದು ನಗುಮುಖದ ದ್ವಿಭುಜ



ಮೂರ್ತಿ ಬೆತ್ತಲೆಯಾಗಿದ್ದು, ನಾಯಿಯೊಂದಿಗೆ ಇರುತ್ತಾನೆಂದು ಎಸ್. ಕೆ. ರಾಮಚಂದ್ರರಾಯರು ಹೇಳುತ್ತಾರೆ. ದೇವರಗುಡ್ಡದ ಮೈಲಾರ ದೇವರನ್ನು 'ಮಣ್ಣ್‌ಮೈಲಾರ ಲಿಂಗ' 'ಮಾರ್ತಂಡ ಭೈರವ' 'ಮಲಯ್ಯಾ'ನೆಂದು ಕರೆಯುವರೆಂದು ಮೂರ್ತಿಯ ೪ ಕೈಗಳಲ್ಲಿ ಕ್ರಮವಾಗಿ ಖಡ್ಗ, ತ್ರಿಶೂಲ, ಡಮರು ಮತ್ತು ಪಾನಬಟ್ಟಲನ್ನು ಹಿಡಿದಿರುತ್ತಾನೆಂದು ಮೈಲಾರನ ಹಣೆಯಲ್ಲಿ ಉರಿಗಣ್ಣಿದೆಯೆಂದು ಡಾ। ಎಂ. ಬಿ. ನೇಗಿನಹಾಳ ಅವರು ಹೇಳಿದ್ದಾರೆ. ಮೈಲಾರ ದೇವನ ಸ್ವರೂಪದಲ್ಲಿ ಶಿವನು ಕುಬೇರನ

ಗಪಿರವೆಂಬ ಕುದುರೆಯನ್ನೇರಿ ಬಂದಿದ್ದನೆಂದು ತಿಳಿಯುತ್ತದೆ. ಮೈಲಾರ ದೇವನ ಶಿಲ್ಪಗಳಲ್ಲಿ ಶಿವನು ಕತ್ತಿ, ತ್ರಿಶೂಲ, ಡಮರು ಮತ್ತು ಕಪಾಲಗಳನ್ನು ಹಿಡಿದು ಕುದುರೆಯನ್ನೇರಿ ಕುಳಿತಿರುವಂತೆ ಬಿಡಿಸಲಾಗಿರುತ್ತದೆ. ಕೆಲವೆಡೆ ಶಿವನು ಭದ್ರಪೀಠದಲ್ಲಿದ್ದು ಸುಖಾಸೀನನಾಗಿ ಕುಳಿತಿದ್ದಾಗ ಅಥವಾ ಪಾರ್ವತಿಯೊಡನೆ ನಿಂತಿದ್ದಾಗ ಕುದುರೆಯನ್ನು ವಾಹನದಂತೆ ಬಿಡಿಸಲಾಗಿರುತ್ತದೆಂದು ತಿಳಿಸುತ್ತಾರೆ. ತಾಳೀಕೋಟೆಯಲ್ಲಿರುವ ಶಿಲ್ಪಗಳಲ್ಲಿಯೂ ಸಹ ನಿಂತಿರುವ ಶಿವ ಮತ್ತು ಶಿವೆಯರ ಮುಂದೆ ಕುದುರೆಯು ತನ್ನ ಎರಡು ಮುಂಗಾಲುಗಳನ್ನೆತ್ತಿಕೊಂಡಿರುವಂತೆಯೂ ಹಾಗೂ ನಾಯಿಯನ್ನು ಹಗ್ಗ ಕಟ್ಟಿ ಎಳೆಯುತ್ತಿರುವಂತೆಯೂ ಕೆತ್ತಲಾಗಿದೆ. ಮೈಲಾರ ದೇವನು ಸಹ ಭೈರವನೇ ಆದುದರಿಂದ ಈ ಶಿಲ್ಪದೊಂದಿಗೆ ನಾಯಿಯೂ ಕೂಡ ಇರುತ್ತದೆ.

ಭೈರವನ ಶಿಲ್ಪ : ನಗರದ ಮಧ್ಯದಲ್ಲಿರುವ ಮಹದೇವ ಮಠದಲ್ಲಿರುವ ಸುಂದರವಾದ ಬೆತ್ತಲೆಯ ಚತುರ್ಭುಜ ಭೈರವನ ಮೂರ್ತಿಯು ಪ್ರತಿಮಾಯೋಗದಲ್ಲಿದ್ದು ತುಸು ತಿಳಿನೀಲಿ ಕಪ್ಪು ಕಣಶಿಲೆಯಲ್ಲಿ ಕೆತ್ತಲಾಗಿದೆ. ಭೈರವನು ರುಂಡಮಾಲೆಯನ್ನು ಧರಿಸಿದ್ದಾನೆ. ಬಲಗೈಗಳಲ್ಲಿ ಡಮರುಗ ಖಡ್ಗ, ಎಡಗೈಗಳಲ್ಲಿ ತ್ರಿಶೂಲ, ಪಾನಟ್ಟಲು ಹಾಗೂ ನರನ ರುಂಡವನ್ನು ಹಿಡಿದಿದ್ದು, ಆ ರುಂಡದಿಂದ ತೊಟ್ಟಿಕ್ಕುತ್ತಿರುವ ರಕ್ತವನ್ನು ಪಿಶಾಚಿಯೊಂದು ನೆಕ್ಕುತ್ತಿದೆ. ತಲೆಯ ಮೇಲೆ ಕರಂಡ ಮುಕುಟವನ್ನು ಧರಿಸಿದ್ದು, ಕಿವಿಯಲ್ಲಿ ದೊಡ್ಡವಾದ ಕರ್ಣಕುಂಡಲಗಳಿವೆ. ಎದೆಯ ಮೇಲೆ ಕಂತಿ ಮಾಡಿದ ಲಿಂಗಾದಾಕಾರದ ವಸ್ತುವೊಂದನ್ನು ಧರಿಸಿದ್ದು. ಮೂರ್ತಿಗೆ ಯಜ್ಞೋಪವೀತವಿದೆ. ಸೊಂಟದಲ್ಲಿ ಸುಂದರವಾದ ಗೆಜ್ಜೆ ಪಟ್ಟಿ, ಕಾಲಲ್ಲಿ ಕಾಲ್ಗಡಗ, ಕೈಯಲ್ಲಿ ಕೈಗಡಗವನ್ನು ಧರಿಸಿದ್ದು, ಕಾಲಲ್ಲಿ ಹಾವುಗೆಗಳಿವೆ. ಬೈರವನ ಬಲಭಾಗದಲ್ಲಿ ಸೊಣಕಲಾದ ವ್ಯಕ್ತಿಯೊಬ್ಬನು ಕೈಮುಗಿದುಕೊಂಡು ನಿಂತಿದ್ದು, ಕಿರಾತಕುರುಬ ಅಥವಾ ಗೊರವನಂತೆ ಕಾಣಬರುತ್ತಿದೆ. ಸುಮಾರು ೭ನೇ ಶತಮಾನದಿಂದಲೂ ಕರ್ನಾಟಕದಲ್ಲಿ ತಾಂತ್ರಿಕ ಪದ್ಧತಿಯ ಆಚರಣೆಯ ಕೌಳ ಮತ್ತು ಕಾಪಾಲಿಕ ಮತಗಳು ಪ್ರಚಲಿತದಲ್ಲಿದ್ದು, ಈ ಪಂಥೀಯರು ವಿಶೇಷವಾಗಿ ಭೈರವನನ್ನು ಪೂಜಿಸುತ್ತಿದ್ದರು. ಶಿವಪುರಾಣವು ಶಿವನ ಭೈರವ ರೂಪವನ್ನು ಶಂಕರನ ಪೂರ್ಣ ರೂಪವೆಂದು ತಿಳಿಸುತ್ತದೆ. ಶಿವನನ್ನು ಮಹದೇವನೆಂದು ಕರೆದಿರುವ ದುಂಟು. ಆದುದರಿಂದ ತಾಳಿಕೋಟೆಯಲ್ಲಿರುವ ಈ ಭೈರವನ ಮೂರ್ತಿಯನ್ನು ಮಹಾದೇವನೆಂದು ಹಾಗೂ ಈ ದೇವಸ್ಥಾನವನ್ನು ಮಹಾದೇವ ಮಠವೆಂದು ಕರೆದಿರುವುದು ಯಥೋಚಿತವಾಗಿದೆ. ರುದ್ರಶಿವನನ್ನು ಬಯಲು ಹೊಲಗಳ ಯಜಮಾನ, ಪಶುಗಳ ಒಡೆಯ (ಪಶುನಾಂ ಪತಿಃ) ಆದ್ದರಿಂದ ಅವನು ಪಶುಗಳ ಪತಿಯೂ ಹೌದು. ಹೀಗೆ ಶಿವನ ರೌದ್ರಾವತರಾಕ್ಕೆ ಭೈರವನೆಂದು ಕರೆದಿದ್ದಾರೆ.



ಬಿಜಾಪೂರ ಜಿಲ್ಲೆಯ ಕ್ರಿ.ಶ. ೧೧೮೮ರ ಹಳ್ಳೂರಿನ ಯಾದವ ಭಿಲ್ಲಮನ ಕಾಲದ ಶಾಸನದಲ್ಲಿ ಲಕುಲೇಶ್ವರ ಪಂಡಿತನೆನ್ನುವ ಶೈವ ಗುರುಗಳ ಹೆಸರು ಪ್ರಯೋಗವಾಗಿದೆ. ಅದೇ ರೀತಿ ಕ್ರಿ.ಶ. ೧೦೪೧ರ ಕಲ್ಯಾಣದ ಚಾಳುಕ್ಯರ ಜಯಸಿಂಗ II ಕನ್ನೊಳ್ಳಿ ಶಾಸನದಲ್ಲಿ ವಾಮಶಕ್ತಿ ಪಂಡಿತರಿಗೆ ಭೂ ದಾನ ನೀಡಿದ ವಿವರವಿದೆ. ಅದರಂತೆ ಕ್ರಿ.ಶ. ೧೦೬೪ರ ಸೋಮೇಶ್ವರ I ದೇವರ ಶಾಸನದಲ್ಲಿ ಜ್ಞಾನರಾಶಿ ಪಂಡಿತರಿಗೆ ಭೂದಾನ ನೀಡಿದ ವಿವರವಿದೆ. ಕ್ರಿ.ಶ. ೧೧೭೨ರ ಕಡ್ಲೆವಾಡದ ಕಳಚೂರ್ಯರ ಸೋವಿದೇವನ ಕಾಲದ ಶಾಸನವೊಂದರಲ್ಲಿ ಸೋಮರಾಶಿ ಪಂಡಿತರಿಗೆ ನೀಡಿದ ಭೂಧಾನದ ವಿವರವಿದೆ. ಕ್ರಿ.ಶ. ೧೧೪೭ರ ಕಲ್ಯಾಣದ ಚಾಳುಕ್ಯರ ಜಗದೇಕ ಮಲ್ಲನ II ಕಾಲದ ಮುತ್ತಿಗೆಯ ಶಿವರಾಜ ಚಮೂಪನಿಂದ ನಿರ್ಮಿತವಾದ ಶಿವಲಿಂಗ ದೇವಾಲಯದ ಶಾಸನವು ಲಕುಲೇಶ್ವರ ಗುರು ಪರಂಪರೆಯನ್ನು

ಉಲ್ಲೇಖಿಸುತ್ತದೆ. ಈ ಮೇಲಿನ ಎಲ್ಲಾ ಶಾಸನಗಳನ್ನು ಅವಲೋಕಿಸಿದಾಗ ಹಿಂದಿನ ಶತಮಾನಗಳಲ್ಲಿಯೇ ತಾಳಿಕೋಟೆಯಲ್ಲಿ ಭೈರವ ಆರಾಧನೆಯು ಎಷ್ಟು ಪ್ರಬಲ ವಾಗಿತ್ತೆಂಬುದು ನಮಗೆ ತಿಳಿದುಬರುವುದು. ಕಾಳಾಮುಖ ಹಾಗೂ ಪಾಶುಪತ ಮಠಗಳು ವೀರಶೈವ ಮಠಗಳಾದುವೆಂಬುದಕ್ಕೆ ತಾಳಿಕೋಟೆಯ ಮಹದೇವ ಮಠವು ಒಂದು ಉತ್ಕೃಷ್ಟ ಉದಾಹರಣೆಯಾಗಿದೆ. ಈ ಮಠದ ಗರ್ಭಗೃಹದಲ್ಲಿ ಮೊದಲು ಭೈರವನ ಮೂರ್ತಿಯೇ ಇದ್ದು. ಕ್ರಿ.ಶ. ೧೧೮೪ರ ಕಲ್ಯಾಣದ ಚಾಲುಕ್ಯರ ಸೋಮೇಶ್ವರ IVನ ಶಾಸನದಂತೆ ಅಬ್ಬಲೂರು ರಾಮಯ್ಯನ ಕಾಲಕ್ಕೆ ಈ ಶೈವ ಮಠವು ವೀರಶೈವ ಮಠವಾಗಿ ಪರಿವರ್ತನೆಯಾದಂತೆ ಕಂಡು ಬರುತ್ತದೆ. ಪ್ರತಿಮಾ ಲಕ್ಷಣಗಳಿಂದ ಈ ಭೈರವನ ಮೂರ್ತಿಯನ್ನು ೧೦-೧೧ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಮಹದೇವ ಮಠವು ಅತೀ ಎತ್ತರದ ಸ್ಥಳದಲ್ಲಿದ್ದು, ಉತ್ತಾರಾಯಣ ಪುಣ್ಯಕಾಲದ ಸಂಕ್ರಮಣದೊಂದು ಸೂರ್ಯನ ಕಿರಣಗಳು ಮಠದ ಗರ್ಭಗುಡಿಯಲ್ಲಿರುವ ಶಿವಲಿಂಗದ ಮೇಲೆ ಬೀಳುವಂತೆ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ಗರ್ಭಗುಡಿಯು ನೆಲಮಾಳಿಗೆಯಲ್ಲಿದ್ದು ದೇವಾಲಯದ ಕಂಬಗಳು ಮಟ್ಟಸ ಹಾಗೂ ಚೌಕಾಕಾರವಾಗಿ ಕೊರೆದಿದ್ದು ಸರಳೀಕೃತವಾಗಿವೆ. ಶಿವಲಿಂಗದ ಎದುರಿಗಿರುವ ನಂದಿಯನ್ನು ದೇವಾಲಯದ ಹೊರಗೆ ಇಡಲಾಗಿದೆ.

ವೀರಗಲ್ಲುಗಳು : ರಾಸ್ತೆಯವಾಡೆಯ ಪಂಚಪೀಠ ಮಸೀದಿ ಪಕ್ಕದ ಅಗಸಿಯ ಬಲಭಾಗದಲ್ಲಿರುವ ವೀರನ ಗುಡಿಯಲ್ಲಿ ಎರಡೂ ವೀರಗಲ್ಲುಗಳಿವೆ. ಈ ವೀರಗಲ್ಲುಗಳಲ್ಲಿ ಒಂದು ಸತೀ ವೀರಗಲ್ಲಾಗಿದ್ದು ತುಂಬಾ ಸುಂದರವಾಗಿದೆ. ತಾಳಿಕೋಟೆಯ ಜನರು ಈ ಸತಿ-ಗಲ್ಲನ್ನು ತಾಳಿಕೋಟೆಯ ಗ್ರಾಮದೇವತೆಯಾದ ದ್ಯಾಮವ್ವ ಹಾಗೂ ಆತನ ಗಂಡನದೆಂದು ಹೇಳುತ್ತಾರೆ. ಈ ವೀರಗಲ್ಲಿನಲ್ಲಿರುವ ವೀರನು ಬಹಳ ಸುಂದರಾಂಗನಾಗಿದ್ದು ವೀರಮುಡಿಕಟ್ಟಿದ್ದಾನೆ. ವೀರನು ಬಲಗೈಯಲ್ಲಿ ಖಡ್ಗ ಹಿಡಿದ್ದಾನೆ. ಕಿವಿಯಲ್ಲಿ ದೊಡ್ಡವಾದ ಕರ್ಣ ಕುಂಡಲಗಳನ್ನು ಧರಿಸಿದ್ದಾನೆ. ಕೊರಳಲ್ಲಿ ಕೊರಳಹಾರವಿದೆ. ವೀರಗಲ್ಲಿನ ಬಲಭಾಗದಲ್ಲಿ ಸುಂದರವಾದ ಜಟಾಮುಡಿ ಕಟ್ಟಿದ ಕೊರಳಲ್ಲಿ ಹಾರ ಧರಿಸಿದ ಅಂದವಾದ ಲಂಗದಾಕಾರದ ದಾವಣಿಯನ್ನು ಧರಿಸಿದ, ಸ್ತ್ರೀಯೋರ್ವಳ ಮೂರ್ತಿ ಇರುವುದರಿಂದ ವೀರನ ಮರಣಾನಂತರ ಸತಿಹೋದ ಸ್ತ್ರೀ ಇವಳಾಗಿದ್ದು ಇದೊಂದು ಸತೀ ಕಲ್ಲೆಂದು ನಾವು ಗುರುತಿಸಬಹುದಾಗಿದೆ. ಈ ವೀರಗಲ್ಲಿನ ಜೊತೆಗೆ ಬಳಸಿದ ಖಡ್ಗವು ಸಹ ಇದೆ.

ಇನ್ನೊಂದು ವೀರಗಲ್ಲಿನಲ್ಲಿರುವ ವೀರನ ಬಲಗೈಯಲ್ಲಿ ಬಿಲ್ಲು-ಬಾಣ ಬತ್ತಳಿಕೆ, ಕಿವಿಯಲ್ಲಿ ಕರ್ಣಕುಂಡಲ, ಸೊಂಟದಲ್ಲಿ



ಕೈಗತ್ತಿ ಇದ್ದು ವೀರನು ವೀರಮುಡಿ ಕಟ್ಟಿದ್ದಾನೆ. ಈ ಎರಡೂ ವೀರಗಲ್ಲುಗಳು ಪ್ರತಿಮಾ ಲಕ್ಷಣಗಳಿಂದ ರಾಷ್ಟ್ರಕೂಟರ ಕಾಲದವೆಂದೂ ನಿರ್ಧರಿಸಬಹುದಾಗಿದೆ. ಈ ಎರಡೂ ವೀರಗಲ್ಲುಗಳು ಹಾಗೂ ಸತಿಗಲ್ಲಿಗೆ ಗುಡಿಯನ್ನು ಕಟ್ಟಿಸಿದ್ದಾರಲ್ಲದೆ, ದಿನಾಲು ಪೂಜೆ ನಡೆಯುತ್ತಿದೆ. ಈ ವೀರಗಲ್ಲುಗಳ ಜೊತೆಗೆ ಒಂದು ವಿಷ್ಣುವಿನ ಮೂರ್ತಿ ಇದ್ದು, ತುಂಬಾ ಸುಂದರವಾಗಿದೆ. ಮೂರ್ತಿಯ ಕೊರಳಲ್ಲಿ ಕೊರಳ ಹಾರ, ಕೈಯಲ್ಲಿ ಶಂಖ, ಚಕ್ರವಿದ್ದು ಮೂರ್ತಿಯು ಕಿವಿಯೋಲೆ ಧರಿಸಿದೆ. ತಲೆಯ ಮೇಲೆ ಕರಂಡ ಮುಕುಟವಿದೆ. ತಾಳಿಕೋಟೆಯ ದೋಣಿ ನದಿ ದಡದಲ್ಲಿರುವ ಸಿದ್ಧೇಶ್ವರ ದೇಗುಲದ ಪಕ್ಕದಲ್ಲೊಂದು ಸೇದಿ ಬಂಡೆಯಲ್ಲಿರುವ ವೈಶಿಷ್ಟ್ಯ ಪೂರ್ಣವಾದ ವೀರಗಲ್ಲಿದೆ. ಈ ವೀರಗಲ್ಲಿನಲ್ಲಿರುವ ವೀರನು ಕಾಳಗದಲ್ಲಿ ಮಡಿದಿರುವ ಇಬ್ಬರೂ ವೀರರನ್ನು ತುಳಿದುಕೊಂಡೆ, ಭರ್ಜಿಯಿಂದ ತನ್ನ ವೈರಿಗೆ ಇರಿಯುವಂತೆ ವೀರಗಲ್ಲನ್ನು ಕೆತ್ತಲಾಗಿದೆ. ವೀರಗಲ್ಲಿನ ಮೇಲ್ಗಡೆ ಎಡಭಾಗದಲ್ಲಿ ತ್ರುಟಿತವಾದ ಕೆಲವು ಲಿಪಿಗಳಿವೆ. ವೀರಗಲ್ಲಿನಲ್ಲಿರುವ ಎಲ್ಲ ವೀರರು ವೀರಮುಡಿಯನ್ನು ಕಟ್ಟಿದ್ದಾರೆ. ವೀರಗಲ್ಲಿನ ವೀರನ ರುಂಡವು ಭಗ್ನಗೊಂಡಿದೆ. ವೀರಗಲ್ಲಿನ ಪಕ್ಕದಲ್ಲಿ ಸುಂದರವಾದ ನಂದಿಯ ವಿಗ್ರಹವಿದ್ದು ಅದರ ರುಂಡವು ಭಗ್ನಗೊಂಡಿದೆ.

ತಾಳಿಕೋಟೆಯ ತ್ರಿಕೂಟಾಚಲ ದೇವಾಲಯದ ಹೊರ ಗೋಡೆಯ ಮೇಲೆ ಮೂರು ಸ್ತರಗಳನ್ನೊಳಗೊಂಡ ವೀರಗಲ್ಲೊಂದಿದೆ. ವೀರಗಲ್ಲಿನಲ್ಲಿರುವ ವೀರರು ಕುದುರೆಗಳ ಮೇಲೆ ಕುಳಿತು ವೀರಾವೇಶದಿಂದ ಹೋರಾಡುತ್ತಿದ್ದಾರೆ. ಎರಡನೆಯ ಹಂತದಲ್ಲಿ ಮರಣವನ್ನಪ್ಪಿದ ವೀರನೊಡನೆ ಅಪ್ಸರೆಯರ ಯಾನ ದೃಶ್ಯವಿದೆ. ಮೂರನೆಯ ಹಂತದಲ್ಲಿ ಸ್ವರ್ಗದಲ್ಲಿರುವ ವೀರನು

ತನ್ನ ಇಷ್ಟದೈವವಾದ ಈಶ್ವರ ಲಿಂಗದ ಮುಂದೆ ಪದ್ಮಾಸನದಲ್ಲಿ ಕೈಮುಗಿದು ಕುಳಿತಿದ್ದಾನೆ. ಈ ವೀರಗಲ್ಲಿನ ಪಕ್ಷದಲ್ಲಿಯೇ ತ್ರೈಪುರುಷ ದೇವಾಲಯದ ಮಾದರಿ ನಕ್ಷೆಯನ್ನು (Master Plan) ಬಿಡಿಸಲಾಗಿದೆ.

ರಾಸ್ತೆವಾಡ : ಕ್ರಿ.ಶ. ೧೬೫೦ರಲ್ಲಿ ಬಾಳಾಜಿ ಬಾಜಿರಾವ ಪೇಶ್ವೆಯು ತಾಳಿಕೋಟೆಯನ್ನು ತನ್ನ ಬೀಗನಾದ ಆನಂದರಾವ್ ರಾಸ್ತೆ ಎಂಬುವವನಿಗೆ ಸರಂಜಾಮಿಯಾಗಿ ಕೊಟ್ಟನು. ಅವನು ಇಲ್ಲಿ "ಆನಂದರಾವ್ ಪೇಟೆ" "ಕೈಲಾಸ ಪೇಟೆ" ಹಾಗೂ "ರಾಸ್ತೆವಾಡ" ಎಂಬ ಅರಮನೆಯನ್ನು ಕಟ್ಟಿದನು. ಪೇಶ್ವೆಯ ರಾಜ್ಯವು ಹಾಳಾದ ಬಳಿಕ ಬಾಳಾಸಾಹೆಬ್‌ರಾಸ್ತೆ ಎಂಬ ಸರದಾರನು ಮರಾಠರ ಪ್ರತಿನಿಧಿಯಾಗಿ ತಾಳಿಕೋಟೆಯನ್ನು ಕೇಂದ್ರ ವನ್ನಾಗಿರಿಸಿಕೊಂಡು ಈ ಪ್ರದೇಶವನ್ನಾಳಿದ್ದಾನೆ. ಜೀರ್ಣಾವಸ್ಥೆ ಯಲ್ಲಿರುವ ಅರಮನೆಯು ಈಗಲೂ ಆಗಲೂ ಬೀಳುವ ಸ್ಥಿತಿಯಲ್ಲಿದೆ. ೧೯೮೧ರಲ್ಲಿ ಮಾಜಿ ಉಪರಾಷ್ಟ್ರಪತಿಗಳಾದ ಶ್ರೀ ಬಿ.ಡಿ. ಜತ್ತಿಯವರ ಘನ ಅಧ್ಯಕ್ಷತೆಯಲ್ಲಿ ಈ ಅರಮನೆಯಲ್ಲಿ "ಅಂಬರ ಚರಕ" ಖಾದಿ ಕೇಂದ್ರವನ್ನು ಸ್ಥಾಪಿಸಿದ್ದು, ಈ ಭಾಗದಲ್ಲಿ ಹತ್ತಿ ಬೆಳೆಯುವುದು ನಿಂತು ಹೋದ ಪ್ರಯುಕ್ತ ಈಗ ಅದು ಸಹ ಸಂಪೂರ್ಣ ನಿಂತು ಹೋಗಿದೆ. ಖಾದಿ ಕೇಂದ್ರದವರು ಈಗ ಈ ಅರಮನೆಯನ್ನು ಮಾರುವ ತರಾತುರಿಯಲ್ಲಿದ್ದಾರೆ. 'ಐತಿಹಾಸಿಕ ಸ್ಮಾರಕಗಳನ್ನು ಉಳಿಸಿ' ಎಂಬ ಮಾತಿನ ಹಿನ್ನೆಲೆಯಲ್ಲಿ ಇಂತಹ ಘಟನೆ ನಡೆಯದಂತೆ ಇತಿಹಾಸ ಪ್ರಿಯರಾದ ತಾಳಿಕೋಟೆಯ ಜನಗಳು ಈ ಅರಮನೆಯನ್ನು ಉಳಿಸಿಕೊಳ್ಳುವುದು ಅವಶ್ಯವಿದೆ. ಅರಮನೆಯಲ್ಲಿ ಆನೆ ಕುದುರೆಗಳ ಪಾಗ ಅವುಗಳಿಗೆ ನೀರು ಕುಡಿಯಲು ದೊಡ್ಡದಾದೊಂದು ನೀರಿನಹೌದು, ಗರಡಿ ಮನೆ ಮುಂತಾದವುಗಳು ಈ ಅರಮನೆಯಲ್ಲಿವೆ. ಈ ಮೊದಲು ಈ ಅರಮನೆಯಲ್ಲಿ ಹೈಸ್ಕೂಲು ನಡೆಯುತ್ತಿದ್ದು ನಂತರ ಊರ ಹೊರಗಿನ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ನಂತರದ ದಿನಗಳಲ್ಲಿ ವಾಡಾದೊಳಗಿನ ಅರಮನೆಯಲ್ಲಿರುವ ದೇವಸ್ಥಾನದ ದೊಡ್ಡದಾದ ಕಂಚಿನ ದತ್ತಾತ್ರೇಯನ ಮೂರ್ತಿ ಹಾಗೂ ಬೃಹತ್ತಾದ ಹಲವು ತೋಪುಗಳನ್ನು ವಾಡೆಯ ಕೊನೆಯ ವಾರಸುದಾರರು ತಮ್ಮ ಜೊತೆಗೆ ಪೂನಾಕ್ಕೆ ಸಾಗಿಸಿದರೆಂದು ಕಣ್ಣಾರೆ ಕಂಡ ಈ ಊರಿನ ಹಿರಿಯರು ಹೇಳುತ್ತಾರೆ. ಅರಮನೆಯ ಮುಂದಿನ ಭವಾನಿ ಮಂದಿರ ವರಂಡಾದಲ್ಲಿ ಇತ್ತಿಚೆಗಷ್ಟೇ ಕೆಂಪು ಮುರುಳುಗಲ್ಲಿನಲ್ಲಿ ತಯಾರಿಸಿದ ದೊಡ್ಡದಾದೊಂದು ಬೀಸುವ ಕಲ್ಲು ದೊರೆತ್ತಿದ್ದು ಸ್ಥಳೀಯರು ಇದನ್ನು ದ್ಯಾಮವ್ವನ ಬೀಸುವ ಕಲ್ಲು ಎಂದು ಕರೆಯುತ್ತಾರೆ. ಆದರೆ ಜೋಳ ಹಾಗೂ ಮದ್ದು ಅರೆಯಲು ಮರಾಠ ಸರದಾರರು ಈ ಬಿಸುವ ಕಲ್ಲನ್ನು ಉಪಯೋಗಿತ್ತಿದ್ದರೆಂದು ತಿಳಿದು ಬರುವುದು. ರಾಸ್ತೆವಾಡೆಯ ಆಗಸೆ ಬಾಗಿಲಿನ ಎಡಗಡೆ ಗೋಡೆಯೊಳಗಿನ ಮಾಡದೊಳಗೆ ಅಂಗಾತವಾಗಿ ಉಪಯೋಗಿಸಿದ ಕರಿಕಲ್ಲಿನದೊಂದು ಶಿಲ್ಪವಿದ್ದು ಅದರಲ್ಲಿ ಸುಂದರವಾಗಿ ಕೆತ್ತಿದ ಸಪ್ತಮಾತೃಕೆಯರ ಶಿಲ್ಪವಿದೆ. ಆದರೆ ಸ್ಥಳೀಯರು ಇದನ್ನು ಸಹ "ದ್ಯಾಮವ್ವನ ಕಲ್ಲು" ಎಂದೇ ಕರೆದು ಪೂಜಿಸುತ್ತಾರೆ.

ರಾಸ್ತೆವಾಡಿಯಲ್ಲಿರುವ ಹಿಂದೂ ದೇಗುಲ : ಕಲ್ಯಾಣದ ಚಾಲುಕ್ಯರ ಪೂರ್ವಾರ್ಧಕ್ಕೆ ಸೇರಿದ ಈ ದೇಗುಲವು ಸಂಪೂರ್ಣ ಜೀರ್ಣಾವಸ್ಥೆಯಲ್ಲಿದೆ. ಕೆಲವು ವಿದ್ವಾಂಸರು ವಾಸ್ತುಶಿಲ್ಪ ಲಕ್ಷಣ ಗಳಿಂದ ಈ ದೇಗುಲವನ್ನು ನೊಳಂಬರ ಕಾಲಕ್ಕೆ ಸೇರಿದ್ದೆಂದು ಹೇಳುವುದುಂಟು. ಕರಿಕಲ್ಲಿನಿಂದ ಗಿರಿಕಿ ಹಿಡಿದು ನಯಗೊಳಿಸಿದ ಈ ದೇಗುಲದ ಕಂಬಗಳು, ಬೋದಿಗೆಗಳು, ತುಂಬಾ ನಯವಾಗಿದ್ದು, ಸುಂದರವಾದ ಕೆತ್ತನೆಗಳಿಂದ ಕೂಡಿವೆ. ಪ್ರಾರಂಭದ ಕಲ್ಯಾಣದ ಚಾಲುಕ್ಯರ ಕಾಲದ ಅಥವಾ ನೊಳಂಬರ ಕಾಲದ ಶಿಲ್ಪ ಕಲೆಯ ಅತ್ಯಂತ ಉತ್ಕೃಷ್ಟ ಮಾದರಿಗೆ ಈ ದೇಗುಲ ಸಾಕ್ಷಿಯಾಗಿದೆ. ದೇಗುಲದ ಹಿಂಭಾಗದಲ್ಲಿ ನಿಂತ ಭಂಗಿಯಲ್ಲಿರುವ ತ್ರಿಮೂರ್ತಿಗಳು ಹಾಳಾಗಿದ್ದು ಕೈಯಲ್ಲಿ ಚೌರಿ ಹಿಡಿದು ನಿಂತಿರುವಂತಿದೆ. ಈ ಮೂರ್ತಿಗಳನ್ನು ಗುರುತಿಸಲು ಆಗದಿದ್ದರು ಕಾಮ ಮತ್ತು ರತಿಯರ ಮೂರ್ತಿಗಳೆಂದು ಭಾಸವಾಗುವುದು. ತಾಳಿಕೋಟೆಯ ಯುದ್ಧದ ನಂತರ ಗೆದ್ದ ಸುಲ್ತಾನರು ಅನೇಕ ಹಿಂದೂ ದೇಗುಲಗಳನ್ನು ನಾಶಪಡಿಸಿದರು. ಆ ಸಂದರ್ಭದಲ್ಲಿ ಈ ದೇಗುಲವನ್ನು ಉಳಿಸಿಕೊಳ್ಳುವುದ ಕ್ಕೊಸ್ಕರವಾಗಿ ಹಿಂದೂಗಳೇ ಈ ದೇಗುಲದ ಮೇಲ್ಭಾವಣಿಯನ್ನು ಕಿತ್ತೆಸೆದು, ಮುಸ್ಲಿಂ ಮಸೀದಿಗಳ ತರಹದ ಗುಮ್ಮಟಾಕಾರ ದಲ್ಲಿಯೂ ಹಾಗೂ ದೇಗುಲದ ಒಳಗಡೆ ಹಿಂದೂ ಮುಸ್ಲಿಂ ಶೈಲಿಯ ಕಮಾನಿನಾಕಾರದ ಗೋಡೆಯನ್ನು ನಿರ್ಮಿಸಿಕೊಂಡಿದ್ದರಿಂದ ಈಗಲೂ ಈ ದೇಗುಲದ ಗೋಡೆಗಳು ಕಮಾನಿನಾಕಾರದಲ್ಲಿಯೇ ಇವೆ. ದೇಗುಲದ ಕಂಬಗಳು ಪೂರ್ವ ಚಾಲುಕ್ಯರ ಕರಿ ಕಲ್ಲಿನ ವಿಶಿಷ್ಟ ಮಾದರಿಯಿಂದ ಕೂಡಿದ್ದರೆ



ಕಮಾನಿನಾಕಾರದಲ್ಲಿರುವ ದೇಗುಲದ ಭಾಗವು ಇತ್ತೀಚಿನ ಸೇದಿ ಕಲ್ಲಿನಿಂದ ನಿರ್ಮಾಣವಾಗಿರುವುದು ಒಂದು ವೈಶಿಷ್ಟ್ಯವಾಗಿದೆ. ವಾಸ್ತುಶಿಲ್ಪ ಲಕ್ಷಣಗಳಿಂದ ಇದೊಂದು ಕಲ್ಯಾಣದ ಚಾಲುಕ್ಯರ ಸುಂದರವಾದ ದೇಗುಲವಾಗಿದೆ.

ಕಲ್ಯಾಣದ ಚಾಲುಕ್ಯರ ದೇಗುಲಗಳು : ದೋಣಿನದಿ ದಂಡೆಯಲ್ಲಿ ಎರಡು ಸುಂದರವಾದ ಕಲ್ಯಾಣದ ಚಾಲುಕ್ಯರ ಕಾಲದ ದೇಗುಲಗಳಿವೆ. ಅದರಲ್ಲಿ ಒಂದು ತ್ರಿಕೂಟಾಚಲ ದೇಗುಲವಾಗಿದ್ದು ಅದನ್ನೀಗ ಜನರು "ರಾಮಲಿಂಗೇಶ್ವರ" ದೇಗುಲವೆಂದು ಕರೆಯುತ್ತಾರೆ. ಆದರೆ ಅದೇ ದೇಗುಲದ ಕಂಬಗಳಲ್ಲಿರುವ ಕಲ್ಯಾಣದ ಚಾಲುಕ್ಯರ ನಾಲ್ಕನೆಯ ಸೋಮೇಶ್ವರನ ಹಾಗೂ ದೇವಗಿರಿ ಯಾದವರ ಸಿಂಘಣನ ಕಾಲದ ಶಾಸನಗಳು ಈ ದೇಗುಲವನ್ನು "ಸೋಮೇಶ್ವರನ" ದೇಗುಲವೆಂದು ಕರೆದಿವೆ. ಇದೊಂದು ತ್ರೈಪುರುಷ ದೇವಾಲಯವಾಗಿದ್ದು ಹಿಂದೇ ವಿದ್ಯಾಕೇಂದ್ರವಾಗಿದ್ದಿರಬಹುದು. ತ್ರಿಕೂಟಾಚಲ ದೇಗುಲವು ತುಂಬಾ ಸುಂದರವಾಗಿದ್ದು ದೇಗುಲದ ಬಲ ಭಾಗವು ನಾಶವಾಗಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ಸುಂದರವಾದ ಗಜಲಕ್ಷ್ಮಿಯನ್ನು ಕೆತ್ತಲಾಗಿದೆ. ಹಾಗೂ ಸುಂದರ ವಾದ ಯಾಳಿಗಳ ಶಿಲ್ಪವನ್ನು ಬಿಡಿಸಲಾಗಿದ್ದು ಅವುಗಳ ಮೇಲೆ ಆಯುಧಾರೂಢರಾದ ಸೈನಿಕರು ಕುಳಿತಿದ್ದಾರೆ. ಈ ದೇಗುಲದ ಕಂಬಗಳು ಸುಂದರವಾಗಿದ್ದು ಲೇತ್‌ವರ್ಕ್ಸ್‌ನಿಂದ ಕೂಡಿದ್ದಾಗಿದೆ. ನೆಲಮಾಳಿಗೆಯಲ್ಲಿರುವ ಇನ್ನೊಂದು ದೇಗುಲವನ್ನು "ಸಿದ್ಧೇಶ್ವರ" ದೇಗುಲವೆಂದು ಕರೆಯುತ್ತಾರೆ. ಇದರ ಬಾಗಿಲವಾಡವು ಅತ್ಯಂತ ಸುಂದರವಾದ ಶಿಲ್ಪಕಲೆಯಿಂದ ಕೂಡಿದ್ದಾಗಿದೆ. ಒಟ್ಟಿನಲ್ಲಿ ಈ ಎರಡು ದೇಗುಲಗಳು ಕಲ್ಯಾಣದ ಚಾಲುಕ್ಯರ ಅತ್ಯಂತ ಉತ್ಕೃಷ್ಟ ಶಿಲ್ಪಕಲೆ ಮಾದರಿಗೆ ಸಾಕ್ಷಿಯಾಗಿವೆ. ಈ ದೇಗುಲದ ಕಲ್ಲಿನ ಗೋಪುರವನ್ನು ಇತ್ತೀಚೆಗಷ್ಟೆ ನಿಧಿ ಶೋಧಕರು ಕೆಡವಿ ಬೀಳಿಸಿದ್ದಾರೆ. ಈ ದೇಗುಲದ ಒತ್ತುವರಿ ಕೂಡಾ ನಡೆದಿದೆ. ನಗರದ ಮಧ್ಯ ದಲ್ಲಿರುವ ಆಂಜನೇಯ ಗುಡಿಯಲ್ಲಿರುವ ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯದ ಕಂಬಗಳು ಸುಂದರವಾದ ಕೆತ್ತನೆಗಳಿಂದ ಕೂಡಿವೆ.

ಶಾಸನಗಳು

ತಾಳಿಕೋಟೆಯಲ್ಲಿ ೧೯೨೯ರಲ್ಲಿ ಒಟ್ಟು ನಾಲ್ಕು ಶಾಸನಗಳು ವರದಿಯಾಗಿದ್ದು ಅವುಗಳಲ್ಲೀಗ ಎರಡು ಶಾಸನಗಳು ದೋಣಿಯ ದಡದಲ್ಲಿರುವ ರಾಮಲಿಂಗದೇವರ ಗುಡಿಯ ಕಂಬದಲ್ಲಿವೆ. ಇನ್ನೊಂದು ಶಾಸನವು ತಾಳಿಕೋಟೆಯ ಅಂಬಾ ಭವಾನಿ ಗುಡಿಯ ಎದುರಿಗಿರುವ ಕಂಬದಲ್ಲಿ ಇದೆ. ರಾಮಸ್ವಾಮಿ ಗುಡಿಯಲ್ಲಿರುವ ಕ್ರಿ.ಶ. ೧೧೮೧ರ ಕಲ್ಯಾಣದ ಕಲಚೂರ್ಯರ ಅಹವಮಲ್ಲನ ಶಾಸನವು, ರಾಜಾಧಿಕಾರಿ ದಂಡನಾಯಕ ಪದ್ಮರಸನು ಮಹಾಪ್ರಧಾನ ಲಕ್ಷ್ಮಿದೇವರಸನ ಅನುಮತಿಯಿಂದ ಹಗರಟ್ಟಿಗೆ-೩೦೦ ನಾಡಿನಲ್ಲಿಯ ಪ್ರತಿ ಹಳ್ಳಿಯಿಂದ ಒಂದು ಹೊನ್ನು ಕೂಡಿಸಿ ತಾಳಿಯಕೋಟೆಯ ಸೋಮನಾಥ ದೇವರಿಗೆ ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಕಲ್ಯಾಣಿ ಚಾಲುಕ್ಯರ ನಾಲ್ಕನೇ ಸೋಮೇಶ್ವರನ ೧೧೮೪ರ ಶಾಸನವು ತುಂಬಾ ತ್ರುಟಿತವಾಗಿದ್ದು. ಮಹಾಮಂಡಳೇಶ್ವರ ವಿರೂಪರಸನು ಬೈಸೇಶ್ವರ ದೇವಾಲಯದ ಗಣಂಗಳಿಗಾಗಿ ವೀರದಾಸನಿಗೆ ಗಣಮಠವೆಂದು ನೀಡಿದ ಭೂದಾನ, ಪರಿಯಳಿಗೆ, ಅಣಿಲೆವಾಡ, ಉಣುಕಲ್ಲು, ಸಂಪಗಾವಿ, ಅಬ್ಬಲೂರು, ಮುರುಡಿಗೆ ಅಣಂಪೂರು, ಕರಹಾಡ, ಕೆಂಭಾವಿ, ಬಮ್ಮಕೂರುಗಳಲ್ಲಿ ಎದುರಾದ ಪರಸಮಯಿಗಳನ್ನು ಸೋಲಿಸಿ ಶಿವಲಿಂಗ ಸಿಂಹಾಸನವನ್ನು ಪ್ರತಿಷ್ಠಾಪಿಸಿ ವೀರಮಾಹೇಶ್ವರ ನಿಷ್ಠೆಯನ್ನು ಮೆರೆದ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳನ್ನು ಉಲ್ಲೇಖಿಸುತ್ತದೆ. ರಾಮಸ್ವಾಮಿ ಗುಡಿಕಂಬದ ೧೨೨೫ರ ಯಾದವ ಸಿಂಘಣನ ಇನ್ನೊಂದು ಶಾಸನವು ಮಹಾಮಂಡಳಿಕ ಮಗರ ಮರಾರಿ ಚೈತಪಾಳನಾಯಕ ಮತ್ತು ಮಾಣಿಕಾದೇವಿಯರಿಂದ ತಾಳಿಕೋಟೆಯ ಸೋಮನಾಥ ದೇವರಿಗೆ ಭೂದಾನ ಮಾಡಿದ ವಿವರಣೆ ಇದೆ. ಸುಮಾರು ಕ್ರಿ.ಶ. ೧೨ನೇ ಶತಮಾನದ SII XV ನಂಬರ್ ೫೯೭ ಸೀಮೆ ವೀರಪ್ಪನ ಕಲ್ಲು ಎಂದು ಹೇಳುವ ಶಾಸನದಲ್ಲಿ ಸಹಸ್ರಲಿಂಗ ದೇವಾಲಯಕ್ಕೆ ನೀಡಿದ ಭೂದಾನ ಮತ್ತು ಕೋಡೆಯನೂರಿನ ಉಲ್ಲೇಖವನ್ನು ತಿಳಿಸುತ್ತಿದ್ದ ಈ ಶಾಸನವು ಈಗ ತಾಳಿಕೋಟೆಯಲ್ಲಿ ಎಲ್ಲಿದೆ ಎಂಬುದು ಪತ್ತೆಯಿಲ್ಲ. ಅದೇ ರೀತಿಯಾಗಿ ರಾಸ್ತೆವಾಡದ ಪಂಚಪೀರ ಮಸೀದೆಯ ಎದುರಿಗಿರುವ ಕಟ್ಟಡವೊಂದರಲ್ಲಿ "ಅರಾಬಿಕ್" ಭಾಷೆಯಲ್ಲಿರುವ ಶಾಸನವಿದೆ.

ಮಠಗಳು

ಶ್ರೀ ಖಾಸ್ಗತೇಶ್ವರ ಮಠ : ತಾಳಿಕೋಟೆಯಲ್ಲಿ ಮಠಗಳದೆ ಒಂದು ಅಪೂರ್ವ ಇತಿಹಾಸವಿದೆ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಗಳ ಸಮಕಾಲೀನರಾಗಿದ್ದು ಪವಾಡ ಪುರುಷರು ಶಿವನ ಅಪರಾವತಾರಿಗಳು ಆದ ಶ್ರೀ ಖಾಸ್ಗತ ಮಹಾಸ್ವಾಮಿಗಳ ಮಠವೂ ಊರ ಮಧ್ಯದಲ್ಲಿದ್ದು ತುಂಬಾ ಭವ್ಯವಾಗಿದೆ. ಶ್ರೀ ಖಾಸ್ಗತ ಸ್ವಾಮಿಜಿಗಳಿಗೆ ಹೈದರಾಬಾದದ ನಿಜಾಮ ಷಾಹಿಯೂ ನಡೆದು ಕೊಂಡ. ಪ್ರತಿ ವರ್ಷವು ಕಡ್ಲಗಾರ ಹುಣ್ಣಿಮೆಯ ಸಮಯದಲ್ಲಿ ಜಾತ್ರೆ ನಡೆಯುತ್ತಿದ್ದು. ಸುತ್ತಮುತ್ತಲಿನ ಹಳ್ಳಿಗಳಿಂದ ಬಂದ ಜನರು ಶ್ರೀ ಖಾಸ್ಗತ ಸ್ವಾಮಿಗಳ ತೇರನ್ನು ಎಳೆಯುತ್ತಾರೆ. ಹಾಗೆಯೇ ಶ್ರಾವಣ ಮಾಸದಲ್ಲಿ ಮಠದೊಳಗೆ ಪುರಾಣ ಪ್ರವಚನಗಳು ನಡೆಯುವವವು. ಶ್ರೀ ಖಾಸ್ಗತ ಸ್ವಾಮಿಜಿಯವರ ಹೆಸರಿನಿಂದ ಬಡ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ ನಿಲಯ ನಡೆಯುವುದಲ್ಲದೆ ಮಠದಲ್ಲಿ ಒಂದು ಪ್ರಸಿದ್ಧ ಸಂಗೀತ ಶಾಲೆ ಇದೆ. ಸ್ವಾತಂತ್ರ್ಯ ಪೂರ್ವದಿಂದಲೇ ಬಿಜಾಪುರ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳು

ನಡೆದಿದ್ದು, ಈ ಶ್ರೀ ಮಠವು ಅನ್ನದಾಸೋಹದೊಂದಿಗೆ ಜ್ಞಾನ ದಾಸೋಹವನ್ನು ಕೂಡ ನಡೆಸಿಕೊಂಡು ಬಂದಿದೆ.

ದರ್ಬಾರ್ ಮಠ : ದೋಣಿನದಿಯ ದಡದಲ್ಲಿರುವ ಈ ಮಠವು ಸಿಖ್ ಸಂಪ್ರದಾಯದ ನೈಷ್ಠಿಕ ಬ್ರಹ್ಮಚರ್ಯ ಮಠವಾಗಿದೆ. ರಜಪೂತರು ಭಾವಸಾರ ಕ್ಷತ್ರಿಯರು ಈ ಮಠದ ಶಿಷ್ಯರಾಗಿದ್ದಾರೆ. ಈ ಮಠಕ್ಕೆ ಆನಂದರಾವ್ ರಾಸ್ತೆಯವರು ಜಹಗೀರನ್ನು ಕೊಟ್ಟರೆಂದು ಈ ಮಠದ ಶಿಷ್ಯರು ಹೇಳುತ್ತಾರೆ. ಮಠದಲ್ಲಿ ಅನೇಕ ಗದ್ದುಗೆಗಳಿವೆ. ಈ ಮಠದ ಶಿಷ್ಯರ ದೀಕ್ಷೆಯು ಪರಂಪರಾನುಗತವಾಗಿ ಮಹಾರಾಷ್ಟ್ರದ ನಾಂದೇಡದಲ್ಲಾಗುತ್ತದೆ. ಒಟ್ಟು ಎಂಟು ತಲೆ ಮಾರುಗಳನ್ನು ಕಂಡ ಈ ಮಠದ ಶಿಷ್ಯರಾಗಿ ಈಗ ಧ್ಯಾನ ದಾಸರಿದ್ದಾರೆ. ಇವರಿಗಿಂತಲೂ ಮೊದಲು ದರ್ಶನದಾಸರು ಈ ಮಠದ ಅಧಿಪತಿಗಳಾಗಿದ್ದರು. ದೋಣಿ ನದಿಯಲ್ಲಿ ಉಪ್ಪು ನೀರಿದ್ದರೂ ಸಹ ದೋಣಿ ನದಿ ದಡದಲ್ಲಿಯೇ ಇರುವ ಈ ಮಠದ ಬಾವಿಯಲ್ಲಿ ಸಿಹಿ ನೀರು ಇರುವುದು ಒಂದು ವೈಶಿಷ್ಟ್ಯವಾಗಿದೆ. ಹಿಂದೂ-ಮುಸ್ಲಿಂ ಶೈಲಿಯ ಕಮಾನಿನಾಕಾರದ ಗೋಡೆಯೊಳಗೆ ಅನೇಕ ಗುಪ್ತ ಮಾರ್ಗಗಳು ಈ ಮಠದಲ್ಲಿವೆ. ಈ ಮಠದ ಶಾಖೆಗಳು ಬಿಜಾಪುರ, ಕಡೆಚೂರ, ಶಹಪುರ ಹಾಗೂ ಆಂಧ್ರ ಪ್ರದೇಶದ ಮಂಡ ಮಾಲಾರದಲ್ಲಿವೆ. ಭಾವಜಿ ಮಠ ಭಾವನ್ ಮಠವೆಂದು ಈ ಮಠವನ್ನು ಕರೆದಿರುವುದರಿಂದ ಈ ಮಠದ ಶಾಖೆಗಳು ೫೨ ಇದ್ದಿರಬಹುದೆಂದು ನಮಗೆ ತಿಳಿದು ಬರುವುದು.

ಜೈನಮಠ : ರಾಸ್ತೆವಾಡದೊಳಗೆ ಸಂಪೂರ್ಣವಾಗಿ ಹಾಳಾದ ಜೈನ ಬಸದಿಯನ್ನು ಜೀರ್ಣೋದ್ಧಾರಗೊಳಿಸಿ ಹೊಸ ಬಸದಿಯನ್ನು ಕಟ್ಟಲಾಗಿದೆ. ಈ ಬಸದಿಯೊಳಗೆ ಅನೇಕ ಜಿನ ಬಿಂಬಗಳಿವೆ. ತಾಳಿಕೋಟೆಯಲ್ಲಿ ದೊರೆಯುವ ೧೧ಲಳರ SII XV ನಂ. ೫೬ರ ಶಾಸನವು ಮಹಾಮಂಡಲೇಶ್ವರ ವಿರೂಪರಸನು ಬೈಶೇಶ್ವರ ದೇವಾಲಯದ ಗಣಂಗಳಿಗಾಗಿ ವೀರದಾಸನಿಗೆ ಗಣಮಠವೆಂದೂ ಭೂದಾನ ನೀಡಿ ಪರಿಯಳಿಗೆ ಅಣೆಲೆವಾಡ, ಊಣಕಲ್ಲು, ಅಬ್ಬಲೂರು, ಅಣಂಪೂರು, ಕರಹಾಡ ಕೆಂಭಾವಿ, ಮುಂತಾದ ಊರುಗಳಲ್ಲಿ ಎದುರಾದ ಪರಿಸಮಯಿಗಳನ್ನು ಸೋಲಿಸಿ ಶಿವಲಿಂಗ ಸಿಂಹಾಸನವನ್ನು ಪ್ರತಿಷ್ಠಾಪಿಸಿ ವೀರ ಮಾಹೇಶ್ವರ ನಿಷ್ಠೆಯನ್ನು ಮೆರೆದನೆಂದು ಹೇಳುತ್ತದೆ. ಅಂದರೆ ತಾಳಿಕೋಟೆಯಲ್ಲಿ ಆ ಕಾಲದಲ್ಲಿ ಪರಸಮಯಿಗಳೆಂದರೆ ಜೈನ ಹಾಗೂ ಶೈವ ಧರ್ಮದ ಮಠಗಳು ನಾಶವಾಗಿ ವೀರಮಾಹೇಶ್ವರರ ಘನಮಠಗಳನ್ನು ಸ್ಥಾಪಿತವಾದವು ಆದುದರಿಂದಲೇ ತಾಳಿಕೋಟೆ ಯಲ್ಲಿರುವ ಅನೇಕ ಜೈನ ಹಾಗೂ ಶೈವ ಧರ್ಮದ ಮತಾವಲಂಬಿಗಳು ೧೨ನೇ ಶತಮಾನದ ಉತ್ತರಾರ್ಧದಲ್ಲಿ ವೀರ ಮಾಹೇಶ್ವರರಾದರೆಂಬುದು ನಮಗೆ ಮೇಲಿನ ಉಲ್ಲೇಖ ದಿಂದ ತಿಳಿದು ಬರುವುದು.


ಗಚ್ಚಿನ ಮಠ : ಊರಹೊರಗೆ ದಕ್ಷಿಣಕ್ಕಿರುವ ಈ ಮಠವು ಗಚ್ಚು ಮತ್ತು ಗಾರೆಗಳಿಂದ ನಿರ್ಮಿಸಿದ್ದರಿಂದ ಗಚ್ಚಿನ ಮಠ ವೆನಿಸಿದೆ. ಹಿಂದೂ ಮುಸ್ಲಿಂ ವಾಸ್ತುಶಿಲ್ಪ ಶೈಲಿಯ ಈ ಮಠವನ್ನು ಕಟ್ಟಲಾಗಿದೆ. ಕಮಾನುಗಳಿಂದ ನಿರ್ಮಿತವಾಗಿದೆ. ಸುಮಾರು ೧೮ನೇ ಶತಮಾನಕ್ಕೆ ಸೇರಿದ ಈ ಮಠವು ಇನ್ನೂ ಸುಸ್ಥಿತಿಯಲ್ಲಿದೆ.

ಪಂಚಪೀರ ಮಸೀದಿ : ತಾಳಿಕೋಟೆಯಲ್ಲಿರುವ ಮಸೀದಿ ಗಳಲ್ಲೆಲ್ಲಾ ಅತ್ಯಂತ ಪ್ರಾಚೀನ ಮಸೀದಿ ಇದಾಗಿದೆ. ಈ ಪಂಚಪೀರರು ಸೂಫಿ ಸಂಪ್ರದಾಯಕ್ಕೆ ಸೇರಿದವರಾಗಿದ್ದು. ಹಿಂದೂ ಮುಸ್ಲಿಂ ಭಾವೈಕ್ಯತೆಗಾಗಿ ತುಂಬಾ ಶ್ರಮಿಸಿದವರಾಗಿದ್ದಾರೆ. ಈ ಪಂಚಪೀರರು ತಪಗೈದರೆಂದು ಹೇಳುವ ಸ್ಥಳವೊಂದನ್ನು ತಾಳಿಕೋಟೆಯ ಕಾಲೇಜಿನ ಪಶ್ಚಿಮದಲ್ಲಿರುವ ಖಬರಸ್ತಾನವನ್ನು ಈ ಊರಿನ ಜನರು ತೋರಿಸುತ್ತಾರೆ.

ಅವನತಿಯ ಹಾದಿಯಲ್ಲಿರುವ ತಾಳಿಕೋಟೆಯ ಕೋಟೆ

ತಾಳಿಕೋಟೆಯ ಕೋಟೆಯು ಸುಮಾರು ೩ ಮೈಲಿಗಳಷ್ಟು ವಿಸ್ತಾರವಾದ ವೃತ್ತಾಕಾರದ ಪ್ರದೇಶವನ್ನು ಹೊಂದಿದ್ದು ಅದರಲ್ಲಿ ಅನೇಕ ಬೃಹತ್ತಾದ ಕಾವಲು ಬುರುಜುಗಳು, ಗುಪ್ತ ಮಾರ್ಗಗಳು ಅನೇಕ ಸಿಹಿ ನೀರ ಭಾವಿಗಳನ್ನು ಒಳಗೊಂಡಿದೆ. ವಿಜಯನಗರದ ಅರಸರು ಹಾಗೂ ಷಾಹೀ ದೊರೆಗಳ ಮಧ್ಯ ನಡೆದ ೧೫೬೫ರ ಯುದ್ಧದಲ್ಲಿ ಈ ಕೋಟೆಯು ಅತ್ಯಂತ ಮಹತ್ವದ ಪಾತ್ರ ವಹಿಸಿದ್ದು ಷಾಹಿ ದೊರೆಗಳ ಮದ್ದು ಗುಂಡುಗಳು, ಆಹಾರ ಸಾಮಗ್ರಿ ಹಾಗೂ ಕಾಯ್ದಿರಿಸಿದ ಸೈನಿಕರನ್ನು ರಣಾಂಗಣಕ್ಕೆ ಸರಬರಾಜು ಮಾಡುವ ಪ್ರಮುಖ ಕೇಂದ್ರವಾಗಿತ್ತು. ಆದರೆ ಇಂದು ತಾಳಿಕೋಟೆಯ ಕೋಟೆಯು ನಗರೀಕರಣಗೊಂಡಿದೆ. ಕೋಟೆಗೋಡೆ ಹಾಗು ಕೋಟೆ ಯನ್ನು ಅನೇಕರು ಕೆಡವಿ ಅದರ ಕಲ್ಲು ಮಣ್ಣುಗಳನ್ನು ಮನೆ ಕಟ್ಟಲು ಉಪಯೋಗಿ ಸುತ್ತಿದ್ದಾರೆ. 'ವಿಜಯನಗರದ ಯುದ್ಧದ ನಂತರ ಯುದ್ಧದಲ್ಲಿ ಗೆದ್ದ ಮದೋನ್ಮತ್ತರಾದ ದಕ್ಷಿಣ ಸುಲ್ತಾನರ ಸೇನೆ ಈ ಕೋಟೆಯಲ್ಲಿ ತಂಗಿತ್ತು. ಆ ಯುದ್ಧನಡೆದ ಸಂದರ್ಭವು ಜನವರಿ ತಿಂಗಳು ಆಗಿದ್ದರಿಂದ ಕಪ್ಪು ಎರೆಮಣ್ಣಿನಿಂದ ಕೂಡಿದ ತಾಳಿಕೋಟೆಯ ಸುತ್ತ ಮುತ್ತಲಿನ ಪ್ರದೇಶದಲ್ಲಿ ಬಿಳಿ ಜೋಳವು ಮನುಷ್ಯನ ಆಳೆತ್ತರವನ್ನು ಮೀರಿ ಬೆಳೆದದ್ದು ಆ ಬೆಳೆಯನ್ನು ರಣಾಂಗಣದಿಂದ ಹೊರಟ ಷಾಹಿ ದೊರೆಗಳ ಆನೆ, ಕುದುರೆಗಳು, ಕಾಲಾಳುಗಳ ಸೈನ್ಯವು ಬೆಳೆದು ನಿಂತ ಆ ಬೆಳೆಯನ್ನು ತುಳಿದು ಕೊಂಡೇ ಹೋಯಿತ್ತೆಂದು "ರಾಬರ್ಟ್ ಸಿವೆಲ್‌ರು" ತಮ್ಮ "ಮರೆತು ಹೋದ ಸಾಮ್ರಾಜ್ಯ" ಎಂಬ (Forgotten Empire) ಗ್ರಂಥದಲ್ಲಿ ಈ ಚಿತ್ರಣವನ್ನು ದಾಖಲಿಸಿದ್ದಾರೆ. ಅಲ್ಲದೆ ಬಿಜಾಪುರದ ಷಾಹಿ ದೊರೆಯು ಯಾವುದೇ ನಷ್ಟ ಪರಿಹಾರವನ್ನು ರೈತರಿಗೆ ಕೊಡುವ ಯೋಚನೆಯನ್ನೆ ಮಾಡಲಿಲ್ಲ, ಎಂದು ಉದ್ಗಾರ ತೆಗೆದಿದ್ದಾ ಸಿವಲ್ ಸಾಹೇಬರು, ಅದೇ ರೀತಿ ತಾಳಿಕೋಟೆಯ ಭಾಗದಲ್ಲಿ ಪ್ರಚಲಿತವಿರುವ ಈ ಕೆಳಗಿನ ಜನಪದ ಕಿರುಪ್ರಾಸವನ್ನು ತಾವು ಅವಲೋಕಿಸಬಹುದಾಗಿದೆ.





"ಆನೆ ಬಂತು ಆನೆ, ಯಾವ ಊರ ಆನೆ, ಬಿಜಾಪುರ ಆನೆ,
ಇಲ್ಲಿಗ್ಯಾಕ ಬಂತು, ಹಾದಿ ತಪ್ಪಿ ಬಂತು ಹಾದಿಕೊಂದು
ದುಡ್ಡು, ಬೀದಿಗೊಂದು ದುಡ್ಡು, ಸೇರ ಕೊಬ್ಬರಿ ತಂದು,
ಲಲಾ ಲಟಾ ಮುರಿತು, ಚುಕ್ಕೊಳು ಕೈಯಲ್ಲಿ ಕೊಟ್ರು"

ಎಂಬ ಮೇಲಿನ ಸುಂದರವಾದ ಉತ್ತರ ಕರ್ನಾಟಕದ ಈ ಐತಿಹಾಸಿಕ ಶಿಶುಪ್ರಾಸ ಗೀತೆ ಇದೆ. ರಕ್ಕಸ ತಂಗಡಿಗಿ ಯುದ್ಧ ಮುಗಿದ ಮೇಲೆ ಷಾಹಿ ದೊರೆಗಳ ಸರದಾರರ ಸೈನ್ಯವು ವಿಜಯೋನ್ಮತ್ತದಲ್ಲಿ ಬೇಕಾಬಿಟ್ಟಿ ದಿಕ್ಕು ದೆಸೆಗೆ ಪಸರಿಸಿತು. ಸೈತಾನರ ಆನೆಗಳ ಹಿಂದಿನ ಸೈನಿಕರು ಸೋತ ವಿಜಯನಗರದ ಅರಸರ ಸಂಪತ್ತನ್ನು ಸೂರೆಗೊಂಡು ಬಿಜಾಪುರಕ್ಕೆ ಹಿಂದಿರುಗು ವಾಗಿನ ಚಿತ್ರವನ್ನು ಜನಪದ ಕವಿಯು ಮೇಲಿನ ಹಾಡಿನಲ್ಲಿ ಸೆರಿಹಿಡಿದ್ದಾನೆ(೪). ಮುದ್ದೆ ಬೀಹಾಳ ತಾಲೂಕಿನ ಅಗರಗುಂಡ, ಯರಗಲ್, ಬನ್ನಹಟ್ಟಿ, ರಕ್ಕಸಗಿ, ಹಾಗೂ ದನ್ನೂರ ಗಳಲ್ಲಿ ಖಡ್ಗದ ಚೂರುಗಳು ಮನುಷ್ಯರ ಸಾವಿರಾರು ಅಸ್ಥಿಪಂಜರಗಳು, ಕತ್ತಿಡಾಲುಗಳು, ಮೃತ ಪ್ರಾಣಿಗಳ ದೇಹದ ಅನೇಕ ಅಸ್ಥಿಗಳು ಹೊಲಗಳನ್ನು ಕೃಷಿ ಮಾಡುವಾಗ ಈಗಲೂ ಈ ಊರುಗಳಲ್ಲಿ ಸಿಗುತ್ತವೆ.

ತಾಳಿಕೋಟೆ ನಗರವು ಧರ್ಮ ಸಮನ್ವಯವನ್ನು ಮೆರೆದಿದ್ದು ಪರಧರ್ಮ ಸಹಿಷ್ಣುತೆಯನ್ನು ಕಾಯ್ದಿಕೊಂಡು ಬಂದಿದೆ. ತಾಳಿಕೋಟೆಯು ಅಂದು ಭೈರವನ ಮಾರ್ತಂಡ ಭೈರವನ ಅಥವ ಮಲ್ಲಯ್ಯನ ಆರಾಧನಾ ಕೇಂದ್ರವಾಗಿದ್ದು, ಇಲ್ಲಿಯ ಶಿಕ್ಷಣ ಕೇಂದ್ರಗಳು ಹಾಗೂ ದೇವಾಲಯಗಳಿಗೆ ಅಲ್ಲಿಯ ರಾಜರು, ಅಧಿಕಾರಿಗಳು, ಉದಾರ ದತ್ತಿ ದಾನಗಳನ್ನು ನೀಡಿದ ಬಗ್ಗೆ ಶಾಸನಗಳಿಂದ ನಮಗೆ ತಿಳಿದುಬರುತ್ತವೆ. ಹೀಗೆ ತಾಳೀಕೋಟೆಯು ಪ್ರಾಚೀನ ಕರ್ನಾಟಕದ ಮಹತ್ವದ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದಾಗಿತ್ತು.

(ಈ ಲೇಖನ ಸಿದ್ಧಪಡಿಸಲು ಕ್ಷೇತ್ರಕಾರ್ಯದಲ್ಲಿ ನೆರವಾದ ಶ್ರೀ ದೇವರಾಜ ಬಾಗೇವಾಡಿ, ಶಿಕ್ಷಕರು, ತಾಳಿಕೋಟೆ ಇವರಿಗೆ ಕೃತಜ್ಞತೆಗಳು).

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ**., ಡಾ। ಎಂ. ಚಿದಾನಂದಮೂರ್ತಿ
೨. **ಮೈಲಾರಲಿಂಗ ಖಂಡೋಬಾ**., ಡಾ। ಎಂ. ಬಿ. ನೇಗಿನಹಾಳ
೩. **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ**., ಎಸ್. ಕೆ. ರಾಮಚಂದ್ರರಾವ್
೪. **ಇತಿಹಾಸ ದರ್ಶನ**., ಸಂಪುಟ ೧೨, ಪುಟ ೬೫.
೫. **ಬಿಜಾಪುರ ಜಿಲ್ಲಾ ಗ್ಯಾಜೆಟಿಯರ್**.
೬. **ಬಿಜಾಪುರಜಿಲ್ಲೆಯ ಶಾಸನಸೂಚಿ**., (ಸಂ.) ಡಾ। ಎಂ. ಎಂ. ಕಲ್ಬುರ್ಗಿ.
೭. *Forgotten Empire* - Robert Sewell.
೮. *Mysore Archaeological Report*., 1932.

ಮಂದರ್ಕೆ ನಿತ್ಯಾನಂದ ಪೈ. ಕಾರ್ಕಳ*


ಕರ್ನಾಟಕದ ರಾಜವಂಶಜರ ಕೆಲವು ಅಪ್ರಕಟಿತ ಚಿನ್ನದ ನಾಣ್ಯಗಳು

ಇತ್ತೀಚೆಗೆ ನನಗೆ ದೊರಕಿರುವ ಚಿನ್ನದ ನಾಣ್ಯಗಳಲ್ಲಿ ಹೊಯ್ಸಳ ರಾಣಿ ಶಾಂತಲಾ ದೇವಿ (ಕ್ರಿ.ಶ. ೧೧೧೧-೧೧೩೧) ಯ ಪಣ, ಸೇವುಣ/ ಯಾದವ ದೊರೆ ಎರಡನೆಯ ಸಿಂಘಣ (ಕ್ರಿ.ಶ. ೧೨೦೦-೧೨೪೭) ನ ೧/೪ ಗದ್ಯಾಣ ಮತ್ತು ವಿಜಯನಗರ ದೊರೆ ಕೃಷ್ಣದೇವರಾಯ (ಕ್ರಿ.ಶ. ೧೫೦೯-೧೫೩೦) ನ ಪಣಗಳು ಸೇರಿವೆ.

೧. ಹೊಯ್ಸಳ ರಾಣಿ ಶಾಂತಲಾ ದೇವಿಯ ಪಣ

ಲೋಹ : ಚಿನ್ನ **ಆಕಾರ** : ವೃತ್ತಾಕಾರ

ಗಾತ್ರ : ೭ಮಿ.ಮೀ. ತೂಕ ೦.೪ ಗ್ರಾಂ.




ಮುಂಬದಿ : ಬಲಗಡೆಗೆ ಮುಖಮಾಡಿ, ಬಾಲವನ್ನು ಎತ್ತಿಹಿಡಿದ ವಾನರನ ಕೈಯು ಅಂಜಲೀ ಮುದ್ರೆಯಲ್ಲಿದ್ದು, ಅದರೊಳಗೆ ಹಣ್ಣಿನ ಆಕಾರ ಕಾಣಬಹುದು.

ಹಿಂಬದಿ : ಶ್ರೀ ಈ/ಸಪುರ ಎಂಬ ೨ ಸಾಲಿನ ಕನ್ನಡ ಲಿಪಿ ಇದೆ.

ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನದ ಶಾಸನ ದಲ್ಲಿರುವಂತೆ, ದೇವಸ್ಥಾನದ ಪೂಜಾ ಕಾರ್ಯಗಳಿಗೆ ದತ್ತಿಕೊಟ್ಟ ೩೫ ಗದ್ಯಾಣಗಳಲ್ಲಿ ೩ ಗದ್ಯಾಣಗಳ ಹೆಸರನ್ನು ಉಲ್ಲೇಖಿಸಲಾಗಿದೆ. ಅವುಗಳಲ್ಲಿ ಹೊಯ್ಸಳ ಗದ್ಯಾಣ ೨, ರಾಮದೇವ ಗದ್ಯಾಣ ೩, ನಾರಸಿಂಹ ಗದ್ಯಾಣ ೧- ಇವುಗಳಲ್ಲಿ ಹೊಯ್ಸಳ ಗದ್ಯಾಣ ಎಂದರೆ ವಿಷ್ಣುವರ್ಧನನ ತಲಕಾಡುಗೊಂಡ, ನೊಣಂಬವಾಡಿಗೊಂಡ ಮತ್ತು ಮಲಪರೊಳಗಂಡ ಎಂದು ಕನ್ನಡದಲ್ಲಿ ಹಿಂಬದಿ ಬರಹವಿರುವ ನಾಣ್ಯಗಳಾಗಿವೆ. ಇವುಗಳನ್ನು ವಿಷ್ಣುವರ್ಧನ ಗದ್ಯಾಣ ಎಂದು ಬೇರೆ ಶಾಸನಗಳಲ್ಲಿ ಉಲ್ಲೇಖಿಸಿದ್ದಾರೆ. ನರಸಿಂಹ ಗದ್ಯಾಣವು ಒಂದನೇ ನರಸಿಂಹನಿಗೆ ಸೇರಿದ್ದು ಈ ನಾಣ್ಯದಲ್ಲಿ ಶ್ರೀ ಪ್ರತಾಪ ನರಸಿಂಹ ಎಂಬ ಹಿಂಬದಿ ಬರಹವಿದೆ. ಆದರೆ ಶಾಸನದಲ್ಲಿ ಉಲ್ಲೇಖಿಸಿದ ರಾಮದೇವ ಗದ್ಯಾಣವು ಇದುವರೆಗೂ ಅಜ್ಞಾತವಾಗಿತ್ತು. ಇತ್ತೀಚಿನ ಮಂಗಳೂರಿನ ಶ್ರೀ ಮುಕುಂದ ಪ್ರಭುಗಳು ಈ ರಾಮದೇವ ಗದ್ಯಾಣವನ್ನು ಪ್ರಕಟಿಸಿದ್ದಾರೆ. ೧. ಈ ಗದ್ಯಾಣದ ಮುಂಭಾಗದಲ್ಲಿ ಶ್ರೀರಾಮ ಸೀತೆ ಹನುಮಂತನ ಚಿತ್ರವಿದ್ದು ಹಿಂಬದಿಯಲ್ಲಿ ಶ್ರೀ ಈ/ಸಪುರ ಎಂಬ ೨ ಸಾಲಿನ ಕನ್ನಡ ಲಿಪಿ ಇದೆ. ಇದರ ಆಧಾರದ ಮೇಲೆ ನಾನು ಪ್ರಸ್ತುತ ಈ ನಾಣ್ಯವನ್ನು ಪ್ರಕಟಿಸುತ್ತಿದ್ದೇನೆ.

ಬೇಲೂರಿನ ಚೆನ್ನಕೇಶವ ದೇವಾಲಯದ ಕ್ರಿ.ಶ. ೧೧೧೭ರ ಶಾಸನ ಶಾಂತಲೆಯು ಬಲಿಪುರ (ಶಿಕಾರಿಪುರ ತಾಲೂಕಿನ ಈಗಿನ ಬಳ್ಳಿಗಾವೆ)ದಲ್ಲಿ ಧರ್ಮೇಶ್ವರನ ವರಪ್ರಸಾದದಿಂದ ಹುಟ್ಟಿದ್ದು, ಈಸಪುರ (ಶಿಕಾರಿಪುರದ ಈಸೂರು)ದಲ್ಲಿ ಶ್ರೀರಾಮೇಶ್ವರ ದೇವಾಲಯವನ್ನು ನಿರ್ಮಿಸಲು ಕಾರಣಳಾದಳೆಂದು ತಿಳಿಸುತ್ತದೆ. ಕಪ್ಪೆ ಚೆನ್ನಿಗರಾಯನ ದೇವಸ್ಥಾನದ ಇನ್ನೊಂದು ಶಾಸನ ಇದನ್ನೇ ಹೇಳುತ್ತದೆ. ಅದರಲ್ಲಿ ಶ್ರೀಮದ್ ಧರ್ಮೇಶ್ವರ ಲಬ್ಧವರ ಪ್ರಸಾದೇಯಂ ಈಸಪುರ ರಚಿತ ರಾಮೇಶ್ವರ ಪ್ರಸಾದೇಯಂ ಎಂದಿದೆ.

ಕರ್ನಾಟಕದಲ್ಲಿ ಹಲವಾರು ಟಂಕಸಾಲೆಗಳು ದೇವಾಲಯಗಳ ಆಸುಪಾಸಿನಲ್ಲಿದ್ದು, ಅಂತಹ ದೇವಾಲಯಗಳು ನಾಣ್ಯಗಳನ್ನು ಮುದ್ರಿಸುವ ಅಧಿಕಾರವನ್ನು ಹೊಂದಿದ್ದು, ಅಲ್ಲಿ ಕಮ್ಮಟೇಶ್ವರ ಎಂಬ ದೇವರನ್ನು ಆರಾಧಿಸುತ್ತಿದ್ದರು. ಅಂತೆಯೇ ಹೊಯ್ಸಳ ವಿಷ್ಣುವರ್ಧನನ ಪ್ರಭಾವಶಾಲಿ ರಾಣಿಯಾದ ಶಾಂತಲೆಯು ತನ್ನ ಅಧಿಕಾರವನ್ನು ಉಪಯೋಗಿಸಿ ಈಸಪುರ (ಈಸೂರು)ದ ದೇವಾಲಯಕ್ಕೆ ನಾಣ್ಯವನ್ನು ಮುಂದ್ರಿಸುವ ಅಧಿಕಾರವನ್ನು ಕೊಟ್ಟಿರಬಹುದು. ಇದಕ್ಕೆ ಸಾಕ್ಷಿಯಾಗಿ ಈ ನಾಣ್ಯದ ಹಿಂಭಾಗದಲ್ಲಿ ಶ್ರೀ ಈಸಪುರ ಎಂಬ ಕನ್ನಡ ಲಿಪಿ ಇದೆ. ಈ ನಾಣ್ಯವು ಸಿಕ್ಕಿದ ಸ್ಥಳ ಶಿಕಾರಿಪುರವೇ ಆಗಿದೆ.

ವಿಜಯನಗರ ದೊರೆ ಕೃಷ್ಣದೇವಾಯನ ಪಣ

ಲೋಹ : ಚಿನ್ನ, **ಆಕಾರ** : ವೃತ್ತಾಕಾರ, **ಗಾತ್ರ** : ೮ ಮಿ.ಮೀ **ತೂಕ** : ೦.೩೪ ಗ್ರಾಂ


ಮುಂಬದಿ : ಗೆರೆ ಮತ್ತು ಚುಕ್ಕೆಗಳಿಂದ ಮಾಡಿದ ಸಾಂಕೇತಿಕ ಕಾಳಿಯ ಚಿತ್ರವಿದೆ. (Degenerated Kali)

* ಗಣೇಶ ಎಂಟರ್ ಪ್ರೈಸಸ್, ಬಸ್ ಸ್ಟ್ಯಾಂಡ್ ಬಳಿ, ಮೂಡುಬಿದಿರೆ - ೫೭೪ ೨೨೭



ಹಿಂಬದಿ : ೨ ಸಾಲಿನ ನಾಗರೀ ಲಿಪಿಯಲ್ಲಿ ಕೃಷ್ಣ / ರಾಯ ಎಂಬ ಬರಹವಿದೆ.

ಪ್ರಸ್ತುತ ನಾಣ್ಯದಲ್ಲಿ, ಕೃಷ್ಣ ದೇವರಾಯ (ಕ್ರಿ.ಶ. ೧೫೦೯-೧೫೩೦) ನ ಇತರ ಬಂಗಾರದ ನಾಣ್ಯಗಳಾದ ವರಹ ಮತ್ತು ಪ್ರತಾಪ ವರಹಗಳಲ್ಲಿ ಇರುವಂತಹ 'ಪ್ರತಾಪ' ಎಂಬ ಉಲ್ಲೇಖ ಇಲ್ಲದೇ ಇರುವುದರಿಂದ ಈ ನಾಣ್ಯವು ಮೈಸೂರು ಒಡೆಯರ್ ವಂಶಸ್ಥರಾದ ಕೃಷ್ಣರಾಜ ಒಡೆಯರ್‌ರವರಿಗೆ ಸೇರಿದ್ದಿರಬಹುದೆಂದು ಸಂಶಯ ಉಂಟಾಗುತ್ತದೆ. ಆದರೆ ಲಿಪಿಶಾಸ್ತ್ರದ ಆಧಾರದಿಂದ ಕೃಷ್ಣರಾಯ ಎಂಬ ಈ ನಾಗರೀ ಲಿಪಿಯು ಕೃಷ್ಣ ದೇವರಾಯನ ದೊಡ್ಡ ವರಹ (೭.೬೫ ಗ್ರಾಂ)ದಲ್ಲಿರುವ 'ಶ್ರೀ ಕೃಷ್ಣರಾಯ' ಎಂಬ ನಾಗರೀಲಿಪಿಗೆ ಅಕ್ಷರಶಃ ಹೋಲುವುದರಿಂದ ಈ ನಾಣ್ಯವನ್ನು ಸಹ ಕೃಷ್ಣದೇವರಾಯನದೆಂದು ಹೇಳಬಹುದು ಕೇವಲ ಇದುವರೆಗೆ ವಿಜಯನಗರ ಅರಸರುಗಳಾದ ಸದಾಶಿವರಾಯ III (ಕ್ರಿ.ಶ. ೧೫೪೨-೧೫೭೬) ಮತ್ತು ಶ್ರೀರಂಗರಾಯ (ಕ್ರಿ.ಶ. ೧೬೪೨-೧೬೭೫)ನ ಚಿನ್ನದ ಪಣ ಸಿಕ್ಕಿರುತ್ತದೆ. ಅದರಲ್ಲಿ ಶ್ರೀರಂಗರಾಯ IIIನ ನಾಣ್ಯದ ಮುಂಬದಿಯ ವಿನ್ಯಾಸವು. ಕೃಷ್ಣದೇವರಾಯನ ಈ ನಾಣ್ಯದ ಮುಂಬದಿಯ ವಿನ್ಯಾಸದಂತೆಯೇ ಇದೆ. ಆದ್ದರಿಂದ ಪ್ರಸ್ತುತ ಪಡಿಸಿದ ಈ ಕೃಷ್ಣ ದೇವರಾಯನ ಪಣವು ವಿಜಯನಗರದ ನಾಣ್ಯ ಮಾಲಿಕೆಗೊಂದು ಹೊಸ ಸೇರ್ಪಡೆಯಾಗಿರುತ್ತದೆ.



ಯಾದವ/ಸೇವುಣದೊರೆ ಎರಡನೆಯ **ಸಿಂಘಣನ** ೧/೪ ವರಹ

ಲೋಹ : ಚಿನ್ನ, **ಆಕಾರ** : ಅಂಡಾಕಾರ **ಗಾತ್ರ** : ಉದ್ದ ೧೦ ಮಿ.ಮೀ. ಅಗಲ ೭. ಮಿ.ಮೀ **ತೂಕ** : ೦.೯೨ ಗ್ರಾಂ

ಮುಂಬದಿ : ಎಡಗಡೆಗೆ ಮುಖಮಾಡಿ ಬಾಯ್ತೆರೆದು ನಿಂತ ಸಿಂಹವು ಬಾಲವನ್ನು ಬೆನ್ನಿನ ಮೇಲೆ ಸುರುಳಿ ಮಾಡಿ ಎತ್ತಿ ಹಿಡಿದಿದೆ.

ಹಿಂಬದಿ : ಶ್ರೀ ಸಿಂಘಣ/ದೇವ ಎಂಬ ೨ ಸಾಲಿನ ನಾಗರೀ ಲಿಪಿ ಇದೆ. ನಾಣ್ಯದ ಗಾತ್ರವು ಸಣ್ಣದಾಗಿರುವದರಿಂದ., ನಾಣ್ಯವನ್ನು ಟಂಕಿಸುವಾಗ 'ಣ' ಅಕ್ಷರವು ನಾಣ್ಯದಿಂದ ಬಿಟ್ಟು ಹೋಗಿದ್ದು 'ದೇವ' ಅಕ್ಷರವು ಭಾಗಶಃ ಕಾಣುತ್ತದೆ.

ಯಾದವರಲ್ಲಿ ಸಿಂಘಣರೆಂದು ಹೆಸರಿರುವ ೩ ಜನ ರಾಜರಿದ್ದು, ಇವರಲ್ಲಿ ಎರಡನೆಯ ಸಿಂಘಣ (ಕ್ರಿ.ಶ. ೧೨೦೦-೧೨೪೭) ಪ್ರಮುಖನು. ಇದುವರೆಗೆ ಇವರು ಕೇವಲ 'ಪದ್ಮ ಟಂಕ'ಮಾದರಿಯ ಏಕಮುಖಿ (ಮುಂಬದಿಯಲ್ಲಿ ಪದ್ಮ, ಶಂಖ, ರಾಜರ ಹೆಸರಿದ್ದು ಹಿಂಬದಿಯು ಖಾಲಿಯಾಗಿದೆ) ಬಂಗಾರದ ನಾಣ್ಯವನ್ನು ಮಾತ್ರ ಟಂಕಿಸಿದ್ದರು ಎಂದು ನಂಬಲಾಗಿತ್ತು. ಆದರೆ ಚಪ್ಪಟೆ ಆಕಾರದ ಎರಡೂ ಬದಿ ಮುದ್ರಿತವಾಗಿರುವ ಸಿಂಘಣ III ನ ಚಿನ್ನದ ಗದ್ಯಾಣವನ್ನು ಕಳೆದ ಸಲ ನಾನು ಪ್ರಕಟಿಸಿದ್ದೇನೆ.[೧] ಪ್ರಸ್ತುತ ನಾಣ್ಯದಲ್ಲಿ ಇರುವ 'ಸಿಂಘಣ' ಎಂಬ ನಾಗರೀಲಿಪಿಯು ಸಹ ಸಿಂಘಣ II ನ ಇತರ ಪದ್ಮಟಂಕ, ಗದ್ಯಾಣ ಮಾದರಿಯ ನಾಣ್ಯಗಳಲ್ಲಿ ಇರುವಂತೆ ಇರುವುದರಿಂದ ಈ ೧/೪ ಗದ್ಯಾಣವು ಸಹ ಇವನಿಗೆ ಸೇರಿದ್ದೆಂದು ಖಂಡಿತವಾಗಿಯೂ ಹೇಳಬಹುದು. ಸಿಂಘಣ II ನು ಕ್ರಿ.ಶ. ೧೨೦೬ರಲ್ಲಿ ಗೋವಾ ಕದಂಬರ ಮೇಲೆ ಆಕ್ರಮಣ ಮಾಡಿ ಅವರನ್ನು ಸೋಲಿಸಿದ್ದ[೨]. ಆ ವಿಜಯದ ಜ್ಞಾಪಕಾರ್ಥವಾಗಿ ಗೋವಾ ಕದಂಬರ ನಾಣ್ಯಗಳಲ್ಲಿ ಇರುವಂತಹ ಎಡಗಡೆಗೆ ಮುಖಮಾಡಿ ಬಾಲವನ್ನು ಬೆನ್ನ ಮೇಲೆ ಸುರುಳಿ ಮಾಡಿ ಎತ್ತಿ ಹಿಡಿದ ಸಿಂಹದ ಲಾಂಛನವನ್ನು ತನ್ನ ೧/೪ ಗದ್ಯಾಣದಲ್ಲಿ ಟಂಕಿಸಿರಬಹುದು. ೩ನೇ ಸಿಂಘಣನ ಈ ನಾಣ್ಯದ ಹೊರತು ಯಾದವ/ ಸೇವಣಾರ ಬೇರೆ ಯಾವುದೇ ಚಿನ್ನದ ನಾಣ್ಯದಲ್ಲಿ ಈ ರೀತಿಯ ಸಿಂಹದ ಲಾಂಛನವಿಲ್ಲಾ. ಅಲ್ಲದೇ ಪ್ರಸ್ತುತ ಈ ನಾಣ್ಯವು ಯಾದವರ ನಾಣ್ಯ ಶೃಂಖಲೆಯಲ್ಲಿ ಸಿಕ್ಕಿರುವ ಪ್ರಪ್ರಥಮ ೧/೪ ವರಹವಾಗಿದೆ. ಈ ನಾಣ್ಯವು ನನಗೆ ಸತಾರಾದ ಆಸುಪಾಸಿನ ಪ್ರದೇಶದಲ್ಲಿರುವ ಚಿನ್ನದ ವ್ಯಾಪಾರಿಯ ಬಳಿಲಭಿಸಿತ್ತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. *Recent Researches in Karnataka Archaeology* ಯಲ್ಲಿ ಶ್ರೀ ಮುಕುಂದಪ್ರಭುಗಳ ಲೇಖನ (ಪುಟ ಸಂಖ್ಯೆ. ೧೩೧)

೨. *History of South India*. P.P 194 by Dr. P. Gururaj Bhat & others.

ಜಗದೀಶ ಎಂ. ಎಚ್. ಅಗಸಿಬಾಗಲವರ*

ಸಿರಿವಳಿಗೆಯ ಶಿಲ್ಪಿ ದುಗ್ಗೈಯ

ಶಿವಪ್ಪನಾಯಕ ವಸ್ತುಸಂಗ್ರಹಾಲಯ ಮುರುಘಾಮಠ, ಆನಂದಪುರ ಇಲ್ಲಿ ಭೈರವನ ಶಿಲ್ಪವೊಂದಿದೆ. ಈ ಶಿಲ್ಪದ ಬುಡದಲ್ಲಿ ಎರಡು ಸಾಲಿನ ಅಪ್ರಕಟಿತ ಶಾಸನವಿದೆ. ಅದರ ಮೂಲಪಾಠ ಹೀಗಿದೆ:

ಶ್ರೀ ವಾಗುದೇವಿಯ ಭೃತ್ಯ
ಸೋಮೋಜನ ಮಗ ದುಗ್ಗೆಯ



ಶಿಲ್ಪವನ್ನು ಎಲ್ಲಿಂದ ಸಂಗ್ರಹಿಸಲಾಗಿತ್ತೆಂದು ದಾಖಲೆ ಇರುವುದಿಲ್ಲ. ಮೊದಲು ಇದು ಹೊಸನಗರದಲ್ಲಿನ ಖಾಸಗಿ ವ್ಯಕ್ತಿಯೊಬ್ಬರ ಸಂಗ್ರಹದಲ್ಲಿತ್ತೆಂದು ತಿಳಿದು ಬಂದಿದೆ. ಕರ್ನಾಟಕದಲ್ಲಿ ಇದುವರೆಗೆ ಉಲ್ಲೇಖವಾಗಿರುವ ಬಹುತೇಕ ಶಿಲ್ಪಿಗಳು ತಮ್ಮನ್ನು ಸರಸ್ವತೀಗಣಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ. ಶಿಲ್ಪಿಗಳು ತಾವು ಕಲಾ ನೈಪುಣ್ಯತೆಯನ್ನು ಕಲಿತಶಾಲೆಯನ್ನು ಸರಸ್ವತೀಗಣ ವಾಸ, ಸರಸ್ವತೀಗಣ ದಾಸ, ಸರಸ್ವತೀ ಗಣಮಿತ್ರ ಸರಸ್ವತೀದೇವಿ ವರಪ್ರಸಾದ, ಎಂದು ನೆನೆದಿದ್ದಾರೆ. ಶಿಲ್ಪಿಯು ಪ್ರಸ್ತುತ ಶಾಸನದಲ್ಲಿ ತಾನು ವಾಗ್ದೇವಿ ಸೇವಕನು ಮತ್ತು ಸೋಮೋಜನ ಮಗನೆಂದು ಹೇಳಿದ್ದಾರೆ. ವಾಗ್ದೇವಿ ಎಂದರೂ ಸರಸ್ವತಿಯನ್ನೇ ಪ್ರತಿನಿಧಿಸುತ್ತದೆ.

ಸಾಗರ ತಾಲೂಕಿನ ಕೋಳೂರು ಗ್ರಾಮದ ಕಮರಿಹಕ್ಕಲಿನಲ್ಲಿ ನೆಟ್ಟಿರುವ ಕ್ರಿ.ಶ. ೧೧೨೧ರ ಜೈನ ಶಾಸನವೊಂದರಲ್ಲಿ[೧] ರಾಜಿಯಬ್ಬೆ ಹೆಗ್ಗಡತಿಯು ಸುರಲೋಕ ಪ್ರಾಪ್ತಳಾದಾಗ ಶಾಸನವನ್ನು ಶಿಲ್ಪಿ ದುಗ್ಗೈಯನು ಬೆಸುದುದಾಗಿ ಮತ್ತು ತಾನು ಸರಸ್ವತೀಗಣ ಪುತ್ರ ಸುಮತಿ ಪಂಡಿತರ ಶಿಷ್ಯ ಸೋಮೋಜನ ಮಗನೆಂದು ಹೇಳಿದ್ದಾನೆ. ಇದೇ ತಾಲೂಕಿನ ಹೆಡತೆರಿ ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿನ ಕ್ರಿ.ಶ. ೧೧೬೦ರ ಶಾಸನದಲ್ಲಿ[೨] ದುರ್ಗ್ಗಿಯನ ತಂದೆಯಾದ ಸೋಮೋಜನ ವಂಶಾವಳಿ ಮತ್ತು ಮೂಲ ಸ್ಥಳವನ್ನು ಸೂಚಿಸಲಾಗಿದೆ. ಶಾಸನದ ಸಾಲುಗಳು ಹೀಗಿವೆ: *ಶ್ರೀ ಮತು ಸಿರಿವಳಿಗೆಯ ಶಾಂನ್ತೋಜನಳಿಯ ಜಕ್ಕೋಜನ ಪುತ್ರನು ಕಟ್ಟೋಜನಳಿಯ ಸೋಮೋಜ ಮಾಡಿದ.* ಕೋಳುರು ಮತ್ತು ಹೆಡತೆರಿ ಗ್ರಾಮಗಳು ಶರಾವತಿ ನದಿಯ ಬಲ ದಂಡೆಯಲ್ಲಿದ್ದು ಸಾಗರ ತಾಲೂಕು ಕೇಂದ್ರದ ಹತ್ತಿರದ ಇಂದಿನ ಸಿರಿವಾಳ. ಶಿಲ್ಪಿಯ ಗ್ರಾಮವಾಗಿರಬೇಕು.

ಹೀಗಾಗಿ ಪ್ರಸ್ತುತ ಭೈರವ ಶಿಲ್ಪ ಪೀಠ ಶಾಸನವು ದುಗ್ಗೈಯನ ಕೆತ್ತನೆ ಹಾಗೂ ಪ್ರತಿಷ್ಠೆಯ ಸೂಚಕವಾಗಿರುವಂತಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಶಿವಪ್ಪನಾಯಕ ವಸ್ತುಸಂಗ್ರಹಾಲಯ, ಆನಂದಪುರದಲ್ಲಿನ ಭೈರವ ವಿಗ್ರಹದ ಶಾಸನವನ್ನು ಪ್ರಕಟಿಸಲು ಅನುಮತಿಯನ್ನು ನೀಡಿದ ಆನಂದಪುರ ಮುರುಘಾಮಠದ ಶ್ರೀ ಶ್ರೀ ಮಲ್ಲಿಕಾರ್ಜುನ ಮರುಘರಾಜೇಂದ್ರ ಸ್ವಾಮಿಗಳಿಗೆ ನನ್ನ ಕೃತಜ್ಞತೆಗಳು. ವಿಗ್ರಹದ ಫೋಟೋ ಮತ್ತು ಶಾಸನದ ಪಡಿಯಚ್ಚನ್ನು ಪಡೆಯಲು ಸಹಕರಿಸಿದ ಶ್ರೀ ಜಯದೇವಪ್ಪ ಜೈನಕೇರಿ ಮತ್ತು ಶ್ರೀ ರಾಮಚಂದ್ರ ಕಾರಂತ ಹಾಗೂ ಶಾಸನದ ಮೂಲಪಾಠವನ್ನು ನೀಡಿದ ಡಾ|| ಶ್ರೀನಿವಾಸ ರಿತ್ತಿ., ಬಿ. ರಾಜಶೇಖರಪ್ಪ ಮತ್ತು ಡಾ|| ಎಂ. ಜಿ. ಮಂಜುನಾಥ ಇವರಿಗೆ ನನ್ನ ಕೃತಜ್ಞತೆಗಳು.

೧. ಎ.ಕ., ಸಂ.೮, ಸಾಗರ ೧೦೬.
೨. ಅದೇ, ಸಾಗರ ೯೩.

* ನಂ ೬೬, ೧ನೇ ಅಡ್ಡರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ, ೫೭೭ ೨೦೧

ಕೇಶವ ಉಮರ್ಜಿ *

ಜಮಖಂಡಿಯ ಯೋಗನಾರಾಯಣ



ಬಾಗಲಕೋಟೆ ಜಿಲ್ಲೆಯಲ್ಲಿ ಜಮಖಂಡಿಯು ಒಂದು ತಾಲೂಕು ಕೇಂದ್ರ. ಒಂದು ಕಾಲಕ್ಕೆ ಇದು ಅಗ್ರಹಾರವಾಗಿತ್ತು. ಇಲ್ಲಿಯ 'ಶ್ರೀ ಯೋಗ ನಾರಾಯಣ ಗುಡಿ' ಎಂದು ಕರೆಯಲ್ಪಡುವ ದೇವಸ್ಥಾನ ಶ್ರೀ ಕಟ್ಟೆಯ ಮನೆತನದವರ ಅಧೀನದಲ್ಲಿದೆ.

ಮೂರ್ತಿ ಶಿಲ್ಪ : ಮೂರ್ತಿಯು ಕುಳಿತ ಭಂಗಿಯಲ್ಲಿದೆ. ಸುಮಾರು ನಾಲ್ಕು ಅಡಿ ಎತ್ತರ ಮತ್ತು ಮೂರು ಅಡಿ ಅಗಲವಿರುವ ಕರಿ ಕಲ್ಲಿನ ಮೂರ್ತಿಗೆ ಸಹಸ್ರಮಾನದ ಇತಿಹಾಸವಿದೆ. ಶಂಖ, ಚಕ್ರಗಳ ಸ್ಪಷ್ಟ ಕೆತ್ತನೆಯಿಂದ ವಿಷ್ಣುಮೂರ್ತಿ ಎಂದು ತಿಳಿಯಲು ಸಹಕಾರಿಯಾಗಿದೆ. ವಿಷ್ಣುವಿನ ಇಪ್ಪತ್ನಾಲ್ಕು ರೂಪಗಳಲ್ಲಿ ಎರಡನೆಯದಾದ ನಾರಾಯಣ ರೂಪವಿದಾಗಿದ್ದರೂ ರೂಪ ಮಂಡನ ಗ್ರಂಥದಲ್ಲಿ ವಿವರಿಸಿರುವ ರೀತಿಯಲ್ಲಿ ಶಂಖ, ಚಕ್ರಗಳನ್ನು ಹಿಡಿಯದೇ ತನ್ನದೇ ಆದ ವಿಶೇಷ ಭಂಗಿಯಲ್ಲಿ ಮೂರ್ತಿಯನ್ನು ನಿರ್ಮಿಸಿದ್ದಾನೆ ಶಿಲ್ಪಿ.

ಮುಂದಿನ ಎರಡೂ ಹಸ್ತಗಳು ತೊಡೆಯ ಮೇಲಿದ್ದು, ಬಲ ಹಸ್ತವು ಮೇಲ್ಮುಖವಾಗಿ ಎಡಹಸ್ತದ ಮೇಲೆ ಇಡಲಾಗಿದೆ. ಕಣ್ಣುಗಳು ಅರ್ಧ ನಿಮೀಲಿತವಾಗಿರುವುದ ಯೋಗ ಮುದ್ರೆಯ ಸಂಕೇತವಾಗಿದೆ. ಹಿಂದಿನ ಬಲಗೈಯಲ್ಲಿ ಶಂಖವಿರುವುದರಿಂದ ಇದು ಲಕ್ಷ್ಮೀಯೋಗನಾರಾಯಣವೆಂದು ಪ್ರತೀತಿ. ಅದರಂತೆ ಹಿಂದಿನ ಎಡಗೈಯಲ್ಲಿ ಚಕ್ರವಿದೆ. ತಲೆಯ ಮೇಲೆ ಕಿರೀಟ ಮುಕುಟವಿದೆ. ಕಿವಿಗಳಲ್ಲಿ ಭುಜದ ಮೇಲೆ ಇಳಿ ಬಿದ್ದಿರುವ ಮಕರ ಕುಂಡಲಗಳಿವೆ. ಕಂಠದ ಮೇಲೆ ಮೂರು ಗೆರೆಗಳಿರುವದು ಯೋಗಿಗಳಿಗೆ ಶುಭ ಲಕ್ಷಣವೆಂದು ಆಖ್ಯಾಯಿಕೆ. ಮತ್ತು ಕಂಠದಲ್ಲಿ ಕಂಠೀಹಾರವಿದೆ. ವಕ್ಷಸ್ಥಲದಲ್ಲಿ ಸಾಲಿಗ್ರಾಮವನ್ನು ಕೂಡಿಸಿದ್ದಾರೆ. ಎದೆಯ ಮೇಲೆ ಕೌಸ್ತುಭಹಾರವಿದೆ. ಜನಿವಾರದ ಎಳೆಗಳೂ ಸ್ಪಷ್ಟವಾಗಿ ಕಾಣುತ್ತವೆ. ಮಣಿಪುರದ ಮೇಲೆ ಉದರಬಂಧವಿದೆ. ಮುಂದಿನ ಎರಡು ಹಸ್ತಗಳಲ್ಲಿ ಕೇಯೂರ ಬಂಧವೂ, ನಾಲ್ಕೂ ಹಸ್ತಗಳಲ್ಲಿ ಕಂಕಣಗಳೂ ಶೋಭಿಸುತ್ತಿವೆ. ಕಟಿಭಾಗದಲ್ಲಿ ಉತ್ತರೀಯ ಬಂಧವಿದೆ. ಪಾದಗಳಲ್ಲಿ ಪಾದ ಸರವಿದೆ.

ಇದು ಮುಖ್ಯಮೂರ್ತಿಯ ವಿವರವಾದರೆ, ಈ ಮೂರ್ತಿಯ ಸುತ್ತಲೂ ಮಂಟಪರೀತಿಯಲ್ಲಿ ಬಿಡಾವಣೆ ಗೊಂಡಿರುವ ಪ್ರಭಾವ ಮಂಡನ ಅಥವಾ ಪ್ರಭಾವಳಿಯ ಆವರಣವಿದೆ. ಎರಡು ಪಾರ್ಶ್ವಗಳಲ್ಲಿ ಕುಶಲತೆಯಿಂದ ಕೆತ್ತಿದ ಎರಡು ಕಲ್ಲಿನ ಕಂಬಗಳು ನಿಂತಿವೆ. ಅವುಗಳ ಮೇಲೆ ಇಬ್ಬದಿಯಿಂದ ಎತ್ತರವಾಗಿ ಹಬ್ಬಿದ ಬಳ್ಳಿಯ ಸುಳಿಯಂತೆ ಅಥವಾ ಸಪ್ತ ಹೆಡೆಗಳ ಶೇಷಾಚ್ಛಾದದಂತೆ ಕಂಡು ಬರುವ ಸುಳಿಗಳಲ್ಲಿ ದಶಾವತಾರ ರೂಪಗಳನ್ನು ಕೆತ್ತಲಾಗಿದೆ. ಬಲಬದಿಗೆ ಮತ್ಸ್ಯ ಕೂರ್ಮ, ವರಾಹ, ನರಸಿಂಹ, ವಾಮನ ಅವತಾರಗಳೂ, ಎಡಬದಿಗೆ ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಅವತಾರಗಳೂ ಮೂಡಿ ಬಂದಿವೆ. ಈ ಆವರಣದ ನಡುವೆ ಪದ್ಮಾಸನಸ್ಥ ಯೋಗ ಮುದ್ರೆಯಲ್ಲಿ ಕುಳಿತ ಶ್ರೀ ನಾರಾಯಣಮೂರ್ತಿ ಪೀಠದ ಮೇಲೆ ವಿರಾಜ ಮಾನವಾಗಿದೆ. ಕೆಳಗೆ ಮೂರ್ತಿಯ ಎರಡೂ ಬದಿಗೆ ಶ್ರೀದೇವಿ. ಭೂದೇವಿಯರು ನಿಂತ ಭಂಗಿಯಲ್ಲಿದ್ದಾರೆ. ಇದೆಲ್ಲವೂ ಒಂದೇ

* ಅಗಸ್ತ್ಯ ಕುಟೀರ, ಹುನ್ನೂರು, ಜಮಖಂಡಿ ತಾ. ಬಾಗಲಕೋಟೆ ಜಿಲ್ಲೆ - ೫೮೭ ೧೧೯

ಕಪ್ಪು ಶಿಲೆಯಲ್ಲಿ ಕಟೆದಿದ್ದು ನಯವಾಗಿ ನುಣುಪಿನ ಮೆರುಗು ಕೊಟ್ಟಿದ್ದರಿಂದ ಮೂರ್ತಿಯ ತೇಜಸ್ಸು ವೃದ್ಧಿಂಗತವಾಗಿದೆ. ಕಿರೀಟದಿಂದ ಪಾದದವರೆಗೆ ಮೂರ್ತಿಯ ಸಕಲಾಂಗಗಳು ಪ್ರಮಾಣ ಬದ್ಧವಾಗಿದ್ದು, ಸೂಕ್ಷ್ಮ ಕೆತ್ತನೆಯಿಂದ ಶಿಲ್ಪಿಯ ನೈಪುಣ್ಯತೆಯು ಇಲ್ಲಿ ಎದ್ದು ಕಾಣುತ್ತದೆ. ಈ ಶಿಲ್ಪದ ಕೆತ್ತನೆಯು ಸುಮಾರು ಹನ್ನೊಂದನೆಯ ಶತಮಾನಕ್ಕೆ ಸೇರಿದ ಕಲ್ಯಾಣದ ಕಳಚೂರ್ಯರ (ಅರಸ-ನಿಶ್ಯಂಕಮಲ್ಲ ಸಂಕಮ) ಕಾಲದ್ದೆಂದು ಹೇಳಬಹುದು.

ದೇವಾಲಯ

ದೇಹೋ ದೇವಾಲಯಃ ಪ್ರೋಕ್ತ ಜೀವೋ ದೇವಃ ಸನಾತನಃ' ಎಂಬಂತೆ ವಾಸ್ತು ವಿದ್ಯೆಯ ನೆಲೆಯಲ್ಲಿ ದೇವಾಲಯಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ದೇವಾಲಯವೇ ಒಬ್ಬ ಮನುಷ್ಯನಂತೆ. ದೇವಾಲಯ ರಚನೆಯೂ ಮನುಷ್ಯನ ದೇಹ ರಚನೆಯಂತೆಯೇ ಎಂಬ ಕಾರಣಕ್ಕೆ 'ಪ್ರಾಸಾದ ಪುರುಷ' ಎನ್ನುವ ಮಾತು ಬಳಕೆಯಲ್ಲಿ ಬಂದಿರುವುದಾಗಿ ಸಂಸ್ಕೃತ ಸಾಹಿತ್ಯ ತಿಳಿಸುತ್ತದೆ.

ಪ್ರಸ್ತುತ ನಮ್ಮ ಜಮಖಂಡಿಯ ಶ್ರೀ ಯೋಗನಾರಾಯಣ ದೇವಾಲಯವು ಉತ್ತರಕ್ಕೆ ಮುಖಮಾಡಿರುವ ಚತುರಸ್ರಾಕಾರದ ಸುತ್ತಲೂ ಪ್ರದಕ್ಷಿಣಾ ಪಥವನ್ನು ಹೊಂದಿರುವ ಒಟ್ಟು ಹದಿನಾಲ್ಕು ಕಂಬಗಳ ಮೇಲೆ ನಿಂತಿರುವ ದೇವಾಲಯವಾಗಿದೆ. ನಾಲ್ಕು ಕಂಬಗಳ ಮೇಲೆ ನಿಂತಿರುವ ಗರ್ಭಗೃಹವನ್ನು, ಆ ಕಂಬಗಳನ್ನೇ ಜೋಡಿಸಿದಂತೆ ಕಲ್ಲಿನ ಗೋಡೆ ಕಟ್ಟಿ ಗರ್ಭಗೃಹವನ್ನಾಗಿ ಮಾಡಿದಂತಿದೆ. ಅದಕ್ಕೆ ಉತ್ತರಗೋಡೆಗೆ ಹೊಂದಿಕೊಂಡು ಮೂರು ಪಟ್ಟು ವಿಶಾಲವಾದ ಹನ್ನೆರಡು ಕಂಬಗಳ ನವರಂಗವಿದೆ. ದೇವಾಲಯ ರಚನೆಗೆ ಸರಳವಾದ ಕಣಶಿಲೆಯನ್ನು ಉಪಯೋಗಿಸಲಾಗಿದೆ. ಪ್ರತಿ ಕಂಬಗಳ ಮೇಲ್ಭಾಗ ಇಂಡೋ-ಇಸ್ಲಾಮಿಕ್ ವಾಸ್ತು ಶೈಲಿಯ ಕಮಾನುಗಳನ್ನು ಮತ್ತು ಮೇಲಿನ ಮಾಡನ್ನು ಗಚ್ಚು ಮತ್ತು ಗಾರೆಗಳಿಂದ ನಿರ್ಮಿಸಲಾಗಿದೆ. ಉತ್ತರ ಭಾಗವನ್ನು ಹೊರತು ಪಡಿಸಿ ಮೂರು ದಿಕ್ಕುಗಳಿಗೂ ಇರುವ ಹೊರ ಕಂಬಗಳನ್ನು ಜೋಡಿಸಿ ಗೋಡೆ ಕಟ್ಟಲಾಗಿದೆ. ಎಲ್ಲ ಕಂಬಗಳೂ ವಿಶಾಲವಾದ, ಚೌಕಾಕಾರದ ಕಲ್ಲಿನ ಕಂಬಗಳಾಗಿದ್ದು ಅವುಗಳ ಮೇಲಾಗಲೀ, ಗೋಡೆಯ ಮೇಲಾಗಲೀ ಯಾವುದೇ ಶಿಲ್ಪಕಲೆಯ ಕೆತ್ತನೆಯನ್ನು ಮಾಡಲಾಗಿಲ್ಲ.

ಗರ್ಭಗೃಹದ ಮೇಲ್ಭಾಗವು ನಾಗರ ಶೈಲಿಯ ವಿಮಾನ ಗೋಪುರವನ್ನು ಹೊಂದಿದ್ದು ತುತ್ತತುದಿಗೆ ಕುಂಭಾದಾಕಾರದ ಪಂಚ ಲೋಹದ ಶಿಖರವನ್ನು ನಂತರ ಅಳವಡಿಸಲಾಗಿದೆ.

ಗರ್ಭಗೃಹದಿಂದ ಹೊರಗೆ ಬಂದಾಗ ನವರಂಗದ ಬಲಕ್ಕೆ ಈಶ್ವರ ಲಿಂಗವಿದೆ. ಇದನ್ನು ದೇವಾಲಯ ಕಟ್ಟಿದ ನಂತರ ಬಹು ಸಮಯದ ನಂತರ ತಂದು ಇಟ್ಟಿರುವುದು ತಿಳಿದು ಬರುತ್ತದೆ.

ಅದರಂತೆ ನವರಂಗದ ಮುಂಭಾಗ ಮೂರು ಅಡಿಗಳಷ್ಟು ಹೆಚ್ಚಿಗೆ ಮಾಡಿ ಅದನ್ನೂ ನಂತರದಲ್ಲಿ ಕಟ್ಟಿರುವುದು ಸಹ ತಿಳಿದು ಬರುತ್ತದೆ.


ನವರಂಗ ಮತ್ತು ಗರ್ಭಗೃಹವನ್ನು ಹೊರತು ಪಡಿಸಿ ಹೊರಗಡೆಯಿಂದ ಸುತ್ತಲೂ ಕೋಟೆ ಕಟ್ಟಿದಂತೆ ಎತ್ತರವಾದ ಗೋಡೆ ಇದ್ದು ಅದಕ್ಕೆ ಪಶ್ಚಿಮಕ್ಕೆ ಒಂದು ವಿಶಾಲವಾದ ಪ್ರವೇಶದ್ವಾರವೂ ಉತ್ತರಕ್ಕೆ ಒಂದು ಗೋಪುರ ದ್ವಾರವೂ ಇವೆ. ಈ ಗೋಡೆ ಮತ್ತು ದೇವಾಲಯದ ಮಧ್ಯದ ಸುತ್ತುವರೆದ ಭಾಗವನ್ನು ಪ್ರದಕ್ಷಿಣಾ ಪಥವಾಗಿ ಬಳಸಲಾಗುತ್ತಿದೆ. ಪೂರ್ವದ ಗೋಡೆಗಂಟಿಕೊಂಡು ದೇವಾಲಯದ ಮಾಲಿಕರು ತಮ್ಮ ವಾಸದ ಮನೆ ಕಟ್ಟಿಕೊಂಡಿರುತ್ತಾರೆ.

ದೇವಾಲಯದ ಪಶ್ಚಿಮ ದ್ವಾರದ ಎದುರಿಗೆ ಬೃಹದಾಕಾರದ ಹೊಕ್ಕು ಬಾವಿ ಇದ್ದು ಇತ್ತಿತ್ತಲಾಗಿ ಅಂದರೆ ಸುಮಾರು ೫೫ ವರ್ಷಗಳ ಹಿಂದೆ ಅದನ್ನು ಮುಚ್ಚಿ ಸುತ್ತಲೂ ಮನೆಗಳನ್ನು ಕಟ್ಟಿಕೊಂಡಿರುವದು ತಿಳಿದು ಬರುತ್ತದೆ. ಈಗಲೂ ಈ ಪ್ರದೇಶದಲ್ಲಿ ಮೂರು ತ್ರಿಕೂಟೇಶ್ವರ ದೇವಸ್ಥಾನಗಳಿವೆ.

ಮೂರ್ತಿಯು ಜಮಖಂಡಿಗೆ ಬಂದ ಕಥೆ

ಕನಸಿನಲ್ಲಿ ಬಂದು 'ಕೆರೂರು ಪಾಳ್ಯದ ಬಾವಿಯಲ್ಲಿ ಬಿದ್ದಿದ್ದೇನೆ'. ಕಟಗೇರಿ ಬಾವಿಯಲ್ಲಿ ಬಿದ್ದಿದ್ದೇನೆ, ಮೇಲೆತ್ತಿ' ಎಂದು ಈ ಮೂರ್ತಿಯ ಆದೇಶದಂತೆ ವೆಂಕಟಕೃಷ್ಣಾಚಾರ್ಯರು ಕೆರೂರು ಪಾಳ್ಯವನ್ನು ಹುಡುಕುತ್ತ ನರಗುಂದದ ವೆಂಕಟರಾವ್ ಭಾವೆ ಎಂಬುವರ ಅಧೀನದಲ್ಲಿದ್ದ ಬಾಗಲಕೋಟೆ-ಬದಾಮಿ ನಡುವಿನ ಕಟಗೇರಿಗೆ ಹೋದರು. ವೆಂಕಟಕೃಷ್ಣಾಚಾರ್ಯರು ತಮ್ಮ ಸಂಗಡಿಗರೊಂದಿಗೆ ನರಗುಂದದ ವೆಂಕಟರಾವ್ ಭಾವೆಯವರನ್ನು ಭೆಟ್ಟಿಯಾಗಿ ಅವರ ನೆರವಿನಿಂದ ಕಟಗೇರಿ ಬಾವಿಯನ್ನು ಸ್ವಚ್ಛ ಮಾಡಿಸಿದಾಗ ಅಲ್ಲಿ ಐದು ವಿಷ್ಣು ವಿಗ್ರಹಗಳು ಸಿಕ್ಕುವಂತೆ. ಅವುಗಳಲ್ಲಿ ಒಂದನ್ನು ಕಟಗೇರಿಯಲ್ಲಿ ಸ್ಥಾಪಿಸಿದರು. ಒಂದನ್ನು ವೆಂಕಟಕೃಷ್ಣಾಚಾರ್ಯರು ಜಮಖಂಡಿಗೆ ತಂದರು. ಉಳಿದ ಮೂರನ್ನು ಗದಗ, ಬಾಗಲಕೋಟೆ ಮತ್ತು ನರಗುಂದಗಳಲ್ಲಿ ತಲಾ ಒಂದೊಂದರಂತೆ ಪ್ರತಿಷ್ಠಾಪಿಸಿದರೆಂದು ಹೇಳಿಕೆ ಇದೆ.

ಪ್ರಸ್ತುತ ಜಮಖಂಡಿಗೆ ತಂದ ಮೂರ್ತಿಯನ್ನು ಆಗ ಜಮಖಂಡಿಯನ್ನಾಳುತ್ತಿದ್ದ ಗದಿಗೆಪ್ಪ ದೇಸಾಯಿ ಕೊಣ್ಣೂರು ಈತನು ಊರಲ್ಲಿ ತರಲು ವಿರೋಧ ಮಾಡಿದಾಗ ಕೆಲವು ವೈಷ್ಣವ ಮತಾನುಯಾಯಿಗಳೆಲ್ಲ ಸೇರಿ ಅವನ ಮನ ಒಲಿಸಿ ತಂದರಂತೆ. ಆ ಶುಭದಿನ ಶ್ರಾವಣ ಶುದ್ಧ ಪಂಚಮಿ (ನಾಗಪಂಚಮಿ) ಶಕೆ ೧೬೬೪ (ರವಿವಾರ ದಿನಾಂಕ ೬.೮.೧೭೪೨) ಆ ಮೂರ್ತಿಯನ್ನು ಮೊದಲು ಕಟ್ಟಿಯವರು ತಮ್ಮ ಮನೆಯಲ್ಲಿಟ್ಟು ಪೂಜಿಸುತ್ತಿದ್ದರು. ನಂತರ ಭಾದ್ರಪದ ವದ್ಯ ದಶಮಿ ಶಕೆ-೧೬೭೦ ವಿಭವನಾಮ ಸಂವತ್ಸರ (ಸೋಮವಾರ ದಿನಾಂಕ ೧೭.೯.೧೭೪೮) ರಂದು ಅಂದರೆ ಆರು ವರ್ಷಗಳ ನಂತರ ದೇವಸ್ಥಾನವನ್ನು ಕಟ್ಟಲು ಪ್ರಾರಂಭಿಸಲಾಯಿತು. ಮತ್ತು ವೈಶಾಖ ಶುದ್ಧ ತೃತೀಯೆಯಂದು ವಿಧ್ಯುಕ್ತವಾಗಿ ದೇವಸ್ಥಾನದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು' - ಎಂಬ ಮಾತನ್ನು ಶ್ರೀ ರವೀಂದ್ರ ನಾ. ಕಟ್ಟಿಯವರು ತಮ್ಮ ಮನೆಯಲ್ಲಿ ದೊರೆತ ಮರಾಠಿ ಲೇಖನ ಮತ್ತು ಶೋಭಾನೆ ಪದದ ಆಧಾರದ ಮೇಲೆ ಹೇಳುತ್ತಾರೆ. ಅವರಿಗೆ ಈ ಲೇಖಕನು ಆಭಾರಿ.



ಡಾ. ಬೆಂ. ಶಾ. ಶ್ಯಾಮಲಾ ರತ್ನಕುಮಾರಿ*

ಬುರುಡಗುಂಟದ ಶಾಸನಗಳು-ದೇವಾಲಯಗಳು



ಬುರುಡಗುಂಟ ಗ್ರಾಮವು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಚಿಲಕಲನೇರ್ಪು ಹೋಬಳಿಗೆ ಸೇರಿದ್ದು ಮರಬಹಳ್ಳಿ ಪಾಪಘ್ನಿ ನದಿಯ ಬಲದಂಡೆಯ ಮೇಲಿದೆ. ಚಿಂತಾಮಣಿಯಿಂದ ೨೮ ಕಿ.ಮೀ. ದೂರದಲ್ಲಿದೆ, 'ಬುರುಡಗುಂಟ' ಎಂಬ ಹೆಸರು ಈ ಗ್ರಾಮಕ್ಕೆ ಬರಲು ಕಾರಣ ಗ್ರಾಮದ ಉತ್ತರದಿಕ್ಕಿನಲ್ಲಿ ಇಡೀ ಗ್ರಾಮವನ್ನೆ ಆವರಿಸಿರುವ ಒಂದು ದೊಡ್ಡ ಕೆರೆ ಎಂದು ಹೇಳಬಹುದು. ಈ ಗ್ರಾಮದ ಜನರು ಈ ಕೆರೆಯನ್ನು ಪೆದ್ದ ಚೆರುವು ಎಂದು ಕರೆಯುತ್ತಾರೆ. ಪೆದ್ದ ಎಂದರೆ ದೊಡ್ಡ ಅಥವಾ ಬೃಹತ್ ಎಂದೂ ಚೆರುವು ಎಂದರೆ ಕೆರೆ ಅಥವಾ ಕುಂಟೆ (ಗುಂಟ) ಎಂದರ್ಥ. ಹೀಗೆ ಬೃಹತ್ (ಭೂರುಡು) ಮತ್ತು ಚೆರುವು (ಕುಂಟೆ, ಕೆರೆ) ಎರಡೂ ಸೇರಿ ಬುರುಡುಗುಂಟ ಎಂದಾಗಿದೆ.

ಬುರುಡಗುಂಟ ವಿಜಯನಗರದರಸರ ಕಾಲದಲ್ಲಿ 'ಸೀಮೆ' ಎಂಬ ಆಡಳಿತ ಘಟಕವೂ, 'ಸ್ಥಲ' (ಗ್ರಾಮಸಮೂಹ)ವೂ ಆಗಿದ್ದಿತೆಂದು ಶಾಸನಗಳಿಂದ ತಿಳಿದುಬರುತ್ತವೆ. ಶಾಸನಗಳಲ್ಲಿ ಮತ್ತು ಗ್ರಾಮದಲ್ಲಿರುವ ನಾಮಫಲಕಗಳಲ್ಲಿ ಈ ಬುರಡಕುಂಟ, ಬುರುಡುಕುಂಟ, ಬುರುಡಗುಂಟ - ಇತ್ಯಾದಿ ರೂಪಗಳಲ್ಲಿ ಕಾಣಸಿಗುತ್ತದೆ. ಐತಿಹ್ಯದ ಪ್ರಕಾರ ಈ ಗ್ರಾಮವನ್ನು 'ದ್ವಿರದಪುರಿ' (ದ್ವಿರದ - ಆನೆ) ಎಂದು ಕರೆಯಲಾಗುತ್ತದೆ.

ವಿಜಯನಗರದ ಪತನಾನಂತರ ಪ್ರವರ್ಧಮಾನಕ್ಕೆ ಬಂದ ಆವತಿನಾಡ ಪ್ರಭುಗಳ ಮತ್ತು ಸುಗಟೂರು ಪಾಳೆಯಗಾರರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟ ತನ್ನ ರಾಜಕೀಯ ಪ್ರಾಮುಖ್ಯತೆಯನ್ನು ಮುಂದುವರೆಸಿಕೊಂಡು ಬಂದಿರುವ ಅಂಶವೂ ಶಾಸನಗಳಿಂದ, ಗ್ರಾಮದಲ್ಲಿರುವ ದೇವಾಲಯಗಳಿಂದ, ಐತಿಹ್ಯಗಳಿಂದಲೂ ಸ್ಪಷ್ಟವಾಗುತ್ತವೆ. ಬಾಗೇಪಲ್ಲಿ ತಾಲ್ಲೂಕಿನ ಶಾಸನವೊಂದರಲ್ಲಿ ಬುರುಡುಗುಂಟೆ ರಾಜ್ಯ ಎಂಬ ಉಲ್ಲೇಖವೂ ಇದೆ. ಇಲ್ಲಿ ಹಿಂದೆ ಟಂಕಸಾಲೆಯನ್ನು ಸ್ಥಾಪಿಸಿದ ಪಾಳೆಯಗಾರರು ಎರಡು ಆನೆಗಳ ಸೊಂಡಿಲುಗಳು ಹೆಣೆದಂತಿರುವ ಚಿತ್ರವಿರುವ ನಾಣ್ಯಗಳನ್ನು ಹಾಕಿಸಿದ್ದರಂತೆ.

ಶಾಸನಗಳು : ಬುರುಡಕುಂಟ ಗ್ರಾಮದಲ್ಲಿ ನಾಲ್ಕು ಶಾಸನಗಳಿದ್ದು.[೧] ಈ ನಾಲ್ಕೂ ಶಾಸನಗಳೂ ತ್ರುಟಿತವಾಗಿವೆ, ಅಪೂರ್ಣವಾಗಿವೆ ತೆಲುಗು ಭಾಷೆಯಲ್ಲಿವೆ. ಈ ಶಾಸನಗಳ ಪಾಠಗಳು ಮತ್ತು ವಿವರಗಳು ಇಂತಿವೆ.

ಬುರುಡಗುಂಟ ಗ್ರಾಮದ ಮಾದಿಗರ ಹೊಲದಲ್ಲಿರುವ ಶಾಸನ

ಶುಭಮಸ್ತು ಶ್ರೀಗಣಾ
ಧಿಪತೆಯೇ ನಮಃ ಮನ್ಮಥ ಸಂವತ್ಸರಂವ
ಯಿಶಾಕ ಸು ೧ ಲು ಶ್ರೀಮನ್ ಮಹಾ
ಮಂಡಲೇಶ್ವರ ಪೆದತಿರುಮಲದೇ
ವಮಹಾರಾಜಲ ಕಾರ್ಯಕರ್ತ
ಲಯಿನ ಬುಕರಪಯ್ಯವಾರಿ
ಅಂಣಯಾ ಸಮುಖದೇ
ವಿಯ............

(ಮುಂದೆ ಕಾಣುವುದಿಲ್ಲ).

ಬುರುಡಕುಂಟ ಗ್ರಾಮದ ಕೋಟೇಬಾಗಿಲ ಆಂಜನೇಯ ದೇವಸ್ಥಾನದ ಬಾಗಿಲಲ್ಲಿರುವ ಶಾಸನ

ಶುಭಮಸ್ತು ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವ್ ರ್ಷಂಬುಲು ೧೫೨೯ ಅಗುನೆಟ್ ಪ್ಲವಂಗ ಸಂವತ್ಸರ ಚೈತ್ರಬ್..ಲು ಶ್ರೀಮತು ಬುರುಡಕುಂ್ ಟಿಲೋನಿ ಕೋಟವಾಕಿಲಮುಂದ್ ರ ಹನುಮಂತುರಾಯಕಿ ದೀಪಾರಾಧನವ................

* ಮುಖ್ಯಸ್ಥರು, ಇತಿಹಾಸ ವಿಭಾಗ, ಬಸವೇಶ್ವರ ಪ್ರಥಮದರ್ಜೆ ಮಹಾವಿದ್ಯಾಲಯ ರಾಜಾಜಿನಗರ, ಬೆಂಗಳೂರು - ೧೦

ಬುರುಡಗುಂಟ ಗ್ರಾಮದ ಗಂಗಮ್ಮನ ಊರಬಾಗಿಲ ಶಾಸನ

ಸ್ವಸ್ತಿ ಶ್ರೀವಿಜಯಾಭ್ಯು
ದಯ ಶಾಲಿವಾಹನ ಶಕವರ್ಷ
ಂಬುಲು
೧೫೬೬ ಅಗುನೆಟಿ ಪಾರ್ಥಿವ
ಸಂವತ್ಸರ ಶ್ರಾವಣ
೫ಲು ಆದವೇನಿ ಕ್ರಿಷ್ಣ ಮಾರಾಜಯ್ಯ
ಗಂಗರಾಜು ಪಾರುಪತೆನಗ್ರಾಮ


ಸೇವಾಡುಯೇಮ..........
ಕಾಮಾಡಿಗೆವಾನಿಕಿಶೀತಂ.....ವಾನಿಕಿ
ತೊ...ಪ...ವುಂಡೆ.........
ಡುಮುದಯಿಡಿಗೆಲಿವಿನವಿ
(ಮುಂದೆ ಕಾಣುವುದಿಲ್ಲ)

ಬುರುಡಕುಂಟೆ ಗ್ರಾಮದ ರಾಮೇಶ್ವರ ದೇವಸ್ಥಾನದ ಬಲಪಾರ್ಶ್ವದ ಶಾಸನ


ನಮಸ್ತುಂಗಶಿರಶ್ಚುಂಬಿ
ಚಂದ್ರಚಾಮರ ಚಾರವೇ।ತ್ರೈ
ಯಿಲೋಕ್ಯ ನಗರಾರಂಭ
ಮೂಲಸ್ತಂಭಾ
ಯಶಂಭವೇ॥ ಸ್ವಸ್ತಿ ಶ್ರೀವಿ
ಜಯಾಭ್ಯುದಯ ಶಾಲಿ
ವಾಹನ ಶಕವರುಷಂ

ಬುಲು ೧೪೯೨ ಆಗುನೆ
ಟಿಪ್ರಮೋದ ಸಂವತ್ಸರ
ವೈಶಾಖ ಶು ಸೋಮಪುಂಣ್ಯ
ಕಾಲಮುಂದು ಶ್ರೀಮದ್ರಾ
ಜಾಧಿರಾಜ ಪರಮೇಶ್ವರ
ಶ್ರೀ ವೀರಪ್ರತಾಪ

ಶ್ರೀವೀರಸದಾಶಿವರಾಯ
ದೇವಮಹಾರಾಯಲು
ಗಾಜಪೆ...೫೦೦ ಡಪ
ಮಂ.....................ಸಿಂ
ಹ್ವಾ.......................ಲೈ
ಹಿಂಭಾಗ.........................
ಸೌಂರಕ್ಯೋದಹಾ
ನ ಧಾರಾಪೂರ್ವಕಂಗಾ
....



ಈ ಮೇಲೆ ಹೇಳಿರುವ ಪ್ರಕಟಗೊಂಡಿರುವ ಶಾಸನಗಳಲ್ಲದೆ ಬುರುಡಕುಂಟ ಗ್ರಾಮದ ಹೊರಭಾಗದಲ್ಲಿರುವ ಶ್ರೀ ವೆಂಕಟರಮಣ ದೇವಾಲಯದಲ್ಲಿ ಮೂರು ಅಪ್ರಕಟಿತ ಶಾಸನಗಳಿವೆ. ದೇವಾಲಯದ ಪಶ್ಚಿಮ ಮುಖ್ಯದ್ವಾರದ ಎಡಗಡೆ ಹೊರಭಿತ್ತಿಯಲ್ಲಿ ಒಂದು ಸಾಲಿನ ಶಾಸನವಿದ್ದು ಅದರಲ್ಲಿ ಸೂರ್ಯ ಚಂದ್ರರ ಕೆತ್ತನೆ ಇದೆ. ಎರಡನೇ ಶಾಸನವು ಅದೇ ದ್ವಾರದ ಅಧಿಷ್ಠಾನದಲ್ಲಿ ತ್ರಿಪಟ್ಟ ಕುಮುದದ ಭಾಗದಲ್ಲಿ ಮತ್ತು ಅದರ ಕೆಳಗಿನ ಪಟ್ಟಿಕಾ ಭಾಗದಲ್ಲಿ ಮೂರು ಸಾಲು ಹಾಗೂ ಎರಡು ಸಾಲುಗಳ ಶಾಸನವಿದೆ. ಭಾಷೆ ತೆಲುಗು ಲಿಪಿ ಕನ್ನಡ. ಅಕ್ಷರಗಳು ಗಟ್ಟಿಶಿಲೆಯಲ್ಲಿ ಅಷ್ಟಾಗಿ ಆಳವಾಗಿ ಮೂಡಿಬಂದಿರುವುದಿಲ್ಲ. ಕೆಲವು ಕಡೆ ಅಕ್ಷರಗಳು ಸವೆದಿವೆ. ಓದಲು ಸಾಧ್ಯವಾಗಿರುವ ಭಾಗದಿಂದ ತಿಳಿದುಬರುವ ವಿವರ ಎಂದರೆ ಶಾಸನವು 'ಶುಭಮಸ್ತು' ಎಂದು ಆರಂಭವಾಗಿ 'ಐದು ಆಷಾಡ ಶುಕ್ರ'.... ಎರಡನೇ ಸಾಲಿನಲ್ಲಿ 'ಹಿರಣ್ಯಸಾನಿಗಾರು ಬುರುಡಗುಂಟ ಸ್ಥಲಮಂದು' ದೈವತಕು ವೆಲಸಿಯನು....' ಎಂದಿದೆ.




ಮೂರನೇ ಶಾಸನವು ದೇವಾಲಯದ ಆವರಣದೊಳಗೆ ಇದೆ. ಇದು ಗ್ರಂಥಲಿಪಿ ಅರವಕ್ಷರದಲ್ಲಿದೆ.

ದೇವಾಲಯಗಳಿಗೆ ನೀಡಿರುವ ದಾನ ದತ್ತಿಗಳನ್ನು ಈ ಎಲ್ಲ ಶಾಸನಗಳು ಉಲ್ಲೇಖಿಸುತ್ತವೆ. ಆದುದರಿಂದ ಈ ಎಲ್ಲ ಶಾಸನಗಳನ್ನು ದೇವಮಾನ್ಯ ಶಾಸನಗಳೆಂದು ಪರಿಗಣಿಸಬಹುದಾಗಿದೆ. ಕಾಲದ ದೃಷ್ಟಿಯಿಂದ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಸುಗಟೂರು ಮತ್ತು ಆವತಿನಾಡಿನ ಪಾಳೆಯಗಾರರ ಆಳ್ವಿಕೆಗೆ ಸೇರುತ್ತವೆ.

ಈ ಮೇಲಿನ ಶಾಸನಗಳ ಜೊತೆಗೆ ಶಿಡ್ಲಘಟ್ಟ ತಾಲ್ಲೂಕಿನ ಬಶೆಟ್ಟಿಹಳ್ಳಿ ಹೋಬಳಿಗೆ ಸೇರಿದ ಆನೆಮಡಗು ಗ್ರಾಮದ ದಕ್ಷಿಣಕ್ಕೆ ಇರುವ ಚನ್ನಿಗೇಶ್ವರ ದೇವಾಲಯದ ಒಳಗೆ ಉತ್ತರದಗೋಡೆಯ ಮೇಲಿಂದ ಶಾಸನ ಸಂಖ್ಯೆ ೧೦೪ರಲ್ಲೂ ಬುರಡಕುಂಟ ಸೀಮೆಯ ಉಲ್ಲೇಖವಿದೆ.* ಹಾಗೂ ಬಾಗೇಪಲ್ಲಿ ತಾಲ್ಲೂಕಿನ ಗುಡಿಬಂಡೆ ಹೋಬಳಿಗೆ ಸೇರಿದ ನಂಚೆರಲು ಗ್ರಾಮದಲ್ಲಿನ ಶಾಸನ ಸಂಖ್ಯೆ ೪ ರಲ್ಲಿ 'ಪೆನಗೊಂಡ ರಾಜ್ಯಂ ಕಾರಕುರಿಕೆಸಲಂ ಬುರಡಕುಂಟ ಸೀಮಲೋನು' ಎಂಬ ಉಲ್ಲೇಖ ಕಂಡುಬರುತ್ತಿದೆ. ಈ ಶಾಸನಗಳೂ ವಿಜಯನಗರದ ಹಾಗೂ ಪಾಳೆಯಗಾರರ ಆಳ್ವಿಕೆಗೆ ಸೇರುತ್ತವೆ.

ದೇವಾಲಯಗಳು : ಬುರುಡಕುಂಟ ಗ್ರಾಮದ ಊರ ಹೊರಭಾಗದಲ್ಲಿ ಪಾಪಘ್ನಿ ನದಿಯ ದಂಡೆಯ ಮೇಲೆ ಚಿಕ್ಕದಾದ ಭೀಮೇಶ್ವರ ದೇವಾಲಯವಿದೆ. ಇದರಲ್ಲಿ ಗರ್ಭಗುಡಿ, ಮುಚ್ಚಿದ ಅಂತರಾಳ ಮತ್ತು ಚಿಕ್ಕ ನವರಂಗವಿದೆ. ಗರ್ಭಗುಡಿಯಲ್ಲಿರುವ ಲಿಂಗವು ಸು. ಎರಡೂವರೆ ಅಡಿ ಎತ್ತರವಿದೆ. ಲಿಂಗವನ್ನು ತೆಗೆದು (ಪ್ರಾಯಶಃ ನಿಧಿಗಾಗಿ) ಪುನಃ ಅಲ್ಲೇ ಇಡಲಾಗಿದೆ. ಛಾವಣಿಯಲ್ಲಿ ಪುಷ್ಪಾಲಂಕಾರವು ಅತ್ಯಂತ ಸರಳವಾಗಿದೆ. ಕಂಬಗಳಲ್ಲಾಗಲೀ,



ಒಳ ಹೊರಭಿತ್ತಿಗಳಲ್ಲಾಗಲೀ ಯಾವ ಕೆತ್ತನೆಯೂ ಇರುವುದಿಲ್ಲ. ಗರ್ಭಗುಡಿಯ ಮೇಲೆ ಗೋಪುರವೂ ಕಂಡುಬರುವುದಿಲ್ಲ. ಛಾವಣಿ ಸಮತಟ್ಟಾಗಿದೆ. ದಕ್ಷಿಣ ಮತ್ತು ಉತ್ತರದ ಕಡೆಗೆ ಪ್ರವೇಶದ್ವಾರಗಳಿವೆ

ಭೀಮೇಶ್ವರ ದೇವಾಲಯದಿಂದ ಸ್ವಲ್ಪದೂರ ಮುನ್ನಡೆದರೆ ಅತ್ಯಂತ ದೊಡ್ಡದಾದ ವಿಜಯನಗರ - ಪಾಳೆಯಗಾರರ ಕಾಲದ ದೇವಾಲಯ ಕಲಾಶೈಲಿಯಲ್ಲಿರುವ ದ್ವಿರದ ವೆಂಕಟರಮಣ ದೇವಾಲಯವಿದ್ದು. ಬುರುಡಕಂಟದಲ್ಲಿರುವ ದೇವಾಲಯಗಳಲ್ಲೆಲ್ಲಾ ಅತ್ಯಂತ ವಿಸ್ತಾರವಾಗಿದೆ. ದೇವಾಲಯದ ಸುತ್ತಲೂ ಪ್ರಾಕಾರವಿದ್ದು ಪಶ್ಚಿಮಾಭಿಮುಖವಾಗಿ ಮುಖ್ಯ ಪ್ರವೇಶದ್ವಾರವಿದೆ. ಉತ್ತರಾಭಿ ಮುಖವಾಗಿ ಇನ್ನೊಂದು ಪ್ರವೇಶ ದ್ವಾರವಿದೆ. ಈಗ ಪ್ರವೇಶ ದ್ವಾರಗಳ ಮೇಲೆ ಗೋಪುರವಿರುವುದಿಲ್ಲ. ಮೊದಲಿಗಿದ್ದಿರಬಹುದು. ಸದ್ಯ ದೇವಾಲಯವು ಸ್ಥಳೀಯ ಆಡಳಿತದ ಮುಖಂಡರಾಗಿದ್ದ ಶ್ರೀಮಾನ್ ಬಿ. ಎಂ. ನಾಗರಾಜು ಎಂಬುವವರಿಂದ ಜೀರ್ಣೋದ್ಧಾರಗೊಂಡಿದ್ದು ಪ್ರಾಕಾರದ ದಕ್ಷಿಣ ಮತ್ತು ಪೂರ್ವ



ದಿಕ್ಕುಗಳಲ್ಲಿ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದೆ. ಪ್ರಾಕಾರದ ನೈಋತ್ಯ ಮೂಲೆಯ ಭಾಗವು ಪೂರ್ಣವಾಗಿ ಕುಸಿದಿದೆ. ಪಶ್ಚಿಮದಿಕ್ಕಿನ ಮಹಾದ್ವಾರದ ದ್ವಾರಲಲಾಟದಲ್ಲಿ ಅನಂತಶಯನನ ಉಬ್ಬುಶಿಲ್ಪವು ಸುಂದರವಾಗಿದೆ. ದ್ವಾರದ ಇಕ್ಕೆಲದಲ್ಲಿ ಲತಾವಲ್ಲರಿಯನ್ನು ಹಿಡಿದ ಸುಂದರಿಯರ ಶಿಲ್ಪ ಹಾಗೂ ಲತಾಸುರುಳಿಗಳಲ್ಲೂ ಕುಸುರಿಶಿಲ್ಪಗಳೂ ಕಂಡು ಬರುತ್ತವೆ. ದ್ವಾರ ಬಂಧ ಹಾಗೂ ದ್ವಾರಭಿತ್ತಿಗಳಮೇಲೂ ಕೆಲವು ಚಿಕ್ಕ ಶಿಲ್ಪಗಳಿವೆ. ದ್ವಾರವು ಉಪಾನ ಮತ್ತು ಪಾದಬಂಧ ಅಧಿಷ್ಠಾನವನ್ನು ಹೊಂದಿದೆ. ವೇದಿ, ತ್ರಿಪಟ್ಟ ಕುಮುದ, ಕಪೋತ ಪಾದಗಳ ಭಾಗಗಳು ಅಧಿಷ್ಠಾನದಲ್ಲಿ ಕಂಡುಬರುತ್ತವೆ. ದ್ವಾರದ ಭುವನೇಶ್ವರಿ ಅತ್ಯಂತ ಕಲಾತ್ಮಕವಾದ ಇಳಿಬಿದ್ದ ಕಮಲಪುಷ್ಪ, ಅದರ ಸುತ್ತಲೂ ದ್ವಾರಪಾಲಕರ ಶಿಲ್ಪಗಳೂ ಮಧ್ಯೆ ಮಧ್ಯೆ ವಿಷ್ಣು ಲಕ್ಷ್ಮಿ ಶಿಲ್ಪಗಳೂ ಕಂಡರಿಸಲ್ಪಟ್ಟಿವೆ. ಪ್ರವೇಶದ್ವಾರದ ಒಳಭಾಗದ ಅಧಿಷ್ಠಾನದ ತ್ರಿಪಟ್ಟ ಕುಮುದದ ಭಾಗದಲ್ಲಿ ಐದು ಸಾಲುಗಳ ಶಾಸನ ಕಂಡುಬರುತ್ತದೆ. ಪ್ರವೇಶ ದ್ವಾರದಿಂದ ಒಳಹೋದರೆ ಪ್ರಾಕಾರದ ನಡುವೆ ದೇವಾಲಯದ ಗರುಡಮಂಟಪ, ಬಲಿಪೀಠ ಧ್ವಜಸ್ತಂಭ ಗಳಿವೆ. ದೇವಾಲಯದಲ್ಲಿ ತೆರೆದ ಮುಖಮಂಟಪ, ನವರಂಗ, ಅರ್ಧ ಮಂಟಪ, ಅಂತರಾಳ ಮತ್ತು ಗರ್ಭಗುಡಿಗಳಿದ್ದು ಗರ್ಭ ಗುಡಿಯಲ್ಲಿ ನಾಲ್ಕು ಅಡಿಗಳ ಎತ್ತರದ ವೆಂಕಟರಮಣಶಿಲ್ಪ, ಅದರ ಇಕ್ಕೆಲಗಳಲ್ಲಿ ಮೂರೂವರೆ ಅಡಿಗಳ ಎತ್ತರದ ಭೂದೇವಿ ಶ್ರೀದೇವಿಯರ ಆಕರ್ಷಕ ಶಿಲ್ಪಗಳು ಸ್ಥಾನಕ ಭಂಗಿಯಲ್ಲಿವೆ. ಭುವನೇಶ್ವರಿಯಲ್ಲಿ ಸರಳವಾದ ಕಮಲಪುಷ್ಪದ ಅಲಂಕರಣವಿದೆ. ಅಂತರಾಳದಲ್ಲಿ ಯಾವ ಕೆತ್ತನೆಯೂ ಇಲ್ಲ. ಅದರ ಮುಂದಿನ ನವರಂಗದ ವಿಸ್ತೀರ್ಣ ಇಪ್ಪತ್ತೊಂದು ಅಡಿಗಳು. ನವರಂಗದ ಸ್ತಂಭಗಳು ಹಾಗೂ ನವರಂಗದ ಮುಂದಿನ ತೆರೆದ ಮುಖ ಮಂಟಪದ ಸ್ತಂಭಗಳೂ ಚೌಕಪೀಠಭಾಗಗಳನ್ನು ಕಾಂಡದ ಭಾಗದಲ್ಲಿ ನಾಲ್ಕೂ ಮುಖಗಳಲ್ಲಿ ಹಂಸ, ಪುಷ್ಪ ಆಸೀನ ಯೋಗಾನರಸಿಂಹ, ಲಕ್ಷ್ಮೀನರಸಿಂಹ, ನವನೀತಕೃಷ್ಣ, ಆಂಜನೇಯ, ಮುಂಗಾಲಿನ ಮೇಲೆ ಕುಳಿತ ಸಿಂಹ ಮುಂತಾದ ಉಬ್ಬು ಶಿಲ್ಪಗಳಿವೆ.

ಗರ್ಭಗುಡಿಯ ಮೇಲಿನ ಏಳಂತಸ್ತಿನ ವಿಮಾನಗೋಪುರ ಕದಂಬನಾಗರ ಶೈಲಿಯನ್ನು ಹೋಲುತ್ತದೆ. ಸ್ತೂಪಿಯ ಭಾಗವು ನಾವೀನ್ಯತೆ ಹೊಂದಿದ್ದು ಮಿಶ್ರಶೈಲಿಯನ್ನು ಪ್ರತಿನಿಧಿಸುತ್ತದೆ. ಬಣ್ಣವನ್ನೂ ಹಚ್ಚಲಾಗಿದೆ. ಗರ್ಭಗುಡಿಯ ಹೊರ ಭಿತ್ತಿಯಲ್ಲಿ ಕುಡ್ಯಸ್ತಂಭ, ಕುಂಭಸ್ತಂಭ, ಸ್ತಂಭಗೋಪುರಗಳ ಅಲಂಕರಣಗಳಿವೆ. ಪ್ರಸ್ತರದಲ್ಲಿ ಕಾಲುಗಳ ಮೇಲೆ ಕುಳಿತ ಸಿಂಹಗಳ ಸಾಲು, ಕೀರ್ತಿ ಮುಖದ ಸಾಲು ಅದರಲ್ಲಿ ನಡು ನಡುವೆ ರಾಕ್ಷಸ ಮುಖಗಳು

ಕೆತ್ತಲ್ಪಟ್ಟಿವೆ. ಗರ್ಭಗುಡಿಯ ಅಧಿಷ್ಠಾನ ಪಶ್ಚಿಮ ಮಹಾದ್ವಾರದ ಅಧಿಷ್ಠಾನ ಭಾಗಗಳನ್ನೇ ಹೋಲುತ್ತವೆ.


ದೇವಾಲಯದ ಪೂರ್ವದ ಕಡೆಗಿರುವ ದ್ವಾರದಿಂದ ಮುಂದೆ ಕೆಲವು ಹೆಜ್ಜೆಗಳು ಸಾಗಿದರೆ ಒಂದು ಸುಸ್ಥಿತಿಯಲ್ಲಿರುವ ಮೆಟ್ಟಿಲುಗಳುಳ್ಳ ಕಲ್ಯಾಣಿಯು ಅದರ ನಡುವೆ ಸುಂದರವಾದ ಕಲ್ಲಿನ ಸ್ತಂಭಗೋಪುರ ಕಂಡುಬರುತ್ತದೆ. ಅದನ್ನು ತೆಪ್ಪೋತ್ಸವಕ್ಕಾಗಿ ಬಳಸುತ್ತಿದ್ದರಂತೆ.

ಈ ದೇವಾಲಯದಿಂದ ಒಂದು ಕಿ. ಮೀ. ಪಶ್ಚಿಮಕ್ಕೆ ರಸ್ತೆಯಲ್ಲಿ ಮುನ್ನಡೆದರೆ ಗ್ರಾಮದ ಕೆರೆ ಏರಿ ಇದೆ. ಅಲ್ಲಿಂದ ಗ್ರಾಮದೊಳಗೆ ಒಂದು ನಾಗರಕಟ್ಟೆಯಿದ್ದು ಅಲ್ಲಿ ಮೂರು ಧ್ವಜ ಸ್ತಂಭಗಳು ನೆಟ್ಟಲ್ಪಟ್ಟಿವೆ. ಅಲ್ಲಿ ಒಟ್ಟು ಏಳು ಸ್ತಂಭಗಳಿದ್ದುವೆಂದು ಸ್ಥಳೀಯರು ಹೇಳುತ್ತಾರೆ. ಅಲ್ಲಿಂದ ಮುನ್ನಡೆದರೆ ವರ್ಷದ ಹಿಂದೆ ಹಿಂಭಾಗವು ಪೂರ್ತಿಯಾಗಿ ಕುಸಿದಿದ್ದು ಛಾವಣಿ ಮತ್ತು ಇಕ್ಕೆಲಗಳಲ್ಲೂ ಮುಳ್ಳು ಪೊದೆಗಳು ಬೆಳೆದು ಬೀಗಮುದ್ರೆಯಲ್ಲಿದ್ದ ಪಾಳು ವೀರಭದ್ರನ ಗುಡಿಯು ಕಾಣಬರುತ್ತದೆ. ಈಗ ಸ್ಥಳೀಯರೇ ಗ್ರಾಮಪಂಚಾಯತಿಯ ವತಿಯಿಂದ ದೇವಾಲಯವನ್ನು ದುರಸ್ತಿ ಗೊಳಿಸಿದ್ದಾರೆ. ವೀರಭದ್ರ ಮತ್ತು ಭದ್ರಕಾಳಿ ವಿಗ್ರಹಗಳನ್ನು ಹೊಸದಾಗಿ ಮಾಡಿಸಿ ಪ್ರತಿಷ್ಠಾಪಿಸುವ ಉದ್ದೇಶವೂ ಗ್ರಾಮಸ್ಥರಿಗಿದೆ. ಆದರೆ ಈಗ ಸದ್ಯಕ್ಕೆ ಮೂಲ ವೀರಭದ್ರ, ಭದ್ರ ಕಾಳಿ ವಿಗ್ರಹಗಳು ಗರ್ಭಗುಡಿಯಲ್ಲಿದೆ. ಗರ್ಭಗುಡಿ ಮುಚ್ಚಿದ, ಅಂತರಾಳ ನವರಂಗ, ಪೂರ್ವದ್ವಾರ ಹಾಗೂ ಉತ್ತರಾಭಿಮುಖ ವಾದ ಮುಖ್ಯದ್ವಾರ, ನಂದಿವಿಗ್ರಹ ಮತ್ತು ಧ್ವಜಸ್ತಂಭ, ಮತ್ತು ಪಾಳೆಯಗಾರರ ಕಾಲದ ನಾಲ್ಕು ಸ್ತಂಭಗಳ ಚಿಕ್ಕಮಂಟಪವನ್ನೂ ಈ ದೇವಾಲಯವು ಹೊಂದಿದೆ. ನವರಂಗದಲ್ಲಿರುವ ನಾಲ್ಕು ಸ್ತಂಭಗಳು ಕಲಾ ಸೌಂದರ್ಯವನ್ನು ಪರಿಪೂರ್ಣವಾಗಿ ಹೊಂದಿವೆ. ಚೌಕಾಕಾರದ ಪೀಠ ಆಯತಾಕಾರ ಕಾಂಡಭಾಗ ಅದರ ಮೇಲೆ ವರ್ತುಲಾಕಾರದ ಬಹುಕೋನಪಟ್ಟಿಕಾ ಭಾಗಗಳು, ಚೌಕಾಕಾರದ ಭಾಗ, ಕಮಲದಳಗಳ ಅಂಚಿರುವ ಕಡೆದಂತಹ ಭಾಗ ದುಂಡು ಬೋದಿಗೆ, ಕಮಲದಳದ ಅಲಂಕರಣವಿರುವ ಮುಚ್ಚಳದ ಭಾಗ, ಚೌಕ ಮುಚ್ಚು ಹಲಗೆ ಹಾಗೂ ನಾಲ್ಕೂ ಕಡೆಗೆ ಇಳಿಬಿದ್ದ ಕಮಲಮೊಗ್ಗಿನ ಬೋದಿಗೆಗಳನ್ನು ಹೊಂದಿದ್ದು ವೈವಿಧ್ಯಪೂರ್ಣ ವಾಗಿಯು ಆಕರ್ಷಕವಾಗಿಯೂ ಇವೆ. ಕಾಂಡದ ಭಾಗದಲ್ಲಿ ನಾಲ್ಕು ಮುಖಗಳಲ್ಲಿ ಶೈವಮುನಿಗಳ, ಶಿವನ, ಲಿಂಗ, ಬಸವ ಮುಂತಾದ ಶಿಲ್ಪಗಳಿವೆ. ದ್ವಾರಪಾಲಕ ವಿಗ್ರಹಗಳೂ ನಾಲ್ಕಡಿ ಎತ್ತರವಾಗಿದ್ದು ಭವ್ಯವಾಗಿವೆ.

ವೀರಭದ್ರ ದೇವಾಲಯದಿಂದ ಮುನ್ನಡೆದರೆ ಕೋಟೆಯ ದ್ವಾರ ಕಂಡು ಬರುತ್ತದೆ. ದ್ವಾರದ ಮುಂಭಾಗದಲ್ಲಿ ಸರಳವಾದ ಚಿಕ್ಕ ಗಣೇಶನ ಗುಡಿಯಿದೆ. ಇತ್ತೀಚೆಗೆ ನವೀನ ನೆಲಹಾಸು ಮತ್ತು ಕಬ್ಬಿಣದ ಕಿಂಡಿಗಳುಳ್ಳ ಬಾಗಿಲು ಕಿಟಕಿಗಳನ್ನು ಅಳವಡಿಸಲಾಗಿದೆ. ಗಣೇಶನ ಮೂರ್ತಿ ಚಿಕ್ಕದಾಗಿದೆ. ನಾಲ್ಕು ಸ್ತಂಭಗಳು ಚೌಕಾ ಕಾರವಾಗಿದ್ದು ಕಾಂಡಭಾಗದಲ್ಲಿ ದೇವ ಮತ್ತು ಪ್ರಾಣಿ ಶಿಲ್ಪಗಳನ್ನು ಹೊಂದಿವೆ. ಕಲೆಯ ದೃಷ್ಟಿಯಿಂದ ಪ್ರಾಮುಖ್ಯತೆ ಯೇನೂ ಕಾಣಬರುವುದಿಲ್ಲ.

ಕೋಟೆಯ ದ್ವಾರದ ಎಡಪಾರ್ಶ್ವಕ್ಕೆ ಹೊಂದಿಕೊಂಡಂತೆ ಗ್ರಾಮದೇವತೆಯಾದ ಗಂಗಮ್ಮನ ಗುಡಿಯಿದೆ. ಅಲ್ಲಿರುವ ಗಂಗಮ್ಮನ ಎಂಟು ಅಡಿ ಎತ್ತರವ ಮೂರ್ತಿ, ಅದರ ಪಾರ್ಶ್ವ ಗಳಲ್ಲಿರುವ ಪೋತರಾಜು, ಲಕ್ಷ್ಮಿ, ಶಿವ ಮೂರ್ತಿಗಳು ಎಲ್ಲವೂ ಮರದಿಂದ ನಿರ್ಮಿತವಾಗಿವೆ. ಪೀಠವನ್ನು ಗಾರೆಯಿಂದ ನಿರ್ಮಿಸಿದ್ದಾರೆ. ಸುಂದರ ಪ್ರಭಾವಳಿಯೂ ಇದೆ. ರುಂಡದ ಮೇಲೆ ಕಾಲನ್ನೂ, ಎರಡು ಕೈ ಗಳನ್ನು ಇರಿಸಿ ಒಂದು ಕೈಯಲ್ಲಿ ರುಂಡವನ್ನು ಹಿಡಿದಿದ್ದಾಳೆ. ದೇವಿ ಗಂಗಮ್ಮ ಈ ದೇವಿಯನ್ನು ಸುಗಟೂರಿನ ಪಾಳೆಯಾಗರ ತಮ್ಮಣ್ಣನಾಯಕನು ಬುರುಡುಗುಂಟೆಗೆ ತಂದು ೪೦೦ ವರ್ಷಗಳ ಹಿಂದೆ ಪ್ರತಿಷ್ಠಾಪಿಸಿದನೆಂದು ಜನರಲ್ಲಿ ಪ್ರತೀತಿಯಿದೆ. ದೇವಿ ಉತ್ತರಾಭಿಮುಖಿಯಾಗಿದ್ದಾಳೆ. ಅದರ ಅರ್ಚಕರು ಕ್ಷತ್ರಿಯರೆಂದು ಕರೆಸಿಕೊಳ್ಳುವ ಶ್ರೀನಿವಾಸರಾಜುರವರು. ವೈಶಾಖ ಮಾಸದ ಅಮಾವಾಸ್ಯೆಯಂದು ದೀಪಜಾತ್ರೆ ಇಲ್ಲಿ ನಡೆಯುತ್ತದೆ. ಮಂಗಳವಾರ ಭಾನುವಾರಗಳಂದು ವಿಶೇಷ ಪೂಜೆ, ಕೋಣ ಮತ್ತು ಕುರಿ ಬಲಿಯೂ ನಡೆಯುತ್ತದೆ. ಕೋಟೆಯ ದ್ವಾರದಿಂದ ಮುನ್ನಡೆದರೆ ಗ್ರಾಮದಮಧ್ಯೆ ಇರುವ ದೇವಾಲಯ ರಾಮೇಶ್ವರ ದೇವಾಲಯ. ಈ ದೇವಾಲಯದ ಮುಂದೆ ಎಡಭಾಗದಲ್ಲಿ ಶಾಸನವೂ ಇದ್ದು ವಿಜಯನಗರದ ದೊರೆ ವೀರಪ್ರತಾಪ ಸದಾಶಿವರಾಯರು ಶಕ ಸಾವಿರದ ನಾನ್ನೂರ ತೊಂಭತ್ತೆರಡರಲ್ಲಿ ದೇವಾಲಯಕ್ಕೆ ದಾನ ನೀಡಿದ ವಿಷಯ ತಿಳಿಯುತ್ತದೆ. ಆದರೆ ದಾನದ ವಿವರಗಳು ಸ್ಪಷ್ಟವಾಗಿ ತಿಳಿಯುವುದಿಲ್ಲ. ಈ ದೇವಾಲಯವೂ ಶ್ರೀಮಾನ್ ಕೃಷ್ಣಮೂರ್ತಿ ಮತ್ತು ಅವರ ಮಕ್ಕಳಿಂದ ದುರಸ್ತಿಯಾಗುತ್ತಲಿದೆ. ದೇವಾಲಯದಲ್ಲಿ ಮಕ್ಕಳಿಗಾಗಿ ಪ್ರಗತಿ ಪ್ರಾಥಮಿಕ ಶಾಲೆಯನ್ನೂ ನಡೆಸಲಾಗುತ್ತಿದೆ. ಗರ್ಭಗುಡಿ, ದ್ರಾವಿಡ ಶೈಲಿಯ ವಿಮಾನ ಗೋಪುರ ಸುಖನಾಶಿ ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಚೌಕಾಕಾರದ ಸ್ತಂಭಗಳು ಕೆತ್ತನೆಯನ್ನು ಹೊಂದಿಲ್ಲದೆ ತೀರ ಸರಳವಾಗಿವೆ. ಗರ್ಭಗುಡಿಯಲ್ಲಿರುವ ಲಿಂಗವು ತುಂಬ ಚಿಕ್ಕದಾಗಿದೆ. ದೇವಾಲಯದ ಆಕರ್ಷಕ ಭಾಗವೆಂದರೆ ಹೊರಭಿತ್ತಿ ಮತ್ತು ಪ್ರಸ್ತಕದಲ್ಲಿರುವ ಶಿಲ್ಪ ಕೆತ್ತನೆಗಳು. ಅವೆಂದರೆ ಭಿತ್ತಿ ಸ್ತಂಭಗಳು ದೇವಕೋಷ್ಠಗಳು, ಕೋಷ್ಠಶಿಲ್ಪಗಳು ಕುಂಭಸ್ತಂಭಗೋಪುರಗಳೂ ಹಾಗೂ ಪ್ರಸ್ತಕದಲ್ಲಿ ಕಲಾಕುಶಲತೆಯಿಂದ ಕೂಡಿದ ಕೀರ್ತಿ





ಮುಖ ಗಳೂ ಕೀರ್ತಿಮುಖದ ಲತಾವಲ್ಲರಿಯೊಳಗೆ (ಉತ್ತರದ ಕಡೆಗೆ ಆಚಾರ್ಯರ ಶಿಲ್ಪ) ಕೀರ್ತಿಮುಖಗಳ ನಡುವೆ ಅಲಂಕೃತ ರಾಕ್ಷಸ ಮುಖಗಳು ನೋಡುಗರನ್ನು ಮುದಗೊಳಿಸುತ್ತವೆ. ಗಾರೆ ಗೋಪುರವು ತ್ರಿತಳವಾಗಿದ್ದು ದುಂಡಗಿನ ಶಿಖರವನ್ನು ಸ್ತೂಪಿಯನ್ನು ಹೊಂದಿದೆ. ಬಣ್ಣವನ್ನು ಹಚ್ಚಲಾಗಿದೆ.

ರಾಮೇಶ್ವರ ದೇವಾಲಯದಿಂದ ಪಶ್ಚಿಮಕ್ಕೆ ಮುನ್ನಡೆದರೆ ಕೋಟೆಯ ಹೊರಭಾಗದ ಹೊಂಡ ಹಾಗೂ ತುಂಡು ಗೋಡೆಗಳು ಕಂಡುಬರುತ್ತವೆ. ಅದರ ಉತ್ತರಕ್ಕೆ ಹೊರಭಾಗದಲ್ಲಿ ಆಂಜನೇಯನ ದೇವಾಲಯವಿದೆ. ಆರಡಿ ಎತ್ತರದ ಭವ್ಯ ನಿಲುವಿನ ಆಂಜನೇಯಮೂರ್ತಿ ಓಡುತ್ತಿರುವ ಭಂಗಿಯಲ್ಲಿದೆ. ಮುಖವು ಪೂರ್ವಕ್ಕೆ ತಿರುಗಿದೆ.

ಬಾಲವು ಶಿರಸ್ಸಿನ ಹಿಂಬದಿಯಲ್ಲಿ ಪ್ರಭಾವಳಿಯಂತಿದೆ. ಎಡಗೈ ಸೊಂಟದ ಮೇಲಿದ್ದು ಬಲಗೈ ಅಭಯ ಮುದ್ರೆಯಲ್ಲಿದೆ. ಆಂಜನೇಯನ ಎಡಗಾಲಿನ ಮುಂದೆ ಪುಟ್ಟದಾದ ಮುನಿಯ ಆಸೀನ ವಿಗ್ರಹವೊಂದಿದೆ. ಇದನ್ನು ಸ್ಥಳೀಯರು ಮಧ್ವಾಚಾರ್ಯರ ದೆಂದು ಗುರುತಿಸುತ್ತಾರೆ ಈ ದೇವಾಲಯದ ಪಕ್ಕದಲ್ಲಿಯೇ ಕೇವಲ ತಳಪಾಯ ಮತ್ತು ಕಂಬಗಳನ್ನೊಳಗೊಂಡಂತೆ ದೇವಾಲಯದ ಅವಶೇಷಗಳು ಕಂಡುಬರುತ್ತವೆ.

ಇದು ರಾಮದೇವಾಲಯವಾಗಿತ್ತೆಂದು ಗ್ರಾಮಸ್ಥರು ಹೇಳುತ್ತಾರೆ. ಇದಲ್ಲದೆ ರಾಮೇಶ್ವರ ದೇವಾಲಯದ ಬಳಿ ನರಸಿಂಹ ದೇವಾಲಯ ಇತ್ತೆಂದೂ ಗ್ರಾಮಸ್ಥರು ಹೇಳುತ್ತಾರೆ. ಆದರೆ ನರಸಿಂಹನ ಮೂರ್ತಿಯೂ ಅಲ್ಲಿಲ್ಲ ಹಾಗೂ ಕುಸಿದಿದ್ದ ದೇವಾಲಯ ಮತ್ತು ಈಗ ಪುನಃ ಕಟ್ಟಲಾಗಿದ್ದು ಅದು ಕೇವಲ ಚಿಕ್ಕ ಮನೆಯಂತೆ ಹೊರನೋಟಕ್ಕೆ ಕಾಣುತ್ತದೆ.

ಹೀಗೆ ಬುರುಡಕುಂಟ ಅತ್ಯಂತ ಐತಿಹಾಸಿಕ ಮಹತ್ವವುಳ್ಳ ವಿಜಯನಗರ - ಪಾಳೆಯಗಾರರ ಕಾಲದ ಪ್ರಸಿದ್ಧ ರಾಜಕೀಯ ಧಾರ್ಮಿಕ ಕೇಂದ್ರವಾಗಿತ್ತೆಂದು ಹೇಳಬಹುದು.

(ನನ್ನ ಕ್ಷೇತ್ರ ಕಾರ್ಯದಲ್ಲಿ ನೆರವು ನೀಡಿದ ಸಂಶೋಧಕ ಮಿತ್ರರಾದ ಕೆ. ಆರ್. ನರಸಿಂಹನ್, ಮನೋಜ್, ಸತ್ಯನಾರಾಯಣ ಹಾಗೂ ವಿದ್ಯಾರ್ಥಿಮಿತ್ರರಾದ ಗಿರೀಶ, ಉಮೇಶ, ಮಂಜುನಾಥ, ಚನ್ನಬಸಪ್ಪ ಇವರಿಗೂ ಮತ್ತು ತಮ್ಮ ಮನೆಯಲ್ಲಿ ಊಟವಸತಿ ಸೌಲಭ್ಯವನ್ನು ಒದಗಿಸಿದ್ದಲ್ಲದೆ, ಅಮೂಲ್ಯ ಮಾಹಿತಿಯನ್ನೂ ನೀಡಿದ ಶ್ರೀಮಾನ್ ಕೃಷ್ಣ ಮೂರ್ತಿಗಳಿಗೂ ಅವರ ಕುಟುಂಬದವರಿಗೂ ನನ್ನ ವಿನಮ್ರ ವಂದನೆಗಳು ಸಲ್ಲುತ್ತವೆ.)



ಶಿಲ್ಪ ವಾಸ್ತುಗಳ ಇತಿಹಾಸ ಲೀಲೆ
ಮನ ತುಂಬಿ ಬರುವ ನೆಮ್ಮದಿಗೆ ನೆಲೆ
ಸಂಸ್ಕೃತಿಯ ಚೆಲುವು ಹಾಡುವ ಲೀಲೆ
ಜಲಬಿಂದು ಪ್ರತಿಫಲನ ದೃಷ್ಟಿ ಲೀಲೆ

ಡಾ. ಕೆ. ವಸಂತಲಕ್ಷ್ಮಿ*

ದುರ್ಗಾದೇವಿ ಶಿಲ್ಪದ ವಿಕಾಸ

ಸೌವರ್ಣಾಂಬುಜ ಮಧ್ಯಗಾಂ ತ್ರಿನಯನಾಂ
ಸೌದಾಮಿನಿ ಸನ್ನಿಭಾಂ।
ಶಂಖಚಕ್ರ ವರಾಭಯಾನಿ ಧಧತೀಮಿಂದೋಃ
ಕಲಾಂ ಬಿಭ್ರತೀಂ॥
ಗ್ರೈವೇಯಾಂಗದ ಹಾರ ಕುಂಡಲಧರಾ ಮಾ
ಖಂಡಲಾಧ್ಯೈಸ್ತುತಾಂ।
ಧ್ಯಾಯೇದ್ವಿಂದ್ಯನಿವಾಸಿನೀಂ ಶಶಿಮುಖೀಂ
ಪಾರ್ಶ್ವಸ್ಥ ಪಂಚಾನನ॥

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ದುರ್ಗಾದೇವಿಯ ಆರಾಧನೆಯ ನಿರಂತರವಾಗಿ ಸಾಗಿ ಬಂದಿದೆ. ಭಾರತವು ಪರ್ವತ, ಬೆಟ್ಟ, ಗುಡ್ಡಗಳಿಂದ ಕೂಡಿರುವ ನಾಡು. ಇತಿಹಾಸಪೂರ್ವದ ಕಾಲದಲ್ಲಿ ಪೂರ್ವಜರು ಬೇಟೆಯಾಡಿ ಉದರ ನಿರ್ವಹಣೆ ಮಾಡಿಕೊಳ್ಳುತ್ತಿದ್ದರು. ತಮಗೆ ಆಹಾರವನ್ನೊದಗಿಸುತ್ತಿದ್ದ ಆಯುಧಗಳೇ ಅವರಿಗೆ ಮಹತ್ವದ ವಸ್ತುಗಳಾದವು. ಆಗಿನ ಕಾಲದ ಶಿಲಾಯುಧಗಳನ್ನೇ ಗುಹೆಗಳಲ್ಲಿಟ್ಟು ಪೂಜಿಸುವ ಪದ್ಧತಿ ಬೆಳೆದು ಬಂದಿದೆ.

'ಶಕ್ತಿವಾದ'ವು ಪ್ರಾಚೀನ ಕಾಲದಿಂದಲೂ, ಮೂಲ ನಿವಾಸಿಗಳ ಆರಾಧನೆಯನ್ನು ಬಳಸಿಕೊಂಡಿತ್ತು. ಕಾಡು ನಿವಾಸಿಗಳಾದ ಶಬರರು, ಕಿರಾತರು, ಆರಾಧಿಸುವ 'ದೇವೀದುರ್ಗೆ' ಎಂಬ ಹೆಸರಿನ ಆವಿರ್ಭಾವಕ್ಕೆ ಕಾರಣವಾಗಿರಬೇಕೆಂದು ಮಾನವ ಸಮಾಜದ ಅಧ್ಯಯನದಿಂದ ನಿರ್ಣಯಿಸಿದ್ದಾರೆ. ಇದರಂತೆ ದುರ್ಗಾದೇವಿಯನ್ನು ದುಃಖನಿವಾರಿಣೆ, ದುರಿತ ನಿವಾರಿಣೆ ಎಂದೂ ಕರೆಯುತ್ತಾರೆ. 'ದುರ್ಗಾ' ಎಂದರೆ ಹತ್ತಿರ ಸುಳಿಯಲು, ಅರ್ಥ ಮಾಡಿಕೊಳ್ಳಲು ಕಷ್ಟ ಸಾಧ್ಯಳು ಎಂದರ್ಥ. ಎಲ್ಲಾ ದೇವತೆಗಳ ತೇಜಃಪುಂಜವಾದ ಸಾಕಾರವಾದ ದೇವಿಯ ಸ್ವರೂಪವನ್ನು ತಿಳಿಯುವುದು ಕಷ್ಟ ಸಾಧ್ಯವೇ ಸರಿ! ಒಂದೇ ಶಕ್ತಿಯು ಸಂದರ್ಭೋಚಿತವಾಗಿ ನಾನಾ ರೂಪಗಳನ್ನು ತಳೆದಿದ್ದು ಭೋಗದಲ್ಲಿ ಭವಾನಿ, ಯುದ್ಧ ಪ್ರಸಂಗದಲ್ಲಿ ದುರ್ಗಾ, ಕೋಪ ಬಂದಾಗ ಕಾಳಿ, ಕಾಪಾಡುವಾಗ 'ವಿಷ್ಣು' ಎನ್ನುತ್ತಾರೆ. ವಿಷ್ಣುವಿನ ಸೋದರಿಯಾದ 'ದುರ್ಗಾದೇವಿ'ಯನ್ನು 'ನಾರಾಯಣೀ', 'ವೈಷ್ಣವೀ' ಎಂದೂ ಕರೆಯುತ್ತಾರೆ. ಮಾರ್ಕಂಡೇಯ ಪುರಾಣದ 'ದುರ್ಗಾ ಸಪ್ತಶತಿ' ಭಾಗವು ಈ ದೇವಿಯ ನಾನಾ ಸ್ವರೂಪಗಳ ಮಹತ್ವವನ್ನು ಬಣ್ಣಿಸುತ್ತದೆ. ದುರ್ಗಾದೇವಿಯ ನಾನಾ ರೂಪಗಳನ್ನಾಧರಿಸಿ 'ನವದುರ್ಗೆ'ಯರನ್ನು ಪುರಾಣಗಳು ಬಣ್ಣಿಸಿವೆ. ದೇವಿ ಮಹಾತ್ಮೆಯ ಕವಚವು 'ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯಿನೀ, ಕಾಳರಾತ್ರೀ, ಮಹಾಗೌರೀ, ಸಿದ್ಧಿಶ್ರೀ' - ಎಂಬ ಒಂಬತ್ತು ಜನ ದುರ್ಗೆಯರನ್ನು ಹೆಸರಿಸಿದೆ. ಕಾಶೀ ಕ್ಷೇತ್ರದಲ್ಲಿ ಈ ನವದುರ್ಗೆಯರನ್ನು ಕಾಣಬಹುದು; ಪುರಾಣಗಳಲ್ಲಿ ಇವರನ್ನು ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ, ಚಂಡವತೀ ಚಂಡರೂಪಾ, ಅತಿಚಂಡಿಕಾ, ರುದ್ರಚಂಡಾ ಎಂಬ ಹೆಸರುಗಳಿಂದ ಕರೆಯಲಾಗಿದೆ.

ಆಗಮಗಳು ಇವರನ್ನು ೧. ನೀಲಕಂಠೀ ೨. ಕ್ಷೇಮಂಕರೀ ೩, ಹರಸಿದ್ಧಿ, ೪. ರುದ್ರಾಂಶದುರ್ಗಾ ೫. ವನದುರ್ಗಾ ೬. ಅಗ್ನಿದುರ್ಗಾ ೭. ಜಯದುರ್ಗಾ ೮. ವಿಂದ್ಯವಾಸಿನಿ ದುರ್ಗಾ ೯. ರಿಪುಮಾರಿ ದುರ್ಗಾ ಎಂಬ ಹೆಸರುಗಳಿಂದ ಕರೆದಿವೆ.

ದುರ್ಗಾದೇವಿಯನ್ನು ಬನಶಂಕರಿ (ಶಾಕಾಂಬರಿ) ಎಂದೂ ಕರೆಯಲಾಗಿದ್ದು, ಸಸ್ಯ ಪ್ರಪಂಚಕ್ಕನುಸರಿಸಿ, ಒಂಬತ್ತು ಸಸ್ಯಗಳನ್ನು ನವದುರ್ಗೆಯರೆಂದು ಕರೆಯುವ ವಾಡಿಕೆ ಇದೆ. ಅವು ಬಾಳೆ (ರಂಭಾ-ಬ್ರಹ್ಮಾಣೀ), ಕಚ್ಚಿ (ಕಾಲಿಕಾ), ಅರಿಶನ (ಹರಿದ್ರಾ-ದುರ್ಗಾ) ಜಯಂತಿ (ಕಾರ್ತಿಕೀ), ಬೇಲ (ಶಿವಾ), ದಾಳಿಂಬೆ (ರಕ್ತದಂತಿಕಾ) ಅಶೋಕಾ (ಶೋಕ ರಹಿತಾ), ಕುಂಬಳಕಾಯಿ (ಚಾಮುಂಡಾ) ಭತ್ತ (ಲಕ್ಷ್ಮಿ) ಎಂದೂ ವಿದ್ವಾಂಸರು ಉಲ್ಲೇಖಿಸಿದ್ದಾರೆ. ಬಂಗಾಳದ ಕಡೆ ನವಪತ್ರಿಕಾ ಎನ್ನುವ ವ್ರತಾಚರಣೆಯಲ್ಲಿ ಇವುಗಳ ಬಳಕೆ ಇದೆ.

ಭಾರತದಲ್ಲಿ ವೇದಗಳ ಕಾಲದಿಂದಲೂ ದುರ್ಗಾದೇವಿ ಆರಾಧನೆಯು ಪ್ರಚಲಿತದಲ್ಲಿತ್ತು. ಋಗ್ವೇದದ ರಾತ್ರಿ ಪರಿಶಿಷ್ಟದಲ್ಲಿ 'ದುರ್ಗಾಸ್ತವವಿದೆ'. ಇಲ್ಲಿ ದುರ್ಗಾದೇವಿಯನ್ನು

"ದುರ್ಗೇಷು ವಿಷಮೇ ಘೋರೇ ಸಂಗ್ರಾಮೇ ರಿಪು ಸಂಕಟೇ।
ಅಗ್ನಿಚೋರ ನಿಪಾತೇಷು ದುಷ್ಟಗ್ರಹ ನಿವಾರಿಣೀ।
ದುರ್ಗೇಷು ವಿಷಮೇಷು ತ್ವಾಂ ಸಂಗ್ರಾಮೇಷು ವನೇಷುಚ।
ಮೋಹಯಿತ್ವಾ ಪ್ರಪದ್ಯಂತೇ ತೇಷಾಂ ಮೇ ಅಭಯಂ ಕುರು॥

-ಎಂದು ಪ್ರಾರ್ಥಿಸಲಾಗಿದೆ. ಇದರಿಂದ. ದೇವಿಯು ಸಕಲ ಸಂಕಟ ನಿವಾರಕಳೂ ಅಭಯದಾಯಿಯೂ ಆಗಿದ್ದಳೆಂದೂ ತಿಳಿಯುತ್ತದೆ.

ವಾಜಸನೇಯಿ ಸಂಹಿತೆ (೩.೫೭), ತೈತ್ತರೀಯ ಬ್ರಾಹ್ಮಣ (೧,೬,೧೦೪) ಗಳಲ್ಲಿ ಅಂಬಿಕೆಯನ್ನು ರುದ್ರನ ಸೋದರಿ ಎಂದೂ

* ನಂ. ೩೫೬, ೧೧ನೇ ಮುಖ್ಯರಸ್ತೆ, ಶ್ರೀನಿವಾಸನಗರ, ಬೆಂಗಳೂರು - ೫೬೦ ೦೫೦

ಗಂಗರ ಶಿಲ್ಪಕಲೆ


















(ಸೌಜನ್ಯ : ಕರ್ನಾಟಕ ಲಲಿತ ಕಲಾ ಅಕಾಡೆಮಿ)

'ಜಗನ್ಮಾತೆ' ಎಂದೂ ಉಲ್ಲೇಖಿಸಿದ್ದಾರೆಂದು ತಿಳಿಯುತ್ತದೆ. (ಮೂರ್ತಿಶಿಲ್ಪ ನೆಲೆ-ಹಿನ್ನೆಲೆ, ಪು. ೧೬೩). ಈಕೆಯನ್ನು ತೈತ್ತರೀಯ ಅರಣ್ಯಕದಲ್ಲಿ- "ದುರ್ಗೆ, ವೈರೋಚನಿ, ಕಾತ್ಯಾಯನೀ, ಕನ್ಯಾ ಕುಮಾರೀ ವರದಾ, ವೇದಮಾತಾ, ಕಾಲಿ, ಕರಾಲಿ" ಎಂದೂ ಕರೆಯಲಾಗಿದೆ.

ಮಹಾಭಾರತದಲ್ಲಿ ಅರ್ಜುನನು (ಭೀಷ್ಮಪರ್ವದಲ್ಲಿ) ಹಾಗು ಯುಧಿಷ್ಠಿರನು (ವಿರಾಟಪರ್ವ) ದುರ್ಗಾದೇವಿಯನ್ನು ಸ್ತುತಿಸಿದ್ದಾರೆ. ಈ ಸ್ತುತಿಗಳು ದೇವಿಯ ಶೌರ್ಯ, ಸಾಹಸಗಳನ್ನು, ಬಣ್ಣಿಸಿದ್ದು, ಅವಳ ತಾಮಸರೂಪವನ್ನು ಬಿಂಬಿಸಿವೆ.

"ವಿಂಧ್ಯೇ ಚೈವ ನಗಶ್ರೇಷ್ಠೇ ತವಸ್ಥಾನಂ ಹಿ ಶಾಶ್ವತಾ।
ಕಾಲಿ ಕಾಲಿ ಮಹಾಕಾಲೀ ಸಿಧುಮಾಂಸ ಪಶುಪ್ರಿಯಾ॥

-ಇವಳು ಬೆಟ್ಟ ಗುಡ್ಡಗಳಲ್ಲಿ ನೆಲೆಸಿದ ದೇವೀ ಎಂದೂ ತಿಳಿಸಿದರೆ ಹರಿವಂಶದ ಆರ್ಯಸ್ತವವು ಇವಳನ್ನು ಶಬರರು, ಕಿರಾತರು ಪೂಜಿಸುತ್ತಿದ್ದರೆಂದು ತಿಳಿಸಿದೆ.

ದುರ್ಗಾದೇವಿ ಶಿಲ್ಪದ ವಿಕಾಸ

ಕರ್ನಾಟಕದಲ್ಲಿ ಲಭ್ಯವಿರುವ ದುರ್ಗಾದೇವೀ ಶಿಲ್ಪಗಳನ್ನು ಆಧರಿಸಿ, ಶಿಲ್ಪಶಾಸ್ತ್ರಗ್ರಂಥಗಳು ತಿಳಿಸಿರುವಂತೆ ದೇವಿಯ ಸ್ವರೂಪವನ್ನರಿಯಲು ಇಲ್ಲಿ ಯತ್ನಿಸಲಾಗಿದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಸು. ಕ್ರಿ.ಶ. ೬-೭ನೇ ಶತಮಾನದಿಂದ ದುರ್ಗಾದೇವಿಯ ಶಿಲ್ಪಗಳು ಲಭ್ಯವಿವೆ. ವಿಶೇಷವಾಗಿ ಗಂಗವಾಡಿ ಪ್ರದೇಶದಲ್ಲಿ ನಿರ್ಮಿತವಾಗಿರುವ ಶಿವಾಲಯಗಳಲ್ಲಿ ದುರ್ಗಾದೇವಿ ಶಿಲ್ಪವು ಶಿವಪಂಚಾಯತನದ ಅಂಗವಾಗಿ ಕಾಣಬರುತ್ತವೆ. ಮಾತೃಪೂಜಾ ಪರಂಪರೆಯು ಪ್ರಾಚೀನವಾದ ಪದ್ಧತಿಯಾದರೂ, ಕರ್ನಾಟಕದಲ್ಲಿ ದೇವಿಗಾಗಿಯೇ ನಿರ್ಮಿಸಿರುವ ದೇವಿ ಆಲಯಗಳು ಸು. ೮ನೇ ಶತಮಾನದಲ್ಲಿ ನಂತರದಲ್ಲಿ ಕಾಣಬರುವುದು ಗಮನಾರ್ಹವಾಗಿದೆ. ದುರ್ಗಾದೇವಿಯನ್ನು ಶಿವಾಲಯದಲ್ಲಿ ಉತ್ತರದಿಕ್ಕಿನಲ್ಲಿ ಸ್ಥಾಪಿಸಬೇಕೆಂದು ಆಗಮಗಳು ತಿಳಿಸುತ್ತಿವೆ. ದೇವಿಯು 'ದುರ್ಗಮ'ನೆಂಬ ರಕ್ಕಸನನ್ನು ವಿಂಧ್ಯಪರ್ವತದಲ್ಲಿ ಅವತರಿಸಿ ವಧಿಸಿದ ಕಾರಣ ದುರ್ಗಾದೇವಿ ಎಂಬ ಹೆಸರಿನಿಂದಲೂ 'ವಿಂದ್ಯ ವಾಸಿನಿ' ಎಂಬ ಹೆಸರಿನಿಂದಲೂ ಪ್ರಖ್ಯಾತಳಾಗಿದ್ದಾಳೆ. 'ದುರ್ಗಾ ದೇವಾಲಯಗಳಲ್ಲಿ ಹಲವೆಡೆ 'ಮಹಿಷಮರ್ದಿಣಿ' ಚಾಮುಂಡಿ ಶಿಲ್ಪಗಳನ್ನು ಈ ಕಾರಣದಿಂದ ದುರ್ಗಾದೇವಿ ಎಂದೇ ಕರೆದು ಪೂಜಿಸಲಾಗುತ್ತಿದೆ.

ದುರ್ಗಾದೇವಿಯ ಶಿಲ್ಪದ ಲಕ್ಷಣಗಳನ್ನು ಎಲ್ಲಾ ಶಿಲ್ಪ ಶಾಸ್ತ್ರ ಗ್ರಂಥಗಳೂ ಉಲ್ಲೇಖಿಸಿದ್ದು, ನಾನಾ ರೂಪದ ದೇವಿಯ ಶಿಲ್ಪಗಳನ್ನು ಗುರುತಿಸಬಹುದಾಗಿದೆ. ಒಂದೆರಡು ಆಗಮಗ್ರಂಥಗಳಲ್ಲಿ ಮಾತ್ರ ನವದುರ್ಗೆಯರ ಎಲ್ಲಾ ಲಕ್ಷಣಗಳನ್ನು ಖಚಿತವಾಗಿ ತಿಳಿಸಲಾಗಿದೆ. 'ದುರ್ಗಾದೇವಿ' ಎಂಬ ಹೆಸರಿನ ದೇವಿಯ ಪ್ರಧಾನ ಸ್ವರೂಪದ ಬಗೆಗೆ ಈ ಲಕ್ಷಣಗಳು ತಿಳಿಸುತ್ತಿವೆ.

ಅಂಶುಭೇದಾಗಮವು ದುರ್ಗಾದೇವಿಯ ಲಕ್ಷಣವನ್ನು ಹೀಗೆ ತಿಳಿಸಿದೆ:

ಚತುರ್ಭುಜಾ ತ್ರಿನೇತ್ರಾ ಚ ಸಾ ಸ್ವಾಭ್ಯಾಮನಿಭಾ ವರಾ।
....
....
ಅಭಯಂ ದಕ್ಷಿಣಂ ಹಸ್ತಂ ಕಟಕಂ ವಾಮಹಸ್ತಕಂ
ಪರಹಸ್ತೇ ತು ಸಂಖ್ಯೇತು ಚಕ್ರಂ ವಾಮ ತು ಶಂಖಧೃಕ್।
ಸಮಪಾದ ಸ್ಥಿತಾ ಚೈವ ಪದ್ಮಪೀಠೋಪರಿ ಸಂಸ್ಥಿತಾ॥

ಸುಪ್ರಭೇದಾಗಮವು

ಆದಿಶಕ್ತೆ ಸಮದ್ಭೂತ ವಿಷ್ಣು ಪ್ರಾಣಾನುಜಾ ಶುಭಾ।
ಶಂಖ ಚಕ್ರಧರಾ ದೇವೀ ಧನುಸ್ಸಾಯಕ ಧಾರಿಣೀ।
ಖಡ್ಗ ಖೇಟಕ ಸಂಯುಕ್ತಾ ಶೂಲಪಾಶಾ ಸಮಾಯುತಾ।
ಚತುರ್ಭುಜಾಂ ವಾ ಕುರ್ವೀತಾ ಸರ್ವಾಭರಣ ಭೂಷಿತಾಂ॥
ಶ್ಯಾಮವರ್ಣಾಂ ಸುವನಾಂ ಮಹಿಷಸ್ಯ ಶಿರಸ್ಥಿತಾಂ।
ಸಿಂಹಾರೂಢಾಂ ಚ ವಾ ಕುರ್ಯಾತ್ ಪದ್ಮಾಸನ ಸಮಾಗತಾಂ॥

-ಎಂದು ದೇವಿಯನ್ನು ಬಣ್ಣಿಸಿದೆ. ಈ ಲಕ್ಷಣಗಳನ್ನು ಹೊಂದಿದ ಆದಿಶಕ್ತಿ ಸ್ವರೂಪಳಾದ ಸರ್ವಾಭರಣಭೂಷಿತಳಾದ ದುರ್ಗಾದೇವಿಯ ಬಿಂಬಗಳನ್ನು ಶಿವಾಲಯದ ಪರಿವಾರ ದೇವತೆಗಳಂತೆ ಭಾವಿಸಿ ಪೂಜಿಸುತ್ತಿದ್ದ ಶಿಲ್ಪಗಳನ್ನು ತಲಕಾಡಿನ ಮರುಳೇಶ್ವರ, ಪಾತಾಳೇಶ್ವರ, ನಂದಿಯ ಭೋಗನಂದೀಶ್ವರ, ತಾವರೆಕೆರೆ ಸೋಮೇಶ್ವರ ದೇವಾಲಯ ಮೊದಲಾದೆಡೆಗಳಲ್ಲಿ ಕಾಣಬಹುದು. ಚತುರ್ಭುಜೆಯಾದ ಈ ದೇವಿಯ ಕೈಗಳಲ್ಲಿ ಕ್ರಮವಾಗಿ ಅಭಯ ಚಕ್ರ ಶಂಖ ಮತ್ತು ವರದ ಹಸ್ತ ಇರುತ್ತವೆ. ದೇವಿಯು ಸಮಭಂಗಿಯಲ್ಲಿ ಮಹಿಷನ ಶಿರದ ಮೇಲೆ ನಿಂತು ಮಂದಸ್ಮಿತವದನೆಯಾಗಿರುತ್ತಾಳೆ. ವಿಷ್ಣುವಿನ ಸೋದರಿಯಾದ ಇವಳು ಧಾನ್ಯ ಸಂರಕ್ಷಕಿ ಎನಿಸಿದ್ದು ಭಕ್ತಾನುಗ್ರಹದಾಯಿಯಾಗಿದ್ದಾಳೆ. ಇವಳನ್ನು ದುರ್ಗಾಲಕ್ಷ್ಮಿ ಎಂದೂ ಕರೆಯುವರು. ಇವಳ



ಬಿಂಬಗಳನ್ನು ದೇವಾಲಯಗಳಲ್ಲಿ ಮಾತ್ರವಲ್ಲದೇ ತೋಟದಲ್ಲಿ ಕೆರೆ ನದಿಗಳ ದಂಡೆಯ ಮೇಲೆ ಊರನ್ನು ಸಂರಕ್ಷಿಸು ಎಂಬ ಭಾವನೆಯಿಂದ ಸ್ಥಾಪಿಸಿದ್ದಾರೆ. ಹಲವೆಡೆ ದೇವಿಯು ಅಷ್ಟಭುಜೆ ಯಾಗಿದ್ದಾಳೆ. ಇಂಥ ದೇವಿಯ ಶಿಲ್ಪವನ್ನು ಕೂಡಲೂರು, ತುಮಕೂರಿನ ಶಿಲ್ಪಗಳಲ್ಲಿ ಗುರುತಿಸಬಹುದಾಗಿದೆ. ಈ ಶಿಲ್ಪಗಳಲ್ಲಿ ದೇವಿಯು ಅಷ್ಟಭುಜಗಳಲ್ಲಿ ಕ್ರಮವಾಗಿ ಬಾಣ, ಅಭಯ, ಸುರಗಿ, ಚಕ್ರಗಳನ್ನು ಬಲಗೈಗಳಲ್ಲೂ ಮತ್ತು ಶಂಖ, ಖೇಟಕ, ಧನಸ್ಸುಗಳನ್ನು ಎಡಗೈಗಳಲ್ಲಿ ಹಿಡಿದಿದ್ದು, ಮತ್ತೊಂದು ಎಡಗೈ ಕಟೀಹಸ್ತವಾಗಿದೆ. ಕೂಡಲೂರಿನ ದೇವಿಯ ಶಿರದಲ್ಲಿ ಎತ್ತರವಾದ ಕಿರೀಟದ ಧಾರಣೆ ಇದೆ. ಸರ್ವಾಭರಣಾಲಂಕೃತೆಯಾದ ದೇವಿ 'ಕುಚಬಂಧ'ವನ್ನು ಧರಿಸಿದ್ದಾಳೆ. ಪ್ರಸನ್ನ ವದನಳಾಗಿ ಮಹಿಷನ ತಲೆಯ ಮೇಲೆ ಸಮಭಂಗಿ/ದ್ವಿಭಂಗಿಯಲ್ಲಿ ಸ್ಥಾನೀಕಳಾದ ದೇವಿಯ ಶಿಲ್ಪಗಳಾಗಿವೆ. ದೇವನಹಳ್ಳಿ ತಾಲೂಕಿನ ಬೂದಿಗೆರೆ ಗ್ರಾಮದ ಕಟ್ಟೆಯ ಮೇಲಿರುವ ದುರ್ಗಾದೇವಿ ಶಿಲ್ಪವು ವಿಶೇಷವಾದದ್ದಾಗಿದೆ. ಮಹಿಷನ ಶಿರದ ಮೇಲೆ ಸಮಭಂಗಿಯಲ್ಲಿ ಸ್ಥಾನೀಕಳಾಗಿರುವ ದೇವಿ ಪ್ರಸನ್ನ ವದನಳಾಗಿದ್ದಾಳೆ. ಚತುರ್ಭುಜೆಯಾದ ದೇವಿ ಕೈಗಳಲ್ಲಿ ಅಭಯ ಚಕ್ರ-ಶಂಖ-ಕಟಿಹಸ್ತಗಳಿವೆ. ದೇವಿಯ ಪಾದದ ಬಳಿ ಬಲಗಡೆ ಭಕ್ತನೊಬ್ಬನು ತನ್ನ ಕತ್ತನ್ನು ಕತ್ತರಿಸಿಕೊಳ್ಳುತ್ತಿದ್ದಾನೆ. ಎಡಭಾಗದಲ್ಲಿ ಅರ್ಚಕ ಅಂಜಲಿಬದ್ಧನಾಗಿದ್ದಾನೆ. ಈ ಶಿಲ್ಪವು ದುರ್ಗಾ ಆರಾಧನೆಯಲ್ಲಿ ನಡೆಯುವ 'ಬಲಿಪದ್ಧತಿ' ಬಗೆಗೆ ಬೆಳಕು ಚೆಲ್ಲುತ್ತಿದೆ.

ಇದರಂತೆ ಕುಣಿಗಲ್‌ನ ಸೋಮೇಶ್ವರ ದೇವಾಲಯ ಮತ್ತು ಮಾಯಸಂದ್ರದ ಶಿವಾಲಯಗಳಲ್ಲಿರುವ 'ದುರ್ಗಾದೇವೀ' ಶಿಲ್ಪವು ವಿಶೇಷವಾಗಿ ಗಮನ ಸೆಳೆಯುತ್ತದೆ. ಈ ಶಿಲ್ಪಗಳಲ್ಲಿ ದೇವಿಯೊಂದಿಗೆ ಚಿತ್ರಿಸಿರುವ 'ಸಿಂಹ' ಮತ್ತು 'ಜಿಂಕೆ'ಗಳನ್ನು ಆಗಮಗ್ರಂಥಗಳು ಉಲ್ಲೇಖಿಸಿಲ್ಲ. ಅಂಶುಭೇಧಾಗಮವು ಮಾತ್ರ ದೇವಿ ಸಿಂಹಾರೂಢಳೆಂದಿದೆ. ಆದರೆ ಇಲ್ಲಿ ದೇವಿ ಸ್ಥಾನೀಕಳಾಗಿದ್ದಾಳೆ.

ಆಗಮಗ್ರಂಥವು 'ಅಗ್ನಿದುರ್ಗೆ'ಯ ಲಕ್ಷಣಗಳೆಂದು ತಿಳಿಸುವಲ್ಲಿ -"ದೇವಿಯು ಸೂರ್ಯನಂತೆ ಪ್ರಕಾಶಿತಳಾಗಿದ್ದು, ಭೀಕರವಾದ ಸಿಂಹವೇರಿರುತ್ತಾಳೆ. ಅಷ್ಟಭುಜೆಯಾದ ಅವಳ ಕೈಗಳಲ್ಲಿ ಚಕ್ರ, ವರದಾ, ಖಡ್ಗ, ಖೇಟಕ, ಧನಸ್ಸು, ಬಾಣ, ಅಂಕುಶ ಮತ್ತು ತರ್ಜನಿ ಹಸ್ತಗಳಿರುತ್ತವೆ. ಅಗ್ನಿಯ ಮಗಳಾದ, ಚಂದ್ರಕಳೆಯಿಂದ ಕೂಡಿದ, ತ್ರಿನೇತ್ರೆಯಾದ ದುರ್ಗಾದೇವಿ ಎಂದೆಲ್ಲ ಪ್ರಾರ್ಥಿಸಿದೆ. ಶ್ರೀ ಗೋಪಿನಾಥರಾಯರು - "ಅಷ್ಟಭುಜೆಯಾದ ದೇವಿಯ ಕೈಗಳಲ್ಲಿ ಚಕ್ರ, ಖಡ್ಗ, ಖೇಟಕ, ಬಾಣ, ಪಾಶ, ಅಂಕುಶಗಳಿದ್ದು, ಉಳಿದೆರಡು ಹಸ್ತಗಳು ವರದ, ತರ್ಜನಿ ಹಸ್ತಗಳಾಗಿರುತ್ತವೆ. ತ್ರಿನೇತ್ರೆಯಾದ ಈಕೆ ಮಿಂಚಿನ ಪ್ರಕಾಶದವಳು. ಕಿರೀಟದಲ್ಲಿ ಚಂದ್ರಕಳೆ ಧರಿಸಿ ಉಗ್ರಸಿಂಹವನ್ನೇರಿರುತ್ತಾಳೆ. ಇವಳ ಸೇವಕಿಯರು ಖಡ್ಗ ಖೇಟಕಾಧಾರಿಗಳು, ಎಂದಿದ್ದಾರೆ. ತರ್ಜನಿ ಹಸ್ತಕ್ಕೆ ಬದಲಾಗಿ ಕಟಿಹಸ್ತವಿರುವ ದುರ್ಗಾದೇವಿ ಬಿಂಬವನ್ನು, ಅಗ್ರಹಾರ ಬೆಳಗುಲಿ, ಕೂಡಲೂರು ಶಿವಾಲಯಗಳಲ್ಲಿ ತುಮಕೂರಿನ ಶಿರಾಗೇಟ್‌ನ ಹೊಲದಲ್ಲಿಯ ಶಿಲ್ಪದಲ್ಲಿ ಕಾಣುತ್ತೇವೆ.

'ರೂಪಮಂಡನ'ದಲ್ಲಿ ಮೂರು ವಿಧದ ದುರ್ಗೆಯರ ಲಕ್ಷ್ಮಣಗಳನ್ನು ತಿಳಿಸಲಾಗಿದೆ.

೧. ಚತುರ್ಭುಜಳಾದ ದೇವಿಯು ಕೈಗಳಲ್ಲಿ ವರದಹಸ್ತ ತ್ರಿಶೂಲ, ಖೇಟಕ ಮತ್ತು ಪಾನಪಾತ್ರೆಗಳನ್ನು ಧರಿಸಿರುತ್ತಾಳೆ. ನೀಲಕಂಠೆಯಾದ ದೇವಿಯ ಬಳಿ ಎರಡೂ ಕಡೆ ಆನೆಗಳು ಇದ್ದರೆ ಅವಳು ಮಹಾಲಕ್ಷ್ಮಿಯಾಗಿದ್ದು ಸಂಪತ್ತು ಮತ್ತು ಸುಖವನ್ನು ನೀಡುತ್ತಾಳೆ. ಇವಳನ್ನು 'ನೀಲಕಂಠ ದುರ್ಗೆ' ಎಂದು ಕರೆಯಲಾಗಿದೆ.

೨. ದೇವಿಯು ವರದಹಸ್ತ, ತ್ರಿಶೂಲ, ಪದ್ಮ ಮತ್ತು ಪಾನ ಪಾತ್ರೆಗಳನ್ನು ಧರಿಸಿದ್ದರೆ ಆ ದೇವಿಯನ್ನು 'ಕ್ಷೇಮಂಕರಿ' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಇವಳು ಆರೋಗ್ಯ ಮತ್ತು ಕ್ಷೇಮವನ್ನು ನೀಡುವ ದೇವಿಯಾಗಿದ್ದಾಳೆ. ಐಹೊಳೆಯ ದುರ್ಗಾಭಗವತಿ ಗುಡಿಯಲ್ಲಿ ಈ ಶಿಲ್ಪವಿದ್ದಿತೆಂದು ತಿಳಿದು ಬರುತ್ತದೆ.



೩. ದೇವಿಯ ಕೈಗಳಲ್ಲಿ ಕಮಂಡಲು, ಖಡ್ಗ, ಡಮರು ಮತ್ತು ಪಾನಪಾತ್ರೆಗಳನ್ನು ಧರಿಸಿದ್ದರೆ-ದೇವಿಯನ್ನು 'ಹರಸಿದ್ಧಿ' ಎಂದು ಕರೆಯುತ್ತಾರೆ. ಇವಳು ಎಲ್ಲಾ ಕೆಲಸ ಕಾರ್ಯಗಳಲ್ಲಿ ಸಿದ್ಧಿಯನ್ನು ಉಂಟುಮಾಡುವ ದೇವಿಯಾಗಿದ್ದಾಳೆ. ಆವನಿಯ ಗಿಂಡಿತೀರ್ಥದ ಬಳಿ ಇರುವ ದುರ್ಗಾ ದೇವಾಲಯದ ಶಿಲ್ಪವು ಈ ಲಕ್ಷಣವುಳ್ಳ ಶಿಲ್ಪವಾಗಿದೆ. ಕಾರಣಾಗಮವು 'ರುದ್ರಾಂಶ ದುರ್ಗಾ' ಎಂಬ ದೇವಿಯ ಲಕ್ಷಣವನ್ನು ತಿಳಿಸಿದೆ. ಶ್ಯಾಮಕಾಯದ ದುರ್ಗಾದೇವಿಯು - ರಕ್ತಾಂಬರವನ್ನು ಧರಿಸಿ, ದ್ವಿನೇತ್ರೆಯಾಗಿದ್ದು, ಕಿರೀಟಾದಿ ಆಭರಣಗಳನ್ನು ಧರಿಸಿರುತ್ತಾಳೆ. ಸಿಂಹಾರೂಢಳಾದ ದೇವಿಯ ಕೈಗಳಲ್ಲಿ ಕ್ರಮವಾಗಿ ಶೂಲ, ಖಡ್ಗ, ಶಂಖ,

ಚಕ್ರಗಳಿರುತ್ತವೆ. ಇವಳ ಪಕ್ಕದಲ್ಲಿ ಸೂರ್ಯ ಚಂದ್ರರಿರುತ್ತಾರೆ, ಎಂದು ತಿಳಿಸಿದೆ-ಹೆಬ್ಬಾಳದ ಕೆರೆಯ ಬಳಿಯ ದುರ್ಗಾಶಿಲ್ಪ ಹೀಗಿದೆ. ಕುಣಿಗಲ್‌ನ ಶಿಲ್ಪದಲ್ಲಿ ಶೂಲದ ಬದಲು ಧನುಸ್ಸನ್ನು ಹಿಡಿದಿದ್ದಾಳೆ. ಇದರಿಂದ ಈ ಶಿಲ್ಪಗಳು - "ರುದ್ರಾಂಶದುರ್ಗೆ' ಶಿಲ್ಪಗಳೆಂದೇ ತೋರುತ್ತದೆ.

ಆಗಮವು ವನದುರ್ಗಿಯ ಲಕ್ಷಣಗಳೆಂದು ಹೀಗೆ ತಿಳಿಸಿದೆ: ನವದೂರ್ವದಂತೆ ಹಸಿರು ಬಣ್ಣದಿಂದ ಕೂಡಿದ ದುರ್ಗಾದೇವಿಯು ಅಷ್ಟಭುಜೆಯಾಗಿದ್ದು ಕೈಗಳಲ್ಲಿ ಶಂಖ, ಚಕ್ರ, ಖಡ್ಗ, ಖೇಟಕ, ಬಾಣ, ಧನಸ್ಸು, ಶೂಲ ಮತ್ತು ತರ್ಜನಿ ಹಸ್ತಗಳನ್ನು ಹೊಂದಿರುತ್ತಾಳೆ. ಮಹಿಷೋತ್ತಮಾಂಗದ ಮೇಲೆ ಸ್ಥಾನೀಕಳಾದ ದೇವಿ ಸರ್ವಾಭರಣ ಸಂಯುಕ್ತೆ, ಮಂದಸ್ಮಿತೆ! ಎಂದಿದೆ. ಇವಳನ್ನೇ 'ವಿಂದ್ಯಾವಾಸಿನಿ ದುರ್ಗೆ' ಎಂದೂ 'ಕಾತ್ಯಾಯಿನೀ' ಎಂದೂ ಕರೆಯುತ್ತಾರೆ. ಇಂಥ ಸುಂದರ ಶಿಲ್ಪವನ್ನು ತಲಕಾಡಿನ ವೈದ್ಯನಾಥೇಶ್ವರ ದೇವಾಲಯದ ಪ್ರಾಕಾರದಲ್ಲೂ ನಂದಿತಾವರೆ ಶಿವಾಲಯದ ಕೋಷ್ಠದಲ್ಲೂ ಕಾಣಬಹುದು; ತುಮಕೂರಿನ ಶಿರಾಗೇಟ್‌ಬಳಿ ಇರುವ ದುರ್ಗಾ ಶಿಲ್ಪವು 'ವನದುರ್ಗಿ' ಶಿಲ್ಪವೇ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಟ್ಟಾಡಿಯ ಬಳಿಯ ಎಣ್ಣೆ ಗುಡ್ಡೆ ದೇವಾಲಯ ಕಟೀಲ್‌ನ ದುರ್ಗಾ ಪರಮೇಶ್ವರಿ ದೇವಾಲಯದ ಬಿಂಬಗಳು ಶಂಖ ಚಕ್ರ ಅಭಯ ವರದ .ಹಸ್ತಗಳುಳ್ಳ ತ್ರಿನಯನೆಯಾದ, ಸರ್ವಾಭರಣ ಭೂಷಿತೆಯಾದ ವಿಂದ್ಯವಾಸಿನಿ ದುರ್ಗೆಯ ಬಿಂಬಗಳೂ ಆಗಿವೆ. ಶೃಂಗೇರಿಯ ಕಿಗ್ಗದ ಬಳಿಯ ವನದಲ್ಲಿ ತ್ರಿಕೋಣಾಕಾರದ ಶಿಲ್ಪವೊಂದನ್ನೇ 'ವನದುರ್ಗಿ' ಎಂದು ಪೂಜಿಸುತ್ತಾರೆ.

ನವದುರ್ಗೆಯರಲ್ಲಿ ಒಬ್ಬಳಾದ 'ಜಯದುರ್ಗೆ'ಯ ಲಕ್ಷಣ ಗಳನ್ನು ಶಿಲ್ಪಶಾಸ್ತ್ರ ಗ್ರಂಥವು ಹೀಗೆ ತಿಳಿಸಿದೆ: "ಕಪ್ಪು ಬಣ್ಣದ ಶತ್ರುಕುಲದವರಿಗೆ ಭಯವನ್ನುಂಟುಮಾಡುವಂಥ ನೇತ್ರಗಳುಳ್ಳ ತ್ರಿನೇತ್ರೆಯಾದ ದೇವಿಯು ಕಿರೀಟದಲ್ಲಿ ಚಂದ್ರಕಳೆಯನ್ನು



ಧರಿಸಿದ್ದಾಳೆ. ದೇವಿಯ ಕೈಗಳಲ್ಲಿ ಕ್ರಮವಾಗಿ ಶಂಖ, ಚಕ್ರ, ತ್ರಿಶೂಲ, ದೊಡ್ಡದಾದ ಕತ್ತಿ ಹಿಡಿದಿದ್ದು, ಕೈಗಳನ್ನು ಬೀಸಿರುತ್ತಾಳೆ. ಅವಳ ತೇಜಸ್ಸಿನಿಂದ ಜಗತ್ತೆಲ್ಲ ಬೆಳಗುತ್ತಿದ್ದು, ಸಿದ್ಧಿಯನ್ನು ಬಯಸಿ ಪ್ರಾರ್ಥಿಸುತ್ತಿರುವ ದೇವತೆಗಳ ಪರಿವಾರದೊಂದಿಗೆ ಇರುವ ದೇವಿ ಸಿಂಹಾರೂಢಳಾಗಿರುತ್ತಾಳೆ. ಇಂಥ 'ಜಯದುರ್ಗೆ'ಯನ್ನು ಪ್ರಾರ್ಥಿಸುತ್ತೇನೆ.

ಸಿಂಹಾರೂಢಳಾದ ಜಯದುರ್ಗಾದೇವಿ ಶಿಲ್ಪವನ್ನು ಮುಳಬಾಗಿಲು ತಾಲೂಕಿನ ವಿರೂಪಾಕ್ಷಪುರದ ದೇವಿ ಆಲಯದಲ್ಲಿ ಕಾಣುತ್ತೇವೆ. ಉಡುಪಿ ಬಳಿಯ ಕನ್ನರಪಾಡಿಯ ದುರ್ಗಾದೇವಿ ಆಲಯದಲ್ಲಿ - "ಸಮಭಂಗಿಯಲ್ಲಿ ನಿಂತಿರುವ ದೇವಿಯು ಕೈಗಳಲ್ಲಿ ಶಂಖ, ಚಕ್ರ, ಖಡ್ಗ, ಅಗ್ನಿಗಳನ್ನು ಧರಿಸಿರುವ 'ಜಯದುರ್ಗಾ' ಶಿಲ್ಪವಿದೆ ಎಂದು ತಿಳಿದು ಬರುತ್ತದೆ.

ಶಾರದ ತಿಲಕ ತಂತ್ರವು 'ರಿಪುಮಾರಿ ದುರ್ಗೆ' ಲಕ್ಷಣಗಳನ್ನು ತಿಳಿಸಿದೆ. ಸೂರ್ಯಬಿಂಬದಿಂದ ಉದ್ಭವಿಸಿರುವ ದೇವಿಯ ಕೈಗಳಲ್ಲಿ ತರ್ಜನಿಹಸ್ತ, ತ್ರಿಶೂಲ ಧರಿಸಿದ್ದು ಭಯಂಕರಳಾಗಿರುತ್ತಾಳೆ. ಇವಳ ಸುತ್ತ ಕೊಲ್ಲಲ್ಪಟ್ಟ ಶತ್ರು ಬಂಧುಗಳಿರುತ್ತಾರೆ, ಎಂದಿದೆ. ಟಿ. ಎ. ಗೋಪಿನಾಥರಾಯರು 'ರಿಪುಮಾರಿ ದುರ್ಗೆ' ಬಗೆಗೆ ತಿಳಿಸುತ್ತಾ - "ರಕ್ತವರ್ಣದವಳಾದ, ಕ್ರೂರ ದೃಷ್ಟಿಯುಳ್ಳ ದೇವಿ ತ್ರಿಶೂಲಧರೆ, ತರ್ಜನಿಹಸ್ತ ಹೊಂದಿರುತ್ತಾಳೆ. ಇವಳ ಮಂತ್ರವನ್ನು ೧೦,೦೦೦ ಸಲ ಜಪಿಸಿದರೆ ಶತ್ರು ನಾಶವಾಗುತ್ತಾನೆ, ಎಂದಿದ್ದಾರೆ. ಇಂಥ ಬಿಂಬಗಳು ದೊರೆತಿರುವುದಿಲ್ಲ.

ಹೀಗೆ ಪ್ರಾಚೀನ ಕಾಲದಿಂದ, ದುರ್ಗಾದೇವಿ ಆರಾಧನೆ ನಡೆದುಬಂದಿದೆ. ಕರ್ನಾಟಕದಲ್ಲಿ ಅಗರ ಗ್ರಾಮವು ದುರ್ಗಾ ಅಗ್ರಹಾರವೆಂದೂ ಪ್ರಸಿದ್ಧವಾಗಿತ್ತು. ಇಂದಿಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ದುರ್ಗಾಪರಮೇಶ್ವರಿ ದೇವಾಲಯಗಳಿವೆ. ದೇವಿಯ ನಾನಾ ಸ್ವರೂಪದ ಶಿಲ್ಪಗಳು ನಾನಾ ಹೆಸರುಗಳಿಂದ ಆರಾಧಿಸಲ್ಪಡುತ್ತಿವೆ. ಇತ್ತೀಚಿಗೆ 'ದುರ್ಗಾದೇವಿ ಆರಾಧನೆ' ವಿಶೇಷವಾಗಿ ಪ್ರಚಲಿತವಾಗುತ್ತಿದ್ದು ಬೆಂಗಳೂರಿನಲ್ಲಿ ಹಲವೆಡೆ ದುರ್ಗಾ ದೇವಾಲಯಗಳು ನಿರ್ಮಾಣವಾಗಿರುವುದು ಗಮನಾರ್ಹ ವಾಗಿದೆ. ಸರ್ವದೇವತಾ ಶಕ್ತಿ ಸ್ವರೂಪಿಣೆಯಾದ ದೇವಿಯನ್ನು ಜಗತ್ತಿನ ಎಲ್ಲಾ ಜಾತಿಯ ಜನರು ಆರಾಧಿಸುತ್ತಾರೆ. ಕಾರಣ ಆಕೆ 'ದುರ್ಗಾದೇವಿ' ಸಕಲ 'ದುರಿತ ನಿವಾರಣೆ'!

ಶರಣಮಸಿ ಸುರಾಣಾಂ ಸಿದ್ಧವಿದ್ಯಾಧರಾಣಾಂ
ಮುನಿ ಮನುಜ ಪಶೂನಾ ದಸ್ಯುಭಿಸ್ತ್ರಾಸಿತಾನಾಮ್।
ನೃಪತಿಗೃಹ ಗತಾನಾಂ ವ್ಯಾಧಿಭಿಃ- ಪೀಡಿತಾನಾಂ।
ತ್ವಮಸಿ ಶರಣಮೇಕಾ ದೇವಿ ದುರ್ಗೇ ಪ್ರಸೀದಾ॥

ಯಾದೇವಿ ಸರ್ವಭೂತೇಷು ವಿಷ್ಣು ಮಾಯೇತಿ ಶಬ್ದಿತಾ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ॥

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ.**, ಎಸ್. ಕೆ.ರಾಮಚಂದ್ರರಾವ್

೨ *Elements of Indian Iconography,* Vol I Part II., T.A. Gopinath Rao


೩. MAR Volumes

೪. *Antiquites of South Canara* ., Dr. Gururaja Bhat

೫. *Shakthi* - Iconography

★ ★ ★ ★

ಶಿಲ್ಪಿ ನಿನ್ನ ಬೆರಳುಗಳಲ್ಲಿ ಕಲೆಯು ಮೂಡಿದ ಕಾಲ ಹೇಳು
ಅಷ್ಟಭುಜೆ ದುರ್ಗೆ ಪಾನಪಾತ್ರೆ ಹಿಡಿದು ಸಿಂಹ ಸವಾರಿ ಮಾಡಿಹಳು
ಶಿಲೆಯ ಸೌಭಾಗ್ಯ, ನೀನೊದಗಿಸಿದೆ ಅದಕೆ ಚರಿತ್ರೆಯ ಬಾಳು



ಚೀಳೂರು ಸ್ತಂಭ ದುರ್ಗಾ

ಡಾ. ಜಿ. ಜ್ಞಾನಾನಂದ*

'ಸಮರಾಂಗಣ ಸೂತ್ರಧಾರ' ದಲ್ಲಿ ಯಂತ್ರಶಿಲ್ಪ

ಸಮರಾಂಗಣ ಸೂತ್ರಧಾರ[೧] ಶಿಲ್ಪಶಾಸ್ತ್ರವು ಅನೇಕ ವೈಶಿಷ್ಟ್ಯಗಳನ್ನು ಗರ್ಭೀಕರಿಸಿಕೊಂಡಿರುವ ಕ್ರಿ.ಶ. ೧೧ ಶತಮಾನದ ಶಾಸ್ತ್ರಗ್ರಂಥ[೧]. ಅಂತಹ ವೈಶಿಷ್ಟ್ಯಗಳಲ್ಲಿ ಯಂತ್ರಾವಿಧಾನ[೨] ಎಂಬ ವಿಶಿಷ್ಟ ಅಧ್ಯಾಯವೂ ಇದೆ. ಯಂತ್ರಗಳ ಬಗ್ಗೆ ವಿವರಿಸಿರುವ ಶಿಲ್ಪಶಾಸ್ತ್ರಗ್ರಂಥವು ಬೇರೆಲ್ಲೂ ಇದುವರೆವಿಗೂ ಬೆಳಕಿಗೆ ಬಂದಿಲ್ಲವಾದ್ದರಿಂದ ಈ ಅಧ್ಯಾಯದ ವಿವರಗಳಿಗೆ ಅತ್ಯಂತ ಹೆಚ್ಚಿನ ಮೌಲ್ಯ ದೊರೆಯುತ್ತದೆ. ೨೨೪ ಶ್ಲೋಕಗಳಿರುವ ಈ ಅಧ್ಯಾಯದಲ್ಲಿ ಅನೇಕ ಯಂತ್ರಗಳ ಬಗ್ಗೆ ವಿವರವಾದ ವರ್ಣನೆ ಇಲ್ಲಿದೆ. ಯಂತ್ರ ಎಂಬುದರ ಪರಿಭಾಷೆಯನ್ನು ಬಹು ರಮ್ಯವಾಗಿ ಹೇಳುತ್ತದೆ.

> ಯದೃಚ್ಛಯಾ ಪ್ರವೃತ್ತಾನಿ ಭೂತಾನಿ ಸ್ವೇನ ವರ್ತ್ಮನಾ।
> ನಿಯಮ್ಯಾಸ್ಮಿನ್ ನ ಯತಿ ಯತ್ ತದ್ ಯಂತ್ರಮಿತಿ ಕೀರ್ತಿತಮ್॥[೩]

ನಮಗೆ ಕಾಣಿಸುವ ಭೂತಗಳನ್ನು ಅವುಗಳ ನೈಸರ್ಗಿಕ ಗುಣಗಳ ಅನುಸಾರವಾಗಿ ಪರಸ್ಪರ ವರ್ತಿಸಿ ಪೂರ್ವಯೋಜಿತ ರೀತಿಯಲ್ಲಿ ಕೆಲಸಮಾಡಲು ತೊಡಗಿಸಿ, ನಿರ್ದೇಶಿಸಿ ಗುರಿಯನ್ನು ತಲುಪುವಂತೆ ನಿಯಂತ್ರಿಸಿ ನಡೆಸುವ ಪರಿಕರವು ಯಂತ್ರವೆಂದು ಕರೆಯಲ್ಪಡುತ್ತದೆ. ಅದಕ್ಕೆ ಸೂತ್ರವೇ ಇದೆ. (ಯಮಯತಿ ತದ್ವಾ ಯಂತ್ರಮಿತಿ ಸ್ಮೃತಮ್।[೪])..ಯಂತ್ರ ಪದದ ಪ್ರವೃತ್ತಿಯು ಯಮ್(ನಿಯಂತ್ರಣ) ಧಾತುವಿನಿಂದಲೇ ಆಗಿದೆ.

ಯಂತ್ರದ ರಚನೆ

ಯಂತ್ರಗಳಿಗೆ ಮೂಲವಸ್ತುವೇ ಬೀಜ. ಇವು ನಾಲ್ಕು[೫] ೧. ಆಕಾಶ ೨. ನೀರು ೩. ಅಗ್ನಿ ೪. ಗಾಳಿ. ಈ ಬೀಜಗಳ ಚಲನೆಗೆ ಮತ್ತು ಕ್ರಿಯೆಗೆ ಆಶ್ರಯವಾಗಿರುವುದೇ ಭೂಮಿ. ಈ ಕಾರಣಕ್ಕಾಗಿಯೇ ಭೂಮಿಯನ್ನು ಐದನೆಯ ಬೀಜವನ್ನಾಗಿ ಪರಿಗಣಿಸಲಾಗಿದೆ. ಹೀಗೆ ಯಂತ್ರಗಳು ಪಂಚಭೂತಾತ್ಮಕ. ಪ್ರಧಾನವಾಗಿ ಭೂಮಿಯೇ ಆಸರೆಯಾಗಿದ್ದು ಯಂತ್ರದಲ್ಲಿ ಈ ಭೂತದ ಪ್ರಮಾಣವು ಹೆಚ್ಚಾಗಿರುತ್ತದೆ.

ಗಮನಾರ್ಹವಾಗಿ ಒಂದು ಅಂಶವನ್ನು ಸಮರಾಂಗಣ ಸೂತ್ರಧಾರನು ಪ್ರಸ್ತಾಪಿಸುತ್ತಾನೆ. ತನ್ನ ಪೂರ್ವಜರಾಗಿರುವ ಶಿಲ್ಪಶಾಸ್ತ್ರಕಾರರು ವಿಮಾನಾದಿ ಕೆಲವು ಯಂತ್ರಗಳಿಗೆ ಸೂತ (ಪಾದರಸ) ಬಹು ಮುಖ್ಯವಾದುದು ಎಂಬ ಕಾರಣಕ್ಕಾಗಿ ಪಾದರಸವನ್ನು ಮೂಲವಸ್ತುವಾಗಿ ಪರಿಗಣಿಸಿದ್ದಾರೆ ಎಂಬುದನ್ನು ಹೇಳಿ ತಾನು ಈ ಪರಿಗಣನೆಯನ್ನು ಒಪ್ಪಿವುದಿಲ್ಲ ಎಂದು ಹೇಳುತ್ತಾನೆ. ಇದಕ್ಕೆ ಕಾರಣ ಪಾದರಸವು ಭೂಮಿಯಲ್ಲಿಯೇ ದೊರೆಯುವುದಿಂದ ಅದು ಪಾರ್ಥಿವ ಎಂದು ಹೇಳಿ ಅದನ್ನೂ ಪೃಥ್ವಿಯಲ್ಲಿಯೇ ಪರಿಗಣಿಸಿದ್ದೇನೆ ಎಂದು ವಿವರಿಸಿದ್ದಾನೆ.[೬] ಈ ಬೀಜ ಮೀಮಾಂಸೆಯು ಬಹು ಸಂಕೀರ್ಣವಾದುದು ಎಂಬುದು ಸಮರಾಂಗಣ ಸೂತ್ರಧಾರನಿಗೆ ಚೆನ್ನಾಗಿ ಗೊತ್ತಿದೆ. ಅದಕ್ಕಾಗಿಯೇ ಆತನು ಪಾದರಸವು ತನ್ನ ಚಲನೆಯಿಂದ ಗಾಳಿಯನ್ನು ಉತ್ಪತ್ತಿಯಿಂದ ಭೂಮಿಯನ್ನು ಬೆಂಕಿಯನ್ನು ಉತ್ಪಾದಿಸುವ ಶಕ್ತಿಯನ್ನು ಪಡೆದಿರುವುದರಿಂದ ಅಗ್ನಿಯನ್ನು ಹೊಂದಿದ್ದರೂ ತನ್ನ ಮೂಲಗುಣವನ್ನು ಕಳೆದುಕೊಳ್ಳುವುದಿಲ್ಲ. ಹೇಗೆಂದರೆ ಗಂಧ (ವಾಸನೆ) ಮತ್ತು ಅಗ್ನಿ ಪರಸ್ಪರ ವಿರೋಧವಾದುವು. ಆದರೆ ಭೂಮಿಯು ಇವೆರಡನ್ನು ಪಡೆದುಕೊಂಡಿದೆ. ಅಷ್ಟು ಮಾತ್ರವೇ ಅಲ್ಲ. ಭೂಮಿಯ ಪ್ರಧಾನ ಗುಣವು ಇರುವಿಕೆಯಿಂದ ಬದಲಾಗಿಲ್ಲ. ಆದ್ದರಿಂದಲೇ ನಾವು ಭೂಮಿಯನ್ನು ಭೂಮಿ ಎಂದೇ ಗುರ್ತಿಸುತ್ತೇವೆ. ಮೂಲವಸ್ತುಗಳ ಗುಣವನ್ನು ಗುರ್ತಿಸುವುದರಲ್ಲಿ ಇರುವ ಈ ವಿರೋಧಭಾವ ಹೋಗಲಾಡಿಸಲು ಯಂತ್ರದಲ್ಲಿ ಬೀಜಗಳು ಪ್ರತ್ಯೇಕಗೊಳಿಸಲಾರದಂತೆ ಸೇರಿಕೊಂಡಿರುತ್ತವೆ. ಒಂದು ಹಂತದಲ್ಲಿ/ಸ್ಥಳದಲ್ಲಿ ಬೀಜವಾಗಿರುವುದೇ ಇನ್ನೊಂದು ಹಂತದಲ್ಲಿ/ ಸ್ಥಳದಲ್ಲಿ ಬೀಜಿಯಾಗಿರುತ್ತದೆ. ಇವೆಲ್ಲಾ ಸಂಯುಕ್ತವಾಗಿ ಕ್ರಿಯಾತ್ಮಕವಾದಾಗ ಬಹು ಬಗೆಯ ಬೀಜಗಳು ರೂಪುಗೊಳ್ಳುತ್ತವೆ.[೭]

ಪಾದರಸವನ್ನು ಇಂಧನವನ್ನಾಗಿ ಬಳಸಿಕೊಳ್ಳಬಹುದು ಎಂಬ ಅಂಶ ಅಧುನಿಕ ವಿಜ್ಞಾನ ಹೇಳಿದರೂ ಅದರ ನಿಯಂತ್ರಣ ಪ್ರಸ್ತುತ ತಂತ್ರ ಜ್ಞಾನದಿಂದ ಸಾಧ್ಯವಾಗದು ಎಂದು ತಿಳಿದಿದ್ದಾರೆ. ಪಾದರಸವು ಬಳಕೆಯಲ್ಲಿ ಆವಿಯ ಸ್ಥಿತಿಗೆ ಪರಿವರ್ತಿತಗೊಂಡು ಮತ್ತೆ ಪೂರ್ವಸ್ಥಿತಿಗೆ ಬದಲಾಗುವಂತಹ ವಿಶಿಷ್ಟವಾದ ಗುಣವನ್ನು ಪಡೆದುಕೊಂಡಿದೆ.

ಯಂತ್ರದ ಸಾಧಾರಣ ವಿಧಗಳು ನಾಲ್ಕು ಎಂದು ಹೇಳಿ ಈ ರೀತಿಯಾಗಿ ವರ್ಗೀಕರಿಸಲಾಗಿದೆ.[೮]

೧. *ಸ್ವಯಂವಾಹಕ : ತನ್ನನ್ನು ತಾನೇ ನಿಯಂತ್ರಿಸಿಕೊಂಡು ಕೆಲಸ ಮಾಡುವ ಯಂತ್ರ*

* ೪೮೫ (ಮಹಡಿ), ೮ನೇ ಕ್ರಾಸು, ಜೀವನ ಬಿಮಾನಗರ ಮುಖ್ಯರಸ್ತೆ, ಎಚ್‌ಎಎಲ್ ೩ನೇ ಸ್ಟೇಜು, ಬೆಂಗಳೂರು-೭೫

೨. *ಸಕೃತ್‌ಪ್ರೇರ್ಯ : ಪ್ರಾರಂಭಿಕ ಚಲನೆಯನ್ನು ಇದಕ್ಕೆ ಹೊರಗಿನಿಂದ ಒದಗಿಸಬೇಕು. ತರುವಾಯ ತನ್ನಿಂದ ತಾನೇ ನಡೆಯುತ್ತದೆ.*

೩. *ಅಂತರಿತವಾಹ್ಯ : ಈ ಯಂತ್ರದಲ್ಲಿ ಇದರ ಕ್ರಿಯಾಭಾಗವನ್ನು ಮರೆಯಾಗಿ ಇರಿಸಿರುತ್ತಾರೆ.*

೪. *ಅದೂರವಾಹ್ಯ : ಯಂತ್ರವು ದೂರವಿದ್ದೇ ತನ್ನ ಕೆಲಸವನ್ನು ನಿರ್ವಹಿಸುತ್ತದೆ.*

ಯಂತ್ರವು ಸ್ವಯಂವಾಹ್ಯವಾಗಿರುವಾಗ ಅದರ ಮುಖ್ಯ ಗುಣವೆಂದರೆ ಕಾಣಿಸದಂತೆ ಇರುವುದು (ಅಲಕ್ಷ್ಯತೆ) ಮತ್ತು ವಿಚಿತ್ರ ಎನಿಸುವುದು (ವಿಚಿತ್ರತ್ವ). ರೂಢಿಯಲ್ಲಿ ಶುದ್ಧ ವಿಭಜನೆಯ ಅನ್ವಯ ಯಂತ್ರಗಳು ದೊರೆಯುವುದು ವಿರಳ. ಆದ್ದರಿಂದ ಈ ಬಗೆಯ ಮಿಶ್ರಣಗಳಿರುವುದರಿಂದ ಅನೇಕ ಮಿಶ್ರಣಗಳಿಗೆ ಇದು ಕಾರಣವಾಗಿರುವುದುಂಟು.

ಯಂತ್ರಗಳನ್ನು ರೂಪಿಸಲು ಪಂಚಭೂತಗಳ ಬಳಕೆಯನ್ನು ಮೊದಲೇ ಹೇಳಿದೆ. ಯಾವ ಭೂತದ ಪರಿಮಾಣವು ಹೆಚ್ಚಾಗಿದೆಯೋ ಆ ವಿಭಾಗಕ್ಕೆ ಆ ಯಂತ್ರವನ್ನು ಸೇರಿಸಲಾಗುತ್ತದೆ. ಈ ಬಗೆಯಲ್ಲಿ ಯಂತ್ರಗಳನ್ನು ಐದು ಬಗೆಯಾಗಿ ವಿಂಗಡಿಸಲಾಗುತ್ತದೆ-

೧. *ಪಾರ್ಥಿವ : ಭೂತತ್ವ ಹೆಚ್ಚಾಗಿರುವ ಯಂತ್ರಗಳು*

೨. *ಆಪ್ಯ : ಜಲತತ್ವ ಹೆಚ್ಚಾಗಿರುವ ಯಂತ್ರಗಳು*

೩. *ಅನಲ : ಅಗ್ನಿತತ್ವ ಹೆಚ್ಚಾಗಿರುವ ಯಂತ್ರಗಳು*

೪. *ಅನಿಲ : ಗಾಳಿತತ್ವ ಹೆಚ್ಚಾಗಿರುವ ಯಂತ್ರಗಳು*

೫. *ಆಕಾಶ : ಆಕಾಶತತ್ವ ಹೆಚ್ಚಾಗಿರುವ ಯಂತ್ರಗಳು*

ಈ ಯಂತ್ರಗಳಲ್ಲಿ ಮಾಧ್ಯಮಿಕ ಬೀಜಗಳು ಇರುತ್ತವೆ? ಪಾರ್ಥಿವ ಯಂತ್ರಗಳಲ್ಲಿರುವ ಮಾಧ್ಯಮಿಕ ಬೀಜಗಳು ಇವು (ಅ) ಸತು, ಕಬ್ಬಿಣ, ತಾಮ್ರ, ಬೆಳ್ಳಿ ಇತ್ಯಾದಿ. ಇತರ ವಸ್ತುಗಳು (ಆ) ಮರ, ಚರ್ಮ ಮತ್ತು ವಸ್ತ್ರ (ಇ) ಭಾಗಗಳು ಮತ್ತು ನಿಯಮಗಳು : ಚಕ್ರಗಳು, ಭ್ರಮಣ, ಜೋತುಬಿದ್ದಿರುವ, ನೇತಾಡುವ ಟೋಪಿಗಳು, ಸರಳುಗಳು, ಕಂಬಿಗಳು ಉಪಕರಣಗಳು (ಈ) ಕೆಲಸ : ಅಳತೆ, ಕತ್ತರಿಸುವಿಕೆ ಮುಂತಾದವು. ಇವೆಲ್ಲಾ ಪಾರ್ಥಿವ ಯಂತ್ರಗಳಲ್ಲಿ ಇರುತ್ತವೆ. ಈ ಯಂತ್ರಗಳಲ್ಲಿ ಇತರ ಬೀಜಗಳನ್ನು ಬಳಸುವುದರಿಂದ ಅವುಗಳಲ್ಲಿ ಕಾಣಿಸುವ ಬದಲಾವಣೆಗಳು ಹೀಗಿರುತ್ತವೆ:

೧. ಅಗ್ನಿ ಬೀಜವನ್ನು ಸೇರಿಸುವುದು : ಎಂದರೆ ಪಾರ್ಥಿವ ಯಂತ್ರಕ್ಕೆ ತಾಪ ಮತ್ತು ಉಷ್ಣತೆಯನ್ನು ಸೇರಿಸುವುದು. ತಾಪ ಎಂಬುದು ಉತ್ತೇಜನವೂ ಆಗಬಹುದು; ೨. ಜಲಬೀಜವನ್ನು ಸೇರಿಸುವುದು : ಎಂದರೆ ನೀರನ್ನು ಸುರಿಯುವುದು ತುಂಬುವುದು, ಬೆರೆಸುವುದು, ಸೇರಿಸುವುದು ಮತ್ತು ನೀರಿನ ವಲಯವನ್ನು ರೂಪಿಸುವುದು ಇದರ ಕೆಲಸ (ಧಾರಾ ಚ ಜಲ ಭಾರಶ್ಚ ಪಯಸೋ ಭ್ರಮಣಂ ತಥಾ॥[೧೦] ೩. ಆಕಾಶ ಬೀಜವನ್ನು ಸೇರಿಸುವುದು : ಎಂದರೆ ಎತ್ತರವಾಗಿರುವಿಕೆ (ಉಚ್ಛ್ರಾಯಾ, ಬೃಹತ್ತಾಗಿರುವುದು (ಅಧಿಕ್ಯ), ಎತ್ತರಕ್ಕೆ ಚಲಿಸುವಿಕೆ (ಊರ್ಧ್ವಗಾಮಿತ್ವ), ಸಾಮೀಪ್ಯ ಈ ಲಕ್ಷಣಗಳನ್ನು ಸೇರಿಸುವುದು ೪. ಗಾಳಿ ಬೀಜವನ್ನು ಸೇರಿಸುವುದು : ಎಂದರೆ ತೀದಿ, ಬೀಸಣಿಗೆ (ದೃತ್ಯಾ ವಿಜಾನ, ಗರ್ಜಣ) ಇತ್ಯಾದಿಗಳಿಂದ ಗಾಳಿಯನ್ನು ಪಾರ್ಥಿವ ಯಂತ್ರಗಳಲ್ಲಿ ರೂಪಿಸುವುದು.

ಇದೇ ರೀತಿಯಾಗಿ ಜಲಯಂತ್ರ, ಆಗ್ನೇಯಯಂತ್ರ ಮತ್ತು ವಾಯುಯಂತ್ರಗಳ ಮಾಧ್ಯಮಿಕ ಬೀಜಗಳ ಬಗ್ಗೆಯೂ ವಿವರವಾಗಿ ಹೇಳಲಾಗಿದೆ.. ಈ ಎಲ್ಲಾ ಯಂತ್ರಗಳಿಗೂ ಒಂದು ರೂಪವು ಮುಖ್ಯವಾದುದರಿಂದ ಪೃಥ್ವಿತತ್ವವು ಬಹು ಮುಖ್ಯವಾದ ಅಂಶವಾಗಿರುತ್ತದೆ.

ಭೌತಶಾಸ್ತ್ರದ ಬಹುಮುಖ್ಯವಾದ ತತ್ವವೊಂದನ್ನು ಸಮರಾಂಗಣ ಸೂತ್ರಧಾರನು ಇಲ್ಲಿ ಹೇಳುತ್ತಾನೆ. ಭೂಮಿಯು ನಿಷ್ಕ್ರಿಯವಾದದ್ದು. ಇದಕ್ಕೆ ರೂಪವಿದೆ. ಕ್ರಿಯೆಯು ಇನ್ನು ಉಳಿದಿರುವ ಮೂರುಬೀಜಗಳಿಂದ ಉಂಟಾಗುತ್ತದೆ. ಆದ್ದರಿಂದ ಭೂಮಿ ಮತ್ತು ಇತರ ಬೀಜಗಳ ಮಧ್ಯೆ ಇರುವ ಸಂಬಂಧವು ಜನ್ಯ-ಜನಕ ಭಾವದ್ದು. ಆದ್ದರಿಂದ ಫಲವನ್ನು (ಸಾಧ್ಯವನ್ನು) ಆಶಿಸುವ ಯಾವುದೇ ಯಂತ್ರದ ಮೂಲಬೀಜವು ಆಕಾಶವಾಗಿದ್ದು, ಅದರ ಅಸ್ತಿತ್ವಕ್ಕಾಗಿ ಪೃಥಿವಿ ಬೀಜವನ್ನು ಮಧ್ಯಮ ಬೀಜವನ್ನಾಗಿ ಪಡೆದುಕೊಂಡು ರೂಪಧಾರಣೆಯನ್ನು ಮಾಡಿಕೊಳ್ಳಬೇಕಾದುದು ಅನಿವಾರ್ಯ.[೧೨]

ಯಂತ್ರದ ಗುಣ

೧. *ಯಥಾವದ್ ಬೀಜ ಸಂಯೋಗ : ಸೂಕ್ತ ಪ್ರಮಾಣದಲ್ಲಿ ಮೂಲವಸ್ತುಗಳ (ಬೀಜಗಳ) ಮಿಶ್ರಣ*

೨. *ಸೌಶ್ಲಿಷ್ಟ್ಯ : ಸುಸಂಬಂಧಬದ್ಧವಾದ ನಿರ್ಮಾಣ*

೩. *ಶ್ಲಕ್ಷ್ಣತಾ : ನೋಡಲು ನಯ ಮತ್ತು ನಾಜೂಕಾಗಿ ಕಾಣಿಸುವಿಕೆ*

೪. *ಅಲಕ್ಷ್ಯತಾ : ಕಣ್ಣಿಗೆ ಮರೆಯಾಗಿರುವಿಕೆ*

೫. *ನಿರ್ವಹಣೆ : ಕಾರ್ಯ ನಿರ್ವಹಣೆಯಲ್ಲಿ ದಕ್ಷತೆ*

೬. *ಲಘುತ್ವ : ಹುಗುರವಾಗಿರುವಿಕೆ*

೭. *ಶಬ್ದ ಹೀನತಾ : ಯಂತ್ರದಿಂದ ಶಬ್ದವನ್ನು ನಿರೀಕ್ಷಿಸದೆ ಇರುವಾಗ ಸದ್ದು ಮಾಡದೆ ಇರುವುದು, ಶಬ್ದದ ಆವಶ್ಯಕತೆ ಇದ್ದಾಗ ಶಬ್ದವನ್ನು ಸೃಷ್ಟಿಸುವುದು.*

೮. *ಅಶೈಥಿಲ್ಯ : ಸಡಿಲವಾಗಿಲ್ಲದೆ ಇರುವುದು.*

೯. *ಅಗಾಢತೆ : ಬಹುವಾಗಿ ಬಿಗಿದಿಕೊಂಡಿರುವುದಲ್ಲದೆ ಇರುವುದು.*

೧೦. ವಹನೀಷು....ಸ್ವದ್ಗತಿ	: ಚಲನೆಯಲ್ಲಿ ತೊಡಕಲ್ಲದೆ ಸರಾಗವಾಗಿರುವಿಕೆ
೧೧. ಯಥಾಭೀಷ್ಟಾರ್ಥ ಕಾರಿತ್ವಂ:	ನಿರೀಕ್ಷಿತ ಆಸೆಯನ್ನು ಪೂರೈಸುವಿಕೆ.
೧೨. ಲಯತಾಲಾನು ಗಾಮಿತಾ	: ಚಲನೆಯಲ್ಲಿ ಒಂದು ಲಯವನ್ನು ಅಳವಡಿಸಿ ಗೊಡಿರುವಿಕೆ
೧೩. ಇಷ್ಟಕಾಲೇರ್ಥದರ್ಶಿತ್ವಂ	: ಬಯಸಿದಾಗ ತನ್ನ ಕೆಲಸವನ್ನು ಪ್ರಾರಂಭಿಸುವುದು.
೧೪. ಪುನಃ ಸಮ್ಯಕ್ತ್ವ ಸಂವೃತಿ	: ನಿಲ್ಲಿಸಲು ಬಯಸಿದಾಗ ನಿಲ್ಲಿಸುವಿಕೆ.
೧೫. ಅನುಲ್ಬಣತ್ತಂ	: ಸೌಂದರ್ಯ, ನೋಡಲು ಭಯ ಅಥವಾ ಜುಗುಪ್ಸೆ ಮೂಡಿಸದ ರೂಪ.
೧೬. ತಾದ್ರೂಪ್ಯಂ	: ಯಂತ್ರವು ಯಾವುದಾದರೂ ಪ್ರಾಣಿ-ಪಕ್ಷಿ ಅಥವಾ ಜೀದ್ರೂಯನ್ನು ಪ್ರತಿನಿಧಿಸುವಾಗ ಅದರ ಹೊರ ರೂಪದಲ್ಲಿ ಸಾಮ್ಯವಿರಬೇಕು.
೧೭. ದಾರ್ಢ್ಯ	: ಬಲವಾಗಿರುವ ಸ್ಥಿರವಾದ ರಚನೆ
೧೮. ಮಸೃಣತಾ	: ಮೃದುತ್ವ
೧೯. ಚಿರಕಾಲ ಸಹತ್ವಂ	: ದೀರ್ಘಕಾಲ ಬಾಳಿಕೆ ಬರುವ ಗುಣ.

ಯಂತ್ರವೆಂದರೆ ಅಪ್ರಾಕೃತಿಕ (ಎಂದರೆ ನೈಸರ್ಗಿಕವಾಗಿ ಸಿದ್ಧವಾಗಿ ದೊರೆಯದೆ ಮನುಷ್ಯನಾದವನು ಪ್ರಕೃತಿಯು ಮೂಲಸಂಪತ್ತನ್ನು ಬಳಸಿ ತಯಾರಿಸಿರುವ ವಸ್ತು ವಿಶೇಷ) ಮತ್ತು ಅಸಾಮಾನ್ಯ ಎಂಬುದನ್ನು ಈಗಾಗಲೇ ಹೇಳಲಾಗಿದೆ. ಮೇಲೆ ಯಂತ್ರದ ಒಳ್ಳೆಯ ಗುಣಗಳಲ್ಲಿ ಕಾಣಿಸದೆ ಇರುವುದೂ ಒಂದು ಎಂಬುದನ್ನೂ ಗಮನಿಸಿ ಯಂತ್ರವು ಕಾಣಿಸಿದರೆ ಹಲವು ಸಂದರ್ಭಗಳಲ್ಲಿ ಅದರ ಮೌಲ್ಯ ಕಳೆದು ಹೋಗುವುದುಂಟು. ಈ ಬಗೆಯ ಯಂತ್ರಗಳಲ್ಲಿ ಗಜಯಂತ್ರ, ಗಾಳಿಯಲ್ಲಿ ಹಾರಾಡ ಬಲ್ಲ ಪಕ್ಷಿಯಂತ್ರ, ದ್ವಾರಪಾಲಕ ಯಂತ್ರ. ಹೋರಾಡಬಲ್ಲ ಯೋಧರ ಯಂತ್ರ ಇತ್ಯಾದಿ. ದ್ವಾರಪಾಲಕ ಯಂತ್ರ ಮರದಲ್ಲಿ ತಯಾರಾಗಿದ್ದರೂ ಅದು ನಿಜವಾದ ದ್ವಾರಪಾಲಕನಂತೆ ಕಾಣಿಸುವುದೇ ಆ ಯಂತ್ರದ 'ಕಾಣಿಸದೆ ಇರುವ' ಗುಣ (ಅಲಕ್ಷ್ಯತಾ). ಆದ್ದರಿಂದಲೇ ತದ್ರೂಪವನ್ನು ಗುಣವಾಗಿ ಹೇಳಲಾಗಿರುವುದು.

ಉಪರೋಕ್ತ ಗುಣ ಸಂಬಂಧವನ್ನು ಪರಸ್ಪರ ಹೊಂದಿವೆ ಎಂಬುದನ್ನು ನಾವು ಗ್ರಹಿಸಲೇಬೇಕು.

ಯಂತ್ರದ ಕೆಲಸ

೧. ಯಾವುದೋ ಕೆಲಸವನ್ನು ಮಾಡುವ ಉದ್ದೇಶದಿಂದಲೇ ಯಂತ್ರವನ್ನು ನಿರ್ಮಿಸಲಾಗಿರುತ್ತದೆ. ಸಾಧಾರಣವಾಗಿ ಈ ಕೆಲಸಗಳನ್ನು ಎಲ್ಲಾ ದಿಕ್ಕುಗಳಿಗೂ ಅನ್ವಯಿಸಲಾಗುತ್ತದೆ. (ಅ) ಗಮನ (ಚಲನೆ) (ಆ) ವೇಗ (ಇ) ಬೀಳುವಿಕೆ ಅಥವ ತೆವಳುವಿಕೆ; ೨. ಕೆಲವು ಯಂತ್ರಗಳನ್ನು ಕಾಲ ಗಣನೆಮಾಡಲು ಬಳಸಲಾಗುತ್ತವೆ. ೩. ಕೆಲವು ಯಂತ್ರಗಳನ್ನು ಶಬ್ದವನ್ನು ಸೃಷ್ಟಿಸಲು ಬಳಸಲಾಗುತ್ತವೆ. ಇವುಗಳಲ್ಲಿ ಅನೇಕ ಬಗೆಗಳೆಂದು ಹೇಳಿ ಈ ಶಬ್ದವು ಆಹ್ಲಾದಕರವನ್ನುಂಟುಮಾಡುವುದರಿಂದ ಪ್ರಾರಂಭಿಸಿ ಗುಂಡಿಗೆಯನ್ನು ನಡುಗಿಸುವ ತನಕ ವ್ಯಾಪಕವಾಗಿರುತ್ತದೆ ಎಂದು ಹೇಳಿದೆ. ಎಂದರೆ ಸಂಗೀತದ ವಾದ್ಯಗಳು ಒಂದು ಗುಂಪಾದರೆ (ವಾದಿತ್ರ) ವಿಚಿತ್ರವೂ ಭಯಂಕರವೂ ಆದ ಸದ್ದನ್ನು ಸೃಷ್ಟಿಸುವ ಯಂತ್ರಗಳು ಇನ್ನೊಂದು ಬಗೆಯವು ಎಂದು ನಾವು ಗ್ರಹಿಸಬಹುದು; ೪. ನೀರಿನ ಮಟ್ಟಕ್ಕಿಂತಲೂ ಮೇಲೆ ಇರುವ ಉಚ್ಛ್ರಾಯ ಎನ್ನುವ ಯಂತ್ರಗಳು; ೫. ರೂಪ ಮತ್ತು ಸ್ಪರ್ಶ ಸಿದ್ಧಿಯನ್ನು ಕೊಡುವ ಯಂತ್ರಗಳು. ರೂಪ ವಿಧದಲ್ಲಿ ಅಸಂಖ್ಯಾತ ಯಂತ್ರಗಳೆಂದು ಹೇಳಿ ದೇವ-ಅಸುರರ ಯುದ್ಧ, ಕ್ಷೀರಸಾಗರ ಮಥನ, ಹಿರಣ್ಯಾಕ್ಷನ ವಧೆ ನರಸಿಂಹನಿಂದ ಆನೆಗಳ ಮಧ್ಯೆ ಕಾಳಗ, ಕೃತಕ ಸೈನ್ಯ, ಡೋಲಾಕೇಳಿಗಳೆಂಬ ಉಯ್ಯಾಲೆಯ ಆಟಗಳು ಮುಂತಾದು ವೆಂದು ಹೇಳಲಾಗಿದೆ. ಸ್ಪರ್ಶಕ್ಕೆ ರತಿ ಗೃಹಗಳನ್ನು ಉಲ್ಲೇಖಿಸಲಾಗಿದೆ.

ಬಹುವಿಶೇಷವಾದ ಮರದ ಹಾರುಹಕ್ಕಿಗಳು, ವಿಮಾನಗಳು, ಯಂತ್ರಮಾನವ ಚಾರ ಇತ್ಯಾದಿಗಳನ್ನು ಇಲ್ಲಿ ವಿವರಿಸಲಾಗಿದೆ.

ಯಂತ್ರಗಳಲ್ಲಿ ವಿಧಗಳು

ಸಂಸ್ಕೃತ ಸಾಹಿತ್ಯದಲ್ಲಿ ಯಂತ್ರ ಎಂಬ ಪದವು ಬಹು ಪ್ರಾಚೀನವಾದುದು. ಇದನ್ನು ತೀರಾ ಸಾಧಾರಣವಾಗಿ ಬಳಸಿರುವುದು ಕಂಡು ಬರುತ್ತದೆ. ಈ ಬಗ್ಗೆ ಅನೇಕ ವಿವರಗಳನ್ನು ಹೇಳಬಹುದಾದರೂ ಅದೇ ಪ್ರತ್ಯೇಕ ಪ್ರಬಂಧಕ್ಕಾಗುವ ವಿಷಯ.[೧೫] ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಯುದ್ಧಯಂತ್ರಗಳ ಬಗ್ಗೆ ಒಂದು ವಿಶೇಷವಾದ ಅಧ್ಯಾಯವೇ ಇದೆ.[೧೬] ಯಂತ್ರಗಳನ್ನು ಆತನು ಸ್ಥಿರ ಮತ್ತು ಚಲ ಎಂದು ಎರಡು ವರ್ಗಗಳಾಗಿ ವಿಂಗಡಿಸಿದ್ದಾನೆ. ಅನೇಕ ಯಂತ್ರಗಳ ಹೆಸರುಗಳು ಹಾಗು ಅವುಗಳ ಕಾರ್ಯಶಕ್ತಿಯನ್ನು ವಿವರಿಸಿದ್ದಾನೆ. ಇಷ್ಟೇ ಪ್ರಧಾನವಾಗಿ ಪ್ರಾಚೀನ ಭಾರತದ ಜೀವನವನ್ನು ವಿವರಿಸಿರುವ ಇನ್ನೊಂದು ಗ್ರಂಥ ವಾತ್ಸಾಯನನ ಕಾಮಸೂತ್ರ. ಇದರಲ್ಲಿ ವಿವರಿಸಿರುವ ಅರವತ್ನಾಲ್ಕು ವಿದ್ಯೆಗಳಲ್ಲಿ **ಯಂತ್ರಮಾತೃಕಾ** ಎಂಬುದನ್ನು ಒಂದು ವಿದ್ಯೆಯಾಗಿ

ಉಲ್ಲೇಖಿಸಲಾಗಿದೆ. ಜಯಮಂಗಲಾ ಟೀಕೆಯಲ್ಲಿ ಇದನ್ನು ಬಗೆ ಬಗೆಯ ಯಂತ್ರಗಳನ್ನು ತಯಾರಿಸುವ ವಿಜ್ಞಾನ ಎಂದು ಹೇಳಿ ಈ ಸಂಬಂಧದಲ್ಲಿ ವಿಶ್ವಕರ್ಮಪ್ರೋಕ್ತವಾದ ಶಾಸ್ತ್ರವನ್ನು ಉಲ್ಲೇಖಿಸಲಾಗಿದೆ. ಇದರ ಪ್ರಕಾರ ಯಂತ್ರಗಳಲ್ಲಿ ಸಜೀವ ಮತ್ತು ನಿರ್ಜೀವ ಎಂಬ ಎರಡು ಬಗೆ ಇರುವುದನ್ನು ಹೇಳಲಾಗಿದೆ. ಬಹುಶಃ ಸಜೀವ ಎಂದರೆ ಆ ಯಂತ್ರವನ್ನು ನಡೆಸಲು ಮನುಷ್ಯನ ಅವಶ್ಯಕತೆ ಇರಬಹುದು. ನಿರ್ಜೀವ ಎಂದರೆ ತನಗೆ ತಾನೇ ಮನುಷ್ಯನ ನೆರವಿಲ್ಲದೆ ನಡೆಯುವಂತಹುದು. ಈ ಯಂತ್ರಗಳನ್ನು ಮುಖ್ಯವಾಗಿ ಮೂರು ಉದ್ದೇಶ್ಯ (ಕೆಲಸ) ಗಳಿಗಾಗಿ ಬಳಸಲಾಗುತ್ತಿತ್ತು- *ಯಾನ, ಉದಕ* ಮತ್ತು *ಸಂಗ್ರಾಮ.*[೧೭] ಈ ಯಂತ್ರಗಳ ನಿರ್ಮಾಣವನ್ನು ವಿವರಿಸುವ ವಿಶ್ವಕರ್ಮಕೃತವಾದ ಶಾಸ್ತ್ರವೊಂದು ಆ ಕಾಲದಲ್ಲಿ ಪ್ರಚಲಿತದಲ್ಲಿತ್ತು ಎಂಬುದನ್ನು ಟೀಕಾಕಾರನು ಸ್ಪಷ್ಟಪಡಿಸಿದ್ದಾನೆ.

ಸಮರಾಂಗಣ ಸೂತ್ರಧಾರನು ಈ ರೀತಿಯ ವಿಭಜನೆಯನ್ನು ಹೇಳಿಲ್ಲ. ಆದರೆ ಆತನು ವಿವರಿಸಿರುವ ಯಂತ್ರಗಳು ಈ ಮೂರು ವಿಭಾಗಗಳಿಗೆ ಹಂಚಿದ ನಂತರವೂ ಇನ್ನು ಎರಡು ವಿಭಾಗಗಳನ್ನು ರೂಪಿಸುವ ಅವಶ್ಯಕತೆಯನ್ನು ಮಂಡಿಸಿವೆ. *ವಿನೋದ* ಮತ್ತು *ಗೃಹೋಪಯೋಗಿ.* ಸಮರಾಂಗಣ ಸೂತ್ರಧಾರನು ಹೇಳಿರುವ ವಿವರಣೆಗಳ ಆಧಾರದಿಂದ ನಾವು ಯಂತ್ರಗಳನ್ನು ಹೀಗೆ ಪಟ್ಟಿಮಾಡಬಹುದು.

೧. ***ವಿನೋದಕ್ಕಾಗಿ ಯಂತ್ರಗಳು***

ಈ ಬಗೆಯ ಯಂತ್ರಗಳು ಸಂಖ್ಯೆಯಲ್ಲಿ ಬಹುವಾಗಿದ್ದು ಸಮರಾಂಗಣನು ಹೆಚ್ಚು ಪ್ರಮುಖವಾಗಿ ಇವನ್ನು ವಿವರಿಸಿದ್ದಾನೆ ಎನಿಸುತ್ತದೆ. ಇವುಗಳಲ್ಲಿ ಅನೇಕ ಯಂತ್ರಗಳು ಅರಮನೆಗಳಲ್ಲಿ ಬಳಸುತ್ತಿದ್ದರು.

I. *ಭೂಮಿಕಾ ಶಯ್ಯಾ ಪ್ರಸರ್ಪಣ* : ಕಟ್ಟಡವು ಐದು ಅಂತಸ್ತುಗಳದಾಗಿರುತ್ತದೆ. ಮಂಚವು ಪ್ರಾರಂಭಕ್ಕೆ ನೆಲ ಅಂತಸ್ತಿನಲ್ಲಿದ್ದು ಪ್ರತಿ ಪ್ರಹರೆಯ ಕಾಲಕ್ಕೂ ಒಂದೊಂದೇ ಅಂತಸ್ತು ತಾನೇ ಮೇಲೆ ಹೋಗುತ್ತಾ ಇರುತ್ತದೆ. ಒಂದೇ ಕ್ರಮವನ್ನು ಅನುಸರಿಸುವ ಅವಶ್ಯಕತೆ ಇಲ್ಲ. ಪ್ರಾರಂಭವನ್ನು ನಿತ್ಯವೂ ಬದಲಿಸಬಹುದು. ರಾಜಕುಟುಂಬದವರು ನಿದ್ರಾಸಮಯದಲ್ಲಿ ತಮಗೆ ಆಪತ್ತು ಒದಗಬಹುದು ಎಂಬ ಸಂಶಯ ಇರುವಾಗ ಇದನ್ನು ಬಳಸಬಹುದು. ಕೇವಲ ಮನೋರಂಜನೆಗೂ ಈ ಶಯ್ಯೆ ಬಳಸಬಹುದು.

Ii. *ಕ್ಷೀರಾಬ್ಧಿ ಶಯ್ಯ ಪ್ರಸರ್ಪಣ* : ಹಾಸಿಗೆಯು ನೀರಿನಲ್ಲಿ ತೇಲುತ್ತಾ ಹಾವಿನಂತೆ ಉಸಿರಾಡುತ್ತಾ ಏಳು ಬೀಳು ಗಳನ್ನುಂಟು ಮಾಡುತ್ತದೆ.

Iii. *ಪುತ್ರಿಕಾ ನಾಡೀಪ್ರಬೋಧನ* : ಇದೊಂದು ಬಗೆಯ ಕಾಲಗಣನಾಯಂತ್ರ. ಅಗಲವಾಗಿರುವ ಪಾತ್ರೆಯ ರೀತಿಯ ಯಂತ್ರ. ಇದರ ವೃತ್ತದ ಹೊರ ವಲಯದಲ್ಲಿ ಸುಮಾರು ಮುವ್ವತ್ತು ದಂತದ ಗೊಂಬೆಗಳು ಮಲಗಿ ಇರುತ್ತವೆ. ಕೇಂದ್ರದಲ್ಲಿ ಹೆಣ್ಣಿನ ಮೂರ್ತಿ ಇರುತ್ತದೆ. ಪಾತ್ರೆಯ ಕೇಂದ್ರದ ಅಕ್ಷದ ಮೇಲೆ ಸುತ್ತುತ್ತಾ ಇರುತ್ತದೆ. ಪ್ರತಿಯೊಂದು ನಾಡಿಕಾಕ್ಕೂ ಆ ಹೆಣ್ಣು ಒಂದೊಂದು ದಂತದ ಗೊಂಬೆಯನ್ನು ಎಚ್ಚರಿಸಿ ಕೂರಿಸುತ್ತಾ ಇರುತ್ತಾಳೆ. ಇದರಿಂದ ರಾತ್ರಿಯಲ್ಲಿ ಎಷ್ಟು ನಾಡಿಕೆಗಳು ಕಳೆದಿವೆ ಎಂಬುದು ಸುಲಭವಾಗಿ ಲೆಕ್ಕಿಸಬಹುದು.

iv. ಗಡಿಯಾರದಂತಹ ಇನ್ನೊಂದು ಯಂತ್ರದ ವಿವರಣೆ ಇದೆ. ರಥದಲ್ಲಿ ಕುಳಿತಿರುವ ವ್ಯಕ್ತಿಯೊಬ್ಬ ಇರುತ್ತಾನೆ. ರಥಕ್ಕೆ ಕುದುರೆ, ಆನೆ ಅಥವಾ ಬೇರೆಯಾವುದೋ ಪ್ರಾಣಿಯನ್ನು ಹೂಡಿರುತ್ತಾರೆ. (ಈ ಪ್ರಾಣಿಯೂ ಗೊಂಬೆಯೇ). ರಥವು ವಸ್ತುವಿನ ಸುತ್ತಲೂ ನಿಗದಿಯಾಗಿರುವ ದೂರವನ್ನು ಗಮನಿಸಿದ ನಂತರ ಕೊನೆಯಲ್ಲಿ ಗಂಟೆಯನ್ನು ಬಡಿಯುತ್ತದೆ. ಸಾಧಾರಣವಾಗಿ ಈ ದೂರ ಗಮನಿಸಲು ಒಂದು ನಾಡಿಕೆ ಬೇಕಾಗುತ್ತದೆ. ಹೀಗೆ ಕಾಲವನ್ನು ಸೂಚಿಸುವ ಯಂತ್ರ ಇದು.

v. *ಗೋಳ ಭ್ರಮಣ ಯಂತ್ರ* : ಖಗೋಳ ನಿರೀಕ್ಷಣೆಗಳಿಗೆ ಬಳಸುವ ಯಂತ್ರ. ಇದರಲ್ಲಿ ಹಗಲು ರಾತ್ರಿಗಳನ್ನು ಸೂಚಿಸುವ ಸೂಚಿಗಳು ಇದ್ದು ಖಗೋಳ ಕಾಯಗಳಾದ ಸೂರ್ಯ, ಚಂದ್ರ ಮುಂತಾದವರ ಚಲನೆಯನ್ನು ಸೂಚಿಸುತ್ತವೆ.

vi ಸಂಗೀತದ ತಾಳಕ್ಕೆ ಅನ್ವಯ ನಾಟ್ಯಮಾಡುತ್ತಾ ಪರಿಭ್ರಮಿಸುತ್ತಿರುವ ಪುತ್ಥಳಿಯು ದೀಪಕ್ಕೆ ನಿಗದಿತ ರೂಪದಲ್ಲಿ ಎಣ್ಣೆಯನ್ನು ಸುರಿಯುತ್ತಾ ಇರುತ್ತದೆ.

vii. ಅಪಾರ ನೀರನ್ನು ಒಮ್ಮೆಲೆಗೆ ಕುಡಿಯುವ ಸಾಮರ್ಥ್ಯ ಉಳ್ಳ ಗಜಯಂತ್ರ

viii. ಸಂಗೀತದ ತಾಳಕ್ಕೆ ಸರಿಯಾಗಿ ನರ್ತಿಸುವ ಗಿಣಿಗಳ ಗೊಂಬೆಗಳ ಗುಂಪು. ಆನೆಗಳು, ಕುದುರೆಗಳು ಅಥವಾ ಇತರ ಗೊಂಬೆಗಳು ಮುಂತಾದವನ್ನು ಇದೇ ರೀತಿಯಾಗಿ ಕುಣಿಸುವುದು ಸಾಧ್ಯ

ix. ಸುಮಧುರವಾದ ಶಬ್ದವನ್ನು ಮಾಡುವಂತಹ ಮರದ ಹಕ್ಕಿಯ ಯಂತ್ರ

x. ಪಟಹ, ಮುರಜ ಕೊಳಲು, ಶಂಖ, ವೀಣೆ, ಕಹಳೆ, ಡಮರುಗ ಮುಂತಾದ ಶಬ್ದವನ್ನುಂಟುಮಾಡುವ ಯಂತ್ರಗಳು.

ಕೊನೆಯ ಎರಡು ಬಗೆಯ ಯಂತ್ರಗಳು ವಿಶೇಷ ಅಧ್ಯಯನಕ್ಕೆ ಯೋಗ್ಯವಾದುವು. ಮರದ ಹಕ್ಕಿಯು ಮಧುರವಾದ ಇಂಚರವನ್ನು

ಸೃಷ್ಟಿಸುವಂತೆ ನಿರ್ಮಿಸಲಾಗಿರುತ್ತದೆ. ಹಕ್ಕಿಯ ದೇಹದ ಟೊಳ್ಳಿನಲ್ಲಿ ಒಂದು ಅಂಗುಲ ಉದ್ದ ಮತ್ತು ಕಾಲು ಅಂಗುಲ ಎತ್ತರವಿರುವ ತಾಮ್ರದಲ್ಲಿ ತಯಾರಿಸಿರುವ ಉಪಕರಣವೊಂದನ್ನು ಅಳವಡಿಸಿರುತ್ತಾರೆ. ಚಿಕ್ಕದಾಗಿರುವ ಕೊಳವೆಯ ಆಕಾರದ ಎರಡು ಅರ್ಧಗಳ ಸೇರ್ಪಡೆಯಿಂದ ರೂಪಿತವಾಗಿದ್ದು ಮಧ್ಯದಲ್ಲಿ ಒಂದು ರಂಧ್ರವಿರುತ್ತದೆ. ಹಕ್ಕಿಯು ಹಾರುತ್ತಿರುವಾಗ ಗಾಳಿ ಅದರ ಮೂಲಕ ಹೊರಕ್ಕೆ ಹೋಗುತ್ತದೆ.

ಪಟಹ ಮತ್ತು ಮುರಜ-ಎರಡೂ ರಾಣಿವಾಸಗಳಲ್ಲಿ ಶಯ್ಯಾಗಾರಗಳಲ್ಲಿ ಇರಿಸಿರುವ ಯಂತ್ರ ವಿಶೇಷಗಳು. ಇವು ಹಾರುವ ಹಕ್ಕಿಯಂಥವು. ಆದರೆ ಪೀಪಾಯಿಯ ಆಕಾರದ ಎರಡು ಅರ್ಧಗಳನ್ನು ಇರಿಸಿರುತ್ತಾರೆ. ಹಕ್ಕಿಯು ತೂಗಾಡಿದಾಗ ಮಧುರವಾದ ನಾದ ಹೊಮ್ಮುತ್ತದೆ. ಇದರಿಂದ ಮುನಿದಿರುವ ರಾಣಿ ಅಥವಾ ಹೆಣ್ಣಿನ ಕೋಪವು ಕಡಿಮೆಯಾಗುತ್ತದೆ.

ಪ್ರೇಮ ಕಲಾಪಗಳಲ್ಲಿ ಬಳಕೆಯಾಗುವಂತಹ ಹಲವು ಯಂತ್ರಗಳ ವಿವರಣೆಗಳೂ ಇವೆ. ಅವುಗಳ ಪ್ರಯೋಗದ ವಿವರಣೆಯು ಸ್ಫುಟವಾಗಿ ಗೊತ್ತಾಗುವುದಿಲ್ಲ. ಆದರೂ ಆ ಕಾಲದ ಅರಮನೆಯ ಬದುಕಿಗೆ ಹಿಡಿದ ಕನ್ನಡಿ ಇದೆಂದರೆ ಉತ್ಪ್ರೇಕ್ಷೆಯಾಗುವುದಿಲ್ಲ.

ಗೃಹೋಪಯೋಗಿ ಮತ್ತು ರಕ್ಷಣಾಯಂತ್ರಗಳು[೧೮]

೧. ಸೇವಕರಾಗಿ ಕೆಲಸಮಾಡುವ ಗಂಡಾಳು ಯಂತ್ರಗಳು ೨. ಸೇವಕಿಯರಾಗಿ ಕೆಲಸಮಾಡುವ ಹೆಣ್ಣಾಳು ಯಂತ್ರಗಳು ೩. ದ್ವಾರಪಾಲಕ ಯಂತ್ರಗಳು; ಇವರು ಕತ್ತಿ, ಸಲಾಕಿ, ಈಟಿ, ಗದೆ ಮುಂತಾದ ಆಯುಧಗಳನ್ನು ಹಿಡಿದಿದ್ದು ರಾತ್ರಿಗಳಲ್ಲಿ ಪ್ರವೇಶಿಸಬಹುದಾದ ಕಳ್ಳರು ಮತ್ತು ಇತರ ಶತ್ರುಗಳನ್ನು ಕಂಡ ತಕ್ಷಣವೇ ಕೊಲ್ಲುತ್ತಿದ್ದರು ೪. ಸೈನಿಕ ಯಂತ್ರಗಳು; ಅನಾವಶ್ಯಕ ವ್ಯಕ್ತಿಗಳನ್ನು ಅಪಾಯಕಾರಿ ವ್ಯಕ್ತಿಗಳನ್ನು ಒಳಕ್ಕೆ ಬರದಂತೆ ತಡೆಯುತ್ತಿದ್ದವು ೫. ಮದವೇರಿದ ಆನೆಗಳನ್ನು ಹಿಮ್ಮೆಟ್ಟಿಸಲು ಸಿಂಹದಂತೆ ಘರ್ಜಿಸುವ ಯಂತ್ರ; ಈ ವಿಭಾಗದ ಯಂತ್ರಗಳಲ್ಲಿ ಹೆಣ್ಣು-ಗಂಡು ಆಳುಗಳ ಪುತ್ಥಳಿಗಳು ಅನೇಕ ಬಗೆಯ ಸ್ವಯಂ ಚಾಲಿತ ಸೇವೆಗಳನ್ನು ಮಾಡಲು ಸಾಧ್ಯವಾಗುವಂತೆ ರೂಪಿಸಲಾಗಿರುತ್ತವೆ. ಅವುಗಳ ದೇಹದ ಪ್ರತಿಭಾಗವನ್ನು ಪ್ರತ್ಯೇಕವಾಗಿ ಮಾಡಿ ರಂಧ್ರ ಮತ್ತು ಸಲಾಕಿಗಳ ನೆರವಿನಿಂದ ಜೋಡಿಸಲಾಗಿರುತ್ತದೆ. ಇದರಿಂದ ಪಾದ, ಮೊಣಕಾಲು, ತೊಡೆ, ಬೆರಳುಗಳು ಮುಂಗೈ, ಮಣಿ ಕಟ್ಟು, ಮೊಣಕೈ; ಭುಜ ಕಣ್ಣು, ಕೊರಳು ಮುಂತಾದುವನ್ನು ಪ್ರತ್ಯೇಕವಾಗಿ ಮಾಡಿ ಅದನ್ನು ಚರ್ಮದಿಂದ ಮುಚ್ಚಿ ಪುತ್ತಳಿಯು ನಿಜವಾದ ಮನುಷ್ಯನಂತೆ ಭಾಸವಾಗುವ ರೀತಿಯಲ್ಲಿ ಸಿದ್ಧಪಡಿಸಲಾಗುತ್ತಿತ್ತು. ಈ ಅಂಗ-ಪ್ರತ್ಯಂಗಗಳ ಚಲನೆಯು ರಂಧ್ರಗಳು, ಸರಳುಗಳು, ಸೂತ್ರಗಳು ಮುಂತಾದುವುಗಳಿಂದ ನಿಯಂತ್ರಣ ಗೊಳ್ಳುತ್ತಿತ್ತು. ಈ ಪುತ್ಥಳಿಗಳು ಮಾಡುತ್ತಿದ್ದ ಕೆಲವು ಕೆಲಸಗಳು -ಕನ್ನಡಿಯೊಳಗೆ ನೋಡಿಕೊಳ್ಳುವುದು, ಕೊಳಲು ನುಡಿಸುವುದು. ತಾಂಬೂಲ ಕೊಡಲು ಕೈ ಚಾಚುವುದು, ಪನ್ನೀರನ್ನು ಸಿಂಪಡಿಸುವುದು, ನಮಸ್ಕರಿಸುವುದು.

ರಕ್ಷಕ ಭಟರು ನಿಗದಿತ ಸ್ಥಾನವನ್ನು ದಾಟಿ ಬಂದುದನ್ನು ತಮ್ಮ ಆಯುಧದಿಂದ ಬಲವಾಗಿ ಬಡಿದುಕೊಲ್ಲುತ್ತಿದ್ದರು.

ವಾರಿ ಯಂತ್ರಗಳು[೧೯]

೧. ಪಾತಯಂತ್ರ : ಕೃಷಿಯಲ್ಲಿ ಬಳಸುತ್ತಿದ್ದರು. ತೋಟಗಳಲ್ಲಿ ಗಿಡಗಳಿಗೆ ನೀರುಣಿಸುವುದು ಇದರ ಕೆಲಸ. ಇದು ಮೇಲಿನ ನೀರಿನ ಸಂಗ್ರಹದಿಂದ ಕೆಳಭಾಗಕ್ಕೆ ಹರಿಸಿ ನೀರನ್ನು ಹಂಚುತ್ತದೆ.,

೨. ಉಚ್ಛ್ರಾಯ ಸಂಪಾತ ಯಂತ್ರ : ಒಂದೇ ಹಂತದಲ್ಲಿರುವ ನೀರಿನ ಸಂಗ್ರಹಗಳಿಂದ ನೀರನ್ನು ಮೇಲಕ್ಕೆ ಏರಿಸುವುದು.

೩. ಪಾತ ಸಮೋಚ್ಛ್ರಾಯ ಯಂತ್ರ : ಮೇಲಿನಿಂದ ನೀರು ಕೆಳಕ್ಕೆ ಇಳಿಸಿ ಓರೆಯಾಗಿರುವ ಕೊಳವೆಗಳಲ್ಲಿ ನೀರು ಹರಿಸುವುದು ಬಳಸುವುದು.

೪. ಉಚ್ಛ್ರಾಯ ಯಂತ್ರ : ಭಾವಿ ಅಥವಾ ಕಾಲುವೆಯಿಂದ ನೀರನ್ನು ಮೇಲಕ್ಕೆ ಹಾಯಿಸುವುದು.

ಇವನ್ನು ವಾರಿಯಂತ್ರಗಳು ಎಂದು ಹೇಳಲಾಗಿದೆ. ಸಮರಾಂಗಣ ಸೂತ್ರಧಾರನ ರೀತ್ಯಾ ಇವುಗಳಲ್ಲಿ ಪ್ರಧಾನವಾಗಿ ಎರಡು ಬಗೆ: ಅ. ಕ್ರೀಡಾರ್ಥ ಆ. ಕಾರ್ಯ ಸಿದ್ಧ್ಯರ್ಥ. ಮೇಲೆ ಹೇಳಿರುವ ೧ ಎರಡನೆಯ ಬಗೆಯದು. ಇನ್ನು ಉಳಿದ ೨, ೩ ಮತ್ತು ೪ ಮೊದಲನೆಯ ಬಗೆಯವು. ಮೇಲಿನವೆಲ್ಲಾ ನೀರಿನ ಚಲನೆಯನ್ನು ನಿಯಂತ್ರಿಸುವುದರಿಂದ ರೂಪುಗೊಳ್ಳುತ್ತವೆ.

ವಾರಿಯಂತ್ರಗಳಲ್ಲಿ ಮುಖ್ಯವಾದ ಧಾರಾಗೃಹ ಮತ್ತು ಡೋಲಾಗೃಹ (ಉಯ್ಯಾಲೆ ಮನೆ) ಗಳನ್ನು ಸೇರಿಸಿಲ್ಲ. ಇವು ಪ್ರತ್ಯೇಕ ಅಧ್ಯಯನಕ್ಕೆ ಅರ್ಹವಾಗಿವೆ.

ಧಾರಾಗೃಹ[೨೦]

ಧಾರಾಗೃಹದಲ್ಲಿ ಐದು ಬಗೆಗಳಿವೆ: ೧. ಧಾರಾಗೃಹ ೨. ಪ್ರವರ್ಷಣ ೩. ಪ್ರನಾಳ ೪. ಜಲಮಗ್ನ ಮತ್ತು ೫ ನಂದ್ಯಾವರ್ತ

ಧಾರಾಗೃಹವು ಅರಮನೆಯ ಉಪವನದಲ್ಲಿರುತ್ತಿದ್ದವು. ಮಧ್ಯಯುಗದಲ್ಲಿ ಈ ರೀತಿಯ ನಿರ್ಮಿತಿಗಳು ಭಾರತದಲ್ಲಿ ಬಹು ಪ್ರಿಯವಾಗಿದ್ದವು. ಧಾರಾಗೃಹದ ನಿರ್ಮಾಣದ ಬಗ್ಗೆ ಸಮರಾಂಗಣ ಸೂತ್ರಕಾರನು ಬಹಳವಾದ ವಿವರಣೆಯನ್ನು ಕೊಟ್ಟಿದ್ದಾನೆ. ಹತ್ತಿರದಲ್ಲಿ ವಿಪುಲವಾದ ಜಲಸಂಗ್ರಹವಿರಬೇಕು.

ಧಾರಾಗೃಹ ನಿರ್ಮಿಸುವ ಸ್ಥಳದ ಸುತ್ತಲೂ ಬಹು ರಮ್ಯವೂ, ಚಿತ್ತಾಕರ್ಷಕವಾದ ಪರಿಸರ ಇರಬೇಕು. ಮೂರನೆಯದಾಗಿ ಇದರಲ್ಲಿ ಬಳಸಲು ನಿರ್ಮಿಸುವ ಕೊಳವೆಗಳು ಚಿಲುಮೆಗಳ ಎರಡು ಅಥವಾ ಮೂರು ಪಟ್ಟು ಹೆಚ್ಚು ಎತ್ತರಕ್ಕೆ ತಯಾರಿಸಬೇಕು. ಆಗ ಮಾತ್ರವೇ ನೀರು ನಿರೀಕ್ಷಿತ ಎತ್ತರಕ್ಕೆ ಚಿಮ್ಮುತ್ತದೆ. ನೀರನ್ನು ಸಾಗಿಸುವ ಕೊಳವೆಗಳಲ್ಲಿ ರಂಧ್ರಗಳು ಇರಬಾರದು. ಅದರ ಒಳಭಾಗವು ನಯವಾಗಿರಬೇಕು.

ಇಲ್ಲಿಯ ವಿವರಣೆಗಳನ್ನು ಗಮನಿಸಿದರೆ ಭಾರವಿ, ಮಾಘ, ಕಾಳಿದಾಸಾದಿ ಕವಿಗಳು ತಮ್ಮ ಕಾವ್ಯಗಳಲ್ಲಿ ವಿವರಿಸಿರುವ ಜಲಕ್ರೀಡೆಗಳು ಆ ಕಾಲದಲ್ಲಿ ರೂಢಿಯಲ್ಲಿದ್ದವು ಎನಿಸುತ್ತದೆ. ಎತ್ತರವಾದ ಬಹು ಅಂತಸ್ತಿನ ಕಟ್ಟಡಗಳು ಜಲಕ್ರೀಡೆಗಾಗಿ ಸೂಕ್ತವಾಗಿರುವ ಯಂತ್ರೋಪಕರಣಗಳನ್ನು ಪಡೆದು ರಾಜ ಮತ್ತು ರಾಣಿಯರಿಗೆ ಮನೋರಂಜನೆಯನ್ನು ಒದಗಿಸುತ್ತಿದ್ದುವು, ಎಂಬುದು ಗೊತ್ತಾಗುತ್ತದೆ.

ಧಾರಾಗೃಹಗಳು ಬಹು ಸುಂದರವಾಗಿದ್ದ ಸ್ನಾನಾಗಾರಗಳು. ಸುಂದರವಾಗಿ ಅಲಂಕೃತವಾಗಿದ್ದು ಅನುಕೂಲಕರವಾದ ಪೀಠೋಪಕರಣಗಳನ್ನು ಹೊಂದಿರುತ್ತಿದ್ದವು. ಇಲ್ಲಿಯ ಕಂಬಗಳೂ ಕೂಡ ಬಹು ಸುಂದರವಾಗಿ ಅಲಂಕೃತವಾಗಿದ್ದವು. ಇಲ್ಲಿ ಉಚ್ಛ್ರಾಯ ಯಂತ್ರಗಳು, ನೀರು ಸಿಂಪಡಿಸುವ ಯಂತ್ರಗಳು ಮಾತ್ರವೇ ಅಲ್ಲದೆ ಸುಂದರವಾದ ಚಿತ್ರಗಳು. ಅಲಂಕೃತವಾಗಿರುವ ಹೆಂಗಸರ ಗೊಂಬೆಗಳು ಇರುತ್ತಿದ್ದವು. ಅವರ ಸ್ತನಗಳಿಂದ, ಹೊಕ್ಕುಳಿನಿಂದ ಬೇರೆ ಬೇರೆಯ ಭಾಗಗಳಿಂದ ನೀರು ಚಿಮ್ಮಿಸುವಂತೆ ಅವು ರೂಪಿತವಾಗಿರುತ್ತಿದ್ದವು. ಇದರ ಬಹು ಸುಂದರವಾದ ವರ್ಣನೆ ಇಲ್ಲಿ ದೊರೆಯುತ್ತದೆ:

ಧಾರಾಗೃಹಗಳಲ್ಲಿ ನಿರ್ಮಾಣಕ್ಕೆ ಮತ್ತು ಅಲಂಕರಣಕ್ಕೆ ನಕಾಸೆ ಮಾಡಿದ ಕಂಭಗಳು, ವೇದಿಕೆಗಳು, ಕಿಟಕಿಗಳು, ಚಾಚುಗಳು ಮುಂತಾದುವುಗಳಿಗೆ ದೇವದಾರು, ಶ್ರೀಗಂಧ, ಶಾಲಾ ಮುಂತಾದುವನ್ನು ಮಾತ್ರವೇ ಬಳಸಬೇಕು. ಅಲಂಕಾರಕ್ಕಾಗಿ ಸ್ತ್ರೀ ಪುತ್ಥಳಿಗಳು, ಹಕ್ಕಿಗಳ, ಕೋತಿ ಇತ್ಯಾದಿ ಪ್ರಾಣಿಗಳು, ಬಾಯ್ತೆರೆದಿರುವ ಮಕರ, ಹಂಸ, ಮೀನು ಮುಂತಾದ ಗೊಂಬೆಗಳು, ನೃತ್ಯಮಾಡುವ ನಾಗ, ಕಿನ್ನರ, ನವಿಲು, ಕಲ್ಪವೃಕ್ಷದ ಬಳ್ಳಿಗಳು, ಕೋಗಿಲೆ, ಜೇನುಹುಳುಗಳ ಗುಂಪು ಇತ್ಯಾದಿಗಳನ್ನು ರೂಪಿಸಲಾಗುತ್ತಿತ್ತು. ಮುಖ್ಯ ಕೊಳವೆಯನ್ನು ಕಾರಂಜಿಯ ಮಧ್ಯ ಭಾಗದಲ್ಲಿ ಇರಿಸಿ ಅದರ ಹೊರಮೈಯನ್ನು ಅಲಂಕೃತ ಗೊಳಿಸಲಾಗುತ್ತಿತ್ತು. ಅದರ ತುದಿಯಲ್ಲಿ ನೀರನ್ನು ಮೇಲಕ್ಕೆ ಸೆಳೆಯುವ ಮತ್ತು ಬಗೆ ಬಗೆಗಳಲ್ಲಿ ಸುತ್ತಲೂ ಚೆಲ್ಲುವಂತಹ ಯಂತ್ರವಿಶೇಷವನ್ನು ಅಳವಡಿಸಲಾಗುತ್ತಿತ್ತು. ರಾಜನ ಆಸನವು ಮಧ್ಯದಲ್ಲಿದ್ದು ಸ್ನಾನವನ್ನು ಮಾಡುತ್ತಾ ನೀರಿನಲ್ಲಿ ಆಟವನ್ನೂ ಆಡುತ್ತಿದ್ದ. ಸ್ಥಪತಿಗಳಾದವರು ಈ ರೀತಿಯ ಧಾರಾಗೃಹವನ್ನು ಕೇವಲ ಮಹಾರಾಜರಿಗಾಗಿ ಮಾತ್ರವೇ ನಿರ್ಮಿಸಿಕೊಡಬೇಕು, ಇತರ ಸಾಮಾನ್ಯ ಜನರಿಗಾಗಿ ಅಲ್ಲ ಎಂಬ ನಿಯಮವನ್ನೂ ಹೇಳಿದ್ದಾನೆ.

ಪ್ರವರ್ಷಣ[೨೧] : ನೀರನ್ನು ಕೆಳಕ್ಕೆ ಹನಿಗಳಾಗಿ ಚಿಮ್ಮಿಸುವ ಇದರಿಂದ ನೀರಿನ ಮೋಡವನ್ನು ಮೂಡಿಸುವ ಯಂತ್ರವಿಶೇಷ. ದೃಢಕಾಯರಾಗಿರುವ ಮೂರು, ನಾಲ್ಕು ಅಥವಾ ಏಳು ಮಂದಿಯ ಗೊಂಬೆಗಳನ್ನು ಮಾಡಿ ವಕ್ರಗೊಂಡಿರುವ ನೀರಿನ ಕೊಳವೆಯನ್ನು ಹಿಡಿದಿರುತ್ತಾರೆ. ನೀರನ್ನು ಬೇರೆ ಬೇರೆ ರೀತಿಗಳಲ್ಲಿ ಅವರು ಚಿಮ್ಮಿಸಿ ಸುರಿಸುತ್ತಿರುತ್ತಾರೆ. ಇದನ್ನು ಸಮರಾಂಗಣ ಅನುಕರಣಮೇಕಂ ಜಲಮುಚಾಮ್[೨೨] ಎಂದು ಕರೆದಿದ್ದರೆ ಸಂಸ್ಕೃತ ಕಾವ್ಯಗಳಲ್ಲಿ 'ಕೃತ್ರಿಮ ಮೇಘಮಂದಿರ' ಎಂದು ಕರೆದಿರುವುದುಂಟು. ಬೇಸಿಗೆಯಲ್ಲಿ ಇದು ವರದಾನವಾಗಿದ್ದರೆ ನೋಡುವ ಕಣ್ಣುಗಳಿಗೆ ಇದು ಹಬ್ಬವಾಗಿರುತ್ತದೆ. ಮೇಘದೂತದಲ್ಲಿ ಕಾಳಿದಾಸನು **ನೆಷ್ಯಂತಿ ತ್ವಾಂ ಸುರಯುವತಯೋ ಯಂತ್ರಧಾರಾ ಗೃಹತ್ವಂ**[೨೩] ಎಂದು ಹೇಳಿ ಹಿಮಾಲಯದ ಮೇಲಿನ ಸುರಲೋಕದ ಅಪ್ಸರೆಯರು ಮೋಡಗಳನ್ನು ತಮ್ಮ ಬಳೆಗಳಿಂದ ಕೆರೆದು ಸಂಗ್ರಹಿಸಿಕೊಂಡು ಯಂತ್ರಧಾರಾ-ಗೃಹವನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದರಂತೆ. ಇದರಿಂದ ಕಾಳಿದಾಸನಿಗೆ ಯಂತ್ರಧಾರಾಗೃಹದ ಪರಿಚಯ ಚನ್ನಾಗಿ ಇತ್ತು ಎಂಬುದು ಗೊತ್ತಾಗುತ್ತದೆ.

ಪ್ರನಾಳ[೨೪] : ಎರಡು ಅಂತಸ್ತುಗಳ ಕಟ್ಟಡ ಇದರಲ್ಲಿ ಒಂದು, ನಾಲ್ಕು, ಎಂಟು ಅಥವ ಹದಿನಾರು ಕಂಭಗಳು ಇರಬಹುದು. ಇದರ ಆಕಾರ ಪುಷ್ಪಕ ವಿಮಾನದಂತಿದ್ದು ಬಹುವಾಗಿ ಅಲಂಕೃತವಾಗಿರುತ್ತದೆ. ಕೆಳಭಾಗದ ಮಧ್ಯದಲ್ಲಿ ದೊಡ್ಡದಾದ ಪದ್ಮವಿದ್ದು ಅದರ ಅಡಿಯಲ್ಲಿ ನೀರಿನ ಕೊಳವಿರುತ್ತದೆ. ಪದ್ಮದ ಮಧ್ಯಭಾಗವು ರಾಜನ ಸಿಂಹಾಸನದಂತೆ ರೂಪಿತವಾಗಿರುತ್ತದೆ. ಪದ್ಮದ ಸುತ್ತಲೂ ಪದ್ಮವನ್ನು ದಿಟ್ಟಿಸುತ್ತಿರುವ ಸ್ತ್ರೀ ಪುತ್ಥಳಿಗಳಿರುತ್ತವೆ. ಮೇಲು ಭಾಗದ ಜಲಸಂಗ್ರಹವನ್ನು ನೀರಿನಿಂದ ತುಂಬಿದಾಗ ಪದ್ಮದ ಸುತ್ತಲಿನ ಪುತ್ಥಳಿಗಳು ಪದ್ಮದ ಮದ್ಯೆ ಕುಳಿತಿರುವ ರಾಜನ ಮೇಲೆ ನೀರನ್ನು ಸುರುವಲು ಪ್ರಾರಂಭಿಸುತ್ತವೆ.

ಜಲಮಗ್ನ ೨೫ : ವರುಣ ಅಥವಾ ನಾಗಲೋಕದ ಕಲ್ಪನೆಯ ಆಧಾರದಿಂದ ಈ ಬಗೆಯ ಧಾರಾಗೃಹ ರೂಪಿತವಾಗಿದೆ. ಆಳವಾದ ದೊಡ್ಡ ಜಲಾಶಯದ ತಳದಲ್ಲಿ ಒಂದು ಚತುರಸ್ರಾಕಾರದ ಕೋಣೆಯನ್ನು ನಿರ್ಮಿಸಲಾಗುತ್ತದೆ. ಇದಕ್ಕೆ ಸುರಂಗ ಮಾರ್ಗದಲ್ಲಿ ಪ್ರವೇಶವನ್ನು ಕಲ್ಪಿಸಿರುತ್ತಾರೆ. ಮೇಲೆ ನೀರಿದ್ದು ಅದರಲ್ಲಿ ಪದ್ಮಗಳು, ಮೀನುಗಳು, ಇತರ ಜಲಚರಗಳ ಗೊಂಬೆಗಳನ್ನು ಬಿಟ್ಟಿರುತ್ತಾರೆ. ಅರಸನು ಈ ಮಂದಿರದಲ್ಲಿ ಏಕಾಂತದಲ್ಲಾಗಲಿ, ಆಪ್ತರೊಂದಿಗಾಗಲಿ ಇದ್ದಾಗ ಕೇವಲ ಕೆಲವೇ ಸ್ನೇಹಿತರನ್ನು, ಸಮಾನ ಅಂತಸ್ತಿನ

ಇತರ ದೇಶದವರನ್ನು ಅತ್ಯಂತ ತುರ್ತಾಗಿದ್ದರೆ ಮಾತ್ರವೇ ಭೇಟಿಯಾಗಬಹುದು.

ನಂದ್ಯಾವರ್ತ[೨೫] : ತಟಾಕದ ಮಧ್ಯದಲ್ಲಿ ನೀರಿನಲ್ಲಿ ಹುವ್ವಿನ ಆಕಾರದ ಮನೆ ರೂಪಿಸಿದ್ದು ಮಧ್ಯಭಾಗದಲ್ಲಿ ಸ್ವಸ್ತಿಕ ಆಕಾರದ ಕಟ್ಟಡವಿರುತ್ತದೆ ಇದರಲ್ಲಿ ಜಲಕೇಳಿಗಳನ್ನು, ಕಣ್ಣಾ ಮುಚ್ಚಾಲೆ ಆಟಗಳನ್ನು ಆಡಬಹುದು.

ದೋಲಾ ಗೃಹ[೨೬]

ಇದನ್ನು ರಥದೋಲಾ ಗೃಹ ಎಂದು ಕರೆಯುತ್ತಾರೆ. ಇದರಲ್ಲಿ ಐದು ಬಗೆಗಳಿವೆ.[೨೭] ೧. ವಸಂತ ೨. ಮದನೋತ್ಸವ ೩. ವಸಂತ ತಿಲಕ ೪. ವಿಭ್ರಾಮಕ ಮತ್ತು ೫. ತ್ರಿಪುರ

ರಥದೋಲ ಎನ್ನುವುದು ಉಯ್ಯಾಲೆ ಅಥವಾ ಬೃಹತ್ ಉಯ್ಯಾಲೆ ಚಕ್ರ. ಇದರಲ್ಲಿ ಜನರು ಕುಳಿತು ಚಕ್ರದ ಅನುಸಾರ ಸುತ್ತುತ್ತಾ ಸಂತೋಷಿಸುತ್ತಾರೆ. ಆದರೆ ಇದರ ಅಲಂಕಾರ ಮತ್ತು ಆಕಾರದಲ್ಲಿ ಧಾರಗೃಹಗಳನ್ನೇ ಹೋಲುತ್ತಿರುವಂತೆ ತೋರುತ್ತದೆ.

ವಸಂತ[೨೮] : ಎಂಟು ಚದರಗಳ ಮತ್ತು ನಾಲ್ಕು ಚದರಗಳ ಭೂಮಿಯನ್ನು ಅಗೆದು ಅದರಲ್ಲಿ ಯಂತ್ರವನ್ನು ಭದ್ರಗೊಳಿಸಬೇಕು. ಈ ಯಂತ್ರದ ತಯಾರಿಕೆಯಲ್ಲಿ ಮರ ಮತ್ತು ಲೋಹ ಎರಡನ್ನೂ ಬಳಸಲಾಗುತ್ತದೆ. ಭ್ರಮಣವನ್ನುಂಟುಮಾಡುವಂತಹ ಯಂತ್ರವನ್ನು ವೇದಿಕೆಗೆ ಜೋಡಿಸಲಾಗುತ್ತದೆ. ಹನ್ನೆರಡು ಕಂಭಗಳ ಮೇಲೆ ಒಂದು ಅಂತಸ್ತನ್ನು ನಿರ್ಮಿಸಬೇಕು. ಭ್ರಮಣಕಾರ್ಯಕ್ಕಾಗಿ ಐದು ಯಂತ್ರಗಳನ್ನು ಬಳಸಬೇಕಾಗಿರುತ್ತದೆ. ಪ್ರತಿಯೊಂದು ಚಕ್ರವು ಇನ್ನೊಂದು ಚಕ್ರದ ಮೇಲೆ ಪ್ರಭಾವ ಬೀರಿ ಆ ಅಂತಸ್ತೆ ಚಲಿಸುತ್ತದೆ. ಇದರ ಆಕಾರವು ಪದ್ಮದಂತೆ ರೂಪಿತವಾಗಿರುತ್ತದೆ. ಇದರಲ್ಲಿ ಸುತ್ತುತ್ತಿರುವ ವ್ಯಕ್ತಿಗಳಿಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಮದನೋತ್ಸವ[೨೯] : ಇದರಲ್ಲಿ ಭೂಮಿಯ ಅಗೆತ ಮತ್ತು ಭೂಗರ್ಭದಲ್ಲಿಯ ನಿರ್ಮಾಣ ಇರುವುದಿಲ್ಲ. ಮುಖ್ಯ ಕಂಭದ ಮೇಲಿರುವ ಅಂತಸ್ತಿನಲ್ಲಿ ನಾಲ್ಕು ಆಸನಗಳು ಇರುತ್ತವೆ, ಕೆಳಗೆ ನಿಂತಿರುವ ವ್ಯಕ್ತಿಯೊಬ್ಬ ಇದನ್ನು ತಿರುಗಿಸುತ್ತಿರುತ್ತಾನೆ.

ವಸಂತ ತಿಲಕ [೩೦] : ಎರಡು ಅಂತಸ್ತುಗಳನ್ನು ರಚಿಸಬೇಕು. ಎರಡನೆಯ ಅಂತಸ್ತು ಬಹುವಾಗಿ ಅಲಂಕೃತವಾಗಿರುತ್ತದೆ. ಯಂತ್ರವನ್ನು ಮೊದಲ ಅಂತಸ್ತಿನಲ್ಲಿ ಬಿಗಿಸಿರುತ್ತಾರೆ. ಒಂದು ಚಕ್ರದ ಮೇಲೆ ಇನ್ನೊಂದು ಚಕ್ರ ಪ್ರಭಾವ ಬೀರಿ ಮೇಲಿನ ಅಂತಸ್ತು ಸುತ್ತಲು ಪ್ರಾರಂಭಿಸುತ್ತದೆ.

ವಿಭ್ರಾಮಕ[೩೧]: ಇದರಲ್ಲಿ ಪ್ರೇಕ್ಷಕರ ಸಂಖ್ಯೆ ಹೆಚ್ಚಾಗಿರ ಬಹುದು. ಚಲನೆಯೂ ಭಿನ್ನವಾಗಿರುತ್ತದೆ. ತಳದಲ್ಲಿ ಗಟ್ಟಿಯಾದ ವೇದಿಕೆ ಮತ್ತು ಯಂತ್ರವಿರುವ ಚೌಕಾಕಾರದ ವಸ್ತುವಿರುತ್ತದೆ. ಇವುಗಳ ಮೇಲೆ ಎಂಟು ಆಸನಗಳಿರುವ ಒಂದು ವೇದಿಕೆ ಇರುತ್ತದೆ. ಇದರ ಮೇಲೆ ಇದೇ ರೀತಿಯಾಗಿ ಇನ್ನೊಂದು ವೇದಿಕೆ ಇದ್ದು ಅದರಲ್ಲೂ ಎಂಟು ಆಸನಗಳಿರುತ್ತವೆ. ಅರಗಳಿರುವ ಚಕ್ರಗಳು ಇವನ್ನೆಲ್ಲಾ ಹಿಡಿದು ಸಂಬಂಧವನ್ನು ಸ್ಥಾಪಿಸಿರುತ್ತವೆ. ಇಲ್ಲಿಯ ವಿಶೇಷವೆಂದರೆ ಪ್ರತಿಯೊಂದು ಅಂತಸ್ತು ತನ್ನದೇ ಆದ ಪ್ರತ್ಯೇಕ ಚಲನೆಯನ್ನು ಪಡೆದುಕೊಂಡಿರುತ್ತದೆ. ಇದರಿಂದ ವೃತ್ತಾಕಾರದ ಸಂಕೀರ್ಣ ಚಲನೆಗಳಿಗೆ ಒಳಪಟ್ಟು ವ್ಯಕ್ತಿಯು ವಿಭ್ರಮೆಗೆ ತುತ್ತಾಗುತ್ತಾನೆ. ಆದ್ದರಿಂದ ಇದನ್ನು ವಿಭ್ರಾಮರ್ಕ ಎಂದು ಕರೆಯಲಾಗಿದೆ.

ತ್ರಿಪುರ[೩೨] : ಇದರಲ್ಲಿ ಒಂದು ಅಂತಸ್ತನ್ನು ಹೆಚ್ಚು ಮಾಡಲಾಗಿರುತ್ತದೆ. ಪ್ರತಿ ಅಂತಸ್ತು ಮೇಲಕ್ಕೆ ಹೋದಂತೆ ಚಿಕ್ಕದಾಗಿರುತ್ತದೆ. ಅಂತಸ್ತುಗಳ ಪರಸ್ಪರ ಮೆಟ್ಟಿಲುಗಳಿಂದ ಸಂಪರ್ಕ ಹೊಂದಿರುತ್ತವೆ. ಅನೇಕ ಕೊಂಡಿಗಳು, ಕಿರಿಯ ಚಕ್ರಗಳು ಮುಂತಾದವುಗಳನ್ನು ಬಳಸಿ ಇದನ್ನು ತಯಾರಿಸುತ್ತಾರೆ.

ಯುದ್ಧ ಯಂತ್ರಗಳು : ಈ ಯಂತ್ರಗಳ ಉಲ್ಲೇಖ ಮಾತ್ರವೇ ದೊರೆಯುತ್ತದೆ. ಇವುಗಳ ಬಗ್ಗೆ ವಿವರಣೆ ಹೇಳಿಲ್ಲ. ಚಾಪ, ಶತಘ್ನಿ, ಉಷಗ್ರೀವ ಮುಂತಾದ ಅನೇಕ ಯಂತ್ರಗಳನ್ನು ಹೇಳಿದೆ.

ಯಾನ ಯಂತ್ರಗಳು - ಅಂಬರ ಚಾರೀ ವಿಮಾನ: ಈ ವರ್ಗದಲ್ಲಿ ಶಕಟ, ರಥಗಳು ಹೇಳಿದ್ದರೂ ನಮ್ಮ ಗಮನವನ್ನು ಅಂಬರಚಾರೀ ವಿಮಾನದ ಬಗ್ಗೆ ಮಾತ್ರವೇ ಕೇಂದ್ರೀಕರಿಸೋಣ. ಸಮರಾಂಗಣ ಸೂತ್ರಧಾರನು ವಿವರಿಸಿರುವ ಯಂತ್ರಗಳಲ್ಲಿ ಇದು ಬಹು ವಿಶಿಷ್ಟ ಯಂತ್ರವಾದ್ದರಿಂದಲೂ, ಪ್ರಾಚೀನ ಹಾಗೂ ಮಧ್ಯಕಾಲೀನ ಸಂಸ್ಕೃತ ಸಾಹಿತ್ಯದಲ್ಲಿ ಅಂಬರಚಾರೀ ವಿಮಾನಗಳ ಬಗ್ಗೆ ಅನೇಕ ಉಲ್ಲೇಖಗಳು ಬಹು ವ್ಯಾಪಕವಾಗಿರುವು ದರಿಂದಲೂ, ಈ ವಿಮಾನಗಳ ನಿರ್ಮಾಣದ ಬಗ್ಗೆ ಕೆಲವು ವಿವರಗಳನ್ನು ಕೊಡುವಂತಹ ಏಕಮಾತ್ರ ಶಿಲ್ಪಶಾಸ್ತ್ರ ಇದಾಗಿ ರುವುದರಿಂದ ಈ ಭಾಗವು ವಿಶೇಷ ಅಧ್ಯಯನಕ್ಕೆ ಅರ್ಹವಾದು ದಾಗಿದೆ.

ಅಂಬರಚಾರೀ ವಿಮಾನವು ಮರದಲ್ಲಿ ತಯಾರು ಮಾಡಲಾಗುತ್ತಿತ್ತು. ಮರದಲ್ಲಿ ತಯಾರಿಸುತ್ತಿದ್ದ ಹಕ್ಕಿಯೂ ಕೂಡ ಆಕಾಶದಲ್ಲಿಯೇ ಹಾರುತ್ತಿತ್ತು. ಇವೆರಡೂ ಆಕಾಶಯಂತ್ರಗಳ ವಿಭಾಗಕ್ಕೆ ಸೇರುತ್ತವೆ. ಹಗುರವಾದ ಮರದಿಂದ ಬೃಹತ್ತಾದ ಹಕ್ಕಿಯ ಆಕಾರವನ್ನು ತಯಾರಿಸಿ ಎರಡೂ ಕಡೆಗಳಲ್ಲಿ ರೆಕ್ಕೆಗಳನ್ನು ರೂಪಿಸಬೇಕು. ತಳದ ಮಧ್ಯಭಾಗದಲ್ಲಿ ಬೆಂಕಿ ಅಡಗಿಸಿಕೊಂಡಿರುವ ಯಂತ್ರ ಮತ್ತು ಪಾರಾ (ಪಾದರಸ) ತುಂಬಿಕೊಂಡಿರುವ ಭಾಗದ ಯಂತ್ರ ಇರಬೇಕು. ಒಳಗೆ ಪ್ರಯಾಣಿಕರು ಕುಳಿತಾಗ, ಯಂತ್ರ ತನ್ನ ಕಾರ್ಯವನ್ನು ಪ್ರಾರಂಭಿಸಿದಾಗ ಎರಡು ರೆಕ್ಕೆಗಳಲ್ಲಿ ಉತ್ಪನ್ನವಾಗುವ ಗಾಳಿಯ ಫಲವಾಗಿಯೂ, ಪಾದರಸ ತನ್ನ ಕೆಲಸ ಪ್ರಾರಂಭಿಸಿ ಶಕ್ತಿಯನ್ನು ಸೃಷ್ಟಿಸಿದಾಗ ಆಕಾಶದಲ್ಲಿ

ಸಂಚರಿಸಬಲ್ಲ ಹಕ್ಕಿಯಂತ್ರವು ಆಕಾಶದಲ್ಲಿ ಬಹುದೂರ ಗಮಿಸಿ ಅದರಲ್ಲಿ ಕುಳಿತಿರುವ ಪ್ರಯಾಣಿಕರಿಗೂ, ಹೊರಗೆ ನಿಂತು ನೋಡುತ್ತಿರುವ ಪ್ರೇಕ್ಷಕರಿಗೂ ಬಹುವಾದ ಆನಂದವನ್ನು, ಆಹ್ಲಾದವನ್ನು ಉಂಟುಮಾಡುತ್ತದೆ.[೩೩]

ಇದೇ ರೀತಿಯಾಗಿ ಸ್ವಲ್ಪ ಭಾರವಾಗಿರುವ ಮರದಲ್ಲಿ ದೇವಾಲಯದಂತೆ ಕಾಣುವ ವಿಮಾನವನ್ನು ರೂಪಿಸಿ. ಅದರಲ್ಲಿ ಬಲವಾಗಿರುವ ನಾಲ್ಕು ಪಾತ್ರೆಗಳಲ್ಲಿ ಪಾರಾ ತುಂಬಿ ಇರಿಸಿ, ಅದರ ಕೆಳಗೆ ಬೆಂಕಿಯನ್ನು ತುಂಬಿಕೊಂಡಿರುವ ಕಬ್ಬಿಣದ ಪಾತ್ರೆಯೊಂದನ್ನು ಇರಿಸಬೇಕು. ಇದರಿಂದ ಕಾಯಿಸಲ್ಪಡುವ ನಾಲ್ಕು ಪಾತ್ರೆಗಳಿಂದ ರಸರಾಜವಾಗಿರುವ ಪಾರಾ ಶಕ್ತಿಯನ್ನು ಸೃಷ್ಟಿಸುತ್ತದೆ. ಈ ರೀತಿ ಸೃಷ್ಟಿಯಾದ ಶಕ್ತಿಯಿಂದ ಆಕಾಶಯಂತ್ರವು ಚಲಿಸುತ್ತದೆ. ಹೀಗೆಯೇ ಆಕಾಶದಲ್ಲಿ ರಸರಾಜ ಪಾರಾದ ಶಕ್ತಿಯಿಂದ ತೇಲುತ್ತಾ ಆಕಾಶದ ಆಭರಣದಂತೆ ಕಂಗೊಳಿಸುತ್ತಿರುತ್ತದೆ.[೩೩]

ವಿಮಾನದ ಈ ವಿವರಣೆಯಲ್ಲಿ ಕೇವಲ ಪಾರಾ ಮತ್ತು ಅಗ್ನಿ ಇವೆರಡನ್ನು ಮಾತ್ರವೇ ಹೇಳಿದೆ. ಈ ಯಂತ್ರದ ಕ್ರಿಯೆಗೆ ಇವು ಬಹು ಮುಖ್ಯವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಬೇರೆಯಾವ ವಿವರಣೆಯೂ ಇಲ್ಲದೆ ಇಷ್ಟರಿಂದಲೇ ಆ ಕಾಲದ ವಿಮಾನವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಈ ಯಂತ್ರವು ಸರಳವಾದುದಲ್ಲ. ಇದು ಆಕಾಶದಲ್ಲಿ ಹಾರಾಡಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಿ ಬರಬೇಕಾಗಿದ್ದರೆ ಇನ್ನೂ ಅನೇಕ ಸಾಧನ ಸಲಕರಣೆಗಳು ಅತಿ ಅವಶ್ಯಕವಾಗಿ ಇರಲೇ ಬೇಕು. ಅನ್ಯಥಾ ಈ ಕೆಲಸವು ಸಾಧ್ಯವಾಗುವುದಿಲ್ಲ.

ನಿಜಸಂಗತಿ

ಸಾಧಾರಣವಾಗಿ ಕಾವ್ಯಗಳಲ್ಲಿ ಉತ್ಪ್ರೇಕ್ಷೆ, ಕಲ್ಪನೆಯೇ ಹೆಚ್ಚು ಎಂಬುದು ವಿಮರ್ಶಕರ ಹಾಗೂ ಜನ ಸಾಮಾನ್ಯರ ನಂಬಿಕೆ. ಶಿಲ್ಪಶಾಸ್ತ್ರವು ಆ ರೀತಿಯ ಶಾಸ್ತ್ರವಲ್ಲ. ಮಾಡಲು ಸಾಧ್ಯವಿಲ್ಲದ್ದನ್ನು ಈ ಶಾಸ್ತ್ರದ ಚೌಕಟ್ಟಿನಲ್ಲಿ ಹೇಳುವುದು ಸಾಧ್ಯವೇ ಆಗುವುದಿಲ್ಲ. ಆದರೂ ಸಮರಾಂಗಣ ಸೂತ್ರಧಾರನ ಈ ಮಾತುಗಳು ಅತ್ಯಂತ ಗಮನಾರ್ಹವಾದುವು-ಈ ಯಂತ್ರಗಳನ್ನೆಲ್ಲಾ ತಾನು ನೋಡಿದ್ದೇನೆ ಮತ್ತು ಇತರರೂ ಇವುಗಳ ಬಗ್ಗೆ ಬೇರೆ ಎಡೆಗಳಲ್ಲಿ ಹೇಳಿದ್ದಾರೆ.[೩೪] ಇವೆಲ್ಲಾ ಪೂರ್ವ ಶಿಲ್ಪಿಗಳಿಂದ ಪರಂಪರೆಯಾಗಿ ಕೊಡಲ್ಪಟ್ಟಿರುವ ತಿಳಿವು.[೩೫] ಈ ಯಂತ್ರಗಳ ನಿರ್ಮಾಣ ರಹಸ್ಯಗಳನ್ನು ಹೇಳದೆ ಇರುವ ಕಾರಣ ಅದು ತನಗೆ ತಿಳಿದಿಲ್ಲ ಎಂಬುದಲ್ಲ. ಆ ತಿಳಿವು ಗುಪ್ತವಾಗಿರಬೇಕಾದುದು ಎಂದು ಉದ್ದೇಶಪೂರ್ವಕವಾಗಿ ಹೇಳಿಲ್ಲ. ಅದನ್ನು ಬಹಿರಂಗಗೊಳಿಸಿದರೆ ಯಂತ್ರಗಳ ಫಲ ನೀಡುವುದಿಲ್ಲ. ಹೇಳಿ ತಿಳಿಸುವ ವಿದ್ಯೆ ಇದಲ್ಲ. ಅನುಭವದಿಂದ ಅವಗತ ಮಾಡಿಕೊಳ್ಳಬೇಕಾದ ವಿದ್ಯೆ,[೩೬] ಎಂದು ಇಲ್ಲಿಗೆ ತನ್ನ ಮಾತು ನಿಲ್ಲಿಸದೆ ಈ ರೀತಿಯ ಯಂತ್ರಶಿಲ್ಪವು ಪಾರಂಪರಿಕವಾಗಿ ಅರಿತಿರುವ ಶಿಲ್ಪಿ ಸಂಪ್ರದಾಯದವರು ಭಾರತದಲ್ಲಿದ್ದಾರೆ, ಎಂದು ಹೇಳುತ್ತಾ ಆ ಶಿಲ್ಪಿ ಪರಂಪರೆಯವರನ್ನು ಹೀಗೆ ವರ್ಣಿಸಿದ್ದಾನೆ.

> ಪಾರಂಪರ್ಯಂ ಕೌಶಲಂ ಸೋಪದೇಶಂ ಶಾಸ್ತ್ರಾಭ್ಯಾಸೋ
> ವಾಸ್ತುಕರ್ಮೋದ್ಯಮೋ ಧೀಃ।
> ಸಾಮಗ್ರೀಯಂ ನಿರ್ಮಲಾ ಯಸ್ಯ ಸೋಽಸ್ಮಿಶ್ಚಿತ್ರಾಣ್ಯೇವಂ
> ವೇತ್ತಿ ಯಂತ್ರಾಣಿ ಕರ್ತುಮ್॥[೩೭]

(ಯಾರಿಗೆ ಸದಾಚಾರೋಪದೇಶದಿಂದ ಕೂಡಿದ ಪರಂಪರೆ ಇದೆಯೋ, ಯಾರಲ್ಲಿ ಕೌಶಲ ಶಾಸ್ತ್ರ ವಿಜ್ಞಾನ, ವಾಸ್ತುಕರ್ಮಗಳನ್ನು ಗ್ರಹಿಸುವ ಸಾಮರ್ಥ್ಯ, ಶಿಲ್ಪ ಪ್ರತಿಭೆ ಎಂಬ ನಿರ್ಮಲ ಸಾಮಗ್ರಿಗಳು ಇರುವವೋ ಅಂತಹ ಶಿಲ್ಪಿಯು ವಿಚಿತ್ರವೆನಿಸುವ ಈ ಯಂತ್ರಗಳನ್ನು ನಿರ್ಮಾಣ ಮಾಡುವ ಸಾಮರ್ಥ್ಯವನ್ನು ಪಡೆದಿರುತ್ತಾನೆ)

ಹೀಗೆ ಸಮರಾಂಗಣ ಸೂತ್ರಧಾರನು ವೇದಕಾಲದಿಂದಲೂ ಕಾಲದಿಂದಲು ಬೆಳೆದು ಬಂದಿರುವ ಶಿಲ್ಪವಂಶ ಪರಂಪರೆಯತ್ತ ಬೊಟ್ಟುಮಾಡಿ ತೋರಿ ಈ ರಹಸ್ಯಗಳು ಅವರಲ್ಲಿ ಅಡಗಿವೆ ಎಂದು ಹೇಳುತ್ತಾನೆ.

ಶಿಲ್ಪಿಬ್ರಾಹ್ಮಣ ಪರಂಪರೆ

ಭೃಗು ಮತ್ತು ಅಂಗೀರಸರು ನವಬ್ರಹ್ಮರಲ್ಲಿ ಪರಿಗಣಿತ ವಾಗಿರುವ ವೈದಿಕ ಋಷಿಗಳು. ಇವರು ಬ್ರಾಹ್ಮಣ್ಯದ ಪ್ರವರ್ತಕರು, ಆಂಗೀರಸರು (ಅಂಗೀರಸರ ಮಕ್ಕಳು) ಶಿಲ್ಪಿಗಳೆಂದು ವೇದವೇ ವರ್ಣಿಸಿದೆ:

ಎಲೈ ರಾಜನೇ, ಗೋಧನದ ಗಳಿಕೆಗಾಗಿ ಹೊರಟ ವಿಪ್ರನಾದ ನಾಭಾನೇದಿಷ್ಟನು ಶಿಲ್ಪಕರ್ಮವನ್ನು (ಕಾರವೇ) ಮಾಡುತ್ತಿದ್ದ ಆಂಗೀರಸ ಗಣವನ್ನು ಸ್ತುತಿಸಿ ಅವರಿಗೆ ಪ್ರಿಯನಾದನು. ಆಂಗೀರಸರ ಶಿಲ್ಪಕರ್ಮವನ್ನು ದೂರದೇಶಗಳ ತನಕ ವ್ಯಾಪಕಗೊಳಿಸಿ ಆಂಗೀರಸರಿಗೆ ಆತ್ಮದಂತೆ ಪ್ರಿಯನಾದನು.[೩೮] ಗೋಪಥ ಬ್ರಾಹ್ಮಣದಲ್ಲಿ [೩೯] ಆಂಗೀರಸ ಗಣವನ್ನು 'ಕಾರಮೋ ನಾಮ ಋಷಯಃ' ಎಂದು ಹೇಳಿ ಅವರನ್ನು ಶಿಲ್ಪಿಗಳು ಎಂದು ಸ್ಪಷ್ಟಗೊಳಿಸಲಾಗಿದೆ. ಇವರೊಂದಿಗೆ ಭೃಗುಗಳು ರಥಕಾರ ಶಿಲ್ಪಿಗಳೆಂಬುದನ್ನು ಬಹುಸುಂದರವಾಗಿ ಹೇಳಲಾಗಿದೆ. ಭೃಗುಗಳು ರಥವನ್ನು ಎಷ್ಟು ಸುಂದರವಾಗಿ ನಿರ್ಮಿಸುವರೋ ಅಷ್ಟೇ ಸುಂದರವಾಗಿ ಸ್ತುತಿ ಪಾಠಕರು ತಮ್ಮ ಸ್ತುತಿಗಳನ್ನು ರಚಿಸಿ ತಮ್ಮನ್ನು ದೃಢಗೊಳಿಸಿ ತಮ್ಮ ಸಕಲ ಇಷ್ಟಾರ್ಥಗಳನ್ನೂ ಪೂರೈಸಬಲ್ಲ ಇಂದ್ರನನ್ನು ಮೆಚ್ಚಿಸಿ ಆತನ ಸಖ್ಯವನ್ನು ಗಳಿಸುತ್ತಾರೆ.[೪೦]

ಇನ್ನೊಂದೆಡೆ 'ಅತಕ್ಷಾಮ ಭೃಗವೋ ನ ರಥಮ್'[೪೧] ಎಂದು ಹೇಳಿ ಭೃಗುಗಳು ಎಷ್ಟು ಸುಂದರವಾಗಿ ರಥವನ್ನು ನಿರ್ಮಿಸುತ್ತಾರೋ ಅಷ್ಟೇ ಸುಂದರವಾಗಿ ಅಶ್ವಿನೀ ದೇವತೆಗಳ ಸ್ತೋತ್ರವನ್ನು ಅವರ ದಯೆಗಳಿಸಲು ರಚಿಸಿರುವುದಾಗಿ ಹೇಳಿದೆ.

ಶಿಲ್ಪಿ ಪರಂಪರೆಯನ್ನು ವೇದದಲ್ಲಿಯೇ ಹೀಗೆ ಹೇಳಲಾಗಿದೆ-

ಸ ಪ್ರಥಮ ಸ್ಸಂಕೃತಿರ್ವಿಶ್ವಕರ್ಮಾ।
ಸ ಪ್ರಥಮೋ ಮಿತ್ರೋ ವರುಣೋಽ ಅಗ್ನಿಃ।
ಸ ಪ್ರಥಮೋ ಬೃಹಸ್ಪತಿಶ್ಚಿಕಿತ್ವಾನ್॥[೪೨]

ಸಮಗ್ರವೂ ಸಮೀಚಿನವೂ ಆಗಿರುವ ಶಿಲ್ಪ ನಿರ್ಮಾಣವನ್ನು ಮಾಡಿದ ಮೊದಲ ಶಿಲ್ಪಿಯು (ಸಂಕೃತಿಯು) ವಿಶ್ವಕರ್ಮನು. ಈತನು ಇಂದ್ರನಂತೆ ಸಂಪತ್ತುಳ್ಳವ. ಇದೇ ರೀತಿಯ ಸಂಕೃತಿಗಳು (ಶಿಲ್ಪಿಗಳು) ಮಿತ್ರ, ವರುಣ ಅಗ್ನಿ ಮತ್ತು ಬೃಹಸ್ಪತಿಗಳು ಬೃಹಸ್ಪತಿಯೇ ಶಿಲ್ಪಿಗಳಿಗೆಲ್ಲಾ ಮಾರ್ಗದರ್ಶಕ. ಇಂದೂ ಸಾಧಾರಣ ಶಿಲ್ಪಿಯಾಗಿರುವವನು ಬೃಹಸ್ಪತೀ ಸವನ್ನು ಎಂದರೆ ವಾಜಪೇಯ ಯಜ್ಞವನ್ನು ಮಾಡಿದ ನಂತರವೇ ಸ್ಥಪತಿ ಎಂಬ ಹೆಸರನ್ನು ಪಡೆಯುತ್ತಾನೆ.[೪೩] 'ಬ್ರಹ್ಮಣಸ್ಪತಿ ರೇತಾ ಸಂಕರ್ಮಾರ ಇವಾಽಧಮತ್' ಎಂಬ ಮಂತ್ರದಿಂದ ಬೃಹಸ್ಪತಿಯು ಶಿಲ್ಪಿ ಎಂಬುದು ಖಚಿತವಾಗುತ್ತದೆ.

ಈ ರೀತಿಯ ಸರ್ವಕರ್ಮ ಕ್ಷಮತೆಯುಳ್ಳ ವಿಶ್ವಕರ್ಮಾನ್ವಯ ಶಿಲ್ಪಿ ಪರಂಪರೆಯು ತಮ್ಮದೆಂದು ವೃಷಭೋ ವೈರಾಜ ಮತ್ತು ವೃಷಭ ಶಾಕ್ವರ ಋಷಿಗಳು ಅಭಿಭೂರಹಮಾಗಮಂ ವಿಶ್ವಕರ್ಮೇಣ ಧಾಮ್ನಾ[೪೪] ಎಂದು ಸಾರಿದ್ದು ತನಗೆ ಸೋಲೇ ಇಲ್ಲ ಎಂದು ಹೆಮ್ಮೆಯಿಂದ ಸಾರಿದ್ದಾನೆ.

ಈ ವೈದಿಕ ಶಿಲ್ಪಿಗಳೇ ಶುಲ್ಬ ಸೂತ್ರಗಳನ್ನು ರೂಢಿಸಿ ಕೊಟ್ಟರು ಎಂಬುದನ್ನು ಕಾತ್ಯಾಯನೀಯ ಶುಲ್ಬಸೂತ್ರದ ಮಹೀಧರಭಾಷ್ಯದ ಗ್ರಂಥಾಧಿಕಾರ ನಿರೂಪಣದಲ್ಲಿ ಈ ರೀತಿಯಾಗಿ ಹೇಳಿದೆ.

ಶಾಸ್ತ್ರ ಬುದ್ಧಿವಿಭಾಗಜ್ಞಃ ಪರಶಾಸ್ತ್ರ ಕುತೂಹಲಃ।
ಶಿಲ್ಪಿಭ್ಯಃ ಸ್ಥಪತಿಭ್ಯಶ್ಚಾಪ್ಯಾದದೀತ ಮತೀಃ ಸದಾ॥[೪೫]

ಸೂಕ್ಷ್ಮ ಬುದ್ಧಿಯುಳ್ಳ ಶಿಲ್ಪಿ ಮತ್ತು ಸ್ಥಪತಿಗಳು, ಶಾಸ್ತ್ರಗಳ ಬಗ್ಗೆ ಗೌರವ ಶ್ರದ್ಧೆಗಳು ಇದ್ದು ಇತರ ಶಾಸ್ತ್ರಗಳ ಅವಶ್ಯಕತೆಗಳ ತಿಳಿವು ಇರುವಂತಹ ವ್ಯಕ್ತಿಯು ಶುಲ್ಬಸೂತ್ರಗಳ ಅಧಿಕಾರಿ ಎಂದು ಟೀಕಾಕಾರರು ಹೇಳಿದ್ದಾರೆ. ಶಿಲ್ಪಿಯ ಆಯುಧಗಳಲ್ಲಿ ಮುಖ್ಯವಾದುವು ದಂಡ (ಕೋಲು) ಮತ್ತು ರಜ್ಜು (ಹಗ್ಗ) ಇವೆರಡೂಅಳತೆ ಮಾಡಲು ಬಳಸುವ ಆಯುಧಗಳು. ರಜ್ಜುವನ್ನೇ ಶುಲ್ಬವೆಂದು ಕರೆಯುತ್ತಾರೆ. ಆದ್ದರಿಂದ ಶುಲ್ಬವೆಂಬುದು ಅಳತೆಗಳ ಶಾಸ್ತ್ರ ಮತ್ತು ವೈದಿಕ ಶಿಲ್ಪಿಗೆ ಸೇರಿರುವ ಶಾಸ್ತ್ರ. ವಾಲ್ಮೀಕಿ ರಾಮಾಯಣದಲ್ಲಿ ಪುತ್ರಕಾಮೇಷ್ಠಿ ಆಚರಣೆಯ ಸಂದರ್ಭದಲ್ಲಿ-

ಕಾರಿತಾಸ್ಸ್ರ್ವ ಏವೈತೇ ಶಾಸ್ತ್ರಜ್ಞೈರ್ಯಜ್ಞಕೋವಿದೈಃ।
ಶೋಭಾರ್ಥಂ ತಸ್ಯ ಯಜ್ಞಸ್ಯ ಕಾಂಚನಾಲಂಕೃತಾ ಭವಸ್॥[೪೬]

ಇಲ್ಲಿ ಶಾಸ್ತ್ರಜ್ಞೈಃ ಎಂದರೆ ಶಿಲ್ಪಶಾಸ್ತ್ರ ಮತ್ತು ಶುಲ್ಬಶಾಸ್ತ್ರ ಬಲ್ಲವರು ಎಂಬುದಾಗಿ ತಿಲಕರ ವ್ಯಾಖ್ಯೆ ವಿವರಿಸುತ್ತದೆ. ಶಿಲ್ಪ ಮತ್ತು ಶುಲ್ಬ ಶಾಸ್ತ್ರ ಪಾರಂಗತರಾಗಿರುವ ಶಿಲ್ಪಿಗಳು ಯಜ್ಞ ಮಂಟಪ ವೇದಿ, ಚಿತಿ, ಯೂಪ ಮತ್ತು ಯಜ್ಞಾಯುಧಗಳನ್ನು ನಿರ್ಮಿಸಿ ಅವನ್ನು ಬಂಗಾರದ ಆಭರಣಗಳಿಂದ ಅಲಂಕರಿಸಿದರು ಎಂಬುದು ಈ ಶ್ಲೋಕದ ಅರ್ಥ.

ಅಯೋಧ್ಯಾ ನಗರವನ್ನು 'ಸರ್ವಯಂತ್ರಾಯುಧವತೀಂ'[೪೭] ಎಂದು ವರ್ಣಿಸಿದ್ದರೆ ಮಯಬ್ರಹ್ಮನಿರ್ಮಿತವಾದ ಲಂಕಾನಗರದ ಕೋಟೆಯನ್ನು 'ಯಂತ್ರಾಗಾರ ಸ್ತನೀ'[೪೮] ಎಂದು ಹೇಳಲಾಗಿದೆ. ಹನುಮಂತನು ಲಂಕೆಯ ಕೋಟೆಯ ಬಗ್ಗೆ ರಾಮನಿಗೆ ಹೇಳುತ್ತಾ ಆ ಕೋಟೆಯ ನಾಲ್ಕು ದಿಕ್ಕುಗಳ ದೊಡ್ಡ ಬಾಗಿಲುಗಳಲ್ಲೂ ಕಲ್ಲು ಮತ್ತು ಬಾಣಗಳನ್ನು ಎಸೆಯ ಬಲ್ಲ ನಾಲ್ಕು ಉಪಾಲಯಂತ್ರ ಗಳಿರುವುದನ್ನು ಹೇಳುತ್ತಾನೆ.[೪೯] ಜರಾಸಂಧನ ಮೇಲೆ ಕಲ್ಲುಗಳನ್ನು ಎಸೆದ ಅಶ್ಮಯಂತ್ರದ ಬಗ್ಗೆ ವಿವರಣೆ ಹರಿವಂಶದಲ್ಲಿ[೫೦] ದೊರೆಯುತ್ತದೆ.

ವೇದಗಳಲ್ಲಿ ಶಿಲ್ಪನಿರ್ಮಾಣ ದಕ್ಷರಾದ ತ್ವಷ್ಟ, ಭೃಗು, ಆಂಗಿರಸ, ಋಭುಗಳು, ಆಪ್ತ್ಯರು, ತಕ್ಷ, ಸುಪರ್ಣ, ಸಾನಗ, ಸನಾತನ, ಅಹಭೂನ, ಪ್ರತ್ನ, ಸುಪರ್ಣ, ನಾಭಾ ನೇದಿಷ್ಟ, ವಾಲಾಖಿಲ್ಯ, ವಿಪ್ರಚಿತ್ತಿ ದಧ್ಯಙ್ಙ್ ಆಥರ್ವಣ, ನಾರಾಶಂಸ, ಕಶ್ಯಪ, ಸುಕೀರ್ತಿ, ಆಭೂತಿ ತ್ವಾಷ್ಟ್ರ, ಸನಾರು, ಶಿಲ್ಪಃ ಕಾಶ್ಯಪ ಇತ್ಯಾದಿ ಶಿಲ್ಪಿಗಳು ಲೋಕಕಲ್ಯಾಣಕಾರಕವಾದ ಶಿಲ್ಪಗಳನ್ನು ನೆರವೇರಿಸಿ ವೇದಗಳಲ್ಲಿ ಬಹುಸ್ತುತಿ ಭಾಜನರಾಗಿದ್ದಾರೆ.[೫೧] ಮತ್ಸ್ಯ ಪುರಾಣದಲ್ಲಿ ಭೃಗು, ಅತ್ರಿ, ವಸಿಷ್ಠ, ವಿಶ್ವಕರ್ಮ, ಮಯ, ನಾರದ ನಗ್ನಜಿತ್, ವಿಶಾಲಾಕ್ಷ ಪುರಂದರ, ಬ್ರಹ್ಮಕುಮಾರ, ನಂದೀಶ, ಶೌನಕ, ಗರ್ಗ, ವಾಸುದೇವ, ಅನಿರುದ್ಧ, ಶುಕ್ರ, ಬೃಹಸ್ಪತಿ ಎಂಬ ಹದಿನೆಂಟು ಶಿಲ್ಪರ್ಷಿಗಳನ್ನು ಹೇಳಲಾಗಿದೆ.[೫೨] ಅಗಸ್ತ್ಯ, ಕಾಶ್ಯಪ, ಭೃಗು, ಗೌತಮ, ಭಾರ್ಗವ, ಗೌಳ, ಋಷಿ, ವಿಶ್ವಕರ್ಮ, ಬೋಧಕ, ತ್ವಷ್ಟ್ರ, ಮನು, ಮಯ, ಯವನ, ಮಾಣಿತ್ಥ, ಪರಾಶರ, ದೈವಜ್ಞ, ಮಾನಸಾರ, ದೀಪ್ತಿ, ಅತ್ರಿ ಮರೀಚಿ, ಕೌಂಡಿನ್ಯ, ವಿಖನಸ ಎಂಬ ಇಪ್ಪತ್ತೊಂದು ಶಿಲ್ಪರ್ಷಿಗಳನ್ನು ಗಾರ್ಗೇಯ ಆಗಮ ಹೇಳುತ್ತದೆ.[೫೩]

ಭಾರತದಲ್ಲಿ ಹೀಗೆ ಶಿಲ್ಪಶಾಸ್ತ್ರದ ಬಹು ವ್ಯಾಪಕವಾದ ಪರಂಪರೆಯು ಬೆಳೆದು ಬಂದಿದೆ. ಶಿಲ್ಪಶಾಸ್ತ್ರವನ್ನು ಉಪವೇದ ವೆಂದು ಪರಿಗಣಿಸಿ ಅದು ಅಥರ್ವವೇದಕ್ಕೆ ಸಂಬಂಧಿಸಿದೆ.

ಶಿಲ್ಪರ್ಷಿಗಳೇ ಭಾರತದ ಉದ್ದ ಅಗಲಕ್ಕೂ ದೇವಾಲಯ ಶಿಲ್ಪದ ನಿರ್ಮಾಪಕರಾಗಿದ್ದಾರೆ. ಸಮರಾಂಗಣ ಸೂತ್ರಧಾರನು ಯಂತ್ರ ನಿರ್ಮಾಣ ಕ್ರಮವನ್ನು ಗೊತ್ತಿಲ್ಲದೆ ಹೇಳಿಲ್ಲ. ಅದನ್ನು ರಹಸ್ಯವಾಗಿರಿಸಬೇಕೆಂಬ ಉದ್ದೇಶದಿಂದಲೇ ಹೇಳಿಲ್ಲ. ಒಂದು ವೇಳೆ ಅದನ್ನು ಬಹಿರಂಗ ಪಡಿಸಿದರೆ ಯಂತ್ರಗಳು ಈ ಪರಂಪರೆಯ

ಶಿಲ್ಪರ್ಷಿಗಳೇ ಉದ್ದೇಶಿತ ಫಲವನ್ನು ಕೊಡುವುದಿಲ್ಲ[೫೪] ಎಂದು ವಿವರಣೆಯನ್ನು ಹೇಳಿರುವುದನ್ನು ಗಮನಿಸಬೇಕು. ಈ ರೀತಿಯ ರಹಸ್ಯಗಳನ್ನು ಪರಂಪರೆಯಿಂದ ಕಾಪಾಡುತ್ತಾ ಬಂದಿರುವುದೇ ರಹಸ್ಯದ ಕೀಲಿ

ಇಂದಿಗೂ ಆಧುನಿಕ ತಂತ್ರಜ್ಞರೂ ಕೂಡ ಬೆರಗಾಗಿ ನಿಲ್ಲುವಂತಹ ಅದ್ಭುತ ಕಟ್ಟಡ ನಿರ್ಮಾಣಗಳನ್ನು ಪಡೆದಿರುವ ಭಾರತೀಯ ಶಿಲ್ಪ ಪರಂಪರೆಯನ್ನು ಹಗುರವಾಗಿ ಕಾಣುವುದು ಸರಿಯಲ್ಲವೆಂಬುದು ಸಮರಾಂಗಣ ಸೂತ್ರಧಾರ ಕೃತಿಯ ಈ ಅಧ್ಯಾಯವು ನಮಗೆ ಮನವರಿಕೆ ಮಾಡಿಕೊಡುತ್ತದೆ. ಸಮರಾಂಗಣ ಸೂತ್ರಧಾರಕಾರನಿಗೆ ಸುಳ್ಳು ಹೇಳುವ ಅವಶ್ಯಕತೆ ಇಲ್ಲ ಅಂತಾಗಿ ಈ ರೀತಿಯ ತಿಳಿವಿನ ಬೆಳಕಿನಲ್ಲಿ ಕಾವ್ಯಗಳಲ್ಲಿ, ಇತರ ಪ್ರಾಚೀನ ಐತಿಹಾಸಿಕ ಬರಹಗಳಲ್ಲಿ ಇರುವ ಯಂತ್ರ ವಿಷಯದ ಸಾಮಗ್ರಿಯನ್ನು ಪುನರ್ ಮೌಲ್ಯೀಕರಣ ಮಾಡಬೇಕಾಗಿರುವ ಅವಶ್ಯಕತೆಯು ಬಹುವಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಈ ಶಾಸ್ತ್ರಗ್ರಂಥವನ್ನು ಧಾರಾನಗರದ ಮಹಾರಾಜಾಧಿರಾಜನಾಗಿದ್ದ ಭೋಜನು ರಚಿಸಿದ್ದಾನೆ ಎಂಬುದಾಗಿ ಸಂಪಾದಕರು ಹೇಳಿದ್ದಾರೆ. ಈ ಕೃತಿಯನ್ನು ಮೊದಲಿಗೆ ಎರಡು ಭಾಗಗಳಲ್ಲಿ ೧೯೨೪ ಮತ್ತು ೧೯೨೫ರಲ್ಲಿ ಮಹಾಮಹೋಪಾಧ್ಯಾಯ ಟಿ. ಗಣಪತಿ ಶಾಸ್ತ್ರಿ ಅವರು ತರುವಾಯ ೧೯೬೬ರಲ್ಲಿ ಡಾ|| ವಾಸುದೇವ ಶರಣ ಅಗ್ರವಾಲ ಅವರು ಒಂದೇ ಸಂಪುಟವಾಗಿ ಸಂಪಾದಿಸಿ ಎರಡು ಸಂಸ್ಕರಣಗಳಲ್ಲಿ ಪ್ರಕಟವಾಗಿದೆ. ಎರಡು ಸಂಸ್ಕರಣಗಳನ್ನು ಪ್ರಕಟಿಸಿರುವವರು ಬರೋಡದ ಓರಿಯೆಂಟಲ್ ಇನ್ಸ್‌ಟಿಟ್ಯೂಟ್. ಪಾರಂಪರಿಕ ಶಿಲ್ಪಿಗಳು ಮಾತ್ರ ಈ ಶಾಸ್ತ್ರವು ಸಮರಾಂಗಣ ಸೂತ್ರಧಾರ ಎಂಬ ಹೆಸರಿನ ಶಿಲ್ಪರ್ಷಿಯಿಂದ ಉಪದಿಷ್ಟವಾಗಿರುವುದು ಎಂದೇ ನಂಬುತ್ತಾರೆ.

೨. ೮೩ ಅಧ್ಯಾಯಗಳ ವ್ಯಾಪ್ತಿಯ ಈ ಗ್ರಂಥದಲ್ಲಿ ೩೧ನೆಯ ಅಧ್ಯಾಯವನ್ನು 'ಯಂತ್ರವಿಧಾನ' ಎಂದು ಕರೆಯಲಾಗಿದೆ.

೩. ಡಾ|| ವಾ. ಶೇ. ಅಗ್ರವಾಲ; **ಸಮರಾಂಗಣ ಸೂತ್ರಧಾರ**, ಅ ೩೧ : ಶ್ಲೋ ೩.

೪. ಅದೇ, ೩೧:೪.

೫. ತಸ್ಯ ಬೀಜಂ ಚತುರ್ಧಾಸ್ಯಾತ್ ಕ್ಷಿತಿರಾಪೋऽನಲೋऽನಿಲಃ। - ಅದೇ ೩೧.೫.

೬. ಭಿನ್ನಃ ಸೂತಶ್ಚಯೈರುಕ್ತಸ್ತೇ ಚ ಸಮ್ಯಙ್ನ ನ ಜಾನತೇ।
ಪ್ರಕೃತ್ಯಾ ಪಾರ್ಥಿವಃ ಸೂತ ಸ್ತಯಾತ್ ತತ್ರ ಕ್ರಿಯಾ ಭವೇತ್||
ಪಾರ್ಥಿವತ್ವಾದಯಮತೋ ನ ಕದಾಚಿದ್ ವಿಭಿದ್ಯತೇ। - ಅದೇ, ೩೧:೬-೭.

೭. ಅದೇ, ೩೧:೭-೯.

೮. ಸ್ವಯಂ ವಾಹಕ ಮೇಕಂ ಸ್ಯಾತ್ ಸಕೃತ್ಪ್ರೇರ್ಯಂ ತಥಾಪರಮ್।
ಅನ್ಯದಂತರಿತ ವಾಹ್ಯಂ ವಾಹ್ಯಮನ್ಯತ್ ತ್ವದೂರತಃ||
ಸ್ವಯಂ ವಾಹ್ಯಮಿಹೋತ್ಕೃಷ್ಟಂ ಹೀನಂ ಸ್ಯಾದಿತರತ್ ತ್ರಯಮ್।
ತೇಷು ಶಂಸಂತಿ ದೂರಸ್ಥಲಮಲಕ್ಷ್ಯಂ ನಿಕಟ ಸ್ಥಿತಮ್||
ಯದುತ್ಪನ್ನಮಲಕ್ಷ್ಯಂ ಯದೇಕಂ ಬಹುಷು ಸಾಧಕಮ್।
ತದನ್ಯದಪಿ ಶಂಸತಿ ಯಸ್ಮಾದ್ ವಿಸ್ಮಯ ಕೃನ್ನೃಣಾಮ್||
ಏಕಾ ಸ್ವೀಯಾ ಗತಿಶ್ಚಿತ್ರೇ ವಾಹ್ಯೋ ನ್ಯಾ ವಾಹ ಕಾಶ್ರಿತಾ।
ಅರಘಟ್ಟಾಶ್ರೀತೇ ಕೀಟೇ ದೃಶ್ಯತೇ ದ್ವಯಮಪ್ಯದಃ||
ಇತ್ಥಂ ಗತಿದ್ವಯವಶಾದ್ ವೈಚಿತ್ರ್ಯಂ ಕಲ್ಪಯೇತ್ ಸ್ವಯಮ್।
ಅಲಕ್ಷಿತಾ ವಿಚಿತ್ರತ್ವಂ ಯಸ್ಮಾದ್ ಯಂತ್ರೇಷು ಶಸ್ಯತೇ||
ಅನ್ಯತ್ ಸ್ಯಾದಂತರಾಪ್ರೇರ್ಯ ದ್ವಿತೀಯಂ ಮಧ್ಯಮಂ ತ್ವಿದಮ್।
ದ್ವಯ ತ್ರಯಾದಿ ಯೋಗೇನ ಚತುರ್ಣಾಮಪಿ ಯೋಗ ತಃ|| -
ಅದೇ, ೩೧: ೧೦-೧೫.

೯. ಅದೇ, ೩೧:೨೫-೨೭.

೧೦. ಅದೇ, ೩೧:೨೯.

೧೧. ಅದೇ, ೩೧:೩೩-೪೧.

೧೨. ಅದೇ, ೩೧: ೪೧-೪೪.

೧೩. ಯಥಾವದ್ಬೀಜ ಸಂಯೋಗಃ ಸೌಶ್ಲಿಷ್ಟಂ ಶ್ಲಕ್ಷ್ಣತಾಪಿ ಚ||
ಅಲಕ್ಷತಾ ನಿರ್ವಹಣಂ ಲಘುತ್ವಂ ಶಬ್ದಹೀನತಾ।
ಶಬ್ದೇ ಸಾಧ್ಯೇ ತದಾಧಿಕ್ಯ ಮಶೈಥಲ್ಯ ಮಗಾಢತಾ||
ವಹನೀಷು ಸಮಸ್ತಾನು ಸೌಶ್ಲಿಷ್ಟಂ ಚಾಸ್ಖಲದ್ಗತಿ।
ಯಥಾಭೀಷ್ಟಾರ್ಥಕಾರಿತ್ವಂ ಲಯತಾಲಾನುಗಾಮಿತಾ||
ಇಷ್ಟಕಾಲೇऽರ್ಥದರ್ಶಿತ್ವಂ ಪುನಃ ಸಮ್ಯಕ್ತ್ವಸಂವೃತಿಃ।
ಅನುಲ್ಬಣತ್ವಂ ತಾದ್ರೂಪ್ಯಂ ದಾರ್ಢ್ಯೋ ಮಸೃಣತಾ ತಥಾ||
ಚಿರಕಾಲ ಸಹತ್ವಂ ಚ ಯಂತ್ರಸ್ಯೈತೇ ಗುಣಾಃ ಸ್ಮೃತಾಃ। -
(ಅದೇ, ೩೧:೪೫-೪೯)

೧೪. ಅದೇ, ೩೧:೫೦-೭೧.

೧೫. ಹೆಚ್ಚಿನ ವಿವರಗಳಿಗೆ ನೋಡಿ: ಇದೇ ಲೇಖಕನ 'ಪ್ರಾಚೀನ ಭಾರತದಲ್ಲಿ ಯಂತ್ರ ಶಿಲ್ಪ', ಪುಟ ೨೦೫-೨೧೫ ೧೯೮೧, (ಸಂ) ಜಿ ಜ್ಞಾನಾನಂದ ಮತ್ತು ಸರಿತಾ ಜ್ಞಾನಾನಂದ, ಶ್ರೀ ನಾಭಾ ಸನ್ಮಾನ ಸಮಿತಿ, ಕೆಜಿಎಫ್.

೧೬. ಕೌಟಲೀಯ ಅರ್ಥಶಾಸ್ತ್ರಂ (ಸಂ: ಡಾ|| ರಘುನಾಥ ಸಿಂಹ) XIII: ೪, ಕೃಷ್ಣದಾಸ್ ಅಕಾಡೆಮಿ, ವಾರಣಾಸಿ, ೧೯೮೮.

೧೭. ಯಂತ್ರ ಮಾತೃಕೇತಿ। ಸಜೀವಾನಾಂ ನಿರ್ಜೀವಾನಾಂ ಯಂತ್ರಾಣಾಂ ಯಾನೋದಕ ಸಂಗ್ರಾಮಾರ್ಥಂ ಘಟನಾಶಾಸ್ತ್ರಂ ವಿಶ್ವಕರ್ಮ ಪ್ರೋಕ್ತಮ್.

೧೮. ಅದೇ, ೩೧ : ೧೦೦-೧೦೮.

೧೯. ಅದೇ, ೩೧ : ೧೦೯-೧೧೬

೨೦. ಅದೇ, ೩೧:೧೧೭-೧೪೧

೨೨. ಅದೇ, ೩೧:೧೪೮

೨೩. ಕಾಳಿದಾಸ : ಮೇಘ ದಾತುಂ, ೧:೬೧

೨೪. ಅದೇ, ೩೧ : ೧೪೯-೧೫೫

೨೫. ಅದೇ, ೩೧ : ೧೫೭-೧೬೬

೨೬. ಅದೇ, ೩೧:೧೬೭-೧೭೨

೨೭. ಅದೇ, ೩೧:೧೬೩-೧೭೪

೨೮. ಅದೇ, ೩೧:೧೭೫-೧೮೭

೨೯. ಅದೇ, ೩೧:೧೮೮-೧೯೪

೩೦ ಅದೇ, ೩೧:೧೯೫-೨೦೦

೩೧. ಅದೇ, ೩೧:೨೦೧-೨೦೮

೩೨. ಅದೇ, ೩೧:೨೦೯-೨೧೮

೩೩. ಲಘುದಾರುಮಯಂ ಮಹಾವಿಹಂಗಂ ದೃಢ ಸುಶ್ಲಿಷ್ಟತನುಂ ವಿಧಾಯ ತಸ್ಯ। ಉದರೇ ರಸಯಂತ್ರ ಮಾದಧೀತ ಜ್ವಲನಾಧಾರ ಮಧೋಽಸ್ಯ ಚಾಗ್ನಿ ಪೂರ್ಣಮ್॥
ತತ್ರಾರೂಢಃ ಪೂರುಷಸ್ತಸ್ಯ ಪಕ್ಷದ್ವಂದ್ವೋಚ್ಚಾಲಪ್ರೋಜ್ಝಿತೇನಾಲಿಲೇನ। ಸುಪ್ತಸ್ವಾಂತಃ ಪಾರದಸ್ಯಾಸ್ಯ ಶಕ್ತ್ಯಾ ಚಿತ್ರಂ ಕುರ್ವನ್ನಂಬರೇ ಯಾತಿ ದೂರಮ್॥
ಇತ್ಥಮೇವ ಸುರಮಂದ್ರಿತುಲ್ಯಂ ಸಂಚಲತ್ಯ ಲಘು ದಾರುಮಿಮಾನಮ್। ಆದಧೀತ ವಿಧಿನಾ ಚತುರೋತಽಂಸ್ತಸ್ಯ ಪಾರದ ಭೃತಾನ್ ದೃಢಕುಂಭಾನ್॥
ಅಯಃ ಕಪಾಲಾಹಿತ ಮಂದವಹ್ನಿ ಪ್ರತಪ್ತ ತ್ಕುಂಭಭುವಾ ಗುಣೇನ। ವ್ಯೋಮ್ನೋ ಝುಗಿತ್ಯಾಭರಣತ್ವಮೇತಿ ಸಂತಪ್ತಗರ್ಜದ್ರಸಾರಾಜ ಶಕ್ತ್ಯಾ॥
-ಅದೇ, ೩೧:೯೫-೯೮

೩೪. ಯಂತ್ರಾಣಿ ಯಾ ದೃಷ್ಟಾನಿ ಕೀರ್ತಿತಾನ್ಯತ್ರ ತಾನ್ಯಪಿ। - ಅದೇ, ೩೧:೮೨

೩೫. ಅಗ್ರತಶ್ಚ ಪುನರ್ಬ್ರೂಮಃ ಕಥಿತಂ ಯತ್ ಪುರಾತನ್ಯೈಃ। - ಅದೇ, ೩೧:೮೪

೩೬. ಯಂತ್ರಾಣಾಂ ಘಟನಾ ನೋಕ್ತಾ ಗುಪ್ತ್ಯರ್ಥಂ ನಾಜ್ಞತಾವಶಾತ್॥ ತತ್ರಹೇತುರಯಂ ಜ್ಞೇಯೋ ವ್ಯಕ್ತಾ ನೈತೇ ಫಲಪ್ರದಾಃ। - ಅದೇ, ೩೧:೭೯-೮೦

೩೭. ಅದೇ, ೩೧-೮೭

೩೮. ಅಥ ಯದ್ರಾಜಾನಾ ಗವಿಷ್ಟೌ ಸರತ್ ಸರಣ್ಯಃ ಕಾರವೇ ಜರಣ್ಯುಃ। ವಿಪ್ರಃ ಪೇಷ್ಟಃ ಸಲ ಹ್ಯೇಷಾಂ ಬಭೂವ ಪರಾ ಚ ವಕ್ಷದುತ ಪರ್ಷದೇನಾನ್॥
-ಋಗ್ವೇದ ೧೦:೬೧:೨೩, ಸ್ವಾಧ್ಯಾಯ ಮಂಡಲ, ಪರಡಿ

೩೯. ಪೂರ್ವಭಾಗ, ತೃತೀಯ ಪ್ರಪಾಠಕ

೪೦. ಏವೇಂದ್ರಾಯ ವೃಷಭಾಯ ವೃಷ್ಣೇ ಬ್ರಹ್ಮ ಕರ್ಮ ಭೃಗವೋ ನ ರಥಮ್। ನೂ ಚಿಥ್ ಯಥಾ ನಃ ಸಖ್ಯಾ ವಿಯೋಷದಸನ್ನ ಉಗ್ರೋಽವಿತಾ ತನೂಪಾಃ॥
ಋಗ್ವೇದ., ೪:೧೬:೨೦, ಸ್ವಾಧ್ಯಾಯಮಂಡಲ, ಪರಡಿ

೪೧. **ಋಗ್ವೇದ.**, ೧೦:೩೯:೧೪ ಸ್ವಾಧ್ಯಾಯ ಮಂಡಲ, ಪರಡಿ

೪೨. ಯಜುರ್ಬ್ರಾಹ್ಮಣ, ಅಷ್ಟಕ ೧:ಪು ೧.

೪೩. ಸಗೀಷ್ಪತೀಷ್ಟ್ವಾ ಸ್ಥಪತಿಃ। - ನಾಮಲಿಂಗಾನುಶಾಸನ, ಬ್ರಹ್ಮವರ್ಗ

೪೪. **ಋಗ್ವೇದ**, ೧೦:೧೬೬:೪, ಸ್ವಾಧ್ಯಾಯ ಮಂಡಲ, ಪರಡಿ

೪೫. **ಕಾತ್ಯಾಯನೀಯ ಶುಲ್ಕ ಸೂತ್ರಮ್** (ಕರ್ಕ, ಮಹೀಧರಭಾಷ್ಯೇಚ ಸಂವಲಿತಂ), ಚೌಖಂಬಾ ಅಮರ ಭಾರತೀ ಪ್ರಕಾಶನ, ವಾರಣಾಸಿ

೪೬. **ವಾಲ್ಮೀಕಿ ರಾಮಾಯಣ**, ಬಾಲಕಾಂಡ, ಸರ್ಗ ೧೪:೨೧, ಗೀತಾ ಪ್ರೆಸ್, ಗೋರಖ್‌ಪುರ್

೪೭. ಅದೇ, ಬಾಲಕಾಂಡ, ೫:೧೦

೪೮. ಅದೇ, ಸುಂದರಕಾಂಡ, ೩:೧೮

೪೯. ತತ್ರೇಷೂ ಪಲಯಂತ್ರಾಣಿ ಬಲವಂತಿ ಮಹಾಂತಿ ಚಾ। - ಅದೇ, ಯುದ್ಧಕಾಂಡ, ೩: ೧೨

೫೦. ಹರಿವಂಶ, ೨:೪೨:೨೧

೫೧. ಜಿ. ಜ್ಞಾನಾನಂದ; (೧೯೯೨), **ವಾಸ್ತುಪುರುಷ : ನೆಲೆ-ಹಿನ್ನೆಲೆ**, ಪು. ೨೦, ಸಂಕೃತಿ ಸಾಹಿತ್ಯಪ್ರಸಾರ ಸಮಿತಿ, ಕೆಜಿಎಫ್,

೫೨. ಮತ್ಸ್ಯ ಪುರಾಣ, ಅ ೨೫೦-೨-೪ ಗೀತಾಪ್ರೆಸ್, ಗೋರಖಪುರ್

೫೩. ಯಲವರ್ತಿ ಆಂಜನೇಯ ಶಾಸ್ತ್ರಿ: **ಗಾರ್ಗೇಯ ಆಗಮಮು**, ೧ : ೨೪-೨೬ (೧೯೫೫), ಅರುಣೋದಯ ಗ್ರಂಥಮಾಲಾ, ದುವ್ವೂರು (ಕಡಪಾಜಿಲ್ಲೆ) (ತೆಲುಗು ಲಿಪಿ)

೫೪. ಯಂತ್ರಾಣಾಂ ಘಟನಾ ನೋಕ್ತಾ ಗುಪ್ತ್ಯರ್ಥಂ ನಾಜ್ಞತಾವಶಾತ್॥ ತತ್ರ ಹೇತುರಯಂ ಜ್ಞೇಯೋ ವ್ಯಕ್ತಾ ನೈತೇ ಫಲಪ್ರದಾ।-
-ಸಮರಾಂಗಣಸೂತ್ರಧಾರ, ೩೧:೭೯-೮೦

ಕೆ. ನಾರಾಯಣ ನಾಯಕ್*

ಕನ್ನರಪಾಡಿಯ ಜಯದುರ್ಗಾ



ಕರಾವಳಿ ಕರ್ನಾಟಕವು ಶಕ್ತಿ ದೇವಿಯ ದೇವಾಲಯಗಳಿಂದ ಸಂಪನ್ನವಾಗಿದೆ. ಅದರಲ್ಲೂ "ರಜತ ಪೀಠಕ್ಷೇತ್ರ" ಎಂದು ಪ್ರಸಿದ್ಧಿ ಹೊಂದಿರುವ ಉಡುಪಿ ನಗರ ಪರಿಸರವು 'ಶಕ್ತಿ'ಯ ಆರಾಧನಾ ಕೇಂದ್ರವೆನಿಸಿದೆ. ಪ್ರಾಚೀನ ನಾಗರಿಕತೆಗಳಲ್ಲಿ ಕಂಡು ಬಂದಿರುವ ಮಾತೃದೇವತೆಯ ಆರಾಧನೆಯ ಒಂದು ಪ್ರಕಾರವೇ ಶಕ್ತಿ ದೇವಿಯ ಆರಾಧನೆಯಾಗಿದೆ. "ಇಡೀ ವಿಶ್ವವೇ ಶಕ್ತಿಯ ಒಂದು ತೇಜಃ ಪುಂಜ[೧] ಮಹಿಷಮರ್ದಿನಿ, ದುರ್ಗಾ ಪರಮೇಶ್ವರಿ, ಮಹಾಕಾಳಿ, ಕಾತ್ಯಾಯನೀ, ಮಹಾದೇವಿ, ಇಂದ್ರಾಣೀ, ಅಮೃತೇಶ್ವರಿ, ರಾಜರಾಜೇಶ್ವರಿ, ಚಾಮುಂಡೇಶ್ವರಿ, ಪಾರ್ವತಿ, ಅನ್ನಪೂರ್ಣೇಶ್ವರಿ, ಭವಾನಿ, ಮೂಕಾಂಬಿಕಾ - ಎಂಬಿತ್ಯಾದಿ ಅಸಂಖ್ಯಾತ ರೂಪ, ನಾಮ, ಶಕ್ತಿ ಸ್ವರೂಪಗಳನ್ನು ತಳೆದಿರುವ ಶಕ್ತಿದೇವಿಯ ದೇಗುಲಗಳನ್ನು ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಎಲ್ಲೆಡೆಗಳಲ್ಲೂ ಕಾಣಬಹುದಾಗಿದೆ.[೨] "ಬ್ರಹ್ಮಶಕ್ತಿಯಾಗಿ ಸರಸ್ವತಿ, ವಿಷ್ಣುಶಕ್ತಿಯಾಗಿ ಲಕ್ಷ್ಮೀ, ಶಿವಶಕ್ತಿಯಾಗಿ ಪಾರ್ವತಿ ಎನಿಸಿರುವ ಶಕ್ತಿ; ತ್ರಿಮೂರ್ತಿಗಳಿಗೂ ಆದಿಯಾಗಿರುವ ಆದಿಶಕ್ತಿಯೂ ಹೌದು. ಇಂತಹ ಶಕ್ತಿದೇವಿ "ಅನಂತ ರೂಪ-ಅನನ್ಯ ಶಕ್ತಿ ಹೊಂದಿರುವ ದಿವ್ಯ ಆರಾಧನಾ ಮೂರ್ತಿಯೆನಿಸಿರುವಳು.[೩]

ಉಡುಪಿ ನಗರದ ಪಡುವಣ ದಿಸೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿಯ[೪] ಬಳಿಯಲ್ಲಿ, ಕಡೇಕಾರ್ ಗ್ರಾಮದೇವತೆಯಾಗಿರುವ ಕನ್ನರಪಾಡಿಯ ಸುಪ್ರಸಿದ್ಧ ಶ್ರೀ ಜಯದುರ್ಗಾ ಪರಮೇಶ್ವರಿ ದೇವಾಲಯವಿದೆ. ಇದು ಕಿನ್ನಿಮೂಲ್ಕಿಯ ಸ್ವಾಗತ ಗೋಪುರದಿಂದ ಸು. ೨೦೦ ಮೀಟರುಗಳಷ್ಟು ದೂರದಲ್ಲಿದೆ. ಉಡುಪಿಯಲ್ಲಿ ಪ್ರಾಚೀನವಾಗಿರುವ ಶ್ರೀ ಅನಂತೇಶ್ವರ ಮತ್ತು ಶ್ರೀ ಚಂದ್ರಮೌಳೀಶ್ವರ ದೇವಾಲಯಗಳ ನಾಲ್ಕು ದಿಶೆಗಳಲ್ಲಿ ನಾಲ್ಕು ದುರ್ಗಾಲಯಗಳು ಹಾಗೂ ನಾಲ್ಕು ನಾಗಾಲಯಗಳು[೫] ಇವೆ. ಈ ದುರ್ಗಾಲಯಗಳು ಇಂತಿವೆ.

೧. ಕಡಿಯಾಳಿಯ ಶ್ರೀ ಮಹಿಷಮರ್ದಿನಿ
೨. ಬೈಲೂರಿನ ಶ್ರೀ ಮಹಿಷಮರ್ದಿನಿ
೩. ಪುತ್ತೂರಿನ ಶ್ರೀ ದುರ್ಗಾಪರಮೇಶ್ವರಿ
೪. ಕನ್ನರ ಪಾಡಿಯ ಶ್ರೀ ಜಯದುರ್ಗಾ ಪರಮೇಶ್ವರಿ

ಜಯದುರ್ಗಾ ಎಂಬ ಹೆಸರಿರುವ ದೇವಿಯ ದೇವಾಲಯವು ಕರಾವಳಿ ಕರ್ನಾಟಕದಲ್ಲಿ ಇದೊಂದೇ ಎಂದು ಕಾಣುತ್ತದೆ.

ಕನ್ನರಪಾಡಿಯು, ಇತಿಹಾಸ ಪ್ರಸಿದ್ಧವಾದ ಉದ್ಯಾವರದ (ಉದಯಪುರ) ಸನಿಹದಲ್ಲಿಯೇ ಇದೆ. ಐತಿಹ್ಯದಂತೆ, ಕಣ್ವ ಋಷಿಯ ತಪಸ್ಸಿನ ಸ್ಥಳ ಇದಾಗಿದ್ದು, ದೇವಿಯು ಕಣ್ವಋಷಿಗೆ ಪ್ರತ್ಯಕ್ಷಳಾಗಿ ಇಲ್ಲಿಯೇ ನೆಲೆಸುವುದಾಗಿ ತಿಳಿಸಿ ಅದೃಶ್ಯಳಾದಳು. ಹೀಗಾಗಿ 'ಕಣ್ವರ' ಪಾಡಿ 'ಕನ್ನರ ಪಾಡಿ' ಎಂದು ಈ ಊರಿಗೆ ಹೆಸರಾಯಿತು. 'ಕಡೇಕಾರು', 'ಕನ್ನರಪಾಡಿ', ಇವುಗಳ ಹೆಸರೇ ಸೂಚಿಸುವಂತೆ ಒಂದು ಕಾಲದಲ್ಲಿ ಇಲ್ಲೆಲ್ಲಾ ದಟ್ಟಕಾಡು-ವನಗಳು ಇದ್ದಿರಬೇಕು. ನಯನ ಮನೋಹರವಾದ ಪ್ರಶಸ್ತವಾದ ಸುಂದರ ಪರಿಸರದಲ್ಲಿ ಜಯದುರ್ಗಾ ದೇವಳವಿದೆ.

* 'ನಿಸರ್ಗ', ಜಯದುರ್ಗಾ ನಗರ, ಕನ್ನರಪಾಡಿ, ಉಡುಪಿ - ೫೭೬ ೧೦೪

ದೇವಾಲಯ ಪ್ರವೇಶಕ್ಕೆ ಮೊದಲಾಗಿ "ಕಣ್ವ ಪುಷ್ಕರಣಿ" ಇದೆ. ಇದರ ಇಕ್ಕೆಲದಲ್ಲಿ ಕ್ಷೇತ್ರಪಾಲ ಮತ್ತು ಕಲ್ಲುಕುಟ್ಟಿಗ[೬] ಪರಿವಾರ ದೈವಗಳ ಸ್ಥಾನ (ತಾಣ) ಗಳಿವೆ. ಹೊರಪ್ರಾಕಾರದಲ್ಲಿ ನಂದೀಶ್ವರ (ನಂದಿಗೋಣ) ರಕ್ತೇಶ್ವರಿ[೭] ಪರಿವಾರ ದೈವಗಳು ಮತ್ತು ನಾಗಾಲಯ (ನಾಗಬನ) ಇವೆ. ಹಿಂಬದಿಯಲ್ಲಿ ಸ್ವಲ್ಪ ದೂರದಲ್ಲಿ ಬೊಬ್ಬರ್ಯ[೮] ದೈವದ ಗುಡಿಯೊಂದಿದೆ.

ದೇಗುಲದ ಮುಂದುಗಡೆಯಿರುವ ಕಲ್ಯಾಣಮಂಟಪ, ಹೊರಪ್ರಾಂಗಣದಲ್ಲಿರುವ ಧ್ವಜಸ್ತಂಭ ಮತ್ತು ಬಲಿಪೀಠಗಳನ್ನು ದಾಟಿ ಮುನ್ನಡೆದರೆ, ಒಳಪ್ರಾಂಗಣದಲ್ಲಿ ಚತುರಸ್ರ ಆಕಾರದ ತೀರ್ಥಮಂಟಪವನ್ನು ಕಾಣಬಹುದು. ಗರ್ಭಗೃಹವು ಮಧ್ಯಕಾಲೀನ ಚತುರಸ್ರವಾದ ಕಗ್ಗಲ್ಲಿನ ರಚನೆಯಾಗಿದೆ.[೯] ಶಿಲಾಮಯ ಶಿಖರ ಮತ್ತು ಕಳಸಗಳನ್ನು ಹೊಂದಿದೆ. ಹೊರಸುತ್ತಿನಲ್ಲಿ ಹನ್ನೆರಡು ಶಿಲಾಸ್ತಂಭ ಹಾಗು ಗರ್ಭಗುಡಿಯ ಸುತ್ತ ಪ್ರದಕ್ಷಿಣಪಥ ಹಾಗು ಜಗಲಿಯ ಪ್ರಾಕಾರವಿದೆ.

ಗರ್ಭಗೃಹದಲ್ಲಿರುವ ಸು. ೨೪೦ ಸೆಂ. ಮೀ. ಚಚ್ಚೌಕಾರದ ಏಕಶಿಲಾ ಹಾಸುಗಲ್ಲಿನ ಮೇಲೆ ೭೫ ಸೆಂ.ಮೀ. ಉದ್ದಗಲದ ೩೫ ಸೆ.ಮೀ. ಎತ್ತರದ ಪಾಣಿ ಪೀಠದ ಮೇಲೆ ಸು. ಒಂದು ಮೀಟರು ಎತ್ತರದ ದೇವಿಯ ಭವ್ಯ ಶಿಲಾಮೂರ್ತಿಯಿದೆ.[೧೦] ಇದೇ ಇಲ್ಲಿನ ಪ್ರಧಾನ ಆರಾಧನಾ ಮೂರ್ತಿ - ಶ್ರೀ ಜಯದುರ್ಗಾ ಪರಮೇಶ್ವರಿ ಇದು ಉತ್ತರಾಭಿಮುಖವಾಗಿದೆ. ಗರ್ಭಗೃಹದ ಮುಂಬದಿಯ ಇಕ್ಕೆಲಗಳಲ್ಲಿ ಪರಿವಾರ ದೇವತೆಗಳಾಗಿ ಶ್ರೀ ಮಹಾಗಣಪತಿ ಮತ್ತು ಶ್ರೀ ಸುಬ್ರಹ್ಮಣ್ಯ ದೇವರುಗಳ ಪ್ರತಿಷ್ಠಾಪನೆ ಇತ್ತೀಚೆಗೆ ನಡೆದಿರುತ್ತದೆ.


ಕನ್ನರಪಾಡಿಯ ಈ ದೇವಿಯ ಮೂರ್ತಿಯು; ದೇವಿ ಮಹಾತ್ಮ್ಯೆಯ ನಾಲ್ಕನೆಯ ಅಧ್ಯಾಯದಲ್ಲಿ ಹೇಳುವಂತೆ, ಶಿರದ ಮೇಲೆ ಚಂದ್ರ; ತ್ರಿನೇತ್ರೆ, ಚತುರ್ಭುಜೆ; ಒಂದೊಂದು ಕೈಯಲ್ಲಿ ಶಂಖ, ಚಕ್ರ, ಕೃಪಾಣ ಹಾಗೂ ಅಗ್ನಿತ್ರಿಶಿಖೆ ಧರಿಸಿ, ಸಿಂಹಕ್ಕೆ ಒರಗಿ ನಿಂತಿರುವಳು. "ದುರ್ಗೆಯರಲ್ಲಿ ಹಲವು ಬಗೆಗಳಿವೆ. ಆದರೆ, ನವದುರ್ಗೆಯ ರಾಗಿಯೇ ಪ್ರಚಲಿತವಿರುವ ಈ ದೇವಿ ಸಂಕುಲ ಒಂಭತ್ತೇ ಇರುತ್ತವೆ." ಕಾರಣಾಗಮದ (ಬ್ರಹ್ಮಾಂಡ ಪುರಾಣ) ಪ್ರಕಾರ ನವದುರ್ಗೆಯರು.[೧೧]

೧. ನೀಲಕಂಠಿ ೨. ಕ್ಷೇಮಹರಿ ೩. ಹರಸಿದ್ಧಿ ೪. ರುದ್ರಾಂಶ ದುರ್ಗಾ ೫. ವನದುರ್ಗಾ ೬. ಅಗ್ನಿದುರ್ಗಾ ೭. ಜಯದುರ್ಗಾ ೮. ವಿಂಧ್ಯಾವಾಸಿನಿ ೯ ರಿಪುಮಾರಿದುರ್ಗಾ.

ನವದುರ್ಗೆಯರಲ್ಲಿ ಏಳನೆಯವಳೇ ಜಯದುರ್ಗಾ. ಕನ್ನರ ಪಾಡಿಯ ಜಯದುರ್ಗಾ ದೇವಾಲಯದಲ್ಲಿ ನಿತ್ಯವೂ ಪಠಿಸುವ ಧ್ಯಾನಶ್ಲೋಕ ಇಂತಿದೆ.[೧೨]

ಕಾಲಾಭ್ರಾಭಾಂ ಕಟಾಕ್ಷೈರರಿಕುಲ ಭಯದಾಂ ಮೌಲಿ ಬದ್ಧೇಂದು ರೇಖಾಂ।
ಶಂಖಂ ಚಕ್ರಂ ಕೃಪಾಣಂ ತ್ರಿಶಿಖಮಪಿ ಕರೈರುದ್ವಹಂತೀಂ ತ್ರಿನೇತ್ರಾಂ॥
ಸಿಂಹಸ್ಕಂಧಾಧಿರೂಢಾಂ ತ್ರಿಭುವನಮಖಿಲಂ ತೇಜಸಾ ಪೂರಯಂತೀಂ।
ಧ್ಯಾಯೇದ್ದುರ್ಗಾಂ ಜಯಾಖ್ಯಾಂ ತ್ರಿದಶಪರಿವೃತಾಂ ಸೇವಿತಾಂ ಸಿದ್ಧಿಕಾಮೈಃ॥

ಹಿಂದೆ ಈ ದೇವಿಯನ್ನು 'ಪರಮೇಶ್ವರಿ' ಎಂದು ಕರೆಯುತ್ತಿರಬಹುದಾದರೂ, ಜಯದುರ್ಗಾದೇವಿಯ ಎಲ್ಲಾ ಲಕ್ಷಣ ಗಳಿರುವುದರಿಂದಲೂ, ಧ್ಯಾನಶ್ಲೋಕವು[೧೩] ಜಯದುರ್ಗಿಯದೇ ಆಗಿರುವುದರಿಂದಲೂ ಇದು ಜಯದುರ್ಗಾ ಎಂದೇ ಖಚಿತವಾಗಿ ತಿಳಿಯಬೇಕಾಗುತ್ತದೆ. ಧ್ಯಾನಶ್ಲೋಕದಲ್ಲಿ 'ತ್ರಿಶಿಖಾ' ಎಂದಿರುವುದು ತ್ರಿಶೂಲವೇ ಹೊರತು ಅಗ್ನಿ ತ್ರಿಶಿಖೆಗಳಲ್ಲ ಎಂದು ಡಾ।. ಜ್ಞಾನಾನಂದರು ಅಭಿಪ್ರಾಯಪಟ್ಟಿರುವರು. ತ್ರಿಶೂಲಕ್ಕೆ ಬದಲಾಗಿ ಅಗ್ನಿಯನ್ನೂ ಸಂಹಾರ ಶಕ್ತಿಯ ದ್ಯೋತಕ ಎಂದು



ಅರ್ಥೈಸಿ ಹೇಳಿರುವ ಅವಕಾಶವಿದೆ ಎಂಬುದಾಗಿ ಅವರು ಇದೇ ವಿಚಾರವನ್ನು ಪ್ರತಿಪಾದಿಸಿರುವರು. ದುರ್ಗಾಕೋಶದಲ್ಲಿ ಶಿಲ್ಪಶಾಸ್ತ್ರದ ಅನುಸಾರದ ರೇಖಾಚಿತ್ರದಲ್ಲಿ,[೧೪] ಅಗ್ನಿ ತ್ರಿಶಿಕಾ ಬದಲು ತ್ರಿಶೂಲವಿರುವುದಾದರೂ, ಕನ್ನರಪಾಡಿಯ ಜಯದುರ್ಗಾ ಅಗ್ನಿ ತ್ರಿಶಿಖಾ ಧರಿಸಿರುವುದು ಹಾಗು ಸಿಂಹದ ಮುಖ ಬಲಗಡೆಗಿರದೆ ಎಡಕ್ಕೆ ಇರುವುದೇ ವೈಶಿಷ್ಟ್ಯ. ಡಾ|| ಪಿ. ಗುರುರಾಜ ಭಟ್ಟರ ಅಭಿಪ್ರಾಯದಂತೆ ಅಪೂರ್ವವಾಗಿರುವ ಈ ಜಯದುರ್ಗಾ ವಿಗ್ರಹ ಸು. ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿದುದಾಗಿದೆ.

ಅಸುರರನ್ನು ಸಂಹರಿಸಿ, ಜಯಗಳಿಸಿ, ಭಕ್ತರನ್ನು ಪೊರೆಯಲು ನೆಲೆಸಿರುವ ಶಾಂತ ಸ್ವರೂಪಿಣಿ ದೇವಿಯೇ ಈ ಜಯದುರ್ಗೆ ಎಂಬ ಪ್ರತೀತಿಯಿದೆ. ಉದಿಯಾವರದಲ್ಲಿ ಆಳಿದ ಆಲೂಪ ರಾಜರ ಕೋಟೆಯ ಈಶಾನ್ಯ ದಿಶೆಯಲ್ಲಿರುವ ಈ ಜಯದುರ್ಗಾ ದುರ್ಗದ ರಕ್ಷಕ ದೇವತೆಯೆನಿಸಿ ಜಯದುರ್ಗಾ ನಾಮಾಂಕಿತಳಾಗಿರ ಬೇಕು.[೧೫] ೫೧ ಶಕ್ತಿಪೀಠಗಳಲ್ಲೊಂದಾಗಿರುವ ಬಂಗಾಳದ ಬರ್ದ್ವಾನ್‌ನಲ್ಲಿ ತ್ರಿಶೂಲವನ್ನು ಹಿಡಿದಿರುವ ಜಯದುರ್ಗಾ ದೇವಿಯನ್ನು ಆರಾಧಿಸಲಾಗುತ್ತದೆ.

ಈ ಜಯದುರ್ಗಾ ಪ್ರತಿಮೆಯ ಹಿಂಬದಿಯಲ್ಲಿ ಪಾದದಿಂದ ಶಿರಸ್ಸಿನವರೆಗೆ ಪ್ರಭಾವಳಿ ಕಂಡುಬರುತ್ತದೆ. ಕಡಿಯಾಳಿ ಮತ್ತು



ಅಂಬಲಪಾಡಿಯಲ್ಲಿ ದೇವಿಗೆ ಈ ಪ್ರಭಾವಳಿ ಇರುವುದಿಲ್ಲ. ಪುತ್ತೂರು (ಅಂಬಾಗಿಲು) ದುರ್ಗಾಪರಮೇಶ್ವರಿ ಲಿಂಗಸ್ವರೂಪಿ ದೇವಿಯಾಗಿರುತ್ತಾಳೆ. ಕಡಿಯಾಳಿ, ಬೈಲೂರಿನ ದೇವಾಲಯ ಗಳಲ್ಲಿರುವ ದೇವಿಮೂರ್ತಿಗಳು ಮಹಿಷಾಸುರನನ್ನು ಸಂಹರಿಸುವ ಉಗ್ರ ಸ್ವರೂಪಿಣಿಯಾರಾದರೆ, ಇಲ್ಲಿನ ದೇವಿ ಶಾಂತ ಸ್ವರೂಪಿಣಿಯಾಗಿರುತ್ತಾಳೆ.

ದೇವಾಲಯದ ಗರ್ಭಗೃಹದ ಬಲಬದಿಯ ಶಿಲಾಸ್ತಂಭ ದಲ್ಲಿರುವ ಶಾಸನವನ್ನು ಓದಿರುವ ಡಾ|| ಪಿ. ಎನ್. ನರಸಿಂಹ ಮೂರ್ತಿಯವರು ಶಾಸನದ ಪಾಠವನ್ನು ನೀಡಿರುತ್ತಾರೆ. ಅದು ಇಂತಿದೆ:

೧. *ಶ್ರೀಮತು ಪರಮೇಶ್ವರಿಯ*

೨. *ಸಂನಿಧಿಯಲು ಶಂಕರ ಕಂಣ*

೩. *ರಮನ ಹೆಂಡತಿ ಯಾತ್ರೆ ಮಾಡಿದ*

೪. *x x x (ಪೌಷ್ಯ) ಮಾಸ ಯೆಂಟ*

೫. *(ನೆಯ) x x x x ನಿನ ಪಡುವ x x*

೬. *ನ x x x x ಮೂರ್ತಿ x x x x ನೂರ*

೭. *ಹಂನೆರಡು ಆಳತೆ x x x x*

ಶಂಕರಕಂಣೂ[೧೬] ರಮನು ಈ ದೇವಾಲಯದ ಪರಿಸರದಲ್ಲಿದ್ದ ಆಢ್ಯವ್ಯಕ್ತಿಯಾಗಿರಬೇಕು. ಅವನ ಹೆಂಡತಿ ಯಾತ್ರೆ ಮಾಡಿದ ಬಗ್ಗೆ ಬಹುಶಃ ದೇವಿಯ ಬಲಿಮೂರ್ತಿಯನ್ನು ಒಪ್ಪಿಸಿರಬಹುದು. ಸ್ತ್ರೀಯರ ಸ್ಥಾನಮಾನ, ದಾನಧರ್ಮ, ಇತ್ಯಾದಿ ವಿಷಯದ ಬಗ್ಗೆ ಊಹೆ ಮಾಡಬಹುದು. (ಶಾಸನ ಕಾಲ, ಸು. ೧೬-೧೭ ನೇ ಶತಮಾನ) ಇಲ್ಲಿ ಬೇರೆ ಯಾವ ಶಾಸನವು ಲಭ್ಯವಿಲ್ಲ.

ಜಯದುರ್ಗಾ ದೇವಾಲಯವು ಪ್ರಾಚೀನವಾಗಿದ್ದು, ಇಲ್ಲಿನ ದೇವಿಯ ಮಹಿಮೆ, ಕಾರಣಿಕಗಳು, ಅನುಗ್ರಹ ಇತ್ಯಾದಿ ಬಗ್ಗೆ ಅನೇಕ ಐತಿಹ್ಯಗಳಿವೆ. ಮಯೂರವರ್ಮನೆಂಬ ಉದಯಪುರದ (ಉದ್ಯಾವರ) ಅರಸನು[೧೭] ಸಂತಾನಹೀನನಾಗಿದ್ದನು. ಶ್ರೀ ದೇವಿಯ ದರ್ಶನವನ್ನು ಮಾಡಿ ಸಂತಾನಭಾಗ್ಯವನ್ನು ಕರುಣಿಸೆಂದು ಬೇಡಿಕೊಂಡನು. ಅವನಿಗೆ ಪುತ್ರಸಂತಾನವಾಯಿತು. ಉದಯ ವರ್ಮನೆಂದು[೧೮] ಪ್ರಖ್ಯಾತನಾದ ರಾಜಕುವರನು ಮುಂದೆ ರಾಜನಾಗಿ ರಾಜ್ಯವಾಳುತ್ತಿದ್ದಾಗ ಶತ್ರುಗಳಿಂದ ಸೆರೆಹಿಡಿಯಲ್ಪಟ್ಟಾಗ, ಜಯದುರ್ಗೆಯ ಅನುಗ್ರಹದಿಂದ ಅವನ ಮಂತ್ರಿಯು ಶತ್ರು ಗಳನ್ನು ಪರಾಜಯಗೊಳಿಸಲು, ಪುನಃ ಉದಯವರ್ಮರಾಜನು ರಾಜ್ಯವಾಳುವಂತಾಯಿತು.

ಇನ್ನೊಂದು ಐತಿಹ್ಯ : ಉಡುಪಿಯ ಸೋದೆಮಠದ ಯತಿಗಳಾದ ಶ್ರೀ ವಾದಿರಾಜ ಸ್ವಾಮಿಗಳಿಗೆ ಸಂಬಂಧಿಸಿದು ದಾಗಿದೆ.[೧೯] ಅವರು ತಮ್ಮ ಉದಿಯಾವರದ ಮಠದಿಂದ ಉಡುಪಿಗೆ ಬರುವಾಗ ಕನ್ನರಪಾಡಿಯಲ್ಲಿ ಶ್ರೀ ದೇವಿಯ ಪೂಜೆಯ ನಡೆಯುತ್ತಿತ್ತು. ವಾದಿರಾಜಸ್ವಾಮಿಗಳು ಭಕ್ತಿಪರವಶರಾಗಿ ಶ್ರೀ

ದೇವಿಯ ಹೂವಿನ ಪೂಜೆಯನ್ನು ನೋಡುತ್ತಾ, ದೇವಿಯ ಸ್ತೋತ್ರವನ್ನು ರಚಿಸಿದರು. ದೇವಿಗೆ ಆರತಿಯೆತ್ತಿ, ಗಂಧ ಪ್ರಸಾದವನ್ನು ಸ್ವೀಕರಿಸಿದರು. ದ್ವಯ ಮಠಗಳಾದ ಸೋದೆ-ಶೀರೂರು ಮಠದ ಯತಿಗಳು ನವರಾತ್ರಿ ಕಾಲದಲ್ಲಿ ಶ್ರೀ ದೇವಿಯ ದರುಶನ ಪಡೆದುಕೊಂಡು ಹೋಗುವ ವಾಡಿಕೆಯಿದೆ. ಅಲ್ಲದೆ ಪರ್ಯಾಯ ಪೀಠಾರೋಹಣ ಪೂರ್ವಭಾವಿಯಾಗಿ ಯತಿಗಳು ಶ್ರೀ ಜಯದುರ್ಗೆಯ ದರುಶನ ಮಾಡಿ, ವರಪ್ರಸಾದವನ್ನು ಸ್ವೀಕರಿಸುವ ಸಂಪ್ರದಾಯವಿದೆ ಎಂಬ ಐತಿಹ್ಯವೂ ಇದೆ.

ಟಿಪ್ಪುಸುಲ್ತಾನನ ಸೈನಿಕರು ಅವನ ಅರಿವಿಗೆ ಬಾರದಂತೆ ಕನ್ನರ ಪಾಡಿಗೆ ಬಂದು ದೇವಾಲಯಕ್ಕೆ ನುಗ್ಗಿ ಕೊಳ್ಳೆ ಹೊಡಿಯುವ ಸಂದರ್ಭದಲ್ಲಿ ಶ್ರೀ ದೇವಿಯ ಹಣೆಯ ಮಧ್ಯದ ಕಣ್ಣಿನಿಂದ ಜ್ಯೋತಿಯೊಂದು ಹೊರಟು ಸೈನಿಕರನ್ನು ಘಾತಿಸಿದ ಐತಿಹ್ಯ ಬಗ್ಗೆ ಪರಿಸರದ ಹಿರಿಯರು ಮಾಹಿತಿ ನೀಡಿದ್ದಾರೆ. ಶ್ರೀ ಜಯದುರ್ಗೆ ದೇವಿಯು ಮಧ್ಯರಾತ್ರಿ ವೇಳೆಯಲ್ಲಿ ಕನ್ನರಪಾಡಿಯಿಂದ ಇಂದ್ರಾಳಿಯ ಇಂದ್ರಾಣಿ ದೇಗುಲದವರೆಗೆ ಸಂಚಾರಮಾಡುವ (ಸವಾರಿ) ಪರಿಪಾಠವಿದೆ ಯೆಂಬುದಾಗಿ ಜನಜನಿತ ಐತಿಹ್ಯ ಕೇಳಿಬರುತ್ತದೆ. ದೇವಿಗೆ ಮಲ್ಲಿಗೆ ಹೂ ಎಂದರೆ ಅತೀ ಪ್ರೀತಿ. ಭಕ್ತರು ಮಲ್ಲಿಗೆ ಹೂವನ್ನು ಅರ್ಪಿಸುವ ಸೇವೆ ಇಲ್ಲಿ ನಡೆಯುತ್ತದೆ. ಮಲ್ಲಿಗೆ ಹೂವಿನ ಮೇಲೆ ಶ್ರೀ ದೇವಿಗೆ ಇರುವ ಪ್ರೀತಿಯ ಬಗ್ಗೆಯೂ ಅನೇಕ ಐತಿಹ್ಯಗಳಿವೆ. ಜಯದುರ್ಗೆಗೆ ಯಕ್ಷಗಾನ ಬಯಲಾಟದ ಹರಕೆಯು ತುಂಬಾ ಇಷ್ಟವಾದುದು. ಆದರೆ "ದೇವಿ ಮಹಾತ್ಮೆ" ಪ್ರಸಂಗವನ್ನು ಆಡುವಂತಿಲ್ಲ! ದೇವಿಯ ಮಹಿಮೆಯ ಕುರಿತಾದ ಅನೇಕ ಐತಿಹ್ಯಗಳು ಇಲ್ಲಿ ಮನೆ ಮಾಡಿವೆ.

ಶ್ರೀ ದೇವಿಗೆ ಆಗಮೋಕ್ತ ತ್ರಿಕಾಲಪೂಜೆ ಸಾಂಗವಾಗಿ ಜರಗುತ್ತದೆ. ಉಷಾಃಕಾಲ ಪೂಜೆ, ಪಂಚಾಮೃತ, ಕಲಶಪೂಜೆ, ಕಲಶಾಭಿಷೇಕ ನಡೆದಬಳಿಕ ಅಲಂಕಾರ ಪೂಜೆ ನಡೆಯುತ್ತದೆ. ಮಧ್ಯಾಹ್ನ ಮಹಾಪೂಜೆ ಮತ್ತು ರಾತ್ರೆ ರಾತ್ರಿ-ಪೂಜೆ ನಡೆಯುತ್ತದೆ. ಕುಂಕುಮಾರ್ಚನೆ ಮತ್ತು ಹೂವಿನ ಪೂಜೆ ಬಹಳ ಪ್ರಿಯವಾದ ಸೇವೆಗಳು. ಸಪ್ತಶತಿ ಪಾರಾಯಣ, ಲಲಿತಾರ್ಚನೆ, ಹಾಲು ಪರಮಾನ್ನ, ಹರಿವಾಣ ನೈವೇದ್ಯ ಇವೇ ಮೊದಲಾದ ಸೇವೆಗಳು. ಭಕ್ತ ಜನರಿಂದ ಶ್ರೀದೇವಿಗೆ ಸಲ್ಲಿಸಲ್ಪಡುತ್ತವೆ. ಶುಕ್ರವಾರ ಬಹಳ ಪ್ರಶಸ್ತ ದಿನವಾಗಿದ್ದು, ಹೆಚ್ಚಿನ ಜನರು ಸೇರುತ್ತಾರೆ.

ನವರಾತ್ರಿ ಮಹೋತ್ಸವ (ಶರನ್ನವರಾತ್ರಿ) ಇಲ್ಲಿ ತುಂಬಾ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಆಶ್ವಯುಜ ಶುದ್ಧ ಪ್ರತಿಪದೆಯಿಂದ ಆಶ್ವಯುಜ ನವಮಿಯವರೆಗೆ ಶ್ರೀ ದೇವಿ ಸನ್ನಿಧಿಯಲ್ಲಿ ಮಹಾಪೂಜೆ ಸಂತರ್ಪಣೆ, ಕಲ್ಪೋಕ್ತಪೂಜೆ, ಪ್ರಸನ್ನ ಪೂಜೆ ಹಾಗೂ ಸಂಜೆಯ ವೇಳೆ ಸಾಂಸ್ಕೃತಿಕ ಕಾರ್ಯ ಕ್ರಮವೂ ನಡೆಯುತ್ತವೆ. ಅಕ್ಷಯ ತದಿಗೆಯಂದು ಧ್ವಜಾರೋಹಣ ನಡೆದು, ಒಂದು ದಿನಬಿಟ್ಟು ರಥೋತ್ಸವ ಬಹು ಸಂಭ್ರಮದಿಂದ ಈ ಕ್ಷೇತ್ರದಲ್ಲಿ ನಡೆಯುತ್ತವೆ. ಕಾರ್ತಿಕ ಅಮಾವಾಸ್ಯೆಯಂದು ದೀಪೋತ್ಸವ ಜರುಗುತ್ತದೆ. ಸಿಂಹಮಾಸದಲ್ಲಿ ನಡೆಯುವ ಸೋಣಾರ್ತಿ[೨೦] ಇನ್ನೊಂದು ವೈಶಿಷ್ಟ್ಯಪೂರ್ಣ ಆಚರಣೆಯಾಗಿದೆ.

(ಈ ಸಂಪ್ರಬಂಧ ಬರೆಯಲು ಪ್ರೇರಣೆ ಹಾಗೂ ಮಾರ್ಗದರ್ಶನ ನೀಡಿದ ಡಾ|| ಪಿ.ಎನ್. ನರಸಿಂಹಮೂರ್ತಿ ಯವರಿಗೆ, ಜಯದುರ್ಗಾ-ಲಕ್ಷಣಗಳು, ಧ್ಯಾನಶ್ಲೋಕದ ಕುರಿತು ಅಗತ್ಯ ಮಾಹಿತಿ ನೀಡಿದ ಡಾ|| ಜಿ. ಜ್ಞಾನಾನಂದ, ಬೆಂಗಳೂರು ಇವರಿಗೆ, ಸಹಕರಿಸಿದ ದೇವಾಲಯದ ಆಡಳಿತ ವರ್ಗದವರಿಗೆ, ಅರ್ಚಕ ವರ್ಗದವರಿಗೆ ಹಾಗೂ ಮಾಹಿತಿದಾರರಿಗೂ ನನ್ನ ಕೃತಜ್ಞತೆಗಳು.)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ॥ ಪಿ. ಎನ್. ನರಸಿಂಹಮೂರ್ತಿ., 'ಶಕ್ತಿ ದೇವಿ ಆರಾಧನೆ, ನೆಲೆ- ಹಿನ್ನಲೆ', **ಉದಯವಾಣಿ** ದೈನಿಕ ೩೦-೯-೧೯೯೮.

೨. ದುರ್ಗಾಪರಮೇಶ್ವರಿ ದೇವಾಲಯಗಳು ಉಡುಪಿ ಮತ್ತು ಅದರ ಸುತ್ತಮುತ್ತಲೂ ಹಲವಾರು ಇವೆ. ಉದಾ: ಹೆರ್ಗ (ಹೆರಗ) ಅಲೆವೂರು, ಕೆಮ್ಮಣ್ಣು, ಉದಿಯಾವರ, ಬೆಳ್ಮಣ್ಣು, ಶಿವಬಂಟಕಲ್ಲು, ಕಟೀಲು, ಬಪ್ಪನಾಡು (ಮೂಲ್ಕಿ), ನೀಲಾವರ, ಮಂದರ್ತಿ, ಕುಕ್ಕುಂದೂರು (ಕಾರ್ಕಳ) - ಇಲ್ಲೆಲ್ಲಾ ದುರ್ಗಾಪರಮೇಶ್ವರಿ ದೇಗುಲಗಳಿವೆ.

೩. ಡಾ॥ ಪಿ. ಎನ್. ನರಸಿಂಹಮೂರ್ತಿ., "ದುರ್ಗೆ-ಅನಂತರೂಪ-ಅನನ್ಯ ಶಕ್ತಿ', **ತರಂಗ** ವಾರಪತ್ರಿಕೆ - ನವೆಂಬರ್ ೧, ೨೦೦೧.

೪. ರಾಷ್ಟ್ರೀಯ ಹೆದ್ದಾರಿ ಸಂ. ೧೭

೫. ಮುಚ್ಚಿಲಕೋಡು, ಮಾಂಗೋಡು, ಅರಿತೋಡು ಮತ್ತು ತಾಂಗೋಡು - ಇವು ನಾಲ್ಕು ನಾಗಾಲಯಗಳು.

೬,೭,೮. ದೈವ-ಭೂತಗಳು-ಅಲೌಕಿಕ ಪ್ರಪಂಚಕ್ಕೆ ಸೇರಿದ ಶಕ್ತಿಗಳು. ಕಲ್ಲುಕುಟ್ಟಿಗ (ಕಲ್ಕುಡ), ರಕ್ತೇಶ್ವರಿ, ಪಂಜುರ್ಲಿ (ವಾರಾಹಿದೈವ) ಮೊದಲಾದ ದೈವಗಳು ತುಳುನಾಡಿನಲ್ಲಿ ಪರಿವಾರ ದೈವಗಳಾಗಿದ್ದು ದೇವಾಲಯದ ಹೊರಪ್ರಾಕಾರದಲ್ಲಿ ನೆಲೆಗೊಂಡಿವೆ. ಹೆಚ್ಚಿನ ವಿವರಗಳಿಗೆ ನೋಡಿ ಅಮೃತ ಸೋಮೇಶ್ವರ-**ತುಳು ಪಾಡ್ದನ**; ಡಾ॥ ಕೆ. ಚಿನ್ನಪ್ಪಗೌಡ-**ಭೂತಾರಾಧನೆ-ಜಾನಪದೀಯ ಅಧ್ಯಯನ**; ಬೊಬ್ಬರ್ಯ-ದುರಂತ ಮರಣಕೀಡಾಗಿ ದೈವತ್ವವನ್ನು ಪಡೆದ ಅಮಾನುಷ ಶಕ್ತಿ ಮಹಿಮೆಯ ದೈವ.

೯. ಡಾ॥ ಪಿ. ಗುರುರಾಜ ಭಟ್ಟ - **ಉಡುಪಿ ಇತಿಹಾಸ** (ಪು. ೬೫)

೧೦. **ದಕ್ಷಿಣ ಕನ್ನಡದ ದೇವಾಲಯಗಳು**, - (ಸಂ.) ಡಾ॥ ಪಿ. ಎನ್. ನರಸಿಂಹಮೂರ್ತಿ ಮತ್ತು ಪ್ರೊ. ಮುರಳೀಧರ ಉಪಾಧ್ಯ (ಪು. ೩೪೨.)

೧೧. ಡಾ॥ ಜಿ. ಜ್ಞಾನಾನಂದ, ಬೆಂಗಳೂರು ಇವರು ನೀಡಿದ ಮಾಹಿತಿ.

೧೨. "ಜಯದುರ್ಗಾ ಧ್ಯಾನ ಶ್ಲೋಕದ (ಸಪ್ತಶತಿಯ ನಾಲ್ಕನೇ ಅಧ್ಯಾಯ) ಭಾವಾರ್ಥ : ಪ್ರಳಯ ಕಾಲದ ಮೇಘದಂತೆ ಶೋಭಿಸುವ, ತನ್ನ ಕಡೆಗಣ್ಣು ನೋಟದಿಂದಲೇ ಶತ್ರುಗಳಿಗೆ ಭಯಂಕರಳಾದ, ಶಿರಸ್ಸಿನಲ್ಲಿ ಚಂದ್ರನ ಶುಭ್ರರೇಖೆಯಿಂದ ಪ್ರಕಾಶಿಸುತ್ತಿರುವ ಶಂಖ, ಚಕ್ರ, ಖಡ್ಗ ಹಾಗೂ ಮೂರು ಕೆನ್ನಾಲಗೆಗಳುಳ್ಳ ಬೆಂಕಿಯನ್ನು ತನ್ನ ಕೈಗಳಲ್ಲಿ ಧರಿಸಿರುವ, ಮೂರು ಕಣ್ಣುಗಳಿಂದ ಶೋಭಿಸುತ್ತಿರುವ, ಸಿಂಹದ ಮೇಲೆ ಒರಗಿ ನಿಂತಿರುವ, ಮೂರು ಲೋಕಗಳನ್ನು ತನ್ನ ಪ್ರಭೆಯಿಂದ ಶೋಭಿಸುತ್ತಿರುವ, ಅಭೀಷ್ಟ ಪ್ರಾಪ್ತಿಗಾಗಿ ಭಕ್ತರಿಂದ ಉಪಾಸ್ಯಳಾದ, ದೇವತೆಗಳಿಂದ ಕೂಡಿರುವ ಜಯದುರ್ಗೆಯನ್ನು ಧ್ಯಾನಿಸಬೇಕು." (ಧ್ಯಾನ ಶ್ಲೋಕ ಮತ್ತು ಭಾವಾರ್ಥದ ಪ್ರತಿ ನೀಡಿದವರು- ಶ್ರೀ ವಾದಿರಾಜ ಉಪಾಧ್ಯಾಯ-ಕನ್ನರಪಾಡಿ)

೧೩. ಡಾ॥ ಜಿ. ಜ್ಞಾನಾನಂದರು ಸಂಪಾದಿಸಿದ ಜಯದುರ್ಗಾ ಶ್ಲೋಕ;
ಕಾಲಾಂ ಸ್ವಾರಾಂ ಕಟಾಕ್ಷೈರಲಿಕುಲ ಭಯದಾಂ ಮೌಲೀಬದ್ಧೇಂದು ರೇಖಾಮ್। ಶಂಖ ಚಕ್ರಂ ಕೃಪಾಣಾಂ ತ್ರಿಶಿಖಾಮಪಿ ಕರೈರುದ್ವಹಂತಿ ತ್ರಿನೇತ್ರಮ್॥
ಸಿಂಹಸ್ಕಂಧಾದಿರೂಢಾಂ ತ್ರಿಭುವನಮಖಿಲಂ ತೇಜಸಾ ಪೂರಯಂತೀಮ್। ಧ್ಯಾಯೇದ್ದುರ್ಗಾಂ ಜಯಖ್ಯಾಂ ತ್ರಿದಶ ಪರಿವೃತಾಂ ಸೇವಿತಾಂ ಸಿದ್ಧಕಾಮೈಃ॥
ಇವೆರಡೂ ಶ್ಲೋಕಗಳಲ್ಲಿ ಅತ್ಯಲ್ಪ ವ್ಯತ್ಯಾಸ ಕಂಡುಬರುವುದು - (ಕಾರಣ ತಿಳಿಯದು)

೧೪. ಪ್ರೊ। ಎಸ್.ಕೆ. ರಾಮಚಂದ್ರ ರಾವ್ - **ದುರ್ಗಾಕೋಶ** (ಪು. ೬೭) - ಜಯದುರ್ಗಾ ರೇಖಾಚಿತ್ರದ ಪ್ರತಿ ಲಗತ್ತಿಸಿದೆ. (ಕೃಪೆ. ಡಾ॥ ಜಿ. ಜ್ಞಾನಾನಂದ)

೧೫. ಉದಯಪುರ (ಉದಿಯಾವರ) ಆಳುಪ ರಾಜರ ಮುಖ್ಯ ರಾಜಧಾನಿಗಳಲ್ಲಿ ಒಂದಾಗಿತ್ತು. ಕ್ರಿ.ಪೂ. ೨ನೆಯ ಶತಮಾನದಲ್ಲಿಯೇ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದ ಉದಿಯಾವರವು ಬೃಹತ್ ಕೋಟೆಯನ್ನೂ ಹೊಂದಿರುವ ಸಾಧ್ಯತೆಯಿದೆ. ಇಲ್ಲಿನ ಹಿರಿಯರು ಕನ್ನರಪಾಡಿಯವರೆಗೂ ಉದ್ಯಾವರ ಕೋಟೆ ವ್ಯಾಪಿಸಿತ್ತು. ಜಯದುರ್ಗಾ ದೇವಾಲಯ ಕೋಟೆಯ ಒಳಗಡೆ ಇತ್ತು ಎಂಬ ಐತಿಹ್ಯವನ್ನು ಹೇಳುತ್ತಾರೆ.

೧೬. ಕಣ್ಣಾರ ಎಂಬ ಬ್ರಾಹ್ಮಣಕುಲ ಕನ್ನರಪಾಡಿಯಲ್ಲಿತ್ತು. ಉಲ್ಲೇಖ : ಡಾ॥ ಪಿ. ಗುರುರಾಜ ಭಟ್ - **ಉಡುಪಿ ಇತಿಹಾಸ** (ಪು. ೬೫)

೧೭. ಐತಿಹಾಸಿಕ ಅಂಶಗಳು ಸಿಗುವುದಿಲ್ಲ.

೧೮. ಡಾ॥ ಕೆ. ವಿ. ರಮೇಶ್., (1970), *A History of South Kanara* ಪು. III, 248) ಉದ್ಯಾವರ ಶಾಸನ (೧೧೧೪-೧೫) ಮತ್ತು ಕೋಟೆಕೇರಿ ಶಾಸನಗಳ (೧೧೫೫) ಮಾಹಿತಿಯಂತೆ ಕುಮಾರ ಉದಯಾದಿತ್ಯರಸ ಎಂಬ ರಾಜಕುಮಾರನ (ಯುವರಾಜ?) ಉಲ್ಲೇಖ ಇದೆ. ಇವನು ಉದಯವರ್ಮರಾಜನಾಗಿರಬಹುದೆ? ಈ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯ.

೧೯. **ದಕ್ಷಿಣ ಕನ್ನಡದ ದೇವಾಲಯಗಳು**, ಅದೇ, (ಪು. ೩೪೨)

೨೦. ಸೋಣ-ತುಳುಭಾಷೆಯಲ್ಲಿ ಸಿಂಹಮಾಸಕ್ಕಿರುವ ಹೆಸರು. ಮಳೆಗಾಲದ ಕರ್ಕಟ (ತುಳು ಆಟಿ) ತಿಂಗಳು ಕಳೆದ ಬಳಿಕ ಬರುವ ಹಬ್ಬ ಹರಿದಿನಗಳು ಪ್ರಾರಂಭವಾಗುವ ತಿಂಗಳು. ಸೋಣಾರ್ತಿ - ಸೋಣ (ಸಿಂಹ) ತಿಂಗಳ ಆರ್ತಿ (ಆರತಿ).

ಮಾಹಿತಿ ನೀಡಿದವರು :

೧. ಶ್ರೀ ಕೆ. ಗೋಪಾಲಕೃಷ್ಣ ಉಪಾಧ್ಯಾಯರು (ಶ್ರೀ ಅಪ್ಪಾಜಿ ಭಟ್ಟರು)

೨. ಶ್ರೀ ವಾದಿರಾಜ ಉಪಾಧ್ಯಾಯರು

೩. ಶ್ರೀ ಕೆ. ನಾರಾಯಣ ರಾವ್ ಹಾಗೂ ಇತರರು

ಪ್ರೊ. ಸ್ಮಿತಾ ಸುರೇಬಾನಕರ*

ಗೋವಾದ ಬ್ರಹ್ಮದೇವರ ಶಿಲ್ಪ

ಭಾರತದ ಉದ್ದಗಲಕ್ಕೂ ಕಂಡುಬರುವ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ಭರತಭೂಮಿಯ ಕಲಾಪರಂಪರೆಯನ್ನು ಸಾರಿ ಹೇಳುತ್ತವೆ. ಗೋವಾ ಪ್ರದೇಶ ಇದಕ್ಕೆ ಹೊರತಾಗಿಲ್ಲ. ಈ ವೈಶಿಷ್ಟ್ಯ ವಿಶೇಷತಃ ಕದಂಬ ಸ್ಮಾರಕಗಳಿಗೆ ಅನ್ವಯಿಸುತ್ತದೆ. ಅಂತಹ ಒಂದು ಅಪೂರ್ವ ಮೂರ್ತಿಶಿಲ್ಪ ಬ್ರಹ್ಮಕರಮಳಿಯಲ್ಲಿರುವ ಬ್ರಹ್ಮದೇವನ ಶಿಲ್ಪ.

ಗೋವಾದ ರಾಜಧಾನಿ ಪಣಜಿಯಿಂದ ೫೪ ಕಿ.ಮೀ. ಅಂತರದಲ್ಲಿರುವ ಉತ್ತರ ಗೋವಾದ ವಾಳಪೊಯ್ ತಾಲೂಕಿನ ಸತ್ತರಿ ಪ್ರದೇಶದಲ್ಲಿರುವ ಬ್ರಹ್ಮಕರಮಳಿ ಗ್ರಾಮದಲ್ಲಿ ಬ್ರಹ್ಮದೇವನ ಮೂರ್ತಿಶಿಲ್ಪವಿದೆ. ಈ ಮೂರ್ತಿಶಿಲ್ಪ ಕದಂಬ ಶಿಲ್ಪಕಲೆಯ ಉತ್ಕೃಷ್ಟ ಉದಾಹರಣೆಯಾಗಿದೆ. ಇದು ನೂತನವಾಗಿ ನಿರ್ಮಿತವಾದ ದೇವಾಲಯದಲ್ಲಿ ಪ್ರತಿಷ್ಠೆಗೊಂಡಿದೆ. ಕದಂಬರ ಆಡಳಿತಾವಧಿಯಲ್ಲಿ ಕದಂಬಹಳ್ಳಿಯೆಂದು ಕರೆದಿದ್ದಿರಬಹುದಾದ ಪ್ರದೇಶವೇ ಬಹುಶಃ ಮುಂದೆ ಕರಮಳಿ ಎನಿಸಿಕೊಂಡು, ಅಲ್ಲಿರುವ ಬ್ರಹ್ಮದೇವನ ಮೂರ್ತಿಶಿಲ್ಪದ ಕಾರಣ ಬ್ರಹ್ಮಕರಮಳಿ ಎಂಬ ಹೆಸರನ್ನು ಪಡೆದಿರಬಹುದು. ಬಹುಶಃ ಕದಂಬರ ಕಾಲಕ್ಕೆ ಬ್ರಹ್ಮದೇವನ ದೇವಾಲಯ ಈ ಪ್ರದೇಶದಲ್ಲಿದ್ದುದರಿಂದ ಇದಕ್ಕೆ ಆ ಹೆಸರು ಬಂದಿರುವ ಸಾಧ್ಯತೆಯಿದೆ. ಪೋರ್ಚುಗೀಸ್ ದಾಖಲೆಗಳಲ್ಲಿ ಕರಮಳಿಯನ್ನು ಕ್ಯಾರಂಬೊಲಿಮ್ ಎಂದು ಉಲ್ಲೇಖಿಸಲಾಗಿದೆ.

ಬ್ರಹ್ಮ ತ್ರಿಮೂರ್ತಿಗಳಲ್ಲಿ ಒಬ್ಬನಾಗಿದ್ದು, ವಿಷ್ಣು, ಮಹೇಶ್ವರರಷ್ಟು ಪ್ರಾಮುಖ್ಯತೆ ಪಡೆಯದಿರುವುದು ಎಲ್ಲರಿಗೂ ತಿಳಿದ ವಿಷಯ. ಪ್ರತ್ಯೇಕವಾಗಿಯೇ ಬ್ರಹ್ಮದೇವನಿಗೋಸ್ಕರ ನಿರ್ಮಿತವಾದ ದೇವಾಲಯಗಳಾಗಲೀ ಅಥವಾ ಬ್ರಹ್ಮನದೇ ಆದ ಪಂಥವಾಗಲಿ ಇಲ್ಲ. ಆದ್ದರಿಂದ ಎಷ್ಟೋ ಸಲ ಬ್ರಹ್ಮನಿಗೆ ಭೂಮಿಯ ಮೇಲೆ ಪೂಜೆ ವರ್ಜ್ಯ ಎಂದು ನಂಬಲಾಗಿದೆ. ಆದರೆ ಸಾಮಾನ್ಯವಾಗಿ ಶೈವ ಮತ್ತು ವೈಷ್ಣವ ದೇವಾಲಯಗಳಲ್ಲಿ ಗರ್ಭಗೃಹಕ್ಕೆ ಹೊಂದಿಕೊಂಡಿರುವ ಉತ್ತರದ ಗೋಡೆಗಿರುವ ದೇವಕೋಷ್ಠದಲ್ಲಿ ಬ್ರಹ್ಮನ ವಿಗ್ರಹವಿಟ್ಟು ದಿನನಿತ್ಯದ ಪೂಜೆ ಸಲ್ಲಿಸಬೇಕಾದದ್ದು ನಿಯಮ.

ನುಣುಪಾದ ಕಪ್ಪು ಕಲ್ಲಿನಲ್ಲಿ ಕೆತ್ತಲಾದ ಈ ಚತುರ್ಮುಖ ಬ್ರಹ್ಮ ಏಕಶಿಲಾಶಿಲ್ಪವಾಗಿದೆ. ಚತುರ್ಭುಜಗಳಿರುವ ಈ ಮೂರ್ತಿಶಿಲ್ಪ ವಿಸ್ತಾರವಾದ ಪಾಣಿಪೀಠದ ಮೇಲೆ ಪ್ರತಿಷ್ಠಾಪಿತಗೊಂಡಿದೆ. ಇದು ಸುಮಾರು ೫ ಅಡಿ ಎತ್ತರ ಮತ್ತು ೨.೮ ಅಡಿ ಅಗಲವಾಗಿದೆ. ನಾಲ್ಕು ಯುಗ ನಾಲ್ಕು ವರ್ಣ ಮತ್ತು ನಾಲ್ಕು ವೇದಗಳನ್ನು, ದೇವತೆಗಳನ್ನು ಸೂಚಿಸುವ ಸಂಕೇತವೆನ್ನಲಾದ ನಾಲ್ಕು ಶಾಂತಮುಖಗಳನ್ನು ಹೊಂದಿದೆ. ಬ್ರಹ್ಮದೇವನ ನಾಲ್ಕು ತಲೆಗಳು ನಾಲ್ಕು ದಿಕ್ಕುಗಳೆಡೆಗೆ ಮುಖ ಮಾಡಿವೆ. ಮುಂದುಗಡೆ ಮಧ್ಯದಲ್ಲಿರುವ ಮುಖಮಾತ್ರ ಚೂಪಾದ ಗಡ್ಡವನ್ನು ಹೊಂದಿದೆ. ತಲೆಯಮೇಲೆ ಜಟಾಮುಕುಟವಿದ್ದು, ಮೈಮೇಲೆ ಯಜ್ಞೋಪವೀತವಿದೆ. ಕಟಿಸೂತ್ರ, ಬಾಹುಬಂಧ, ಕರ್ಣಕುಂಡಲ, ಚಂದ್ರಹಾರ, ಕಟಿಬಂಧ, ಕೈಗಡಗ, ಕಾಲಿಗೆ ತೊಡಿಸಿದ ತೋಡೆಗಳು ಮೊದಲಾದ ಆಭರಣಗಳಿಂದ ಕೂಡಿ ವಿಶೇಷ ಅಲಂಕೃತವಾದ ಸೂಕ್ಷ್ಮ ಕೆತ್ತನೆಯ ಸುಂದರ ಶಿಲ್ಪವಿದಾಗಿದೆ. ಬ್ರಹ್ಮದೇವನ ಹೊಟ್ಟೆಯನ್ನು ಉದರಬಂಧದಿಂದ ಬಿಗಿಯಲಾಗಿದೆ. ವರದಮುದ್ರೆಯಲ್ಲಿರುವ ಬಲಮುಂಗೈ ಅಕ್ಷಮಾಲೆ ಮತ್ತು ಬಲಹಿಂಗೈ ಗ್ರಂಥವನ್ನು ಹಿಡಿದಿವೆ. ಕುಶ ಮತ್ತು ಕಮಂಡಲಗಳನ್ನು ಕ್ರಮವಾಗಿ ಎಡ ಹಿಂಗೈ ಮತ್ತು ಮುಂಗೈಗಳಲ್ಲಿ ಹಿಡಿಯಲಾಗಿದೆ. ಬ್ರಹ್ಮದೇವನ ಎಡ ಬಲಭಾಗಗಳಲ್ಲಿ ಕ್ರಮವಾಗಿ ಆತನ ಸತಿಯರಾದ ಸಾವಿತ್ರಿ ಮತ್ತು ಸರಸ್ವತಿಯರು ವಸ್ತ್ರಾಭರಣಭೂಷಿತೆಯರಾಗಿ ಕಂಗೊಳಿಸುತ್ತಿದ್ದಾರೆ. ಅಂಜಲಿ ಮುದ್ರೆಯಲ್ಲಿರುವ ಋಷಿಗಣಗಳನ್ನು ಪೀಠದ ಕೆಳಭಾಗದಲ್ಲಿ ಎಡಬಲಕ್ಕೆರಡೂ ಬದಿಗೆ ಕಾಣಬಹುದು. ಹಿಂಬದಿಗೆ ನಾಜೂಕಾದ ಸುಂದರ ಕೆತ್ತನೆಯುಳ್ಳ ಭವ್ಯವಾದ ಪ್ರಭಾವಳಿಯಿದ್ದು, ಇಲ್ಲಿ ಮುಖ್ಯವಾಗಿ ಹಂಸ, ಕಮಲದ ಮೊಗ್ಗುಗಳು ಮತ್ತು ಪದ್ಮಾಸನದಲ್ಲಿರುವ ಬ್ರಹ್ಮದೇವನ ಉಬ್ಬು ಶಿಲ್ಪಗಳಿವೆ. ವೈಶಿಷ್ಟ್ಯಪೂರ್ಣವಾಗಿ ಈ ಪ್ರಭಾವಳಿಗಳಿಗೆ ಹೊಂದಿಕೊಂಡು ಇನ್ನೊಂದು ಚಿಕ್ಕ ಪ್ರಭಾವಳಿಯಿದ್ದು, ಅದು ಲತೆಯ ಅಲಂಕರಣ ಮತ್ತು ಸಿಂಹಲಲಾಟಗಳನ್ನು ಒಳಗೊಂಡಿದೆ.

ಮೇಲೆ ವಿವರಿಸಿದ ಬ್ರಹ್ಮದೇವನ ಮೂರ್ತಿಶಿಲ್ಪ ಶಿಲ್ಪಶಾಸ್ತ್ರದಲ್ಲಿ ಉಲ್ಲೇಖಿಸಲಾದ ಬ್ರಹ್ಮದೇವಶಿಲ್ಪದ ಎಲ್ಲ ಶಿಲ್ಪಲಕ್ಷಣಗಳನ್ನು ಒಳಗೊಂಡಿದೆ.

ಗೋವಾದ ಈ ಬ್ರಹ್ಮದೇವಶಿಲ್ಪ ಮಹಾರಾಷ್ಟ್ರದ ಠಾಣಾ ಜಿಲ್ಲೆಯಲ್ಲಿರುವ ಸೋಪಾರಾ ಮತ್ತು ತಮಿಳುನಾಡಿನ ಕುಂಭಕೋಣಂನ ನಾಗೇಶ್ವರಸ್ವಾಮಿ ದೇವಾಲಯದಲ್ಲಿರುವ ಬ್ರಹ್ಮದೇವ ಶಿಲ್ಪಗಳನ್ನು ಹೋಲುತ್ತದೆ. ಆಲಂಕರಣಪೂರಿತವಾದ ಸಮಭಂಗದಲ್ಲಿರುವ ಈ ಬ್ರಹ್ಮದೇವನ ಶಿಲ್ಪ ಕಲ್ಯಾಣ ಚಾಲುಕ್ಯರ

* ಪ್ರವಾಚಕರು, ಇತಿಹಾಸ ವಿಭಾಗ, ರಾಣಿ ಪಾರ್ವತಿದೇವಿ ಮಹಾವಿದ್ಯಾಲಯ, ಬೆಳಗಾವಿ



ಪರಂಪರೆಯಲ್ಲಿ ಅರಳಿರುವ ಗೋವಾ ಕದಂಬಶೈಲಿಯ ಶಿಲ್ಪಕಲೆಯ ಉತ್ತಮ ಉದಾಹರಣೆ. ಅಲಂಕರಣ ಶೈಲಿ, ದೇಹ ರಚನೆ ಮತ್ತು ಮುಖಲಕ್ಷಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಈ ಶಿಲ್ಪದ ಕಾಲಮಾನವನ್ನು ಸುಮಾರು ಕ್ರಿ.ಶ. ೧೧ನೇಯ ಶತಮಾನದ ಕೊನೆಯ ಭಾಗಕ್ಕೆ ಸೇರಿಸಬಹುದು. ಸೂಕ್ಷ್ಮ ಕೆತ್ತನೆ, ನಾಜೂಕಾದ ಅಲಂಕರಣ ಮತ್ತು ಚಿತ್ತಾಕರ್ಷಕ ಭಂಗಿಯಿಂದೊಡಗೂಡಿದ ಅತ್ಯಂತ ಪ್ರಮಾಣಬದ್ಧವಾದ ವೈಶಿಷ್ಟಪೂರ್ಣ ಶಿಲ್ಪವಿದಾಗಿದೆ. ಬಹುಶಃ ಈಗಿರುವ ದೇವಾಲಯವಿರುವ ಪ್ರದೇಶದಲ್ಲಿ ಕದಂಬರ ಆಳ್ವಿಕಾವಧಿಯಲ್ಲಿ ಇಟ್ಟಿಗೆಯ ದೇವಾಲಯವಿದ್ದು, ಮುಂದೆ ಕಾಲಾಂತರದಲ್ಲಿ ಅದು ನಾಶಹೊಂದಿದ ನಂತರ ಆ ಪ್ರದೇಶದಲ್ಲಿ ಈಗಿರುವ ಚಿಕ್ಕ ದೇವಾಲಯಗಳನ್ನು ನಿರ್ಮಿಸಿರಬಹುದು. ಬ್ರಹ್ಮದೇವ ಶಿಲ್ಪದ ಪ್ರಾಚೀನತೆ ಆ ಊರಿನ ಹೆಸರಿನೊಂದಿಗೆ ಜೋಡಿಸಲ್ಪಟ್ಟ ಬ್ರಹ್ಮ ಶಬ್ದದಿಂದ (ಬ್ರಹ್ಮಕರಮಳಿ) ವಿದಿತವಾಗುತ್ತದೆ.

ಅಗಲವಾಗಿ ತೆರೆದ ಕಂಗಳು, ನೀಳಮೂಗು, ಸ್ನಿಗ್ಧ ಮುಖಭಾವ, ಶಾಂತಮುಖ, ಪ್ರಮಾಣಬದ್ಧವಾದ ಮೈಮಾಟ, ಸೂಕ್ಷ್ಮ ಕೆತ್ತನೆಯ ಅಲಂಕರಣ ಮತ್ತು ಎಲ್ಲಕ್ಕೂ ಹೆಚ್ಚಾಗಿ ತುಂಬಿದ ಲಾಸ್ಯ ಮತ್ತು ದೈವಿ ಕಳೆ - ಇವುಗಳು ಈ ಬ್ರಹ್ಮದೇವ ಶಿಲ್ಪವನ್ನು ಕದಂಬಮೂರ್ತಿ ಶಿಲ್ಪ ಶೈಲಿಯ ವಿಶಿಷ್ಟ ಕೃತಿಯನ್ನಾಗಿಸಿದೆ.

(ಬ್ರಹ್ಮದೇವ ಶಿಲ್ಪವನ್ನು ನನ್ನ ಗಮನಕ್ಕೆ ತಂದು, ಕ್ಷೇತ್ರಕಾರ್ಯದಲ್ಲಿ ಸಹಾಯಗೈದ ಬೆಳಗಾವಿಯ ರಾಣಿ ಪಾರ್ವತಿದೇವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಎನ್. ಕೆ. ಮರಾಠೆಯವರಿಗೆ ನನ್ನ ಕೃತಜ್ಞತೆಗಳು.)

ಆಧಾರಸೂಚಿ ಮತ್ತು ಟಿಪ್ಪಣಿಗಳು


೧. ಪಂಚಮುಖಿ ಆರ್. ಎಸ್., ೧೯೬೭, **ಕರ್ನಾಟಕ ಇತಿಹಾಸ**, ಧಾರವಾಡ.
೨. ಮೊರೇಸ್, ಜಿ.ಎಮ್., ೧೯೯೦, **ಕದಂಬಕುಲ** (ಆಂಗ್ಲ), ನ್ಯೂಡೆಲ್ಲಿ.
೩. ಗೋಪಿನಾಥರಾವ್ ಟಿ. ಎ. ೧೯೭೪ : **ಎಲಿಮೆಂಟ್ಸ್ ಆಫ್ ಹಿಂದೂ ಐಕೊನೊಗ್ರಫಿ**, ಸಂಪುಟ II, ವಾರಣಾಸಿ.
೪. ಜಿತೇಂದ್ರನಾಥ ಬ್ಯಾನರ್ಜಿ; ೧೯೭೪ : **ದಿ ಡೆವಲೆಪ್‌ಮೆಂಟ್ ಆಫ್ ಹಿಂದೂ ಐಕೊನೊಗ್ರಫಿ**, ಡೆಲ್ಲಿ.
೫. ಬ್ರಹ್ಮಕರಮಳಿಯಲ್ಲಿ ಕೈಗೊಂಡ ಕ್ಷೇತ್ರಕಾರ್ಯ.

ಕೆ. ಆರ್. ನರಸಿಂಹನ್*

ನಂಬಿಹಳ್ಳಿಯ 'ವೀರ ಸಮರಶಿಲ್ಪ'

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿಗೆ ಸೇರಿದ ನಂಬಿಹಳ್ಳಿಯಲ್ಲಿ ಕ್ಷೇತ್ರಕಾರ್ಯ ಮತ್ತು ಭೂಶೋಧನೆ ನಡೆಸಿದ ಸಂದರ್ಭದಲ್ಲಿ ದೊರೆತಿರುವ 'ಸಮರ ಶಿಲ್ಪ'ವು ಬಹಳ ಗಮನಾರ್ಹವಾಗಿದೆ.

ನಂಬಿಹಳ್ಳಿ ಗ್ರಾಮದಲ್ಲಿ ಅಲ್ಲಲ್ಲಿ ಚದುರಿದಂತೆ ಹಲವಾರು ವೀರಶಿಲ್ಪಗಳಿವೆ. ರಾಷ್ಟ್ರಕೂಟರ ಕಾಲದ್ದು ಎಂದು ಹೇಳಬಹುದಾದ ತುರುಗೋಳಕ್ಕೆ ಸಂಬಂಧಿಸಿದ ಒಂದು ಶಾಸನವು ಭಜನೆ ಮನೆಯ ಜಗಲಿಯ ಮೇಲಿದೆ. ಊರ ಹೊರಗೆ ಉತ್ತರ ದಿಕ್ಕಿನಲ್ಲಿ ಒಂದು ಕಡೆ ಸುಮಾರು ೫೦ಕ್ಕೂ ಹೆಚ್ಚು ವೀರರ ಗುಡಿಗಳಿವೆ. ದಕ್ಷಿಣದ ದಿಕ್ಕಿನಲ್ಲಿ ಸಪ್ತಮಾತೃಕೆಯರ ದೇವಾಲಯವಿದೆ. ಇದರಿಂದ ಶಾಕ್ತ ಪದ್ಧತಿಯನ್ನು ಇಲ್ಲಿನ ಸಾಂಸ್ಕೃತಿಕ ವಲಯದಲ್ಲಿ ಗುರುತಿಸಬಹುದು. ಭೂಮಿಯಿಂದ ಹೊರತೆಗೆದಿರುವ ಯುದ್ಧದಾಖಲೆಯ ಶಿಲ್ಪವು ಗ್ರಾಮದ ಮುಂಭಾಗದಲ್ಲಿ ಇರುವ ಶಿವಾಲಯದಲ್ಲಿ ದೊರೆತಿದೆ. ಆಲಯದ ಮುಂಭಾಗದಲ್ಲಿ ರಾಜೇಂದ್ರಚೋಳನ ಕಾಲಕ್ಕೆ ಸೇರಬಹುದಾದ ಪೆಣ್‌ಬುಯಲಿನ ಬರಹವಿದೆ.



ನಂಬಿಹಳ್ಳಿಯ ಸಮರಶಿಲ್ಪವನ್ನು ಪ್ರಸಿದ್ಧವಾದ ಯುದ್ಧ ಒಂದರ ಶಿಲಾದಾಖಲೆ ಎಂದು ಸ್ಥೂಲವಾಗಿ ನಿರ್ಣಯಿಸಬಹುದು. ಸ್ಥಳೀಯ ಇತಿಹಾಸ ರಚನೆಗೆ ಹಾಗೂ ಪ್ರಮುಖ ರಾಜವಂಶದ ಚರಿತ್ರೆ ಹೊಸ ಅರಿವಿಗೆ ಇದು ನೆರವಾಗಬಲ್ಲುದು. ಮೊದಲ ನೋಟಕ್ಕೆ ಸುಪ್ರಸಿದ್ಧವಾದ ಬೆಂಗಳೂರು ಸಮೀಪವಿರುವ ಬೇಗೂರಿನ ಶಾಸನ ಸಹಿತವಾದ ವೀರಗಲ್ಲನ್ನು ಇದು ಹೋಲುತ್ತಿದೆ. ರಣಾಂಗಣದ ಚಿತ್ರವನ್ನು ಇದರಲ್ಲಿ ಕಾಣುವಂತೆ ಬಿರುಸಾದ ಕಾಳಗದ ತೀವ್ರತೆಯನ್ನು ಕಲ್ಪಿಸಿಕೊಳ್ಳಬಹುದಾಗಿದೆ. ಬೇಗೂರಿನ ವೀರಗಲ್ಲು ಗಂಗರ ಸಮರ ಸಂದರ್ಭದ ಪ್ರಮುಖ ದಾಖಲೆಯೆಂದು ಹೇಳಬಹುದಾದರೆ, ನಂಬಿಹಳ್ಳಿಯಲ್ಲಿ ದೊರೆತಿರುವ ಸಂಗ್ರಾಮ ಶಿಲಾಫಲಕವು ಬಾಣರ ಸಮರದ ಬಹುಮುಖ್ಯವಾದ ದಾಖಲೆಯೆಂದು ಸಾಧಿಸಲು ಎಲ್ಲ ಸಾಧ್ಯತೆಗಳಿವೆ.

ಕುವಳಾಲ ಇಲ್ಲವೇ ಇಂದಿನ ಕೋಲಾರವು ಗಂಗರ ಮೊದಲ ರಾಜಧಾನಿಯಾಗಿತ್ತು. ಇವರ ವಂಶದ ಅರಸರು ಕುವಳಾಲನಾಡಿನ ಪ್ರಭುಗಳಾಗಿದ್ದರು. ಇವರ ಜೊತೆಯಲ್ಲಿಯೇ ಪ್ರಸಿದ್ಧಿ ಹೊಂದಿದ ಬಾಣ ರಾಜರು ಇಂದಿನ ಕೋಲಾರ ಜಿಲ್ಲೆಯ ಗಡಿ ಭಾಗವನ್ನು ಸೇರಿದಂತೆ ಆಂಧ್ರಪ್ರದೇಶದ ಚಿತ್ತೂರು, ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಭಾಗಗಳನ್ನು ಒಳಗೊಂಡ ನಾಡಪ್ರಭುಗಳಾಗಿದ್ದರು. ಬಾಣ ರಾಜರು ಗಂಗರಿಗೆ ಸೇರಿದ 'ಗಂಗರು ಸಾಸಿರ'ದ ಮೇಲೆ ಕಣ್ಣಿಟ್ಟಿದ್ದರು. ಬಾಣರು ಮತ್ತು ವೈದುಂಬರು 'ಗಂಗರು ಸಾಸಿರಕ್ಕಾಗಿ' ಸದಾ ಕಾಲ ಸೈನ್ಯ ಕಟ್ಟಿ ಸಿದ್ಧರಾಗಿದ್ದರು.[೧] ಗಂಗ ಚಕ್ರಾಧಿಪತ್ಯಕ್ಕಾಗಿ ಎರಡು ಬಣಗಳಲ್ಲಿದ್ದ ಒಳಜಗಳದ ಲಾಭವನ್ನು ಪಡೆದುಕೊಳ್ಳಲು ಬಾಣರು ಮತ್ತು ನೊಳಂಬರು ಪ್ರಯತ್ನಶೀಲರಾದರು. ಇದರ ಪರಿಣಾಮವಾಗಿ ಸೋರೆಮಡಿ ಎಂಬಲ್ಲಿ ಬಹುದೊಡ್ಡ ಕಾಳಗ ಏರ್ಪಟ್ಟಿತು.

ಸೋರೆಮಡಿಯ ಕಾಳಗಕ್ಕೆ ಕಾರಣಗಳು ಏನೇ ಇದ್ದರೂ

* ಪ್ರಾಚಾರ್ಯರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ, ಕೋಲಾರ ಜಿಲ್ಲೆ - ೫೬೨ ೧೦೫

ಇದರ ಪರಿಣಾಮದಿಂದ ಕೆಲವೊಂದು ಪ್ರಸಿದ್ಧವಾದ ರಣಾಂಗಣಗಳು ಏರ್ಪಟ್ಟವು. ಸೋರೆಮಡಿಯಲ್ಲಿ ಅಲ್ಲದೆ ಮುದಿಮಡವು, ಮಂದಾವು ಎಂಬ ಸ್ಥಳಗಳಲ್ಲೂ ಯುದ್ಧಗಳು ನಡೆದವು. ಸೂಲೂರು, ನಂಬಿಹಳ್ಳಿಗಳಲ್ಲಿ ಸಹ ಕಾಳಗಗಳು ಏರ್ಪಟ್ಟಿರಬೇಕು. ಇದರ ಫಲವಾಗಿ ಬಾಣರಿಗೆ ಸೇರಿರಬಹುದಾದ ಸಮರ ಶಿಲ್ಪವನ್ನು ನಂದಹಳ್ಳಿಯಲ್ಲಿ ಕಾಣಲು ಸಾಧ್ಯವಾಗಿದೆ ಎನ್ನಬಹುದು.

ಶಿಲ್ಪದ ವಿವರ : ಸಂಗ್ರಾಮದ ವಿವರಗಳನ್ನು ವಿಶಿಷ್ಟವಾಗಿ ಹೊತ್ತಿರುವ ಶಿಲಾ ಫಲಕವು ಸುಮಾರು ೧೦ ಅಡಿ ಎತ್ತರವಾಗಿದ್ದು ೪ ಅಡಿಗೂ ಹೆಚ್ಚು ಅಗಲವಿದೆ. ಒಂದು ಅಡಿಗಿಂತಲೂ ಕಡಿಮೆ ದಪ್ಪ ವಿರುವ ಬೃಹತ್ ಬಂಡೆಯ ೬ ಅಡಿಗಳಷ್ಟು ವಿಸ್ತಾರವಾದ ಪ್ರವೇಶವನ್ನು ಕೆತ್ತನೆಯ ವಿವರಗಳು ಒಳಗೊಂಡಿದೆ. ಒಂದು ವೀರಗಲ್ಲಿನ ಸರ್ವಲಕ್ಷಣಗಳನ್ನು ಇದು ತಾಳಿರುವುದಾದರೂ ಯುದ್ಧದ ವಿವರಗಳನ್ನು ಕಣ್ಣಿಗೆ ಕಟ್ಟಿರುವ ರೀತಿಯಲ್ಲಿ ಬಿಡಿಸಿಟ್ಟಿರುವ ಶಿಲ್ಪಿಯ ಕಲಾ ನೈಪುಣ್ಯವು ಅಚ್ಚರಿಪಡುವಂತಿದೆ.

ಆನೆ ಮತ್ತು ಕುದುರೆಗಳ ಭಾಗಿತ್ವಕ್ಕೆ ಮಹತ್ವವಿರುವ ಯುದ್ಧ ಚಿತ್ರಣವನ್ನು ತನ್ನಲ್ಲಿ ಹೊಂದಿರುವ ನಂಬಿಹಳ್ಳಿಯ ಸಮರಶಿಲ್ಪದಲ್ಲಿ ಮೂರು ಹಂತಗಳನ್ನು ಗುರುತಿಸಬಹುದು. ಮೊದಲ ಹಂತದಲ್ಲಿ ರಣಭೂಮಿಯು ಭೀಭತ್ಸತೆ ಎದ್ದು ಕಾಣುತ್ತದೆ. ಇದು ಕಾಳಗದ ತೀವ್ರತೆಯನ್ನು ಮನತಟ್ಟುವಂತೆ ಶಿಲ್ಪದ ಮೂಲಕ ಹೇಳುವುದಕ್ಕೆ ನಿದರ್ಶನವಾಗಿದೆ. ಯುದ್ಧಭೂಮಿಯಲ್ಲಿ ಕಡಿದು ಬಿದ್ದಿರುವ ಸೈನಿಕರು, ತುಂಡಾದಂತೆ ಕಾಣುವ ಕುದುರೆಗಳು, ಅದನ್ನು ತಿನ್ನಲು ಹವಣಿಸುತ್ತಿರುವ ದುಷ್ಟ ಮೃಗ ಪಕ್ಷಿಗಳ ಸಂಕುಲವನ್ನು ಬಿಡಿಸಿ ತೋರಿಸಲಾಗಿದೆ. ರಣಪಿಶಾಚಿಗಳ ರೂಪದಲ್ಲಿ ಕಂಡುಬರುವ ಅವು ಬೇತಾಳಗಳು ಇರಬಹುದು - ಎರಡು ಮೈ ನವಿರೇಳಿಸುವ ಆಕಾರಗಳನ್ನು ಇಲ್ಲಿ ಬಿಡಿಸಲಾಗಿದೆ. ಇವುಗಳ ಕೈಗಳಲ್ಲಿ ಯಾವುದೋ ಅರೆಬರೆಯಾದ ಶರೀರವಿದ್ದು ಅದನ್ನು ಸಿಗಿದು ತಿನ್ನುತ್ತಿರುವಂತೆ ಕಂಡು ಬರುವುದು ಭೀಷಣತೆಯ ಪರಾಕಾಷ್ಠತೆಯ ಉದಾಹರಣೆ ಎಂದು ಹೇಳಬಹುದು.

ಸಮರಶಿಲ್ಪದ ಎರಡನೆಯ ಹಂತವನ್ನು ಪ್ರಮುಖ ಭಾಗವೆಂದು ಪರಿಗಣಿಸಬಹುದು. ಇಲ್ಲಿ ಸಮರದ ವಿಧಿವಿಧಾನಗಳ ಚಿತ್ರವಿವರಣೆ ಇದೆ. ಇದರಿಂದ ಯುದ್ಧದಲ್ಲಿ ಭಾಗವಹಿಸಿದ ಪ್ರಮುಖ ಬಲಗಳ ಅರಿವುಂಟಾಗುತ್ತದೆ. ಆನೆಗಳ ಪರಾಕ್ರಮ ಶೈಲಿಯನ್ನು ಇಲ್ಲಿ ಕಾಣುತ್ತೇವೆ. ಅವುಗಳ ಬೆನ್ನ ಮೇಲೆ ಬುಟ್ಟಿ ಆಕಾರದ ಅಂಬಾರಿಯಿದ್ದು ಅದರಲ್ಲಿ ಕುಳಿತ ವೀರರು ಬಾಣ ಪ್ರಯೋಗ ನಿರತರಾಗಿದ್ದರೆ, ಯುದ್ಧಕ್ಕೆ ಅಗತ್ಯವಾದ ರೀತಿಯಲ್ಲಿ ಆನೆಗಳನ್ನು ತರಬೇತಿಗೊಳಿಸಿರುವುದನ್ನು ಇಲ್ಲಿನ ಕ್ರಿಯಾಶೀಲವಾದ ಆನೆಗಳ ಚಿತ್ರಣದಿಂದ ಮನಗಾಣಬಹುದಾಗಿದೆ. ಶಿಲ್ಪದ ಎಡ-ಬಲಭಾಗಗಳಲ್ಲಿ ಎರಡೆರಡು ಆನೆಗಳಿವೆ. ಎಲ್ಲವೂ ಸಹ ಒಂದಲ್ಲ ಒಂದು ರೀತಿ ಕ್ರಿಯಾಭಂಗಿಯಲ್ಲಿರುವಂತೆ ಕಂಡು ಬರುತ್ತವೆ. ಕುದುರೆಗಳನ್ನು ತುಂಡರಿಸಿದ ಆನೆಗಳ ಚಿತ್ರಣವಿರುವಂತೆ ತಮ್ಮ ಸೊಂಡಿಲಿನಲ್ಲಿ ವೀರನನ್ನು ಸುತ್ತಿಕೊಂಡಿರುವ ಆನೆ ಯೊಂದನ್ನು ನಾವು ಗಮನಿಸಬಹುದು. ಇದು 'ತಿರ್ದಾನೆಮಲ್ಲ' ಎಂಬ ಬಿರುದಿಗೆ ಸಮೀಪವಾದದ್ದಾಗಿದೆ.

ಯುದ್ಧಶಿಲ್ಪದ ಮಧ್ಯಭಾಗದಲ್ಲಿ ಎದ್ದು ಕಾಣುವ ಕುದುರೆಗಳನ್ನು ಪ್ರಮುಖ ಬಲವನ್ನಾಗಿ ಪರಿಗಣಿಸಬಹುದು. ಅಶ್ವಗಳ ಮೇಲೆ ಕುಳಿತು ಹೋರಾಡುವ ಕದನದ ಪ್ರಾಮುಖ್ಯತೆ ಇದರಿಂದ ವ್ಯಕ್ತವಾಗುತ್ತದೆ. ಇದರಿಂದಾಗಿ ಕುದುರೆಗಳ ಸಂಪತ್ತನ್ನು ಹೊಂದಿದ ವೀರಪುರುಷನ ಚಿತ್ರಣ ಮನಸ್ಸಿನಲ್ಲಿ ಮೂಡುತ್ತದೆ. ಇಲ್ಲಿನ ಕುದುರೆಗಳ ಚಿತ್ರಣದಲ್ಲಿ ಸಾಮಾನ್ಯ ವೀರರ ಸುಳಿವು ನೀಡುವ ಒಂದು ಭಾಗವಿದ್ದರೆ, ಎದುರು ಬದುರಾಗಿ ಕುದುರೆಗಳ ಮೇಲೆ ಕುಳಿತು ಹೋರಾಟ ನಡೆಸಿರುವ ಪ್ರಮುಖ ರಾಜಕುಟುಂಬದ ವೀರರನ್ನು ಗಮನಕ್ಕೆ ತಂದುಕೊಳ್ಳಬಹುದು.

ಈ ಶಿಲ್ಪದಲ್ಲಿ ಕಂಡು ಬರುವ ಒಂದೆರಡು ವೈಶಿಷ್ಟ್ಯಗಳಲ್ಲಿ ಧ್ವಜಲಾಂಛನಗಳ ಪ್ರತ್ಯೇಕತೆ ಹೆಸರಿಸಬೇಕಾದದ್ದು. ಎಡಭಾಗದ ಮೇಲಿನ ಹಂತದಲ್ಲಿ ಕುದುರೆಯ ಮೇಲೆ ಕುಳಿತಿರುವ ವೀರಶ್ರೇಷ್ಠನ ಹಿಂಬದಿಯಲ್ಲಿ ಇಬ್ಬರು ಪುರುಷ ವ್ಯಕ್ತಿಗಳಿದ್ದಾರೆ. ಇವರಲ್ಲಿ ಒಬ್ಬನು ರಾಜನಿಗೆ ಸತ್ತಿಗೆಯನ್ನು ಹಿಡಿದಿದ್ದಾನೆ. ಆದರೆ ಮತ್ತೊಬ್ಬನ ಕೈಲಿರುವ ಧ್ವಜವು ಕುತೂಹಲ ಹುಟ್ಟಿಸುತ್ತದೆ. ಇದು ಎಲುಬು ಗಳನ್ನು ಅಡ್ಡಕ್ಕೆ ಜೋಡಿಸಿ ಅದರ ಮೇಲೆ ತಲೆಬುರುಡೆಯನ್ನು ಸಿಕ್ಕಿಸಿದಂತೆ ಕಂಡುಬರುತ್ತದೆ. ಪಲ್ಲವರು ಚಾಲುಕ್ಯರಿಂದ ಸೋತಮೇಲೆ ತಮ್ಮ ರಾಜಧಾನಿಯನ್ನು ವಾತಾಪಿಯಿಂದ ವೆಂಗಿಗೆ ಬದಲಾಯಿಸಿ ಅಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು. ಇವರ ರಾಜ ಲಾಂಛನ ನಂದಿ ಮತ್ತು ಧ್ವಜ ಖಟ್ವಾಂಗ್ಗವಾಗಿತ್ತು[೨] ಎಂಬ ಒಂದು ಅಭಿಪ್ರಾಯವಿದೆ. ಇಲ್ಲಿ ಕಾಣುವ ಧ್ವಜವು ಸಹ ಖಟ್ವಾಂಗ ವಾಗಿರಬಹುದು.


ಸಮರಶಿಲ್ಪದ ಮೂರನೆಯ ಮತ್ತು ಕಡೆಯ ಹಂತವನ್ನು ಗಮನಿಸಿದಾಗ ಇದು ಸ್ವರ್ಗಾರೋಹಣ ದೃಶ್ಯಕ್ಕೆ ಸಮೀಪವಾದದ್ದು. 'ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ' ಎಂಬ ವೀರ ಉಕ್ತಿಗೆ ಅನುಗುಣವಾಗಿ ಈ ಶಿಲ್ಪದ ಅಗ್ರ ಭಾಗದಲ್ಲಿರುವ ದೃಶ್ಯ ಮಾಲಿಕೆಯನ್ನು ಗಮನಿಸಬೇಕು. ಇದು ಬೇಗೂರಿನ ಯಥೋಚಿತ ಅನುಸರಣೆ ಎಂಬುದನ್ನು ತಳ್ಳಿ ಹಾಕುವಂತಿಲ್ಲ. ಸುರಾಂಗನೆಯರು ತಮ್ಮ ಸಂಗೀತ ನೃತ್ಯ ಸೇವೆಗಳಿಂದ ವೀರನನ್ನು ಓಲೈಸುತ್ತಿರುವ ಚಿತ್ರ ಭಾಗವು ಶಿಲ್ಪದ ಒಟ್ಟಾರೆ ನೋಟವನ್ನು ದ್ವಿಗುಣಗೊಳಿಸುವಂತಿದೆ.

ಶ್ರೀನಿವಾಸದಪುರದ ಸುತ್ತಲೂ ನಮಗೆ ದೊರೆಯುವ ಪ್ರಾಚೀನ ಶಾಸನಗಳು ಮತ್ತು ವೀರಗಲ್ಲುಗಳು ಬಾಣರ ಪ್ರಭಾವ ಯುತವಾದ ಆಳ್ವಿಕೆಯನ್ನು ಸಮರ್ಥಿಸುತ್ತವೆ. ಇದಕ್ಕೆ 'ಗುಳ್ಳಗಾನ ಪೊದ' ಶಾಸನಗಳನ್ನು ಪ್ರಬಲ ದಾಖಲೆಗಳೆಂದು ನೋಡಬೇಕು. ವೆಂಕಟಾಪುರ, ಬಯ್ಯಪಲ್ಲಿ ಮತ್ತು ಮಡಿವಾಳ (ಬೆಚರಾಕ್)ಗಳಲ್ಲಿ ಇರುವ ವೀರಗಲ್ಲುಗಳು ಈ ಪ್ರದೇಶದ ಹಳಮೆಯ ಹಿರಿಮೆಯನ್ನು ತಮ್ಮಲ್ಲಿ ಹೊತ್ತು ಇತಿಹಾಸದ ಅಧ್ಯಯನಕ್ಕೆ ನೆರವಾಗಿವೆ. ಇವುಗಳ ಸಾಲಿಗೆ ಸೇರುವ ನಂಬಿಹಳ್ಳಿಯ 'ಸಂಗ್ರಾಮ ಶಿಲೆ' ಯನ್ನು ಇತಿಹಾಸದ ಪುನರ್‌ಮಂಥನದಲ್ಲಿ ಮೈಲಿಗಲ್ಲಾಗಿ ಗುರುತಿಸಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ನೊಳಂಬ ಇತಿಹಾಸ ದರ್ಶನ**, ನೊಳಂಬ ಇತಿಹಾಸ ಪರಿಷತ್, ತಿಪಟೂರು.
೨. ಅದೇ.

★ ★ ★ ★



ವೀರನಾಡಿದ ನುಡಿ ಬಾಣಬಿಟ್ಟಂತೆ ವೇಗಗಾಮಿ
ಸಮರವಿರಲಿ ನಾಡಗಡಿ ಇರಲಿ ಅವನು ಶೌರ್ಯಗಾಮಿ
ದೇಹದಭಿಮಾನ ಬಿಟ್ಟು ನಾಡ ಅಭಿಮಾನ ಮಿಡಿವ ವೀರಗಂಧಿ
ಇತಿಹಾಸ ನೆನಸುತದೆ ಚಿರಕಾಲ ಈ ಬಾಳಬಗೆಯ ನಾಂದಿ

ಡಾ|| ಕರುಣಾ ವಿಜೇಂದ್ರ*

'ಅಗ್ರತಲಸಂಚರ' ಪಾದಭೇದ ಒಂದು ಪರಿಶೀಲನೆ

ಚಲುಕ್ಯ ಸಾಮ್ರಾಜ್ಯವು ಅತಿ ವಿಸ್ತಾರವಾದ ಸಾಮ್ರಾಜ್ಯವಾಗಿದ್ದರೂ ಬಿಜಾಪುರ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳಲ್ಲಿಯೇ ದೇವಾಲಯಗಳನ್ನು ನಿರ್ಮಿಸಿರುವುದು ಒಂದು ವಿಶೇಷ[೧]. ಚಲುಕ್ಯರ ಕಾಲದ ದೇವಾಲಯಗಳು ಅನೇಕ ಬೆಳವಣಿಗೆಯ ಹಂತಗಳನ್ನು ಕಂಡಂತಹ ಕಾಲ. ಕ್ರಿ.ಶ. ಸುಮಾರು ಏಳನೆಯ ಶತಮಾನದ ಹೊತ್ತಿಗೆ ಪರಿಪೂರ್ಣವಾಗಿ ದೇವಾಲಯದ ಎಲ್ಲ ಅಂಶಗಳನ್ನು ಒಳಗೊಂಡಂತೆ ನಿರ್ಮಾಣವಾದ ದೇವಾಲಯಗಳು ಪಟ್ಟದ ಕಲ್ಲಿನಲ್ಲಿರುವ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳು.

ಈ ದೇವಾಲಯಗಳನ್ನು ಚಲುಕ್ಯ ಇಮ್ಮಡಿ ವಿಕ್ರಮಾದಿತ್ಯನು ತಾನು ಕಂಚೀರಾಜ್ಯವನ್ನು ಮೂರು ಸಲ ಗೆದ್ದುದರ ಜ್ಞಾಪಕಾರ್ಥವಾಗಿ ತನ್ನ ಇಬ್ಬರು ರಾಣಿಯರ ಹೆಸರಿನಲ್ಲಿ ಕಟ್ಟಿಸಿದ ದೇವಾಲಯಗಳಾಗಿವೆ. ಈ ಎರಡೂ ದೇವಾಲಯಗಳು ವಾಸ್ತುಶೈಲಿ, ಶಿಲ್ಪ, ಶಾಸನ, ನೃತ್ಯ ಅನೇಕ ವಿಷಯಗಳ ಮಂಥನಕ್ಕೆ ಆಗರಗಳಾಗಿವೆ.

ಹಿರಿಯರಾಣಿ ಲೋಕಮಹಾದೇವಿಯ ಹೆಸರಿನಲ್ಲಿ ನಿರ್ಮಿಸಲ್ಪಟ್ಟಿರುವ ಲೋಕೇಶ್ವರ ದೇವಾಲಯದ ಅರ್ಧ ಮಂಟಪದಲ್ಲಿ ನೃತ್ಯಕ್ಕೆ ಸಂಬಂಧ ಪಟ್ಟಂತೆ ೨ ಬಹಳ ಮುಖ್ಯ ಶಾಸನಗಳಿವೆ. ಒಂದು ಸಂಸ್ಕೃತ ಭಾಷೆಯಲ್ಲಿಯೂ ಇನ್ನೊಂದು ಕನ್ನಡ ಭಾಷೆಯಲ್ಲಿಯೂ ಇವೆ. ಕನ್ನಡ ಭಾಷೆಯಲ್ಲಿರುವ ಶಾಸನದ ಪರಿಶೀಲನೆ ಈ ಲೇಖನದ ವಸ್ತು ವಿಷಯವಾಗಿದೆ.

ಎ. ಎಂ. ಅಣ್ಣಿಗೇರಿಯವರ 'ಪಟ್ಟದಕಲ್ಲ ಗುಡಿಗಳು' ಎಂಬ ಪುಸ್ತಕದ ಪುಟ ೮೧ರಲ್ಲಿ ಸಂಸ್ಕೃತ ಶಾಸನ ಪಠ್ಯ ಹೀಗಿದೆ.

೧ ಭರತನುತ ವಚನ ರಚನಾ। ವಿರಚಿತ ನಟಸೇವ್ಯ
೨ ಸಿಂಘನಾದೇನ ಪರನಟ[೧] ಮಧಾನ್ದಹಸ್ತೀ ಪರಿಹೀನ ಮದೋ
೩ ಭವತ್ಯೇವ॰ ನಟಸೇವ್ಯ ಭರತ ಮತಯುತ ಪಟುತ
೪ ರ ವಚನಾ ಶನಿ ಪ್ರಪಾತೇನ ಕುಟಿಲೋನ್ನತ ನಟಶೈಲ[ಃ*]
೫ ಸ್ಫುಟಿತಾನತ ಮಸ್ತಕಟ್ಟಿತ [೦] ತಿ ಅಚಲನ್

ಇಂಡಿಯನ್ ಆ್ಯಂಟಿಕ್ವೆರಿ ಸಂಪುಟ ೧೦ರಲ್ಲಿ ಜೆ. ಎಫ್. ಫ್ಲೀಟ್ ಅವರು ಸಂಸ್ಕೃತ ಶಾಸನದ ವಿವರಣೆಯನ್ನು ನೀಡುತ್ತಾರೆ. ಶಾಸನದ ಪಠ್ಯದ ಕೊನೆಯ ಸಾಲು ಹೀಗಿದೆ:

೪ ....
೫ ಸ್ಫು(ಸ್ಫು) ಟಿ ತಾನತ ಮಸ್ತಕಃ =ಪಟತಿ ।।ಅಚಲದ।।

ಡಾ|| ಚೂಡಾಮಣಿ ನಂದಗೋಪಾಲ್ ಅವರು ತಮ್ಮ ಮಹಾಪ್ರಬಂಧದಲ್ಲಿ ಜೆ. ಎಫ್. ಫ್ಲೀಟ್ ಅವರ ವಾಕ್ಯಗಳನ್ನು ಮತ್ತು ಶಾಸನ ಪಠ್ಯವನ್ನೇ ಉದ್ಧರಿಸಿದ್ದಾರೆ.

ಡಾ|| ಶೀಲಕಾಂತ ಪತ್ತಾರರು "ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ" ಗ್ರಂಥದಲ್ಲಿ ಎ. ಎಂ. ಅಣ್ಣಿಗೇರಿಯವರ ವಿವರಣೆಯನ್ನು ಅನುಮೋದಿಸಿದ್ದಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಶಾಸನದ ಕೊನೆಯಪದ 'ಅಚಲನ್' ಪದವಾಗಿರುವುದು ದೃಢಪಟ್ಟಿದೆ.


ಡಾ|| ರಾ. ಗಣೇಶ್ ಶತಾವಧಾನಿ ಅವರು ಸಂಸ್ಕೃತ ಶಾಸನ ಪಠ್ಯಕ್ಕೆ ಈ ರೀತಿಯಾದ ಅರ್ಥವಿವರಣೆ ನೀಡಿದ್ದಾರೆ.

ಭರತನಿಂದ ಅಗ್ರಮಾನ್ಯವಾಗಿ ರಚಿಸಲ್ಪಟ್ಟಿರುವ ಅತಿ ಗೌರವಕ್ಕೆ ಪಾತ್ರವಾದ ಬರವಣಿಗೆ ನಾಟ್ಯಶಾಸ್ತ್ರ. ಅಂತಹ ನಾಟ್ಯಶಾಸ್ತ್ರ ವ್ಯಾಸಂಗದಿಂದ ರೂಪುಗೊಂಡಂತಹ ನಟಸೇವ್ಯನ ಘರ್ಜನೆಯಿಂದ ಆತನ ಸಿಂಹನಾದದಿಂದ ಬೇರೆಯನಟ ಎಂಬ ಮದಿಸಿದ ಆನೆಯಗತ್ತು ಮದಿಸುವುದು ನಿಶ್ಚಿತ. ನಟಸೇವ್ಯನು ಹೇಳುವ ಭರತನ ಅಭಿಪ್ರಾಯದಿಂದ ಕೂಡಿರುವಂತಹ ಮಾತೆನ್ನುವ ಹಿಡಿಯುವ ಸಿಡಿಲಿನಿಂದ ಅಂಕುಡೊಂಕಾಗಿರುವ ನಟನೆಂಬ ಬೆಟ್ಟ ಸೀಳಿ ಬಿದ್ದು ಹೋಗುವ ಶಿಖರ.[೨]

ತಾತ್ಪರ್ಯ : ಭರತನ ನಾಟ್ಯಶಾಸ್ತ್ರದಂತೆ ಶಾಸ್ತ್ರಸಮ್ಮತವಾಗಿ ನಟಸೇವ್ಯ ತಿಳಿಯಪಡಿಸುವ ವಿಚಾರಗಳನ್ನು ಶಾಸ್ತ್ರದ ಅರಿವಿಲ್ಲದಂತಹವರು ಮದದಿಂದ ಅವನ ಮುಂದೆ ವಾದಿಸಿದಾಗ ಅವರ ಅಹಂಕಾರವು ಈತನ ವಾಕ್‌ಝುರಿಯ ಮುಂದೆ ಪತನವಾಗುತ್ತಿತ್ತು ಎಂದು ಅರ್ಥೈಸಬಹುದು. ಬಹುಶಃ ಆ ಕಾಲಕ್ಕೆ 'ನಟಸೇವ್ಯ' ಬಿರುದಾಂಕಿತನಾದ ಮಹಾಪ್ರವೀಣನಾದ ನಾಟ್ಯಾಚಾರ್ಯನ ಸಮ್ಮುಖದಲ್ಲಿ ಇಂತಹ ಸನ್ನಿವೇಶಗಳು ನಡೆದಿರುವ ಸಾಧ್ಯತೆ ಇದೆ. ಅಂದರೆ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಶಾಸ್ತ್ರ ಮತ್ತು ಪ್ರಾಯೋಗಿಕ ನೆಲೆಯಲ್ಲಿ ದ್ವಂದ್ವಗಳು ನಡೆದು ನಟಸೇವ್ಯನು ಗೆದ್ದಿರುವ ಹಿನ್ನೆಲೆಯಲ್ಲಿ ಶಾಸನವನ್ನು ಹಾಕಿಸಿರುವ ಸಾಧ್ಯತೆ ಇದೆ ಎಂದು ಡಾ|| ರಾ. ಗಣೇಶ್ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯದ ಪೂರ್ವ ಅರ್ಧ ಮಂಟಪದಲ್ಲಿ ಪದ್ಮನಿಧಿಯ ಕೆಳಗೆ ಒಂದು ಕನ್ನಡ ಶಾಸನವಿದೆ.

* ಸಹ ಸಂಶೋಧಕಿ, ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ದಕ್ಷಿಣ ಪ್ರಾದೇಶಿಕ ಕೇಂದ್ರ, ಬೆಂಗಳೂರು-೨




ಎ. ಎಂ. ಅಣ್ಣಿಗೇರಿ ಅವರು ತಮ್ಮ ಅದೇ ಪುಸ್ತಕದಲ್ಲಿ ಹೀಗೆ ದಾಖಲಿಸಿದ್ದಾರೆ.

೧ ಖ್ಯಾತ ಮಹಾಪ್ರಭಾವ ಭರತಾಗಮ[೧] ಯುಕ್ತಿ ಬಹು ಪ್ರಕಾ
೨ ರದಾ ಮಾತಿನೊಳೆಲ್ಲ ಮೇಣ ನಟಸೇವ್ಯನ ಮುಸ್ತೆ ಯಥೋ
೩ ಕ್ತ ಮಾರ್ಗದಿನ್ದಿತೆಜಿದಿಟ್ಟುದಗ್ರತಲಸಞ್ಚರ ಮೆಮ್ಮು
೪ ದಿದೆನ್ದು ದೇ(ಪೇ) ಟ್ಪೊಡಿನ್ನಾತನೆ ನರ್ತಕಂ ನಟ
೫ ರೊಳಗ್ರ [ಳ್^೨] ಮೀ ಭುವನಾನ್ತರಾ [ಳ*] ದೊಳ್ [ii*] ದೇವಯ್ಯ
೬ ಗಳಾ ಮಗ ಅಚಲನ್

ಈ ಶಾಸನಕ್ಕೆ ಎ. ಎಂ. ಅಣ್ಣಿಗೇರಿಯವರ ವಿವರಣೆ ಹೀಗಿದೆ

"ಭರತಾಗಮ [ನಾಟ್ಯಶಾಸ್ತ್ರ] ಯುಕ್ತಿಯ ಬಹುಪ್ರಕಾರದ ಮಾತಿನೊಳಗೆಲ್ಲಾ, ಇದರ ಕೊನೆ ಹೀಗೆ, ಸ್ಥಲ ಎಂದರೆ ಇದು, ಸಂಚಾರ ಎಂದರೆ ಇದು ಎಂಬುದಾಗಿ - ಶಾಸ್ತ್ರ ಸಮ್ಮತವಾದ ರೀತಿಯಲ್ಲಿ ನಟಸೇವ್ಯನ ಮುಂದೆ ಹೇಳಬೇಕು. ಅರ್ಥಾತ್ ನಟಸೇವ್ಯನು ಹೌದೆಂದು ಒಪ್ಪಬೇಕು. ಅಂದರೆ ಆತನೇ ನರ್ತಕ. ಆತನೇ ಭೂಮಂಡಲದ ನಟರಲ್ಲಿ ಶ್ರೇಷ್ಠ ಎಂಬುದು ಈ ಪದ್ಯದ ಅರ್ಥ. ಕೊನೆಗೆ ದೇವಯ್ಯನ ಮಗ ಅಚಲನ್ ಎಂಬ ನಟಸೇವ್ಯನ ಹೆಸರು ಬರುವುದು"

ಈ ವಿವರಣೆಯನ್ನು ಓದಿದಾಗ ಸ್ಥಲ ಮತ್ತು ಸಂಚರ ಮಾಡಿದರೆ ನರ್ತಕ ಎನಿಸಿಕೊಳ್ಳುತ್ತಾನೆ ಎಂಬ ವಾಕ್ಯದ ಔಚಿತ್ಯ, ಅರ್ಥ ತಿಳಿದು ಬರಲಿಲ್ಲ. ಶಾಸನಪಠ್ಯವನ್ನು ಮತ್ತೆ ಮತ್ತೆ ಓದಿದಾಗ ಶಾಸನದ ೩ನೇ ಸಾಲಿನಲ್ಲಿ 'ಈ ತೆರದಿಂ ಇದ್ದುದು ಅಗ್ರತಲಸಂಚರ' ಎಂಬ ಪದಗಳಿರುವುದು ಸ್ಪಷ್ಟವಾಯಿತು. ನರ್ತನದಲ್ಲಿ ಕಾಲಿನ ಚಲನೆಗೆ ಸಂಬಂಧಪಟ್ಟ ಒಂದು ಪಾರಿಭಾಷಿಕ ಶಬ್ದ 'ಅಗ್ರತಲ ಸಂಚರ' ಭರತನು ನಾಟ್ಯಶಾಸ್ತ್ರದಲ್ಲಿ ಅನೇಕ ವಿಧವಾದ ಅಂಗ, ಉಪಾಂಗ, ಪ್ರತ್ಯಾಂಗಗಳ ಚಲನೆಗಳನ್ನು ಹೇಳುತ್ತಾನೆ. ಅದರಲ್ಲಿ ಪಾದಭೇದಕ್ಕೆ ಸಂಬಂಧಿಸಿದ್ದಂತೆ ಹೀಗೆ ಹೇಳುತ್ತಾನೆ.

ಶ್ಲೋಕ : ॥ ಉದ್ಘಟಿತ. ಸಮಾಶ್ಚೈವ ತಥಾಗ್ರತಲಸಂಚರಃ
ಅಂಚಿತಃ ಕುಂಚಿತಾಶ್ಚೈವ ಪಾದಃ ಪಂಚವಿಧಃ ಸ್ಮೃತಂ॥[೨]

ಪಾದಭೇದಗಳು ಒಟ್ಟು ಐದು:

೧. ಉದ್ಘಟ್ಟಿತ : ಕಾಲಬೆರಳುಗಳ ಮೇಲೆ ನಿಂತು ಹಿಮ್ಮಡಿಯನ್ನು ನೆಲಕ್ಕೆ ಹೊಡೆಯುವುದು.

೨. ಸಮ : ಎರಡು ಪಾದಗಳನ್ನು ಜೋಡಿಸಿ ಸಮದಲ್ಲಿ ನಿಲ್ಲುವುದು (ಚಿತ್ರ - ೧)

೩. ಅಗ್ರತಲಸಂಚರ : ಎರಡೂ ಪಾದಗಳನ್ನು ನೆಲದಿಂದ ಮೇಲೆತ್ತಿ ಕಾಬೆರಗಳುಗಳ ತುದಿಯಲ್ಲಿ ನಿಲ್ಲುವುದು, ನಡೆಯುವುದು (ಚಿತ್ರ.೨)

೪. ಅಂಚಿತ : ಒಂದು ಪಾದದ ಹಿಮ್ಮಡಿ ನೆಲಕ್ಕೆ ತಾಗಿಸುವುದು (ಚಿತ್ರ-೩)

೫. ಕುಂಚಿತ : ಒಂದು ಪಾದದ ಕಾಲ ಬೆರಳುಗಳನ್ನು ಹೊರ ಮುಖವಾಗಿ ಅಥವಾ ಒಳ ಮುಖವಾಗಿ ಮಡಿಸಿ/ಬಗ್ಗಿಸಿ ನಿಲ್ಲುವುದು ಅಥವಾ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಎಳೆಯುವುದು (ಚಿತ್ರ -೪)

ಈ ವಿವರಣೆಗಳಿಂದ ಈ ಶಾಸನದಲ್ಲಿ ಬಂದಿರುವ ಸಾಲು ಅಗ್ರತಲಸಂಚರ ಪಾದಭೇದವನ್ನು ಉಲ್ಲೇಖಿಸುತ್ತಿರುವುದು ಸ್ಪಷ್ಟವಾಯಿತು.

ಈ ಶಾಸನದ ಪದ್ಯವನ್ನು ಡಾ|| ರಾ. ಗಣೇಶ್ ಅವರು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ.

'ಇದು ಉತ್ಪಲಮಾಲಾ ಛಂದಸ್ಸಿನಲ್ಲಿ ಬರುವಂತಹ ಶಾಸನ ಪದ್ಯವಾಗಿದೆ. ಖ್ಯಾತವಾಗಿರುವ, ಅತ್ಯಂತ ಪ್ರಭಾವಶಾಲಿಯಾದ ನಾಟ್ಯಶಾಸ್ತ್ರದ ಅರ್ಥವಂತಿಕೆಯನ್ನು ಮತ್ತು ಅದಕ್ಕೆ ಸಂಬಂಧ ಪಟ್ಟಂತೆ ಪ್ರಯೋಗವನ್ನು ತಿಳಿದಂತಹ ಇವಲ್ಲದೆ, 'ನಟಸೇವ್ಯ'; ಎಂಬುವಂತಹವನ ಮುಂದೆ ಯಥೋಕ್ತ ಮಾರ್ಗದಿಂದ ಈ ರೀತಿಯಾಗಿ ಇರುವುದು 'ಅಗ್ರತಲಸಂಚರ' ಎಂದು ಹೇಳುವವನಾದರೆ ಇನ್ನು ಅಂಥವನೇ ನರ್ತಕ ಎಂಬುದು ಶಾಸನ ಪದ್ಯದ ಅರ್ಥ೨ ಎಂದು ಹೇಳಿದರು.'

ತಾತ್ಪರ್ಯ : ಭರತಾಗಮದ ಎಲ್ಲ ಹಂತಗಳನ್ನು ತಿಳಿದುಕೊಂಡಂತಹ ಮತ್ತು ಅರ್ಥವಂತಿಕೆಯಿಂದ ಪ್ರಾಯೋಗಿಸುತ್ತಿದ್ದ ನಟಸೇವ್ಯನು ಅಗ್ರತಲ ಪಾದಭೇದದ ಪ್ರಾಮುಖ್ಯತೆಯನ್ನು ತಿಳಿದಿದ್ದನಲ್ಲದೆ, ಆ ಕಾಲಕ್ಕೆ ಅದನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಬೇಕೆಂದು ನಾಟ್ಯಶಾಸ್ತ್ರದ ಅಧ್ಯಯನದ ಹಿನ್ನೆಲೆಯಲ್ಲಿ ಹೇಳಿರುವ ಸಾಧ್ಯತೆಗಳಿವೆ. ಅಂದರೆ ರೇಚಿತಗಳು, ಚಾರಿಗಳು, ಮತ್ತು ಕರಣಗಳಲ್ಲಿ ಈ ಪಾದಭೇದವನ್ನು ವಿವಿಧ ರೀತಿಯಲ್ಲಿ ಅಳವಡಿಸಿಕೊಂಡು ಅರ್ಥವತ್ತಾಗಿ ಶಾಸ್ತ್ರಬದ್ಧವಾಗಿ ನಟಸೇವ್ಯನ ಮುಂದೆ ಉತ್ತಮವಾಗಿ ಮಾಡಿ ತೋರಿಸಿದವನೇ 'ನರ್ತಕ' ಎಂದೆನಿಸಿಕೊಳ್ಳಬೇಕಾಗಿದ್ದ ಕಾಲವಾಗಿದ್ದಿರಬೇಕು.

ಅಗ್ರತಲಸಂಚರ ಪಾದಭೇದವು ಕರಣಗಳನ್ನು ಮಾಡಲು ಬಹುಮುಖ್ಯವಾಗುತ್ತದೆ. ಶ್ರೀಮತಿ ಸುಂದರಿ ಸಂತಾನಂ (ಕರಣಗಳಲ್ಲಿ ಪ್ರಾವೀಣ್ಯತೆ ಪಡೆದ ನೃತ್ಯಾಂಗನೆ) ಅವರನ್ನು ಸಂದರ್ಶಿಸಿ ಕರಣಗಳನ್ನು ಮಾಡುವಾಗ ಅಗ್ರತಲ ಸಂಚರ ಪಾದಭೇದದ ಪ್ರಾಮುಖ್ಯತೆ ಎಷ್ಟಿದೆ ಎಂದು ಕೇಳಿದಾಗ 'ಅಗ್ರತಲಸಂಚರ ಪಾದಭೇದ'ವಿಲ್ಲದೆ ಕರಣಗಳನ್ನು ಹೇಗೆ ಮಾಡಲು ಸಾಧ್ಯ ಎಂದು ಮರುಪ್ರಶ್ನಿಸಿದರು (ಕರಣಗಳು ವಿವಿಧ ನೃತ್ಯ ಭಂಗಿಗಳನ್ನು ಒಳಗೊಂಡಂತಹ ಒಂದು ಗುಂಪು). ಕರಣಗಳು ಒಟ್ಟು ೧೦೮. ಅದರಲ್ಲಿ ೬೦ ರಷ್ಟು ಕರಣಗಳು ವಿವಿಧ ಹಂತದಲ್ಲಿ ಅಗ್ರತಲ ಸಂಚರದ ಮೇಲೆ ಅವಲಂಬಿತವಾಗಿದೆ.

ಉದಾ : ತಲಪುಷ್ಪ ಪುಟ, ನಿಕ್ಕುಟ, ಪಾರ್ಶ್ವನಿಕ್ಕುಟ, ಸ್ವಸ್ತಿಕ, ಆವರ್ತ, ಉಪಸ್ಸರ್ಪ, ವರ್ಧಿತ, ಹೀಗೆ ಅನೇಕ ಕರಣಗಳು ಇದರ ಮೇಲೆ ಅವಲಂಬಿತವಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಗಮನಿಸಿದಾಗ ನಟಸೇವ್ಯ ಬಿರುದಾಂಕಿತ ನರ್ತಕನು ಭರತಾಗಮದಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದ ನಾಟ್ಯಶಾಸ್ತ್ರದ ಮೀಮಾಂಸಕನಾಗಿರುವ ಸಾಧ್ಯತೆ ಇದೆ. ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯಗಳ ಕ್ಷೇತ್ರಕಾರ್ಯ ನಡೆಸಿದಾಗ ಅಲ್ಲಿನ ಶಿಲ್ಪಗಳ ಕೂಲಂಕಷ ಅಧ್ಯಯನದಿಂದ ಆ ಕಾಲದಲ್ಲಿ ನರ್ತನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದ್ದದ್ದು ತಿಳಿದು ಬಂದಿತು.

ಲೋಕೇಶ್ವರ ದೇವಾಲಯದ ಗರ್ಭಗೃಹದ ಎಡಭಾಗದ ಮೊದಲನೇ ಕಂಬದಲ್ಲಿ ಮೂರು ಕುಬ್ಜ ಶಿಲ್ಪಗಳಿವೆ. ಮಧ್ಯದ ಶಿಲ್ಪ ಬಹಳ ವಿಶೇಷವಾಗಿದೆ. ಇಳಿಬಿಟ್ಟ ಉತ್ತರೀಯದಂತಹ ವಸ್ತ್ರವು ಬಹಳ ಸ್ಪಷ್ಟವಾಗಿ ಕಂಡುಬರುತ್ತದೆ. ಈತನು ಪಾರ್ಶ್ವಕ್ರಾಂತ



(೬೩) ಕರಣದಲ್ಲಿದ್ದಾನೆ. ಅವನ ಎಡಭಾಗದ ಕುಬ್ಜನು 'ಪಣವ' ವಾದ್ಯವನ್ನು ನುಡಿಸುತ್ತಿದ್ದಾನೆ.[೫] ಈತನೂ ಸಹ ಮಧ್ಯದ ಕುಬ್ಜನನ್ನೇ ಹೋಲುತ್ತಾನೆ. ಬಿರಿದ ಕೂದಲು ಇಳಿಬಿದ್ದಿದೆ. ಉತ್ತರೀಯವು ಹಾರುತ್ತಿರುವಂತೆ ತೋರುತ್ತದೆ. ಬಹುಶಃ ಮಧ್ಯದಲ್ಲಿರುವ ನರ್ತನಕನಿಗೆ ಸಮನಾಗಿದ್ದ ಶಿಷ್ಯ ಅಥವಾ ಇನ್ನೊಬ್ಬ ನರ್ತಕನಾಗಿರುವ ಸಾಧ್ಯತೆ ಇದೆ. ಅಥವಾ ಇವರಿಬ್ಬರ ಮಧ್ಯೆ ದ್ವಂದ್ವ ನಡೆದಿರುವ ಸಾಧ್ಯತೆಯೂ ಇದೆ. ಶಾಸನದ ಪದ್ಯ ವಿವರಣೆಯಲ್ಲಿ ಡಾ|| ಗಣೇಶ್ ಅವರು ಇದನ್ನು ಪ್ರತಿಪಾದಿಸಿದ್ದರೂ ಕ್ಷೇತ್ರಕಾರ್ಯದಲ್ಲಿ ಶಿಲ್ಪಗಳ ವಿಶ್ಲೇಷಣೆಯಲ್ಲಿ ಈ ಸಂಶಯ ಪೂರಕವಾಗಿದೆ. ಇದೇ ದೇವಾಲಯದ ಗರ್ಭಗೃಹದ ಬಲಭಾಗದ ಎರಡನೇ ಸಾಲಿನ ಕಂಬದಲ್ಲಿ ಮೇಲ್ಗಡೆ ಮಾನವನ ಸಹಜ ಶಿಲ್ಪವಾಗಿ ಒಬ್ಬ ಪುರುಷ ಮತ್ತು ಸ್ತ್ರೀ ನರ್ತಿಸುತ್ತಿರುವ ಶಿಲ್ಪವನ್ನು





ಕಾಣಬಹುದು. ಇವರು ಉಪಸ್ಸೃತ ಕರಣದಲ್ಲಿದ್ದಾರೆ. ಪುರುಷ ಶಿಲ್ಪದಲ್ಲಿ ಅತ್ಯಂತ ಶುದ್ಧ ಶಾಸ್ತ್ರೀಯ ಭಂಗಿಯನ್ನು ಕಾಣಬಹುದು. ಜಟೆ ಇದೆ. ಹಿನ್ನೆಲೆಯಲ್ಲಿ ಮಂಟಪದಲ್ಲಿ ತೂಗುಹಾಕುವ ತೋರಣಗಳನ್ನು ಕಾಣಬಹುದು. ಪುರುಷ ಶಿಲ್ಪ 'ನಾಟ್ಯಾಚಾರ್ಯ ನಟಸೇವ್ಯ' ಎಂದು ಗುರುತಿಸುವ ಸಾಧ್ಯತೆ ಇದೆ.

ತ್ರೈಲೋಕೇಶ್ವರ ದೇವಾಲಯದಲ್ಲಿಯೂ ಸಹ ಅನೇಕ ಶಿಲ್ಪಗಳು ಶಾಸನದ ವಿವರಣೆಯನ್ನು ಪುಷ್ಠೀಕರಿಸುತ್ತವೆ. ದೇವಾಲಯದ ಪೂರ್ವಾಭಿಮುಖ ದ್ವಾರದ (ಗರ್ಭಗೃಹದ ಎಡಭಾಗವಾಗಿ) ಸಮನಾಗಿ ಬರುವ ಕೊನೆಯ ಕಂಬದಲ್ಲಿ ಕಂಡು ಬರುವ ಶಿಲ್ಪವು ಬಹಳ ವಿಶೇಷವಾಗಿವೆ. ಕಂಬದ ಮೊದಲಿನ ಸಾಲಿನಲ್ಲಿ ಶಿವನು ಚತುರ ಕರಣದಲ್ಲಿದ್ದಾನೆ. ಕೆಳಗಡೆ ಸಾಲಿನಲ್ಲಿ ಕುಬ್ಜರಿದ್ದಾರೆ. ಮಧ್ಯದ ಕುಬ್ಜನಿಗೆ ವಿಶೇಷ ಮುಕುಟವಿದೆ. ಕೈಯ್ಯಲ್ಲಿ 'ಕಂಟ'ವಿದೆ. ಶಿಲ್ಪದ ಮೇಲ್ಮೈ ತ್ರುಟಿತವಾಗಿದೆ. ಈತ ಸ್ಪಷ್ಟವಾಗಿ ಭುಜಂಗತ್ರಸ್ತರೇಚಿತ ಕರಣದಲ್ಲಿದ್ದಾನೆ. ಮುಕುಟ ಮತ್ತು ಕಂಟ ನಟಸೇವ್ಯ ಬಿರುದಾಂಕಿತ ನಾಟ್ಯಾಚಾರ್ಯ ಎಂದು ಹೇಳುವ ಅವಕಾಶವನ್ನು ಒದಗಿಸುತ್ತವೆ. ಶಾಸನದ ವಿವರಣೆಯಲ್ಲಿ ಈತನು ಆ ಕಾಲಕ್ಕೆ ಭರತನ ನಾಟ್ಯಶಾಸ್ತ್ರಕ್ಕೆ ಸಮಾನವಾದ ರಚನೆ ಮಾಡಿರಬಹುದು ಎಂಬ ಅಂಶವು ತಿಳಿದು ಬರುತ್ತದೆ. ಈ ವಿವರಣೆಯನ್ನು ದೊರಕಿರುವ ಶಿಲ್ಪವು ಪುಷ್ಠೀಕರಿಸುತ್ತದೆ. ಕಂಟ ಬರವಣಿಗೆಯ ಪ್ರತೀಕವಾಗಿ ಮುಕುಟ ಅವನ ಕಲಾ ಪ್ರೌಢಿಮೆಯನ್ನು ಸಾಂಕೇತಿಕವಾಗಿ ಚಿತ್ರಿಸಿರುವ ಸಾಧ್ಯತೆ ಇದೆ. ಇವುಗಳಲ್ಲದೆ ಗುರುಕುಲದಲ್ಲಿ ಅಧ್ಯಯನ ನಿರತ ವಿದ್ಯಾರ್ಥಿಗಳ ನರ್ತನನಿರತ ವಿದ್ಯಾರ್ಥಿಗಳ ಕೆಲವು ಶಿಲ್ಪಗಳೂ ಕಂಡುಬರುತ್ತವೆ.

ಈ ಎಲ್ಲ ಹಿನ್ನೆಲೆಯಲ್ಲಿ ಗಮನಿಸಿದಾಗ 'ನಟಸೇವ್ಯ' ಬಿರುದಾಂಕಿತ ನಾಟ್ಯಾಚಾರ್ಯನು ಕ್ರಿ.ಶ. ಎಂಟನೇ ಶತಮಾನದಲ್ಲಿ ಇದ್ದ ಒಬ್ಬ ಮಹಾನ್ ನಾಟ್ಯ ಮೀಮಾಂಸಕ, ಶ್ರೇಷ್ಠನಾಟ್ಯಾಚಾರ್ಯ, ಭರತನ ನಾಟ್ಯ ಶಾಸ್ತ್ರಕ್ಕೆ ಸಮನಾದ ಒಂದು ಗ್ರಂಥರಚನೆ ಮಾಡಿರಬಹುದಾದ ಪಂಡಿತ, ಮತ್ತು ಪ್ರಾಯೋಗಿಕವಾಗಿ ಅಗ್ರತಲ ಸಂಚರ ಪಾದಭೇದದಲ್ಲಿ ವಿವಿಧ ಪ್ರಯೋಗಗಳನ್ನು ನಡೆಸಿ ಆ ಕಾಲದ ನರ್ತನಕ್ಕೆ ಅದನ್ನು ಅಳವಡಿಸಿದ ಆ ಕಾಲದ ಮಹಾನ್ ನರ್ತಕ ಎಂಬ ವಿಷಯಗಳು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. *Indian Temple Architecture Form and Transformation* by Adam Nardy., Page - 1.

೨. ಕ್ರಿ.ಪೂ. ಎರಡನೇ ಶತಮಾನ ಮತ್ತು ಕ್ರಿ.ಶ. ಎರಡನೇ ಶತಮಾನದೊಳಗೆ ನಾಟ್ಯಕಲೆಗೆ ಸಂಬಂಧಪಟ್ಟಂತೆ ರಚಿತವಾಗಿರುವ ಸಂಸ್ಕೃತ ಭಾಷೆಯಲ್ಲಿರುವ ಮಹಾ ಆಕರ ಗ್ರಂಥ.

೩. **ನಾಟ್ಯಶಾಸ್ತ್ರ.**, ಎನ್. ಪಿ ಉನ್ನಿ, ಪು. ೩೧೫.

೪. **ನಾಟ್ಯಶಾಸ್ತ್ರ.**, ಆದ್ಯರಂಗಾಚಾರ್ಯ, ಪುಟ. ೮೬.

೫. ಪಣವ : ಅತ್ಯಂತ ಕಿರಿದಾಗಿರುವ ಒಂದು ಕೈಯ್ಯಲ್ಲಿ ಹಿಡಿದು ನುಡಿಸುವಂತಹ ಅವನದ್ದ ವಾದ್ಯ.
Dance and music in Temple Architecture., Dr. Chooda Mani Nandagopal, Page - 155.

ಪ್ರೊ|| ಬಿ. ರಾಜಶೇಖರಪ್ಪ*

ದಾವಣಗೆರೆಯ ಎರಡು ಹೊಸ ಶಾಸನಗಳು

ಕರ್ನಾಟಕ ರಾಜ್ಯದ ಮಧ್ಯದಲ್ಲಿದಲ್ಲಿದ್ದು, ಈಚೆಗೆ ನೂತನ ಜಿಲ್ಲಾ ಕೇಂದ್ರವಾಗಿರುವ ದಾವಣಗೆರೆಯಲ್ಲಿ ಈವರೆಗೆ ದೊರೆತಿರುವ ಶಾಸನಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು. ಅವುಗಳಿಂದ ಲಭ್ಯವಾಗಿರುವ ಐತಿಹಾಸಿಕ ಅಂಶಗಳೂ ಅಷ್ಟೇ. ಅಲ್ಲಿ ಈಚೆಗೆ ನನಗೆ ಎರಡು ಶಿಲಾಶಾಸನಗಳು ದೊರೆತಿದ್ದು, ಅವುಗಳನ್ನು ಪಾಠ ಸಮೇತ ಸವಿವರವಾಗಿ ಸಾದರ ಪಡಿಸುವುದು ಈ ಲೇಖನದ ಉದ್ದೇಶ.

ಶಾಸನ ೧

ದುಗ್ಗಮ್ಮ ದೇವಸ್ಥಾನದ ಮಗ್ಗುಲಲ್ಲಿರುವ ಶಾಸನ

ದಾವಣಗೆರೆಯ ನಗರದೇವತೆ ಎಂದು ಹೆಸರಾಗಿರುವ ಹಳೇ ಪೇಟೆಯ ದುಗ್ಗಮ್ಮ ದೇವಸ್ಥಾನದ ಪಶ್ಚಿಮದ ಗೋಡೆಯ ಹೊರಬದಿಯಲ್ಲಿ ಒಂದು ಶಿಲಾಶಾಸನವಿದೆ. ಸುಮಾರು ನಾಲ್ಕು ಅಡಿ ಎತ್ತರ, ಒಂದೂವರೆ ಅಡಿ ಅಗಲ ಮತ್ತು ಮುಕ್ಕಾಲು ಅಡಿ ದಪ್ಪ ಇರುವ ಬಳಪದ ಕಲ್ಲು ಚಪ್ಪಡಿಯಲ್ಲಿ, ಮೇಲೆ ಚಂದ್ರ ಸೂರ್ಯರನ್ನೂ ಅವುಗಳ ಕೆಳಗೆ ಖಡ್ಗ, ಅರ್ಚಕ, ಲಿಂಗ, ಹಸು-ಕರು ಇವನ್ನೂ ಚಿತ್ರಿಸಿದ್ದು, ಇವುಗಳ ಕೆಳಗೆ, ಕ್ರಿ.ಶ ೧೨ನೆಯ ಶತಮಾನದ ಲಿಪಿ ಲಕ್ಷಣದ ಕನ್ನಡದ ಈ ಶಾಸನವನ್ನು ಕೊರೆಯಲಾಗಿದೆ. ೪೭ಕ್ಕೂ ಹೆಚ್ಚು ಪಂಕ್ತಿಗಳ ಈ ಶಾಸನದಲ್ಲಿ, ಆರಂಭದಿಂದ ೩೬ ಪಂಕ್ತಿಗಳವರೆಗೆ ಅಕ್ಷರಗಳು ಸುಸ್ಥಿತಿಯಲ್ಲಿದ್ದು, ತರುವಾಯದ ಸಾಲುಗಳಲ್ಲಿ ಬಹಳಷ್ಟು ನಷ್ಟವಾಗಿವೆಯಲ್ಲದೆ, ಕಟ್ಟಕಡೆಯ ಕೆಲವು ಪಂಕ್ತಿಗಳು ನೆಲದಲ್ಲಿ ಮುಚ್ಚಿಯೂ ಹೋಗಿವೆ. ಶಾಸನದ ಪಾಠ ಈ ಕೆಳಗಿನಂತಿದೆ :

೧ ನಮತುಂಗ ಸಿರಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ
೨ ಮೂಲ ಸ್ತಂಭಾಯ ಸಂಭವೇ|| ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾ
೩ ಮಣ್ಡಳೇಶ್ವರಂ ಕಾಂಚೀಪುರಾವರಾಧೀಶ್ವರಂ ಯದುವಂಶಾಂಬರದ್ಯುಮಣಿ ಷು
೪ ಭಟ ಚೂಡಾಮಣಿ ಮಹೇಂದ್ರಮಣಿ ಮಕುಟ ಕೋಟಿ ವಿಘಟಿತ
೫ ನಿಜವಿಜಯ ಕರಕಂಕಣಂ ಲಿಳಾಮಾತ್ರ ಸಾಧಿತ ಸಪ್ತಕಾಂಕಣಂ ಕಚ
೬ ಕ ನಗ ಶಿಳಾತಳ ಸ್ಥಾಪಿತ ಪಾಠೀನ ಲಾಂಛನ ಜಯಸ್ತಂಭಂ ದೂರೀಕ್ರಿತಾ
೭ ರಾತಿ ವೀರಾವಷ್ಟಂಭಂ ತಾಂಬ್ರಪರ್ಣೀ ನಿರ್ಣ್ನೀಕ್ತ ಮೌಕ್ತಿಕ ಯುಕ್ತಾನೇಕ
೮ ರತ್ನಾಕರಾ ಮುದ್ರ ಮುದ್ರಿತ ಸರೋದ್ರ ಭಾಂಡಾಗಾರಂ ಮಳಯಗಿರಿ ಕಂ
೯ ದರ ಚಂದನ ನನ್ದನ ಮ[ಧ್ಯ]ದೇಶ ನಿವೇಶಿತ ಶ್ರಿಂಗಾರಾಗಾರಂ ಕಿಂಕರೀಕ್ರಿತ
೧೦ ಭೂತವೇತಾಳ ಮಂಡಳಂ ಸ್ವೀಕ್ರಿತಾನೇಕ ರಿಪುನ್ರಿಪತಿ ಮಣ್ಡಳಂ ಹೇಳಾಗ್ರಿಹಿ
೧೧ ತಾಹಿತಾನೇಕ ಜಳಶೈಳ ದುರ್ಗ್ಗಂ ವಂದೀಕ್ರಿತಾರಾತಿ ವೀರಮಣ್ಡಳಿಕ ವರ್ಗ್ಗಂ ಶ್ರೀ
೧೨ ಶಂಕರನಾರಾಯಣ ದೇವರ ಚರಣ ಸ್ಮರಣ ಪರಿಣತಾಂತಃ ಕರಣಂ ಯಾ
೧೩ ದವಾಭರಣಂ ಪಾಣ್ಡ್ಯ ಕುಳ ಕಮಳ ಮಾರ್ತ್ತಂಡಂ ಪರಿಭೇದಿ ಗಂಡಂ ರಾಜಿಗ ಚೋಳ
೧೪ ಮನೋಭಂಗಂ ಸಾಹಸೋತ್ತುಂಗ ನಿತ್ಯಖಿಳ ನಾಮಾವಳಿ ಸಮಾಳಂಕ್ರಿತ
೧೫ ರಪ್ಪ ಶ್ರೀಮನ್ಮಹಾ ಮಣ್ಡಳೇಶ್ವರಂ ರಾಯಪಾಣ್ಡ್ಯ ದೇವರು ನೊಣಂ
೧೬ ಬವಾಡಿ ಮೂವತ್ತಿಚ್ಛಾಸಿರಮಂ ಶ್ರೀಮದು
೧೭ ರಾಜಧಾನಿ ಹಿರಿಯ ಬೆಳ್ದೂ [ಜ*] ಆನೆಯ ನೆಲವೀಡಿನೊಳು ದುಷ್ಟ ನಿಗ್ರಹ ಶಿಷ್ಟ
೧೮ ಪ್ರತಿಪಾಳನಂ ಮಾಡಿ ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯು
೧೯ ತ್ತಮಿರೆ ತತ್ಪಾದ ಪದ್ಮಾಪಜೀವಿಗಳಪ್ಪ ಶ್ರೀಮದ್ದೇವ ದಾನಂ **ಗಾವಣಿಗ**
೨೦ **ಹಳ್ಳಿಯ** ಸಮಸ್ತ ಪ್ರಜಗಳುಮಿದ್ದು ಸಕವರ್ಷ ಸ
೨೧ ಸ ಸಾಸಿರದಱುವತ್ತೆನೆಯ ೧೦೬೦ತೆನೆಯ ಸಿದ್ಧಾರ್ತಿ ಸಂವತ್ಸ
೨೨ ರದ ಮಾರ್ಗಸಿರ ಸುದ್ಧ ೧೦ ಆದಿವಾರದಂದ ಉತ್ತರಾಯಣ
೨೩ ಸಂಕ್ರಾಂನ್ತಿ ನಿಮಿತ್ತದಲು ಶ್ರೀಮತು ಪಿರಿಯಮರಂ ಪಾಂ
೨೪ ಡೇಸ್ವರದಾಚಾರ್ಯ್ಯ ಬಿರಾಮಾಂಡ ಜೀಯರುಂ ಆ ಹಳ್ಳಿಯ
೨೫ ಸಮಸ್ತ ಪ್ರಜಗಳುಂವಿರ್ದ್ದು ಆ ಉರು ಮಧ್ಯದ ಗ್ರಾಮೇಶ್ವ
೨೬ ರ ದೇವರಂಗ ಭಾಗ ಪೂಜಾ ನೈವೇದ್ಯಕ್ಕಂ ನಂದಾದೀವಿ
೨೭ ಗೆಗಂ ಜೀರ್ನ್ನೋದ್ಧಾರಕ್ಕಂ ಬಿಟ್ಟ ಗದ್ದೆ ದೊಡ್ಡ ಗಟ್ಟದಿಂ ತೆಂಕಣೆರೆಯ
೨೮ ಗದ್ದೆ ಕಂಮ್ಮಂ ೨೦೦ ಮತ್ತಂ ಆವಲುಗೊಳದ ಬ
೨೯ ಟ್ಟಯಿಂ ಮೂಡ ತುಂಬಿನಹಳ್ಳಿಯ ಸೀಮೆಯಿಂ ತೆಂಕ ಎರೆಯ
೩೦ ಮತ್ತರು ೩ ಮತ್ತಂ ಉರಿಂ ಪಡುವ ಪಾಂಡೇಸ್ವರ ದೇವರ ತೋಟದಿಂ
೩೧ ಬಡಗ ದೇವರ ನಿತ್ಯಪೂಜೆಗೆ ಹೂದೋಟ ಕಂಮ್ಮಂ ೧೦೦ ಉರ
೩೨ ಹೆಬ್ಬಾಗಿಲಿಂ ತೆಂಗ ಮೂಡಗೇರಿಯಿಂ ಬಡಗಣ ಕಡೆಯಲು
೩೩ ಹಂನಿ ಕೈಯ್ಯ ನಿವೇಶಣದ ಮನೆ ೧ ಆ ಉರಲು ಎನಿಸು **ಗಾಣವಾ**
೩೪ **ಡುವಡಂ** ದೇವರ ನಂದಾದೀವಿಗೆಗೆ ಅನಿಸು ಗಾಣದಲುಂ ಸೊಂವಿ
೩೫ ಗೆ ಯಣ್ಣೆ ನಡಉದು ಅಲ್ಲಿಯಾಚಾರ್ಯ್ಯಂ ಬಿರಾಮಾಂಡ ಜೀಯರುಂ ಸ
೩೬ ಮಸ್ತ ಪ್ರಜಗಳುಂ ಈ ಧರ್ಮ್ಮವಂನು ಪ್ರತಿಪಾಳಿಸುವರು ಈ ಧರ್ಮ್ಮ
೩೭ ವಂ... ೪... ದೇವರ .... ಪ್ರಯಾಗೆ ವಾರಣಾ
೩೮ ಸಿಯ............... ವಿಲೆಯ ಕೋಡುಂ ಕೊಳ
೩೯ ಗುಮಂ...........................ಸ್ತಳದಲು ಚತುರ್ವ್ವೇ

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು, ೨ನೇ ಅಡ್ಡರಸ್ತೆ (ಪಶ್ಚಿಮ), ಜೆ. ಸಿ. ಆರ್. ಬಡಾವಣೆ, ಚಿತ್ರದುರ್ಗ-೦೧

೪೦ ದ ಪಾರಗರಪ್ಪ ಬ್ರಾಂಹ್ಮಣರ್ಗ್ಗೆ........ ದ .... ವಂ ಕೊಟ್ಟ ಪಲ
೪೧ ಪದವಕ್ಕು ....
೪೨ ಗೆ ವಾರಣಾಸಿಯಲು ....
೪೩ ತೆಯು ....
೪೪ ವಾಯೋ ಹರೇತಿ ವಸುಂಧರಾಂ ॥ ಸಷ್ಟಿ ರ್ವರ್ಷ..................
೪೫ ಜಾಯತೇ ಕ್ರಿಮಿ॥ ಸಾಮಾನ್ಯೋಯಂ ....
೪೬ ಕಾ ....
೪೭ ....

(ಮುಂದೆ ಕಾಣುವುದಿಲ್ಲ)



ಈ ಶಾಸನ ಬರಹದಲ್ಲಿ ಅಲ್ಲಲ್ಲಿ ಕಾಗುಣಿತ ದೋಷಗಳೂ ಕೆತ್ತನೆಯ ದೋಷಗಳೂ ಘಟಿಸಿರುವುದನ್ನು ಕಾಣಬಹುದು. ಹಾಗಿದ್ದರೂ ಇದರ ಅಭಿಪ್ರಾಯ ತಿಳಿಯಲು ಅಡಚಣೆಯೇನೂ ಇಲ್ಲ. ಇದರ ಅಭಿಪ್ರಾಯವನ್ನು ಹೀಗೆ ಸಂಗ್ರಹಿಸಬಹುದು: ಶಂಕರ ನಾರಾಯಣ ದೇವರ ಭಕ್ತ, ಪಾಂಡ್ಯಕುಲ ಕಮಲಕ್ಕೆ ಸೂರ್ಯ, ರಾಜಿಗ ಚೋಳನ ಆಸೆಯನ್ನು ಭಂಗಗೊಳಿಸಿದವ - ಎಂದು ಮುಂತಾಗಿ ಅನೇಕ ಬಿರುದಿನ ಹೆಸರುಗಳನ್ನುಳ್ಳ ದೊರೆ ರಾಯ ಪಾಂಡ್ಯ ದೇವನು ನೊಳಂಬವಾಡಿ ೩೨೦೦೦ದ ಮಂಡಳವನ್ನು ಮಹಾಮಂಡಳೇಶ್ವರನಾಗಿ ಬೆಳ್ತೂರು ರಾಜಧಾನಿಯ ಮೂಲಕ ಆಳುತ್ತಿದ್ದಾಗ, ದೇವದಾನದ ಗ್ರಾಮವಾಗಿದ್ದ ಗಾವಣಗ ಹಳ್ಳಿಯ ಸಮಸ್ತ ಪ್ರಜೆಗಳೂ ಇರುವಾಗ, ಶಕವರ್ಷ ೧೧೬೦ನೆಯ ಸಿದ್ಧಾರ್ಥಿ ಸಂವತ್ಸರದ ಮಾರ್ಗಶಿರ ಶುದ್ಧ ದಶಮಿಯ ಆದಿತ್ಯವಾರದಂದು, ಉತ್ತರಾಯಣ ಸಂಕ್ರಾಂತಿಯ ನಿಮಿತ್ತವಾಗಿ ಪಾಂಡೇಶ್ವರದ ಆಚಾರ್ಯ ಬಿರಾಮಾಂಡ ಜೀಯರೂ ಆ ಹಳ್ಳಿಯ ಸಮಸ್ತ ಪ್ರಜೆಗಳೂ ಇರುವಾಗ ವ್ಯವಸ್ಥೆಯಾದದ್ದು: ಆ ಊರ ಮಧ್ಯದ ಗ್ರಾಮೇಶ್ವರ ದೇವರ ಅಂಗಭೋಗ, ಪೂಜೆ ನೈವೇದ್ಯ, ನಂದಾದೀಪ, ಜೀರ್ಣೋದ್ಧಾರ ಇವುಗಳಿಗಾಗಿ ದೊಡ್ಡಘಟ್ಟದಿಂದ ದಕ್ಷಿಣಕ್ಕೆ ಎರೆಯಗದ್ದೆ ಕಂಬ ೨೦೦, ಆವಲುಗೊಳದ ದಾರಿಯಿಂದ ಪೂರ್ವಕ್ಕೆ ತುಂಬಿನ ಹಳ್ಳಿಯ ಗಡಿಯಿಂದ ದಕ್ಷಿಣಕ್ಕೆ ಎರೆಯ ಹೊಲ ಮತ್ತರು ೩, ದೇವರ ನಿತ್ಯಪೂಜೆಗಾಗಿ ಊರಿಂದ ಪಶ್ಚಿಮಕ್ಕೆ ಪಾಂಡೇಶ್ವರ ದೇವರ ತೋಟದಿಂದ ಉತ್ತರಕ್ಕೆ ಹೂದೋಟ ಕಂಬ ೧೦೦, ಊರ ಹೆಬ್ಬಾಗಿಲಿನಿಂದ ದಕ್ಷಿಣಕ್ಕೆ ಮೂಡಗೇರಿಯಿಂದ ಉತ್ತರದ ಕಡೆಯಲ್ಲಿ ಹೊಲದ ನಿವೇಶನದ ಮನೆ ೧, ಆ ಊರಲ್ಲಿ ಕೆಲಸ ನಡೆಯುತ್ತಿರುವ ಎಲ್ಲ ಗಾಣಗಳಿಂದ ದೇವರ ನಂದಾದೀಪಕ್ಕಾಗಿ ಸೊಲಿಗೆ ಎಣ್ಣೆ - ಎಂದು ಈ ರೀತಿಯಾಗಿ ದೇವರ ಸೇವೆಗೆ ಸಲುವಳಿಯಾಗಬೇಕು. ಬಿರಾಮಾ ಮಾಂಡ ಜೀಯರು ಸಮಸ್ತ ಪ್ರಜೆಗಳು ಈ ಧರ್ಮವನ್ನು ನಡೆಸಿಕೊಂಡು ಹೋಗುತ್ತಾರೆ.

ಈ ಶಾಸನದಲ್ಲಿ ಹೇಳಿರುವಂತೆ ಸಿದ್ಧಾರ್ಥಿ ಸಂವತ್ಸರವು ಶಕ ವರ್ಷ ೧೧೬೦ರಲ್ಲಿ ಬರುವುದಿಲ್ಲ, ೧೧೬೧ರಲ್ಲಿ ಬರುತ್ತದೆ. ಆದರಪ್ರಕಾರ ಶಾಸನದ ಕಾಲ ಕ್ರಿ.ಶ. ೧೧೩೯ರ ಡಿಸೆಂಬರ್ ೨ ನೆಯ ದಿನಾಂಕವಾಗುತ್ತದೆ. ಆದರೆ ಸ್ವಾಮಿ ಕಣ್ಣು ಪಿಳ್ಳೈಯವರ ಪಂಚಾಂಗದಂತೆ, ಆ ದಿನ ಶಾಸನ ಹೇಳುವಂತೆ ಆದಿತ್ಯ ವಾರವಾಗದೆ ಶನಿವಾರವಾಗುತ್ತದೆ. ದಿನಾಂಕಕ್ಕೆ ಮತ್ತು ದಿನಕ್ಕೆ ಸಂಬಂಧಿಸಿದಂತೆ ಇಂತಹ ಸಣ್ಣ ಪುಟ್ಟ ವ್ಯತ್ಯಾಸಗಳು ಶಾಸನಗಳಲ್ಲಿ ಸಾಮಾನ್ಯ ಎಂಬುದು ಶಾಸನಾಭ್ಯಾಸಿಗಳಿಗೆ ತಿಳಿದ ಸಂಗತಿ.

ಪ್ರಸ್ತುತ ಶಾಸನವು ಉಚ್ಚಂಗಿ ಪಾಂಡ್ಯ ಎಂದು ಕರೆಯಲಾದ ವಂಶದ ದೊರೆ ರಾಯಪಾಂಡ್ಯನ ಕಾಲಕ್ಕೆ ಸೇರಿದ್ದೆಂಬುದು ಸ್ಪಷ್ಟವಾಗಿದೆ. ಇವನನ್ನು ಹೆಸರಿಸುವ ದಾವಣಗೆರೆ ಪ್ರದೇಶದ ಕೆಲವು ಶಾಸನಗಳು ಈ ಹಿಂದೆ ರೈಸ್ ಅವರಿಂದ ಪ್ರಕಟವಾಗಿದೆ. ಪ್ರಸ್ತುತ ಶಾಸನ ಆ ಮಾಲಿಕೆಗೆ ಒಂದು ಸೇರ್ಪಡೆ. ಈ ಪಾಂಡ್ಯರ ಇತಿಹಾಸ ಈವರೆಗೆ ತಿಳಿದುಬಂದಿರುವುದು ಅಲ್ಪ ಮಾತ್ರ. ಸುಮಾರು ಐದಾರು ತಲೆಮಾರಿನವರೆಗೆ ಮಿತ ಪ್ರಮಾಣದಲ್ಲಿ ಇತಿಹಾಸ ತಿಳಿದುಬಂದಿರುವ, ಕರ್ನಾಟಕದ ಕಿರಿಯ ರಾಜವಂಶಗಳಲ್ಲಿ ಇದೂ ಒಂದಾಗಿದೆ. ಈ ವಂಶದವರು ಆ ಕಾಲಕ್ಕೆ ಕಲ್ಯಾಣ ಚಾಳುಕ್ಯ ವಂಶದ ಚಕ್ರವರ್ತಿಗಳ ವಿಶ್ವಾಸಕ್ಕೆ ಪಾತ್ರರಾಗಿ ನೊಳಬಂವಾಡಿ ೩೨೦೦ ದಂತಹ ದೊಡ್ಡ ಪ್ರಾಂತ್ಯವೊಂದನ್ನು ಸಾಕಷ್ಟು ಕಾಲ ಆಳಿದರೆಂಬುದು ಅವರ ರಾಜಕೀಯ ಶಕ್ತಿಯನ್ನು ಸೂಚಿಸುತ್ತದೆ.

ತಮ್ಮ ಒಡೆಯರಿಗೆ ನಿಷ್ಠ ಮಾಂಡಲಿಕರಾದ ಇವರು ದೊರೆಯ ವಿರೋಧಿಗಳನ್ನು ಎದುರಿಸಿ, ಅವರನ್ನು ಬಗ್ಗು ಬಡಿದಿದ್ದರೆಂದು ಪ್ರಸ್ತುತ ಶಾಸನದಲ್ಲಿ ರಾಯಪಾಂಡ್ಯನಿಗೆ ಹೇಳಲಾಗಿರುವ 'ಸ್ವೀಕ್ರಿತಾನೇಕ ರಿಪು ನ್ರಿಪತಿ ಮಣ್ಡಳಂ', 'ಹೇಳಾಗ್ರಿಹಿತಾಹಿತಾನೇಕ ಜಳ ಶೈಳ ದುರ್ಗ್ಗಂ', 'ವಂದೀಕ್ರಿತಾರಾತಿ ವೀರ ಮಣ್ಡಳಿಕ ವರ್ಗ್ಗಂ', 'ಪರಿಭೇದಿ ಗಂಡಂ', 'ರಾಜಿಗ ಚೋಳ ಮನೋಭಂಗಂ' ಮುಂತಾದ ಬಿರುದುಗಳು ಸ್ಪಷ್ಟ ಪಡಿಸುತ್ತವೆ; ರಾಯ ಪಾಂಡ್ಯನ ಶಕ್ತಿ ಸಾಮರ್ಥ್ಯಗಳಿಗೆ ಕನ್ನಡಿ ಹಿಡಿಯುತ್ತವೆ.

ರಾಯಪಾಂಡ್ಯನ ಇನ್ನು ಕೆಲವು ಬಿರುದುಗಳೂ ಸ್ವಾರಸ್ಯಕರವಾಗಿವೆ : 'ಕನಕನಗ ಶಿಲಾತಳ ಸ್ತಾಪಿತ ಪಾಠೀನ ಲಾಂಛನ ಜಯಸ್ತಂಭಂ' (ತಳದಲ್ಲಿ ಮೀನಿನ ಗುರುತುಳ್ಳ ಜಯಸ್ತಂಭವನ್ನು ಸ್ಥಾಪಿಸಿದವನು),'ತಾಂಬ್ರ ಪರ್ಣ್ನೀ ನಿರ್ಣ್ನೀಕ್ತ ಮೌಕ್ತಿಕ ಯುಕ್ತಾನೇಕ ರತ್ನಾಕರಾಮುದ್ರ ಮುದ್ರಿತ ಸರೋದ್ರ ಭಾಂಡಾಗಾರಂ' (ತಾಮ್ರಪರ್ಣೀ ನದಿಯು ಸೆಳೆದೊಯ್ದ ಮುತ್ತುಗಳನ್ನು ಸಮುದ್ರದ ಪ್ರಶಸ್ತ ರತ್ನಗಳನ್ನು ಭಂಡಾರದಲ್ಲಿ ಉಳ್ಳವನು), 'ಮಳಯಗಿರಿ ಕಂದರ ;ಚಂದನ ನನ್ದನ ಮಧ್ಯ್ಯದೇಶ ನಿವೇಶಿತ ಶ್ರಿಂಗಾರಾಗಾರಂ' (ಮಲಯ ಪರ್ವತದ ಕಣಿವೆಯ ಶ್ರೀಗಂಧದ ತೋಪುಗಳ ಮಧ್ಯೆ ನೆಲೆಗೊಂಡ ಶೃಂಗಾರ ಸ್ಥಾನವುಳ್ಳವನು), 'ಶಂಕರನಾರಾಯಣ ದೇವರ ಚರಣ ಸ್ಮರಣ ಪರಿಣತಾಂತಃಕರಣಂ' (ಶಂಕರನಾರಾಯಣ ದೇವರ ಚರಣ ಸ್ಮರಣೆಯಿಂದ ಪಕ್ವಗೊಂಡ ಮನಸ್ಸುಳ್ಳವನು) - ಇವೇ ಮೊದಲಾದ ಬಿರುದುಗಳು ರಾಯಪಾಂಡ್ಯನ ವ್ಯಕ್ತಿತ್ವವನ್ನೂ, ಅಂದಿಗೆ ಅವನು ಸಂಪಾದಿಸಿದ್ದ ಸ್ಥಾನ ವರ್ಚಸ್ಸುಗಳನ್ನೂ ಸೂಚಿಸುತ್ತವೆ. ಇವುಗಳ ಜೊತೆಗೆ ಮತ್ತೊಂದು ಕುತೂಹಲಕಾರಿಯಾದ ಬಿರುದೊಂದು ಹೀಗಿದೆ : 'ಕಿಂಕರೀಕ್ರಿತ ಭೂತ ವೇತಾಳ ಮಂಡಳಂ' (ಭೂತ ಬೇತಾಳಗಳ ಗುಂಪನ್ನು ಆಳುಗಳನ್ನಾಗಿ ಮಾಡಿ ಕೊಂಡವನು). ಅತ್ಯಂತ ವಿರಳವೂ ವಿಶಿಷ್ಟವೂ ಆದ ಇಂಥ ಬಿರುದು ರಾಯಪಾಂಡ್ಯನಿಗೆ ಬಂದದ್ದು ಯಾವ ಹಿನ್ನೆಲೆಯಲ್ಲಿ ಎಂಬುದು ತಿಳಿಯದು. ಶಾಸನ ಸೂಚಿಸುವ ಧಾರ್ಮಿಕ ಕಾರ್ಯಗಳು ನಡೆದದ್ದು ಇಂಥ ರಾಜನೊಬ್ಬನ ಆಳ್ವಿಕೆ ನಡೆಯುತ್ತಿದ್ದ ಕಾಲದಲ್ಲಿ ಎಂಬಷ್ಟರ ಮಟ್ಟಿಗೆ ರಾಯಪಾಂಡ್ಯನ್ನು ಪ್ರಸ್ತಾಪಿಸಿರುವಂತೆ ಭಾಸವಾಗುತ್ತದೆ.

ಶಾಸನದಲ್ಲಿ ಹೇಳಲಾದ ರಾಜಧಾನಿ ಬೇತೂರು, ದಾವಣಗೆರೆಯ ಪೂರ್ವಕ್ಕೆ ಸಮೀಪದಲ್ಲೇ ಇರುವ ಬೇತೂರು ಎಂಬುದು ಸ್ಪಷ್ಟ. ಈಗ 'ಎಲೆಬೇತೂರು' ಎಂದೂ ಕರೆಯಲ್ಪಡುತ್ತಿರುವ ಅದು ಅನೇಕ ಪ್ರಾಚೀನ ದೇವಾಲಯಗಳನ್ನು ವಿಗ್ರಹ ಮತ್ತಿತರ ಪ್ರಾಚ್ಯಾವಶೇಷಗಳನ್ನು ತುಂಬಿಕೊಂಡಿರುವ ಅತ್ಯಂತ ಹಳೆಯ ಊರಾಗಿದೆ. ಇದರಲ್ಲಿ ಬರುವ **ಗಾವಣಿಗಹಳ್ಳಿ** ಎಂಬ ಇನ್ನೊಂದು ಗ್ರಾಮನಾಮ ಕುತೂಹಲಕಾರಿಯಾಗಿದೆ. ನಾನು ಈ ಶಾಸನವನ್ನು ಓದಿ ಇದರ ವಿವರವನ್ನು ಪತ್ರಿಕೆಗಳಿಗೆ ಕೊಟ್ಟಾಗ, ಅದನ್ನು ಓದಿದ ದಾವಣಗೆರೆಯ ಲೇಖಕಿಯೊಬ್ಬರು-ಅವರು ಶಾಸನ ತಜ್ಞರಲ್ಲದಿದ್ದೂ, ನಾನು ಶಾಸನ ಪಾಠ ಪ್ರಕಟಿಸುವ ಮುನ್ನವೇ ಏನು ಕಾರಣಕ್ಕೋ ತಮಗೆ ತೋಚಿದ ಕೆಲವು ಸಾಲುಗಳ ಕೆಲವು ಅಕ್ಷರಗಳನ್ನೇ ಪಾಠವೆಂದು ಕೊಟ್ಟು, ದಾವಣಗೆರೆಯ ಸ್ಥಳೀಯ ಪತ್ರಿಕೆಯೊಂದರಲ್ಲಿ ಒಂದು ಚಿಕ್ಕ ಲೇಖನವನ್ನು ಬರೆದರು. ನಾನು ಗಾವಣಿಗಹಳ್ಳಿ ಎಂದು ಓದಿರುವುದು ದಾವಣಿಗನಹಳ್ಳಿ ಅರ್ಥಾತ್ ದಾವಣಗೆರೆ ಇರಬೇಕೆಂದು ಆ ಲೇಖನದಲ್ಲಿ ಅವರು ತರ್ಕಿಸಿದ್ದರಲ್ಲದೆ, ನಾನು ಹಿಂದೆಯೇ ದಾವಣಗೆರೆ ಸ್ಥಳನಾಮನಿಷ್ಪತ್ತಿ ಕುರಿತು ಬರೆದ ಸವಿವರ ಲೇಖನದ ಕೆಲವು ಅಂಶಗಳನ್ನೂ ಆಧಾರವಿಲ್ಲದೆ ಅಲ್ಲಗಳೆದಿದ್ದರು. ಆದರೆ ವಾಸ್ತವವಾಗಿ ಶಾಸನದಲ್ಲಿ ಸ್ಥಳನಾಮದ ಪಾಠವಿರುವುದು **ಗಾವಣಿಗಹಳ್ಳಿ** ಎಂದೇ ಹೊರತು **ದಾವಣಿಗಹಳ್ಳಿ** ಎಂದಿಲ್ಲ. ಇಲ್ಲಿರುವುದು ಗಾವಣಿಗಹಳ್ಳಿಯೇ ಎನ್ನಲು ಇನ್ನೊಂದು ಮುಖ್ಯ ಅಂಶ ಆ ಊರಿನ ದೇವರ ಹೆಸರು 'ಗ್ರಾಮೇಶ್ವರ' ಎಂದಿರುವುದು. 'ಗಾವಣಿಗ' ಎಂಬುದು ಸಂಸ್ಕೃತದ 'ಗ್ರಾಮಣಿ(ಕ) ಮೂಲದಿಂದ ಬಂದಿರುವುದೆಂದು ಕೋಶಗಳು ಸೂಚಿಸುತ್ತವೆ. ಅಂದರೆ ಗ್ರಾಮವನ್ನು ನೋಡಿಕೊಳ್ಳುವವನು ಎಂಬರ್ಥದ 'ಗ್ರಾಮಣಿ (ಕ)' ಎಂಬುದೇ ತದ್ಭವವಾಗಿ 'ಗಾವಣಿಗ' ಎಂದಾಗಿದೆ. ಹಾಗಾಗಿಯೇ ಗಾವಣಿಗಹಳ್ಳಿಯ ದೇವರು 'ಗ್ರಾಮೇಶ್ವರ' ಎಂದು ಕರೆಯಲ್ಪಟ್ಟಿರುವುದು ಸಹಜವಾಗಿಯೇ ಇದೆ.

ಆ ಗಾವಣಿಗಹಳ್ಳಿ ಇದ್ದುದೆಲ್ಲಿ? ಎಂಬ ಪ್ರಶ್ನೆ ಈಗ ಬರುತ್ತದೆ. ಅದು ಬಹುಶಃ ಈ ಶಾಸನ ಇರುವ ಸ್ಥಳದಲ್ಲಿಯೇ ಹಿಂದೆ ನೆಲೆಗೊಂಡಿದ್ದ ಒಂದು ಹಳ್ಳಿ ಇದ್ದಿರಬಹುದು. ದಾವಣಗೆರೆ ಅದರ ನೆರೆಯಲ್ಲೇ ಇದ್ದ, ಬಹುಶಃ ಅದಕ್ಕಿಂತಲೂ ದೊಡ್ಡದಾದ ಊರಾಗಿದ್ದಿರಬೇಕು. ಕಾಲಕ್ರಮೇಣ ದಾವಣಗೆರೆ ಬೆಳೆಯುತ್ತಾ ಬಂದು, ಅದರ ಹೊಟ್ಟೆಯಲ್ಲಿ ಸೇರಿ ಹೋಗಿರುವ ಅದರ ಮಗ್ಗುಲಿನ ಅನೇಕ ಸಣ್ಣ ಪುಟ್ಟ ಗ್ರಾಮಗಳಲ್ಲಿ ಈ ಗಾವಣಿಗಹಳ್ಳಿಯೂ ಒಂದಾಗಿರಬೇಕು.

ಗಾವಣಿಗಹಳ್ಳಿಯ ಗ್ರಾಮೇಶ್ವರ ದೇವರು ಬಹುಶಃ ಒಂದು ಲಿಂಗವಾಗಿರುವ ಸಾಧ್ಯತೆ ಇದೆ. ಪ್ರಸ್ತುತ ಇಲ್ಲಿಯ ದೇವಸ್ಥಾನ ಈಚಿನ ಕಾಲದಲ್ಲಿ ನಗರದೇವತೆಯಾಗಿ ಪ್ರಾಶಸ್ತ್ಯ ಪಡೆದಿರುವ ದುಗ್ಗಮ್ಮನದು ಎಂದು ಕೊಂಡರೂ, ಇದರೊಳಗಿನ ಮೂರ್ತಿ ಶಿಲ್ಪಗಳನ್ನೆಲ್ಲ ಪರಿಶೀಲಿಸಿದಾಗ ಇದರೊಳಗೆ ತುಂಬ ಪ್ರಾಚೀನವಾದ ಕೆಲವು ದೇವತಾ ವಿಗ್ರಹಗಳು ಕಾಣಬರುತ್ತವೆ. ಗಣಪತಿ, ಎರಡು ಲಿಂಗಗಳು, ಎರಡು ನಂದಿ, ನವಿಲಿನ ಮೇಲೆ ಕುಳಿತ ಷಣ್ಮುಖ, ಒಂದು ದೊಡ್ಡ ಹಾಗೂ ಒಂದು ಚಿಕ್ಕ ಹೀಗೆ ಎರಡೂ ಸೂರ್ಯ ವಿಗ್ರಹಗಳು, ಈಗ ವೆಂಕಟೇಶ್ವರ ಎಂದು ಕರೆಯುವ - ಹಿಂದಿನ

ಬಲಗೈಯಲ್ಲಿ ಶಂಖ, ಹಿಂದಿನ ಎಡಗೈಯಲ್ಲಿ ಚಕ್ರ, ಮುಂದಿನ ಬಲಗೈಯಲ್ಲಿ ಪದ್ಮ, ಮುಂದಿನ ಎಡಗೈಯಲ್ಲಿ ಗದೆ, ಇವುಗಳನ್ನು ಹಿಡಿದಿರುವುದರಿಂದ ಕೇಶವ ಎಂದು ಗುರುತಿಸಲ್ಪಡಬೇಕಾದ ವಿಷ್ಣುವಿಗ್ರಹ, ಕೆಮ್ಮುಲಮ್ಮ, ದಡಾರಮ್ಮ, ಮೈಲಮ್ಮ, ಸುಂಕದಮ್ಮ, ಗೊಬ್ಬರದಮ್ಮ ಎಂದು ಈಗ ಹೆಸರಿಸಲ್ಪಡುವ ತುಂಬಾ ಪ್ರಾಚೀನವಾದ ಸಪ್ತಮಾತೃಕೆಯರ ಬಿಡಿ ವಿಗ್ರಹಗಳಲ್ಲಿ ಐದು, ಇಂಥ ವಿಗ್ರಹಗಳಿವೆ. ಇಲ್ಲಿರುವ ಎರಡು ಪ್ರಾಚೀನ ಲಿಂಗಗಳಲ್ಲಿ ಒಂದು ಗ್ರಾಮೇಶ್ವರ ಆಗಿದ್ದಿರಬಹುದೆ? ಮತ್ತು ಇಲ್ಲಿಯ ಒಂದು ಲಿಂಗ ಈಗಾಗಲೇ ಶ್ರೀಮತಿ ಟಿ. ಗಿರಿಜ ಅವರು ಅಭಿಪ್ರಾಯಪಟ್ಟಿರುವಂತೆ ತ್ರಿಭುವನೇಶ್ವರ ಇದ್ದಿರಬಹುದೆ? ಎಂದು ಸಂದೇಹ. ಆದರೆ ಎಸ್. ಎಸ್. ವಿಶ್ವೇಶ್ವರ ಅವರು ಇದಕ್ಕೆ ಭಿನ್ನವಾಗಿ "ಬಹುಶಃ" ಆನೆಕೊಂಡದ ಇಂದಿನ ಕಲ್ಲೇಶ್ವರ ದೇವಸ್ಥಾನವೇ ಅಂದಿನ ತ್ರಿಭುವನ ತಾಂಡೇಶ್ವರ ದೇವಾಲಯ ವಾಗಿರಬಹುದೇ" ಎಂದು ಸಂದೇಹ ವ್ಯಕ್ತಪಡಿಸಿದ್ದಾರೆ. ದುಗ್ಗಮ್ಮನ ಈಗಿನ ಆಧುನಿಕ ದೇವಸ್ಥಾನ ಇರುವಲ್ಲಿ ಮೊದಲಿಗೆ ಗ್ರಾಮೇಶ್ವರ ದೇವಸ್ಥಾನ ಇದ್ದಿರುವ ಸಾಧ್ಯತೆಯೂ ಇಲ್ಲದಿಲ್ಲ.

ಶಾಸನದಲ್ಲಿ ಬಿರಾಮಾಂಡ ಜೀಯರನ್ನು ಪಾಂಡೇಶ್ವರದ ಆಚಾರ್ಯರೆಂದು ಹೇಳಿದೆಯಷ್ಟೆ. ಈ ಪಾಂಡೇಶ್ವರ, ತ್ರಿಭುವನಮಲ್ಲ ಪಾಂಡೇಶ್ವರ ಎಂಬ ಹೆಸರನ್ನು ಪೂರ್ತಿಯಾಗಿ ಹೇಳದೆ, ಕೇವಲ ಪಾಂಡೇಶ್ವರ ಎಂದು ಹೇಳಿರುವುದನ್ನು ನೋಡಿದರೆ ಅದು ಅಷ್ಟು ಹೊತ್ತಿಗಾಗಲೇ ಕೇವಲ ಪಾಂಡೇಶ್ವರ ಎಂದೇ ಜನಪ್ರಿಯವಾಗಿದ್ದಿರ ಬೇಕು. ಗ್ರಾಮೇಶ್ವರ ದೇವರ ಅಂಗಭೋಗ, ಪೂಜಾನೈವೇದ್ಯ, ನಂದಾದೀಪ, ಜೀರ್ಣೋದ್ಧಾರ ಇತ್ಯಾದಿಗಳ ಸಲುವಾಗಿ ವಿವಿಧ ಭೂಮಿಗಳನ್ನು ತೋಟವನ್ನೂ ಗಾಣದ ಎಣ್ಣೆಯನ್ನೂ ಧರ್ಮವಾಗಿ ಸಲ್ಲುವಂತೆ ವ್ಯವಸ್ಥೆ ಮಾಡುವಲ್ಲಿ ಮುಖ್ಯಪಾತ್ರ ವಹಿಸಿದವನು ಈ ಬಿರಾಮಾಂಡ ಜೀಯನೇ. ಈ ಹೆಸರು ಬ್ರಹ್ಮಾಂಡ ಜೀಯ ಎಂಬ ಹೆಸರಿನ ಆಡುಮಾತಿನ ರೂಪ ಇದ್ದಿರಬಹುದೇ? ಇವನ ಹೆಸರಿನ ಅಂತ್ಯದಲ್ಲಿ ಬರುವ ಜೀಯ ಎಂಬುದರ ಮೂಲಕ ಇವನು ಲಕುಲೀಶ ಪಾಶುಪತ ಅಥವಾ ಕಾಳಾಮುಖ ಶೈವ ಪಂಥದ ಒಬ್ಬ ಗುರು ಎಂಬುದು ಸ್ಪಷ್ಟವಾಗಿದೆ. 'ಶ್ರೀಮತು ಪಿರಿಯಮರಂ ಪಾಂಡೇಶ್ವರದ' ಎಂಬಲ್ಲಿ, 'ಪಿರಿಯಮರಂ' ಪಾಂಡೇಶ್ವರದ' ಎಂಬಲ್ಲಿ 'ಪಿರಿಯಮರಂ' ಎಂಬುದರ ಅರ್ಥವೇನೆಂದು ಸಂದಿಗ್ಧವಾಗಿದೆ. ಇಲ್ಲಿ ಅಪಶಬ್ದ ಅಥವಾ ಅಪಕೆತ್ತನೆ ಘಟಿಸಿರಬಹುದೆ ಎಂತಲೂ ಸಂದೇಹವಾಗುತ್ತದೆ. ಬಿರಾಮಾಂಡ ಜೀಯ ರೀತಿಯ ಹೆಸರನ್ನು ಹೋಲುವಂತಹವೇ ಇನ್ನೂ ಕೆಲವು ಹೆಸರುಗಳು ಈ ಪ್ರದೇಶದ ಉಚ್ಚಂಗಿ ಪಾಂಡ್ಯರ ಶಾಸನಗಳಲ್ಲಿ ಕಾಣಸಿಗುತ್ತದೆ.

ಕ್ರಿ.ಶ. ೧೧೨೧ರ ಹಾಗೂ ಕ್ರಿ.ಶ. ೧೧೨೪ರ ದೊರೆ ತ್ರಿಭುವನಮಲ್ಲ ಪಾಂಡ್ಯನ ಶಾಸನಗಳಲ್ಲಿ "ತ್ರಿಭುವನ ಮಲ್ಲ ಪಾಂಡ್ಯ ನಿರ್ಮಿತ ಶ್ರೀಮತ್ತ್ರಿಭುವನಮಲ್ಲ ಪಾಂಡ್ಯೇಶ್ವರದೇವ" ಎಂದು ಹೇಳಿರುವುದರಿಂದ, ತ್ರಿಭುವನಮಲ್ಲ ಪಾಂಡೇಶ್ವರ ದೇವರು ತ್ರಿಭುವನಮಲ್ಲ ಅರ್ಥಾತ್ ರಾಯಪಾಂಡ್ಯನಿಂದ ಆದದ್ದು ಎಂದು ಸ್ಪಷ್ಟವಾಗಿದೆ. ಈ ಪಾಂಡ್ಯೇಶ್ವರ ದೇವರಿಗೆ ಈ ಶಾಸನದ ಕಾಲಕ್ಕಾಗಲೇ ಪ್ರಾಯಃ ದಾನದಿಂದ ಬಂದ ಒಂದು ತೋಟವೇ ಇದ್ದುದು ತಿಳಿದುಬರುತ್ತದೆ.


ಈ ಶಾಸನದಲ್ಲಿ ಬರುವ ಕೆಲವು ಸ್ಥಳನಾಮಗಳು ಈ ಪ್ರದೇಶದ ಪ್ರಾಚೀನ ಗ್ರಾಮಗಳ ಬಗ್ಗೆ ಸೂಚನೆ ಕೊಡುತ್ತವೆ. ಇಲ್ಲಿ ಬರುವ ದೊಡ್ಡಗಟ್ಟ ನಿಶ್ಚಿತವಾಗಿ ಯಾವುದೆಂಬುದು ಈಗ ತಿಳಿಯದು. ತುಂಬಿನಹಳ್ಳಿ, ಈಗ ಇರುವ ತುಂಬಿಗೆರೆ ಇದ್ದಿರ ಬಹುದೇನೋ! ಇನ್ನು ಆವಲುಗೊಳ ಈಗಿನ ಆವರಗೊಳ್ಳ ಗ್ರಾಮ ಇರಬೇಕು. ಮೂಡಗೇರಿ ಯಾವುದು? ಅಥವಾ ಇದೆಯೇ? ತಿಳಿಯದು. ಆದರೆ ಇವೆಲ್ಲವೂ ಗಾವಣಿಗಹಳ್ಳಿಗೆ ಸಮೀಪದಲ್ಲಿ ಅಕ್ಕಪಕ್ಕದಲ್ಲೇ ಇದ್ದ ಗ್ರಾಮಗಳಾಗಿರಬೇಕು. ಪ್ರಸ್ತುತ ಶಾಸನ ದಾವಣಗೆರೆಯ ಪ್ರಾದೇಶಿಕ ಇತಿಹಾಸದ ದೃಷ್ಟಿಯಿಂದ ಪೂರಕ ಅಂಶಗಳನ್ನು ನೀಡುವಂತಿದೆ.

ಶಾಸನ ೨

ಅಥಣಿ ಹಿರೇಮಠದ ಶಿವಪ್ಪಯ್ಯನವರ ಗದ್ದಿಗೆಯ ಬಳಿ ಇರುವ ಶಾಸನ

ದಾವಣಗೆರೆ ನಗರದ ಸರ್ಕಾರಿ ಚಿಗಟೇರಿ ಆಸ್ಪತ್ರೆ ರಸ್ತೆಯಲ್ಲಿ, ಹಿಂದಿನ ಆಲೂರ್ ಬಿಲ್ಡಿಂಗ್ ಹಿಂಭಾಗದಲ್ಲಿ ದಕ್ಷಿಣಕ್ಕೆ ಈಚೆಗೆ ಕಟ್ಟಲಾಗಿರುವ ರ್‍ಯಾಲಿ ಅಥಣಿ ಹಿರೇಮಠದ ಶಿವಪ್ಪಯ್ಯ ಎಂಬುವರ ಗದ್ದುಗೆಯ ಬಳಿ ಈ ಶಾಸನವನ್ನು ಇರಿಸಲಾಗಿದೆ. ನಾನು ಇದನ್ನು ೧೯೮೮ರ ಫೆಬ್ರವರಿ ೨೮ರಂದು ನೋಡಿದಾಗ ಆಲೂರ್ ಬಿಲ್ಡಿಂಗ್‌ನ ಹಿಂಭಾಗದಲ್ಲಿ ಆಗ ಪೂರ್ತಿ ಬಯಲಿದ್ದು, ಅಲ್ಲಿ ಒಂದು ಬಾವಿ, ಅದರ ಬಳಿ ಬನ್ನಿ ಮೊದಲಾದ ಗಿಡಗಳಿದ್ದವು. ಅಲ್ಲಿಯ ಕಲ್ಲುಕಟ್ಟೆಯ ಮೇಲೆ ಈ ಶಾಸನದ ಕಲ್ಲು ಚಪ್ಪಡಿಯನ್ನು ಇರಿಸಲಾಗಿತ್ತು. ಈಚೆಗೆ ಅಲ್ಲಿ ಏನೇನೋ ಕಟ್ಟಡ ಕಾಮಗಾರಿಗಳಾಗಿ ಹಳೇ ವಾತಾವರಣವೆಲ್ಲ ಬದಲಾಗಿ ಹೋಗಿ ಆ ಶಾಸನ ಈಗ ಮೇಲೆ ಹೇಳಿದ ಗದ್ದುಗೆಯ ಬಳಿ ಇರಿಸಲ್ಪಟ್ಟಿದೆ.

ಸುಮಾರು ಒಂದೂವರೆ ಅಡಿ ಅಗಲ, ಮೂರೂವರೆ ಅಡಿ ಎತ್ತರ ಇರುವ ಬಳಪದ ಕಲ್ಲು ಚಪ್ಪಡಿಯಲ್ಲಿ ಮೇಲೆ ಸಿಂಹಲಲಾಟ, ಅದರ ಕೆಳಗೆ ಸೂರ್ಯ ಚಂದ್ರ ಅವುಗಳ ಕೆಳಗೆ ಅನುಕ್ರಮವಾಗಿ ಚಕ್ರ ಶಂಖಗಳನ್ನೂ, ಅವುಗಳ ಕೆಳಗೆ ಅನುಕ್ರಮವಾಗಿ ನಂದಿ, ಮೊಳಕಾಲೂರಿ ಕೈಮುಗಿದು ಕುಳಿತಿರುವ ಗರುಡ, ಇವುಗಳ ನಡುವೆ ಬಲಗೈಯಲ್ಲಿ ಕಮಂಡಲ ಎಡಗೈಯಲ್ಲಿ



ಛತ್ರಿ ಹಿಡಿದು ನಿಂತಿರುವ ವಾಮನ ಇವೆಲ್ಲವನ್ನು ಉಬ್ಬು ಶಿಲ್ಪಗಳಾಗಿ ಕೆತ್ತಲಾಗಿದೆ. ಈ ಚಿತ್ರ ಸಮುಚ್ಚಯದ ಕೆಳಗೆ ಕನ್ನಡ ಲಿಪಿ ಮತ್ತು ಭಾಷೆಯ ಐದೂವರೆ ಪಂಕ್ತಿಗಳವರೆಗಿನ ಅಪೂರ್ಣ ಶಾಸನ ಬರಹವಿದೆ. ಅದರ ಪಾಠ ಹೀಗಿದೆ:

೧ ಶ್ರೀ ಗಣಾಧಿಪತೆಯೇ ನಮಃ ಶ್ರೀ ಹರಿಹರಯ ನಮಃ
೨ ನಮಸ್ತುಂಗ ಸಿರಸ್ತುಂಬಿ ಚಂದ್ರ ಚಮರ ಚರವೇ ತ್ರೈಯಿ
೩ ಲೋಕ್ಯ ನಗರಾರಂಭ ಮುಲಸ್ತಂಭಯ ಶಂಭವೇ॥ ಶ್ರೀ ಶ್ರೀ
೪ ಸ್ವಸ್ತಿ ಶ್ರೀ [ವಿ]ಜಯಾಬ್ಯುದಯ ಶಾಲಿವಾಹನ॥
೫ ಶಕವರೂಶ ೧೩೪೫ನೆಯ ಶುಕ್ಲ ಸಂವತ್ಸರದ ಚಯಿ
೬ ತ್ರ ಶು ೧೨ ಸೋಮವರದಲ್ಲು
(ಮುಂದಕ್ಕೆ ಅಕ್ಷರಗಳನ್ನು ಕೆತ್ತಿರುವುದಿಲ್ಲ)

ಶಾಸನ ತಿಳಿಸುವಂತೆ ಶಾಲಿವಾಹನ ಶಕ ೧೩೪೫ನೆಯ ಶುಕ್ಲ ಸಂವತ್ಸರದ ಚೈತ್ರ ಶುದ್ಧ ೧೨ ಸೋಮವಾರದಲ್ಲು ಎಂಬ ವಿವರ ಮುಗಿಯುತ್ತಿದ್ದಂತೆ ಶಾಸನ ಬರಹ ತಟಕ್ಕನೆ ನಿಂತುಬಿಟ್ಟಿದೆ.

ಇಲ್ಲಿ ಹೇಳಿರುವಂತೆ ಶಕವರ್ಷ ೧೩೪೫ರಲ್ಲಿ ಇದ್ದದ್ದು ಶುಕ್ಲ ಸಂವತ್ಸರವಲ್ಲ, ಶೋಧನ/ಶೋಭಕೃತ್ ಸಂವತ್ಸರ ಶುಕ್ಲ ಸಂವತ್ಸರ ಇದ್ದದ್ದು ಶಾಲಿವಾಹನ ಶಕ ೧೩೧೧ ಮುತ್ತ ೧೩೭೧ರಲ್ಲಿ ಹೀಗಾಗಿ ಇದರ ಕಾಲ ನಿರ್ದಿಷ್ಟವಾಗಿ ಯಾವ ವರ್ಷ ಎಂದು ತಿಳಿಯುವುದು ಕಷ್ಟವಾಗಿದೆ.

ಶಾಸನದ ಮೊದಲಿಗೆ ಗಣಪತಿ ನಮನ ಮತ್ತು ಹರಿಹರ ನಮನ ವಾಕ್ಯ ಹಾಗೂ 'ನಮಸ್ತುಂಗ...' ಎಂದು ಮೊದಲಾಗುವ ಪ್ರಸಿದ್ಧ ಶಿವಸ್ತುತಿ ಶ್ಲೋಕ ಬಂದಿವೆ. ಬರಹದ ಮೇಲೆ ವಾಮನ ನಂದೀ ಗರುಡ ಇತ್ಯಾದಿ ಲಕ್ಷಣಗಳನ್ನು ನೋಡಿದರೆ ಈ ಶಾಸನ ಶಿವ ವಿಷ್ಣು ಭೇದವಿಲ್ಲದೆ ಆ ಎರಡೂ ದೇವರಿಗೆ ಅಥವಾ (ಹರಿಹರದ)! ಹರಿಹರೇಶ್ವರ ದೇವರಿಗೆ ನೀಡಿದ ಮತ್ತು ಬ್ರಾಹ್ಮಣರಿಗೆ ಉಸ್ತುವಾರಿಗೆ ಒಪ್ಪಿಸಲಾದ ಭೂಮಿದಾನವನ್ನು ದಾಖಲಿಸಲು ಉದ್ದೇಶಿತವಾಗಿದ್ದಂತೆ ಕಾಣುತ್ತದೆ. ಇಷ್ಟು ಬಿಟ್ಟರೆ ಈ ಶಾಸನದ ಬಗ್ಗೆ ಹೆಚ್ಚಿನ ಯಾವ ವಿವರವನ್ನೂ ತಿಳಿಯಲು ಸಾಧ್ಯವಾಗುವಂತಿಲ್ಲ.

ಈಚೆಗೆ ಇದರ ಮೇಲೆ ಸಿಮೆಂಟ್ ಹಾಲು ಬಿದ್ದು ಶಾಸನದ ಬರಹ ವಿರೂಪಗೊಂಡಿದೆ. ಇದನ್ನು ಸೂಕ್ತರೀತಿಯಲ್ಲಿ ಸ್ವಚ್ಛಗೊಳಿಸಿ ಸುಸ್ಥಿತಿಯಲ್ಲಿಡುವುದು ಅಗತ್ಯವೆನಿಸುರುತ್ತದೆ.

(ಕೃತಜ್ಞತೆ ಒಂದನೆಯ ಶಾಸನವನ್ನು ನಾನು ಓದಲು ವಿಶೇಷ ಸಹಕಾರ ನೀಡಿದ ನನ್ನ ಮಿತ್ರರಾದ ದಾವಣಗೆರೆಯ ಶ್ರೀ ಜೆ. ಬಸವರಾಜಪ್ಪ (ಶ್ಯಾಗಲಿ) ಅವರಿಗೆ, ಎರಡನೆಯ ಶಾಸನವನ್ನು ಎರಡನೆಯ ಸಲ ನೋಡಲು ಹೋದಾಗ ಜೊತೆಯಲ್ಲಿ ಬಂದು ಸಹಕರಿಸಿದ ಚಿತ್ರದುರ್ಗದ ಶ್ರೀ ಟಿ. ಪಿ. ಉಮಾನಾಥ್ ಮತ್ತು ಗದ್ದುಗೆ ಉಸ್ತುವಾರಿ ನೋಡಿಕೊಳ್ಳುತ್ತಿರುವ ಶ್ರೀ ಬಸವರಾಜ ಹಿರೇಮಠ ಅವರಿಗೆ ನನ್ನ ಈ ಎರಡೂ ಶಾಸನಗಳ ಛಾಯಾಚಿತ್ರಗಳನ್ನು ನೀಡಿದ ಸಂತೇಬೆನ್ನೂರಿನ ಶ್ರೀ ಸುಮತೀಂದ್ರ ನಾಡಿಗ್ ಅವರಿಗೆ ನನ್ನ ಕೃತಜ್ಞತೆಗಳು)

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಎ.ಕ. ಸಂಪುಟ ೧೧., ೧೯೦೩, (ಸಂ.) ಬಿ. ಎಲ್. ರೈಸ್.
೨. ಶತಮಾನದ ದಾವಣಗೆರೆ., ೨೦೦೧, (ಸಂ.) ಡಾ. ಎಂ. ಜಿ. ಈಶ್ವರಪ್ಪ, ದಾವಣಗೆರೆ.
೩. ಟಿ. ಗಿರಿಜ., ೨೦೦೧, ದಾವಣಗೆರೆ ಇದು ನಮ್ಮ ಜಿಲ್ಲೆ, ದಾವಣಗೆರೆ.

ಡಾ|| ಎಚ್. ಎಸ್. ಗೋಪಾಲರಾವ್*

ಮಣ್ಣೆಯಲ್ಲೊಂದು ವೀರಬಲ್ಲಾಳನ ಶಾಸನ

ಕೆಲವು ವರ್ಷಗಳಿಂದ ಮಣ್ಣೆ ನನ್ನ ಪ್ರಮುಖ ಕಾರ್ಯಕ್ಷೇತ್ರವಾಗಿದೆ. ನಾನು ೧೯೭೨ರಲ್ಲಿ ಮೊದಲ ಬಾರಿ ಮಣ್ಣೆಗೆ ಹೋಗಿದ್ದಾಗ ಗಮನಿಸದೆ ಇದ್ದ ಒಂದು ಶಾಸನವನ್ನು ನಂತರ ೧೯೮೦ರ ಸುಮಾರಿನಲ್ಲಿ ಒಮ್ಮೆ ಹೋಗಿದ್ದಾಗ ನೋಡಿದ್ದೆ; ಅದರ ಪ್ರಕಟಣೆಗೆ ಕೈ ಹಾಕಲು ಯೋಚಿಸುತ್ತಿದ್ದಾಗ, ಗೆಳೆಯರೊಬ್ಬರು, ತುಮಕೂರಿನ ಕೆಲವು ಗೆಳೆಯರು ಬಂದು ಶಾಸನದ ಪಡಿಯಚ್ಚು ತೆಗೆದುಕೊಂಡು ಹೋಗಿದ್ದಾರೆಂದು ಹೇಳಿದರು. ನನಗೆ ತಿಳಿದಿದ್ದ ತುಮಕೂರಿನ ಕೆಲವು ಇತಿಹಾಸಾಸಕ್ತ ಗೆಳೆಯರು, ತಾವು ಪಡಿಯಚ್ಚನ್ನು ತೆಗೆದುಕೊಂಡು ಹೋಗಿದ್ದಾಗಿ ತಿಳಿಸಿದರು. ಒಂದು ನಿಯತಕಾಲಿಕೆಯಲ್ಲಿ ಅದನ್ನು ಪ್ರಕಟಿಸಿರುವುದಾಗಿಯೂ ಹೇಳಿದರು. ಅವರು ಹೇಳಿದ ನಿಯತಕಾಲಿಕೆಯ ಯಾವುದೇ ಸಂಚಿಕೆಯಲ್ಲಿ ಶಾಸನ ಪ್ರಕಟವಾದ ಸುಳಿವು ಸಿಗಲಿಲ್ಲ. ಆದ್ದರಿಂದ ಆವರೆಗೆ, ನೋಡಿಯೂ, ಅದರ ಪ್ರಕಟಣೆಯ ಬಗ್ಗೆ ತಲೆಕೆಡಿಸಿ ಕೊಳ್ಳದಿದ್ದ ನಾನು ನಂತರ, ಅದರ ಪೂರ್ವಾಪರಗಳ ಬಗ್ಗೆ ಕೇಳಿ ತಿಳಿದು, ಪ್ರಕಟಣೆಗೆ ಮುಂದಾದೆ.

ಪ್ರಸ್ತುತ ಪ್ರಕಟಿಸುತ್ತಿರುವ ಶಾಸನವು ಒಂದೇ ಎತ್ತರದ ಎರಡು ಕಲ್ಲು ಚಪ್ಪಡಿಗಳ ಕೆತ್ತಲ್ಪಟ್ಟಿದೆ. ಜನರ ಹೇಳಿಕೆಯ ಪ್ರಕಾರ, ಬಸವಣ್ಣ ದೇವರ ಗುಡಿಯ ಮಾಳಿಗೆಗೆ ಉಪಯೋಗಿಸಲಾಗಿದ್ದ ಈ ಚಪ್ಪಡಿಗಳನ್ನು ಗುಡಿಯ ಜೀರ್ಣೋದ್ಧಾರದ ಸಮಯದಲ್ಲಿ ತೆಗೆದು, ಗುಡಿಯ ಗೋಡೆಗೆ ಒರಗಿಸಿ ಇಡಲಾಗಿದೆ. ಪ್ರತಿ ಚಪ್ಪಡಿಯೂ ೨.೫ ಅಡಿ ಅಗಲ ಮತ್ತು ೫.೫. ಅಡಿ ಎತ್ತರ ಇದ್ದು, ಮೇಲ್ಭಾಗದಲ್ಲಿ ಗೋವು, ಕುಳಿತಿರುವ ನಂದಿ, ಲಿಂಗ, ಹುಲಿಯೊಡನೆ ಹೋರಾಡುತ್ತಿರುವ ವೀರ ಮತ್ತು ಅವನ ಹಿಂಬದಿಯಲ್ಲಿ ನಿಂತಿರುವ ಒಬ್ಬ ಸ್ತ್ರೀಯ ಶಿಲ್ಪ ಇದೆ. ಮೇಲ್ಭಾಗದ ಶಿಲ್ಪದ ಮೂಲಕ ಇದು ಒಂದು ಹುಲಿಯೊಡನೆ ವೀರನೊಬ್ಬನ ಹೋರಾಟವನ್ನು ದಾಖಲಿಸುವ ಶಾಸನ ಎಂದು ಸ್ಪಷ್ಟವಾಗುತ್ತದೆ. ಯಾವುದೋ ಕಾಲದಲ್ಲಿ ಶಾಸನವನ್ನು ಸಮವಾಗಿ ಎರಡು ಭಾಗ ಮಾಡಿ ದೇವಾಲಯದ ಮೇಲ್ಛಾವಣಿಗೆ ಬಳಸಿದ್ದು, ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ಅದು ಹೊರಕ್ಕೆ ಬಂದಿದೆ. ಉಳಿಯನ್ನು ಉಪಯೋಗಿಸಿ, ಕ್ರಮಬದ್ಧವಾಗಿ ಕಲ್ಲನ್ನು ಇಬ್ಭಾಗ ಮಾಡಿರುವುದು ಸ್ಪಷ್ಟವಾಗಿದೆ.

ಈವರೆಗೆ ಮಣ್ಣೆಯಲ್ಲಿ ಗಂಗರ, ರಾಷ್ಟ್ರಕೂಟರ ಮತ್ತು ವಿಜಯನಗರದ ಕಾಲದ ಶಾಸನಗಳು ಮಾತ್ರ ದೊರೆತಿದ್ದವು. ಈ ಎಲ್ಲ ರಾಜ ಮನೆತನಗಳ ನಡುವೆ ಸಂಪರ್ಕ ಕಲ್ಪಿಸಬೇಕಾಗಿದ್ದ ಹೊಯ್ಸಳರ ಒಂದು ಶಾಸನವೂ ದೊರೆತಿರಲಿಲ್ಲ. ಆ ಕೊರತೆಯನ್ನು ಈ ಶಾಸನವು ನೀಗಿಸಿದೆ. ೨೯ ಸಾಲಿನ ಈ ಶಾಸನದ ಬಹು ಭಾಗ ಸವೆದಿರುವ ಕಾರಣ ಸ್ಪಷ್ಟ ಪಾಠವನ್ನು ನೀಡಲು ಸಾಧ್ಯವಿಲ್ಲವಾಗಿದೆ.

ಶಾಸನದ ಮೇಲ್ಭಾಗದ ಶಿಲ್ಪವು ಇದು ಒಂದು ಹುಲಿಯೊಡನೆ ಹೋರಾಟ ಮತ್ತು ಸಂಬಂಧಿಸಿದ ಹೋರಾಟದ ವಿವರಗಳನ್ನು ದಾಖಲಿಸುತ್ತದೆ ಎನಿಸುತ್ತದೆ. ಆದರೆ, ಶಾಸನದ ಪಾಠದಲ್ಲಿ ಅಂತಹ ಯಾವ ಸೂಚನೆಗಳೂ ಇಲ್ಲ. ಹೊಯ್ಸಳರ ಕಾಲಕ್ಕೆ ಮಣ್ಣೆ ಮತ್ತು ಅದರ ಆಸುಪಾಸಿನ ಪ್ರದೇಶಗಳು ಹೊಯ್ಸಳರ ಆಳ್ವಿಕೆಗೆ ಸೇರಿತ್ತಾದರೂ, ಈ ಭಾಗವು ಸ್ಥಳೀಯ ಅಧಿಕಾರಿಗಳ ಹಿಡಿತದಲ್ಲಿತ್ತು ಎಂಬುದರಲ್ಲಿ ಅನುಮಾನಗಳಿಲ್ಲ. ಸಮೀಪದ ಗೂಳೂರು ಮತ್ತು ಕೈದಾಳ ಪ್ರಾಂತಗಳು ಗೂಳಿ ಬಾಚಿದೇವನ ಆಳ್ವಿಕೆಗೆ ಸೇರಿದ್ದ ವಿಷಯವನ್ನು ಹಲವು ಶಾಸನಗಳು ತಿಳಿಸಿವೆ.


ಶಾಸನದ ತತ್ಕಾಲೀನ ಪಾಠ ಹೀಗಿದೆ.

೧ .. (ಸ್ವಸ್ತಿ ಸಮಸ್ತ ಭುವನಾಸ್ರಯಂ ಪ್ರಿಥ್ವಿವಲ್ಲಭಂ ಮಹಾರಾ(ಜಾ)ಧಿರಜಂ
೨ .... ಮೇಶ್ವರಂ ಪರಮಭಟ್ಟರಕಂ ದ್ವಾರಾವತಿ ಪುರವರಧೀಸ್ವರಂ ಯಾದವ ಕುಲಾಂಬರ
೩ .... ಸರ್ಬಜ್ಞ ಚೂಡಾಮಣಿ ಮಲೆರಾಜರಾಜ ಮಲೆಪರೊಳು ಗಂಡ ಗಂಡ ಬೇರುಂಡ
೪ ...ಎಕಾಂಗವೀರ ಅಸಹಾಯಸೂರ ಸನಿವಾರ ಸಿದ್ಧಿ ಗಿರಿದುರ್ಗ್ಗಮಲ್ಲ ಚಲ
೫ ...(ರಾ) ಮ ವ ಇರಿಭ ಕಂಠೀರವಂ ಮಗರ ರಾಜ್ಯ ನಿರ್ಮೂಲ ಚೋಳರಾಜ್ಯಸ್ಥಾಪನಾಚಾರ್ಯ ಮಱು
೬ ...... ಕಾವ ಹೊಇಸಣ.....ಪ್ರತಾಪ ಚಕ್ರವರ್ತಿ ಶ್ರೀ ವೀರಬಲ್ಲಾಳದೇವ
೭ ..... (ಪ್ರಿಥ್ವಿ) ರಾಜ್ಯವಮಾಳುತ್ತಿರೆ ಸ್ವಸ್ತಿಶ್ರೀ ಸಿಜ್ಞ* ವಕ್ರುತೋದವ ವಿಸ್ವೇಸ ಭ....
೮ ....ನೆಚಣ ವಿಡ... ಹೊನನಯಕನ ಬಸುವಿ ಸಸಿ ಪೂರ್ನ್ನತಾಯಿ
೯ ......ಪ್ಪವಿತ್ರರುಂ..................ಲಘಟ್ಟಾತರುಂ........................
೧೦ ....ಜ್ಜರಾಯರುಂ...........ಮ್ಮಂ.......ದೊಡ ಬ...... ಗಿ.....
೧೧ ....ನರಪ ಪ್ರ..........ಬೋಯರ ಪಾತುರಿಯರಂ ರಂಗದಲಿ ಮು
೧೨ ....ಯರುಂ ವಿದ್ಯಾದಿ ಸಲ್ಲಕ್ಷಣರುಂ ಕಾಡಾ
೧೩ ...... ವಿದ್ಯಾ ವಿನಯ ಸೂತ್ರ .... ಕೊಂಡಲಾಭ
೧೪ .... ದಾರಾ ಗಿರಿದುರ್ಗ್ಗ ಪವಿತ್ರಸ್ಥಳದುಳ್ ಸ
೧೫ .... ವಿದ್ಯಾಪರರುಂ................................
೧೬ ....ಸಂದ ೧೧೧೦೮ ನೆಯ ಪರಾಭವ ಸಂವತ್ಸ
೧೭ ....ಕಂಮಾಜಿ ಜಿ ....ಇವರೊಳಗಾದ
೧೮ ....ಕೊಟ್ಟ ತಾಂಬ್ರ ಶಾಸನದ ಕ್ರಮವೆಂತಂದಡೆ .. ಗುಳುವ ಸರ್ಬ್ಬನ
೧೯ ....ಕ್ರಮದಿ ವಪಸ.......... ಇತಮನಾಯಕ ಮಾಡ...........
೨೦ .... ಪತ ....ಗಳು ಸಿವಪುರವರ್ಗ್ಗಮನಂತು ಕೊಟ್ಟ
೨೧ .... ನತಮಸಿ ಮುಂನ್ನ ಮ......................................

* 'ಸ್ವಸ್ತಿಶ್ರೀ ಸ್ಕಂದ', ಅರಸಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ - ೫೬೨ ೧೨೩

೨೨ ....ಆ ಆತಂಗ ಮೂ.............. ಗೆ ಸಲುವ...............
೨೩ ....
೨೪ ....
೨೫ ....
೨೬ ....
೨೭ ....
೨೮ ....
೨೯ ....

ಶಾಸನದ ಮೇಲ್ಭಾಗದ ಆರು ಸಾಲುಗಳು ಮಾತ್ರ ಸ್ಪಷ್ಟವಾಗಿವೆ. ಉಳಿದ ಭಾಗವು ಅಸ್ಪಷ್ಟ : ಶಾಸನದ ಕೊನೆಯ ಏಳೆಂಟು ಸಾಲುಗಳ ಪಾಠ ತೀರಾ ಹಾಳಾಗಿದೆ. ಈಗ ದೊರಕಿರುವ ಶಾಸನ ಪಾಠದಿಂದ ಯಾವುದೇ ಸ್ಪಷ್ಟ ಅರ್ಥವನ್ನು ಹೇಳಲು ಸಾಧ್ಯವಿಲ್ಲ. ಆದರೆ, ಇದು ಶಿವಪುರವರ್ಗಕ್ಕೆ ಕೊಟ್ಟ ದಾನ ಎಂಬುದು ಸ್ಪಷ್ಟ. ಶಾಸನದಲ್ಲಿ ಪ್ರಸ್ತಾಪಿತನಾಗಿರುವ ಹೊನ್ನ



ನಾಯಕನ ಬಗ್ಗೆ ಮತ್ತಾವ ಶಾಸನವೂ ಪ್ರಸ್ತಾಪಿಸಿರುವುದು ಈವರೆಗೆ ತಿಳಿದಿಲ್ಲ.

ಶಾಸನದಲ್ಲಿ ಉಲ್ಲೇಖಿತವಾಗಿರುವ ಕಾಲವು ಶಕ ೧೧೧೦ಲ ಪರಾಭವ ಸಂವತ್ಸರ. ಇದು ಕ್ರಿ.ಶ. ೧೧೮೬ಕ್ಕೆ ಸರಿಹೊಂದುತ್ತದೆ ಮತ್ತು ಇದು ಪರಾಭವ ಸಂವತ್ಸರವೂ ಆಗಿತ್ತು. ವೀರಬಲ್ಲಾಳನ ಬಹುತೇಕ ಎಲ್ಲ ಬಿರುದುಗಳೂ ಇಲ್ಲಿ ಪ್ರಸ್ತಾಪವಾಗಿವೆ. ಅದಕ್ಕಿಂತ ಹೆಚ್ಚಾಗಿ ಈ ಶಾಸನಕ್ಕೆ ಯಾವ ರಾಜಕೀಯ ಮಹತ್ವವೂ ಇಲ್ಲ.

ಶಾಸನದ ಪಾಠ ಸ್ಪಷ್ಟವಾಗಿದ್ದಿದ್ದರೆ ಸಾಂಸ್ಕೃತಿಕವಾಗಿ ಈ ಶಾಸನ ವಿಶೇಷ ಮಾಹಿತಿಯನ್ನು ನೀಡುವ ಸಾಧ್ಯತೆ ಇತ್ತು ಎಂದು ಅನುಮಾನಿಸಲು ಅವಕಾಶಗಳಿವೆ. ಶಾಸನದ ಶಿಲ್ಪದಲ್ಲಿ ಹುಲಿ ಯೊಡನೆ ಹೋರಾಟ ಮತ್ತು ವೀರನ ಹಿಂದೆ ನಿಂತಿರುವ ಒಬ್ಬ ಸ್ತ್ರೀಯನ್ನು ಪ್ರಧಾನವಾಗಿ ಚಿತ್ರಿಸಿರುವುದು ಸ್ಪಷ್ಟ. ಇದು ಶಿವಪುರ ವರ್ಗ್ಗವನ್ನು ಪ್ರಸ್ತಾಪಿಸಿರುವುದರಿಂದ ಶಿವಪರವಾದ ಇತರ ಶಿಲ್ಪಗಳು ಸಹಜ. ಶಿಲ್ಪದ ಜೊತೆಗೆ ತಿಳಿದಿರುವ ಶಾಸನ ಪಾಠದಲ್ಲಿ ಹೊನ್ನನಾಯಕನ ಬಸುವಿಯ ಪ್ರಸ್ತಾಪ ಆಗಿದೆ. ಈಕೆಯ ಹೆಸರಿನ ಜೊತೆಗೆ ಪಾತುರಿ ಮತ್ತು ರಂಗದಲಿ ಎಂಬ ಉಲ್ಲೇಖ ಇರುವುದರಿಂದ ಬಸವಿ ಮತ್ತು ರಂಗಭೋಗಕ್ಕೆ ಇರುವ ಅಥವಾ ಇದ್ದಿರಬಹುದಾದ ಸಂಬಂಧದ ಬಗ್ಗೆ ತಿಳಿಯಲು ಅವಕಾಶಗಳಿದ್ದವು. ಆದರೆ, ಅಸ್ಪಷ್ಟ ಪಾಠದಿಂದ ಕುತೂಹಲವನ್ನು ಕಾದಿರಿಸಬೇಕಾಗಿದೆ.

ನಮಗೆ ಈಗಾಗಲೇ ತಿಳಿದಿರುವಂತೆ ಮಣ್ಣೆಯಲ್ಲಿ ಕ್ರಿ.ಶ. ೮೯೦ರಲ್ಲಿ ನಿರ್ಮಾಣವಾದ ಬಸದಿಯಲ್ಲಿ ರಂಗಭೋಗ ಸೇವೆ ನಡೆಯುತ್ತಿತ್ತು.[೧] ಪ್ರಸ್ತಾಪಿತ ಶಾಸನದಲ್ಲಿ ಉಲ್ಲೇಖವಾಗಿರುವ ಪ್ರಕಾರ ಶ್ರೀವಿಜಯ ಜಿನಾಲಯದಲ್ಲಿ 'ವಾರವಿಲಾಸಿನೀ ವಿರಚಿತ ನೃತ್ಯ ಗೀತ ವಾದ್ಯ ಬಲಿ ವಿಲೇಪನ' ಇತ್ಯಾದಿ ಸೇವೆಗಳು ನಡೆಯುತ್ತಿದ್ದವು. ಕ್ರಿ.ಶ. ೮ನೆಯ ಶತಮಾನದಲ್ಲಿ ವಾರವಿಲಾಸಿನಿ ಎಂದು ಶಿಷ್ಟ ಪದ ಪ್ರಯೋಗದಿಂದ ಉಲ್ಲೇಖಗೊಂಡ ವರ್ಗವೇ ನಂತರದ ಕಾಲದಲ್ಲಿ 'ಬಸವಿ' ಎಂದು ಜಾನಪದ ಪದ ಪ್ರಯೋಗದಿಂದ ಉಲ್ಲೇಖಗೊಂಡಿರುವ ಸಾಧ್ಯತೆ ಇದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟಿನ ಆರನೆಯ ಸಂಪುಟದಿಂದ ತಿಳಿದು ಬರುವ ಪ್ರಕಾರ 'ಬಸವಿ' ಪದದ ಪ್ರಾಚೀನ ಉಲ್ಲೇಖ ಕ್ರಿ.ಶ. ಸು. ೧೪೭೦.[೨] ಬಸವಿತ್ತಿಯ ಉಲ್ಲೇಖ ಕ್ರಿ.ಶ. ೧೩೭೮ರ ಸುಮಾರಿನಲ್ಲಿ ಆಗಿದೆ.[೩] ಈ ಹಿನ್ನೆಲೆಯಲ್ಲಿ ಬಸವಿ ಪದಪ್ರಯೋಗವು ಈಗ ತಿಳಿದಿರುವ ಉಲ್ಲೇಖಕ್ಕಿಂತ ಮೊದಲೇ, ಅಂದರೆ ಕ್ರಿ.ಶ. ೧೧೮೬ರ ವೇಳೆಗಾಗಲೇ ಆಗಿತ್ತು ಎಂದು ತಿಳಿಯುತ್ತದೆ. ಅಲ್ಲದೆ, ಈ ಶಾಸನದಲ್ಲೇ ಪಾತುರಿಯ ಉಲ್ಲೇಖವೂ ಆಗಿದೆ. 'ಪಾತುರಿಯರಂ ರಂಗದಲಿ' ಎಂದು ಸ್ಪಷ್ಟವಾಗಿರುವು ದರಿಂದ ಯಾರಾದರೊಬ್ಬ ಗಣ್ಯ ವ್ಯಕ್ತಿ/ ಅಧಿಕಾರಿಯ ಬಸವಿಯು ದೇವಾಲಯದಲ್ಲಿ ಪಾತುರಿ/ಪಾತರಿ/ಪಾತರಗಿತ್ತಿಯೂ ಆಗಿ ರಂಗಭೋಗ ಸೇವೆ ಸಲ್ಲಿಸುತ್ತಿದ್ದಳು ಎಂದು ತಿಳಿಯಲು ಅವಕಾಶಗಳಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ. ನೆಲ ೬೦
೨. ಕನ್ನಡ ನಿಘಂಟು, ಸಂ. ೬ ಪು. ೬೩೧೨, ಕ.ಸಾ.ಪ., ೧೯೯೦
೩. ಅದೇ.

ಡಾ|| ಕೆ.ಜಿ. ಗೋಪಾಲಕೃಷ್ಣ ಎಂ.ಜಿ. ನಾಗರಾಜ್, *

ರಾಮನಗರದ ಒಂದು ಅಪ್ರಕಟಿತ ವೀರಗಲ್ಲು ಶಾಸನ



ರಾಮನಗರಂನ (ಬೆಂಗಳೂರು ಜಿಲ್ಲೆ) ಪ್ರಾಚೀನ ಬಡಾವಣೆಯಾದ ಅರ್ಕೆಯ ಪಶ್ಚಿಮ ದಂಡೆಯ. ಐಜೂರು-ಹನುಮಂತನಗರದ ಅದರ ಪೂರ್ವಭಾಗದ ಹೆದ್ದಾರಿ ಬದಿಗೆ ಪೂರ್ವಮುಖಿಯಾಗಿ ನಿಂತಿರುವ ವೀರಗಲ್ ಶಾಸನವೊಂದು ಲಭ್ಯವಾಗಿದೆ. (ಜಾನಪದ ಲೋಕದ ಕ್ಯುರೇಟರ್ ಶ್ರೀ ಬಸವರಾಜ್ ಕುರುವ ಅವರು ಈ ಶಾಸನದತ್ತ ನಮ್ಮ ಗಮನ ಸೆಳೆದವರಾಗಿದ್ದಾರೆ). ಸುಮಾರು ೨೧/೨ ಅಡಿ ಎತ್ತರದ ಈ ವೀರಗಲ್ಲು ಮೂರು ಹಂತದ್ದಾಗಿದೆ. ಎರಡು ಪಟ್ಟಿಕೆಗಳನ್ನು ಹೊಂದಿದ್ದು, ಕೆಳಗಿನ ಮತ್ತು ಮಧ್ಯದ ಹಂತದ ನಡುವಣ ಪಟ್ಟಿಕೆಯ ಮೇಲೆ ೧ನೇ ಸಾಲು ಸು ೨ ಅಡಿ ಉದ್ದ, ೨ನೇ ಸಾಲು ಅರ್ಧ ಅಡಿ ಉದ್ದ, ಮೂರನೆ ಸಾಲು ಕಾಲು ಅಡಿಯಷ್ಟು ಉದ್ದದಲ್ಲಿ ಲಿಪಿಕಾಣಬರುತ್ತದೆ. ಲಿಪಿಯೂ ಗ್ರಾಮೀಣ ಶೈಲಿಯ ಕೆತ್ತನೆಯಾಗಿದೆ. ಕ್ಲೋಸ್ ಪೇಟೆ ಕೆಂಪು-ಬಿಳಿ ಮಿಶ್ರಿತ ಶಿಲೆಯ ಪಟ್ಟಿಕೆಯ ಮೇಲಿನ ಈ ಲಿಪಿ ಸಾಲುಗಳು ತೆಳುವಾಗಿ ಕಂಡರಿಸಲ್ಪಟ್ಟಿವೆ. ಮೊದಲ ಪಟ್ಟಿಕೆಯಲ್ಲಿ ಕೆಲವಕ್ಷರಗಳು ಅಸ್ಪಷ್ಟವಾಗಿವೆ. ಸದ್ಯ ಕಾಣುವ ಲಿಪಿಯನ್ನು ಗಮನಿಸಿದರೆ ಶಾಸನ ಪಠ್ಯವು ಹೀಗಿದೆ. ನಾಲ್ಕು ಸಾಲುಗಳ ಶಾಸನವಿದು. ಅಕ್ಷರಗಳ ಅಗಲ ೧.೫ ಸೆಂ.ಮೀ.-೩ಸೆಂ.ಮೀ. ಎತ್ತರ ೨.೫ ಸೆಂ.ಮೀ. ಇದೆ.

೧ ನೇ ಪಟ್ಟಿಕೆ

೧ . . ಆ . ನಾ . . ಕ ತ. ನ . ೪

೨ನೇ ಪಟ್ಟಿಕೆ

೨ ೦ ಆಯಿಜುರ ನಾತಗಿ ಯಿರಿದ ಮಿಟುಿಟಿ [೪] ರಾಣಮಯ ದಾಳಿಯಟಿದೈಜ್ಜ

೩ ದಲುರು ಕಟ್ಟಿ ಸಗ್ಗವ

೪ ನೇ [ಜಿದ]

ಸುಮಾರು ೩೧/೩' ಎತ್ತರದ ಈ ವೀರಗಲ್ ಶಾಸನದ ಮೊದಲ ಪಟ್ಟಿಕೆಯ ಮೊದಲ ಸಾಲಿನ ಅಕ್ಷರಗಳು ಮಾಸಿ ಹೋಗಿ ಕೆಲವೇ ಅಕ್ಷರಗಳು ಅಸ್ಪಷ್ಟವಾಗಿ ಕಾಣುವುದರಿಂದ ಆ ಸಾಲಿನ ವಿಷಯವನ್ನು ಅರ್ಥೈಸಲು ಸಾಧ್ಯವಾಗಿಲ್ಲ. ೨ ನೇ ಪಟ್ಟಿಕೆಯ ಮೊದಲನೇ ಸಾಲು ಹಿಂದಿನ ಪಟ್ಟಿಕೆಯ ಸಾಲಿನ ಮುಂದುವರಿದ ಭಾಗವಾಗಿದ್ದು, ಅದರ ೨ ಮತ್ತು ೩ನೇ ಸಾಲುಗಳು ತೀರ ಚಿಕ್ಕದಾಗಿವೆ. ಲಿಪಿ ಲಕ್ಷಣವನ್ನು ಗಮನಿಸಿದರೆ ೧೨ನೇ ಶತಮಾನದ ಲಿಪಿಯನ್ನು ಹೋಲುವಂತಿವೆ. ಅಕ್ಷರಗಳು ಅಂದವಾಗಿ ಕಂಡರಣೆ ಆಗಿಲ್ಲ. ಈ ಪಟ್ಟಿಕೆಯ ೩ನೇ ಸಾಲು ಎರಡಕ್ಷರಗಳು ತೀರ ತೆಳುವಾಗಿ ಅಸ್ಪಷ್ಟವಾಗಿವೆ. ಶಾಸನ ಪಠ್ಯದ ವಿಷಯ: ಆಯಿಜೂರಿನ ವೀರ ನಾತಗಿ ಎಂಬುವನು, ಮಿಟಿಳಿ **(ಮೆಳೆಹಳ್ಳಿ)** ರಾಣಮಯ್ಯನು ಬಹುಶಃ ಆಯಿಜೂರಿನ ಮೇಲೆ ಧಾಳಿ ಮಾಡಿ ಊರನ್ನು ಕೆಡಿಸಲೆತ್ನಿಸಿದಾಗ ಅದನ್ನು ನಾತಗಿ ತಡೆದು ಐದು ಊರನ್ನುಳಿಸಿ ಸರ್ಗವೇರಿದ ಅವನಿಗೆ ಕಲ್ನಾಟು ಹಾಕಿಸಿದ ಸೂಚನೆ ಇಲ್ಲಿದೆ.

ಇತಿಹಾಸದ ವಿಷಯಗಳು : ಇಲ್ಲಿ ಆಯಿಜೂರು-ಐದು ಊರುಗಳ ಸಮೂಹವಾಗಿ ಆ ಹೆಸರು ಕ್ರಿ.ಶ. ೧೩೫೧ರಲ್ಲಿ

* ವಿಸ್ತರಣ, ಪುರಭವನ ರಸ್ತೆ, ರಾಮನಗರಂ, ಬೆಂಗಳೂರು ಗ್ರಾ, ಜಿಲ್ಲೆ - ೫೭೬ ೫

** ೨೨೧, ೬೮ನೇ ಅಡ್ಡರಸ್ತೆ, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - ೫೬೦ ೦೧೦

ವಿಜಯನಗರದ ಬುಕ್ಕನ ಐಜೂರು ಶಾಸನದಲ್ಲಿ[೧] ಉಕ್ತವಾಗಿತ್ತು. ಆದರೆ ಆಯಿಜೂರು ಎಂದು ಹುಟ್ಟಿತು ಎಂಬುದು ನಿಖರವಾಗಿ ತಿಳಿದಿರಲಿಲ್ಲ. ೧೯೭೭ರಲ್ಲಿ ಎಂ. ಜಿ. ನಾಗರಾಜ್ ಮತ್ತು ಶ್ರೀ ವಿ. ಪಿ. ಗುರುಮೂರ್ತಿ ಅವರು ಕಂಡುಹಿಡಿದ ಸುಮಾರು ಕ್ರಿ.ಶ ೭೬೫ರ ಐಜೂರು-ಹನುಮಂತನಗರದ ರಣಪಾರನ ಶಾಸನದಲ್ಲಿ[೧] ಐಜೂರು ಪರಿಸರವನ್ನು ಕೆಟ್ಗಲಿನಾಡಿನ ಕಲ್ಲೂರು ಎಂದು ಪರಿಸರವಾಚಿಯಾಗಿ ಕರೆಧಿರುವುದು ಸ್ಪಷ್ಟವಿದೆ. ['ಆಯಿ]ದೂರು' ಎಂದು ಎಂ. ಎ. ಆರ್ ೧೯೧೦ ನಲ್ಲಿದೆ.[೩] ಇದು ಗಂಗರ ನೀತಿಮಾರ್ಗನ ವೀರಸ್ವರ್ಗವನ್ನು ಏರಿದ ವಿಷಯವಿರುವ ಕ್ರಿ.ಶ. ಸು. ೮೬೯ ರ ರಾಮನಗರದ - ಐಜೂರು ಶಾಸನದಲ್ಲಿ ಕಾಣಬರುತ್ತದೆ. ಆದರೆ ಪ್ರಸ್ತುತ ಶಾಸನದಲ್ಲಿ ಆಯಿಜೂರುವಿನ ಹೆಸರು ಉಕ್ತವಿರುವಲ್ಲಿ (ಆಯಿದೂರು!) ಐದು ಊರು ಇದ್ದುದುದ ಖಚಿತವಾಗಿ ತಿಳಿದು ಬಂದು ಈ ಊರು ೯ನೇ ಶತಮಾನಾನಂತರ ೧೧-೧೨ನೇ ಶತಮಾನದ ಅವಧಿಯಲ್ಲಿ ರೂಪುಗೊಂಡಿರುವ ಸೂಚನೆಯೂ ಸಿಗುತ್ತದೆ. ಕ್ರಿ.ಶ. ೧೩೫೧ರ ವೇಳೆಗೆ ರಣಪಾರನ 'ಕೆಟ್ಗಲಿ ನಾಡು', 'ಕಲುವಳಿ ನಾಡು' ಎನಿಸಿ ಅದರಲ್ಲಿ ವಯಿಜೂರು, 'ಬೈಜೂರು' ಎಂಬ ಹೆಸರಿನಲ್ಲಿ ಆಯಿಜೂರು ರೂಢಿಗೊಂಡದ್ದು ಕಾಣುತ್ತದೆ.

ಇಲ್ಲಿ ಬರುವ ಗ್ರಾಮನಾಮ 'ಮಿಟು'ಳಿ', ಐಜೂರು ಸಮೀಪದ ಇಂದಿನ ಮೆಳೆಹಳ್ಳಿಗೆ ಸಂಬಂಧಿಸಿದ್ದೇ ಅಥವ ಮಳೂರು (ಚನ್ನಪಟ್ಟಣ)ವಿಗೆ ಸಂಬಂಧಿದುದೇ ಎಂಬುದು ಸ್ಪಷ್ಟವಿಲ್ಲ. 'ಮಣಲು', 'ಮಳಲಿ' ಆಗುವ ಸಂಬಂಧದಲ್ಲಿ ಇದೊಂದು ಊಹೆಯಷ್ಟೆ. 'ರಾ(ರ)ಣಮಯ್ಯ', ಎಂಬ ಹೆಸರು ೮ನೇ ಶತಮಾನದ ಮೇಲ್ಲೂಸಚಿತ 'ರಣಪಾರರಸನ' ಹೆಸರಿನ ಪರಂಪರೆ ಜನಜೀವನದಲ್ಲಿ ಮುಂದುವರೆದಿರಬಹುದಾದ ಸಾಕ್ಷಿಯೆ! ಎಂಬುದನ್ನು ನಿಖರವಾಗಿ ಹೇಳಲು ಬರುವುದಿಲ್ಲ.

ಶಾಸನವೂ ಊರಳಿವಿನ ಸಂದರ್ಭದಲ್ಲಿ, ಹೋರಾಡಿದ ವೀರನಿಗೆ ಬಹುಶಃ ಕಲ್ನಾಟು ಹಾಕಿ ಕೊಟ್ಟಿರುವ ಸಂಗತಿ ಹೇಳಿರುವಲ್ಲಿ, ಐಜೂರಿನ ವಿಸ್ತಾರ ಹಾಗು ಅರ್ಕೆಯ ಪಶ್ಚಿಮ ದಂಡೆಗಳಲ್ಲಿದ್ದ ಐತಿಹಾಸಿಕ ಗ್ರಾಮಗಳ ಅಸ್ತಿತ್ವವನ್ನು ತಿಳಿಸುವಂತಿದೆ. ಐಜೂರು ಗುಡ್ಡಗಳ ನಡುವೆ ಇರುವ ಪ್ರಾಚೀನ ಕೆರೆ, ಮಲ್ಲೇಶ್ವರ ಗದ್ದುಗೆ ಎದುರಿಗಿರುವ ವಿಶಿಷ್ಟ ವೀರಗಲ್ಲು, ವೀರಗಾರರ ಗುಡಿಗಳೂ, ಐಜೂರಿನ ಐತಿಹಾಸಿಕ ಪ್ರಾಮುಖ್ಯಕ್ಕೆ ಸಾಕ್ಷಿಯಾಗಿ ನಿಂತಿವೆ. ಅಲ್ಲಿನ ಕೆಲವು ವೀರಗಲ್ಲುಗಳು ಹಾಗು ಸದ್ಯ ಲಭ್ಯ ವಾಗಿರುವ ವೀರಗಲ್ಲು ಶಾಸನದ ಸಮಕಾಲೀನವಾಗಿದ್ದ ಬಗ್ಗೆ ತಮ್ಮಲ್ಲಿಯ ಶಿಲ್ಪ ಶೈಲಿಯಿಂದ ಪುರಾವೆ ಹಾಕುವಂತಿವೆ. ಹಾಗು ಐಜೂರು ತನ್ನ ಪ್ರಾಮುಖ್ಯವನ್ನು ಕ್ಲೋಸ್‌ಪೇಟೆಯು ೧೮೦೧ರಲ್ಲಿ ಆರಂಭವಾಗುವವರಿಗೂ ಉಳಿಸಿಕೊಂಡೇ ಬಂದಿತೆನ್ನಬೇಕು.

ವೀರಶಾಸನದ ಶಿಲ್ಪಗಳು

ಮೂರು ಹಂತದ ಈ ವೀರಗಲ್ ಶಾಸನದ ಕೆಳಗಿನ ಹಂತದಲ್ಲಿ ಮಧ್ಯೆ ಊರಿನ ವೀರ ಮತ್ತು ಶತ್ರುವೀರರ ಉಬ್ಬು ಶಿಲ್ಪವನ್ನು ಪ್ರಮುಖವಾಗಿ ದೊಡ್ಡದಾಗಿ ಕೆತ್ತಿ, ಅವರ ಜೊತೆಯೆ ಕಿರಿಯ ವೀರ ಅಥವಾ ಸೈನಿಕರನ್ನು ಚಿಕ್ಕದಾಗಿ ಕೆತ್ತಲಾಗಿದೆ. ಸಾಮಾನ್ಯವಾಗಿ ಶಾಸನ ಶಿಲೆಯ ಬಲಪಾರ್ಶ್ವದಲ್ಲಿ ಶಾಸನೋಕ್ತ ವೀರ ಹಾಗು ಎಡಪಾರ್ಶ್ವದಲ್ಲಿ ಶತ್ರುವೀರ ಇರುವ ಚಿತ್ರಿತ ರೂಢಿಯ ಬದಲು ಮಧ್ಯ ಭಾಗದಲ್ಲಿಯೇ ಚಿತ್ರಿಸಲ್ಪಟ್ಟಿರುವುದು ವಿಶೇಷ. ಡಾ|| ಡಿ. ವಿ. ಪರಮಶಿವಮೂರ್ತಿ ಅವರ **ಕನ್ನಡ ಶಾಸನ ಶಿಲ್ಪ** ಕೃತಿಯಲ್ಲಿ ಅಗ್ರಹಾರ ಬಾಚಳ್ಳಿ ಹಾಗು ಬಾಗಳಿಯ ವೀರಗಲ್ ಶಿಲ್ಪಗಳ ಪೈಕಿ ಅ. ಬಾಚಹಳ್ಳಿಯದರಲ್ಲಿ ಶತ್ರುವೀರರು ಪ್ರಮುಖವಾಗಿ ಎಡಪಾರ್ಶ್ವದ ಮುಕ್ಕಾಲುಭಾಗದಲ್ಲಿ ಚಿತ್ರಿತ ರಾಗಿದ್ದಾರೆ. ಅದೇ ಬಾಗಳಿಯದರಲ್ಲಿ ಮಧ್ಯೆ ಪ್ರಮುಖವಾಗಿ ಶಿಲ್ಪಗೊಂಡಿರುವ ವೀರರು ಶತ್ರುವೀರರಿಂದ ಸುತ್ತುವರಿದು ಕಾಳಗಕೊಡುತ್ತಿದ್ದಾರೆ. ಆದರೆ ಐಜೂರಿನ ಈ ವೀರಶಾಸನ ಶಿಲ್ಪದಲ್ಲಿ ಆಯಿಜೂರಿನ ನಾಯಕ ವೀರನು ಶತ್ರು ವೀರನನ್ನು ದಾಟಿ, ಅವನ ಸೈನಿಕನನ್ನು ಇರಿದು ಕೊಲ್ಲುವಂತಿದೆ. ಶತ್ರುವೀರನು ಐಜೂರಿನ ವೀರ ಸೈನಿಕನನ್ನು ತಿವಿಯುತ್ತಿರುವಂತೆ ಶಿಲ್ಪವಿದೆ. ಐಜೂರಿನ ವೀರರು ಗುರಾಣಿ ಕತ್ತಿ ಹಿಡಿದಿದ್ದರೆ ಶತ್ರುವೀರರು ಶೂಲವಿಡಿದು ಕಾಳಗವಾಡಿದ್ದರೆ. ಶತ್ರುವೀರರ ಶಿರೋವೇಷದಲ್ಲಿ ಮುಡಿ ಎಡಕ್ಕಿದ್ದು, ನಾಯಕನಲ್ಲಿ ಇಳಿ ಜಟೆ (ಜಡೆ) ಸಹಿತವಾಗಿದೆ. ಕೈಯಲ್ಲಿ ಈಟಿ ಹಿಡಿದಿದ್ದಾರೆ. ಆಯಿಜೂರಿನ ನಾಯಕವೀರನಲ್ಲಿ ಇಳಿ ಜಡೆ ಸಹಿತವಾದ ಶಿರೋವೇಷವಿದ್ದರೆ, ಅವನ ವೀರಸೈನಿಕನಿಗೆ ಜಡೆ ಇಲ್ಲವಾಗಿದೆ. ಈ ವೀರರ ಯುದ್ಧ ಭಂಗಿ ಕ್ರಿಯಾತ್ಮಕವಾಗಿ ಆಕರ್ಷಣೀಯವೆನಿಸುತ್ತದೆ. ಈ ಶಿಲ್ಪವು ಐಜೂರಿನ ವೀರರು ಶತ್ರುವೀರರನ್ನು ಹಾಯ್ದು ಹೋಗುವಲ್ಲಿ ವೀರ ಸೈನಿಕನು ಮಡಿಯಲು ಐಜೂರಿನ ಈ ಅರ್ಕೆಯ ದಂಡೆಯ ಬಳಿಯ ಭೂಮಿಯನ್ನು ಕಲ್ಲುನೆಟ್ಟು ಕೊಟ್ಟಿರಬಹುದು ಎಂಬ ಭಾವವನ್ನು ಧ್ವನಿಸುತ್ತದೆ; (೧೨ನೆಯ ಶತಮಾನದ ವೀರರ ಶಿರೋವೇಷದ ಸಂಕೇತವನ್ನು ತೋರುವಂತಿದೆ).

ಮೇಲೆ ಎರಡನೇ ಹಂತದಲ್ಲಿ ಅಪ್ಸರಾಯಾನ ಭಾಗದಲ್ಲಿ ಚವರಿ ಹಿಡಿದ ವೀರಮಂಡಿಯ ಅಪ್ಸರೆಯರ ನಡುವೆ ಆಸೀನ ಪ್ರಣಾಮ ಹಸ್ತಭಂಗಿಯ ವೀರ, ಪೀಠಸ್ಥನಾಗಿದ್ದಾನೆ. ಆದರೆ ಇವನ ಹಸ್ತಗಳು ಪೂರ್ಣವಾಗಿ ಮುಗಿದ ಕೈಗಳಂತಿರದೆ ಬಲಗೈ, ಎಡಗೈ ಬಳಿಗೆ ಚಾಚಿದಂತೆ ಭಾಸವಾಗುತ್ತದೆ. ಎಡಗೈಯಲ್ಲಿ ಶಿವ ಲಿಂಗವಿಡಿದು ಪೂಜಿಸುತ್ತಿರುವನೇ ಎಂಬ ಅನುಮಾನವೂ ಉಂಟಾಗುತ್ತದೆ. ಅಲ್ಲದೆ ಮೂರನೇ ಹಂತದ ಶಿವಲೋಕದಲ್ಲಿ ಇಳಿಜಟೆಯ ಕಾಳಾಮುಖ ಶೈವಾರ್ಚಕ, ಶಿವಲಿಂಗ, ಬಾಲ ಹಾಗೂ ಎಡಗಾಲು ಎತ್ತಿದ ಆಸೀನ ನಂದಿ ವಿಗ್ರಹಗಳಿವಿಯೇ





(ಕೃಪೆ : ಜಾನಪದಲೋಕ, ರಾಮನಗರ)

ವಿನಾ, ವೀರನ ಶಿಲ್ಪವಿಲ್ಲ. ಅಂದರೆ ವೀರನು ಶಿವಪೂಜೆಯಲ್ಲಿ ಲಿಂಗಡಿವಿದು ಕೈಲಾಸವನ್ನು ಇದ್ದಲ್ಲಿಯೇ ಪರಿಭಾವಿಸುವ ಶಿವಧರ್ಮಿಯಂತೆ ಕಾಣಿಸುತ್ತದೆ. ಹೀಗಾಗಿ ಇದೊಂದು ವೀರರ ಹಾಗು ವೀರನ ಧರ್ಮದ ದೃಷ್ಟಿಯಿಂದ ವಿಶೇಷ ವೀರಗಲ್ಲೂ ಆಗಿ ಕಾಣಿಸುತ್ತದೆ. ನೆರೆಯ ಅರ್ಚಕರಹಳ್ಳಿ ಲಕ್ಷ್ಮೀಪುರ, ಸೋಮದೇವರಬೆಟ್ಟ, ಜಾಲಮಂಗಲ ಇತ್ಯಾದಿ ಕಡೆಯ ಕಾಳಾಮುಖಶೈವ ಪ್ರಭಾವ ನಡೆದು ಬಂದುದಕ್ಕೆ ಜೊತೆಯಾಗಿ ಈ ಶಿಲ್ಪವೂ ಸಾಕ್ಷಿ ಹಾಕುವಂತಿದೆ. ಜಾನಪದಲೋಕದಲ್ಲಿರುವ ಇರುಬನಹಳ್ಳಿಯ ವೀರಗಲ್ಲೊಂದರಲ್ಲಿ ಕೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಪೂಜಿಸುವ ಭಂಗಿಯನ್ನು ಗಮನಿಸಿದರೆ, ಸದ್ಯದ ವೀರನ ಹಸ್ತಭಾಗಗಳ ಶಿಲ್ಪ ಅದಕ್ಕೆ ಹೋಲಿಕೆಯಾಗುವಂತಿದೆ.

ಈ ವೀರಗಲ್ ಶಾಸನದ ಬದಿಗೆ ಸುಮಾರು ೧ ಅಡಿ ಎತ್ತರ, ೩/೪ ಅಡಿ ಅಗಲದ ಕಿರು ವೀರಗಲ್ಲೊಂದು ಇದ್ದು ಕೊಡಗಿನಲ್ಲಿ ಪ್ರಚಲಿತವಾಗಿರುವ ಕೊಲೆಗಲ್ಲುಗಳ ಶೈಲಿಯನ್ನು ಹೋಲುತ್ತದೆ. ಹುಲಿಗಾಳಗದಲ್ಲಿ ವೀರನೊಬ್ಬನು ಹುಲಿಯನ್ನು ಕೊಂದು ವೀರಮರಣ ಅಪ್ಪಿದ ಶಿಲ್ಪವಾಗಿ ಇದು ಸ್ಪಷ್ಟವಿದೆ; ಇದು ಕ್ರಿ.ಶ. ೧೮೦೦ರ ಮುನ್ನಿನದಾಗಿದೆ. ರಾಮನಗರದ ಇತಿಹಾಸವನ್ನು ಗಮನಿಸಿದರೆ ಕ್ರಿ.ಶ. ೧೮೦೦ರ ಸುಮಾರಿನಲ್ಲಿ ಭಕ್ಷಿ ಬಸಪ್ಪಾಜಿ ಎಂಬ ರಹದಾರಿ ಠಾಣ್ಯಾಧಿಕಾರಿ ಇಲ್ಲಿದ್ದಾಗ ಈ ಭಾಗ ದಟ್ಟಕಾಡನ್ನು ಹೊಂದಿ ಹುಲಿ ಹಾವಳಿ ಇತ್ತೆಂದು ತಿಳಿದು ಬರುತ್ತದೆ. ಈ ಮಾತಿಗೆ ಪೋಷಕವಾಗಿ ಸದ್ಯದ ಕಿರು ವೀರಗಲ್ ಶಿಲ್ಪ ಸಾಕ್ಷಿ ಹಾಕುವಂತಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯ ಕರ್ನಾಟಿಕ** ಸಂಪುಟ ೯, (ರೈಸ್ ಆವೃತ್ತಿ), ಚನ್ನಪಟ್ಟಣ ೧೬ (ಕ್ರಿ.ಶ. ೧೩೫೧).
೨. ಎಂ. ಜಿ. ನಾಗರಾಜ್., (೧೯೭೯), **ಶಿವಶ್ರೀರಾಮಗಿರಿ ಕ್ಷೇತ್ರದರ್ಶನ**, ರಾಮನಗರಂ, ಪು. ೧೩; (ಅ) ಉದಯವಾಣಿ ೩೧. ೮.೧೯೮೦.
೩. ಎಂ. ಜಿ. ನಾಗರಾಜ್., (೧೯೯೦), **ಶಾಸನಶಿಲ್ಪಗಳು**, ಗೌರೀ -ಗಂಗಾ ಪ್ರಕಾಶನ, ಬೆಂಗಳೂರು, ಪು. ೧೧ ಮತ್ತು ೪೨ನೇ ಪುಟದನಂತರ ಇರುವ ಚಿತ್ರ. ೧.
೪. ಎಂ. ಎ. ಆರ್., (೧೯೧೦) ಪು. ೨೬.
೫. ಡಾ. ಡಿ. ವಿ. ಪರಮಶಿವಮೂರ್ತಿ., (೧೯೯೯), **ಕನ್ನಡ ಶಾಸನಶಿಲ್ಪ** ಹಂಪಿ, ಕನ್ನಡ ವಿ.ವಿ. ಪು. ೮೭, ೧೭೪.

ಆದಪ್ಪ ಪಾಸೋಡಿ*

ಸೇವುಣ ದೊರೆ ಕನ್ನರನದೇವನ ಕಾಲದ ಅಪ್ರಕಟಿತ ಶಾಸನ



ವಿಜಾಪುರ ಜಿಲ್ಲೆ ಸಿಂದಗಿಯಿಂದ ಆಲಮೇಲ ಮಾರ್ಗದಲ್ಲಿ ೨೦ನೆಯ ಕಿಲೋಮೀಟರ್ ಕಲ್ಲು ತಲುಪಿ, ಅಲ್ಲಿಂದ ಪೂರ್ವ ದಿಕ್ಕಿನಲ್ಲಿ ಹೊಲಗಳಲ್ಲಿ ಹಾಯ್ದು, ಅಂದಾಜು ೧ ಕಿ. ಮೀ. ದೂರ ಕ್ರಮಿಸಿದರೆ ಎರಡು ಚಿಕ್ಕ ಹಳ್ಳಗಳ ಸಂಗಮ ಸ್ಥಳದಲ್ಲಿ 'ಸಾಯನಳ್ಳಿ' 'ಸೈನಳ್ಳಿ' ಎಂಬ ಬೇಚರಾಕ್ ಗ್ರಾಮ ಸಿಗುತ್ತದೆ. ತಾಮ್ರಶಿಲಾಯುಗ ಸಂಸ್ಕೃತಿಯ ನೆಲೆಗಳಾದ ಹೂವಿನಹಳ್ಳಿ, ಆಲಮೇಲ ಗ್ರಾಮಗಳಲ್ಲಿ ಚರ್ಟ್ ಹಾಗೂ ಚಾಲ್ಸಿಡೋನಿಗಳಿಂದ ತಯಾರಿಸಿದ ಸೂಕ್ಷ್ಮ ಶಿಲಾ ಉಪಕರಣಗಳು ಹಾಗೂ ಬ್ರಹ್ಮಗಿರಿ ಸಂಸ್ಕೃತಿಯ ಬೂದುಬಣ್ಣದ ಮಡಿಕೆ ಚೂರುಗಳು ದೊರೆತಿವೆ.[೧]

ಸಾಯನಳ್ಳಿ ಬಳಿಯ ಶ್ರೀ ಶಿವಲಿಂಗಪ್ಪ ಪಾಟೀಲ (ವಡಗೇರಿ) ರವರ ತೋಟದ ಮನೆ ಹತ್ತಿರದಲ್ಲಿ ಕಲ್ಲಿನ ರಾಶಿಯಲ್ಲಿ ಸೇವುಣ ದೊರೆ ಕನ್ನರದೇವನ ಕಾಲದ ಶಾಸನ ದೊರಕಿದೆ. ೯೦ ಸೆಂ. ಮೀ. ಉದ್ದ ಹಾಗೂ ೩೦ ಸೆಂ.ಮೀ. ಅಗಲವಿರುವ ಕಪ್ಪು ನೀಲವರ್ಣದ ಕಲ್ಲು ಚಪ್ಪಡಿಯನ್ನು ಬಳಸಲಾಗಿದ್ದು, ಮೇಲ್ಭಾಗದಲ್ಲಿ ಅಗಲ ಕಿರಿದಾಗಿರುತ್ತದೆ. ಶಾಸನಗಲ್ಲಿನ ಕೆಳಭಾಗದ ಅಗಲ ವಿಸ್ತಾರವಾಗಿರುವುದರಿಂದ ಅಕ್ಷರಗಳ ಗಾತ್ರ ಮೇಲಿನಿಂದ ಕೆಳಕ್ಕೆ ಹೋದಂತೆ ದೊಡ್ಡದಾಗಿದೆ. ಶಾಸನದ ಕಲ್ಲು ಏಳೆಂಟು ತುಣುಕುಗಳಾಗಿ ಒಡೆಯಲ್ಪಟ್ಟಿದ್ದು, ಜೋಡಿಸಿಟ್ಟು ಶಾಸನ ಪಾಠ ಸಿದ್ಧಪಡಿಸಲಾಗಿದೆ. ಒಡೆದು ಹೋದ ಇನ್ನೂ ೩ ಕಲ್ಲಿನ ತುಂಡುಗಳು ಸಿಕ್ಕಿರುವುದಿಲ್ಲ.

ಶಾಸನದ ಪಾಠ

೧ ಸ್ವಸ್ತಿ ಶ್ರೀಮತು ಯಾ[ದವ ನಾ]
೨ ರಾಯಣ ಪ್ರತಾ[ಪ]
೩ ಚಕ್ರವರ್ತಿ ಕನ್ನ[ರದೇ]
೪ ವ ವಿಜಯ ರಾ[ಜ್ಯೋ]
೫ ದಯದ ೩ನೆಯ[ಸೌ]
೬ ಮ್ಯ ಸಂವತ್ಸರದ ....
೭ ....
೮ .... ಸೂರ್ಯ[ಗ್ರ]
೯ ಹಣದ [ಂದು] ಜಗ
೧೦ ಜೆಟ್ಟಿ ನಾಗದೆವರ್ಸರಿ[ಗೆ]
೧೧ ಕಾವಲದೇವಿ ಪು
೧೨ ಣ್ಯಾರ್ತ್ಥವಾಗಿ ..ಯ ಸಾ
೧೩ ಹಣೆ ಮನೆಯ ಗೊಮಟ
೧೪ ವನು ಎಂಟ್ಟು ಹಿಟ್ಟು ಪಂಚ
೧೫ ಮಠ ಸ್ತಾನ... ಮಾ
೧೬ ನ್ಯ ಸೌಖ್ಯವಾಗಿ ...
೧೭ ....
೧೮ ....

'ಸ್ವಸ್ತಿ ಶ್ರೀಮತು' ಎಂದು ಪ್ರಾರಂಭವಾಗುವ ಈ ಶಾಸನದಲ್ಲಿ ಸೇವುಣ ದೊರೆ ಕನ್ನರನನ್ನು 'ಪ್ರತಾಪ ಚಕ್ರವರ್ತಿ ಕನ್ನರದೇವ' ಎಂಬ ಬಿರುದಿನಿಂದ ಕರೆಯಲಾಗಿದೆ. ಉಲ್ಲೇಖಿತ ಸೌಮ್ಯ ಸಂವತ್ಸರ ಮತ್ತು ಕನ್ನರನ ವಿಜಯ ರಾಜ್ಯೋದಯದ ೩ನೆಯ ವರ್ಷಗಳನ್ನು ಲೆಕ್ಕ ಹಾಕಿದಾಗ ಕ್ರಿ.ಶ. ೧೨೪೯ಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ೧೦ನೇ ಸಾಲಿನ 'ಜೆಟ್ಟಿ', ೧೪ನೇ ಸಾಲಿನ 'ಹಿಟ್ಟು' ಪದಗಳಲ್ಲಿರುವ ಒತ್ತಕ್ಷರಗಳು ಕೆಳಗಿನ ಸಾಲುಗಳ ಮಧ್ಯೆ ಸೇರ್ಪಡೆಯಾಗಿವೆ. 'ಎಂಟು ಹಿಟ್ಟು' ಶಬ್ದವನ್ನು ಕಂಡರಿಸುವಲ್ಲಿ 'ಎಂಟು' ಎಂಬುದು 'ಎಂಟ್ಟು' ಎಂದಾಗಿದೆ.

ಸೇವುಣರು ಅಥವಾ ದೇವಗಿರಿ ಯಾದವರು ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿದ್ದವರು. ೧೨ನೇ ಶತಮಾನದ ಕೊನೆಯ ದಶಕಗಳಲ್ಲಿ ಅವರು ಸ್ವತಂತ್ರ ಪ್ರಭುತ್ವ ಪಡೆದು ವಿಜಾಪುರ, ಧಾರವಾಡ, ಚಿತ್ರದುರ್ಗ, ರಾಯಚೂರು, ಹಾಸನ, ಶಿವಮೊಗ್ಗ ಜಿಲ್ಲೆಗಳು ಮತ್ತು ಸುತ್ತ ಮುತ್ತಲಿನ ಪ್ರದೇಶಗಳನ್ನು ಆಳಿದರು ಎಂಬುದಕ್ಕೆ ನಿದರ್ಶನವಾಗಿ ಈಗಾಗಲೇ ಅಗರಬೇಡ, ಚಡಚಣ, ಸಾಲವಾಡಗಿ, ನಿಡೋಣಿ, ಯಂಡಿಗೇರಿ

* ಶಿಕ್ಷಣ ಸಂಯೋಜಕ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ವಲಯ, ಕೃಷ್ಣರಾಜಪುರ, ಬೆಂಗಳೂರು - ೫೬೦ ೦೩೬

ಮತ್ತು ಘಡಕೇನೂರ ಶಾಸನಗಳು ಆಧಾರವಾಗಿವೆ. ಸೇವುಣರ ಆಳ್ವಿಕೆಯಲ್ಲಿ ವಿಜಯಪುರ, ಕಡ್ಲೇವಾಡ, ಮುತ್ತಗಿ ಮುಂತಾದ ಸ್ಥಳಗಳು ಹೆಚ್ಚು ಧಾರ್ಮಿಕ ಮಹತ್ವ ಪಡೆದಿದ್ದವು. ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ಸೇವುಣ ದೊರೆಗಳ ಆರಾಧ್ಯ ದೈವ[2] ಎಂಬ ಅಂಶ ತಡವಳ ಶಾಸನದಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ ಯಾದವ ನಾರಾಯಣ ಎನ್ನುವ ಬಿರುದಿನೊಂದಿಗೆ ಅವರು ಸೇವುಣ ಚಕ್ರವರ್ತಿ, ಸೇವುಣ ವಂಶದರಸು ಎಂದೂ ಕರೆಯಲ್ಪಟ್ಟಿದ್ದಾರೆ.[3]

ಸಿಂಘಣನ ನಂತರ ಆಡಳಿತಕ್ಕೆ ಬಂದ, ಕನ್ನರದೇವನ ಆಳ್ವಿಕೆಗೆ (ಕ್ರಿ.ಶ. ೧೨೪೭-೧೨೬೧) ಸಂಬಂಧಿಸಿದಂತೆ ಈವರೆಗೆ ಸುಮಾರು ೧೨ ಶಾಸನಗಳು ವರದಿಯಾಗಿವೆ. ಕ್ರಿ.ಶ. ೧೨೪೮ರ ಅಗರಖೇಡ ಶಾಸನವು ಪಿರಿಯ ಅಗ್ರಹಾರದ ಮಹಾಜನರು, ಮನ್ನೆಯರು, ಪ್ರಭುಗಳು ಮತ್ತು ಎಂಟು ಹಿಟ್ಟುಗಳು ದೇವಾಲಯಕ್ಕೆ ನೀಡಿದ ಭೂದಾನದ ಬಗ್ಗೆ ವಿವರಿಸಿದರೆ, ಕ್ರಿ.ಶ. ೧೨೪೯ರ ಸಾಯನಳ್ಳಿ ಶಾಸನವು ಕನ್ನರದೇವನ ಆಳ್ವಿಕೆಯ ೩ನೇ ವರ್ಷದಲ್ಲಿ ಸೂರ್ಯಗ್ರಹಣದಂದು ಜಗಜೆಟ್ಟಿ ನಾಗದೇವರಸರಿಗೆ ಕಾವಲು ದೇವಿಯ ಪುಣ್ಯಾರ್ಥವಾಗಿ ಸಾಹಣಿಮನೆಯ ಗೊಮ್ಮಟವನ್ನು ಎಂಟು ಹಿಟ್ಟು ಪಂಚಮಠ ಸ್ಥಾನದ ಸಮಕ್ಷಮ ಬಿಟ್ಟುಕೊಟ್ಟ ದತ್ತಿಯ ಬಗ್ಗೆ ವಿವರಿಸುತ್ತದೆ.

ಜಗಜೆಟ್ಟಿ ನಾಗದೇವರಸ : 'ನಾಗದೇವಸರ' ನಾಮಪದಕ್ಕೆ ಸೇರಿಕೊಂಡಿರುವ ವಿಶೇಷಣ 'ಜಗಜೆಟ್ಟಿ'. 'ಹೆಸರಾದ ಮಲ್ಲ', 'ಪ್ರಸಿದ್ಧನಾದ ಮಲ್ಲ' ಎಂಬ ಅರ್ಥ ಬರುವುದರಿಂದ ಜಗಜೆಟ್ಟಿ ನಾಗದೇವರಸನು ಒಬ್ಬ ಶೂರನೆಂದು ತಿಳಿದು ಬರುತ್ತದೆ. ಸೌಂದತ್ತಿ ರಟ್ಟರನ್ನು ಸೋಲಿಸಿ ಸೇವುಣ ಪರಮಾಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದ ಮಹಾಪ್ರಧಾನ ನಾಗರಸನೇ ಶಾಸನೋಕ್ತ ಜಗಜೆಟ್ಟಿ ನಾಗದೇವರಸನಾಗಿರಬಹುದೇ?

ಸಾಹಣಿ ಮನೆಯ ಗೊಮ್ಮಟ : ಶಾಸನ ದೊರೆತ ಸ್ಥಳದಲ್ಲಿ ಸಾಹಣಿ ಮನೆಯ ಅವಶೇಷಗಳು ಕಾಣಸಿಗುವುದಿಲ್ಲ. ಹಾಳು ಮಣ್ಣಿನ ದಿನ್ನೆ ಪ್ರದೇಶದಲ್ಲಿ ಗುರುತುಗಳು ಮುಚ್ಚಿಕೊಂಡಿರಬಹುದಾದ ಸಾಧ್ಯತೆ ಇದೆ. ಶಾಸನದಲ್ಲಿ ಬಂದಿರುವ 'ಸಾಹಣಿ' ಪದಕ್ಕೆ 'ಆನೆ ಮತ್ತು ಕುದುರೆಗಳನ್ನು ಪಳಗಿಸುವವನು', 'ಕುದುರೆದಳದ ಮುಖಂಡ', 'ರಾವುತ' ಎಂಬ ಅರ್ಥವಿದೆ. ಸಾಹಣಿಯ ವಾಸಕ್ಕಾಗಿ ಕಟ್ಟಿಸಿದ ಮನೆಯ ಗೊಮ್ಮಟವು ಈ ಸ್ಥಳದಲ್ಲಿದ್ದು, ಇದನ್ನು ಗ್ರಾಮಗಳಲ್ಲಿದ್ದ ಬೇರೆ ಬೇರೆ ವೃತ್ತಿಗಳ ಗುಂಪು[7] (ಎಂಟು ಹಿಟ್ಟು) ಹಾಗೂ ಸಮಸ್ತ ನಗರವೂ ಸೇರಿ ಆ ಊರಿನ ಪಂಚಮಠ ಸ್ಥಾನ[8]ದ ಸಮಕ್ಷಮ ಸಾಹಣಿಯೊಬ್ಬನಿಗೆ ದತ್ತಿ ಬಿಡಲಾಗಿದೆ.

'ಸಾಹಣಿ ಮನೆ'ಯಿರುವುದರಿಂದಲೇ ಸಾಹಣಿಹಳ್ಳಿ> ಸಾಹಣಳ್ಳಿ > ಸಾಯನಹಳ್ಳಿ>ಸೈನಳ್ಳಿ ಆಗಿರಬಹುದು.

(ಈ ಅಪ್ರಕಟಿತ ಶಾಸನ ಕುರಿತು ಮಾಹಿತಿ ನೀಡಿದ ಶಿವಣ್ಣಾ ನಿಂಬರಗಿ, ಸ್ಥಳಕ್ಕೆ ಕರೆದೊಯ್ದ ಅರವಿಂದ ಪಾಟೀಲ ಹಾಗೂ ಮಾರ್ಗದರ್ಶನ ಮಾಡಿದ ಗುರುಗಳಾದ ಡಾ. ಪಿ.ವಿ. ಕೃಷ್ಣ ಮೂರ್ತಿಯವರಿಗೆ ಲೇಖಕ ಕೃತಜ್ಞ)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ವಿಜಾಪುರ ಜಿಲ್ಲೆ ಗ್ಯಾಝೆಟಿಯರ್.**, (೧೯೯೯), ಸಂ. ಡಾ. ಆರ್. ಮುನಿಸ್ವಾಮಿ, ಬೆಂಗಳೂರು, ಪುಟ ೫೮.

೨. **ಎ.ಆರ್.ಐ.ಈ** (೧೯೬೦-೬೧) ಕ್ರ.ಸಂ. ೩೬೮.

೩. ಡಾ. ಎ.ವಿ. ನರಸಿಂಹಮೂರ್ತಿ., (೧೯೭೧) **ಕರ್ನಾಟಕದ ಸೇವುಣರ ಇತಿಹಾಸ**, ಮೈಸೂರು, ಪುಟ.೯.

೪. **ವಿಜಾಪುರ ಜಿಲ್ಲೆಯ ಶಾಸನ ಸೂಚಿ.**, (೧೯೭೬), ಕನ್ನಡ ಅಧ್ಯಯನ ಪೀಠ, ಕ.ವಿ.ವಿ, ಧಾರವಾಡ.

೫. **ಸಂಕ್ಷಿಪ್ತ ಕನ್ನಡ ನಿಘಂಟು.**, (೧೯೭೭). ಕ.ಸಾ.ಪ., ಬೆಂಗಳೂರು, ಪುಟ - ೩೫೦.

೬. **ಕನ್ನಡ ನಿಘಂಟು -ಸಂಪುಟ ೮.**, (೧೯೯೫) ಕ.ಸಾ.ಪ, ಬೆಂಗಳೂರು, ಪುಟ - ೮೫೦೮.

೭. **ಸಂಕ್ಷಿಪ್ತ ಕನ್ನಡ ನಿಘಂಟು.**, (೧೯೭೭), ಕ.ಸಾ.ಪ, ಬೆಂಗಳೂರು. ಪುಟ-೯೩೧.

೮. **ಕನ್ನಡ ನಿಘಂಟು - ಸಂಪುಟ ೫.**, (೧೯೮೮) ಕ.ಸಾ.ಪ, ಬೆಂಗಳೂರು.

ಡಾ|| ಪಿ.ವಿ. ಕೃಷ್ಣಮೂರ್ತಿ*
ಎಂ.ಎಸ್. ಪ್ರಭಾಕರ್**

ಯಳ್ಳಂಬಳಸೆಯ ಒಂದು ಅಪ್ರಕಟಿತ ಶಾಸನ ಮತ್ತು ಸೇನಾವಾರ ವಂಶೀಯರು

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು ಯಳ್ಳಂಬಳಸೆಯ ಕೇಶವದೇವರ ದೇವಾಲಯದ ಆವರಣದಲ್ಲಿ ಕೇವಲ ನಾಲ್ಕು ಸಾಲುಗಳು ಮಾತ್ರ ಉಳಿದಿರುವ ಅಪ್ರಕಟಿತ ಶಾಸನದ ತುಂಡೊಂದು ಇದೆ. ಈ ಶಾಸನ ತುಂಡಿನ ಮೇಲ್ಭಾಗದ ಬಲತುದಿಯಲ್ಲಿ ಆನೆಯ ಸಣ್ಣ ಉಬ್ಬು ಶಿಲ್ಪವಿದೆ. ಅದರ ಮುಂದೆ ಸೂರ್ಯ - ಚಂದ್ರರ ಸಂಕೇತಗಳಿವೆ. ಈ ಸಂಕೇತಗಳ ಕೆಳಗೆ ಹಸು-ಕರುವಿನ ಉಬ್ಬು ಶಿಲ್ಪವಿದೆ. ಒಟ್ಟು ಕಲ್ಲಿನ ಮೂರನೇ ಒಂದು ಭಾಗದಷ್ಟು ಸ್ಥಳದಲ್ಲಿ ಈ ಶಾಸನಶಿಲ್ಪವಿದ್ದು ಪ್ರಧಾನವಾಗಿ ಎದ್ದು ಕಾಣುತ್ತದೆ. ಈ ಶಾಸನದ ತುಂಡು, ಪೂರ್ಣ ಶಾಸನವೊಂದರ ಮೇಲ್ಭಾಗವಾಗಿದ್ದು ಕೆಳಭಾಗ ಕಳೆದು ಹೋಗಿದೆ. ಹಾಗಾಗಿ ಈ ಶಾಸನದ ಮೊದಲ ನಾಲ್ಕು ಸಾಲುಗಳು ಮಾತ್ರ ಕಾಣಸಿಗುತ್ತವೆ. ಅಂತೆಯೇ ಈ ಶಾಸನದ ಪೂರ್ಣಪಾಠ ಸದ್ಯಕ್ಕೆ ಅಲಭ್ಯ.

ಲಭ್ಯ ಶಾಸನದ ಪಾಠದಿಂದ ಸಾಮಿಯಬ್ಬೆಯರ್, *ಉದಯವಿದ್ಯಾಧರರಸ, ನಾಲ್ವರ್ಗಾಮುಣ್ಡುಗಳ್* ಎಂಬ ವಿವರ ಮಾತ್ರ ಕಂಡುಬರುತ್ತದೆ.

ಕಡೂರು ತಾಲೂಕು ಮಲ್ಲೇಶ್ವರದ ಶಾಸನದಲ್ಲಿ[೧] ಲೋಕವಿದ್ಯಾಧರ ಎಂಬುವನ ಪ್ರಸ್ತಾಪವಿದೆ. ಅದೇ ಗ್ರಾಮದ ಇನ್ನೊಂದು ಶಾಸನದಲ್ಲಿ[೨] ವಿದ್ಯಾಧರಯ್ಯ ಎಂಬ ಉಲ್ಲೇಖ ಬಂದಿದ್ದು ಇವನನ್ನು ಮಾನ್ಯ ರೈಸ್‌ರವರು ಕೆಲವು ಆಂತರಿಕ ಆಧಾರಗಳ ಹಿನ್ನೆಲೆಯಲ್ಲಿ ಕ್ರಿ.ಶ. ಸು. ೯೯೦ಕ್ಕೆ ಸೇರಿದವೆಂದು ಅಭಿಪ್ರಾಯಪಟ್ಟಿದ್ದಾರೆ. ಹಾಗೇ ಚಿಕ್ಕಮಗಳೂರು ತಾಲೂಕಿನ ೬೧, ೭೬ನೇ ನಂಬರಿನ ಶಾಸನಗಳಲ್ಲಿ '*ವಿದ್ಯಾಧರ ಲೋಕರಾಜ ಮೌಳಿಯಾಳಾಲಂಕೃತ ಚಾರುಚರಣಾರವಿಂದ ಯುಗಳ*' ಎಂದಿದ್ದು ಸೇನಾವಾರರಿಗೆ ಪೂಜ್ಯನಾಗಿದ್ದಾನೆ ಎಂಬ ವರ್ಣನೆ ಬಂದಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ದೊರೆತಿರುವ ಶಾಸನವು ಸೇನಾವಾರ ವಂಶೀಯರದೆಂದು ಹೇಳಬಹುದಾಗಿದೆ. ಇದನ್ನು ಸೇನಾವಾರ ವಂಶೀಯರ ಶಾಸನವೆಂದು ಪರಿಗಣಿಸುವುದಾದರೆ. ಇದುವರೆಗೆ ದೊರೆತಿರುವ ಸೇನಾವಾರ ಶಾಸನಗಳಿಗೆ ಇದು ಒಂದು ಹೊಸ ಸೇರ್ಪಡೆ ಎಂದು ಹೇಳಬಹುದು.

ರೈಸ್ ಅವರ ಕಾಲದಿಂದ ಆರಂಭಗೊಂಡಿರುವ ಸೇನಾವಾರರ ಬಗೆಗಿನ ಅಧ್ಯಯನ ಹೆಚ್ಚಿನ ಪ್ರಗತಿಯನ್ನೇನೂ ಕಂಡಂತೆ ತೋರುತ್ತಿಲ್ಲ. ಮೊದಲ ಬಾರಿಗೆ ಇವರ ಬಹುತೇಕ ಶಾಸನಗಳನ್ನು ಒಂದು ಕಡೆ ಸೇರಿಸಿ, ಡಾ.ಎಂ.ಬಿ. ನೇಗಿನಾಳ ಅವರು ೧೯೯೪ರಲ್ಲಿ ಸೊಂಡೂರಿನಲ್ಲಿ ಏರ್ಪಾಟಾಗಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೯ನೇ ವಾರ್ಷಿಕ ಅದಿವೇಶನದಲ್ಲಿ ಮಂಡಿಸಿದ ಸಂಪ್ರಬಂಧ **ಇತಿಹಾಸದರ್ಶನ ಸಂಪುಟ** ೧೦ರಲ್ಲಿ ಪ್ರಕಟವಾಗಿದೆ. ಸದ್ಯಕ್ಕೆ ಸೇನಾವಾರರನ್ನು ಪ್ರಸ್ತಾಪಿಸುವ ಪ್ರಾಚೀನತಮ ಶಾಸನದ ಕಾಲ ಕ್ರಿ.ಶ. ೬೯೦ಕ್ಕೆ ಸೇರಿದ್ದು ಕೊಪ್ಪ ತಾಲೂಕಿನಲ್ಲಿದೆ.[೫] ಅನಂತರದಲ್ಲಿ ಈ ವಂಶೀಯರ ಶಾಸನಗಳು ಶಿಕಾರಿಪುರ, ಸೊರಬ, ಚಿಕ್ಕಮಗಳೂರು, ದಾವಣಗೆರೆ, ಬ್ಯಾಡಗಿ, ಹಾವೇರಿ, ರಾಣಿಬೆನ್ನೂರು, ಹಾನಗಲ್, ಹಿರೇಕೆರೂರು ಮುಂತಾದ ತಾಲೂಕು ಪ್ರದೇಶಗಳಲ್ಲಿ ಕಂಡು ಬಂದಿದ್ದು ಕ್ರಿ.ಶ.ಸು. ೧೨ನೇ ಶತಮಾನದವರೆಗೂ ವ್ಯಾಪಿಸಿವೆ. ಮೇಲೆ ಉಕ್ತವಾಗಿರುವ ಪ್ರದೇಶವು ಪ್ರಧಾನವಾಗಿ ನಾಗರಖಂಡ-೭೦ರ ವ್ಯಾಪ್ತಿಯಲ್ಲಿ ಬರುವಂತಹ ಪ್ರದೇಶವಾಗಿದೆ.

ಕ್ರಿ.ಶ. ೮ನೇ ಶತಮಾನದ ವೇಳೆಗೆ ಮಹಾ ಮಂಡಳೇಶ್ವರರಾಗಿ ಏಳಿಗೆಯನ್ನು ಹೊಂದಿದ ಇವರು ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು ಹಾಗೂ ಕಲ್ಯಾಣದ ಚಾಲುಕ್ಯರ ಅಧೀನರಾಗಿ ಬನವಾಸಿ ಪನಿರ್ಚ್ಛಾಸಿರ ಪ್ರದೇಶದಲ್ಲಿ ಆಳಿರುತ್ತಾರೆ. ಈ ವಂಶೀಯರಿಗೆ ಸಂಬಂಧಿಸಿದ ಸುಮಾರು ೪೦ಕ್ಕೂ ಹೆಚ್ಚು ಶಾಸನಗಳು ಲಭ್ಯವಿದ್ದರೂ ನಿಶ್ಚಿತವಾದ ವಂಶವೃಕ್ಷವನ್ನು ನಿರೂಪಿಸುವುದು ಅಸಾಧ್ಯದ ಸಂಗತಿಯಾಗಿದೆಯೆಂದರೆ ತಪ್ಪಾಗಲಾರದು. **ಭೂವರಕ್ಕೆ ಅರ್ಕೇಸರಿ** ಎಂಬುವನು ಮುಗುಂದ ನಾಡನ್ನು ಬಾದಾಮಿ ಚಲುಕ್ಯರ ಅಧೀನದಲ್ಲಿ ಆಳುತ್ತಿದ್ದ ಸಂಗತಿ ಕ್ರಿ.ಶ. ಸು. ೭೦೦ರ ಶಾಸನವೊಂದರಿಂದ ತಿಳಿಯುತ್ತದೆ[೬] (SK. 278). ಇವರ ಶಾಸನಗಳಲ್ಲಿ ಜೀವಿತವಾರ, ಜೀಮೂತವಾಹನ, ಮಾರ ಅಥವಾ ಮಾರಸಿಂಹ ಎಂಬ ಹೆಸರುಗಳು ಕಂಡುಬರುತ್ತವೆ. ದಾವಣಗೆರೆಯ ಶಾಸನಗಳಲ್ಲಿ[೭] ಆದಿತ್ಯ, ಸೂರ್ಯ ಎಂಬುವರು ಆರನೇ ವಿಕ್ರಮಾದಿತ್ಯನ ಅಧಿಕಾರಿಗಳಾಗಿದ್ದರೆಂಬ ವಿಷಯ

* ಡಿ-೧೦, ತಂತಿ ಕಛೇರಿ ಪಕ್ಕದ ರಸ್ತೆ, ವಿಮಾನಪುರ, ಬೆಂಗಳೂರು - ೫೬೦ ೦೧೭
** 'ಪದ್ಮಪ್ರಭಾ, ೪೨, ಬ್ಲಾಕ್ ೧೭, ಶ್ರೀರಾಮಪುರ ೨ನೇ ಹಂತ, ಮೈಸೂರು- ೫೭೦ ೦೨೩

ತಿಳಿಯುತ್ತದೆ. ಮುಗುಂದನಾಡನ್ನು ಆಳುತ್ತಿದ್ದ **ದೋಸಿಯರ**, ಬನವಾಸಿ ಪ್ರಾಂತ್ಯವನ್ನು ಆಳುತ್ತಿದ್ದ **ಮಾರಕ್ಕೆ ಅರಸ** ಎಂಬುವರು ಹೆಚ್ಚು ಪ್ರಸಿದ್ಧರಿದ್ದಂತೆ ತೋರುತ್ತದೆ. ಡಾ. ಚೆನ್ನಕ್ಕ ಪಾವಟೆ ಅವರು ಗುರುತಿಸಿರುವ ಬಾಸೂರು-೧೪೦ರ ಮನ್ನೆಯರಾದ ಖಚರ ವಂಶೀಯರೂ ಕೂಡ ಈ ಸೇನಾವಾರ ಸಂತತಿಗೇ ಸೇರಿದವರಾಗಿದ್ದಾರೆ.[೮] ಅಂದರೆ ಕಲಿಯಮ್ಮರಸ, ಹೆಮ್ಮಾಡಿಯರಸ ಇವರೂ ಸೇನಾವಾರರೆ. ಇವರು ಪ್ರಾರಂಭದಲ್ಲಿ ಜೈನರಾಗಿದ್ದರು. ಇವರು ತಮ್ಮನ್ನು **ಪದ್ಮಾವತೀ ಚರಣ ಸರೋಜ ಬೃಂಗ** ಎಂದು ವರ್ಣಿಸಿಕೊಂಡಿದ್ದಾರೆ. ಕನತಿ ಮೊದಲಾದ ಶಾಸನಗಳಲ್ಲಿ 'ಕೂಡಲೂರ ಪುರಪರಮೇಶ್ವರ','ಮೃಗೇಂದ್ರ ಲಾಂಛನರ್,' 'ಖಚರ ತ್ರಿಣೇತ್ರರ್' ಎಂದು ಇವರು ಉಕ್ತರಾಗಿದ್ದಾರೆ. ಇವರು ಅನೇಕ ದೇಗುಲಗಳ ರಚನೆಗೆ ಕಾರಣರಾಗಿದ್ದರೆಂಬ ಸಂಗತಿ ಶಾಸನಗಳಿಂದ ಸುವಿದಿತ.

ಸೇನಾವಾರರ ಬಹಳಷ್ಟು ಶಾಸನಗಳು ಗೋಸಾಸ ಶಾಸನಗಳೇ ಆಗಿರುವುದು ಒಂದು ವಿಶೇಷ. ಅಲ್ಲದೆ ಗೋಸಾಸ ದಾನವನ್ನು ಬ್ರಾಹ್ಮಣರಿಗೇ ಅಲ್ಲದೆ ಜೈನರಿಗೂ ಕೊಡುವ ಪದ್ಧತಿ ಇದ್ದಿತೆಂಬುದಕ್ಕೆ ಇವರ ಗೋಸಾಸ ಶಾಸನಗಳು ಸಾಕ್ಷಿಯಾಗಿವೆ.

ಪ್ರಸ್ತುತ ಯಳ್ಳಂಬಳಸೆಯ ಶಾಸನವು ಕ್ರಿ.ಶ. ಸು. ೧೦ನೇ ಶತಮಾನಕ್ಕೆ ಸೇರುವಂತಹದ್ದಾಗಿದ್ದು ಈ ವಂಶದ ಪ್ರಸಿದ್ಧ ಮಾರಕ್ಕೆ ಅರಸನ ಅನಂತರದಲ್ಲಿ ಲೋಕವಿದ್ಯಾಧರ, ಉದಯವಿದ್ಯಾಧರ ಎಂಬ ಅರಸರು ಆಗಿಹೋದರೆಂಬುದನ್ನು ದಾಖಲಿಸಿದೆ. ಅಲ್ಲದೆ ಸಾಮಿಯಬ್ಬೆ ಎಂಬುವ ಸ್ತ್ರೀಯೋರ್ವಳ ಪ್ರಸ್ತಾಪ ಕೂಡ ಗಣನಾರ್ಹವಾಗಿದೆ. ಈ ಶಾಸನದಲ್ಲಿ ಉಕ್ತವಾಗುವ ಗಾಮುಣ್ಡುಗಳ ಪ್ರಸ್ತಾಪದ ಹಿನ್ನೆಲೆಯಲ್ಲಿ ಸೇನಾವಾರರ ಆಡಳಿತದಲ್ಲಿ ಗಾಮುಣ್ಡುಗಳ ಪಾತ್ರವೂ ಪ್ರಧಾನವಾಗಿದ್ದಿತೆಂದು ಹೇಳಬಹುದಾಗಿದೆ.



ಶಾಸನದ ಪಾಠ

೧ ಸ್ವಸ್ತಿ ಶ್ರೀ ಸಾಮಿ
೨ ಯಬ್ಬೆರ್ಯ್ಯ ಉದಯ
೩ ವಿದ್ಯಾದರಸ ನಾಲ್ವರ್ಗ್ಗ
೪ ಮುಣ್ಡುಗಳು ಮಿಟ್ಟುಮಾ
....

(ಈ ಶಾಸನವನ್ನು ಗುರುತಿಸಲು ನೆರವಾದ ಶ್ರೀಯುತ ಟಿ. ಎಂ. ಧರ್ಮಯ್ಯನವರಿಗೆ ಕೃತಜ್ಞತೆಗಳು)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯಾ ಕರ್ನಾಟಕ** ಸಂಪುಟ - vi, ಕಡೂರು - ೮.
೨. ಅದೇ ೯.
೩. ಅದೇ, ಚಿಕ್ಕಮಗಳೂರು ೬೧, ೭೬.
೪. **'ಸೇನವಾರರು ಮತ್ತು ಅವರ ಶಾಸನಗಳು'**, **ಇತಿಹಾಸದರ್ಶನ**, ಸಂ. ೧೦ (೧೯೯೫), ಪು. ೯೭.
೫. ಎ.ಕ vi., ಕೊಪ್ಪ ೩೭.
೬. ಎ.ಕ. vii., ಶಿಕಾರಿಪುರ ೨೭೮.
೭. ಎ.ಕ. xi., ದಾವಣಗೆರೆ ೮೪, ೮೫.
೮. 'ಬಾಸೂರ ಖಚರ ಮನೆತನ-ಮತಾಂತರ', **ಇತಿಹಾಸದರ್ಶನ**, ಸಂ. ೧೧ (೧೯೯೬), ಪ. ೨೪೦.

ಜಯದೇವಪ್ಪ ಜೈನಕೇರಿ*

ಶಿವಮೊಗ್ಗ ತಾ. ಆವಿನಹಳ್ಳಿಯ ಅಪ್ರಕಟಿತ ವೀರಗಲ್ಲು ಶಾಸನಗಳು

ಶಿವಮೊಗ್ಗ ಸಮೀಪ ಕೊಮ್ಮನಾಳು ಗ್ರಾಮದಿಂದ ೩ ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಜೈನ ನೆಲೆ ಆಲಹಳ್ಳಿ (ಬೇಚರಾಕು ಗ್ರಾಮ) ಯಲ್ಲಿ ರಸ್ತೆ ಬದಿಯಲ್ಲಿ ಒಂದು ಸುಮಾರು ೩ಮೀ,(೧೦ಅಡಿ) ಎತ್ತರ ವೀರಗಲ್ಲು ಕಂಡುಬಂದಿದೆ. ಮೂರು ಹಂತದ ಈ ವೀರಗಲ್ಲಿನ ಮೇಲ್ಭಾಗದಲ್ಲಿ ಮುಕ್ಕೊಡೆಯ ಕೆಳಗೆ ಜೈನ ತೀರ್ಥಂಕರರ ಶಿಲ್ಪವಿದೆ. ಜೊತೆಗೆ ಅಲ್ಲಿದೆ ಗ್ರಾಮಸ್ಥರು ಹತ್ತಿರದಲ್ಲೆ ಅದೇ ಹೊಲದ (ರಂಗಪ್ಪನ ಹೊಲ) ಮಧ್ಯೆ ಮೆಕ್ಕೆಜೋಳ ಫಸಲಿನ ನಡುವೆ ಅರ್ಧಭಾಗ ನೆಲದಲ್ಲಿ ಹೂತು ಹೊಗಿದ್ದ ಒಂದು ದೊಡ್ಡ ಶಾಸನ ಶಿಲ್ಪವನ್ನು ತೋರಿಸಿದರು. ೪೯ ಸಾಲುಗಳಿರುವ ಈ ದೊಡ್ಡ ಶಾಸನ ಸುಮಾರು ೭೦ ಸೆಂ.ಮೀ(೩೦ ಇಂಚು) ಅಗಲ ೨.೬೩ ಮೀ(೧೦೫ ಇಂಚು) ಎತ್ತರವಿದೆ. ಇದೂ ಸಹ ಜೈನ ಶಾಸನ. ಮೇಲ್ಭಾಗದಲ್ಲಿ ಮುಕ್ಕೊಡೆಯ ಕೆಳಗೆ ಜೈನ ತೀರ್ಥಂಕರರ ಸುಂದರವಾದ ಮೂರ್ತಿ ಇದೆ. ಅಕ್ಷರಗಳು ಸ್ಫುಟವಾಗಿದ್ದು ಶಾಸನವು ಸುಸ್ಥಿತಿಯಲ್ಲಿದೆ. ಇದರಿಂದ ಆಲಹಳ್ಳಿ ಒಂದು ಪ್ರಸಿದ್ಧ ಜೈನನೆಲೆ ಆಗಿತ್ತು ಎಂಬ ಸಂಗತಿ ತಿಳಿದು ಬರುತ್ತದೆ. ಈ ಶಾಸನವು ಈಗಾಗಲೇ ಬಿ.ಎಲ್.ರೈಸರ ಇ.ಸಿ. ಸಂಪುಟ ೭ರಲ್ಲಿ ಶಿವಮೊಗ್ಗ ತಾಲ್ಲೂಕು ಶಾಸನ ಸಂಖ್ಯೆ ೯೬ ಮತ್ತು ೯೭ ರಲ್ಲಿ ಪ್ರಕಟವಾಗಿದೆ. ಈ ಗ್ರಾಮವು ಆಗಿನ ಕಾಲದಲ್ಲಿ ಆಡಳಿತ ವಿಭಾಗ ಅಥವಾ ಪ್ರಮುಖ ಕೇಂದ್ರವಾಗಿತ್ತು ಎನ್ನಬಹುದು.

ಮೇಲ್ಕಂಡ ಶಾಸನದ ಸಮೀಪದ ಹಳ್ಳದ ಪಕ್ಕದಲ್ಲಿ ಹುಣಸೆಮರದ ಕೆಳಗೆ ಎರಡು ಸ್ತ್ರೀ ವಿಗ್ರಹಗಳಿರುವ ಕಲ್ಲುಗಳಿವೆ. ಅವುಗಳನ್ನು ಗ್ರಾಮಸ್ಥರು ಪೂಜಿಸುತ್ತಿದ್ದಾರೆ. ಅರ್ಧಭಾಗ ಭೂಮಿಯ ಒಳಗೆ ಹೂತು ಹೋಗಿದ್ದ ಎರಡು ವೀರಗಲ್ಲುಗಳನ್ನೂ ಸೂಕ್ಷ್ಮವಾಗಿ ಪರೀಶೀಲಿಸಿ ಸುಣ್ಣ ಮೆತ್ತಿದ್ದು ಚಿತ್ರಗಳು ಮುಸುಕಾಗಿದ್ದವು. ಪಟ್ಟಿಕೆಯ ಅಂಚನ್ನು ತಿಕ್ಕಿ ನೋಡಿದಾಗ ಕೆಲವು ಅಕ್ಷರಗಳು ಕಂಡುಬಂದವು. ಎರಡು ವೀರಗಲ್ಲುಗಳ ಶಾಸನಗಳನ್ನು ಕೆರೆದು, ಛಾಯಾಪ್ರತಿ



ತೆಗೆಯಲಾಯಿತು. ಅಕ್ಷರಗಳು ಅಲ್ಲಲ್ಲಿ ಮುಸುಕಾಗಿದ್ದು, ಸವೆದು ಹೋಗಿವೆ.

ಈ ಎರಡೂ ವೀರಗಲ್ಲು ಶಾಸನಗಳೂ ೧೨ನೇ ಶತಮಾನದವು ಮತ್ತು ಅಪ್ರಕಟಿತ ಮೊದಲನೇ ಶಾಸನದ ಕಾಲ ಕ್ರಿ.ಶ.೧೧೧೮ಕೆ ಸೇರಿದೆ. ಇದರ ಶಾಸನ ಪಾಠ ಈ ಕೆಳಗಿನಂತಿದೆ.



* ನಂ. ೮೭, ಶಾಂತಲಾ, ಕುವೆಂಪು ರಸ್ತೆ, ಶಿವಮೊಗ್ಗ

೧ ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮ ವ್ಲರಿಷ್ವ ೪೩ ವಿಳಂಬಿ ಸಂ
ವಚ್ಚರದ ಪಾಲ್ಗುಣ ಶು_ಪೌರ್ಣಮ್ವಿ ದಿನ
ಬುದವಾರದಂದು [ಹು] ಣ
ಡಿ ಕೆಯ................. ರಿಹ. ರ ಹೆಂಡಿರುಡೆಯ

ಒಂದನೇ ಶಾಸನದಲ್ಲಿ ಮೇಲಿನ ಸ್ವರ್ಗಾರೋಹಣ ಹಂತ ಮಾತ್ರ ಭೂಮಿಯ ಮೇಲ್ಭಾಗದಲ್ಲಿದೆ. ಚೌಕಾಕಾರದ ಪಟ್ಟಿಕೆಯ ಮಧ್ಯದಲ್ಲಿ ಮೂವರು ಸ್ತ್ರೀಯರು ಪೂಜಾ ಪರಿಕರಗಳನ್ನು ಹಿಡಿದಿರುವಂತೆಯೂ, ವೀರನ ಮತ್ತು ಕಾಳಾಮುಖ ಶೈವ ಯತಿಯನ್ನು ಕೆತ್ತಲಾಗಿದೆ. ಶಿವಲಿಂಗದ ಮುಂದೆ ಕುಳಿತಿರುವಂತೆ ಕೆತ್ತಲಾಗಿದೆ. ಅವರ ಹಿಂದೆ ಒಬ್ಬ ವೀರ ಕುಳಿತಿರುವಂತಿದೆ. ಶಿವಲಿಂಗದ ಎದುರು ನಂದಿಯ ಚಿತ್ರವಿದೆ. ನಂದಿಯ ಹಿಂಭಾಗದಲ್ಲಿ ಮನುಷ್ಯನಷ್ಟು ಎತ್ತರವಾದ ಕಲಾತ್ಮಕ ದಂಡವಿದೆ. ಚಿತ್ರಗಳ ಸುತ್ತ ಚೌಕನೆಯ ಪಟ್ಟಿಕೆ ಇದೆ. ಒಂದನೇ ಶಾಸನದಲ್ಲಿ ಕಂಡುಬರುವ ಹೆಂಡಿರುಡೆಯ ಎನ್ನುವ ಉಲ್ಲೇಖ ಶೇಷ ಶಾಸ್ತ್ರಿಗಳ 'ಕರ್ನಾಟಕದ ವೀರಗಲ್ಲುಗಳು' ಎಂಬ ಗ್ರಂಥದಲ್ಲಿ ಕಂಡುಬರುತ್ತದೆ. ಊರಿನ ಹೆಂಗಳೆಯರನ್ನು ನಗ್ನರನ್ನಾಗಿಸಿ ಮಾನಾಪರಹಣ ಪ್ರಯತ್ನವಾಗಿ ರುವುದನ್ನು ಸೂಚಿಸುತ್ತದೆ.

ಎರಡನೇ ಶಾಸನವು ಎರಡು ಸಾಲುಗಳಲ್ಲಿದ್ದು ಕ್ರಿ.ಶ.೧೧೮೦ಕೇ ಸೇರಿದೆ.

ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮ..ದ ೧೮ ಆ [೦ಗಿ]
ರಸ ಸಂವತ್ಸರದ ಭಾದ್ರಪದ ಸುದ್ದ ೧೦ ಆದಿವಾರ ದಂದು

ಎರಡನೇ ಶಾಸನ ಮೇಲ್ಬಾಗ ಅರ್ಧ ವೃತ್ತಾಕಾರದಲ್ಲಿದೆ. ಸುಮಾರು ೪೫ ಸೆಂ.ಮೀ.(೧೮ಇಂಚು) ಅಗಲ ಮತ್ತು ಎತ್ತರ ೬೦ ಸೆಂ.ಮೀ(೨೪ಇಂಚು) ಇದೆ. ಎರಡನೇ ಶಾಸನ ೬೦. ಸೆಂ. ಮೀ. (೨೪ ಇಂಚು) ಅಗಲ ೬೦ ಸೆಂ. ಮಿ (೨೪ ಇಂಚು) ಎತ್ತರ ಮಾತ್ರ ಭೂಮಿಯ ಮೇಲೆ ಇದ್ದು ಚೌಕಾಕಾರವಾಗಿದೆ.

ಸ್ವರ್ಗಾರೋಹಣದ ಮೇಲಿರುವ ಮೇಲಿನ ಹಂತದಲ್ಲಿ ಶಿವಲಿಂಗ ಮತ್ತು ವೀರನ ಪರಿವಾರ, ಸೇವಕಿಯರು ಕಂಡುಬರುತ್ತಾರೆ. ವಾಡಿಕೆಯಂತೆ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ. ಎರಡನೇ ಶಾಸನದ ಭೂಮಿಯ ಮೇಲಿರುವ ಕೆಳಹಂತದಲ್ಲಿ ೫ ಜನ ದೇವಕನ್ನಿಕೆಯರು ಪರಸ್ಪರರು ಹೆಗಲುಗಳ ಮೇಲೆ ಕೈಗಳನ್ನು ಹೆಣೆದುಕೊಂಡು ಮಡಿದ ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯ ಇದೆ. ಮೇಲೆ ಅರ್ಧ ವೃತ್ತಾಕಾರದ ಪಟ್ಟಿಕೆಯಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಮನುಷ್ಯಾಕೃತಿ, ಸೂರ್ಯ, ಚಂದ್ರ, ನಂದಿ ಚಿತ್ರಗಳಿವೆ. ಶಿವಲಿಂಗದ ಎದುರು ಭಾಗದಲ್ಲಿ ಕಾಳಾಮುಖ ಶೈವಗುರು ಕೈಮುಗಿದು ಕುಳಿತಿರುವ ಶಿಲ್ಪವಿದೆ. ಎರಡೂ ವೀರಗಲ್ಲುಗಳ ಕೆಳಹಂತದಲ್ಲಿ ೫ ಜನ ದೇವಕನ್ನಿಕೆಯರು ಪರಸ್ಪರ ಹೆಗಲುಗಳ ಮೇಲೆ ಕೈಗಳನ್ನು ಹೆಣೆದುಕೊಂಡು ಮಡಿದ ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯ ಇದೆ. ಮೇಲಿನ ಅರ್ಧ ವೃತ್ತಾಕಾರದ ಪಟ್ಟಿಕೆಯಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಮನುಷ್ಯಾಕೃತಿ, ಸೂರ್ಯ, ಚಂದ್ರ, ನಂದಿ ಚಿತ್ರಗಳಿವೆ. ಶಿವಲಿಂಗದ ಎದುರು ಭಾಗದಲ್ಲಿ ಕಾಳಾಮುಖ ಶೈವ ಗುರು ಕೈಮುಗಿದು ಕುಳಿತಿರುವ ಶಿಲ್ಪವಿದೆ.

ಎರಡೂ ವೀರಗಲ್ಲುಗಳ ಕೆಳ ಹಂತಗಳು ನೆಲದ ಒಳಗೆ ಇದ್ದು ಕೆಳಗಿನ ಪಟ್ಟಿಕೆಗಳಲ್ಲಿಯೂ ಶಾಸನ ಪಾಠ ಮುಂದುವರಿದಿರ ಬಹುದು. ಸ್ಥಳೀಯರು ಪಂಚಕನ್ಯೆಯರ ಕಲ್ಲುಗಳು ಎಂದು ಪೂಜಿಸುತ್ತಿರುವುದರಿಂದಾಗಿ ಅವರ ಭಾವನೆಗಳಿಗೆ ಧಕ್ಕೆಯಾಗುವ ಕಾರಣ ಅವುಗಳನ್ನು ಹೊರತೆಗೆಯಲಾಗಲಿಲ್ಲ.

(ಈ ಶಾಸನಗಳ ಪ್ರತಿ ತೆಗೆದು ಓದಲು ಸಹಕರಿಸಿದ ಶ್ರೀ ಜಗದೀಶ್ ಅಗಸಿ ಬಾಗಿಲವಾರ ಮತ್ತು ಶಾಸನಪಾಠವನ್ನು ತಿದ್ದಿಕೊಟ್ಟಿರುವ ವಿದ್ವಾಂಸರಾದ ಡಾ।। ಅ. ಸುಂದರ, ಪ್ರೊ।। ಬಿ.ರಾಜಶೇಖರಪ್ಪ ಅವರಿಗೆ ಲೇಖಕ ಋಣಿಯಾಗಿದ್ದಾನೆ.)

★ ★ ★ ★

ಇತಿ ಯಸ್ಮಿನ್ ಗಾಜ್ಗೇಯ ರಾಜ್ಯೋತಸ್ಮಿನ್ ಶ್ರೀ ಮಾಧವವರ್ಮ್ಮಣಃ
ಶಾನ ಬುದ್ಧ ಸತ್ವಾಯ ದತ್ತಮಾಚನ್ದ್ರತಾರಕಂ.....
...... ಅಷ್ಟಾದಶ ಖಣ್ಡುಕಂ ಶ್ಯಾಮಾಕ ಕ್ಷೇತ್ರ ದತ್ತಂ ತಥಾ ಶಾಕ್ಯ ಶಿಲಾತ್..
(ಮೂರನೇ ಗಂಗಮಾಧವನಿಂದ ಬುದ್ಧಸತ್ವನಿಗೆ ಕ್ರಿ.ಶ. ೪೦೦ರಲ್ಲಿ ದಾನವಾಯಿತೆಂದು ಹೇಳಲಾದ ಶಾಸನ
ತುಮಕೂರು ಜಿಲ್ಲೆ ಮರಳೂರು ಗ್ರಾಮದ್ದು. ಎ.ಕ. ೧೨ ತುಮಕೂರು ಶಾ.ಸಂ. ೭೮)

ಸಂತೇಬೆನ್ನೂರು ಸುಮತೀಂದ್ರನಾಡಿಗ್*

ಸಂತೆಬೆನ್ನೂರು ನಾಯಕರ ಅಪ್ರಕಟಿತ ತಾಮ್ರಶಾಸನ

ವಿಜಯನಗರೋತ್ತರದಲ್ಲಿ ವಿಜಯನಗರದರಸರ ಅಧೀನರಾಗಿದ್ದ ಅನೇಕ ಸಣ್ಣ ಪುಟ್ಟ ರಾಜವಂಶಗಳು ತಮ್ಮದೇ ಆದ ರಾಜ್ಯಾಡಳಿತವನ್ನು ಸ್ವತಂತ್ರವಾಗಿ ನಿರ್ವಹಿಸುತ್ತಿದ್ದುದು ತಿಳಿದು ಬರುತ್ತದೆ. ಅಂತಹ ಒಂದು ರಾಜವಂಶ ಸಂತೇಬೆನ್ನೂರು ನಾಯಕರದು. ಇವರು ಕರ್ನಾಟಕದ ಈಗಿನ ಏಳು ಜಿಲ್ಲೆಗಳಾದ ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ತುಮಕೂರು ಹಾವೇರಿ ಜಿಲ್ಲೆಗಳಿಗೆ ಸೇರಿರುವ ಅನೇಕ ಭೂಭಾಗವನ್ನು ತಮ್ಮ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡು ಒಂದುವರೆ ಶತಮಾನಕ್ಕೂ ಹೆಚ್ಚು ಕಾಲ ಆಡಳಿತ ನಡೆಸುತ್ತಿದ್ದರು. ಪ್ರಾರಂಭದಲ್ಲಿ ಈಗಿನ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣವನ್ನು, ನಂತರ ಇದೇ ತಾಲ್ಲೂಕಿನ ಸಂತೇ ಬೆನ್ನೂರನ್ನು, ಅನಂತರ ಚಿಕ್ಕಮಗಳೂರು ಜಿಲ್ಲೆ ಈಗಿನ ತರೀಕೆರೆ ತಾಲ್ಲೂಕು ಕೇಂದ್ರವನ್ನು ರಾಜಧಾನಿಯಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದ ಬಗ್ಗೆ ಅವರು ಬರೆಯಿಸಿದ ಶಾಸನಗಳು, ಕೈಫಿಯತ್ತುಗಳು, ಕಟ್ಟಿಸಿದ ದೇಗುಲ, ಕೆರೆ-ಕಟ್ಟೆ ಕೊಳ ಇತ್ಯಾದಿಗಳಿಂದ ತಿಳಿಯಬಹುದು.

ಈ ನಾಯಕರಿಗೆ ಸಂಬಂಧಪಟ್ಟಂತೆ ಬಿ.ಎಲ್. ರೈಸರು ತಮ್ಮ ಶಾಸನ ಸಂಪುಟದಲ್ಲಿ ೨೭ ಶಾಸನಗಳನ್ನು[೧] ಮೈಸೂರು ಪ್ರಾಚ್ಯವಸ್ತು ಇಲಾಖೆ ತನ್ನ ವಾರ್ಷಿಕ ವರದಿಯಲ್ಲಿ ಶಾಸನಗಳನ್ನು[೨] ಸೌತ್ ಇಂಡಿಯನ್ ಇನ್ಸ್ ಸ್ಕ್ರಿಪ್ಷನ್ಸ್[೩] ಮತ್ತು ಪೂನಾದ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ವಾರ್ಷಿಕ ವರದಿ[೪]ಗಳಲ್ಲಿ ತಲಾ ಒಂದೊಂದು ಶಾಸನಗಳನ್ನು, ಕೂಡ್ಲಿ ಶೃಂಗೇರಿ ಮಠದ[೫]ವರು ೧೫ ಶಾಸನಗಳನ್ನೂ, ಮೂಲ ಶೃಂಗೇರಿ ಮಠ[೬]ದವರು ಒಂದು ಶಾಸನವನ್ನು ಈವರೆಗೆ ಪ್ರಕಟಿಸಿರುವುದಲ್ಲದೆ, ಈ ನಾಯಕರಿಗೆ ಸಂಬಂಧಿಸಿದ ೩ ಶಾಸನಗಳು ಶೃಂಗೇರಿಮಠದ ಕಡತದಲ್ಲಿರುವುದನ್ನು ಪ್ರೊ. ಎ. ಕೆ. ಶಾಸ್ತ್ರಿಯವರ ನೆರವಿನಿಂದ ನಾನು ಗುರುತಿಸಿ ಇತಿಹಾಸ ದರ್ಶನ[೭]ದಲ್ಲಿ ಪ್ರಕಟಿಸಿರುವುದು ಸೇರಿ ಸಂತೇಬೆನ್ನೂರು ನಾಯಕರ ಒಟ್ಟು ೫೧ ಶಾಸನಗಳು ಈವರೆಗೆ ಪ್ರಕಟವಾದಂತಾಗಿದೆ.

ಮೈಸೂರಿನ ಕೇಂದ್ರ ಪ್ರಾಚ್ಯವಸ್ತು ಸಂಶೋಧನಾ ಕೇಂದ್ರದ ಶಾಸನ ವಿಭಾಗದಲ್ಲಿ ಈ ಸಂತೇಬೆನ್ನೂರು ನಾಯಕರ ಒಂದು ಅಪ್ರಕಟಿತ ತಾಮ್ರಶಾಸನವನ್ನು ಶಾಸನ ತಜ್ಞ ಡಾ|| ಜಿ. ಎಸ್. ಗಾಯಿಯವರು ೧೯೬೩ರಲ್ಲಿಯೇ ಉಡುಪಿಯ ಶ್ರೀ ಶಿರೂರು ಮಠದಲ್ಲಿದ್ದುದನ್ನು ಗುರುತಿಸಿ ಪತ್ತೆ ಮಾಡಿ ಅವರ ಪಡಿಯಚ್ಚನ್ನು ಆ ವಿಭಾಗದಲ್ಲಿ ಇಟ್ಟಿರುವುದು ನನ್ನ ಗಮನಕ್ಕೆ ಬಂದಿತು. ಇದರ ಪಾಠ ಟಿಪ್ಪಣಿ ಮಾತ್ರ ಇಲಾಖೆ ಪ್ರಕಟಿಸಿದ್ದು[೮] ಪೂರ್ಣಪಾಠ ಈವರೆಗೆ ಎಲ್ಲೂ ಪ್ರಕಟಗೊಂಡಿಲ್ಲ. ಈ ಶಾಸನ ಕನ್ನಡ ಭಾಷೆ ಮತ್ತು ಲಿಪಿಯಲ್ಲಿದ್ದು ಶಾಸನವು ೨೨ ಸೆಂ.ಮೀ. ಉದ್ದ, ೧೬ ಸೆ. ಮೀ. ಅಗಲಗಳುಳ್ಳ ಎರಡು ಫಲಕಗಳನೊಳಗೊಂಡಿದ್ದು, ಎರಡೂ ಬದಿಯಲ್ಲಿ ಅಕ್ಷರಗಳನ್ನು ಕೊರೆಯಲಾಗಿದೆ. ಈ ಶಾಸನದಲ್ಲಿ ಮುಂಬದಿ, ಹಿಂಬದಿ ಸೇರಿ ಒಟ್ಟು ೫೬ ಸಾಲುಗಳಿವೆ. ಈ ಶಾಸನಕ್ಕೆ ಉಪಯೋಗಿಸಿದ ಬಳೆ ಸೇರಿ ಒಟ್ಟು ೧ ಕೆಜಿ ೯೫೪ ಗ್ರಾಂ ಫಲಕ ತೂಕವಿದ್ದು, ತಾಮ್ರಪತ್ರದ ಹಾಳೆಗಳು ತಲಾ ೫ ಸೆಂ.ಮೀ ದಪ್ಪವಿದ್ದು, ಬಳೆಯಲ್ಲಿ ವರಾಹ ಲಾಂಛನವಿದೆ.

ಈ ಶಾಸನದ ಪ್ರಾರಂಭದ ದೇವತಾ ಶ್ಲೋಕಗಳು ಹಾಗು ಕಡೆಯಲ್ಲಿನ ಶಾಪಾಶಯಗಳು ಮಾತ್ರ ಸಂಸ್ಕೃತ ಭಾಷೆಯಲ್ಲಿವೆ. ಪ್ರಾರಂಭದಲ್ಲಿ ನಮಃಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೆ, ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭುವೇ ಎಂಬ ಪ್ರಖ್ಯಾತ ಸಂಸ್ಕೃತ ಶ್ಲೋಕದಿಂದ ಆರಂಭಿಸಲಾಗಿದೆ. ನಂತರ ದಾನಕೊಟ್ಟ ಕಾಲ, ಕೊಟ್ಟವರ ವಿವರ, ಕೊಟ್ಟ ಭೂದಾನದ ವಿವರ ಇತ್ಯಾದಿಗಳಿದ್ದು ಶಾಪಾಶಯಗಳನ್ನು ಬರೆದು 'ಶ್ರೀರಾಮ' ಎಂಬ ಅಂಕಿತವನ್ನು ನಮೂದಿಸಲಾಗಿದೆ. ಇಲ್ಲಿ ನಮೂದಿತ ವಾಗಿರುವ ಶಾಪಾಶಯ ಶ್ಲೋಕಗಳು ವಿಶಿಷ್ಟವಾಗಿವೆ. ಶಾಪಾಶಯದ ಶ್ಲೋಕಗಳು ಕಂಡರಿಸಿದವರ ತಪ್ಪಿನಿಂದಾಗಿಯೇ ಏನೋ ದೋಷ ಯುಕ್ತವಾಗಿದ್ದು ಅವುಗಳ ಅರ್ಥವನ್ನು ಮುಖ್ಯವಾಗಿ ಹೀಗೆ ಹೇಳಬಹುದು.

ಯಾರೋ ಮಾಡಿದ ದಾನವನ್ನು ತಾನು ಪಡೆದರೆ ಯಾ ಹರಿಸಿದರೆ ತನ್ನ ದಾನಕ್ಕೆ ಯಾವ ಪ್ರತಿಫಲವೂ ಸಿಗದೆ, ಪುಣ್ಯವೆಲ್ಲವೂ ಸಂಪೂರ್ಣ ನಶಿಸುತ್ತದೆ. ಹಾಗೆಯೆ ದೇವರಿಗೆ, ಬ್ರಾಹ್ಮಣರಿಗೆ ಕೊಟ್ಟ ದಾನವನ್ನು ಬಲವಂತವಾಗಿ ಅಪಹರಿಸಿದರೆ ಅವರಿಗೆ ನಾಯಿಯ ಮಾಂಸವನ್ನು, ಮದ್ಯಯುಕ್ತವಾದ ತಲೆ ಬುರುಡೆಯಲ್ಲಿ ಚಿತೆಯಿಂದಾದ ಅಗ್ನಿಯಿಂದ ಬೇಯಿಸಿ ತಿನ್ನುವ

* ವರದಿಗಾರ, ಪ್ರಜಾವಾಣಿ ದೈನಿಕ, ಸಂತೇಬೆನ್ನೂರು - ೫೭೭ ೫೫೨ ದಾವಣಗೆರೆ ಜಿಲ್ಲೆ

ಗತಿ ಬರುತ್ತದೆ ಎಂದು ಹೇಳಿ ದಾನದ ಬಗ್ಗೆ ಎಚ್ಚರಿಕೆ ಕೊಟ್ಟಿದೆ. ಬೇರೆ ಶಾಸನಗಳನ್ನು ಪರಿಶೀಲಿಸಿದಾಗ ಈ ಶಾಪಾಶಯಗಳು ವಿಶಿಷ್ಟವಾಗಿ ಕಾಣಿಸುತ್ತವೆ.

ಈ ಶಾಸನವನ್ನು ಶಾಲಿವಾಹನ ಶಕ ೧೫೯೬ ನೆಯ ಪ್ರಮಾಥಿ ಸಂವತ್ಸರದ ಭಾದ್ರಪದ ಶುದ್ಧದ್ವಾದಶಿಯಲ್ಲಿ ಅಂದರೆ ಕ್ರಿ.ಶ. ೧೬೭೪ರಲ್ಲಿ ಶ್ರೀ ಮತ್ಸಂಥೇಬೆನ್ನೂರ ರಾಮಚಂದ್ರ ಸ್ವಾಮಿಯ ಪಾದಪದ್ಮಾರಾಧಕರಾದ ಹನುಮಂತ ದೇವರ ನಿಜಭಕ್ತರಾದ ಪೂವಲಾನ್ವಯದ ನಿಚ್ಚಮದುವಣಿಗ ಹನುಮಪ್ಪ ನಾಯಕರ ಪುತ್ರರಾದ ಸರ್ಜಾಹನುಮಪ್ಪ ನಾಯಕರ ಪೌತ್ರರಾದ ಸೀತಾರಾಮಪ್ಪ ನಾಯಕರು, ತಮ್ಮ ರಾಜ್ಯಕ್ಕೆ ಸಲ್ಲುವ ಕಾತೂರ ಸೀಮೆ ಒಳಗಣ ದುಗ್ಗಲಾಪುರದ ಸ್ಥಳದ ಸೆಟ್ಟಿಹಳ್ಳಿ ಗ್ರಾಮವನ್ನು, ತಮ್ಮ ಮಾತಾಪಿತೃಗಳಿಗೆ ಅನೇಕ ಧರ್ಮವಾಗಲಿ ಎಂದು ಕೋಳಾಲದ ವೆಂಕಪ್ಪ ಎಂಬುವನಿಗೆ, ತುಂಗಾಭದ್ರಾ ತೀರದ ಗೋಪಾಲಕ್ಷೇತ್ರದ ಶ್ರೀ ಗೋಪಾಲಕೃಷ್ಣ ದೇವರ ಅಮೃತ ಪಡಿ, ನಂದಾದೀಪ್ತಿ, ಕಟ್ಟಲೆ, ಕಂದಾಚಾರ ಮುಂತಾದ ಸೇವೆಯನ್ನು ಅವರ ಸಂತಾನ ಪಾರಂಪರ್ಯವಾಗಿ, ಸಾರೋದ್ಧಾರವಾಗಿ ನಡೆಸಿಕೊಂಡು ಬರಬೇಕೆಂದು ಈ ತಾಮ್ರಶಾಸನ ಬರೆಯಿಸಿ ದಾನ ಕೊಟ್ಟಿರುವುದಾಗಿ ತಿಳಿಸುತ್ತದೆ. ಶಾಸನದ ಪಾಠ ಹೀಗಿದೆ.

೧ನೇ ಫಲಕ

ಮುಂಬದಿ

೧ ಶ್ರೀ ಗೋಪಾಲಕೃಷ್ಣ
೨ ಶುಭಾಮಸ್ತು
೩ ನಮಃಸ್ತುಂಗ ಶಿರಃಶ್ಚಂಬಿ ಚಂದ್ರ ಚಾಮರ ಚಾರವೆ।
೪ ತ್ರೈಲೋಕ್ಯ ನಗರಾರಂಭ। ಮೂಲಿಸ್ತಂಭಾಯ ಶಂ
೫ ಭವೆ॥೧॥ ಹರೇ ರ್ಲೀಲಾವರಾಹಸ್ಯ ದಂಷ್ಟ್ರಾ ದಂಡಃ
೬ ಸ್ಸಪಾತುವಃ ।ಹೇಮಾದ್ರಿ ಶಿಖರಾಯತ್ತ। ಧಾತ್ರೀಛತ್ರ
೭ ಶ್ರೀಯಂದದೌ ॥೨॥ ಸ್ವಸ್ತಿಶ್ರೀ ಜಯಾಭ್ಯುದ
೮ ಯ ಶಾಲಿವಾಹನ ಶಕ ವೊದುಷ ೧೫೯೬ ನೆಯ ಪ್ರ
೯ ಮಾಡಿ ಸಂವತ್ಸರದ ಭಾದ್ರಪದದ ಶು ೧೨ಲ್ಲೂ। ಶ್ರೀಮತ್ತುಂ
೧೦ ಗಭದ್ರಾತೀರವಾಸ ಗೋಪಾಲಕ್ಷೇತ್ರದ ಶ್ರೀ । । ಸ್ವಾಮಿಯ
೧೧ ಪಾದ ಪದ್ಮಂಗಳಿಗೆ ಶ್ರೀಮತ್ಸಂಥೆಬೆಂನೂರ ರಾಮ
೧೨ ಚೆಂದ್ರಸ್ವಾಮಿಯ ಪಾದಪದ್ಮಾರಾಧಕರಾದ ಹನು
೧೩ ಮಂತದೇವರ ನಿಜಭಕ್ತರಾದ। ಪೂವಲಾನ್ವಯದ ನಿ
೧೪ ಚ್ಚಮದವಣಿಗ ಹನುಮಪ್ಪನಾಯಕರ ಪೌತ್ರ
೧೫ ನಾದ। ಸಜಾ ಹನುಮಪ್ಪ ನಾಯಕರ ಪುತ್ರನಾ
೧೬ ದ। ಸೀತಾರಾಮಪ್ಪನಾಯಕನೂ। ಬರಸಿಕೊಟ್ಟ

ಹಿಂಬದಿ

೧೭ ಭೂಸ್ವಾಸ್ಥೆ ಶಾಸನದ ಕ್ರಮವೆಂತ್ತೆಂದರೆ। ನಂಮ
೧೮ ರಾಜ್ಯಕೆ ಸಲುವ ಕಾತೂರ ಸೀಮೆಯೊಳಗಣ ದುಗ್ಗ
೧೯ ಲಾಪುರದ ಸ್ಥಾಳದ। ಸೆಟ್ಟಿಹಳಿ ಗ್ರಾಮವಂನು
೨೦ ಯಿಾ [ಶ]ತ್ಸಂವತ್ಸರದ ಮಧ್ಯ ದ್ವಾದಸೆ ಪರ್ವ
೨೧ ಣಿ ಪುಂಣ್ಯ ಕಾಲದಲ್ಲೂ। ನಂಮ ಮಾತಾ ಪಿ
೨೨ ತ್ರುಗಳಿಗೆ ಅನೇಕ ಧರ್ಮವಾಗಲಿ ಯಂದು
೨೩ ಸಹಿರಂಣ್ಯೋದಕ ದಾನ ಧಾರಾಪೂರ್ವಕ
೨೪ ವಾಗಿ ಕೊಟೆವಾಗಿ। ಆ ಗ್ರಾಮಕ್ಕೆ ಸಲು
೨೫ ವ ಗದ್ದೆ ಬೆದ್ದಲು ತೋಟ ತುಡಿಕೆ ಕಾಡಾ
೨೬ ರಂಭ ನೀರಾರಂಭ। ಕಡುವಣ ಕಾಷಾ
೨೭ ವರ್ಗ। ಸಕಲ ಸುವರ್ನ್ನಾದಾಯ। ದವಸಾ
೨೮ ದಾಯಾ। ಆ ಗ್ರಾಮದ ಚತುಃಸೀಮೆಯ
೨೯ ಭೂಮಿಯೊಳಗಿದ್ದ। ನಿಧಿ। ನಿಕ್ಷೇಪ। ಜಲ
೩೦ ಪಾಷಾಣ। ಅಕ್ಷೀಣಿ ಆಗಾಮಿ। ಸಿದ್ಧ।
೩೧ ಸಾಧ್ಯಂಗಳೆಂಬ ಅಷ್ಟಾಭೋಗಂಗಳನು।

೨ನೇ ಫಲಕ

ಮುಂಬದಿ

೩೨ ಆಗುಮಾಡಿಸಿ। ಶ್ರೀ ಗೋಪಾಲ ಕ್ರುಷ್ಣದೇವರ।
೩೩ ಅಮ್ರುತಪಡಿ। ನಂದಾ ದೀಪ್ತಿ। ಕಟ್ಟಲೆ ಕಂದಾ
೩೪ ಚಾರ ಮುಂತಾದ ಸೇವೆಯನು। ನಂನ ಮೇಲಣ
೩೫ ಕ್ರುಪೆಯಿಂದ। ಕೋಳಾಲದ ವೆಂಕಪ್ಪನ ಸಂತಾ
೩೬ ನ ಪಾರಂಪಯ್ಯವಾಗಿ। ಅವರ ಮುಖಾಂತ್ರ
೩೭ ಸಾರೋದಾರವಾಗಿ। ನಡೆಸಿಕೊಳ್ಳಬೇಕೆಂದು ಬರ
೩೮ ಸಿಕೊಟ್ಟ ಭೂಸ್ವಾಸ್ಥೆ ಧರ್ಮಶಾಸನ। ಸ್ಥಾನ ಮಾ
೩೯ ನ್ಯ ಪೂರ್ವ ಮರ್ಯಾದೆ॥ ದಾನಪಾಲನಯೋರ್ಮ
೪೦ ಧ್ಯೇ। ದಾನಾಛ್ರೇಯೋನುಪಾಲನಂ। ದಾನಾತ್ಸ್ವರ್ಗ
೪೧ ಮನಾಪ್ನೋತಿ। ಪಾಲನಾದಚ್ಯುತಂ ಪದಂ ॥೧॥
೪೨ ಸ್ವದತ್ತಾ ದ್ವಿಗುಣಂ ಪುಂಣ್ಣಂ। ಪರದತ್ತಾನುಪಾ
೪೩ ಲನಂ। ಪರದತಾಪಹಾರೇಣ। ಸ್ವದತ್ತಂ ನಿಷ್ಪ
೪೪ ಲಂ ಭವೇತ್॥೨॥ ಸ್ವದತ್ತಾ ಪುತ್ರಿಕಾ ಧಾತ್ರೀ ತಿ
೪೫ ತ್ರುದತ್ತಾ ಸಹೋದರೀ। ಪರದತ್ತಾ ಚ ಮಾತಾ
೪೬ ಚ ದತ್ತ ಭೂಮಿಂ ಪರಿತ್ಯಜೇತ್ ॥೩॥ ಯಿಂ.
೪೭ [ಪ್ರ]। ಛತಿ ಚಾಂಡಾಲಿ। ಕಿಮಿದಂ ಪಚ್ಚತಿ

ಹಿಂಬದಿ

೪೮ ಕ್ಷಯಾ। ಶ್ವ ಮಾಂಸಂ ಸುರಯಾಸಿಕ್ತಂ। ಕಪಾ [ಲೇ]
೪೯ ಚಿತಾಗ್ನಿನಾ। ದೇವಬ್ರಾಹ್ಮಣ ವಿತ್ತಾನಾಂ। ಬಲಾ
೫೦ ಬಲಾದಪಹರಂತಿಯೇ। ತೇಷಾಂ ಪಾದ ರಜೋಭಿ
೫೧ ತ್ಯಾಚರ್ಮಣಾಪಿಹಿತಂ ಮಯಾ ॥೪॥ ಮದ್ವಂಶಚಾ
೫೨ ಪರಮಹೀಪತಿ ವಂಶಜಾವಾ। ಯೇನ್ನೇನೃಪಾಸ್ಮತತ
೫೩ ಮುಜ್ವಲ ಧರ್ಮಚಿತ್ತಾಃ। ಮದ್ಧರ್ಮಮೇ। ವಸತ
೫೪ ತಂ ಪರಿಪಾಲಯಂತಿ। ತತ್ಪಾದುಕದ್ವಯ ಮಹ
೫೫ ಶಿರಸಾವಹಾಮಿ। ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ
೫೬ ಶ್ರೀಶ್ರೀಶ್ರೀಶ್ರೀಶ್ರೀಶ್ರೀ ॥ ಶ್ರೀ ರಾಮಾ

(ಶಾಸನದ ಪಡಿಯಚ್ಚನ್ನು ಒದಗಿಸಿಕೊಟ್ಟವರು ಎ.ಎಸ್.ಐ. ನಲ್ಲಿಯ ಶಾಸನತಜ್ಞ ಡಾ॥ ಡಿ. ಎಂ. ನಾಗರಾಜ ಅವರು. ಶಾಸನದ ಪಾಠಾಂತರವನ್ನು ಒದಗಿಸಿ ಮಾರ್ಗದರ್ಶನ ಮಾಡಿದವರು ಪ್ರೊ॥ ಬಿ. ರಾಜಶೇಖರಪ್ಪ; ಶಾಪಾಶಯ, ಸಂಸ್ಕೃತದ ಶ್ಲೋಕದ ಅರ್ಥ ವಿಮರ್ಶಿಸಿ ಕೊಟ್ಟವರು ಸಂಸ್ಕೃತ ಉಪನ್ಯಾಸಕಿ ಪ್ರೊ॥ ಪಂಕಜನಯನ ಬೆಂಗಳೂರು.

ಈ ಹೊಸ ಶಾಸನದಿಂದ ಕೆಳಕಂಡ ವಿಷಯಗಳು ತಿಳಿದು ಬರುತ್ತವೆ.

೧. ಈ ಶಾಸನದಲ್ಲಿ ಉಲ್ಲೇಖಿಸಿರುವ ವಂಶಾವಳಿ ವಿವರ, ಕಾಲ, ಲಿಪಿ, ಭಾಷೆ ಇತ್ಯಾದಿಗಳಿಗೂ ಈ ನಾಯಕ ವಂಶದ ಇತರ ಶಾಸನಗಳಿಗೂ, ಹೊಂದಾಣಿಕೆ ಬರುವುದರಿಂದ ಇದು ನೈಜ್ಯಶಾಸನ ಎನ್ನಲಡ್ಡಿಯಿಲ್ಲ.

೨. ಆದರೆ ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಗೋಪಾಲಕೃಷ್ಣ ದೇವರು ಯಾವ ಸ್ಥಳದಲ್ಲಿರುವುದು ಎಂಬ ಬಗ್ಗೆ ಸ್ಪಷ್ಟವಾಗಿ ಉಲ್ಲೇಖವಾಗದಿರುವುದು, ನಿರ್ದಿಷ್ಟವಾದ ಆ ದೇವಾಲಯದ ಬಗ್ಗೆ ಸಂಶಯಕ್ಕೆ ಎಡೆಕೊಡಬಹುದಾದರೂ, ಶಾಸನದಲ್ಲಿ ಉಲ್ಲೇಖಿತವಾಗಿರುವ, ತುಂಗಾಭದ್ರಾತೀರ, ಕಾತೂರು, ದುಗ್ಗಲಾಪುರ, ಶೆಟ್ಟಿಹಳ್ಳಿ ಗ್ರಾಮಗಳ ಹೆಸರನ್ನು ಗಣನೆಗೆ ತೆಗೆದುಕೊಂಡು ಈ ದೇವಾಲಯ ಈಗಿನ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಗೋಪಾಲಬುಸ್ಸೇನಹಳ್ಳಿಯಲ್ಲಿರುವ ಗೋಪಾಲಕೃಷ್ಣ ದೇವರು ಎಂದು ಗುರುತಿಸಬಹುದಾಗಿದೆ.

೩. ಶಾಸನದಲ್ಲಿ ದಾನಕೊಟ್ಟ ಶೆಟ್ಟಿಹಳ್ಳಿ ಬಗ್ಗೆಯೂ ಗೊಂದಲಗಳಿವೆ. ಗೋಪಾಲಬುಸ್ಸೇನಹಳ್ಳಿಯ ಸುತ್ತ ಮುತ್ತಲು ಅಂದರೆ ಶಿವಮೊಗ್ಗ ತಾಲ್ಲೂಕಿನಲ್ಲಿ ಎರಡೂ ಶೆಟ್ಟಿಹಳ್ಳಿಗಳೂ, ಭದ್ರಾವತಿ ತಾಲ್ಲೂಕಿನಲ್ಲಿ, ಚನ್ನಗಿರಿ ತಾಲ್ಲೂಕಿನಲ್ಲಿ ತಲಾ ಒಂದೊಂದು ಶೆಟ್ಟಿಹಳ್ಳಿ ಹೆಸರಿನ ಗ್ರಾಮಗಳಿದ್ದು ಶಾಸನದಲ್ಲಿ ಉಲ್ಲೇಖಿತ ಶೆಟ್ಟಿಹಳ್ಳಿ ಶಿವಮೊಗ್ಗ ಹೋಬಳಿಗೆ ಸೇರಿದ ಶೆಟ್ಟಿಹಳ್ಳಿ ಆಗಿರುವ ಸಾಧ್ಯತೆಯೇ ಹೆಚ್ಚಾಗಿದೆ. ಶಾಸನದಲ್ಲಿ ಉಲ್ಲೇಖಿತ ಕಾತೂರು-ದುಗ್ಗಲಾಪುರ-ಶೆಟ್ಟಿಹಳ್ಳಿ ಗ್ರಾಮಗಳು ಒಂದಕ್ಕೊಂದು ದೂರದಲ್ಲಿದ್ದು ಈ ಗೊಂದಲಕ್ಕೆ ಕಾರಣವಾಗಿದೆ.

೪. ದಾನ ಪಡೆದ ವ್ಯಕ್ತಿ ಕೋಳಾಲದ ವೆಂಕಪ್ಪ ಎಂದು ನಮೂದಾಗಿದೆ. ಬಹುಶಃ ಆತ ಈಗಿನ ಕೋಲಾರದಿಂದ ಬಂದವನಿರಬೇಕು ಎಂಬ ಸಂಶಯ ಬರುತ್ತದೆ ಆತ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕು ಕೋಳಾಲದವನೂ ಏಕೆ ಆಗಿರಬಾರದು ಎಂಬ ಪ್ರಶ್ನೆ ಉಂಟು ಮಾಡುತ್ತದೆ. ಆತ ದೇವಾಲಯದ ಅರ್ಚಕನಿರುವ ಸಾಧ್ಯತೆ ಹೆಚ್ಚಾಗಿದೆ. ದಾನ ಕೊಟ್ಟು ತಾಮ್ರಶಾಸನಗಳಲ್ಲಿ ದಾನಕೊಟ್ಟವನ ಹೆಸರಿನ ಜೊತೆಗೆ, ವಂಶ, ಗೋತ್ರ ಹೊಗಳಿ ಬರೆಯಿಸುವುದು ಸಾಮಾನ್ಯ ಪದ್ದತಿ. ಆದರೆ ಈ ಬಗ್ಗೆ ಶಾಸನದಲ್ಲಿ ಉಲ್ಲೇಖ ಇಲ್ಲದಿರುವುದು ಆತನ ಬಗ್ಗೆ ಗೊಂದಲಕ್ಕೆ ಎಡೆ ಉಂಟುಮಾಡಿದೆ. ಸಂತೇಬೆನ್ನೂರು ನಾಯಕ ವಂಶದ ಒಂದು ಸನ್ನದು.[೯] ಕಡೂರು ತಾಲ್ಲೂಕು ಕಸಬೆಯಲ್ಲಿ ಕೋಲಾರದ ವೆಂಕಟರಾಯರೆಂಬುವರು ಪ್ರಾಚ್ಯ ಸಂಶೋಧನಾ ಇಲಾಖೆಗೆ ಹಾಜರ್ಪಡಿಸಿದ್ದು ಆತ ಕೋಳಾಲದ ವೆಂಕಪ್ಪನ ಸಂಬಂಧಿ ಏಕಾಗಿರಬಾರದು ಎಂಬ ಸಂಶಯ ಉಂಟುಮಾಡಿದೆ. ಈ ಬಗ್ಗೆ ಇನ್ನಷ್ಟು ದೃಢೀಕರಣಗೊಳ್ಳ ಬೇಕಾಗಿದೆ.

೫. ಈ ತಾಮ್ರಶಾಸನ ಹಾಲಿ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶಿರೂರು ಮಠದಲ್ಲಿದೆ ಅದು ಅಲ್ಲಿ ಹೇಗೆ ಏಕೆ ಸೇರಿತು ಎಂಬುದೂ ತಿಳಿದು ಬರುವುದಿಲ್ಲ.

೬. ಈ ಶಾಸನವನ್ನು 'ವರಾಹ' ಬಳೆಯಿಂದ ಬಂಧಿಸಿರುವುದರಿಂದ ಅದು ಈ ನಾಯಕರ 'ಲಾಂಛನ' ಎಂತಲೂ ಶಾಸನದ ಕಡೆಯಲ್ಲಿ ಶ್ರೀರಾಮ ಎಂಬ ಅಂಕಿತ ಇರುವುದರಿಂದ ಅದು ಈ ನಾಯಕ ವಂಶದ ಅಂಕಿತ ಎಂತಲೂ ತಿಳಿಯ ಬಹುದಾಗಿದೆ. ಈಗ ದೊರೆತಿರುವ ಈ ತಾಮ್ರಶಾಸನ ಈ ವಂಶದ ನಾಯಕರ ೧೨ನೇ ತಾಮ್ರ ಶಾಸನವಾಗಿದ್ದು, ಇತರ ಬೇರೆ ಶಾಸನಗಳಲ್ಲೂ ಇದೇ ಪದ್ಧತಿ ಅವರು ಅನುಸರಿಸಿರುವುದು ಕಾಣಬರುತ್ತದೆ.

೭. ಈ ಶಾಸನದಲ್ಲಿ 'ಪೂವಲಾನ್ವಯದ' ಎಂಬ ತಮ್ಮ ವಂಶದ ಬಗ್ಗೆ ತಿಳಿಸಿರುವುದರಿಂದ ಅದು ಆ ವಂಶದ ಗೋತ್ರ ಬೆಡಗು ಎಂದು ಗುರುತಿಸಬಹುದಾಗಿದೆ. ಪೂವಲ ಎಂದರೆ ಸುಂದರ ಎಂದೂ, ಸೂರ್ಯ ಎಂದೂ ಅರ್ಥವಿದೆ. ಇವರು ಸೂರ್ಯವಂಶಕ್ಕೆ ಸೇರಿದವರಾದ್ದರಿಂದ ಪೂವಲಾನ್ವಯ ಎಂದು ಕರೆದುಕೊಂಡಿದ್ದಾರೆಂದು ಈ ವಂಶದ ಬಗ್ಗೆ ಒಂದು ಕಾವ್ಯ ಬರೆದ ಕೃಷ್ಣ ಶರ್ಮ[೧೦] ಅಭಿಪ್ರಾಯ ಪಡುತ್ತಾನೆ. ಈ ನಾಯಕರಿಗೆ ಸಂಬಂಧಿಸಿದ ತರೀಕೆರೆ-೨೧ ಶಾಸನ[೧೧]ದಲ್ಲಿ 'ಮಾದಲ' ಎಂದು ತಮ್ಮ ವಂಶದ ಉಲ್ಲೇಖವಿದ್ದು, ಇದು ಪೂವಲದ ತದ್ಭವ ಎಂಬ ವಾದವಿದೆ. ಇವರು ಮಾವಲ ದೇಶದ ಮೂಲದಿಂದ ಬಂದವರೆಂಬ ಇನ್ನೊಂದು ವಾದವೂ ಇದೆ. ಏನೇ ಆದರೂ ಈ ಬೆಡಗಿನಿಂದ ಇವರು ವಾಲ್ಮೀಕಿ ಗೋತ್ರದವರೆಂದೂ, ಬೇಡ ಜನಾಂಗಕ್ಕೆ ಸೇರಿದವರೆಂದೂ, ಬೇಡ ಜನಾಂಗದ ಬೇಟೆ, ಶಿಕಾರಿ ಮೂಲ ವೃತ್ತಿ ಮಾಡಿಕೊಂಡು, ಒಂದು ಕಡೆಯಿಂದ ಇನ್ನೊಂದು ಕಡೆ ಹೋಗಿ, ಕಟ್ಟ ಕಡೆಗೆ ಇಲ್ಲಿ ನೆಲೆನಿಂತು, ರಾಜ್ಯಾಡಳಿತ ನಡೆಸಿ, ತಮ್ಮನ್ನು ನಾಯಕರೆಂದು ಕರೆದುಕೊಂಡಿದ್ದಾರೆಂದು ಹೇಳಬಹುದು.

೮. ಆ ವಂಶದ ಕೈಫಿಯತ್ತಿ[೧೨]ನಂತೆ ಈ ಶಾಸನ ಬರೆದ ಕಾಲದಲ್ಲಿ ಈ ನಾಯಕವಂಶದ ರಾಜಧಾನಿಯಾಗಿದ್ದುದು ಚಿಕ್ಕ ಮಗಳೂರು ಜಿಲ್ಲೆ ತರೀಕೆರೆ. ಆದರೆ ಈ ಶಾಸನದಲ್ಲಿ ತರೀಕೆರೆಯಾಗಲೀ, ಅವರು ಪ್ರಾರಂಭದಲ್ಲಿ ತಮ್ಮ ಪಾಳೇಪಟ್ಟು ಆರಂಭಿಸಿದ ಈಗಿನ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣವನ್ನಾಗಲೀ, ಉಲ್ಲೇಖ ಮಾಡದೆ ಕೇವಲ ಸಂತೇಬೆನ್ನೂರು ರಾಮಚಂದ್ರ ಸ್ವಾಮಿ ಪಾದಪದ್ಮಾರಾಧಕರಾದ ಎಂಬ ಉಲ್ಲೇಖ ಇರುವುದು

ಗಮನಾರ್ಹ. ಈ ಉಲ್ಲೇಖ ಮಾತ್ರವಿಲ್ಲದೆ ಈ ವಂಶದ ಹಲವಾರು ಪಾತ್ರಗಳಲ್ಲಿ, ಶಾಸನಗಳಲ್ಲಿ ಸಂತೇಬೆನ್ನೂರು ನಾಯಕರು ಎಂಬ ಮುದ್ರೆ[೧೩]ಯನ್ನು ಬಳಸಿರುತ್ತಾರೆ. ಆದ್ದರಿಂದ ವಿಶ್ವಕೋಶಗಳು[೧೪] ಗ್ಯಾಜೆಟಿಯರುಗಳು[೧೫-೧೯] ಮತ್ತಿತರ ಈಚಿನ ಇತಿಹಾಸ ದಾಖಲೆಗಳಲ್ಲಿ ಇವರನ್ನು ಬಸವಾಪಟ್ಟಣ, ತರೀಕೆರೆ ಪಾಳೆಯಗಾರರೆಂದು ಗುರುತಿಸುವ ಬದಲು ಸಂತೇಬೆನ್ನೂರು ನಾಯಕರೆಂದು ಗುರುತಿಸುವುದು ಯೋಗ್ಯವೂ ಸೂಕ್ತವೂ ಆಗಿದೆ. ಕರ್ನಾಟಕ ಕನ್ನಡ ವಿಶ್ವಕೋಶ[೨೦]ದಲ್ಲಿ ಇವರನ್ನು ಸಂತೇಬೆನ್ನೂರು ಅರಸರೆಂದೇ ಗುರುತಿಸಲಾಗಿದೆ.

೯. ಈ ಶಾಸದಲ್ಲಿ ಸಂತೇಬೆನ್ನೂರು ರಾಮಚಂದ್ರಸ್ವಾಮಿಯ ಪಾದ ಪದ್ಮಾರಾಧಕರು ಎಂದು ಉಲ್ಲೇಖಿಸಲಾಗಿದೆ. ಆದರೆ ಶಾಸನದಲ್ಲಿ ಉಲ್ಲೇಖಿತ ಪುರಾತನ ರಾಮಚಂದ್ರ ದೇವಾಲಯ ಈಗ ಸಂತೇಬೆನ್ನೂರಲ್ಲಿ ಇರುವುದಿಲ್ಲ. ಈಗ ಅಲ್ಲಿರುವ ರಾಮಚಂದ್ರ ದೇವಾಲಯ ಹೊಸದಾಗಿ ೧೯೩೩ರಲ್ಲಿ ಕಟ್ಟಿಸಿದ್ದಾಗಿದೆ. ಅಲ್ಲಿನ ಐತಿಹಾಸಿಕ ಪುಷ್ಕರಣಿ ದಡದ ಮೇಲೆ ಈ ನಾಯಕರು ಕಟ್ಟಿಸಿದ್ದ ಪುರಾತನ ರಾಮಚಂದ್ರ ದೇವಸ್ಥಾನವನ್ನು ಬಿಜಾಪುರದ ದಂಡನಾಯಕ ರಣದುಲ್ಲಾಖಾನ್‌ನು ಕೆಡವಿ, ಅಲ್ಲಿ ಮಸೀತಿಯೊಂದನ್ನು ನಿರ್ಮಿಸಿದನೆಂದೂ[೨೧] ನಂತರ ಆ ಮಸೀತಿ ಮುಸಾಫಿರ್ ಖಾನೆಯಾಗಿ ಬಳಸಲ್ಪಟ್ಟು ಈಗ ಕೇಂದ್ರ ರಕ್ಷಣಾ ಸ್ಮಾರಕವಾಗಿ ಮಾತ್ರ ಉಪಯೋಗಿಸಲ್ಪಡುತ್ತಿರುವುದು ಕಂಡುಬರುತ್ತದೆ. ಈ ಶಾಸನವಲ್ಲದೆ, ಅವರು ಬರೆಯಿಸಿದ ಕೈಫಿಯತ್ತು[೨೨,೨೪] ಗಳಲ್ಲಿ ಇತರೆ ಅವರ ಶಾಸನಗಳಲ್ಲಿ ಸಂತೇಬೆನ್ನೂರಿನಲ್ಲಿ ಇದ್ದುದು ಶ್ರೀರಾಮಚಂದ್ರ ದೇವಾಲಯ ಎಂಬುದು ಸ್ಪಷ್ಟವಾಗುವುದರಿಂದ ವಿಶ್ವಕೋಶ[೨೫] ಗೆಜೆಟಿಯರು[೨೬]ಗಳಲ್ಲಿ ನಮೂದಾಗಿರುವಂತೆ ಅಲ್ಲಿದ್ದದ್ದು ರಂಗನಾಥ ದೇವಾಲಯವಲ್ಲ, ರಾಮಚಂದ್ರ ದೇವಾಲಯ ಎಂದು ನಿರ್ಣಯಕ್ಕೆ ಬರಬಹುದಾಗಿದೆ.

೧೦. ಈ ಶಾಸನ ಸರ್ಜಾಹನುಮಪ್ಪನಾಯಕರ ಪುತ್ರರಾದ ಸೀತಾರಾಮಪ್ಪ ನಾಯಕರು ಕ್ರಿ.ಶ. ೧೬೭೪ರಲ್ಲಿ ಬರೆಯಿಸಿ ಕೊಟ್ಟಿದ್ದು, ಸರ್ಜಾ ಎಂಬುದು ಈ ಮನೆತನದ ಬಂದ ಬಿರುದು. ಇದನ್ನು ಬಿಜಾಪುರದ ಸುಲ್ತಾನರು ಈ ವಂಶದ ಚಿಕ್ಕಹನುಮಪ್ಪನಾಯಕನಿಗೆ ಆತನು ಹುಲಿಹೊಡನೆ ಹೋರಾಡಿ, ಶೌರ್ಯ ಪ್ರತಾಪ ತೋರಿಸಿದ್ದಕ್ಕಾಗಿ ಕೊಟ್ಟಿದ್ದು ಎಂದು ತಿಳಿದು ಬರುತ್ತದೆ.[೨೭] ಈ ಬಿರುದನ್ನು ಕೆಲವರು ಹೈದರಾಲಿ ಈ ವಂಶಕ್ಕೆ ಕೊಟ್ಟನೆಂದು ಉಲ್ಲೇಖಿಸಿದ್ದಾರೆ. ಈ ಶಾಸನದಲ್ಲಿ ಉಲ್ಲೇಖಿತ ಕಾಲದಂತೆ ಹೈದರಾಲಿಗೂ ಪೂರ್ವದಲ್ಲಿ ಸರ್ಜಾ ಬಿರುದು ಪ್ರಯೋಗವಾಗಿರುವುದರಿಂದ, ಅದನ್ನು ಹೈದರಾಲಿಗೆ ಹಿಂದೆಯೇ ಬಿಜಾಪುರ ಸುಲ್ತಾನರೇ ಕೊಟ್ಟದ್ದು ಎಂಬ ನಿರ್ಣಯಕ್ಕೆ ಹೆಚ್ಚು ಒತ್ತು ಬರುತ್ತದೆ.

೧೧. ಇದು ಸರ್ಜಾಸೀತಾರಾಮಪ್ಪ ನಾಯಕ ಬರೆಯಿಸಿದ ಶಾಸನವಾಗಿದ್ದು, ಈವರೆಗೆ ಈ ಶಾಸನ ಸೇರಿ ಸೀತಾ ರಾಮಪ್ಪ ನಾಯಕ ಬರೆಯಿಸಿದ ಒಟ್ಟು ೧೦ ಶಾಸನಗಳು ದೊರೆತಂತಾಗಿದೆ. ಇದರಿಂದ ಈವರೆಗೆ ಸಂತೇಬೆನ್ನೂರು ನಾಯಕರ ಒಟ್ಟು ೫೨ ಶಾಸನಗಳು ನಮಗೆ ದೊರೆತಿದ್ದು, ಅದರಲ್ಲಿ ಈ ವಂಶದವರಲ್ಲೇ ಅತಿ ಹೆಚ್ಚು ಶಾಸನ ಬರೆಯಿಸಿದ ಕೀರ್ತಿಯೂ ಈ ಸೀತಾರಾಮಪ್ಪ ನಾಯಕನಿಗೇ ಸಲ್ಲುತ್ತದೆ. ಇದು ಆತನು ಬರೆಯಿಸಿದ ೪ನೇ ತಾಮ್ರಪತ್ರವಾಗಿದ್ದು, ಅದರಲ್ಲಿ ಒಂದು ತಾಮ್ರಪತ್ರ ದ್ವಿಪ್ರತಿಯಲ್ಲಿದೆ. ಇದಲ್ಲದೆ ಈತನ ೩ ಶಿಲಾಶಾಸನಗಳೂ, ೩ ಸನ್ನದುಗಳು ದೊರೆತಿವೆ.

೧೨. ಆನಂದಾಪುರಂನ ಶ್ರೀ ಮುರುಘಾಮಠಕ್ಕೆ ಕೆಳದಿ ಸೋಮಶೇಖರ ನಾಯಕ ಬರೆಯಿಸಿಕೊಟ್ಟ ಕ್ರಿ.ಶ. ೧೬೭೦ರ ಒಂದು ತಾಮ್ರ ಶಾಸನ[೨೮]ದಲ್ಲಿ ತರೀಕೆರೆ ಪಾಳೆಯಗಾರರು ದೊಡ್ಡರಾಮಪ್ಪನಾಯಕ ಎಂಬ ಉಲ್ಲೇಖವಿದ್ದು, ಕಾಲದ ನಿರ್ಣಯದಂತೆ ಆ ದೊಡ್ಡ ರಾಮಪ್ಪ ನಾಯಕ, ಈ ಸೀತಾರಾಮಪ್ಪ ನಾಯಕ ಒಬ್ಬನೇ ಆಗುವ ಸಂಭವವಿದೆ. ಹಾಗಾದರೆ ಇದು ಸೀತಾರಾಮಪ್ಪ ನಾಯಕನ ೧೧ನೇ ಶಾಸನವಾಗುತ್ತದೆ.

೧೩. ಈ ಹೊಸ ಶಾಸನದಿಂದ ಕರ್ನಾಟಕ ಇತಿಹಾಸದಲ್ಲಿ ಕೆಲಕಾಲ ಮಿಣಗಿದ ಸಂತೇಬೆನ್ನೂರು ನಾಯರ ಆಡಳಿತಕ್ಕೆ ಇನ್ನಷ್ಟು ಹೊಸ ಸಂಗತಿಗಳು ಸೇರ್ಪಡೆಯಾಗಲು ಸಾಧ್ಯವಾಗಿದ್ದು, ಬೆಳಕು ಕಾಣದ ಇತಿಹಾಸಕ್ಕೆ ಹೊಸ ದಾರಿ ತೋರಿಸುತ್ತಿದೆ.

(ಶಾಸನದ ಕುರಿತು ವಿವಿಧ ಬಗೆಯಲ್ಲಿ ನೆರವಾದ ಡಾ|| ಡಿ. ಎಂ. ನಾಗರಾಜ್, ಪ್ರೊ. ಬಿ. ರಾಜಶೇಖರಪ್ಪ, ಪ್ರೊ|| ಪಂಕಜನಯನ ಅವರಿಗೆ ಕೃತಜ್ಞತೆಗಳು)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ರೈಸ್ ಬಿ.ಎಲ್., ಎಪಿಗ್ರಾಫಿಯಾ **ಕರ್ನಾಟಿಕ**, ಸಂ. ೬,೭,೧೧,೧೨.
೨. ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳು.
೩. **ಸೌತ್** ಇಂಡಿಯನ್ ಇನ್ಸ್‌ಸ್ಕ್ರಿಪ್ಷನ್ಸ್, ಸಂಪುಟ. ೧೮.
೪. ತ್ರೈಮಾಸಿಕ ಅಕ್ಟೋಬರ್, ೧೯೭೭.
೫. ಶ್ರೀಮಜ್ಜಗದ್ಗುರು ಶ್ರೀ **ಕೂಡ್ಲಿ-ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ.** ಭಾಗ - ೧.
೬. *Selections from the Records of Sringeri Mutt.*, Vol. I.
೭. ಸಂಪುಟ ೧೬. ಸಂತೇಬೆನ್ನೂರು ನಾಯಕರು - ಶೃಂಗೇರಿಮಠದ ದಾಖಲೆಗಳು.
೮. *Dynastic list of Copper plates Inscriptions copied in the office of the Director* (Epigraphy) Mysore.
೯. ಎಂ. ಎ. ಆರ್. ೧೯೨೫ (ಕಡೂರು ಡಿಸ್ಟ್ರಿಕ್ಟಿನ ಶಾಸನಗಳು) - ೨೬.
೧೦. **ಸರಜಾಹನುಮೇಂದ್ರ ಯಶೋವಿಲಾಸಂ.**, ವೈ. ಸಿ. ಭಾನುಮತಿ(ಸಂ.), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೧೧. ಎ. ಕ. ಸಂ. ೬.
೧೨. **ತರೀಕೆರೆ ಕೈಫಿಯತ್ತು** (ತರೀಕೆರೆ ಪಾಳೆಯಗಾರರು- ಪಿ. ಅಬ್ದುಲ್ ಸತ್ತಾರ್).
೧೩. **ಕೂಡ್ಲಿ-ಶೃಂಗೇರಿ ಮಠದ ದಾನಶಾಸನ**- ೬೧.
೧೪. **ಕರ್ನಾಟಕ** ವಿಷಯ ವಿಶ್ವಕೋಶ., ಪುಟ. ೭೨೧-೯೨೭.
೧೫. *Mysore Gazetteer.*, (ed.) B.L.Rice, Vol. II.
೧೬. *Mysore Gazetteer.*, (Ed) C. Hayavadana Rao, Vol V.
೧೭. *Karnataka State Gazetteer.*, (Ed) Suryanatha Kamath.
೧೮. *Shimoga District Gazetteer.*, (Ed) K. Abhishankar
೧೯. *Chikkamagalur District Gazetteer.*, (Ed) K. Abhishankar
೨೦. ಪುಟ. ೧೪೬೩.
೨೧. **ಕರ್ನಾಟಕದ ಕೈಫಿಯತ್ತುಗಳು**, ೧೯೯೪, (ಸಂ) ಎಂ. ಎಂ. ಕಲಬುರ್ಗಿ ಹಂಪೆ ವಿ.ವಿ. ಹಂಪೆ ಉತ್ತಂಗಿ ವೆಂಟಿಕೆ ಸಲ್ಲುವ ಸಂತೇಬೆನ್ನೂರು ಶೀಮೆ ಕೈಫಿಯತ್ತು (ಮೆಕೆಂಝಿ ಸಂಪುಟ. ೧೬೦).
೨೨. ಅದೇ.,
೨೩. **ತರೀಕೆರೆ ಕೈಫಿಯತ್ತು.** (ತರೀಕೆರೆ ಸಂಸ್ಥಾನಿಕ ರಂಗಪ್ಪ ನಾಯಕರು ಬರೆಯಿಸಿದ ಈ ಕೈಫಿಯತ್ತನ್ನು ಪಿ. ಅಬ್ದುಲ್ ಸತ್ತಾರ್ ಅವರ ಸಂಗ್ರಹದಿಂದ ಮೈಸೂರು ವಿಶ್ವವಿದ್ಯಾನಿಲಯ ಕೃಷ್ಣ ಶರ್ಮ ವಿರಚಿತ ಸರಜಾಹನುಮೇಂದ್ರ ಯಶೋವಿಲಾಸಂ (ಸಂ) ವೈ. ಸಿ ಭಾನುಮತಿ ಪುಸ್ತಕದಲ್ಲಿ ಪ್ರಕಟಿಸಿದೆ).
೨೪. ಪಿ. ಅಬ್ದುಲ್ ಸತ್ತಾರ್., **ತರೀಕೆರೆ ಪಾಳೆಯಗಾರರು.**
೨೫. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ.
೨೬. *Mysore Gazetteer* - (Ed) B.L. Rice, Hayavadana Rao. C.
೨೭. **ಕರ್ನಾಟಕ ಕೈಫಿಯತ್ತುಗಳು.**, ಕನ್ನಡ ವಿ.ವಿ. ಹಂಪೆ, ಪುಟ. ೪೨೭.
೨೮. ವಿರತಿಯಂಕುರ (ಸ್ಮರಣ ಸಂಚಿಕೆ) ಶ್ರೀ ಜಗದ್ಗುರು ಮುರಘರಾಜೇಂದ್ರ ಮಠ ಆನಂದಪುರಂ. ೧೯೮೦ ಪುಟ. ೮೬.
೨೯. 'ಮಲೆ ಕರ್ನಾಟಕದ ಅರಸು ಮನೆತನಗಳು'-ಕನ್ನಡ ವಿಶ್ವವಿದ್ಯಾನಿಲಯ ಹಂಪಿ (ಸಂತೇಬೆನ್ನೂರುನಾಯಕರು-ಸಂತೇಬೆನ್ನೂರು ಸುಮತೀಂದ್ರ ನಾಡಿಗ್).

★ ★ ★ ★





ಜಯಂತಿ ಯಸ್ಯಾವದತೋಪಿ ಭಾರತೀ। ವಿಭೂತಯಸ್ತೀರ್ಥ ಕೃತೋಪಿನೈಪ್ರಿತೇ
ಶಿವಾಯ ಧಾತ್ರೇ ಸುಗತಾಯ ವಿಷ್ಣವೇ। ಜಿನಾಯ ತಸ್ಮೈ ಸಕಲಾತ್ಮನೇ ನಮಃ
-ಜಗತ್ತಿನ ಮಹಾಚೈತನ್ಯನಾದ ಜಿನನೇ ಶಿವ, ಬ್ರಹ್ಮ (ಧಾತ್ರಿ)
ಬುದ್ಧ (ಸುಗತ) ವಿಷ್ಣುವಾಗಿರಲು ಆವನಿಗೆ ಪ್ರಣಾಮಗಳು
(ಕ್ರಿ.ಶ. ೧೧೫೧ ಕೈದಾಳದ ಗೂಳಬಾಚಿದೇವನ ಶಾಸನ ಎ.ಕ. ೧೨, ತುಮಕೂರು ಜಿಲ್ಲೆ)



ಡಾ. ಬಿ. ಜಗದೀಶ ಶೆಟ್ಟಿ*

ಆಳುಪ ಕುಲಶೇಖರನ ಹೇರೂರು ಶಾಸನ

ಕರಾವಳಿ ಕರ್ನಾಟಕದ ಇತಿಹಾಸದಲ್ಲಿ ಆಳುಪ ರಾಜವಂಶ ಪ್ರಮುಖ ಸ್ಥಾನವನ್ನು ಪಡೆದಿದೆ. ಕ್ರಿಸ್ತಶಕದ ಆರಂಭದಿಂದ ೧೪ನೇ ಶತಮಾನದವರೆಗೆ, ತಮ್ಮ ಆಡಳಿತದ ಮೂಲಕ ಅವರು ಬೇರೆ ಬೇರೆ ರಾಜವಂಶಗಳ ಸಂಪರ್ಕವನ್ನು ಹೊಂದಿದ್ದರು. ಆ ಇತಿಹಾಸ ಕುರಿತು ಅನೇಕ ಈ ಶಾಸನಗಳನ್ನು ಆಧರಿಸಿ ನಡೆದ ಅಧ್ಯಯನದಿಂದಾಗಿ ಅನೇಕ ಗ್ರಂಥಗಳು ರಚಿಸಲ್ಪಟ್ಟಿವೆ. ಆದರೆ ಹೊಸದಾಗಿ ಕಾಸರಗೋಡು ಜಿಲ್ಲೆಯ ಹೇರೂರಿನಲ್ಲಿ ದೊರೆತ ಶಾಸನವೊಂದು ಆಳುಪ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ೩೯ ಗೆರೆಗಳಿರುವ ಕನ್ನಡ ಭಾಷೆಯ ಈ ಶಿಲಾಶಾಸನ ಮುಂಭಾಗ ಹಾಗೂ ಹಿಂಭಾಗದಲ್ಲಿ ಮಾತ್ರವಲ್ಲ ಎರಡೂ ಬದಿಗಳಲ್ಲಿ ಬರೆಯಲ್ಪಟ್ಟಿದ್ದು ಮೂರು ಗೆರೆಗಳು ನಷ್ಟವಾಗಿವೆ. ಇದನ್ನು ಬರೆದವನು ಮೊಕುಂಞ.

ಆಳುಪ ರಾಣಿ ಬಲ್ಲ ಮಹಾದೇವಿ (ಕ್ರಿ.ಶ. ೧೨೭೫-೯೨) ಯ ಕಾಲದಲ್ಲಿ ಆಳುಪ ರಾಜ್ಯದಲ್ಲಿ ಅಂತಃಕಲಹ ನಡೆದದ್ದು ತಿಳಿದು ಬರುತ್ತದೆ. ಅಂದರೆ ಕ್ರಿ.ಶ, ೧೨೮೫ರಲ್ಲಿ ಅಳಿಯ ಬಂಕಿದೇವ ದಂಗೆ ಎದ್ದಾಗ ಅವನನ್ನು ಸಂತೈಸಲು ವಿಫಲಳಾದ ಬಲ್ಲ ಮಹಾದೇವಿ, ರಾಜ್ಯವನ್ನು ವಿಭಜಿಸಿ ಮಂಗಳೂರಿನ ಸುತ್ತಮುತ್ತಲಿನ ಪ್ರಭುತ್ವವನ್ನು ಅವನಿಗೆ ಬಿಟ್ಟುಕೊಟ್ಟಳು. ಬಲ್ಲ ಮಹಾದೇವಿ ಮತ್ತು ಅವಳ ಮಗ ನಾಗದೇವರಸ ಬಾರಹಕನ್ಯಾಪುರ ದಿಂದ ಹಾಗೂ ಬಂಕಿದೇವ ಮಂಗಳಾಪುರದಿಂದ ರಾಜ್ಯ ವಾಳುತ್ತಿದ್ದನು. ಬಲ್ಲಮಹಾದೇವಿಯ ನಂತರ ನಾಗದೇವರಸನ ಆಡಳಿತ ಉತ್ತರ ಭಾಗಕ್ಕಷ್ಟೇ ಸೀಮಿತವಾಗಿತ್ತು. ಕ್ರಿ.ಶ. ೧೩೦೦ರಲ್ಲಿ ನಾಗದೇವರಸನನ್ನು ಪದಚ್ಯುತಗೊಳಿಸಿ ಬಂಕಿದೇವನು ಇಡಿಯ ತುಳುನಾಡಿಗೆ ತಾನೇ ಅಧಿಪತಿಯಾದನು. ಅನಂತರವೂ ಅವನು ಮಂಗಳೂರಿನಿಂದ ರಾಜ್ಯವಾಳುತ್ತಿದ್ದನು.

ಬಂಕಿದೇವನ ನಂತರ ಸೋಯಿದೇವ ಅಧಿಕಾರಕ್ಕೆ ಬಂದನು. ಅವನು ತನ್ನ ರಾಜಧಾನಿಯನ್ನು ಬಾರಹಕನ್ಯಾಪುರಕ್ಕೆ ವರ್ಗಾಯಿಸಿದನು. ಡಾ. ಕೆ. ವಿ . ರಮೇಶ ಅವರು ೧೩೩೫ರಲ್ಲಿ ಸೋಯಿದೇವನು ತೀರಿಕೊಂಡಾಗ ಅವನ ಮಗನಿದ್ದಿರಬಹುದಾದ ಎರಡನೆಯ ಕುಲಶೇಖರ (೧೩೩೫-೪೬) ಪಟ್ಟಕ್ಕೆ ಬಂದನು ಎಂದಿದ್ದಾರೆ.[1]

ಆದರೆ ಡಾ. ಬಿ. ವಸಂತ ಶೆಟ್ಟಿಯವರು ಸೋಯಿದೇವ ಬಾರಕೂರನ್ನು ಆಳುತ್ತಿದ್ದಾಗ ಕುಲಶೇಖರ ರಾಜ್ಯದ ದಕ್ಷಿಣ ಭಾಗದಲ್ಲಿ ಅಧಿಕಾರ ನಿರ್ವಹಿಸುತ್ತಿದ್ದ ವಿವರವನ್ನು ನೀಡಿದ್ದಾರೆ.[2] ಅವರ ಪ್ರಕಾರ ಕ್ರಿ.ಶ. ೧೩೨೩ರಿಂದ ಅವನು ಮಂಗಳೂರಿನಿಂದ ಆಡಳಿತ ನಡೆಸುತ್ತಿದ್ದ ಬಗ್ಗೆ ಹೊಸತಾಗಿ ದೊರೆತಿರುವ ಪಜೀರಿನ ಶಾಸನ ತಿಳಿಸುತ್ತದೆ.[3] ಅಲ್ಲದೆ ಅದರ ಪ್ರಕಾರ ಅವನಿಗೆ ಒಬ್ಬ ಮಗನಿದ್ದ ಎಂದಾಗಿದೆ. ಡಾ. ಬಿ. ವಸಂತ ಶೆಟ್ಟಿಯವರು ಇನ್ನೂ ಮುಂದುವರಿದು ಕ್ರಿ.ಶ. ೧೩೩೫ರಲ್ಲಿ ಸೋಯಿದೇವ ಅಧಿಕಾರವನ್ನು ತ್ಯಜಿಸಿದ್ದರಿಂದ ಎರಡನೇ ಕುಲಶೇಖರನು ಅಧಿಕಾರಕ್ಕೆ ಬರುವುದು ಸಾಧ್ಯವಾಯಿತು ಎಂಬ ಅಂಶವನ್ನು ತಿಳಿಸುತ್ತಾರೆ. ಅವನು ವಯಸ್ಸು ಮೀರಿದ್ದರಿಂದ ತನ್ನ ಮಗನಿದ್ದಿರ ಬಹುದಾದ ಕುಲಶೇಖರನಿಗೆ ಆಡಳಿತಸೂತ್ರವನ್ನು ಬಿಟ್ಟು ಕೊಟ್ಟಿರಬೇಕು.[4]

ಈಗ ದೊರೆತಿರುವ ಹೇರೂರಿನ ಶಾಸನ ಕುಲಶೇಖರನ ಆಡಳಿತಕ್ಕೆ ಸಂಬಂಧಪಟ್ಟಿದ್ದು, ಕ್ರಿ.ಶ. ೧೩೨೧-೨೨ರಲ್ಲಿ ಅವನು ಮಂಗಳೂರಿನಿಂದ ಆಳುತ್ತಿದ್ದ ಬಗ್ಗೆ ತಿಳಿಸುವುದರಿಂದ, ಕ್ರಿ.ಶ. ೧೩೨೩ರ ಶಾಸನಕ್ಕಿಂತ ಮೊದಲಿನ ದಾಖಲೆ ಸಿಕ್ಕಿದಂತಾಗಿದೆ. ಇದರಲ್ಲಿ ವೀರ ಕುಲಶೇಖರನನ್ನು ಪಾಂಡ್ಯ ಚಕ್ರವರ್ತಿ ಮತ್ತು ರಾಯಗಜಾಂಕುಶ ಬಿರುದುಗಳ ಸಹಿತ ಉಲ್ಲೇಖಿಸಲಾಗಿದೆ. ಆಳುಪ ರಾಜ ವೀರಕುಲಶೇಖರ ಶಕವರುಷ ೧೨೪೩ ಹೋದ ಧುರ್ಮತಿ ಸಂವತ್ಸರದ ಧನೂಮಾಸ ೧೩ ನೇ ಗುರುವಾರ ರಾಜಧಾನಿ ಮಂಜೇಶ್ವರದ ಅರಮನೆಯಲ್ಲಿ ವಡ್ಡೋಲಗವನ್ನು ಕೊಟ್ಟಿರಲು ಅವರ ಕುಮಾರರಾದ ಬಂಕಿದೇವರು, ಸಮಸ್ತ ಪ್ರಧಾನರು, ಅತಿಕಾರಿ, ಹೇರೂರ ರಾಜ್ಯರ್ಗಡೆ, ಬಲ್ಲುಪಾದ, ದೊಂಬೆಗ್ಗಡೆ ಫುಲ್ಲಾರು ರಾಯಪ್ಪ ಮುಂತಾದವರ ಸಮ್ಮುಖದಲ್ಲಿ ತಮ್ಮ ಕುಮಾರಿ ಜಾಕಲದೇವಿಯವರಿಗೆ ಹೇರೂರು ಗ್ರಾಮದಲ್ಲಿ ನೀಡಿದ ದಾನವನ್ನು ಈ ಶಾಸನ ಉಲ್ಲೇಖಿಸುತ್ತದೆ.

ಇಲ್ಲಿ ನಾವು ಗಮನಿಸಬೇಕಾದ ಅಂಶಗಳೆಂದರೆ ೧೩೨೧-೨೨ರಲ್ಲಿಯೇ ಸೋಯಿದೇವ ಬಾರಕೂರಿನಿಂದ

* ಪೂರ್ಣಪ್ರಜ್ಞ ಕಾಲೇಜ್, ಉಡುಪಿ - ೫೭೬ ೧೦೧

ಆಳುತ್ತಿದ್ದಾಗ ಕುಲಶೇಖರ ಆಳುಪ ರಾಜ್ಯದ ದಕ್ಷಿಣಭಾಗವನ್ನು ಆಳುತ್ತಿದ್ದ ಅವನಿಗೆ ಆಗ ಸ್ವತಂತ್ರ ಬಿರುದುಗಳಿದ್ದವು. ಕುಲಶೇಖರನ ಬಗ್ಗೆ ಪ್ರಥಮ ಉಲ್ಲೇಖ ಸಿಗುವುದು ಈ ಶಾಸನದಲ್ಲಿ ಎಂಬುದು ಗಮನಿಸಬೇಕಾದ ಅಂಶ.

ಆಳುಪರ ಆಡಳಿತದ ಕಾಲದಲ್ಲಿ ಅವರ ರಾಜ್ಯದ ದಕ್ಷಿಣದ ಗಡಿಯನ್ನು ತಿಳಿಯಲು ಇದು ಸಹಕಾರಿ. ಇಲ್ಲಿಯವರೆಗೆ ವೊಗೆನಾಡಿನ ಸುಬ್ರಾಯ ದೇವಸ್ಥಾನದಲ್ಲಿ ದೊರೆತಿರುವ ಶಾಸನ ಅತ್ಯಂತ ದಕ್ಷಿಣ ಭಾಗದಲ್ಲಿ ದೊರೆತ ಆಳುಪ ಶಾಸನವಾಗಿತ್ತು.[೫] ಕಾಸರಗೊಡು ಜಿಲ್ಲೆಯ ಭಾಗವಾದ ಹೇರೂರು, ಆಗ ಅಂದರೆ ಕ್ರಿ.ಶ. ೧೩೨೧-೨೨ರಲ್ಲಿಯೇ ಕನ್ನಡ ಭಾಗದ ರಾಜಮನೆತನವಾದ ಆಳುಪರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದು ಗಮನಾರ್ಹವಾದ ವಿಷಯವಾಗಿದೆ.

ಆಳುಪರ ಆಡಳಿತಾವಧಿಯಲ್ಲಿ ಮಂಜೇಶ್ವರ ಒಂದು ಪ್ರಮುಖ ಆಡಳಿತ ಕೇಂದ್ರವಾಗಿದ್ದು, ಅಲ್ಲಿ ಅರಮನೆಯೂ ಇತ್ತು ಎಂಬ ವಿಷಯವನ್ನು ಈ ಶಾಸನ ಹೊರಗೆಡಹುತ್ತದೆ. ಅರಮನೆ ಇದ್ದ ಮೇಲೆ ಅಲ್ಲಿ ಅವರು ಬೀಡು ಬಿಡುತ್ತಿದ್ದರು ಎಂಬುದು ಸ್ಪಷ್ಟ.

ಇದುವರೆಗೆ ಲಭ್ಯವಿರುವ ಆಧಾರಗಳಲ್ಲಿ ಎರಡನೇ ಕುಲಶೇಖರನಿಗೆ ಬಂಕಿದೇವನೆಂಬ ಮಗನಿದ್ದ ಉಲ್ಲೇಖನಿದೆ.[೬] ಅದು ಪುನಃ ಈ ಶಾಸನದಿಂದ ದೃಢೀಕರಿಸಲ್ಪಟ್ಟಿದೆ. ಅಲ್ಲದೆ ಅವನಿಗೆ ಜಾಕಲದೇವಿ ಎನ್ನುವ ಮಗಳಿದ್ದ ವಿಚಾರ ಈ ಶಾಸನದಿಂದ ತಿಳಿದು ಬರುತ್ತದೆ. ಇದಕ್ಕಿಂತ ಮೊದಲು ವರಾಂಗದ ಶಾಸನದಲ್ಲಿ ಚಾಕಲ ಮಹಾದೇವಿಯ ಪ್ರಸ್ತಾಪ ಬರುತ್ತದೆ. ಅವಳು ಒಂದನೇ ಕುಲಶೇಖರನ ರಾಣಿ.[೭]

ಹೇರೂರಿನ ಈ ಶಾಸನ ವಿಟ್ಲದ ಅರಸು ಮನೆತನದ ಪ್ರಾಮುಖ್ಯತೆಯ ಅಧ್ಯಯನಕ್ಕೆ ಅನುಕೂಲಕರ ದಾಖಲೆಯಾಗಿದೆ. ವಿಟ್ಲದದೊಂಬ ಹೆಗ್ಗಡೆಯ ಬಗ್ಗೆ ತಿಳಿಸುವ ವಗೆವಾಡಿನ ಶಾಸನ ಇದು ಎರಡನೇ ದಾಖಲೆಯಾದರೆ,[೮] ಈ ಎರಡು ಶಾಸನಗಳಲ್ಲಿ ದೊಂಬಹೆಗ್ಗಡೆ ದಾನ ನೀಡುವಾಗ ಉಪಸ್ಥಿತರಿದ್ದ ವ್ಯಕ್ತಿಗಳಲ್ಲಿ ಒಬ್ಬನಾಗಿ ಕಂಡುಬರುತ್ತಾನೆ.

ಆಳುಪರ ಕಾಲದಲ್ಲಿ ಅಧಿಕಾರಿ ಒಬ್ಬ ಪ್ರಮುಖ ರಾಜ ಪ್ರತಿನಿಧಿಯಾಗಿ ಕಂಡುಬರುತ್ತಾನೆ. ಉದಾ : ಮಾರದಂಮ ಅಧಿಕಾರಿ[೯] ಬೋಪಣ್ಣ ಅಧಿಕಾರಿ[೧೦] ಸಿಂಮದೇವ ಅಧಿಕಾರಿ[೧೧] ಇತ್ಯಾದಿ. ಈಗ ಅಧ್ಯಯನಕ್ಕೆ ಲಭ್ಯವಿರುವ ಹೇರೂರು ಶಾಸನದಲ್ಲಿ ಅಧಿಕಾರಿಯ ಉಲ್ಲೇಖವಿದೆ. ಹೆಸರು ತಿಳಿದು ಬರುವುದಿಲ್ಲ.

ಈ ಶಾಸನದಲ್ಲಿ ಗ್ರಾಮದ ಆರು ಮೂರು ಯೆಪ್ಪತ್ತಾರರ ಪ್ರಸ್ತಾಪವಿರುವುದು ಗಮನಾರ್ಹವಾಗಿದೆ. ಆಳುಪರ ಅನೇಕ ಶಾಸನಗಳಲ್ಲಿ ಇಂತಹ ಉದಾಹರಣೆಗಳು ಸಿಗುತ್ತವೆ. ಉದಾ : ಸಿವಳ್ಳಿಯ ಸಾಸಿರ್ವರು[೧೨] ನೀರುವಾದ ಗ್ರಾಮದ ಮುಂನೂರ್ವರು[೧೫] ಕುಡಿಕೂರ ಗ್ರಾಮದ ಮುಂನೂರ್ವರು.[೧೪] ಆ ಗ್ರಾಮದ ಮುಂನೂರ್ವರು೧೫ ಇತ್ಯಾದಿ., ವಿದ್ವಾಂಸರ ಪ್ರಕಾರ ಈ ಎಲ್ಲಾ ಉದಾಹರಣೆಗಳು ಗ್ರಾಮದ ಆಡಳಿತಕ್ಕಾಗಿ ನಿಯೋಜಿಸಲಾದ ನಿರ್ದಿಷ್ಟ ಸಂಖ್ಯೆಯ ವ್ಯಕ್ತಿಗಳನ್ನೊಳಗೊಂಡ ಒಂದು ಸಂಘವಾಗಿರಬೇಕು. ಇತರ ಕಡೆಗಳಂತೆ ಹೇರೂರಿನ ಶಾಸನದಲ್ಲೂ ಇಂತಹ ಗ್ರಾಮದ ಆರು ಮೂರು ಯೆಪ್ಪತ್ತಾರರ ಸಂಘವಿದ್ದಿರಬೇಕು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆರು ಮೂರು ಯೆಪ್ಪತ್ತಾರು ತಪ್ಪಾಗಿ ಬರೆಯಲ್ಪಟ್ಟಿರುವ ಸಾಧ್ಯತೆ ಇದೆ. ಅದು **ಆರು ನೂರು ಯೆಪ್ಪತ್ತಾರು** ಆಗಿರಬೇಕು.

ಈ ಶಾಸನ ಭೂಮಿಯ ಒಂದು ವಿಭಾಗವಾದ ಹರವರಿಯನ್ನೂ ಉಲ್ಲೇಖಿಸುತ್ತದೆ. ಹರವರಿ ಎಂದರೆ ವಿಸ್ತಾರವಾದ ಎತ್ತರವಾದ ಭೂಮಿ ಎಂದರ್ಥ.[೧೬] ಮರ್ಕಂಜ ಎನ್ನುವ ಊರನ್ನೂ ಈ ಶಾಸನ ಹೆಸರಿಸುತ್ತದೆ ಹಾಗೂ ಆ ಊರು ಈಗಲೂ ಅದೇ ಹೆಸರನ್ನು ಉಳಿಸಿಕೊಂಡಿದೆ.

ಹೀಗೆ ಈ ಶಾಸನ ಆಳುಪ ರಾಜವಂಶದ ರಾಜಕೀಯ ಇತಿಹಾಸದ ಅಧ್ಯಯನಕ್ಕೆ ಹೆಚ್ಚು ಉಪಯೋಗವಾಗುವ ದಾಖಲೆಯಾಗಿದೆ. ಆಳುಪ ಅರಸು ಎರಡನೇ ಕುಲಶೇಖರನ ಅಧಿಕಾರ ನಿರ್ವಹಣೆಯ ವಿವಿಧ ಹಂತಗಳನ್ನು ಇದರಿಂದ ಗುರುತಿಸಲು ಸಾಧ್ಯ. ಅಲ್ಲದೆ ಸ್ಥಳೀಯ ಆಡಳಿತದ ಬಗ್ಗೆಯೂ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.


ಕಾಸರಗೋಡು ಜಿಲ್ಲೆಯ ಹೇರೂರು

ಶಾಸನ ಪಾಠ

ಮುಂಭಾಗ

೧ ಶ್ರೀ ಗಣಾಧಿ
೨ ಪತಯೇ ನಮಃ ಸ್ವಸ್ತಿ
೩ ಶ್ರೀಮತು ಪಾಂಡ್ಯ ಚಕ್ರವ
೪ ರ್ತಿ ರಾಯಗಜಾಂಕುಸ ಶ್ರೀ
೫ ವೀರ ಕುಲಸೇಕರ ದೇವಾಳ್ವೇಂ
೬ ದ್ರ ದೇವರು ವಿಜಯ ರಾಜ್ಯಂಗೆ
೭ ಯುತ್ತಮಿರ್ದ್ದ। ಕಾಲಾತೀತ। ಸಂ
೮ ವತ್ಸರದಲು ೧೨೪೩ ಹೋದ ದು
೯ ರ್ಮ್ಮತಿ ಸಂವತ್ಸರದ ಧನೂಮಾಸ
೧೦ ೧೩ (ನೆ) ಗು। ಶ್ರೀ ಮತು ರಾಜಧಾ
೧೧ ನಿ ಮಂಜೇಸ್ವರದ ಅರಮನೆ (ಲಿ)
೧೨ (ದು) ವಡೋಲ ಗಂ ಗೊಟ್ಟಿರ್ದ್ದ ಇವರ





೧೩ ಶ್ರೀ ಪಾದ ಸಂನಿದಾನದಲು ಕು
೧೪ ಮಾರ ಬಂಕಿ ದೇವರುಂ ಸಮಸ್ತ
೧೫ ಪ್ರಧಾನರುಂ ಅತಿಕಾರಿ
೧೬ ....

ಹಿಂಭಾಗ

೧೭ ಹೇರೂರು ರಾ-
೧೮ ಜ್ಯರ್ಗಡೆ ಖಲ್ಲು ಪಾದ
೧೯ ದೊಂಬೆಗ್ಗಡೆ ಪ್ಪಲ್ಲಾರು
೨೦ ರಾಯಪ್ಪದೂಯಾರ
೨೧ ಸೊಮಡಿಯ ಯಿಂತಿ. .
೨೨ ..ದಿಂದ ಹೊಡೆದಡೆ
೨೩ ಮೈಯಿದ (ವೊ) ರಂ ಆರೊಬ
೨೪ ರು ಏಕ್ರಾಸ್ತರಾದ
೨೫ ಡೆ. ಗಗೆ ವಾರಣಾಸಿಯ
೨೬ ಲುಸಾವಿರ ಕವಿಲ್ಯೆ ಕೊಂತಿ
೨೭ ವಿದ ದೋಸ ಅರಸಿಂಗೆ
೨೮ ದಂಡಗ ೧೦೦೦ ಒಂದು ತ
೨೯ ಲೈ ಬರದ ಮೊಕುಂಞ ಬ
೩೦ ದಾಯ್ಯಗಳವರು
೩೧ ಸುಹ (ಸ್ಥದ) ವಪ

ಒಂದನೆ ಬದಿ

೩೨ ದಿ (ನ) ಗ್ರಾಮದ ಆರು ಮೂರು ಯೆಪ್ಪತ್ತಾರದ ಕಲ (ಮೂ)ವ
೩೩ ರು ಹೊರಹಿ ನವರುರಿ ಕೂಡಿ ಮರದಿರ್ದಾ ಪ್ರಸ್ತಾವ
೩೪ ದಲು ಶ್ರೀಮದರಸರು ತಂಮ ಕುಮಾರಿ ಜಾಕಲದೇವಿ
೩೫ ಯರಿಗೇ ಹೇರೂರ.... ೦ ಸೂರ ಮತಿಗರ ಹರವರಿ

ಎರಡನೇ ಬದಿ

೩೬ .... ದೇವರಿ
೩೭ ಗೆ...
೩೮. ಮರ್ಕಂಜದ ದೇವರಿಗೆ ಮ ೧೨೬ ಯಿಂತಿ... ವನ
೩೯. ಡಸು ಮದು ಯಿ ಧರ್ಮಕ್ಕೆ

(ಈ ಶಾಸನವನ್ನು ನನ್ನ ಗಮನಕ್ಕೆ ತಂದು ಪ್ರತಿ ತೆಗೆಯಲು ಸಹಕರಿಸಿದವರು. ಶ್ರೀ ಸತ್ಯಮೂರ್ತಿ ಕೆ. ಎಮ್, ಪ್ರೊ. ಕೇಶವ ಉಚ್ಚಿಲ, ಶ್ರೀ ಎಂ. ಮುಕುಂದ ಪ್ರಭು. ಶಾಸನದ ಪಾಠ ತಯಾರಿ ಯಲ್ಲಿ ಸಹಕಾರ - ಡಾ. ಕೆ. ವಿ. ರಮೇಶ್, ಡಾ. ಪಿ. ಎನ್. ನರಸಿಂಹಮೂರ್ತಿ ಡಾ. ಕೆ. ಬಿ. ಶಿವತಾರಕ್ ಮತ್ತು ಶ್ರೀ ಅಚ್ಯುತ ಹೆಬ್ಬಾರ್).

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ರಮೇಶ್ ಕೆ.ವಿ., ೧೯೬೯, **ತುಳುನಾಡಿನ ಇತಿಹಾಸ**, ಪು. ೫೯-೬೨, ಮೈಸೂರು.
೨. ಶೆಟ್ಟಿ ವಸಂತ ಬಿ., *ಬಾರಕೂರು ಇಟ್ಸ್ ಹಿಸ್ಟರಿ ಎಂಡ್ ಕಲ್ಚರ್* ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೪, ಪು. ೧೩೨.
೩. ಪಜೀರಿನ ಈ ಶಾಸನ, ಈಗ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿದೆ.
೪. ಶೆಟ್ಟಿ ವಸಂತ ಬಿ., ಪೂರ್ವೋಕ್ತ, ಪು. ೧೩೩.
೫. ಭಟ್ ಗಣಪಯ್ಯ ಪಿ., 'ವಗೆನಾಡಿನಲ್ಲಿ ಬೆಳಕು ಕಂಡ ಆಳುಪ ಶಾಸನ, ನಾಣ್ಯಗಳು', **ತೌಳವ**, ಮೂಡಬಿದಿರೆ, ೧೯೯೭ ಪು. ೫೬-೬೨.
೬. ಶೆಟ್ಟಿ ವಂಸತ ಬಿ., ಪೂರ್ವೋಕ್ತ, ಪು. ೧೩೩.
೭. ರಮೇಶ್ ಕೆ. ವಿ., ಮತ್ತು ಶರ್ಮ ಎಂ. ಜೆ., ೧೯೭೮, **ತುಳುನಾಡಿನ ಶಾಸನಗಳು**, ಮೈಸೂರು, ಪು. ૩૯.
೮. ಗಣಪಯ್ಯ ಭಟ್., ಪೂರ್ವೋಕ್ತ.
೯. *SII* Vol IX Pt. I No. 395.
೧೦. *SII* Vol VII No. 308.
೧೧. ಭಟ್ ಗಣಪಯ್ಯ ಪಿ., ಪೂರ್ವೋಕ್ತ.
೧೨. *SII* Vol VII No. 279.
೧೩ ARSIE 1928 - 29 No. 490.
೧೪ *SII* Vol IX pt. I No. 390.
೧೫. ಭಟ್ ಗಣಪಯ್ಯ ಪಿ., ಪೂರ್ವೋಕ್ತ.
೧೬. ಶೆಟ್ಟಿ ಜಗದೀಶ ಬಿ., *ದಿ ಆಗ್ರೋ ಇಕಾನಮಿಕ್ ರಿಲೇಶನ್ಸ್ ಎಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ* (ಕ್ರಿ.ಶ. ೧೦೦೦-೧೬೦೦): ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಮಂಗಳೂರು, ೧೯೯೨. ಪುಟ. ೪೮.

★ ★ ★ ★



ಬಸದಿಯ ಮನೆಯಲ್ಲಿ ನಿಂತವ ತೀರ್ಥಂಕರ
ಸಾರಿದ ತಂಪು ಚಿಂತನೆಗೆ ತಪದ ಭಾವದ ಆಗರ
ತ್ರಿಭುವನದಿ ತಿಲಕವಾಂತಿರಲು, ಬೇರೇನು ಬೇಕು ಸುಂದರ!
ಸಾವಿರ ಕಂಬಗಳು ಸುತ್ತುವರಿಯೆ ಅದುವೆ
ಕಾಯಕ್ಕೆ ಪಾವಿತ್ರ್ಯದಾಗರ

ಡಾ. ಪಿ.ಎನ್. ನರಸಿಂಹಮೂರ್ತಿ*

ಕೊಳಕೆ ಇರ್ವತ್ತೂರಿನ ಶಾಸನ ಒಂದು ಹೊಸ ಬೆಳಕು

ಕೊಳಕೆ ಇರ್ವತ್ತೂರು ಕಾರ್ಕಳ ತಾಲೂಕಿನ ಒಂದು ಪುಟ್ಟಗ್ರಾಮ. ಸಾಣೂರು - ಮುರತ್ತಂಗಡಿಯಿಂದ ಪೂರ್ವಕ್ಕೆ ೩-೪ ಮೈಲು ಕ್ರಮಿಸಿದರೆ ಸುತ್ತಲೂ ಬೆಟ್ಟ ಗುಡ್ಡ ಗಳಿಂದ ಕೂಡಿದ ಈ ಗ್ರಾಮ ಕಾಣುತ್ತದೆ.

ಕೊಳಕೆ ಇರ್ವತ್ತೂರಿನ ಇತಿಹಾಸವನ್ನು ದಾಖಲಿಸಿರುವ ಎರಡು ಶಾಸನಗಳು ಈಗ್ಗೆ ಕೆಲವು ವರ್ಷಗಳ ಹಿಂದೆ ಬೆಳಕಿಗೆ ಬಂದಿವೆ.[೧] ಒಂದನೆಯದು ಜೈನ ಶಾಸನ. ಗದ್ದೆಯೊಂದರ ಮಧ್ಯೆ ನಟ್ಟಿರುವ ಕಲ್ಲಿನಲ್ಲಿದೆ ಈ ಶಾಸನ. ಈ ಶಾಸನ ಕಲ್ಲು ಶಿಥಿಲವಾಗಿದೆ; ಅಕ್ಷರಗಳು ಮಾಸಿವೆ. "ನಾಗವರ್ಮ" ಎಂಬ ಹೆಸರು ಇಲ್ಲಿ ಉಲ್ಲೇಖವಾಗಿರುವಂತಿದೆ. ಈತ ಯಾರು? ಖ್ಯಾತ ಕವಿ ನಾಗವರ್ಮನೆ (?) ಎಂಬಿತ್ಯಾದಿ ವಿವರಗಳು ಇನ್ನೂ ಸ್ಥಿರವಾಗ ಬೇಕಾಗಿದೆ.

ಎರಡನೆಯ ಶಾಸನ ರಾಜಕೀಯ-ಆಡಳಿತಾತ್ಮಕ ಮತ್ತು ಸಾಮಾಜಿಕ ವಿಷಯಗಳನ್ನು ವಸ್ತುವಾಗಿ ಉಳ್ಳದ್ದು. ಇಲ್ಲಿಯ ಗೋಪಾಲಕೃಷ್ಣ ದೇವಾಲಯದ ಪ್ರಾಕಾರದೊಳಗೆ ಜಗುಲಿಯ ಎಡಭಾಗಕ್ಕೆ ನಟ್ಟಿರುವ ಕಲ್ಲಿನಲ್ಲಿದೆ ಈ ಪ್ರಮುಖ ಶಾಸನ. ದೇವಾಲಯಕ್ಕೂ ಶಾಸನಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ ಇರ್ವತ್ತೂರು ಮತ್ತು ಕಾರ್ಕಳ ತಾಲ್ಲೂಕಿನ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುವ ಒಂದು ಪ್ರಮುಖ ದಾಖಲೆ ಇದು.

ಎರಡು ಭಾಗಗಳಲ್ಲಿ ಒಟ್ಟು ೫೨ ಸಾಲು ಬರಹ ಹೊಂದಿರುವ ಈ ಶಾಸನ ವಿಜಯನಗರ ಚಕ್ರವರ್ತಿ ಇಮ್ಮಡಿ ಹರಿಹರನ ಕಾಲಕ್ಕೆ ಸೇರಿದ್ದು. ಇದರ ತೇದಿ ವಿವರಗಳು, ಕ್ರಿ.ಶ. ೧೪೦೦ ಏಪ್ರಿಲ್ ೨೧ಕ್ಕೆ ಸರಿ ಹೊಂದುತ್ತವೆ. ಆಗ **ಬಸವಣ್ಣ ವೊಡೆಯ** ಮಂಗಳೂರಿನ ರಾಜ್ಯಪಾಲನಾಗಿ ಮತ್ತು ಗಣಪಣ್ಣ ಮೂಡಬಿದುರೆ ವಿಭಾಗದ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಶಾಸನದಲ್ಲಿ ಇದರ ಉಲ್ಲೇಖವಿದೆ.

ಶಾಸನದ ಮುಖ್ಯ ವಿಷಯ : ಒಂದು ರಾಜಕೀಯ ಒಪ್ಪಂದ. ಬಂಗ ಮತ್ತು ಚೌಟ ರಾಜರುಗಳ ಸಮಕ್ಷಮದಲ್ಲಿ ಏಳು ನಾಡುಗಳ ಹಿರಿಯರು ಕೂಡಿ ಮಾಡಿಕೊಂಡದ್ದು. ಕೆಲ್ಲಪುತ್ತಿಗೆ, ನಲ್ಲೂರು, ರಂಜಾಳ, ಇರ್ವತ್ತೂರು, ಸಾಣೂರು, ನೆಲ್ಲಿಕಾರು ಮತ್ತು ಚಾಮಾರ-ಇವು ಒಪ್ಪಂದ ಚೌಕಟ್ಟಿನೊಳಗೆ ಬಂದ ಏಳು ನಾಡುಗಳು. ಇದರಲ್ಲಿ **ಚಾಮಾರ** ಈಗ **ಕೇಮಾರ** ಆಗಿದೆ; ಉಳಿದವು ಅದೇ ಹೆಸರಿನಿಂದ ಕಾರ್ಕಳ ತಾಲೂಕಿನಲ್ಲಿವೆ.

ವಿಜಯನಗರ ಕಾಲದಲ್ಲಿ ರಾಜಕೀಯ ಒಪ್ಪಂದಗಳು ಬಹಳ ಆಗಿವೆ.[೩] ಆದರೆ ಇರ್ವತ್ತೂರಿನ ಶಾಸನ ವಿವರಿಸುವ ಒಪ್ಪಂದ ಭಿನ್ನವಾದುದು. ಇದು ರಾಜ ರಾಜರುಗಳ ನಡುವೆ ಆದ ಒಪ್ಪಂದ ಅಲ್ಲ. ಬಲ್ಲಾಳನೊಬ್ಬ ಮಾಡುತ್ತಿದ್ದ ಅನ್ಯಾಯದ ವಿರುದ್ಧ ರಕ್ಷಣೆ ಪಡೆಯಲು ನಾಡಹಿರಿಯರು ಸಭೆ ಸೇರಿ ಮಾಡಿಕೊಂಡ ಒಪ್ಪಂದ. ಶಾಸನದ ೬-೧೦ ನೆಯ ಸಾಲುಗಳಲ್ಲಿ ವಿಷಯವನ್ನು ಈ ರೀತಿ ಹೇಳಿದೆ:

"ಬಂಗರು ಚೌವುಟ ಸಮಕ್ಷದಲು ಯೇಳೂರ ಚತುಸೀಮೆಯಒಳಗೆ
ಉಳ ಕೆಲಂ ಫುತ್ತಿ ನಲೂರು ರಂಜಳ ಯಿರುವತ್ತೂರು ಚಾನೂರು
ಚಾಮಾರ ನೆಲಕಾರು ಅಂತ್ತು ಯಿ ಯೇಳೂರ ಒಳಗೆ ಉಳ ಹೊರಹಿನವರು
ನೆಲದವರು ಸಭೆಗಳು ಒಳಗಾದ ಸಮಸ್ತ ಪ್ರಜೆಗಳೂ ಕೂಡಿ ತಂಮ
ಒಳಗೆ ತಾಉ ಯೇಕತ್ರವಾಗಿ ಬಲಾಳುಗಳ ಒತುತ ತುಫುನ ವಾದಲ್ಲಿ ಮಾಡಿದ ಅಡಕ" (ಅಡಕ -ಎಂದರೆ ಒಪ್ಪಂದ ನಿಯಮ ಎಂಬರ್ಥ)

ಶಾಸನದಲ್ಲಿ ಹೆಸರಿಸಿರುವ "ಹೊರಹಿನವರು" ಪ್ರಾಯಶಃ ಬೇರೆಡೆಯಿಂದ ಬಂದು ಈ ಏಳುನಾಡುಗಳೊಳಗೆ ನೆಲೆಸಿದ್ದ ವರಿರಬೇಕು. ಜಾಗದ **'ಒತ್ತುವರಿ'** ಮತ್ತು **'ಕಿಚ್ಚು'** ಇಡುವ ಬಲ್ಲಾಳನ ದುಷ್ಕಾರ್ಯದಿಂದ ಪಾರಾಗಲು ಮಾಡಿಕೊಂಡ ಒಪ್ಪಂದ ಇದು. ಇದರ ಪ್ರಕಾರ "**ಅರಸನಿಗೆ** ದೇಶವಲ್ಲದೆ ಬಲ್ಲಾಳಂಗೆ ವ್ರಿತ್ತಿಯಿಲ್ಲ, ಬಂಟಂಗೆ ಜೋಳವಿಲ್ಲ". ಅಂದರೆ ಈ ಪ್ರದೇಶ (ವಿಜಯನಗರದ) ಅರಸನಿಗೆ ಸೇರಿದ್ದು, (ಆಡಳಿತ ನಡೆಸುವ) ಬಲ್ಲಾಳನಿಗಾಗಲಿ, ಅವನ ಬಂಟ(ಸೈನಿಕ)ನಿಗಾಗಲಿ ಅಲ್ಲ. ಹಾಗಾಗಿ ಈ ಯೇಳೂರ ಜನರು ಬಲ್ಲಾಳನೊಡನೆ ಯಾವ ರೀತಿಯ ಸಂಬಂಧವನ್ನೂ ಇಟ್ಟುಕೊಳ್ಳಬಾರದು ಎಂಬ ಕಟ್ಟಳೆ.

"ಯೇಳೂರಿನಿಂದ ಆರೊಬ್ಬರೂ ಬಲ್ಲಾಳುಗಳಿಗೆ ಆರುವಾರವ ಯಿರಿಸಬಾರದು. ಮೂಲವ ನೀರನೆರದು

* ಶೃಂಗಾರ್, ಕಡಿಯಾಳಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ, ಕಡಿಯಾಳಿ, ಉಡುಪಿ. ೫೭೬ ೧೦೨

ಕೊಡಬಾರದು ಯೇಳೂರ ಒಳಗೆ ಆರುವಾರವ ಹಿಡಿದಂಥಾ ಪತ್ರವ ಕೊಂಡು ಹೋಗಿ ಬಲಾಳುಗಳಿಗೆ ಕುಡಬಾರದು" (ಶಾಸನ ಸಾಲುಗಳು ೧೧-೧೪).

ಈ ಕಟ್ಟಳೆಯ ಸ್ವಾರಸ್ಯ ವಿಷಯವೆಂದರೆ:

"ಮಾವನ ಕೂಡೆ ಅಳಿಯ ಮುನಿದು ಹೋಗಿ ಆರುವಾರವ ಯಿರಿಸಬಾರದು, ನೀರನೆರದು ಮೂಲವ ಕುಡಬಾರದು. ಸಾಲವ ಕೇಳಬಾರದು/ಅಳಿಯನ ಕೂಡೆ ಮಾವ ಮುನಿದು ಹೋಗಿ ಆರುವಾರವ ಯಿರಿಸಿ ಮೂಲವ ನೀರನೆರೆದು ಕೊಟು ವಸ್ತುವ ಕೊಳಬಾರದು, ಸಾಲವ ಕೊಳಬಾರದು" (ಸಾಲುಗಳು ೧೪-೧೭)

ಕಟ್ಟಳೆ ಇಷ್ಟಕ್ಕೆ ನಿಲ್ಲದೆ ಮತ್ತು ಮುಂದುವರೆಯುತ್ತದೆ - "ಯೇಳೂರ ಒಳಗೆ ಉಳಂಥಾ ಮೂಲಿಗರು ಹೋಗಿ ಬಲಾಳುಗಳ ಕಯ್ಯಲು ಯೇಳೂರ ಒಳಗೆ ಉಳ ಭೂಮಿಯನು ಜೋಳವ ಕೊಳ ಸಲ್ಲದು" (ಸಾಲುಗಳು ೧೭-೧೮)

ಯೇಳೂರ ಚತುಸ್ಸೀಮಿಯಲ್ಲಿರುವ ಯಾರೊಬ್ಬರೂ ಇದನ್ನು ಮೀರುವಂತಿಲ್ಲ. "ಕಾರ್ಪಣ್ಯನು ಯಿ ಅಢಕವನು ಮೀರಿ ಕೊಟ ಆದರೆ ಆತನ ಭೂಮಿ ಅರಸಿಂಗೆ ಹರವರಿ, ಅರಸಿಂಗೆ ತಪು ಸಾವಿರ ಹೊಂನು ಒಂದು ತಲೆ, ಯಿ ನಾಡ ಕಟಳೆಯಿಂದ ಹೊರಗು". (ಸಾಲುಗಳು ೨೧-೨೩). ಅಂದರೆ ಈ ಕಟ್ಟಳೆಯನ್ನು ಮೀರಿ ಕಾರ್ಪಣ್ಯನು ಕೊಟ್ಟರೆ (ವ್ಯವಹಾರ ನಡೆಸಿದರೆ) ಅವನ ಭೂಮಿ ಅರಸನಿಗೆ ಸೇರುವುದು. ಆತ ಒಂದು ಸಾವಿರ ಹೊಂನು ಮತ್ತು ಒಂದು ತಲೆಯನ್ನು ತಪ್ಪುದಂಡವಾಗಿ ತೆರಬೇಕು. ಅಲ್ಲದೆ ಆತ ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡುತ್ತಾನೆ.

ಕಟ್ಟಳೆಯ ಮುಂದಿನ ಭಾಗ ಇನ್ನೂ ಪ್ರಮುಖವಾದ ಅಂಶವನ್ನು ಹೊಂದಿದೆ. ಇದು ಬಲ್ಲಾಳನಿಂದ ಜನರಿಗೆ ಆಗುತ್ತಿದ್ದ ತೊಂದರೆಯ ಪರಾಕಾಷ್ಠತೆಯನ್ನು ಸೂಚಿಸುತ್ತದೆ. "ಈ ಕಟ್ಟಳೆಯನ್ನು ಮೀರಿದವನನ್ನು ಯಾರಾದರೂ ಕೊಂದರೆ ಕೊಂದವನಿಗೆ ಯಾವ ದೋಷವೂ ಇಲ್ಲ. ಹೀಗೆ ಸತ್ತವನ ಸಂಪತ್ತು, ಆಸ್ತಿ ಎಲ್ಲವೂ ಸರ್ಕಾರಕ್ಕೆ. ಆತನ ಬಂಧುಗಳಾದರೂ ಇದರ ಮೇಲೆ ಅಧಿಕಾರ ಸ್ಥಾಪಿಸುವಂತಿಲ್ಲ. ಈ ಕಟ್ಟಳೆಯನ್ನು ಅರಸು ಬಾಳಿಸಿ ಕೊಡುವನು, ಆತ ತಪ್ಪಿದರೆ ನಾವು ಕೆಡುವೆವು" ಎಂದು ಶಾಸನ ತಿಳಿಸುತ್ತದೆ.

ಏಳುನಾಡಿನ ಸಭೆಗಳೂ, ಸಮಸ್ತರೂ ಕೂಡಿ ಮಾಡಿಕೊಂಡ ಈ ಒಪ್ಪಂದವನ್ನು ಬಂಗ ಮತ್ತು ಚೌಟ ಅರಸರ ಸಮಕ್ಷಮದಲ್ಲಿ ಶಾಸನಾಂಕಿತಮಾಡಲಾಯಿತು. ಆನಂತರ ಮೂಡಬಿದುರೆಯ ಗಣಪಣ್ಣ ಅಧಿಕಾರಿ ಮತ್ತು ಬಿರುಮಣ್ಣ ಚೌಟ ಗೊಡಗೂಡಿ ಮಂಗಳೂರಿನ ರಾಜ್ಯಪಾಲ ಬಸವಣ್ಣ ಒಡೆಯರಲ್ಲಿ ಈ ಕುರಿತು ಬಿನ್ನಹ ಮಾಡಲಾಯಿತು. ರಾಜ್ಯಪಾಲನಿಂದ ಈ ಶಾಸನ ಕಟ್ಟಳೆಗೆ ಅನುಮತಿ ಹಾಗು ಅದರ ರಕ್ಷಣೆಯ ಆಶ್ವಾಸನೆ ದೊರೆಯಿತು. ಒಂದು ವೇಳೆ ನಿರೀಕ್ಷಿತ ಆಶ್ವಾಸನೆ ರಾಜ್ಯಪಾಲನಿಂದ ದೊರೆಯದೆ ಇದ್ದಿದ್ದರೆ ಯೇಳು ನಾಡಿನ ಜನರ ಪರಿಸ್ಥಿತಿ ಹೀನಾಯ ಮಟ್ಟಕ್ಕೆ ಇಳಿಯುತ್ತಿತ್ತು.

ಇಲ್ಲಿ ಹೆಸರಿಸಿರುವ ಬಿರುಮಣ್ಣನು ಚೌಟ ವಂಶದಲ್ಲಿ ಹೊಸದಾಗಿ ಕಂಡುಬಂದಿರುವ ರಾಜ. ಆದರೆ ಬಂಗರ ಉಲ್ಲೇಖ ವಿದ್ದರೂ ಶಾಸನದಲ್ಲಿ ಅವನನ್ನು ಹೆಸರಿಸಿಲ್ಲ. ದೊರೆಯುವ ಇತರ ಆಧಾರಗಳ ಮೇಲೆ ಈತ ಪಾಂಡ್ಯಪ್ಪರಸ ಬಂಗ ಎಂದು ಊಹಿಸಬಹುದು.[೩]

ಶಾಸನದಲ್ಲಿ ಹೆಸರಿಸಿರುವ ಕಾರ್ಪಣ್ಯ ಯಾರೆಂದು ತಿಳಿಯುವುದಿಲ್ಲ. ಇಲ್ಲಿ ಉಲ್ಲೇಖವಾಗಿರುವ ರೀತಿ ನೋಡಿದರೆ ಪ್ರಾಯಶಃ ಈತ ಬಲ್ಲಾಳನ ಸಹವರ್ತಿ ಇರಬೇಕು. ಕಾರ್ಪಣ್ಯ ಎಂದರೆ ಮೋಸಗಾರ ಎಂಬ ಅರ್ಥವೂ ಇದೆ.

ಶಾಸನ ಒಪ್ಪಂದ-ಕಟ್ಟಲೆಗಳಿಗೆ ಮುಖ್ಯ ಕಾರಣ ಬಲ್ಲಾಳ. ಆದರೆ ಈತ ಯಾರು, ಹೆಸರೇನು, ಯಾವ ಭಾಗದಿಂದ ಅಧಿಕಾರ ನಡೆಸುತ್ತಿದ್ದ ಎಂಬಿತ್ಯಾದಿ ವಿವರಗಳು ಶಾಸನದಲ್ಲಿ ಇಲ್ಲ. ಏಳು ನಾಡುಗಳಿಗೆ ತೀರ ಸಮೀಪದ ಭಾಗದಿಂದ ಈತ ಕಾರ್ಯಾಚರಣೆ ನಡೆಸುತ್ತಿದ್ದಿರಬೇಕು. ಸುಲಿಗೆ, ದರೋಡೆ, ಕಿಚ್ಚಿಡುವುದು ಇತ್ಯಾದಿ ಪುಂಡಾಟಿಕೆಯ ಕಾರಣಗಳಿಂದ ಈತ ಕುಖ್ಯಾತನಾಗಿದ್ದ. ಇವನ ನಿಗ್ರಹವೇ ಒಂದು ಸಮಸ್ಯೆಯಾಗಿ ಪರಿಣಮಿಸಿದಾಗ ಏಳುನಾಡು ಜನರೆಲ್ಲಾ ಸಭೆ ಸೇರಿ ಕಟ್ಟಳೆ ಮಾಡಿಕೊಂಡರು. ಈ ಅತೀ ಮುಖ್ಯವಾದ ಸಭೆ ನಡೆದದ್ದು ಪ್ರಾಯಶಃ ಇರ್ವತ್ತೂರಿನ ಶ್ರೀ ಗೋಪಾಲಕೃಷ್ಣ ದೇವಾಲಯದಲ್ಲಿ. ಹಾಗಾಗಿ ಶಾಸನಕಲ್ಲು ದೇವಾಲಯದಲ್ಲಿದೆ.

ಜನಜನಿತವಾದ ಕಥೆಯೊಂದರ ಪ್ರಕಾರ 'ಏಳುನಾಡು ಕಾಪಿಟ್ಟು ಹೆಗ್ಗಡೆ' ಎಂಬ ಅಧಿಕಾರಿ ಕಾರ್ಕಳದಲ್ಲಿದ್ದ. ಈತ ದರ್ಪಿಷ್ಟನೂ, ಕ್ರೂರಿಯೂ ಆಗಿದ್ದ. ಈತನ ಉಪಟಳ ತಾಳಲಾರದೆ ಜನರು ಹೊಂಬುಜದ ಶಾಂತರ ರಾಜನಲ್ಲಿ ವಿನಂತಿಸಿದರು. ಆತ ಸೈನ್ಯ ಸಮೇತನಾಗಿ ಬಂದು ಹೆಗ್ಗಡೆಯನ್ನು ಸೋಲಿಸಿ, ಅಧಿಕಾರ ಭ್ರಷ್ಟನನ್ನಾಗಿ ಮಾಡಿದ. ಆನಂತರ ಕಾರ್ಕಳದಲ್ಲೆ ನೆಲೆಸಿ ಏಳುನಾಡುಗಳ ಶಾಂತಿ ರಕ್ಷಣೆ ಮಾಡಿದ. ಹೀಗೆ ಪ್ರಾರಂಭ ವಾಯಿತು ಕಾರ್ಕಳದ ರಾಜವಂಶ.[೪]

ಆದರೆ ಈ ಘಟನೆ ನಡೆದ ಕಾಲಕ್ಕೂ ಹಲವು ಶತಮಾನಗಳಷ್ಟು ಹಿಂದೆ ಕಾರ್ಕಳದಲ್ಲಿ ರಾಜವಂಶ ಇತ್ತು ಎನ್ನುವುದು ಸಂಶೋಧನೆಗಳಿಂದ ಬೆಳಕಿಗೆ ಬಂದಿದೆ. ಹಾಗಾಗಿ ಕಾರ್ಕಳಕ್ಕೆ ಸಂಬಂಧಪಟ್ಟಂತೆ ಈ ಕಥೆಯಲ್ಲಿ ಹುರುಳಿಲ್ಲ. ಅದೂ ಅಲ್ಲದೆ ಶಾಸನದಲ್ಲಿ ಬಂಗರು ಮತ್ತು ಚೌಟರನ್ನು ಹೆಸರಿಸಿದೆಯೇ ಹೊರತು ಶಾಂತರರನ್ನಾಗಲೀ, ಕಾರ್ಕಳದ ಅರಸರನ್ನಾಗಲೀ ಹೆಸರಿಸಿಲ್ಲ.

ಈ ಶಾಸನದಲ್ಲಿ ಏಳುನಾಡುಗಳಿವೆ. ಕಥೆಯಲ್ಲೂ ಏಳುನಾಡುಗಳಿವೆ. ಒಂದೇ ವ್ಯತ್ಯಾಸವೆಂದರೆ ಶಾಸನದಲ್ಲಿ ಬಲ್ಲಾಳನಿದ್ದರೆ ಈ ಕಥೆಯನ್ನು ಹೆಗ್ಗಡೆ ಬರುತ್ತಾನೆ. ಶಾಸನದಲ್ಲಿ ಎಲ್ಲ ವಿವರಗಳನ್ನು ಸ್ಪಷ್ಟವಾಗಿ ಕೊಟ್ಟ ಬಲ್ಲಾಳನ ಹೆಸರು ಮತ್ತು ಸ್ಥಳಗಳನ್ನು ಕೊಡದಿರುವುದು ದುರದೃಷ್ಟಕರ. ಹಾಗಾಗಿ ಶಾಸನ ವಿಚಾರಕ್ಕೂ ಕಥೆಗೂ ತಾಳೆ ನೋಡುವುದು ಕಷ್ಟವಾಗುತ್ತದೆ.

ಈಗ್ಗೆ ಕೆಲವರ್ಷಗಳ ಹಿಂದೆ ಬೋಳಗ್ರಾಮದಲ್ಲೊಂದು ಶಾಸನ ಪತ್ತೆಯಾಯಿತು. ಇದರ ಕಾಲ ಕ್ರಿ.ಶ. ೧೩೫೫. ವಿಜಯನಗರ ಚಕ್ರವರ್ತಿ ವೀರಬುಕ್ಕರಾಯನ ಕಾಲದ ಶಾಸನ ಇದು. ಆಗ ಗೋಪರಸ ವೊಡೆಯನು ಬಾರಕೂರು ರಾಜ್ಯದ ರಾಜ್ಯಪಾಲನಾಗಿದ್ದ. ಈತ ಬೋಳದ ದೇಸಿಂಗರಸನಿಗೆ ಬರಸಿಕೊಟ್ಟ ಶಾಸನ ಇದು. ಆಶ್ಚರ್ಯವೆಂದರೆ ಇರ್ವತೂರು ಶಾಸನದ ರೀತಿಯಲ್ಲೇ ಈ ಶಾಸನವೂ ಇಬ್ಬರು ಬಲ್ಲಾಳುಗಳ ಮೇಲೆ ತಪ್ಪಿನ ಆರೋಪಕ್ಕಾಗಿ ಬಹಿಷ್ಕಾರದ ಕಟ್ಟಳೆ ಆದುದನ್ನು ತಿಳಿಸುತ್ತದೆ. ರಾಜ್ಯಪಾಲ ಗೋಪರಸ ವೊಡೆಯನೆ ಸ್ವತಃ ಬಹಿಷ್ಕಾರದ ಆಜ್ಞೆ ಹೊರಡಿಸಿದ್ದಾನೆ. ಇದಕ್ಕೆ ತಪ್ಪಿದವರು "ಅರಮನೆಗೆ ವೊಬ್ಬನ ತಲೆ ಅಯಿದು ಸಾವಿರ ಹೊಂನ ತಪ್ಪ ತೆರುವರು" ಎಂದೂ ಆಜ್ಞೆ ಮಾಡಿದ.

ಈ ಶಾಸನದಿಂದ ವೇದ್ಯವಾಗುವ ಒಂದು ಅಂಶವೆಂದರೆ - ಬೋಳ, ಕಾಂತಾವರ ನಾಡುಗಳ ಸುತ್ತ ಮುತ್ತ ಬಲ್ಲಾಳುಗಳ ಹಾವಳಿ ಹೆಚ್ಚಾಗಿತ್ತು. ಇವರಿಂದ ಪದೇ ಪದೆ ತೊಂದರೆಗೊಳಗಾದ ಜನ ರಕ್ಷಣೆಗಾಗಿ ರಾಜನಲ್ಲಿ ಬಿನ್ನಹ ಮಾಡುತ್ತಿದ್ದರು. ರಾಜನ ಆಜ್ಞೆ ಮೇರೆಗೆ ರಾಜಪ್ರತಿನಿಧಿಯು ಜನರ ರಕ್ಷಣೆ ಮಾಡುತ್ತಿದ್ದ. ಕೊಳಕೆ ಇರ್ವತ್ತೂರಿನ ಶಾಸನ ಇಂತಹುದೇ ಪರಿಸ್ಥಿತಿ ಮರುಕಳಿಸಿರುವುದನ್ನು ತಿಳಿಸುತ್ತದೆ. ಜನರು ಎಚ್ಚೆತ್ತು ತಮ್ಮ ರಕ್ಷಣೆಗೆ ತಾವೇ ಮುಂದಾಗಿರುವುದು ಒಂದು ವಿಶೇಷ. ಶಾಸನದಲ್ಲಿ "ಬಲ್ಲಾಳುಗಳ ಒತುತ ತುಪುನವಾದಲ್ಲಿ" ಎಂದು ಹೇಳಿರುವುದನ್ನು ಗಮನಿಸಿದರೆ ಪ್ರಾಯಶಃ ಇಲ್ಲಿ ಇಬ್ಬರು ಅಥವಾ ಹೆಚ್ಚು ಜನ ಬಲ್ಲಾಳುಗಳು ಇದ್ದರು. ಕೇಡನ್ನುಂಟುಮಾಡುವ ಪ್ರವೃತ್ತಿಯ ಈ ಬಲ್ಲಾಳುಗಳು ಬೋಳಶಾಸನದ ಬಲ್ಲಾಳುಗಳೊಂದಿಗೆ ಹೋಲಿಕೆ ಯುಳ್ಳವರಾಗಿದ್ದಾರೆ. ಅಷ್ಟೇ ಅಲ್ಲ ಅದೇ ಮನೆತನದವರಾಗಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಕಾರ್ಪಣ್ಯಂ ನಂತಹ (ಮೋಸಗಾರ)[೫] ವ್ಯಕ್ತಿಗಳು ಆಗಲೂ ಇದ್ದರು ಎಂಬುದು ಶಾಸನದಿಂದ ತಿಳಿದು ಬರುತ್ತದೆ.

ಈ ರೀತಿಯಲ್ಲಿ ಏಳುನಾಡಿನ ಜನ ತಮ್ಮ ರಕ್ಷಣೆಗಾಗಿ ಒಂದು ಕಟ್ಟಲೆಯ ಕೋಟೆಯನ್ನು ತಾವೇ ಕಟ್ಟಿಕೊಂಡರು. ದುಷ್ಟನೂ, ದರ್ಪಿಷ್ಟನೂ ಮತ್ತು ಪ್ರಬಲನೂ ಆದ ಬಲ್ಲಾಳನನ್ನು ನೇರವಾಗಿ ಎದುರಿಸಲು ಸಾಧ್ಯವಾಗದಿದ್ದರೂ, ಏಳು ನಾಡ ಸಭೆ ಈತನ ಮೇಲೊಂದು ಕಟ್ಟಳೆಯ ದಂಡವನ್ನು ವಿಧಿಸಿದೆ. ಅದೇನೆಂದರೇ "ಯೀ ನಾಡಿಂಗೆ ಮಾಡಿದಂಥ ಸಂಕೇತವನ್ನೂ ಬಲ್ಲಾಳರು ತಪ್ಪರು. ಕಾಂರ್ಪಣ್ಯರ ಮಾತಕೇಳಿ ಮೀರಿ ಯೇಳೂರ ನಾಡ ಒಳಗೆ ಕಯಿಕಿದರಾದರೆ ಅರಸಿಂಗೆ ತಪ್ಪ ಹಂನೆರಡು ಸಾವಿರ ಹೊಂನು ಹಂನೆರಡು ತಲೆ"ಯನ್ನು ದಂಡವಾಗಿ ತೆರಬೇಕು.

ಸೋಜಿಗವೆಂದರೆ ಈ ತಪ್ಪುದಂಡವನ್ನು ಜಾರಿಗೊಳಿಸಿ ವಸೂಲು ಮಾಡುವ ಜವಾಬ್ದಾರಿ ಅರಸನದು (ಅಂದರೆ ಅವನ ಪ್ರತಿನಿಧಿಯಾದ ಮಂಗಳೂರು ರಾಜ್ಯಪಾಲನದು). ಹೀಗೆ ಮಾಡುವ ಮೂಲಕ ಅರಸನು ಏಳುನಾಡು ಸಭೆ ಮಾಡಿದ ಸಂಕೇತ (ಕಟ್ಟುಪಾಡು)ಗಳನ್ನು ಬಾಳಿಸಿ ಕೊಡುವನು. ಒಂದು ವೇಳೆ ಅರಸ ಈ ರೀತಿ ರಕ್ಷಣೆವೊದಗಿಸದಿದ್ದರೆ "ಯೇಳೊರನಾಡ ನಾಲು ಯೇಕತ್ರದಲಿ ಕೆಡುವೆವು" ಎಂದೂ ಸಭೆ ಕಳಕಳಿಯ ವಿನಂತಿಯನ್ನು ರಾಜನಲ್ಲಿ ಮಾಡಿದೆ. ಇದು ಏಳೂರನಾಡ ಜನ ಸಮುದಾಯ ಅನುಭವಿಸುತ್ತಿದ್ದ ತೀರ ಅಸಹಾಯಕ, ದುರ್ಭರ ಹಾಗೂ ಅನಿಶ್ಚಿತ ಜೀವನದ ಸ್ಪಷ್ಟ ಚಿತ್ರವನ್ನು ಕೊಡುತ್ತದೆ.

ಈ ಪರಿಸ್ಥಿತಿಯಲ್ಲಿ ಜನ ದೇವರ ಮೊರೆ ಹೋಗುವುದು ಸಹಜ. ಶಾಸನದಲ್ಲಿ ಯಿಟಲದ ಮಹಾದೇವ ಮತ್ತು ಪಿರುನಳದ ಬ್ರಂಹ್ಮರನ್ನು ಹೆಸರಿಸಲಾಗಿದೆ. **ಯಿಟಲ** ಈಗಿನ ವಿಟ್ಲಗ್ರಾಮ. ಆದರೆ **ಪಿರುನಳ** ಯಾವ ಊರೆಂದು ಗೊತ್ತಾಗುವುದಿಲ್ಲ. ಸಮಾಜದ ಎಲ್ಲ ವರ್ಗದವರಿಗೆ ಮಿಗಿಲಾಗಿ ಕೆಳವರ್ಗದವರಿಗೆ ದೇವರ ಬಗೆಗಿನ ಶ್ರದ್ಧೆ ಎಷ್ಟು ಮುಖ್ಯವೊ ಅಷ್ಟೇ ಮುಖ್ಯವಾದುದು ದೈವಗಳ ಬಗೆಗಿನ ಶ್ರದ್ಧೆ-ಭಕ್ತಿ. ಈ ಭಾಗದ ಜನರ ಧಾರ್ಮಿಕ ಭಾವನೆಯನ್ನು ಶಾಸನದಲ್ಲಿ ಹೆಸರಿಸಿರುವ ದೇವ ಮತ್ತು ದೈವಗಳು ಪ್ರತಿನಿಧಿಸುತ್ತವೆ.

ಒಟ್ಟಿನಲ್ಲಿ ಆಗಿನ ಕಾಲದ ದಕ್ಷಿಣ ಕನ್ನಡದ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಚಿತ್ರಿಸುವ ಇಂತಹ ಶಾಸನ ಅಪರೂಪ. ಈ ನಿಟ್ಟಿನಲ್ಲಿ ಕೊಳಕೆ ಇರ್ವತ್ತೂರಿನ ಶಾಸನ ಅತ್ಯಂತ ಪ್ರಾಮುಖ್ಯವಾದುದು.

ಶಾಸನ ಪಾಠ

ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಪ್ರಾಕಾರದಲ್ಲಿ ಜಗತಿಯ ಎಡ (ನಮ್ಮ ಬಲ) ಭಾಗದಲ್ಲಿ ನಟ್ಟಿರುವ ಕಲ್ಲು.

ಕಾಲ : ಶಕವರುಷ ೧೩೨೬ನೆಯ ವಿಕ್ರಮ ಸಂವತ್ಸರ, ವೈಶಾಖ ಶು ೧ ಸೋಮವಾರ ಕ್ರಿ.ಶ. ೧೪೦೦ ಏಪ್ರಿಲ್ ೨೧, ಆದಿತ್ಯವಾರ (ಸೋಮವಾರ ಅಲ್ಲ)

೧ 卐 ಸ್ವಸ್ತಿ ಶ್ರೀ [11*] ನಮಸ್ತುಂಗ ಸಿ (ಶಿ) ರಶ್ಚುಂಬಿ ಚಂದ್ರ ಚಾಮರ ಚಾರವೇ (ವೆ) ತ್ರೈಲೋಕ್ಯನ -

೨ ಗರಾರಂಭಂ ಮೂಲಸ್ತಂಭಾಯ ಶಂಭವೆ॥ ಸ್ವಸ್ತಿಶ್ರೀ ಸ (ಶ) ಕವರು ಶ (ಷ)
೩ ೧೩೨೩ನೆಯ ವಿಕ್ರಮ ಸಂವತ್ಸರದ ವಯಿಶಾಖ ಸು(ಶು) ೧ ಸೋಮವಾರದಲು ಶ್ರೀ ಮಂನ್ಮ(ನ್ಮ) ಹಾರಾಜಾಧಿರಾಜ ರಾಜ
೪ ಪರಮೇಶ್ವರ ಶ್ರೀ **ವೀರ ಹರಿಹರ** ಮಹಾರಾಯರು ರಾಜ್ಯಾದ್ಭುಯ (ರಾಜ್ಯಾಭ್ಯುದಯ) ಉತ್ತರೋತ್ತರ ಉಂ್ರ(ಚಂ)ದ್ರಾರ್ಕ್ಕ ತಾರಂ ಬ-
೫ ರ ವಿರಲು ತಪ್ಪಾದ (ತತ್ಪಾದ) ವಿದ್ಮೊಪ (ಪದ್ಮೋಪ) ಜೀವಿ ಮಂಗಲೂರ ರಾಜ್ಯಪಾಲಕ **ಬಸವಂಣ ಒಡೆಯರ** ನಿರೂಪದಿಂದ
೬ ಗಣಪಂಣ ಆದಿ (ಅದಿ) ಕಾರಿ ಆದಿ (ಅಧಿ)ಕಾರವ ಮಾಡುವ ಕಾಲದಲಿ **ಬಂಗರು ಚಉಟರ** ಸಮಕ್ಷದಲು ಯೆಳುರ (ಯೇಳೂರ) ಚ-
೭ ತು ಸೀಮೆಯ ಒಳಗೆ ಉಳ **ಕೆಲಂಪುತ್ತಿ ನಲೂರು ರಂಜಳ ಯಿರುವತೂರು ಚಾನೂರು ಚಾಮಾ**
೮ **ರ ನೆಲಿಕಾರು** ಅಂತ್ತು (ಅಂತು) ಯಿ ಯೇಳೂರ ಒಳಗೆ ಉಳ ಹೊರಹಿನವರು ನೆಲದವರು ಸಭೆಗಳು ಒಳಗಾ
೯ ದ ಸಮಸ್ತ ಪ್ರಜೆಗಳು ಕೂಡಿ ತಂಮ ಒಳಗೆ ತಾಲು ಯೋಕತ್ರವಾಗಿ **ಬಲಾಳುಗಳ** ಒತುತ ತುಪುನ ವಾ-
೧೦ ದಲ್ಲಿ ಮಾಡಿದ[೧] ಆ (ಅ)ಡಕ ಪತ್ರದ ಶಾಸನದ ಕ್ರಮವೆಂತೆಂದರೆ ನಂಮ ಯೇಳೂರ ಒಳಗೆ ಆ (ಅ) ರಸಿ
೧೧ ಂಗೆ ದೇಶವಲ್ಲದೆ ಬಲಾಳಿಂಗೆ ವ್ರಿತ್ತಿಯಿಲ್ಲ [।।*] ಬಂಟಂಗೆ ಜೋಳವಿಲ್ಲ [।*] ಯೇಳೂರಿಂದ ಆರಾ(ರೊ)ಬ್ಬರು
೧೨ ಬಲಾಳುಗಳಿಗೆ ಆರುವಾರವ ಯಿರಿಸಬಾರದು [।*] ಮೂಲವ ನೀಱ ನೆಱದು ಕುಡಬಾರದು [।*]
೧೩ ಯೇಳೂರ ಒಳಗೆ ಆರುವಾರವ ಹಿಡಿದಂಥಾ ಪತ್ರವ ಕೊಂಡು ಹೋಗಿ ಬಲಾಳುಗ
೧೪ ಳಿಗೆ ಕುಡಬಾರದು [।।*] ಮಾವನ ಕೂಡೆ ಅಳಿಯ ಮುನಿದು ಹೋಗಿ ಆರುವಾರವ[೨] ಯಿರಿ
೧೫ ಸಬಾರದು [।*] ಮೂಲವ ಕುಡಬಾರದು [1*] ಸಾಲವ ಕೊಳಬಾರದು [1*] ಅಳಿಯನ ಕೂಡೆ
೧೬ ಮಾವ ಮುನಿದು ಹೋಗಿ ಆರುವಾರವ ಯಿರಿಸಿ ಮೂಲವ ನೀರನೆಱು'ದು ಕೊಟು ವಸ್ತುವ ಕೊಳ ಬಾ
೧೭ ರದು [।*] ಸಾಲ ಕೊಳಬಾರದು [।*] ಯೇಳೂರ ಒಳಗೆ ಉಳಂಥಾ ಮೂಲಿಗರು ಹೋಗಿ ಬಲ್ಲಾಳುಗಳ ಕಯ್ಯಲು ಯೇಳೂ
೧೮ ರ ಒಳಗೆ ಉಳ ಭೂಮಿಯನು ಜೋಳವ ಕೊಳ ಸಲ್ಲದು [।।*] ಯೇಳೂರ ಚತುಸೀಮೆ ಪಡುವಲು ನೆಡೆಯ ಸಂದು ತಾ
೧೯ ಡಗಿ ಮೂಡ ಮುಂತಾಗಿ ಪುಡಿ (ದಿ) ಕೇರಿಯ ಮಲೆಯ ಮೂಡಣ ಕಡೆಯ ನಡುಘಟ ಪರಿಯಂತರ ತೆಂಕಲು
೨೦ ಕಲಿಟ್ಟಿ ಮೂಡೆಯ ಸಂದು ತೊಡಗಿ ಬಡಗ ಮುಂತಾಗಿ ನಾಲ್ಕು ನೆಲದ ಗಡಿ ಪರಿಯಂತರ ಯೀ ಚತು ಸೀ
೨೧ ಮೆಯ ಒಳಗೆ ಉಳಂಥಾ ದೇಶದ ಸಮಸ್ತ ಪ್ರಜೆಗಳಿಗೆ ಆವನಾನೊಬ್ಬ ಕಷ್ಟನು ಕಾರ್ಪಂಣ್ಯನು ಯಿ
೨೨ ಅಡಕವನು ಮಿಱೆ ಕೊಟರಾದರೆ ಆತನ ಭೂಮಿ ಆ (ಅ)ರಡಿಂಗೆ ಹರವರಿ ಆ (ಅ) ರಸಿಂಗೆ ತಪು ಸಾವಿರ
೨೩ ಹೊಂನು ಒಂದು ತಲೆ ಯಿ ನಾಡ ಕಟಳೆಯಿಂದ ಹೊರಗು [।।*] ಆವನಾನೊಬ್ಬನು ಯಿ ಅಡಕವ ತಪಿ
೨೪ ದವನು ಕೊಂದರೆ ಬಳಿಯ ಹಗೆಯಿಲ್ಲ [।*] ಬಂಧುವಿನ ಬ್ರಂಹ್ಮೇತಿ ಯಿಲ್ಲ [।*] ಸೆಟಿಯ ಸಂಕೇತವಿಲ್ಲ [।*]
೨೫ ಬ್ರಾಂಹ್ಮಣನ ಬ್ರಂಮೇತಿಯಿಲ್ಲ [।*] ಆವನಾನೊಂದು ಬಳಿಯ ಒಳಗೆ ಮೂಲೆ ಮುಡಿದರೆ ದೇಶವ ಹಾ
೨೬ ಯಿಕಿ ಓಡಿದರೆ ಆ ಬಾಳನು ಅರಸು ನಾಡು ಕೂಡಿ ಬಾಳಿಸಿ ಆ (ಅ) ರಸಿನ ರಾಜಾರ್ಥ್ಥವ ನಡಸುವರಲ್ಲದೆ
೨೭ ಬಂಧುಗಳ ಬಾಳು ತವ(ಮ)ಗೆಂದು ಸಮರ್ಥ್ಥರುಗಳು ಹೂಡ ಸಲ್ಲುದು [।।*] ಯೀ ನಾಡಿಗೆ ಮಾಡಿದಂಥಾ ಸಂಕೇತವನೂ
೨೮ ಬಲ್ಲಾಳುಗಳು ತೆ (ತ) ಪ್ಪರು [।।*] ಕಾರ್ಪ್ಪಂಣ್ಯರ ಮಾತಕೇಳಿ ಮಿಱೆ ಯೇಳೂರ ನಾಡ ಒಳಗೆ ಕಯಿ ಯಿಕೆದರಾದರೆ ಅರಸಿ
೨೯ **ಂಗೆ ತಪು ಹಂನೆರಡು ಸಾವಿರ ಹೊಂನು** [।*] **ಹಂನೆರಡು ತಲೆಯನು*** ತಪಕೊಂಡು ಆ (ಅ) ರಸು ನಂಮನಾಡನು ಸಂಕೇತಪಪದೆ ಬಾಳಿಸಿ
೩೦ ಕುಡುವರು [।।*] ಅರಸು ಬಾಳಿಸಿ ಕುಡದೆಯಿದರೆ ಯೇಳೂರ ನಾಡ ನಾಲು ಯೇಕತ್ರದಲು ಕೆಡುವೆಲು [।।*] ನಂಮ ನಾಡ
೩೧ ಒಳಗೆ ಆವನಾನೊಬ್ಬನು ನಂಮನಾಡ ಕಟಳೆಯ ಮಿಱಿ ನಂಮ ಸಂಘಾತ ಅರಸಿನ ಬಳಿಗೆ ಬಾರದಿ
೩೨ ದನಾದರೆ ಆ (ಅ) ವನ ಬಾಳು ಹರವರಿ ನಾಡಿಂದ ಹೊಱಗು [।।*] ಒಬರು ಕಂಡರೆ ಕೂಗುದು [।।*] ಯಿಬ್ಬರು ಕಂಡರೆ ಹೊ
೩೩ ಯಿ ಉದು [।।*] ಯಿ ಮಾಡಿದಂಥಾ ಸಂಕೇತ ದಂರ್ಮ ಶಿಲಾ ಶಾಸನವನೂ **ಬಸವಂಣ ಒಡೆಯರಿಗೆ**
೩೪ **ಬಿರುಮಂಣ ಚಉಟರು** ಗಣಪಂಣ ಅಧಿಕಾರಿಗಳು ಕೂಡಿ ಬಿಂನಹ ಮಾಡಿ ಸಂಕೇತದ ಕ
೩೫ ಲನೂ ನಡೆಸಿಕೊಟರಾಗಿ ಯಿ ಕಟಳೆಯನೂ ತಪದೆ ನಾಡನೂ ಬಾಳಿಸುವರು [।।*] ಯಿ ಸಂಕೇತಕೆ ಆ (ಅ)
೩೬ ರಸು ತಪ್ಪರು [।*] ಕಾರ್ಪ್ಪಂಣ್ಯರ ಮಾತಕೇಳಿ ವಸುವಿಂಗೆ ಕಿವಿ ಒಡಿ ಹೊರಗೆ ಆವನಾನೊಬ್ಬಂಗೆ ವಚನವ ಕೊ
೩೭ ಟರೆ ವಾರಣಾಸಿಯಲಿ ಹಂನೆರಡು ಸಾವಿರ ಮಂದಿ ಬ್ರಾಹ್ಮರು ಹಂನೆರಡು ಸಾವಿರ ಕಪಿಲೆಯ
೩೮ ವದಿಸಿದ ದೋಶ್ಯ (ಶ) [।*] ಯೇಳೂರ ನಾಡ ಒಳಗೆ ಉಳಂಥಾ ಕಾಂತಾರ ಮೊದಲಾಗಿ ಉಳಂಥಾ ದೇವಸ್ತಾನ
೩೯ ವ ಆ (ಅ) ಳಿದ ದೋಶ [।।*] ನಾಡ ಒಳಗೆ ಬ್ರಾಂಹ್ಮಣ ಮೊದಲಾಗಿ ಉಳಂಥಾ ಪ್ರಜೆಯ ಕ್ಷೋಭೆ ಮುಟೂದು
೪೦ ಯೆಂದು ಮಾಡಿದಂಥಾ ಧರ್ಮ ಸಂಕೇತ [।।*] ನಂಮನಾಡನೂ ಆವನಾನೊಬ್ಬನು ತಪ್ಪರು [।।*] ಕಾರ್ಪ್ಪಂ
೪೧ ಣ್ಯರು ಕೆಡಿಸೀ ಉ ಯೆಂದು ಯೆಣಿಸಿದರಾದರೆ ಚಉಟರು ಆ (ಅ) ರಸಿಂಗೆ ಬಿಂನಹಂ ಮಾಡಿ ನಾಡಸಿಕನು
೪೨ ಪರಿಹರಿಸಿ ಬಾಳಿಸಿ ಕುಡುವರು [।।*] **ಕಾಂತಾರದ ನಾಡುಗ್ರಾಮದ** ಒಳಗೆ ಲೇಸು ಹಾ (ಹ) ಲ್ಲೆಯ ಯೆ
೪೩ ಡತಾಟುತಾದರೆ ಯೇಳೂರ ನಾಡು ನಾಲು ಯೇಕತ್ರದಲು ಆ (ಅ) ಲಿಗೆ ಒದಗುವ ಟ (ದು) ಯೇಳೂರ ಒಳಗೆ ಕಾರಿಯ

---

೧. 'ದ' ಅಕ್ಷರವನ್ನು ಸಾಲಿನ ಕೆಳಗೆ ಸಣ್ಣ ಅಕ್ಷರದಲ್ಲಿ ಬರೆದಿದೆ.
೨. 'ವ' ಅಕ್ಷರವನ್ನು ಸಾಲಿನ ಮೇಲೆ ಸಣ್ಣ ಅಕ್ಷರದಲ್ಲಿ ಬರೆದಿದೆ.
* **ಹಂನೆರಡು ತಲೆಯನು** - ಪದಗಳನ್ನು ಸಾಲಿನ ಮೇಲೆ ಸಣ್ಣಕ್ಷರದಲ್ಲಿ ಬರೆದಿದೆ.

೪೪ ಕಾರಣ ಯೆಡೆ ತಾಟುತುದಕ **ಕಾಂತಾರದ** ಸ್ತಾನ ಮೊದಲಾಗಿ ನಾಡುಗ್ರಾಮ ಮೊದಲಾಗಿ ಲೇಸು ಹೊ

೪೫ ಲೆಯವನೂ ಕೂಡಿ ಅನುಭವಿಸುವೆಉ ಯೆಂದು ನಾಡು ಯೇಕತ್ರದಲು ಬರಸಿ ನಡಿಸುವ ಸಂಕೇತ

೪೬ ರ ಶ (ಶಿ) ಲಾಶಾಸನಕೆ ಭೂಮಿ ಚಂದ್ರನು ಉಳಂನ ಬರ ಆ (ಅ)ಳುವಿಲ್ಲ [॥*] ಯಿಂತಾ ಪುದಕೆ ಆ ನಾಡ ಒಪ **ಯಿಟಲದ ಶ್ರೀ ಮಹಾದೇವ**

೪೭ ರು ಪಿರುನಳದ ಬ್ರಹ್ಮರು [॥*] ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ [॥*] ನಂಮ ಯೇಳೂರ ಒಳಗೆ ಉಳಂಥಾ

೪೮ ಕಿಡುವಾಳು ಒಕಲುಗಳು ತೆಱಲಿ ಆಱದೆ ಹಾಯಿಕಿದ ಭೂಮಿ ಮೂಲೆ ಮುಡಿ

೪೯ ನೂ ಯೇಳೂರ ಒಳಗೆ ಉಳಂದಾ (ಥಾ) ಹೊರಹಿನವರು ನೆಲದವರು ಅರಸಿನ ಕೈಯ್ಯಲು ಗೇಣಿ ಒ-

೫೦ ವಲ್ಲದು [।*] ಒತಾಯದಲು ಹೂಡಬಾರದು ಹಿಂದೆ ಹೂಡಿದ ಕಿಡುವಾಳನು ಆ (ಅ) ರಸಿಂಗೆ ಒ-

೫೧ ಡಿಶ ಬಳಿಯವನ ಮೂಲವನೂ ನೀಱುಱದು ಹೊಱಗೆ ಮೂಲವ ಕುಡಬಾರದು [।*] ಖಂ

೫೨ ಪಾಲ ಕುಡಬಾರದು [।*] ಯಿ ಅಡಕವನೂ ಆವನಾನೊಬ್ಬ ಹೊರಹಿನವನು ನೆಲದವನು ಯಿ-

(ಶಾಸನ ಇಲ್ಲಿಗೆ ನಿಂತು ಅಪೂರ್ಣವಾಗಿದೆ)

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಈಗ್ಗೆ ಮೂರು ದಶಕಗಳ ಹಿಂದೆ ನನ್ನ ಸಂಶೋಧನಾತ್ಮಕ ಕ್ಷೇತ್ರಕಾರ್ಯದಲ್ಲಿ ಬೆಳಕಿಗೆ ಬಂದ ಶಾಸನಗಳಿವು.

೨. *A.R.S.I.E.* 1921-22 APPX-'A' Nos. 4,5,6 and 7; *A.R.S.I.E.* 1927-29 No. 392;
A.R.S.I.E. 1930-31 No.s 336 and 340; *A.R.S.I.E.* 1961-62 No. 627;
5.I I Vol. VII Nos. 228 and 273
Ramesh K.V.; *A History of South Kanara* - Dharwad 1970, *pp. 1960, 206, 210, 213, 217-20, 234-35*
Gururaja Bhat P., 1975., *Studies in Tuluva History and Culture,* Kallianpur, pp 66 and 77
ಕಾರ್ಕಳ ಒಂದು ಪ್ರಾದೇಶಿಕ ಅಧ್ಯಯನ - ಕಾರ್ಕಳ ೧೯೪೫; (ಅ) ಇತಿಹಾಸ ಪಿ. ಎನ್. ನರಸಿಂಹಮೂರ್ತಿ. ಪು. ೯, ೧೫-೧೬

೩. *S.I.I.,* Vol VII No. 259.

೪. **ಕಾರ್ಕಳ ಒಂದು ಪ್ರಾದೇಶಿಕ ಅಧ್ಯಯನ,** ಪು. ೧೨.

೫. ಕಪ್ಪನು, ಕಾರ್ಪ್ಪಂಣ್ಯನು - ಇದಕ್ಕೆ ನೀಚ, ಹೀನ, ಹಗೆ,
ಶತ್ರುತ್ವ, ತೊಂದರೆ, ಪೀಡೆ, ಅಧಮ, ಜಿಪುಣ, ಕೃಪಣ ಎಂಬಿತ್ಯಾದಿ ಅರ್ಥಗಳಿಸಿವೆ.
ಸಂಕ್ಷಿಪ್ತ ಕನ್ನಡ ನಿಘಂಟು., ೧೯೭೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೧೪೫, ೧೪೭.

ಡಾ. ಧನವಂತ, ಹಾಜವಗೋಳ*


ತುಂಗಳದ ವೀರಗಲ್ಲುಗಳು

ತುಂಗಳ ಈಗಿನ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಉತ್ತರ ದಿಕ್ಕಿನ ಕೊನೆಗೆ ಇರುವ ಒಂದು ದೊಡ್ಡ ಹಳ್ಳಿ. ಈ ಹೆಸರಿನ ಬೇರೆ ಹಳ್ಳಿ ಇದ್ದಂತಿಲ್ಲ. ಇದು ಮೂರುಕಡೆ ಕರಿಕಲ್ಲಿನ ಗುಡ್ಡ ಒಂದು ಕಡೆ ಮಾತ್ರ ಫಲವತ್ತಾದ ಎರೆಭೂಮಿಯನ್ನು ಹೊಂದಿರುವ ಆಯಕಟ್ಟಿನ ಸ್ಥಳವಾಗಿದೆ. ಇದು ಹನ್ನೆರಡನೆಯ ಶತಮಾನದ ಕಳಚೂರಿ ದೇಶರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ ಮೂವತ್ತು ಹಳ್ಳಿಗಳ ಮುಖ್ಯಕೇಂದ್ರವಾಗಿದ್ದಿತು.[೧] ಆ ಕಾಲದಲ್ಲಿ ಇದೊಂದು ಅಗ್ರಹಾರವಾಗಿದ್ದು. ಇದಕ್ಕೆ ಚೌಡಪ್ಪ ಭಟ್ಟೋಪಾಧ್ಯಾಯ ಮಹಾಪ್ರಭುವಾಗಿದ್ದನು.[೨] ಈ ಗ್ರಾಮದ ಮೂರು ಶಾಸನಗಳು ಪ್ರಕಟಗೊಂಡಿವೆ.[೩]

ಇತ್ತೀಚೆಗೆ ಇಲ್ಲಿ ಎರಡು ವೀರಗಲ್ಲುಗಳು ಪತ್ತೆಯಾದುವು. ಒಂದು 'ಉಪ್ಪಿನಮಾಳಿ'ಯಲ್ಲಿ; ಇನ್ನೊಂದು ರಾಮಲಿಂಗನ ಗುಡಿ ಸಮೀಪ. ಇವೆರಡು ತುಂಗಳದಲ್ಲಿ ದೊರಕಿದ ಪ್ರಾಚೀನಕಾಲದ ಮಹತ್ವದ ಶಿಲ್ಪಗಳೆನ್ನಬಹುದು. ಈ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಹಾಳು ಮಣ್ಣು, ತಗ್ಗು ದಿನ್ನೆಗಳಿಂದ ಕೂಡಿದ ಪ್ರದೇಶವೊಂದನ್ನು, 'ಉಪ್ಪಿನ ಮಾಳಿ' ಎಂದು ಕರೆಯುತ್ತಾರೆ. ಇದರ ಪಕ್ಕದಲ್ಲಿ ಹಳ್ಳವಿದೆ... ಈ ಸ್ಥಳ ಪ್ರಾಚೀನ ಕಾಲದಲ್ಲಿ ಮಧ್ಯವರ್ತಿಸ್ಥಳ ವಾಗಿತ್ತೆಂದು ತೋರುತ್ತದೆ. ಇಲ್ಲಿಯ ದಿನ್ನೆಯ ಮೇಲಿರುವ ಬೇವಿನ ಮರದ ಕೆಳಗೆ ಹುಲ್ಲುಗಿಡ ಗಂಟೆಗಳು ಬೆಳೆದಿವೆ. ಇವುಗಳ ಮಧ್ಯದಲ್ಲಿ ಈ ಮೊದಲನೆಯ ವೀರಗಲ್ಲು ದೊರಕಿದೆ. ಇದರ ಸುತ್ತ ಮುತ್ತ ಒಡೆದ ಇತರ ಶಿಲ್ಪಗಳೂ ಇವೆ. ಇದೊಂದು ಅಪರೂಪದ ವೀರಗಲ್ಲು ಆಗಿದೆ. ಆದರೆ ಈ ಶಿಲ್ಪದಲ್ಲಿ ಮಹಿಳೆಯೊಬ್ಬಳು ವೀರರೊಂದಿಗೆ ಹೋರಾಡುವ ಚಿತ್ರವಿರುವುದು ಗಮನಾರ್ಹ.

ಈ ವೀರಗಲ್ಲು ಮೂರು ಪಟ್ಟಿಕೆಗಳನ್ನು ಹೊಂದಿದೆ. ಮೊದಲನೆಯ ಕೆಳಪಟ್ಟಿಕೆಯಲ್ಲಿ ಏರುಗಚ್ಚೆ ಹಾಕಿ, ತುರುಬುಕಟ್ಟಿ ಕೈಯಲ್ಲಿ ಖಡ್ಗ ಹಿಡಿದು ಎದುರಾಳಿ ವೀರರಿಬ್ಬರ ಜೊತೆ ಹೋರಾಡುತ್ತಿರುವ ವೀರಮಹಿಳೆಯ (ಹಾಗೆ ತೋರುವ!) ಚಿತ್ರ ಮನಮೋಹಕವಾಗಿದೆ. ತನ್ನ ಸಂರಕ್ಷಣೆಗಾಗಿ ಹೋರಾಡುತ್ತಿ ರುವುದಂತೂ ಸ್ಪಷ್ಟವಿದೆ. ಈ ಹೋರಾಟದಲ್ಲಿ ಈಕೆ ವೀರಮರಣ ವನ್ನಪ್ಪಿದ್ದು ಆಕೆಯ ನೆನಪಿಗಾಗಿ ಈ ವೀರಗಲ್ಲನ್ನು ನಿಲ್ಲಿಸಿದಂತೆ ತೋರುತ್ತದೆ. ಈ ವೀರಗಲ್ಲಿನ ಮೇಲೆ ಈಕೆಯ ಹೆಸರು ಇತ್ಯಾದಿ ಯಾವುದೇ ಬರಹವಿಲ್ಲ.

ಈ ವೀರಗಲ್ಲಿನ ಎರಡನೆಯ ಪಟ್ಟಿಕೆಯಲ್ಲಿ ವೀರ ಸ್ತ್ರೀಮರಣ




ಹೊಂದಿದ ಈ ಮಹಿಳೆಯನ್ನು ಇಬ್ಬರು ಅಪ್ಸರ ಸ್ತ್ರೀಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಈ ವೀರ ಮಹಿಳೆ ಅಪ್ಸರ ಸ್ತ್ರೀಯರ ಹೆಗಲ ಮೇಲೆ ಕೈಹಾಕಿ ಸಾಗಿರುವುದನ್ನು ಚಿತ್ರಿಸಲಾಗಿದೆ.

ಮೂರನೆಯ ಪಟ್ಟಿಕೆಯಲ್ಲಿ ಮಧ್ಯ ಶಿವಲಿಂಗವಿದೆ. ಅದರ ಬಲಭಾಗದಲ್ಲಿ ಪದ್ಮಾಸನದಲ್ಲಿ ಕುಳಿತು 'ವೀರಸ್ತ್ರೀ' ಲಿಂಗಾರ್ಚನೆ ಮಾಡುತ್ತಿರುವ ದೃಶ್ಯವಿದೆ. ಇದರಿಂದ ಈಕೆ ಶೈವಧರ್ಮದವಳೆಂದು

* ರೀಡರ್, ಕನ್ನಡ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ - ೫೮೦ ೦೦೧

ತಿಳಿಯುತ್ತದೆ. ಈ ಶಿವಲಿಂಗದ ಎಡಭಾಗಕ್ಕೆ ಈಕೆಯನ್ನು ಸ್ವರ್ಗದತ್ತ ಬರಮಾಡಿಕೊಳ್ಳಲು ಅಪ್ಸರ ಸ್ತ್ರೀಯೊಬ್ಬಳು ಕೈಚಾಚಿ ನಿಂತಿರುವುದು ಕಾಣುತ್ತದೆ.

ಒಂದು ಮಧ್ಯಮ ಗಾತ್ರದ ಕರಿಕಲ್ಲಿನ ಮೇಲೆ ಈ ಮೂರೂ ದೃಶ್ಯಗಳನ್ನು - ಶಿಲ್ಪಿ ಆಕರ್ಷಕವಾಗಿ ಕೆತ್ತಿದ್ದಾನೆ. ಈ ಕಲ್ಲಿನ ಮೇಲ್ಭಾಗ ಒಡೆದಿದೆ; ಗಾಳಿ, ಮಳೆ, ಬಿಸಿಲಿಗೆ ಈ ವೀರಗಲ್ಲು ಸವೆದು ಒರಟಾಗಿದೆ. ಮಹಿಳೆಯೊಬ್ಬಳು ಈ ರೀತಿ ಪುರುಷರೊಂದಿಗೆ ಹೋರಾಡುವ ಚಿತ್ರವನ್ನೊಳಗೊಂಡ ವೀರಗಲ್ಲುಗಳು ಸಿಗುವುದು ಬಹಳ ಅಪರೂಪ. ಇಂಥ ಶಿಲ್ಪಗಳಿಂದ ಆ ಕಾಲದಲ್ಲಿ ಪುರುಷರಂತೆ ಮಹಿಳೆಯರೂ ಸಂಕಷ್ಟದ ಸಂದರ್ಭದಲ್ಲಿ ಜೀವದ ಹಂಗು ತೊರೆದು ಹೋರಾಡುತ್ತಿದ್ದರೆಂದು ತಿಳಿಯುತ್ತದೆ. ಈ ಅಪರೂಪದ, ಅಪೂರ್ವವಾದ ವೀರಗಲ್ಲು ಸಂರಕ್ಷಣೆ ಮಾಡಬೇಕಾದ ಅಗತ್ಯವಿದೆ.



ಇನ್ನೊಂದು ವೀರಗಲ್ಲು ಇಲ್ಲಿಯ ರಾಮಲಿಂಗದೇವರಗುಡಿ ಸಮೀಪದಲ್ಲಿದೆ. ಇದರಲ್ಲಿ ಎರಡು ಪಟ್ಟಿಕೆಗಳಿವೆ. ಕೆಳಗಿನ ದೊಡ್ಡ ಪಟ್ಟಿಕೆಯಲ್ಲಿ ಕಾಳಗ ನಿರತ ಕುದುರೆ ಶಿಲ್ಪಗಳಿವೆ. ಈ ಕುದುರೆಗಳ ಮೇಲೆ ಇಬ್ಬರು ವೀರರ ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಗುರಾಣಿ ಹಿಡಿದು ಮುಖಾಮುಖಿಯಾಗಿ ಪರಸ್ಪರ ಭೀಕರ ಹೋರಾಟ ಮಾಡುತ್ತಿರುವ ದೃಶ್ಯವಿದೆ. ಈ ಕುದುರೆಗಳ ಕಾಲ ಕೆಳಗೆ ಬಿದ್ದು ಸತ್ತಿರುವ ವೀರನೊಬ್ಬನ ಚಿತ್ರವಿದೆ. ಕುದುರೆಗಳು ಈ ವೀರನ ಮೇಲೆ ಮುಂಗಾಲುಗಳನ್ನಿಟ್ಟಿರುವ ಚಿತ್ರವಿದೆ.

ಈ ವೀರಗಲ್ಲಿನ ಮೇಲ್ಭಾಗ ಚಿಕ್ಕದಿದ್ದು, ಒಡೆದು ಮುಕ್ಕಾಗಿದೆ. ಆ ಕಾಲದಲ್ಲಿ ಹೋರಾಟಕ್ಕೆ ಕುದುರೆಗಳನ್ನು ಬಳಸುತ್ತಿದ್ದರೆಂದು ತಿಳಿಯುತ್ತದೆ. ಇದನ್ನು 'ಕುದುರೆ ಕಾಳಗ - ಶಿಲ್ಪವೆನ್ನಬಹುದು.


ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಸಂಗಮೇಶ ಬಿರಾದಾರ., 'ತುಂಗಳ ಅಂದು-ಇಂದು', ದ್ವಾದಶ ವರ್ಷ ಮಹೋತ್ಸವ ಸ್ಮರಣ ಸಂಚಿಕೆ. ಪು.೯.

೨. *S.I.I.* Vol xx Tungala Ins. No. 162.

೩. *Ibid,* Ins. Nos 162, 361 and 377.

☆ ☆ ☆ ☆



ಇತಿಹಾಸವೆ ನಿನಗುಳಿವು ಇಹುದಿಲ್ಲ
ಎಲ್ಲ ಬಾಳಿನ ಮೇಲೆ ಬೀರಿದರೆ ಸತತ ಪರಿಣಾಮ
ಇತಿಹಾಸವೆ ನಿನಗಳಿವು ಇಹುದಲ್ಲಿ
ಕಲ್ಲು ತಾಮ್ರದ ಹಾಳೆಗಳ ಮೇಲೆ ಸುಳ್ಳು ಕೆತ್ತಿದರೆ
ಶಾಶ್ವತ ವಿರಾಮ.

ಡಾ. ಕೆ. ಜಿ. ವಸಂತ ಮಾಧವ*

ಉತ್ತರ ಕನ್ನಡ ಜಿಲ್ಲೆಯ ಶಾಸನಗಳ ಅಧ್ಯಯನ ಮತ್ತು ಸಮಸ್ಯೆಗಳು

ಪೀಠಿಕೆ

ವಿಶಿಷ್ಟ ಭೌಗೋಲಿಕ ಸ್ವರೂಪವನ್ನೊಳಗೊಂಡ ಈಗಿನ ಉ. ಕ. ಜಿಲ್ಲೆಯಲ್ಲಿ ಹಲವಾರು ಶಾಸನಗಳು ಲಭ್ಯವಾಗುತ್ತಾ ಇವೆ. ಈ ಶಾಸನದಲ್ಲಿ ಹೆಚ್ಚಿನವು ಅಪ್ರಕಟಿತವಾಗಿವೆ. ಇನ್ನೂ ಹಲವಾರು ಶಾಸನಗಳು ಓದಲಾರದಷ್ಟು ಹಾಳಾಗಿವೆ. ಇಷ್ಟಲ್ಲದೆ ಕೆಲವು ಶಾಸನಗಳು ಕೆಲವು ವ್ಯಕ್ತಿಗಳ ಸೊತ್ತಾಗಿವೆ. ಸಿಕ್ಕಿದ ಶಾಸನಗಳಲ್ಲಿ ಶಿಲಾಶಾಸನಗಳ ಸಂಖ್ಯೆ ಅಧಿಕ. ಅದರಲ್ಲೂ ಸತಿಗಲ್ಲು, ವೀರಗಲ್ಲು, ನಿಷಿಧಿ ಶಾಸನ ಇತ್ಯಾದಿಗಳು ಬಹಳ ಇವೆ. ಆದರೆ ಈ ಶಾಸನಗಳ ಸಂಖ್ಯೆ ೧೬ನೇ ಶತಮಾನದ ನಂತರ ಕಡಿಮೆಯಾಗುತ್ತಾ ಹೋಗುತ್ತವೆ. ಇನ್ನೊಂದು ಇಲ್ಲಿನ ಶಾಸನಗಳ ಅಧ್ಯಯನದಲ್ಲಿ ಗಮನಿಸುವಂತಾದ್ದು. ವಿವಿಧ ಭಾಷೆಗಳಲ್ಲಿ ಮುಖ್ಯವಾಗಿ ಸಂಸ್ಕೃತ, ಪ್ರಾಕೃತ ಮರಾಠಿಯಲ್ಲದೇ ಚೀನಿ ಮತ್ತು ಅರೇಬಿಕ್ ಬರಹಗಳ ಶಾಸನಗಳು ಇವೆ. ಹೆಚ್ಚಿನ ಶಾಸನಗಳು ಸ್ಥಳೀಯ ಪರಿಸರವನ್ನು ಗಮನಿಸಿವೆ. ಭೌಗೋಳಿಕ ಸ್ವರೂಪಗಳು ಇಲ್ಲಿನ ಶಾಸನಗಳಲ್ಲಿ ಸರಿಯಾಗಿ ಮೂಡಿ ಬಂದಿವೆ.

ಶಾಸನಗಳ ಅಧ್ಯಯನ ಇತಿಹಾಸ

ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಚೀನ ಶಾಸನಗಳೂ ಇದ್ದರೂ ಇವುಗಳ ಸಮರ್ಪಕ ಅಧ್ಯಯನ ಇನ್ನೂ ನಡೆಯಬೇಕು. ಇಲ್ಲಿನ ಶಾಸನಗಳ ಅಧ್ಯಯನದ ಇತಿಹಾಸದಲ್ಲಿ ಸಮರ್ಪಕವಾದ ನಿರಂತರತೆ ಇಲ್ಲ. ಇಲ್ಲಿನ ಶಾಸನಗಳನ್ನು ಪ್ರಥಮವಾಗಿ ಗಮನಿಸಿದವನು ಫ್ರಾನ್ಸಿನ ಬುಕಾನನ್. ೧೮೦೧ರಿಂದ ೧೮೭೫ರ ವರೆಗೆ ಶಾಸನ ಅಧ್ಯಯನ ನಿಂತು ಹೋಗಿತ್ತು. ೧೮೮೦ರಲ್ಲಿ ಜೇಮ್ಸ್ ಬರ್ಜೆಸ್ ಬನವಾಸಿಯ ನಾಗಪ್ರತಿಮಾ ಶಾಸನವನ್ನು ಅಧ್ಯಯನಿಸಿದ. ಈ ಶಾಸನವನ್ನು ೮ ಜನ ವಿದ್ವಾಂಸರು ೧೯೬೩ರವರೆಗೆ ಅಧ್ಯಯನಿಸಿ ತಮ್ಮದೇಯಾದ ವಿವರಣೆಗಳನ್ನು ನೀಡಿದ್ದು ಇಲ್ಲಿನ ಶಾಸನದ ಅಧ್ಯಯನಕ್ಕೆ ನಡೆದ ಹೊಸ ದಾರಿ ಎಂದರೆ ತಪ್ಪಾಗಲಿಕ್ಕಿಲ್ಲ. ಉತ್ತರ ಕನ್ನಡ ಜಿಲ್ಲೆಯ ಕೆಲವು ಶಾಸನಗಳು ಫ್ಲೀಟರ (Fleet) ಗಮನ ಸೆಳೆದಿವೆ. ಇವರು ತಾವು ಕಂಡ ಉತ್ತರ ಕನ್ನಡ ಜಿಲ್ಲೆಯ ಕೆಲವು ಶಾಸನಗಳ ಪಾಠಗಳನ್ನು ನೋಡಿ ಮತ್ತು ಅವುಗಳ ವಿಮರ್ಶೆ ಮಾಡಿದ್ದಾರೆ. ಇವುಗಳು ಎಪಿಗ್ರಾಫಿಯಾ ಇಂಡಿಕಾದ ಕೆಲವು ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಜಿಲ್ಲೆಯ ಶಾಸನಗಳ ಪರಿಣಾಮಕಾರಿ ಮತ್ತು ಕ್ರಮಬದ್ಧ ಅಧ್ಯಯನ ನಡೆದುದ್ದು, ೧೯೪೦ರ ನಂತರವೆ. ಈ ವರ್ಷದಿಂದ ೧೯೫೧ರವರೆಗೆ ಶ್ರೀ ಆರ್. ಎಸ್. ಪಂಚಮುಖಿ ಉತ್ತರ ಕನ್ನಡ ಜಿಲ್ಲೆಯ ಹೆಚ್ಚಿನ ಶಾಸನಗಳನ್ನು ಪತ್ತೆಹಚ್ಚಿ ಮತ್ತು ಕೆಲವು ಶಾಸನಗಳ ಪಾಠಗಳನ್ನು ಬೆಳಕಿಗೆ ತಂದಿದ್ದಾರೆ. ಇಂತಹ ಶಾಸನಗಳು ಉತ್ತರ ಕನ್ನಡ ಕರಾವಳಿಯ ಭಟ್ಕಳ, ಹಾಡುವಳ್ಳಿ, ಕಾಯ್ಕಿಣಿ, ಕಾಸರಗೋಡು, ಹೊನ್ನಾವರದಲ್ಲಿದ್ದವು. ಇವುಗಳಲ್ಲಿ ವೀರಗಲ್ಲು, ಸತಿಗಲ್ಲು ಮತ್ತು ನಿಷಿಧಿ ಶಾಸನಗಳು ಇವೆ. ಇವುಗಳೆಲ್ಲ ಕರ್ನಾಟಕ ಶಾಸನ ಸಂಚಿಕೆಗಳಲ್ಲಿ ಬೆಳಕು ಕಂಡಿವೆ. (ಸಂಚಿಕೆ ೧,೨,೩ ಭಾಗ ೧) ೧೯೬೧ರಲ್ಲಿ ಅಣ್ಣಿಗೇರಿ ಮತ್ತು ಬಿ. ಆರ್. ಜೋಯಿಸ್. ಉತ್ತರ ಕನ್ನಡ ಜಿಲ್ಲೆಯ ಕೆಲವು ಶಾಸನಗಳನ್ನು ಪತ್ತೆ ಹಚ್ಚಿದ್ದಾರೆ. ಇವುಗಳ ಸೂಕ್ಷ್ಮ ವಿವರ Descriptive List of Stone and copper plate inscriptions examined by Kannada Research Institute ನಲ್ಲಿವೆ. ಇದು ಧಾರವಾಡದಿಂದ ೧೯೬೧ರಲ್ಲಿ ಪ್ರಕಟವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಉತ್ತರ ಕನ್ನಡ ಜಿಲ್ಲೆಯ ಇನ್ನೂ ಕೆಲವು ಶಾಸನಗಳನ್ನು ಬೆಳಕಿಗೆ ತಂದಿದೆ. ಇವುಗಳನ್ನು ಡಾ. ಬಿ. ಆರ್. ಗೋಪಾಲ್ ಅವರು ಸಂಪಾದಿಸಿದ್ದು ಕರ್ನಾಟಕ ಶಾಸನ ಸಂಚಿಕೆ ೫ ಮತ್ತು ೬ ರಲ್ಲಿ ಅವು ಪ್ರಕಟವಾಗಿವೆ. ಇವುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ಕೆಲವು ಶಾಸನಗಳು ಇವೆ. ೧೯೭೦ ರ ದಶಕದಲ್ಲಿ ಆರ್. ಎನ್. ಗುರುವರು ಇದೇ ಜಿಲ್ಲೆಯ ಶಾಸನಗಳನ್ನು ಸಮೀಕ್ಷಿಸಿ ಅಧ್ಯಯನಿಸಿದ್ದಾರೆ. ಈ ಶಾಸನಗಳ ವಿವರಗಳು ಇವರೇ ಬರೆದ ಕಾರವಾರ ಜಿಲ್ಲೆಯ ಶಾಸನಗಳು ಎಂಬ ಪುಸ್ತಿಕೆಯಲ್ಲಿವೆ (ಧಾರವಾಡ ೧೯೭೫). ಆದರೆ ಇವರು ನಡೆಸಿದ ಶಾಸನಗಳ ಸಮೀಕ್ಷೆ ಹದಿಮೂರನೇ ಶತಮಾನಕ್ಕೆ ಸೀಮಿತವಾಗಿವೆ. ಹೀಗಿದ್ದರೂ ಗುರುವ ಬೀಳಿಗಿ ಶಾಸನ (ರತ್ನತ್ರಯ ಬಸದಿಯ ಎದುರು ಇರುವ ಶಿಲಾಶಾಸನ) ಗಳ ಕುರಿತಾಗಿ ವಿಮರ್ಶಾತ್ಮಕ ಲೇಖನ ಬರೆದಿದ್ದಾರೆ. ಇವು ಬೆಂಗಳೂರು ವಿಶ್ವವಿದ್ಯಾಲಯದವರು ಪ್ರಕಟಿಸುತ್ತಿರುವ **ಸಾಧನೆ** ಸಂಚಿಕೆಗಳಲ್ಲಿ ಬಂದಿವೆ. (**ಸಾಧನೆ**, ಬೆಂಗಳೂರು ಜೂನ್ ಡಿಸೆಂಬರ್ - ೧೯೭೯) ಡಾ : ರಘುನಾಥಭಟ್, ಡಾ: ಶ್ರೀನಿವಾಸಪಾಡಿಗಾರ, ಡಾ.

* ಆರಾಧನಾ, ಪಾವಂಜೆ, ಹಳೆಯಂಗಡಿ, ದ.ಕ.

ಗಣಪತಿ ಗೌಡ, ಡಾ. ಕೆ. ಜಿ. ಭಟ್ಟಸೂರಿ, ಡಾ. ರಾಜಾರಾಮ ಹೆಗಡೆ, ಡಾ. ಎಸ್. ಡಿ. ಶೆಟ್ಟಿ (ಉಜಿರೆ) ಶ್ರೀ ಹೇಮಂತ ಭಟ್ ಮುಂತಾದ ಉತ್ಸಾಹೀ ವಿದ್ವಾಂಸರರು ಉತ್ತರ ಕನ್ನಡ ಜಿಲ್ಲೆಯ ಶಾಸನಗಳ ಅಧ್ಯಯನದಲ್ಲಿ ಆಸಕ್ತಿ ವಹಿಸುತ್ತಿದ್ದಾರೆ. ಉತ್ತರ ಕನ್ನಡಜಿಲ್ಲೆಯ ಕೆಲವು ಶಾಸನಗಳನ್ನು ಭಾರತೀಯ ಶಾಸನ ಖಾತೆಯವರು ಪತ್ತೆ ಹಚ್ಚಿ ಅವುಗಳಲ್ಲಿ ಕೆಲವೇ ಶಾಸನಗಳ ಪಾಠ ನೀಡಿದ್ದಾರೆ (ದಕ್ಷಿಣ ಭಾರತ ಶಾಸನ ಸಂಪುಟ ೧೫ ಅದೇ ೨೦ ರಲ್ಲಿವೆ). ಈ ಸಂಪುಟಗಳಲ್ಲಿ ಬನವಾಸಿ, ಸಿದ್ಧಾಪುರ, ಯಲ್ಲಾಪುರ ಶಾಸನಗಳೂ ಇವೆ. ಹೆಚ್ಚಿನ ಅಪ್ರಕಟಿತ ಶಾಸನಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಇವೆ. ಗೋಕರ್ಣ ಮಿರ್ಜಾನ, ಅಘನಾಶಿನಿ, ಗುಣವಂತೆ, ಕಾರವಾರ, ಬಾಡಾ, ಮಲ್ಲಾಪುರ, ಶಿರಸಿ ಸ್ವಾರಿ ಬೀಳಿಗಿಯಲ್ಲಿ ಇನ್ನೂ ಹೆಚ್ಚಿನ ಅಪ್ರಕಟಿತ ಶಾಸನಗಳು ಸಿಗುವ ಸಾಧ್ಯತೆಗಳಿವೆ.

ಶಾಸನ ಮತ್ತು ರಾಜಕೀಯ ಸ್ಥಿತಿ

ಉತ್ತರ ಕನ್ನಡ ಜಿಲ್ಲೆಯ ಶಾಸನಗಳು ಈ ಜಿಲ್ಲೆಯನ್ನು ಆಳಿದ ೨೪ ರಾಜ ಮನೆತನಗಳ ರಾಜಕೀಯ ಚಟುವಟಿಕೆಗಳನ್ನು ತಿಳಿಸುತ್ತವೆ. ಇಂತಹ ಶಾಸನಗಳಲ್ಲಿ ಬನವಾಸಿ ಕದಂಬರು ಮತ್ತು ವಿಜಯನಗರ ಅರಸರ ಶಾಸನಗಳು ಹೆಚ್ಚು ಸಂಖ್ಯೆಗಳಲ್ಲಿ ಸಿಕ್ಕಿವೆ. ವಿಜಯನಗರ ಅರಸುಗಳ ಶಾಸನಗಳು ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲೆ, ಸಿರಸಿ ತಾಲೂಕುಗಳಲ್ಲಿ ಸಾಕಷ್ಟು ಇವೆ. ಕಾರವಾರ ತಾಲೂಕಿನ ಶಾಸನಗಳು ಗೋವೆ ಕದಂಬರ ರಾಜಕೀಯ ಇತಿಹಾಸ ತಿಳಿಸುವುದರೊಂದಿಗೆ, ಗೋವೆಗೂ ಮತ್ತು ಕರಾವಳಿ ಕರ್ನಾಟಕದ ನಿಕಟ ಸಂಪರ್ಕದ ಮಾಹಿತಿ ತಿಳಿಸುವುದು ಗಮನಿಸುವಂತದ್ದೆ. ರಾಜರುಗಳ ವಿಶಿಷ್ಟ ಹೆಸರಿನ ಬಿರುದು ಇವರುಗಳ ಆಡಳಿತ ವಿಸ್ತಾರ ಮತ್ತು ಇವರುಗಳ ಧ್ವಜಗಳ ಚಿಹ್ನೆಗಳ ಮಾಹಿತಿಗಳು ಉತ್ತರ ಕನ್ನಡ ಜಿಲ್ಲೆಯ ಶಾಸನಗಳಲ್ಲಿ ವ್ಯಕ್ತವಾಗಿವೆ. ಉದಾ : ಬನವಾಸಿಯ (ವರ್ಷ ೧೦೬೮ರ ಕ್ರಿ.ಶಕ) ಶಾಸನದಲ್ಲಿ ಕೀರ್ತಿವರ್ಮರ (ಹಾನಗಲ್ಲ ಕದಂಬ) "ಶಾಖಾಚರೇಂದ್ರ ಧ್ವಜ, ವೀರಮಾನ ಸಿಂಹ ಲಾಂಛನ, ಪೆರ್ಮಾಟ್ಟಿಪಕಿ, ಘೋಷಣಾ" ಇತ್ಯಾದಿ ವಿವರ ತಿಳಿಸಿದೆ. ಇಷ್ಟಲ್ಲದೆ, ಆಜ್ಞಾದೇವಿ ಲಬ್ದವರ ಪ್ರಸಾದ ಎಂದು ಇದೇ ಶಾಸನದಲ್ಲಿ ಬರುವ ಉಕ್ತಿ ಕುತೂಹಲ ಕಾರಿಯಾಗಿದೆ.[೨] ಸಮಾಧಿಗತ ಪಂಚಮಹಾಶಬ್ದ, ಮಹಾ ಮಂಡಲೇಶ್ವರ, ಬನವಾಸಿ ಪುರವರಾಧೀಶ್ವರ, ಜಯಂತಿ ಮಧುಕೇಶ್ವರ ದೇವರ ಲಬ್ದವರ ಪ್ರಸಾದ ಶ್ರೀಗೋಕರ್ಣ ಮಹಾಬಲೇಶ್ವರ ದೇವರ ದಿವ್ಯ ಶ್ರೀಪಾದ್ಮಾರಾಧಕ, ಪಶ್ಚಿಮ ಸಮುದ್ರಾಧಿಪತಿ ಎಂಬ ಬಿರುದುಗಳನ್ನು ಚಂದಾವರ ಕದಂಬ ಅರಸುಗಳು ಹೊಂದಿದ್ದರೆಂದು ಗೋಕರ್ಣ ಮತ್ತು ಮೊಗಟಾ (ಅಂಕೋಲಾ) ಶಾಸನಗಳಿಂದ ತಿಳಿಯುತ್ತದೆ.[೩] ಅಂಕೋಲೆಯ ಬೆಲಂಬಾರಿನ ಶಿಲಾಶಾಸನ ಕ್ರಿ.ಶ. ೧೩೯೦-೯೪ರಲ್ಲಿ ವಿಜಯನಗರದ ಅರಸ ಇಮ್ಮಡಿ ಹರಿಹರರಾಯ ದೋರ ಸಮುದ್ರದ ನೆಲೆವಿರ್ಡಿನಲ್ಲಿದ್ದು ಇವೆ, ತುಳು ಕೊಂಕಣ ರಾಜ್ಯಗಳನ್ನು ಆಳುತ್ತಿದ್ದಾವೆಂದು ತಿಳಿಸಿದೆ. ಇದರಿಂದ ಪಶ್ಚಿಮ ಕರಾವಳಿಯ ತುಳು ಹೈವೆ ಮತ್ತು ಕೊಂಕಣಪ್ರದೇಶಗಳು ವಿಜಯನಗರ ಸಾಮ್ರಾಜ್ಯ ದಲ್ಲಿದ್ದುವೆಂದು ತಿಳಿದುಬರುತ್ತದೆ.[೪] ಮಿರ್ಜಾನ ಶಾಸನವು (ಕ್ರಿ.ಸ. ೧೫೨೬) ನಗರಿ ರಾಜ್ಯ ಹೈವೆ ತುಳುಕೊಂಕಣ ಮುಂತಾದ ರಾಜ್ಯಗಳನ್ನು ಗೇರಸೊಪ್ಪೆಯ ರಾಣಿ ಪರಮದೇವಿ ಹೊನ್ನಾವರ ದಿಂದ ಆಳುತ್ತಿದ್ದಳೆಂದು ತಿಳಿಸಿದೆ.[೫] ಈ ರಾಣಿಯು ವಿಜಯನಗರ ಚಕ್ರವರ್ತಿ ಶ್ರೀ ಕೃಷ್ಣದೇವರಾಯನ ಮಹಾಮಂಡಳೇಶ್ವರಳಾಗಿದ್ದಳು.

ಭೌಗೋಲಿಕ ವೈಶಿಷ್ಟ್ಯ

ಉತ್ತರ ಕನ್ನಡ ಜಿಲ್ಲೆಯ ಶಾಸನಗಳು ಕೆಲವು ವೈಶಿಷ್ಟವುಳ್ಳ ಭೌಗೋಲಿಕ ಸ್ವರೂಪಗಳನ್ನು ತಿಳಿಸುತ್ತವೆ. ಉದಾ : ಬೀಳಗಿಯ ರತ್ನತ್ರಯ ಬಸದಿಯ ಶಾಸನವೊಂದರಲ್ಲಿ (ಕ್ರಿ.ಶ. ೧೫೯೩) ಜಂಬೂದ್ವೀಪ ಮೇರು (ಪರ್ವತ) ಆರ್ಯಖಂಡ (ಭಾರತ) ವನ್ಯ ಮಂಡಲ, ಚಂದ್ರಗುತ್ತಿಗಿರಿ, ಇಡುವಣೆ, ಸೋಮನದಿ, ಬೆಜೆಯಹಳ್ಳ ಪಶ್ಚಿಮ ಸಮುದ್ರ ನಿಕಟ, ಹಿತ್ತಿಲಮಕ್ಕಿ ಇತ್ಯಾದಿಗಳ ಉಲ್ಲೇಖವಿದೆ.[೬] ಇಷ್ಟಲ್ಲದೇ 'ಕಪ್ಪೊಳಿ ಖಜ್ಞಾನ್' (ಅರಗ ಶಾಸನ) 'ನಿರ್ವತನ ಭೂಮಿ' (ಕುಂಟಕಾಗೆ ಶಾಸನ) 'ಮರುವಟ್ಟ ಗಡಲು' (ಸದಾಶಿವಗಡ ಶಾಸನ), ಅಳಿವೆ (ಗೋಕರ್ಣ ಪ್ರಭಾವಳಿ ಶಾಸನ) ಕಡಹಿನಗದ್ದೆ, ಮಣ್ಣ ಅಸಗಳಿ ಗದ್ದೆ, ಕುಮ್ಮರಿ (ಅಗ್ಗರಿಶಾಸನ ೧೧೯೫) ಹಣಬೆ ಬಯಲು ಇತ್ಯಾದಿ ಸ್ಥಳೀಯ ಭೌಗೋಲಿಕ ಸ್ಥಿತಿಗಳನ್ನು ತಿಳಿಸುವ ಶಾಸನಗಳೂ ಸಾಕಷ್ಟಿವೆ.

ಸಾಮಾಜಿಕ ಮತ್ತು ಆರ್ಥಿಕ ವಿವರಗಳು

ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳನ್ನು ತಿಳಿಸುವ ಶಾಸನಗಳು ಉತ್ತರ ಕನ್ನಡ ಜಿಲ್ಲೆಯಲ್ಲೂ ಸಾಕಷ್ಟು ಸಿಕ್ಕಿವೆ. ಸಾಮಾಜಿಕ ನಿಯಮಗಳಾದ 'ಮಕ್ಕಳ ಕಟ್ಟು', 'ಹೆಣ್ಣಕಟ್ಟು' 'ಹೆಣ್ಣಿಗೆ 'ದಾನ ಮತ್ತು ಗಂಡಿಗೆ ಮೂಲ,' ಅಪುತ್ರಿಕ ದಾನಗಳ ಕುರಿತಾಗಿ ಕೆಲವು ಶಾಸನಗಳಲ್ಲಿ ಉಕ್ತವಾಗಿವೆ. ಸೇನಬೋವರ ಕೊಡುಕಣಿ ವ್ಯವಹಾರ ನಿರ್ಣಯ, ಕುಡುತಲೆ, ಕಟ್ಟುಂದೆಲೆ ಕುಳವ ಕಡಿದು ಕೊಟ್ಟ' ಇತ್ಯಾದಿ ವೈಶಿಷ್ಟ್ಯ ನಾಣ್ಣುಡಿಗಳು ಉತ್ತರ ಕನ್ನಡ ಜಿಲ್ಲೆಯ ಶಾಸನಗಳಲ್ಲಿ ಲಭ್ಯವಾಗಿವೆ.[೭]

ಸ್ಮಾರಕಶಾಸನಗಳು

ಮಾಸ್ತಿಯ ಕುರಿತಾದ ಸ್ಮಾರಕಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ದೊರಕಿವೆ. ಇವುಗಳಲ್ಲಿ ಕೆಲವು ಮಾಸ್ತಿಗಲ್ಲಿನಲ್ಲಿ

ಬರಹಗಳಿದ್ದರೆ, ಹೆಚ್ಚಿನ ಮಾಸ್ತಿಗಲ್ಲಿನಲ್ಲಿ ಶಾಸನವಿಲ್ಲ, ಆದರೂ ಇವುಗಳು ಇತಿಹಾಸದ ಅಧ್ಯಯನ ತಿಳಿದುಕೊಳ್ಳುವಲ್ಲಿ ಸಾಕಷ್ಟು ಮಾಹಿತಿಗಳನ್ನು ನೀಡುತ್ತವೆ. ಉದಾ : ಹೊಸಾಳ್ಳಿ ವೀರ ದೇವಸ್ಥಾನದ ಶಿಲಾಸ್ತಂಭ ಶಾಸನ (ಕಾರವಾರ ತಾಲೂಕು)ದಲ್ಲಿ ಸಾಳುವ ದೇವನಾಯಕನು ಭಟ್ಕಳದ ನಾಗರಸ ಒಡೆಯನೊಡನೆ ಹೋರಾಡಿ ಸತ್ತನು. ಇದನ್ನು ತಿಳಿದ ಅವನ ಮಡುವಳಿ ಲಕುಮಾಯಿ ಅಗ್ನಿಪ್ರವೇಶ ಮಾಡಿದಳೆಂದು ತಿಳಿಸುತ್ತದೆ. ಈ ಶಾಸನದ ಕಾಲ ೧೫ನೇ ಶತಮಾನಕ್ಕೆ ಸರಿಹೊಂದುತ್ತದೆ. ಇಷ್ಟಲ್ಲದೆ ಉತ್ತರ ಕನ್ನಡ ಜಿಲ್ಲೆಯ ಮಾಸ್ತಿಕಲ್ಲು ಸ್ಮಾರಕಗಳು ಮತ್ತು ಅವುಗಳಲ್ಲಿರುವ ಶಾಸನಗಳು ಗತಕಾಲದಲ್ಲಿ ನಡೆದ ಸಂಗತಿಗಳನ್ನು ವಿರಳವಾಗಿ ಕೆಲವೊಮ್ಮೆ ವಿಸ್ತಾರವಾಗಿ ರೂಪಿಸುವುದನ್ನು ಕಾಣುತ್ತೇವೆ.[೭] ಹಾಡುವಳ್ಳಿ ಬಸದಿಯ ನಿಷಿಧಿಸಾಸನ ಭಾಷಾ ದೃಷ್ಟಿಯಿಂದ ಗಮನಾರ್ಹವಾಗಿದೆ. ಕ್ರಿ.ಶ. ೧೪೨೩ರ ಈ ನಿಷಿಧಿ ಶಾಸನ ಕಾವ್ಯಾತ್ಮಕವಾಗಿದ್ದು ಇದನ್ನು ಕೆತ್ತಿದವ ಕೇಶವಾಚಾರಿಯ ಮಗ ಯಿಸರಾಚಾರಿ.[೮] ವಿವಿಧ ಹಿಂದು ಧಾರ್ಮಿಕ ಪಂಥಗಳ ಇತಿಹಾಸಗಳನ್ನು ತಿಳಿದುಕೊಳ್ಳುವಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಾಸನಗಳು ಉಪಯುಕ್ತ ಮಾಹಿತಿಗಳನ್ನು ನೀಡುತ್ತವೆ. ಹಾಡುವಳ್ಳಿ, ಬಟ್ಕಳ, ಕಾಯ್ಕಿಣಿ, ಗೇರಸೊಪ್ಪೆ, ಬೀಳಗಿ ಶಾಸನಗಳು ಜೈನಧರ್ಮದ ಪ್ರಗತಿಯನ್ನು ತಿಳಿಸುತ್ತವೆ. ಭಟ್ಕಳ ಕಾರವಾರ, ಅಂಕೋಲೆಯಲ್ಲಿ ಸಿಕ್ಕಿದ ಅರೇಬಿಕ್ ಮತ್ತು ಪರ್ಶಿಯನ್ ಭಾಷೆಯ[೮೯] ಶಾಸನಗಳು ಚಿಕ್ಕದಾಗಿದ್ದರೂ ಮುಸ್ಲಿಂ ಧಾರ್ಮಿಕ ಸಂಸ್ಥೆಗಳ ಕುರಿತಾಗಿ ಐತಿಹಾಸಿಕ ಮಾಹಿತಿಗಳನ್ನು ಸ್ಪಷ್ಟವಾಗಿ ನೀಡಿವೆ.

ಅಪ್ರಕಟಿತ ಶಾಸನಗಳು

ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಪ್ರಕಟಿತ ಶಾಸನಗಳು ಬಹಳ ಸಂಖ್ಯೆಯಲ್ಲಿವೆ. ಇಂತಹ ಶಾಸನಗಳು ಹಾಡುವಳ್ಳಿಯ ಇಂದ್ರಗಿರಿ ಬೆಟ್ಟದ ಮೇಲೂ, ಕುಮಟಾ ಬಸದಿಯ ಸಮೀಪದಲ್ಲೂ ವಾಲಗಳ್ಳಿಯಲ್ಲೂ ಶಿರಾಲಿಯಲ್ಲೂ ಮಿರ್ಜಾನ ಕೋಟೆಯ ಸಮೀಪದಲ್ಲೂ ಅಂಕೋಲೆಯ ಬಬ್ರುವಾಡದ ಮತ್ತು ಕೆಂಡಮಾಸ್ತಿಯಲ್ಲೂ, ಹಿರೆಗುತ್ತಿಯ ಮಹಾಲಿಂಗೇಶ್ವರ ದೇವಾಲಯದ ಎದುರು ಇವೆ. ಇಷ್ಟಲ್ಲದೆ ಗೋಕರ್ಣ, ಸ್ವಾದಿ, ಶಿರಸಿ, ಬೀಳಗಿ ಮುಂತಾದ ಸ್ಥಳಗಳಲ್ಲೂ ವಿವಿಧ ವರ್ಗಗಳ ಶಿಲಾ ತಾಮ್ರ ಮತ್ತು ವೀರಗಲ್ಲುಗಳು ಶಾಸನಗಳು ಸಿಕ್ಕಿವೆ. ಇದೇ ಜಿಲ್ಲೆಯ ಘಟ್ಟದ ಮೇಲಿನ ತಾಲೂಕುಗಳಾದ ಹಳ್ಯಾಳ, ಯಲ್ಲಾಪುರ ಮುಂದಗೋಡುಗಳಲ್ಲ ಅಪ್ರಕಟಿತ ಶಾಸನಗಳು ಇರುವ ಸಾಧ್ಯತೆ ಇವೆ.

ಉಪಸಂಹಾರ

ಶಾಸನಗಳು ಸ್ಥಳೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಬಿಂಬಿಸಿದರೂ ಇವುಗಳ ಅಧ್ಯಯನ ರಾಜಕೀಯ ಸಂಗತಿಗಳನ್ನು ತಿಳಿದುಕೊಳ್ಳಲು ಇತಿಹಾಸ ತಜ್ಞರು ಉಪಯೋಗಿಸಿದ್ದಾರೆ. ಈ ಜಿಲ್ಲೆಯ ಸಮಗ್ರ ಸಾಂಸ್ಕೃತಿಕ ಜೀವನ ತಿಳಿಯುವಲ್ಲಿ ಶಾಸನಗಳನ್ನು ಉಪಯೋಗಿಸಿಕೊಳ್ಳುವ ಅವಶ್ಯಕತೆ ಇದೆ.

ಶಾಸನಗಳನ್ನು ಅಧ್ಯಯನಿಸುವಲ್ಲಿ ಮುಖ್ಯವಾದ ತೊಡಕು ಇವುಗಳ ಇರುವ ಸ್ಥಳದ ಸನ್ನಿವೇಶ; ಈ ಸನ್ನಿವೇಶಗಳ ಸ್ಥಿತಿ ಅತ್ಯಂತ ಕಠಿಣವಾಗಿವೆ. ಇವುಗಳ ಹತ್ತಿರ ತಲುಪುವುದು ಬಹಳ ಕಷ್ಟ. ಇದು ಮುಖ್ಯವಾಗಿ ಇಲ್ಲಿನ ಶಾಸನಗಳನ್ನು ಅಧ್ಯಯನಿಸುವಲ್ಲಿ ಎದುರಿಸಬೇಕಾದ ಸಮಸ್ಯೆ.

ಇಲ್ಲಿರುವ ಹೆಚ್ಚಿನ ಶಾಸನಗಳಲ್ಲಿ ಸ್ಥಳಗಳ ವಿಚಾರ ಗೊಂದಲವನ್ನುಂಟುಮಾಡುತ್ತವೆ. ಒಂದೇ ಹೆಸರಿನ ಊರುಗಳು ಉತ್ತರ ಕನ್ನಡದಲ್ಲಿರುವುದರಿಂದ ಶಾಸನವು ತಿಳಿಸಿದ ಊರು ಯಾವುದೆಂದು ಸ್ಪಷ್ಟವಾಗಿ ತಿಳಿಸುವುದಿಲ್ಲ. ಉದಾ : ಬಾಡಾ, ಶಿರೂರು, ಇಡಗುಂಡಿ ಇತ್ಯಾದಿ ಕೆಲವು ಶಾಸನಗಳಲ್ಲಿ ತಿಳಿಸಿದ ಊರುಗಳು ಯಾವುದೆಂದು ಈವರೆಗೆ ಪತ್ತೆಯಾಗಿಲ್ಲ. ಉದಾ : ಸಿದ್ಧಾಪುರದ ಮೂಗದೂರ ವೀರಗಲ್ಲಿನಲ್ಲಿ ಉಲ್ಲೇಖಿತವಾದ 'ಎಲೆಗಣಲಿ', ಕಿರಿಯಮಾಡಳಿ, ಹಾಗೂ ಹಿರಿಯ ಮೊಗ (ಕ್ರಿ.ಶ. ೧೧೬೪) ಹಳದಿಪೂರ ಶಿಲಾಶಾಸನದಲ್ಲಿ (೧೦೮೦), ಉಲ್ಲೇಖಿತ 'ರಿಲೋರ' ಮತ್ತು ಗೊರಟಿನ ಹಳ (ಬಿಳಿಗಿ ಶಾಸನ ಕ್ರಿ.ಶ. ೧೫೮೧ ೧೫೮೭, ೧೫೯೨) ಇತ್ಯಾದಿಗಳಿವೆ. ಅತ್ಯಂತ ಮುಖ್ಯವಾದ ಸಮಸ್ಯೆ ಹೆಚ್ಚಿನ ಶಾಸನಗಳ ಬರಹ ಮತ್ತು ಅವುಗಳ ಸ್ಥಿತಿಗಳು ನಶಿಸಿಹೋಗುವಂತಿವೆ. ಇಷ್ಟಲ್ಲದೆ ಕೆಲವು ಶಾಸನಗಳು ಇದ್ದ ಸ್ಥಳದಿಂದ ಸ್ಥಳಾಂತರವಾಗಿವೆ.

ಹೀಗೆಲ್ಲಾ ಉತ್ತರ ಕನ್ನಡ ಶಾಸನಗಳ ಅಧ್ಯಯನದಲ್ಲಿ ಸಮಸ್ಯೆಗಳಿದ್ದರೂ ಅವುಗಳನ್ನು ಎದುರಿಸಿ ಈ ಶಿಲಾ ಲೇಖನ ಮತ್ತು ತಾಮ್ರಪಟಗಳನ್ನು ವೈಜ್ಞಾನಿಕವಾಗಿ ಅಧ್ಯಯನಿಸುವ ಅವಶ್ಯಕತೆ ಇದೆ. ಮುಖ್ಯವಾಗಿ ಈ ಶಾಸನಗಳನ್ನು ಯೋಗ್ಯ ರೀತಿಯಲ್ಲಿ ಸಂರಕ್ಷಿಸುವುದು ಅತ್ಯಗತ್ಯ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ರಘುನಾಥ ಭಟ್., (೧೯೭೭), **ಕರ್ನಾಟಕ** ಶಾಸನ ಕಲೆ ಮೈಸೂರು, ಪು. ೯.

೨. ಆರ್.ಎಸ್.ಗುರವ., ೧೯೭೫), **ಕಾರವಾರ** ಜಿಲ್ಲೆಯ ಶಾಸನಗಳು, ಧಾರವಾಡ, ಪು. ೪೬

೩. ಅದೇ., ಅದೇ ಗ್ರಂಥ ಪ್ರ. ಪು. ೫೪-೫೬; ಶಾಸನ ಕ್ರಿ.ಶ. ೧೧೬೦, ಕರ್ನಾಟಕ ಶಾಸನ ಸಂಚಿಕೆ IV (Karnataka Inscritpitons) ಪರಿಷ್ಕರಣ ಶಾ ಸಂ. ೭೬ ಇಸವಿ ಕ್ರಿಶ. ೧೨೩೪

೪. ಕ.ಶಾ., IV ಸಂ. ೬೧

೫. ಇದೇ, ಸಂಖ್ಯೆ ೭೯ ಹೊನ್ನಾವರದಲ್ಲಿ ಪದುಮಲದೇವಿ ಆಳಿಕೊಂಡಿದ್ದಳೆಂದು ಉಪ್ಪುಂದ, ಉಡುಪಿ ಜಿಲ್ಲೆ ಕುಂದಾಪುರ ತಾಲೂಕು, ಕಿ.ಶ. ೧೫೨೮ರ ತಾಮ್ರಶಾಸನದಲ್ಲಿ ತಿಳಿಸಿದೆ. ವಿವರ ನೋಡಿ; ಡಾ। ಕೆ.ಜಿ. ವಂಸತಮಾಧವ. *Religions in Coastal karnataka* (New Delhi 1985)
ಪು. ೧೪೯.

೬. ಆರ್. ಎನ್. ಗುರವ., 'ಬಿಳಿಗಿಯ ಶಾಸನಗಳು', ಸಾಧನೆ (ಬೆಂಗಳೂರು ಏಪ್ರಿಲ್, ಜೂನ್ ೧೯೭೯) ಪು. ೧೦೨-೧೧೯; ಅದೇ ಅಕ್ಟೋಬರ್ - ಡಿಸೆಂಬರ್


೭. ಕ.ಶಾ., V ಸಂಖ್ಯೆ ೧೨೨ ನೋಡಿ - ಕರ್ನಾಟಕ ಭಾರತಿ (ಧಾರವಾಡ) ೧೯೯೨) ಪು. ೮-೧೬ S. Settar ಮತ್ತು Sontheimer, *Memorial Stones* (ಧಾರವಾಡ ೧೯೮೪), ಪು. ೩೩೯-೩೪೬

೮. ಕ.ಶಾ., I ಸಂಖ್ಯೆ ೪೯ - ಪುಪು ೧೧೩-೧೧೭ ವಿಕ್ಟರ್.

೯. *Navayats of Kanara* (Dhawar 1955) ಪು. ೫೨

(ಉತ್ತರ ಕನ್ನಡ ಜಿಲ್ಲೆಯ ಶಾಸನಗಳನ್ನು ಸಂಗ್ರಹಿಸುವಲ್ಲಿ ಆರ್ಥಿಕ ನೆರವನ್ನು ಅಕಾದೆಮಿಯ ವತಿಯಿಂದ ಒದಗಿಸಿದುದಕ್ಕಾಗಿ ಕರ್ನಾಟಕ ಇತಿಹಾಸ ಅಕಾಡೆಮಿಯ ಪದಾಧಿಕಾರಿಗಳಿಗೆ ಈ ಲೇಖಕರು ಉಪಕಾರ ಸ್ಮರಿಸುತ್ತಾರೆ.)

☆ ☆ ☆



ಆರ್. ವೆಂಕಟೇಶಮೂರ್ತಿ*

ನಾಗಮಂಗಲ ತಾಲ್ಲೂಕಿನ ಶಾಸನಗಳಲ್ಲಿ ನಾಯಕರು

ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ ಎಂದು ಕರೆಸಿಕೊಂಡಿರುವ ನಾಗಮಂಗಲವು,ಕರ್ನಾಟಕ ಇತಿಹಾಸದಲ್ಲಿ ಕರ್ನಾಟಕವನ್ನು ಆಳಿದ ಅರಸರುಗಳಲ್ಲಿ ಗಂಗರಸರಿಂದ ಮೈಸೂರು ರಾಜರುಗಳ ಕಾಲದವರೆಗಿನ ಆಡಳಿತಕ್ಕೆ ಒಳಪಟ್ಟಿತ್ತು. ಆಡಳಿತವು ಸುಸೂತ್ರವಾಗಿ ನಡೆಯುವ ಸಲುವಾಗಿ ಆಯಾ ಕಾಲದ ಅರಸರು, ವಿವಿಧ ಸ್ಥಳಗಳಲ್ಲಿ ನಿರ್ದಿಷ್ಟ ಜಾಗಗಳಿಗೆ ವ್ಯವಹಾರ ನೋಡಿ ಕೊಳ್ಳಲು ಅಧಿಕಾರಿಗಳ ನೇಮಕ ಮಾಡಿರುವುದನ್ನು ಶಾಸನಗಳು ದಾಖಲಿಸಿವೆ.

ಮಂಡ್ಯಜಿಲ್ಲೆಗೆ ಸೇರಿದ ನಾಗಮಂಗಲ ತಾಲ್ಲೂಕಿನ ಶಾಸನಗಳಲ್ಲಿ ಸುಮಾರು ೪೦ ಜನರ ಹೆಸರಿನ ಜೊತೆಗೆ ಉತ್ತರಾರ್ಧದಲ್ಲಿ **ನಾಯಕ** ಪದವು ಸೇರ್ಪಡೆಯಾಗಿ ದಾಖಲಾಗಿದೆ. ಈ ನಾಯಕರು ತಮ್ಮ ವ್ಯಾಪ್ತಿಯಲ್ಲಿದ್ದ ಅಧಿಕಾರದಿಂದ ದಾನ, ದತ್ತಿಗಳನ್ನು ನೀಡಿ ದೇವಾಲಯ, ಕೆರೆ-ಕಟ್ಟೆಗಳ ನಿರ್ಮಾಣವನ್ನೂ ಮಾಡಿರುತ್ತಾರೆ. ಪೂರ್ವಾರ್ಧದ ಶಬ್ದವೂ ಸೇರಿದಂತೆ ಈ ನಾಯಕತ್ವವು ಅಧಿಕಾರ/ ಕುಲ/ ಜನಾಂಗ/ ವಂಶಪಾರಂಪರ್ಯಗಳಿಂದ ಬಂದುದೇ? ಎಂಬುದರ ಬಗ್ಗೆ ಇಲ್ಲಿ ವಿವೇಚಿಸಲಾಗಿದೆ.

ಹೊಯ್ಸಳ ಪಟ್ಟಣಸ್ವಾಮಿ ಸೋಮಿಸೆಟ್ಟಿ ಎಂಬುವವನು ತಾನು ಮಾಡಿಸಿದ ಜಿನಪಾರ್ಶ್ವ ದೇವರಿಗೆ ಸಾಮಂತ ನರಸಿಂಗನಾಯಕನ ಅನುಮತದಿಂದ ದಾನವನ್ನು ನೀಡಿದ ಬಗ್ಗೆ ಕ್ರಿ.ಶ.೧೧೬೮ ಶಾಸನ ದಾಖಲಿಸಿದೆ.[೧] ಕ್ರಿ.ಶ.೧೩೦೯ರ ಶಾಸನವು : ಮಹಾಪ್ರಧಾನ ಪೆರುಮಾಳೆದೇವ ದಣ್ಣಾಯಕನು ಉದ್ಭವ ನರಸಿಂಹಪುರವಾದ ಬೆಳ್ಳೂರಿನ ಪ್ರಸನ್ನಮಾಧವ, ರಾಮಕೃಷ್ಣ ಮತ್ತು ವರದ ಅಲ್ಲಾಳನಾಥ ದೇವಾಲಯಗಳಿಗಾಗಿ ಮೂರು ಹಳ್ಳಿಗಳನ್ನು ದತ್ತಿಯಾಗಿ ೯೬ ಮಹಾಜನಗಳಿಗೆ ಹಂಚುತ್ತಾನೆ; ಈ ಸಂದರ್ಭಗಳಲ್ಲಿ ಆ ಗ್ರಾಮಗಳಿಗೆ ಆನೆಯ ಸೇಸೆ, ಕುದುರೆಯ ಸೇಸೆ ಮತ್ತು ಕಟಕ ಸೇಸೆ ಹಾಗೂ ದಂಡಿನಭಾಗ್ಯತೆ ಮಂತಾದ ತೆರಿಗೆಗಳನ್ನು ಮಾನ್ಯ ಮಾಡಿದ್ದಾನೆ ಎಂದಿದೆ.[೨]

ಇಲ್ಲಿನ ಎರಡೂ ಶಾಸನಗಳಲ್ಲಿ ಮಾಧವ ಮತ್ತು ಪೆರುಮಾಳೆಯ ಹೆಸರಿನ *ಪೂರ್ವಾರ್ಧ* ***ಮಹಾಪ್ರಧಾನ*** ಎಂದೂ ***ಉತ್ತರಾರ್ಧ ದಂಡನಾಯಕ*** ಎಂದೂ ಸೇರಿರುವುದನ್ನು ಕಾಣಬಹುದಾಗಿದೆ.

ಜೆ.ಎಂ.ನಾಗಯ್ಯ ಅವರು : ತಮ್ಮ ಮಹಾಪ್ರಬಂಧದ ಆಡಳಿತಾಧಿಕಾರಿಗಳು ಎಂಬ ಅಧ್ಯಾಯದಲ್ಲಿ ಪ್ರಧಾನ ಎನ್ನುವ ಶಬ್ದಕ್ಕೆ ***ಮಹಾ*** ಎಂಬ ವಿಶೇಷಣ ಸೇರಿ ಮಹಾಪ್ರಧಾನವಾಗಿದೆ; ಇದಕ್ಕೆ ನಾವು ಮಂತ್ರಿಯೆಂದೋ, ಮುಖ್ಯ ಮಂತ್ರಿಯೆಂದೋ ಅರ್ಥವನ್ನು ಭಾವಿಸುತ್ತಾ ಬಂದಿದ್ದೇವೆ; ಡಿ.ಸಿ.ಸರ್ಕಾರ್ ಅವರು ಮಹಾಪ್ರಧಾನ ಶಬ್ದಕ್ಕೆ ಪ್ರಧಾನ ಮಂತ್ರಿ, ಮುಖ್ಯಮಂತ್ರಿ, ಸೈನ್ಯದ ಅಧಿಕಾರಿ ಎಂದು ಅರ್ಥ ಹೇಳಿದ್ದಾರೆ; ಆದರೆ, ಈ ಮಹಾಪ್ರಧಾನ ಶಬ್ದವನ್ನು ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡ ನಾಯಕರಿಗೂ, ನೇರವಾಗಿ ಶಾಸನಗಳಲ್ಲಿ ಬಳಸಲಾಗಿದೆ. *ಹೀಗಾಗಿ ಮಹಾಪ್ರಧಾನವೆನ್ನುವ ಶಬ್ದ ಹುದ್ದೆಯ ಹೆಸರಾಗಿರದೆ ಪ್ರಮುಖ ವ್ಯಕ್ತಿ ಎಂಬ ಗೌರವಸೂಚಿ ಪದವಾಗಿದೆಯೆಂದು ಹೇಳಬಹುದಾಗಿದೆ.* ಚಕ್ರವರ್ತಿ ವಿಕ್ರಮಾದಿತ್ಯ ಮನ್ನೆಯ ಬೊಪ್ಪಯನು ಮಾಡಿದ ತಪ್ಪಿನ ವಿವರಣೆಯನ್ನು ಕೇಳಿ ಆತನಿಗೆ ಶಿಕ್ಷೆ ವಿಧಿಸಲು ತನ್ನ ಮಹಾ ಪ್ರಧಾನರಿಗೆ ಹೇಳುತ್ತಾನೆ; ಅವರು ಬೊಪ್ಪಯನಿಗೆ ಶಿಕ್ಷೆಯನ್ನು ವಿಧಿಸುತ್ತಾರೆ, ಎಂದೆಲ್ಲ ಹೇಳಿದ್ದಾರೆ.[೩]

ಮೇಲಿನ ಶಾಸನದಲ್ಲಿ ಬಹಿತ್ರದ ನಾರಣವೆರ್ಗಡೆ ಎಂಬುವವನು ಮಹಾಪ್ರಧಾನ ಮಾಧವ ದಂಡನಾಯಕನ ಬೆಸದಿಂ (ಒಪ್ಪಿಗೆಯಿಂದ) ನಂದಾದೀವಿಗೆಗೆ, ಅಷ್ಟವಿಧಾರ್ಚನೆಗೆ ಎಂದು ಒಂದು ಗಾಣವನ್ನೂ, ಹೇರಿನ ಸುಂಕದ ಹತ್ತನೇ ಒಂದು ಭಾಗವನ್ನೂ ದಾನ ನೀಡುತ್ತಾನೆ, ಎಂದರೆ ಮಹಾಪ್ರಧಾನನಿಗೆ ಅಧಿಕಾರ ಇದ್ದುದರಿಂದಲೇ ಒಪ್ಪಿಗೆಯನ್ನು ನೀಡಿರುತ್ತಾನೆ. ಕೇವಲ ಮಾಧವನಾಗಿದ್ದಿದ್ದರೆ ಇದು ಸಾಧ್ಯವಾಗುತ್ತಿರಲ್ಲಿಲ್ಲ. ಶ್ರೀಯುತರೇ ನೀಡಿರುವ ಉದಾಹರಣೆಯಲ್ಲಿ ಮಹಾಪ್ರಧಾನರು ಶಿಕ್ಷೆ ವಿಧಿಸುತ್ತಾರೆ ಎಂದು ಉಲ್ಲೇಖಿಸಿರುವುದನ್ನು ಗಮನಿಸಿದಾಗ ಮಹಾಪ್ರಧಾನ ಎಂಬ ಶಬ್ದಕ್ಕೆ ಅಧಿಕಾರವೆನ್ನುವುದು ಇಲ್ಲದಿದ್ದಲ್ಲಿ ಚಕ್ರವರ್ತಿಯು ಬೊಪ್ಪಯ್ಯನಿಗೆ ಶಿಕ್ಷೆ ವಿಧಿಸುವಂತೆ ಮಹಾಪ್ರಧಾನರಿಗೆ ಆಜ್ಞೆ ಮಾಡುತ್ತಿರಲಿಲ್ಲ. *ಆದುದರಿಂದ* ***ಮಹಾಪ್ರಧಾನ*** *ಎನ್ನುವುದು* ***ಅಧಿಕಾರಸೂಚಕ ಶಬ್ದವೇ*** *ಹೊರತು ಪ್ರಮುಖ ವ್ಯಕ್ತಿ ಎಂಬ* ***ಗೌರವಸೂಚಿ ಪದವಾಗಿರುವುದಿಲ್ಲವೆಂದು*** *ಹೇಳಬಹುದು.*

ಉತ್ತರಾರ್ಧದ ದಂಡನಾಯಕ ಶಬ್ದವನ್ನು ಗಮನಿಸಿದಾಗ,

* ೨೬/೧, 'ನವಸುಮ', ೨೩ನೇ ಮುಖ್ಯರಸ್ತೆ, ಮುನೇಶ್ವರ ಬ್ಲಾಕ್, ಬೆಂಗಳೂರು - ೫೬೦ ೦೮೫

ಎಂ.ಪಿ. ಮಹಾದೇವಯ್ಯನವರು ತಮ್ಮ ಸಂಪ್ರಬಂಧದಲ್ಲಿ ದಂಡನಾಯಕರುಗಳು ಯುದ್ಧ ಸಮಯದಲ್ಲಿ ಸೇನಾಧಿಪತಿಗಳಾಗಿಯೂ ಮಿಕ್ಕ ಸಮಯದಲ್ಲಿ ಸಾಮಾನ್ಯ ಆಡಳಿತಗಾರರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು ಎಂದು ನರಸಿಂಹಮೂರ್ತಿ ಅವರ ಅಭಿಪ್ರಾಯವನ್ನು ಉದ್ಧರಿಸುತ್ತಾ, ಇನ್ನೂ ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನೂ ನೀಡಿ ದಂಡನಾಯಕ ಎನ್ನುವುದು ಒಂದು ಬಿರುದು ಅಥವಾ ಗೌರವ ಸೂಚಕ ಎಂದು ಅಭಿಪ್ರಾಯಪಟ್ಟಿದ್ದಾರೆ.[೪] ಜೆ. ಎಂ. ನಾಗಯ್ಯನವರು ಡಿ. ಸಿ. ಸರ್ಕಾರ್ ಅವರ ಎಪಿಗ್ರಾಫಿಕಲ್ ಗ್ಲಾಸರಿಯಂತೆ ದಂಡನಾಯಕ ಶಬ್ದಕ್ಕೆ ಸಾಮಾನ್ಯವಾಗಿ ಸೇನಾಪತಿ ಎಂಬ ಅರ್ಥವನ್ನು ಇದುವರೆಗೆ ಹಚ್ಚುತ್ತ ಬರಲಾಗಿದೆ ಎಂದು ತಿಳಿಸುತ್ತಾ, **ದಂಡ** ಎಂಬುದಕ್ಕೆ ಸೈನ್ಯ ಎಂಬ ಅರ್ಥವಿರುವುದರಿಂದಲೂ, ದಂಡನಾಯಕರೆಲ್ಲರೂ ವೀರರಾಗಿದ್ದರಿಂದಲೂ ಈ ಅರ್ಥ ಹೇಳಲಾಯಿತು. ಆದರೆ ದಂಡವೆಂಬುದಕ್ಕೆ **ಕೋಲು** ಎಂದೂ ಅರ್ಥವಿದೆ. ದೀಕ್ಷೆಯಂಥ ಧಾರ್ಮಿಕ ಕಾರ್ಯದಲ್ಲಿ ವಟುಗಳಿಗೆ ಹಿಡಿಯಲು ದಂಡವನ್ನು ಕೊಡುತ್ತಾರೆ. ಸಂನ್ಯಾಸಿಗಳು, ಸ್ವಾಮಿಗಳು ದಂಡವನ್ನು ಹಿಡಿದಿರುತ್ತಾರೆ. ಹೀಗಾಗಿ ಹುದ್ದೆಯನ್ನು ಸ್ವೀಕರಿಸುವ ಸಂದರ್ಭದಲ್ಲಿ ರಾಜನಿಂದ ದಂಡವನ್ನು ಸಾಂಕೇತಿಕವಾಗಿ ಪಡೆಯುತ್ತಿರುವುದೇ ದಂಡನಾಯಕ ಹೆಸರು ರೂಢಿಗೆ ಬರಲು ಕಾರಣವಾಗಿರಬಹುದು. ಇವರು ಚಕ್ರವರ್ತಿ ಇಲ್ಲವೆ ಮಹಾಮಂಡಳೇಶ್ವರರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಎಂದಿದ್ದಾರೆ.[೫]

ಶ್ರೀ, ಶ್ರೀಮತು ಇತ್ಯಾದಿಗಳು ಗೌರವ ಸೂಚಕವಾದರೆ, ರಾಜಾಧಿರಾಜ, ಗಿರಿದುರ್ಗಮಲ್ಲ, ಛಲದಂಕಮಲ್ಲ ಇತ್ಯಾದಿಗಳು ಬಿರುದುಗಳಾಗುತ್ತವೆ. ಮಹಾಸಾಮಂತ ಹೆಮ್ಮೆಯನಾಯಕನಿಗೆ ಜಿನಸಮಯಸಮುದ್ಧರಣ, ಪಾರಷದೇವಪಾದಾರಾಧಕ, ಒಡಗೆರೆ ಮಲ್ಲ, ಎಂಬ ಬಿರುದುಗಳಿದ್ದುದು ಶಾಸನಗಳಿಂದ ತಿಳಿಯುತ್ತದೆ. ಹಾಗೆಯೇ ಸಾಂಕೇತಿಕವಾಗಿ ನೀಡುವ ದಂಡದಿಂದ ದಂಡನಾಯಕ ಹೆಸರು ರೂಢಿಗೆ ಬರಲು ಕಾರಣವಾಗಿರಲಾರದು ಎನಿಸುತ್ತದೆ. ಸಾಂಕೇತಿಕವಾಗಿ ದಂಡ ನೀಡುವುದು ಅಧಿಕಾರ ಸ್ವೀಕರಿಸುವ ಸಂಕೇತವಾಗಿರುತ್ತದೆ ಎಂದು ಹೇಳಬಹುದಾಗಿದೆ. ಆದುದರಿಂದ ದಂಡಿನನಾಯಕ ಎಂದರೆ ಸೈನ್ಯದ ನಾಯಕತ್ವ ವಹಿಸುವವನು ದಂಡನಾಯಕ ಆಗುತ್ತಾನೆ. *ಹೀಗಾಗಿ* ***ದಂಡನಾಯಕ*** *ಎಂಬುದು* ***ಅಧಿಕಾರವನ್ನು*** *ಹೊಂದಿರುವ ಹುದ್ದೆಯಾಗಿರುತ್ತದೆ.*

ಈ ದಿಸೆಯಲ್ಲಿ ಮಹಾಪ್ರಧಾನ ಮತ್ತು ದಂಡನಾಯಕ ಎಂಬ ಎರಡೂ ಶಬ್ದಗಳೂ ಅಧಿಕಾರ ಸೂಚಕವಾಗಿದ್ದು ಮಾಡಕುಲದ ಪೆರುಮಾಳೆ ಮತ್ತು ಆತನ ಮಗ ಮಾಧವ ಇಬ್ಬರೂ ಮಹಾಪ್ರಧಾನರಾಗಿ ಸಾಮಾನ್ಯ ಆಡಳಿತವನ್ನೂ, ಯುದ್ಧದ ಸಮಯದಲ್ಲಿ ಸೇನೆಯ ನಾಯಕತ್ವವನ್ನೂ ವಹಿಸುತ್ತಿದ್ದರು ಎಂಬುದಾಗಿ ಅಭಿಪ್ರಾಯ ಪಡಬಹುದು.

ಕ್ರಿ.ಶ. ೧೧೭೯ರ ಎರಡು ಶಾಸನಗಳಲ್ಲಿ ಒಂದು ಶಾಸನವು ಮಹಾಸಾಮಂತ ಧುಮ್ಮೆಯನಾಯಕ (ಧುರ್ಮಣ)ನನ್ನು ಹೆಮ್ಮಣ ಮತ್ತು ತಿರುವವ್ವೆಯರ ಮಗನೆಂದೂ, ಮತ್ತೊಂದು ಶಾಸನದಲ್ಲಿ ದುಮ್ಮೆಯನಾಯಕನ ವಂಶಾವಳಿಯನ್ನು ದಾಖಲಿಸಿದೆ:[೬]

ಮಾರಸಿಂಗ ಗಾವುಂಡ

↓

ಪುರುಷಮಾಣಿಕ್ಯಸೆಟ್ಟಿ

↓

ಮಹಾಸಾಮಂತ ಹುಳ್ಳೆಯನಾಯಕ

↓

ಮಹಾಸಾಮಂತ ಹೆಮ್ಮೆಯನಾಯಕ

↓

ಮಹಾಸಾಮಂತ ಧುರ್ಮಣ ಅಥವಾ ದುಮ್ಮೆಯನಾಯಕ

ಈ ವಂಶದ ಮೊದಲ ವ್ಯಕ್ತಿ ಮಾರಸಿಂಗ ಗಾವುಂಡನಿಗೆ ರಾಜಾಧಿರಾಜನೆಂಬ ಬಿರುದಿದ್ದು ಅವನು ತಲಕಾಡನ್ನು ಆಳುತ್ತಿದ್ದಂತೆ ತಿಳಿದುಬರುತ್ತದೆ. ಆತನ ಮಗ ಪುರುಷಮಾಣಿಕ್ಯಸೆಟ್ಟಿಯನ್ನು ತಲಕಾಡುಪಟ್ಟಣ ಸಮುದ್ಧರಣನೆಂದು ವರ್ಣಿಸಿದೆ. ಮೂರನೆಯವನಾದ ಹುಳ್ಳೆಯನಾಯಕನಿಂದ ಆರಂಭವಾದ ಮಹಾಸಾಮಂತ ಪದವಿಯು ದುಮ್ಮೆಯನಾಯಕನವರೆವಿಗೂ ಮುಂದುವರೆದಿದೆ. ಇವರಲ್ಲಿ ಹೆಮ್ಮೆಯನಾಯಕನು ಜೈನನಾಗಿದ್ದನೆಂಬುದು, ***ಜಿನಸಮಯ ಸಮುದ್ಧರಣ, ಪಾರಿಷದೇವ ಪಾದಾರಾಧಕ*** ಎಂಬ ಬಿರುದುಗಳಿಂದ ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ ದಾನಿಯಾದ ಮಹಾಸಾಮಂತ ದುಮ್ಮೆಯನಾಯಕನು ತನ್ನ ತಂದೆಯ ಹೆಸರಿನಲ್ಲಿ ಹೆಮ್ಮೇಶ್ವರವೆಂಬ ಶಿವಾಲಯವನ್ನು ಕಟ್ಟಿಸಿದುದರಿಂದ ಆತನು ಶೈವಧರ್ಮೀಯನಾಗಿದ್ದನೆಂಬುದು ಸ್ಪಷ್ಟ. ಆತನನ್ನು ಕನ್ನೆಗೆರೆ ಮಲ್ಲ ಎಂದು ವರ್ಣಿಸಿದೆ.

ಎರಡನೇ ಬಲ್ಲಾಳನು ರಾಜ್ಯವಾಳುತ್ತಿದ್ದನೆಂದು ತಿಳಿಸುವ ಹೊನ್ನೇನಹಳ್ಳಿಯ ಕ್ರಿ.ಶ. ೧೧೮೦ರ ಶಾಸನವು ಮಹಾಸಾಮಂತ ಕುನ್ನಿಯ ಬೀರೆಯನಾಯಕನು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಆತನ ಮಗ ಸಾಮಂತ ದೇಕೆಯನಾಯಕನು ಮೇಲಾಳ್ವಿಕೆ ಮಾಡುತ್ತಿದ್ದಾಗ ಹಡವಳ ಹೊನ್ನಯ್ಯ ಮತ್ತು ದೇಗುಲಗೌಣ್ಡೆಯ ಮಗ ಹೊನ್ನೇಗೌಡನು ತುರುಗಾಳಗದಲ್ಲಿ ಮಡಿದನೆಂದು ದಾಖಲಿಸಿದೆ.[೭]

ಕ್ರಿ.ಶ. ೧೧೯೯ರ ಶಾಸನವು ಸಾಮಂತ ಸಿಂದೆಯ ನಾಯಕನು ಅರಣೆ ಮತ್ತು ಬೆಳ್ಳೂರಿನಲ್ಲಿ ದೇವಾಲಯಗಳನ್ನು ಕಟ್ಟಿಸಿದನೆಂದು ದಾಖಲಿಸುತ್ತಾ ಈತನ ವಂಶಾವಳಿಯನ್ನು ನೀಡುತ್ತದೆ:[೮]

ಮಾಚೆಯನಾಯಕ
↓
ರಾಚೆಯನಾಯಕ
↓
ಮಲ್ಲೆಯನಾಯಕ
↓
ಚಿಕ್ಕೆಯನಾಯಕ
↓
ಸಾಮಂತ ಸಿಂದೆಯನಾಯಕ

ಈ ವಂಶಾವಳಿಯಿಂದ ಈ ತಾಲ್ಲೂಕಿನ ಶಾಸನಗಳ ದಾಖಲೆಯಂತೆ ಮೊದಲ ನಾಲ್ಕು ಜನರು ಕೇವಲ ನಾಯಕತ್ವಕ್ಕೇ ಸೀಮಿತವಾಗಿದ್ದು, ದಾನಿಯಾದ ಸಿಂದೆಯನಾಯಕನು ಸಾಮಂತ ಪದವಿಯನ್ನು ಹೊಂದಿದ್ದ ಎಂದು ತಿಳಿಯುತ್ತದೆ.

ಕ್ರಿ.ಶ. ೧೨೨೪ರ ಬೆಳ್ಳೂರು ಶಾಸನವು **ಎಡಗೈಯ ಸೇನಾನಾಯಕ** ಕಾಚಿದೇವನನ್ನು ಶ್ರೀಮನು ಮಹಾಸಾಮನ್ತ ಬುಜಬಳ ವೀರರಾಜೇಂದ್ರ ಹೊಯ್ಸಳ **ಮೊರಸಾದಿರಾಯ** ಮೂರು ಲೋಕ ಜಗದಳಂ **ಕುರುವಂದ ಕುಲಕಮಲ** ಮಾರ್ತಾಂಡ ಎಂದು ಬಣ್ಣಿಸಿ, ಇವನ ವಂಶಾವಳಿಯನ್ನು ನನ್ನಿಯಮೇರುವಿನಿಂದ ಆರಂಭಿಸಿದೆ ಹಾಗೂ ಚತುರ್ಥವಂಶರೊಳುರಣಿತ ಗವುಂಡನುದ್ಭವಿಸಿ ಎಂದು ದಾಖಲಿಸಿದೆ.[೯]

ಕ್ರಿ.ಶ. ೧೧೧೮ರ ಶಾಸನವು '**ಶಂಭೂರಾಯ ಕಾಡವರಾಯ ಕುಲದ**' ಮಲ್ಲನಾಯಕನನ್ನು ಪಡೆಗಯ್ಯ ಸೇನಾನಾಯಕ' ಎಂದು ದಾಖಲಿಸಿ, ಈತನ ವಂಶಾವಳಿಯನ್ನು ನೀಡಿದೆ.[೧೦]

ಅಪ್ಪೆಯನಾಯಕ + ಮಾರವ್ವೆ

ಕಾಳಿಯನಾಯಕ   ಮಲ್ಲಯನಾಯಕ + ಮಹಾದೇವಿ

ಪಂಡಿತ   ಬಲ್ಲ   ಕಾಚವ್ವೆ, ಕಾಮಾಂಬೆ, ಮಾದಿಯಕ್ಕ

ಇಲ್ಲಿ ಅತ್ಯಮ, ಅಪ್ಪೆಯ ಮತ್ತು ಕಾಳೆಯ ಮೂವರಿಗೂ ಕೇವಲ ನಾಯಕ ಪದವಿಯಿದ್ದು, ಕಾಳಿಯನ ತಮ್ಮ ಮಲ್ಲನಾಯಕನು ಸೇನಾನಾಯಕನ ಪದವಿಯನ್ನು ಪಡೆದಿರುತ್ತಾನೆ.

ಈ ಮೇಲಿನ ಶಾಸನಗಳಲ್ಲಿ 'ಮಹಾಸಾಮನ್ತ' ಮತ್ತು 'ಸಾಮಂತ' ಶಬ್ದಗಳು ಇಲ್ಲಿ ಬಂದಿರುವ ನಾಯಕರ ಹೆಸರಿನ ಪೂರ್ವಾರ್ಧದಲ್ಲಿ ಸೇರ್ಪಡೆಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲಿ ಸಾಮಂತ ಎನ್ನುವ ಶಬ್ದಕ್ಕೆ ಒಬ್ಬ ರಾಜನಿಗೆ ಅಧೀನರಾಗಿರುವ ರಾಜ, ಮಾಂಡಲಿಕ ಎಂದು ಅರ್ಥ ನೀಡಿರುತ್ತಾರೆ. ಜೆ. ಎಂ. ನಾಗಯ್ಯರವರು ಇದು ತೀರ ಸಾಮಾನ್ಯ ಸರಳ ಅರ್ಥ, ಮಹಾಸಾಮಂತ ಎಂಬುದರಲ್ಲಿ ಎರಡು ಪದಗಳಿವೆ. ಮಹಾ ಮತ್ತು ಸಾಮಂತ, ಸಾಮಂತ ಎಂಬುದು ಸ್ವಾಮ್ಯವಂತ (ಒಡೆಯ, ಒಡೆತನ ಪಡೆದವ)>ಸಾಮಂತ > ಸಾವಂತ ಎಂದು ರೂಪಾಂತರ ಹೊಂದುತ್ತ ಬಂದಿದೆ. ಇದಕ್ಕೆ ಕೇವಲ ಗೌರವವಾಚಿಯಾಗಿ 'ಮಹಾ' ವಿಶೇಷಣ ಸೇರಿ ಮಹಾಸಾಮಂತ ಎಂಬ ಪದವಾಗಿದೆ. ಅಂದರೆ ಇಲ್ಲಿ ಸಾಮಂತ ಎಂದರೂ ಒಂದೇ, ಮಹಾಸಾಮಂತ ಎಂದರೂ ಒಂದೇ. ಇದು ಹುದ್ದೆಯನ್ನು ಸೂಚಿಸುವ ಪದವಾಗಿದೆ. ಇದು ಸಾವಂತ ಎಂಬ ಅಡ್ಡ ಹೆಸರಿನವರು ಮೂಲತಃ ಇಂಥ ಒಡೆಯರಾಗಿದ್ದರೆಂದು ಹೇಳಬಹುದಾಗಿದೆ, ಎಂದು ತಿಳಿಸಿ ಮುಂದುವರೆದು ಮಹಾಸಾಮಂತರಲ್ಲಿ ಅಧಿಕಾರ ಸ್ವರೂಪದ ಆಧಾರದ ಮೇಲೆ ಪ್ರಮುಖವಾಗಿ ಎರಡು ಬಗೆಗಳು ಕಂಡುಬರುತ್ತವೆ. ಇವೆರಡೂ ಒಂದೇ ಶ್ರೇಣಿಯಾದಾಗಿದ್ದು, ಮಹಾಸಾಮಂತರು ಹೆಚ್ಚಿನ ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ.[೧೧]

ಶ್ರೀಯುತರು ಸಾಮಂತ, ಮಹಾಸಾಮಂತ ಎರಡೂ ಒಂದೇ ಎಂದು ಹೇಳುತ್ತಾ, ಒಂದೇ ಶ್ರೇಣಿಯಾಗಿದ್ದು ಮಹಾಸಾಮಂತರು ಹೆಚ್ಚಿನ ಅಧಿಕಾರವನ್ನು ಹೊಂದಿದವರಾಗಿರುತ್ತಾರೆ ಎಂದಿರುವಲ್ಲಿ ಗೊಂದಲವುಂಟಾಗಿರುವುದು ಕಂಡುಬರುತ್ತದೆ.

ಶಾಸನಗಳಲ್ಲಿ ಸಾಮಂತ ಮತ್ತು ಮಹಾಸಾಮಂತ ಪದಗಳು ಸ್ಪಷ್ಟವಾಗಿ ಮತ್ತು ಪ್ರತ್ಯೇಕವಾಗಿ ದಾಖಲಾಗಿರುವುದು ಕಂಡುಬರುತ್ತವೆ. ಎರಡೂ ಒಂದೇ ಆಗಿದ್ದಲ್ಲಿ ಈ ಪ್ರತ್ಯೇಕತೆ ಇರುತ್ತಿರಲಿಲ್ಲ. ಉದಾಹರಣೆಗೆ, ಮೇಲೆ ಉಲ್ಲೇಖಿಸಿರುವ ಕ್ರಿ.ಶ. ೧೧೮೦ರ ಶಾಸನದಲ್ಲಿ **ಮಹಾಸಾಮಂತ ಕುನ್ನಿಯ ಬೀರೆನಾಯಕನ ಆಳ್ವಿಕೆ ಕಾಲದಲ್ಲಿ** ಆತನ ಮಗ ಸಾಮಂತ ದೇಕೆಯನಾಯಕ ಮೇಲಾಳಿಕೆ ಮಾಡುತ್ತಿದ್ದುದನ್ನು ದಾಖಲಿಸಿದೆ. ಇಲ್ಲಿ ತಂದೆ ಮತ್ತು ಮಗನ ಅಧಿಕಾರದಲ್ಲಿಯೇ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ಆದುದರಿಂದ ಸಾಮಂತ ಮತ್ತು ಮಹಾಸಾಮಂತ ಬೇರೆ ಬೇರೆ ಶ್ರೇಣಿಯದಾಗಿರುವುದಲ್ಲದೆ, ಅಧಿಕಾರದಲ್ಲಿಯೂ ವ್ಯತ್ಯಾಸವಿರುತ್ತದೆ ಎಂದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೪೪೪ರ ಶಾಸನವು[೧೨] ಶ್ರೀಮನ್ಮಹಾ ಮೂವರು ರಾಯರಗಂಡ ಗಂಡಭೇರುಂಡ ಗಜಸಿಂಹ ಎಂಬ ಬಿರುದಿನಿಂದ ಕರೆದಿರುವ ತೆಪ್ಪದ ಮುದ್ದೇನಾಯ್ಕನ ಮಗ ನಾಗೆಯನಾಯ್ಕನು ತನ್ನ ನಾಯಕತನಕ್ಕೆ ಸಲ್ಲುವ ದೇವಲಾಪುರದ ಮಲೆನಾಯಕನ ಹಳ್ಳಿಯ ತಿರುಮಲ ದೇವರಿಗೆ ಮುದುಸಮುದ್ರ ಗ್ರಾಮವನ್ನು ದಾನ ನೀಡಿರುತ್ತಾನೆ. ಕ್ರಿ.ಶ. ೧೪೭೨ರ ಎರಡು ಶಾಸನಗಳು[೧೩] ಶ್ರೀಮನ್ಮಹಾನಾಯಕಾಚಾರ್ಯ ಬಹಲಹುಲಿ ಹಳಿಕಾರ ಎಂಬ ಬಿರುದಿನಿಂದ ಕರೆದಿರುವ ಲಕ್ಕಣನಾಯಕನ ಮಗ ಚಿಕ್ಕ ಅಲ್ಲಪ ನಾಯಕನು ತನ್ನ ನಾಯಕತನಕ್ಕೆ ಸಲುವಂತಾ ದೇವಲಾಪುರದ

ಕೆರೆಯ ಕೆಳಗಿರುವ ೨೦೦ ಅಡಿಕೆ ಮರಗಳ ತೋಟವನ್ನು ಗೋಪಿನಾಥದೇವರ ಗೃಹ ಸಮಾರಾಧನೆಗೆ ದಾನ ನೀಡಿರುತ್ತಾನೆ.

ಕ್ರಿ.ಶ. ೧೫೬೨ರ ಶಾಸನವು[೧೪] ಕುಡುಗುಬಾಳು ಗ್ರಾಮದ ರಾಮಲಿಂಗ ದೇವರ ಅಮೃತಪಡಿಗಾಗಿ ಸುರಗಿಯ ದೇವಪ್ಪನಾಯಕನು ತನ್ನ ನಾಯಕತನಕ್ಕೆ ಸಲ್ಲುವ ದೇವಲಾಪುರ ಗ್ರಾಮವನ್ನು, ಈ ಗ್ರಾಮದ ಕೆಲವು ತೆರಿಗೆಗಳಿಂದ ಬರುವ ಆದಾಯವನ್ನು ನೀಡಿರುತ್ತಾನೆ ಎಂದಿದೆ.

ಈ ಮೂರು ಶಾಸನಗಳನ್ನು ಗಮನಿಸಿದಾಗ ದೇವಲಾಪುರದ ನಾಯಕತ್ವವು ಕ್ರಿ.ಶ. ೧೪೪೪ರಲ್ಲಿ ತೆಪ್ಪದ ಮುದ್ದೇನಾಯ್ಕನ ಮಗ ನಾಗೆಯನಾಯ್ಕನಿಗಿದ್ದು, ೨೮ ವರ್ಷಗಳ ನಂತರ ಚಿಕ್ಕ ಅಲ್ಲಪನಾಯ್ಕನಿಗೂ ಹಾಗೂ ೯೦ ವರ್ಷಗಳ ನಂತರ ಸುರಗಿಯ ದೇವಪ್ಪನಾಯಕನಿಗೂ ಒದಗಿ ಬಂದಿದೆ ಎನ್ನುವುದಾಗುತ್ತಿದೆ.

ಕ್ರಿ.ಶ. ೧೫೬೨ರ ಶಾಸನದಲ್ಲಿ ದೇವಪ್ಪನಾಯಕನಿಗೆ ಸುರಗಿಯ ದೇವಪ್ಪನಾಯಕ ಎಂದು ಕರೆಯಲಾಗಿದೆ. ಎಪಿಗ್ರಾಫಿಯ ಕರ್ನಾಟಿಕ ಸಂಪುಟ (ಪರಿಷ್ಕೃತ) ೭ ರಲ್ಲಿ ಸದರಿ ಶಾಸನ ಪಾಠದ ಮುನ್ನ ಆಂಗ್ಲ ಭಾಷೆಯಲ್ಲಿ ನೀಡಿರುವ ವಿವರಣೆಯಲ್ಲಿ ಈ ದಾನವನ್ನು ನೀಡಿದವನು by Devappanayaka of Suragi ಎಂದಿರುತ್ತದೆ.[೧೫] ನಾಗಮಂಗಲ ತಾಲ್ಲೂಕಿನ ಆಸುಪಾಸಿನಲ್ಲಿ ಸುರಗಿ ಎಂಬ ಹೆಸರುಳ್ಳ ಊರು ಯಾವುದೂ ಕಂಡು ಬರುವುದಿಲ್ಲ.

ಅಂತಃಪುರಧ್ಯಕ್ಷಂ ಕುಂತಳ ಪತಿಯಿತ್ತ ಸುರಿಗೆವಿಡಿವಧಿಕಾರಂ - ಅಂತಃಪುರದಲ್ಲಿ ಕೆಲವರು ತಮ್ಮ ಒಡೆಯನಿಂದ ಈ ರೀತಿ ಸಿರಿಗೆವಿಡಿಯುವ ಅಧಿಕಾರವನ್ನು ಪಡೆದ ಅಂಗರಕ್ಷಕರು 'ಸುರಿಗೆಯ' ಎಂಬ ಶಬ್ದವನ್ನು 'ಅಧಿಕಾರ ಸೂಚಕ'ವಾಗಿ ತಮ್ಮ ಹೆಸರಿನೊಂದಿಗೆ ಇಟ್ಟುಕೊಂಡಿರುವ ವಿವರಗಳು ಶಾಸನಗಳಿಂದ ತಿಳಿದುಬರುತ್ತವೆ.[೧೬] ಸುರಿಗೆ ಎಂದರೆ ಕತ್ತಿ, ಬಾಕು, ಖಡ್ಗ ಎಂಬ ಅರ್ಥಗಳಿರುತ್ತವೆ. ಸುರಗಿಯ ಎಂಬ ಶಬ್ದವು ಬಹುಶಃ ಸುರಿಗೆಯ>ಸುರಗೆಯ> ಸುರಗಿಯ ಎಂದು ಆಗಿರಬಹುದಾಗಿದ್ದು, ಸುರಿಗೆವಿಡಿವ ಅಧಿಕಾರವನ್ನು ಆದುದರಿಂದ ಸುರಗಿಯ ಎಂಬುದು ಸುರಿಗೆಯ ಎಂಬುದಾಗಿದ್ದು ಇದು ಊರಿನ ಹೆಸರಾಗಿರುವುದಿಲ್ಲವೆಂದು ಹೇಳಬಹುದಾಗಿದೆ.

ಕ್ರಿ.ಶ. ೧೫ನೆಯ ಶತಮಾನದ ಎರಡು ಶಾಸನಗಳು[೧೭] ಪರದರ (ವ್ಯಾಪಾರಿ) ಕುಲದ ಕೆಲ್ಲಂಗೆರೆಯ ಭಟ್ಟಾರಕದೇವ ಹಿರಿಯ ಹೊನ್ನೆಯನಾಯಕನ ಮಗ ವರದೆಯನಾಯಕನು ಗ್ರಾಮದ ಎದುರಿನಲ್ಲಿ ದೇವಾಲಯವನ್ನು ಕಟ್ಟಿಸಿ ಶೂದ್ರವಾಡಗಿದ್ದ ಈ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿದವನೆಂದು ದಾಖಲಿಸಿದೆ. ಈ ತಾಲ್ಲೂಕಿನ ಕೆಲವು ಶಾಸನಗಳಲ್ಲಿ ಪಡೆವಳ ಎಂಬ ಹುದ್ದೆಯ ಉಲ್ಲೇಖ ಬರುತ್ತದೆ. ಕಿಟ್ಟಲ್‌ರವರು ತಮ್ಮ ನಿಘಂಟುವಿನಲ್ಲಿ ಪಡೆವಳ ಎಂದರೆ ಸೇನಾನಿ ಎಂದಿರುತ್ತಾರೆ. ಇದರಿಂದ ಈ ಹುದ್ದೆಯನ್ನು ಹೊಂದಿದ್ದವರು ಬಹುಶಃ ಸಣ್ಣ ಸಣ್ಣ ಸೈನ್ಯದ ತಂಡಗಳಿಗೆ ನಾಯಕರಾಗಿದ್ದರೆಂದೂ, ಇಲ್ಲಿನ ವೀರಗಲ್ಲು ಶಾಸನಗಳಲ್ಲಿ ಕಂಡುಬರುವ ಹಾಗೂ ನಾಯಕ ಶಬ್ದವನ್ನು ಹೊಂದಿರುವವರು, ತಮ್ಮ ಗ್ರಾಮಗಳಲ್ಲಿದ್ದಾಗ ನಡೆದ ತುರುಗೋಳ ಕಾಳೆಗದಲ್ಲಿಯೋ ಅಥವಾ ಬೇರೆ ಕಾರಣ ಕ್ಕಾಗಿಯೋ ಊರಿನ ರಕ್ಷಣೆಗೋಸ್ಕರ ಹೋರಾಡಿ ಮಡಿದವರಾಗಿರುತ್ತಾರೆ ಎಂದು ಹೇಳಬಹುದು.

ಕಾಕತೀಯ ಅರಸ ಗಣಪತಿರಾಯನು ಯಾವುದೇ ಭೇದವಿಲ್ಲದೆ ಎಲ್ಲ ಕುಲದ ನಾಯಕ ಅಥವಾ ಪಾಳೆಗಾರರನ್ನು ಸೇರಿಸಿ ನಾಯಂಕರ ಒಕ್ಕೂಟ ಅಥವಾ ವ್ಯವಸ್ಥೆಯನ್ನು ಸ್ಥಾಪಿಸಿದ್ದನು. ಈ ವ್ಯವಸ್ಥೆಯನ್ನು ಗಣಪತಿದೇವನ ತರುವಾಯ ಬಂದ ರುದ್ರಾಂಬೆಯ ಮೊಮ್ಮಗ ಇಮ್ಮಡಿ ಪ್ರತಾಪರುದ್ರನು ತನ್ನ ಕಾಲದಲ್ಲಿ ಪ್ರಬಲರಾಗಿದ್ದ ಪದ್ಮನಾಯಕ ಕುಲಕ್ಕೆ ಸೇರಿದ ೭೭ ನಾಯಕ ಸಮೂಹದಿಂದ ಕೂಡ ಆಡಳಿತ ವ್ಯವಸ್ಥೆಯನ್ನು ಆರಂಭಿಸಿದನೆಂದು ತಿಳಿದುಬರುತ್ತದೆ. ಈ ಚರಿತ್ರೆಯು ಮುಂದುವರೆದು ಈ ಪದ್ಮನಾಯಕರು ನಾಲ್ಕನೆಯ ಜಾತಿಯಾಗಿ ಬೆಳಗುತ್ತಿದ್ದರೆಂದೂ ತಿಳಿದುಬರುತ್ತದೆ. ಆದರೂ ಕಾಕತೀಯ ಅರಸರು ಸ್ಥಾಪಿಸಿದ ನಾಯಂಕರ ವ್ಯವಸ್ಥೆಯನ್ನೇ ವಿಜಯ ನಗರದವರು ಅಳವಡಿಸಿ ಕೊಂಡರೆಂಬುದು ಗಮನಾರ್ಹ.[೧೮]

ಈ ಎಲ್ಲ ಅಧ್ಯಯನದ ಹಿನ್ನೆಲೆಯಲ್ಲಿ ಇಲ್ಲಿನ ಕ್ರಿ.ಶ. ೧೧೧೮ರಿಂದ ಕ್ರಿ.ಶ. ೧೫೬೨ರ ಅವಧಿಯ ಶಾಸನಗಳಲ್ಲಿ ಪರದರ ಕುಲ (ವ್ಯಾಪಾರಿಗಳು), ಮೊಡಕುಲ, ಶಂಭುವರಾಯ- ಕಾಡುವರಾಯ ಕುಲ, ಚತುರ್ಥವಂಶದ ಕುರುವಂದ ಕುಲ (ಇಲ್ಲಿ ಮೊರಸಾಧಿರಾಯ ಎಂಬ ಉಲ್ಲೇಖವಿದ್ದು, ಇದು ಒಕ್ಕಲಿಗರ ಒಳಪಂಗಡಗಳಲ್ಲಿ ಒಂದಾದ ಮೊರಸು ಒಕ್ಕಲಿಗ ಆಗಿರುತ್ತದೆ.) ಇತ್ಯಾದಿ ಬೇರೆ ಬೇರೆ ಕುಲ/ ವಂಶಗಳು ದಾಖಲಾಗಿವೆ. ಮಹಾಪ್ರಧಾನ, ಮಹಾಸಾಮಂತ, ಸಾಮಂತ, ದಂಡನಾಯಕ, ಸೇನಾನಾಯಕ ಎಂಬ ಅಧಿಕಾರ ಸೂಚಕಶಬ್ದಗಳೂ ದಾಖಲಾಗಿವೆ. ಹೀಗಾಗಿ ನಾಗಮಂಗಲ ತಾಲ್ಲೂಕಿನ ಶಾಸನಗಳಲ್ಲಿ ಜೈನ, ಶೈವ, ವೈಶ್ಯ ಮತ್ತು ಶೂದ್ರ ಎಂಬ ಯಾವುದೇ ಭೇದವಿಲ್ಲದೆ, ಪ್ರಾಚೀನ ಕಾಲದ ಚಕ್ರವರ್ತಿಗಳು, ರಾಜರು, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿನ ಯಾವುದೇ ವ್ಯಕ್ತಿಯು ಶೌರ್ಯ, ಪ್ರತಾಪ ಹಾಗೂ ವೀರತ್ವ ಗುಣವನ್ನು ಹೊಂದಿದ್ದಲ್ಲಿ ಮತ್ತು ನಂಬಿಕೆಗೆ ಅರ್ಹರೆನಿಸಿದ್ದಲ್ಲಿ ಅಂತಹವರ ಕುಲ/ವಂಶ/ಜನಾಂಗ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳದೆ ನಾಯಕತ್ವವನ್ನು ನೀಡಿ ಗೌರವಿಸುತ್ತಿದ್ದರು. ಈ ರೀತಿ ನಾಯಕತ್ವದ ಅಧಿಕಾರವಿದ್ದುದರಿಂದ ಅಧಿಕಾರ ಸೂಚಕವಾಗಿ ಆಯಾ ಹೆಸರಿನ ಉತ್ತರಾರ್ಧದಲ್ಲಿ ನಾಯಕ ಪದವು

ಸೇರ್ಪಡೆಯಾಗಿರುವುದು ಮತ್ತು ವಂಶಪಾರಂಪರರ್ಯವಾಗಿ ವೀರತ್ವವನ್ನು ಮೈಗೂಡಿಸಿಕೊಂಡಿದ್ದ ಕೆಲವರಿಗೆ **ನಾಯಕತ್ವ** ಬಂದಿರುವುದು ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲದಲ್ಲಿ ಬಳಕೆಯಾಗಿರುವ ಈ ನಾಯಕ ಪದಕ್ಕೂ ಪ್ರಸ್ತುತ ಆಧುನಿಕ ಕಾಲಾವಧಿಯಲ್ಲಿ ಬಳಕೆಯಲ್ಲಿರುವ ಜನಾಂಗೀಯ ನಾಯಕ ಪದಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದು ಹೇಳಬಹುದಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

(ಎಲ್ಲ ಶಾಸನ ಸಂಖ್ಯೆಗಳು ಎಪಿಗ್ರಾಫಿಯಾ **ಕರ್ನಾಟಕ** ಸಂಪುಟ - ೭ರ ನಾಗಮಂಗಲ ತಾಲ್ಲೂಕಿಗೆ ಸೇರಿದವಾಗಿವೆ).

೧. ಶಾ. ಸಂ. ೧೧೮, ಹಟ್ಟಣ.
೨. ಆದೇ ಶಾ.ಸಂ. ೭೩, ಬೆಳ್ಳೂರು.
೩. ಜೆ. ಎಂ. ನಾಗಯ್ಯ., **ಆರನೆಯ ವಿಕ್ರಮಾದಿತ್ಯನ ಶಾಸನಗಳು** : ಒಂದು ಅಧ್ಯಯನ, ಪುಟ-೨೭೯.
೪. ಎಂ.ಪಿ. ಮಹದೇವಯ್ಯ., ದಂಡನಾಯಕರ ಸ್ಥಾನಮಾನ, **ಇತಿಹಾಸ ದರ್ಶನ**, ಸಂ-೪ ಪುಟ.೧೦.
೫. ಆದೇ., ಜೆ.ಎಂ. ನಾಗಯ್ಯ, ಪು. ೩೨೦.
೬. ಶಾ. ಸಂ. ೧೩೨, ದೊಡ್ಡ ಜಟಕ.
೭. ಶಾ. ಸಂ. ೧೦೬, ಹೊನ್ನೇನಹಳ್ಳಿ.
೮. ಶಾ. ಸಂ. ೮೦, ಬೆಳ್ಳೂರು.
೯. ಶಾ. ಸಂ. ೮೧, ಬೆಳ್ಳೂರು.
೧೦. ಶಾ. ಸಂ. ೬೨, ಲಾಲನಕೆರೆ.
೧೧. ಆದೇ., ಜೆ. ಎಂ. ನಾಗಯ್ಯ, ಪು. ೨೩೦, ೨೩೧.
೧೨. ಶಾ. ಸಂ. ೧೬೬, ಮುತ್ಸಂದ್ರ.
(ಈ ಶಾಸನದಲ್ಲಿ ದಾಖಲಾಗಿರುವ ತೆಪ್ಪದ ಎಂಬ ಶಬ್ದವು ಬಹುಶಃ ದೋಣಿಯನ್ನು ನಡೆಸುವ ಬೆಸ್ತಕುಲವನ್ನು ಸೂಚಿಸುತ್ತದೆ.)
೧೩. ಶಾ. ಸಂ. ೧೬೫, ಕುಡುಗುಬಾಳು.
೧೪. ಶಾ. ಸಂ. ೧೫೭, ದೇವಲಾಪುರ.
೧೫. ಶಾ. ಸಂ. ೧೬೫, ಪು. ೧೬೩.
೧೬. ಆದೇ ಜೆ. ಎಂ. ನಾಗಯ್ಯ, ಪು. ೨೭೭.
೧೭. ಶಾ. ಸಂ. ೧೮,೫೮.
೧೮. ಲಕ್ಷ್ಮಣ ತೆಲಗಾವಿ., 'ಎಪ್ಪತ್ತೇಳು ಪಾಳೆಯಗಾರರು,' **ಇತಿಹಾಸದರ್ಶನ**, ಸಂ-೩, ಪು. ೨೨೬.

★★★★

ಇತಿಹಾಸವೆಂದರೆ ರಾಜಭೋಗಿಗಳ ಅಧಿಕಾರ ರಾಜಕೀಯ
ಪ್ರಚಾರಗಳ ಆಡುಂಬೊಲದ ಪಲ್ಲಂಗವಲ್ಲ ಚಕ್ಕಂದವಲ್ಲ
ಬಾಳ್ವೆ ಮಾಡಿದ ನೆಲದ ಜನರೆಲ್ಲರ ಬದುಕಿನ ನೋವು ನಲಿವುಗಳ
ಮನವಿಟ್ಟು ಹೇಳಿದರೆ ಅದುವೆ ಇತಿಹಾಸ ಕೊಡುವ ನ್ಯಾಯ

ಎಂ. ಜಿ. ನಾಗರಾಜ್*
ಡಾ. ಡಿ. ವಿ. ದೇವರಾಜ್**

ದೇವರಾಯನದುರ್ಗ - ಚೇಳೂರು ಪ್ರಾಚ್ಯವಸ್ತುಗಳು ಹೊಸ ಶಾಸನಗಳು

ದೇವರಾಯನದುರ್ಗ ಎಂಬ ಹೆಸರು ಮೈಸೂರು ಅರಸರ ಕಾಲಕ್ಕೆ ತುಮಕೂರು ಜಿಲ್ಲೆಯ ಈ ಗಿರಿಗೆ ಬಂದ ಅಭಿಧಾನ. ಅದಕ್ಕೆ ಮೊದಲು ಇದ್ದ ಹೆಸರು 'ಜಡಕನ ದುರ್ಗ' ಎಂದೇ. ಹೊಯ್ಸಳದ ಕಾಲಕ್ಕೆ 'ಆನೆಬಿದ್ದ ಸರಿ- ಆನೆ ಬಿದ್ದ ಜಾರಿ'- ಎಂಬ ಹೆಸರು ಜಿಲ್ಲೆಯ ಪ್ರದೇಶಾನ್ವಯವಾಗಿ ಬಂದಿತ್ತು. ವಿಶೇಷವಾಗಿ ಪಶ್ಚಿಮ ಹಾಗು ದಕ್ಷಿಣ ಭಾಗದ ಪ್ರದೇಶಕ್ಕೆ, ಸ್ಥಳಪುರಾಣದ ರೀತ್ಯಾ 'ಆನೆಗುಂಡಿ' (ಆನೆಬಿದ್ದ ಗುಂಡಿ!) ಎಂಬ ಸ್ಥಳನಾಮ ಇದಕ್ಕಿದೆ; ಈ ಗಿರಿಯ ಮೇಲೆ ಒಂದು ಊರು ಇದ್ದು ಅದಕ್ಕೆ 'ಆನೆಬಿದ್ದ ಸರಿ' ಎಂಬ ಹೆಸರಿತ್ತೆನ್ನಲಾಗಿದೆ. ಪ್ರಾದೇಶಿಕ ಚಹರೆಗಳೂ ಹಾಗೆಯೇ ಇವೆ. ದಿಟ. ಆದರೆ 'ಜಡಕನ ದುರ್ಗ' ಒಂದು 'ವನದುರ್ಗ' ಎಂದಿರುವ ಕಾರಣ - ವ್ಯಕ್ತಿವಾಚೀನಾಮ ಎಂಬ ಭಾವನೆ ಬರುತ್ತದೆ. ಹಾಗಲ್ಲದೆ, 'ಜಡ', ಎಂದರೆ ಗಿರಿ, ನೀರು, ಕಾಯಿಲೆ ಎಂಬ ಅರ್ಥಗಳು ನಿಘಂಟುಸೂಚಿಯಾಗಿರುವಲ್ಲಿ ಅದು ನಿಸರ್ಗವಾಚಿ ಮೂಲಿಕಾಮೂಲದ ಸ್ಥಳನಾಮವಾಗಿರ ಬೇಕೆನಿಸುತ್ತದೆ. ಈ ಜಡಕ ದುರ್ಗದಲ್ಲಿ (ವನದುರ್ಗ) ಬಹುಶಃ ಆಳುತ್ತಿದ್ದವನೊಬ್ಬನನ್ನು ಜಡಕನೆಂದೇ ಗುರುತಿಸಿ ಜಡಕನ ದುರ್ಗವೆಂದು ಬಾಯ್ದೆರೆಯಲ್ಲಿ ಬಂದಿರುವಂತಿದೆ. ಕ್ರಿ.ಶ. ೧೩೧೪ರ ಹೊಯ್ಸಳ ವೀರ ಬಲ್ಲಾಳನ ಕಾಲದ ಮೆಳಿಕೋಟೆ ಶಾಸನದಲ್ಲಿ '**ಆನೆಬಿದಸರಿಯ** ಏಳುನಾಡನಾಥ ಮಾಹೆನಸಿಗೆಋ'ಯ ಹೊಂನಮಾರಗವುಡನ ಮಗ ಹಿರಿಯ ಬೈಚಗವುಡಂಗೆ **ಮಲೆಗಲನಾಡ** ಒಳಗಣ ಮೆಳಿಕೋಟೆಯನು ಕೊಡುಗೆಯಾಗಿ....' ಎಂದಿದೆ. 'ವನದುರ್ಗ'ವೆಂದು ಜಡಕ(ನ) ದುರ್ಗವನ್ನು ಪರಿಗಣಿಸಿರುವುದು ಈ ಸಂದರ್ಭದಲ್ಲಿ ಗಮನಾರ್ಹವೆ.

ಗಂಗ ಶ್ರೀಪುರುಷನ ಕಾಲದಿಂದ (ಕ್ರಿ.ಶ. ೭೬೫) ಸಿಯಗೆಲ್ಲ ವಂಶದವರು ಹಾಗು ಅವರ ಮನೆಮಗ ಬಲ್ಲಹನೂ 'ಮಱುಗರೆನಾಡು' ಆಳಿದರು. ಹೊಯ್ಸಳರ ಕಾಲಕ್ಕೆ ಮರುಗಲ ನಾಡು ಮರುಗಲಿನಾಡು, ಮಲೆಗಲನಾಡು ಎಂದೆಲ್ಲ ಕರೆಸಿಕೊಂಡು ವಿಜಯನಗರ ಕಾಲಕ್ಕೂ 'ಮರುಗಲನಾಡು' ಎಂಬ ಹೆಸರನ್ನೆ ಉಳಿಸಿಕೊಂಡಿತ್ತು. ಬಹುಶಃ 'ಮಱುಗರೆನಾಡು' ಪರಿಸರ ಅಥವಾ ವೇಂಠೆಯನ್ನು, ಆವರಣವನ್ನು ನೋಡಿದರೆ ಬೆಟ್ಟಗುಡ್ಡಗಳ ಜಾಲ ಹಾಗು ಮೂಲಿಕಾ ನೆಲೆಯಾಗಿ, ಪುಷ್ಪರಾಶಿಗಳ ನೆಲೆಯಾಗಿ (ವಿಶೇಷವಾಗಿ 'ಮರುಗ'ದ ಸುಗಂಧ ಸಸ್ಯವೂ ಬೆಳೆಯುತ್ತಿದ್ದಿರಬೇಕು) ಕಾಣಬರುತ್ತದೆ. ಇದೆಲ್ಲ ಈ ನಾಡಿಗೆ ನಿಸರ್ಗವಾಚಿ, ಸಸ್ಯವಾಚಿ, ಸ್ಥಳನಾಮವನ್ನು ಆರೋಪಿಸಿದೆ ಎನ್ನಬೇಕು. ಇಂಥ ಮರುಗಲ ನಾಡಿಗೆ (ಮಱುಗಳೆನಾಡು) ಕ್ರಿ.ಶ ೧೨೮೭ರ ಸಮಯದಲ್ಲಿ ಹೊಯ್ಸಳ ರಾಮನಾಥನು ಕುಂಥಣೆಯ ಬೀಡಿನಿಂದ ಆಳುತ್ತಿದ್ದಾಗ ಅವನ ಪ್ರಧಾನ ದಂಡನಾಯಕನಾದ ಕಂಚೈಯ ದಂಡನಾಯಕನಿಗೆ ಮಾಂಡಲಿಕ ಪ್ರದೇಶವಾಗಿ ಸೇರಿತ್ತು; ಈ ಹೊಯ್ಸಳರ ಕಾಲದಲ್ಲಿ ಮರುಗಲನಾಡ 'ಶ್ರೀಮನಾಳ್ವಭು' ಹೊಯಿಸಣ ಗಂಧವಾರಣ ಆನೆಬಿದಸರಿಯ ಏಳುನಾಡನಾಥ ಹೊಂನಮಾರಗೌಡನ ಮಗ ಹಿರಿಯ ಬೈಇಚಗೌಡನು ಆನೆಬಿದ್ದಸರಿಯನ್ನು ಅಂದರೆ ಆನೆ ಜಾರಿಬಿದ್ದ ದುರ್ಗ (ಆನೆಬಿಜ್ಜಾರಿದುರ್ಗ=ವೇಂಟೆ) ವನ್ನು ಆಳುತ್ತಿದ್ದ ಎಂದಾಗುತ್ತದೆ. ಹೀಗಾಗಿ ದೇವರಾಯನದುರ್ಗ ಸೀಮೆಯು ಹೊಯ್ಸಳರ ಕಾಲದಲ್ಲೂ ಪ್ರಸಿದ್ಧಿಗೊಂಡಿತ್ತು ಎಂದಾಗುತ್ತದೆ. ಮರುಗಲನಾಡಿಗೆ ಏಳುನಾಡುಗಳು ಸೇರಿದಂತೆ 'ಆನೆಬಿದ್ದ ಸರಿಯಿಂದ' ಮಹಾಹನಸಿಗೆರೆ ಹೊನ್ನುಡಿಕೆವರೆಗಿನ ಪ್ರದೇಶವೆಲ್ಲ ಸೇರಿತ್ತು ಎನ್ನುವುದೂ ತಿಳಿಯುತ್ತದೆ[೩]. ಅಂದರೆ ಪೂರ್ವದಿಂದ ಪಶ್ಚಿಮ ದಿಸೆಯವರೆಗೆ ಸುಮಾರು ೪೦ಕಿ.ಮೀ. ಫಾಸಲೆಯ ಪ್ರದೇಶವಾಗಿತ್ತು ಎನ್ನಬೇಕಾಗುತ್ತದೆ, ಜಡಕನದುರ್ಗ ಸೀಮೆ.

ಹೊಯ್ಸಳರ ಕಾಲದಲ್ಲಿ ಅಂದರೆ ರಾಮನಾಥನ ದಂಡಯಾತ್ರೆಯ ಕಾಲದಲ್ಲಿ ಅವನ ಗಜಸೈನ್ಯದ ಆನೆಯೊಂದು ಜಾರಿ ಬೀಳಲು (ಆನೆ ಬಿದ್ದ + ಸರಿ-'ಸರಿ' ಎಂದರೆ ಜಾರು, ಪ್ರಪಾತ, ಕಡಿದು, ಎಂಬ ಅರ್ಥಗಳು ನಿಘಂಟುಗಳಲ್ಲಿವೆ- ಎಂದರೆ ಆನೆಜಾರಿಬಿದ್ದ, ಆನೆ ಕಡಿದಾದ ಹಳ್ಳಕ್ಕೆ ಬಿದ್ದ ಎಂದೆಲ್ಲ ಅರ್ಥಸ್ಫುರಿಸುತ್ತದೆ.). 'ಆನೆಬಿದ್ದಸರಿ' ಎಂಬ ಹೆಸರು ಘಟನಾ ವಾಚಿಯಾಗಿ ಸ್ಥಳನಾಮ ಆ ನೆಲೆಗೆ ಬಂದಿತು; ವಿಜಯನಗರ ಪೂರ್ವ ಕಾಲಕ್ಕೆಯೆ 'ಆನೆಬಿಜ್ಜಾರಿದುರ್ಗ-ವೇಂಠೆ' ಎಂಬ ಹೆಸರು ರೂಢಿಗೆ ಬಂದಿರಬೇಕು. ಸ್ಥಳಪುರಾಣ ಹೇಳುವಂತೆ, ಆನೆಯೊಂದು ಈ ಗಿರಿಯ ಕಡಿದಾದ ಜಾಗದಲ್ಲಿ ಜಾರಿಬಿದ್ದ ಕಾರಣ, ಆ ಜಾಗವನ್ನು

* ಅನರ್ಘ್ಯ ಶ್ರೀ ಜಚನಿ ಕೃಪ, ೨೨೧, ೯ಲನೇ ಅಡ್ಡರಸ್ತೆ ೫ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು - ೫೬೦ ೦೧೦
** ೨೩೫, ೫ನೇ ಮುಖ್ಯರಸ್ತೆ ೨ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು - ೫೬೦ ೦೪೩

ಆನೆಗುಂಡಿ (ಆನೆಗೊಂಡಿ) ಎಂದು ಕರೆಯುತ್ತಾರೆ. ಅಂತಾಗಿ ಕರಿಗಿರಿ (ಆನೆಯ ಬೆಟ್ಟ) ಎಂದೂ ಕರೆಯಲಾಯಿತು. ಈ ಘಟನೆಯ ಕಾರಣವಾಗಿಯೆ ಬೆಟ್ಟದ ಮೇಲೆ 'ಆನೆಬಿದ್ದಸರಿ ಅಥವಾ ಆನೆಬಿದ್ದ ಜಾರಿ' ಎಂದು ಬೆಟ್ಟದ ಪಶ್ಚಿಮ ಮತ್ತು ದಕ್ಷಿಣ ಭಾಗದ ಜಿಲ್ಲಾ ಪ್ರದೇಶಕ್ಕೆ ಹೆಸರು ಕೊಟ್ಟಂಥ ಊರೊಂದಿತ್ತು ಎಂದು ಹೇಳಲಾಗಿದೆ. ಹೊಯ್ಸಳ ವೀರಬಲ್ಲಾಳನ ಕ್ರಿ.ಶ. ೧೩೧೪ರ ಕಾಲಕ್ಕೆ 'ಆನೆಬಿದ್ದಸರಿ' ಎಂದು ಶಾಸನೋಕ್ತವಾಗಿರಲು, ಈ ಮೇಲಿನ ಘಟನೆ ಕ್ರಿ.ಶ. ೧೨೮೦ರ ರಾಮನಾಥನ ಕಾಲದಲ್ಲಿಯೆ ನಡೆದಿರಬೇಕೆನ್ನಿಸುತ್ತದೆ. ಆಯಕಟ್ಟಿನ ನೆಲೆ ಎಂದು ಬಹುಶಃ ಆಗಲೇ ಆ ಹೆಸರಿನಲ್ಲಿ ಗಿರಿಯ ಮೇಲೆ ಹೊಯ್ಸಳ ದಂಡನಾಯಕನು ಊರನ್ನು ನಿರ್ಮಿಸಲು ಕಾರಣನಾಗಿರಬೇಕು. ಕ್ರಿ.ಶ. ೧೩೧೪ರಲ್ಲಿ ಹೊಯ್ಸಳರ ದೇವಪ್ಪ ದಂಡನಾಯಕನ ಭಾವ ಬಿಮಲಪ್ಪನು ಹಿರಿಯ ಬೈಚೇಗೌಡನಿಗೆ ಕೊಡಗಿ ಗ್ರಾಮವನ್ನೂ ಕೊಟ್ಟಾಗಲೂ 'ಆನೆಬಿದ್ದ ಸಜೆ' ಎಂಬ ಪ್ರಯೋಗವಿದೆಯೇ ವಿನಾ 'ಜಡಕನ ದುರ್ಗ' ಎಂಬ ಹೆಸರಿಲ್ಲ. ಕ್ರಿ.ಶ. ೧೩೮೦ರ ಇಮ್ಮಡಿ ವೀರ ಹರಿಹರ ಕಾಲದಲ್ಲೂ **'ಆನೆಬಿದ್ದನ ಸಜೆ ಮೇಗೋಟೆಯ ಜಾಬಿದ ಗೊಂದಿಯ'** ಬಡಗಣ ಭಾಗದ ಪಡುವಣ ಭಾಗದಲ್ಲಿ ಕಟ್ಟಿಸಿದ ಡೊಣೆ, ಬುಕ್ಕರಾಯ ಸಮುದ್ರ ಇದೆ.[೪] ಅಂದರೆ ವಿಜಯನಗರ ಕಾಲದಲ್ಲಿಯೂ ಆನೆಬಿದ್ದಸಜೆ' ಎಂಬ ಹೆಸರೇ ಮುಂದುವರಿದಿರುವುದು ಕಾಣಬರುತ್ತದೆಯಲ್ಲದೆ 'ಜಡಕನ ದುರ್ಗ' ಎಂಬ ಹೆಸರು ಕಾಣದು. ಆದರೆ ಕ.ಕ. ನಿಘಂಟುವಿನಲ್ಲಿ ಜಾಬಿ= 'ಜಾಲ' ಎಂದರೆ ಜರಗು ಎಂಬ ಅರ್ಥ ನೀಡಿದೆ. (ದೇವರಾಯನ ದುರ್ಗವು ಕುಂಬಿನರಸಿಂಹಯಾ ದುರ್ಗದ ಬೆಟ್ಟ, ಬಂಗ್ಲಬೆಟ್ಟ, ಊರುಬೆಟ್ಟಗಳಿಂದ ಕೂಡಿ ತಳವಾರಬೆಟ್ಟ, ಸೀಗೆಕೊಪ್ಪದಬೆಟ್ಟ, ಚಿನ್ನರಬೆಟ್ಟ, ಈಶನಾಯಕ ಬೆಟ್ಟ, ದೊಡ್ಡವಾಡಿಬೆಟ್ಟ - ಈ ಜಾಲದಲ್ಲಿರುವ ಕಾರಣ ಜಾಲದಗೊಂದಿ ಎಂಬ ಹೆಸರು ಸಮಿಕರಣಗೊಂಡ 'ಜಾಬಿ' ವೆನಿಸಿರಲೂಬಹುದು). ಅಂತಾಗಿ ಮೇಗೋಟೆಯ ಶಾಸನದಲ್ಲಿ ಬರುವ 'ಜಾಬಿದಗೊಂದಿ' ಎಂಬ ಶಬ್ದವನ್ನು ಗಮನಿಸಿದರೆ ಆನೆಗುಂಡಿಯ ಮೇಲ್ಗಡೆಯ ಕೋಟೆ ಭಾಗದಲ್ಲಿ ಜಾರುವ ಅರ್ಥಾತ್ ಕಡಿದಾದ ನೆಲೆ ಇದ್ದು, ಅದರ ಉತ್ತರಕ್ಕೆ ಪಶ್ಚಿಮ ಭಾಗದಲ್ಲಿ, ವಾಯುವ್ಯದಲ್ಲಿ, ಬುಕ್ಕರಾಯ ಸಮುದ್ರವನ್ನೂ (ಇಂದು ಆ ವಿಜಯನಗರ ಶೈಲಿಯ ಪುಷ್ಕರಿಣಿಯನ್ನೂ ಜೀರ್ಣೋದ್ಧಾರ ಮಾಡಲಾಗುತ್ತಿದೆ). ಕಟ್ಟಿಸಲಾಯಿತು ಎನ್ನುವುದಾಗುತ್ತದೆ. ಇದಕ್ಕೂ, ಇದರ ಆಗ್ನೇಯ ದಿಸೆಗೆ ಸು.೧/೨ ಕಿ.ಮೀ ದೂರದಲ್ಲಿರುವ ಜಯಮಂಗಲಾ ನದಿಗೂ ಸ್ರೋತ ಸಂಪರ್ಕವಿದೆ ಎನ್ನಲಾಗಿದೆ. ಇಂದು ಜಯಮಂಗಲೆಯು ಚಿಮ್ಮುವ ನೆಲೆ ಒಂದು ಸುಂದರವಾದ ಪುಷ್ಕರಣಿಯಾಗಿದೆ. ಅದರ ಪೂರ್ವಬದಿಗೆ ವಿಜಯನಗರ ಕಾಲದ ಹಾಗೂ ಶೈಲಿಯ ಎರಡಂತಸ್ತಿನ ಜಯಮಂಗಲ ದ್ವಾರವಿದೆ.



ಕ್ರಿ.ಶ. ೧೩೮೦ರಲ್ಲಿಯೇ 'ಮೇಗೋಟೆ' ಇರಬೇಕಾದರೆ, ಆಗಲೇ ಅಲ್ಲೊಂದು ವನದುರ್ಗವೊಂದಿರಬೇಕೆಂದಾಗುತ್ತದೆ. ಬಹುಶಃ ಹೊಯ್ಸಳರ ಕಾಲದಲ್ಲಿಯೇ 'ವನದುರ್ಗ'ವೊಂದು ನಿರ್ಮಿತವಾಗಿರಬೇಕು. ಜನಪದದಲ್ಲಿ 'ಜಡಕ' ಎಂದರೆ ಮೂಲಿಕೆಯ ಮೂಲವನ್ನು ಆರೋಪಿಸಿದ ಅರ್ಥದ ಹಿನ್ನೆಲೆಯಲ್ಲಿ 'ಜಡಕದ ದುರ್ಗ' ಎನ್ನುವ ಬದಲು ಜಡಕನ ದುರ್ಗ ಎಂದು ರೂಢಿಯಿದ್ದಿರಬೇಕು. 'ಜಡಕನ ದುರ್ಗ' ಎಂಬ ಹೆಸರು ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ಶಾಸನೋಕ್ತವಾಗಿರಲು ಶಾಸನಕಾರ ಜನಪದ ರೂಢಿಯ ಶಬ್ದವನ್ನು ಬಳಸಿ ಬಹುಶಃ ಹಿಂದಿನ ಶಾಸನೋಕ್ತಿ ಗೊತ್ತಿಲ್ಲದೆ 'ಆನೆಬಿದ್ದಸಜೆ ಮೇಗೋಟೆ' ಶಬ್ದವನ್ನೂ ಬಿಟ್ಟಿರಬೇಕು. ಗುಬ್ಬಿ (ಅಳಲುಗಟ್ಟ) ತಾ, ಕ್ರಿ.ಶ. ೧೫೭೩ರ ಶಾಸನದಲ್ಲೂ ವಿಜಯನಗರ ಪತನಾನಂತರವೂ , **'ಪೆನುಗೊಂಡೆ ರಾಜ್ಯದ ಆನೆಬಿದ್ದಜರೆ'** ಎಂಬ ಪ್ರಯೋಗವಿದ್ದು'[೫] ಶಿವಗಂಗೆಯವರೆಗೂ ಈ ಪ್ರದೇಶದ ವ್ಯಾಪ್ತಿ ಇತ್ತು ಎಂದು ತಿಳಿಯುತ್ತದೆ.

ಈ ದುರ್ಗವನ್ನು ಚಿಕ್ಕದೇವರಾಜಒಡೆಯರು ಕ್ರಿ.ಶ. ೧೬೭೫ರಲ್ಲಿ ವಶಪಡಿಸಿಕೊಂಡು ತಮ್ಮ ಹೆಸರಿಟ್ಟರೆಂದು ಚಾಮರಾಜನಗರದ ತಾಮ್ರಶಾಸನವೊಂದು[೬]:- 'ಹೃತ್ವಾ ಜಡಗನ ದುರ್ಗಂ ವ್ಯತನೋಚ್ಚಿಕ ದೇವರಾಯ ದುರ್ಗ್ಗಾಖ್ಯಂ' ಎಂದು ತಿಳಿಸುತ್ತದೆ. ಅಂದರೆ ಹೊಯ್ಸಳರ ಮುನ್ನವೂ ನಿಸರ್ಗವಾಚಿಯಾಗಿ ಜಡಕ (ನ!) ದುರ್ಗ ಎಂಬ ಹೆಸರಿದ್ದುದು, 'ಆನೆಬಿದ್ದಸರಿ' ಎಂಬ ಹೆಸರನ್ನೂ ಅವರ ಕಾಲದಲ್ಲಿ ಪಡೆದ ಮೇಲೂ ೧೭ನೇ

ಶತಮಾನದಲ್ಲೂ 'ಜಡಕನದುರ್ಗ' ಎಂಬ ಹೆಸರೇ ಪ್ರಚಲಿತವಾಗಿ ಜನಪದದಲ್ಲಿ ಉಳಿದಿತ್ತೆಂದಾಗುತ್ತದೆ. ಆದರೆ ಚಿಕ್ಕದೇವರಾಜ ಒಡೆಯರಿಗೆ ದುರ್ಗದ ವಶದಿಂದ ಅವರ ಹೆಸರಿನ ಆರೋಪ ವಿದ್ದರೂ 'ದೇವರಾಯ ದುರ್ಗ' ಎಂಬ ಹೆಸರೇ ಉಳಿದುದೇಕೆ? ಚಿಕ್ಕದೇವರಾಜ ಒಡೆಯರು ಈ ಜಡಕ (ನ?) ದುರ್ಗವನ್ನೂ ಗೆಲ್ಲುವ ಮುನ್ನವೇ ಕ್ರಿ.ಶ. ೧೬೬೨ರಲ್ಲಿಯೆ ದೇವರಾಜ ಒಡೆಯರು (೧೬೫೯-೧೬೩೩) ಈ ಪ್ರದೇಶವನ್ನು ಆಳುತ್ತಿದ್ದ ಸಂಗತಿ ಇದೆ. ಹಾಗು ಅವರ ಕಾಲದಲ್ಲಿಯೇ ಈ ದುರ್ಗದಲ್ಲಿ ಕೋಟೆ ಕಟ್ಟಲಾರಂಭಿಸುವಲ್ಲಿ ಈ ದುರ್ಗವನ್ನು ನಾಯಕ ನರಸಪ್ಪ ಒಡೆಯನು ಆಕ್ರಮಿಸಿ ಜಡಕನದುರ್ಗದ ಅಧಿಪತಿ ಎನಿಸಿದ್ದ. ಅವನನ್ನು ಚಿಕ್ಕದೇವರಾಜಒಡೆಯರು ಸೋಲಿಸಿ ದುರ್ಗವನ್ನೂ ಮರುವಶ ಪಡಿಸಿಕೊಂಡ ಕಾರಣ ತಾಮ್ರಶಾಸನಕಾರ ಅವರ ಹೆಸರನ್ನೆ ದುರ್ಗಕ್ಕೆ ಆರೋಪಿಸಿರುವಂತಿದೆ.

ಚಿಕ್ಕದೇವರಾಜಒಡೆಯರ ಮೈಸೂರು ಸೈನ್ಯವು ಆದಿಲ್‌ಶಹನ ಮಿಲಿಟರಿ ಪ್ರತಿನಿಧಿ ಬಾಲ್‌ಬಲ್‌ಖಾನ್‌ನನ್ನೂ ಸೋಲಿಸಿ ಚೇಳೂರು, ಬಿದರೆಯನ್ನು ವಶಪಡಿಸಿಕೊಂಡ ನಂತರ ಮೊರಸು ಕೆಂಪೇಗೌಡ, ಕೋಲಾರ, ದೊಡ್ಡಬಳ್ಳಾಪುರ, ಮದ್ದಗಿರಿ ನಾಯಕರು ಜಡಕನದುರ್ಗದ ನಾಯಕ ನರಸಪ್ಪ ಒಡೆಯನ ನೇತೃತ್ವದಲ್ಲಿ ಎದುರಾದರು. ಚಿಕ್ಕದೇವರಾಜಒಡೆಯರು ಕ್ರಿ.ಶ. ೧೬೭೫ರ ಜನವರಿಯಲ್ಲಿ ಜಡಕನದುರ್ಗವನ್ನು ಗೆದ್ದು ವಶಪಡಿಸಿಕೊಂಡರು. ಆಗ 'ಚಿಕ್ಕದೇವರಾಯದುರ್ಗ' ಎಂದು ಹೆಸರಿಸಲಾಯಿತು.[2] ಬಹುಶಃ ಮೇಗೋಟೆಯನ್ನು ಜೀರ್ಣೋದ್ಧಾರ ಮಾಡಿ, ಕೆಳಕೋಟೆಯನ್ನೂ ಹೊಸದಾಗಿ ನಿರೂಪಿಸಿದ ಕಾರಣ 'ದೇವರಾಯನದುರ್ಗ' ಎಂಬ ಆಳರಸುವಂತಿಕೆಯ ಹೆಸರನ್ನು ರೂಢಿಗೆ ತಂದರೆನ್ನಬೇಕು. ಆದರೂ ಚಿಕ್ಕದೇವರಾಯದುರ್ಗದ ಕ್ರಿ.ಶ. ೧೬೯೯ರ ತಾಮ್ರಶಾಸನದ ರೀತ್ಯಾ, ದಳವಾಯಿ ದಾಸರಾಜಯ್ಯ ತಿಮ್ಮರಾಜಯ್ಯಗಳು ಕರಿಗಿರಿಯ ನರಸಿಂಹದೇವರ ಸನ್ನಿಧಿಯಲ್ಲಿ ಕಲ್ಯಾಣ-ಲಕ್ಷ್ಮಿ ದೇವಿಯ ಪ್ರತಿಷ್ಠೆಮಾಡಿದ ಸಂದರ್ಭದಲ್ಲಿಯೂ ಅನುಪನಹಳ್ಳಿಯನ್ನು ಗ್ರಾಮದಾನ ಮಾಡುವಲ್ಲಿ 'ಆನೆಬಿದ್ದಜರಿ ಮರುಗಲನಾಡು ಚಿಕ್ಕದೇವರಾಯದುರ್ಗ ಸ್ಥಳಕ್ಕೆ' ಸಲುವ ಗ್ರಾಮ ಎಂದಿದೆ. ಅಂದರೆ ಈ ಶಾಸನದಲ್ಲಿ 'ದೇವರಾಯನದುರ್ಗ' ಎನ್ನುವ ಬದಲು 'ಚಿಕ್ಕದೇವರಾಯನ ದುರ್ಗ' ಎಂದಿರುವುದು; ಹಾಗು ದುರ್ಗದ ಹಿಂದಿನ ಹೆಸರಾದ 'ಆನೆಬಿದ್ದಸರಿ' ಎಂದೂ ಬಳಸಿ, ಇವೆಲ್ಲ 'ಮರುಗಲನಾಡು' ವಿಗೆ ಸೇರಿದ ನೆಲೆ ಎಂದು ೧೭ನೇ ಶತಮಾನದಲ್ಲೂ ಬಳಕೆ ಇದ್ದುದು ತಿಳಿಯುವಂತಾಗುತ್ತದೆ.

ಈ ದುರ್ಗಕ್ಕೆ ಏಳುದ್ವಾರಗಳಿದ್ದು ಏಳುಸುತ್ತಿನ ಕೋಟೆ ಎನಿಸಿದೆ. ಇಲ್ಲಿ ಮೇಗೋಟೆಯಲ್ಲಿರುವ ದುರ್ಗನರಸಿಂಹಸ್ವಾಮಿ ಗುಡಿಯನ್ನೂ ಯೋಗಾನರಸಿಂಹಸ್ವಾಮಿ ದೇಗುಲವೆಂದು ಕರೆದಿರುವುದು ತಾತ್ವಿಕ ಕಲ್ಪನೆಯದಾಗಿದೆ. ದ್ರಾವಿಡ ಶೈಲಿಯ ಗುಡಿ ಇದಾಗಿದೆ. ಕಂಠೀರವ ನರಸರಾಜ ಒಡೆಯರಿಂದ ನಿರ್ಮಿತ ವಾದದ್ದೆನ್ನಲಾದ ದುರ್ಗಭೋಗನರಸಿಂಹಸ್ವಾಮಿ ಗುಡಿಯೂ ಇದ್ದು ಕ್ರಿ.ಶ. ೧೮೫೮ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಜೀರ್ಣೋದ್ಧಾರಗೊಂಡ ಬಗ್ಗೆ ಶಾಸನೋಕ್ತಿಗಳಿವೆ.

ಚೈತ್ರದಲ್ಲಿ ಇಲ್ಲಿ ಸ್ವಾಮಿಯ ಜಾತ್ರೆ ನಡೆಯುತ್ತದೆ. ಇಲ್ಲಿರುವ ಸಂಜೀವರಾಯನ ಗುಡಿ, ನರಸಿಂಹಸ್ವಾಮಿ ಗುಡಿಗಿಂತ ಪ್ರಾಚೀನವೆನ್ನಲಾಗಿದೆ. ಈ ದುರ್ಗದಲ್ಲಿ ರಾಮತೀರ್ಥ, ಧನುಷ್ ತೀರ್ಥಗಳಿದ್ದು, ಸನಿಹದ ಗವಿಯಲ್ಲಿ ಸೀತಾರಾಮ ಲಕ್ಷ್ಮಣರ



ವಿಗ್ರಹಗಳಿವೆ. ಮೇಗೋಟೆಯಲ್ಲಿರುವ ಕುಂಬಿ ನರಸಿಂಹನ ಗುಡಿಯನ್ನು ಯೋಗಾನರಸಿಂಹನದೆನ್ನುವರು ಇದು ಭೋಗ ನರಸಿಂಹನ (ಕೆಳಗಣ) ಗುಡಿಯ ವಾಸ್ತು ವಿನ್ಯಾಸವನ್ನು ಹೊಂದಿದೆ. ಇದರ ಬಳಿ ನರಸಿಂಹತೀರ್ಥ, ಪರಾಶರತೀರ್ಥ, ಪದ್ಮತೀರ್ಥ ಗಳಿವೆ. ಮೇಲೆ ಗರುಡನಗುಡಿ ಹಾಗು ದೀವಿಗೆ ಗುಂಡೂ ಇವೆ. ಈ ಗಿರಿಯನ್ನೂ ಕರಿಗಿರಿ ಕ್ಷೇತ್ರವೆಂದೂ ಕರೆಯುವುದು 'ಆನೆಬಿದ್ದ ಸರಿ' ಎಂಬುದರ ಸಂಸ್ಕೃತ ರೂಪವಷ್ಟೆ.

ಈ ದೇವರಾಯನ ದುರ್ಗದ ಭೋಗಾನರಸಿಂಹನ ಗುಡಿಯ ಪೂರ್ವದ ಹಾದಿಯಿಂದ ಬೆಟ್ಟವಿಳಿಯುತ್ತ ಸಂಕ್ರಾಂತಿ ಮಂಟಪ, ಪೆನುಗೊಂಡೆ ಬಾಗಿಲು, ಹಿಂದಿನ (ಬಹುಶಃ ವಿಜಯನಗರ ಕಾಲದ) ಅರಮನೆ ಕೋಟೆಯ ಶಿಥಿಲ ತಳಪಾಯದ ಅವಶೇಷ ಗಳನ್ನು ದಾಟಿ ಬಂದರೆ- ಏಳನೇಕೋಟೆಯ ನಂತರ ವಿಜಯನಗರ ಕಾಲದ ಕಲ್ಯಾಣಿ ಇದ್ದು, ಕಲ್ಯಾಣಿಯ ಪ್ರವೇಶದ್ವಾರದ ಮೇಲ್ ಚಪ್ಪಡಿಯ ಪೂರ್ವ ಮುಖಕ್ಕೆ ಅಪ್ರಕಟಿತ ಮೂರು ಸಾಲಿನ ಶಾಸನವೊಂದಿದೆ; ಈ ಕಲ್ಯಾಣಿಯನ್ನು ಇರುಗಪ್ಪ ದಂಡನಾಯಕನ ಕಾಲದಲ್ಲಿ ಕಟ್ಟಿದುದಾಗಿದೆ(!). ಕಲ್ಯಾಣಿ ಮುಚ್ಚಿ ಹೋಗಿತ್ತು. ಈ ನೆರೆಗಿದ್ದ, ಜನಪದರ ಬಾಯಲ್ಲಿ ವೋದೇಶ್ವ'ರ (ವೈದ್ಯೇಶ್ವರ) ಲಿಂಗವ,

ಈ ಕಲ್ಯಾಣಿಯಲ್ಲಿದೆ ಎಂದಿದ್ದೂ ತುಂಬಿದ್ದ ಮಣ್ಣನ್ನು (ಟಿ.ವಿ.ಎಸ್. ಕಂಪೆನಿಯವರು) ತೆಗೆದಾಗ ಈ ಶಾಸನಕಂಡು ಬಂದಿತು (ಸುತ್ತ ಕೋಟೆಗೋಡೆಕಲ್ಲುಗಳ ಶಿಥಿಲ ಅವಶೇಷಗಳಿವೆ. ಕಲ್ಯಾಣಿಯಲ್ಲಿ ೩೦ಅಡಿ ಆಳ ತೋಡಿದಾಗ ನೀರು ಸಿಕ್ಕಿತು.) ಲಿಂಗ ಕಾಣಬರಲಿಲ್ಲ.

ವೋದೇಸ್ವರ ಗುಡಿ ಈ ಕಲ್ಯಾಣಿಯಿಂದ ಎರಡು ಫರ್ಲಾಂಗ್ ದೂರದಲ್ಲಿದ್ದು, ಕದಂಬ-ನಾಗರ ಶೈಲಿಯಲ್ಲಿರುವ ಆ ಗುಡಿಯೂ ಜೀರ್ಣೋದ್ಧಾರಗೊಳ್ಳುತ್ತಿದೆ. ಟಿ.ವಿ.ಎಸ್. ಕಂಪೆನಿಯವರು ಪುಷ್ಕರಣಿ ಹಾಗು ವೈದ್ಯೇಶ್ವರ ಗುಡಿಯನ್ನು ಜೀರ್ಣೋದ್ಧಾರ ಮಾಡುವಲ್ಲಿ ನಮ್ಮನ್ನು ಆಹ್ವಾನಿಸಿ ಶಾಸನವನ್ನು ತೋರಿಸಿದ್ದಾರೆ.

ಶಾಸನದ ಪಾಠ



೧ ಶೋಭಕೃತ್ ಸಂವತ್ಸರದ ಭಾದ್ರಪದ ಬ ೧೦ಲ್ಲೂ

೨ ಶ್ರೀಮಂನ್ಮಹಾಪ್ರಧಾನಂ ಯಿರುಗಪ ದಂಣಾಯಕ ಒ

೩ (ಡೆ) ಯರಿಗೆ ಧರ್ಮವಾಗೆ ಶ್ರೀರಂಗದಾಮರಸರು ಕಟ್ಟಿದ ಬಾವಿ

ಶಾಸನದ ರೀತ್ಯಾ (ಶಕ೧೩೪೫) ಶೋಭಕೃತ್ ಸಂವತ್ಸರದ ಭಾದ್ರಪದ ಬಹುಳ ೧೦ ರಂದು ಮಹಾಪ್ರಧಾನ ದಂಡನಾಯಕ ಇರುಗಪ್ಪ ಒಡೆಯನಿಗೆ ಧರ್ಮವಾಗಲಿ ಎಂದು ಶ್ರೀರಂಗ ಧಾಮರಸರು ಬಾವಿಯನ್ನು ಕಟ್ಟಿಸಿದ ಬಗ್ಗೆ ಹೇಳುವಲ್ಲಿ ಅದು ಕ್ರಿ.ಶ. ೧೪೨೩ರ ಕಾಲಕ್ಕೆ ಹೊಂದುತ್ತದೆ.

ಇರುಗಪ್ಪ ದಂಡನಾಯಕ ವಿಜಯನಗರ ಕಾಲದವ, ಜೈನ. ೨ನೇ ಹರಿಹರನ ಕಾಲದಲ್ಲಿ ಕ್ರಿ.ಶ. ೧೩೮೭ರ ಸಮಯದಲ್ಲಿ ಅವನ ದಂಡನಾಯಕನಾಗಿದ್ದ. ೨೬.೨.೧೩೮೯ರಂದು ಕ್ರೋಧನ ಸಂವತ್ಸರ ಫಾಲ್ಗುಣ ಮಾಸದಲ್ಲಿ ವಿಜಯನಗರದಲ್ಲಿ ಕಂಥು ಜಿನಾಲಯವನ್ನು ಕಟ್ಟಿಸಿದ.[೯] ಅದನ್ನು ಗಾಣಿಗಿತ್ತಿ ದೇವಾಲಯ ಎನ್ನುವುದುಂಟು. ಸರಳಗೋಡೆಯ, ಕಳಿಂಗ ಶೈಲಿಯ ಮೇಲ್ ರಚನೆಯ, ಪಿರಮಿಡ್ ಆಕಾರದ ಮೆಟ್ಟಲು ರಚನೆ ಅದರದು, ಕದುಂಬನಾಗರ ಶೈಲಿ. ಈ ಕಲ್ಯಾಣಿ ಸನಿಹದ (ವೈದೇಶ್ವರ) ವೋದೇಶ್ವರ ಗುಡಿಯೂ ಕದಂಬನಾಗರ ಶೈಲಿಯ ವಿಮಾನ ಗೋಪುರ ಹೊಂದಿ, ಸುಖನಾಸಿ ಭಾಗ ಬ್ಯಾರೆಲ್‌ಮೊಗದ ಚಾಚುಗೋಪುರ ರಚನೆಯನ್ನು ಹೊಂದಿದೆ. ಆದರೆ ಜಿನಾಲಯಕ್ಕಿಟ್ಟ ಅಲ್ಲಿನ ವಾಸ್ತುರಚನೆ ಇಲ್ಲಿ ಶಿವಾಲಯಕ್ಕೆ ಬಂದಿರುವುದು ಗಮನಾರ್ಹ. ಆದರೆ ಈ ಗುಡಿಯ ಪೂರ್ವಕ್ಕೆ ವಿಜಯನಗರ ಕಾಲದ ಜಿನಾಲಯವೊಂದು ಸುಮಾರು ಅರ್ಧ ಕಿ.ಮೀ ದೂರದಲ್ಲಿದೆ. ಅಂದರೆ ಇರುಗಪ್ಪನು ಜಿನಾಲಯವನ್ನು ಕಟ್ಟಿಸಿ, ಹರ-ಜಿನ ಸಮನ್ವಯವೆಂದು ವೋದೇಶ್ವರ (ವೈದ್ಯೇಶ್ವರ) ಗುಡಿ ಕಟ್ಟಿಸಿರ ಬಹುದೆನ್ನಿಸುತ್ತದೆ. ಸದ್ಯದ ಶಾಸನವು ಯಿರುಗಪ್ಪ ದಂಣಾಯಕ ಒಡೆಯರಿಗೆ ಧರ್ಮವಾಗೆ ಎಂದಿರುವ ಕಾರಣ, ಅವನ ಆರೋಗ್ಯದ ಹರಕೆಗಾಗಿ ವೈದ್ಯೇಶ್ವರ ದೇಗುಲ ಕಟ್ಟಿದ ಕಾರಣವಾಗಿರಬೇಕು; ಆ ಕಾರಣಕ್ಕಾಗಿಯೇ ಕಲ್ಯಾಣಿಯನ್ನೂ ಕಟ್ಟಿಸಿ ದೇವರ ಮಿಾಸಲು ಕಲ್ಯಾಣಿ ಮಾಡಿತ್ತೆನ್ನಿಸುತ್ತದೆ. (ಈ ಕಲ್ಯಾಣಿಯ ಪ್ರವೇಶದ ಹಾದಿ, ಚೀಳೂರು ಭಾವಿಯ ಪ್ರವೇಶದ ಹಾದಿಯನ್ನು ಹೋಲುತ್ತದೆ) ಬಹುಶಃ ವಿಜಯನಗರ ಪತನಾನಂತರದ ಧಾಳಿಯ ಸಮಯದಲ್ಲಿ ವೈದ್ಯೇಶ್ವರ ಲಿಂಗವನ್ನು ಯಾವುದೋ ಭಾವಿಗೆ ಹಾಕಿ ಜನಪದದಲ್ಲಿ 'ವೋದೇಶ್ವರ'ನೆನಿಸಿರಬೇಕು. ಪೆನುಗೊಂಡೆ ಬಾಗಿಲಿಗೆ, ಬಾಬಯ್ಯನ ಕತೆ ಅಂಟಲು ಈ ಘಟನೆಗಳೆಲ್ಲ ಕಾರಣವಾಗಿರುವಂತಿದೆ.

ಒಂದನೇ ಬುಕ್ಕನ ಆಳ್ವಿಕೆಯಲ್ಲಿ ಕ್ರಿ.ಶ. ೧೩೬೭ರ ಚಿಲುಮುತ್ತೂರು ಶಾಸನದ ರೀತ್ಯಾ ಶ್ರೀಮನ್ಮಹಾಪ್ರಧಾನ ಬಯಿಚೆಯ ದಣ್ಣಾಯಕನ ಕುಮಾರ ಯಿರುಗಪ್ಪವೊಡೆಯನು ಚಿಲುಮತ್ತೂರನ್ನೂ ಸ್ಥಿರವಾಗಿ ಆಳುತ್ತಿದ್ದ ವಿಷಯವಿದೆ.[೧೦] ಕ್ರಿ.ಶ. ೧೩೮೭ರ ವಿಜಯನಗರ ಶಾಸನದಲ್ಲಿ, ಇರುಗದಂಡೇಶ, ಇರುಗ ಕ್ಷಿತೀಶ ಎಂದಿದೆ. ಅಂದರೆ ಮೊದಲು ಸಾಮಾನ್ಯ ವರ್ಗದ ಅಮರನಾಯಕನಾಗಿ ನಂತರ ದಂಡನಾಯಕ ಪದವಿಗೆ ಇಮ್ಮಡಿ ಹರಿಹರನ ಕಾಲದಲ್ಲಿ ಬಂದ ಇರುಗಪ ದಂಡನಾಯಕ, ಕ್ರಿ.ಶ.

೧೪೨೭ರ ವರೆಗೂ ಇದ್ದ ಬಗ್ಗೆ ಕ್ರಿ.ಶ. ೧೪೨೭ರ ಶ್ರವಣ ಬೆಳಗೊಳ ಶಾಸನದಿಂದ ತಿಳಿಯುತ್ತದೆ.[೧೧] ಆದರೆ ಕ್ರಿ.ಶ. ೧೪೨೩ ವೇಳೆಗೆ ದೇವರಾಯದುರ್ಗದ ಕಲ್ಯಾಣಿ ಶಾಸನದ 'ಧರ್ಮವಾಗೆ' ಕಟ್ಟಿಸಿದ ಶಾಸನ ಗಮನಿಸಿದರೆ, ಈ ಹೊತ್ತಿಗೆ ಅವನು ಇರಲಿಲ್ಲ ಅಥವಾ ಆಗತಾನೆ ತೀರಿದ್ದ ಎಂದು ತಿಳಿಯ ಬರುತ್ತದೆ. ಜನಪದದಲ್ಲಿ ಈ ಕಲ್ಯಾಣಿಯನ್ನೂ 'ವೋದೇಶ್ವರ'ನಿಗಾಗಿ ಕಟ್ಟಿಸಿದ್ದು ಎಂಬ ಮಾತಿದೆ.[೧೨] ವೈದ್ಯೇಶ್ವರ ಗುಡಿಯನ್ನು ಅವನ ಆರೋಗ್ಯ ಹರಕೆಗೆಂದು ಕಟ್ಟಿಸಿರಬೇಕು. ಇದಲ್ಲದೆ ಹನುಮಂತ, ಮಾರಮ್ಮನ ಗುಡಿಗಳಿವೆ. ಹನುಮನಿಗೆ ಹರಿಸೇವೆ ನಡೆಯುತ್ತದೆ.

ಈಗಾಗಲೇ ತಿಳಿಸಿದಂತೆ ಗಿರಿಯಿಂದ ಕಲ್ಯಾಣಿಗೆ ಬರಲು ಪೆನುಗೊಂಡ ಬಾಗಿಲಿನ ಮೂಲಕ ಸಾಗಿ ಬರಬೇಕು. ಮುಸ್ಲಿಂ ಆಳ್ವಿಕೆಗೆ ಸೇರಿದ್ದ ಕುರುಹೂ ಅದಾಗಿದೆ ಎಂಬುದುಂಟು. ಅದಕ್ಕೊಂದು ಕತೆ ಇದೆ. ಸಾಬರ ದೇವರು ಬಾಬಯ್ಯ ಪೆನುಗೊಂಡ ಬಾಗಿಲ ಬಳಿ ಇದ್ದನಂತೆ. ಅಲ್ಲಿಗೆ ಯೋಗಾನರಸಿಂಹ ಬಂದು ಜಾಗ ಕೊಡು ಅಂದ್ನಂತೆ. ಆಗ ಬಾಬಯ್ಯ, ನಾನೇನೋ ಹೋಗ್ತೀನಿ. ಆದರೆ ನನಗೆ ಈ ಜಾಗದಲ್ಲಿ ಮಂಗಳಾರತಿ ಕೊಡ್ಬೇಕು, ಎಂದು ಹೇಳಿ ಪೆನುಗೊಂಡೆಗೆ ಹೋದನಂತೆ. ಈ ಕಾರಣವೆ ಪೆನುಗೊಂಡೆ ಬಾಗಿಲ ಪಶ್ಚಿಮಕ್ಕೆ ಅರ್ಧಫಲಾಂಗ್ ದೂರದಲ್ಲಿರುವ ಸಂಕ್ರಾಂತಿ



ಮಂಟಪದ ಬಳಿ ಯೋಗಾನರಸಿಂಹದೇವರು ಸಂಕ್ರಾಂತಿಯಂದು ಬಂದು ಪೂಜೆಗೊಳ್ಳುವ ರೂಢಿ ಬಂದಿದೆ. ಪೆನುಗೊಂಡೆ ಬಾಗಿಲಿಗೂ ಬಂದಾಗ ಭಕ್ತರು ಪೂಜೆ ಮಾಡಿಸುತ್ತಾರೆ. ಜನರು ಜಾತ್ರೆಗೆ ಹೋಗಿ ಬರುವುದು ಈ ಬಾಗಿಲ ಮೂಲಕವೇ ಆಗಿದೆ. ಅಂದರೆ ಒಂದು ಕಾಲಕ್ಕೆ ಮುಸ್ಲಿಮರು ಆಕ್ರಮಿಸಿದ್ದ ಈ ಭಾಗದಲ್ಲಿ ಬಾಬಯ್ಯನ ಪೂಜೆ ನಡೆಯುತ್ತಿದ್ದು, ಅವರು ಹೋದ ನಂತರ ಯೋಗಾನರಸಿಂಹನ ಪೂಜೆ ನಡೆದರೂ ಹಳೆಯ ಸ್ಮರಣೆಯಿಂದ ಆ ರೂಢಿಯು ಧರ್ಮ ಸಾಮರಸ್ಯದ ಕುರುಹಾಗಿ ನಡೆಯುತ್ತಿದೆ ಎನ್ನಬೇಕು.

ಪೆನುಗೊಂಡ ಬಾಗಿಲು ೧೬ ಕಂಬಗಳುಳ್ಳ ಜಗತಿ ಮಂಟಪವಾಗಿ ವಿಜಯನಗರ ಶೈಲಿಯದಾಗಿದೆ. ಇಲ್ಲಿನ ಭಿತ್ತಿ ಹಾಗೂ ಸ್ತಂಭಗಳಲ್ಲಿ ಮಾರುತಿ, ಗುರಾಣಿ ಹಿಡಿದ ವೀರ, ಆನೆ, ಸಿಂಹಗಳ ಉಬ್ಬುಶಿಲ್ಪಗಳಿವೆ.


ಆದರೆ ಈ ಮಂಟಪ ಬಾಗಿಲ ಶಿಲಾ ಭಿತ್ತಿಗಳ ಮೇಲಿನ ಶಿಲ್ಪಗಳನ್ನು ಗಮನಿಸಿದರೆ ಬೇರೆಡೆ ಇದ್ದವುಗಳನ್ನು ತಂದು ಜೋಡಿಸಿಕೊಟೆ ಬಾಗಿಲ ಸ್ವರೂಪ ನೀಡಿದರೇ? ಎಂದೆನಿಸುತ್ತದೆ. ಇರುಗಪ್ಪ (ಕ್ರಿ.ಶ. ೧೪೧೧) ದಂಡನಾಯಕನಕಾಲದಲ್ಲಿ ಇಲ್ಲಿ ಒಂದು ಕೋಟೆ ಬಾಗಿಲು ರಚಿತವಾಗಿದ್ದಿರಬೇಕು. ನಂತರ ಜೀರ್ಣೋದ್ಧಾರ ಕಾಲದಲ್ಲಿ ಬೇರೆಶಿಲ್ಪಗಳು ಸೇರಿರಬಹುದು. ಇರುಗಪ್ಪನಿಗೂ ಈ ದುರ್ಗದ ಮೇಲ್ವಿಚಾರಣೆ ವಿಜಯನಗರ ಕಾಲಕ್ಕಿದ್ದಿರುವಂತಿದೆ.

ಮೇಲ್ಪಾರ್ಶ್ವ ಭಿತ್ತಿಯಲ್ಲಿ ಅಪ್ರಕಟಿತ ಶಾಸನವೊಂದು ಇದೆ. ಅಕ್ಷರಗಳು ಅಸ್ಪಷ್ಟ ಇವೆ - ಆದರೂ ಪಾಠವನ್ನು ಸದ್ಯ ಹೀಗೆ ಹೆಕ್ಕಬಹುದು:

೧. (ಸ್ವಸ್ತಿ) ಶ್ರೀಮತು	೪. ದ ಮಗ ಹೂದೊ
೨. ಸಕ.... ಖರ [ಸಂ].....	೫. ದ ವವರು
೩. ಮಾರದೇವಗೆ..[೧೩೩೩?]	೬. ಉ. ಣನು

- ಈ ಪ್ರದೇಶದ ಪಾಳೆಯಪಟ್ಟಿನವನೊಬ್ಬ ದೇವದಾನ ನೀಡಿದ ಶಾಸನವೆಂದು ಇದರ ಬಗ್ಗೆ ಹೇಳಬಹುದು. ಕಾಲ ಕ್ರಿ.ಶ. ಸ. ೧೪೧೧ಕ್ಕೆ ಹೊಂದುವಂತಿದೆ. ಶಾಸನ ಅಸ್ಪಷ್ಟವಾಗಿರುವ ಕಾರಣ ವಿಷಯದ ಪೂರ್ಣ ಮಾಹಿತಿ ತಿಳಿಯಲು ಕಷ್ಟವಾಗಿದೆ.

ಹನುಮಂತ- ವೋದೇಶ್ವರ ಜಾತ್ರೆಯಲ್ಲಿ ಮಾರಮ್ಮನಿಗೆ ಮೊದಲು ಪೂಜೆ ನಡೆಯುತ್ತದೆ. ಇಲ್ಲಿ ಆಕೆ ಪ್ರಾಚೀನ ಗ್ರಾಮದೇವತೆ ಆಗಿದ್ದು, ಈ ರೂಢಿ ನಡೆದು ಬಂದಿದೆ. ವೋದೇಶ್ವರ ಜಾತ್ರೆಯು ಶಿವರಾತ್ರಿಯ ನಂತರ ಮಾರ್ಚಿ ೧೩-೧೫ರ ಸುಮಾರಿಗೆ ನಡೆಯುವಲ್ಲಿ 'ತಂಬಿಟ್ಟು ಆರತಿ' ಅವನಿಗಲ್ಲದೆ, ಹನುಮಂತ, ಮಾರಮ್ಮನಿಗೂ ಉಂಟು. ನರಸಿಂಹನಿಗೆ ಅವನ ಜಾತ್ರೆಯಲ್ಲಿ ಮಾತ್ರ ತಂಬಿಟ್ಟಿನಾರತಿ ಇರುತ್ತದೆ. ದಾಸಪ್ಪನಿಂದ ಮಣೇವು ಹಾಕಿಸಿ, ಹರಿಸೇವೆ ನಡೆಸುತ್ತಾರೆ. ಮಣೇವಿಗೆ ತೆಂಗು, ಬಾಳೆ ಮಾತ್ರ ಬಳಕೆ.





ಇನ್ನು ಕದಂಬನಾಗರ ಶೈಲಿಯ ವೋದೇಶ್ವರ ಗುಡಿಯ ಬಾಗಿಲುವಾಡ ನೆತ್ತಿಯ ಉಬ್ಬುಶಿಲ್ಪವು ಯೋಗಿಯಂತಿರುವಲ್ಲಿ ಅದು ಅಸ್ಪಷ್ಟ ಉಬ್ಬುಶಿಲ್ಪವಾಗಿದೆ. ವೋದೇಶ್ವರ ಗುಡಿ ಹಿಂಬದಿಯಲ್ಲಿ ಕುರುಬರ ಲಕ್ಕಮ್ಮ. ಹೊಲತಮ್ಮನ ಗುಡಿ ಇದೆ. ವೋದೇಶ್ವರ ಗುಡಿ ಮುಂದೆ ವಿಶಿಷ್ಟ ವೆನಿಸುವ ಕಡಿವಾಣ ಹಿಡಿದ ಕುದುರೆ ಸವಾರನ- ಅಶ್ವಾರೋಹಿ- ಪ್ರತ್ಯೇಕ ಶಿಲ್ಪವಿದೆ. ಬಹುಶಃ ಅವನು ಸಾಹಣಿ ನಾಯಕನಾಗಿರಲು ಸಾಕು. ಅವನ ಶಿರೋವೇಷ ಗ್ರೀಕ್ ಟೊಪ್ಪಿಗೆ ಮಾದರಿಯಂತೆ ಇದ್ದು, ವಿಜಯನಗರ ಕಾಲದ ಶಿಲ್ಪವಾಗಿ ಕಾಣಬರುತ್ತದೆ.

ಈ ಗುಡಿಯ ಪೂರ್ವಕ್ಕಿರುವ ಬಸದಿ ಜಗತಿ ಬಸದಿಯಾಗಿದ್ದು ಬಾಗಿಲುವಾಡದ ನೆತ್ತಿಯಲ್ಲಿದ್ದ ಜಿನವಿಗ್ರಹವನ್ನೂ ಅಳಿಸಿದಂತಿದೆ. ಗೋಪುರವಿಲ್ಲದೆ, ಪ್ರಸ್ತರ ಮಾಡಿನ ಭಾಗಕ್ಕಷ್ಟೆ ನಿಂತ ಶಿಲಾಬಸದಿಯು ವಿಜಯನಗರ ಕಾಲದ ರಚನೆಯಾಗಿದೆ. ಭುವನೇಶ್ವರಿ ಅಂದವಾಗಿದೆ. ಬಂಡೆಯ ಮೇಲಿನ ಈ ಬಸದಿ ಇರುಗಪ್ಪನ ಕಾರಣವಾಗಿ ರಚಿತವಾದ ಬಸದಿಯಾಗಿರಬೇಕು.

ಭೋಗಾನರಸಿಂಹ ಗುಡಿಯ ಸನಿಹಕೆ ಬಲಕ್ಕೆ ಬುಕ್ಕರಾಯನ ಕೆರೆ, ನಂತರ ಊರು ಬಾಗಿಲು, ಬೀಬಿಯಮ್ಮನ ಹುತ್ತದ ಗುಡಿ, (ಮಕ್ಕಳ ಖಾಯಿಲೆ ನಿವಾರಣೆಗೆ ಹರಕೆ ದೇವತೆ) ಜಯಮಂಗಲ ಬಾಗಿಲು ಕೋಟೆಬಾಗಿಲು, ಪುಷ್ಪರಿಣಿ ಇವೆ.

ದೇವರಾಯನ ದುರ್ಗಕ್ಕೆ ಗ್ರಾಮೀಣ ಸಂಬಂಧಗಳು :ಇನ್ನು ತುಮಕೂರು ತಾಲೂಕು ಗೂಳೂರು ಹೋಬಳಿಯ ಹರಳೂರಿನಲ್ಲಿ ದೊರೆತ ಕ್ರಿ.ಶ. ೧೮೫೪ರಲ್ಲಿ ಬರೆದ ಕಡತದ ಬರಹ ಹಾಗು ಓಲೆಗರಿಗಳಲ್ಲಿ ದೇವರಾಯದುರ್ಗದ ಅಮೀಲರಿಗೆ ಪೂಜಾರಿ ತಿರುಮಲೈಯ್ಯ ಬರೆದುಕೊಂಡ ಫಿರ್ರಿಯಾದಿನ ವಿಷಯವಿದೆ. ಅದು ಅಂದಿಗೆ ಕ್ಯಾತ್ಯಂದ್ರ ಹೋಬಳಿ ಮಂಚಾಲ ಕುಪ್ಪೆ ಶಾನುಭೋಗ ನಂಜುಂಡಯ್ಯ ಸಾಲ ಹಾಗು ಭೋಗ್ಯದ ದವಸ ಧಾನ್ಯ ಕೊಡದೆ ದಬಾವಣೆ ತಕರಾರು ಮಾಡಿರುವ ಬಗ್ಗೆ ಬರೆಯಲಾಗಿದೆ. ಆ ಬರಹದ ಕೆಲಸಾಲುಗಳು ಹೀಗಿವೆ'.[೧೪]

ಶ್ರೀ । ತುಮಕೂರು ದೇವರಾಯದುರ್ಗ। ಸಂಮತೂ ಆಮೀಲರತೊರಬಿಗೆ। ಸಂನ್ ೧೮೫೪ ನೆಯ್ಯ ವಿರ್ಜುಂತಾ ೧೫ರಲ್ಲು ಕ್ಸಬಾ ಹರಳೂರ್ರು ಗ್ರಾಮದಲ್ಯು ಯಿರ್ರುವ ಪೂಜಾರ್ರಿ ತಿರ್ರುಮಲ್ಶೈ। ಯ್ಯನ್ನೂ ಬರದು ಕೊಂಡಿರ್ರುವ ಫಿರ್ರಿಯಾದು ಅರ್ಜಿ। ಯೇನೆಂದರೇ ಆೕ ಕ್ಯಾತ್ಯಂದ್ರದ ಹೋಬಳಿಯಲ್ಯು। ಯಿರ್ರುವ ಮಂಚಕಾಲಕುಪ್ಪೆ ಶ್ಯಾನ್ನೂಭಾಗ ನಂಜುಂಡ್ಶೈ। ಯ್ಯನಿಗೇ ಕೊಟ್ಟು ನಾನ್ನು ಯಿರ್ರುವದೂ ಗ ೨೦ ೯೦ ವರ। ಹಾ ಆಕ್ಷಾರದಲ್ಲೂ। ಯಿಪ್ಪತ್ತು ವರಹಾ ಯಿಾ ಹಣಕ್ಕೆ ವಾಯ್ದೆ ನಾಲ್ಕು ತಿಂಗಳಲ್ಲು ಕೊಡಲುಳ್ನೀವನ್ನೂ ಕೊಡದೆ। ಉದ್ದಿಶ್ಯ ನಂದಿಹಳ್ಳಿ ಶಾನುಭಾಗತನಕ್ಕೆ ಸಲತಕ್ಕ ಹೊಲಗದ್ದೆ ಊಾ ಸೋಂಯ್ಯಾವರ್ತ ಮುಂತಾದ್ದೆ। ಲ್ಲ ಹಣ ಹಣ ಹಣ ವೀಸ ಬಡ್ಡಿ ತೀರ್ರುವರ್ರಿಗೂ ಅನ್ಇಬರ। ಮಾಡಿಕೊಂಡು ಬರಲುಳ್ನಿವನೂ ಯಂದು ಕುದ್ದು ಬರ। ದು ಕೊಟ್ಟಿರ್ರುವ ಕರಡಿ ಕಾಗದ ಪತ್ರ ೧ ಹಿಂದೆ। ಕಾತ್ಸಂದ್ರಾ ಆ ಚಂಣಪ್ಪನವರ್ರಿಗೆ ಶುದ್ದಾ ಬೋಗ್ಯ। ಚಾಪಾ ಕಾಗದ ಪತ್ರ ಬರದು ಕೊಟ್ಟಿರ್ರುವ। ದಾಕಲು ಮಾಡಿ ಸದರ್ರಿ ಮಂಚಕಾಲ ಕುಪ್ಪೆ ಕಂಬೇ। ಗವುಡನ ಹ್ಸೆರ್ರಿಗೆ ಚಾಪಾಕಾಗದದ ಪತ್ರಾ ಬರದ। ಪತ್ರ ಸಹಾ ತೋರದೇ। ಯಿದುವರ್ರಿಗೂ ಹಣ ಹಣವಿ। ನ ಬಡ್ಡಿಯನ್ನೂ ಕೊಡದೆ ಬೋಗ್ಯದ ದವಸದಾಂನ್ಯ ವರ್ತನೆ ಮುಂತಾದಂನ್ನೂ ಕೊಡದೆ ದಬಾಯಿಶಿ ಯಿದ್ದಾ। ನೆ ಕಾವಂದರ್ರೂ ಧರ್ರಿಯಾ ಆ ಗೊಡ್ಸಿ ಯಿ ಗರ್ರೀಬನ। ಹಣವಿನ ಬಡ್ಡೀ ಸಹಾ ಕೊಡ್ಸಿ ಕೊಡಬೇಕೆಂದು ಪ್ರಾರ್ತಿಸುತ್ತೇನೆ ದೇವರ್ರೂ।

ಈ ಬರಹವನ್ನು ವಿಶ್ಲೇಷಿಸಿದರೆ ೧೯ನೇ ಶತಮಾನದಲ್ಲಿ ದೇವರಾಯನದುರ್ಗದ ಅಧಿಕಾರಿವಲಯ ಹಾಗು ಸಾಮಾನ್ಯ ಜಿನಜೀವನದ ಸಂಬಂಧಗಳ ಕಿರುಚಿತ್ರ ದೊರಕುತ್ತದೆ. ದುರ್ಗದ ಅಮೀಲನ ಕಾರುಬಾರು ಶಾನುಭೋಗರ ದಬಾವಣೆ ಹಾಗು ಶೋಷಣೆಯ ಚಿತ್ರ ಸಿಗುತ್ತದೆ ಕರಾರು ಮೀರಿ ನಡೆದುಕೊಳ್ಳುವ ಶಾನುಭೋಗರ ವರಸೆಗಳು ತಿಳಿಯುತ್ತವೆ. ಸಾಮಾನ್ಯ ಗ್ರಾಮೀಣರು ದೇವರಾಯನದುರ್ಗದ ಅಮೀಲರೊಡನೆ ಹೆಚ್ಚು ಸಂಪರ್ಕವಿದ್ದು ಅಧಿಕಾರಿ ಭಕ್ತಿ ತೋರುತ್ತಿದ್ದ ಬಗೆಯೂ ತಿಳಿಯುತ್ತದೆ. ಸಾಕ್ಷಿಗಳಿದ್ದರೂ ನೈತಿಕ ಶೀಲತೆ ಕಳೆದುಕೊಂಡ ಶಾನುಭೋಗರಿದ್ದ ಬಗ್ಗೆ ಅರಿವಿಗೆ ಬರುತ್ತದೆ. ಚಾಪಾ ಕಾಗದವನ್ನು ಕಡತದ ಜೊತೆಗೇ ಬಳಸಿಕೊಳ್ಳುತ್ತಿದ್ದ ಬಗೆಯೂ ತಿಳಿಯುತ್ತದೆ. ಅಂದಿನ ಆರ್ಥಿಕ

ಮಾನಗಳ ಬಳಕೆಯ ಸ್ವರೂಪ ಅರ್ಥಾತ್ ಆರ್ಥಿಕ ವ್ಯವಹಾರ ಹಾಗು ಸಾಮಾನ್ಯ ಜನಜೀವನದ ಚಿತ್ರ ದೊರಕುತ್ತದೆ. ಇದು ಕ್ರಿ.ಶ. ೧೮೫೪ರ ದೇವರಾಯನದುರ್ಗದ ಅಂಕೆಗಿದ್ದ ಗ್ರಾಮಗಳ ಚಿತ್ರಣ ಹಾಗು ಗ್ರಾಮನಾಮಗಳೂ ತಿಳಿಯುತ್ತವೆ. ಹೀಗೆಯೇ ಉಳಿದ ಬರಹ ಹಾಗು ಓಲೆಪತ್ರಗಳಿಂದ ಕಂಟಿರಾಯಿ ಹಣದ ಆರ್ಥಿಕ ವ್ಯವಹಾರ ದೇವರಿಗೆಂದು ಬಿಟ್ಟ ಬೇಗಾರ ರಾಗಿ ಬೆಳೆಯ ಸಮೃದ್ಧಿ, ಸಾಲದ ವ್ಯವಹಾರಗಳ ಬಗ್ಗೆಯೂ ತಿಳಿಯುತ್ತದೆ. ಹೀಗೆ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಜೀವನದ ತುಣುಕುಗಳು ೧೯ನೇ ಶತಮಾನದ ದೇವರಾಯನದುರ್ಗದ ಅಂಕೆಗಿದ್ದ ಪರಿಸರದಲ್ಲಿ ಈ ಕಡತದ ಬರಹಗಳಿಂದ ಕಂಡುಬರುತ್ತವೆ.




ಚೇಳೂರು

ಗುಬ್ಬಿ ತಾ. ಚೇಳೂರು ಪರಿಸರ ಗಂಗರ ಕಾಲದಿಂದಲೂ ಪ್ರಸಿದ್ಧಿಗೊಂಡ ಪ್ರದೇಶ. ಗಂಗರ ಕಾಲದಲ್ಲಿ ಚೇಳೂರಿನಲ್ಲಿ ನಡೆದಿರಬಹುದಾದಂಥ ವೀರ ಕಾಳಗವೊಂದರ ದೃಶ್ಯದ ಸುಂದರ ವೀರಗಲ್ಲೊಂದಿದೆ. ಅದು ಇಂದು ರಾಮನಗರದ ಜಾನಪದ ಲೋಕದಲ್ಲಿ ಸಂರಕ್ಷಿಸಲ್ಪಟ್ಟಿದೆ. ಈ ವೀರಗಲ್ಲಿನತ್ತ ಕ್ಯುರೇಟರ್ ಶ್ರೀ ಬಸವರಾಜ ಕುರುವ ನನ್ನ ಗಮನ ಸೆಳೆದರು. ಚೇಳೂರಿನಿಂದ ತಂದ ವೀರಗಲ್ಲು ಅದಾಗಿದ್ದುದರಿಂದ ವಿಶ್ಲೇಷಿಸಲೂ ಅನುಕೂಲ ವಾಯಿತು. ವೀರಗಲ್ಲು ಸು. ೪ ಅಡಿ ಅಗಲ ೫ ಅಡಿ ಎತ್ತರದ ಮೂರು ಹಂತದ್ದಾಗಿದೆ. ವೀರರ ಉಬ್ಬುಶಿಲ್ಪಗಳು ಕೆಳಹಂತದಲ್ಲಿ ಕ್ರಿಯಾಭಂಗಿಯಲ್ಲಿ ಕೆತ್ತಲ್ಪಟ್ಟಿವೆ. ಬಿಲ್ಲು, ಶೂಲ, ಖಡ್ಗಗಳು ಬಳಕೆಗೊಂಡಿವೆ. ಶತ್ರುವೀರ ಶೂಲ ಹಿಡಿದು ಕುದುರೆಯ ಮೇಲೆ ಕುಳಿತು ಆಯುಧ ಪ್ರಯೋಗಭಂಗಿಯಲ್ಲಿದ್ದಾನೆ. ಕುದುರೆಯ ಮುಂಗಾಲುಗಳು (ಚೇಳೂರು) ಊರಿನ ವೀರನ ತೊಡೆಯ ಮೇಲಿದ್ದು ಕಾಳಗದ ರುದ್ರ ಸನ್ನಿವೇಶವನ್ನು ಸೂಚಿಸುವಂತಿದೆ. ಕುದುರೆಯ ಶಿರದ ಮೇಲೆ ಕೊಡೆಯಂತಿರುವ ರಚನೆ ಇದ್ದು. ಶತ್ರುವೀರ, ರಾಜನೊಬ್ಬನಾಗಿದ್ದ ಅಥವಾ ಪ್ರಮುಖ ನಾಯಕನಾಗಿದ್ದ ಎಂಬ ಅಂಶವನ್ನು ತಿಳಿಸುವಂತಿದೆ. ಕಾಳಗ ದೃಶ್ಯದ ನೆತ್ತಿಗೆ ಅಂಟಿಕೊಂಡಂತೆ ಅಪ್ಸರಾಯಾನ ದೃಶ್ಯದಲ್ಲಿ ವೀರ, ಸತಿಯೊಡನೆ ಕ್ರಿಯಾಭಂಗಿಯಲ್ಲಿಯೇ ಇರುವುದು ಗಮನಾರ್ಹ. ವಾದ್ಯಮೇಳದ ಸೂಚನೆಯೂ ಕಾಣುತ್ತದೆ. ಈ ಹಂತದ ಮೇಲೆ ಉಬ್ಬು ಮೈ ಗೆರೆಯಂತೆ ಕಾಣುವ ಮೂರು ಪ್ರತ್ಯೇಕ ಪಟ್ಟಿಕೆಗಳು ತಗ್ಗು - ಏರುಎತ್ತರ ವ್ಯತ್ಯಾಸಗಳಲ್ಲಿವೆ. ಇಲ್ಲಿಯೇ ಸುರಲೋಕದಲ್ಲಿ ಆಸೀನ ರಾಗಿರುವಲ್ಲಿ ವೀರ ಹಾಗು ವೀರನ ಸತಿಯ ಸುಖಾಸೀನ ಭಂಗಿಯಲ್ಲಿರುವ ದೃಶ್ಯವಿದೆ. ಪೀಠದ ಮೇಲೆ ಎಡಾರ್ಧ ಪದ್ಮಾಸನಸ್ಥ, ಬಲಮಂಡಿ ಎತ್ತಿ ಮಡಿಸಿಕೊಂಡು ಕುಳಿತಿರುವ ವೀರ, ಜನಿವಾರದಂತೆ ಮಣಿಮಾಲೆ ಹಾಗು ಕೊರಳಹಾರ, ಮೂರು ದಿಂಡು ಪದರ ಸುತ್ತಿದ ಪೇಟದೊಡನೆ ಇದ್ದು ಸುಂದರ ಅಲಂಕಾರದೊಡನಿದ್ದಾನೆ. ಬಲಪಕ್ಕದಲ್ಲಿ ಮೊಗ ಭಿನ್ನಗೊಂಡ ಸತಿ ಇದ್ದಾಳೆ. ತುಂಬು ವಕ್ಷಸ್ಥಳದವಳಾಗಿ ಬಲಹಸ್ತವನ್ನು ಪೀಠದ ಮೇಲೆ ಊರಿ ಇಳಿಬಿಟ್ಟ ಕವುಚುಗಾಲಿನೊಡನೆ ಸುಖಾಸೀನ ಭಂಗಿಯಲ್ಲಿನ ಶಿಲ್ಪವಾಗಿದ್ದಾಳೆ. ತುಸು ಕೆಳಗಿನ ಪಟ್ಟಿಕೆಯ ಮೇಲೆ ಬಳುಕು ಭಂಗಿಯಲ್ಲಿ ಸ್ಥಾನಕ ಚಾಮರಧಾರಿಣಿಯರಿದ್ದು ಲಕ್ಷಣವತಿಯರಾಗಿದ್ದಾರೆ. ಈ ಹಂತವೊಂದು ರಾಜಗಾಂಭೀರ್ಯದ (ರಾಜರಾಣಿಯದ) ಸುರಾಂತಃಪುರವನ್ನು ಹೋಲುವಂತಿ ರುವುದನ್ನು ಗಮನಿಸಿದರೆ. ಇಡೀ ಶಿಲ್ಪದ ರುದ್ರಗಂಭೀರ ಶಿಲ್ಪ ಕಳೆಯನ್ನು ಗಮನಿಸಿದರೆ, ಪ್ರಬಲ ಶತ್ರುನಾಯಕರೊಡನೆ ಸ್ಥಳೀಯ ದೊರೆಯೊಬ್ಬ ಕಾಳಗವಾಡಿ ವೀರಸ್ವರ್ಗವೇರಿದಂತೆ ಕಾಣುತ್ತದೆ. ಬಹುಶಃ ಗಂಗರ ಪೈಕಿಯ ಜೈನ ದೊರೆಯೊಬ್ಬನು ಕಾಳಗವಾಡಿದ ಕುರುಹಿನ ವೀರಗಲ್ಲೆನಿಸುತ್ತದೆ. ಈ ಶಿಲ್ಪ ಚೇಳೂರಿನ ಹಳೆ ಕೆರೆಯ ಬಳಿ ಇತ್ತಂತೆ. ಈ ವೀರಗಲ್ಲು ಸುಮಾರು ೯-೧೦ನೇ ಶತಮಾನಕ್ಕೆ ಸೇರುವಂಥದ್ದಾಗಿದೆ.

ಚೇಳೂರಿನ ಸನಿಹಕ್ಕೆ ಗುಬ್ಬಿಯ ಮಾರ್ಗದಲ್ಲಿರುವ ಬಿದರೆ ಗ್ರಾಮದ ಕೆರಗೋಡು (ಕೆಲಮನೆಗಳಿರುವ) ಕೂಡ ೧೦ನೇ ಶತಮಾನದಲ್ಲಿ ಜೈನಕೇಂದ್ರವಾಗಿತ್ತು. ಬಿದರೆಯೂ ಪ್ರಸಿದ್ಧ ಜೈನಕೇಂದ್ರವಾಗಿದ್ದು ಇಂದಿಗೂ ಅಲ್ಲಿ ಪ್ರಾಚೀನ ಬಸದಿಯೊಂದು ಜೀರ್ಣೋದ್ಧಾರಗೊಂಡಿದೆ. ಕ್ರಿ.ಶ. ೯೭೮ರ ಬಿದರೆಗ್ರಾಮ ಕೆರಗೋಡು ಶಾಸನದ ರೀತ್ಯಾ[೧೩] ತ್ರಿಲೋಕಚಂದ್ರ ಬಟಾರರ ರವಿಚಂದ್ರ ಬಟಾರರ ಸಂನ್ಯಸನವ್ರತದ ವಿಷಯವಿದೆ. ಇದು ಚೇಳೂರು ಪರಿಸರದ ೧೦ನೇ ಶತಮಾನದ ಜೈನ ಸಮಯದ

ಪ್ರಭಾವವನ್ನೆ ಸೂಚಿಸುವಂತಿದೆ. ಪ್ರಸ್ತುತ ವೀರಗಲ್ಲು ಆ ಸಮಯದ್ದಾಗಿದ್ದು, ಗಂಗ ಮತ್ತು ನೊಳಂಬರ ನಡುವಣ ಯುದ್ಧವೊಂದರ ದೃಶ್ಯವೊಂದನ್ನು ತೋರುವಂತಿದೆ. ಬೆಂಗಳೂರು ಜಿಲ್ಲೆ ಬೇಗೂರು ಶಾಸನದಲ್ಲಿ (ಕ್ರಿ.ಶ. ೮೯೦-೯೧೦ರವರೆಗೂ ಕಾಲವನ್ನು ವಿದ್ವಾಂಸರು ವಿಸ್ತರಿಸುವ ಕಾರಣ) ಬರುವ ತುಮ್ಬೆಪಾದಿ ಯುದ್ಧ; ಕ್ರಿ.ಶ. ೯೫೫ರ ತುಮಕೂರು ಶಾಸನದಲ್ಲಿ ಬರುವ 'ತುಮ್ಮೆಗೂರ ಕೆಱು'' ಎಂಬ ಪದ; ಅಲ್ಲದೆ ಗಂಗರಾಜ ತುಮಕೂರನ್ನು ಕ್ರಿ.ಶ. ೯೭೦ ರಲ್ಲಿ ಕಟ್ಟಿದನೆಂದಿರುವ ಹೇಳಿಕೆ ಇರುವಲ್ಲಿ, ಸದ್ಯದ ಚೇಳೂರು ವೀರಗಲ್ಲು ತುಮ್ಬೆಪಾದಿ ಯುದ್ಧವೂ ತುಮಕೂರು ತಾಲೂಕು ಪರಿಸರದ ಸಮಯದ್ದಾಗಿ ಈ ಗಂಗ ನೊಳಂಬರ ಯುದ್ಧದ ಕುರುಹಾಗಿರಬಹುದೇ ಎನಿಸುತ್ತದೆ. ಜೊತೆಗೆ **ತುಮ್ಬೆಪಾದಿ** (ತುಮ್ಬೆವಾಡಿ: ತುಂಬೆ ಎಂಬ ಸುಮನಾಮವಾಚಿ ಮೂಲವನ್ನು ಹೊಂದಿದ ತುಮಕೂರಿನ ಹೆಸರಿನ ಪ್ರಾಚೀನತೆ ೯ನೇ ಶತಮಾನಕ್ಕೆ ಸಲ್ಲುವಂಥ ಸಂದರ್ಭವನ್ನು ಹೆಕ್ಕಲು ಅನುಕೂಲಿಸುವ ವೀರಗಲ್ಲು ಇದಾಗಿರಬಹುದೆ!) ಯುದ್ಧವೂ ಗಂಗನೊಳಂಬರ ನಡುವೆ ನಡೆದದ್ದು. ಈ ವೀರಗಲ್ಲು ಚೇಳೂರಿನ ಕೆರೆಕೋಡಿ ಬಳಿ ಅಂತಃಪುರದ (ಈಗ ಅಂತಾಪುರ) ಬಳಿ ಇತ್ತು. ಅಂದರೆ ಇದು ವೀರಗಲ್ಲಿನ ವೀರನ ರಾಣಿವಾಸದ ನೆಲೆ ಆಗಿದ್ದಿರಬಹುದೆ!



ಹೊಸ ಶಾಸನ : ಈಚೆಗೆ ಚೇಳೂರಿನಲ್ಲಿ ಹೊಯ್ಸಳ ವೀರಬಲ್ಲಾಳನ (ಕ್ರಿ.ಶ. ಸು. ೧೧೮೬ರ ಇಮ್ಮಡಿ ವೀರಬಲ್ಲಾಳ) ಅಪ್ರಕಟಿತ ತುಂಡು ಶಾಸನವೊಂದು ಅಲ್ಲಿಯ ಕಲ್ಯಾಣ ಮಂಟಪದ ಬಳಿ ಲಭ್ಯವಾಯಿತು. ಪ್ರಾಚೀನ ಹೊನ್ನಾದೇವಿ ಗುಡಿಯ ಚಿಕ್ಕೂರು ಬಾಗಿಲ ಬಳಿ ಇದ್ದ ಈ ಭಿನ್ನ ಶಾಸನವನ್ನು ಇಲ್ಲಿಗೆ ತಂದಿರಿಸಿದೆ.*

ಶಾಸನದ ತುಂಡು ಸುಮಾರು ೨೧/೨ ಅಡಿ ಅಗಲ, ೧೧/೨ ಅಡಿ ಎತ್ತರ, ೩ ಅಂಗುಲ ದಪ್ಪವಿದ್ದು. ಮೇಲಿನ ಸಾಲುಗಳ ಭಾಗ ಇಲ್ಲವಾಗಿದೆ. ಕೆಳಗಿನ ಭಾಗವೂ ಇಲ್ಲವಾಗಿದೆ. ಎಡಭಾಗ ಒಡೆದಿದೆ. ಕೆಲವೆಡೆ ಅಕ್ಷರ ಅಸ್ಪಷ್ಟವಾಗಿವೆ. ಸದ್ಯ ಕಾಣುವ ಅಕ್ಷರಗಳನ್ನು ಈ ಮುಂದೆ ಶಾಸನದ ಪಾಠವಾಗಿ ನೀಡಿದೆ.

ಕಾಣುವ ಶಾಸನದ ಪಾಠ

೧ [ರಾಯಪು.ರ....ದಿ]
೨ ಣಾಗ .... ಹೊಯಿಸಣಮಾಂ [ಡಲಿ].....
೩ ಂಡ ಕದನ ಪ್ರಚಂಡ ಏಕಾಂಗವೀರ......
೪ ಸಿದ್ಧಿ ಗಿರಿದುರ್ಗಮಲ್ಲ ಛಲದಂಕ ರಾ[ಮ].....
೫ ಮಗರರಾಜ್ಯ ನಿರ್ಮೂಲ ಚೋಳರಾಯ ಸ್ಥಾ.....
೬ ಡ್ಯ ಕುಲ ಸಮುದ್ಧರಣ ಹೊಯಿಸಣ ಭುಜ [ಬ.].....
೭ ಚಕ್ರವರ್ತಿ ಶ್ರೀ ವೀರಬಲ್ಲಾಳ ದೇವರಸರು ದೋರ....
೮ ನೆಲೆವೀಡಿನೊಳ್(ಉ) ಪ್ರಿಥ್ವೀರ್ರಾಜ್ಯಂ ಪಾಟಿಸಂತ್ತಿರೆ ಸ್ವಸ್ತಿಶ್ರೀ....
೯ ಷೋಟಜಿಯೋಷ್ಟಪರಿಮೀಸ್ವರಂ. ಗೋ(ದ್ಯೋ) ಷ್ಟೀಪ್ಷಜದ ವಿಡಾರಂ ಅಂಚು [ದಿ]
೧೦ [ತ್ರಿ]ಭುವನ್ನಂ ವಿಜ್ಞಾನ ವಿಮಾನ್ನನಾ [ಗ] [ಸ್ಥಿ]ರಮಸ್ತು ವೀಟ್ ನೃಪ್ಪಥಿಗಂ
೧೧ ಬೂನ್ನಂದಿ ದೇ[ವಸ] ಹದಕರುಂ ಸಂದ್ದಿಪ್ಪ [ಫಲ]ಂ ಅರ್ದ್ದ[ದೋ]** ೬[ಹ]ಲ
೧೨ ಪ.ಕ್ಷಟೂರುಂ... ಸಹಾದಕರು[ಂ] ನಾರಾಚಬುವಿ
೧೩ .... ದ.... ರ... ಅಗ್ರಂ ಹ[ಣ] ಫ್ಟ್
೧೪ ..... ರ .... ದ[ಟ] ಹೋಮಮಂ.....
೧೫ ..... ಗಕ.....ವ....ಎದ...ಮ ....
೧೬ ...... ನ ಲ ಟೆಲಗ ....
೧೭ . ಗ . ನಯಗು ವಿವಳ
೧೮ . . . [೧೧೦೮?] ಸಂ.....

** (ಇದನ್ನು ೮೧೬ ಹಲ ಎಂದು ಓದಬಹುದೆ! ಎಂಬ ಅನುಮಾನವೂ ಒದಗುತ್ತದೆ ಲಿಪಿ ಸ್ವರೂಪ ನೋಡಿದರೆ).

ಅಕ್ಷರಗಳನ್ನು ಆಳಕ್ಕೆ ಕೆತ್ತಿದ್ದರೂ, ಕೆಲವೆಡೆ ಚಕ್ಕೆಗಳೆದ್ದಿವೆ. ಕೆಲವೆಡೆ ಅಕ್ಷರಗಳು ಸವೆದಿವೆ. ಅಕ್ಷರಗಳ ಅಗಲ ೧ ಅಂಗುಲದಿಂದ ಅರ್ಧ ಅಂಗುಲ, ಉದ್ದ ೧ ಅಂಗುಲದಿಂದ ಮುಕ್ಕಾಲು ಅಂಗುಲದ ವರೆಗಿದೆ. ಹದಿನೆಂಟು ಸಾಲು ಮಾತ್ರ ಉಳಿದಿರುವ ಈ ತುಂಡು ಶಿಲಾಶಾಸನದಲ್ಲಿ ಕೆಲ ಅಕ್ಷರಗಳು ಮಧ್ಯದಲ್ಲಿ ನುಸುಳಿಕೊಂಡಿವೆ. ಹೀಗಾಗಿ ಹೊಂದಿಸಿಕೊಂಡು ಓದಬೇಕಿದೆ. ಈ ಶಾಸನವು ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಚೇಳೂರಿನ ದೃಷ್ಟೇಷ್ವರ ಗುಡಿಯ ಬಿಡಾರದಲ್ಲಿ ಸ್ಥಿರವಾಸವಿದ್ದ ವಿದ್ವಾಂಸ ಹಾಗು ತಪಸ್ವಿ ನಂದಿದೇವನಿಗೆ, ದೇಗುಲ ನಿರ್ವಹಣೆ, ಆಗಮೋಕ್ತ ದೇವಾಚಾರಗಳಿಗೆ ಭೂದಾನ, ನಿಧಿದಾನವನ್ನು ಕೆರೆಸಹಿತ ಕೊಟ್ಟ ವಿಷಯವನ್ನು ಅಪೂರ್ಣ ಶಾಸನವೆನಿಸಿದರೂ ನೀಡುತ್ತದೆ. 'ಶಕ ೧೧೦೮'(?) ಅಂದರೆ ಕ್ರಿ.ಶ. ೧೧೮೬ರ ಶಾಸನವೆನ್ನಬಹುದಾಗಿದೆ.

---

* (ಚೇಳೂರಿನ ಈಶ್ವರೀಯ ವಿದ್ಯಾಲಯದ ಶ್ರೀ ಕೆ. ಆರ್. ತಿಮ್ಮೇಗೌಡ, ಪ್ರೊ. ಎಸ್. ಬಸವರಾಜು, ಶ್ರೀ ಎಸ್. ಇಂದು ಕುಮಾರ್, ಶ್ರೀ ಎಸ್. ಪಾಲಾಕ್ಷ ಅವರುಗಳು ಈ ಶಾಸನದತ್ತ ನಮ್ಮ ಗಮನ ಸೆಳೆದರು; ನಕಲು ತಗೆಯಲು ನೆರವಾದರು. ಅವರಿಗೆಲ್ಲ ಲೇಖಕರು ಆಭಾರಿ.)

ವಿವರವಾಗಿ ಈ ಶಾಸನವು ಹೊಯ್ಸಳ ಚಕ್ರವರ್ತಿ ವೀರಬಲ್ಲಾಳ ದೇವರಸನನ್ನು (ಇಮ್ಮಡಿ ವೀರಬಲ್ಲಾಳನನ್ನು) ಹೆಸರಿಸುತ್ತದೆ. ದೋರಸಮುದ್ರದ ನೆಲೆವೀಡಿನಲ್ಲಿ ರಾಜ್ಯವಾಳುತ್ತಿದ್ದ ಈ ಚಕ್ರವರ್ತಿ ವೀರಬಲ್ಲಾಳದೇವರಸನ ಮುಖ್ಯ ಸಾಧನಾ ಬಿರುದುಗಳೆಲ್ಲ ಶಾಸನದಲ್ಲಿ ನಮೂದಿತವಾಗಿದೆ. 'ಚೋಳರಾಜ್ಯ ಪ್ರತಿಷ್ಠಾಪನಾ' ಚಕ್ರವರ್ತಿ ಎಂಬ ಬದಲಿಗೆ 'ಚೋಳರಾಯ ಸ್ಥಾಪನಾ' ಚಕ್ರವರ್ತಿಯಾಗಿ ಇಲ್ಲಿ ದಾಖಲೆ ಗೊಂಡಿದ್ದಾನೆ. ಚೀಳೂರಿಗೆ ಸಂಬಂಧಿಸಿದಂತೆ ಈವರೆಗೆ ವಿಜಯನಗರ ಶಾಸನಗಳ ವಿನಾ ಹೊಯ್ಸಳ ಸಂಬಂಧೀ ಶಾಸನಗಳು ಲಭ್ಯವಾಗಿರಲಿಲ್ಲ. ಸದ್ಯದ ಶಾಸನವು ಚೀಳೂರಿನ ಹಳಮೆಯನ್ನು ಲಿಖಿತವಾಗಿ ೧೨ನೇ ಶತಮಾನಕ್ಕೆ ಒಯ್ಯುತ್ತದೆ. ಗಂಗರ ಕಾಲದ ವೀರಗಲ್ಲು ಇದ್ದು ಸುಮಾರು ೧೦ನೇ ಶತಮಾನದ ಪ್ರಾಚ್ಯವಸ್ತುವೆನಿಸಿದರೂ ಅದರಲ್ಲಿ ಶಾಸನ ಬರೆಹವಿಲ್ಲ. ಸದ್ಯದ ಇಮ್ಮಡಿ ವೀರಬಲ್ಲಾಳನ ಕಾಲದ ಈ ಶಾಸನದಲ್ಲಿ ಚೀಳೂರಿನ ಹೆಸರು 'ಷೋಳೂರು' ಎಂದು ತಮಿಳು ಪ್ರಭಾವದ ಹೆಸರಾಗಿ ಕಾಣಿಸಿಕೊಂಡಿದೆ. ಈ ಗ್ರಾಮದ ಮೊದಲಿನ ಹೆಸರು 'ಚೋಳೂರು' ಎಂದಿದ್ದುದು ಹೀಗಾಗಿ ವಿದಿತವಾಗುತ್ತದೆ. ಬಹುಶಃ ನೊಳಂಬಪಲ್ಲವರ ಅಂಕೆಗಿದ್ದು ಅವರಿಂದಾಗಿ ಈ ಹೆಸರು ಬಂದಿರಬಹುದು. ಊರಿನಲ್ಲಿದ್ದ ಅವರ ಕಾಲದ ವೀರಗಲ್ಲೂ ಇದಕ್ಕೆ ಸಾಕ್ಷಿ ಹಾಕುವಂತಿದೆ.

ಇಲ್ಲಿನ ಹಿರಿಯ ಪ್ರಸಿದ್ಧ ಶಿವದೇಗುಲವು ೧೨ನೇ ಶತಮಾನದಲ್ಲಿಯೇ ಇದ್ದು ಅದು 'ದೃಷ್ಟೀಶ್ವರ' ದೇಗುಲವಾಗಿತ್ತು ಎಂಬ ಹೊಸ ವಿಷಯವನ್ನು ಅದರ ಹಳಮೆಯನ್ನು ಹಿಂದಕ್ಕೊಯ್ಯುವ ಮೂಲಕ ಹೇಳಿದೆ. ದೃಷ್ಟೇಶ್ವರ ಎಂದು ಕರೆಯುವ ಇಂದಿನ ದೇಗುಲದ ವಾಸ್ತು ವಿಜಯನಗರಕಾಲದ್ದೆಂದು ಕೊಂಡಿದ್ದು, ಅಂದಿನ ಪ್ರತಿಷ್ಠಾಪನೆ ಎಂದು ಜನಪದ ಕತೆಯ ಮೂಲಕವೂ ಪ್ರಚುರಗೊಂಡಿದೆ. ಅದೇನಿದ್ದರೂ ಜೀರ್ಣೋದ್ಧಾರದ ವಿಷಯ ವಾಗುತ್ತದಷ್ಟೆ. ಪ್ರಸ್ತುತ ಶಾಸನದಿಂದ ಹೊಯ್ಸಳರ ಕಾಲದಲ್ಲಿಯೇ ಇದ್ದ ಈ ದೇಗುಲವು, ನಂದಿದೇವ ಎಂಬ ಪ್ರಸಿದ್ಧ ಸಾಧಕನಿಗೆ ಬಿಡಾರವಾಗಿತ್ತು. ಜೊತೆಗೆ ಒಂದು ಕೆರೆಯೂ ಇಲ್ಲಿ ಹೊಂದಿ ಕೊಂಡಿತ್ತು. ಈ ದೇಗುಲಕ್ಕೆ ಭೂದಾನವಿತ್ತು, ಹೋಮಾದಿಗಳು ನಡೆಯುತ್ತಿದ್ದುವು ಎಂದೆಲ್ಲ ಸೂಚನೆ ಶಾಸನದಲ್ಲಿ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಈ ದೇಗುಲಕ್ಕೆ ಅಂಟಿದಂತೆ ಮಠವೊಂದಿದ್ದು, ಅದರ ಮುಖ್ಯಸ್ಥನಾಗಿ, ರಾಜಮಾನಿತ ಗುರುವಾಗಿ ನಂದಿದೇವನಿದ್ದ ಎಂದೂ ಸೂಚಿತವಾಗುತ್ತದೆ. ಶಾಸನದಲ್ಲಿ, 'ಬಿಡಾರಂ' ಎಂಬುದಕ್ಕೆ ಬದಲು ತಮಿಳು ಪ್ರಭಾವದ 'ವಿಡಾರಂ'; ಅಂಬುಧಿ ಬದಲಾಗಿ 'ಅಂಬುದಿ', ಸಾಧಕರು ಬದಲಾಗಿ ಸಹದಕರು ಇತ್ಯಾದಿ ಸ್ಖಾಲಿತ್ಯ ಶಬ್ದಗಳೂ ಇವೆ. ದೃಷ್ಟೀಶ್ವರ ಎಂಬ ಬದಲು ಗೋಷ್ಟೀಶ್ವರ ಎಂದೂ ನಮೂದಿರುವಂತಿದೆ. ಪರಂಪರೆಯಲ್ಲಿ ದೃಷ್ಟೀಶ್ವರ ಎಂದು ಬಂದು ಧ್ವಯಸ್ತಂಭಗಳೂ ದೇಗುಲದ ಮುಂದೆ ಪ್ರತೀಕ ದೀಪಸ್ತಂಭಗಳಾಗಿ ನಿಂತಿವೆ. ಸುಗ್ಗಿಕಟ್ಟೆಯ ಸೊಡರುಯ್ಯಾಲೆಯ ಪ್ರತೀಕವೂ ಆಗಿವೆ. ಗೋಷ್ಠಿ (ಗೋಷ್ಪಿ) ಷ್ವರ ಎಂದರೂ ಗೋವು ಸಂಬಂಧದ, ವೃಷಭ ಸಂಬಂಧದ (ದನಕರು) ಶಿವನಿಗೇ ಅನ್ವಯ. ಬಹುಶಃ ಈ ಪ್ರದೇಶದಲ್ಲಿ ಒಂದು ಕಾಲಕ್ಕೆ ಗೋಪಾಲನೆ ಹಾಗು ಕ್ಷೀರಸಮೃದ್ಧಿ ಬಹಳ ಪ್ರಸಿದ್ಧವೇ ಇದ್ದಿರಬೇಕು. ಚೀಳೂರಿನ ಸುತ್ತ ಇರುವ ೨-೩ ಕಿ.ಮೀ. ಫಾಸಲೆಯಲ್ಲಿ ಗೊಲ್ಲರಹಟ್ಟಿ ಸೀಗೆಮನೆಹಟ್ಟಿ, ಎರನಹಟ್ಟಿ, ಚೀಳೂರುಹಟ್ಟಿ ಇತ್ಯಾದಿಗಳೂ ಇಂದಿಗೂ ಇದ್ದು[೧೫] ಅವೆಲ್ಲ ಗೊಲ್ಲ ಜನಾಂಗದ ಕೇಂದ್ರಗಳಂತಿವೆ. ಇದು ಗೋಸಂಪತ್ತಿನ ಕುರುಹೇ ಆಗಿದೆ. ಇದಕ್ಕೆ ಪೂರಕವಾಗಿ ಪ್ರಾಚೀನ ಸಾಕ್ಷ್ಯವೂ ಇದೆ.

ಕ್ರಿ.ಶ. ೧೫೪೧ರ ಬ್ಯಾಡನಕಟ್ಟೆ ಶಾಸನವು[೧೬] ವಿಜಯ ನಗರದ ಅಚ್ಯುತರಾಯನು ಚೀಳೂರ ಗಲುಡಗಳಿಗೆ ಬ್ಯಾಡನಕಟ್ಟೆ ಗ್ರಾಮವನ್ನು ಕೆಟು'ಯ ಬದಲು (ಬಹುಶಃ ದೊರೆಯು ಕೆರೆಯನ್ನು ಕಟ್ಟಿಸಿಕೊಡುವ ಬಗ್ಗೆ, ಮುಂದಾದಾಗ ಚೀಳೂರ ಗವುಡಗಳು ಈ ಬೇಡಿಕೆ ಇಟ್ಟಿರಬೇಕು) 'ಹಸಲುಂಬಳಿ'ಗಾಗಿ (Free grazing Land- ಗೋಮೇವಿಗೆ) ಬ್ಯಾಡನಕಟ್ಟೆ ಗ್ರಾಮವನ್ನು ದಯಪಾಲಿಸಿದ ವಿಷಯವನ್ನು ತಿಳಿಸುತ್ತದೆ. ಅಂದರೆ ಗೋಸಂಪತ್ತು ವಿಪುಲವಿದ್ದುದರಿಂದ ಚೀಳೂರಿನ ಜನ 'ಹಸಲುಂಬಳಿ' ಯನ್ನು ಕೇಳಿಕೊಂಡಿರುವುದು ಸ್ಪಷ್ಟ. ಹೀಗಾಗಿ ಚೀಳೂರಿನ ಪರಮೋಚ್ಛ ದೇವರು 'ಗೋಷ್ಟೀಶ್ವರ'ನಾಗಿದ್ದು, ಗೊಲ್ಲ ಜನಾಂಗದವರೂ, ಸೇರಿದಂತೆ ಎಲ್ಲರೂ ಈ ಶಿವಾಲಯಕ್ಕೆ ನಡೆದುಕೊಳ್ಳುತ್ತಿದ್ದಂತೆ ಕಾಣುತ್ತದೆ. ಆದರೆ 'ದೃಷ್ಟೀಶ್ವರ' ಎಂದು (ಅಸ್ಪಷ್ಟ ಅಕ್ಷರದಕಾರಣ) ಶಾಸನ ಪಾಠ ಓದಿದರೂ ಇಂದಿನ 'ದೃಷ್ಟೇಶ್ವರ' ಎಂಬ ರೂಢಿಗೂ ವ್ಯತ್ಯಾಸವಾಗದೆ ಹೊಂದಿಕೊಳ್ಳುತ್ತದೆ. ಈ ಹೆಸರಿಗೆ ವಿಜಯನಗರ ಕಾಲದ ಕತೆಯೊಂದು ಕಾರಣವಾಗಿದೆ. ಅಂದರೆ ಹೊಯ್ಸಳರ ಕಾಲಕ್ಕೆ ಬಹುಶಃ ಗೋಷ್ಠೀಶ್ವರ ಎಂಬ ಹೆಸರಿದ್ದ ದೇಗುಲ ವಿಜಯನಗರದ ಕಾಲದಲ್ಲಿ 'ದೃಷ್ಟೇಶ್ವರ' ಎಂಬ ಹೆಸರು ಪ್ರತಿನಾಮಧೇಯವಾಗಿ ರೂಢಿಗೆ ಬಂದಿರಲೂಬಹುದು. ಎರಡೂ ಶಿವನ ಹೆಸರೇ. ಘಟನೆಗಳು ಬೇರೆ ಅಷ್ಟೆ. ವಿಜಯನಗರ ಕಾಲದ ಕತೆ ಇಂತಿದೆ: (ಅಚ್ಯುತ ರಾಯನದೋ. ಅಳಿಯ ರಾಮ ರಾಯನದೋ ಕಾಲದಲ್ಲಿ ಅಂಟಿದಂಥ ಕತೆ ಇದಾಗಿರುವಂತಿದೆ)

ದೃಷ್ಟೇಶ್ವರ ದೇಗುಲ : ದೃಷ್ಟೇಶ್ವರ ಗುಡಿಯ ಶಿವಾರ್ಚಕನೊಬ್ಬ ನಿಷ್ಠೆಯಿಂದ ಪೂಜೆ ಮಾಡಿಕೊಂಡು ಬರುತ್ತಿದ್ದ. ಆದರೆ ಅವನಿಗೆ ಸ್ತ್ರೀ ಸಹವಾಸದ ಆರೋಪವಾಯಿತು. ಅಚಾತುರ್ಯದಿಂದ ಲಿಂಗದ ಮೇಲಿರಿಸಿದ್ದ ಹೂಮಾಲೆಯಲ್ಲಿ ನೀಳಕೂದಲೊಂದು ಸೇರಿ ಕೊಂಡಿತ್ತು. ನಾಡಿನ ದೊರೆ

ದೇವದರ್ಶನಕ್ಕೆ ಬಂದ. ಅರ್ಚಕ ಮಾಲೆ ಹಾಕಿದ. ಅದರಲ್ಲಿ ಕೂದಲು ಕಂಡ ರಾಜ, ಲಿಂಗಕ್ಕೆ ಜಟೆ ಇದೆಯೆ? ಎಂದ. ಅರ್ಚನಕನಿಗೆ ನಡುಕ ಹುಟ್ಟಿತು. ಅದನ್ನು ತೋರಿಸಿಕೊಳ್ಳದೆ ಸ್ಥೈರ್ಯದಿಂದ ಇದೆ, ತೋರಿಸುವೆ ಎಂದ. ನೀವು ಮಡಿಯಾಗಿ ಬನ್ನಿ ಎಂದು ಹೇಳಿ ಸಮಯ ತೆಗೆದುಕೊಂಡ. ದೊರೆ ೧೫ ದಿನ ಬಿಟ್ಟು ಬಂದು ನೋಡುವೆ ಎಂದ. ಅರ್ಚಕ ದೃಷ್ಟೀಶ್ವರನನ್ನು ಪ್ರಾರ್ಥಿಸಿದ. ತಾನು ಈವರೆಗೆ ಸಲ್ಲಿಸಿದ ಭಕ್ತಿಯ ಸೇವೆಗೆ ಜಟೆ ತೋರಿ ಅನುಗ್ರಹಿಸಲು ಬೇಡಿದ. ಜಟೆ ತೋರದಿದ್ದರೆ ಶಿರಕಡಿದುಕೊಂಡು ಲಿಂಗದ ಮುಂದೆ ಇಡುವೆ ಎಂದ. ಶಿವನ ಕರುಣೆ ಆಯಿತು. ರಾಜ ಮತ್ತೆ ಬಂದಾಗ ಅರ್ಚಕ ಜಟಾಲಿಂಗ ತೋರಿಸಿದನಂತೆ. ಹಾಗು ಶಿವಲಿಂಗದ ಜಟೆಯನ್ನು, ಏಳು ಹಿಡಿ ಜಟೆಯಾಗಿ ಬಿಚ್ಚಿ ತೋರಿಸಿದನಂತೆ. ಶಿವಜಟೆಯೂ ಗರ್ಭಗುಡಿಯ ತುಂಬ ಹರಡಿಕೊಂಡಿತಂತೆ. ಅದನ್ನು ಬಡಿಯಲು ಶಿವನ ದೃಷ್ಟಿ ಎದುರಿನ ಸ್ತಂಭದ ಮೇಲೆ ಬಿದ್ದು ಅದು ಎರಡಾಗಿ ನಿಂತಿತಂತೆ. ಆಗ ದೊರೆ ಈ ಲಿಂಗಕ್ಕೆ 'ದೃಷ್ಟೇಶ್ವರ' ಎಂಬ ಹೆಸರು ಕೊಟ್ಟು ಕೊಡುಗೆ ಕೊಟ್ಟನಂತೆ. ಗುಡಿಯ ಎದುರಿಗಿರುವ (ಪ್ರಾಕಾರದಲ್ಲಿನ) ನಾಲ್ಕು ಸ್ತಂಭಗಳ ಪೈಕಿ ಕಟ್ಟೆಯ ಮೇಲಿರುವ ನೀಳಸ್ತಂಭಗಳೆರಡರ (ಸು. ೨೦ ಅಡಿ) ಕುರಿತು ಇರುವ ಕತೆ ಇದು.[೧೭]

ಈ ಕತೆಯನ್ನು ಇನ್ನೊಂದು ಬಗೆಯಲ್ಲೂ ಹೇಳುವುದುಂಟು. ದೇವರಿಗೆ ಒದಗಿಸುತ್ತಿದ್ದ ಹೂವನ್ನು ಹೆಂಡತಿಯ ಮಂಡೆಗೆ ಅರ್ಚಕ ಒಯ್ದು ಮುಡಿಸುತ್ತಿದ್ದ. ದೊರೆ ಬಂದಾಗ ಪೂಜೆಗೆ ಹೂವಿಲ್ಲದಾಗ ಹೆಂಡತಿಯ ಮಂಡೆಯ ಮೇಲಿದ್ದ ಹೂವನ್ನು ತಂದು ಲಿಂಗಕ್ಕೆ ಹಾಕಲಾಗಿ ಕೂದಲು ಕಂಡಿತ್ತು ಎಂಬುದೂ ಇದೆ. ಬಹುಶಃ ದೇಗುಲದ ದೇವದಾಸಿಗೆ ಅರ್ಚಕನ ಸಂಬಂಧವಿದ್ದಿರಲು ಈ ಕತೆ ಹುಟ್ಟಿರುವಂತಿದೆ. ಚೇಳೂರ ಭಾವಿಯನ್ನು ಕಟ್ಟಿಸಿದ್ದು ಸೂಳೆ (ದೇವದಾಸಿ!) ಆದರೂ, ಅವಳ ಹೆಸರಿನಲ್ಲಿ ಇಲ್ಲಿಂದ ಸೂಳೆಕರೆ ಐದು ಕಿ.ಮೀ. ದೂರದಲ್ಲಿ ಇರುವುದು, ವಿಜಯನಗರ ಕಾಲದ ಈ ಕತೆಗೆ ಪೂರಕವಾಗಿರುವಂತಿದೆ. ಅಬ್ಬಲೂರು ಶಾಸನದ ಏಕಾಂತ ರಾಮಯ್ಯನ ಶಿರಪವಾಡದ ಕತೆ ಅರ್ಚಕನ ಮಾತಿನ ಮೂಲಕ ಪ್ರಭಾವ ಬೀರಿದಂತಿದೆ.

ವಿಜಯನಗರದ ಅಚ್ಯುತರಾಯನು ಕ್ರಿ.ಶ. ೧೫೪೧ರಲ್ಲಿ ಚೇಳೂರಿನ ಸನಿಹದ ಬ್ಯಾಡನಕಟ್ಟೆಯಲ್ಲಿ ಚೇಳೂರು ಗಲುಡಗಳಿಗೆ ಹಸಲುಂಬಳಿ ಕೊಟ್ಟ ವಿಷಯವನ್ನು ಈಗಾಗಲೇ ಹೇಳಿದೆ. ಇದರ ಜೊತೆಗೆ ಕ್ರಿ.ಶ. ೧೫೬೦ರ ಸುಮಾರಿನಲ್ಲಿ ಯುವ ಸಂವತ್ಸರದ ಕಾರ್ತೀಕ ಶುದ್ಧ ೧ ರಂದು - ಆ ವಿಜಯನಗರದ ಅಳಿಯ ರಾಮರಾಯನು ಚೇಳೂರು ಗಲುಡಗಳಿಗೆ ಚಂನಸಮುದ್ರ ಎಂಬ ಗ್ರಾಮದಾನ ಮಾಡಿದ ವಿಷಯವನ್ನು ಚೇಳೂರಿನ ಶಾಸನವೊಂದು ತಿಳಿಸುತ್ತದೆ.[೧೮] ಇದಲ್ಲದೆ ಕ್ರಿ.ಶ. ೧೪೦೩ರ ಚೇಳೂರಿನ ವೆಂಕಟಪತಿ ಜೋಯಿಸನ ತಾಮ್ರಶಾಸನದಲ್ಲಿ, ಮಹಾಮಂಡಲೇಶ್ವರ ಪೆನಗೊಂಡ ಪುರವರಾಧೀಶ ಅನಂತರಾಯನ ಮೊಮ್ಮಗ, ಅಚ್ಯುತರಾಯನ ಮಗ ಕೃಷ್ಣರಾಯನಿಗೆ ಕಾಸಲ ವೆಂಕಟ ಸೋಮಯಾಜಿಗೆ ಪಿತೃಗಳಿಗೆ, ಸ್ವರ್ಗ ಪುಣ್ಯವಾಗಲೆಂದು ಚೇಳೂರು ಹೋಬಳಿ ಕೊಡಿಯಾಲ ಗ್ರಾಮವನ್ನು ದಾನವಾಗಿ ಕೊಟ್ಟ ಬಗ್ಗೆ ಹೇಳಿದೆ.[೧೯] ಕೊಡಿಯಾಲ ಗ್ರಾಮ ಚೇಳೂರಿನ ಪಶ್ಚಿಮಕ್ಕೆ ತೀರ ಅಂಟಿದ ಗ್ರಾಮವೇ ಆಗಿದೆ. ಆದರೆ ಶಾಸನೋಕ್ತ ದೊರೆಗಳ ಹೆಸರುಗಳು ಹಾಗು ಪುತ್ರ ಸಂಬಂಧಗಳಲ್ಲಿ ಏರುಪೇರು ಇದ್ದು, ಶಾಸನದ ಕಾಲದವರೂ ಅವರು ಆಗಿಲ್ಲದ ಕಾರಣ, ಶಾಸನವು ಕೃತಕವೆನಿಸುವಂತಿದೆ.[೨೦] ಶಾಸನದ ನಮೂದಿತ ಕಾಲ ಕ್ರಿ.ಶ. ೧೪೦೩ ಎಂದಿರಲು ಅದು ಇಮ್ಮಡಿ ಹರಿಹರನ ಕಾಲವಾಗಿದೆ. ನವರಾತ್ರಿಯಲ್ಲಿ ಪಟ್ಟಕ್ಕೆ ಊರಾಚೆಯ ಕೊಡಿಯಾಲ ಗ್ರಾಮದ ಬಿಡಿಸಿದ್ದೇಶ್ವರ ದೇವರನ್ನು ದೃಷ್ಟೇಶ್ವರ ದೇಗುಲಕ್ಕೆ ಕರೆತರುವ ಸಂದರ್ಭವಿರುವಲ್ಲಿ ಗ್ರಾಮದಾನದ ಸಂಬಂಧವನ್ನು ತಾಳೆ ಹಾಕಿರುವಂತಿದೆ. ಆದರೆ ಅದು ಇಮ್ಮಡಿ ಹರಿಹರನ ಕಾಲದ್ದಾಗದೆ ೧೬ನೇ ಶತಮಾನದ ಅಚ್ಯುತರಾಯ, ರಾಮರಾಯನ ಸಂದರ್ಭವನ್ನು ಹೆಚ್ಚು ಪೋಷಿಸಿ ಗುಡಿಯ ಕತೆಗೆ ಪೂರಕವಾಗುತ್ತದೆ. ಅಲ್ಲದೆ ದೇಗುಲದ ಮುಂದಿನ ನೀಳ ದ್ವಯ ಸ್ತಂಭಗಳ ಮೇಲೆ ಕಾರ್ತೀಕ ದೀಪವಿಟ್ಟು ಅಡ್ಡಪಟ್ಟಿ ಕಟ್ಟಿ ರಾಟೆ ಹಾಕಿ ಸೊಡರಿನ ಉಯ್ಯಾಲೆ ಕಟ್ಟಿ ಮೇಲೆ ದೀಪವಿಟ್ಟು ತೂಗಿ ಪೂಜಿಸುವ ಪದ್ಧತಿ ಇತ್ತು. ಅಂದರೆ ಚಂನಸಮುದ್ರ ಗ್ರಾಮವನ್ನು ಕಾರ್ತೀಕದಲ್ಲಿ ಅಳಿಯ ರಾಮರಾಯನು ಚೇಳೂರಿನ ಗಲುಡಗಳಿಗೆ ಕೊಟ್ಟಿರುವ ವಿಷಯವಿರುವಲ್ಲಿ ಅದು ದೃಷ್ಟೇಶ್ವರ ಗುಡಿಯ ಘಟನೆ ನಡೆದ ಸಂದರ್ಭಕ್ಕೆ ಪೋಣಿಸಿದಂತಿದೆ. ಇದಲ್ಲದೆ ಒಂದು ಕಾಲಕ್ಕೆ ಗುಡಿಯ ಲಿಂಗದ ಅಥವಾ ಮೂರ್ತಿಯ ಚರಣದ ಮುಂಬದಿಗೆ ಸೂರ್ಯನ ಕಿರಣ ಬೀಳುವ ವ್ಯವಸ್ಥೆ ಇದ್ದು. ಎರಡೂ ಕಂಬಗಳ ನಿಗದಿತ ಅಂತರದ ನಡುವೆ, ಕಿರಣ ಸಾಗುತ್ತಿದ್ದಿರಬಹುದು. ಕಾಲಾಂತರದಲ್ಲಿ ಜೀರ್ಣೋದ್ಧಾರವಾಗಿ ಈ ವ್ಯವಸ್ಥೆಗೆ ವ್ಯತ್ಯಯ ಬಂದರೂ ಕತೆ ಉಳಿಯಿತು. ಈಶ್ವರ ದೃಷ್ಟಿಬಿದ್ದ ಸಂಗತಿ ಹಾಗು ಗುಡಿಯಲ್ಲಿರುವ ರುಂಡ ಮಾಲೆಯ ಸೂರ್ಯವೀರಭದ್ರಶಿಲ್ಪ ಈ ಕತೆಗಳಿಗೆ ಏನೋ ಸಂಬಂಧಗೊಂಡಿರುವಂತಿವೆ. ಬೆಂಗಳೂರು-ಕೋಲಾರದ ಹಾದಿಯಲ್ಲಿ ಅಂತ್ರವಳ್ಳಿ ಮಲ್ಲೇಶ್ವರ ಬೆಟ್ಟದ ಮೇಲಿ ಶಿವಲಿಂಗದ ಮುಂದೆ ಸೂರ್ಯಕಿರಣ ಬೀಳುತ್ತಿದ್ದ ಕಾರಣ ಅವನನ್ನು ಸೂರ್ಯ ಮಲ್ಲೇಶ್ವರ ಎಂದು ಕರೆಯಲಾಗುತ್ತಿದೆ. ಬೆಂಗಳೂರಿನ ನರಸಿಂಹರಾಜಾ ಕಾಲೋನಿ ಬಸ್‌ಸ್ಟಾಂಡ್ ಬಳಿ ಈ ಮಲ್ಲೇಶ್ವರನ ಸಾಕ್ಷಿ ಗುಡಿಯಾಗಿ ಸೂರ್ಯ ಮಲ್ಲೇಶ್ವರ ಗುಡಿಯು ಇದೆ; ಇಂದೊಂದು ಗಮನಾರ್ಹ ಉದಾಹರಣೆ. ಮೊದಲಿಗೆ ಇಲ್ಲಿ ಶಕ್ತಿ



ಸಹಿತ ಶಿವನ ವಿಗ್ರಹವೋ, ವೀರಭದ್ರ ಭದ್ರಕಾಳಿ ವಿಗ್ರಹಗಳೂ ಇದ್ದು ನಂತರ ಬೇರೆಡೆ ಸಾಗಿಸಿದ ಸೂಚನೆಯೂ ಇದೆ. ಬೇಲೂರಿನ ಕೆರೆ ಗುಡಿಯ ಹಿಂಬದಿಗಿದ್ದರೆ ಗುಡಿಯ ಮುಂದಕ್ಕೆ ಈಗಲೂ ಅಮಾನಿಕೆರೆ ಇದೆ. ಅಂದರೆ ಸರ್ಕಾರಿ ಕೆರೆ, ಅರಸಕೊಟ್ಟಕೆರೆ ಎಂದಂತಾಯಿತು. ಹೀಗಾಗಿ ಬಹುಶಃ 'ಚನ್ನಸಮುದ್ರ' (ಕೆಜು) ವಿದ್ದ ಗ್ರಾಮ, ಗುಡಿಯ ಆಜುಬಾಜಿನಲ್ಲಿದ್ದು, ಅಲ್ಲಿನ ಆಗಿನ ಕೆರೆಯು ಗುಡಿಯ ಮುಂದಿನ ಇಂದಿನ ಅಮಾನಿಕೆರೆ ಆಗಿರುವಂತಿದೆ. ಇದಲ್ಲದೆ ಈ ದೃಷ್ಟೀಶ್ವರನಿಗೆ 'ಕೋಡಿ ಲಿಂಗೇಶ್ವರ' ಎಂಬ ಹೆಸರೂ ಇದೆ. ಈ ಹಿನ್ನೆಲೆಗಳನ್ನೆಲ್ಲ ಗಮನಿಸಿದರೆ ದೃಷ್ಟೀಶ್ವರ ಗುಡಿಯ 'ಅಂಬುಧಿ' ಹೊಯ್ಸಳ ಕಾಲದಿಂದಲೂ ಗುಡಿಯ ಬದಿಯ ವಿಶಾಲ ಕೆರೆಯಾಗಿದ್ದು, ಗುಡಿ ಹಾಗು ಕೆರೆ ಶಿಥಿಲವಾದಾಗ ವಿಜಯನಗರ ಕಾಲದಲ್ಲಿ ಗುಡಿಯ ಅರ್ಚಕನ ಕಾರಣ ಒದಗಿದ ಜೀರ್ಣೋದ್ಧಾರ, ಗ್ರಾಮದಾನಕ್ಕೆ ಶಿವ ಜಟೆ-ಮಂಡೆಹೂವಿನ ಕತೆ ಜನಪದೀಯವಾಗಿ ರೂಪುಗೊಂಡಿತೆಂದು ತೋರುತ್ತದೆ.

ಗುಡಿಯ ವಾಸ್ತು ಹಾಗು ಮೂರ್ತಿಶಿಲ್ಪ

ಈ ಗುಡಿಯ ಗರ್ಭಗೃಹ ಚೋಳಶೈಲಿಯ ಏಕ ಕಟ್ಟಡವೆನಿಸಿದರೂ. ಜೀರ್ಣೋದ್ಧಾರದಲ್ಲಿ ವಿಜಯನಗರ ಶೈಲಿಯ ಸುಖನಾಸಿ, ನವರಂಗ, ಸ್ತಂಭಗಳನ್ನೊಳಗೊಂಡ, ಒಡೆಯರ ಶೈಲಿಯ ಮುಖಗೋಪುರವನ್ನು ಹೊಂದಿದ ದೇಗುಲವಿದು. ಮುಂದುಗಡೆ ಕಟ್ಟೆಯ ಮೇಲಿ ಸುಗ್ಗಿ ಜೋಡಿ ದೀಪಸ್ತಂಭಗಳಲ್ಲದೆ, ಬಲಿಪೀಠ ಸ್ತಂಭ ಹಾಗು ಏಕ ದೀಪಸ್ತಂಭವೂ ಇವೆ. ಇವು ಬ್ರಹ್ಮಕಾಂತ ವಿಷ್ಣುಕಾಂತ ಶರೀರದ ಮಿಶ್ರ ಶೈಲಿಯ ಹಾಗು ಸ್ತಂಭದ ಪಿಂಡಿ (ಪೀಠ) ಮುಖಗಳಲ್ಲಿ ಸಾಶ್ರಯವಾಗಿ ಚಿತ್ರಖಂಡಗಳನ್ನು ಹೊಂದಿವೆ. ಕುದುರೆ, ಹಂಸ, ನಂದಿ ಇತ್ಯಾದಿಗಳ ಉಬ್ಬು ಗೆತ್ತನೆಗಳಿಲ್ಲಿವೆ.

ಗುಡಿಯ ಶಿವಲಿಂಗವು ಪ್ರಾಚೀನ ಕಳೆಯಿಂದ ಕೂಡಿ ತ್ರಪುಸಾಕಾರದ ಬಾಣ (ಶಿರ)ವನ್ನು ಹೊಂದಿದೆ. ನವರಂಗದಲ್ಲಿ ಗ್ರಾಮೀಣ ಶೈಲಿಯ ನೀಳವಾದ ಕಿರುವೀರಭದ್ರ, ತ್ರಿಭಂಗಿ ಸ್ಥಾನಕ ಮೂರ್ತಿಯಾಗಿದ್ದಾನೆ. ಚತುರ್ಭುಜನಾಗಿ, ರುಂಡಮಾಲಾಧರನಾಗಿ ಮುಂಗೈಗಳಲ್ಲಿ ಖಡ್ಗ ಹಾಗು ಎತ್ತಿ ಹಿಡಿದ ಢಾಲು ಇದ್ದು ಚಿತ್ರಕಲೆಯಲ್ಲಿ ಕಾಣಬರುವ ವೀರಭದ್ರನಾಗಿ ವಿಜಯನಗರದ ಶೈಲಿಯನ್ನು ಹೋಲುತ್ತಾನೆ. ಜೊತೆಗೆ ನಾಗ ಗಣಪತಿ, ಸೂರ್ಯ ವೀರಭದ್ರ ಶಿಲ್ಪವಿದ್ದು ನಿತ್ಯ ಪೂಜೆಗೊಳ್ಳುತ್ತಾರೆ. ವಿಶೇಷವೆಂದರೆ ಇಲ್ಲಿರುವ ಸೂರ್ಯಶಿಲ್ಪ ಹರಕೆಯ ಶಿಲ್ಪದಂತೆ ಕಾಣುವ ಕಿರು ಶಿಲ್ಪವಾದರೂ ಗಮನಾರ್ಹವಾಗಿದೆ.

ಕೈಗಳಲ್ಲಿ ಎತ್ತಿ ಹಿಡಿದ ಇಬ್ಬದಿ ಕಮಲದ ಮೊಗ್ಗುಗಳು. ನೀಳ ಟೊಪ್ಪಿಗೆಯಂಥ ಪಟ್ಟೆ ತಳಮುಖದ ವಿಜಯನಗರ ಶೈಲಿಯ ಕಿರೀಟಹೊಂದಿದ್ದು, ಮುಡಿಯ ಇಬ್ಬದಿಗೆ ದೀರ್ಘ ವೃತ್ತಾಕಾರದಲ್ಲಿ ಚಾಚಿದ ಜಟಾಪ್ರಭಾಮಂಡಲವೂ ಇದೆ. ಮುಖ್ಯವಾಗಿ ಎಡಭುಜ ದಿಂದ ಬಲಸೊಂಟದವರೆಗೆ ಮಂಡಿಹಾಯ್ದು ಬಂದಿರುವವರೆಗೆ ರುಂಡಮಾಲಾಸರದಂತೆ ಕಾಣುವ ಸರವನ್ನು ಹೊಂದಿರುವ ಸೂರ್ಯಶಿಲ್ಪ ಇವನಾಗಿದ್ದಾನೆ. ಮಂಡಿಯ ಮುಂಭಾಗದಲ್ಲಿ ಸ್ಪಷ್ಟವಾಗಿ ವೀರಭದ್ರಶಿಲ್ಪಗಳಲ್ಲಿ ಕಾಣಬರುವಂಥ ರುಂಡ ಪ್ರತೀಕಗಳಂತೆ ರುಂಡಭಾಗಗಳೂ ಕಾಣಬರುತ್ತವೆ. ಹೀಗಾಗಿ ಇವನನ್ನು ಸೂರ್ಯವೀರಭದ್ರ - ವೀರಭದ್ರಸೂರ್ಯ ಎಂದು ಭಾವಿಸಿ ಜನಪದ ಹರಕೆಯ ಶಿಲ್ಪವಾಗಿ ವಿಜಯನಗರ ಕಾಲದಲ್ಲಿ ಮಾಡಿಕೊಟ್ಟಿತೇ, ಎನಿಸುತ್ತದೆ. ದೃಷ್ಟೀಶ್ವರ ಗುಡಿಯಲ್ಲಿ ಸೂರ್ಯನ ಕಿರಣವೂ ಶಿವದೃಷ್ಟಿಗೆ ಒಡೆದ ಕಂಬದ ಕತೆಯಾನುಸಾರ, ಶಿವಲಿಂಗದ ಮೇಲೆ ಬೀಳುತ್ತಿದ್ದ ಹಿನ್ನೆಲೆಯಲ್ಲಿ ಈ ಬಗೆಯ ಶಿಲ್ಪ ಮಾಡಿಸಿಕೊಟ್ಟಿರಬಹುದು. ಸೂರ್ಯಶಿಲ್ಪಗಳು ನಾಡಿನ ಶಿವಾಲಯಗಳಲ್ಲಿ ಎಂದೂ ಅಭಿಮುಖ ಪರಿವಾರ ದೇವತೆಯಾಗಿರುವುದು ಎಲ್ಲೆಡೆ ಕಾಣಬರುತ್ತವೆ. ಅವೆಲ್ಲವೂ ಹಾಗೆಂದು ಆದಿತ್ಯಾಲಯವಾಗಿದ್ದುವೆಂತಲ್ಲ. 'ಸೂರ್ಯಮಂಡಲ ಮಧ್ಯಸ್ಥಂ ಸಾಂಬಂ ಸಂಸಾರ ಭೇಷಜಂ। ನೀಲಗ್ರೀವಂ ವಿರುಪಾಕ್ಷಂ ನಮಾಮಿ ಶಿವಮವ್ಯಯಂ॥' ಎಂಬ ಮಂತ್ರವೇ ಇದೆ. ಶಿವಾಲಯ ಗಳಲ್ಲಿ ಪರಿವಾರ ದೇವತೆಯಾಗಿ ಸೂರ್ಯ ಕಂಡುಬರುತ್ತಾನೆ.

ಗುಡಿಯ ಉತ್ಸವಾಚರಣೆಗಳು[೨೧]

ಶಿವರಾತ್ರಿಯಂದು ಅಖಂಡಭಜನೆ ನಡೆಯುತ್ತದೆ; ದಾಸಯ್ಯನ ಕಂಬವನ್ನು ಅಲಂಕರಿಸಿ ಮಧ್ಯ ಇಟ್ಟಮೇಲೆ ಒಂದು ರಾತ್ರಿ, ಒಂದು, ಹಗಲು ಭಜನೆ, ಪೂಜೆ ನಡೆಯುತ್ತದೆ. ಇದೊಂದು ರೀತಿ ಶೈವ, ವೈಷ್ಣವ ಸಮನ್ವಯ ಪರಂಪರೆಯಾಗಿದೆ. ಈ ಶಿವರಾತ್ರಿಯಂದು, ವೀರಭದ್ರನಿಗೆ ಎಲೆಪೂಜೆ ನಡೆಯುವಂತೆ ಪಾರ್ವತಿಗೆ ಎಲೆ ಅಲಂಕಾರದ ಎಲೆಪೂಜೆ ನಡೆಯುತ್ತದೆ. ದೃಷ್ಟೀಶ್ವರನಿಗೆ ಅಂದು ಅಕ್ಕಿ ಪೂಜೆ - ಅಲಂಕಾರವಿರುತ್ತದೆ.

ತುಮಕೂರು ತಾ. ಹರಳೂರು ವೀರಭದ್ರನಿಗೆ ವಿಶೇಷವಾಗಿ ಅಕ್ಕಿಕಾಳುಗಳ ಉಂಡೆ ಗೊಂಚಲು ಕಟ್ಟಿ 'ಅಕ್ಕಿ ಬಾಗಿಲು' (ಅಕ್ಕಿ ಬಾಗಿಲುವಾಡ) ಕಟ್ಟುವುದು ಮಾಡುತ್ತಾರೆ.[೨೨] ವೀರಭದ್ರನಿಗೆ ಅನ್ವಯವಾದ ಜನಪದೀಯ ಆಚರಣೆಗಳು ದೃಷ್ಟೀಶ್ವರನಿಗಿರುವುದನ್ನು ಗಮನಿಸಿದರೆ ಬಹುಶಃ ಊರಿನೊಳಗಣ ಸಂಗಮೇಶ್ವರ ಮಠದ ವೀರಭದ್ರ, ಭದ್ರಕಾಳಿ ವಿಗ್ರಹಗಳು ಮೊದಲಿಗೆ ಇಲ್ಲಿದ್ದು, ಅದಕ್ಕೆ ನಡೆಯುತ್ತಿದ್ದ ಆಚರಣೆಗಳನ್ನು ಇಲ್ಲಿ ಹಾಗೆಯೇ ಉಳಿಸಿ ಶಿವನಿಗೆ ಆರೋಪಿತವಾಗಿರುವಂತಿದೆ. (ಮಂಡ್ಯ ಜಿಲ್ಲೆ ಗೆಜ್ಜಲಗೆರೆ ವೀರಭದ್ರ, ನೀಲಕಂಠನಹಳ್ಳಿಯಿಂದ ಸ್ಥಳಾಂತರಗೊಂಡವ. ಆದರೆ ಅಲ್ಲಿ ಅವನಿಗಿದ್ದ ಅಗ್ನಿಕೊಂಡೋತ್ಸವ, ಗೆಜ್ಜಲಗೆರೆಯಲ್ಲಿ ನಡೆಯದೆ, ನೀಲಕಂಠನ ಹಳ್ಳಿಯ ಬಸವಣ್ಣನ ಗುಡಿಯ ಮುಂದೆ ಇಂದಿಗೂ ನಡೆಯುತ್ತದೆ. ವೀರಭದ್ರ ಹಲಗೆಯನ್ನು ಗೆಜ್ಜಲಗೆರೆಯಿಂದ ಅಲ್ಲಿಗೆ ಆ ಸಮಯಕ್ಕೆ ಒಯ್ಯುತ್ತಾರೆ. ಅಂಥದೇ ಸಂದರ್ಭ ಇಲ್ಲಿಯೂ ಆಗಿರುವಂತಿದೆ). ಇಲ್ಲಿದ್ದ ಮಠ, ಗುಡಿ ಶಿಥಿಲವಾದಾಗ, ಊರಿನೊಳಕ್ಕೆ ಸ್ಥಳಾಂತರ ಗೊಂಡಂತಿದೆ : ಈ ಗುಡಿಯೊಳಗಣ ಕಿರು ವೀರ ಭದ್ರ ಶಿಲ್ಪ ಈ ಘಟನೆಗೆ ಪರೋಕ್ಷ ಸಾಕ್ಷಿ ಆಗಿರುವಂತಿದೆ, ಕಪಾಲ ಭೈರವಿಯ ಶಿಲ್ಪವೂ ಗರ್ಭಗೃಹದಲ್ಲಿ ಪ್ರತ್ಯೇಕಗೂಡಿನಲ್ಲಿದೆ. ಶ್ರಾವಣ ಸೋಮವಾರದಲ್ಲಿಯೂ ಅಖಂಡ ಭಜನೆ ನಡೆದರೆ, ಕಾರ್ತೀಕ ಸೋಮವಾರದಂದು ರುದ್ರಾಭಿಷೇಕ ಹಾಗು ಅಖಂಡ ಪೂಜೆ ನಡೆಯುತ್ತದೆ.

ನವರಾತ್ರಿಯಲ್ಲಿ ಊರಾಚೆಯ ಕೊಡಿಯಾಲ ಗ್ರಾಮದ ಬಿಡಿಸಿದ್ದೇಶ್ವರ, ಊರೊಳಗಿನ ತಿರುಮಲೇಶ್ವರ ದೇವರು, ಗಣೇಶ, ದೃಷ್ಟೀಶ್ವರನನ್ನು ಪಟ್ಟಕ್ಕೆ ಕೂರಿಸಿ ೯ದಿನಗಳ ಕಾಲ ಪೂಜೆ ನಡೆಯುತ್ತದೆ. ಹಾಗು ಆ ಉತ್ಸವಮೂರ್ತಿಗಳು ಈ ಗುಡಿಗೆ ಬಂದು ಹೋಗುತ್ತವೆ. ಬನ್ನಿಪೂಜೆ ಉಂಟು. ಈ ಗುಡಿ ಎದುರು ಬನ್ನಿಮರದ ಸುತ್ತ ಉತ್ಸವ ಮೂರ್ತಿಗಳನ್ನು ಕೂರಿಸಿ ಬಾಳೆ ತೋರಣವಿಟ್ಟು ಕತ್ತಿಯಿಂದ ಬನ್ನಿ ಕಡಿದು ಪೂಜಿಸುತ್ತಾರೆ. ಗೌಡ ಜನಾಂಗದ ಮುಖ್ಯಸ್ಥರು, ಬಿಲ್ಲು, ಕತ್ತಿಯನ್ನು ಪೂಜಿಸಿ ಬಿಲ್ಲು ಬಿಡುತ್ತಾರೆ. ದೃಷ್ಟೀಶ್ವರನಿಗೆ 'ಅಂಬು ಹಾಯಿಸುವುದು' ಹೀಗೆ ನಡೆಯುತ್ತದೆ. ತಳವಾರರು ಬಾಳೆಕಂದು ಕಡಿಯುತ್ತಾರೆ. ಬಿಲ್ಲನ್ನೂ ಜೊತೆಗೆ ತರುತ್ತಾರೆ. ಬಾಳೆಕಂದಿಗೆ ಬಿಡುತ್ತಾರೆ.

ಬಾಳೆಪಟ್ಟೆಗಳನ್ನು ಸುಲಿದು ೭-೯, ಬಾಗಿಲುಗಳನ್ನು ಅವುಗಳಿಂದ ಹೊಂದಿಸಿ ಮಾಡುತ್ತಾರೆ. ಇದನ್ನೆ 'ಕದಳಿ ಕಟ್ಟುವುದು' ಎನ್ನುವುದು; ಕಾರ್ತೀಕದಲ್ಲಿ ಇದು ನಡೆಯುತ್ತದೆ. ಪಾರ್ವತಿಗೆ ಬಾಳೆಹಣ್ಣಿನಲ್ಲಿ ಸೀರೆ ಉಡಿಸುತ್ತಾರೆ (ಅಲಂಕಾರ). ೧೦೧ ದೀಪವನ್ನು ದೇಗುಲದಲ್ಲಿ ಉರಿಸುತ್ತಾರೆ. ಬಿಡಿಸಿದ್ದೇಶ್ವರನಿಗೂ ಕದಳಿ ಕಟ್ಟುವುದುಂಟು. ಬಹುಶಃ ಇದೆಲ್ಲ ದೇವರನ್ನು ಸ್ವಾಗತಿಸುವ ಜನಪದ ಆಚರಣೆಗಳ ಸಂಕೇತವೆನಿಸುತ್ತದೆ. ದಾಸಯ್ಯನ ಕೈಗಂಬಕ್ಕೆ ಬೇಟೆಸೊಪ್ಪನ್ನು ತ್ರಿಭುಜದ ಆಕಾರದಲ್ಲಿ ಕಟ್ಟಿ ಪೂಜಿಸಿ ಭಜನೆ ಸಲ್ಲಿಸುತ್ತಾರೆ. ಪಾರ್ವತಿ ಈ ಗುಡಿಯಲ್ಲಿ ಚತುರ್ಭುಜೆ, ಕಪಾಲ ಭೈರವಿರೂಪದಲ್ಲಿದ್ದು, ಹಸ್ತಗಳಲ್ಲಿ ಪರಶು, ತ್ರಿಶೂಲ, ಎಡ ಮುಂಗೈಯಲ್ಲಿ ಪಾನಬಟ್ಟಲು ಹಿಡಿದವಳಾಗಿದ್ದಾಳೆ. ಉಗಾದಿ ಕಳೆದು ೯ ದಿನಕ್ಕೆ ದೃಷ್ಟೀಶ್ವರನಿಗೆ ತೇರು ನಡೆಯುತ್ತದೆ ಆಗ ಬೆಳ್ಳಾವಿಯ ಲಿಂಗದಬೀರರು ತೇರಿನ 'ಖಡ್ಗ' ಹೇಳುತ್ತಾರೆ. ಇದು ವೀರಭದ್ರನಿಗೆ ಸಲ್ಲುವ ನಡೆ. ಈ ಹಿನ್ನಲೆಗಳನ್ನು ಗಮನಿಸಿದರೆ, ಶಾಕ್ತ ಪ್ರಭಾವು ಈ ಗುಡಿಯ ಆಚಾರಗಳಲ್ಲಿ, ಪರಿಸರದಲ್ಲಿ ನಡೆದುಬಂದದ್ದು ಇದು ಸ್ಪಷ್ಟವಾಗುತ್ತದೆ. ಅಖಂಡ ಭಜನೆ, ಅಖಂಡ ನೈವೇದ್ಯ ಇವೆಲ್ಲ ಶಾಕ್ತ ಪ್ರಭಾವದ ಕುರುಹು.

ಚೇಳೂರು ಸಂಗಮೇಶ್ವರ ಮಠದ ವೀರಭದ್ರ - ಭದ್ರಾಕಾಳಿ:

ಊರೊಳಗೆ ಮೊದಲಿದ್ದ ಸಂಗಮೇಶ್ವರ ಮಠ (ಈಗಿಲ್ಲ) ಕ್ಕೆ ಹೊಂದಿಕೊಂಡಿದ್ದ ವೀರಭದ್ರ ಗುಡಿ ಇಂದಿಗೂ ಇದೆ. ವೀರಭದ್ರನ ಎಂದಿನ ಲಕ್ಷಣಗಳಾದ ರುಂಡಮಾಲೆ, ಬಿಲ್ಲು, ಬಾಣ, ಖಡ್ಗ, ಢಾಲುದಾರಿ, ದಕ್ಷಯಜ್ಞನಾಶ ಸನ್ನದ್ಧ ವೀರಭದ್ರನ ಪಾದಪೀಠದ ಮುಂಪಾರ್ಶ್ವದಲ್ಲಿ ಸಿಂಹ ಮೊಗದ ಕೆಳಚೌಕಟ್ಟಿನಲ್ಲಿ ಹಿಂಮೊಗ ವಾಗಿ ನೋಡುತ್ತಿರುವ ಟಗರಿನ ಪೂರ್ಣದೇಹದ ಶಿಲ್ಪವು ದಕ್ಷನ ಸಂಕೇತವಾಗಿ ಕೆತ್ತಲ್ಪಟ್ಟಿದೆ. ಲೋಹಶಿಲ್ಪದಲ್ಲಿ ಈ ರೀತಿಯ ದಕ್ಷ ಸಂಕೇತ ಸಂಕೇತವಿರುವಂತೆ. ಶಿಲಾಶಿಲ್ಪದಲ್ಲಿಯೂ ಪಾದಪೀಠದಲ್ಲಿ ಸಂಕೇತಿಸಿರುವುದು ವಿಶೇಷ. ದಕ್ಷಿಣಾಭಿಮುಖಿಯಾದ ಈ ಗುಡಿಯಲ್ಲಿ ಚತುರ್ಭುಜ ಸ್ಥಾನಕ ದ್ವಿಭಂಗಿ ಭದ್ರಕಾಳಿಯ ಶಿಲ್ಪ ಸುಂದರವಾಗಿದೆ. ಬಿಲ್ಲು ಬಾಣ ಮುಂಗೈಗಳಲ್ಲಿ ಖಡ್ಗ, ಊರಿದ ಹಸ್ತದ ಕೆಳಗೆ ಢಾಲು ಇದ್ದು ರುಂಡಮಾಲಾಧಾರಿಣಿ ರುಂಡಮಕುಟಧಾರಿ, ಪ್ರಸನ್ನ ಗಂಭೀರದ ಪುಷ್ಟ ಶಿಲ್ಪವಾಗಿದ್ದಾಳೆ. ಈ ದ್ವಯ ಶಿಲ್ಪಗಳು ವಿಜಯನಗರ ಕಾಲದ ಶಿಲ್ಪಗಳಾಗಿವೆ. ಹಿಂದೆ ಯಜಮಾನ್ ಸಿದ್ಧಲಿಂಗಪ್ಪ, ಚೆನ್ನಪ್ಪ ಸೆಟ್ಟರಿದ್ದ ಕಾಲದಲ್ಲಿ ಗುಡಿಯ ಆಚಾರ ವಿಚಾರ ಉತ್ಸವಾದಿಗಳಿಗೆ ಸಡಗರವಿತ್ತು ಎಂದು ಚೇಳೂರಿನ ನಿವೃತ್ತ ಹಿರಿಯ ಶಿಕ್ಷಕ ಶ್ರೀ ಎಸ್. ಸಿದ್ದಪ್ಪ ಅವರು ನೆನೆಸುತ್ತಾರೆ. ಕ್ರಿ.ಶ ೧೩೪೬ರ ಸಮಯದಲ್ಲಿ ಏಳು ನಾಡು ಪ್ರಭುಗಳು (ಮಹಾನಾಡು) ಚೋಳೂರಿನಲ್ಲಿ ಆಳಿಕೆ ಆರಂಭಿಸಿದಾಗ ಈ ಗುಡಿಗಳಿಗೆ ವೈಭವವಿತ್ತು ಎನ್ನಲಾಗಿದೆ.

ಹೊನ್ನಾದೇವಿಯ ಗುಡಿ

ಊರಿನೊಳಗಿರುವ ಕಿರುಗುಡಿಯಲ್ಲಿ ಈಕೆ ಎಡಾರ್ಧ ಪದ್ಮಾಸನೆ, ಚತುರ್ಭುಜೆ, ಕರಂಡ ಮಕುಟಧಾರಿಣಿ, ದೀರ್ಘವೃತ್ತ ಜಟಾಪ್ರಭಾಮಂಡಲದ ಮುಡಿವಂತೆ. ಹಿಂಗೈಗಳಲ್ಲಿ ಪುಷ್ಟವಾದ ತ್ರಿಶೂಲ, ಢಮರು, ಮುಂಗೈಗಳಲ್ಲಿ ನೀಳಖಡ್ಗ, ಪಾನಬಟ್ಟಲು ಇವುಗಳ ಕಲಾತ್ಮಕ ಧಾರಣಾ ಶಿಲ್ಪವಾಗಿದ್ದಾಳೆ. ತುಂಬಿದ ವಕ್ಷ



ಸ್ಥಲ, ಕೊರಳಹಾರ, ಭುಜಕೀರ್ತಿ, ಕೇಯೂರ, ವಜ್ರಹಾರ ಶೋಭಿತೆ, ಸೊಂಟವಸ್ತ್ರ ಹಾಗು ಮೊಣಕಾಲಿನವರೆಗಿನ ಕಲಾತ್ಮಕ ಬಿಡಾವಣೆಯ ದೇವಿಯ ವಸ್ತ್ರದುಡಿಗೆ, ವಿಶೇಷತಃ ಬಾಗಿದ ಬಲದೊಡನೆಯ ಇಳಿಪುಭಂಗಿ, ಇವುಗಳಿಂದ ಪ್ರಸನ್ನಗಂಭೀರ ವದನದ ಶಿಲ್ಪವಾಗಿ ಕಂಗೊಳಿಸುತ್ತಾಳೆ. ಹಣೆಪಟ್ಟಿ ಕಲಾತ್ಮಕವಾಗಿದೆ; ವಜ್ರಾಕೃತಿಯಲ್ಲಿ ಲಿಂಗವೇ ತ್ರಿನೇತ್ರರೂಪದಂತಿದೆ. ಈಕೆಗಿರುವ ಹೆರಳು ಮುಡಿ ಕಟ್ಟುಜಡೆ ತುಮಕೂರು ತಾ. ವೀರಸಾಗರದ ವೀರಭದ್ರನಿಗಿರುವ ಹೆರಳು ಜಡೆಯಂತೆ ಗುಂಗುರು ವೃತ್ತದ ನಡುವೆ ಇಳಿಬಿದ್ದ ಹೂಜಡೆಯಂತಿದ್ದರೂ ಅರೆಜಡೆಯಾಗಿದೆ. ಆದರೂ ಕಲಾತ್ಮಕವೆನಿಸುತ್ತದೆ. ಪುಷ್ಪಶೈಲಿಯ ಈ ಶಿಲ್ಪ ಹೊಯ್ಸಳಶೈಲಿಯ ಲಘು ಅಲಂಕರಣ ಸಹಿತವಾದ ವಿಜಯನಗರ ಕಾಲದ ಪುಷ್ಪತೆಯಿಂದ ಕೂಡಿರುವ ಈ ಶಿಲ್ಪ ೧೪ನೇ ಶತಮಾನದ ಕಾಲದ್ದೆನಿಸುತ್ತದೆ. ಕತ್ತಿನ ಬಳಿ ಇರುವ ರಂಧ್ರಗಳೂ ಇದಕ್ಕೆ ಪೋಷಕವೆನಿಸುವಂತಿವೆ. ನವರಂಗದ ಸ್ತಂಭದಲ್ಲಿ ಪಾನಬಟ್ಟಲು ಹಿಡಿದಿರುವ ಅಷ್ಟಭುಜೆ (ಸಿಂಹವಾಹನೆ!) ಪೂರ್ಣ ಪದ್ಮಾಸನಸ್ಥ ದೇವಿ ಶಿಲ್ಪವೊಂದು, ಮೂಲಮೂರ್ತಿಯ ಪ್ರತೀಕವೆನ್ನಲಾಗ ದಿದ್ದರೂ ಶಾಕ್ತ ಸಂಪ್ರದಾಯದ ದೇವ ವಿಗ್ರಹವೆನ್ನಬೇಕು. ಈ ಹೊನ್ನಾದೇವಿ ಯಾರು? ಎಂಬುದು ಕುತೂಹಲಕಾರಿ. ಪಂಚಲೋಹದ ಮೆರೆ ವಿಗ್ರಹವೂ ಇದೆ. ಹೊನ್ನಾದೇವಿಯ ಶಿಲ್ಪ ಶೈಲಿ ನೋಡಿದರೆ, ಪಾನಪಾತ್ರೆ ಹಿಡಿದಿರುವಲ್ಲಿ, ಅದು ಶಾಕ್ತ ಸಂಪ್ರದಾಯದ ಲಾಂಛನ. ವಿಶ್ವಕರ್ಮಶಾಸ್ತ್ರದಲ್ಲಿ (ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿ ಯಿಂದ ನಮೂದಿತ) ಬರುವ ಮೂರ್ತಿಲಕ್ಷಣದಲ್ಲಿ 'ದಕ್ಷಿಣಾರ್ಧ ಕರೇ ಪಾತ್ರಾ' ಎಂದಿದೆ. ಗಮನಾರ್ಹವಾಗಿ ಇಲ್ಲಿಯ ಅರ್ಚಕರೂ ವಿಶ್ವಕರ್ಮರೇ. ಸಾಮಾನ್ಯವಾಗಿ 'ಹೊನ್ನಾದೇವಿ', ಗಂಗಾಧರ ಶಿವನೊಡನೆ ಸಹಗಾಮಿಯಾಗಿ ಬರುತ್ತಾಳೆ. ಶಿವಗಂಗೆಯ ಹೊನ್ನಾದೇವಿ, ಆದಿಶಂಕರ ಪ್ರಣೀತ ಶ್ರೀ ಚಕ್ರಸಮನ್ವಿತೆ ಎನ್ನಲಾಗಿದೆ. ಈಕೆಗೆ 'ಮಡೆ' ಜಾತ್ರೆ (ಹೊಸ ಮಡಿಕೆ ಅನ್ನ), ತಂಬಿಟ್ಟು ಆರತಿ, ಜಲದಲ್ಲಿ ಬಿಡುವ ಬಸರಿಮರದ ಕವಲು (ಆತ್ಮಬಲಿ ಸಂಕೇತದ ಕತೆ ಇದಕ್ಕಿದೆ), ಜನಪದೀಯ ಆಚರಣೆಯಲ್ಲಿದೆ. ದುಂಡಿನ ಶಿವರದಲ್ಲಿ, ಈಕೆ ಶಾಸನೋಕ್ತ ದೇವತೆ ಆಗಿದ್ದಾಳೆ. ಕೊಡಗಿನ ದೊಡ್ಡಮಳತೆ ಗ್ರಾಮದ ಹೊನ್ನಮ್ಮ 'ಕೆರೆಗೆ ಹಾರವಾದರೂ', ಹೊನ್ನಾದೇವಿಗೆ 'ಗೌರಿ ಉತ್ಸವ-ಹಬ್ಬ'ದ ಬಾಗಿನದಾಚರಣೆಗಳಿವೆ. ಹೊನ್ನು, ಹೊನ್ನಿ-ಚಿನ್ನದ ಪರ್ಯಾಯ ಶಬ್ದ ಹಾಗು ಜಲದೇವಿಯ ಸಂಕೇತ. ತಮಿಳುನಾಡಿನಲ್ಲಿ 'ಪೊನ್ನಿ' ಎಂದು ಕನ್ಯೆ ಕಾವೇರಿಗೆ ಅನ್ವಯಿಸಿ ಹೇಳುತ್ತಾರೆ. ಕೊಡಗಿನ ಕಾವೇರಿಗೆ 'ಕನ್ನಿಕಾವೇರಿ' ಎಂದು ಹೇಳುತ್ತಾರೆ. ಕೊಡಗಿನ ಕೆಂಬಟ್ಟಿ ಜನಾಂಗದಲ್ಲಿ 'ಪೊನ್ನಿಮೆ ದೇವಿ' ಎಂದು ಕಾವೇರಿಯನ್ನು ಪೂಜಿಸುವುದುಂಟು. ನೆಲಮಂಗಲ ತಾ. ಬಿದಲೂರುಗಂಗಮ್ಮ ಜಲದೇವಿಗೆ ಸಪ್ತ ಮಾತೃಕಾ ಸಂಕೇತವಿದ್ದು ಶಿವಗಂಗೆಯ ಹೊನ್ನಾದೇವಿಯ ಸಂಬಂಧದ ಕತೆ ಇದೆ. ಈಕೆಯ ಶಿಲ್ಪಶೈಲಿ ದೇವೀರಮ್ಮನ ಶಿಲ್ಪ ಶೈಲಿ (ಕೊಡಗಿನ ನಂಜರಾಯ ಪಟ್ಟಣದಲ್ಲಿದ್ದಂತೆ) ಯನ್ನು ಹೋಲುತ್ತದೆ. ಈ ಹಿನ್ನೆಲೆಗಳನ್ನೆಲ್ಲ ಗಮನಿಸಿದರೆ ಕೃಷಿ ದೇವತೆಯಾಗಿ, ಸುಗ್ಗಿ ತರುವ ಪಾರ್ವತಿಯಾಗಿ ಜಲದೇವತೆಯಾಗಿ (ಕಾವೇರಿಯು ಪಾರ್ವತಿ ಅಂಶ) ಗೌರಿ ಪೂಜೆಯನ್ನು ಪಡೆದುಕೊಳ್ಳುವಂಥವಳು. ದೇವೀರಮ್ಮನು ಈಕೆಯ ಒಂದು ಜನಪದ ರೂಪ. ಹೊನ್ನಾದೇವಿ, ಶಿಷ್ಟ ಹಾಗು ಜನಪದ ಆಚಾರಗಳನ್ನೊಳಗೊಂಡ ದೇವತೆಯಾಗಿ ಶಾಕ್ತ ಸಂಪ್ರದಾಯದ ವಳೆನಿಸಿದರೂ ಬಲಿ ಈಕೆಗೆ ಇಲ್ಲದಿರುವುದು ಗಮನಾರ್ಹ. ಚೇಳೂರು-ಚೋಳೂರಿನ ಈಕೆಗೂ ಹಾಕಸಂದ್ರದ ಕೆಂಪಮ್ಮ ದೇವತೆಗೂ ಪ್ರಾಚೀನ ಸಂಬಂಧವಿದ್ದಂತಿದೆ. ಆ ಕೆಂಪಮ್ಮನಿಗೆ ರಾತ್ರಿಯೇ ತೇರು, ಅಗ್ನಿಕೊಂಡ. ದೃಷ್ಟೀಶ್ವರ ಜಾತ್ರೆಗೆ ಕೆಂಪಮ್ಮ ಚೇಳೂರಿಗೆ ಬರುತ್ತಿದ್ದಳಂತೆ. ಆಕೆಯನ್ನು ಮನೆದೇವತೆಯಾಗಿ ಹೊಂದಿರುವ ಒಕ್ಕಲುಗಳೇ ಚೇಳೂರಿನಲ್ಲಿವೆ. ಶಾಕ್ತ ಸಂಪ್ರದಾಯ ದೇವಾಚಾರಗಳು ಆಕೆಗಿರುವಲ್ಲಿ ಹೊನ್ನಾದೇವಿಯ ಸಂಬಂಧವೂ ಇದ್ದಿರಬೇಕು. ಹೊನ್ನಾದೇವಿಯ ಗುಡಿಗೆ ಮುಂದೆ ದಕ್ಷಿಣಕ್ಕೆ ಕೋಟೆ ಹೆಬ್ಬಾಗಿಲು ಇರುವಂತೆ ಹಿಂಬದಿಯೂ ಕೋಟೆ ಬಾಗಿಲ ಅವಶೇಷಗಳಿವೆ. ಅಂದರೆ ಕೋಟೆಯ ಬಳಿ ದುಂಡಿನ ಮಾರಮ್ಮನ, ದುರ್ಗೆಯ ಶಿಲ್ಪಗಳಿರುವುದು ಪರಂಪರೆಯಂತೆ ವಿಜಯನಗರ, ಕೆಳದಿ, ಹಾಲೇರಿ ಅರಸರಲ್ಲೂ ಕಾಣಬರುವ ಸಂಪ್ರದಾಯ. ಹೀಗಾಗಿ ಚೇಳೂರಿನ ಹೊನ್ನಾದೇವಿ ಯುದ್ಧದೇವತೆ ದುಂಡಿನ

ಮಾರಮ್ಮನ ಪ್ರತೀಕವೂ ಆಗಿದ್ದಿರಬೇಕು. ದೇವಿ+ಈರಮ್ಮ= ದೇವೀರಮ್ಮ ಎಂಬಲ್ಲಿ ಈ ಎಲ್ಲ ಹಿನ್ನೆಲೆಗಳೂ ಅಡಕವಿದೆ ಎನ್ನಬೇಕು ಹಾಗು ಈ ಎಲ್ಲಾ ಹಿನ್ನೆಲೆಗಳಲ್ಲಿ ಶಾಕ್ತ ದೇವತೆಗಳ ನೆಲೆ **ಚೋಳೂರು** ಆಗಿತ್ತು ಎಂಬುದು ಗಮನಕ್ಕೆ ಬರುತ್ತದೆ.

ಹೊನ್ನಾದೇವಿ ಜಾತ್ರೆ ಉತ್ಸವ : ಮೊದಲಿಗೆ ೧೫ ದಿನದ ಜಾತ್ರೆ ಇದ್ದುದು ೮ ದಿನಕ್ಕಿಳಿದು ಈಗ ಮೂರುದಿನ ಮಾತ್ರ ನಡೆಯುತ್ತದೆ. ಒಂದನೇ ದಿನ ಸಾರುವೆ - 'ಹೊನ್ನಾದೇವಿ ಉದೋ' ನಡೆಯುತ್ತದೆ; ೨ನೇ ದಿನ ಹೊನ್ನಾರು ಹೊಡೆಯುತ್ತಾರೆ; ಮೂರನೇ ದಿನ ಹಸಿಮರದ ಕೊಂಟನ್ನೂ ಕೆರೆಪಕ್ಕ ನೀರಿಗದ್ದಿ ಮೂರು ದಿನ ಇಡುತ್ತಾರೆ. ಆ ಕಂಬ ಹೊನ್ನಾದೇವಿ ಮಗ ಅಂತೆ. ಅರಿಶಿನ ಬಳಿದು ತರುತ್ತಾರೆ. ಹೊಸದಾಗಿ ಭಾವಿಗುಂಡಿ ತೆಗೆದು ನೀರು ಪಡೆದು ಅಕ್ಕಿ ಕುಟ್ಟಿ, ಅನ್ನ ಮಾಡುತ್ತಾರೆ. ಅಗಸರು ಒಂದು ತಪ್ಪಲೆ. ಪೂಜಾರು (ಆಚಾರ್ರು) ೨ ತಪ್ಪಲೆ, 'ಮಡೆ ಅನ್ನ' ಮಾಡಿ ನೈವೇದ್ಯಕ್ಕಿಡುತ್ತಾರೆ. ೯ ದಿನಗಳ ತನಕ ಕಂಬ ಇಟ್ಟು ನಂತರ ೧೦ನೇ ದಿನ ಕೆರೆಗೆ ಮುಂಜಾನೆ ಬಿಡುತ್ತಾರೆ. **ರತ್ತೇವಮ್ಮ** - ಹೊನ್ನಾದೇವಮ್ಮ (ಮರದ ವಿಗ್ರಹ) ವಿಗ್ರಹ ತಂದು ಗುಡಿ ಎದುರಿಗೆ ಕುಣಿತವಿಡುತ್ತಾರೆ. ರಾಗೀಕಲ್ಲು, ಸೀಗೆಮಳೆ ತಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ. ೯ನೇ ದಿನ 'ಹಗಲು ಬೈರೂಪ', ಇದ್ದು ಅದನ್ನು ಆರತಿ ಮಾಡಿತರ್ತಾರೆ. ಸೀಗೆಮಳೆ ಕಟ್ಕೊಂಡು ಓಡುವ ಆಟ, ಕತ್ತಿಗೆ ರಾಗಿಕಲ್ಲು ಸಿಗಿಸಿಕೊಂಡು ತರುವ ಆಟ, ಮೇಲಕ್ಕೆಸೆಯುವ ಆಟ ಆಡುತ್ತಾರೆ. - ಹೀಗೆ ಜನಪದೀಯ ಆಚರಣೆಗಳಲ್ಲೂ ಶಾಕ್ತ ಸಂಪ್ರದಾಯದ ಪ್ರಭಾವ ಹಾಗು ವಿಜಯನಗರ ಕಾಲದ ಸಂಸ್ಕೃತಿಯು ಚಹರೆಗಳು ಇಲ್ಲಿ ಮೇಳೈಸಿರುವುದು ಕಾಣುತ್ತದೆ.

ಊರುಬಾಗಿಲ ಕಲ್ಲುಕೋಳಿ

ಕೋಟೆ ಬಾಗಿಲ ಮೇಲಿನ ಉಬ್ಬು ಶಿಲ್ಪವು ಹಂಸದಂತಹ ರೂಪದ ಭಾವ ತರುತ್ತದೆ. ಊರಿನವರು ಕಲ್ಲುಕೋಳಿ ಎನ್ನುತ್ತಾರೆ.

ಇಲ್ಲಿರುವ **ತಿರುಮಲ ದೇವರ ಗುಡಿಯಲ್ಲಿ** ವಿಜಯನಗರ ಶೈಲಿಯ ಗರುಡ ಶಿಲ್ಪದ ಮೇಲಿನ ಸ್ಥಾನಕಮೂರ್ತಿಯಾಗಿ ತಿರುಮಲ ಕಾಣುತ್ತಾನೆ. ಶಾಸನವೊಂದು ಭೂಮಿಯಲ್ಲಿ ಗೋಡೆಬದಿಯಲ್ಲಿ ಹೂತುಹೋಗಿದೆ; ಗುಡಿಯಲ್ಲಿ ವೀರಗಲ್ಲು, ಎಡಾರ್ಥ ಪದ್ಮಾಸನೆ ಖಡ್ಗಧಾರಿಣಿ, ಪಾನುಬಟ್ಟಲು, ಹಿಡಿದ ಭೈರವಿ ಹಾಗು ಆಚಾರ್ಯರ ಪ್ರಣಾಮ ಆಸೀನ ಭಂಗಿಯ ಶಿಲ್ಪಗಳೂ ಇವೆ. ವಿಶೇಷತಃ ಈ ಗುಡಿಯ ತಿರುಮಲ ಮೂರ್ತಿಯನ್ನು ತಿರುಮಲೇಶ್ವರ ಎಂದೂ ಕರೆಯುತ್ತಾರೆ. ಈ ಮೂರ್ತಿಯ ವೈಶಿಷ್ಟ್ಯವೆಂದರೆ ನೀಳ ಕುಸುರಿ ಕೆಲಸದ ಕಿರೀಟ, ಜಟಾಪ್ರಭಾಮಂಡಲ ಹಿಂಮುಡಿ, ಹಿಂಗೈಗಳಲ್ಲಿ ಶಂಖ ಚಕ್ರ ಮುಂಬಲಗೈಯಲ್ಲಿ ವಜ್ರದಂಡ, ಮುಂ ಎಡಗೈಯಲ್ಲಿ ಅನಿಸಿಕೊಂಡ ನೀಳದಂಡ ಕತ್ತಿನ ಮಟ್ಟದಿಂದ ಪಾದದವರೆಗಿದ್ದು ದ್ವಿಭಂಗದಲ್ಲಿದೆ. ವೀರಭದ್ರನ ರುಂಡಮಾಲೆಯನ್ನು ಎಡ ನಡುವಿನಿಂದ ಬಲ ಮಂಡಿಯವರೆಗೆ, ಹೋಲುವಂಥ ವಜ್ರಹಾರ ಭಾಗವೂ ಇವನ ಅಲಂಕಾರಕ್ಕಿದೆ. ಪಾದಪೀಠ ಮುಖದಲ್ಲಿ (ಜಲಹರಿ) ವೀರಮಂಡಿಯ ವೀರ ವಿಸ್ಫಾಲನ ಭಂಗಿಯ ಗರುಡನ ಉಬ್ಬು ಶಿಲ್ಪವಿದೆ. ವಿಗ್ರಹವು ಸ್ಪಷ್ಟವಾಗಿ ವಿಜಯನಗರ ಶೈಲಿಯದಾಗಿದ್ದರೂ ಕೆಲಮಟ್ಟಿಗೆ ಹೊಯ್ಸಳ ಕುಸುರಿಗೆಲಸದ ಕಲೆಯೂ ಅಡಕ ವಾಗಿರುವುದು ಗಮನಾರ್ಹ (ಕಿರೀಟ, ಸೊಂಟ ವಸ್ತ್ರಭಾಗ). ತೊಡೆಮಟ್ಟದವರೆಗೂ ಇರುವ ವಸ್ತ್ರದುಡುಗೆಯ ಶೈಲಿಯೆ ವೀರನ ಉಡುಗೆಯಂತೆ ಕಾಣುತ್ತದೆ.

ವಿಷ್ಣು (ತಿರುಮಲೇಶ್ವರ!) ಭಾಗವತದ ಭಕ್ತಿ ಪಂಥದಲ್ಲಿ ವಿಷ್ಣು ಪರಿವಾರದ ಪಂಚವೀರರಲ್ಲಿ ಸಂಕರ್ಷಣ ವಾಸುದೇವ, ಪ್ರದ್ಯುಮ್ನ, ಅನಿರುದ್ಧ ಹಾಗು ಸಾಂಬನ ರೂಪದಲ್ಲಿ ಒಂದನೇ



ಶತಮಾನದಿಂದಲೂ ಆರಾಧನೆಗೊಳ್ಳುತ್ತ ಬಂದಿದ್ದಾನೆ.[೨೫] ಇದರಲ್ಲಿ ಬರುವ ಸಾಂಬನಿಗೆ ಬಲಗೈ ದಾನಹಸ್ತ, ಎಡಗೈಯು ದಂಡಧಾರಿ ಆಗಿರುತ್ತದೆ. ಸೋಮನಾಥಪುರದ ವಿಷ್ಣು ವಿಗ್ರಹಗಳ ಪೈಕಿ ಒಂದಕ್ಕೆ ಹಸ್ತಗಳಲ್ಲಿ ವಜ್ರ, ಶಂಖ, ಚಕ್ರ ಹಾಗು ದಂಡಗಳಿವೆ. ಬೆಳವಾಡಿಯ ವೀರನಾರಾಯಣ ದೇಗುಲದ ವಾಮನನಿಗಿರುವ ದಂಡ, ಕಮಂಡಲವಾಗಲಿ; ವೈಖಾನಸಾಗಮದ ರೀತ್ಯಾ ಆವರಣದೇವತೆ ಎನಿಸುವ ಕಪಿಲನು, ವಿಷ್ಣು ಪರಿವಾರದ ಪ್ರದ್ಯುಮ್ನನಂತೆ ನಿರ್ಲಿಪ್ತರೂಪನಾಗಿ ಅಷ್ಟ ಭುಜಾಂಕಿತ ಆಯುಧ ಧಾರಣೆಯಲ್ಲಿ ಒಂದಾದ ದಂಡವನ್ನು ಹಿಡಿದಂತೆ ಚೇಳೂರಿನ ಗ್ರಾಮೀಣ ಶೈಲಿಯ ತಿರುಮಲೇಶ್ವರನಿಗೆ ಅನ್ವಯವಾಗುವುದಿಲ್ಲ. ಆದರೆ ಸಾಂಬನಂತೆ ದಾಸಹಸ್ತವಿರದೆ ವಜ್ರದಂಢಧಾರಿಯೂ, ಆಗಿ. ಸೋಮನಾಥಪುರದ ವಿಷ್ಣು ವಿಗ್ರಹವೊಂದರ ಆಯುಧಧಾರಣೆಯನ್ನು, ನೆನಪಿಗೆ ತರುತ್ತಾನೆ. 'ಸಾಂಬ'ನು ಕೃಷ್ಣ ಜಾಂಬವತಿಯ ಪುತ್ರನೆಂದಿದ್ದರೂ, ಅಂಬಿಕೆಯ ಪತಿ ಶಿವನೂ ಆಗಿದ್ದಾನಲ್ಲವೆ! ಅಂತಾಗಿ ಪ್ರಸ್ತುತ ತಿರುಮಲ ಈ 'ಸಾಂಬ' ಲಕ್ಷಣಗಳೊಡನೆ ತಿರುಮಲೇಶ್ವರ ಎಂದೂ ಕರೆಸಿ ಕೊಂಡಿದ್ದಾನೆ. ಇವನ ಜೊತೆ ಇಲ್ಲಿ ಶ್ರೀ ದೇವಿಯೂ ಹಾಗು ಭೂದೇವಿ ಹಾಗೂ ಭೂದೇವಿಯೂ ಪ್ರಭಾವಳಿಯಲ್ಲಿ ಇದ್ದಾರೆ

ಚೇಳೂರು ಭಾವಿ :

ಸ್ಪಷ್ಟವಾಗಿ ವಿಜಯನಗರ ಕಾಲದ, ಆಳವಾದ ವಿಶಾಲವಾದ ಪ್ರವೇಶ ದ್ವಾರಗಳ ಹಂತ ಕೋಣೆಗಳ, ತುಂಬಿದ ಮೆಟ್ಟಿಲುಗಳ ಶಿಲಾಭಾವಿಯಾಗಿ ಪ್ರಸಿದ್ಧವಾಗಿದೆ. ದೇವರಾಯನದುರ್ಗದ, ಇರುಗಪ್ಪದಂಡನಾಯಕನ ಕಲ್ಯಾಣಿ, ಗುಮ್ಮನಾಯಕನ ಪಾಳ್ಯದ ವಿಜಯನಗರ ಕಾಲದ ಕಲ್ಯಾಣಿ ಶೈಲಿಯನ್ನು ಇದು ತದ್ವತ್ ಹೋಲುತ್ತದೆ. ಪಶ್ಚಿಮ ಬದಿಗೆ ಭೈರವೇಶ್ವರನ ಗುಡಿಯೂ ಇದೆ. ಮೊದಲಿಗೆ ಚೇಳು ಲಾಂಛನವಿದ್ದ ಭೈರವೇಶ್ವರ ಈ ಗುಡಿಯಲ್ಲಿದ್ದ. ಅವನಿಂದಾಗಿ ಚೇಳೂರು ಎಂಬ ಹೆಸರಾಯಿತು ಎನ್ನುವುದುಂಟು.



ಈಗ ಆ ವಿಗ್ರಹವೂ ಕದ್ದುಹೋಗಿ ಹೊಸ ವಿಗ್ರಹವಿದೆ. ಚೋಳೂರು ಭಾವಿ ವಿಜಯನಗರ ಕಾಲದ್ದಾದ್ದರಿಂದ ಭೈರವಮೂರ್ತಿಯೂ ಆಗ ಪ್ರತಿಷ್ಠೆಯಾಗಿ. 'ಚೇಳೂರು' ಎಂಬ ಪ್ರತಿನಾಮಧೇಯ ಬಂದಿರುವಂತಿದೆ. ಅಲ್ಲದೆ ಈ ಭೈರವೇಶ್ವರನ ತ್ರಿಶೂಲವನ್ನು ಸಂಜೆ ತೆಗೆದುಕೊಂಡು ಆದಿ ಚುಂಚನಗಿರಿಯಲ್ಲಿ ಹೋಗಿ ದರ್ಶನವಿಟ್ಟ ಮೇಲೆಯೇ ಅಲ್ಲಿ ತೇರು ಜರುಗುವುದಾಗಿದೆಯಂತೆ. ಚೇಳೂರಿಗೂ ಆದಿಚುಂಚನಗಿರಿಗೂ ಸಂಬಂಧವಿದೆಯಂತೆ; ಈ ಭಾವಿಗೆ ಸನಿಹದಲ್ಲಿ ಮರಳು ಬಸವಣ್ಣನ ಗುಡಿ ಇದೆ. ಇಲ್ಲಿ ಮಳೆ ಬರದಿದ್ದಾಗ ೧೦೧ ಕೊಡ ಅಭಿಷೇಕ ಮಾಡಿದರೆ ಮಳೆ ಆಗುತ್ತದೆ ಎಂಬುದು ಜನಪದ ನಂಬಿಕೆ. ಇದಕ್ಕೆ ಪೋಷಕವಾಗಿ ಗೌರಿಪುರದ ಜನಪದರು ಮಳೆ ಬರದೆ ಹೋದಾಗ ಮಳೆದೇವರು ಈ ಬಸವಣ್ಣನ ಬಳಿಗೆ, ಊರೆಲ್ಲ ಮೆರವಣಿಗೆ ಮಾಡಿ ಬಂದು ಪರ ಮಾಡುತ್ತಾರೆ. ಹರಿಸೇವೆ ಮಾಡಿ ೧೦೧ ದೀಪ ಹಚ್ಚಿ ಮಣೇವು ಹಾಕುತ್ತಾರೆ. ಕಲ್ಲುಕೋಳಿ ಕೂಗಿ, ಚೇಳೂರು ಭಾವಿ ತುಂಬಿ, ಮರಳು ಬಸವಣ್ಣ ಗುಟುರು ಹಾಕಿದರೆ ಜಲಪ್ರಳಯ (ಅಷ್ಟೊಂದು ಮಳೆ) ಆಗುತ್ತೆ ಎಂಬುದು ಜನಪದ ಮಾತು ಹೀಗೆ ಚೇಳೂರು ಇತಿಹಾಸ ಜನಪದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ದಟ್ಟಣೆಯನ್ನು ಹೊಂದಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. A. Satyanarayana., 1996, *History of the Wodeyars of Mysore*, Directorate of Arechaelogy and Museums, Mysore.p.183

೨. ಎ.ಕ ಸಂ ೧೬ (ತುಮಕೂರು ಜಿಲ್ಲೆ ಅನುಬಂಧ : (ಸಂ) ಕೆ. ಎ. ನೀಲಕಂಠ ಶಾಸ್ತ್ರಿ), ೧೯೫೫, ತುಮಕೂರು ೭೯ (ಮೆಳೆಕೋಟೆ, ಕ್ರಿ.ಶ ೧೩೧೪)

೩. i ಎ.ಕಸಂ ೧೨ (ರೈಸ್ ಆವೃತ್ತಿ) ೧೯೦೪, ತುಮಕೂರು ಜಿಲ್ಲೆ, ತುಮಕೂರು ೨೮, ೨೯ (ಹರಳೂರು, ಕ್ರಿ.ಶ. ೧೪೨೯; ಕ್ರಿ.ಶ. ೧೨೮೭) ತುಮಕೂರು ೩೩ (ಬೈರಸಂದ್ರ ಕ್ರಿ.ಶ. ಸು. ೧೨೮೭) ತುಮಕೂರು ೧೧ (ತುಮಕೂರು, ಕ್ರಿ.ಶ. ೧೪೨೯) ii. ಎ.ಕ. ೧೬ ತುಮಕೂರು ಜಿಲ್ಲೆ ಅನುಬಂಧ, ೧೯೫೫ (ಪ್ರಕಟಣೆ ೧೯೫೯), (ಸಂ) ಕೆ.ಎ. ನೀಲಕಂಠ ಶಾಸ್ತ್ರಿ, ತುಮಕೂರು ೭೯ (ಮೆಳೆಕೋಟೆ, ಕ್ರಿ.ಶ. ೧೩೧೪)

iii. ಎಂ.ಜಿ. ನಾಗರಾಜ್., 'ಹರಳೂರಿನ ಇತಿಹಾಸ ಮತ್ತು ತತ್ಸಂಬಂಧೀ ವೀರಭದ್ರ ಕ್ಷೇತ್ರಗಳು', ವೀರಶ್ರೀ, (ಹರಳೂರು ಶ್ರೀ ವೀರಭದ್ರ ಸೇವಾ ಸಮಿತಿ ಸ್ಮರಣಸಂಚಿಕೆ), ೨೦೦೩, (ಸಂ) ಎಚ್.ಎಸ್. ಸಿದ್ದಗಂಗಪ್ಪ, ಹರಳೂರು, ಪು. ೧೨-೧೮

೪. ಎ.ಕ. ೧೨ (ರೈಸ್ ಆ ವೃತ್ತಿ). ಅದೇ, ತುಮಕೂರು ೩೯ (ಕ್ರಿ.ಶ. ೧೩೮೭)
೫. ಅದೇ., ಗುಬ್ಬಿ ೫೯ (ಅಳಲಗಟ್ಟ, ಕ್ರಿ.ಶ. ೧೫೩೩)
೬. ಎ.ಕ.ಸಂ. ೪ (ಹೊಸತು)., ೧೯೭೫, ಮೈಸೂರುಜಿಲ್ಲೆ, ಚಾಮರಾಜನಗರ ೧೧ (ಕ್ರಿ.ಶ. ೧೬೭೫)
೭. A. Satyanarayana., History of the wodeyars of Mysore, op.cit., P. 83
೮. ಅದೇ., ತುಮಕೂರು ೪೫ (ತುಮಕೂರು ತಾ. ಕ್ರಿ.ಶ. ೧೬೯೯)
೯. ಹಂಪಿ ಶಾಸನಗಳು., ೨೦೦೦, (ಸಂ) ದೇವರ ಕೊಂಡಾರೆಡ್ಡಿ ಮತ್ತು ಇತರರು, ಶಾಸನ ಸಂಖ್ಯೆ ೩೫೦ ಕನ್ನಡ. ವಿಶ್ವವಿದ್ಯಾಲಯ.
೧೦. ಆಂಧ್ರ ಪ್ರದೇಶದ ಶಾಸನಗಳು ಭಾಗ ೧., ೨೦೦೦, (ಸ., ಡಾ. ಕೆ.ಆರ್. ಗಣೇಶ್, ಡಾ.ರಾ. ಶೇಷಶಾಸ್ತ್ರಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಶಾಸನ ಸಂ. ೨೨, ಕ್ರಿ.ಶ. ೧೧-೬. ೧೩೬೩)
೧೧. ಎ.ಕ. ಸಂ. ೨(ಹೊಸತು)., ೧೯೩೩ ಶ್ರವಣಬೆಳಗೊಳ ಸಂಪುಟ, ಮೈ.ವಿ.ವಿ. (ಶ್ರ.ಬೆ.ಸಂ. ೩೫೭, ಕ್ರಿ.ಶ. ೧೪೨೨)
೧೨. ಈ ವೋದೇಶ್ವರ (ವೃದ್ಧೇಶ್ವರ) ಕಲ್ಯಾಣಿ ಬಳಿ ಇರುವ ನರಸಿಂಹನ ಪ್ರಾಚೀನ ಒಕ್ಕಲಾದ ಕುಂಬಯ್ಯಗೌಡನ ಮನೆತನದ ಸೊಸೆ ಶ್ರೀಮತಿ ಅಕ್ಕಯ್ಯಮ್ಮ ಅವರು (೬೫) ತಿಳಿಸಿದ ವಿಷಯ.
೧೩. ಎ.ಕ. ೧೨ (ರೈಸ್ ಅವೃತ್ತಿ)., ತುಮಕೂರು ಜಿಲ್ಲೆ. ಗುಬ್ಬಿ ೫೭ (ಬಿದರೆಗ್ರಾಮ-ಕೆರೆಗೋಡು ಕ್ರಿ.ಶ. ೯೩೯)
೧೪. ಎಂ. ಜಿ. ನಾಗರಾಜ್., 'ಹರಳೂರಿನ ಇತಿಹಾಸ ಮತ್ತು ತತ್ಸಂಬಂಧೀ ವೀರಭದ್ರ ಕ್ಷೇತ್ರಗಳು', ವೀರಶ್ರೀ, ಅದೇ, ಪು. ೨೧
೧೫. ಈ ಮಾಹಿತಿಯನ್ನು ಚೇಳೂರಿನ ಶ್ರೀ ಎಸ್. ಇಂದುಕುಮಾರ್ ಅವರು ನೀಡಿದುದಕ್ಕೆ ಕೃತಜ್ಞತೆಗಳು.
೧೬. ಎ.ಕ.೧೨ (ರೈಸ್ ಆವೃತ್ತಿ)., ಅದೇ, ಗುಬ್ಬಿ ೪೯ (ಬ್ಯಾಡನ್ ಕಟ್ಟೆ ಗ್ರಾಮ, ಕ್ರಿ.ಶ. ೧೫೪೧)
೧೭. ಈ ಕತೆಯನ್ನು ಚೇಳೂರಿನ ನಿವೃತ್ತ ಹಿರಿಯ ಶಿಕ್ಷರಾದ ಶ್ರೀ ಎಸ್. ಸಿದ್ದಪ್ಪನವರು ತಿಳಿಸಿದರು.
೧೮. ಎ.ಕ. ೧೨ (ರೈಸ್ ಆವೃತ್ತಿ)., ಅದೇ ಗುಬ್ಬಿ ೪೭ (ಚೇಳೂರು, ಕ್ರಿ.ಶ. ೧೫೬೦)
೧೯. ಅದೇ, ಗುಬ್ಬಿ ೪೬ (ಚೇಳೂರು ತಾಮ್ರಶಾಸನ. ಕ್ರಿ.ಶ. ೧೪೦೩)
೨೦. ಎಂ.ಜಿ. ನಾಗರಾಜ್, 'ವಿಜಯನಗರ ಕಾಲದಲ್ಲಿ ವೀರಭದ್ರ ಪರಂಪರೆ', **ವಿಜಯನಗರ ಅಧ್ಯಯನ ಸಂಪುಟ** ೬, ೨೦೦೧, (ಸಂ) ಪ್ರೊ॥ ಎಂ. ವಿ. ಕೃಷ್ಣಪ್ಪ, ಹೆಚ್. ಟಿ. ತಳವಾರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ ಪು. ೧೫-೧೬
೨೧. ಗುಡಿಯ ಆಚರಣೆಗಳ ವಿಶೇಷವನ್ನು ತಿಳಿಸಿದವರು (೨೪. ೨. ೨೦೦೨ರಲ್ಲಿ) ಅರ್ಚಕರಾದ ಶ್ರೀ ಗಂಗಾಧರಪ್ಪ ಅವರು; ಪರ್ಯಾಯ ಅರ್ಚಕ ವರ್ಗದಲ್ಲಿ ಶ್ರೀ ಚಂದ್ರಣ್ಣ ಹಾಗು ಈಶ್ವರಯ್ಯ ಅವರೂ ಇದ್ದಾರೆ.
೨೨. ಎಂ.ಜಿ.ನಾಗರಾಜ್., 'ಹರಳೂರಿನ ಇತಿಹಾಸ ಮತ್ತು ತತ್ಸಂಬಂಧೀ ವೀರಭದ್ರ ಕ್ಷೇತ್ರಗಳು', ವೀರಶ್ರೀ, ಅದೇ, ಪು. ೨೮
೨೩. ಎಸ್. ಕೆ. ರಾಮಚಂದ್ರರಾವ್.;, ೧೯೭೫, **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ,** ಬೆಂಗಳೂರು ವಿಶ್ವವಿದ್ಯಾಲಯ, ಪು. ೧೭೮
೨೪. ಎಂ.ಜಿ. ನಾಗರಜ್., ೧೯೯೩, **ಕೆಂಬಟ್ಟಿ ಹೊಲೆಯರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
೨೫. Srinivas V. Padigar., 1996, *Vishnu Cult in Karnataka* Directorate of Archaeology and Muscums, Mysore, p. 146, 200, 220

(ದೇವರಾಯನದುರ್ಗದ ಕಲ್ಯಾಣಿ ಶಾಸನವನ್ನು ತೋರಿಸಿದವರು ಟಿ.ವಿ.ಎಸ್. ಕಂಪನಿಯ ಶ್ರೀ ಶ್ರೀನಿವಾಸನ್ ಹಾಗೂ ಶೇಂದಿಲ್‌ನಾಥನ್ ಅವರು; ಚೇಳೂರಿನ ಕುರಿತ ಕೆಲವು ಮಾಹಿತಿಗಳನ್ನು ನೀಡಿದ ಸರ್ವಶ್ರೀ ಹಿರಿಯ ನಿವೃತ್ತ ಶಿಕ್ಷಕರಾದ ಎಸ್. ಸಿದ್ದಪ್ಪನವರು, ಮೇಲೇಗೌಡರು, ಪ್ರೊ॥ ಎಸ್. ಬಸವರಾಜು, ಎಸ್. ಇಂದುಕುಮಾರ್ ಮತ್ತು ಎಸ್. ಫಾಲಾಕ್ಷ - ಇವರೆಲ್ಲರಿಗೂ ಕೃತಜ್ಞತೆಗಳು.

☆ ☆ ☆ ☆

ಇತಿಹಾಸದ ಅಂಗಳದಿ ಪರಂಪರೆಯ ಪುಷ್ಪ
ಅರಳಿದರೆ ಸುರಿಯಲೊಲ್ಲದೆ ಸೌರಭದ ಬಾಷ್ಪ!
ಇತಿಹಾಸವು ನೆನಪಿನ ಸೌರಭವೆಂತೋ ಸಂಘರ್ಷದ
ಎಳೆಯಲಿ ನಿಂತು ನಡೆದಾಡಿದ ಚಲನೆಗಳ ನೆನಪಿನ ಕಂತು

ಡಾ॥ ಎಸ್. ಎಂ. ನಾಗಭೂಷಣ*

ಬಳ್ಳಾರಿ ಜಿಲ್ಲೆಯ ಶಾಸನ ಕವಿಗಳು - ರೂವಾರಿಗಳು

ಕನ್ನಡನಾಡಿನ ಶಾಸನಕವಿಗಳನ್ನು ಕುರಿತು ಅನೇಕ ಲೇಖನಗಳು ಹಾಗು ಕೃತಿಗಳು ಹೊರಬಂದಿವೆಯಾದರೂ ರೂವಾರಿಗಳ ಬಗ್ಗೆ ಲೇಖನಗಳು ಬಹಳ ವಿರಳ. ಶಾಸನ ಕವಿಗಳ ಬಗೆಗೆ, ಆರ್. ನರಸಿಂಹಚಾರ್ ಅವರ "ಕರ್ನಾಟಕ ಕವಿಚರಿತೆ"; ಹಾಗೂ ಮೇವುಂಡಿ ಮಲ್ಲಾರಿಯವರ "ಕನ್ನಡ ಶಾಸನ ಕವಿಗಳು"; ಇತರ ಬಿಡಿ ಸಂಶೋಧನಾ ಲೇಖನಗಳು ಅಲ್ಲದೆ ಡಾ॥ ಎಂ. ಎಂ. ಕಲಬುರ್ಗಿ, ಶ್ರೀನಿವಾಸ ರಿತ್ತಿ, ಆರ್. ಎನ್. ಗುರುವ, ಆರ್. ಎಲ್. ಪಾಟೀಲ ಮುಂತಾದವರು ತಮ್ಮ ಲೇಖನಗಳಲ್ಲಿ ರೂವಾರಿಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಸಾಮಾನ್ಯವಾಗಿ ಒಂದು ಶಿಲಾಶಾಸನ ರಚನೆಯಾಗಬೇಕಾದರೆ, ಶಾಸನ ಪಾಠವನ್ನು ಕವಿಗಳು ರಚಿಸಿ ಅಥವ ಹೇಳಿದ್ದನ್ನು ಬರಹಗಾರರು, ಅಂದಲಿಪಿಯಲ್ಲಿ ಬರೆದು ಸಿದ್ಧಪಡಿಸಿ, ಶಿಲಾಲಿಪಿಗಾರರಿಗೆ ಅಥವ ರೂವಾರಿಗಳಿಗೆ ಕೊಡುತ್ತಿದ್ದರು. ರೂವಾರಿಗಳು ಇದನ್ನು ನೋಡಿ ಶಿಲೆಗಳ ಮೇಲೆ ಕೆತ್ತುತ್ತಿದ್ದರು. ಶಿಲೆಗಳ ಮೇಲೆ ಅಂದದ ಅಕ್ಷರಗಳನ್ನು ಕೆತ್ತಿದ ಕೆಲ ಶಿಲ್ಪಿಗಳು, ರೂವಾರಿಗಳು ಕೊನೆಗೆ ತಮ್ಮ ತಮ್ಮ ಹೆಸರುಗಳನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ ಬಳ್ಳಾರಿ ಜಿಲ್ಲೆಯ ಕೆಲ ಶಾಸನಗಳು[೨] ರೂವಾರಿಗಳನ್ನು ಕುರಿತು, ಅವರ ಸೇವೆಯನ್ನು ಸ್ಮರಿಸಿ, ದತ್ತಿ ಬಿಟ್ಟ ವಿಷಯಗಳು, ಅಥವ ರೂವಾರಿಗಳು ಭೂದಾನ ನೀಡಿದ ಅಪರೂಪದ ಉಲ್ಲೇಖಗಳಿವೆ. ಅಲ್ಲದೆ. ಈ ರೂವಾರಿಗಳು, ಕೆಲ ಪ್ರದೇಶಗಳಿಂದ ಬಾಗುಳಿ, ಉಜ್ಜನಿ, ಮುಂತಾದ ಕ್ಷೇತ್ರಗಳಿಗೆ ಭೇಟಿ ನೀಡಿದ ಉಲ್ಲೇಖಗಳಿವೆ.

ಶಾಸನಗಳಲ್ಲಿ ಕವಿಯ ಹೆಸರಿನ ಜೊತೆಗಿರುವ "ಪೇಳ್ದಪಂ" "ರಚಿಸಿದಪಂ"; "ವಿರಚಿಸಿದಂ", ಎಂಬ ಪದಗಳಿಂದ ಆ ಕವಿಗಳನ್ನು ಗುರುತಿಸಬಹುದು; ರೂವಾರಿಗಳನ್ನು ಗುರುತಿಸಲು ರೂವಾರಿಯ ಹೆಸರಿನ ಜೊತೆಗೆ "ಸೂತ್ರದಾರಿ" "ಕಂಡರಿಸಿದಂ" ಕಣ್ಡರಣೆ, 'ಕಲ್ಲು-ಕುಟಿಗ"; "ಮಾಡಿದಪಂ"; "ಬೆಸೆದಪಂ"; ಬೆಸದು ಎಂಬ ಪದಗಳನ್ನು ಬಳಸಿದ್ದಾರೆ. ಅಲ್ಲದೆ ಕೆಲವಡೆ ಅವರ ವಿಶೇಷ ಬಿರುದುಗಳನ್ನು ಆರಾಧ್ಯದೇವರ ನಾಮಗಳನ್ನು, ಸ್ಥಳನಾಮಗಳನ್ನು ಉಲ್ಲೇಖಿಸಿದ್ದಾರೆ. ಇಂತಹ ವಿಶೇಷ ಉಲ್ಲೇಖದ ಶಾಸನಗಳನ್ನು ಅಂದರೆ ಬಳ್ಳಾರಿ ಜಿಲ್ಲೆಯಲ್ಲಿ ಆರಂಭದಿಂದ ಕ್ರಿ.ಶ. ೧೩ನೇ ಶತಮಾನದವರೆಗಿನ ಒಟ್ಟು ೪೪ ಶಿಲಾಶಾಸನ ಹಾಗೂ ತಾಂಮ್ರ ಶಾಸನಗಳನ್ನು ಶೋಧಿಸಲಾಗಿದೆ. ಈ ಶಾಸನಗಳನ್ನು ಕೆಲವೆಡೆ ಕೇವಲ ಕವಿಗಳ ಹೆಸರು, ಕೆಲವೆಡೆ ಬರಹಗಾರರನ್ನು ಇನ್ನೂ ಕೆಲವೆಡೆ ಕೇವಲ ರೂವಾರಿಗಳು, ಲಿಪಿಗಾರನ್ನು, ಕೆಲ ಶಾಸನಗಳಲ್ಲಿ ಶಾಸನ ಕವಿಗಳು ಹಾಗು ರೂವಾರಿಗಳನ್ನು ಹೆಸರಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಶಾಸನ ಕವಿ-ಬರಹಗಾರರನ್ನು ಉಲ್ಲೇಖಿಸಿರುವ ಮೊದಲ ಶಾಸನವೆಂದರೆ, ಕ್ರಿ.ಶ. ೩ನೇ ಶತಮಾನಕ್ಕೆ ಸೇರಿದ "ಹಿರೆಹಡಗಲಿ ತಾಮ್ರ ಶಾಸನ", ಕಂಚಿಪಲ್ಲವರ ಶಿವಸ್ಕಂದವರ್ಮನ ಶಾಸನ.[೧] ಈ ಶಾಸನದಲ್ಲಿ ಶಾಸನ, ಬರಹಗಾರ "ಕೋಲಿವಾಲ ಭೋಜಕಸ ಭಟ್ಟಸರ್ಮ ಸಹತ್ತ ಲಿಖಿತೇಣ" ಪಟ್ಟಕಾದತ್ತಿ" ಎಂದು ಲಿಪಿಗಾರನ ಹೆಸರನ್ನು ಉಲ್ಲೇಖಿಸಿದೆ. ಇದರ ನಂತರ ಕೋಗುಳಿಯ ಶಾಸನ ಈ ಶಾಸನವನ್ನು ಕ್ರಿ.ಶ. ೯೦೮[೨]ರ "ರೂವಾರಿ ಕಾಯಿಕೋಜ" ಎಂದು ಉಲ್ಲೇಖಿಸಿದೆ. ನಂತರ ಕೊಟಗಲ್ಲು ಶಾಸನ ಕ್ರಿ.ಶ. ೯೬೭[೩] ಸೂತ್ರಸೇನ ಶ್ರೀ ಮಧುಸೂದನಾಖ್ಯ ಕವಿನಾ ಶಾಸ್ತ್ರ ಪ್ರಶಸ್ತಿ ಕೃತಾ ಎಂದಿದೆ.

ಕೋಗುಳಿಯ ಶಾಸನ ಕ್ರಿ.ಶ. ೯೦೮: ಈ ಶಾಸನವನ್ನು ರೂವಾರಿ "ಕಾಯಿಕೋಜ" ಕೆತ್ತಿದ್ದಾನೆ. ಬಾಗುಳಿಯ ಕ್ರಿ.ಶ. ೯೭೨ರ ಶಾಸನ[೪]ವನ್ನು "ಚಟೋಜಂ ಬರೆದಂ" ಎಂದಿದೆ. ಅದೇ ಊರಿನ ಕ್ರಿ.ಶ. ೯೮೭ರ ಶಾಸನವನ್ನು ಛೆನ್ನೋಜನ ಮಗ ಹಂಪ ಮಾಡಿದ"[೫] ಅದೇ ಊರಿನ ಕ್ರಿ.ಶ. ೯೯೧ರ ಶಾಸನವನ್ನು ಛೆನ್ನೋಜನು ಮಾಡಿದ[೬], ಬಾಗುಳಿಯ ೧೦ನೇ ಶತಮಾನದ ಶಾಸನ "ಬೊಮ್ಮನಹಾಳ ಅಕಸಾಲೆ ಬಸವೋಜನ ಮೊಮಗ ಗದುಗಿನ ಉಜಿನಿ ಬಾಗುಳಿಗೆ ಬಂದುಯಿದ"[೮] ಎಂದಿದೆ. ಇಲ್ಲಿ ರೂವಾರಿ ಬಾಗುಳಿ ಮತ್ತು ಉಜ್ಜನಿಗೆ ಬೆಟ್ಟಿ ನೀಡಿದ್ದನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಕ್ರಿ.ಶ. ೧೦೩೬ರ ಓರವಾಯಿ ಶಾಸನವನ್ನು "ಜೊಯಿಸ ಚೂಡಾಮಣಿ ಚಾವುಂಡಮಯ್ಯ ಬರೆದ"[೯]; ಮೈಲಾರದ ಕ್ರಿ.ಶ. ೧೦೪೬ರ; ಶಾಸನವನ್ನು "ನಾಗಮ್ಮ ಬರದಂ, ರೂವಾರಿ ಜಂಡೋಜ ಕಾಳಿದಾಸನ ಮಗ ದೇಕಮೋಚಕರ,"[೧೦] ಎಂದಿದೆ. ನಂದಿ ಕಂಬ ಶಾಸನ ಕ್ರಿ.ಶ. ೧೦೫೩ರದು. "ಕಲ್ಲುಕುಟಿಗ

* ಪ. ನಾಗಭೂಷಣ ಶಾಸ್ತ್ರಿ ರಸ್ತೆ, ಮಹಂತ ನಗರ, ೩ನೇ ಅಡ್ಡರಸ್ತೆ, ೭/೧೨೮೫, ಮುರುಘಾಮಠದ ಹತ್ತಿರ, ಧಾರವಾಡ-೫೮೦ ೦೦೭

ಮಾಣಿಕ ಚಾರಿ ಕಿರಿಯ ಚಾವುಂಡೋರ್ಜಗೆ ದಾನ"[೧೧] ಎಂದಿದ್ದು ಇಲ್ಲಿ ರೂವಾರಿಗಳಿಗೆ ಭೂದಾನ ನೀಡಿದ ವಿವರಗಳಿವೆ. ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿನ ಕ್ರಿ.ಶ. ೧೦೭೪ರ ಶಾಸನದಲ್ಲಿ "ರೂವಾರಿಗಳಿಗೆ ದಾನ"[೧೨]; ಅಂಬಳಿಯ ಕ್ರಿ.ಶ. ೧೦೮೩ರ ಶಾಸನ "ದಾಸೋಜಂ ಕಂಡರಿಸಿದ"[೧೩]; ಕುರುವತ್ತಿ ಕ್ರಿ.ಶ. ೧೦೯೯ ಶಾಸನವನ್ನು ಕವಿ ಶ್ರೀಕಂಠ ಸೂರಿ ರಚಿಸಿದ ಕಾಳೋಜ,[೧೪] ಎಂಬ ರೂವಾರಿ ಶಿಲೆಯಲ್ಲಿ ಬರೆದ ಎಂದೆಲ್ಲ ಇದೆ. ಕೊಟ್ಟೂರು ಶಾಸನದಲ್ಲಿ (ಕ್ರಿ.ಶ ೧೨೨೧, "ಶಾಸನಂ ಬರೆದಾತ ಸೇನ ಭೋವ ಸೊಮಯ್ಯ ಯಿ ಶಾಸನಂ ಖಂಡಳಿಸಿದಾತ ಕಲ್ಲು ಕುಟಿಗ ಅಣ್ಣೋಜ, "[೧೫] ಎಂದಿದೆ. ಹಿರೆಮ್ಯಾಗೇರಿ ಕ್ರಿ.ಶ. ೧೦೬೧ರ ಶಾಸನದ ಕವಿಯಾದ "ಶ್ರೀಕವಿಮುಖ ದರ್ಪಣಂ ಬಮ್ಮ ದೇವಂಬರೆದಂ[೧೬] ಬಾಗುಳಿಯ ಕ್ರಿ.ಶ. ೧೦೬೮ರ ಶಾಸನ ಕವಿ ರೇವಣಯ್ಯ ನೊಂಳೆದಂ - ನಾಕೋಜಂ ಶಿವಪಾದ ಶೇಖರಂ" ಎಂದಿದೆ. ಈ ಬಗೆಗಲ್ಲ ವಿವರಗಳನ್ನು ಮುಂದಿನ ಪಟ್ಟಿಯಲ್ಲಿ ನೋಡಬಹುದು.

ಬಳ್ಳಾರಿ ಜಿಲ್ಲೆಯ ಶಾಸನ ಕವಿಗಳು ಮತ್ತು ಶಾಸನ ಶಿಲ್ಪಿಗಳು
(ಪ್ರಾರಂಭದಿಂದ ೧೩ನೇ ಶತಮಾನದವರೆಗೆ)

ಕ್ರ. ಸಂ.	ಶಾಸನಗಳು ಮತ್ತು ತಾಮ್ರಪಟಗಳು	ಕಾಲ	ಶಾಸನ ಕವಿ	ಬರಹಗಾರ	ರೂವಾರಿಗಳು ಶಾಸನ ಲಿಪಿಕಾರ - ಶಿಲ್ಪಿ	ಪ್ರಕಟಣೆ
೧.	ಹಿರೇಹಡಗಲಿ (ಸಿ.ಪಿ)	3rd C.A. Pallava of Kanchi Shivaskadavarma	-	ಕೋಲಿವಾಲ ಭೋಜಕಸ	-	E.I.Vol I. p2. Select Inscriptions p. 461-66 ಕ.ವಿ. ಶಾಸನ ಸಂ-೧ ಹಂಪೆ-೧೯೯೮, ಪು. ೩೭೫
೨.	ಕೋಗುಳಿ	೯೦೮ A.D.		ಭಟ್ಟಸರ್ಮ ಸುತ್ತ ಲಿಖಿತೇಣ ಪಟ್ಟಿಕಾ ಕದತ್ತಿ	ಕಾಯಿಕೋಜ	ಕ.ವಿ.ಶಾ.ಸಂ-೧ ೨೬೭ SII XI I No. 56
೩.	ಕೊಳಗಲ್ಲು	೯೬೭ A.D.	ಸ್ರುತಸ್ತೇನ ಶ್ರೀ ಮಧುಸೂಧನಾಖ್ಯ ಕವಿನಾ ಶಾಸ್ತ ಪ್ರಶಸ್ತೀ ಕೃತಾ	-		ಕ.ವಿ.ಶಾ.ಸಂ-೧ ಹಂಪೆ ೧೯೯೮ ಪು. ೭೧ E.I. XXI. p. 260
೪.	ಬಾಗುಳಿ	೯೭೨ A.D.	-	-	ಚಟ್ಟೋಜ ಬರೆದಂ	ಕ.ವಿ.ಶಾ.ಸಂ-೧ ೫೮೯ SII XI I No. 71
೫.	ಬಾಗುಳಿ	೯೮೭ A.D.	-	-	ಥೆನ್ನೋಜನ ಮಗ ಹಂಪ ಮಾಡಿದ	ಕ.ವಿ.ಶಾ.ಸಂ-೧ ೫೯೪ XI No. 75
೬.	ಬಾಗುಳಿ	೯೯೧ A.D.	-	-	ಚನ್ನೋಜ ಮಾಡಿದ	ಕ.ವಿ.ಶಾ.ಸಂ-೧ ೫೫೪ SII XI I No. 76
೭.	ಬಾಗುಳಿ	10th A.D.	-	-	ಮಾದಯ್ಯನ ಮಗ ಜೋಗಮ	ಕ.ವಿ.ಶಾ.ಸಂ-೧ ೧೭೨ SII XI I No. 617
೮.	ಬಾಗುಳಿ	10th A.D.	-	-	ಕೇಸಿಮಯ್ಯ ಕಂಡೆಯ ಭಾಗಮ ಮಡಿದ ಕೇಸಿಮಯ್ಯ ರೂವಾರಿ	ಕ.ವಿ.ಶಾ.ಸಂ-೧ ೧೭೩ SII XI I No. 617
೯.	ಬಾಗುಳಿ	10th A.D.	-	-	ಬೊಮ್ಮನ ಹಾಳ ಅಕ ಸಾಲೆಬಸವೋಜನ ಮೊಮಗ ಗಮುಗಿನ ಉಜನಿ ಬಾಗುಳಿಗೆ ಬಂದುಯಿದ (ಬಂದು ಹೊದ)	ಕ.ವಿ.ಶಾ.ಸಂ-೧ ೧೪೫ SII XI I No. 608
೧೦.	ಒರವಾಯಿ	೧೧೩೬ A.D.	-	ಜೊಯಿಸ ಚೂಡಾ ಮಣಿ ಚಾವುಂಡ ಮಯ್ಯ ಬರೆದ	-	ಕ.ವಿ.ಶಾ.ಸಂ-೧ ೪೩ SII XI I No. 59
		೧೦೪೦	-	ನಾಗವರ್ಮ ಬರೆದಂ	-	ಕ.ವಿ.ಶಾ.ಸಂ-೧ SII XII No. 332

ಕ್ರ. ಸಂ.	ಶಾಸನಗಳು ಮತ್ತು ತಾಮ್ರಪಟಗಳು	ಕಾಲ	ಶಾಸನ ಕವಿ	ಬರಹಗಾರ	ರೂವಾರಿಗಳು ಶಾಸನ ಲಿಪಿಕಾರ - ಶಿಲ್ಪಿ	ಪ್ರಕಟಣೆ
೧೧. ೧೨.	ಮೈಲಾರ ಮೂಡಗೇರಿ ಹ.ಬೆ.(ತಾ)	೧೦೪೫	-	೧೧೬೮, ನಾಗಮಯ್ಯಂ ಬರೆದಂ	ಮೋಗ್ಗಓಜನ ಮಗಂ ರೂವಾರಿ ಮುಚ್ಚೋಜ ಬೆಸಗೆಯ್ಯೆ	ಕ.ವಿ.ಶಾ.ಸಂ-೧ ೪೧ ಪು. ೨೮೬
೧೩.	ಮೈಲಾರ	೧೦೪೬	-	ನಾಗಮ್ಮ ಬರೆದಂ	ರೂವಾರಿ ಜಂಡೋಜ ಕಾಳಿದಾಸಮಗದೇಕ ಮೋಚಿಕರ	ಕ.ವಿ.ಶಾ.ಸಂ-೧ ಪು. ೩೩೧ ಕ.ನಾ.ಶಾ.ಕ.ಪು. ೪೧
		೧೦೪೬	-	ನಜಿಯರ್ ಬರೆದರ್	-	ಕ.ವಿ.ಶಾ.ಸಂ-೧ ಪು. ೨೮೭
೧೪. ೧೫.	ಮೂಡಗೇರಿ ಮೂಡಗೇರಿ	೧೦೪೬	-	ಊರೊಡೆಯ ನಾರಾಯಣಯ್ಯನಮಗಂ ವಿಷ್ಣಯ್ಯ ಬರೆದಂ	ರೂವಾರಿ ಮುಚೋಜನ ಮಾಗ ಕರಿಯೋಜಂ ಬೆಸಗೆಯ್ದೊ	SII XI I p. 290
೧೬.	ನಾರಿಹಳ್ಳ ತಾರಾನಗರ (ಸಿ.ಪಿ)	೧೦೪೭ A.D.	-	ಪ್ರಜ್ಞಾಕ್ಷರಾರ್ಯಸೂನನ ಜಯಕರೆಣ ಲಿಖಿತ	-	ಕ.ವಿ.ಶಾ.ಸಂ-೧ SII XI I No. 210
೧೭.	ಹಾವಿನ ಹಾಳ ವೀರಾಪುರ(ಬ.ತಾ)	೧೦೪೯	-	-	ಹಾಲೋಜಗೆಮ	ಕ.ವಿ.ಶಾ.ಸಂ-೧ SII XI I p. 66
೧೮.	ನಂದಿ ಕಂಭ	೧೦೫೩ A.D.	-	-	ಕಲ್ಲುಕುಟಿಗ ಮಾಣಿಕ ಚಾರಿ ಸಿರಿಯ ಚಾವುಂಡೋರ್ಜಗೆ ದಾನ	ಕ.ವಿ.ಶಾ.ಸಂ-೧ SII XI I No. 483
೧೯.	ನಂದಿ ಬೇವೂರು	೧೦೫೪ A.D.	-	ವಾವಣಯ್ಯನ ಬರೆದ	ರಾಚೋಜನ ಸಿಪುಲಿಖಿತ	ಕ.ವಿ.ಶಾ.ಸಂ-೧ SII XI I p. 637
೨೦.	ಹಿರೆಮ್ಯಾಗೇರಿ	೧೦೬೧ A.D.	ಶ್ರೀಕವಿ ಮುಖ ದರ್ಪ್ಪಣಂಬರ್ಮ್ಮ ದೇವಂ ಬರೆದ ಪಂ	-	-	ಕ.ವಿ.ಶಾ.ಸಂ-೧ SII XI I No. 489
೨೧.	ಬಾಗುಳಿ	೧೦೬೮	ಕವಿರೇವಣಾರ್ಯ್ಯ ನೋಳೆದಂ	-	ನಾಕೋಜಂ ಶಿವಪಾದ ಶೇಖರಂ	ಕ.ವಿ.ಶಾ.ಸಂ-೧ SII XI I No. 597
೨೨.	ಸಂಡೂರು ಕುಮಾರಸ್ವಾಮಿ ಬೆಟ್ಟ	೧೦೭೪	-	-	ರೂವಾರಿಗಳಿಗೆ ದಾನ	ಕ.ವಿ.ಶಾ.ಸಂ-೧ SII XI I No. 194
೨೩.	ಅಂಬಳಿ	೧೦೮೩	-	-	ದಾಸೋಜಂ ಕಂಡರಿಸಿದ	ಕ.ವಿ.ಶಾ.ಸಂ-೧ SII XI I No. 259
೨೪.	ನೀಲಗುಂದ (ಸಿಪಿ)	೧೦೮೭	-	ಕಾಶ್ಮೀರ ಭಟ್ಟ ಮಲ್ಲಯ ಪಂಡಿತ ವಿಕ್ರಮಾದಿತ್ಯ ಪುನಃ ಬರೆದಂ	-	ಕ.ವಿ.ಶಾ.ಸಂ-೧ SII XI I No. 540
೨೫.	ಕುರುವತ್ತಿ	೧೦೯೯	ಶ್ರೀಕಂಠ ಸೂರಿ	-	ಕಾಳೋಜ	ಕ.ವಿ.ಶಾ.ಸಂ-೧ SII XI I p. 311 ಕನ್ನಡ ನಾಡಿನ ಶಾಸನ ಕವಿಗಳು ಧಾರವಾಡ ಪು. ೮೫, ಧಾರವಾಡ, ೧೯೬೩
೨೬.	ಉಚಂಗಿದುರ್ಗ	೧೧೦೦ A.D.	-	ಶಾಸನಮಾ ಬರೆದಂ ಸೇನಬೋವ	ಚಾಮರಾಜ ಕುಡುರಿಸಿದ ನಕ್ಕಸಲೆ ಮಾದಿಯೋಜ	ಕ.ವಿ.ಶಾ.ಸಂ-೧ SII XI I No. 466
೨೭.	ಉಚಂಗಿದುರ್ಗ	11th C. A.D.	-		ಕಾಳಿಸೋವಿದ್ಯರ ಮಾದೋಜ ಬೆಸಂಗೆಯ್ದುಂ	ಕ.ವಿ.ಶಾ.ಸಂ-೧ SII XI I No. 470


ಕ್ರ. ಸಂ.	ಶಾಸನಗಳು ಮತ್ತು ತಾಮ್ರಪಟಗಳು	ಕಾಲ	ಶಾಸನ ಕವಿ	ಬರಹಗಾರ	ರೂವಾರಿಗಳು ಶಾಸನ ಲಿಪಿಕಾರ - ಶಿಲ್ಪಿ	ಪ್ರಕಟಣೆ
೨೮.	ಕುರುವಳ್ಳಿ	11th C. A.D.	-	ಕ್ರಿಯಾಕಾರಕಮ ಬರೆ(ದೂಂ)	ಜೂಜೂವಿನ ಕೇಕರಣೆ ಕಾಳಿಮಯ್ಯ	ಕ.ವಿ.ಶಾ.ಸಂ-೧ SII XI I No. 98
೨೯.	ಭಲಕುಂದೆ(ಸಿರಗುಪ್ಪ)	11th C. A.D.	-	ಶ್ರೀಪುಟೇಯ ಮಯ್ಯನ ಮಗಂ ಚಟ್ಟಯ್ಯಬ್ಬರೆದ	-	ಕ.ವಿ.ಶಾ.ಸಂ-೧ SII XI p. 114
೩೦.	ಹೂಸಿ	೧೧೧೧ C. A.D.	-	ಈ ಶಾಸನಂ, ಸೇನಬೋವ ಸೋಮನಾಥಯ್ಯಂ	ಖಂಡರಿಸಿದಂ ಕಂಚಾಚಾಜಿ .. ಜನ ಮಗ ದಾಸೋಜ	ಕ.ವಿ.ಶಾ.ಸಂ-೧ SII XI I No. 248
೩೧.	ಕೊಟ್ಟೂರು	೧೧೧೨ A.D.	-	ಶ್ರೀ ಘಟ್ಟದೇವನ ಸ್ವವಿಗ್ರಹಿ ಮಲ್ಲಪರಾಜಂ ಬರೆದಂ	-	ಕ.ವಿ.ಶಾ.ಸಂ-೧ SII XI I No. 234
೩೨.	ಬಾಗುಳಿ	೧೧೧೫ A.D.	-	ಸರಸ್ವತಿಗ..ಸಿ ಕೊಳಕರಣೆ ಕಾಳಯ ಬರೆದ	ಬಣ್ಣರಿಸಿದ ಚೆಲು	ಕ.ವಿ.ಶಾ.ಸಂ-೧ SII XI I No. 566
೩೩.	ಕೊಟ್ಟೂರು	೧೧೨೧ A.D.	-	ಸಾಸನಯಯ್ಯಾವಳಯ ಸೇನಬೋವ ಸೋಮಯ್ಯ	ಕುಡಿರಿಸಿದಂ ಮಾದಿದೋಜಂ ಯಿ ಸಾಸನಮಂ ಖಂಡಳಿಸಿದಾತ ಕಲ್ಲು ಕುಟಿಗ ಅಣ್ಣೋಜ	ಕ.ವಿ.ಶಾ.ಸಂ-೧ SII XI I No. 235
೩೪.	ಯರಬಾಳ	೧೧೨೨	-	ತುಂಬಿಗೇರಿಯ ಊರೊಡೆಯ ಆಸ್ಕಂದೇವರು ಬರೆದ ಶಾಸನ	ಕೇತೋಜ ಹೊಯ್ದ	ಕ.ವಿ.ಶಾ.ಸಂ-೧ SII XI p. 515
೩೫.	ದುಗ್ಗವತಿ	೧೧೨೬ A.D.	-	ಶ್ರೀ ಸರಸ್ವತೀ ಗಣಭಾತ್ರ ಮಲ್ಲಿಯಣ್ಣನ ಬರೆಪಂ	ಖಂಡ್ಡರಿಸಿದನ್ನೋಜಂ	ಕ.ವಿ.ಶಾ.ಸಂ-೧ SII XI I No. 495
೩೬.	ಅಂಬಳಿ	೧೧೪೩ A.D.	-	-	ಹೆಚ್ಚುಂಕ ವಡ್ಡರಾವುಳ	ಕ.ವಿ.ಶಾ.ಸಂ-೧ SII XI p. 261
೩೭.	ಕೊಟ್ನಕಲ್ಲು	೧೧೪೮ A.D.	-	-	ಇಂದೋಜನ ಮಗ ಚಾವೋಜಂ ಶಾಸನನಮಂ ಕುಡರಿದಾತ	ಕ.ವಿ.ಶಾ.ಸಂ-೧ SII XI p. 409
೩೮.	ಬಾಗುಳಿ	೧೧೬೦ ಜಗದೇಕ ಮಲ್ಲ	-	ವಾಪ್ನೋತಿ ಪಾಲನಾದ ಚ್ಯುತಂ ಪದಂ (ಕವಿ)	-	ಕ.ವಿ.ಶಾ.ಸಂ-೧ SII XI I No.630
೩೯.	ಹೊಳಲು	೧೧೭೮ A.D. ನೊಳಂಬವಿಜಯ ಪಾಂಡು ದೇವ	-	ದೇವಣ್ಣನ ಬರಹ	ಗುಗಾಪುರದ ಮಾರಿಯೋಜನ ಲಿಖಿತ	ಕ.ವಿ.ಶಾ.ಸಂ-೧ SII XI I No.348
೪೦.	ಅಂಬಳಿ	12th C. A.D.	-	-	ಬಸವೋಜನ ಮಗ ಕೇತೋಜ ಮಕುದ ಮಕುಟದ ಕೇವಾರದ ಕೆಲಸದೊಳಕ್ಕಸಾರಿ ಬಸವೋಜಸುತಂ ಚತುರಕೇತೋಜಂ ಮತ್ತಿದೆಂದು ಕಂಡರಿಸಿ ಕಡದೀ ಶಾಸನಮಂ	ಕ.ವಿ.ಶಾ.ಸಂ-೧ SII XI I No.256
೪೧.	ಕೊಟ್ಟೂರು	೧೨೨೧ ಹೊಸಕೋಟೆ ವೀರನರಸಿಂಹ	-	ಶಾಸನಂ ಬರೆದಾತ ಸೇನಭೋವ ಸೊಮಯ್ಯ	ಯಿ ಶಾಸನು ಖಂಡಳಿಸಿ ದಾತ ಕಲ್ಲುಕುಟಿಗ ಅಣ್ಣೋಜ	ಕ.ವಿ.ಶಾ.ಸಂ-೧ SII XI p. 235
೪೨.	ಉತ್ತಂಗಿ	೧೨೨೬A.D. ಹೊಸೂರು ವೀರನರಸಿಂಹ - II	-	-	ಈ ಶಾಸನದ ಹೊಯ್ದಾತ ಹೆಗ್ಗಡೆ ದೇವಾಜ	ಕ.ವಿ.ಶಾ.ಸಂ-೧ SII XI p. 450
೪೩.	ಕೊಟ್ನಕಲ್ಲು	೧೨೬೨ ಯಾದ ಮಹಾದೇವರಾಯ ದೇವಗಿರಿ	-	-	ಸೂರಲ್ಲಿಯ ಇಂದೋಜನ ಮಗ ಚಾವೋಜಂ ಶಾಸನ ಕುಡರಿಸಿದಾತ	ಕ.ವಿ.ಶಾ.ಸಂ-೧ SII XI p. 409

ಕ್ರ. ಸಂ.	ಶಾಸನಗಳು ಮತ್ತು ತಾಮ್ರಪಟಗಳು	ಕಾಲ	ಶಾಸನ ಕವಿ	ಬರಹಗಾರ	ರೂವಾರಿಗಳು ಶಾಸನ ಲಿಪಿಕಾರ ಶಿಲ್ಪಿ	ಪ್ರಕಟಣೆ
೪೪.	ಕಡತಿ	೧೨೯೨-೯೩ ಯಾದವ ರಾಮಚಂದ್ರನ ಕಾಲ	-	-	ಶಿವಸೂತ್ರದಾರಿ ಸೊಸೆ ಗೋಜನ ಮಸಾಯೋರ ಶ್ರೀ ಶ್ರೀ	ಕ.ವಿ.ಶಾ.ಸಂ-೧ SII XI p. 513
೪೫.	ನಿಟ್ಟೂರು	13th C. A.D.	-	-	ಕಲ್ಲೋಜನು ಈ ವೀರಗಲ್ಲನ್ನು ಕೆತ್ತಿದ	ಕ.ವಿ.ಶಾ.ಸಂ-೧ SII XI I No. 518

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. *EI* Vol I. P. 2 ಮತ್ತು ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧ ಪು. ೩೭೫
೨. *SII* IX, No. 56, ಕ. ವಿ. ಶಾ. ಸಂಪುಟ ೧, ಪು. ೫೮೯
೩. *EI*, XXI, P. 260, ಕ. ವಿ. ಶಾ. ಸಂಪುಟ-೧, ಪು. ೭೧
೪. *SII* IX, No. 56, ಕ.ವಿ. ೫ ಸಂ. ಭಾಗ-೧, ಪು. ೨೬೭
೫. *SII* IX, No. 71, ಕ.ವಿ. ಶಾ. ಸಂ.ಭಾಗ-೧, ಪು. ೫೮೯
೬. *SII* XI, No. 75, ಕ.ವಿ.ಶಾ.ಸಂ. ಭಾಗ-೧, ಪು. ೫೯೪
೭. *SII* IX, No. 76, ಕ.ವಿ.ಶಾ.ಸಂ. ಭಾಗ-೧, ಪು. ೫೫೪
೮. *SII* IX, No. 145, ಕ.ವಿ.ಶಾ.ಸಂ. ಭಾಗ-೧ ಪು. ೬೦೮
೯. *SII* IX, No. 43, ಕ.ವಿ.ಶಾ.ಸಂ. ಭಾಗ-೧, ಪು. ೫೯
೧೦. *SII* IX, No. 43, ಕ.ವಿ.ಶಾ.ಸಂ. ಭಾಗ-೧, ಪು, ೩೩೧
೧೧. ಕ.ವಿ. ಶಾ. ಸಂ-೧, ಪು. ೪೮೩
೧೨. ಕ.ವಿ. ಶಾ. ಸಂ-೧, ಪು. ೧೯೪
೧೩. ಕ.ವಿ.ಶಾ. ಸಂ-೧, ಪು. ೨೫೯
೧೪. ಕ.ವಿ.ಶಾ. ಸಂ-೧, ಪು. ೩೧೧; ಕನ್ನಡ ಶಾಸನ ಕವಿಗಳು, ಧಾರವಾಡ ಪು. ೮೫
೧೫. ಕ.ವಿ.ಶಾ. ಸಂ-೧, ಪು. ೨೩೫
೧೬. ಕ.ವಿ.ಶಾ. ಸಂ-೧, ಪು. ೪೮೯
೧೭. ಕ.ವಿ.ಶಾ. ಸಂ-೧, ಪು. ೫೯೭

☆ ☆ ☆



ಶಿಲೆಯ ಮೇಲಿನ ಬಣ್ಣದ ಬರಹಕ್ಕೆ
ಕೆತ್ತಿ ರೂಪುಕೊಟ್ಟಾತ ರೂವಾರಿ
ಕಡೆವಲ್ಲಿ ಅಂದಚೆಂದದ ಗೆರೆಯಿಟ್ಟು
ಮನದೊಳಗೆ ಬೆಳೆದಂಥ ಭಾವ
ಒಂದು ಇತಿಹಾಸದ ಝುರಿ

ದುರುಗಪ್ಪ ಎಂ.ಕೆ.*

ದಶಮಾಪುರ ಗ್ರಾಮ ಸ್ಥಾಪನೆಗೆ ಸಂಬಂಧಿಸಿದ ಕಂಚಿನ ಪತ್ರಗಳು

ಒಂದು ರಾಜ್ಯಸ್ಥಾಪನೆಯ ಹಿಂದೆ ದಂತಕತೆ ಐತಿಹ್ಯ. ಜನಪದಕಥೆ, ಒಬ್ಬ ಗುರುವಿನ ಪ್ರವೇಶ ಮುಂತಾದುವುಗಳು ಇರುವುದನ್ನು ಕಾಣಬಹುದು. ಇವು ಆ ರಾಜಮನೆತನದ ಮೂಲವನ್ನು ತಿಳಿಯುವಲ್ಲಿ ಸಹಾಯಕವಾಗುತ್ತವೆ. ಚಾರಿತ್ರಿಕ ಆಧಾರಗಳಷ್ಟು ನಿಖರತೆಯನ್ನು ಇವು ನೀಡದೇ ಇದ್ದರೂ ಸ್ವಲ್ಪವಾದರೂ ಅವುಗಳಿಗೆ ಹತ್ತಿರವಿರುವುದು ಸ್ಪಷ್ಟವಾಗಿದೆ. ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ವಿಜಯನಗರ, ಮತ್ತು ಕೆಳದಿ ಇತ್ಯಾದಿ ಅರಸು ಮನೆತನಗಳ ಮೂಲದ ಬಗ್ಗೆ ತಿಳಿದುಕೊಳ್ಳುವಲ್ಲಿ ಇಂತಹವುಗಳು ಸಹಾಯಕವಾಗಿವೆ. ಕರ್ನಾಟಕದ ಅರಸು ಮನೆತನಗಳ ಮೂಲಕ ಹಿಂದೆ ರೂಪಗೊಂಡ ಹೇಳಿಕೆಗಳಲ್ಲಿ ಬೇಟೆನಾಯಿ ಮತ್ತು ಮೊಲಗಳಿಗೆ ಸಂಬಂಧಿಸಿದವೇ ಹೆಚ್ಚು. ವಿಜಯನಗರ, ಕೆಳದಿ, ಬೂದಿಹಾಳು ಪಾಳೆಯಪಟ್ಟುಗಳ ಸ್ಥಾಪನೆಗಳ ಹಿಂದೆ ಇಂಥ ವಿಚಾರಗಳಿವೆ. ಇಂತಹ ದೃಶ್ಯದ ಹುಟ್ಟು ಯಾವಾಗ ಎನ್ನುವುದು ಕಷ್ಟವಾದರೂ ವಿಜಯನಗರೋತ್ತರ ಕಾಲದಲ್ಲಿನ ಪಾಳೆಯಗಾರರು ಈ ಸನ್ನಿವೇಶವನ್ನು ಕೆಲವರು ಹೇಳಿಕೊಂಡಿದ್ದನ್ನು ಕಾಣಬಹುದು. ಹಿಂದುಳಿದ ಜಾತಿಗಳ ನಾಯಕರು ಹೆಚ್ಚಾಗಿ ಈ ತರಹದ ಸಂದರ್ಭವನ್ನು ಹೇಳಿಕೊಂಡಿರುವರು. ಬಲಿಷ್ಠ ಸಂಕೇತವಾದ ಬೇಟೆನಾಯಿ ವಿರುದ್ಧ ದುರ್ಬಲ ಸಂಕೇತವಾದ ಮೊಲವೊಂದು ಪ್ರಬಲವಾಗುವುದರ ಹಿಂದೆ ಇರುವ ಧೈರ್ಯ, ಸಾಹಸ, ಹೋರಾಟದ ಸಂಕೇತವಾಗಿಯೇ ಈ ತರಹದ ಕಥೆಗಳು ಹುಟ್ಟಿಕೊಂಡಿರಬಹುದೆಂದು ಅನಿಸುತ್ತದೆ.

ಕರ್ನಾಟಕದಲ್ಲಿ ಬಹುತೇಕ ಗ್ರಾಮಗಳ ಇತಿಹಾಸವನ್ನು ತಿಳಿಸುವಲ್ಲಿ ಶಿಲಾಶಾಸನಗಳು, ತಾಮ್ರಶಾಸನಗಳು, ಕೈಫಿಯತ್ತುಗಳು, ಕಡತಗಳು ಬಖೈರುಗಳು, ಸಾಹಿತ್ಯ ಕೃತಿಗಳು, ಸ್ಥಳದ ಪುರಾಣ, ಕಥೆ, ಐತಿಹ್ಯ ಮುಂತಾದುವುಗಳು ಸಹಾಯಕವಾಗಿವೆ ಎನ್ನಬಹುದು. ಆದರೂ ಚಾರಿತ್ರಿಕ ಮೂಲಾಧಾರಗಳನ್ನು ಸಂಗ್ರಹಿಸುವ ಕಾರ್ಯ ಪೂರ್ಣವಾಗಲಾರದು. ಇನ್ನೂ ಹೊಸ ಹೊಸ ಶಾಸನಗಳು, ಪಳೆಯುಳಿಕೆಗಳು, ಸ್ಮಾರಕಗಳು ಸಿಗುತ್ತಲಿವೆ. ಇದೊಂದು ನಿರಂತರ ಕಾರ್ಯವಾಗಿದೆ. ತಾಮ್ರಶಾಸನಗಳು, ಕಂಚಿನ ಪತ್ರಗಳು ಮತ್ತು ಕೆಲವು ಕೃತಿಗಳನ್ನು ಹೊಂದಿದವರು ತಮ್ಮ ಪಿತ್ರಾರ್ಜಿತ ಆಸ್ತಿಯಂತೆ ಅವುಗಳನ್ನು ಕಾಪಾಡಿಕೊಂಡು ಬಂದಿರುವುದರಿಂದ ಮತ್ತು ಅವುಗಳ ಬಗ್ಗೆ ಯಾರಿಗೂ ತಿಳಿಸದೇ ಇರುವುದರಿಂದ ಅವುಗಳಲ್ಲಿರುವ ಅಪೂರ್ವ ಮಾಹಿತಿಗಳು ಹಾಗೇ ಉಳಿದುಕೊಂಡು ಬಂದಿವೆ. ಇಂತಹದೇ ಸ್ಥಿತಿಯಲ್ಲಿದ್ದ ಎರಡು ಕಂಚಿನ ಪತ್ರಗಳನ್ನು ಓದುವ ಅವಕಾಶ ನನಗೆ ದೊರಕಿತು.


ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕು ದಶಮಾಪುರ ಗ್ರಾಮದ ಸ್ಥಾಪನೆಯ ಬಗ್ಗೆ ಎರಡು ಕಂಚಿನ ಪತ್ರಗಳು ಈ ಊರಿನ ಸ್ಥಾಪಕರ ವಂಶಜರ ಮನೆಯಲ್ಲಿ ಸುರಕ್ಷಿತವಾಗಿವೆ. ಈ ಕಂಚಿನ ಪತ್ರಗಳಲ್ಲಿ ಮೊದಲನೆಯದು ೨೪ಸೆಂ.ಮೀ. ಉದ್ದ, ೨೧ಸೆಂ.ಮೀ ಅಗಲ, ೧/೪ಸೆಂ.ಮೀ ದಪ್ಪವನ್ನು ಹೊಂದಿದೆ. ಇನ್ನೊಂದು ಶಾಸನವು ೨೦ಸೆಂ.ಮೀ. ಉದ್ದ, ೧೫ಸೆಂ.ಮೀ ಅಗಲ, ೧/೪ಸೆಂ.ಮೀ ದಪ್ಪವನ್ನು ಹೊಂದಿದೆ. ಮೊದಲಿನ ಶಾಸನದ ಮೇಲಿನ ಭಾಗದಲ್ಲಿ ಬಲಕ್ಕೆ ಸೂರ್ಯ, ಮಧ್ಯಭಾಗದಲ್ಲಿ ಶಿವಲಿಂಗ ಮತ್ತು ಎಡಭಾಗದಲ್ಲಿ ಚಂದ್ರನನ್ನು ಬರೆಯಲಾಗಿದೆ. ಶ್ರೀ ರಂಗನಾಥಾಯನಮಃ, ಜೈಹನುಮಾನ್ ಎಂಬ ದೇವರ ನಾಮಗಳೊಂದಿಗೆ ಆರಂಭವಾಗುವ ಈ ಶಾಸನವು ದಶಮಾಪುರ ಗ್ರಾಮದ ಸ್ಥಾಪನೆ, ಹಿನ್ನೆಲೆ ಹಾಗೂ ಇತರ ಮಾಹಿತಿಯನ್ನು ನೀಡುತ್ತದೆ. ಈ ಕಂಚಿನ ಪತ್ರಗಳನ್ನು ಸ್ವಸ್ತಿ ವಿಜಯಾಭ್ಯುದಯ ೧೩೭೧ ಅಂದರೆ ಕ್ರಿ.ಶ. ೧೪೪೯ ರಲ್ಲಿ ಬರೆಯಲಾಗಿದೆ. ಜರಿಮಲೆ ಪಾಳೆಯಗಾರರ ಲೂಟಿಗೆ ಅಂಜಿ ತುಂಗಭದ್ರ ದಕ್ಷಿಣ ಕರ್ನಾಟಕ ಮಧ್ಯದ ದಟ್ಟ ಅರಣ್ಯ ಪ್ರದೇಶದ ಪಾಲನಹಳ್ಳಿ ಎಂಬ ಮ್ಯಾಸರಹಟ್ಟಿಯಲ್ಲಿ ಪಾಲಯ್ಯ, ಬೋರಯ್ಯ ಮತ್ತು ದೊಡ್ಡಪಾಲಯ್ಯ ಎಂಬುವರು ಅಗ್ನಾತದಲ್ಲಿದ್ದರು. ಇವರು ತಮ್ಮ ನಿತ್ಯಕರ್ಮದಂತೆ ಬೇಟೆಯಲ್ಲಿ ತೊಡಗಿರುವಾಗ ಒಮ್ಮೆ ಉಗಾದಿ ಅಮಾವಾಸ್ಯೆ ಬೇಟೆಯಾಡಲು ಪಾಲನಹಳ್ಳಿ ಪಶ್ಚಿಮ ದಿಕ್ಕಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಬೇಟೆನಾಯಿಗಳನ್ನು ಮೊಲಗಳು ಹೆದರಿಸಿ ನಿಂತಿರುವ ದೃಶ್ಯವನ್ನು ಕಂಡು ಇವರು ಬೆರಗಾದರು. ಈ ವಿಷಯವನ್ನು ಪಕ್ಕದೂರಿನ ಶ್ರೀಗುರುಸಿದ್ದಸ್ವಾಮಿಗಳ ಸನ್ನಿಧಿಗೆ ಬಂದು ತಿಳಿಸಿದರು. ಆ ಸ್ವಾಮಿಗಳು ಮೊಲಗಳು ಬೇಟೆ ನಾಯಿಗಳನ್ನು ಹೆದರಿಸಿ ನಿಂತ ಆ ಸ್ಥಳ ಗಂಡುಮೆಟ್ಟಿನ ಭೂಮಿಯೆಂದು ಮತ್ತು ಅಲ್ಲಿ ನೆಲೆಸುವವರಿಗೆ ಸರಿಸಮನರಿಲ್ಲವೆಂದು ಹೇಳಿದರು. ಈ ಮುಖಂಡರು ಒಂದು ತಿಂಗಳೊಳಗೆ ಆ

* ಸರ್ಕಾರಿ ಪದವಿಪೂರ್ವ ಕಾಲೇಜು, ಕನಕಗಿರಿ, ಗಂಗಾವತಿ(ತಾ), ಕೊಪ್ಪಳ(ಜಿ) - ೫೮೪ ೧೧೯

ಪ್ರದೇಶವನ್ನು ಬಯಲು ಮಾಡಿಸಿ ಹದಿನೆಂಟು ಗುಡಿಸಲುಗಳನ್ನು ಹಾಕಿಸಿ ಶ್ರೀಗುರುಸಿದ್ಧಸ್ವಾಮಿಗಳ ಸಹೋದರರಾದ ಶ್ರೀಮಹಾಲಿಂಗ ಸ್ವಾಮಿಗಳ ಸಂಗಡ ಪುರಾಣದ ಕೊಟ್ರಪ್ಪ, ಬಸಲಿಂಗಪ್ಪ, ವೀರಪ್ಪ ಮುಂತಾದ ಭಕ್ತರು ಬಂದು ನೆಲೆಸುವಂತೆ ಮಾಡಿದರು. ಗುರುಗಳಿಗೆ ಒಂದು ಮಠವನ್ನು ಕಟ್ಟಿಸಿದರು. ಅಲ್ಲದೆ ಮಠಕ್ಕೆ ಬಾವಿಯೊಂದನ್ನು ನಿರ್ಮಿಸಿಕೊಟ್ಟರು. ಪರಾಭವ ಸಂವತ್ಸರ ವೈಶಾಖ ಶುದ್ಧ ೫ರಲ್ಲಿ ಗುರುವಾರ ಮಿಥುನ ಲಗ್ನದಲ್ಲಿ ಗುರುಗಳಿಂದ ಅಲ್ಲಿ ಧಾರ್ಮಿಕ ವಿಧಿವಿಧಾನಗಳ ಮೂಲಕ ಹೊಸ ಗ್ರಾಮವನ್ನು ಸ್ಥಾಪಿಸಿ "ದಶಮಾಪುರ" ಎಂದು ಕರೆದರು. ನಂತರ ಸ್ವಾಮಿಗಳು ಊರು ಚಿಕ್ಕದಾದರೂ ದೊಡ್ಡ ಹೆಸರನ್ನು ಪಡೆಯುತ್ತದೆ. ಎಂದು ಆಶೀರ್ವದಿಸಿದರು. ಅಲ್ಲಿ ನೆರೆದವರೆಲ್ಲರೂ ಸಂತೋಷಗೊಂಡು ಸ್ವಾಮಿಗಳಿಗೆ ಗುರುಕಾಣಿಕೆಯನ್ನು ನೀಡಿದರು ಎಂಬ ಇತ್ಯಾದಿ ವಿಷಯಗಳನ್ನು ಈ ಕಂಚಿನ ಪತ್ರ ತಿಳಿಸುತ್ತದೆ.

ಚಾರಿತ್ರಿಕವಾಗಿ ಈ ಕಂಚಿನ ಪತ್ರವು ಮಹತ್ವ ಪಡೆದಿದೆ. ಜರಿಮಲೆ ಪಾಳೆಯಗಾರರು ಲೂಟಿಗೆ ಹೆಸರಾಗಿದ್ದರು ಎಂದು ಗೊತ್ತಾಗುತ್ತದೆ. ಬೇಡ ಜನಾಂಗಕ್ಕೆ ಸೇರಿದ ಈ ಪಾಳೆಯಗಾರರು ತಮ್ಮ ಜನಾಂಗಕ್ಕೆ ಕಳಂಕಪ್ರಾಯರಾಗಿದ್ದರೆಂದು ತಿಳಿಯುತ್ತದೆ. ಏಕೆಂದರೆ ಅಜ್ಞಾತದಲ್ಲಿದ್ದ ಪಾಲಯ್ಯ ಮತ್ತಿತರ ಮುಖಂಡರು ಬೇಡರೇ ಆಗಿದ್ದರು. ಜರಿಮಲೆಯು ದಶಮಾಪುರದಿಂದ ಸು. ೩೫ಕೀ.ಮೀ ದೂರದಲ್ಲಿರಬಹುದು. ಪಾಲಯ್ಯ ಮತ್ತು ಸಂಗಡಿಗರು ಮ್ಯಾಸರಹಟ್ಟಿಯಲ್ಲಿ ನೆಲೆಸಿದ ಕುರುಹುಗಳು ಇನ್ನೂ ಉಳಿದುಕೊಂಡಿವೆ. ಆದರೆ ನಿಧಿಗಳ್ಳರಿಂದ ಇತ್ತೀಚೆಗೆ ಅಲ್ಲಿದ್ದ ಮನೆಗಳು, ದೇವಾಲಯ, ಬಾವಿ, ಕೋಟೆ ಮತ್ತು ವುಡೇವು ಹಾಳಾಗಿವೆ. ಈ ಪಾಲನಹಳ್ಳಿ ಮ್ಯಾಸರಹಟ್ಟಿಯನ್ನು ಈಗ ಜನರು ಚಲ್ಮನಹಳ್ಳಿ ಈಚಲು, ಚಲಪ್ಪನಹಳ್ಳ ಎಂದೆಲ್ಲಾ ಕರೆಯುವರು. ಈಗ ಈ ಪ್ರದೇಶದಲ್ಲಿ ಜನವಸತಿ ಇರುವುದಿಲ್ಲ. ಈ ಕಂಚಿನ ಪತ್ರದ ಕಾಲಮಾನ ಕ್ರಿ.ಶ. ೧೪೪೯, ಅಂದರೆ ವಿಜಯನಗರದ ಸಂಗಮ ವಂಶದ ಕಾಲದ್ದು. ಬಳ್ಳಾರಿ ಜಿಲ್ಲಾ ಗೆಜಟೀಯರ್ ಪ್ರಕಾರ ಅಚ್ಯುತರಾಯನು (೧೫೨೯-೪೨) ಜರಿಮಲೆಯ ಪೆನ್ನಪ್ಪನಾಯಕನ ಧೈರ್ಯ, ಸಾಹಸ, ಮೆಚ್ಚಿ ಈ ಪ್ರದೇಶವನ್ನು ಬಳುವಳಿಯಾಗಿ ನೀಡಿದನು ಎಂದು ತಿಳಿಸುತ್ತದೆ. ಕೈಫಿಯತ್ತುಗಳು, ಕೃಷ್ಣದೇವ ರಾಯನು ನಾಡದಳವಾರಿಕೆಯನ್ನು ವಂಶ ಪರಂಪರೆಯಾಗಿ ಮಾಡಿಕೊಂಡು ಬಂದ ಭೂಮರಾಜರು ಮಾಡಿಕೊಂಡ ಮನವಿ ಮೇರೆಗೆ ಈ ಪ್ರದೇಶವನ್ನು ನೀಡಿದನು ಎಂದುತಿಳಿಸುತ್ತವೆ. ಒಟ್ಟಾರೆ ಈ ಪ್ರದೇಶದಲ್ಲಿ ಅಚ್ಯುತರಾಯನ ಕಾಲಕ್ಕಿಂತ ಬಹು ಹಿಂದೆಯೇ ಈ ಪ್ರದೇಶದಲ್ಲಿ ಜರಿಮಲೆಯ ಪಾಳೆಯಗಾರರು ಪ್ರಸಿದ್ಧಿಯನ್ನು ಪಡೆದಿದ್ದರು ಎಂದು ಈ ಕಂಚಿನ ಪತ್ರದ ಸಹಾಯದಿಂದ ಹೇಳಬಹುದು. ವೈಷ್ಣವ ಧರ್ಮದವರಾಗಿದ್ದ ಈ ಊರಿನ ಸ್ಥಾಪಕರು ಆಗ ಶೈವಧರ್ಮದ ಪ್ರಭಾವಕ್ಕೆ ಒಳಗಾದುದನ್ನು ಅರಿಯಬಹುದಾಗಿದೆ. ಒಂದು ಗ್ರಾಮವನ್ನು ಸ್ಥಾಪಿಸುವಾಗ ಬೇಕಾಗುವ ಸಾಮಾನುಗಳ ವಿವರವನ್ನು ಈ ಕಂಚಿನ ಪತ್ರವು ತಿಳಿಸುತ್ತದೆ.

ಇನ್ನೊಂದು ಕಂಚಿನ ಪತ್ರವು ಚಿಕ್ಕದಾಗಿದೆ. ಈ ಪತ್ರದಲ್ಲಿ ಇಡೀ ಗ್ರಾಮದ ಸಕಲ ಕುಲದವರು ಒಪ್ಪಿ, ಮಹಾಲಿಂಗ ಸ್ವಾಮಿಗಳಿಗೆ ಮತ್ತು ಅವರ ವಂಶಸ್ಥರಿಗೆ ಹತ್ತುಹಳ್ಳಿಗಳ ಶವ್ಯಕವ್ಯ ಬಾಬುತ್ತುಗಳನ್ನೂ ಸ್ವೀಕರಿಸುವ ಅಧಿಕಾರವನ್ನು ನೀಡಿ ಬರೆಸಿದ ಬಿನ್ನಾವತ್ತಳೆಯಾಗಿದೆ. ಅವುಗಳ ಪಾಠ ಹೀಗಿದೆ:


ಸೂರ್ಯ ಚಿತ್ರ


ಶಿವಲಿಂಗ ಚಿತ್ರ


ಚಂದ್ರ ಚಿತ್ರ


ಶ್ರೀ ರಂಗನಾಥಯೇನ್ನಮಃ ಜೈ ಹನುಮಾನ್

ಶ್ರೀ ಮದ್ಯಕಲ ಸಂಪದಸಂತು ಸ್ವಸ್ತಿ ವಿಜಯಾಭ್ಯುದಯ ೧೩೭೧
ಶ್ರೀಮತ್ ಪರಾಭವ ನಾಮ ಸಂ।ರ॥ ವೈಶಾಕ ಶಾ॥ ೫ಲ್ಲು ಗುರುವಾರ ವುದಯ
೯ ಗಂಟೆ ಮಿಥುಲಗ್ನ ಪುಷ್ಕರಾಂಶ ಸುಭ ಮೂಹರ್ತದಲ್ಲಿ


ಗ್ರಾಮಸ್ಥಾಪನಾ

ಪಡವಿಯೂಳದಿಕ ವೆನರ್ವಡದ ಭರತ ಖಂಡದ ತೆಂಕು ದಿಶೆಯ ತುಂಗೆಯ
ದಕ್ಷಣ ಕರ್ನಾಟಕ ಮಧ್ಯದ ಕಟ್ಟರಣ್ಯಾದಿ ಪಾಲಿನಪಲ್ಲಿ ಅಥವಾ ಪಾಲನಳ್ಳಿ
ಯೆಂಬ ಪೆಶರ್ಪಡದ ಮ್ಯಾಸರಹಟ್ಟಿಯಲ್ಲಿ ಪಾಲಯ್ಯ ಬೊರಯ್ಯ ದುಡ್ಡ
ಪಾಲಯ್ಯ ಯೆಂಭ ಮುಖಂಡರು ಜರಿಮಲೆ ಪಾಳೆಗಾರ ದೊರಗಳ ಲೂಟಿ ಗಂಜಿ
ಅಗ್ನಾತದಲ್ಲಿದ್ದರು ಅವರ ನಿತ್ಯಕರ್ಮಗಳ ಪ್ರಕಾರ ಸುತ್ತಲಿನ ಕಾಡಿನಲ್ಲಿ ಬೇಟೆ ನಾಯಿಗಳುಡಗೂಡಿ
ಷಿಕಾರಿ ಆಡುತ್ತಿದ್ದರು ಯೆಂದಿನಂತೆ ವಿಶ್ವಾವೊಸು ಸಂ।ರ।
ಪಾಲ್ಗುಣ ಬ॥ ತಿಂಲ್ಲು ಶುಕ್ರವಾರ ವುಗಾದಿ ಅಮಾವಾಶ್ಯ ಬೇಟೆ ಆಡಲು ಪುಡ ವಣ ದಿಕ್ಕಿ
ಗೆ ಪ್ರಯಾಣಯಂ ಬೆಳಶಿ ಪಕ್ಕದ ಕಾಡಂ ವೊಕ್ಕರು ನಾಯ್ಗಿಗಳು ಆ ದಿನ ಹೆಚ್ಚಾದ ವುತ್ತು
ಕಡೆಯಿಂದ ಕಾಡು ಮ್ಯುಗಗಳ ಮೇಲೆ ಬಿದ್ದು ಕೆಲ ಮ್ಯುಗಗಳನ್ನು ಕೊಂದವು ಅನಿತರಲ್ಲ
ವಂದು ಮೊಲದ ಹಿಂದನಲಿ ವ್ಯಾಖದ ಕಂಡು ಶುನಕಗಳು ಹಿಂಡನ್ನು ಯೊಂಬಾಲಿಗೆ
ದೌಡಾಯಿಶಿದವು ಪ್ರಾಣ ಭಯದಿಂದ ಮೊಲಗಳು ನಾಗಲೋಕವ ನಾಲ್ಕಾರು ಹೆಜ್ಜೆ
ಹೋಗಿರಬಹುದು ಅಷ್ಟರಲ್ಲಿ ಹಿಂದರಿಗಿ ಶುನಕಗಳನ್ನು ಹೆದರಿಶಿ ನಿಂತವು ನಾಯಿಗಳ
ಆಟ ಸಾಗದಿರ ಕಂಡು ಬೇಟೆಗಾರರು ಪಕ್ಕದಮೂರಿನ ಶ್ರೀ ಗುರು ಸಿದ್ಧ ಸ್ವಾಮಿಗಳ

ಸನ್ನಿದಿಗೆ ತಂದು ನಡದ ಕೌತುಕವ ಬಿನ್ನವಿಶಿ ಹೇ ಗುರುದೇವಾಯಿದರ ಗುರ್ತೀವಿವ
ರಿನ ಬೆಕಂದು ಪಾದಕ್ಕೆರಗಲು ಸದ್ರಿ ಸ್ವಾಮಿಗಳು ಅದು ಗಂಡು ಮೆಟ್ಟನ ಜಾಗವೆಂತ
ಲೂ ಅಲ್ಲಿ ನೆಲೆಸುವವರಿಗೆ ಸರಿಯಾದವರಿಲ್ಲವೆಂತಲೂ ವಿವರಿಶಿದರೂ ಅದನ್ನೂ ಮುಖ್ಯ
ವಾಗಿಟ್ಟುಕೊಂಡು ಬಂದು ಆ ಜಾಗದಲ್ಲಿದ್ದ ಅಡವಿಯನ್ನು ವಂದು ತಿಂಗಳುಳಗಾಗಿ ಬೈಲು
ಮಾಡ್ಸಿ ಆದಿನೆಂಟು ಗುಡಿಸಲುಗಳಂ ಆಕ್ಸಿದಂದು ಶ್ರೀಸ್ವಾಮಿಗಳ ಸವೂದರ
ಶ್ರೀ ಮ
ಹಾಲಿಂಗ ಸ್ವಾಮಿಗಳಂರರು ಅವರ ಸಂಗಡ ಪುರಾಣದಪ್ಪ ಕುಟ್ರಪ್ಪ ಬಸಲಿಂಗಪ್ಪಾ
ವಿರಪ್ಪ ಮುಂತಾದ ಭಕ್ತವರಿಂದ ನೆಲಶಿದರು ಸ್ವಾಮಿಗಳಿಗೆ ತಮ್ಮ ಮನೆಗಳ
ಮೂಡ
ದಿಶೆಯಲ್ಲಿ ವಂದು ಮಟವ ಸ್ಥಾಪಿಸಿ ೧೦ ವ ಲಿಂಗ ಮುದ್ರೆ ಸ್ಥಾಪನೆಗದು ಮಟದ
ಟಂಕ
ಲಿಗೆ ೧೦ ಜಲ ಕೂಪವಂ ಮಟಾಧಿಕಾರಿಗಳಿಗೆ ಬಿಟ್ಟುಕುಟ್ಟು ಪರಾಭವ ಸಂ॥ ವೈಶಾಕ
ಶು॥೫ ಲ್ಲು ಗುರುವಾರ ಮಿಥನ ಲಗ್ನದಲ್ಲಿ ಗುರುಗಳಿಂದ ೧೦೧ ಕೆಂಡ ಪಾಲು
೧೧ ಕುಡ
(ಕಂಚಿನ ಪತ್ರದ ಹಿಂಬದಿ)
ತುಪ್ಪ ೧ ಕುಡ ಜೇನುತುಪ್ಪ ೨೧ ಕುಳಗ ಹುಗ್ಗಿಯಂತ ಯಾಳಿಕ್ರಮ ಪ್ರಕಾರ
ಪೂಜಾದಿಗಳಿಂ ಗುರುಹಿರಿಯಾ ಭಕ್ತರಿಂಪೂರ ಬಾಗಿಲಿಗೆ ಹುಗಿಲಾಯಿತು ದುರ್ದಸೆಯಲ್ಲಿ ದುವಳ್ಳ ದಸೆಯ ವುಂದಿಶಾ ದಶಿಮುಪೂ
ರಾ ಯೆಂದು ವುತ್ಸವದಿಂದ ನೆರೆದವರೆಲ್ಲಾ ಕುಣಿದಾಡುಲು ಸದ್ಗುರುಗಳು ದಶಮಾಪು
ರಾಯ
ಒಸನಾಮವ ಕರದು ನೆರೆದಿದ್ದವರೆಲ್ಲರಿಂ ದಕ್ಷಿಣ ಪಲತಾಂಬೂಲಗಳ ಶ್ವಕರಿಶಿ
ಪುರವು ಕಿರಿದಾದರು ಪೆಸರು ಪಿರಿದಕ್ಕೆಂ ಅರಿಗಳು ಸರಿದೂಡುವರ್ ಯೆಂದು
ಆಶಿರ್ವದಿಶಿ ೨೧ ವರಗಳ ಕಾಣಿಕೆಯ ಶ್ವಿಕರಿಶಿದರು
ಸನ್ನಂಗಳ ಮಹಾ ಶ್ರೀ ಶ್ರೀ ಶ್ರೀ
ಯಿತಿ ಸಾಮ್ಯ ಸಂ॥ರ॥ ಶ್ರಾವಣ ಶು॥ ೨ಲ್ಲು


ಸೂರ್ಯ ಚಿತ್ರ


ಶಿವಲಿಂಗ ಚಿತ್ರ


ಚಂದ್ರ ಚಿತ್ರ

ಶ್ರೀ ಗುರುವೇನ್ನಮಃ

ಆನಂದ ಸಂ॥ರ॥ ದಲ್ಲಿ ಶ್ರೀ ಮಹಲಿಂಗಸ್ವಾಮಿ
ಗಳಿಗೆ ದಸಮಪುರ ಸಕಲ ದೈವದವರು ಬರ
ಶಿದ ಬಿನ್ನವತ್ತಳಿ
ಯಿ ಗ್ರಾಮದ ಶವ್ಯಕವ್ಯಯೆತ್ತು ಹಳಿ
ಯಡಕಾಶು ಬಾಬು ಸಾಬುಗಳಿಗೆ ನೀವು ನಿಮ್ಮ
ಸಂತತಿಯವರು ಬಾಧ್ಯರೆಂದು ನಾವು ನಮಾ
ಖುದ್ದಿನಿಂದ ವಪ್ಪಿ ಬರ್ಶದ ಬಿನ್ನವತ್ತಳಿ
ಶ್ರಾವಣಾ ಶು॥೧೨.

(ಈ ಕಂಚಿನ ಪತ್ರಗಳ ಬಗ್ಗೆ ಪ್ರಬಂಧವನ್ನು ಶ್ರೀರಾಮಚಂದ್ರಾಪುರಮಠದಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡಮಿಯ ಸಮ್ಮೇಳನದಲ್ಲಿ ನಾನು ಮಂಡಿಸಿದಾಗ ಸಮ್ಮೇಳನದ ಮೊದಲ ಗೋಷ್ಠಿಯ ಅಧ್ಯಕ್ಷರಾಗಿದ್ದ ಶ್ರೀದೇವರ ಕೊಂಡಾರೆಡ್ಡಿ ಅವರು ಈ ಕಂಚಿನ ಪತ್ರಗಳ ಕಾಲದ ಬಗ್ಗೆ ಹಾಗೂ ಸತ್ಯತೆ ಕುರಿತಂತೆ ಹೆಚ್ಚಿನ ಅಧ್ಯಯನ ಅಗತ್ಯ ಹಾಗೂ ಬಳ್ಳಾರಿ-ಆಂಧ್ರ, ತುಮಕೂರು ಪ್ರದೇಶದಲ್ಲಿ ಅಧಿಕವಾಗಿ ದೊರಕುವ ಜಯರೇಖೆಗಳೇ ಈ ಪತ್ರಗಳು ಇರಬೇಕೆಂದು ಹೇಳಿರದು. ಈ ಬಗ್ಗೆ ಹೆಚ್ಚಿನ ಅಧ್ಯಯನ ಮಾಡುವವರಿಗೆ ಈ ಕಂಚಿನ ಪತ್ರಗಳು ದಶಮಾಪುರದಲ್ಲಿ ಸಿಗುತ್ತವೆ; ಬಳಸಿಕೊಳ್ಳಬಹುದು.

ಈ ಕಂಚಿನ ಪತ್ರಗಳನ್ನು ಒದಗಿಸಿದ ದಶಮಾಪುರ ಗ್ರಾಮದ ದಾಸರ ಓಬಣ್ಣ ಅವರಿಗೆ ಹಾಗೂ ಈ ಕಂಚಿನ ಪತ್ರಗಳ ಬಗ್ಗೆ ಪ್ರಬಂಧವನ್ನು ಇತಿಹಾಸ ಅಕಾದೆಮಿಯ ಸಮ್ಮೇಳನದಲ್ಲಿ ಮಂಡಿಸುವಂತೆ ಪ್ರೋತ್ಸಾಹಿಸಿ, ಮಾರ್ಗದರ್ಶನ ಮಾಡಿದ ಗುರುಗಳಾದ ಪ್ರೊ. ಲಕ್ಷ್ಮಣ್ ತೆಲಗಾವಿಯವರಿಗೆ ಈ ಮೂಲಕ ಧನ್ಯವಾದಗಳು.)

ಪ್ರೊ|| ಕ.ವೆಂ. ರಾಜಗೋಪಾಲ್*

ಬಾಗಳಿಯ ಪಂಚಾಂಗ

ಚಾಳುಕ್ಯ ವಂಶದ 'ಕತ್ಯೆರ'ನು ಕೋಗಳಿ - ೫೦೦ ಮತ್ತು ಮಾಸಿಯವಾಡಿ-೧೪೦ನ್ನು ರಾಷ್ಟ್ರಕೂಟ ಕೃಷ್ಣ iii-ನ ಸಾಮಂತನಾಗಿ ಕ್ರಿ.ಶ. ೯೪೪-೪೫ರಲ್ಲಿ ಆಳುತ್ತಿದ್ದಾಗ ಆಗ ಗೋತ್ರ ನಾರಾಯಣಂ, ಸ್ವಜನ ವತ್ಸಳಂ ಸ್ವಾಮಿನೀ ಭೃತ್ಯಂ ಶ್ರೀ ದೋವಯ್ಯಂ 'ಪೆರ್ಗ್ಗಡೆ ಗೆವಿ' - ಈತನು ಹಿರೆಹಡಗಲಿಯ ಒಂದು ಭಾಗ ಅಥವಾ ಕೇರಿಯಾಗಿದ್ದ ಒಡ್ಡ ವಡಜ್ಗಲದ ಪ್ರತ್ಯೇಕ ಊರಿಗೆ ಅವರ ಮುಂದಾಳಾಗಿದ್ದು ಅಮೃತ ಅಜವರ್ಮ ಮತ್ತು ಋೊಟ್ಟ ಭುವಣ ಅಜವರ್ಮ್ಮರು 'ಊರ್ಗ್ಗೆ ಪಡೆದೊರ್' - ಎಂದಿದೆ. ಈ ಊರನ್ನು ಅವರು ಬಾಱುಗೆ-ಎಂದು ಕರೆದಿರಬೇಕು - ಇದು ಹರಪನಹಳ್ಳಿಗೂ ಹಿರೆಹಡಗಲಿಗೂ ಮಧ್ಯೆ ಬರುತ್ತದೆ. ಆಗ ಹಿರೆಹಡಗಲಿಗೆ 'ಪಡುಗಲ್ಲು' ಎಂಬ ಕನ್ನಡ ಹೆಸರಿತ್ತಂತೆ.

ಹರಪನಹಳ್ಳಿ ೨೧೦ ಮತ್ತು ೨೧೧ ಈ ಎರಡು ಶಾಸನಗಳ ರೀತ್ಯಾ ಕ್ರಿ.ಶ. ೯೩೩ರ ನಿತ್ಯವರ್ಷ ದೇವನ-ಇಂದ್ರವಲ್ಲಭ- ಇವನ ಮಹಾಸಾಮನ್ತ ಬಿಜ್ಜ ನೆಂಬುವನು ಕೋಗಳಿ ೫೦೦ ಮತ್ತು ಮಾಸಿಯವಾಡಿಯನ್ನು ಆಳುತ್ತಿದ್ದನು. ಆಗ ಬನವಾಸಿಯ ಕದಂಬವಂಶದ ಮದುಕದೇವಯ್ಯನ ಮಗ ಮಾಳಯ್ಯನು ನೊಳಂಬ ಅಯ್ಯಪ ದೇವನಮಗ ಅಣ್ಣಿಗನು ಪಡುಗಲ್ಲನ್ನು ಮುತ್ತಿದಾಗ ಕಾದಿ ಸತ್ತಾಗ ವೀರಗಲ್ಲನ್ನಂ ಬಾಗಳಿಯಲ್ಲಿ ಸ್ಥಾಪಿಸಿದ್ದಾಗಿದೆ. ಇದೇ ಸ್ಥಳಕ್ಕೆ ಸೇರಿದ ಶಾಸನ ೨೧೧ರಲ್ಲಿ ಈ ಘಟನೆಗೆ ಸೇರಿದಂತೆ *ಅಯ್ಯಪದೇವನಮಗ ನಣ್ಣಿಗನ ಸ್ರಾವಣ ಸುದ್ದ ಭಾದ್ರಪದ ಮಾಸದ ಬಹುಳ... ಪುಣ್ಣಿಮೆಯು ಮಙ್ಗರವಾರದಂದು ಕಾಲಾಳ್ಗಾದುತ್ತಿರೆ ಸುಜ್ಗಲಂಬು ಪಾಱಿದೊಡೆ ಮಾಣೆನೆನ್ದು ಬರ್ಕ್ಕಂಬಿ...ಳಿಱ್ಱಿ ಬನ್ದು ಪೆರಿಯ ಕಾದಿ ಗೆಲ್ದು ಸುರಗಿಱೆದು ಸ್ವರ್ಗತ ನಾದೊ[ನ್]*...ಎಂದಿದೆ.

ಈ ಎರಡೂ ಶಾಸನಗಳೂ ಬಾಗಳಿಯಲ್ಲಿ ದೊರಕುವ ಹಳೆಯ ಶಾಸನಗಳಾಗಿವೆ - ಅಲ್ಲದೆ ಪಡುಗಲ್ಲಿನ ಸಂಬಂಧವನ್ನು ನೇರ ಹೇಳುತ್ತವೆ. ಆದರೆ ಬಾಗಳಿಯ ಅಂದಿನ ಹೆಸರು-ಕಂಡಿಲ್ಲ ಆದರೆ ಈ ಸ್ಥಳವು ಕ್ರಮೇಣ ಬಾಳ್ಗುಳಿ =ಬಾಱುಗೆ ಎಂದು 'ಅಯ್ಯದಿಂಬರ' ಒಂದು ಪ್ರಸಿದ್ಧ ಕೇಂದ್ರವಾಗಿರಬೇಕು. ಬಾಗಳಿಯ ೯೪ (ಊರಕೆರೆಯ ಕೆಳಗಿರುವ ಕಲ್ಲೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನ). ಕ್ರಿ.ಶ. ೯೫೬- ರಾಷ್ಟ್ರಕೂಟ ಅಕಾಳ ವರ್ಷ ಕನ್ನರದೇವನ ಆಳ್ವಿಕೆಯಲ್ಲಿ ಅವನ ಮಹಾಸಾಮನ್ತ ರೊಟ್ಟಯ್ಯನು ಕೋಗಳಿ ೫೦೦ ಮಾಸವಾಡಿ ೧೪೦ ಮತ್ತು ಕುಕನೂರು ೩೦ ಆಳುತ್ತಿದ್ದನು. ಕತ್ಯೆರನು ಚಾಳುಕ್ಯ ವಂಶೋದ್ಭವಂ ಆಗಿದ್ದಂತೆ ಚಾಳುಕ್ಯ ನಾರಾಯಣ ಎಂಬ ಬಿರುದುಳ್ಳ ಶ್ರೀಮತು ದೋರಪಯ್ಯನು ಮಹಾಸಾಮನ್ತನಾಗಿದ್ದು ಬಾಱುಗೆಗೆ ದಾನ ನೀಡಿರುತ್ತಾನೆ.

ಇದು ಅಕಾಳವರ್ಷನ ಕಾಲ. *ಸಕನೃಪ ಕಾಳಾತೀತ ಸಂವತ್ಸರ ಸತಂಗ ೮೭೮ನೆಯ ನಳಸಂವತ್ಸರ ಪ್ರವರ್ತಿಸೆಮುತ್ತ ರಾಯಣ ಸಂಕ್ರಾನ್ತಿಯೊಳ್ ಬಾಳ್ಗುಳಿಯೂರೊಡೆಯಂ ಪಶುಪತಿ ಭಟ್ಟಱ್ಗೆ ಬಾಬನ್ದಿಯ ಸಂಬನ್ದದ ರಾಜದ್ರವ್ಯಮಾದುದೆಲ್ಲಮಂ ಬಿಟ್ಟರ್ ಇಂತಪ್ಪದ ಅಯ್ವದಿಂಬರು ಕಾದು ಬಾಱ್ವರ್* - ಎಂದಿದೆ. ಹೀಗೆ ಬಾಳ್ಗುಳಿಯ ಸ್ಥಾಪನೆಯಲ್ಲಿ ಚಾಳುಕ್ಯ ವಂಶದವರ ಕೈವಾಡವು ಕಂಡು ಬರುತ್ತದೆ.

ಬಾಳ್ಗುಳಿಯ ಮಠಕ್ಕೆ 'ದಾನ ಮಾನ್ಯಂ ಕೊಟ್ಟ ಕೆಯ್' ವಿಚಾರವು ಕ್ರಿ.ಶ. ೯೭೨ರ ಹರಪನಹಳ್ಳಿ ೧೨೫ನೇ ಶಾಸನದಲ್ಲಿದ್ದು ರಾಷ್ಟ್ರಕೂಟ ಕೊಟ್ಟಿಗ ದೇವನ ಆಳ್ವಿಕೆಯೂ ಉಕ್ತವಿದೆ. ಈ ವೇಳೆಗೆ ಮಠದಲ್ಲಿ ತಪಸ್ವಿಗಳು ಇರುತ್ತಿದ್ದು ಮಹೇನ್ದ್ರದೇವ ಪಣ್ಡಿತರೆಂಬ ಕಾಳಾಮುಖರು ಪ್ರಭಾವ ಶಾಲಿಗಳಾಗಿದ್ದಂತೆ ತಿಳಿದುಬರುತ್ತದೆ. ಇವರು ಆಳ್ವಿಕೆಯ ಅಯ್ವದಿಂಬರಿಗಿಂತಲೂ ಪ್ರಧಾನರಾದಂತೆ ದಾನಗಳನ್ನು ಸ್ವೀಕರಿಸುವವರಾಗಿದ್ದರು. ಇಂತಹ ಸ್ಥಿತಿಗತಿಯಲ್ಲಿ ಬಾಳ್ಗುಳಿಯು ಪ್ರಸಿದ್ಧ ಅಗ್ರಹಾರವಾಗಿದ್ದಿರಬೇಕು.

ಈಗಲೂ ಬಾಳ್ಗುಳಿಯ ಕೆಱೆಯು ಇದ್ದಿರಲಾರದು. ಆದರೆ ಅದು ತುಂಗಭದ್ರೆಗೆ ಹರಿಯುತ್ತಿದ್ದ ಒಂದು ಜೀವಂತ ಝರಿಯ ಪಕ್ಕದಲ್ಲಿ ಸ್ಥಾಪಿತವಾಗಿದ್ದಿರಬೇಕೆಂಬುದನ್ನು ಸ್ಥಳ ಪರಿಶೀಲನೆಯಿಂದ ಗುರುತಿಸಬಹುದು.

ಈಗಲಾದರೂ ಬಾಳ್ಗುಳಿಯ ಮಠಕ್ಕೆ ತಪೋಧನಕ ಸತ್ರಕ್ಕಂ ಪನ್ನಿರ್ವರ್ನ್ನೂಳೆಯರ್ಗ್ಗಂ ಸೂಳೆವಾಳಂಗಂ ಏಂಚಿಗಂಗಂ ಪಱಿ ಕಾಱರ್ಗ್ಗಂ ಪಾತ್ರಕ್ಕಂ ತ್ರಿಕಾಲ ಭೋಗಂ ನಡೆವಂತಾಗಿ *"ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನ ಜಪಹೋ ಮಾನುಷ್ಠಾಣ ಪಾರಾಯಣರಪ್ಪ ಶ್ರೀಮತ್ಸೋಮ ಸಿಂಘ ಭಟಾರರ ಕಾಲಂಕಚ್ಚೆಳ ಧಾರಾಪೂರ್ವ್ವಕಂ ಸರ್ವ್ವನಮಶ್ಯ ಮಾನೆ ಕುಡೆ"*- ಎಂದು ಬಾಗಳಿ ಶಾಸನ ೯೭-ಕ್ರಿ.ಶ. ೧೦೧೮, ಒಕ್ಕಣೆಸುತ್ತದೆ. ಚಾಳುಕ್ಯ ಚಕ್ರವರ್ತಿಗಳು ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ಅಂತ್ಯವನ್ನು ಸಾರಿ ಕಲ್ಯಾಣ (?) ದಲ್ಲಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರೆಂಬುದನ್ನು ದಿ. ಡಾ|| ಬಾ. ಗೋಪಾಲರು ಗುರುತಿಸಿದ್ದಾರೆ. (The Chalukyas of kolyataka and the kalachuris - B.R. Gopal - Aug 1981) ಕ್ರಿ.ಶ. ೧೦೧೮ರ ಬಾಳ್ಗುಳಿ ಶಾಸನವು ಚಾಳುಕ್ಯ ಚಕ್ರೇಶ್ವರ ದತ್ತಿಯನ್ನು ಸಾರುತ್ತದೆ. ಸೋಮಸಿಂಘ ಭಟಾರರ ಕಾಲಂಕಚ್ಚಿಸಿ- "ಕಲಿದೇವ

* ಕೆಂಗೇರಿ ಉಪನಗರ, ಬೆಂಗಳೂರು

ಸ್ವಾಮಿಗೆ ಕಂಪಿಲೆಯೊಳು ತನ್ನಾಳ್ದನಿತ್ತ ದತ್ತಿಯುಮನಿತಂ ಪಲವಜೆಯ ಪಡೆದು ಮತ್ತ ಶಿಳಾ ಸಾಸನದೊಳು ವಿಶೇಷದಿಂ ಬರೆಯಿಸಿದಂ॥" ಎಂದಿದೆ.

ಹರಪನಹಳ್ಳಿ ೧೦೦, ಕ್ರಿ.ಶ. ೧೦೭೯ರ ಶಾಸನವು ತ್ರಿಭುವನಮಲ್ಲ ದೇವರು ಬಾಳ್ಗುಳಿಗೆ ತಮ್ಮ 'ಶ್ರೀ ಹರಿಶ್ಚಂದ್ರ ದತ್ತಿ'ಯನ್ನು ನೀಡಿದರೆಂಬುದನ್ನು ಸಮರ್ಥಿಸುತ್ತದೆ. 'ಬಾಳ್ಗುಳಿ ಯೂರೊಡೆಯ ಪ್ರಮುಖ ಶೇಷ ಮಹಾಜನಂಗಳಯ್ವದಿಂಬರ ಸನ್ನಿಧಾನ ದೊಳ್... ಶಿವಶಕ್ತಿ ಪಂಡಿತರ ಕಾಲಂಕರ್ಚಿ - ಬಾಚಲ ದೇವಿಯರು ಭೂಮಿಯನ್ನು ದಾನ ಮಾಡುತ್ತಾಳೆ.

ಬಾಳ್ಗುಳಿಯು ಒಂದು ಕಾಳಾಮುಖ ಕೇಂದ್ರವೆಂಬುದನ್ನು ಖಚಿತವಾಗಿ ಮೇಲಿನ ಅಧಾರಗಳಿಂದ ನಿರ್ಧರಿಸಬಹುದಾಗಿದೆ. ಈ ಕಾಳಾಮುಖಪಂಡಿತರು ಜಪತಪ ಸಮಾಧಿ ಷಡಂಗೊ ಹಾರಾದಿ ಸಂಪನ್ನರ್ ಸಕಲ ಶಾಸ್ತ್ರ ಪಾರಾವಾರ ಪಾರಗತ ಸರಸ್ವತೀ ಕರ್ಣಾವತಂಸರು (ಅದೇ ಶಾಸನ ಹರಪನಹಳ್ಳಿ ೧೦೦) ಆದುದರಿಂದ 'ಷಡಂಗ'ಗಳಲ್ಲಿ ಪ್ರಧಾನವಾದ 'ಜ್ಯೋತಿಷ್ಯ' ಪಂಡಿತರಾಗಿದ್ದು ಚಕ್ರವರ್ತಿ ಮೊದಲಾಗಿ ಸಕಲರಿಗೂ ಮಾರ್ಗದರ್ಶಕರಿದ್ದಿರಬೇಕೆಂದರೆ ತಪ್ಪಾಗಲಾರದು - ಅಂದರೆ ಈ ಹಿನ್ನೆಲೆಯಿಂದ ಬಾಳ್ಗುಳಿಯ ಪಂಚಾಂಗವು ಚಾಲನೆಯಲ್ಲಿದ್ದಿರ ಬೇಕಾಗುತ್ತದೆ.

ಬಾಳ್ಗುಳಿಯ 'ಅಯ್ಯದಿಂಬರ್' ಸಂಬಂಧದಲ್ಲಿ ಹರಪನಹಳ್ಳಿ ಶಾಸನ ೧೨೬-ರಾಷ್ಟ್ರಕೂಟದೊರೆ ಇನ್ದ್ರವಲ್ಲಭನ ಕಾಲದಲ್ಲಿ (ರಟ್ಟಕನ್ದರ್ಪ್ಪ ಎಂಬ ಬಿರುದು ಈತನಿಗಿದೆ) ಇವನ ಸಾಮಂತ ನಿಗೂ 'ಜುಿೊಟ್ಟ'ಎಂಬ ಬಿರುದು. ಅದೇ ಕೋಗಟಿ ನಾಡು ಅಯ್ನೂಱು ಮಾಸಿಯವಾಡಿ ನೂಱು ನಾಲ್ವತ್ತುಮನಾಳೆ ಬಾಳುಗುಳಿಯ (ಆಗ ಬಾಳ್ಗುಟಿ ಹಾಗೂ ಬಾಳ್ಗುಳಿ, ಎಂದು ಕರೆಯುತ್ತಿದಿರಬೇಕು) ಮಹಾಜನ ಅಯ್ವದಿಂಬರುಂ ಸಲಿಸುವೋ ಬೃಹಸ್ಪತಿ ಕುಮ್ಬದೊಳಿರೆ, (ಇದು ಕ್ರಿ.ಶ. ೯೭೨ರಲ್ಲಿರಬಹುದು) ಪಡೆದೊಂ ಬಾದಮ್ಮಂ- ಈ ದಾನವನ್ನು ಗುರುತಿಸಲು ಅಥವಾ ಅರ್ಥೈಸಲು ಶ್ರೀಧರಾಚಾರ್ಯರ 'ಜಾತಕತಿಲಕಂ' ಬೇಕಾಗುತ್ತದೆ. ಇದರಂತೆ ಚಕ್ರವರ್ತಿಯ ಸಂಬಂಧದಲ್ಲಿ ಪಂಚಮಹಾ ಪಾತಕಂಗಳ ನಿವಾರಣೆಗಾಗಿ ಮಾಡಿದ ದಾನವಾಗಿರಬೇಕಷ್ಟೆ. ಇದನ್ನು ಸ್ವೀಕರಿಸುವವರಿಗೆ ಆತ್ಮಶುದ್ಧಿಯ ಧೈರ್ಯವಿರಬೇಕು (ಮುಮ್ಮಡಿ ಕೃಷ್ಣರಾಜಒಡೆಯರು ತಮ್ಮ ರಾಜ್ಯವನ್ನು ಕಳೆದುಕೊಂಡ ಸಂದರ್ಭದಲ್ಲಿ ಇಂಥ ದಾನಮಾಡಿದರೆಂದು ರುದ್ರಗಣಂಗಳು -ರುದ್ರಪಟ್ಟಣ ಹಳೆ ಮೈಸೂರು-ಇದನ್ನು ಸ್ವೀಕರಿಸಿ ಕೃಷ್ಣರಾಜ ಕಟ್ಟೇಪುರದ ರುದ್ರಗಣಂಗಳ ಕಟ್ಟೆಯನ್ನು ಕಟ್ಟಿಸಿರುತ್ತಾರೆ). ಇಲ್ಲಿ-ಬಾದಮ್ಮಂ ಬೂದುಗೂಳ್-ಬೂದುಗುಂಬಳ ಮತ್ತು ತುಲಾಭಾರದ ಚಿನ್ನವಿರಬೇಕು ಅದನ್ನು ಸ್ವೀಕರಿಸಿ ಅದನ್ನು ಬಾಳ್ಗುಳಿಯ ಕೆಱು'ಯನ್ನು ನಿರ್ಮಿಸಲು ಕೊಡುತ್ತಾನೆ.

ಆದರೂ ರಾಷ್ಟ್ರಕೂಟ ದೊರೆ ಇನ್ದ್ರವಲ್ಲಭನನ್ನು ಚಾಳುಕ್ಯ ತೈಲಪIIIನು ಮುಗಿಸಿ ಚಕ್ರವರ್ತಿಯಾಗಿರುವ ಸಾಧ್ಯತೆಯಿದೆ. ಇಂಥ ಪಂಚಾಂಗವನ್ನು ಚಾಳುಕ್ಯ ವಂಶದವರಾಗಿ ನಂಬಿರಬೇಕೆಂಬುದಕ್ಕೆ ಚಕ್ರವರ್ತಿದತ್ತಿಯನ್ನು ನೀಡಿದ ಆಹವಮಲ್ಲದೇವರನ್ನು ಗುರುತಿಸ ಬಹುದಾಗಿದೆ. ಬಾಳ್ಗುಳಿಯ ಪಂಚಾಂಗಕ್ಕೆ ಅಂದಿನ ರಾಜಮುದ್ರೆ ಬಿದ್ದಿರ ಬೇಕೆಂಬುದನ್ನು ಆಗಿನ ದಾನಗಳು ಗುರುತುಮಾಡುತ್ತವೆ.

ಆಹವಮಲ್ಲದೇವನ ಆಳ್ವಿಕೆಯಲ್ಲಿ ಕಿಸುಕಾಡು ೭೦ ಮತ್ತು ಕೋಗಟಿ ೫೦೦ ಭಾಗವನ್ನು ಆಳುತ್ತಿದ್ದ ಮಹಾ ಸಾಮಂತ ಆಯ್ತವರ್ಮನ ಕಾಲದಲ್ಲಿ ಬಾಳ್ಗುಳಿಯಲ್ಲಿ (ಶಾಸನ ೧೩೦-ಕಲ್ಲೇಶ್ವರ ದೇವಾಲಯದ ಉತ್ತರಕ್ಕೆ ನಿಲ್ಲಿಸಿರುವ ಶಾಸನ) ಬಾಳ್ಗುಳಿಯ ಯ್ವದಿಂಬರು ದುಗ್ಗಿಮಯ್ಯನ ಪ್ರತಿಷ್ಠೆಯ ಆದಿತ್ಯ ದೇವರ್ಗೆ ಪೊನ್ನ ಆದಿತ್ಯ ದೇವರ್ಗ್ಗೆ ಇಕ್ಕುವ- ವೈಶಾಖ ಸುದ್ಧ ತದಿಗೆ ಆದಿತ್ಯವಾರ ದಂದು ಕೊಟ್ಟ ಶಾಸನ.

ಹೀಗೆ ಬಾಳ್ಗುಳಿಯ ಅಯ್ವದಿಂಬರಿಗೆ ಆದಿತ್ಯ ದೇವರ ಗುಡಿಯು ಅವಶ್ಯವಾದುದನ್ನು ಗಮನಿಸಬಹುದು. ಅಲ್ಲದೇ ಬಾಳ್ಗುಳಿಯ ಮೊಟ್ಟಮೊದಲ ದೇಗುಲವಾಗಿರುವುದನ್ನೂ ಮರೆಯುವಂತಿಲ್ಲ. ಈ ದೇಗುಲದಿಂದ ಸೂರ್ಯನ ಚಲನವನ್ನು ಪ್ರತ್ಯಕ್ಷವೆನ್ನುವಂತೆ ಗಮನಿಸುವ ಪದ್ಧತಿ ಮತ್ತು ಆ ಮೂಲಕ ಕಾಲದ ಗಣನೆಯನ್ನು ವಿಶಿಷ್ಟ ರೀತಿಯಲ್ಲಿ ಗುರುತಿಸುವ ರೀತಿ ಯಾಗುತ್ತದೆಯಷ್ಟೆ. ಇಂಥ ರೀತಿಯನ್ನು ಶೃಂಗೇರಿಯ ವಿದ್ಯಾಶಂಕರ ದೇಗುಲದ ಲಕ್ಷಣಗಳಿಂದ ಊಹಿಸಬಹುದಾಗಿದೆ.

ಇಲ್ಲಿಂದಲೇ ಪಂಚಾಂಗದ ಸಂಬಂಧದಲ್ಲಿ ಅಂದಿನ ಜನಜೀವನದಲ್ಲಿ ಚಕ್ರವರ್ತಿ ಮೊದಲಾಗಿ ದಾನಗಳಲ್ಲಿ - ಸಂಕ್ರಾನ್ತಿ, ಗ್ರಹಣಗಳು, ಇತ್ಯಾದಿ ಕಾಲಮಾನದ ಗಣನೆಯು ಕೆಲವು ವಿಶೇಷ ಪಾರಿಭಾಷಿಕಗಳನ್ನು ಒಳಗೊಳ್ಳುತ್ತದೆ. 'ಪಂಚಾಂಗ'ವು ಮೊಟ್ಟ ಮೊದಲ ಬಾರಿಗೆ ಶಾಸನದಲ್ಲಿ. ಅಂಬಳಿ ೫ (ಕ್ರಿ.ಶ.) ೧೦೮೩ - ಕಲ್ಯಾಣ ಚಕ್ರವರ್ತಿ ತ್ರಿಭುವನಮಲ್ಲದೇವನ ಕಾಲದಲ್ಲಿ ಅಂಬಳಿಯ ಕಲಿದೇವರ ದೇವಾಲಯವನ್ನು ನಿರ್ಮಿಸಿದ ಸಂದರ್ಭದಲ್ಲಿ ಶಿವರಾಜನೆಂಬುವನ ದಾನ ಶಾಸನ:

ಪಲವುಂ ವಿಚಿತ್ರಾವಳಿ ಪಂಚಾಂಗ ತ್ರಿಭೂಮಿ ಕೈಳಾಶ ದಿನೆಸೆಗುಂ
ಸಲೆ ತಾಂ ತ್ರಿಭುವನತಿಳಕಂ ಕಲಿದೇವಸ್ವಾಮಿ ನೆಲೆಸಿದುದ್ಭವನಂ॥

ಬಾಳ್ಗುಳಿಯ ಸಂದರ್ಭದಲ್ಲಿ ಕಲಿದೇವರು ಮೂಲಸ್ಥಾನ ದೇವರಾಗಿ ಚಾಳುಕ್ಯ ಚಕ್ರವರ್ತಿಗಳ ಕಾಲದ ಮಹತ್ವಪೂರ್ಣ ದೈವವಾಗಿ ಹಲವಾರು ಕಲಿದೇವರ ದೇಗುಲಗಳು ರಚನೆಯಾಗಿವೆ. ತ್ರಿಭುವನಮಲ್ಲದೇವನ ಆಸಕ್ತಿಯು ಈ ದೇವರ ಬಗ್ಗೆ ವಿಶೇಷವಾಗಿದ್ದಂತೆಯೂ ಕಂಡುಬರುತ್ತದೆ. ಆದುದರಿಂದ ಕಲಿದೇವರು ಈ ಕಾಲದಲ್ಲಿ ಶ್ರೀ ಸ್ವಯಂಬು ಕಲಿದೇವ ಸ್ವಾಮಿದೇವ ಎಂದಾಗುವುದನ್ನು ಶಾಸನದಲ್ಲಿ ಗುರುತಿಸಬಹುದು. ಪಂಚಾಂಗಕ್ಕಾಗಿ ಸೂರ್ಯನ ದೇಗುಲವು ಅವಶ್ಯವಾಗಿರುವಲ್ಲಿ ಕಲ್ಯಾಣ ಚಾಲುಕ್ಯರಿಗೆ ಕಲಿದೇವರು ಅತ್ಯವಶ್ಯ ದೈವವಾದಂತೆ ಇರುವುದರಿಂದ ಈ ದೇವರೆಂದರೆ ಯಾರು, ಸ್ವರೂಪವೇನು? ಎಂಬ ಪ್ರಶ್ನೆಗಳು

ಏಳುತ್ತವೆ. ಬಾಳ್ಗುಳಿಯ ಹುಟ್ಟಿನಲ್ಲಿ ಚಾಳುಕ್ಯವಂಶದವರಾದ ಕತ್ಯೆರ ಮೊದಲಾಗಿ ಚಾಳುಕ್ಯ ನಾರಾಯಣಂ-ಎಂಬ ಬಿರುದಿನ ದೋರವಯ್ಯನನ್ನೂ ನೆನೆಯಬೇಕಾಗುತ್ತದೆ. ಇದರಿಂದ ಬಾಳ್ಗುಳಿಯ ಕಲಿದೇವರು ಆರಾಧ್ಯ ದೈವವಾಗಿದ್ದಿತಷ್ಟೆ. ಇದರ ರಕ್ಷಕರಾಗಿ 'ಅಯ್ವದಿಂಬರು' ಮಠದ ಅಗ್ರಹಾರದ ರಕ್ಷಕರಾಗಿದ್ದವರು, ಇದೇ ಸಂಪ್ರದಾಯವನ್ನು ತೈಲಪ ಮೊದಲಾಗಿ, ಮುಂದಿನ ಚಾಳುಕ್ಯ ಚಕ್ರವರ್ತಿಗಳು ನೀಡಿದ ದಾನಗಳಿಂದ ಸಮರ್ಥಿಸಬಹುದು-

೧) ಚಾಳುಕ್ಯ ನಾರಾಯಣಂ ಎಂಬ ಬಿರುದುಗಳಲ್ಲದೆ ದೋರಮಯ್ಯನಿಗೆ ಇನ್ನೂ ಕೆಲವು ಬಿರುದುಗಳಿವೆ. ಅದರಲ್ಲಿ ಶೌಚಾಂಜನೇಯ ಎಂಬುದು ಒಂದು. ಇದನ್ನು ಮುಂದಿನ ಕಳ್ಯಾಣದ ಚಕ್ರವರ್ತಿಗಳ ಬಿರುದುಗಳಲ್ಲಿಯೂ ಸೇರಿರುವುದನ್ನು ಗುರುತಿಸ ಬಹುದು. ೨) ಕಲಿದೇವರು ಚಾಳುಕ್ಯರ ಕುಲದೈವವಾಗಿದ್ದ ಕಾರಣ ದಾನಗಳು ಸಮರ್ಥಿಸುತ್ತವೆಯಷ್ಟೆ. ಶ್ರೀ ಚಕ್ರವರ್ತಿ ದತ್ತಿಯಲ್ಲದೆ ಶ್ರೀಹರಿಶ್ಚಂದ್ರದತ್ತಿ ಮತ್ತು -ಮಹದೇವದತ್ತಿ ಇತ್ಯಾದಿ. ಆದುದರಿಂದ ಕಲಿದೇವರ ಗುರುತಾಗಿ ಚಾಳುಕ್ಯರು - ಚಕ್ರವರ್ತಿಗಳಾಗಿ ಆಳಿದವರು ತೈಲಪII ನಿಂದ ಮೊದಲಾಗಿ 'ಮಲ್ಲ' ಎಂಬುದನ್ನು ಸೇರಿಸಿಕೊಳ್ಳುವ ಪದ್ಧತಿಯು ಕಂಡುಬರುತ್ತದೆ. ಅವರಿಗೆ ವಿಕ್ರಮಾದಿತ್ಯ-ಸೋಮೇಶ್ವರ ಮತ್ತು ತೈಲಪ ಎಂಬುದಕ್ಕೆ ಒಂದನೇ, ಎರಡನೇ, ಮೂರನೇ, ನಾಲ್ಕನೇ, ಎಂಬ ಅಂಕಿಗಳು ಸೇರುವಂತೆ ಆಗಿರದೆ ಚಕ್ರವರ್ತಿ ಪದವಿಯಲ್ಲಿ 'ದೇವ' ಎಂಬುದು ಸೇರುವಂತೆಯೇ 'ಮಲ್ಲ' ಎಂಬುದು ಸೇರುತ್ತಿದೆ.

ಇದರ ಸೂಚನೆಯಿಂದ ಚಾಳುಕ್ಯರಾಗಿ 'ಮಲ್ಲ'ರಿ ಬೇಕಾಗುತ್ತದೆ ಮತ್ತು ಇವರ ಕುಲ ದೈವವು 'ಆಂಜನೇಯ'ನೆಂದರೆ ತಪ್ಪಾಗಲಾರದು. ಆದುದರಿಂದ ಆಹವಮಲ್ಲದೇವ, ತ್ರೈಲೋಕ್ಯ ಮಲ್ಲದೇವ, ಭುವನೇಕಮಲ್ಲದೇವ, ತ್ರಿಭುವನಮಲ್ಲದೇವ, ಜಗದೇಕಮಲ್ಲ ದೇವ, ಭೂಲೋಕಮಲ್ಲದೇವ; ಹೀಗೆ ಧಾರ್ಮಿಕ ಗುರುತುಗಳುಳ್ಳ ಚಾಳುಕ್ಯರಿಗೆ ಕಲಿದೇವರು ಆಕಾರ-ಸ್ವರೂಪವೆಂದರೆ ಆರಾಧ್ಯ ದೈವವಾಗಿರಬೇಕಾಗುತ್ತದೆ.

ಇದನ್ನು ಸಮರ್ಥಿಸುವಲ್ಲಿ ಮತ್ತೊಂದು ಅಂಶವು ಗಮನಕ್ಕೆ ಬರುತ್ತದೆ. ಅದು ಗಾಣಗಳ ದಾನವು ಬಾಳ್ಗುಳಿಯ ಸಂದರ್ಭದಲ್ಲಿ ಅತ್ಯಲ್ಪವೆನ್ನುವಂತೆ ಸೇರುತ್ತವೆ. ಆಂಜನೇಯನಿಗೆ ಮಾತ್ರ ಎಣ್ಣೆ ಮಜ್ಜನ ಎಂಬ ಸೇವೆಯು ಮುಖ್ಯವಾಗಿರುವುದನ್ನು ಇಂದಿಗೂ ದೇಗುಲಗಳಲ್ಲಿ ಗುರುತಿಸಬಹುದು. ಬಾಳ್ಗುಳಿಯ ಸಂದರ್ಭದಲ್ಲಿ ಮಾತ್ರ ಕುಲದೇವರಿಗೆ ಅಂಗ ಭೋಗವಲ್ಲದೆ ರಂಗಭೋಗವೂ ಸಲ್ಲುತ್ತಿದ್ದಂತೆ ಗುರುತಿಸಲು ಶಾಸನದ ಅರ್ಥವಿದೆಯಷ್ಟೆ. ವಾಸ್ತವವಾಗಿ ಸೂರ್ಯನ ಸಂದರ್ಭದಲ್ಲಿ ಮಾತ್ರ ರಂಗಭೋಗವು ಮುಖ್ಯವಾಗಿದ್ದಿರ ಬೇಕೆಂಬುದನ್ನು, ಸೂರ್ಯದೇಗುಲಗಳಲ್ಲಿ ಕಾಣುತ್ತೇವೆ. ಕಲಿದೇವರು ಮತ್ತು ಸೂರ್ಯ - ಎರಡೂ ದೇವರುಗಳು ಮುಖ್ಯವಾಗಿದ್ದ ಕಾರಣ ಬಾಳ್ಗುಳಿಯಲ್ಲಿ ಮಾತ್ರ ದಾನಗಳು (ಬಾಚಲ ದೇವಿಯ ಇಂಥ ದಾನವೊಂದಿದೆ) ಅಂಗಭೋಗ ಮತ್ತು ರಂಗಭೋಗಗಳು ಒಂದೇ ದೇಗುಲರ ಸಂದರ್ಭದಲ್ಲಿ ಕಂಡು ಬರುತ್ತದೆ-

ಬಾಳ್ಗುಳಿಯ ಸಂದರ್ಭದಲ್ಲಿ ಸೂರ್ಯದೇವರ ಅವಶ್ಯಕತೆಯನ್ನು ಮೊದಲೇ ಪ್ರಸ್ತಾಪಿಸಲಾಗಿದೆ. ಹಾಗೆಯೇ ಪಂಚಾಂಗದ ಬಳಕೆಯ ವಿಷಯವನ್ನು ದಾನಗಳಲ್ಲಿ ಒಕ್ಕಣೆಯಾಗಿ ಗುರುತಿಸಬೇಕಾಗುತ್ತದೆ.

೧. ದಾನಗಳ ನಿರ್ಧಾರಕ್ಕೆ ಪಂಚಾಂಗವು ಒಂದು ಸಾಧನ. ೨. ಪುಣ್ಯತಿಥಿಗಳಿಗೆ ಪಂಚಾಂಗವೇ ಆಧಾರ, ೩. ಜನ್ಮ ಜಾತಕಗಳಿಗೆ ಪಂಚಾಂಗವಿಲ್ಲದೆ ಸಾಧ್ಯವಿಲ್ಲ. ೪. ಗ್ರಹಣಗಳ ಲೆಕ್ಕಾಚಾರವಿಲ್ಲದ ಕಾಲದ ಅಳತೆಯ ಪ್ರಾರಂಭವಾಗಿರಲಾರದು - ಮತ್ತೊಂದು ಆಧಾರವಾಗಿ ಸೂರ್ಯನ ಚಲನದ ಆಧಾರದಿಂದ ಪ್ರತಿ-ದಿನ-ಮಾಸ-ಸಂವತ್ಸರ ಮತ್ತು ಶಕಗಳನ್ನು ಗುರುತಿಸಲು ಸಾಧ್ಯವಾಗಲಾರದು. ೫. ಬಾಳ್ಗುಳಿಯು ಈ ಮೇಲಿನ ಅಶವ್ಯಕತೆಯನ್ನು ಗುರುತಿಸಿದ ಒಂದು ಮುಖ್ಯ ಅಗ್ರಹಾರವಾಗಿದ್ದು 'ಸೂರ್ಯಮಾನ' ವೆಂಬ ಪಂಚಾಂಗದ ಪದ್ಧತಿಯಲ್ಲಿ ಕಾಲಗಣನೆಗೆ ಚಾಲನೆಯನ್ನು ನೀಡಿದಂತೆ ಕಂಡು ಬರುವುದನ್ನು - ಇಂದಿಗೂ ಪಂಚಾಗದ ಪಂಡಿತರು ಬಳಸುತ್ತಿರುವ 'ದೃಗ್ಗಣಿತ'ವೆಂಬ 'ಶಾಸ್ತ್ರ'ದಿಂದ ಅರಿಯಬೇಕಾಗುತ್ತಿದೆ. ೬. ಇದರಂತೆ - ಇಂದಿಗೂ ಗ್ರಹಣಗಳು ಪಂಚಾಂಗದ ಅಂಶಗಳು ತಿಥಿ - ವಾರ-ನಕ್ಷತ್ರ - ಸಮಯ-ಇವುಗಳು ತಾಳೆಯಾಗುತ್ತಿರುವುದ ರಿಂದ ಪಂಚಾಂಗ'ವು ಅದೇ ಬಾಳ್ಗುಳಿಯ ಪದ್ಧತಿಯಾಗಿರುವಂತಿದೆ.

'ಗ್ರಹಣ'ಗಳ ಗಣನೆಯನ್ನು ದಾನಶಾಸನಗಳ ಆಧಾರದಿಂದ ಎಷ್ಟು ಸತ್ಯ ಅಥವಾ ವೈಜ್ಞಾನಿಕವೆಂಬ ಶೋಧನೆಯು ಇಂದು ನಡೆಯುತ್ತಿರುವುದಂತೂ ಪಂಚಾಂಗದಪದ್ಧತಿಯನ್ನು ಸಂಪೂರ್ಣ ವಾಗಿ ತಳ್ಳಿ ಹಾಕಲು ಸಮರ್ಥವಾಗಿರುವುದಿಲ್ಲ. ಸೂರ್ಯಮಾನದ ಜೊತೆಗೆ ಕೆಲವೆಡೆ ಚಾಂದ್ರಮಾನದ ಪಂಚಾಂಗ ಕೂಡ ಬಳಕೆಯಲ್ಲಿದೆ. ಆದರೆ ಗ್ರಹಣಗಳು ಮಾತ್ರ ಸಾಮಾನ್ಯವಾಗಿ ಪರಿಗಣಿತವಾಗಿವೆ.

ಬಾಳ್ಗುಳಿಯ ಶಿಲ್ಪಗಳು ಇಂದಿನ ಅವಶೇಷವಾಗಿದ್ದು ಕಲಿದೇವರ ಮಹಿಮೆಯನ್ನು 'ಅಯ್ವದಿಂಬರ' ಜೀವನ ಧೋರಣೆಯನ್ನೂ ಸಮರ್ಥಿಸುತ್ತವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಸ್.ಐ.ಐ. IX, X, XII

೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧., ಬಳ್ಳಾರಿ ಜಿಲ್ಲೆಯ ಶಾಸನಗಳು (೧,೨ ಮತ್ತು ೩), (ಸಂ.), ದೇವರಕೊಂಡಾರೆಡ್ಡಿ, ಹಂಪಿ ಕನ್ನಡ ವಿಶ್ವವಿದ್ಯಾಲಯ.

ಡಾ. ಎಸ್.ಕೆ. ಜೋಶಿ.*

ಸ್ವಾದಿ : ವಾಸ್ತು ವಿಶೇಷಗಳ ಒಂದು ಅವಲೋಕನ

ಪ್ರಾಕೃತಿಕ ಸುಂದರ ಹಸುರಿನ ಹರವಿನಲ್ಲಿ ಕದಂಬರು ಕರ್ನಾಟಕದ ಪ್ರಥಮ ಸಾಮ್ರಾಜ್ಯ ಕಟ್ಟಿದ ಶ್ರೀಯರು. ಹೆಸರೇ ಸೂಚಿಸುವಂತೆ ಬನಬನಂಗಳ ವಾಸ 'ಬನವಾಸ', ಬನವಾಸಿ'. ಪಂಪನ ಬಿರಿದ ಮಲ್ಲಿಗೆ ನಾಡು. ಶ್ರೀ ಮಧುಕೇಶ್ವರನ ಮಧುವನುಂಡ ನಾಡಿದು. ಇದರ ಹಚ್ಚ ಹಸುರಿನ ಸೀರೆಯ ಸೆರಗು ಸೋಂಪಾದ ಸೋಂದೆ ತಾನೆ! ಬನವಾಸಿಕದಂಬರನಾಡಿನ ಒಂದು ತರಹದ ಸಾಂಸ್ಕೃತಿಕ ನಾಡಿಯಾದ ಪ್ರಾಚೀನ ಸೋಂದೆಗೂ ಜೋಡಿಸಬಹುದು. ಸೋಂದೆಯ ಕೋಟೆಯು ವನದುರ್ಗ ಹಾಗೂ ಮೃದ್‌ದುರ್ಗಗಳ ಸಂಕೀರ್ಣದ ವೈಖರಿಯಾಗಿದ್ದು, ದ್ವಿಕೂಟಾಚಲ ಶ್ರೀ ಶಂಕರನಾರಾಯಣ ದೇವಸ್ಥಾನ, ಶ್ರೀ ವೆಂಕಟರಮಣ ದೇವಾಲಯ, ಜೈನ ಮಂದಿರ, ವೀರಶೈವ ಮಠ ಇತ್ಯಾದಿಗಳು ವಾಸ್ತು ವೈಭವಗಳಾಗಿವೆ (ಕೆ. ವಿ. ಸುಂದರ ರಾಜನ್). ಜೊತೆಗೆ ವಾದಿರಾಜ ಶ್ರೀಗಳ ಸಮಾಧಿ, ತ್ರಿವಿಕ್ರಮ ದೇವಾಲಯ, ಕಲ್ಲಿನ ರಥ, ಹಯಗ್ರೀವ ಸಮುದ್ರ-ಒಂದು ನೀರಿನ ಸಂಗ್ರಹದ ಅನುಕರಣೀಯ ವ್ಯವಸ್ಥೆ, ಶ್ರೀ ವಾದಿರಾಜರು ಇಲ್ಲಿ ಐದು ಪುಷ್ಕರಣಿಗಳನ್ನು ಕಟ್ಟಿಸಿದರೆಂದು ಒಂದು ಆಖ್ಯಾನದ ಹೇಳಿಕೆ, ಭೂತನಾಥ (ಭೂತರಾಜ) ಭೂತದಯೆಯ ಮಂಟಪ, ಆದಿಶಂಕರಷ್ಟು ಹಳೆಯರಾದ (ಕ್ರಿ.ಶ. ೭೮೮-೮೨೦), ಅವರ ತರೇನ ಸಂಸ್ಥಾಪಿತ ಸ್ವರ್ಣವಲ್ಲೀ ಮಠ-ಹವ್ಯಕರ ಒಂದು ಅಧ್ಯಾತ್ಮ ಕೇಂದ್ರ.

ಭಕ್ತಿ ಆಂದೋಲನದ ಅಲೆ ಸೋಂದೆಯನ್ನು ಬಿಡಲಿಲ್ಲ. Bhakti movement in medieval history of south india) ಶ್ರೀ ವಾದಿರಾಜರಂಥ ತತ್ವಜ್ಞಾನಿ- ದಾರ್ಶನಿಕರ ಕೃತಿಗಳು ಅವರು ಆಧ್ಯಾತ್ಮ ಪಥದಲ್ಲಿ ತೋರಿದ ಮಿಂಚು, ಅವರ ಸಮೀಪದ ಶಿಷ್ಯ ಕನಕದಾಸರ ಸಂಕೀರ್ತನಗಳ ದೈವ ಸಾಹಿತ್ಯದ ಕೊಡುಗೆ ಇವೆಲ್ಲ ಸೋಂದೆಯ ಪರಿಸರದಲ್ಲಿ ಹರಡಿದ, ಅಂತರ್ ಪ್ರತಿಭೆಯ ಸದ್ದರ್ಶನಗಳಾಗಿವೆ. ಒಂದು ರೀತಿಯಲ್ಲಿ ಕೇವಲ ಐತಿಹಾಸಿಕ ನೆಲೆಯಾಗಿರದೆ, ಸ್ವಾದಿಯು ತೃಪ್ತ ಆತ್ಮಕ್ಕೆ, ಶೈವ-ವೈಷ್ಣವ-ವೀರಶೈವ ನಡೆನುಡಿ ಆಚರಣೆಗಳು ಒಂದು ತರಹದ ಭಾವೈಕ್ಯದ ಸಾಂತ್ವನದ ತಾಣವಾಗಿದೆ.

ಶಮಿತ್, ದರ್ಭ, ಗಂಧ, ಕಾಷ್ಠ, ಪುಷ್ಪ, ಬಿಲ್ವಲಗಳನ್ನು ಬಿಸುಟು, ಅಸ್ತ್ರ ಶಸ್ತ್ರಗಳನ್ನು ಕೈಯಲ್ಲಿ ಹಿಡಿದು. ಕಾದಿ ಕ್ಷತ್ರಿಯನಾದ ಕನ್ನಡದ ಮಯೂರವರ್ಮನ (ಕ್ರಿ.ಶ. ೩೨೫-೩೪೫) ಕದಂಬ ಕುಲನಾಡಿದು. ಇದೊಂದು ಐತಿಹಾಸಿಕ ಅಪೂರ್ವ ಘಟನೆ ಚಾತುರ್ವರ್ಣ್ಯವ ನಲುಗಿಸಿದ ಘಟನೆ.


ಸೋಂದೆಯು ಉತ್ತರ ಕನ್ನಡ ಜಿಲ್ಲೆಯ ಅತ್ಯಂತ ಪರಿಚಿತ ತಾಣ. ಇದು ಶಿರಸಿ ತಾಲೂಕಿನಲ್ಲಿದೆ. ಶಿರಸಿಯಿಂದ ಯಲ್ಲಾಪುರಕ್ಕೆ ಹೋಗುವ ಎಡಬದಿಯಲ್ಲಿ ಹಮ್ಮಿಕೊಂಡಿದೆ, ಶಿರಸಿಯಿಂದ ಕೇವಲ ೧೬ ಕಿ. ಮಿ. ದೂರ ಶಾಲ್ಮಲಾ ನದಿ ದಡದಲ್ಲಿ. ಈ ಶಾಲ್ಮಲಾ ನದಿಯೆ ಬೇರೆ. (ಧಾರವಾಡದಲ್ಲಿ ಸೋಮೇಶ್ವರದ ಹತ್ತಿರ ಉಗಮವಾಗಿ ಪಶ್ಚಿಮವಾಹಿನಿಯಾಗಿ ಹರಿದು ಸಾಗರ ಸೇರುವ ಶಾಲ್ಮಲೆ ಇದಲ್ಲ)

ಸ್ವಾದಿಯು ಸ್ಥಳನಾಮ ವಿಜ್ಞಾನದ ದೃಷ್ಟಿಯಿಂದ ಸ್ವಾದಿ, ಸೋಂದೆ, ಸೋಂದಾ, ಸೋದೆ, ಸುಧಾಪುರ, ಸೋಂದಾನಗರ, ಸೋಂದಾಪುರಿ, ಹೊನ್ನೆಹಳ್ಳಿ, ಸ್ವರ್ಣವಲ್ಲೀ, ಸೋಮದಾಪುರೀಪುರ ಇತ್ಯಾದಿ ಹೆಸರುಗಳನ್ನು ಹೊಂದಿದೆ.

ಪ್ರಾಗೈತಿಹಾಸಿಕ ಕೊಡಲಿ, ಬಾಚಿ, ಉಳಿ ಇತ್ಯಾದಿ ಶಿಲಾಯುಧಗಳು ಸ್ವಾದಿಯ ಶಾಲ್ಮಲಾ ನದಿಗುಂಟ ಸಿಕ್ಕಿವೆ. (ಡಾ. ಅ. ಸುಂದರ) ಜೊತೆಗೆ ಪ್ರಾಗೈತಿಹಾಸಿಕ ಬಂಡೆ ಚಿತ್ರಗಳು ಬ್ರಾಹ್ಮೀ ಬರಹಗಳು ಕನ್ನಡ ಶಾಸನಗಳು, ತಿಗಳಾರಿ ಬಂಡೆ ಶಾಸನಗಳು (ಶ್ರೀ ಗುಂಡಾ ಜೋಯಿಸ್), ಶ್ರೀ ಚಕ್ರದ ಬಂಡೆಗಲ್ಲು, ಯೋಗಿಶಿಲ್ಪ ನಂದಿ, ಶಿವಲಿಂಗ, ಕೋಟಿಲಿಂಗ ತೀರ್ಥ, ಇತ್ಯಾದಿಗಳು ಇಲ್ಲಿಯ ಪ್ರಾಚ್ಯನಿಧಿಯ ಬದುಕಾಗಿವೆ.

ಈ ಪ್ರದೇಶದ ಪ್ರಾಗೈತಿಹಾಸದಲ್ಲಿ ಕೆತ್ತಿರುವ ಬಂಡೆ ಚಿತ್ರಗಳು (ಡಾ. ಎಚ್. ಆರ್. ರಘುನಾಥ ಭಟ್) ಮನುಷ್ಯ, ಗೂಳಿ ಚಿಗರಿ, ಸಮಾಂತರ ರೇಖೆಗಳು, ತ್ರಿಕೋನಗಳು ಗ್ರಾಫಿಟೀ ಮಾರ್ಕಗಳಂತೆ) ಹಾಗೂ ಇಲ್ಲಿ ಸಿಕ್ಕ ಕೆಂಪು ಕಪ್ಪು ಮಡಕೆ ಚೂರುಗಳು ಈ ಪ್ರದೇಶವನ್ನು ಬೃಹತ್ ಶಿಲಾಯುಗದ ಕಾಲದ್ದೆಂದು ಊಹಿಸಬಹುದಾಗಿದೆ. ಇಲ್ಲಿಯ ಶಿಲಾಬಂಡೆಯ ಗೂಳಿಯ ಬದಿಯ ಚಿತ್ರವನ್ನು 'ಗಾವಳಿ'ಯ ಚಿತ್ರಕ್ಕೆ ಹೋಲಿಸಬಹುದು. ಇದು ಮಂಡಲದಂತಿದೆ. ಶೈಲಿ ಮತ್ತು ತೌಲನಿಕ ಅಧ್ಯಯನಗಳನ್ನಾಧರಿಸಿ, ಇವು ನವಶಿಲಾಯುಗ (Neolith period) ಹಾಗೂ

* ೬೦, ಸಿಲ್ವರ್ ಆರ್ಚರ್ಡ್, ಧಾರವಾಡ - ೫೮೦ ೦೦೧



ಬೃಹದ್ ಶಿಲಾಯುಗ(Megalithic period) ಗಳೆರಡರ ವಲಯಗಳಲ್ಲಿ ಇರುವ ಆಧಾರಗಳಿಂದು ಹೇಳಬಹುದು.

ಆ ನಾಗರಿಕತೆಯ ವಸತಿಯ ವಾಸ್ತವ್ಯದ ಕೊಡುಗೆಗಳಲ್ಲಿ ನಾಲ್ಕು ದಾಂಗುಡಿಗಳನ್ನು ಕಾಣುತ್ತೇವೆ. ಹೆಸರಿಸಬೇಕಾದರೆ ರಕ್ಷಣಾವಾಸ್ತು, ಧಾರ್ಮಿಕ ವಾಸ್ತು, ಗೃಹ್ಯವಾಸ್ತು, ಸಾರ್ವಜನಿಕ ವಾಸ್ತು. ಜಗತ್ತಿನ ಯಾವುದೇ ಭಾಗದಲ್ಲಿ, ಯಾವುದೇ ಸಮಯದಲ್ಲಿ ಕಂಡುಬರುವ ವಾಸ್ತು ಕೃತಿಗಳನ್ನು ಈ ನಾಲ್ಕು ಬಂಧಗಳಲ್ಲಿ ಕೂಡಿಸಬಹುದು.

ಸೊಂದೆಯ ಜೀವನದಲ್ಲಿಯೂ ಈ ನಾಲ್ಕು ದಾಂಗುಡಿಗಳ ವಾಸ್ತುಕೃತಿಗಳು ದೊರೆಯುವಲ್ಲಿ ಅವನ್ನು ಇಲ್ಲಿ ಪರಾಮರ್ಶಿಸ ಬಹುದು.

ರಕ್ಷಣಾ ವಾಸ್ತು : (Defence Architecture)


ಸ್ವಾದಿಯ ರಕ್ಷಣಾ ಕೋಟೆಯನ್ನು ಕದಂಬಕುಲದ ಕಾಲಕ್ಕೆ ಜೋಡಿಸಲಾಗಿದೆ. ಶಾಲ್ಮಲೆಯು ಪಶ್ಚಿಮ ದಕ್ಷಿಣ ಹಾಗೂ ಉತ್ತರದ ಸೆರಗುಗಳಿಂದ ಸೋಂದೆಯನ್ನು ಸ್ವಾಭಾವಿಕವಾಗಿ ನೀರಿನ ತಡೆಯಿಂದ, ರಕ್ಷಿಸಿದೆ. ಈ ಮೃದ್‌ಕೋಟೆ ವನದುರ್ಗದ ಸಂಕೀರ್ಣತೆಯನ್ನು ಹೊಂದಿದೆ.

ನಾಲ್ಕೂ ಮುಖ್ಯದಿಕ್ಕುಗಳ ಮೂಲೆಗಳಲ್ಲಿ ರಕ್ಷಣಾ-ವೀಕ್ಷಣಾ ವೇದಿಕೆಗಳನ್ನು ಗೋಡೆಗಳ ಒಳಬದಿಗೆ ದುಂಡಾಗಿ ನಿರ್ಮಿಸಲಾಗಿದ್ದು, ಕೋಟೆಯ ಒಳಬದಿಯಿಂದ ರಕ್ಷಣಾ ಸೈನಿಕರಿಗೆ ತೀವ್ರವಾಗಿ ಗೋಡೆಯ ಮೇಲೇರಿ ರಕ್ಷಣೆಯಲ್ಲಿ ಸನ್ನದ್ಧರಾಗಲು ಅನುವು ಮಾಡಿವೆ. ಸಾಮಾನ್ಯವಾಗಿ ಇಂಥ ದುಂಡನೆಯ ಬುರುಜುಗಳು (Bastions) ಗೋಡೆ ಹೊರಬದಿಗೆ ತದನಂತರ ಕಟ್ಟಲ್ಪಟ್ಟ ಕೋಟೆಗಳಲ್ಲಿ ಅಳವಡಿಸಲಾಗಿದೆ. ಆದರೆ ಇಲ್ಲಿ ಒಳ ಬದಿಗೆ ಮಾತ್ರ ಯೋಜಿಸಲಾಗಿದೆ. ಇದಕ್ಕೆ ಮೇಲೆ ನೀಡಿದ ಕಾರಣವೇ ಮುಖ್ಯ.

ಅಲ್ಲದೆ ಪೂರ್ವದ ಪ್ರವೇಶ ದ್ವಾರ, ಅದರ ಒಳ ಬದಿಗೆ ಕಾವಲು ಪಡೆಯ ಸೈನಿಕನ ಪರದೆಯ ಕೋಣೆಗಳು, ಅಡಗು ದಾಣಗಳು, ನುಸುಳುವ ಕಿಂಡಿಗಳು ಇತ್ಯಾದಿಗಳು ರಕ್ಷಣೆಯ ಚಾಕ ಚಕ್ಯತೆಯನ್ನು ವಿವರಿಸುತ್ತವೆ. ಪಶ್ಚಿಮದ ಗೋಡೆಯಲ್ಲಿ ಅಳವಡಿಸಿದ ದಿಡ್ಡಿ ಬಾಗಿಲು, ಚಿಕ್ಕದಾಗಿದ್ದು, ಭಯದ ವಾತಾವರಣವಾದಲ್ಲಿ ಅಥವಾ ಸೋಲಿನ ಸಂಕೇತ ತೋರಿದಲ್ಲಿ, ಒಳಗಿನಿಂದ ಹೊರಗೆ ಪಾರಾಗಿ ಹೋಗಲು ವ್ಯವಸ್ಥೆ ಮಾಡಿಕೊಟ್ಟಿದೆ.


ಇದೇ ತರಹದ, ಕದಂಬರ ಕಾಲೀನ ಮೃದ್+ವನ ದುರ್ಗಗಳು ಬನವಾಸಿ, ಗುದ್ನಾಪುರ, ಹಾನಗಲ್, ಹಲಸಿ (ಬೆಳಗಾಂವ ಜಿಲ್ಲೆ), ಚಾಂದೋರ (ಚಂದ್ರಪುರ -ಗೋವೆ) ಇತ್ಯಾದಿಗಳಲ್ಲಿ ಕಾಣಬಹುದಾಗಿದೆ, (ಡಾ. ಎಸ್. ಕೆ. ಜೋಶಿ : ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ). ಕಾಲ ಗತಿಸಿದಂತೆ, ವಿಜಯನಗರ ಹಾಗೂ ಸೋಂದಾ ಅರಸರುಗಳ ಕಾಲದಲ್ಲಿ, ಈ ಕೋಟೆಯನ್ನು ಮತ್ತಷ್ಟು ದೃಢಗೊಳಿಸಲಾಗಿದೆ.

ಇದೇ ರಕ್ಷಣಾ ವಾಸ್ತುವನ್ನು ಮುಂದುವರಿಸುತ್ತ ಕೋಟೆಯ ಗೋಡೆಗಳನ್ನು ತಟಾಕಗಳು ಹೇಗೆ ಸುತ್ತವರಿದಿದ್ದವೆಂಬುದನ್ನು ಕೆಲ ಇನ್ನೂ ಐತಿಹಾಸಿಕ ಆಕರಗಳು ಹೇಳುತ್ತವೆ. ರವಿವರ್ಮನು ಗುಡ್ಡ ತಟಾಕವನ್ನು ನಿರ್ಮಿಸಿದನೆಂದು ಗುಡ್ನಾಪುರ ಶಾಸನವು ಹಾಗೂ ಕಾಕುಸ್ಥವವರ್ಮನು ಕೆರೆಯೊಂದನ್ನು ಕಟ್ಟಿಸಿದ ವಿವರವನ್ನು ತಾಳಗುಂದ ಶಾಸನವೊಂದು ಉಲ್ಲೇಖಿಸುತ್ತವೆ. ಅಗ್ರಹಾರಗಳು ಹಾಗೂ ಬ್ರಹ್ಮಪುರಿಗಳು ಕೋಟೆ ವಸತಿಯ ಅಂಗಗಳಾಗಿ



ಧಾರ್ಮಿಕ ವಾಸ್ತು (Religious Architeture)

ಸೋಂದಾದಲ್ಲಿಯ ದೇವಾಲಯಗಳ ವಾಸ್ತು, ವಿನ್ಯಾಸ ಹಾಗೂ ಶಿಲ್ಪಗಳ ಬಗ್ಗೆ ಹೇಳಬೇಕಾದರೆ, ಈ ಪ್ರದೇಶವು ಅಧಿಕ ಮಳೆಯ ಸುರಿವ ಮಲೆನಾಡು ಆದುದರಿಂದ, ಅದರ ಹೊಡೆತವನ್ನು ತಪ್ಪಿಸಲು ಹಾಗೂ ದೇವಾಲಯಗಳ ಮೇಲೆ ಬಿದ್ದ ನೀರನ್ನು ದೂರ ಮಾಡಲು, ಇಳಿಜಾರಾದ ಹಾಗೂ ಕಟ್ಟೆ ಕಟ್ಟೆಯಾದ, ಎತ್ತರಕ್ಕೆ ಹೋದಂತೆ ಉದ್ದಗಲಗಳಲ್ಲಿ ಕಡಿಮೆ ಕಡಿಮೆಯಾಗುತ್ತ ಹೋಗುವ ಪಟ್ಟಣ ಶಿಖರ ಸ್ವರೂಪವನ್ನೆ ಇಲ್ಲಿ ಅಳವಡಿಸಲಾಗಿದೆ. ಇದು ಹಿಂದು ದೇವಾಲಯಗಳ ವಾಸ್ತುಶೈಲಿಯಲ್ಲಿ ಕದಂಬ-ನಾಗರ ಶೈಲಿಯೆಂದು ಪ್ರತೀತವಾಗಿದೆ. ಈ ಕದಂಬ-ನಾಗರ ವಾಸ್ತು ಶೈಲಿಯು ಕ್ರಿ.ಶ. ೪-೫ ಶತಮಾನದಗಳಲ್ಲಿ ಉಗಮಿಸಿದ್ದು, ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ತದನಂತರ ವಿಜಯನಗರದ ರಾಜರುಗಳ (ಕ್ರಿ.ಶ. ೧೬೦೦) ಕಾಲದವರೆಗೂ ಬೆಳೆಯುತ್ತ ಹಾಗೂ ಬಳಕೆಗೊಳ್ಳುತ್ತ ಹೋಗಿದೆ.



ಕೆಲಸಮಾಡುತ್ತವೆ. ಇಷ್ಟೇ ಅಲ್ಲ, ಅವು ಭದ್ರ ಹಾಗೂ ವ್ಯವಸ್ಥಿತ ಆಗಿನ ಜೀವನ ಪದ್ಧತಿಗೆ ಪೂರಕವಾಗಿವೆ.

ಕದಂಬರು ಬ್ರಾಹ್ಮಣರ ವೇದಾಧ್ಯಯನಕ್ಕೆ ಪುರಸ್ಕಾರ ನೀಡಿ, ಪ್ರಪ್ರಥಮವಾಗಿ ಅಗ್ರಹಾರ ಸಂಸ್ಕೃತಿಯನ್ನು ಕರ್ನಾಟಕಕ್ಕೆ ನೀಡಿದರೆಂದು ಹೇಳಬಹುದು. ಸೋಂದೆಯೂ ಇಂಥ ಒಂದು ಕದಂಬ ಪ್ರಣೀತ ಪ್ರಸಿದ್ಧ ಅಗ್ರಹಾರವಾಗಿತ್ತು. (ಡಾ. ಮಂದಾಕಿನಿ ಪುರೋಹಿತ: ಬನವಾಸಿ ಕದಂಬರ ಕಾಲದಲ್ಲಿ ವೈದಿಕ ಸಂಸ್ಕೃತಿ).

ಈ ತರಹದ ಕದಂಬ ಕೋಟೆಯ ಬಗ್ಗೆ ಹೇಳುವುದಾದರೆ, ಇದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿದಂತೆ, ಮೃದ್ ದುರ್ಗ+ ವನದುರ್ಗಗಳ ಸಂಕೀರ್ಣವಾಗಿವೆ. ಮಲೆನಾಡಿನಲ್ಲಿ ವೃಕ್ಷ ಹಾಗೂ ಮಣ್ಣು ಇವುಗಳ ಕೊರೆತಯಿಲ್ಲ. ಈ ಎರಡು ಪ್ರಾಕೃತಿಕ ಲಭ್ಯ ವಸ್ತುಗಳನ್ನೇ ಉಪಯೋಗಿಸಿ ಕೋಟೆಗಳನ್ನು ಕಟ್ಟುವಿಕೆಯಲ್ಲಿ ಪ್ರಯೋಗಿಸಲಾಗಿದೆ. ಇದು ಕದಂಬರ ಕಾಲದ ಕೋಟೆಗಳ ವೈಶೇಷಿಕತೆ. ಇಂಥದೇ ಬನವಾಸಿಯ ನಮೂನೆಯಲ್ಲೂ ನೋಡಬಹುದು.

ಇಳಿಜಾರಾದ ಪಟ್ಟಿಕೆಗಳು ಅಂಚಿನಲ್ಲಿ ಅರ್ಧ ಕಂಸದಂತೆ ಕೆಳ ಮುಖವಾಗಿ ಬಾಗಿರುವುದರಿಂದ ನೀರು ಜರಿಯುತ್ತ ಕೆಳಗೆ ಕೆಳಗೆ ಇಳಿದು, ಭಿತ್ತಿನ ಸಮಾಂತರದಲ್ಲಿ ಮುಂದೆ ಚಾಚಿದ ಕಪೋತಗಳ ಮೇಲೆ ಬಿದ್ದು ಭಿತ್ತಿಗೆ ಸ್ವಲ್ಪವೂ ತಗಲದಂತೆ, ಗೋಡೆಯಿಂದ ದೂರ ಆಚೆಗೆ ದೂಡುವ ವ್ಯವಸ್ಥೆ ಇದಾಗಿದೆ.

ಇಲ್ಲಿಯ ದೇವಾಲಯಗಳಲ್ಲಿ ಹೇಳಿಕೊಳ್ಳುವಂಥ ಕುಸುರಿನ ಮೂರ್ತಿಗಳಾಗಲಿ, ಕಂಬಗಳಾಗಲೀ, ದ್ವಾರಬಂಧಗಳಾಗಲೀ, ದೇವಕೋಷ್ಠಗಳಾಗಲೀ ಇರುವುದಿಲ್ಲ. ಏಕೆಂದರೆ ದಕ್ಷಿಣ ಭಾರತದಲ್ಲಿ ಸ್ತರ-ಸ್ತರಗಳಾಗಿ ಕಟ್ಟಲ್ಪಡುವ (Structual Temples) ದೇವಸ್ಥಾನಗಳ ನಿರ್ಮಾಣದ ಶೈಶವಾವಸ್ಥೆಯು ಈ ಕಾಲದ್ದಾಗಿದೆ ಎಂದು ಹೇಳಬಹುದು. ಸಮೀಪದ ತಾಣಗಳಲ್ಲಿ ದೊರೆತ ಮೃದು ಕರಿ-ಹಸಿರು ಮಿಶ್ರಿತ ಬೆಸಾಲ್ಟ ಕಲ್ಲು ಮಾತ್ರ

ಮೂರ್ತಿ, ಕಂಬಗಳು ಛತ್ತುಗಳು ಹಾಗೂ ಶಿಖರಗಳಿಗೆ ಉಪಯೋಗಿಸಲಾಗಿದೆ. ಈ ಶಿಲೆಗಳ ಉಪಯೋಗವನ್ನು ಬಹಳ ಹಿಡಿತದಿಂದ ಮಾಡಲಾಗಿದೆ. ಏಕೆಂದರೆ ಅದು ಅಪರೂಪದ ಶಿಲೆ. ಬಹಳ ವಿಪುಲವಾಗಿ ಉಪಯೋಗಿಸಬಹುದಾದದ್ದು ಲೆಟೆರೈಟ್. ಅದು ಹೇರಳವಾಗಿ ದೊರೆತರೂ ಕೆತ್ತನೆಗೆ ಕುಸುರಿಗೆ ಏನೂ ಉಪಯೋಗವಿಲ್ಲ. ಪುಳು-ಪುಳು ಉದುರುವ ಗುಣ ಅದಕ್ಕೆ. ಇಲ್ಲಿಯ ದೇವಾಲಯಗಳು ವಿನ್ಯಾಸದಲ್ಲಿ ಸರಳ ಮುಖ ಮಂಟಪ, ಅರ್ಧ ಮಂಟಪ ಹಾಗೂ ಗರ್ಭಗೃಹಗಳಿಂದ ಕೂಡಿ, ಅಡ್ಡಲಾಗಿ ವಿಸ್ತಾರವಾದ ಸಭಾ ಮಂಟಪಗಳಿಂದ ಸಂಯೋಜಿತ ವಾಗಿದೆ. ಶ್ರೀ ವೆಂಕಟೇಶ ದೇವಾಲಯ, ಶ್ರೀ ಶಂಕರನಾರಾಯಣ, ಕಾಳಿ ದೇವಸ್ಥಾನ ತದನಂತರದ ಜೈನ ಬಸದಿ ಇತ್ಯಾದಿಗಳು ಒಂದು ತರಹದ ವಾಸ್ತು ವಿನ್ಯಾಸ ಹೊಂದಿವೆ.


ಗೃಹ್ಯವಾಸ್ತು (Domestic Architertured)

ಇಲ್ಲಿಯ ಪುಷ್ಕರಣಿಗಳು (ನೀರಿನ ಹೊಂಡಗಳು) ದೇವಾಲಯಗಳ ಆವರಣಗಳಲ್ಲಿ, ಮಠ ಮಾನ್ಯಗಳ ಪರಿಸರದಲ್ಲಿ ನಿತ್ಯೋಪಯೋಗಿ, ಜನೋಪಯೋಗಿ, ಮಜ್ಜ ನೋಪಯೋಗಿ, ಧಾರ್ಮಿಕ ವಿಧಿಗಳೋಪಯೋಗಿಯಾಗಿ ಪರಿಣಮಿಸಿದೆ. ಇವು ವಿನ್ಯಾಸದಲ್ಲಿ ಕಡಿಮೆ ಕಡಿಮೆಯಾಗುತ್ತ ಹೋಗುವ ಕಟ್ಟೆ ಕಟ್ಟೆಯ ಸೋಪಾನಗಳುಳ್ಳ ಕಟ್ಟಡವಾಗಿದೆ. ನೆಲದಾಳದಲ್ಲಿ ಅಖಂಡ ನೀರಿನ ನೆಲೆಗಳು ಇರುವ ತಾಣಗಳನ್ನು ಆರಿಸಿಕೊಂಡು, ಭೂತಲದ ನೀರಿನ ಮೂಲ ತಿಳಿದು, (Groud water Sources) ಅಥವಾ ನಿರಂತರ ನೀರಿನ ಝರಿಯುಳ್ಳ (Water Brookes) ನಿಮ್ನ ಪ್ರದೇಶವನ್ನು ಆರಿಸಿಕೊಂಡು, ಅಂಥಲ್ಲಿ ಈ ನೀರಿನ ಪುಷ್ಕರಣಿ ಗಳನ್ನು ನಿರ್ಮಿಸಲಾಗಿದೆ. ಈ ತರಹದ ವಿನ್ಯಾಸ ಹಾಗೂ ವಾಸ್ತುವುಳ್ಳ ಪುಷ್ಕರಣಿಗಳೇ ಸೋಂದೆಯಲ್ಲಿ ಕಾಣಸಿಗುತ್ತವೆ. ಇಲ್ಲಿ ಹಯಗ್ರೀವ ಸಮುದ್ರ, ವೈಷ್ಣವ ಸಂಪ್ರದಾಯದ ಮಠದ ಪರಿಸರದಲ್ಲಿದೆ. ಭೂತನಾಥ (ಭೂತರಾಯನೆಂದೂ ಹೆಸರು) ಮಂಟಪದ ವಿಭಾಗೀಯ ಗೋಡೆಯ ಆಚೆಗೆ, ಉತ್ತರದ ದಿಶೆಯಲ್ಲಿ ಭೂತನಾಥ ಪುಷ್ಕರಣಿ ಎಂದು ಇದು ಕರೆಯಿಸಿಕೊಳ್ಳುತ್ತದೆ. ಶ್ರೀ ವ್ಯಾಸರಾಯರು ಸೊಂದೆಯಲ್ಲಿ ಐದು ಪವಿತ್ರ ಪುಷ್ಕರಣಿಗಳನ್ನು ಕಟ್ಟಿದ ವಿವರ ದೊರೆಯುತ್ತದೆ. ಸ್ವರ್ಣವಲ್ಲೀ ಮಠದ ಪರಿಸರದಲ್ಲಿ ಪಶ್ಚಿಮದ ತೆಂಗಿನತೋಟದಲ್ಲಿ ಇಂಥದೆ ಪುಷ್ಕರಣಿ ಕಂಡು ಬರುತ್ತದೆ. ಹೀಗೆ ಸೊಂದೆಯಲ್ಲಿ ವಿಶಿಷ್ಟ ವಿನ್ಯಾಸದ ಪುಷ್ಕರಣಿಗಳು ಸಂಶೋಧಕರ ಗಮನವನ್ನು ಸೆಳೆಯುತ್ತವೆ. ಶ್ರೀವಾದಿರಾಜ ಮಹಾಸ್ವಾಮಿಗಳ ತೀರ್ಥಪ್ರಬಂಧ ಹಾಗೂ ಭೂಗೋಲ ನಿರ್ಣಯ ಗ್ರಂಥಗಳು ಭಾರತದ ಪುಣ್ಯ ತೀರ್ಥಕ್ಷೇತ್ರಗಳನ್ನು, ಜಲ ಸಂಗ್ರಹಗಳಾದ ಪುಷ್ಕರಣಿಗಳನ್ನು ಹಾಗೂ ನದಿ ನಾಲೆ ಹೊಳೆ ಹಳ್ಳ ಕೊಳ್ಳ ಗಿರಿ ಪರ್ವತ ಇಳಿಜಾರು ಏರು ಪೇರುಗಳನ್ನು ವರ್ಣಿಸಿ ಜಲ ಸಾಹಿತ್ಯ ಹಾಗೂ ಭೂಗೋಲ ಸಾಹಿತ್ಯಗಳನ್ನು ಸಾರಸ್ವತ ಲೋಕಕ್ಕೆ ಕೊಡಮಾಡಿವೆ.


ಸಾರ್ವಜನೀಯ ವಾಸ್ತು (Civilian Architecture)

ಸಾವಿರಾರು ಜನ ಮನಶ್ಶಾಂತಿಗಾಗಿ ಆಧ್ಯಾತ್ಮಿಕ ನೆಲೆಗಳಾದ ಮಠಗಳಿಗೆ ಭೇಟಿ ನೀಡುತ್ತಾರೆ. ಸೋಂದೆಯಲ್ಲಿಯ ಮಠಗಳು ಸ್ವರ್ಣವಲ್ಲಿ ಮಠ, ಶ್ರೀ ವಾದಿರಾಜ ಮಠ, ವೀರಶೈವ ವಿರಕ್ತ ಮಠ ಇತ್ಯಾದಿಗಳನ್ನು ಧಾರ್ಮಿಕ ಆಚರಣೆ, ವಿಧಿ, ವಿಧಾನಗಳಿಗೆ ಅನುಕೂಲವಾಗುವಂತೆ ರಚಿಸಲಾಗಿದೆ. ಶ್ರೀಗಳವರ ಸಮಾಧಿಗಳು, ಸಭಾಂಗಣ, ಪ್ರದಕ್ಷಿಣ ಪಥ, ಪ್ರಾಕಾರ, ಭೋಜನ ಶಾಲೆ, ಪಾಠಶಾಲೆ, ಹೋಮ ಹವನಾದಿ ಕೈಕೊಳ್ಳುವ ವಿಭಾಗ, ಸ್ನಾನ ಗೃಹಗಳು ನೀರಿನ ಸಂಗ್ರಹಗಳು ಪುಷ್ಕರಣಿಗಳು, ಇತ್ಯಾದಿಗಳನ್ನು ಬಹು ವ್ಯವಸ್ಥೆಯುತವಾಗಿ ವಿನ್ಯಾಸಗೊಳಿಸಲಾಗಿದೆ.

ಹೀಗೆ ಅಂತತಃ ಬನವಾಸಿನಾಡಿನ ಚೇತನ ಸಿರಿ ಸ್ವಾದಿ.



ಸೋಂದಾ : ಸ್ವರ್ಣವಲ್ಲೀ ಶ್ರೀ ಮಠ



ಇದರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೆ. ಸ್ವಾದಿಯು ನೀಡಿದ ರಕ್ಷಣಾ ವ್ಯವಸ್ಥೆ ಆಧ್ಯಾತ್ಮ ಶಕ್ತಿಯನ್ನಿತ್ತ ಮಠಗಳು ; ಶ್ರೀ ಸ್ವರ್ಣವಲ್ಲೀ, ಶ್ರೀ ವಾದಿರಾಜ ಶ್ರೀಗಳ ಸಮಾಧಿಗಳು, ಪುಷ್ಕರಣಿಗಳು, ಇನ್ನುಳಿದ ದೇವಾಲಯಗಳು, ಕೇವಲ ಐತಿಹಾಸಿಕ ಮಾಹಿತಿಯನ್ನಷ್ಟೇ ಅಲ್ಲ, ಜೊತೆಗೆ ವಾಸ್ತು ಶಾಸ್ತ್ರದ ಗುಣಮೌಲ್ಯಗಳನ್ನು ಹೊತ್ತು, ಮಾನವನ ಅಂತರ್ಯದ ಪ್ರಭೆಯನ್ನೂ ಬೆಳಗಿಸಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಮಾಳವಾಡ ಸ.ಸ, (೧೯೬೭), **ಸ್ವಾದಿ ಅರಸು ಮನೆತನ**, ಧಾರವಾಡ.

೨. ಕಲಬುರ್ಗಿ ಎಂ.ಎಂ., ಹಾಗೂ ಸುಂದರ ಅ., (೧೯೯೫), **ಸ್ವಾದಿ ಅರಸು ಮನೆತನ**, ಗದಗ.

೩. ಶಾಸ್ತ್ರಿ ಎ.ಕೆ., ೧೯೭೭, **ಸ್ವರ್ಣವಲ್ಲೀ ಮಹಾಸಂಸ್ಥಾನ (ಚರಿತ್ರೆ)**, ಸ್ವಾದಿ.

೪. ರಘುನಾಥ ಭಟ್ ಎಚ್. ಆರ್., (೧೯೯೮), **ಸ್ವಾದಿ ಶಾಸನಗಳು**, ಸ್ವಾದಿ.

೫. ತದ್ದಲಸೆ ಶರ್ಮಾ ವಿಘ್ನೇಶ್ವರ., ೧೯೬೧, **ಶ್ರೀಸ್ವರ್ಣವಲ್ಲೀ ದರ್ಶನ**, ಸ್ವಾದಿ.

೬. ರಘುನಾಥ ಭಟ್ ಎಚ್ ಆರ್., (೧೯೮೮), 'ಸ್ವಾದಿ ಎಷ್ಟು ಪ್ರಾಚೀನ'? **ಇತಿಹಾಸದರ್ಶನ**, ಬೆಂಗಳೂರು.

೭. ಶಾಸ್ತ್ರಿ ಎ.ಕೆ., ೧೯೯೬, 'ಶ್ರೀ ಸೊಂದಾ ಸ್ವರ್ಣದಲ್ಲಿ ಮಹಾಸಂಸ್ಥಾನದ ಚಾರಿತ್ರಿಕ ದಾಖಲೆಗಳ ಕಿರುಪರಿಚಯ', **ಇತಿಹಾಸ ದರ್ಶನ**, ಬೆಂಗಳೂರು.

೮. ಪುರೋಹಿತ್ ಮಂದಾಕಿನಿ., (೧೯೯೩), 'ಬನವಾಸಿ ಕದಂಬರ ಕಾಲದಲ್ಲಿ ವೈದಿಕ ಸಂಸ್ಕೃತಿ', **ಇತಿಹಾಸ ದರ್ಶನ**, ಬೆಂಗಳೂರು.

೯. ಜೋಶಿ ಎಸ್. ಕೆ., (೧೯೮೨), 'ಕದಂಬರ ರಕ್ಷಣಾ ವಾಸ್ತು ನೆಲೆಗಳು' **ಕದಂಬರ ಇತಿಹಾಸ**, ರಾಷ್ಟ್ರಮಟ್ಟದ ವಿಚಾರ ಸಂಕಿರಣ, ಬನವಾಸಿ.

೧೦. ಸುಂದರ ಅ., (೧೯೯೪), **ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ**, ಬೆಂಗಳೂರು.

೧೧. ಲೇಖಕನ ಸ್ಥಳ ಸಮೀಕ್ಷೆ ಹಾಗೂ ವಿದ್ವಾಂಸರುಗಳಾದ ಡಾ. ರಘುನಾಥ ಭಟ್ ಎಚ್. ಆರ್., ಡಾ. ಶಾಸ್ತ್ರಿ ಎ.ಕೆ., ಡಾ. ಸೂರ್ಯನಾಥ ಕಾಮತ್, ಹಾಗೂ ಇನ್ನಿತರ ಸಂಶೋಧಕರೊಂದಿಗೆ ಚರ್ಚೆ.

೧೨. ಅಭಿಶಂಕರ ಕೆ.., **ಡಿಸ್ಟ್ರಿಕ್ಟ್ ಗಾಝೆಟೀಯರ್ ಆಫ್ ನಾರ್ಥ ಕ್ಯಾನರಾ**, ಬೆಂಗಳೂರು.

೧೩. Shanbhg D.N., (1996), *Vadiraja, the Dwaita poet, Great but ignored,* Dharwad.

೧೪. **ವಾದಿರಾಜ ಕೃತಿಗಳು.**, (೧೯೮೦), ನಾಗರತ್ನ ಟಿ. ಎನ್., (ಸಂ.), ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೧೫. ಅರಳು ಮಲ್ಲಿಗೆ ಪಾರ್ಥಸಾರಥಿ., **ಹರಿದಾಸ ಝೇಂಕಾರ ತರಂಗಿಣಿ**, ಕನ್ನಡ ಹರಿದಾಸ ಸಾಹಿತ್ಯ : ೨. **ಶ್ರೀ ವಾದಿರಾಜ ಸಂಪುಟ.**, ಬೆಂಗಳೂರು.

★ ★ ★ ★

ಆವಾಸ ವಾಸವೇಶ್ಮಾದೌ ಪುರೇ ಗ್ರಾಮೇ ವಣಿಕ್ಪಥೇ
ಪ್ರಾಸಾದಾರಾಮದುರ್ಗೇಷು ದೇವಾಲಯ ಮಠೇಷು ಚ

ಗರುಡ ಪುರಾಣ

(ವಸತಿ, ಗ್ರಾಮ, ನಗರ, ಕೋಟೆ, ಪಟ್ಟಣ ಮಠ, ಕೂಡ ವಾಸ್ತುವೆ)

* * *

The Architectural monumentes with all their grandeur in massive shapes with rich sculptural ornamentations bear the real cultural history of India

- NCERT Literature

ಅರುಣಕುಮಾರ್ ಎಸ್.ಆರ್.*

ಪ್ರಾದೇಶಿಕ ಇತಿಹಾಸ ರಚನೆ ಭೌತಿಕ ಆಕರಗಳು

ಒಂದು ಪ್ರದೇಶದ ಇತಿಹಾಸ ರಚನೆಯಲ್ಲಿ ಶಾಸನಾತ್ಮಕ ದಾಖಲೆಗಳೊಂದಿಗೆ, ಮೌಖಿಕ ಸಾಹಿತ್ಯಗಳಾದ ಗಾದೆ, ಒಗಟು, ಹಾಡುಗಳು, ಪಾಡ್ದನಗಳು, ಕಥೆಗಳು, ನಂಬಿಕೆಗಳು, ಐತಿಹ್ಯಗಳು ಬಹಳ ಮುಖ್ಯವಾಗುತ್ತವೆ. ಇವೆಲ್ಲವೂ ಮಾನವನ ಮನೋವಲಯದಲ್ಲಿ ಇತಿಹಾಸದ ಪುಟಗಳು ದಾಖಲಾದ ರೀತಿ. ಸಮಕಾಲೀನ ಬದುಕಿಗೆ. ಅನುಭವಕ್ಕೆ ಅನುಗುಣವಾಗಿ, ಮೌಖಿಕ ಸಾಹಿತ್ಯಗಳು ಜನಪದರಲ್ಲಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಕೊಡಲ್ಪಡುವಾಗ ಬದಲಾಗುವುದು ಸಹಜ. ಆದರೆ ಈ ರೀತಿಯ ದಾಖಲೆಗಳು ಖಂಡಿತವಾಗಿಯೂ ಅಧಿಕೃತ ಅಲ್ಲ. ಇವುಗಳು ಯಾವಾಗ ಅಧಿಕೃತಗೊಳ್ಳುತ್ತವೆ ಅಂದರೆ ಇವುಗಳ ರಚನೆಯಲ್ಲಿ ಹೆಸರಿಲ್ಪಟ್ಟ ಅನೇಕ ಅಂಶಗಳು ಇಂದಿಗೂ ಐತಿಹ್ಯಗಳ ನೆಲೆಯಲ್ಲಿ, ವಸ್ತು ರೂಪದಲ್ಲಿ ಉಳಿದುಕೊಂಡು ಬಂದಾಗ. ಇವೆಲ್ಲವೂ ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಿತವಾಗಿರ ಬೇಕೆಂದೇನೂ ಇಲ್ಲ. ಬದಲು ಆಡುನುಡಿಗಳಲ್ಲೋ, ಐತಿಹ್ಯ ವಾಗಿಯೋ ಇರಬಹುದು. ಆಯುಧಗಳು, ಮನೆ, ಕಲ್ಲು, ಮರ, ಬಾವಿ, ಬಟ್ಟೆಬರೆ ಮುಂತಾದವುಗಳು ಕಾಲಾನುಕಾಲಕ್ಕೆ ಜನಪದರಿಂದ ರಕ್ಷಿಸಲ್ಪಟ್ಟು ಬಂದಿರುವುದರಿಂದ, ಒಂದಷ್ಟು ಉತ್ಪ್ರೇಕ್ಷೆ ಅಂತ ಅನ್ನಿಸಿದರೂ, ಅವುಗಳಿಗೆ ಮೌಖಿಕ ಕಾವ್ಯಗಳಲ್ಲಿ ಸ್ಥಾನ ಸಿಕ್ಕಿರುವುದರಿಂದ, ಅವುಗಳನ್ನು ಚರಿತ್ರೆಯ ಮರುನಿರ್ಮಾಣ ಸಂದರ್ಭದಲ್ಲಿ ಪ್ರಾದೇಶಿಕ ಇತಿಹಾಸದ ರಚನೆಯಲ್ಲಿ ಬಳಸಿಕೊಳ್ಳ ಬಹುದೇ ಎಂಬುದು ಚರ್ಚಿತವಾಗಬೇಕಾದ ವಿಚಾರ. ಆದರೆ ಇಂತಹ ಅಂತರ್‌ಶಿಸ್ತೀಯ ಅಧ್ಯಯನಕ್ರಮ ಇತಿಹಾಸ ರಚನೆಯ ಸಂದರ್ಭಕ್ಕೆ ಹೊಸ ಉಪಕ್ರಮವನ್ನಂತೂ ನೀಡಿತು. ಈ ಬಗ್ಗೆ ಅಮೆರಿಕಾದ ವಿಸ್‌ಕೋನ್‌ಸಿನ್ ವಿಶ್ವವಿದ್ಯಾನಿಲಯದ 'ವಾನ್‌ವಾನ್‌ಸಿನಾ' ಎಂಬುವರು ತಮ್ಮ Oral Tradition as History (೧೯೮೫) ಎಂಬ ಕೃತಿಯಲ್ಲಿ ಒಂದೂರಿನ ಚಾರಿತ್ರಿಕ ದಾಖಲೆಗಳನ್ನು ಪುನರ್‌ಚಿಂತನೆಗೆ ಒಳಪಡಿಸುವಾಗ, ಶಾಸನಾತ್ಮಕ ಅಂಶಗಳನ್ನು ಬಳಸಿಕೊಂಡಂತೆ, ಜನಪದರಲ್ಲಿ ಬಾಯಿಂದ ಬಾಯಿಗೆ ಬಂದ ಪಠ್ಯಗಳು ಹಾಗೂ ಅವುಗಳೇ ಪೋಷಿಸಿಕೊಂಡು (ಅದರಲ್ಲಿರುವ) ಬಂದ ವಸ್ತುರೂಪದ ದಾಖಲೆಗಳು ಸಮಕಾಲೀನ ಸಂದರ್ಭದಲ್ಲಿ ಇನ್ನೂ ಉಳಿದಿದ್ದರೆ ಅವುಗಳನ್ನು ಬಳಸಿಕೊಂಡಾಗ (ಅನುಕೂಲಕರವೆಂದು ಅನಿಸಿದರೆ) ನಾವು ಕೈಗೊಳ್ಳುವ ನಿರ್ಧಾರಗಳು ಅಥವಾ ಸಿಗುವ ಸಂಶೋಧನಾತ್ಮಕ ಉತ್ತರಗಳು ಹೆಚ್ಚು ಸಮಗ್ರತೆಯನ್ನು ಪಡೆದುಕೊಳ್ಳುತ್ತವೆ ಎನ್ನುತ್ತಾರೆ.

ರಾಜರು, ಮಾಂಡಲಿಕರು ಅಥವಾ ಸಾಮಂತರಸರ ಕುರಿತಾಗಿ ಶಾಸನಗಳು ಮಾತ್ರವಲ್ಲದೆ ಸಾಹಿತ್ಯಿಕ ದಾಖಲೆಗಳು ಸಿಗುತ್ತವೆ. ಅವರುಳಿದಿರುವ ಅರಮನೆ ಇತ್ಯಾದಿಗಳ ಅವಶೇಷ ಗಳಿಂದ ನಾವು ಅವರ ಕಾಲದ ಬಗ್ಗೆ, ಅವರ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಬಹುದು. ಆದರೆ ಅತಿಮಾನುಷ ವ್ಯಕ್ತಿಗಳಿಗೆ, ಜನಪದ ಇತಿಹಾಸದಲ್ಲಿ ಸಂದ ಶ್ರೇಷ್ಠ ವೀರರಿಗೆ, ಮಹಿಳೆಯರಿಗೆ ಸಂಬಂಧಪಟ್ಟಂತೆ ಇಂತಹ ಯಾವುದೇ ದಾಖಲೆಗಳು ಸಿಗುವುದಿಲ್ಲ. ಇಲ್ಲಿ ದಾಖಲೆಗಳೆಂದು ಪರಿಗಣಿಸುವುದಿದ್ದರೆ ಕೇವಲ ಮೌಖಿಕ ಆಕರಗಳು. ಇದು ಅಧಿಕೃತ ಎಂದು ಹೇಳಲಾಗುವುದಿಲ್ಲ. ಆ ಅಧಿಕೃತತೆ ಬರಬೇಕಾದರೆ ಎರಡು ನೆಲೆಗಳಿಂದ ಈ ಐತಿಹಾಸಿಕ ಜನಪದ ದಾಖಲೆಗಳನ್ನು ನಾವು ಪರಿಗಣಿಸಬಹುದು. ಇವೆರಡು ವಿವರಗಳು ಅವರ ಕಾಲ ನಿರ್ಣಯಕ್ಕೆ ಮತ್ತು ಇನ್ನಿತರ ಅಂಶಗಳನ್ನು ಸರಿದೂಗಿಸುವುದಕ್ಕೆ ಅವಕಾಶವಾಗುತ್ತದೆ.

೧. ಮೌಖಿಕ ಸಾಹಿತ್ಯದ ಭಾಷಿಕ ಬೆಳವಣಿಗೆಯನ್ನು ಗಮನಿಸುವುದು.
೨. ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಿತಗೊಂಡ ಅಂಶಗಳಿಗೆ ಸಮಾನವಾದ ವಸ್ತುರೂಪದ ವಿವರಗಳು.

ಮೌಖಿಕ ಸಾಹಿತ್ಯದ ಭಾಷಿಕ ಬೆಳವಣಿಗೆಯನ್ನು ಇಟ್ಟುಕೊಂಡು ಚರಿತ್ರೆಯ ಘಟನೆಯ ಕಾಲನಿರ್ಣಯ ಮಾಡುವಂತಾದ್ದು ತುಸು ಕಷ್ಟಕರವೆನಿಸಿದರೂ, ಒಂದು ಪಾಡ್ದನಕ್ಕೂ, ಅದೇ ವಿಷಯವುಳ್ಳ ಹಿಂದಿನ ಪಾಡ್ದನಕ್ಕೂ ಇರುವ ವ್ಯತ್ಯಾಸ ಮತ್ತು ಪಾಡ್ದನಗಳು ಬಳಕೆಯಾದ ಪದಗಳು, ವಿವರಗಳು, ಅರ್ಥವಿನ್ಯಾಸಗಳು ಅಥವಾ ಒಂದು ಘಟನೆಯ ವಿವರಣೆಗಳ ಸಂದರ್ಭಗಳನ್ನೆಲ್ಲ ಗಣನೆಗೆ ತೆಗೆದುಕೊಂಡು ಒಂದು ನಿರ್ಣಯಕ್ಕೆ ಬರಬಹುದು.

ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಿತಗೊಂಡ ಅಂಶಗಳಿಗೆ ಪೂರಕವಾಗಿ ಬರುವ ವಸ್ತುರೂಪದ ವಿವರಗಳನ್ನು ಅಧ್ಯಯನ

* ಉಪನ್ಯಾಸಕ, ಕನ್ನಡ ವಿಭಾಗ, ಎಂ.ಜಿ.ಎಂ. ಕಾಲೇಜು, ಕುಂಜಿಬೆಟ್ಟು, ಉಡುಪಿ - ೫೭೬ ೧೦೨

ಮಾಡಿ ಅವುಗಳ ರೂಪ, ವಿನ್ಯಾಸ, ರಾಚನಿಕ ಬೆಳವಣಿಗೆ, ವೈವಿಧ್ಯಗಳ ಮೂಲಕ ಒಂದು ನಿರ್ದಿಷ್ಟ ನಿರ್ಣಯಕ್ಕೆ ಬಂದು ಖಚಿತವಾದ ಕಾಲನಿರ್ಣಯವನ್ನು ಮತ್ತು ಇನ್ನಿತರ ಸಾಧ್ಯತೆಗಳನ್ನು ಕಂಡುಕೊಳ್ಳುವಂತಾದ್ದು. ಇದಕ್ಕೆ ವೈಜ್ಞಾನಿಕ ರೀತಿಯ ಪರೀಕ್ಷೆಗಳನ್ನು ಕೂಡ ಮಾಡಬೇಕಾಗುತ್ತದೆ.

ಇಂತಹ ಸ್ವರೂಪದ ಅಧ್ಯಯನಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಕೆಲವು ಉದಾಹರಣೆಗಳನ್ನು ನೀಡಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಉಡುಪಿ ಮಧ್ಯದಲ್ಲಿರುವ ಮೂಲ್ಕಿಯ ಪೂರ್ವದಿಕ್ಕಿನಲ್ಲಿರುವ ಕೊಲ್ಲೂರು ಎಂಬುದು ಕಾಂತಬಾರೆ ಹಾಗೂ ಬೂದಬಾರೆ ಎಂಬ ಐತಿಹಾಸಿಕ ಅವಳಿ ವೀರರ ಜನ್ಮಸ್ಥಳ. ಈ ಸ್ಥಳದ ಆಸುಪಾಸಿನಲ್ಲಿ ಈ ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಹಲವಾರು ದಾಖಲೆಗಳು ಸಿಗುತ್ತವೆ.

ಕೊಲ್ಲೂರು, ಕೆಳಗಿನಗುಡ್ಡೆ ಬಾರೆಯರು ಜನ್ಮಕ್ಕೆ ಬಂದ ತಾಣ. ಅವರ ಜನ್ಮಕ್ಕೆ ಕಾರಣವಾದ ರಸಮಯ ಬಾವಿ, ಅವರಿಗೆ ತೊಟ್ಟಿಲು ಕಟ್ಟಿದ ತಾಕಟೆ ವೃಕ್ಷ, ಆ ಕಾಲದ ನ್ಯಾಯ ಚಾವಡಿ, ನಾಗಬ್ರಹ್ಮ ಸ್ಥಾನ, ಬ್ರಹ್ಮಗುಂಡ ಎಂಬ ಪವಿತ್ರ ತೀರ್ಥಸ್ಥಾನ, ಬಾರೆಯರು ರಾತ್ರಿ ಬೆಳಗಾಗುವುದರೊಳಗೆ ನಿರ್ಮಿಸಿದ ಎರಡು ಮುಡಿಗದ್ದೆ, ಅವರೇ ನೆಟ್ಟಿರುವ ದೊಡ್ಡ ಹಲಸಿನಮರ, ಬಾರೆಯರು ಹುಟ್ಟಿದ ಮನೆ, ಅವರು ನಂಬಿದ ದೈವದ ಗುಡಿ, ಅಲ್ಲದೆ ಅವರು ಬಳಸುತ್ತಿದ್ದ ಬಿಲ್ಲು ಬಾಣ ಮೊದಲಾದ ೩೨ ಆಯುಧಗಳು, ಮರದ ಚಿಕ್ಕ ಪೆಟ್ಟಿಗೆ, ಧರಿಸುತ್ತಿದ್ದ ಉಡುಪುಗಳು ಸುರಕ್ಷಿತವಾಗಿವೆ.

ಅವರ ಸಾಹಸದ ಪ್ರತೀಕವಾಗಿ ಮುಲ್ಕಿ ಸೀಮೆಗೆ ಶತ್ರುಗಳು ನುಗ್ಗದಂತೆ ಅಲ್ಲಲ್ಲಿ ಅಗಳು (ಪಾಗಾರ), ಜನೋಪಯೋಗಕ್ಕಾಗಿ ನಿರ್ಮಿಸಿದ ಪುಟ್ಟಬಾವಿ, ಸಿಮಂತೂರು ಎಂಬಲ್ಲಿ ನಿರ್ಮಿಸಿದ ೧೦ ಎಕರೆಯ ಕಂಬಳ ಗದ್ದೆ, ಶಸ್ತ್ರಾಭ್ಯಾಸಕ್ಕಾಗಿ ಪಕ್ಕದ ಸಸಿಹಿತ್ಲಿಗೆ ಹೋದಾಗ ಅಲ್ಲಿನ ಅಗತ್ಯಕ್ಕೆ ತೋಡಿದ ಬಾವಿ, ಬಾವಿಯ ದಂಡೆಯ ಹಾಸುಗಲ್ಲು ಮುಂತಾದ ವಿವರಗಳು ಅವರ ಬಗ್ಗೆ ಇರುವ ಮೌಖಿಕ ಸಾಹಿತ್ಯದಲ್ಲೂ ಇವೆ. ಈಗಲೂ ಆಯಾ ವಿವರಗಳಂತೆ ಅಲ್ಲಿ ಸ್ವಲ್ಪ ಬದಲಾವಣೆಗಳೊಂದಿಗೂ ಇಂದಿಗೂ ಆ ಊರಲ್ಲಿ ಕಾಣಸಿಗುತ್ತವೆ. ಇದಕ್ಕೆ ಪೂರಕವಾಗಿ ಒಂದು ಶಾಸನವೂ ಕೂಡ ಸಿಗುತ್ತದೆ. ಇದು ಮೂಡುಬಿದಿರೆಯ ಕಲ್ಲು ಬಸದಿಯಲ್ಲಿ ಸಿಕ್ಕಿದ ತಾಮ್ರಶಾಸನ. ಮೂಲ್ಕಿ ಸೀಮೆಯ ಬಳ್ಳುಂಜೆ ಮಾಗಣೆಗೆ ಸಂಬಂಧಿಸಿದ್ದಾಗಿದ್ದು, ಚಂಪಕಮಾಲಾ ವೃತ್ತದಲ್ಲಿ ವ್ಯವಹಾರಕ್ಕೆ ಸಾಕ್ಷಿಯಾಗಿ ಬರೆದಂತಹ ಶಾಸನ. ಇದರಲ್ಲಿ ಗುಡ್ಡೆ ಬಿಲ್ಲ ಕಾಂತಣ ಎಂಬ ಉಲ್ಲೇಖವಿದೆ. ಆದ್ದರಿಂದ ಈ ಶಾಸನ ಈ ಅವಳಿ ವೀರರಿಗೆ ಸಂಬಂಧಿಸಿದ್ದು ಎಂದು ತಿಳಿಯಬಹುದು. ಸುಮಾರು ೧೭ನೇ ಶತಮಾನದ ಈ ಶಾಸನವನ್ನು ಡಾ.ಎಸ್.ಡಿ.ಶೆಟ್ಟಿಯವರು ಹೊಂಬುಜದಿಂದ ಪ್ರಕಟಗೊಳ್ಳುವ ಪತ್ರಿಕೆ 'ಗುರುದೇವ'ದಲ್ಲಿ ಪ್ರಕಟಿಸಿರುತ್ತಾರೆ. ಹೀಗೆ ಈ ಎಲ್ಲಾ ಆಕರಗಳು ಅವರ ಕಾಲಘಟ್ಟವನ್ನು ನಿರ್ಣಯಿಸಬಲ್ಲವು. ಅವರ ಉಡುಗೆ ತೊಡುಗೆ, ಆಯುಧಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಅವುಗಳ ಫಲಿತಾಂಶಗಳು ಪೂರಕವಾಗಿದ್ದಾಗ ಈ ರಹಸ್ಯವನ್ನು ಬೇಧಿಸಬಲ್ಲವು.

ಇದೇ ರೀತಿಯಲ್ಲಿ ತುಳುನಾಡಿನ ಇನ್ನಿಬ್ಬರು, ವೀರರೆಂದರೆ ಕೋಟಿಚೆನ್ನಯರು. ಇವರ ಕುರಿತಾದ ಮೌಖಿಕ ಕಾವ್ಯ ಪ್ರಕಟಗೊಂಡಿದೆ. ಇವರು ಬೆಳೆದ, ಓಡಾಡಿದ ಪರಿಸರದಲ್ಲಿ ಅಂದರೆ ಪುತ್ತೂರು ಹಾಗೂ ಸುಬ್ರಹ್ಮಣ್ಯದ ಮಧ್ಯೆ ಎಣ್ಮೂರು. ಪಂಜ, ಪಡುಮಲೆಯಲ್ಲಿ ಈ ಐತಿಹಾಸಿಕ ವೀರರ ಕುರಿತಾಗಿ ಅನೇಕ ಕುರುಹುಗಳು ಸಿಗುತ್ತವೆ.

ಪಡುಮಲೆಯ 'ಕೂವೆತೋಟ' ಎಂಬಲ್ಲಿ ಕೋಟಿಚೆನ್ನಯರ ತಾಯಿ ದೇಯಿ ಬೈದಿತಿ ಹುಟ್ಟಿದ ಮನೆ, ಅವರ ಮಾವನಾದ ಸಾಯನ ಬೈದ್ಯ ವಾಸವಾಗಿದ್ದ ಮನೆ, ಸಾರೋಳಿ ಸೈಮಂಜಕಟ್ಟೆ (ದೇಯಿ ಬೈದಿತಿ ಬೀಡಿಗೆ ಹೋಗಲು ಸಾರೋಟಿಗೆ ಹತ್ತಿದ ಸ್ಥಳ), ಪೆರಾಲು ಬೈಲಿನಲ್ಲಿ ಕೋಟಿ ಚೆನ್ನಯರ ಶತ್ರು, ಮಲ್ಲಯ್ಯ ಬುದ್ಧಿವಂತ ವಾಸಿಸುತ್ತಿದ್ದ ಮನೆಯ ಪಂಚಾಂಗದ ದಿನ್ನೆ, ಬಾವಿ, ಪಡುಮಲೆ ಪೆರುಮಾಳನ ಬೀಡು ಹಾಗೂ ಬಾವಿ, ಪಂಜದಲ್ಲಿ ಅವಳಿ ವೀರರ ಅಕ್ಕ ಕಿನ್ನಿದಾರು ಹಾಗೂ ಭಾವ ಪಯ್ಯಬೈದರ ಮನೆ ಇದೆ. ಹೊರಗೆ ಕೋಟಿ ಚೆನ್ನಯರು ಆಸೀನರಾದ ಪದ್ಮಕಟ್ಟೆಯೂ ಇದೆ. ಕೋಟಿ ಚೆನ್ನಯರಿದ್ದ ಕೇಮರ ಬಲ್ಲಾಳರ ಹಳೆಯಬೀಡು ಇದೆ. ಅಲ್ಲದೆ ಕೋಟಿಚೆನ್ನಯರು ಬಂಧನದಿಂದ ಪಾರಾಗಲು ಬಳಸಿಕೊಂಡ ಸುರಂಗವೂ ಇಲ್ಲಿದೆ ಎಂದು ಸಂಶೋಧಕರು ಹೇಳುತ್ತಾರೆ. ಐವತ್ತೊಕ್ಲು ಮನೆ (ಕೋಟಿಯ ಬೀಡು), ಗಾಯಗೊಂಡ ಕೋಟಿಯನ್ನು ಮಲಗಿಸಿದ ಸ್ಥಳ ಮಂಜೊಲು ಪಾದೆ, ಮಾತ್ರವಲ್ಲದೆ ಈ ವೀರರ ಹೆಸರಲ್ಲಿ, ಅವರು ಓಡಾಡಿದ ಪ್ರದೇಶಗಳಲ್ಲಿ ತುಳುನಾಡಿನಾದ್ಯಂತ ೬ಳಕ್ಕಿಂತಲೂ ಹೆಚ್ಚು ಗರೋಡಿಗಳು (ವ್ಯಾಯಾಮ ಶಾಲೆ ಹಾಗೂ ಆರಾಧನಾ ಸ್ಥಳ) ಇವೆ.

ಸಂಚಾರ ಸಂದರ್ಭದಲ್ಲಿ ಪುತ್ತೂರಿನಲ್ಲಿ ಸನಿಹದ ಬೆಳ್ಳಿಪ್ಪಾಡಿಯ ಹತ್ತಿರ ಕೋಟಿ ಚೆನ್ನಯರ ಹಾಲುಕುಡಿದ ಗರೋಡಿ ಇದೆ. ಇವುಗಳಲ್ಲಿ ಬಹು ಅಂಶಗಳು ಕೋಟಿ ಚೆನ್ನಯ ಪಾಡ್ದನದಲ್ಲೂ ಉಲ್ಲೇಖವಾಗಿದೆ. ಇದಕ್ಕೆ ಹೊರತಾಗಿ ಐತಿಹ್ಯಗಳ ರೂಪದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ -ಗುರುವಾಯನಕೆರೆ

ರಸ್ತೆಯಲ್ಲಿ ರೊಟ್ಟಿ ಮಾಡಲು ಅಕ್ಕಿಯನ್ನು ಅರೆದ ಕಲ್ಲು ಬೃಹದಾಕಾರ ಕಾಣಸಿಗುತ್ತದೆ.

ಮುಲ್ಕಿ ಸಮೀಪದ ಹೆಜಮಾಡಿಯ ಬಸ್ತಿಪಡ್ಡು ಎಂಬಲ್ಲಿ ಕಾಂತಬಾರೆ-ಬೂದಬಾರೆ ಹಾಗೂ ಕೋಟಿ ಚೆನ್ನಯರಿಗೆ ಯುದ್ಧವಾಯಿತು ಎಂಬುದಕ್ಕೆ ಸಾಕ್ಷಿಯಾಗಿ ಬಹಳ ದೊಡ್ಡ ಮೈದಾನವಿದೆ. ಆದರೆ ಇವುಗಳು ಪಾಡ್ದನಗಳಲ್ಲಿ ಉಲ್ಲೇಖನ ವಾಗಿಲ್ಲ. ಇಲ್ಲಿಯೂ ಐತಿಹ್ಯರೂಪ ಪಡೆದಿರುವ ಈ ಅಂಶಗಳು, ಪಾಡ್ದನಗಳಲ್ಲಿ ಉಲ್ಲೇಖಿತವಾಗಿರುವ ಈ ಕುರುಹುಗಳು ಮತ್ತು ಅವುಗಳು ಇಂದಿಗೂ ಉಳಿದುಕೊಂಡಿದ್ದಾಗ ಅವುಗಳನ್ನೆಲ್ಲ ಇಟ್ಟುಕೊಂಡು, ಕಾಂತಬಾರೆ-ಬೂದಬಾರೆಯರ ಜೊತೆಗೆ ನಡೆದಿರಬಹುದು ಎನ್ನಲಾದ ಯುದ್ಧ, ಇವೇ ಮುಂತಾದವುಗಳನ್ನು ಬಳಸಿಕೊಂಡು ಈ ಎರಡೂ ಅವಳಿ ವೀರರ ಕಾಲ ಒಂದೇ ಎಂದು ಭಾವಿಸಲೂ ಬಹುದು. ಜೊತೆಗೆ ಸಮಗ್ರವಾಗಿ ಚರಿತ್ರೆಯನ್ನು ಕಟ್ಟಿಕೊಡಲು ಮೇಲೆ ಹೇಳಿದ ಆಕರಗಳು ಸಹಾಯ ಮಾಡಬಲ್ಲುದು.

ತುಳುನಾಡಿನ ಇನ್ನೊಬ್ಬ ವೀರನೆಂದರೆ ಅಗೋಳಿ ಮಂಜಣ. ಇವನು ಕಾಂತಬಾರೆ-ಬೂದಬಾರೆ, ಕೋಟಿ ಚೆನ್ನಯರಂತೆ ಜನಪದರಿಂದ ಆರಾಧನೆಗೊಳ್ಳುವುದಿಲ್ಲ. ಬದಲಾಗಿ ಪಾಡ್ದನಗಳಲ್ಲಿ, ಐತಿಹ್ಯಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾನೆ. ಮುಲ್ಕಿಯ ಅರಸು ಕಂಬಳ ನಿರ್ಮಾಣ, ಏರ್ಮಾಳು ದೇವಾಲಯ ಪರಿಸರದಲ್ಲಿ ಗಲಾಟೆ ಮಾಡಿ ಅಲ್ಲಿನ ದೇವಾಲಯದ ದಂಬೆಕಲ್ಲನ್ನು ಮುಲ್ಕಿಯ ಬಪ್ಪನಾಡು ದೇವಾಲಯಕ್ಕೆ ತಂದು ಹಾಕಿದ ಉಲ್ಲೇಖವಿದೆ. ಈ ಉಲ್ಲೇಖಗಳನ್ನು ಪ್ರತ್ಯಕ್ಷವಾಗಿಯೂ ಕಾಣಬಹುದು.

ಹೀಗೆಯೇ ದಕ್ಷಿಣ ಕನ್ನಡ ಜಿಲ್ಲೆಯುಲ್ಲಿ ಸಾಕಷ್ಟು ಜನಪ್ರಿಯವಾಗಿರುವ ಸಿರಿ ಮತಾಚರಣೆ ಕುರಿತಂತೆ, 'ಸಿರಿ' ಎನ್ನುವ ಮಹಿಳೆ ಅತಿಮಾನುಷ ಸ್ತ್ರೀಯಾಗಿರುವ ಹಿನ್ನೆಲೆಯಲ್ಲಿ, ಅವಳ ಬಗ್ಗೆ ಇರುವ ಪಾಡ್ದನದಲ್ಲಿ ವರ್ಣಿತವಾದಂತೆ, ಕೆಲವು ಪ್ರದೇಶಗಳು, ಮರಗಳು, ಕೆರೆ, ಹಾಸುಗಲ್ಲುಗಳೇ ಸಿಗುತ್ತವೆ. ಆದರೆ ಉಳಿದ ವೀರರ ಕುರಿತಾಗಿ ಸಿಗುವ ಭೌತಿಕ ದಾಖಲೆಗಳು ಇವಳ ಬಗ್ಗೆ ಸಿಗುವುದಿಲ್ಲ. ಆದ್ದರಿಂದ ಇವಳ ಕಾಲವನ್ನು ಯಾ ಇನ್ನಿತರ ವಿಚಾರಗಳನ್ನು ನಿಗದಿಗೊಳಿಸುವುದು ಸಾಧ್ಯವಿಲ್ಲ.

ಇದೇ ರೀತಿ ಕಲ್ಕುಡ ಕಲ್ಲುರ್ಟಿ, ಪುಳ್ಳೂರು ಬಾಚ ಹಾಗೆಯೇ ಉಡುಪಿಯ ಪಳಪಚನಾಯಕ ಮುಂತಾದ ಅನೇಕ ಐತಿಹಾಸಿಕ ವೀರರು ಇದ್ದಾರೆ. ಉಡುಪಿಯ ಪಳಪಚನಾಯಕ ಒಬ್ಬ ಮಹಾನ್ ಸಮಾಜಸೇವಕ. ಇವನ ಬಗ್ಗೆ ಕುಂಬ್ರಗೋಡು ನಾಯಕ ಮಠದಲ್ಲಿ ಗೋಮಾಳ ರಚನೆಗಾಗಿ ಇವನಿಗೆ ಉಂಬಳಿ ಕೊಟ್ಟ ಬಗ್ಗೆ ಆಳುಪ ಶಾಸನವೊಂದನ್ನು ಬ್ರಹ್ಮಾವರದ ಇತಿಹಾಸದಲ್ಲಿ ಡಾ.ಬಿ.ವಸಂತ ಶೆಟ್ಟಿಯವರು ಗುರುತಿಸುತ್ತಾರೆ.

ಎಲ್ಲಾ ವೀರರ ಕುರಿತಾಗಿ ಶಾಸನಾತ್ಮಕ ದಾಖಲೆಗಳೇ ಸಿಗುವುದಿಲ್ಲ. ಆದರೆ ಸಾಮಾನ್ಯವಾಗಿ ಪಾಡ್ದನ ಯಾ ಕಾವ್ಯಗಳಲ್ಲಿ ಉಲ್ಲೇಖಿತವಾದ ಐತಿಹ್ಯಗಳು ಮತ್ತು ಇತರೇ ಐತಿಹ್ಯಗಳು ಜನರ ಆಡುನುಡಿಯಲ್ಲಿ ಸಿಗುತ್ತವೆ. ಆದರೆ ಇವುಗಳಲ್ಲಿ ಉಲ್ಲೇಖಿತ ವಾಗಿರುವ ಭೌತಿಕರೂಪದ ಪಳೆಯುಳಿಕೆಗಳು ಇಂದು ಎಲ್ಲೆಡೆ ಅಸ್ವಸ್ಥರೂಪದಲ್ಲಿವೆ ಮತ್ತು ಬೇರೆ ಬೇರೆ ಕಾರಣಗಳಿಗೋಸ್ಕರ ನಶಿಸಿಹೋಗುತ್ತಿವೆ. ಮಾನವರಲ್ಲಿ ನಂಬಿಕೆ, ಭಕ್ತಿ, ಜಾಗೃತಿಗಳ ಬಗ್ಗೆ ಆಸಕ್ತಿ ಕಡಿಮೆಯಾದಂತೆ ಅವುಗಳನ್ನು ಕಾಪಾಡುವ ಚಿಂತನೆಗಳೂ ಕಡಿಮೆಯಾಗಬಹುದು. ಜಾನಪದ ವಿದ್ವಾಂಸರು ಮೌಖಿಕ ಸಾಹಿತ್ಯ ಸಂಗ್ರಹಣೆಯ ಸಂದರ್ಭದಲ್ಲಿ ಈ ಕುರಿತಾಗಿ ಉಲ್ಲೇಖಿಸಿದರೂ ವಿಸ್ತೃತ ಅಧ್ಯಯನವಾಗಲೀ, ಅವುಗಳನ್ನು ಪ್ರಮುಖ ಆಕರವೆಂದು ಬಳಸಿಕೊಂಡಾದ್ದಾಗಲೀ ಕಾಣುವುದಿಲ್ಲ. ಭೌತಿಕ ಆಕರಗಳನ್ನು ವೈಜ್ಞಾನಿಕ ಪರೀಕ್ಷೆಗೆ (Forensic Test) ಒಳಪಡಿಸಿ, ಅವುಗಳೆಲ್ಲ ಎಷ್ಟು ಕಾಲದ ಹಿಂದೆ ರಚಿತವಾದುವು ಎಂಬುದನ್ನು ಕಂಡುಕೊಳ್ಳುವ ಅಗತ್ಯ ಇದೆ. ಪುರಾತತ್ವದ ನೆಲೆಯಲ್ಲಿ ಇವುಗಳನ್ನು ಚರ್ಚಿಸಿದಾಗ ಇತಿಹಾಸ ರಚನೆಗೆ ಸಮಗ್ರತೆಯೂ, ಪರಿಪಕ್ವತೆಯೂ ಬರುತ್ತದೆ. ಈ ರೀತಿಯ ಅಂತರ್‌ಶಿಸ್ತೀಯ ಸಂಶೋಧನೆ ಭಾಷಿಕ, ಸಾಮಾಜಿಕ, ಭೌತಿಕ, ಮೌಖಿಕ, ಕಾಲ ನಿರ್ಣಯದ ಹಿನ್ನೆಲೆಯಲ್ಲಿ ನಡೆದಾಗ ಪ್ರಾದೇಶಿಕ ಇತಿಹಾಸದಲ್ಲಿ ವೈರುಧ್ಯ ಕಂಡುಬರದು. ಹಾಗೆ ಆಗಬೇಕಾದರೆ ಇವೆಲ್ಲವೂ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ, ಸಮರ್ಪಕಗೊಳಿಸುವಲ್ಲಿ ಪ್ರಮುಖ ಆಕರಗಳೆಂಬ ನಂಬಿಕೆ ಸಂಶೋಧಕರಲ್ಲಿರಬೇಕು. ಈ ಬಗ್ಗೆ ಅಧ್ಯಯನ ಸಾಧ್ಯವಾದಾಗ ಮಾತ್ರ ಜನಕೇಂದ್ರಿತ ಸಾಂಸ್ಕೃತಿಕ ಚರಿತ್ರೆ ಸ್ಪಷ್ಟತೆ ಯನ್ನು ಪಡೆದುಕೊಳ್ಳುತ್ತದೆ.

(ಸಹಕಾರ : ಶ್ರೀ. ಪು. ಶ್ರೀನಿವಾಸ ಭಟ್ಟ, ಕಟೀಲ, ಡಾ. ಎಸ್.ಡಿ.ಶೆಟ್ಟಿ ಉಜಿರೆ, ಡಾ.ಬಿ. ಜಗದೀಶ ಶೆಟ್ಟಿ, ಉಡುಪಿ ಶ್ರೀ ವಲಿಧ್ಯ ಮೂಡುಬೆಳ್ಳೆ ಹಾಗೂ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಹಕರಿಸಿದ ಎಲ್ಲಾ ವಕ್ತೃಗಳ ಸಹಕಾರವನ್ನು ನೆನೆಯುತ್ತೇನೆ.)

ಡಾ. ಎಚ್.ಎಸ್. ಉಷಾರಾಣಿ*

ಗಜಬೇಂಟೆಕಾರ - ಒಂದು ಪರಿಶೀಲನೆ

ಪ್ರಾಚೀನ ಕಾಲದಿಂದಲೂ ಆನೆಗಳನ್ನು ಯುದ್ಧಗಳಲ್ಲಿ, ಮೆರವಣಿಗೆಗಳಲ್ಲಿ, ಉತ್ಸವಗಳಲ್ಲಿ, ಮರದ ದಿಮ್ಮಿಗಳನ್ನು ಸಾಗಿಸಲು ಬಳಸುವುದು ಸಂಪ್ರದಾಯ. ಆನೆಗಳನ್ನು ಹಿಡಿಯುವುದು ಸಾಹಸಕ್ರೀಡೆ ಹಾಗೂ ಮನರಂಜನೆಯೂ ಹೌದು. ಈ ದಿಸೆಯಲ್ಲಿ ರಾಜಮಹಾರಾಜರು ಆಸಕ್ತಿವಹಿಸುತ್ತಿದ್ದುದು ಸಹಜ. ಹಾಗಾಗಿ ಗಜಾರಣ್ಯ ಕ್ಷೇತ್ರದಲ್ಲಿ ಉದಯಿಸಿದ ತಲಕಾಡಿನ ಗಂಗರು ಮೊದಲ್ಗೊಂಡು ಮೈಸೂರು ಅರಸರ ಕಾಲದವರೆಗೆ. ಆನೆಯ ಬೇಟೆಯಲ್ಲಿ ಆಸಕ್ತಿವಹಿಸಿದವರು ಕೃತಿಗಳನ್ನು ರಚಿಸಿರುವರಲ್ಲದೆ, ಬಿರುದನ್ನು ಧರಿಸಿರುವರು. ಉದಾಹರಣೆಗೆ ಗಂಗ ಶ್ರೀ ಪುರುಷನ ಗಜಶಾಸ್ತ್ರ, ಶಿವಮಾರನ ಗಜಾಷ್ಟಕ ಡಾಲಾಕಾಪ್ಯನ ಹಸ್ತ್ಯಾಯುರ್ವೇದವನ್ನು ಹೆಸರಿಸಬಹುದು. ವಿಜಯನಗರದ ಪ್ರೌಢದೇವರಾಯ ಗಜಬೇಂಟೆಕಾರ ಎಂಬ ಬಿರುದು ಧರಿಸಿದ್ದನೆಂದು ಶಾಸನಗಳಿಂದ ವಿಶೇಷವಾಗಿ ತಿಳಿದುಬರುತ್ತದೆ. ಅದೇ ರೀತಿ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಶಾಸನಗಳು ಉಮ್ಮತ್ತೂರಿನ ಪಾಳೆಯಗಾರರು, ಆನೆಯ ಬೇಟೆಯರಾಯರೆಂದೂ, ಗಜಮೃಗಯಾ ವಿಹಾರ ವಿಖ್ಯಾತರೆಂದು ದಾಖಲಿಸುತ್ತವೆ. ಕೊಡಗು ಜಿಲ್ಲೆಯನ್ನಾಳಿದ ರಾಜರು ದುಷ್ಟನಿಗ್ರಹ ಶಿಷ್ಟ ಪರಿಪಾಲನೆ ರಾಜಧರ್ಮ ಎಂಬ ತತ್ವವನ್ನು ಗಮನದಲ್ಲಿಟ್ಟುಕೊಂಡು ಮದಗಜಗಳನ್ನು ಸೆರೆಹಿಡಿದುದನ್ನು ಮಡಿಕೇರಿ ಶಾಸನಗಳಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಸ್ತುತ ಪ್ರಬಂಧ ಲಭ್ಯವಿರುವ ದಾಖಲೆಗಳನ್ನು ಆಧರಿಸಿ ಆನೆಗಳನ್ನು ಹಿಡಿಯುವ ಕ್ರಮವನ್ನು ಪರಿಶೀಲಿಸಲು ಸೀಮಿತವಾಗಿದೆ.

ಗಜಶಾಸ್ತ್ರ ಕೃತಿಯಲ್ಲಿ ಆನೆಗಳನ್ನು ಹಿಡಿಯಲು ಐದು ವಿಧಗಳನ್ನು ಸೂಚಿಸಲಾಗಿದೆ ಅವು ಯಾವುವೆಂದರೆ ವಾರಿಬಂಧ, ವಶಾಬಂಧ, ಅನುಗತಬಂಧ, ಅಪಾತಗ್ರಹ ಮತ್ತು ಅವಪಾತ ಗ್ರಹ. ಈ ತಂತ್ರಗಳನ್ನು ವಿಶ್ಲೇಷಿಸಿದಾಗ ಅನುಕೂಲಕರ ಕ್ರಮಗಳನ್ನು ಅಳವಡಿಸಿಕೊಳ್ಳಲಾಗುತ್ತಿತ್ತೆಂದು ವೇದ್ಯವಾಗುತ್ತದೆ. ಅದರಂತೆ, ಜಲವಸತಿಗಳಲ್ಲಿ ಆನೆಗಳು ನಡೆದಾಡುವ ಸ್ಥಳ ನೋಡಿ, ಅಲ್ಲಿ ಸೊಂಪಾದ ಮೇವನ್ನು, ಬಾಳೆಕಂದು, ಕಬ್ಬಿನ ಜಲ್ಲೆ, ತಾವರೆಗಡ್ಡೆ, ಮೊರಬೆ ಗಿಡ, ಅರಳಿ ಎಲೆ, ಬಿದಿರಿನ ಕುಡಿ ಹಾಗೂ ಆನೆಗಳಿಗೆ ಪ್ರಿಯವಾದ ಇತರ ಮೇವನ್ನು ಒಂದೆಡೆ ಹಾಕಲಾಗುತ್ತದೆ. ಹಸಿಮೇವಿನ ಆಸೆಯಿಂದ ಪ್ರತಿದಿನ ಆನೆಗಳ ಹಿಂಡು ಅಲ್ಲಿಗೆ ಬರುವುದು ಸಾಧ್ಯ. ಆಗ ಆ ದಾರಿಯನ್ನು ಅಡ್ಡಗಟ್ಟಬೇಕು. ವಿಸ್ತಾರವಾಗಿರುವ ಭೂ ಪ್ರದೇಶವನ್ನು ಮರಗಳಿಂದಲೋ, ಬೇಲಿಗಳಿಂದಲೋ ಸುತ್ತುಗಟ್ಟಬೇಕು. ಆನೆಗಳ ಪ್ರವೇಶಕ್ಕೆ ತಕ್ಕುದಾದ ಬಾಗಿಲನ್ನು ಮಾಡಿಸಬೇಕು. ಆನೆಗಳ ಪ್ರವೇಶಿಸುವಿಕೆ ಖಚಿತವಾದುದೇ ತಡ ಭಾರಿ ಮರಗಳಿಂದ ವಾರಿದ್ವಾರವನ್ನು ಮುಚ್ಚಿ ಒಳ ಸೇರಿದ ಆನೆಗಳನ್ನು ಬಂಧಿಸುವ ಕ್ರಮವನ್ನು 'ವಾರಿಬಂಧ' ಎಂದು ಕರೆಯಲಾಗಿದೆ.

ಹೆಣ್ಣಾನೆಗಳ ಸಹಾಯದಿಂದ ಹಿಡಿಯುವ ಕ್ರಮ ಮತ್ತೊಂದು. ಈ ಕ್ರಮದಲ್ಲಿ ಐದಾರು ಹೆಣ್ಣಾನೆಗಳ ಹೊಟ್ಟೆಗೆ ಚರ್ಮದ ಬಟ್ಟೆಗಳನ್ನು ಹೊದಿಸಿ ಅದರೊಳಗೆ ಪಾಶಾದಿ ಶಸ್ತ್ರಗಳಿಂದ ಸಿದ್ಧರಾದ ಆನೆ ಹಿಡಿಯುವವರು ಕುಳಿತಿರಬೇಕು. ಗಂಡಾನೆಗಳಿರುವ ಗುಂಡಿನೆಡೆಗೆ ಹೆಣ್ಣಾನೆಗಳನ್ನು ಒಯ್ಯಬೇಕು. ಆಕರ್ಷಿತವಾದ ಗಂಡಾನೆಗಳು ಹತ್ತಿರ ಬಂದಾಗ ಅವನು ಹಿಡಿಯಬೇಕು. ಇದನ್ನು ಮತ್ತೊಂದು ರೀತಿಯಲ್ಲಿ ವರ್ಣಿಸಲಾಗಿದೆ. ಅದು ಹೇಗೆಂದರೆ ಏಳೆಂಟು ಭಾರಿ ಗಾತ್ರದ ಚುರುಕು ನಡಿಗೆಯ ಅಂಕೆಯಲ್ಲಿನ ಪಳಗಿದ ಹೆಣ್ಣಾನೆಗಳನ್ನು ಮಾವಟಿಗರು ಪತ್ರ ಸಂಛನ್ನರಾಗಿ ಪಾಶಹಸ್ತರಾಗಿ ಏರುವುದು. ಏರಿದ ಹೆಣ್ಣಾನೆಗಳ ಸೊಂಡಿಲುಗಳಲ್ಲಿ ಆನೆಗಳನ್ನು ಕಟ್ಟುವ ಸಲುವಾಗಿ ಪಾಶಗಳನ್ನು ಕೊಡುವುದು. ಕಿಗ್ಗಾಳಿಯಲ್ಲಿ ಮೆಲ್ಲನೆ ಸಾಗಿ ಆನೆಗಳತ್ತ ಬರುವುದು. ಹಾಗೆ ಒಂದು ಆನೆಗಳೊಂದಿಗೆ ಪಳಗಿದ ಹೆಣ್ಣಾನೆಗಳನ್ನು ಸಂಘಟಿಸಿ ಆನೆಗಳನ್ನು ಕಟ್ಟುವುದು 'ವಶಾಬಂಧ' ಕ್ರಮ.

ಹೆಣ್ಣಾನೆಯ ಮೋಹದಿಂದ ಅನುಸರಿಸುವ ಗಂಡಾನೆಯನ್ನು ಹಿಡಿಯುವುದು ಇನ್ನೊಂದು ವಿಧ. ಅದರಂತೆ ಬೇಸಿಗೆಯ ಬೆಳಗಿನ ಜಾವ ನಿದ್ರಾವಶವಾಗಿರುವ ಆನೆಗಳ ಹಿಂದಿನ ಬಳಿಗೆ ಸಾಗಿ, ಜನ ಜಂಗುಳಿಯ ಸದ್ದುಗದ್ದಲವನ್ನು ತಪ್ಪಿಸಿ ಕೊಂಬು ಕಹಳೆಗಳನ್ನು ಮೊಳಗಿಸಬೇಕು. ಗಾಬರಿಯಿಂದ ಬೆಚ್ಚಿ ನಿದ್ದೆಯಿಂದೆಚ್ಚತ್ತ ಆನೆಗಳ ಹಿಂಡು ಥಟ್ಟನೆ ಪಲಾಯನ ಮಾಡಲು ಸಿದ್ಧವಾಗುತ್ತವೆ. ಆಗ ಅದನ್ನು ವಾರಿಬಂಧ ತಜ್ಞರು ಹಿಂಬಾಲಿಸಬೇಕು. ಹೆದರಿ ಓಡಿದ ಆನೆಗಳಲ್ಲಿ ಹಿಂಡುಬಿಟ್ಟು ಸಲಗವೊಂದು ಬೇರೆಯಾಗಿ ಓಡಬಹುದು. ಬಾಯಾರಿ ಬಳಲಿ ನೀರಿನ ತಾಣಕ್ಕೆ ಬಂದಾಗ ಕೊಂಬು ಕಹಳೆಯ ಧ್ವನಿ ಕೇಳಿ ಮತ್ತೊಂದು ದಿಕ್ಕಿಗೆ ಓಡತೊಡಗಿ ಬಳಲಿದಾಗ

* ೪೩೨, 'ಇ' ಬ್ಲಾಕ್, ಜೆ. ಸಿ. ನಗರ, ಮೈಸೂರು - ೫೭೦ ೦೦೮

ಮಾವುತರ ಅಂಕೆಯಲ್ಲಿರುವ ವೇಗಶಾಲಿ ಹೆಣ್ಣಾನೆಗಳು ಆ ಸಲಗವನ್ನು ಸುತ್ತುವರಿದು ನಿಲ್ಲುತ್ತವೆ. ಆಗ ಚರ್ಮದಿಂದ ಮಾಡಿದ ಕೋಳಗಳಿಂದ ಆನೆಯ ಕುತ್ತಿಗೆಯನ್ನು ಬಂಧಿಸಿ ಹತ್ತಿರದ ಮರದ ಕಾಂಡಕ್ಕೆ ಬಿಗಿದು ಕಟ್ಟುವುದು 'ಅನುಗತ ಬಂಧ' ಎನಿಸಿದೆ.

ಆನೆಯನ್ನು ಆಹಾರದ ಆಕರ್ಷಣೆಯಿಂದ ಸೆಳೆದು ಕಟ್ಟಿ ಹಾಕುವ ಕ್ರಮ ಹೀಗಿದೆ. ತಾವರೆದಂಟು, ಬಿದಿರು, ಬಾಳೆ ಬಿಳಿಯ ಕಬ್ಬಿನ ಜಲ್ಲೆ ಮೊದಲಾದುವನ್ನು ಬಲವಾದ ಮರಕ್ಕೆ ಹಗ್ಗದಿಂದ ಗಟ್ಟಿಯಾಗಿ ಕಟ್ಟಿ, ಅದಕ್ಕೆ ಕಾವಲಿಟ್ಟು, ಆನೆಗಳು ತಿನ್ನಲು ಬರುವ ಸಮಯದಲ್ಲಿ ಅದನ್ನು ಕೂಡಲೇ ಹಗ್ಗಗಳಿಂದ ಬಿಗಿಯಾಗಿ ಬಂಧಿಸುವುದು 'ಅಪಾತ ಗ್ರಹ' ಎಂದು ಕರೆಯಲ್ಪಟ್ಟಿದೆ.

ಮಣ್ಣು ಮುಚ್ಚಿದ ಆಳವಾದ ಹಳ್ಳಗಳಿಗೆ ಬೀಳುವ ಹಾಗೆ ಮಾಡಿ ಬಂಧಿಸುವುದು 'ಅವಪಾತಬಂಧ ಅಥವಾ ಅವಪಾತಗ್ರಹ' ಎನಿಸುತ್ತದೆ. ಇಲ್ಲಿ ಹಳ್ಳಗಳು ನಾಲ್ಕು ಹಸ್ತಗಳಷ್ಟು ಆಳವೂ, ಎರಡು ಹಸ್ತಗಳಷ್ಟು ಅಗಲವೂ, ಐದು ತೋಳುಗಳಷ್ಟು ಉದ್ದವೂ ಆಗಿದ್ದು ಅದನ್ನು ಕಡ್ಡಿ, ಹುಲ್ಲು, ಚಿಗುರುಗಳಿಂದ ಮುಚ್ಚಿರಬೇಕು. ಅದರ ಮೇಲೆ ಮಣ್ಣು ಹರಡಬೇಕು ಎಂದು ತಂತ್ರಗಳನ್ನು ಅಳವಡಿಸಲಾಗಿದೆ.

ಕೊಡಗು ಜಿಲ್ಲೆ ಅರಣ್ಯದಿಂದಾವೃತ ಪ್ರದೇಶ. ಕೊಡಗನ್ನಾಳಿದ ೨ನೇ ಲಿಂಗರಾಜೇಂದ್ರ ಮತ್ತು ಆತನ ಪುತ್ರ ಚಿಕ್ಕ ವೀರರಾಜೇಂದ್ರರು ಅಧಿಕಾರದಲ್ಲಿದ್ದಾಗ ನಡೆಸಿದ ಗಜಬೇಟೆಯು ಗಮನಾರ್ಹ. ಮಡಿಕೇರಿ ಶಾಸನದ[3] ಪ್ರಕಾರ, **ದುಷ್ಟನಿಗ್ರಹ ಶಿಷ್ಟ ಪರಿಪಾಲನೆ ರಾಜಧರ್ಮ** ಎಂಬ ತತ್ವವನ್ನು ಗಮನದಲ್ಲಿಟ್ಟು ಕೊಂಡು ಮದಗಜಗಳನ್ನು ಸೆರೆಹಿಡಿದುದನ್ನು ಉಲ್ಲೇಖಿಸಲಾಗಿದೆ. ಸಪಾರ್ಚಿತಾಸ್ತ್ರ ಆಯುಧದಿಂದ ಗಜಗಳನ್ನು ನಿಗ್ರಹಿಸಲಾಯಿತೆಂದು ದಾಖಲಿಸಲಾಗಿದ್ದರೂ ಬೇಟೆಯ ವೈಖರಿಯ ವರ್ಣನೆ ಇಲ್ಲ. ಆದರೆ ಚಿಕ್ಕ ವೀರರಾಜೇಂದ್ರನ ಆಳ್ವಿಕೆಯಲ್ಲಿ ೧೮೩೦ರಲ್ಲಿ ಕೊಡಗಿಗೆ ಭೇಟಿ ನೀಡಿದ್ದ ಡಾ. ಜಫರ್‌ಸನ್ ಆನೆಯ ಬೇಟೆಯ ವೈಖರಿಯನ್ನು ತನ್ನ ಪತ್ರದಲ್ಲಿ[4] ದಾಖಲಿಸುವುದು ಹೀಗಿದೆ. "ಬೇಟೆಯಾಡುವ ಸ್ಥಳದ ಸುತ್ತ ಸುಮಾರು ದೂರ ಕಾಡು ಕಡಿದಿದ್ದು, ಮಧ್ಯದಲ್ಲಿ ಎರಡು ದೊಡ್ಡ ಮರಗಳಿಗೆ ನೆಲದಿಂದ ಸುಮಾರು ೨೦-೩೦ ಅಡಿ ಎತ್ತರದಲ್ಲಿ ಬೆತ್ತದ ತೊಟ್ಟಿಲುಗಳಂತಿರುವ ಆಸನಗಳನ್ನು ಬಲವಾದ ಹಗ್ಗಗಳಿಂದ ಮರಗಳಿಗೆ ಕಟ್ಟಿದ್ದರು. ಆ ಆಸನಗಳಿಗೆ ಬೆತ್ತದ ಏಣಿಗಳ ಮೇಲೆ ಏಣಿಗಳನ್ನು ಮರಗಳಿಗೆ ಅಳವಡಿಸಲಾಗಿತ್ತು. ರಾಜನೂ, ಕ್ಯಾಪ್ಟನ್ ಹಿಲ್ ಮತ್ತು ನಾನು ಏಣಿಗಳ ಮೇಲೆ ಏರಿ ಆಸನಗಳಲ್ಲಿ ಕುಳಿತುಕೊಂಡೆವು. ಹಸಿರು ಬಣ್ಣದ ಬೇಟೆಯ ಸಮವಸ್ತ್ರ ಉಡುಪುಗಳನ್ನು ಧರಿಸಿ ಮದ್ದು ತುಂಬಿದ ಎಲ್ಲಾ ವಿವಿಧವಾದ ಕೋವಿಗಳನ್ನು ಹೊತ್ತುಕೊಂಡು ರಾಜನ ಪರಿಚಾರಕರು ಏಣಿಗಳ ಮೂಲಕ ಏರಿ ನಮ್ಮ ಆಸನಗಳ ಹಿಂದೆ ಅವಿತುಕೊಂಡಿದ್ದರೂ ರಾಜನು ಅತ್ಯುತ್ತಮ ಗುರಿಗಾರನಾಗಿದ್ದರೂ, ಆ ದಿನದ ಬೇಟೆಯಲ್ಲಿ ತಾನು ಪ್ರೇಕ್ಷಕನಾಗಿರುವೆನೆಂದು ಮೃಗಗಳ ಶಿಕಾರಿಯನ್ನು ನಮಗೆ ಬಿಟ್ಟ. ಆತನ ಬೇಟೆಗಾರರಿಗೂ ಮತ್ತು ಇತರ ಜನರಿಗೂ ತಮಗೆ ರಕ್ಷಣೆಗಲ್ಲದೆ ಯಾವ ಮೃಗಕ್ಕೂ ಗುಂಡು ಹೊಡೆಯಬಾರದೆಂದು ಕಟ್ಟಪ್ಪಣೆ ಮಾಡಿದ್ದ. ಮೃಗಗಳಿಗೋಸ್ಕರ ಸಂಜೆಯವರೆಗೂ ಕಾಯುತ್ತ ಕುಳಿತೆವು. ಆ ಅವಧಿಯಲ್ಲಿ ರಾಜನು ದಟ್ಟಕಾಡುಗಳಲ್ಲಿ ತಾನು ಎದುರಿಸಿದ ಅಪಾಯಗಳನ್ನು, ಅವುಗಳನ್ನು ತಪ್ಪಿಸಲು ತೋರಿಸಿದ ಸಾವಧಾನ ಮತ್ತು ನಿರ್ಧಾರಗಳನ್ನು ವಿವರಿಸುತ್ತಿದ್ದು ಸಮಯ ಕಳೆಯಿತು. ಆತನ ಕಥೆಗಳಿಂದ ಬೇಟೆ ಆನಂದವನ್ನು ಉಂಟು ಮಾಡುತ್ತಿದ್ದಾದರೂ ಅಂಗಾಂಗಳಿಗೆ ಹಾನಿಯಾಗುವ ಸಂದರ್ಭಗಳೂ ಒದಗುತ್ತವೆಂಬುದು ತಿಳಿಯಿತು.

ಆ ದಿನದ ಬೇಟೆಗೆ ಐದು ಸಾವಿರ ಬೇಟೆಗಾರರು ಹಾಗೂ ಇತರ ಜನರು ನೇಮಿಸಲ್ಪಟ್ಟಿದ್ದರು. ಗುಂಡುಗಳ ಶಬ್ದ, ಕೊಂಬುಗಳ ಕೂಗು, ಡೋಲುಗಳ ಬಡಿತ, ಜನರ ಬೊಬ್ಬೆ, ಕಿರುಚಾಟ ಮತ್ತು ಮೃಗಗಳ ಗರ್ಜನೆಯೊಂದಿಗೆ ಬೇಟೆ ಪ್ರಾರಂಭವಾಯಿತು. ಈ ದೃಶ್ಯ ಮನಸ್ಸಿಗೆ ಬಹಳ ಉದ್ವೇಗಕರವಾಗಿತ್ತು. ಆನೆಗಳನ್ನು ಮಾತ್ರ ಹೊಡೆದುರುಳಿಸಬೇಕೆಂದು ಅದಕ್ಕೋಸ್ಕರ ಬೇರೆ ಮೃಗಗಳಿಗೆ ಗುಂಡು ಹೊಡೆಯಬಾರದೆಂದು ಸೂಚಿಸಲಾಗಿತ್ತು. ಬಂದ ಹನ್ನೆರಡು ಆನೆಗಳಲ್ಲಿ ಒಂದು ಅಸಾಧಾರಣ ರೂಪಿನಿಂದ ಕೂಡಿದ್ದು ಬಹಳ ದೊಡ್ಡದಾಗಿತ್ತು. ಆ ಆನೆಯನ್ನು ಜೀವಸಹಿತ ಹಿಡಿಸಿ ಗವರ್ನರ್ ಜನರಲ್‌ನಿಗೆ ಬಹುಮಾನ ಕೊಡುವ ಇಚ್ಛೆ ವ್ಯಕ್ತಪಡಿಸಿದುದರಿಂದ ಉಳಿದ ಆನೆಗಳನ್ನು ಗುರಿ ಇಟ್ಟು ರೈಫಲ್‌ನಿಂದ ಉರುಳಿಸಲಾಯಿತು. ನಾಲ್ಕು ಕ್ಯಾಪ್ಟನ್ ಹಿಲ್‌ನ ಗುಂಪಿಗೆ ಬಲಿಯಾದರೆ, ಆರು ನನ್ನ ರೈಫಲ್‌ಗೆ ಬಿದ್ದವು. ಉದ್ದೇಶಿಸಿದ ಆನೆಯನ್ನು ಸೆರೆಹಿಡಿಯುವ ಸಲುವಾಗಿ ಆನೆಯ ಕಾಲುಗಳಿಗೆ ಹಗ್ಗಗಳನ್ನು ಸುತ್ತಲು ತರಬೇಕಾಗಿದ್ದು ಸುಮಾರು ಮೂವತ್ತು ಪಳಗಿದ ಆನೆಗಳು ಈ ದೊಡ್ಡ ಆನೆಯನ್ನು ಸುತ್ತು ಗಟ್ಟಿ ಅದರ ಕಾಲುಗಳಿಗೆ ಹಗ್ಗಗಳನ್ನು ಸುತ್ತಿದವು. ನಂತರ ವಾದ್ಯ ಬಾರಿಸಿಕೊಂಡು ಮೆರವಣಿಗೆಯಲ್ಲಿ ಪಳಗಿದ ಆನೆಗಳ ಮಧ್ಯದಲ್ಲಿ ಈ ಆನೆಯನ್ನು ನಡೆಸಿಕೊಂಡು ಹೋದೆವು. ಈ ರಾಜ್ಯದಲ್ಲಿ ಕಬ್ಬಿನ ತೋಟಗಳಲ್ಲಿ ಅವು ಮಾಡುವ ನಷ್ಟದ ಪ್ರಮಾಣ ನೋಡಿದರೆ ಈ ಬೃಹತ್ ಗಾತ್ರದ ಮೃಗಗಳನ್ನು ಕೊಲ್ಲುವುದು ಅಗತ್ಯವೆಂದು ತೋರಿದರೂ, ಅವುಗಳ ನಮ್ರತೆ ಸೂಕ್ಷ್ಮ ಬುದ್ಧಿ ಹಾಗೂ ಇತರ ಉತ್ತಮ ಗುಣಗಳನ್ನು ಗಣನೆಗೆ ತೆಗೆದುಕೊಂಡಾಗ ನಾನು ಮತ್ತೊಮ್ಮೆ ಹಿಂದೂಸ್ಥಾನಕ್ಕೆ ಬಂದರೆ ಆನೆಗಳ ಮೇಲೆ ಕೋವಿಯನ್ನೆತ್ತುವುದಿಲ್ಲವೆಂದು ನಿಶ್ಚಯ ಮಾಡಿದೆನು" ಎಂದು ನುಡಿದಿರುವುದು ಜೆಫರ್‌ಸನ್‌ನಿಗೆ ಆನೆಗಳ ಬಗ್ಗೆ ಇದ್ದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಜೊತೆಗೆ ಅನಗತ್ಯವಾಗಿ

ರಾಜನೇ ಆಗಲಿ ಇತರರೇ ಆಗಲಿ ಬಹು ಉಪಯೋಗಿ ಆನೆಯನ್ನು ಕೊಲ್ಲುತ್ತಿರಲಿಲ್ಲವೆಂದು ಸ್ಪಷ್ಟವಾಗುತ್ತದೆ.

ಕೊನೆಯದಾಗಿ ಮೈಸೂರು ಅರಸರು ಆನೆಗಳನ್ನು ಹಿಡಿಯುವ ಖೆಡ್ಡಾ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಈ ಕಾರ್ಯಕ್ಕಾಗಿ ಸ್ಯಾಂಡರ್‌ಸನ್ ಎಂಬಾತನನ್ನು ನೇಮಿಸಲಾಗಿತ್ತು. ಸ್ಯಾಂಡರ್‌ಸನ್‌ನು ಕಾಕನಕೋಟೆ ಕಾಡಿನ ಭಾಗಗಳಲ್ಲಿ ಸಂಚರಿಸಿ ನದಿಗಳಿಗೆ ಆನೆಯನ್ನು ಅಡ್ಡಿಕೊಂಡು ಬರುವ ಪದ್ಧತಿಗೆ ಚಾಲನೆ ನೀಡಿದ್ದ. ಹೀಗೆ ಆನೆಯನ್ನು ಅಟ್ಟಿಕೊಂಡು ಬಂದ ಬಳಿಕ 'V' ಆಕಾರದಲ್ಲಿ ರಚಿಸಲಾಗಿರುವ ಆವರಣದೊಳಗೆ ನುಗ್ಗಿಸಲಾಗುತ್ತಿತ್ತು. ನಂತರ ಸೆರೆಸಿಕ್ಕಿದ ಗಜಗಳನ್ನು ಉಳಿದ ಪಳಗಿದ ಆನೆಗಳ ಸಹಾಯದಿಂದ ಪಳಗಿಸುವ ಪದ್ಧತಿಯೇ ಸ್ಯಾಂಡರ್‌ಸನ್ ಪದ್ಧತಿ ಎಂದು ಜಗತ್ ಪ್ರಸಿದ್ಧವಾಗಿತ್ತು. ಈ ಪದ್ಧತಿ ಗಜಶಾಸ್ತ್ರದಲ್ಲಿ ಉಲ್ಲೇಖಿಸಿರುವ ಅನುಗತಬಂಧವನ್ನು ಹೋಲುತ್ತದೆ.

ಒಟ್ಟಿನಲ್ಲಿ ವಾರಣ, ಹಸ್ತಿ, ಗಜ ಐರಾವತ ಎಂದು ಗುರುತಿಸಲ್ಪಟ್ಟಿರುವ ಆನೆಯನ್ನು ಹಿಡಿಯುವುದು ಮಾನವನಿಗೆ ಸವಾಲಾಗಿತ್ತೆಂದರೆ ಅತಿಶಯೋಕ್ತಿಯಲ್ಲ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ., ೧೯೪೪, **'ಗಜಶಾಸ್ತ್ರ ಶಬ್ದಕೋಶ'**, ಮೈಸೂರು, ಪು. ೩೭, ೯೯, ೯೫, ೧೫, ೧೧.


೨. ಎ.ಕ. **ಸಂಪುಟ**. ೧ (ಪರಿಷ್ಕೃತ ಆವೃತ್ತಿ)., ಶಾಸನ ಸಂಖ್ಯೆ ೨೬, ಕ್ರಿ.ಶ. ೧೮೧೦ ಮತ್ತು ಶಾಸನ ಸಂಖ್ಯೆ ೩, ಕ್ರಿ.ಶ. ೧೮೨೨.

೩. ಡಿ. ಎನ್. ಕೃಷ್ಣಯ್ಯ, ೧೯೯೫, **'ಕೊಡಗಿನ ಇತಿಹಾಸ'**, ಮೈಸೂರು ಪು. ೪೯೭ ರಿಂದ ೪೯೮.

೪. **ಕರ್ನಾಟಕ ರಾಜ್ಯ ಗ್ಯಾಜೆಟಿಯರ್ - ಭಾಗ** ಒಂದು, ಪು. ೧೨೧ ರಿಂದ ೧೨೨.

★ ★ ★ ★

ಪ್ರಾಗಿತಿಹಾಸದಲ್ಲಿ ಫೀನಿಕ್ಸ್‌ಗಳುಲಿಯಂತೆ ಸಮಾಧಿ ಶಿಸ್ತುಗಳು ನಿಲುಸುಗಲ್ಲುಗಳು
ನಾಯ ಮೇಲೆ ಮೊಲ ಏರಿಬಿದ್ದ ಶೌರ್ಯದಾ ಕತೆಗಳು ಬೇಟೆಯಲಿ ಸಾಲಿಗಿವೆ
ಈ ಕತೆಗಳ ನಡುವೆ ಇತಿಹಾಸವದು ಬರೆದ ಲಿಪಿಗಳೆಲ್ಲ ಬರೆ ಬರಡು ದಾಖಲೆಯಲ್ಲ
ಸಾಂತ್ವನದ ಚಿಂತನದ ಹೊಸಹಾದಿಗೆ ತೋರುವ ಹಳೆಯ ಅನುಭವಗಳ ಸೊಲ್ಲು.



ಡಾ. ಚೆನ್ನಕ್ಕ ಪಾವಟೆ*

ಕಲಘುಟಗಿ ಪರಿಸರದಲ್ಲಿ ಶಿವಶರಣರ ಸಂಚನಲದ ಕುರುಹುಗಳು

ಶ್ರೀ ಕ್ಷೇತ್ರ ಉಳವಿ ಪ್ರಾಚೀನ ವೀರಶೈವ ಕೇಂದ್ರ. ಅಷ್ಟೇ ಶ್ರದ್ಧೆ, ಭಕ್ತಿ, ಸ್ಫೂರ್ತಿಯ ತಾಣ. ಸುಪ್ರಸಿದ್ಧ ಯಂತ್ರಾಸ್ಥಳ; ೧೨ನೆಯ ಶತಮಾನದಲ್ಲಿ ಕೆಲವು ಶಿವಶರಣರು ಚಿರಂತನ ನೆಲೆನಿಂತ, ಸಮಾಧಿಸ್ಥರಾದ ಅನುಪಮ ಪುಣ್ಯಭೂಮಿ; ಉತ್ತರಕನ್ನಡ ಜಿಲ್ಲೆಯ ಸೂಪಾಂ ತಾಲೂಕಿನಲ್ಲಿರುವ ಶರಣಕ್ಷೇತ್ರ ಉಳವಿ ಧಾರ್ಮಿಕ ಚಾರಿತ್ರಿಕವಾದ ಐತಿಹಾಸಿಕ ಸ್ಥಳ. ಇಲ್ಲಿ ಸಂಶೋಧನೆ ಕೈಕೊಳ್ಳಲು ಚಿತ್ತ ಶುದ್ಧಿಯನ್ನು ಒದಗಿಸುವ ಪುನೀತಕ್ಷೇತ್ರ.

ಕಲಚೂರ್ಯ ಬಿಜ್ಜಳನ ವಿಪ್ಲವಕ್ಕೆ ಒಳಗಾಗಿ ಬಸವಕಲ್ಯಾಣ ದಿಂದ ಕಾಡು ಮೇಡು, ಗುಡ್ಡಬೆಟ್ಟ, ಗಿರಿ ಗಹ್ವರ ದಾಟುತ್ತ ಉಳವಿಯತ್ತ ಆಗಮಿಸಿದ ಶರಣರ ಮಾರ್ಗದ ಸಮಗ್ರ ಶೋಧಕ್ಕೆ ನಾವು ಇನ್ನೂ ಶ್ರಮಿಸಬೇಕಿದೆ. ೮೦೦ ವಸಂತಗಳಷ್ಟು ಧೀರ್ಘವಾದ ಅವಧಿಯನ್ನು ವ್ಯಯಗೊಳಿಸಿದ್ದರೂ ಶಿವಶರಣರು ಮುನ್ನಡೆದು ಬಂದ ದಾರಿಯನ್ನು ಪ್ರತಿಗ್ರಾಮದ ಜನತೆ 'ದಂಡಿನದಾರಿ' ಎಂದೇ ಗುರುತಿಸುತ್ತ ಬಂದಿರುವದು ಐತಿಹಾಸಿಕ ಮೌಲ್ಯಕ್ಕೆ ನಿದರ್ಶನವೆನಿಸಿದೆ.

ಜನಪರ ಮೌಲ್ಯ ಸಾಧನೆ

ವೀರಶೈವಧರ್ಮದ ಜನಪರ ಮೌಲ್ಯ ಸಾಧನೆಗಾಗಿ ಧ್ವನಿ ಎತ್ತಿದ ಶಿವಶರಣರು ಕಲಚೂರ್ಯ ಬಿಜ್ಜಳನ ಸೈನ್ಯದಿಂದ ಅಟ್ಟಿಸಿಸಿಕೊಂಡೇ ಬಂದರು. ಚನ್ನಬಸವಣ್ಣ ಮತ್ತು ಅವನ ಜೊತೆಯಲ್ಲಿ ಬಂದ ಸಾವಿರಾರು ಶಿವಶರಣರು ದಾರಿಗುಂಟ ದುರ್ಗಮ ಗಿರಿಗಂವ್ಹರಗಳನ್ನು ದಾಟಿ ಉಳವಿ ಕ್ಷೇತ್ರದವರೆಗೆ ನೆತ್ತರು ಸುರಿಸುತ್ತ ಸಾಗಿಬಂದ 'ಹುತಾತ್ಮರಹಾದಿ' ನಮ್ಮ ರಾಷ್ಟ್ರದ ಇತಿಹಾಸದಲ್ಲಿಯೆ ಒಂದು ಐತಿಹಾಸಿಕ ಮಾರ್ಗವೆನಿಸಿದೆ. ಶಿವಶರಣರ ವಾಸ್ತವ ಮಾರ್ಗಶೋಧನೆಯಲ್ಲಿ ಚೆನ್ನಬಸವಪುರಾಣ, ಶರಣಲೀಲಾಮೃತ, ರೇಚಣ್ಣನ ವಚನ, ಕಾಲಜ್ಞಾನ ವಚನಗಳು, ಸ್ವಾದಿ ಅರಸರ ಕಾಲದ 'ಉಳವಿ ಮಹಾತ್ಮೆ, ಡಾ. ಬಿ. ಆರ್. ಹಿರೇಮಠರ ಕೃತಿ, ಅನಾಮಿಕ ಕವಿಯ 'ಉಳವಿ ಚೆನ್ನಬಸವೇಶ್ವರ ವಾರ್ಧಕ' ದಂತಹ ಐತಿಹಾಸಿಕ ಕಾವ್ಯಗಳಂತೆ ಪ್ರಾದೇಶಿಕ ಐತಿಹಾಸಿಕ ಕುರುಹುಗಳು ಅಷ್ಟೇ ಜನವದಂತಿಗಳು ಸತ್ಯಶೋಧನೆಯಲ್ಲಿ ಕೈದೀವಿಗೆಯ ಕಾರ್ಯ ಸಾಧಿಸಿವೆ.

ಬಿಜ್ಜಳನ ಕಾಲಾವಧಿಯ ಕಲ್ಯಾಣಕ್ರಾಂತಿಯ ಪರಿಣಾಮ ಶಿವಶರಣರಿಗೂ, ಪಟ್ಟಭದ್ರಹಿತದ ಸಂಪ್ರದಾಯವಾದಿಗಳಿಗೂ ನಡೆದ ಹೋರಾಟವೆಂಬುದು ಸ್ಪಷ್ಟಗೊಂಡ ವಿಷಯ. ಶರಣರಿಗೆ ತಮ್ಮ ಜೀವನ ರಕ್ಷಣೆಗಿಂತ ಅಷ್ಟೇ ಅಪರೂಪದ ಅಮೂಲ್ಯ ವಚನನಿಧಿ ಹಾಗೂ ಶರಣ ಪ್ರತಿಪಾದಿತ ವೀರಶೈವಧರ್ಮ ರಕ್ಷಣೆ ಇವರ ಪರಮ ಆಶಯವಾಗಿತ್ತು. ಶಿವಶರಣರೆಲ್ಲ ದಿಕ್ಕು ಪಾಲಾಗಿ ಶರಣಧರ್ಮದ ಸದ್ಬೆಳಕನ್ನು ಜನಮನದಲ್ಲಿ ಬಿತ್ತರಿಸಲು ಚೆನ್ನ ಬಸವಣ್ಣನವರ ನೇತೃತ್ವದಲ್ಲಿ ಅಕ್ಕನಾಗಮ್ಮನವರ ಮುಂದಾಳ್ತನದಲ್ಲಿ ಶಿವಶರಣರು ಆಯ್ದುಕೊಂಡ ಅತ್ಯಂತ ದುರ್ಗಮಮಾರ್ಗ ಉಳವಿಕೊಳ್ಳಗಳ ಅಡಗುತಾಣ; ಶರಣರಿಂದ ಅನುಭಾವತಾಣ ವಾದುದು; ವೀರಶೈವರಿಗೆ ಪೂಜನೀಯಕ್ಷೇತ್ರ ವೆನಿಸಿದುದು. ಶರಣರ ಈ ಮಹಾಯಾತ್ರೆಯಿಂದ ಕರ್ನಾಟಕದ ತನ್ಮೂಲಕ ಉತ್ತರ ಕರ್ನಾಟಕದ ಪರಿಸರದಲ್ಲಿ ಆದ ಧಾರ್ಮಿಕ ಮತ್ತು ಸಾಂಸ್ಕೃತಿಕ ಜಾಗೃತಿ ಗಮನಾರ್ಹ.

ಐತಿಹಾಸಿಕ ಮಹತಿಯ ಪರಿಸರಗಳು

ಲಕ್ಕಣ ದಂಡೇಶರನ 'ಶಿವತತ್ವ ಚಿಂತಾಮಣಿ' ಕೃತಿ ೧೪ನೆಯ ಶತಮಾನದ ವೇಳೆಗೆ ಶ್ರೀಶೈಲ ಹಂಪೆ, ಲಕ್ಷ್ಮೇಶ್ವರ, ಗುಮ್ಮಳಾಪುರ, ಕಲ್ಯಾಣ ಹಾಗೂ ಉಳವಿಕ್ಷೇತ್ರಗಳನ್ನು ಆರು ವೀರಶೈವ ಧರ್ಮಕೇಂದ್ರಗಳೆಂದು ಗುರುತಿಸಿದೆ. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ಕಲ್ಯಾಣದಿಂದ ಉಳಿವಿಯವರೆಗೆ ನಡೆದುಬಂದ ಕಲಘುಟ ಗ್ರಾಮ ಶಿವಶರಣರಿಂದ ಪುನೀತ ಗೊಂಡಿದೆ. ಪುರಾತನರು ನಿರೂಪಿಸಿದ ಕಾಲಜ್ಞಾನ ವಚನ ಶರಣರ ಮಾರ್ಗದ ದಾಖಲೆಗಳನ್ನು ಪ್ರಸ್ತಾಪಿಸುತ್ತ ಡಾ. ಆರ್. ಸಿ. ಹಿರೇಮಠ ತಮ್ಮ 'ಚೆನ್ನಬಸವಣ್ಣನವರು' ಕೃತಿಯಲ್ಲಿ ವಿವರಿಸಿದಂತೆ:

೧. ಗೊಡಚಿಯ ಗಿಡದ ಹುತ್ತಿನಲ್ಲಿ ಚಿಕ್ಕಿಗುಡಿಯ ಕಟ್ಟೆ ಅಲ್ಲಿ ಮಡಿವಾಳಯ್ಯಗಳ ಇಟ್ಟರು; ೨. ಸತ್ತೀಗೇರಿಯಲ್ಲಿ ಸತ್ತಿಗೆಯ ಕಳಸ ತೆಗೆದುಕೊಂಡರು; ೩. ಕಡಕೋಳದಲ್ಲಿ ಶಿವಪೂಜೆಯು ಮಾಡಿಕೊಂಡು; ೪. ಮೊದಲೂರಲ್ಲಿ ಕಾಳಗಕ್ಕೆ ಮುನ್ನಾಯಿತು; ೫. ತಲವೂರಿನಲ್ಲಿ ತಲೆ ಕಡಿದರು; ೬. ಮುರುಗೋಡದಲ್ಲಿ ಮುರಿಯ ಕಡಿದರು; ೭. ಮೂಗಬಸವದಲ್ಲಿ ಜಾಗಟೆಯ ಹೊಯ್ದಿದರು; ೮. ಕಾದರವಳ್ಳಿಯಲ್ಲಿ ಕಾದಾಟವಾಡಿ ಅಳಿಯಬಿಜ್ಜಳನನ್ನು ಕಾಯ್ದು ಬಿಟ್ಟುಕೊಟ್ಟರು; ೯. ಸಾಂಬ್ರಾಣೆ- ಕೆಲವು ಶಿವಶರಣರು

* ಪ್ರವಾಚಕರು, ಡಾ. ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ - ೫೮೦ ೦೦೩

ಲಿಂಗೈಕ್ಯರಾದರು; ೧೦. ಮೇಲುಗೈ ಯಲ್ಲಾಪುರ- ಕೂಗಿನ ಮಾರಿತಂದೆಗಳು ಕೂಗಿದರು. ಕರಿಹೊಳೆದಾಟಿ ಉಳಿವಿಯತ್ತ ಗಮಿಸಿದರು; ೧೧. ಬಿಜ್ಜಳ ಸೈನ್ಯ ಬೆಂಬತ್ತುವದು. ಮಹಾಮನೆಯ ಹೊಕ್ಕು ನದಿಯ ಪ್ರವಾಹ ತಿರುಗಿಸಿದರು; ೧೨. ಹೊನ್ನರಳಿಯ ಮಠಕ್ಕೆ ಮಹದುಯ್ಯಲ್ಲೆಯ ಕಟ್ಟಿ ಕೈಲಾಸಕ್ಕೆ ಬಿಜಯಂಗೈದರು.

-ಎಂದು ಸೂಚಿಸಿರುವರು. ಹಿಂದೆ ಶತ್ರುಸೈನ್ಯ ಬೆನ್ನಟ್ಟಿ ಬರುವಾಗ ಅತ್ತಿತ್ತ ಅಲೆಯುವ ಶರಣರು ಒಂದು ನಿರ್ದಿಷ್ಟ ಪಥದಲ್ಲಿಯೇ ಮುಂದೆ ಹೋದರೆಂದು ನಿರ್ಣಯಿಸುವದು ಕಷ್ಟವಾಗಬಹುದು. ಆದರೂ ಅಂದಿನಿಂದ ಇಂದಿನವರೆಗೆ ಉಳಿದುಬಂದ ಜನತೆಯ ನಂಬುಗೆ, ಅವರು ಹಾಯ್ದು ಬಂದ ದುಡಿನದಾರಿ, ಆಕಾಲದ ಅಳಿದುಳಿದ ಅವಶೇಷಗಳು ಶಿವಶರಣರು ಸಾಗಿದ ಹಾದಿಯನ್ನು ನಿರ್ಧರಿಸಲು ಸಹಾಯಕವಾಗುವಂತಿದೆ.

ಡಾ. ಫ.ಗು. ಹಳಕಟ್ಟಿಯವರು ಕಾದರವಳ್ಳಿಯಿಂದ ಶರಣರು ಇತ್ತಂಡವಾಗಿ ಹೋದರೆಂದೂ ಒಂದು ತಂಡದವರು ಬೀಡಿ ಹಲಸಿಗೆ, ಕಕ್ಕೇರಿ, ಲಿಂಗನಮಠ, ಜಂಗಮಹಟ್ಟಿ, ಸಾಂಬ್ರಾಣಿಯ ಮೇಲಿಂದ ಮೇಲುಗೈ ಯಲ್ಲಾಪುರಕ್ಕೆ ಬಂದರೆಂದೂ ಇನ್ನೊಂದೂ ತಂಡದವರು ನಂದಿಹಳ್ಳಿ, ಕಿತ್ತೂರು, ಧಾರವಾಡ, ಸತ್ತೂರು ಮೊದಲಾದುವುಗಳ ಮೇಲಿಂದ ಯಲ್ಲಾಪುರಕ್ಕೆ ಬಂದು ಅಲ್ಲಿಂದ ಕಾದುತ್ತ ಉಳುವಿಗೆ ಹೋದರೆಂದೂ ಅಭಿಪ್ರಾಯ ಪಟ್ಟಿರುವರು.

ಶರಣರು ನಡೆದುಬಂದ ದಾರಿಗುಂಟ ಅಂದು-ಆಳ್ವಿಕೆ ನಡೆಸುತ್ತಿದ್ದವರು ಕಲ್ಯಾಣ ಚಾಲುಕ್ಯರ ನಿಷ್ಠಾವಂತ ಮಹಾ ಮಂಡಲೇಶ್ವರರು. ಅವರಲ್ಲಿ ಹಗರಟಗೆ ಭೈರರಸರು, ತೊರಗಲ್ಲ ಮಂಡಲೇಶ್ವರರು, ಕುರುಗೋಡಸಿಂದರು, ಗೋವೆಯ ಕದಂಬರು ಪ್ರಮುಖರು. ಈ ಹೊತ್ತಿಗಾಗಲೆ ಶರಣರ ಸಮೂಹ ಗುಂಪು ಗುಂಪುಗಳಾಗಿ ಉತ್ತರದಲ್ಲಿ ಆಂಧ್ರದೆಡೆಗೆ ಸಕಲೇಶ ಮಾದರಸನ ಮಾರ್ಗದರ್ಶನದಲ್ಲಿ ಕೆಲಶರಣರು ಮುನ್ನಡೆದರೆ, ಕರ್ನಾಟಕದ ದಕ್ಷಿಣ ಹಂಪೆ, ಮಹಿಷಮಂಡಲದೆಡೆಗೆ ಕೆಲ ಸಮೂಹ ಮುನ್ನಡೆಯಿತು. ಅನುಭವಮಂಟಪದ ಶೂನ್ಯ ಸಿಂಹಾಸನ ಪೀಠವನ್ನು ಸಾಂಕೇತಿಕವಾಗಿ ಸೊನ್ನಲಿಗೆಯ ಕಡೆಗೆ ಸಾಗಿಸುವಲ್ಲಿ ಸಫಲವಾಯಿತು. ಈ ವೇಳೆಗಾಗಲೇ ಸುಪ್ರಸಿದ್ಧ ಶೈವಕ್ಷೇತ್ರವೆಂದು ಪರಿಗಣಿತವಾಗಿದ್ದ ಹಂಪೆಗೆ ಬಂದಿರುವ ಸಾಧ್ಯತೆ ಇದೆ. ಬಿಜ್ಜಳನ ಚಕ್ರಾಧಿಪತ್ಯ ತಿರಸ್ಕರಿಸಿದ ಹೊಯ್ಸಳರ ಅಧಿಪತ್ಯಕ್ಕೆ ಹಂಪೆ ಪ್ರದೇಶ ಅಂದು ಒಳಪಟ್ಟಿತ್ತು.

ಕಲ್ಯಾಣ ಬಿಟ್ಟ ಶರಣರು ಪರವತಾಬಾದ ಪೇರಜಾಬಾದ ಕೊಳಕೂರು ಸತ್ತೀಗೆರೆ ಮಾರ್ಗವಾಗಿ ಮುನ್ನಡೆದು ಚಾಲುಕ್ಯರ ಸೀಮೆ ದಾಟಿ ಬಡದಳ ಸತ್ತೀಗೆರೆಯ ಮೇಲೆ ಹಾಯ್ದು ಮಲಪ್ರಭಾನದಿಯ ದಂಡೆಗುಂಟ ನಡೆದು ಬಂದಂತಿದೆ. ಶರಣ ಸಮೂಹ ರಕ್ಕಸಗಿ ತಂಗಡಗಿ ತಾಳಿಕೋಟೆ ಜಮಖಂಡಿ ಮುಧೋಳ ಚಿಕ್ಕೋಡಿ ಪ್ರದೇಶದಲ್ಲಿ ಬೀಡುಬಿಟ್ಟಂತೆ ಅಲ್ಲಿಯ ಕುರುಹುಗಳು ವಿವರಿಸಿವೆ. ಈ ಭಾಗದಲ್ಲಿ ಅಂದು ಕುರುಗೋಡ ಸಿಂದರು ಆಳ್ವಿಕೆ ಕೈಕೊಂಡಿದ್ದವರು. ಅಂದು ಅವರ ಪರಿಸರ ಶರಣ ಪ್ರಭಾವದಿಂದ

ಭಕ್ತಿಯಮನೆ ಭಕ್ತಿಯ ನೆರೆ
ಭಕ್ತಿಯವತಿ ಭಕ್ತಿಯೇಳ್ಗೆ ಭಕ್ತಿಯ ರಾಜ್ಯಂ
ಭಕ್ತಿಯ ಭಂಡಾರಂ ಶಿವ
ಭಕ್ತಿಯ ಸಿರಿಬಂದು ನೆಲಸಿತ್ತೀ ಕುರುಗೋಡೊಳ್॥

-ಎಂಬಂತೆ ಪ್ರಸಿದ್ಧಿಹೊಂದಿತ್ತು. ಶಿವನ ಒಡ್ಡೋಲಗದಲ್ಲಿ ಬಸವಾದಿ ಪ್ರಮಥರೊಂದಿಗೆ ಕುರುಗೋಡ ರಾಚಮಲ್ಲನು ಇದ್ದನೆಂದು ಸಾರುವ ಸಾನಂದ ಚರಿತೆ 'ಬೇಗೆಯೊಳು ಲಿಂಗಮಂ ನುಂಗಿಯುಗುಳುತ್ತಲನುರಾಗಿಸಿದ ಕುರುಗೋಡ ರಾಚಮಲ್ಲಯ್ಯಂಗಳ್' ಎಂದು ಸಾರುವ ವೀರಶೈವಾಮೃತ ಮಹಾಪುರಾಣ ಹೇಳುವಲ್ಲಿ ಆತ ಬಹುಶಃ ಮೊದಲನೆಯ ರಾಚಮಲ್ಲನಿರಬೇಕು. ಹೀಗಾಗಿ ಶರಣರು ಕುರುಗೋಡದಲ್ಲಿ ಕೆಲಕಾಲ ಕಳೆದಿರುವ ಸಾಧ್ಯತೆ ಇದೆ.

ಶಿವಶರಣರಿಗೆ ನೆರವನ್ನಿತ್ತವರು ಹಗರಟಗೆ ಭೈರರಸರು. ಹಗರಟಗೆ ೩೦ನ್ನು ಆಳುತ್ತಿದ್ದ ಭೈಸಕುಲದ ಅರಸರು ಶರಣರ ಪ್ರಭಾವಕ್ಕೊಳಪಟ್ಟು ವೀರಶೈವರಾದವರು. ಈ ಮನೆತನದ ದೊರೆ ವಿರುಪರಸ ಎಂಬವನ ಶೌರ್ಯ ಪರಾಕ್ರಮ ವ್ಯಕ್ತಪಡಿಸುವ ತಾಳೀಕೋಟೆ ಶಾಸನ (ಕ್ರಿ.ಶ. ೧೧೮೪) ಶರಣರನ್ನು, *"ಪರಸಮಯ ಗಿರಿವಜ್ರದಂಡುರುಂ ಜಗದಲುದ್ದಂಡರುಂ ಜಿನಸಮಯವನದಹನ ದಾವಾನಳರುಂ ಮುನಿದರ್ಗೆ ಹಾಳಾಹಳರುಂ ಬೌದ್ಧಸಮಯ ವಿಧ್ವಂಸನ ಪ್ರವೀಣರುಂ ಬಗೆಯಲುಂ ಜಾಣರುಂ ಅನ್ಯಸಮಯಿಗಳ ಬೆನ್ನದಾರಪೆತ್ತುವರು ಸೆಣಸುವರ ನೆತ್ತರಂ ಮುರಳ್ಗಳಿಂ ಕುಡಿಸುವರು, ಪರಸಮಯ ಘುರಟ್ಟರು, ವೀರಕುಪ್ಪರವಟ್ಟರುಂ ಕಾಲನ ನಾಲಿಗೆಯ ಸೀಳ್ವರುಂ.....ಅಸಂಖ್ಯಾತ ಸಂಖ್ಯಾಭಿದೇಯರುಂ.......ಮಲೆದಂತೆ ಗಂಡರುಂ ಪರಿಯಳಿಗೆ ಅಣಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ, ಅಣಂಪೂರ, ಕರಹಾಡ, ಕೆಂಭಾವಿ, ಬಿಮ್ಮುಕೂರು ಮೊದಲಾದ ಅನನ್ತದೇಶ ದೇಶಾನ್ತರ ದಲಿದಿರಾದ ಪರಸಮಯಿರ್ಗಂ ಪಡಲ್ವಡ್ಡಿ ಲೋಕಮನಾತಂಪಗೊಳ್ಳಿ ಬಸದಿಗಳಂ ಹೊಸೆದು ಮುಕ್ಕಿ ಶಿವಲಿಂಗಸಿಂಹಾಸನಮಂ ಕಳ್ಗೊಳ್ಳಿ ಚಲಮಂ ಮೆಱೆದು ಧೀರರೊಳು ನೆಱೆದು ಸ್ವರ್ಗಮರ್ತ್ಯ ಪಾತಾಳದೊಳಿನಂಗಾರಿಯ ಹೆಮ್ಮೆಯಂ ತಮ್ಮ ಭೃತ್ಯಾಚಾರದ ತೋರ್ಮ್ಮೆಯಂ ತಳದಲಿಕ್ಕಿ ತೋರ್ಪನ್ತೆ ತೋರಿದ ಪುರಾತನ ನೂತನರೆನಿಸಿದ ಅಸಂಖ್ಯಾತ ಗಣಂಗಳ ನಾಮಾದಿ ಸಮಸ್ತ ಪ್ರಶಸ್ತಿ ಸಹಿತ.*

ಎಂದು ಶರಣರನ್ನು ಅದ್ಭುತರಾಗಿ ಕೀರ್ತಿಸಿದುದು ಕುರುಗೊಂಡ ಸಿಂಧರ ಶರಣಭಕ್ತಿಗೆ ನಿದರ್ಶನವೆನಿಸಿದೆ.

ರಾಜವಂಶಗಳಲ್ಲದೆ ಅನೇಕ ವೀರಶೈವ ಅಧಿಕಾರಿಗಳು ಇದ್ದು ಅವರಲ್ಲಿ 'ಆದಿಗಣಾವತಾರ' ನೆನಿಸಿದ ಹೊನ್ನಬೊಮ್ಮಿಸೆಟ್ಟಿ ಗಮನಾರ್ಹವ್ಯಕ್ತಿ. ಇಂಥ ವೀರಶೈವ ಅರಸರ ಸೀಮಾಪ್ರದೇಶವಾದ ತಾಳೀಕೋಟೆ ಜಮಖಂಡಿ ಮುಧೋಳಗಳಲ್ಲಿ ಶರಣರು ಬೀಡುಬಿಟ್ಟು ನೇರವಾಗಿ ತೊರಗಲ್ಲಿನತ್ತ ಬಂದಿದ್ದಾರೆ. ತೊರಗಲ್ಲಿನ ಮಂಡಲೇಶ್ವರರಲ್ಲಿ ಭೂತೇಶ್ವರ ಸುಗ್ಗಲದೇವಿಯರು ಪರಮ ಶಿವಭಕ್ತರಾಗಿದ್ದವರು. ಸುಗ್ಗಲದೇವಿಯ 'ಘಟಸರ್ಪಪವಾಡ' ತೊರಗಲ್ಲಿನ ಶಾಸನದಲ್ಲಿದೆ. ತೊರಗಲೆನಾಡಿನ ಅಧಿಕಾರಿ ಕಲ್ಲರಸರಾಗಿ ವೀರಕನ್ನದೇವಿ ಲೊಕ್ಕಿಯ ಚೀಲಾಳನ ಪರಮಶಿಷ್ಯೆ. ಈಕೆ ರೇವಣನ ಆಜ್ಞೆಯಂತೆ ಮುಕ್ತಿಕ್ಷೇತ್ರಕ್ಕೆ ಒಂದು 'ಲಿಂಗಮಾರ್ಚನೆ ತತ್ಪರೆ' ಯಾದಳೆಂದು ಚೌಡದಾನಪುರ ಶಾಸನ ತಿಳಿಸಿದ್ದು ಅಲ್ಲಿ ಕೆಲಕಾಲ ಶಿವಶರಣರು ವಾಸ್ತವ ಮಾಡಿರಬೇಕೆನಿಸುತ್ತದೆ. ತೊರಗಲ್ಲಿನಿಂದ ಗೊಡಚಿ ಕ್ಷೇತ್ರಕ್ಕೆ ಬಂದ ಶಿವಶರಣರ ಕುರುಹಿಗೆ ಗೊಡಚಿಕ್ಷೇತ್ರಕೆ ರಣಬಾಚಿ, ಕೂಗು ಬಸವನಕಂಬಗಳು, ವೀರಭದ್ರ ದೇವಸ್ಥಾನದ ಹಿಂದಿನ ಮುದಿ ವೀರಭದ್ರನ ವಿಗ್ರಹ, ದೇವಸ್ಥಾನದ ಸುತ್ತಮುತ್ತಲಿನ ಸಮಾಧಿಗಳ ಕುರುಹುಗಳು ಪೂರಕಮಾಹಿತಿ ನೀಡುತ್ತದೆ.

ಕಲಘುಟಗಿಯಲ್ಲಿ ಶರಣರು ಕುರುಹುಗಳು

ಧಾರವಾಡ ಜಿಲ್ಲೆಯ ಕಲಘುಟಗಿ ತಾಲೂಕು ಶರಣರ ದಂಡಿನದಾರಿ ಎನಿಸಿದುದು. ಈ ಪ್ರದೇಶದ ಮೇಲೆ ಬೀರಿದ ಶರಣಪ್ರಭಾವ ಇಂದಿಗೆ ಅಳಿಯದೇ ಉಳಿದಿದೆ. ಈ ಪರಿಸರದ ಗ್ರಾಮನಾಮ, ನಾಮಪ್ರಕ್ರಿಯೆ, ಪ್ರತಿಗ್ರಾಮದಲ್ಲಿ ಚೆನ್ನಬಸವಣ್ಣ ದೇವಾಲಯ, ಗರ್ಭಗುಡಿಯಲ್ಲಿ ನಂದೀವಿಗ್ರಹ ಮುಂದಿನ ಅರಳಿಮರ ಪೂರ್ವಾಭಿಮುಖ ದೇವಸ್ಥಾನಗಳ ಪಕ್ಕದಲ್ಲಿ ಕೋಟೆಗೋಡೆಗಳು, ಅಲ್ಲಲ್ಲಿ ವಾಡೇದ ಕುರುಹುಗಳು ಇಂದಿಗೂ ಜರುಗುವ ವಿಶೇಷ ಪರ್ವ ಜಾತ್ರೆ ಉತ್ಸವಗಳು ಪಾಲಿಕಿಸೇವೆ ಶರಣಪ್ರಭಾವದ ನೇರಸೂಚನೆಗಳೆನಿಸಿವೆ.

ಕಲಘುಟಗಿ ತಾಲೂಕಿನ ದೇವಲಿಂಗಿಕೊಪ್ಪ, ದಾಸನೂರು, ಹಿರೇವಾಡ ಬಸವನಕೊಪ್ಪ, ಹಿರೇಹೊನ್ನಹಳ್ಳಿ, ಮಡಶಿ ಹೊನ್ನಿಹಳ್ಳಿ, ಗಂಬ್ಯಾಪುರ, ಕುರುವಿನಕೊಪ್ಪ, ಉಗ್ಗಿನಕೇರಿ,ಜಿನ್ನೂರು ಕೂಡಲಗಿ, ದುಮ್ಮವಾಡ ಹುಲಗಿನಕೊಪ್ಪ, ಜಮ್ಮಾಳಿ, ಬೂದನೂರು ಬೂದನಗುಡ್ಡ, ತಂಬೂರು ಸುತ್ತುಮುತ್ತಲ ಗ್ರಾಮಗಳು ಚನ್ನಬಸವೇಶ್ವರ ಕುರುಹು ಹೇಳುವಂತೆ ಚನ್ನಬಸವೇಶ್ವರ, ವೀರಭದ್ರರ ಗುಡಿಗಳು, ನಂದಿಕಂಬ, ಇತರ ಅವಶೇಷಗಳಿರುವದು ಗಮನಾರ್ಹ.

ದಾಸನೂರು ಶರಣಕಾಲದ ದಾಸೋಹವನ್ನು ಸೂಚಿಸು ವಂತಿದೆ. ಗಿರೇವಾಡ ಬಸವನಕೊಪ್ಪಗಳಲ್ಲಿ ವಾಡೇದ ಅವಶೇಷ ಗಳಿದ್ದು ಅಲ್ಲಿಯ ಮರಡಿ 'ಅಲ್ಲಯ್ಯನಮರಡಿ, ಅರೇಬಸವನ ಕೊಪ್ಪ, ಮೂಲತಃ ಆರ್ಯಬಸವನಕೊಪ್ಪ, ಹಾಗೆಯೆ ಬಸವರಸಿ ಕೊಪ್ಪ, ಲಿಂಗನಕೊಪ್ಪ, ಅಂಬಲಕೊಪ್ಪ, ಎಮ್ಮೆಟ್ಟಿ, ದೇವಿಕೊಪ್ಪ ಗ್ರಾಮಗಳು ಉಲ್ಲೇಖನೀಯವಾಗಿವೆ. ಧುಮ್ಮವಾಡದಲ್ಲಿ ವಾಡೇದ ಅವಶೇಷಗಳಿದ್ದರೆ ಜಮ್ಮಾಳ ಸೈನಿಕರು ನೆರೆಯುವ ಪ್ರಾದೇಶಿಕ ವೆನಿಸಿತ್ತು. ತಂಬೂರು ಶಾಸನ ಐತಿಹಾಸಿಕ ಪ್ರಸಿದ್ಧಿ ಪಡೆದಂತೆ ಇಲ್ಲಿಯ ಚನ್ನಬಸವೇಶ್ವರ ಜಾತ್ರೆಯಲ್ಲಿ ಬೆಲವಂತದ ಗ್ರಾಮದವರು ದಾಸೋಹ ನಡೆಸುವ, ನಂಬಿಕೆ ಇದೆ. ಅರಳಿಕಟ್ಟಿ ಉಣಕಲ್ಲ, ಸಿದ್ಧನಬಾವಿ, ಸಂಗಟಿಕೊಪ್ಪ ಜುಂಜನಬೈಲು ಹುಲಗಿನಕೊಪ್ಪದ ವೃಕ್ಷನಿಬಿಡ ಪ್ರದೇಶ ಚೆನ್ನಬಸವೇಶ್ವರರ ಪ್ರಭಾವ ಪ್ರತಿಮೆಗಳಿಂದ ಅಲಂಕರಣ ಗೊಂಡಿವೆ.

ಜಮ್ಮಾಳ ಗಂಬ್ಯಾಪುರ ದುಮ್ಮವಾಡ ಬಾಣಗಿತ್ತಿ ಗುಡಿಹಾಳ ಮುತ್ತಿಗಿ ಸಿಗ್ಗಟ್ಟಿ ಗ್ರಾಮಗಳ ಮೇಲಿಂದ ಮುತ್ತಗಿಯಲ್ಲಿ ಕಾದಾಟವಾಗಿದ್ದು ಅದೇ ಇಂದು 'ಲಡಾಯಿಮರಡಿ' ಎನಿಸಿದೆ. ಬಿಜ್ಜಳನ ಸೈನ್ಯದ ಯಾರಾದರೂ ಹಿರಿಯ ಅಧಿಕಾರಿಗಳು ಶರಣರಿಗೆ ಸೋತು ಸೆರೆಸಿಕ್ಕಿದ್ದು ಸಿಗ್ಗಟ್ಟಿಯಾಗಿರಬಹುದೇ? ಇಲ್ಲಿಯೂ ಚೆನ್ನಬಸವೇಶ್ವರ ದೇವಾಲಯ ಇದೆ. ಮೇಲೆ ಹೇಳಿದ ಎಲ್ಲ ಪ್ರದೇಶಗಳಲ್ಲಿ ವೀರಭದ್ರದೇವಾಲಯಗಳಿದ್ದು ಶರಣ ಮಡಿವಾಳ ಮಾಚಿದೇವ ವೀರಭದ್ರನ ಅವತಾರವೆಂಬ ನುಡಿ ಜನಜನಿತ ವಾಗಿದೆ. ಆದರೆ ವೀರಭದ್ರ ಇಂದು ಭಾರತದಾದ್ಯಂತ ಕಂಡುಬರುವು ದೆಂತೆಂಬುದನ್ನು ಮರೆಯಲಾಗರು.

ಮುರುಗೋಡ 'ಉಳಿವಿಯ ಕಡೆಯ ಬಾಗಿಲು' ಎನಿಸಿದೆ. ಧರ್ಮರಕ್ಷಣೆಯ ಕಾರ್ಯದಲ್ಲಿ ಅವರಿಗೆ ಬೇಕಾದ ರಹಸ್ಯ ಆಶ್ರಯವೊಂದರ ಪ್ರಸ್ತಾಪ ಬಂದುದು ಮುರುಗೋಡದುಲ್ಲಿದಲ್ಲಿಯೆ. ಉಳವಿಕ್ಷೇತ್ರ ಅಂದು ಸೈನ್ಯದಿಂದ ಪಾರಾಗಲು ಶರಣರು ಮಹಮನೆಯತ್ತ ಸಾಗಿದರು. ಹತ್ತಿರದಲ್ಲಿ ಜಗಳಬೆಟ್ಟ, ರಾಕ್ಷಸಿಬೆಟ್ಟ, ಕಿನ್ನರಿಬ್ರಹ್ಮಯ್ಯ. ನದಿ ನೋಡಿದರೆ ಖಾತ್ರಿಯಾಗುತ್ತದೆ. ಉಳವಿಯವರೆಗೆ ಪಶ್ಚಿಮವಾಹಿನಿಯಾಗಿ ಸಾಗಿದ ಪ್ರವಾಹವನ್ನು ತಿರುಗಿಸಿ ಮಹಾಮನೆಯವರೆಗೆ ಅದನ್ನು ಒಯ್ದರು. ಈಗಲೂ ಕಾಣುವಂತಿದೆ. ಹೊಳೆ ಮಹಾಮನೆಯಲ್ಲಿಯೆ ಧುಮ್ಮುಕುತ್ತಿದೆ. ದುರ್ಧರವಾರ ಹೊಳೆ ದಾಟಿ ಗವಿಯನ್ನು ಪ್ರವೇಶಿಸಿದರೆ ಅಲ್ಲಿ ವೀರಭದ್ರನ ವಿಗ್ರಹವಿರುವುದನ್ನೂ ಕಾಣುತ್ತೇವೆ. ಈ ವಿಗ್ರಹ 'ಶರಣರಯುದ್ದ ಚಿಹ್ನೆ' ಯೆನಿಸಿದೆ. ಉಳುವೆಯಲ್ಲಿ ಎಲ್ಲಿ ನೋಡಿದರೆ ವೀರಭದ್ರನ ವಿಗ್ರಹಗಳಿವೆ. ಗೋವೆಯ ಕದಂಬರು ಶಿವಶರಣರನ್ನು ಸೂಕ್ತಮಾರ್ಗ ದರ್ಶನದಲ್ಲಿ ಉಳವಿಗೆ ತಂದು ಹಚ್ಚಿದರು. ಹೀಗೆ ಉಳವಿ ಇಂದಿಗೂ ಶಿವಶರಣರು ನೆಲೆನಿಂತ ಕ್ಷೇತ್ರವಾಗಿ ಚೆನ್ನಬಸವಣ್ಣ ಸಮಾಧಿಸ್ಥನಾದ ಪರಮಪುನೀತ ತಾಣವಾಗಿದ್ದು ಶರಣರ ದಂಡಿಯ ದಾರಿಯ ಸಾಂಸ್ಕೃತಿಕ ಅಧ್ಯಯನಕ್ಕೆ - ಮಾರ್ಗಶೋಧನೆಗೆ ಪ್ರಸ್ತುತ ಲೇಖನ ಒಂದು ಆಕರ ಸಾಮಗ್ರಿಯಾಗದೇ?

ಮಾಡಲಗೇರಿ ಕೊಟ್ರೇಶ್*

ಶಾಸನೋಕ್ತ ಐತಿಹಾಸಿಕ ನೆಲೆ ಮಾಡಲಗೇರಿ

ನೂತನ ದಾವಣಗೇರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನಲ್ಲಿರುವ ಕೋಲಾಟಕ್ಕೆ ಪ್ರಸಿದ್ಧವಾದ ಮಾಡಲಗೇರಿಯು ಹರಪನಹಳ್ಳಿಯಿಂದ ೧೩ ಕಿ.ಮೀ. ದೂರದಲ್ಲಿದೆ. ಇಂದು ಸುಮಾರು ೩೫೦ ಮನೆಗಳಿರುವ ಕುಗ್ರಾಮವಾಗಿದ್ದರೂ. ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ಸ್ಥಳವಾಗಿದೆ. ಕಲ್ಯಾಣಿ ಚಾಳುಕ್ಯರ ಕಾಲಾವಧಿಯಲ್ಲಿ ಅಸ್ತಿತ್ವದಲ್ಲಿದ್ದ ಈ ಗ್ರಾಮವು ಕಾರಣಾಂತರಗಳಿಂದ ಈಗ ತನ್ನ ಮೂಲನೆಲೆಯಿಂದ ೧ ಕಿ.ಮೀ ದೂರದ ನೈರುತ್ಯ ದಿಕ್ಕಿಗೆ ಸ್ಥಳಾಂತರಗೊಂಡಿದೆ.

ಕಲ್ಯಾಣಿ ಚಾಳುಕ್ಯರ ಕಾಲದ ಶಾಸನವು ಮಾಡಲಗೇರಿ ಮೂಲ ನೆಲೆಯಲ್ಲಿ ದೊರೆತಿದ್ದು ಇದರಲ್ಲಿ ಮಾಡಲಗೇರಿ ಗ್ರಾಮದ ಉಲ್ಲೇಖ ಸ್ಪಷ್ಟವಾಗಿದೆ. ನೊಳಂಬವಾಡಿ ೩೨,೦೦೦, ಕದಂಬಳಿಗೆ-೧೦೦೦ ಕೋಗಳಿ ೫೦೦ ಉಚ್ಚಂಗಿ ೩೦ ರಲ್ಲಿ ಬಾಗುಳಿಯು ಸೇರುತ್ತದೆ. ಬಾಗುಳಿಯು ಆಡಳಿತದ ವಿಭಾಗವಾಗಿತ್ತು ಇದರಲ್ಲಿ ಮಾಡಲಗೇರಿ ಗ್ರಾಮವು ಸೇರಿರಬಹುದಾಗಿದೆ. ಮಾಡಲಗೇರಿ ಗ್ರಾಮವು ಸ್ಥಳಾಂತರ ಗೊಂಡುದುದಕ್ಕೆ ಸ್ಥಳೀಯರ ಹೇಳಿಕೆ ಇದೆ.

ಈ ಗ್ರಾಮದ ದನಗಾಹಿಯು ದಿನವೂ ಕಾಡಿಗೆ ಹೋಗಿ ದನ ಮೇಯಿಸಿ ಕೊಂಡು ಬರುವಲ್ಲಿ ಒಂದು ಹಸು ಮಾತ್ರ ಸ್ವಲ್ಪ ತಡವಾಗಿ ಮನೆಗೆ ಬರುತ್ತಿತ್ತು ಮತ್ತು ಮನೆಯಲ್ಲಿ ಹಾಲಿಗೆ ಬದಲಾಗಿ ರಕ್ತ ಕರೆಯುತ್ತಿತ್ತು. ಹಸುವಿನ ಮಾಲಿಕ ದನಗಾಹಿಯನ್ನು ಪ್ರಶ್ನಿಸಿದ. ದನ ಕಾಯುವವನು ಮಾರನೆಯ ದಿನ ಆ ಹಸುವನ್ನು ಹಿಂಬಾಲಿಸಿದ. ದಿನನಿತ್ಯದಂತೆ ಆ ಹಸುವು ಸಂಜೆಯಾಗುತ್ತಲೆ ಲೆಕ್ಕಿ ಪೊದೆಯಲ್ಲಿ ನಿಂತು ಹಾಲನ್ನು ಸುರಿಸುತ್ತಿತ್ತು. ಇದನ್ನು ಗಮನಿಸಿದ ಆ ದನ ಕಾಯುವ ಹುಡುಗ ಊರಿನ ಹಿರಿಯರಿಗೆಲ್ಲಾ ಈ ವಿಷಯ ತಿಳಿಸಿದ. ಊರಿನ ಹಿರಿಯರೆಲ್ಲಾ ಸೇರಿ ಆ ಲೆಕ್ಕಿ ಪೊದೆಯನ್ನು ಶೋಧಿಸಲಾಗಿ ಒಂದು ಹಾವಿನ ಹುತ್ತದೊಳಗೆ ಆಂಜನೇಯ ವಿಗ್ರಹ ಕಂಡು ಬಂತು. ಮತ್ತು ಇಲ್ಲಿ ದೇವಾಲಯವನ್ನು ನಿರ್ಮಿಸಿ ಇಲ್ಲೇ ವಾಸಿಸಿರಿ ಒಳ್ಳೆಯದಾಗುತ್ತದೆ ಎಂಬ ದೈವವಾಣಿ ಕೇಳಿತಂತೆ. ಇದರಿಂದ ಆ ಗ್ರಾಮವು ಸ್ಥಳಾಂತರವಾಯಿತೆಂಬ ನಂಬಿಕೆ ಇದೆ.

ಪ್ರಾಕೃತಿಕವಾಗಿ ಈ ಮೂಲಗ್ರಾಮವೂ ಹಳ್ಳದ ದಂಡೆಯ ಮೇಲಿದೆ. ಈ ಹಳ್ಳವು ದಕ್ಷಿಣದಿಂದ ಉತ್ತರಕ್ಕೆ ಹರಿದಿದ್ದು ಆಗಲ ಮತ್ತು ಆಳವಾಗಿದೆ. ಆದರೆ ಈಗ ಹಳ್ಳದ ಕೊರೆದ ಭಾಗ ಮಾತ್ರ ದೊಡ್ಡ ಪ್ರಮಾಣದಲ್ಲಿ ಗೋಚರಿಸುತ್ತದೆ. ಈ ಪ್ರದೇಶದಲ್ಲಿ ನೂತನ ಶಿಲಾಯುಗದ ಅವಶೇಷಗಳು ಹರಡಿಕೊಂಡು ಬಿದ್ದಿರುವ ಮಡಿಕೆ ಚೂರುಗಳು, ಕಲ್ಲಿನ ರಾಶಿಗಳು ಮತ್ತು ಶಿಲಾಶಾಸನವನ್ನು ನೋಡಬಹುದು.

ಈಗ ಸ್ಥಳಾಂತರಗೊಂಡಿರುವ ಗ್ರಾಮವು ಸ್ವಲ್ಪ ಎತ್ತರವಾದ ಮತ್ತು ಸಮತಟ್ಟಾದ ಸ್ಥಳದಲ್ಲಿದೆ. ಇಲ್ಲಿಂದ ೧ ಕಿ.ಮೀ. ದೂರದ ಉತ್ತರಕ್ಕೆ ಜೈನ ಬಸದಿ ಇದೆ. ಈ ಬಸದಿಯ ಕಟ್ಟಡ ಇತ್ತೀಚಿನದಾಗಿದ್ದು ಜೈನ ತೀರ್ಥಂಕರ ವಿಗ್ರಹ ಮಾತ್ರ ಹಳೆಯದಾಗಿದೆ ನಯವಾದ ಕಪ್ಪು ಮಿಶ್ರಿತ ಶಿಲೆಯಲ್ಲಿ ಕೆತ್ತಿರುವ ಈ ವಿಗ್ರಹವು ಸಮಭಂಗಿಯಲ್ಲಿದ್ದು ಸು. ೨ ಅಡಿ ಎತ್ತರವಾಗಿದೆ. ಇದರ ತಲೆಯ ಮೇಲೆ ಐದು ಹೆಡೆಯ ಸರ್ಪ ಇರುವುದರಿಂದ ಇದು ಪಾರ್ಶ್ವನಾಥ ವಿಗ್ರಹವಿರಬಹುದಾಗಿದೆ.

ಸ್ಥಳಾಂತರಗೊಂಡ ಮಾಡಲಗೇರಿಯಲ್ಲಿ ಈಶ್ವರ, ಕಲ್ಲೇಶ್ವರ



* ಸಹಾಯಕರು, ವಸ್ತು ಸಂಗ್ರಹಾಲಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬



ಮತ್ತು ಆಂಜನೇಯ ದೇವಾಲಯಗಳಿದ್ದು ಈಶ್ವರ ದೇವಾಲಯವು ಇತ್ತೀಚೆಗೆ ನಿರ್ಮಾಣಗೊಂಡಂತೆ ಕಾಣುತ್ತದೆ. ಆದರೆ ಅದರಲ್ಲಿಯ ಶಿಲಾಮೂರ್ತಿಗಳಾದ ಶಿವಲಿಂಗ, ಕಾರ್ತಿಕೇಯ, ಮತ್ತು ಪಾರ್ವತಿ ವಿಗ್ರಹಗಳು ಹಳೆಯದಾಗಿವೆ. ಕಾರ್ತಿಕೇಯ ಮೂರ್ತಿಶಿಲ್ಪವು ಆರು ಮುಖಗಳನ್ನು ಹೊಂದಿದ್ದು ಸು. ೨ ೧/೨ ಅಡಿ ಎತ್ತರವಾಗಿದೆ. ಮಯೂರವಾಹನ ಹೊಂದಿದ್ದು ನುಣುಪಾಗಿದೆ.

ಪಾಳೆಗಾರರ ಆಡಳಿತಾವಧಿಯಲ್ಲಿ ಈ ಗ್ರಾಮವು ಕೈಗಾರಿಕಾ ಕೇಂದ್ರವಾಗಿತ್ತು. ಹರಪನಹಳ್ಳಿ ಪಾಳೇಗಾರ ರಾಜಾಸೋಮಶೇಖರ ನಾಯಕನ ಸೈನಕ್ಕೆ ಇಲ್ಲಿಯ ಜನ ಖಡ್ಗಗಳನ್ನು ತಯಾರಿಸಿ ಕೊಡುತ್ತಿದ್ದರು (ಚಿಕ್ಕೆರೂರು ಗೋವಿಂದಾಚಾರ್ಯರ ಹಸ್ತ ಪ್ರತಿ ಆಧಾರಿತ). ಇಂದಿಗೂ ಕೂಡ ರಾಜ್ಯದ ಹಲವಾರು ಜಿಲ್ಲೆಗಳ ಮಾರುಕಟ್ಟೆಯಲ್ಲಿ ಮಾಡಲಗೇರಿಯ ಕುಡುಗೋಲುಗಳಿಗೆ ಬೇಡಿಕೆ ತುಂಬಾ ಇದೆ.

ಮಾಡಲಗೇರಿಯ ಆಗ್ನೇಯ ದಿಕ್ಕಿಗೆ ೧.೫. ಕಿ. ಮೀ. ದೂರದ ಅಂತರದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಶಿಲಾಶಾಸನವೊಂದಿದ್ದು ಅದು ೧೧ನೇ ಶತಮಾನಕ್ಕೆ ಸೇರಿದ್ದು, ಇದರಲ್ಲಿ ಮಂಡನಹಳ್ಳಿ ಇನ್ನೊಂದು ಕಡೆ ಮಿಂಡನಹಳ್ಳಿ ಎಂಬ ಉಲ್ಲೇಖಗಳು ಇವೆ. ಈ ಶಾಸನ ದೊರೆತ ಸ್ಥಳವು ಕೂಡ ಹಳ್ಳದ ದಂಡೆಯಾಗಿದೆ. ಅದು ಹೊನ್ನತ್ತಿ ಹನುಮಪ್ಪನವರ ಹೊಲದಲ್ಲಿ ದೊರೆತಿದೆ. ಅದನ್ನು ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯಕ್ಕೆ ಸಾಗಿಸಲಾಗಿದೆ.

ಒಟ್ಟಾರೆ ಈ ಪ್ರಬಂಧದ ಸಾರಾಂಶವೆಂದರೆ ಒಂದನೆಯದಾಗಿ ಮಾಡಲಗೇರಿ ಎಂಬ ಹೆಸರಿನ ಈ ಗ್ರಾಮ ೧೩ನೇ ಶತಮಾನಕ್ಕಿಂತ ಮುಂಚೆಯೇ ಅಸ್ತಿತ್ವದಲ್ಲಿತ್ತು. ಎರಡನೆಯದಾಗಿ ಇದು ಜೈನ ಅವಶೇಷಗಳ ಆಧಾರದ ಮೇಲೆ ಜೈನ ಕೇಂದ್ರವಾಗಿರಬಹುದಾಗಿದೆ. ಮೂರನೆಯದಾಗಿ ಮಾಡಲಗೇರಿ ಮೂಲ ಗ್ರಾಮವು ಹಳ್ಳದ ಪ್ರವಾಹಕ್ಕೆ ತುತ್ತಾಗಿ ಸ್ಥಳಾಂತರ ಗೊಂಡಿರುವಂತೆ ಕಂಡುಬರುತ್ತಿದೆ. ನಾಲ್ಕನೆಯದಾಗಿ ಮಾಡಲಗೇರಿಯ ಆಗ್ನೇಯಕ್ಕೆ ದೊರೆತ ಶಿಲಾಶಾಸನದಲ್ಲಿ ಉಲ್ಲೇಖಿಸಿದಂತೆ ಮಿಂಡನಹಳ್ಳಿ ಗ್ರಾಮವು ಸಹ ಸ್ಥಳಾಂತರ ಗೊಂಡಿರುವುದು, ಏಕೆಂದರೆ ಈ ಶಿಲಾಶಾಸನ ದೊರೆತ ಸ್ಥಳದಿಂದ ದಕ್ಷಿಣಕ್ಕೆ ಸು. ೧ ಕಿ. ಮೀ. ದೂರದಲ್ಲಿ ಎತ್ತರವಾದ ಒಂದು ಬತೇರಿ ಮಾತ್ರ ಇದ್ದು ಈ ಪ್ರದೇಶಕ್ಕೆ ಮಿನಹಳ್ಳಿ ಎಂದು ಕರೆಯುತ್ತಾರೆ. ಈಗ ಮಿನಹಳ್ಳಿ ಇಲ್ಲದಿದ್ದರೂ ಅದರ ಅವಶೇಷಗಳಿವೆ. ಇದರ ಮುಂಭಾಗದಲ್ಲಿಯೇ ಮಿನಹಳ್ಳಿ ತಾಂಡ ಎಂಬ ಹೆಸರಿನ ಗ್ರಾಮ ಅಸ್ತಿತ್ವದಲ್ಲಿದೆ.

ಮಾಡಲಗೇರಿ ಹೊನ್ನತ್ತಿ ಹನುಮಪ್ಪನವರ ಶಾಸನ. ಈಗ ಕನ್ನಡ ವಿ.ವಿ. ಮ್ಯೂಸಿಯಂನಲ್ಲಿದೆ.

ಶಾಸನ ಪಾಠ - ೧

೧ ..ಗ ಶಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ
೨ ಶಂಭವೇ [II] ನಮಃ ಶಿವಾಯ ॥ ಶ್ರೀ ಗಣಾದಿಪತಯೇ ನಮಃ । ಶ್ರೀ ಸರಸ್ವತ್ಯಾಯ ನಮಃ ॥
೩ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭಮಹಾರಾಜಾಧಿರಾಜ ಪರಮೇಶ್ವರಂ
೪ ಪರಮಭಟ್ಟಾರಕಂ ಸತ್ಯಾಶ್ರಯಕುಲತಿಳಕಂ ಚಾಳುಕ್ಯಾಭರಣಂ ಶ್ರೀಮತ್ಪ್ರ
೫ ತಾಪಚಕ್ರವರ್ತ್ತಿ ಶ್ರೀಮಜ್ಜಗದೇಕಮಲ್ಲದೇವ ವಿಜಯರಾಜ್ಯ ಮುತ್ತರೋತ್ತರಾಭಿವ್ರಿದ್ಧಿ
೬ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬಂರ ಕಲ್ಯಾಣಪುರದ ನೆಲೆವೀಡಿನೊಳು ಸುಕಸಂ
೭ ಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆಃ ॥ತತ್ಪಾದಪದ್ಮೋಪಜೀವಿ॥ (ಸ್ವಸ್ತ್ಯಮಧಿಗ)
೮ ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾಮಂಡಳೇಶ್ವರಂ ಕಾಂಚೀಪು
೯ ರವರಾಧೀಶ್ವರ ಯದುವಂಶಾಂಬರದ್ಯುಮಣಿ ಸುಭಟಚೂಡಾಮಣಿ
೧೦ ನಿಜಕುಳಕಮಳಮಾರ್ತ್ತಂಡ ಪರಿಚ್ಛೇದಿಗಂಡ ರಾಜಿಗಚೋಳ ಮನೋಭಂಗ
೧೧ ಶ್ರೀಮತ್ತ್ರಿಭುವನಮಲ್ಲ ವಿಜಯಪಾಂಡ್ಯದೇವನುಂ ನೊಳಂಬವಾಡಿ ಮೂವತ್ತಿ
೧೨ ಚ್ಛಾಸಿರಮಮಂ ದುಷ್ಟನಿಗ್ರಹಶಿಷ್ಟಪ್ರತಿಪಾಳನ ಮಾಡಿ ವುಚ್ಚಂಗಿಯ ನೆಲೆವೀಡಿನೊಳೆ
೧೩ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ॥ ಕೈಶ್ಚಿತ್ತೀರ್ಣ್ಣ ಮಹಾರ್ಣ್ಣವೈಕತಿವ
೧೪ ಯ್ಯೆ ಕೌಪೀನ ಮಾತ್ರಾಂಶುಕೈದನ್ಯೋವನಪಲಾಶಿ ಬೇಸದಿತ ವೈಮ್ಮಾರ್ತ್ತಂಡಬಿಂಬೋಮ್ಮ...
೧೫ ಶಿಷ್ಟಾತತ್ರ ಭಟ್ಟೈರಿತಿ ಪ್ರಕಟಯಾಗೀಯಾ ಚಿರಂ ಮಾಕುಂತೆ ಶ್ರೀಮತ್ಪಾಂಡ್ಯಜನಾಚಿ

೧೬ ರಾಮಹನುಮಾನ್ ಪೆಂರ್ಮ್ಮಾಡಿದುಂಡಾದಿಪಃ॥ ಇನ್ತೀ ಸಕಳಗುಣಾಡ್ಯನಪ್ಪ ಶ್ರೀಮ

೧೭ ನ್ಮಹಾಪ್ರಧಾನಂ ವಿಜಯಹೆಂಮಾಡಿ ದಣ್ಣಾಯಕ ನೊಣಂಬವಾಡಿ ಮೂವತ್ತಿಚ್ಛಾ

೧೮ ಸಿರಮುಂ ಸ(೦) ರ್ವ್ವಾಧಿಕಾರಂಗೆಯ್ಯುತ್ತಮಿರ್ದ್ದು ॥ ॥ ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ

೧೯ ಧ್ಯಾನಧಾರಣ ಪಾರಾಯಣ ಜಪಸಮಾಧಿಶೀಲ ಗುಣಸಂಪನ್ನರುಂ ಯಜನಯಾ

೨೦ ಜನಾಧ್ಯಯನಾಧ್ಯಾಪನ ದಾನ ಪ್ರತಿಗ್ರಹಯುಕ್ತರುಂ ಅಗ್ನಿಷ್ಟೋಮಾದಿಸಪ್ತ....

೨೧ ಸ್ಥಾವಭೃತಾವಗಾಹನ ಪವಿತ್ರೀಕೃತ ಶರೀರರುಂ ಶ್ರೀಸ್ವಯಂಭುಕಲಿದೇವ ಪಾದಾ

೨೨ ರಾಧಕರುಂ ಶ್ರೀಮಹಾಲಕ್ಷ್ಮೀ ವರಪ್ರಸಾದರುಮಪ್ಪ ಶ್ರೀಮದ್ದಾರಿಶ್ಚ [೦]ದ್ರ ದತ್ತಿಯ ಮಹಾಗ್ರ

೨೩ ಹಾರಂ ಬಾಳ್ಗುಳಿಯೂರೊಡೆಯ ಪ್ರಮುಖವಶೇಷ ಮಹಾಜನ ಹಯ್ವದಿಂಬರು ॥ ಸ್ವಸ್ತಿಶ್ರೀ

೨೪ ಮತು ಶಕವರುಷ ೧೧೯೩ ನೆಯ ಖರ ಸಂವತ್ಸರದ ವೈಷಾಖದ ಪುಣ್ಣಮಿ ಸೋಮವಾರ ಸೋ

೨೫ ಮಗ್ರಹ [ಣ] ಸಂಕ್ರಾನ್ತಿ ಬ್ಯತೀಪಾತದಂದು ಮಂಡೆಯನಹ[ಳ್ಳಿ]ಯ ಮಂಡೇಶ್ವರದೇವರ ಖಂಡಸ್ಪುಟಿತ ಜೀರ್ಣ್ನೋ

೨೬ ದ್ಧಾರಕ್ಕಂ ಅಂಗಭೋಗ ರಂಗಭೋಗನೈವೇದ್ಯಕಂ ಈ ಸ್ಥಾನಕ್ಕೆ.. [ಭ] ಚಜೀಯನ ನಾಚಾರ್ಯ್ಯನಂಮಾಡಿ ಆ

೨೭ ದೇವರ್ಗ್ಗೆ ಬಿಟ್ಟ ಭೂಮಿಯಾವೂರಿಂ ತೆಂಕಲು ಎರೆ[ಯೋ]ಣಯಿಂದು ಮೂಡಲು ಮತ್ತರೊಂದು ಕಮ್ಮ ಮೂನೂಱು

೨೮ ಮತ್ತ ೧ ಕಮ್ಮ ೩೦೦ ಲೊಕ್ಕಿಯ ಕಟ್ಟೆಯಿಂ ಬಡಗ ಕೆಂಗಾಡು ಮತ್ತರೊಂದು ಮತ್ತ ೧ ॥ ಕ್ಷಿತಿಸು

೨೯ ರಚರಣಾಬ್ಜದ್ವಂದ್ವ ಮತ್ತದ್ವಿರೇಷಾ ನಿಜಕುಲನವ ಚಂದ್ರ ಕನ್ನಗೌಡಾಖ್ಯ ಭಕ್ತಃ ಹರಚರಣ ಸಪರ್ವ್ವ

೩೦ ಭೂಪ್ರಧಾನಪ್ರತಿಷ್ಠಃ ಸಜಯತು ಭುವಿನಿತ್ಯಂ ಶ್ರೀದ್ವಿಪಂವಾರ್ಯಪುತ್ರಃ ॥ ಇ

೩೧ ನ್ತೀ ಸಕಳಗುಣಾಡ್ಯನಪ್ಪ ಕೊತ್ತಗೌಡನ ಮಗ ಕಂನ್ನಗೌಡನು ತಂನ ಬಂಧುವರ್ಗ ಸಹಿತ ಶ್ರೀಮದಯ್ವದಿಂಬ

೩೨ ರ ಕೈಯ್ಯಲು ಮಿಂ[ಡಹ]ಳ್ಳಿಯ ಕ್ರಯವಾಗಿ ಧಾರೆಯಂ ಕೊಂಡು ಮಿಂಡೇಸ್ವರದೇವರಿಗೆ ತಾನು ಸರ್ವ್ವ

೩೩ ನಮ[ಸ್ಯ] ಸರ್ವ್ವಾಬಾದಪರಿಹಾರವಾಗಿ ಬಿಟ್ಟ ಭೂಮಿಯಲ್ಲಿಂ ತೆಂಕಲು ಮತ್ತರೊಂದು ಕಮ್ಮಂ ಮೂನೂಱು

೩೪ ೩೦೦ ವೋಣೆಯಂ ಪಡುವಲು ಕೆಂಗಾಡು ಕಮ್ಮವಿನೂಱುಪ್ಪತ್ತು ೨೭೦ ಕಂನಗೌಡನ ಮಗ ಕೊತ್ತಗೌಡ ಬಿಟ್ಟ ಮೂಡಣ ಎರೆಯಿಂ ಮೂ

೩೫ .ಕೆಂಗಾಡು ಕಮ್ಮವೈನೂಱು ೫೦೦ ವೂರಿಂ ಪಡವಲು ಓಡಕಟ್ಟೆ ಯೊಳಗೆ ಕೊಳನೊಂದು ೧

೩೬ ಅಗಸ್ಯಗೋತ್ರ ಪವಿತ್ರನಪ್ಪ ಮೊಕ್ಕೆಯ

೩೭ ಶಣಂಗಿಯರ ಮಾದಿಯಣ್ಣನು ಮಿಂಡಿಯನಹಳ್ಳಿಯಲ್ಲಿರೆ ದೇವೇಶ್ವರ ದೇವರ ಪ್ರತಿಷ್ಠೆಯಂಮ್ಮಾ

೩೮ ಡಿದಲ್ಲಿಯಶೇಷ ಮಹಾಜನಂಗಳು ಬಂದುಯಾದೇವರಿಗೆ ಬಿಟ್ಟ ಭೂಮಿಯಾದೇವರ ಮುಂದೆಏ

೩೯ ರೆ ಕಮ್ಮವೆಂಟುನೂಱು ೮೦೦ ಮಾವಿನಕಟ್ಟೆಯಹಳ್ಳದ ಸುತ್ತ ಮಣಲಕೆಯಿ ಮತ್ತರೆರಡು ೨ ಕೊಳನೊಂ

೪೦ ದು ೧ ಶ್ರೀಮನ್ಮಹಾಮಂಡಳೀಕ ಜಗದಳ ಹಂಪರಸರು ತಂಮಯರಸಿಯಕೆಱೆಯ ಹೊಲದೊಳಗೆಯಾ

೪೧ ಮಾದನೇಶ್ವರೇವರಿಗೆ ಬಿಟ್ಟ ಭೂಮಿ ಆ ಕಟ್ಟೆಯಿಂ ಹೋದ ಹಳ್ಳದ ಬದಿಯಲು ಮತ್ತರೊಂದು ೧ ಹೊಸಗೆಱೆಯ

೪೨ ಕೆಳಗೆ ತಾಱೆಯ ಕಟ್ಟೆಯಂ ಕೊಳಕವಂ ನೂಱ ೧೦೦ ಯಾ ಕೊಳನ ಸುತಲುಂ ಮೊಗೆ ಕಮ್ಮವೆಂಟು....

೪೩ ೮೦೦ ದೇವಕೊಳಗ ದಂಮಗೊಳಗವೆರಡು ೨ .. ತಪೋದನಗಂ ದೇವರಿಗಂ ಸಮಾನ ಭಾಗ ॥ ...

೪೪ ಪರದತ್ತಂ ವಾಯೋ ಹರೇತಿ ವಸುಂಧರಾಂ ಷಷ್ಟಿರ್ವಂರ್ಶ ಸಹಸ್ರಾಣಿ ವಿಷ್ಟಾಯಾಂ.....

೪೫ ಮಿ ॥

ಮಾಡಲಗೇರಿ ಗ್ರಾಮದ ಈಶಾನ್ಯಕ್ಕೆ ಅಂಗಡಿ ಗುರುಸಿದ್ದಪ್ಪನ ಹೊಲದಲ್ಲಿರುವ ಶಾಸನವು ಬಹುತ್ರುಟಿತ. ಕಾಲ ಅಳಿಸಿಹೋಗಿದೆ. ಆದರೆ ರಾಜ ತ್ರಿಭುವನ ಪಾಂಡ್ಯದೇವನು ನೊಳಂಬವಾಡಿ-೩೨೦೦೦ವನ್ನು ಆಳುತ್ತಿದ್ದ ವಿವರವಿದೆ. ನಾಕರಸ ಮತ್ತು ಅವನ ಹೆಂಡತಿ ಲಕ್ಷ್ಮೀದೇವಿಯು ಅತ್ತಿಮೇಶ್ವರದೇವರ ನೈವೇದ್ಯ, ಅಂಗಭೋಗ ಮತ್ತು ನಂದಾದೀವಿಗೆಗೆ ದಾನವನ್ನು ಬಿಟ್ಟ ವಿವರವಿದೆ. 'ಅಯಿನೂರ್ವರ ಸಂಘ', 'ಜಿನಗನ್ಧೋದಕ', 'ಅತ್ತಿಮೆನಾಯಕ'ರ ಉಲ್ಲೇಖವಿದೆ.

ಶಾಸನ ಪಾಠ - ೨

೧ ಸ್ವಸ್ತಿ ಸಮಧಿಗತ ಮಹಾಮಂಡಳೇಸ್ವರಂ ಕಾಂಚೀಪುರವರಾಧೀಶ್ವರ ಪರಮೇಸ್ವರಂ ಯದ್ವಂ

೨ ಶಾಂಬರದ್ವಿಮಣಿ ಸುಭಟಚೂಡಾಮಣಿ ನಿಜಕುಳಕಮ [ಳ] . ರ್ತ್ತಂಡ ಪರಿಶ್ಚೇದಿಗಂಡ ರಾಜಿಗ

೩ [ಚೋಳಮನೋ] ಭಂಗ ಶ್ರೀಮತು ಹೆ . . . . . ಸ್ತ ಪ್ರಸಸ್ತಿ

೪ ಸ[ಹಿತ] ಶ್ರೀಮನ್ಮಹಾ . . . ರಂ ತ್ರಿಭುವನ . . [ಪಾ]ಂಡ್ಯದೇವರು

೫ ನೊಳಂಬವಾಡಿ ಮೂವ . . . . ಗೆಯ್ವು

೬ ತ್ತಮಿರೆ ॥ ಸ್ವಸ್ತಿ . . . . . . ಣ ಸರ್ವ್ವಾ

೭ . . . ಷ್ವಾ . . . ಸ . . . ಮಾ ವಿಜಯದೇವ

೮ . . . . ಶಂಕರ . . . . ರಾಜ . . . .

೯ ೦ ಸುಖದಿ ಸಲುತ್ತಿರೆ . . . ಸಮಧಿಗತ ಪಂಚಮಹಾಶಬ್ದ ಮಹಾ ಸಾಮನ್ತಂ

೧೦ . ನ್ತ ಸುಭಟ ಚೂಡಾಮಣಿ ಶ್ರೀಮ . . ಮಣಿ ಅಯಿನೂರ್ವರ ಸಂಘಸ . . . . . .

೧೧ . . . . ಕಂ . . ಳ . ನು . . . . ಯ . .

೧೨ . . . .

೧೩ . . . . . ಡೆವಿಲ . . . . ಯನಪ್ಪ ಕೊ . .

೧೪ . . . .

೧೫ . . . . ಮರುಂ ಮಾಡಲಿಗೆರೆಯ

೧೬ . . . . . . ಗಕ್ಕಂ ಸಣ್ಮಾ . . . . . . ತ್ಸರದ ಪುಷ್ಯ ಸುದ್ದ

೧೭ . . . . ಯರಳಪ . . . .

೧೮ . . . . ಮಾಡಿ ಕೊಟ್ಟ ಕಲ್ಲು . . ಡ . . ಳಗೆ ತುವಡಂ ತೆಕ

೧೯ . . . . ಕೆಱೆಯ ಕೆಳಗೆ ಗದ್ದೆ . . . ೨೦೦ ಮತ್ತರು ॥


೨೦ . . ಕೆಳ . . . ಲಾದ ಮೊದಲೇರಿಯಲ್ಲಿ ಗದ್ದೆ . . . . ॥ . . . ಡನತೆ

೨೧ ಯಿ . . . ಯನಿತುಮಂ ಬಿಟ್ಟ . . . . ಸ್ತ . . . ಸಕ . ನುಂ
೨೨ ಳಕ್ರಿತ ಮಧು . ರಿ . ನೆಯ ವಿನೆಯಶೀಲಸಂಪ . . . ಜ್ಞಾನ ಲಕ್ಷ್ಮೀಕಾನ್ತ
೨೩ . ಹತ್ತರಮೇಶ್ವರ ಜಿ[ನ] ಗನ್ಧೋದಕ ಪವಿತ್ರೀಕ್ರಿತೋತ್ತಮಾನಸನುಂ ಸಂಮ್ಯಕ್ತರತ್ನಾ
೨೪ ಕರನುಂ ಚತುಸ್ಸಮಯ ಪೂಜಾದುರಂಧರನುಂ ಅಭಿನವ ಶ್ರೇಯಾ[೦] ಸನುಂ ಪದ್ಮಾ. . .
೨೫ ದೇವಿ ಲಬ್ಧವರಪ್ರಸಾರದನುಂ ಬಾಗುಳಿಯಯ್ಯದಿಂಬರ ವರಪುತ್ರನುಂ ಚಳುಕ್ಯಕು
೨೬ ಲಕಮಳ ಮಾರ್ತ್ತಣ್ಡನುಂ ಆಹಾರಾಭಯ ಭೈಷಚಗತಶಾಸ್ತ್ರ ಆಗಮ
೨೭ ತರ ದಾನವಿನೋದನುಂ ವಿವೇಕಚೂಡಾಮಣಿಯುಂ ಯೋಗಿನೇಮಿಭಟ್ಟಾ
೨೮ ರಕ ಗುರುಗಳ ಪ್ರಸಾದದ ಪರಬ್ರಹ್ಮ ಸ್ವರೂಪವಂಯಅದು ಸದಾಸಿವನಲಿ
೨೯ ಮನವಂ ಸ್ಥಿರವಾಗಿಯೇ ನಿಲಿಸಿದ ಪಾಯರಸಂಗಂ ಕಾಳಿಯಬರಸಿ
೩೦ ಪುಟ್ಟಿ ಶ್ರೀಮನ್ಮಹಾಸಾಮನ್ತಂ ನಾಕರಸನ ಅರ್ದ್ಧಾಂಗೆ ಲಕ್ಷ್ಮೀಯೆನಿಸಿದಳು ಬ
೩೧ ದಾ . . . . ಆದಿತ್ಯ ಕಡಂಬಕುಲತಿಳಕ ಕಾಟರಸಂಗಂ ಉರು ಗೊಳದಕ್ಕರಸನುಂ .
೩೨ ಸತಿಯಪ್ಪ ಸುಗ್ಗಲದೇವಿಗಂ ಪುಟ್ಟಿದ ಆ ದೇವಿಯರು ಲಕ್ಷ್ಮೀವಲ್ಲಭೆ ನಾಕರಸಂ ಆದಿ .
೩೩ . ಅತ್ತಿಮೇಸ್ವರದೇವರ್ಗ್ಗೆ ಬೈತಿನ ನಿವೇದ್ಯ ಅಂಗಭೋಗ ನನ್ದಾದೀವಿಗೆಯೆನ್ದು ಆ ಗುರುಗಳ
೩೪ ಕಾಲಂ ಕಚ್ಚಿಂ ಧಾರಾಪೂರ್ವ್ವಕ ಮಾಡಿಕೊಟ್ಟ ಕೆಯಿ ಕೆಮ್ಮ . . . ಯಿ ತಲಕಟ್ಟಿನ ಅರಸಿ .
೩೫ ತೆ . . . ಣೆಯಿಂ ಪಡುವ ಮಣಲಮತ್ತರು ೧೦೦ ಅಲ್ಲಿಯ ಗದ್ದೆಯಿ[೦] ಬಡಗ ಸ . .
೩೬ ಕಮ್ಮ ೧೦೦ ॥ ಆಱುಮತೊಕ್ಕಲಮಕ್ಕಳ ಧಾನ್ಯ ಕೊಳಗ ೧ ದಂ ಬಿಟ್ಟರು ತೆಲ್ಲಿಗರು ಗಾಣ
೩೭ ಕ್ಕೆ ಸೊಲಗೆ ೧ । ದಂ ಬಿಟ್ಟರು ॥ ಪಾಂಡ್ಯ ದೇವರ ದಣ್ನಾ . . ಯಿಲಯಗ ಉಡಚಾಕೆಯಿ
೩೮ ಯಕನ ಅತ್ತಿಮೆನಾಯಕನ ಸಮ್ಮತಂ . . . ಧರ್ಮ್ಮ ದೇವರ ಕೆಯಿ . . .
೩೯ ಯಂ ಮಾಡುವ ಒನ್ದುಕ್ಕಲಿಗೆ ಸರ್ವ್ವ ಬಾಧಪರಿಹಾರ . . . . ಡರನ ಕು . . .
೪೦ ಮಾ . ಸೊ ವಿ . . . . . ಬರಂ ಸಲು . . .
೪೧ ತ್ತಮಿರೆ ॥ ಸ್ವದತ್ತಂ ಪರದತ್ತಂ ವಾಯೋ ಹ . . . . . ರಿಷ
೪೨ . . . . ಮಿಷ್ಟಾಯಾಂ . . . . .

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಅಂಗಡಿ ಗುರುಸಿದ್ಧಪ್ಪನ ಹೊಲದಲ್ಲಿರುವ ಶಾಸನ, (ಮಾಡಲಗೇರಿ, ದಾವಣಗೇರಿ ಜ)
೨. ಹೊನ್ನತ್ತಿ ಹನುಮಪ್ಪನವರ ಹೊಲದಲ್ಲಿಯ ಶಾಸನ (ಮಾಡಲಗೇರಿ, ದಾವಣಗೇರಿ ಜ.)
೩. ಚಿಕ್ಕೆರೂರು ಗೋವಿಂದಚಾರ್ಯರ ಹಸ್ತಪ್ರತಿ (ಹರಪನಹಳ್ಳಿ)
೪. ಸ್ಥಳೀಯರ ಹೇಳಿಕೆಗಳು (ಮಾಡಲಗೇರಿ ಗ್ರಾಮಸ್ಥರು)
೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಸಂ. ಡಾ. ದೇವರ ಕೊಂಡಾರೆಡ್ಡಿ ಮತ್ತು ಇತರರು, ೧೯೯೮ ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

★ ★ ★ ★



ನಟರಾಜ ವಿಶ್ವದಗಲಕ್ಕೆ ನಿನ್ನ ಕರಗಳ ಚಾಚಿ
ಜಗದ ಇತಿಹಾಸದ ಕಲೆಯ ಬಾಚಿದೆ
ಬಾದಾಮಿಯೊಳು ಚಲಿಸಿರುವ ನಿನ್ನ ಚೈತನ್ಯ ಭಂಗಿ
ಯಾವ ಶಿಲ್ಪಿಗೆ ಎಂಥ ಭಾವವ ಉದ್ಭವವಿಟ್ಟ ಭಂಗಿ!



ದೇವೇಂದ್ರ ಮಾಧವನವರ*

ಅಜ್ಞಾತ ಐತಿಹಾಸಿಕ ನೆಲೆ ಹಾಳುಹುಲ್ಲೂರು

ಈ ಹುಲ್ಲೂರಿನ ನೆಲೆ ಬಾದಾಮಿಯಿಂದ ಆಗ್ನೇ ದಿಕ್ಕಿಗೆ ಸುಮಾರು ೧೮ ಕಿ.ಮೀ. ದೂರದಲ್ಲಿ ಮಲ್ಲಾಪುರದ ಬಳಿ ೨ ಕಿ.ಮೀ. ದೂರದಲ್ಲಿ ಹಾಳು ಹುಲ್ಲೂರು ಇದೆ. ಇದು ಬಾದಾಮಿ ತಾಲೂಕಿನ ಗುಡ್ಡದ ಮಲ್ಲಾಪುರ ಗ್ರಾಮಕ್ಕೆ ಹೊಂದಿಕೊಂಡಿದೆ. ೧೯೪೮ರ ರಜಾಕಾರರ ಹಾವಳಿಗಿಂತ ಮೊದಲು ಗುಡ್ಡದ ಮಲ್ಲಾಪುರ, ಸರ್ಜಾಪುರ, ಬೊಮ್ಮಸಾಗರಗಳು ರಾಯಚೂರ ಜಿಲ್ಲೆಯ ಕುಷ್ಟಗಿ ತಾಲೂಕಿನಲ್ಲಿದ್ದವು. ಈ ಹುಲ್ಲೂರು ಪ್ರದೇಶದಲ್ಲಿ ಮನೆಗಳಾಗಲಿ, ಜನವಸತಿಯಾಗಲಿ ಇಲ್ಲ. ಆದರೆ ಇಲ್ಲಿ ಸ್ಮಾರಕಗಳು, ದೇವಾಲಯಗಳು, ಹಾಗು ಹುಲ್ಲೂರಿನ ಮೂರು ದಿಕ್ಕಿನಲ್ಲಿ ವನರಾಶಿಯಿಂದ ತುಂಬಿದ ಸುಂದರ ಗುಡ್ಡಗಳಿವೆ. ಗುಡ್ಡದಿಂದ ಹರಿದು ಬರುವ ಪಾರ್ವತೆವ್ವನ ಹಳ್ಳವೇ ಹುಲ್ಲೂರಿಗೆ ನೀರು ಪೂರೈಸುವ ಜಲಮೂಲ. ಹುಲ್ಲೂರಿನ ಪೂರ್ವಕ್ಕೆ ಗುಡ್ಡಕ್ಕೆ ಆತುಗೊಂಡು ೮-೧೦ ಎಕರೆಗಳ ವಿಸ್ತೀರ್ಣದ ಕೆರೆ ಇತ್ತು. ಅದಕ್ಕೆ ಹಾಕಿದ ದೊಡ್ಡ ಕಲ್ಲೊಡ್ಡಿನ ಒಂದು ಭಾಗ ಇನ್ನೂ ಇದೆ. ನೀರನ್ನು ಊರಿನೊಳಕ್ಕೆ ಬಿಡುವ ಕಾಲುವೆ, ತೂಬು, ನೀರನ್ನು ನಿಯಂತ್ರಿಸಲು ಮಾಡಿದ ತಿರುಗಣಿ ಕಟ್ಟಡ ಇವೆಲ್ಲ ಕಟೆದ ಕಲ್ಲಿನಲ್ಲಿ ಮಾಡಿದ್ದು ಈಗಲೂ ಸುಸ್ಥಿತಿಯಲ್ಲಿವೆ. ಕೆರೆಯ ಉತ್ತರ ಅಂಚಿನಲ್ಲಿ



ಕೆರೆಯ ಕೋಡಿ ಇದ್ದು, ಇಲ್ಲಿಯೇ ಕೋಡೆವ್ವನ ಚಿಕ್ಕ ಗುಡಿ ಇದೆ. ಕಪ್ಪು ಕಲ್ಲಿನ ಸುಂದರ ಸ್ತ್ರೀಮೂರ್ತಿಯ (ಮಹಿಷಮರ್ದಿನಿ?) ಮೇಲ್ಭಾಗ ನಾಶವಾಗಿದೆ. ಕೆರೆಯ ಪಶ್ಚಿಮ ಭಾಗವೇ ಹುಲ್ಲೂರಿನ ವಿಶಾಲ ಹರಹು. ಈಗ ಇದೇ ಪ್ರದೇಶದಲ್ಲಿಯೇ ಚಿಕ್ಕ ಪಾರ್ವತಿ ಹಳ್ಳಹರಿದು ಪಶ್ಚಿಮಕ್ಕೆ ಸಾಗಿದೆ.

ಪೂರ್ವಾಭಿಮುಖವಾಗಿರುವ ಇಲ್ಲಿಯ ಪ್ರಮುಖ ದೇವಾಲಯ ಕುಂಬಾರಗುಡಿಯೆಂದು ಕರೆಯಲ್ಪಡುವ ಈಶ್ವರ ಗುಡಿ. ಇದು ೧೧ನೆಯ ಶತಮಾನದ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ ಎಂದು ಹೇಳಬಹುದು. ಮಾಧ್ಯಮ ಕೆಂಪು ಮರಳು ಶಿಲೆ.

ಗರ್ಭಗೃಹ : ಗರ್ಭಗೃಹ ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿದ್ದ ೩.೦" ಎತ್ತರದ (ಪೀಠಸೇರಿ) ಈಶ್ವರಲಿಂಗವನ್ನು ಕಿತ್ತು ಪಕ್ಕಕ್ಕೆ ಸರಿಸಲಾಗಿದೆ. ಅದರ ದ್ವಾರಬಂಧದಲ್ಲಿ ನಾಲ್ಕು ನಿರಾಲಂಕಾರ ಶಾಖೆಗಳಿವೆ. ಒಂದು ಸ್ತಂಭ ಶಾಖೆ ಇದೆ. ಲಲಾಟ ಬಿಂಬದಲ್ಲಿ ಗಣಪತಿಯ ವಿಗ್ರಹವಿದೆ. ಐದು ರೇಖಾನಾಗರ ಶಿಖರಗಳ ಅಲಂಕಾರವಿದೆ. ಮಧ್ಯದ ಶಿಖರ ದೊಡ್ಡದಾಗಿದೆ. ಆಚೆ ಈಚೆ ಅಸ್ಪಷ್ಟ ಮೂರ್ತಿ ಶಿಲ್ಪವಿದೆ. ಬಳ್ಳಿ, ಕಲೆ ಇಲ್ಲ

ಅಂತರಾಳ

ಅಂತರಾಳ ಚೌಕಾಕಾರವಾಗಿದೆ. (೬'x೬') 'ಭಿತ್ತಿನಲ್ಲಿ ಅರಳಿದ ಕಮಲ ವಿನ್ಯಾಸವಿದೆ. ದ್ವಾರಬಂಧದಲ್ಲಿ ಮೂರು ನಿರಾಲಂಕಾರ ಶಾಖೆಗಳಿವೆ. ಎಡ, ಬಲ ಹಾಗೂ ಮೇಲೆ ನಾಲ್ಕು ಎಸಳಿನ ಹೂವಿನ ಜಾಲಂದರದಂತಿರುವ ಶಿಲ್ಪವಿದೆ. ಬಾಗಿಲ ಮೇಲೆ ೩" ಅಗಲದ ಹಲಗೆಯಂಥ ಶಿಲೆ ಹೊರಚಾಚಿದೆ.

ಸಭಾಮಂಟಪದಲ್ಲಿ ನವರಂಗವಿದ್ದು ಚೌಕಾಕಾರವಾಗಿದೆ. (೧೮'x೧೮') ಎಂಟು ಗೋಡೆಗಂಬಗಳು, ಮಧ್ಯದಲ್ಲಿ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಈ ನಾಲ್ಕು ಕಂಬಗಳ ನಡುವೆ ಎರಡು ಅಂಗುಲಗಳ ಎತ್ತರದ ವೇದಿಕೆ ಇದೆ. ಅಂತರಾಳದ ದ್ವಾರಬಂಧದ ಎಡಬಲಕ್ಕೆ ಭಿತ್ತಿಯಲ್ಲಿ ದೇವ ಕೋಷ್ಟಕಗಳಿದ್ದು ವಿಗ್ರಹಗಳಿಲ್ಲ. ನಡುವಿನ ನಾಲ್ಕು ಕಂಬಗಳ ಶಿಲ್ಪವಿನ್ಯಾಸ ಸಾಮಾನ್ಯವಾಗಿ ಒಂದೇ ತೆರನಾಗಿದ್ದು, ಲತಾಸುರಳಿಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಎರಡು ಸ್ತಂಭಗಳಲ್ಲಿ ಪಾದ, ಪೀಠ, ಕಾಂಡ (ದಂಡ) ತಾಟಿಕಾ, ಕುಂಭ, ಫಲಕ (ಗಾಲಿ), ವೀರಕಂಠ, ಬೋದಿಗೆ, ಬೋದಿಗೆ ತರಂಗ, (ಪೋಲಿಕಾ) ಇರುತ್ತವೆ. ಇವು ಮಿಶ್ರಕ ಸ್ತಂಭಗಳಾಗಿವೆ. ಇನ್ನೆರಡು ಚಿತ್ರಖಂಡ ಸ್ತಂಭಗಳಾಗಿವೆ. ಪಾದದಲ್ಲಿ ಒಂದು ಕುಂಭ, ಅದರಿಂದ ಲತೆಗಳು ಹೊರಚೆಲ್ಲುವ ದೃಶ್ಯವಿದೆ. ಮತ್ತು ಸ್ತಂಭದ ದಂಡದಲ್ಲಿ

* ನಿವೃತ್ತ ಉಪನ್ಯಾಸಕ, ಹೊಳೆಆಲೂರು; ರೋಣ ತಾಲ್ಲೂಕ್, ಗದಗ ಜಿಲ್ಲೆ - ೫೮೨ ೨೦೨

ಜೋಡಿ ಕುಂಭಗಳು, ಅವುಗಳಲ್ಲಿಯೂ ಲತೆಗಳು ಹೊರಚಾಚಿದ ದೃಶ್ಯಗಳಿವೆ. ಈ ಕಂಬಗಳ ಕಾಂಡಗಳಲ್ಲಿ ಎರಡಂಗಲ ಅಗಲದ ಅರ್ಧಚಂದ್ರಾಕೃತಿಯ ತಗ್ಗು ಕೆತ್ತಿದ ಪರಸ್ಪರ ಹೊಂದಿಕೊಂಡ ವಿನ್ಯಾಸಗಳಿವೆ. ಉಳಿದ ಜಾಗದಲ್ಲಿ ಹೂವಿನ ಕೆತ್ತನೆ ಇದೆ. ಸಭಾಮಂಟಪದ ಭಿತ್ತಿನಲ್ಲಿ ಪದ್ಮದ ಅಲಂಕಾರವಿದೆ. ಬಾದಾಮಿ ತಾಲೂಕಿನ ದೇವಾಲಯ ಹಾಗೂ ಶಾಸನಗಳನ್ನು ಅಭ್ಯಸಿಸಿದ ಇತಿಹಾಸ ಪ್ರಾಧ್ಯಾಪಕ ಶ್ರೀ ವೀರನಗೌಡ ಉಗಲಾಟರು, ಕುಂಬಾರ ಗುಡಿಯ ಸ್ತಂಭಗಳ ಅಲಂಕಾರ, ಬಾದಾಮಿ ಪ್ರದೇಶದ ದೇವಾಲಯಗಳಲ್ಲಿಯೇ ಅತ್ಯಂತ ಉತ್ತಮ ಮತ್ತು ಅಪರೂಪದ ಕಲಾಕೃತಿ ಎಂದು ಹೇಳುತ್ತಾರೆ. ಆದರೆ ಮಳೆಗಾಲದಲ್ಲಿ ಪಕ್ಕದ ಅಣೆಕಟ್ಟಿನ ಹಿನ್ನೀರಿನಲ್ಲಿ ಇಂಥ ದೇವಾಲಯ ಮುಳುಗುವದರಿಂದ, ಇದು ಶಿಥಿಲವಾಗುತ್ತ ಸಾಗಿದೆ.

ಸಭಾಮಂಟಪದ ದ್ವಾರಬಂದದಲ್ಲಿ ನಾಲ್ಕು ನಿರಾಲಂಕಾರ ಶಾಖೆಗಳಿವೆ. ಒಂದು ಸ್ತಂಭ ಶಾಖೆಯಿದೆ. ಈ ದೇವಾಲಯದ



ಹೊರಭಿತ್ತಿಯಲ್ಲಿ ಯಾವುದೇ ಅಲಂಕಾರವಿಲ್ಲ. ಗರ್ಭಗೃಹದ ಮೇಲ್ಕಟ್ಟಡ ಜೀರ್ಣಗೊಂಡಿದೆ.

ಈ ಊರಿನ ಇನ್ನೊಂದು ಚಿಕ್ಕ ಈಶ್ವರ ದೇವಾಲಯ ರಾಮಲಿಂಗನ ಗುಡಿ, ಪೂರ್ವ ದಿಕ್ಕಿಗೆ ಬಾಗಿಲು, ಕೆಂಪು ಮರಳು ಶಿಲೆ. ಇದು ದುಃಸ್ಥಿತಿಯಲ್ಲಿದೆ.

ಇದರ ಗರ್ಭಗೃಹ ಚೌಕಾಕಾರವಾಗಿದೆ. ಯಾವುದೇ ವಿಗ್ರಹವಿಲ್ಲ. ಲಿಂಗದ ಸ್ಥಳದಲ್ಲಿ ತಗ್ಗು ಇದೆ. ಗರ್ಭಗೃಹಕ್ಕೆ ಪಂಚಶಾಖಾ ರೀತಿಯ ದ್ವಾರಬಂಧವಿದೆ. ನಾಲ್ಕು ನಿರಾಲಂಕಾರ ಶಾಖೆಗಳಿವೆ. ಒಂದು ಸ್ತಂಭ ಶಾಖೆ ಇದೆ. ಲಲಾಟ ಬಿಂಬ ಚೌಕಾಕಾರವಾಗಿದ್ದು ಲಕ್ಷ್ಮಿಯ ಅಸ್ಪಷ್ಟ ಶಿಲ್ಪವಿದೆ. ದ್ವಾರದ ಎಡಬಲ ಸ್ತಂಭಗಳ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪವಿದೆ. ಅಕ್ಕ ಪಕ್ಕದಲ್ಲಿ ರೇಖೆಯು ಬಳ್ಳಿಯಾಕಾರದಲ್ಲಿ ಸುತ್ತುತ್ತಾ ಮೇಲೆ ಹೋಗಿದೆ. ಅಂತರಾಳ ಮತ್ತು ಸಭಾಮಂಟಪದ ಭಿತ್ತಿಯು ಬಿದ್ದು ಹೋಗಿದ್ದು, ಕೇವಲ ಚೌಕಾಕಾರ ನಿರಾಲಂಕಾರ ಸ್ತಂಭಗಳು ಮಾತ್ರ ಇವೆ. ಮೇಲೆ ಭುವನೇಶ್ವರಿ ಇಲ್ಲ. ಇದರ ಮೇಲ್ಕಟ್ಟಡ ಬಿದ್ದು ಹೋಗಿದೆ. ಹೊರಭಾಗದ ಭಿತ್ತಿಯಲ್ಲಿ ಯಾವುದೇ ಅಲಂಕಾರವಿಲ್ಲ. ಇದು ೧೧-೧೨ ನೆಯ ಶತಮಾನದ ಕಲ್ಯಾಣ ಚಾಲುಕ್ಯರ ದೇವಾಲಯ ದಂತಿದೆ.

ಮೇಲಿನ ಎರಡು ದೇವಾಲಯಗಳ ಮಧ್ಯ ಹಳೆಕಾಲದ ಮಾರುತಿ ಗುಡಿ ಇದೆ. ಅದರಲ್ಲಿ ವಿಶೇಷ ವಿನ್ಯಾಸಗಳಿಲ್ಲ. ಎದುರಿಗೆ ಮುರಿದ ದೀಪಸ್ತಂಭವಿದೆ. ಕುಂಬಾರ ಗುಡಿಯ ಉತ್ತರದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪದ ಶಿಲೆ ಬಿದ್ದಿದೆ. ಕುಂಬಾರ ಗುಡಿಯ ನೈಋತ್ಯಕ್ಕೆ ಸ್ವಲ್ಪ ದೂರದಲ್ಲಿ ಅಗಲವಾದ ದಿಬ್ಬವಿದೆ. ಇಲ್ಲಿ ದೇವಾಲಯವಿದ್ದಿರಬಹುದು. ಇಲ್ಲಿ ಮುಕ್ಕಾದ ಸುಂದರ ಮಹಿಷಾಸುರ ಮರ್ದಿನಿಯ ಶಿಲ್ಪದ ಕಲ್ಲು ಅನಾಥವಾಗಿ ಬಿದ್ದಿದೆ (೩೮" ಎತ್ತರ, ೨೩" ಅಗಲ). ಮೇಲಿನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಾಲು. ಇನ್ನೆರಡು ಕೈ ಒಡೆದಿದೆ. ಕೆಳಗೆ ಮಹಿಷ. ಕಿರೀಟ, ಪ್ರಭಾವಳಿ, ಕಿವಿಯೋಲೆ ಇವೆ. ಎದುರಿಗೆ ಎರಡು ಪಾದಗಳ ಉಬ್ಬು ಶಿಲ್ಪದ ಚೌಕಾಕಾರದ ಕಲ್ಲು ಪ್ರತ್ಯೇಕವಾದದ್ದಿದೆ.

ಕುಂಬಾರಗುಡಿಯ ಹತ್ತಿರ ಎರಡು ಎತ್ತರವಾದ ದೊಡ್ಡ ಕಲ್ಲಿನ ಒರಳುಗಳಿವೆ! (ವ್ಯಾಸ ೧೭)" ಇವು ಕಲ್ಲಿನ ಗಾಣಗಳಿರಬಹುದು. ಕಬ್ಬಿಣದ ಕಿಟ್ಟದ ಉಂಡಿಗಳು, ವಿವಿಧ ಅಕಾರದ ಚಿಕ್ಕ ವಸ್ತುಗಳು, ಮಡಿಕೆ ತುಂಡುಗಳು ಸಾಕಷ್ಟು ಹರಡಿಕೊಂಡಿವೆ. ಕುಂಬಾರಗುಡಿಯ ದಕ್ಷಿಣಕ್ಕೆ ಅಲ್ಲಲ್ಲಿ ಮೂರು ದೇವಾಲಯ ವಿದ್ದಿರಬಹುದಾದ ಅಗಲವಾದ ದಿಬ್ಬಗಳಿವೆ. ಅಲ್ಲಿ ಮೂರ್ತಿಗಳನ್ನು ಕಿತ್ತ ದೊಡ್ಡ ತಗ್ಗುಗಳಿವೆ. ಸುತ್ತಲೂ ದೊಡ್ಡ ಗೋಡೆಗಲ್ಲು ಬಿದ್ದಿದೆ.

ಜಿನಮೂರ್ತಿ : ಇಲ್ಲಿ ಮಣ್ಣು ಅಗೆದಾಗ ಎರಡು ಸುಂದರ ಜೈನ ಮೂರ್ತಿಗಳು ದೊರೆತಿವೆ. ಒಂದು ಒಡೆದು ಚಿಕ್ಕ ತುಂಡಾಗಿ



ದಾರಿಯಲ್ಲಿ ಚೆಲ್ಲಾಪಿಲ್ಲಿಯಾಗಿದೆ. ಇನ್ನೊಂದನ್ನು ಎರಡು ಕಿ.ಮೀ. ಸಮೀಪದ ಬೊಮ್ಮಸಾಗರದ ನಾಗರಿಕರು ತಮ್ಮೂರ ಕಟ್ಟೆಯ ಮೇಲೆ ೧೦ ವರ್ಷಗಳ ಹಿಂದೆ ಸ್ಥಾಪಿಸಿ ರಕ್ಷಣೆ ನೀಡಿದ್ದಾರೆ. ಕಾಲಿನ ಕೆಳಭಾಗ ಮುರಿದಿವೆ. ಮೊಳಕಾಲಿನಿಂದ ೨೩" ಎತ್ತರವಾಗಿದೆ. ಭುಜ ಸೇರಿ ಅಗಲ ೯". ಹಸಿರು ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ. ಗುಂಗುರುಗೂದಲು, ಕರ್ಣಕುಂಡಲಗಳು, ಬಾಹುಗಳ ಎಡಬಲಕ್ಕೆ ಮಕರದಲ್ಲಿ ಕುಳಿತ ಸ್ತ್ರೀ, ಬಲಗೈಯಲ್ಲಿ ಸಾಲಿಗ್ರಾಮ ದಂತಹ ವಸ್ತು, ಎಡಗೈಯಲ್ಲಿ ಗದೆಯಂತಹ ಆಯುಧ (ಅಸ್ಪಸ್ಟ) ಮಕರದಿಂದ ಮೇಲಕ್ಕೆ ಲತಾ ಸುರಳಿಗಳು ವ್ಯಾಪಿಸಿವೆ. ಭುಜಗಳ ಮೇಲೆ ಕಲಾತ್ಮಕ ಚೌರಿ, ಮುಕ್ಕೊಡೆ, ಪ್ರಭಾವಳಿ, ಮೇಲೆ ಸಿಂಹ ಮುಖ ಇದು ಮಹಾವೀರನ ಮೂರ್ತಿ ಇರಬಹುದು.

ಮೌಖಿಕ ಇತಿಹಾಸ : ಈ ಹುಲ್ಲೂರಿನ ಇತಿಹಾಸಕ್ಕೆ ಸಂಬಂಧಿಸಿದ ಶಾಸನ, ದಾಖಲೆ, ಇತರ ಆಧಾರ ಲಭ್ಯವಿಲ್ಲ. ಆದರೆ ಇತ್ತೀಚಿನ ಅಂದರೆ ಸುಮಾರು ೩೦೦ ವರ್ಷಗಳ ಘಟನೆಗಳು, ವಿವರಗಳು ಮುಖ್ಯಾಂಶ ಇಂತಿದೆ : ಹುಲ್ಲೂರಿನಲ್ಲಿ ಪ್ರಮುಖವಾಗಿ ಬೇಡ ಜನಾಂಗದ ವಸತಿ ಇತ್ತು. ಇವರು ಆಗಾಗ ಸುತ್ತಲಿನ ಪ್ರದೇಶದಲ್ಲಿ ದಾಳಿ ಮಾಡುತ್ತ ಸಂಸ್ಥಾನಿಕರ ಬಂಡವಾಳಶಾಹಿಗಳ ಸಂಪತ್ತನ್ನು ಸುಲಿಗೆ ಮಾಡುತ್ತಿದ್ದರು. ಬೊಮ್ಮನಾಯಕ, ತಿಮ್ಮನಾಯಕ ಎಂಬ ಶೂರ ಸಹೋದರರು ಇವರಿಗೆ ನಾಯಕರಾಗಿದ್ದರು. ಶಸ್ತ್ರಗಳ ಗಾಯ ಬೇಗ ವಾಸಿ ಮಾಡಿಕೊಳ್ಳುವ ಮತ್ತು ವಿಷಪ್ರಾಶನದ ಪರಿಣಾಮ ನಿಷ್ಫಲ ಗೊಳಿಸುವ ನಾಟಿ ವಿದ್ಯೆ ಬಲ್ಲವರಾಗಿದ್ದರು. (ಕುಂಬಾರ ಗುಡಿಯ ಹಿಂದೆ ಇರುವ ಕಟ್ಟಡದ ತಳಪಾಯದ ಗುರುತುಗಳು ಇವರ ಅರಮನೆಯವಾಗಿವೆ.) ಈ ಊರ ಕೋಟೆಗೆ ಕಂಚಿನ ಹೆಬ್ಬಾಗಿಲಿತ್ತು. (ಈಗ ಕೋಟೆಯ ಗುರುತುಗಳಿಲ್ಲ.) ರಾತ್ರಿ ೧೦ ಗಂಟೆಗೆ ಬಾಗಿಲು ಮುಚ್ಚುತ್ತಿದ್ದ ಶಬ್ದ ೧೫ಕಿ.ಮೀ. ದೂರ ಕೇಳಿಸುತ್ತಿತ್ತು. ಇಲ್ಲಿಂದ ೧೨ ಕಿ.ಮೀ. ದೂರದಲ್ಲಿರುವ ಕೊತಬಾಳದ ಗೃಹಿಣಿ ರಾತ್ರಿ ಕಟ್ಟೆಯ ಮೇಲೆ ನೂಲುತ್ತ ಕುಳಿತಿದ್ದು, ಈ ಧ್ವನಿ ಕೇಳಿ ತನ್ನ ತವರವರು ಮಲಗಿದರೆಂದು ತಾನೂ ಮಲಗಲು ಎದ್ದು ಹೋಗುತ್ತಿದ್ದಳು.

ಹುಲ್ಲೂರಿನ ಪಶ್ಚಿಮಕ್ಕೆ ೭ ಕಿ.ಮೀ. ದೂರದಲ್ಲಿದ್ದ ಜಾಲಿಹಾಳ (ಈಗಿನ ಬೇಲೂರು ಅಥವಾ ಪ್ಯಾಟಿ ಜಾಲಿಹಾಳ) ದೇಸಗತಿ ಮೇಲೆ ಆಗಾಗ ದಾಳಿ ಮಾಡಿ ದೇಸಾಯಿ ಏಳಿಗೆಯಾಗದಂತೆ ಇವರು ಮಾಡಿದ್ದರು. ಬೇಟೆಯಾಡುತ್ತ ಬಂದು ಬನಶಂಕರಿಯಲ್ಲಿ ತಂಗಿದ ಶಿರೂರ ದೇಸಾಯಿ (ರಾತ್ರಿ ಕನಸಿನಲ್ಲಿ, ಮುಂದೆ ಇಟ್ಟ ಹೆಜ್ಜೆ ಹಿಂದೆ ಇಡಬೇಡ ಎಂದು ದೇವಿ ಹೇಳಿದ್ದರಿಂದ) ಜಾಲಿಹಾಳಕ್ಕೆ ಆಗಮಿಸಿ ಪರಿಸ್ಥಿತಿ ತಿಳಿದು ಆ ದೇಸಾಯಿಗೆ ಸಹಾಯ ಮಾಡುವದಾಗಿ ಅಭಯವಿತ್ತನು. ಹತಾಶನಾಗಿದ್ದ (ಬಹುಶಃ ಮಕ್ಕಳಿಲ್ಲದ) ದೇಸಾಯಿ ಹುಲ್ಲೂರ ಬೇಡರನ್ನು ನಾಶಮಾಡಿದರೆ ತನ್ನ ದೇಸಗತಿಯನ್ನೇ ಅವನಿಗೆ ಬಿಟ್ಟುಕೊಡುವುದಾಗಿ ವಚನವಿತ್ತನು. ಶೌರ್ಯದಿಂದ ಸೋಲಿಸಲು ಅಸಾಧ್ಯವಾಗಿದ್ದ ಬೇಡರನ್ನು ಉಪಾಯ ಹಾಗೂ ಮೋಸದಿಂದ ಸೋಲಿಸಲು ಶಿರೂರ ದೇಸಾಯಿ ಸನ್ನದ್ಧನಾದನು. ಕಾಳುಕಡಿ, ಮಸಾಲೆ ಸಾಮಾನುಗಳ ಚಿಕ್ಕ ವ್ಯಾಪಾರಿಯಾಗಿ ಕಂಟಲೆ ಎತ್ತಿನ ಸವಾರಿ ಮಾಡುತ್ತ ಹುಲ್ಲೂರನ್ನು ಪ್ರವೇಶಿಸಿ ವರ್ಷಾನುಗಟ್ಟಲೆ ವಿನಯ, ನಿಷ್ಠೆಗಳನ್ನು ಅಭಿನಯಿಸುತ್ತ ಬೇಡರ ವಿಶ್ವಾಸವನ್ನು ಗಳಿಸಿದನು. ತನಗೆ ದೇವರು ಬಹಳ ಲಾಭ ದಯಪಾಲಿಸಿರುವದರಿಂದ ಗುಡ್ಡದ ಮೇಲಿನ ಶಾಂತೇಶ್ವರನಿಗೆ ಪ್ರಸ್ತ (ಸಾರ್ವಜನಿಕ ಭೋಜನ) ಮಾಡಿಸುವದಾಗಿಯೂ, ಅನಾಥನಾದ ತನಗೆ ತಾವೇ ಬಂಧುಗಳಾಗಿದ್ದು ಎಲ್ಲ ವ್ಯವಸ್ಥೆ ಮಾಡಬೇಕೆಂದೂ, ಊರಿನ ಪ್ರತಿಯೊಬ್ಬರೂ ಬಂದು ಭೋಜನ (ಹೊಸ್ತಿಲ ಬಿನ್ನಾಯ) ಸ್ವೀಕರಿಸಬೇಕೆಂದೂ ಕೈಮುಗಿದು ವಿನಂತಿಸಿದನು. ಪ್ರಸ್ತದ ದಿನ

ಅವರ ದೈವವಾಗಿದ್ದ ಶಸ್ತ್ರಗಳನ್ನೆಲ್ಲ ಒಂದೆಡೆ ರಾಶಿ ಹಾಕಿಸಿ ಪೂಜೆ ಮಾಡಿಸಿದನು. ಎಲ್ಲರೂ ಒಮ್ಮೆಲೆ ಊಟಕ್ಕೆ ಕೂಡ್ರುವಂತೆ ವ್ಯವಸ್ಥೆ ಮಾಡಿದ್ದನು. ಆದರೆ ಅವನು ಮೊದಲೇ ಉಪಾಯದಿಂದ ಅಡಿಗೆಯಲ್ಲಿ ವಿಷ ಬೆರೆಸಿದ್ದರಿಂದ ಬೇಡರೆಲ್ಲ ಸತ್ತುಬಿದ್ದರು. ತಮ್ಮ ವಿಷ ನಿರೋಧಕ ಶಕ್ತಿಯಿಂದ ಬಹಳ ಹೊತ್ತು ಬದುಕಿ ಸಂಕಟ ಪಡುತ್ತಿದ್ದ ಬೊಮ್ಮನಾಯಕ, ತಿಮ್ಮನಾಯಕರು ಇನ್ನಿಷ್ಟು ವಿಷ ಕೊಟ್ಟು ಬೇಗ ಸಾಯಿಸಲು ಅಂಗಲಾಚಿದರು.

ಆ ಮೇಲೆ ದೇಸಾಯರು ಹುಲ್ಲೂರಿಗೆ ಸೈನ್ಯದೊಂದಿಗೆ ಬಂದು ಅಳಿದುಳಿದವರನ್ನು ಸಂಹರಿಸಿದರು. ಇವರ ವಂಶವನ್ನೇ ಉಳಿಸಬಾರದೆಂಬ ಹಟದಿಂದ ಗರ್ಭಿಣಿಯರ ಹೊಟ್ಟೆ ಸೀಳಿ ಗರ್ಭಸ್ಥ ಶಿಶುಗಳನ್ನು ಕೊಂದರು. ಆಗ ಈ ಊರ ಗರ್ಭಿಣಿಯೊಬ್ಬಳು ಹೆರಿಗೆಗೆಂದು ತವರೂರು ಹಿರೇಹಾಳಕ್ಕೆ (೯ಕಿ.ಮೀ.) ಹೋಗಿದ್ದಳು. ಇದನ್ನರಿತ ಅವರು ಅಲ್ಲಿಗೂ ಧಾವಿಸಿದರು. (ಜಾಲಿಹಾಳದ ದಕ್ಷಿಣಕ್ಕೆ ಹಿರೇಹಾಳ ೬ ಕಿ.ಮೀ.). ಇದರ ಸೂಚನೆ ಮೊದಲೇ ಅರಿತು ಆಕೆಯ ಗಂಡು ಕೂಸನ್ನು ಬದಲಿಸಿದ್ದರಿಂದ ಅದು ಬದುಕಿತು. ಆ ಮಗು ದೊಡ್ಡವನಾಗಿ ಹುಲ್ಲೂರಿನ ಸಮೀಪದ ಬೊಮ್ಮಸಾಗರ ಸೇರಿ ಹುಲ್ಲೂರಿನ ಭೂಮಿಯಲ್ಲಿ ಬೇಸಾಯ ಪ್ರಾರಂಭಿಸಿದನು. ಅವನ ವಂಶದ ಏಳೆಂಟು ಮನೆತನಗಳು ಈಗಲೂ ಬೊಮ್ಮಸಾಗರದಲ್ಲಿವೆ. ಇವರು ಜಾತಿಯಿಂದ ಬೇಡರಾಗಿದ್ದು, ಇವರ ಅಡ್ಡ ಹೆಸರು 'ಹುಲ್ಲೂರ' ಎಂದು ಇದೆ. ಇವರೆಲ್ಲರ ಹೊಲಗಳು ಹಾಳು ಹುಲ್ಲೂರಿಗೆ ಹೊಂದಿಕೊಂಡೇ ಇವೆ. ಹುಲ್ಲೂರಿನ ಪಟ್ಟಣ ವ್ಯವಸ್ಥೆಯ ಅವಶೇಷಗಳು, ಗುರುತುಗಳು ಇತ್ತೀಚಿನವಾಗಿದ್ದು, ಈ ಬೇಡರ ಪಾಳೆಗಾರಿಕೆ ಕಾಲಕ್ಕೆ ಸಂಬಂಧಿಸಿದವುಗಳಾಗಿರಬೇಕು.

ಅಲ್ಲದೆ ಬೊಮ್ಮಸಾಗರದ ಮನೆತನಗಳು ಹುಲ್ಲೂರ ಬೇಡರ ವಂಶಾವಳಿಯನ್ನು ಸೂಚಿಸುವ ಮಾಹಿತಿಯಂತಿವೆ. ಈ ಕತೆಯಲ್ಲಿ ಬೇರೆ ಬೇರೆ ಊರುಗಳು ಪ್ರಸ್ತಾಪಿಸಲ್ಪಟ್ಟಿದ್ದು ಅವು ಈಗಲೂ ಇವೆ.

ಜಾಲಿಹಾಳ ದೇಸಗತಿ ಪಡೆದ ಶಿರೂರ ದೇಸಾಯಿ ಪಕ್ಕದ ಜಾಲಿಯ ಅಡವಿಯಲ್ಲಿ ಬೇಟೆಯಾಡುವಾಗ ಮೊಲ ನಾಯಿಯನ್ನು ಕಚ್ಚಿದ್ದರಿಂದ, ತನ್ನ ರಾಜಧಾನಿಗೆ ಇದೇ ಉಚಿತ ಸ್ಥಳವೆಂದು ಭಾವಿಸಿ, ಹಾಳಾದ ಹುಲ್ಲೂರಿನ ಕಟ್ಟಡದ ಎಲ್ಲ ಸಾಮಗ್ರಿಗಳನ್ನು ಸಾಗಿಸಿ ಈಗಿನ ಜಾಲಿಹಾಳ ಗ್ರಾಮವನ್ನು ಕಟ್ಟಿಸಿದನಂತೆ. (ಎರಡುಜಾಲಿ ಹಾಳಗಳನ್ನು ಗುರುತಿಸಲು, ಇದನ್ನು ದೊಡ್ಡ ಜಾಲಿಹಾಳ, ಹಿರೇ ಜಾಲಿಹಾಳ (ಜಾಳ್) ಎನ್ನುವದೂ ಉಂಟು* ಆಳ ಹಳ್ಳಿಗಳ ಜಾಲಿಹಾಳ ದೇಸಗತಿಯ (ಶಿರೂರ ಮೂಲದ) ದೇಸಾಯರು ಕ್ಷತ್ರಿಯರಾಗಿದ್ದರು. ಇವರ ವಂಶಿಕರು ಕುರಹಟ್ಟಿ, ಗಾಡಗೋಳಿಗಳಲ್ಲಿದ್ದಾರೆ. ಜಾಲಿಹಾಳದಲ್ಲಿ ದೇಸಾಯರ ಕಲಾತ್ಮಕ ಸಮಾಧಿಗಳು, ಅರಮನೆಯ ಕುರುಹುಗಳು, ಗುಡ್ಡದ ಮೇಲಿನ ಹುಡೆ ಇವೆ. ಜಾಲಿಹಾಳ ದೇಸಗತಿಯನ್ನು ಬ್ರಿಟಿಶರು ರದ್ದುಪಡಿಸಿ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಟೀಪೂ ಸುಲ್ತಾನನು ಜಾಲಿಹಾಳ ದರ್ಗಾದಲ್ಲಿ (ಟೆಕ್ಕೆ) ಒಂದು ದಿನ ತಂಗಿದ್ದನೆಂಬ ಹೇಳಿಕೆ ಇದೆ. ಕ್ರಿ.ಶ. ೧೭೮೭ರ ಗಜೇಂದ್ರಗಡ ಒಪ್ಪಂದದಂತೆ ಟೀಪೂ ಬಾದಾಮಿಯನ್ನು ಮರಾಠರಿಗೆ ಬಿಟ್ಟುಕೊಟ್ಟನು. ಆವಾಗಲೇ ಅವನು ಜಾಲಿಹಾಳಕ್ಕೆ ಬಂದಿರಬಹುದು. ಈ ಮೊದಲು ಕ್ರಿ.ಶ. ೧೭೭೬ರ ಸಂಶಿಯ (ಹುಬ್ಬಳ್ಳಿ ಹತ್ತಿರ) ಯುದ್ಧದಲ್ಲಿ ಹೈದರಾಲಿಯ ವಿರುದ್ಧ ಪೇಶ್ವೆಯರಿಗೆ ಜಾಲಿಹಾಳ ದೇಸಾಯರು ಸಹಾಯ ಮಾಡಿದ ದಾಖಲೆ ಇತಿಹಾಸದಲ್ಲಿದೆ.[೧] ಈ ವೇಳೆಗಾಗಲೇ ಈಗಿನ ಜಾಲಿಹಾಳ ಕಟ್ಟಲ್ಪಟ್ಟಿರಬೇಕು. ಆದ್ದರಿಂದ ಇಂದಿಗೆ ಸುಮಾರು ೨೫೦-೩೦೦ ವರ್ಷಗಳ ಹಿಂದೆ ಹುಲ್ಲೂರಿನ ದುರಂತ ಘಟಿಸಿತೆಂದು ತರ್ಕಿಸಬಹುದು.

ಈ ದಿಸೆಯಲ್ಲಿ ಆಗಬೇಕಾದ ಕಾರ್ಯಗಳೆಂದರೆ, ಕಂಬಾರ ಗುಡಿ ರಾಮಲಿಂಗನ ಗುಡಿ ಜೀರ್ಣೋದ್ಧಾರ; ಬೊಮ್ಮಸಾಗರದ ಜಿನಮೂರ್ತಿಯ ಮರುಸ್ಥಾಪನೆ; ಐತಿಹಾಸಿಕ ಅವಶೇಷಗಳ ರಕ್ಷಣೆ ಹಾಗು ಪರಿಚಯ ಕರಪತ್ರಗಳ ಪ್ರಕಟಣೆ.

(ಕ್ಷೇತ್ರ ಕಾರ್ಯದಲ್ಲಿ ನೆರವಾದ ಪ್ರೌಢಶಾಲಾ ನಿವೃತ್ತ ಶಿಕ್ಷಕ, ಲೇಖಕ ಯ.ಹ. ಚಂದ್ರಗಿರಿ, ಶಿಕ್ಷಕ ರವಿ ಅವ್ವಣ್ಣವರ, ಮುತ್ತಣ್ಣ ಮಾಧವನವರ, ಛಾಯಾಗ್ರಾಹಕ ಸುನೀಲ ಮಾದವನವರ, ಸಲಹೆಗಳನ್ನಿತ್ತ ಬಸವನಗೌಡ ಉಗಲಾಟ ಇವರಿಗೆ ನನ್ನ ಕೃತಜ್ಞತೆಗಳು.)

---

* ಬಾದಾಮಿ ತಾಲೂಕಿನಲ್ಲೆ ಈ ಜಾಲಿಹಾಳದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿ ಪಟ್ಟದಕಲ್ಲ ಸಮೀಪ (ಬೇಡರ ಮೂಲದ) ಭದ್ರನಾಯಕನ (ಬಿ.ಎನ್.) ಜಾಲಿಹಾಳ ಎಂಬ ಚಿಕ್ಕ ಗ್ರಾಮವಿದೆ. ಅಲ್ಲಿಯೂ ಚಾಲುಕ್ಯರ ಕಾಲದ ಗುಡಿಗಳಿವೆ.

ಅಮರೇಶ ಯತಗಲ್*

ಲಿಂಗಸುಗೂರಿನ (ಛಾವಣಿ) ಐತಿಹಾಸಿಕ - ಕುರುಹುಗಳು

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಕರಡಿಕಲ್ಲು ಗ್ರಾಮವು ಶಾಲಿವಾಹನ ಶಕೆ ೧೦೪೦ (ಕ್ರಿ.ಶ. ೧೧೧೮)ರಲ್ಲಿ ಕದಂಬರ ಆಡಳಿತಕ್ಕೆ ಒಳಪಟ್ಟಿತ್ತು. ದಶವರ್ಮನ ಮಗ ಆರನೇ ವಿಕ್ರಮಾದಿತ್ಯನು ಅಬ್ಬಲಾದೇವಿ ರಾಣಿಗೆ ಕರಡಕಲ್ ಮುಂತಾದ ೪೦೦ ಗ್ರಾಮಗಳಲ್ಲಿ ಲಿಂಗವೆಂಬ ಗ್ರಾಮವನ್ನು (ಕ್ರಿ.ಶ. ೧೦೦೮) ಇನಾಮಾಗಿ ನೀಡಿದನು. ಈ ವಿಷಯ ಲಿಂಗಸುಗೂರಿನ ಪುರಾತನ ಕಲ್ಲೇಶ್ವರ ದೇವಾಲಯದ (ಕಲಿದೇವ) ಶಿಲಾ ಲಿಪಿಯಲ್ಲಿದೆ.

ಲಿಂಗಸುಗೂರಿನ ಅಷ್ಟದಿಕ್ಕುಗಳಲ್ಲಿ ಲಿಂಗಗಳಿವೆ. ಬಹು



ಭಾಗಗಳಲ್ಲಿ ಲಿಂಗಗಳು ಭೂಗತವಾಗಿರುವ ಕಾರಣ ಲಿಂಗ ಎಂಬುದು ಲಿಂಗಸಾಗರವೆಂದಾಯಿತು. ಆಡುಭಾಷೆಯಲ್ಲಿ ಲಿಂಗಸುಗೂರು ಆಯಿತು. ಇಂಗ್ಲೀಷರ ಕಾಲಕ್ಕೆ ಈ ಊರಿನ ಉತ್ತರ ಭಾಗಕ್ಕೆ ೪ ಕಿ.ಮೀ. ದೂರದಲ್ಲಿ ಬ್ರಿಟಿಷರು ತಮ್ಮ ಸೈನ್ಯವನ್ನು ಭದ್ರತೆಗಾಗಿ ಇಟ್ಟ ಕಾರಣ ಈ ಭಾಗಕ್ಕೆ **ಛಾವಣಿ** ಎಂದು ಕರೆದರು.

ಲಿಂಗಸುಗೂರಿನ (ಕಸಬಾ) ಐತಿಹಾಸಿಕ-ದೇವಾಲಯಗಳು ಕಸಬಾ ಲಿಂಗಸುಗೂರಿನಲ್ಲಿ ಶ್ರೀ ರಾಮದೇವರು, ಈಶ್ವರ ಶಂಕರ ಲಿಂಗ, ಬಾಗೇಸೋಪು, ಕುಪ್ಪೀಸ್ವಾಮಿ, ವೆಂಕಟರಮಣ, ಬಂಡೆಪ್ಪ, ಜ್ಯೋತಿರ್ಲಿಂಗ, ಬುಡಿ ಬ್ರಹ್ಮ, ಮೈಲಾರ ಲಿಂಗ, ವೆಂಕಟೇಶ್ವರ, ಉತ್ಸವ ಮೂರ್ತಿ. ಮುಂತಾದ ದೇವಾಲಯಗಳಿವೆ.

ಆಂಜನೇಯ ಸ್ವಾಮಿ ದೇವಾಲಯ : ಕಸಬಾ ಲಿಂಗಸುಗೂರಿನ ಈಶಾನ್ಯ ಭಾಗಕ್ಕೆ ಶ್ರೀ ಆಂಜನೇಯ ಸ್ವಾಮಿಯ ಭವ್ಯವಾದ ದೇವಾಲಯವಿದೆ. ಶ್ರೀ ಆಂಜನೇಯ ಸ್ವಾಮಿ ಕುಪ್ಪೀಎಂಬ ಗ್ರಾಮದಲ್ಲಿದ್ದರಿಂದ ಕುಪ್ಪೀ ಭೀಮ ಎಂಬ ಹೆಸರು ಬಳಕೆಯಾಯಿತು. ಈ ವಿಗ್ರಹ ಜನುಮೇಜಯರಾಯನ ಕರಾರ್ಜಿತ ವೆಂಬ ಸಾಂಪ್ರದಾಯಿಕ ನಂಬುಗೆ ಇದೆ; ಶ್ರೀ ವ್ಯಾಸರಾಜರಿಂದ ಪ್ರಪೂಜಿತವಾಗಿದೆ. ದಕ್ಷಿಣ ಭಾರತದ ಪ್ರಬಲ ಸಾಮ್ರಾಜ್ಯವಾಗಿದ್ದ ವಿಜಯನಗರ ಸಾಮ್ರಾಜ್ಯಕ್ಕೆ ರಾಜಗುರುಗಳಾದ ಶ್ರೀಮದ್ ವ್ಯಾಸರಾಯರು ಕ್ರಿ.ಶ. ೧೫೦೦ರಲ್ಲಿ ನಾಡಿನ ವಿವಿಧ ಭಾಗಗಳಲ್ಲಿ ೭೩೨ ಶ್ರೀ ಪ್ರಾಣದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರೆಂದು ಅವುಗಳಲ್ಲಿ ಕಸಬಾ ಲಿಂಗಸುಗೂರಿನ ಶ್ರೀ ಕುಪ್ಪಿ ಭೀಮನ ಮೂರ್ತಿಯೂ ಒಂದು ಎನ್ನುವುದಿದೆ. ಈ ದೇವಾಲಯ ವಿಜಯನಗರದ ವಾಸ್ತುಶಿಲ್ಪದ ಲಕ್ಷಣಗಳನ್ನು ಹೊಂದಿದೆ. ಪ್ರಾರಂಭದಲ್ಲಿ ಗುಡಿಗೆ ಸುಮಾರು ಕ್ರಿ.ಶ. ೧೬೨೦ರಲ್ಲಿ ಮುಂಭಾಗದ ಮಹಾದ್ವಾರದ ಗೋಪುರದ ಸುತ್ತಲೂ ಮಂಟಪಗಳನ್ನು ಕಟ್ಟಿಸಿದ್ದಾರೆ. ಇಲ್ಲಿಯ ತೇರು ಲಿಂಗಸುಗೂರು ತಾಲೂಕಿನಲ್ಲಿಯೇ ಅತೀ ದೊಡ್ಡ ತೇರಾಗಿದೆ. ಇದರ ಎತ್ತರ ೩೦ ಅಡಿಗಳು, ೧೯೨೦ ಇದನ್ನು ನಿರ್ಮಿಸಲಾಗಿದೆ.

ಶ್ರೀ ವೆಂಕಟರಮಣನ ದೇವಾಲಯ : ಕುಪ್ಪೀ ಭೀಮನ ದೇವಾಲಯದ ಸಮೀಪ ಶ್ರೀವೆಂಕಟರಮಣನ ದೇವಾಲಯವಿದೆ. ಇದನ್ನು ಕುಪ್ಪಿ ವೆಂಕಟರಣ ಹಾಗೂ ನಾರಾಯಣನ ಗುಡಿ ಎಂದು ಕರೆಯುತ್ತಾರೆ. ರಕ್ಷಣೆಯಿಲ್ಲದೆ ಈ ಗುಡಿ ಶಿಥಿಲಾವಸ್ಥೆಯಲ್ಲಿದೆ. ಆದರೆ ವಿಗ್ರಹ ಮಾತ್ರ ಸುಸ್ಥಿತಿಯಲ್ಲಿದೆ. ವೆಂಕಟರಮಣನಿಗೆ ನಾಲ್ಕು ಕರಗಳಿದ್ದು ಮೇಲಿನ ಎರಡು ಕರಗಳಲ್ಲಿ ಶಂಖ, ಚಕ್ರಗಳಿದ್ದು ಕೆಳ ಬಲಗೈಯ ಹಸ್ತ ಕೆಳಮುಖವಾಗಿ, ಎಡಗೈಯನ್ನು ಟೊಂಕದ ಮೇಲೆ

* ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಗುರುಗುಂಟಾ, ಕಸಬಾ ಲಿಂಗಸುಗೂರು, ಲಿಂಗಸುಗೂರು ತಾ, ರಾಯಚೂರು ಜಿಲ್ಲೆ, ೫೮೪ ೧೨೨



ಇಟ್ಟಿದ್ದಾನೆ. ಕೊರಳಲ್ಲಿ ಹಾರವಿದೆ, ಪಿತಾಂಬರ ಉಟ್ಟಿದ್ದಾನೆ. ಕಾಲುಗಳಲ್ಲಿ ಗೆಜ್ಜೆ ಧರಿಸಿದ್ದಾನೆ. ಈ ವಿಗ್ರಹ ವಿಜಯನಗರದ ಕಾಲದ್ದೆಂದು ಪ್ರತೀತಿಯೂ ಇದೆ.

ರಾಮತೀರ್ಥ : ವೆಂಕಟರಮಣನ ದೇವಾಲಯದ ಉತ್ತರ ಭಾಗಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಒಂದು ಪುರಾತನ ರಾಮಮಂದಿರವಿದ್ದು ಅದರ ಮುಂದಿದ್ದ ಪುಷ್ಕರಣಿಗೆ ರಾಮತೀರ್ಥವೆಂದು ಹೆಸರು. ರಾಮ ಕಿಷ್ಕಿಂಧೆಗೆ ಇದೇ ಮಾರ್ಗವಾಗಿ ಹೋಗುವಾಗ ಆ ಸಮಯದಲ್ಲಿ ಕ್ಷಣಕಾಲ ತಂಗಿದ್ದನಂತೆ. ಆಗ ಈ ಭಾಗದಲ್ಲಿ ನೀರಿನ ಅಭಾವವಿದ್ದ ಕಾರಣ ಎಲ್ಲರಿಗೂ ನೀರಿನ ಅನುಕೂಲವಾಗಲೆಂದು ಲಕ್ಷ್ಮಣನು ಪ್ರಾರ್ಥಿಸಿದನು. ಆಗ ರಾಮನು ಬಾಣವನ್ನು ಬಿಟ್ಟಾಗ ನೆಲದಿಂದ ನೀರು ಚಿಮ್ಮಿತು. ಅದೇ ರಾಮತೀರ್ಥವಾಯಿತೆಂದು ಹೇಳುತ್ತಾರೆ. ರಾಮ, ಲಕ್ಷ್ಮಣರೂ ಇಲ್ಲಿ ವಿಶ್ರಾಂತಿ ಪಡೆದರೆಂಬ ನಂಬಿಕೆಗನು ಗುಣವಾಗಿ ಇಲ್ಲಿ ರಾಮ, ಲಕ್ಷ್ಮಣ, ಸೀತೆ-ಮತ್ತು ಹನುಮನ ವಿಗ್ರಹಗಳನ್ನು ಒಂದೇ ಕಲ್ಲಿನಲ್ಲಿ ಕೆತ್ತಿದ್ದಾರೆ. ಈ ಮೂರ್ತಿಯೂ ವಿಜಯನಗರದ ಶಿಲ್ಪವನ್ನು ಹೋಲುವುದಾಗಿದೆ.

ಬ್ರಿಟಿಷರ ಮತ್ತು ನಿಜಾಮರ ಆಡಳಿತದ ತಾಣ : ೧೭೨೪ರಿಂದ ೧೯೪೮ರವರೆಗೆ ಹೈದ್ರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಲಿಂಗಸುಗೂರು, ಅಂದು ಜಿಲ್ಲೆಯಾಗಿತ್ತು. ಲಿಂಗಸುಗೂರು ವಿಭಾಗದಲ್ಲಿ ಲಿಂಗಸುಗೂರು, ಸಿಂಧನೂರು, ಕುಷ್ಟಗಿಗಳು ಸೇರಿದ್ದವು, ಲಿಂಗಸುಗೂರಿನಲ್ಲಿ ಹೈದ್ರಾಬಾದ್ ನಿಜಾಮರು ಬ್ರಿಟಿಷರೊಂದಿಗೆ ಸಂಧಾನ ಮಾಡಿಕೊಂಡು ಸಂಸ್ಥಾನಗಳ ಆಡಳಿತ ನಡೆಸುತ್ತಿದ್ದರು. ಅಂದು **ಛಾವಣಿ** ಎಂದು ಕರೆಯಲ್ಪಟ್ಟಿತ್ತು. ಛಾವಣಿಯೆಂದರೆ ಮಿಲಿಟರಿ ಏರಿಯಾ, ಸೈನಿಕರ ತಾಣ, ಬಿಡಾರ ಅಥವಾ ದಂಡಿನ ಪ್ರದೇಶ (Continental Area); ಈ ಬಿಡಾರಕ್ಕೆ ಅನ್ವರ್ಥವಾಗಿ ಛಾವಣಿಯೆಂಬ ಹೆಸರು ಪಡೆಯಿತು. ಇಲ್ಲಿ ಕ್ಯಾಪ್ಟನ್ ವಿಂಡೇಮ್ ಎಂಬ ಬ್ರಿಟಿಷ್ ಸೈನಾಧಿಕಾರಿ ವಾಸವಾಗಿದ್ದ. ಈ ಛಾವಣಿಯೇ ಇಂದು ಲಿಂಗಸುಗೂರು ತಾಲುಕಾಗಿದೆ. ಹಿಂದಿನ ಲಿಂಗಸುಗೂರು ಇಂದು ಕಸಬಾ ಲಿಂಗಸುಗೂರು ಎಂದೆನಿಸಿ ಕೊಂಡಿದೆ. ಕಸಬಾ ಎಂಬುದು ಉರ್ದುಪದ, ಇದರ ಅರ್ಥ ಗ್ರಾಮ. ಇದನ್ನು ಲಿಂಗಸುಗೂರು ಗ್ರಾಮ ಎಂದು ಕರೆದರೆ ಸೂಕ್ತ.

ಮುಸ್ಲಿಂ ಶೈಲಿಯ ನಿಜಾಮರ ಕಾಲದ ಕಟ್ಟಡಗಳು : ಸುಮಾರು ೨೦೦ ವರ್ಷಗಳವರೆಗೆ ಹೈದ್ರಾಬಾದ್ ಪ್ರದೇಶ ವನ್ನಾಳಿದ ನಿಜಾಮರು ಈ ಭಾಗದಲ್ಲಿ ಬಹುತೇಕ - ಕಟ್ಟಡಗಳ ವಿನ್ಯಾಸಗಳನ್ನು ಪರ್ಶಿಯನ್ ವಾಸ್ತು ಶಿಲ್ಪಶಾಸ್ತ್ರದಂತೆ ಕಟ್ಟಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿಯ ಅನೇಕ ಬಂಗಲೆಗಳು ಇದೇ ವಾಸ್ತುವಿನ್ಯಾಸದಲ್ಲಿ ನಿರ್ಮಾಣಗೊಂಡಿವೆ. ಲಿಂಗ ಸುಗೂರಿನಲ್ಲಿ ಅವರು ಕಟ್ಟಿಸಿದ ಕಟ್ಟಡಗಳು. ಇವು ನಿಜಾಮ ಶೈಲಿಯ ಕುರುಹುಗಳಾಗಿವೆ. ಅಂದು ಸುತ್ತಲೂ ಅರಣ್ಯದಿಂದ ಆವೃತವಾದ ಎತ್ತರದ ಬಯಲಿನ, ಕೆರೆಯ ತಂಪಾದ ತಾಣದಲ್ಲಿ ತಮ್ಮ ಕಟ್ಟಡಗಳನ್ನು ಕಟ್ಟುವುದಷ್ಟೇ ಅಲ್ಲ ಸುತ್ತಲೂ ದೊಡ್ಡ ದೊಡ್ಡ ಬೇವಿನ ಮತ್ತು ಹುಣಸೆ ಮರಗಳನ್ನು ಬೆಳೆಸಿದ್ದಾರೆ. ಮರದ ಸುತ್ತಲೂ ಚೌಕಾಕಾರದ ಹಾಗೂ ವೃತ್ತಾಕಾರದ ಕಟ್ಟೆಗಳನ್ನು ಕಟ್ಟಿದ್ದಾರೆ.

ಲಿಂಗಸುಗೂರಿನ ೧೦೧ ಬಾಗಿಲುಗಳ ಬಂಗಲೆ : ಲಿಂಗಸುಗೂರಿನ ೧೦೧ ಬಾಗಿಲುಗಳ ಬಂಗಲೆ ಬೃಹತ್ ಕಟ್ಟಡಗಳ ಸಮುಚ್ಚಯವಾಗಿದೆ. ಗಾರೆ ಇಟ್ಟಿಗೆಗಳಿಂದ ನಿರ್ಮಿಸಿದ ಈ ಕಟ್ಟಡಗಳು ಬೇಸಿಗೆಯಲ್ಲಿ ತಂಪಾಗಿರುತ್ತವೆ. ಈ ಕಟ್ಟಡದ ಬಾಗಿಲುಗಳಿಗೆ ಬರ್ಮಾದೇಶದ ತೇಗವನ್ನು ಬಳಸಲಾಗಿದೆ. ಇಲ್ಲಿಯ ಪ್ರಮುಖ ಕಟ್ಟಡಗಳೆಂದರೆ ಒಳಬಳ್ಳಾರಿ ಚನ್ನಬಸವೇಶ್ವರ ಕಾಲೇಜು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ನಿರೀಕ್ಷಣಾ ಮಂದಿರ, ತಾಲುಕಾ ಪಂಚಾಯತ್, ಲೋಕೋಪಯೋಗಿ ಇಲಾಖೆ, ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ, ಮೀನುಗಾರಿಕೆ

ಅರಣ್ಯ ಮತ್ತು ತೋಟಗಾರಿಕೆಯ ಇಲಾಖೆಗಳ ಕಟ್ಟಡಗಳು, ಪ್ರಾಥಮಿಕ ಶಾಲೆಯ ಕಟ್ಟಡ ಕೆರೆಯ ದಂಡೆಯ ಮೇಲಿರುವ ಅಧಿಕಾರಗಳ ಕ್ಲಬ್, ಮುಂತಾದ ಕಟ್ಟಡಗಳು ಇದೇ ಶೈಲಿಯನ್ನು ಹೋಲುತ್ತವೆ. ಪ್ರತಿ ಬಂಗಲೆಯ ಮುಂದೆ ಕಟ್ಟೆಗಳಿವೆ.

ಲಿಂಗಸುಗೂರಿನ ನಿಜಾಮ ಕಟ್ಟಡದ ಶೈಲಿಯ ನಿರೀಕ್ಷಣಾ ಮಂದಿರ : ಈ ಕಟ್ಟಡಗಳ ಬೃಹತ್ ಸಮುಚ್ಚಯದಲ್ಲಿ ಅಂದು ಬ್ರಿಟಿಷರ ಮತ್ತು ನಿಜಾಮರ ಸೈನಿಕರ ತುಕಡಿಗಳು ಮತ್ತು ಅಧಿಕಾರಿಗಳು ವಾಸ ಮಾಡುತ್ತಿದ್ದರು. ಭವ್ಯವಾದ ಅತಿಥಿ ಗೃಹಗಳು, ದರ್ಬಾರ ಹಾಲ್, ಅಡಿಗೆ ಮನೆ, ಭೋಜನ ಗೃಹ, ರಾಣಿಯರ ಪರಿವಾರಕ್ಕೆ ಪ್ರತ್ಯೇಕ ವ್ಯವಸ್ಥೆ, ಕುದುರೆಲಾಯ, ಆಹಾರ ಸಂಗ್ರಹಣಾ ಕೋಣೆ ಇತ್ಯಾದಿಗಳಿಗೆ ಈ ಕಟ್ಟಡಗಳನ್ನು ಬಳಕೆ ಮಾಡಲಾಗುತ್ತಿತ್ತು. ಪ್ರಾಥಮಿಕ ಶಾಲೆಯು-ಕುದುರೆಲಾಯ, ಅರಣ್ಯ ಇಲಾಖೆಯ ಅಧಿಕಾರಿಗಳ ಬಿಡಾರ, ಕೆರೆಯ ದಂಡೆಯ ಕಟ್ಟಡ, ಅಧಿಕಾರಿಗಳ ಕ್ಲಬ್, ವಿ.ಸಿ.ಬಿ. ಕಾಲೇಜು ಇವನ್ನೆಲ್ಲ ಆಹಾರ ಸಂಗ್ರಹಣೆಗಾಗಿ ಬಳಸಲ್ಪಡುತ್ತಿದ್ದವಂತೆ.

ಲಿಂಗಸುಗೂರಿನ ಐತಿಹಾಸಿಕ ಕೆರೆ : ಹೈದ್ರಾಬಾದ್ ನಿಜಾಮನ ಆಡಳಿತದಲ್ಲಿ ನಿರ್ಮಾಣವಾದ ಲಿಂಗಸುಗೂರಿನ ಕೆರೆಯನ್ನು ಹಿಂದೆ ಬ್ರಿಟಿಷರಿಗೆ, ಸೈನಿಕರಿಗೆ ನೀರಿನ ಅನುಕೂಲಕ್ಕಾಗಿ, ವಿಹಾರಕ್ಕಾಗಿ, ಕುದುರೆಗಳಿಗೆ ನೀರು ಒದಗಿಸಲು ಈ ಬೃಹತ್ ಕೆರೆಯನ್ನು ನಿರ್ಮಾಣ ಮಾಡಲಾಗಿತ್ತು. ಬಹುಪಯೋಗಿ ಉದ್ದೇಶ ಗಳಿಗಾಗಿ ನಿರ್ಮಿಸಿದ ಈ ಕೆರೆ ಇಂದಿಗೂ ಸಾರ್ವಜನಿಕರಿಗಾಗಿ ಉಪಯೋಗವಾಗುತ್ತಿದೆ. ಇದು ಸುತ್ತಲಿನ ಅಂತರ್ಜಲಮಟ್ಟವನ್ನು ಹೆಚ್ಚಿಸಿದೆ. ಬಿಜ್ಜಮ್ಮ ಎಂಬ ಮಹಿಳೆ ಕೆರೆಗೆ ಆಹಾರವಾದ ಕಥೆಯೂ ಜನಜನಿತವಾಗಿದೆ.



ಲಿಂಗಸುಗೂರಿನಲ್ಲಿರುವ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳು : ಲಿಂಗಸುಗೂರಿನಲ್ಲಿ ಬ್ರಿಟಿಷ್ ಅಧಿಕಾರಿಗಳ ಹಾಗೂ ಸೈನಿಕರುಗಳ ಹಾಗೂ ಅವರ ಸಂಬಂಧಿಗಳ ಸುಮಾರು



೩೫ ಸಮಾಧಿಗಳನ್ನು ಕಾಣಬಹುದಾಗಿದೆ. ಅಂದಿನ ನಿಜಾಮ ಸರ್ಕಾರದಲ್ಲಿ ಭೂಗರ್ಭಶಾಸ್ತ್ರಜ್ಞನಾದ ಲಿಯೋನಾರ್ಡ್ ಕ್ಯಾಪ್ಟನ್ ಮನ್ ಎಂಬ ಅಧಿಕಾರಿ ಇದ್ದ. ಈತ ಅಂದಿನ ರಾಯಚೂರು ಜಿಲ್ಲೆಯಲ್ಲಿ ನೀರಿನ ಬವಣೆ ಇದ್ದಾಗ, ಅದನ್ನು ನೀಗಿಸಲು ಪಣತೊಟ್ಟು ೧೯೨೮ರಿಂದ ೧೯೩೫ರವರೆಗೆ ಸುಮಾರು (ಕೊಪ್ಪಳ ಜಿಲ್ಲೆಯೂ ಸೇರಿದಂತೆ) ೧೨೦೦ ಬಾವಿಗಳನ್ನು, ಚೌಕಾಕಾರ, ಪಂಚ ಕೋನಾಕಾರ, ಷಟ್ಕೋನಾಕಾರಗಳಲ್ಲಿ ನಿರ್ಮಿಸಿ ಇಂದಿಗೂ ಹಳ್ಳಿಗಳಲ್ಲಿ ಅವು ಮನ್ನಾಸಾಬನ ಬಾವಿಗಳೆಂದು ಗುರುತಿಸಿಕೊಂಡಿವೆ.

ಗುಡಗುಂಟೆಯಲ್ಲಿರುವ ಲಿಯೋನಾರ್ಡ್ ಕ್ಯಾಪ್ಟನ್ ಮನ್‌ನ ಬಾವಿ ಹಾಗು ಕಸಬಾ ಲಿಂಗಸುಗೂರಿನಲ್ಲಿರುವ ಲಿಯೋನಾರ್ಡ್ ಕ್ಯಾಪ್ಟನ್‌ಸ್‌ನ್ ಬಾವಿಗಳಲ್ಲಿ ಇಂದಿಗೂ ನೀರಿದ್ದು ಸಾರ್ವಜನಿಕರು ಉಪಯೋಗಿಸುತ್ತಿದ್ದಾರೆ. ಈ ಬಾವಿಗಳು ಅಂದಿನ ನೀರಿನ ಪೂರೈಕೆ - ಕುರಿತು ಐತಿಹಾಸಿಕ ದೃಷ್ಟಿಯನ್ನು ಬೀರುತ್ತವೆ. ಇಂತಹ ಜನ ಉಪಯೋಗಿ ಕೆಲಸ ಮಾಡಿದ ಲಿಯೋನಾರ್ಡ್ ಮನ್‌ನ ಸಮಾಧಿಯನ್ನು ಹೊಳಪು ಬೆಣಚು ಕಲ್ಲಿನಿಂದ ನಿರ್ಮಿಸಲಾಗಿದೆ. ಆ ಸಮಾಧಿಯ ಮೇಲೆ ಈತ ೧೮೭೮ರಲ್ಲಿ ಬೆಲ್ಜಿಯಂನಲ್ಲಿ ಜನಿಸಿದ್ದಾನೆ. ಹಾಗೂ ೧೯೩೫ರ ಅಕ್ಟೋಬರ್ ೨೧ರಂದು ಲಿಂಗಸುಗೂರಿನಲ್ಲಿ ನಿಧನನಾದನೆಂದು ಬರೆಯಲಾಗಿದೆ.

ಲಿಯೋನಾರ್ಡ್ ಮನ್ ಈ ಭಾಗದ ಪುರಾತನ ಗಣಿಗಳ ಕುರಿತಾಗಿ ಹಾಗೂ ಮಸ್ಕಾಯ ಪ್ರಾಚ್ಯ ಅವಶೇಷಗಳ ಕುರಿತಾಗಿ ತನ್ನ ಅಭಿಪ್ರಾಯವನ್ನು ಈ ರೀತಿ ವ್ಯಕ್ತ ಪಡಿಸಿದ್ದಾನೆ "ರಾಯಚೂರಿನ ಹಟ್ಟಿ ಗಣಿಗಳು ೬೪೦ ಅಡಿ ಆಳದವರೆಗೆ ನುಗ್ಗಿವೆ. ಇಲ್ಲಿನ ಪುರಾತನರು ಅಂತರ್ಜಲದ ಮಟ್ಟವನ್ನು ಭೇದಿಸಿ ಇಷ್ಟು ಆಳದವರೆಗೆ ಗಣಿ ಮಾಡಿದ್ದು ಜಾಗತಿಕ ದಾಖಲೆ ಎನ್ನಬಹುದೇನೋ! ಗಣಿ ತಂತ್ರಜ್ಞನಾಗಿ ನನಗೆ ಆಶ್ಚರ್ಯವೇನೆಂದರೆ ಆ ಪುರಾತನರಿಗೆ ೬೪೦ ಅಡಿ ಆಳ ಗಣಿ ತೋಡಲು ಇದ್ದ ಅನುಕೂಲಗಳೇನು? ೫೦೦೦ ಅಡಿ ಉದ್ದಕ್ಕೂ ಅವರು



ಸಂಶೋಧನೆ ಮಾಡಿ ಆಳಕ್ಕಿಳಿದ ಬಗೆ ಎಂತಹುದಿರಬಹುದು? ಇದಕ್ಕಾಗಿ ಎಷ್ಟು ಸಮಯ ಹಿಡಿದಿರಬೇಕು? ಇವೆಲ್ಲ ನನಗೆ ತಬ್ಬಿಬ್ಬುಂಟು ಮಾಡುವ ವಿಷಯಗಳು" ಎಂದು ಆಶ್ಚರ್ಯ ವ್ಯಕ್ತ ಪಡಿಸಿದ್ದಾನೆ. ಮಸ್ಕಿಯಲ್ಲಿ ದೊರೆತ - ಕುರುಹುಗಳಿಗೆ ವಿಶೇಷ ಸ್ಥಾನವನ್ನು ಕೊಟ್ಟ ಈತ - ಇಲ್ಲಿ ತಾಮ್ರದ ಆಯುಧಗಳಿಗಿಂತ, ಶಿಲೆಗಳ ಆಯುಧಗಳೇ ಹೆಚ್ಚು ಬಳಕೆಯಲ್ಲಿದ್ದವು ಹಾಗೂ ಇದು ಅಶೋಕನ ದಕ್ಷಿಣ ಭಾರತದ ರಾಜಧಾನಿ ಸ್ವರ್ಣಗಿರಿ ಆಗಿರಬಹುದೇ? ಎನ್ನುವ ಸಂದೇಹ ವ್ಯಕ್ತ-ಪಡಿಸಿದ್ದಾನೆ.

ಸುರಪುರ ಸಂಸ್ಥಾನದಲ್ಲಿ ಬ್ರಿಟಿಷ್ ಪ್ರತಿನಿಧಿಯಾಗಿದ್ದ (ಅಧಿಕಾರಿ) ಕ್ಯಾಪ್ಟನ್ ಮೇಡೋಸ್ ಟೇಲರನ ಪತ್ನಿಯಾದ ಮೇರಿಯಾಳ ಸಮಾಧಿಯೂ ಇಲ್ಲಿದೆ. ಜೊತೆಗೆ ಟೇಲರನ ಮಗು ಅನಾರೋಗ್ಯದಿಂದ ಮರಣ ಹೊಂದಿದಾಗ ಅದನ್ನು ಸಹ ಇಲ್ಲಿಯೇ ಸಮಾಧಿ ಮಾಡಲಾಗಿದೆ. ಇದರಿಂದ ಮೇಡೋಸ್ ಟೇಲರ ಈ ಭಾಗಕ್ಕೂ ಕೂಡ ಬಂದು ಹೋಗುತ್ತಿದ್ದ. ಆತನಿಗೆ ಸುರಪುರ ಮತ್ತು ಲಿಂಗಸುಗೂರಿನ ಮಧ್ಯ ದಾರಿಯಲ್ಲಿ ಬರುವ ಗುಡಗಂಟಿ ಸಂಸ್ಥಾನ ಮತ್ತು ಗಂಚಗೋಳ ಸಂಸ್ಥಾನದ ಮೇಲೆಯೂ ಅಧಿಕಾರ ಇತ್ತೆಂದು ತಿಳಿಯಬಹುದಾಗಿದೆ. ಒಟ್ಟಾರೆ ಇಲ್ಲಿಯ ಸಮಾಧಿಗಳ ಮೇಲೆ ಮೃತರ ಹೆಸರು, ವಯಸ್ಸು, ಜನ್ಮ ದಿನಾಂಕ; ಸಾವಿಗೆ ಕಾರಣ, ಅವರ ಕೆಲಸ ಕಾರ್ಯಗಳ ಕುರಿತಾಗಿ, ವಿಷಯ ಕೆತ್ತಲಾಗಿದ್ದು, ಈ ಸಮಾಧಿಗಳ ರಚನಾ-ವಿನ್ಯಾಸವೂ ಅವರ ಅಧಿಕಾರ ಮತ್ತು ಅಂತಸ್ತುಗಳನ್ನೊಳಗೊಂಡಿವೆ.

ಸರಕಾರಿ ತೋಟದಲ್ಲಿಯ ರಾಣಿ ಈಶ್ವರಮ್ಮನ ಸಮಾಧಿ: ಸುರಪುರ ಸಂಸ್ಥಾನದ ರಾಜಾ ಕೃಷ್ಣಪ್ಪನಾಯಕರು (ಕ್ರಿ.ಶ. ೧೮೨೮-೧೮೪೩) ೧೮೪೩ರ ಆಗಸ್ಟ್‌ನಲ್ಲಿ ಮರಣ ಹೊಂದಿದ ಮೇಲೆ ಈ ಸಂಸ್ಥಾನದ ರಾಜ್ಯಭಾರ ಆತನ ಪತ್ನಿ ರಾಣಿ ಈಶ್ವರಮ್ಮ ವಹಿಸಿ ಕೊಂಡಾಗ ಆಕೆ ತೀರ್ಥಯಾತ್ರೆಗೆಂದು ಹೊರಟಾಗ ಲಿಂಗ ಸುಗೂರಿನಲ್ಲಿ ಮೃತಳಾದಳು. ಆವಳನ್ನು ರಾಜ ಮರ್ಯಾದೆ ಯಿಂದ ನಿಜಾಮ ಸೈನಿಕರು ಲಿಂಗಸುಗೂರಿನ ಸರಕಾರಿ ತೋಟದಲ್ಲಿ ಸಮಾಧಿ ಮಾಡಿದ್ದಾರೆ.

ಗಾಂಧೀಜಿಯವರ ಮೂಲ ಶಿಕ್ಷಣದ ಪ್ರಯೋಗ ಶಾಲೆ: ೧೯೩೭ರಲ್ಲಿ ಗಾಂಧೀಜಿಯವರ ಮೂಲ ಶಿಕ್ಷಣವನ್ನು ಅನೇಕ ಪ್ರಾಂತೀಯ ಸರಕಾರಗಳು ಅಸ್ತಿತ್ವಗೊಳಿಸಿದವು. ಅಂಥದರಲ್ಲಿ ನಿಜಾಮ ಸರಕಾರವು ಲಿಂಗಸುಗೂರಿನಲ್ಲಿ ಸರಕಾರಿ ತೋಟದಲ್ಲಿ ಮೂಲಶಿಕ್ಷಣದ ತತ್ವದಂತೆ, ಕೃಷಿಯ ಪ್ರಾಯೋಗಿಕ ಪಾಠ ಆರಂಭಿಸಿದರು. ಇದರ ವಿಸ್ತೀರ್ಣ ಸುಮಾರು ೫೦ ಎಕರೆ ಇದೆ. ಇಲ್ಲಿ ಸ್ವತಃ ವಿದ್ಯಾರ್ಥಿಗಳಿಗೆ ಕೃಷಿ ಆಧಾರಿತ ಪಾಠವನ್ನು ಆರಂಭಿಸಿ ಅವರು ಬೆಳೆದ ಬೆಳೆಗಳಿಂದಲೇ ಅವರ ಶೈಕ್ಷಣಿಕ ವೆಚ್ಚವನ್ನು ಭರಿಸುವಂತೆ ಏರ್ಪಾಡು ಮಾಡಿದ್ದರು. ಹಾಗೂ ಇಂದಿನ ವಿ.ಸಿ.ಬಿ. ಮಹಾವಿದ್ಯಾಲಯದ ಕಟ್ಟಡವು ಈ ಕೃಷಿ ಭೂಮಿಯಲ್ಲಿ ಬೆಳೆದ ದವಸ ಧಾನ್ಯಗಳನ್ನು ಶೇಖರಿಸಿಡುವ ಸಂಗ್ರಹಣಾ ಮಳಿಗೆ ಆಗಿತ್ತು. ಜೊತೆಗೆ ಅದರ ಆವರಣದ ಸ್ಥಳದಲ್ಲಿಯೂ ಕೃಷಿಯ ಪ್ರಾಯೋಗಿಕತೆ ನಡೆದಿತ್ತು. ಈಗಲೂ ನೋಡಲು ಈ ಎರಡು ಸ್ಥಳದಲ್ಲಿ ಬಾವಿ ಹಾಗೂ ನೀರನ್ನು ಸೇದಿ ಹಾಕಲು ತೊಟ್ಟಿಗಳನ್ನು, ನೀರು ಬೆಳೆಗಳಿಗೆ ಹೋಗಲು ಮಾಡಿರುವ ಕಾಲುವೆಗಳನ್ನು ನೋಡಬಹುದಾಗಿದೆ.

ಬಾವಿಯ ಗೋಡೆಯಲ್ಲಿಯ ಮೂರ್ತಿ ಶಿಲ್ಪ : ವಿ.ಸಿ.ಬಿ. ಕಾಲೇಜಿನ ಆವರಣದಲ್ಲಿಯ ಬಾವಿಯ ಗೋಡೆಯಲ್ಲಿ ಅನೇಕ -ಮೂರ್ತಿಶಿಲ್ಪಗಳ ಚಿತ್ರಗಳಿವೆ. ಈ ಚಿತ್ರಗಳಲ್ಲಿ ಶಿವನ ಚಿತ್ರ, ಲೌಕಿಕತೆಗೆ ಸಂಬಂಧಿಸಿದ ಶಿಲಾಬಾಲಕಿಯರ ಚಿತ್ರಗಳಿವೆ, ಇನ್ನೊಂದು ಭಾಗದಲ್ಲಿ ಗಣಪ ಹಾಗೂ ಭಕ್ತಾದಿಗಳು ನಿಂತಿರುವ ದೃಶ್ಯವಿದೆ. ಬಹುಶಃ ಇದು ವಿಜಯನಗರ ಕಾಲದ ೨ನೇ ದೇವರಾಯ (ಕ್ರಿ.ಶ. ೧೪೩೬) ನು ಮುದಗಲ್ ಕಡೆ ಬಂದಾಗ ಈ ಶಿಲ್ಪವನ್ನು ಕೆತ್ತಿಸಿರಬೇಕೆಂಬ ಮಾತಿದೆ. ಇದರ ಕುರಿತು ಇನ್ನೂ ಸಂಶೋಧನೆ ಆಗಬೇಕಿದೆ.

ಲಿಂಗಸುಗೂರಿನ ಮದ್ದಿನ ಮನೆ : ಬಂದೂಕು ಹಾಗೂ ತೋಪುಗಳಿಗೆ ಹಿಂದೆ ರಾಜಮಹಾರಾಜರು ಬಳಸುತ್ತಿದ್ದ ಮದ್ದನ್ನು ತಯಾರಿಸಿ, ಸಂಗ್ರಹಿಸುವ ಮನೆ ಲಿಂಗಸುಗೂರಿನಲ್ಲಿದೆ. ಅನೇಕ ಯುದ್ಧಗಳಲ್ಲಿ, ಬ್ರಿಟಿಷರ ವಿರುದ್ಧದ ಸೈನಿಕ ಕಾರ್ಯಾಚರಣೆಯಲ್ಲಿ ನಾಡ ಬಂದೂಕುಗಳನ್ನು ಬಳಸುತ್ತಿದ್ದರು. ಬಂದೂಕಿಗೆ ಬೇಕಾದ ಮದ್ದನ್ನು ತಯಾರಿಸಿ ಸಂಗ್ರಹಿಸುವುದು ಹಾಗೂ ಬೇರೆ ಕಡೆಗೆ ಪೂರೈಸುವ ಈ ಮನೆಯನ್ನು 'ಮದ್ದಿನ ಫಾಟ್' ಎಂದು ಕರೆಯುತ್ತಾರೆ.

ಲಿಂಗಸುಗೂರಿನಲ್ಲಿಯ ಶಾಸನ : ಲಿಂಗಸುಗೂರಿನ ಊರ ಹೊರಗೆ ಕ್ರಿ.ಶ. ೧೬ನೇ ಶತಮಾನದ ಶಾಸನವೊಂದಿದೆ, ಈ ಶಾಸನದ ಸಾಲುಗಳು ಇಂತಿವೆ.

೧ ವಿಕೃತಿ-ನಾಮ ಸಂ
೨ ವತ್ಸರದ ವಯಿಸ
೩ ಖ ಶುಧ ೧೫ (ಪುಂಣ್ಯ)
೪ ಕಾಲದಲೂ ಶ್ರೀಮತು
೫ ಬಿಯಪ ನಾಯಕ
೬ ರು ಅಚುತರಾಯ
೭ ಮಹಾರಾಜರಿಗೆ ಪು
೮ ಂಣ್ಯವಾಗಬೇಕೆಂದು
೯ ಧಾರೆಯನೆರೆದು ಕೊಟ

ಇದರ ಮುಂದಿನ ಸಾಲುಗಳು ಹಾಳಾಗಿವೆ. ಈ ಶಾಸನವು ವಿಜಯನಗರದ ಅಚ್ಯುತರಾಯನ ಆಳ್ವಿಕೆಯಲ್ಲಿ ಈತನ ಸಾಮಂತ ನಾದ ಬಿಯಪ್ಪನಾಯಕನು ಚಕ್ರವರ್ತಿಗೆ ಪುಣ್ಯಲಭಿಸಲೆಂದು ದಾನ ನೀಡಿದ ವಿಷಯ ಪ್ರಸ್ತಾಪವಾಗಿರುವುದನ್ನು ಕಾಣಬಹುದಾಗಿದೆ.

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್*

ಜಲಸಂವರ್ಧನಾ ಕಾರ್ಯದಲ್ಲಿ ನಿಡುಗಲ್ಲು ಅರಸರ ಪಾತ್ರ

ಜಲ ಸಂಗ್ರಹ ಮನುಷ್ಯನಿಗೆ ಎಷ್ಟು ಮುಖ್ಯವಾದದ್ದು ಎಂಬುದು ಇತಿಹಾಸದ ಅಧ್ಯಯನದಿಂದ ತಿಳಿದುಬರುತ್ತದೆ. ಮೊದಲು ಮಾನವನ ಬದುಕಿನ ಕುರುಹುಗಳು ಲಭ್ಯವಾಗುವುದು ನದಿ ಹಾಗೂ ನೀರಿನ ಪ್ರದೇಶದ ಸಮೀಪದಲ್ಲಿಯೇ ಎಂಬುದನ್ನು ಇಲ್ಲಿ ನೆನೆಯಬೇಕು.

ವ್ಯವಸಾಯಕ್ಕೆ ಹೆಚ್ಚು ಮಹತ್ವ ನೀಡಿ ವ್ಯವಸಾಯ ಅಭಿವೃದ್ಧಿಯಾದಲ್ಲಿ ಮಾತ್ರ ರಾಜ್ಯದ ಅಭಿವೃದ್ಧಿ ಸಾಧ್ಯವೆಂಬುದನ್ನು ತಿಳಿದ ಸ್ಥಳೀಯ ಅರಸರು ಕೆರೆ, ಕುಂಟೆ, ಬಾವಿ, ದೊಣೆಗಳು, ಕಲ್ಯಾಣಿಗಳನ್ನು ತೆಗೆಸಿ, ಜನರಿಗೆ, ದನಕರುಗಳಿಗೆ, ವ್ಯವಸಾಯಕ್ಕೆ ಸಹಕಾರ ನೀಡುತ್ತಿದ್ದರು. 'ಎಲ್ಲಿ ಜಲ ಸಂವೃದ್ಧಿ ಇದೆಯೋ ಅಲ್ಲಿ ಜನ ಸಮೃದ್ಧಿಯನ್ನು ಕಾಣಬಹುದು'. ನಿಡುಗಲ್ಲು ಪ್ರದೇಶದಲ್ಲಿರುವ ಕೆರೆ, ಕುಂಟೆ, ದೊಣೆ, ಬಾವಿ, ಕಲ್ಯಾಣಿಗಳು ಸದಾ ನೀರಿನಿಂದ ತುಂಬಿರುವುದನ್ನು ಜನ ಅಲ್ಲಿನ ಸ್ಥಳದ ವಿಶೇಷ ಮಹತ್ವವೆಂದೇ ಭಾವಿಸಿದ್ದಾರೆ.

ರಾಜರುಗಳು ಪಾಳೆಗಾರರು ತಮ್ಮ ರಾಜ್ಯ ವಿಸ್ತರಣೆಯಷ್ಟೇ ತಮ್ಮ ರಾಜ್ಯದ ಜಲ ಸಂವರ್ಧನೆಯ ಕಾರ್ಯವೂ ಮುಖ್ಯವೆಂದು ಭಾವಿಸಿದ್ದರು. ಹಾಗೆ ಜಲಸಂಗ್ರಹ ಕಾರ್ಯದಲ್ಲಿ ತೊಡಗಿದಾಗ ಅವರ ಮನಸ್ಸಿಗೆ ಬಂದದ್ದೆಂದರೆ ಹರಿಯುವ ನೀರನ್ನು ತಡೆಗಟ್ಟುವುದು ಹಾಗೂ ತಡೆಗಟ್ಟಿದ ನೀರನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದು. ಬಹುಶಃ ಸಾರ್ವಜನಿಕ ಕಾರ್ಯಗಳಲ್ಲೆಲ್ಲಾ ಬಹು ಮುಖ್ಯವಾದದ್ದು ಈ ತಟಾಕ ಅಥವಾ ಕೆರೆಗಳ ನಿರ್ಮಾಣ ಎನಿಸುತ್ತದೆ. ಇದನ್ನು ಆಯಾಕಾಲದ ಪಾಳೇಗಾರರ, ದೊರೆಗಳ ಅನೇಕ ಶಾಸನಗಳು ಸಾರಿ ಹೇಳುತ್ತವೆ. ಕೆರೆಗಳನ್ನು ನಿರ್ಮಿಸುವುದಷ್ಟೇ ಅವರ ಕಾರ್ಯವಾಗಿರದೆ ಅದರ ಜೀರ್ಣೋದ್ಧಾರ ಅದಕ್ಕೆ ಸಂಬಂಧಿಸಿದಂತೆ ದಾನ, ದತ್ತಿಗಳನ್ನು ಕೊಡುತ್ತಿದ್ದ ಪದ್ಧತಿ ಬಹಳ ಹಿಂದಿನಿಂದಲೂ ಕಂಡು ಬರುತ್ತದೆ. ಅಂಥ ಕೆರೆಗಳ ನಿರ್ಮಾಣದಿಂದ ಎಷ್ಟು ಘನಕಾರ್ಯ ವ್ಯವಸಾಯಕ್ಕೆ ಬೇಕಾದ ನೀರಿನ ಸೌಲಭ್ಯವನ್ನು ಹೆಚ್ಚಿಸುವ ಮುಖಾಂತರ ಆ ರಾಜ್ಯದ ಆಹಾರ ಸ್ವಾವಲಂಬನೆ ಮತ್ತು ರಾಜ್ಯಾಭಿವೃದ್ಧಿಯತ್ತ ಗಮನ ಹರಿಸುತ್ತಿದ್ದರು.

ಕ್ರಿ.ಶ. ೧೪೧೧ರ ಹಂಪೆಯ ಲಕ್ಷ್ಮೀಧರಾಮಾತ್ಯನ ಶಾಸನವೊಂದನ್ನು ನೋಡಿದರೆ ಪ್ರಾಚೀನರು ಕೆರೆಗಳ ನಿರ್ಮಾಣಕ್ಕೆ ಕೊಡುತ್ತಿದ್ದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬಹುದು. ಕೆರೆಯಲ್ಲಿ ಕೂಪ, ವಾಪಿ, ಪುಷ್ಕರಣಿ ದೀರ್ಘಿಕೆ, ಕನ್ನೆಗೆರೆ, ಸೊಳೆಕೆರೆ ಮುಂತಾದ ವಿಧಗಳಿವೆ. ಹಾಗಾಗಿ ಸದಾ ಬರಡು ಪ್ರದೇಶವಾದ, ಬರಗಾಲದ ನೆರಳಿನಲ್ಲಿಯೇ ನರಳುವ ಬಯಲು ಸೀಮೆಯ ಪಾವಗಡ ತಾಲ್ಲೂಕಿನಲ್ಲಿ ಯಾವುದೇ ನದಿ ಹರಿಯುವುದಿಲ್ಲ (ಪಿನಾಕಿನಿ ತೊರೆಬಿಟ್ಟರೆ). ಮಳೆಯನ್ನೇ ಆಶ್ರಯಿಸಿ ಬದುಕುವ ಇಲ್ಲಿನ ಜನರಿಗೆ ಕೆರೆಯ ನೀರೇ ಆಶ್ರಯ ಹಾಗಾಗಿ ನಿಡುಗಲ್ಲು ಸೀಮೆ ಅಥವಾ ಪ್ರದೇಶದಲ್ಲಿ ಈ ಕೆರೆಗಳ ನಿರ್ಮಾಣ. ಅವುಗಳ ಪ್ರಯೋಜನ. ಉದ್ದೇಶಗಳನ್ನು ತಿಳಿಯಬೇಕಾದರೆ ನಮಗೆ ಅಲ್ಲಿನ ಶಾಸನಗಳು ಹೆಚ್ಚಿನ ಸಾಮಗ್ರಿಯನ್ನೊದಗಿಸುವ ಕಾರಣ ನಿಡುಗಲ್ಲು ಸುತ್ತ ಮುತ್ತಲ ಪ್ರದೇಶದಲ್ಲಿ ಸ್ಥಳೀಯ ಅರಸರು ಜಲಸಂವರ್ಧನೆಗಾಗಿ ನಿರ್ಮಿಸಿದ ಆ ತಟಾಕಗಳ ಬಗ್ಗೆ ಈ ಮುಂದೆ ನೋಡಬಹುದು.

ನಿಡುಗಲ್ಲು ದುರ್ಗದಲ್ಲಿ ಪಾವಗಡದ ಊರುಬಾಗಿಲ ಬಲಗಡೆ ಅಂದರೆ ಕೋಟೆಯ ಹೊರಗೆ ಸೀಗಲ ಗುಡ್ಡದಲ್ಲಿ ಒಂದು ಕೆರೆ ಇದ್ದು ಇದನ್ನು ನಿಡುಗಲ್ಲಿನ ಎರಡು ಶಾಸನಗಳಲ್ಲಿ ಚಿಕ್ಕತಿಪ್ಪ ಭೂಪನು ತನ್ನ ಪಟ್ಟದರಸಿ ಲಕ್ಷ್ಮಿದೇವಿ ಅಕಾಲ ಮರಣವನ್ನಪ್ಪಿದಾಗ ಅವಳ ಹೆಸರಿನಲ್ಲಿ ಕಟ್ಟಿಸಿದಂತೆ ತಿಳಿಸುತ್ತವೆ. ಅಲ್ಲದೆ ಅದನ್ನು ಬ್ರಾಹ್ಮಣರಿಗೆ ಧಾರೆ ಎರೆದು ಅಗ್ರಹಾರವನ್ನು ಮಾಡುತ್ತಾನೆಂದು ತಿಳಿಸುತ್ತವೆ. ಈ ಕೆರೆಯ ಹಿಂದಿನ ಜಮೀನನ್ನು ಅಲ್ಲಿನ ನಿವಾಸಿಗಳು ಅನುಭವಿಸಿಕೊಂಡು ಹೋಗುತ್ತಿದ್ದಾರೆ. ನಿಡುಗಲ್ಲು ಬೆಟ್ಟದಲ್ಲಿರುವ ಮತ್ತೊಂದು ಶಾಸನವು[೧] ಚಾಲುಕ್ಯರ ಜಗದೇಕ ಮಲ್ಲಿದೇವನ ಮಾಂಡಲೀಕ ಮಲ್ಲಿದೇವ ಚೋಳ ಮಹಾರಾಜರ ತಂತ್ರಪಾಲ ನಾಮಣ್ಣನು ನಿಡುಗಲ್ಲಿಗೆ ಸೇರುವ ಮತ್ತುಕೂರಿನ ಮೂಡಣ ದಿಕ್ಕಿನಲ್ಲಿ ನಾಗಸಮುದ್ರವೆಂಬ ಕನ್ನೆಗೆರೆಯನ್ನು ಕಟ್ಟಿಸಿ ಅದಕ್ಕೆ ದಾನ ದತ್ತಿಗಳನ್ನು ಬಿಟ್ಟ ವಿಚಾರ ತಿಳಿಸುತ್ತದೆ. ಈಗಲೂ ಈ ಕೆರೆ ಸುಸ್ಥಿತಿಯಲ್ಲಿದ್ದು ಅದರ ನೀರು ವ್ಯವಸಾಯಕ್ಕೆ ಉಪಯೋಗವಾಗುತ್ತಿದೆ.

ಅದೇ ಬೆಟ್ಟದ ಬಸ್ತಿದೇವಸ್ಥಾನದ ಬಳಿ ಇರುವ ಕ್ರಿ.ಶ. ೧೨೩೨ರ ಶಾಸನವೊಂದು[೨] ಇರುಂಗೋಳದೇವನ ಕಾಲದಲ್ಲಿ 'ಗಂಗೆಯ ಮಾರ'ನೆಂಬುವವನು ಒಂದು ಕೆರೆಯನ್ನು ಕಟ್ಟಿಸಿದಂತೆಯೂ ಅವನ ರಾಣಿ ಬಾಚಲೆಯು 'ಗಂಗೆಯಮಾರನ ಹಳ್ಳಿಯ'

* ಕನ್ನಡ ಉಪನ್ಯಾಸಕರು, ಎನ್. ಎಂ. ಕೆ. ಆರ್. ವಿ. ಮಹಿಳಾಕಾಲೇಜು, ಜಯನಗರ, ಬೆಂಗಳೂರು - ೫೬೦ ೦೦೪

'ತೈಲಂಗರೆ'ಯ ಹಿಂದೆ ಜಮೀನನ್ನು ದತ್ತಿಕೊಟ್ಟಂತೆಯೂ ತಿಳಿಸುತ್ತದೆ. ಅದೇ ನಿಡುಗಲ್ಲು ಬೆಟ್ಟದ ಕಾಳಹಸ್ತೀಶ್ವರ ದೇವಸ್ಥಾನದಲ್ಲಿರುವ ಶಾಸನವೊಂದರಲ್ಲಿ[೩] ಇರುಂಗೋಳನ ಕಾಲದಲ್ಲಿ (ಕ್ರಿ.ಶ. ೧೨೪೮) ನಗರೇಶ್ವರ ದೇವರಿಗೆ ದತ್ತಿ ಬಿಡುವ ಸಂದರ್ಭದಲ್ಲಿ 'ಮುಚ್ಚುಗುರುಕೆ ಕೆರೆ' ಮತ್ತು ನ್ಯಾಯದ ಗುಡಿ (ಈಗಿನ ನ್ಯಾಯದಗುಂಟೆ ಗ್ರಾಮ) ಕೆರೆಯನ್ನು ಹೆಸರಿಸುತ್ತಾ ಆ ಕೆರೆಯನ್ನು ಕೇಸವ ಸೆಟ್ಟಿಯ ಮಗ ಸಿರಿಯಮಿ ಶೆಟ್ಟಿ ಕಟ್ಟಿಸಿದಂತೆ ತಿಳಿಸುತ್ತದೆ. ಹಾಗೆಯೇ ೧೨೬೦ರ ಶಾಸನವೊಂದು ಪೆರುಮಾಳದೇವ ಚೋಳಮಹಾರಾಜರ ಮಗ ಇರುಂಗೋಳದೇವನು ಗುಂಡಹಳ್ಳಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಸಂದರ್ಭದಲ್ಲಿ ಅವನ ಮಕ್ಕಳು 'ಬೊರ ಸಮುದ್ರ' ಎಂಬ ಕೆರೆ ಕಟ್ಟಿಸಿ ಸಾರ್ವಜನಿಕರಿಗೆ ಸಹಾಯವಾದರೆಂದು ತಿಳಿಸುತ್ತದೆ. ಈ ದೊಡ್ಡಕೆರೆ ಈಗಲೂ ವ್ಯವಸ್ಥಿತವಾಗಿದ್ದು ಅಲ್ಲಿನ ಜನರ ಸಮೃದ್ಧ ಜೀವನಕ್ಕೆ ಸಹಾಯಕವಾಗಿದೆ.

ಶ್ರೀ ವೀರಅಚ್ಚುತದೇವ ಮಹಾರಾಜರ ಕಾಲದ ಕ್ರಿ.ಶ. ೧೫೪೦ರ ಶಾಸನವೊಂದು[೫] ಅವನ ಮಹಾಮಂಡಲೇಶ್ವರ ವಿಠಲೈದೇವರು ಗುಜ್ಜನಡು ಅಡಕ ಮಹಾರಾಜನಿಗೆ ಒಂದು ಕೆರೆಯನ್ನು ಉಂಬಳಿಯಾಗಿ ಕೊಟ್ಟಂತೆ ತಿಳಿಸುತ್ತದೆ. ೧೫೫೦ ಕ್ರಿ.ಶ.ದ ಪಾವಗಡ ತಾಲ್ಲೂಕಿನ ಶಾಸನವೊಂದು[೬] ಕೆರೆ ಕಟ್ಟಲು ದಾನ ನೀಡಿದಂತೆ ತಿಳಿಸುತ್ತದೆ. ನಿಡುಗಲ್ಲಿನ ಇನ್ನೊಂದು ಶಾಸನವು[೭] ಅಲ್ಲಿಗೆ ಸಮೀಪದ ತೂಮಕುಂಟೆ ಗ್ರಾಮ ಸಿಥಿಲವಾದಾಗ ಅಲ್ಲಿನ ಕೆರೆಯನ್ನು ಅದರ ಕಾಲುವೆಗಳನ್ನು ದುರಸ್ತಿ ಮಾಡಿಸಿ ಅಲ್ಲಿನ ವ್ಯವಸಾಯಕ್ಕೆ ಅನುಕೂಲವಾಗುವಂತೆ ಮಾಡಿ ಆ ಗ್ರಾಮದ ಅಭಿವೃದ್ಧಿಗೆ ಶ್ರಮಿಸಿದ ವಿಚಾರವನ್ನು ತಿಳಿಸುತ್ತದೆ. ಜೊತೆಗೆ ಆ ಸುತ್ತ ಮುತ್ತಲ ಹಳ್ಳಿಗಳು ಅಂದರೆ ಆ ಕೆರೆ ನೀರು ಬಳಸಿಕೊಳ್ಳುವ ಎಲ್ಲಾ ಹಳ್ಳಿಯ ಗೌಡ ಶಾನುಭೋವಗಳು ಮುಂದೆ ನಿಂತು ಕಾಲುವೆಗಳ ಹೂಳು ತೆಗೆಸುವುದು, ರಿಪೇರಿ ಮಾಡಿಸುವುದು ಮುಂತಾಗಿ ನೋಡಿದಾಗ ಜನರ ಜೀವನಾಡಿ ಆದಾಗಿತ್ತೆಂದು ತಿಳಿದು ಬರುತ್ತದೆ.

ಹಾಗೆಯೇ ೧೫೬೦ರ ಶಾಸನವೊಂದು[೮] ನಿಡುಗಲ್ಲು ದುರ್ಗಕ್ಕೆ ಸಮೀಪದ ಅರಸೀಕೆರೆ ಕೆರೆಯನ್ನು ಹೆಸರಿಸುತ್ತದೆ. ಇದು ಬಹಳ ದೊಡ್ಡ ಕೆರೆಯಾಗಿದೆ. ಇದನ್ನು ನಿಡುಗಲ್ಲು ರಾಜನ ಅರಸಿ ಕಟ್ಟಿಸಿದ್ದರಿಂದ ಆ ಹೆಸರು ಬಂದಿದೆಯೆಂದು ಸ್ಥಳೀಯರು ಹೇಳುತ್ತಾರೆ. ಆದರೆ ಯಾವರಾಜ, ಯಾವರಾಣಿ ಎಂಬುದು ಖಚಿತವಾಗಿ ಹೇಳಲು ಆಧಾರವಿಲ್ಲ. ಆದರೆ ಇದೇ ಸಂದರ್ಭದಲ್ಲಿ ನಿಡುಗಲ್ಲಿನಲ್ಲಿ ತಿಮ್ಮಣ್ಣನಾಯಕರು ಆಳ್ವಿಕೆ ನಡೆಸುತ್ತಿದ್ದು ಅವನ ಅರಸಿಯರಲ್ಲಿ ಯಾರ್‍ಯಾದರೂ ಕಟ್ಟಿಸಿರಬಹುದೆಂದು ಹೇಳಬಹುದು. ಬಹಳ ದೊಡ್ಡ ಕೆರೆಯಾದ ಇದು ನೂರಾರು ಎಕರೆ ಜಮೀನಿಗೆ ಈಗಲೂ ನೀರೊದಗಿಸುವುದನ್ನು ನೋಡಿದರೆ ವ್ಯವಸಾಯಕ್ಕೆ ರಾಜರು ಕೊಡುತ್ತಿದ್ದ ಮನ್ನಣೆ ತಿಳಿಯುತ್ತದೆ. ಮತ್ತು ಆ ಕೆರೆ ನಿರ್ಮಾಣದ ತಂತ್ರಗಾರಿಕೆಯೂ ಅಷ್ಟೇ ಅದ್ಭುತವಾದದ್ದು. ತಿಮ್ಮಣ್ಣನಾಯಕರು ದೊಡ್ಡ ಕೆರೆಯನ್ನು ಕಟ್ಟಿಸಲು ಚಿಕ್ಕ ಕದುರನಿಗೆ ಭೋಗ್ಯಾದೆಯಾಗಿ ೧೨೦ ಗದ್ದೆ ಮುಂತಾದುವನ್ನು ಕೊಡುತ್ತಾರೆ. ಎಂದು ತಿಳಿಸುವ ಶಾಸನವೊಂದು[೯] ರಾಜರೇ ನೇರವಾಗಿ ಕೆರೆಗಳನ್ನು ಕಟ್ಟಿಸಲು ಸಾಧ್ಯವಾಗದಿದ್ದಾಗ ಆಯಾ ಪ್ರದೇಶಗಳಲ್ಲಿ ಅಲ್ಲಿನ ಅಧಿಕಾರಿಗಳಿಗೆ ಆ ಜವಾಬ್ದಾರಿಯನ್ನು ವಹಿಸುತ್ತಿದ್ದುದು ಕಂಡು ಬರುತ್ತದೆ.

ಕ್ರಿ.ಶ. ೧೬೫೩ರ ನಿಡುಗಲ್ಲಿನ ಮತ್ತೊಂದು ಶಾಸನವು[೧೦] 'ರಂಗಸಮುದ್ರ' ಎನ್ನುವ ಕೆರೆಯನ್ನು ಹೆಸರಿಸುತ್ತದೆ. ಸಾಮಾನ್ಯವಾಗಿ ನಿಡುಗಲ್ಲಿನ ಅನೇಕ ಶಾಸನಗಳಲ್ಲಿ ಈ ಕೆರೆಯ ವಿಚಾರ ಕಾಣಸಿಕೊಂಡಿದೆಯಾದರೂ ಅದರ ನಿರ್ಮಾಣ ಕುರಿತು ಹೇಳುವುದಿಲ್ಲ. ಈ ಕೆರೆಯ ಹಿಂದೆ ಈಗಲೂ ತೋಟ ತುಡಿಕೆಗಳು ಭತ್ತದ ಗದ್ದೆಗಳಿಂದ ಹಚ್ಚ ಹಸಿರಾಗಿ ಸಮೃದ್ಧಿಯಿಂದ ಕೂಡಿರುವುದನ್ನು, ವ್ಯವಸಾಯಕ್ಕೆ ಕೆರೆಯ ನೀರಿನ ಉಪಯೋಗ ವಾಗುತ್ತಿರುವುದನ್ನು ಗಮನಿಸಬಹುದು. ನಿಡುಗಲ್ಲಿನ ದಕ್ಷಿಣಕ್ಕೆ ಇರುವ ಆಡುಮಲ್ಲಪ್ಪನ ಗುಡಿಯ ಹತ್ತಿರ ಇರುವ ಕೆರೆಯನ್ನು ವೀರತಿಮ್ಮನೃಪಾಲನು ತಮ್ಮ ತಂದೆ ತಾಯಿಗಳಿಗೆ ಪುಣ್ಯ ಪ್ರಾಪ್ತಿಯಾಗಲೆಂದು ನಿರ್ಮಿಸಿದಂತೆ ಅಲ್ಲಿನ ಶಾಸನವೊಂದು ತಿಳಿಸುತ್ತದೆ.[೧೧] ನಿಡುಗಲ್ಲಿನ ೧೬೭೦ರ ಶಾಸನವೂ ಸಹ ಈ ಕೆರೆಯನ್ನು ಹೆಸರಿಸುತ್ತದೆ.

ಹೀಗೆ ಶಾಸನದಲ್ಲಿ ಕಾಣಿಸಿಕೊಳ್ಳುವ ಕೆರೆಗಳ ಜೊತೆಗೆ ಅನೇಕ ಕೆರೆಗಳು ಉಲ್ಲೇಖಗೊಳ್ಳದೆಯೂ ಇರಬಹುದು. ಕಾರಣ ಪ್ರತಿಹಳ್ಳಿಗೂ ಸಾಮಾನ್ಯವಾಗಿ ಒಂದು ಕೆರೆಯೋ ಕುಂಟೆಯೋ ಇದ್ದೇ ಇರುತ್ತದೆ. ವಿಶಾಲವಾದ ನಿಡುಗಲ್ಲು ದುರ್ಗದಲ್ಲಿ, ಕೋಟೆಯ ಬಯಲಿನಲ್ಲಿ ಹೆಸರಿಲ್ಲದ ಚಿಕ್ಕ ಚಿಕ್ಕ ಕುಂಟೆಗಳನ್ನು ಹರಿಯುವ ನೀರಿಗೆ ಅಡ್ಡಲಾಗಿ ನಿರ್ಮಿಸಿದ್ದಾರೆ. ಬಸವನ ದೊಣೆ, ತಿಳಿ ನೀರಿನ ಕೊಳ, ಅರಸಿಯರ ಕೊಳ, ಏತದ ಕಲ್ಯಾಣಿ, ಈರಣ್ಣನ ಬಾವಿ, ಸೀಗೆಬಾವಿ, ರಾಮತೀರ್ಥ, ಲಕ್ಷ್ಮಣತೀರ್ಥ, ಸುಬ್ಬರಾಯನ ಬಾವಿ, ಅರಸನ ಬಾವಿ, ಸಿದ್ದಪ್ಪನ ಬಾವಿ ಮುಂತಾದ ಅನೇಕ ಕೆರೆ, ಕಟ್ಟೆ ಬಾವಿಗಳು ಈ ಪ್ರದೇಶದಲ್ಲಿ ಕಂಡು ಬರುತ್ತವೆ. ಇವುಗಳ ಹಿಂದೆ ಒಂದೊಂದಕ್ಕೂ ಒಂದು ರೀತಿಯ ದಂತಕತೆಗಳೇ ಇವೆ. ಆನೆಹೊಂಡ ಮತ್ತು ಅರಸಿಯರ ಕೊಳ: ಎರಡೂ ಬಹಳ ತಂತ್ರಗಾರಿಕೆಯಿಂದ ಕೂಡಿವೆ. ಇಡೀ ನಗರದ ಅಂದರೆ ದುರ್ಗದ ಒಳಗೆ ಹರಿಯುವ ನೀರು ಒಳ ಚರಂಡಿ ಮೂಲಕ ಬಂದು ಇವುಗಳನ್ನು ಸೇರುವಂತೆ ಮಾಡಿರುವುದನ್ನು ನೋಡಿದರೆ ಅದು ಅರ್ಥವಾಗುತ್ತದೆ. ಇವೆಲ್ಲವುಗಳನ್ನು ಗಮನಿಸಿದಾಗ, ಜಲಮೂಲಗಳನ್ನು ಅವಲೋಕಿಸಿದಾಗ ಅದರ ಮಹತ್ವ,

ಅವಶ್ಯಕತೆ, ಜಲ ಸಂಗ್ರಹಣೆಯ ತಂತ್ರಗಾರಿಕೆ, ಜನ ಜೀವನಕ್ಕೆ ಎಷ್ಟು ಸಹಾಯಕ ವಾದದ್ದು ಎಂಬುದು ತಿಳಿದು ಬರುತ್ತದೆ.


ಮೇಲೆ ನೋಡಿದ ಅನೇಕ ಕೆರೆಗಳು ಈಗಲೂ ವ್ಯವಸ್ಥಿತವಾಗಿದ್ದು ಅನೇಕ ಎಕರೆ ಭೂಮಿಗೆ ನೀರುಣಿಸುತ್ತಿವೆ. ಆಗಿನ ಕಾಲದಲ್ಲಿಯೂ ಇವು ವ್ಯವಸಾಯಕ್ಕೆ ಅನುಕೂಲವಾಗಲೆಂದೇ ನಿರ್ಮಿಸಿರುವುದರಲ್ಲಿ ಎರಡು ಮಾತಿಲ್ಲ. ಅಂದು ಸಾರ್ವಜನಿಕರ ಅಭಿವೃದ್ಧಿಗೆ ರಾಜ್ಯದ ಅಭಿವೃದ್ಧಿಗೆಂದು ಮಾಡಿದ ಕಾರ್ಯ ಇಂದಿಗೂ ಬದಲಾಗದೆ ತನ್ನ ಕೆಲಸವನ್ನು ನಿರ್ವಹಿಸುತ್ತಿದೆ. ಈಗಲೂ ಈ ಕೆರೆಗಳು ಪಾವಗಡ ತಾಲ್ಲೂಕಿನ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿ ನಿಂತಿವೆ. ಅಲ್ಲಿನ ಜನರ ಜೀವನಾಡಿಯಾಗಿ ಮಿಡಿಯುತ್ತಿವೆ. ಅವು ಮಳೆಗಾಲದಲ್ಲಿ ತುಂಬಿದರೆ ಜನರಿಗೆ ಹರ್ಷ. ಇಲ್ಲವಾದರೆ ಬಹಳ ತೊಂದರೆಯಾಗುತ್ತದೆ.

ಮೊದಲೇ ತಿಳಿಸಿದಂತೆ ಇದುವರೆಗೂ ಪರಿಶೀಲಿಸಿದ ಅನೇಕ ಕೆರೆಗಳು ತಾಲ್ಲೂಕಿನಲ್ಲಿ ಮಹತ್ತರ ಪಾತ್ರವಹಿಸಿವೆ. ಅವುಗಳಿಂದ ರೈತರೂ ಈಗಲೂ ಅಡಿಕೆ, ತೆಂಗು, ಬಾಳೆ, ರೇಷ್ಮೆ, ಭತ್ತ, ರಾಗಿ ಕಬ್ಬು ಮುಂತಾದ ವಾಣಿಜ್ಯ ಬೆಳೆಗಳ ಜೊತೆಗೆ ಅನೇಕ ರೀತಿಯ ದ್ವಿದಳ ಧಾನ್ಯದ ಬೆಳೆಗಳನ್ನು ಬೆಳೆಯುತ್ತಾರೆ. ಇಡೀ ಪಾವಗಡ ತಾಲ್ಲೂಕಿನಲ್ಲಿ ಸದಾ ಹಸಿರು ಕಂಗೊಳಿಸುವ ಈ ನಿಡುಗಲ್ಲು ಹೋಬಳಿಯು ಅಭಿವೃದ್ಧಿಯಲ್ಲಿ ಸಂಪತ್ತಿನಲ್ಲಿ ಪ್ರಮುಖವಾಗಲು ಈ ಕೆರೆಗಳೆ, ಕಾರಣ. ಅಂದಿನ ಅರಸರು ವಿವಿಧ ಉದ್ದೇಶದಿಂದ ನಿರ್ಮಿಸಿದ ಈ ಕೆರೆಗಳಲ್ಲಿ ಇಂದಿನ ದಿನಗಳಲ್ಲಿ ಅವುಗಳ ರಿಪೇರಿಯಾಗಲೀ, ಹೂಳುತೆಗೆಸುವುದಾಗಲೀ ಸದ್ಯ ನಡೆಯುತ್ತಿಲ್ಲ. ಆ ಕಾರಣವಾಗಿ ಅಂತರ್ಜಲ ಕುಸಿದು ಕೆಲವೇ ವರ್ಷಗಳಲ್ಲಿ ಮನುಷ್ಯನ ಬದುಕಿಗೆ ಕಷ್ಟವಾದೀತು. ಸಂದಿಗ್ಧ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಆ ಕಾರ್ಯ ತ್ವರಿತ ಗತಿಯಲ್ಲಿ ನಡೆಯ ಬೇಕಿದೆ.


ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ. XII ಪಾವಗಡ., ೪೩ ಕ್ರಿ.ಶ.೧೧೫೦
೨. ಎ.ಕ. XII ಪಾವಗಡ., ೫೨ ಕ್ರಿ.ಶ. ೧೨೩೨
೩. ಎ.ಕ. XII ಪಾವಗಡ., ೫೦, ಕ್ರಿ.ಶ. ೧೨೪೮
೪. ಎ.ಕ. XII ಪಾವಗಡ., ೨೪ ಕ್ರಿ.ಶ. ೧೨೬೦
೫. ಎ.ಕ. XII ಪಾವಗಡ., ೧೪, ಕ್ರಿ.ಶ. ೧೫೪೦
೬. ಎ.ಕ. XII ಪಾವಗಡ., ೩೪, ಕ್ರಿ.ಶ. ೧೫೫೦
೭. ಎ.ಕ. XII ಪಾವಗಡ., ೨೯, ಕ್ರಿ.ಶ. ೧೫೫೪
೮. ಎ.ಕ. XII ಪಾವಗಡ., ೨೮, ಕ್ರಿ.ಶ. ೧೫೬೦
೯. ಎ.ಕ. XII ಪಾವಗಡ., ೨೩, ಕ್ರಿ.ಶ. ೧೬೨೩
೧೦. ಎ.ಕ. XII ಪಾವಗಡ., ೬೧, ಕ್ರಿ.ಶ. ೧೬೬೩
೧೧. ಎ.ಕ. XII ಪಾವಗಡ., ೬೧, ಕ್ರಿ.ಶ ೧೬೭೦

★ ★ ★ ★



ಕೆರೆಕಟ್ಟೆ ಹೊಳೆ ಭಾವಿ ನೀರುಣಿಸುವ ಪರಿಪಾಠ
ತಲೆಮಾರುಗಳ ಜೀವನವ ಸಾಕಿತಲ್ಲ
ಇತಿಹಾಸದಾ ನೆನಪಿರಲಿ ವರ್ತಮಾನದ ಅತಿ ಆತುರವಿರದಿರಲಿ
ಕಂಗೆಟ್ಟರೆ ಭವಿಷ್ಯತ್ತಿಗೆ ಎಳೆದ ಬರೆ ಸಿಡಿಸುತ್ತದೆ ಕೊರತೆ
ಬೇಕೆ ಇದರಂಥ ಒರತೆ?



ಮಹೇಶಕುಮಾರ ಹ. ಪಾಟೀಲ*

ಅಗ್ರಹಾರ ಮುತ್ತಿಗೆ ಒಂದು ಸಾಂಸ್ಕೃತಿಕ ಸಮೀಕ್ಷೆ

ಪ್ರಾಚೀನ ಕಾಲದಲ್ಲಿ ರಾಜರುಗಳು, ಮಹಾಮಂಡಳೇಶ್ವರರು, ಸಾಮಂತರು, ದಂಡನಾಯಕರುಗಳು, ರಾಣಿಯರು ಮತ್ತು ಅಧಿಕಾರಿವರ್ಗಗಳವರು ಶಿಕ್ಷಣಕ್ಕಾಗಿ ಪ್ರತ್ಯೇಕವಾಗಿ ದಾನ-ದತ್ತಿಯನ್ನೋ, ಶಾಲಾಸಂಸ್ಥೆಗಳನ್ನೋ ನಿರ್ಮಿಸದೇ ಪರೋಕ್ಷವಾಗಿ ದೇಗುಲ, ಮಠ, ಅಗ್ರಹಾರ, ಬ್ರಹ್ಮಪುರಿ ಹಾಗೂ ಅವುಗಳಿಗೆ ಅಂಟಿದ್ದ ಘಟಿಕಾಸ್ಥಾನ ಗಳಿಗೆ ದಾನ-ದತ್ತಿಗಳನ್ನು ನೀಡುವ ಮೂಲಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದುದು ಸಾಮಾನ್ಯವಾಗಿ ತಿಳಿದುಬರುತ್ತದೆ. ಅಂತಹ ಸಂಸ್ಥೆಗಳಿಗೆ ಅಗ್ರಹಾರವು ವಿದ್ಯಾಕೇಂದ್ರವಾಗಿತ್ತು. ಅಗ್ರ+ಅಹಾರ ಎಂದರೆ ಶ್ರೇಷ್ಠರಿಗೆ ನೀಡಿರುವಂತಹ ಸ್ಥಳ ಎಂಬುದು ಅದರ ಅರ್ಥವಾಗಿತ್ತು.[೧]

ಪ್ರಸ್ತುತ ಅಗ್ರಹಾರ ಮುತ್ತಿಗೆ, ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಒಂದು ಗ್ರಾಮವಾಗಿದ್ದು, ಬಸವನ ಬಾಗೇವಾಡಿಯಿಂದ ನೈಋತ್ಯಕ್ಕೆ ೬ ೧/೨ ಮೈಲಿ ಅಂತರದಲ್ಲಿದೆ. ಇದು ಉತ್ತರ ಅಕ್ಷಾಂಶ ೧೬°೩೧' ಮತ್ತು ಪೂರ್ವ ರೇಖಾಂಶ ೭೫°೫೭'ರ ಮಧ್ಯದಲ್ಲಿದೆ. ಇದರ ಪ್ರಾಚೀನ ಹೆಸರು **ಮುರ್ತಿಗೆ** ಎಂದಾಗಿತ್ತು. ಇದು ತರ್ದ್ದವಾಡಿ-೧೦೦೦ದ ಮುರ್ತಿಗೆ-೩೦ ಉಪವಿಭಾಗದ ಮೊದಲ ಗ್ರಾಮವಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ.[೨] ಪ್ರಸ್ತುತ ಮುತ್ತಿಗೆಯಲ್ಲಿ ೧೬ ಶಾಸನಗಳು ನಮಗೆ ದೊರೆಯುತ್ತವೆ. ಅಲ್ಲದೇ ಈ ಶಾಸನಗಳಲ್ಲಿ ಮುತ್ತಿಗೆಯನ್ನು ಸರ್ವನಮಸ್ಯದುತ್ತಮದಗ್ರಹಾರ, ಉತ್ತಮದಗ್ರಹಾರ ಮತ್ತು ಮಹಾಗ್ರಹಾರವೆಂದು ಕರೆಯಲಾಗಿದೆ. ಸರ್ವನಮಸ್ಯದುತ್ತ ಮದಗ್ರಹಾರವೆಂದರೆ ತೆರಿಗೆ ಮತ್ತು ಯಾವುದೇ ರೀತಿಯ ಸುಂಕ ವನ್ನು ರಾಜನಿಗೆ ನೀಡದೇ ಅಲ್ಲಿನ ಮಹಾಜನಗಳು ಅದನ್ನು ಅನುಭವಿಸುವಂತದ್ದು. ಉತ್ತಮದಗ್ರಹಾರವೆಂದರೆ ಅಗ್ರಹಾರ ಗಳಲ್ಲಿಯೇ ಒಳ್ಳೆಯ ಅಗ್ರಹಾರ ಅಥವಾ ಪ್ರಸಿದ್ಧವಾದ ಅಗ್ರಹಾರ ವೆಂದಾಗುತ್ತದೆ. ಮತ್ತು ಮಹಾಗ್ರಹಾರ ಎಂದರೆ ಮೊದಲನೆಯದಾಗಿ ಹೆಚ್ಚು ಜನ ಮಹಾಜನರನ್ನು ಹೊಂದಿರುವಂತದ್ದೋ, ಎರಡನೆಯದಾಗಿ ಅತ್ಯಂತ ಹೆಚ್ಚು ಮಹತ್ವಹೊಂದಿರು ವಂತದ್ದಾಗಿದೆ.[೩]

ಮುತ್ತಿಗೆಯನ್ನು ಚಾಲುಕ್ಯ ಚಕ್ರವರ್ತಿ ಸತ್ಯಾಶ್ರಯದೇವನು ವಿಕ್ರಮಾಂಕನ ಉಪನಯನದ ಸಂದರ್ಭದಲ್ಲಿ ತನ್ನ ಕುಲಗುರು ವಿಷ್ಣುಭಟ್ಟನಿಗೆ ದಕ್ಷಿಣೆಯನ್ನಾಗಿ ಕೊಟ್ಟಂತೆ ಶಾಸನ ಹೇಳಿದೆಯಲ್ಲದೇ, ವಿಷ್ಣುಭಟ್ಟನು ಅದನ್ನು ತೆರಿಗೆ ರಹಿತ ಗ್ರಾಮವನ್ನಾಗಿ ಪಡೆದುಕೊಂಡು ಅಗ್ರಹಾರವನ್ನಾಗಿ ನಿರ್ಮಿಸಿದನು ಎಂದಿದೆ.[೪] ಜೊತೆಗೆ ಅಲ್ಲಿನ ಇನ್ನೊಂದು ಶಾಸನ ಈ ಅಗ್ರಹಾರದಲ್ಲಿ ಚತುರ್ವೇದಗಳಲ್ಲಿ ಪಾರಂಗತರಾದ ೩೦೦ ಮಹಾಜನರಿದ್ದುದನ್ನು ಉಲ್ಲೇಖಿಸುತ್ತದೆ.[೫] ಮತ್ತೊಂದು ಶಾಸನ ಅಲ್ಲಿನ ಬ್ರಾಹ್ಮಣರ ವಿಷಯ ಹೇಳುತ್ತ "ವಿಶ್ರುತ, ಯಜ್ಞ, ವೇದ, ವೇದಾಂತ, ಪುರಾಣತತ್ಪರ ಮಹಾದ್ವಿಜರಂ" ಎಂದು ಅವರು ಪಾರಂಗತರಾದ ವಿಷಯಗಳನ್ನು ಕುರಿತು ತಿಳಿಸುತ್ತದೆ.[೬]

ಮುತ್ತಿಗೆಯನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದ ಸತ್ಯಾಶ್ರಯನ ಕುಲಗುರು ವಿಷ್ಣುಭಟ್ಟನು ವೇದ, ವೇದಾಂಗ, ಮೀಮಾಂಸೆ, ತಾರಕ, ಪುರಾಣ ಮತ್ತು ಧರ್ಮಶಾಸ್ತ್ರಗಳಲ್ಲಿ ಪಾರಂಗತನಾಗಿದ್ದ ವಿಷಯವನ್ನು ಶಾಸನವೊಂದು ಉಲ್ಲೇಖಿಸಿದೆ.[೭] ಅಗ್ರಹಾರ ಮುತ್ತಿಗೆಯ ಒಡೆತನ ಒಂದೇ ಮನೆತನದವರ ಕೈಯಲ್ಲಿ ಸತ್ಯಾಶ್ರಯನ ಕಾಲದಿಂದ ಹಿಡಿದು, ಆರನೆಯ ವಿಕ್ರಮಾದಿತ್ಯನ ಕಾಲದವರೆಗೆ ಮುಂದುವರೆದಿದ್ದು ನಮಗೆ ವಿಷ್ಣುಭಟ್ಟನ ವಂಶಾವಳಿ ಯನ್ನು ನೀಡುವ ಮುತ್ತಿಗೆಯ ಶಾಸನದಿಂದ ತಿಳಿಯುತ್ತದೆ.[೮]

ಅಲ್ಲಿ ಬರುವ ವಂಶಾವಳಿಯು ಹೀಗಿದೆ.

ವಿಷ್ಣುಭಟ್ಟ
↓
ಗೋವಿಂದ
↓
ವಿಷ್ಣುಚಮೂಪ
↓
ಗೋವಿಂದರಾಜ
↓
ವಿಷ್ಣುದೇವ

ಹೀಗೆ ಮುತ್ತಿಗೆಯು ಒಂದು ಅಗ್ರಹಾರವಾಗಿದ್ದು, ಅದರ ಆಡಳಿತ, ಅಲ್ಲಿನ ಮಹಾಜನರು, ಅವರ ಸ್ಥಾನಮಾನ ಮುಂತಾದ ವಿಷಯಗಳ ಕುರಿತು ಮುತ್ತಿಗೆಯ ಶಾಸನಗಳು ತಿಳಿಸಿದರೂ ಅಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳು ಹಾಗೂ ಅಲ್ಲಿ ಕಲಿಸುತ್ತಿದ್ದಂತಹ ವಿಷಯಗಳು ಮುಂತಾದವುಗಳ ಬಗ್ಗೆ ಅವು ಮೌನವಾಗಿವೆ. ಅಲ್ಲದೇ ಕ್ರಿ.ಶ.೧೧೬೫ರ ಮುತ್ತಿಗೆಯ ಶಾಸನವೊಂದು ತಿಳಿಸುವಂತೆ ಅಲ್ಲಿ ಪ್ರಸನ್ನಕೇಶವದೇವ ಬ್ರಹ್ಮಪುರಿಯೂ ಇತ್ತೆಂದು ತಿಳಿಯುತ್ತದೆ.[೯]

* ೧೬೦, ಅನುಗ್ರಹ, ಮೊದಲನೇ ಮುಖ್ಯರಸ್ತೆ, ಶ್ರೀನಗರ, ಧಾರವಾಡ - ೫೮೦ ೦೦೩

ಈ ಮೇಲಿನ ಉನ್ನತ ಶಿಕ್ಷಣ ಸಂಸ್ಥೆಗಳಲ್ಲದೇ ಮುತ್ತಿಗೆಯಲ್ಲಿ ಶಿಕ್ಷಣದ ಕೇಂದ್ರಗಳಾದ ಮಠಗಳೂ ಇದ್ದುದು ತಿಳಿದುಬರುತ್ತದೆ. ಅಗ್ರಹಾರಗಳು ಉನ್ನತ ಶಿಕ್ಷಣ ಕೇಂದ್ರಗಳಾದರೆ, ಮಠಗಳು ಪ್ರಾಥಮಿಕ ಶಿಕ್ಷಣ ಅಥವಾ ಧಾರ್ಮಿಕ ಶಿಕ್ಷಣ ಕೇಂದ್ರಗಳಾಗಿದ್ದವು ಎಂಬುದು ಅವುಗಳ ಅಧ್ಯಯನದಿಂದ ತಿಳಿದುಬರುತ್ತದೆ.[೧೦] ಪ್ರಸ್ತುತ ಮುತ್ತಿಗೆಯಲ್ಲಿ ಇಂತಹ ಮೂರು ಮಠಗಳಿದ್ದುದು ಕಂಡುಬರುತ್ತದೆ.

ಅ) ತೀಕೇಶ್ವರ ದೇಗುಲದ ಮಠ : ಮುತ್ತಿಗೆಯ ತೀಕೇಶ್ವರ ದೇಗುಲಕ್ಕೆ ಹೊಂದಿಕೊಂಡಿದ್ದ ಮಠದ ಗುರು ಸ್ವಸ್ತಿಯಮನಿಯಮ ಸ್ವಾಧ್ಯಾಯಧಾನಕರಣಮೋನಾನುಷ್ಠಾನ ಜಪಸಮಾಧಿಶೀಲಗುಣಸಂಪನ್ನರುಪರಾಯನೈಷ್ಠಿಕರುಮಪ್ಪ ಶ್ರೀಮತು ವರಯೋಗೀಶ್ವರು ಅಲ್ಲಿನ ತಪೋಧನರಚ್ಛಾತ್ರರ ಆಹಾರ ಬಟ್ಟೆಗೋಸ್ಕರ ದಾನ ಪಡೆದದ್ದು ತಿಳಿದುಬರುತ್ತದೆ.[೧೧] ಶ್ರೀಮತು ಧ್ರೀವೇಶ್ವರಪಂಡಿತದೇವರು ಇವರಿಗಿಂತ ಮೊದಲಿಗಿದ್ದರಲ್ಲದೇ ಇವರ ಗುರುವಾಗಿದ್ದರು.[೧೨]

ಆ) ಶಿವಲಿಂಗೇಶ್ವರ ದೇಗುಲ ಮಠ : ಶಾಸನದಲ್ಲಿ ಮುತ್ತಗೆಯ ಶಿವಲಿಂಗ ದೇಗುಲಕ್ಕೆ ಹೊಂದಿಕೊಂಡ ಮಠದಲ್ಲಿನ ಗುರುಗಳ ಪರಂಪರೆಯನ್ನು ನೀಡಲಾಗಿದೆ. ಅದು ಕಾಶ್ಮೀರದೇವ, ಕಾಲಭೈರವಗುರು, ಯೋಗೀಶ್ವರಗುರು, ಧಾರೇಶ್ವರದೇವ, ಯೋಗಿಶ್ವರದೇವ ಮತ್ತು ಲಕುಲೀಶದೇವರನ್ನು ಹೆಸರಿಸುತ್ತದೆ. ಅಲ್ಲದೇ ಇಲ್ಲಿ ನಡೆಯುತ್ತಿದ್ದ ಶಿಕ್ಷಣಕ್ಕಾಗಿ ಹಾಗೂ ಅಲ್ಲಿನ ತಪೋಧನರಚ್ಛಾತ್ರರ ಅಹಾರ ಬಟ್ಟೇಗೋಸ್ಕರ ಲಕುಲೀಶದೇವನಿಗೆ ಕಲಚೂರಿ ಬಿಜ್ಜಳನು ದಾನವನ್ನು ನೀಡಿದ ವಿಷಯವೂ ಅದರಿಂದ ತಿಳಿಯುತ್ತದೆ.[೧೩]

ಇ) ಶ್ರೀ ರಾಮೇಶ್ವರ ದೇವಾಯಲಯ ಮಠ : ಮುತ್ತಗೆಯ ರಾಮೇಶ್ವರ ದೇಗುಲದಲ್ಲಿನ ಮಠದಲ್ಲಿನ ತಪೋಧನರುಚ್ಛಾತ್ರರುಗಳ ಅಹಾರ ಬಟ್ಟೆ ಮುಂತಾದವುಗಳಿಗೆ ಕಲಚೂರಿ ಬಿಜ್ಜಳನು ದಾನ ನೀಡಿದನು. ರುದ್ರಮುನಿಶಕ್ತಿ ಅಲ್ಲಿನ ಗುರುಗಳಾಗಿದ್ದರು.[೧೪] ಅಲ್ಲದೇ ಅಲ್ಲಿನ ಮೊದಲ ಗುರು ಯೋಗೀಶ್ವರ ಪಂಡಿತದೇವರು ಆರನೆಯ ವಿಕ್ರಮಾದಿತ್ಯನಿಂದ ದತ್ತಿಪಡೆದಿದ್ದರು.[೧೫]

ರಾಜಕೀಯ ಆಡಳಿತ

ರಾಷ್ಟ್ರಕೂಟರು : ಕ್ರಿ.ಶ. ೮೬೨ರ ಅಮೋಘವರ್ಷನ ಹೂವಿನಹಿಪ್ಪರಗಿಯ ಶಾಸನದಿಂದ ರಾಷ್ಟ್ರಕೂಟರು ತರ್ದವಾಡಿ-೧೦೦೦ ವನ್ನಾಳುತ್ತಿದ್ದ ವಿಷಯ ತಿಳಿಯುತ್ತದೆ.[೧೬]

ಕಲ್ಯಾಣಿ ಚಾಲುಕ್ಯರು : ತೈಲಪನ ಹಲವಾರು ಶಾಸನಗಳು ತರ್ದವಾಡಿ ನಾಡಿನಲ್ಲಿ ದೊರೆಯುತ್ತವೆ. ಅಲ್ಲದೆ ಎರಡನೆಯ ಜಗದೇಕಮಲ್ಲನ ಆರು ಶಾಸನಗಳು ಹಾಗೂ ಆರನೆಯ ವಿಕ್ರಮಾದಿತ್ಯನ ಎರಡು ಶಾಸನಗಳು ಪ್ರಸ್ತುತ ಮುತ್ತಿಗೆಯಲ್ಲಿ ನಮಗೆ ದೊರೆಯುತ್ತವೆ.

ಕಲಚೂರಿಗಳು : ಬಿಜ್ಜಳನ ಮೂರು ಶಾಸನಗಳು ಹಾಗೂ ರಾಯಮುರಾರಿ ಸೋವಿದೇವನ ಮೂರು ನಮಗೆ ಪ್ರಸ್ತುತ ಮುತ್ತಿಗೆಯಲ್ಲಿ ದೊರೆಯುತ್ತವೆ.

ಸೇವುಣರು

ಯಾದವ ಭಿಲ್ಲಮನ ಎರಡು ಶಾಸನಗಳು ಪ್ರಸ್ತುತ ಮುತ್ತಿಗೆಯಲ್ಲಿ ದೊರೆಯುತ್ತಿವೆ.

ಶಿಲಾಹಾರರು : ಮುತ್ತಿಗೆಯ ಕಲ್ಯಾಣಿ ಚಾಲುಕ್ಯ ಜಗದೇಕಮಲ್ಲನ ಶಾಸನದಿಂದ ನಮಗೆ ಮಹಾಮಂಡಳೇಶ್ವರ ಕೊಪಣ ಪುರವರಾಧೀಶ್ವರ ಸುವರ್ಣಗರುಡಧ್ವಜ ಕಾತ್ಯಾಯಿ ನಿಲಬ್ಧವರಪ್ರಸಾದಾದಿ ಪ್ರಶಸ್ತಿಸಹಿತರಾದ ಶಿಲಹಾರ ಮನೆತನದ ಡಾಕರಸ, ಗೋಣರಸ, ಅಮ್ಮರಸ, ಆಹುಮಲ್ಲರಸರುಗಳು ಇಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದ ವಿಷಯ ತಿಳಿದುಬರುತ್ತದೆ. ಅಲ್ಲದೇ ಇದೇ ಶಾಸನದ ಕೆಳಗೆ ಕಂಡರಿಸಿದ ರಾಯಮುರಾರಿ ಸೋವಿ ದೇವರಸನ ಶಾಸನ ಈ ಸಮಸ್ತ ಪ್ರಶಸ್ತಿಗಳೊಂದಿಗೆ ಶಿಲಾಹಾರರ ಹದಿನೆಂಟು ಸಂತತಿಗಳನ್ನು ಉಲ್ಲೇಖಿಸುತ್ತದೆ. ಅದರಲ್ಲಿ ಮುತ್ತಗೆಯ ಶಿಲಾಹಾರ ಸಂತತಿಯೂ ಒಂದಾಗಿದೆ.[೧೭]

ಅಧಿಕಾರಿಗಳು : ಇಲ್ಲಿನ ಶಾಸನಗಳು ಆಡಳಿತದ ಇತರೇ ಅಧಿಕಾರಿಗಳಾದ ರಾಜ್ಯಾಧ್ಯಕ್ಷ, ಸುಂಕವೆರ್ಗಡೆ, ಪಟ್ಟಸಾಹಣಾಧಿಪತಿ, ಹಿರಿಯದಂಡನಾಯಕ, ದಂಡನಾಯಕ ಹೀಗೆ ಇನ್ನೂ ಅನೇಕ ಅಧಿಕಾರಿಗಳನ್ನು ಉಲ್ಲೇಖ ಮಾಡುತ್ತವೆ.

ದೇಗುಲಗಳು

ಪ್ರಸ್ತುತ ಮುತ್ತಿಗೆಯ ಶಾಸನಗಳಲ್ಲಿನ ಉಲ್ಲೇಖದಿಂದ ಇಲ್ಲಿ ಐದು ದೇವಾಲಯಗಳನ್ನು ನಿರ್ಮಿಸಿದ್ದುದು ತಿಳಿಯುತ್ತದೆ.

೧) ಶ್ರೀ ಪ್ರಸನ್ನಕೇಶವ ದೇಗುಲ : ಶ್ರೀಮಂತ ವ್ಯಾಪಾರಿಯಾದ ಸೋವಿಶೆಟ್ಟಿಯ ತಂದೆ ಚಿಟ್ಟಿಶೆಟ್ಟಿಯು ಈ ದೇಗುಲವನ್ನು ನಿರ್ಮಿಸಿದ ವಿಷಯ ಶಾಸನದಿಂದ ತಿಳಿಯುತ್ತದೆ.[೧೮]

೨) ಶಿವಲಿಂಗೇಶ್ವರ ದೇಗುಲ : ತರ್ದವಾಡಿ ನಾಡಿನ ಅಧಿಕಾರಿಯಾದ ಶಿವರಾಜ ಚಮೂಪನು ಶಿವಲಿಂಗ ದೇಗುಲವನ್ನು ನಿರ್ಮಿಸಿದನು.[೧೯]

೩) ರಾಮೇಶ್ವರ ದೇಗುಲ : ಆರನೆಯ ವಿಕ್ರಮಾದಿತ್ಯನ ಗರುಡನಾದ ಗೋವಿಂದರಾಜನು ಮುರ್ತ್ತಗೆಯಲ್ಲಿ ರಾಮೇಶ್ವರ ದೇಗುಲವನ್ನು ನಿರ್ಮಿಸಿದನು.[೨೦]

೪) ದಕ್ಷಿಣಾಮುಖ ಚೆನ್ನಕೇಶ್ವರ ದೇಗುಲ : ಶ್ವೇತಕುಲದ ಕೈಹಿಸೆಟ್ಟಿಯು ಈ ದೇಗುಲವನ್ನು ಕಟ್ಟಿಸಿದುದಾಗಿ ತಿಳಿದುಬರುತ್ತದೆ. ಅವನ ಮಕ್ಕಳಾದ ಚೌಂಡಿಸೆಟ್ಟಿ, ನಾಚಿಸೆಟ್ಟಿ, ಮಾದಿಸೆಟ್ಟಿಯರು ಇದರ ಜೀರ್ಣೋದ್ಧಾರಕ್ಕಾಗಿ ಭೂಮಿ ಮತ್ತು ತೋಟಗಳನ್ನು ದಾನವಾಗಿ ನೀಡಿದರು.[೨೧]

೫) ಲಕ್ಷ್ಮೀನರಸಿಂಹ ದೇಗುಲ ನಿರ್ಮಾಣ : ಮುತ್ತಿಗೆಯ ಶಂಕರಸ್ವಾಮಿಯ ಅಜ್ಜ ಚೌಡಿಸೆಟ್ಟಿ ಈ ದೇಗುಲವನ್ನು ನಿರ್ಮಿಸಿದ ವಿಷಯ ಶಾಸನದಿಂದ ತಿಳಿಯುತ್ತದೆ.[೨೨]

ಹೀಗೆ ಪ್ರಾಚೀನ ಕಾಲದಲ್ಲಿ ತರ್ದವಾಡಿ-೧೦೦೦ದ ಉಪವಿಭಾಗವಾದ ಮುತ್ತಿಗೆ-೩೦ ಮೊದಲ ಗ್ರಾಮವಾದ ಈ ಮುತ್ತಿಗೆಯು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗಿನ ಸಂಸ್ಥೆಗಳನ್ನು ಹೊಂದಿದ್ದು, ಪ್ರಮುಖವಾದ ಶಿಕ್ಷಣ ಕೇಂದ್ರವಾಗಿದ್ದ ವಿಷಯ ಅಲ್ಲಿನ ಶಾಸನಗಳಿಂದ ತಿಳಿದು ಬರುತ್ತದಲ್ಲದೇ, ಅದೊಂದು ಧಾರ್ಮಿಕ ಕೇಂದ್ರವೂ ಆಗಿದ್ದುದಾಗಿ ತಿಳಿಯುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಚಿದಾನಂದಮೂರ್ತಿ, ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು-೨೦೯.
೨. EI., Vol-XV, p. 28, 1076 A.D.
೩. Shantakumari, S. L., *Agraharas in Ancient India*, p. 221.
೪. EI., Vol-XV, p. 36, 1076 A.D.
೫. SII., Vol-XV, No. 111, p-139-143. 1165 A.D.
೬. Ibid., No. 146, p. 188-89.
೭. EI., Vol-XV, p. 26, 1076 A.D.
೮. Ibid., p. 25-26.
೯. SII., Vol-XV, No. 545, 1165 A.D.
೧೦. Shantakumari, S.L., *Agraharas in Ancient India*, p. 223.
೧೧. SII., Vol-XV, No. 37, p. 47, 1148 A.D.
೧೨. Ibid., Vol-XI (Pt-I), No-141, 1097 A.D.
೧೩. Ibid., Vol-XV, No. 99, p. 127, 1154 A.D.
೧೪. Ibid., No. 104, 1165 A.D.
೧೫. EI.,Vol-XV, No. 3A, p. 26-32, 1076 A.D.
೧೬. SII., Vol-XI(Pt-I), No. 8, 862 A.D.
೧೭. Ibid., Vol-XV, No. 35 &116, 1147 & 1171 A.D.
೧೮. Ibid., No. 24, 1142 A.D.
೧೯. Ibid., No. 32, 1147 A.D.
೨೦. EI.,Vol-XV, No. 3A, p. 26-32, 1076 A.D.
೨೧. SII., Vol-XV, No. 111, 1165 A.D.
೨೨. Ibid., No. 146.

★ ★ ★ ★

ನಿನ್ನೆ ನಡೆದ ಘಟನೆಗಳೆಲ್ಲ ಇತಿಹಾಸ ದಾಖಲೆಯಲ್ಲ
ಜನದ ಬಾಳಿನ ಮೇಲೆ ಬೀರಿದರೆ ಪರಿಣಾಮ ವೇಳೆ
ಇತಿಹಾಸದಂಗಳದಲ್ಲಿ ಒಂದೊಂದು ದಾಖಲೆಯ ಸಾಲೆ
ಇಂದಿಂದಿಗೊಂದು ದಾರಿಯಲಿ ನೆಟ್ಟ ಕಲ್ಲು
ನಾಳಿಗಲ್ಲಿದೆ ಹರಿದ ಹಾದಿಯ ಮಾದರಿಯ ಚೈತನ್ಯ ಭಾಷೆ

ಡಾ. ಎಂ.ಜಿ. ಮಂಜುನಾಥ್*

ಹೊಯ್ಸಳ ದೊರೆ ವಿಷ್ಣುವರ್ಧನನ ಅಂತ್ಯದ ಕಾಲ : ಪುನರ್ ಪರಿಶೀಲನೆ

ಹೊಯ್ಸಳರ ಸುಪ್ರಸಿದ್ಧ ಅರಸನಾದ ವಿಷ್ಣುವರ್ಧನನ ಅಂತ್ಯದ ಕಾಲದ ಬಗ್ಗೆ ಹಲವಾರು ವಿದ್ವಾಂಸರು ಹಲವಾರು ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಪ್ರೊ. ವಿಲಿಯಂ ಕೊಯಿಲೊ ಅವರು ತಮ್ಮ 'ದಿ ಹೊಯ್ಸಳ ವಂಶ' ಕೃತಿಯಲ್ಲಿ "Vishnuvardhana died in A.D. 1141 at Bankapura" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೧] ಡಾ. ಡೆರೆಟ್ ಅವರು ತಮ್ಮ "The Hoysalas a medieval Indian Royal family" ಕೃತಿಯಲ್ಲಿ "In March 1142 the aged Vishnuvardhana died at Bankapura" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೨] ಡಾ. ಎಂ. ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ ಅವರು ತಮ್ಮ 'ಕರ್ನಾಟಕದ ಇತಿಹಾಸ ದರ್ಶನ' ಗ್ರಂಥದಲ್ಲಿ "ವಿಷ್ಣುವರ್ಧನನು ಕ್ರಿ.ಶ. ೧೧೪೧ರಲ್ಲಿ ಬಂಕಾಪುರ ರಾಜಧಾನಿಯಲ್ಲಿ ಮೃತನಾದನೆಂದು ತೋರುವುದು. ದಳಪತಿ ಗಂಗರಾಜನ ಮಗನಾದ ಬೊಪ್ಪದೇವ ದಂಡನಾಯಕನು ವಿಷ್ಣುವರ್ಧನನ ಕಳೇವರವನ್ನು ಮೂಡಗೆರೆಗೆ ತಂದನೆಂದು ಚಿಕ್ಕಮಗಳೂರು ೯೬ನೆಯ ಶಾಸನದಲ್ಲಿ ಹೇಳಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೩] ಡಾ. ಸೂರ್ಯನಾಥ ಕಾಮತ್ ಅವರು ತಮ್ಮ "History of Karnataka" ಗ್ರಂಥದಲ್ಲಿ 'Though Scholors like Prof. K.A.N. Sastry, Prof. S.K. Aiyangar and Desai say that he (Vishnuvardhana) lived up to 1152, In fact he died in 1141" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೪] ಡಾ. ಎ.ವಿ. ನರಸಿಂಹಮೂರ್ತಿ ಅವರು ಎಪಿಗ್ರಾಫಿಯ ಕರ್ನಾಟಕದ ಹನ್ನೊಂದನೆಯ ಸಂಪುಟದ ಪೀಠಿಕೆಯಲ್ಲಿ "ವಿಷ್ಣುವರ್ಧನನು ಬಂಕಾಪುರವನ್ನು ವಶಪಡಿಸಿ ಕೊಂಡು ತಾತ್ಕಾಲಿಕವಾಗಿ ಅಲ್ಲಿಂದಲೇ ರಾಜ್ಯವಾಳುತ್ತಿದ್ದನು. ಅವನು ಅಲ್ಲಿಯೇ ಕ್ರಿ.ಶ. ೧೧೪೧ರಲ್ಲಿ ಅಸುನೀಗಿದನು" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೫] ಡಾ. ಪಿ. ಬಿ. ದೇಸಾಯಿ ಅವರು ತಮ್ಮ *'A History of Karnataka'* ಕೃತಿಯಲ್ಲಿ *"Vishnuvardhana ruled for over forty years till 1152 A.D. A record of 1142 A.D. engraved on a hero stone refers to the death of Hiriyarasa Bittideva who is identified by some with Vishnuvardhana. But this identification is doubtful. We have records of later dates up to 1152 A.D. Which refer to Vishnuvardhana as the ruling king".*[6] ಎಂದಿದ್ದಾರೆ.

ಒಟ್ಟಾರೆ ಹೊಯ್ಸಳ ದೊರೆ ವಿಷ್ಣುವರ್ಧನನು ೧೧೪೧ರಲ್ಲಿ ಮರಣಿಸಿದನೆಂದು ಬಿ. ಎಲ್. ರೈಸ್, ವಿಲಿಯಂ ಕೊಯಿಲೊ, ಡಾ. ಎಂ. ವಿ. ನರಸಿಂಹಮೂರ್ತಿ, ಡಾ. ಎಂ. ವಿ. ಕೃಷ್ಣರಾವ್, ಡಾ. ಸೂರ್ಯನಾಥ ಕಾಮತ್, ಮುಂತಾದವರು ಅಭಿಪ್ರಾಯ ಪಟ್ಟಿದ್ದಾರೆ. ಡೆರೆಟ್ ಅವರು ವಿಷ್ಣುವರ್ಧನನು ಮಾರ್ಚ್ ೧೧೪೨ರಲ್ಲಿ ಮರಣಿಸಿದನೆಂದು ಅಭಿಪ್ರಾಯಪಟ್ಟಿದ್ದಾರೆ. ಡಾ. ಬಾ.ರಾ. ಗೋಪಾಲ್, ಡಾ. ಪಿ. ಬಿ. ದೇಸಾಯಿ, ಡಾ. ಕೆ. ಎ. ನೀಲಕಂಠಶಾಸ್ತ್ರಿ, ಪ್ರೊ. ಎಸ್. ಕೆ. ಅಯ್ಯಂಗಾರ್, ಮುಂತಾದವರು ವಿಷ್ಣುವರ್ಧನನು ೧೧೫೨ರ ವರೆಗೆ ಬದುಕಿದ್ದು ಅರಸನಾಗಿದ್ದ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ ವಿಶ್ವಾಸಪೂರ್ವಕವಾಗಿ ನಂಬಲರ್ಹವಾದಂತಹ ಶಾಸನಗಳ ಆಧಾರದಿಂದ ವಿಷ್ಣುವರ್ಧನನ ಸೂಕ್ತವಾದ ಅಂತ್ಯದ ಕಾಲವನ್ನು ಗುರ್ತಿಸಲು ಪ್ರಯತ್ನಿಸಲಾಗಿದೆ.

ವಿಷ್ಣುವರ್ಧನನು ೧೧೪೧ರಲ್ಲಿ ಬಂಕಾಪುರದಲ್ಲಿ ಮರಣಿಸಿದ ವಿವರಗಳಿವೆಯೆಂದು ವಿದ್ವಾಂಸರು ಆಧಾರವಾಗಿ ನೀಡುವ ಚಿಕ್ಕಮಗಳೂರು ಜಿಲ್ಲೆಯ ಹವಳ್ಳಿ ಶಾಸನವನ್ನು ಮೊದಲು ಗಮನಿಸೋಣ. ಆ ಶಾಸನ ಪಾಠ ಈ ಕೆಳಗಿನಂತಿದೆ.

೧ *ಸ್ವಸ್ತಿಶ್ರೀಮನ್ಮಹಾಮಂಡಳೇಶ್ವರಂ ತ್ರಿಭುವನಮಲ್ಲ ತಳಕಾಡು ಕೊಂಗು ನಂಗಲಿ ಬನವಾ*

೨ *ಸೆ ಹಾನುಂಗಲ್ಲುಚ್ಚಂಗಿಗೊಂಡ ಭುಜಬಳವೀರಗಂಗ ವಿಷ್ಣುವರ್ದ್ಧನ ಹೊ*

೩ *ಯ್ಸಳ ದೇವರು ಗಂಗವಾಡಿ ತೊಂಭತ್ತಾಱುಸಾಸಿರಮಂ ದುಷ್ಟ*

೪ *ನಿಗ್ರಹಶಿಷ್ಟ ಪ್ರತಿಪಾಳನಂಗೆಯ್ದು ಸುಖಸಂಕಥಾ ವಿನೋದದಿಂ ಪ್ರಿಥ್ವೀರಾ*

೫ *ಜ್ಯಂಗೆಯ್ಯುತ್ತಮಿರೆ ಸಕವರ್ಷ ೧೦೬೩ನೆಯ ದುರ್ಮ್ಮ*

೬ *ತಿ ಸಂವತ್ಸರದಂದು ಬಂಕಾಪುರದಲು ಹಿರಿಯ*

* ಕನ್ನಡ ಉಪನ್ಯಾಸಕ, ಕನ್ನಡ ವಿಭಾಗ, ಜ್ಞಾನಗಂಗೋತ್ರಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೭ *ರಸ ಬಿಟ್ಟಿದೇವ ಕಾಲಂಗೆಯ್ಯೆ `ಬೊಪ್ಪದೇವದಂಣ್ನಾಯಕರು ಕಂಠವಂಕೊಂಡು ಬೆಂನನೆ*

೮ *ಬಂದಲ್ಲಿ ಮುಡುಗೆಜು'ಯ ಕಾಳೆಗದಲ್ಲಿ ತಳಿಗೆನಾಡ ಮಿರಿಯ ವಾಳ್ವಳ್ಳಿ*

ಪ್ರಸ್ತುತ ಶಾಸನದಲ್ಲಿನ 'ಹಿರಿಯರಸ ಬಿಟ್ಟಿದೇವ ಕಾಲಂಗೆಯ್ಯೆ' ಎನ್ನುವ ಸಾಲಿನ ಆಧಾರದ ಮೇಲೆ ಇದು ವಿಷ್ಣುವರ್ಧನನ ಮರಣದ ವಿಷಯವನ್ನು ದಾಖಲಿಸಿದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಹೊಯ್ಸಳ ದೊರೆ ವಿಷ್ಣುವರ್ಧನನಿಗೆ ಬಿಟ್ಟಿದೇವ ಎಂಬ ಹೆಸರಿದ್ದುದು ನಿಜವಾದರೂ ಪ್ರಸ್ತುತ ಶಾಸನೋಕ್ತ ಹಿರಿಯರಸ ಬಿಟ್ಟಿದೇವ ವಿಷ್ಣುವರ್ಧನನಲ್ಲ. ಬೇರೊಬ್ಬ ವ್ಯಕ್ತಿ ಎನ್ನುವುದು ಖಚಿತ.

ಪ್ರಸ್ತುತ ಚಿಕ್ಕಮಗಳೂರು ಜಿಲ್ಲೆಯ ಹವಳ್ಳಿ ಶಾಸನದಲ್ಲಿಯೇ ಉಕ್ತವಾಗಿರುವ ಮಾಹಿತಿಯನ್ನು ಗಮನಿಸೋಣ.

"ಸ್ವಸ್ತಿಶ್ರೀಮನ್ಮ ಹಾಮಂಡಳೇಶ್ವರಂ ತ್ರಿಭುವನ ಮಲ್ಲ ತಳಕಾಡು ಕೊಂಗುನಂಗಲಿ ಬನವಾ

೨ ಸೆ ಹಾನುಂಗಲ್ಲುಚ್ಚಂಗಿ ಗೊಂಡ ಭುಜಬಳ ವೀರಗಂಗ ವಿಷ್ಣುವರ್ಧನ ಹೊ

೩ ಯ್ಸಳ ದೇವರು ಗಂಗವಾಡಿ ತೊಂಭತ್ತಾಱು ಸಾಸಿರಮಂ ದುಷ್ಟ ೪ ನಿಗ್ರಹ ಶಿಷ್ಟ ಪ್ರತಿಪಾಳನಂಗೆಯ್ದು ಸುಖಸಂಕಥಾ ವಿನೋದದಾಂ ಪ್ರಿಥ್ವೀ ರಾಜ್ಯಂ

೫ ಗೆಯ್ಯುತ್ತಮಿರೆ" ಎಂಬ ಒಕ್ಕಣೆಯನ್ನು ಗಮನಿಸಬೇಕು.

ಈ ಒಕ್ಕಣೆಯ ಪ್ರಕಾರ ಪ್ರಸ್ತುತ ಶಾಸನವನ್ನು ಹಾಕಿಸಿದಾಗ ಹೊಯ್ಸಳ ದೊರೆ ವಿಷ್ಣುವರ್ಧನನು ಬದುಕಿದ್ದು ಸುಖವಾಗಿ ರಾಜ್ಯಭಾರ ಮಾಡುತ್ತಿದ್ದನು ಎಂಬುದು ಅತ್ಯಂತ ಸ್ಪಷ್ಟವಾಗಿ ತಿಳಿದುಬರುತ್ತದೆ.

ಇದೇ ರೀತಿ ಇನ್ನೂ ಹಲವಾರು ಶಾಸನಗಳಲ್ಲಿ ೧೧೪೧ರ ನಂತರವೂ ವಿಷ್ಣುವರ್ಧನನು ಬದುಕಿದ್ದು ರಾಜ್ಯಭಾರ ಮಾಡುತ್ತಿದ್ದುದು ದಾಖಲಾಗಿರುವುದನ್ನು ಗಮನಿಸಬಹುದು.

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕೆಲ್ಲಂಗೆರೆಯ ಒಂದು ಶಾಸನವು ೧೧೪೨ರ ಮಾರ್ಚ್ ೪ರಂದು ವಿಷ್ಣುವರ್ಧನ ಅರಸನಾಗಿ ರಾಜ್ಯಭಾರ ಮಾಡುತ್ತಿದ್ದಾಗ ಜಕ್ಕವ್ವೆ ಶಿವದೇವಾಲಯವನ್ನು ನಿರ್ಮಿಸಿ ದಾನ ಕೊಟ್ಟ ವಿವಿರಗಳನ್ನು ದಾಖಲಿಸುತ್ತದೆ.[೭]

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಸಲಗೆರೆಯ ಒಂದು ಶಾಸನವು ಕ್ರಿ.ಶ. ೧೧೪೨ರ ಡಿಸೆಂಬರ್ ೨೪ ರಂದು ವಿಷ್ಣುವರ್ಧನನು ಆಳುತ್ತಿದ್ದಾಗ ಸಾಮಂತ ಸೋಮನು ಒಂದು ಜೈನ ಬಸದಿಯನ್ನು ನಿರ್ಮಿಸಿ ದಾನ ಕೊಟ್ಟ ವಿವರಗಳನ್ನು ದಾಖಲಿಸಿದೆ.[೮]

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕಿನ ಬಾಗಳಿಯ ಒಂದು ಶಾಸನವೂ ಸಹ ೧೧೪೨ರ ಡಿಸೆಂಬರ್ ೨೪ ರಂದು ವಿಷ್ಣುವರ್ಧನನು ಆಳುತ್ತಿದ್ದುದನ್ನು ದಾಖಲಿಸುತ್ತದೆ ಹಾಗೂ ಹೊಯ್ಸಳರು ನೀಲಗಿರಿಯ ಮೇಲೆ ದಂಡೆತ್ತಿ ಹೋಗಿದ್ದಾಗ ಶತ್ರುವನ್ನು ಕೊಂದು ವೀರಸ್ವರ್ಗವನ್ನು ಪಡೆದ ವೀರನೊಬ್ಬನ ಬಗ್ಗೆ ವಿವರಗಳನ್ನು ನೀಡುತ್ತದೆ.[೯]

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕೋಳಿಗುಂದದ ಒಂದು ಶಾಸನವು ಕ್ರಿ.ಶ. ೧೧೪೪ರ ಏಪ್ರಿಲ್ ೧೦ ರಂದು ವಿಷ್ಣು ವರ್ಧನನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಬಳ್ಳೂರಿನ ಒಂದು ವೀರಗಲ್ಲು ಶಾಸನವು ೧೧೪೫ರ ಮಾರ್ಚ್ ೧೦ರಂದು ವಿಷ್ಣುವರ್ಧನನು ಅರಸನಾಗಿ ರಾಜ್ಯಭಾರ ಮಾಡುತ್ತಿದ್ದಾಗ ನಾಗಸೆಟ್ಟಿ ಎಂಬ ದಂಡನಾಯಕ ಕಾಳಗವೊಂದರಲ್ಲಿ ಹೋರಾಡಿ ಮರಣಿಸಿದ ವಿವರಗಳನ್ನು ದಾಖಲಿಸುತ್ತದೆ.[೧೧]

ವಿಷ್ಣುವರ್ಧನನು ೧೧೪೧ರ ನಂತರವೂ ಬದುಕಿದ್ದುದಕ್ಕೆ ಸಾಕ್ಷಿಯಾಗಿ ಇಂತಹ ಹಲವಾರು ಶಾಸನಗಳನ್ನು ಆಧಾರವಾಗಿ ನೀಡಬಹುದಾಗಿದ್ದರೂ ಅತ್ಯಂತ ಪ್ರಮುಖ ಆಧಾರವಾಗಿ ಎರಡು ಶಾಸನಗಳನ್ನು ಉದಾಹರಿಸಬಹುದು.

ಮೊದಲನೆಯದು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಪಂಡಿತನಹಳ್ಳಿಯ ವೀರಗಲ್ಲು ಶಾಸನ. ಆ ಶಾಸನದ ಪಾಠ ಈ ಕೆಳಗಿನಂತಿದೆ.

೧ *ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ॥ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ*

೨ *ಮಹಾಮಂಡಳೇಶ್ವರಂ ದ್ವಾರಾವತೀ ಪುರವರಾಧೀಸ್ವರಂ ಯದುಕುಳಾಂಬರದ್ಯುಮಣಿ ಮಂಡಳಿಕ ಚೂಡಾಮಣಿ ಕವಿಜನ ಕಲ್ಪಕು*

೩ *ಜಂ ಮಲೆರಾಜರಾಜಂ ಮಲೆಪರೊಳ್ಗಂಡಂ ಕೊಂಗು ನಂಗಲಿ ಗಂಗವಾಡಿ ನೊಳಂಬವಾಡಿ ಬನವಸೆ ಹಾನುಂಗಲು ಬೆಳ್ವೊಲಂಗೊಂಡ ಭು*

೪ *ಜಬಳವೀರಗಂಗ ವಿಕ್ರಾನ್ತ ಚೋಳ ವಿಜಯ ನೊಣಂಬ ಸಾಹಸಗದಂಬ ತ್ರಿಭುವನಮಲ್ಲ ವಿಷ್ಣುವರ್ಧನನಪ್ಪ ಹೊಯ್ಸ*

೫ *ಳದೇವನ ಕಟ್ಟಿದಲಗು ಬಲ್ಲವೆಗ್ಗಡೆಯುಂ ದೇವನ ಗರುಡ ಹಡವಳ ಬೋಕಿಯುಂ ಒಂದಾಗಿ ಮೋಟನ ಮೇಲೆತ್ತಿದ"*[೧೨]

ಈ ಶಾಸನದಲ್ಲಿನ ವಿವರಗಳ ಪ್ರಕಾರ ವಿಷ್ಣುವರ್ಧನನ ಗರುಡನಾದ ಹಡವಳ ಬೋಕಿ ಮತ್ತು ವಿಷ್ಣುವರ್ಧನನ ಕಟ್ಟಿದಲಗು ಎಂದು ಪ್ರಸಿದ್ಧನಾದ ಬಲ್ಲವೆಗ್ಗಡೆಯು ಸೈನ್ಯ ಸಮೇತ ಚಂಗಾಳ್ವರ ಅಶ್ವಸೈನ್ಯ ಹಾಗೂ ಗಜಸೈನ್ಯದ ಮೇಲೆ ಹೋರಾಡಿ ಶತ್ರುಗಳನ್ನು ಧ್ವಂಸ ಮಾಡುತ್ತಾರೆ. ಆ ಯುದ್ಧದಲ್ಲಿ ಬಲ್ಲವೆಗ್ಗಡೆಯು ಮರಣಿಸುತ್ತಾನೆ.

ಈ ಶಾಸನವು ಕ್ರಿ.ಶ. ೧೧೪೬ನೆಯ ಇಸವಿಯದ್ದಾಗಿದ್ದು ವಿಷ್ಣುವರ್ಧನನ ಗರುಡನಾದ ಹಡವಳ ಬೋಕಿಯು ೧೧೪೬ರವರೆಗೂ ಬದುಕಿದ್ದನೆನ್ನುವ ಪ್ರಮುಖವಾದ ಅಂಶ ತಿಳಿಯುತ್ತದೆ. ಗರುಡರು ತಮ್ಮ ಒಡೆಯರು ಮರಣಿಸಿದ ಕೂಡಲೇ ತಾವೂ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದರು ಎಂಬುದು ಗಮನಾರ್ಹ ಅಂಶ.

ಈ ಶಾಸನದಲ್ಲಿನ ಹಡವಳ ಬೋಕಿಯ ಬಗ್ಗೆ ಬೇರೆ ಕೆಲವು ಶಾಸನಗಳೂ ದೊರೆಯುತ್ತವೆ. ಬೋಕಿ, ಬೋಕಣಬೋಕಿಮಯ್ಯ ಮುಂತಾಗಿ ಕರೆಯಲ್ಪಡುತ್ತಿದ್ದ ಬೋಕಿಯು ಪಡೆವಳನೂ, ಮಹಾ ಪ್ರಧಾನಿಯೂ ಸೇನಾಧಿಪತಿಯೂ ಆಗಿದ್ದು ವಿಷ್ಣುವರ್ಧನನ ಗರುಡನಾಗಿದ್ದನು. ಅವನು ೧೧೪೬ರವರೆಗೂ ಬದುಕಿದ್ದುದರಿಂದ ವಿಷ್ಣುವರ್ಧನನು ಯಾವ ಕಾಲದವರೆಗೆ ಬದುಕಿದ್ದ ಎಂಬ ಪ್ರಶ್ನೆ ಎದುರಾಗುತ್ತದೆ. ಈ ಪ್ರಶ್ನೆಗೂ ಸಹ ಶಾಸನಗಳಲ್ಲಿಯೇ ಉತ್ತರ ದೊರಕುತ್ತದೆ.

ವಿಷ್ಣುವರ್ಧನನು ೧೧೪೮ರ ಅಕ್ಟೋಬರ್ ೨೫ ರವರೆಗೂ ಬದುಕಿದ್ದ. ಇದಕ್ಕೆ ಸಾಕ್ಷಿಯಾಗಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಮಾರೆಹಳ್ಳಿಯ ಒಂದು ಶಾಸನವನ್ನು ಗಮನಿಸಬಹುದು. ತಮಿಳು ಭಾಷೆಯ ಆ ಶಾಸನ ಪಾಠ ಹೀಗಿದೆ.

೨ "ಶ್ರೀ ವಿಷ್ಣುವರ್ಧನ ಪ್ರತಾಪ ಚಕ್ರವರ್ತಿ ಶ್ರೀ ವಿಷ್ಣುದೇವನ್ ಪೃಥ್ವೀರಾಜ್ಯ

೩ ಮ್ಣಣ್ಣೆ ಯರುಳಾನಿಜ್ಕಿ ವಿಭವ ಸಂವತ್ಸರತ್ತು ಕಾತ್ತಿಗ್ಯೆ ಮಾಸತ್ತು ಪೂರ್ವ ಪಕ್ಷತ್ತು ಉದ್ಧಾನ ಏಕಾದಶಿಯುಮ್ ವೆಳಿಕ್ಕಿಟಿಮೈಯುಮ್ ಪೆಜ್ಜಿರೇವತಿನಾಳ್ ವಡಕರೈನಾಟ್ವಿಲ್ ಗಾಞ್ಚನೂರೈತಜ್ ಪೂರ್ವಶಾಸನ ಪ್ರಶಸ್ತಮಾನ ಚತುಸ್ಸೀಮೈಕ್ಕಳ್ ಪ್ಪಟ್ಟ ಸಕಲ. ಜಾತಿಗ್ರಾಮತ್ತು ಶ್ರೀಮತ್ ಸಿಜ್ಗಪ್ಪೆರುಮಾಳುಕ್ಕು ಉದಕಪೂರ್ವನ್ದತ್ತು ಶುಭಮಸ್ತು.[೧೩]

ಈ ಶಾಸನದ ಪ್ರಕಾರ ಪ್ರತಾಪ ಚಕ್ರವರ್ತಿಯಾದ ವಿಷ್ಣುವರ್ಧನನು ವಿಭವ ಸಂವತ್ಸರದ ಕಾರ್ತಿಕ ಶುದ್ಧ ಏಕಾದಶಿಯಂದು ವಡಕರೈನಾಡಿನ ಗಾಂಚನೂರು ಎಂಬ ಗ್ರಾಮವನ್ನು ಜಾತಿಗ್ರಾಮದ ನರಸಿಂಹ ದೇವಾಲಯಕ್ಕೆ ದಾನವಾಗಿ ಕೊಡುತ್ತಾನೆ. ಆ ಶಾಸನೋಕ್ತ ಕಾಲವು ಕ್ರಿ.ಶ. ೧೧೪೮ರ ಅಕ್ಟೋಬರ್ ೨೫ಕ್ಕೆ ಸರಿ ಹೊಂದುತ್ತದೆ. ಆದ್ದರಿಂದ ೧೧೪೮ರ ಅಕ್ಟೋಬರ್ ೨೫ರವರೆಗೂ ವಿಷ್ಣುವರ್ಧನನು ಬದುಕಿದ್ದನೆನ್ನುವುದು ಖಚಿತವಾಗುತ್ತದೆ. ಹಾಗೂ ವಿಷ್ಣು ವರ್ಧನನು ತನ್ನ ಅಂತ್ಯಕಾಲದ ವೇಳೆಗೆ ಚಕ್ರವರ್ತಿಯಾಗಿದ್ದನೆನ್ನುವುದು ಸಹ ಖಚಿತವಾಗಿ ತಿಳಿಯುತ್ತದೆ. ಶ್ರೀ ಸೀತಾರಾಮ ಜಾಗೀರ್‌ದಾರ್ ಅವರು ತಮ್ಮ 'ಚಾಲುಕ್ಯ ಹಾಗೂ ಹೊಯ್ಸಳ ಮನೆತನಗಳ ಇತಿಹಾಸದ ಮೇಲೆ ಹೊಸ ಬೆಳಕು' ಎನ್ನುವ ಸಂಶೋಧನಾ ಲೇಖನದಲ್ಲಿ ಒಂದನೆಯ ನರಸಿಂಹನೇ ಹೊಯ್ಸಳ ವಂಶದಲ್ಲಿ ಮೊದಲ ಚಕ್ರವರ್ತಿ ಎಂದು ಅಭಿಪ್ರಾಯಪಟ್ಟಿದ್ದಾರೆ; ಹಾಸನ ಜಿಲ್ಲೆಯ ಹಳೇ ಬೀಡಿನ ಒಂದು ಶಾಸನವನ್ನು ಆಧರಿಸಿ ಆ ಶಾಸನದಲ್ಲಿ ಒಂದನೆಯ ನರಸಿಂಹನನ್ನು ತೆಂಕಣ ಚಕ್ರವರ್ತಿ, ಯಾದವ ಚಕ್ರವರ್ತಿ ಎಂದು ಹೇಳಿರುವುದರಿಂದ ಆತನೇ ಹೊಯ್ಸಳ ವಂಶದಲ್ಲಿ ಮೊದಲ ಚಕ್ರವರ್ತಿಯೆಂಬುದಾಗಿ ಅವರು ಅಭಿಪ್ರಾಯಪಟ್ಟಿದ್ದಾರೆ.[೧೪]

ಎಪಿಗ್ರಾಫಿಯಾ ಕರ್ನಾಟಕದ ೯ನೆಯ ಸಂಪುಟದಲ್ಲಿನ ಪೀಠಿಕೆಯಲ್ಲಿಯೂ ಸಹ ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಿ ಹೊಯ್ಸಳರಲ್ಲಿ ೧ನೆಯ ನರಸಿಂಹನೇ ಮೊದಲ ಚಕ್ರವರ್ತಿ ಎಂದೇ ಹೇಳಲಾಗಿದೆ.[೧೫]

ಆದರೆ ಈ ಅಭಿಪ್ರಾಯ ಸೂಕ್ತವಾಗಿಲ್ಲ ಎಂದು ಮಾರೆಹಳ್ಳಿಯ ಶಾಸನದಿಂದ ತಿಳಿಯುತ್ತದೆ. ಹೊಯ್ಸಳರಲ್ಲಿ ವಿಷ್ಣುವರ್ಧನನೇ ಮೊಟ್ಟಮೊದಲ ಚಕ್ರವರ್ತಿ ಎಂಬುದು ತಿಳಿಯುತ್ತದೆ. ಹಾಗಾದರೆ ವಿಷ್ಣುವರ್ಧನನು ಚಕ್ರವರ್ತಿಯಾದದ್ದು ಯಾವಾಗ ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಪ್ರಶ್ನೆಗೂ ಶಾಸನಗಳಲ್ಲಿಯೇ ಉತ್ತರ ದೊರೆಯುತ್ತದೆ.

ಹಾಸನ ಜಿಲ್ಲೆಯ, ತಾಲ್ಲೂಕಿನ ಮುಗಳೂರಿನ ೧೧೪೭ರ ಒಂದು ಶಾಸನದಲ್ಲಿನ ಒಕ್ಕಣೆ ಈ ಕೆಳಗಿನಂತಿವೆ.

ಸಾಲು

೧೮ ಚಕ್ರವರ್ತಿ ಶ್ರೀಮತ್ಕಂಚಿಗೊಂಡ ವಿಕ್ರಮಗಂಗ ವಿಷ್ಣುವರ್ಧನ ಹೊಯ್ಸ
೧೯ ಳ ದೇವಂ ಗಂಗವಾಡಿ ತೊಂಭತ್ತಱು ಸಾಸಿರಮುಮನೇಕಚ್ಛತ್ರ
ಚ್ಛಾಯೆಯಿಂ ಪ್ರತಿಪಾಳಿಸಿ ಸುಖರಾಜ್ಯಂಗೆಯ್ಯುತ್ತಮಿರೆ[೧೬]

ಈ ಶಾಸನದಲ್ಲಿನ ವಿವರಗಳ ಪ್ರಕಾರ ಕ್ರಿ.ಶ. ೧೧೪೭ರ ಡಿಸೆಂಬರ್ ೨೫ರ ವೇಳೆಗೆ ಚಕ್ರವರ್ತಿಯಾಗಿದ್ದ ವಿಷ್ಣುವರ್ಧನನು ರಾಜ್ಯಭಾರ ಮಾಡುತ್ತಿದ್ದನೆನ್ನುವುದು ತಿಳಿಯುತ್ತದೆ. ಆದ್ದರಿಂದ ಹೊಯ್ಸಳ ಅರಸರಲ್ಲಿ ವಿಷ್ಣುವರ್ಧನನೇ ಮೊಟ್ಟಮೊದಲ ಚಕ್ರವರ್ತಿ ಎಂದು ಹೇಳಬಹುದು.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ನಿರುವಗಲ್ಲು ಗ್ರಾಮದ ಒಂದು ಶಾಸನದಲ್ಲಿಯೂ ಸಹ ವಿಷ್ಣುವರ್ಧನನ್ನು ಚಕ್ರವರ್ತಿ ಎಂದು ದಾಖಲಿಸಿರುವುದನ್ನು ಗಮನಿಸಬಹುದು.[೧೭] ಒಟ್ಟಾರೆ ಹೊಯ್ಸಳ ದೊರೆ ವಿಷ್ಣುವರ್ಧನನು ಚಕ್ರವರ್ತಿಯಾಗಿದ್ದನು. ಮಂಡ್ಯ ಜಿಲ್ಲೆಯ ಮಾರೆಹಳ್ಳಿಯ ಶಾಸನದ ಆಧಾರದಿಂದ ವಿಷ್ಣುವರ್ಧನನು ೧೧೪೮ರ ಅಕ್ಟೋಬರ್ ೨೫ ರವರೆಗೂ ಬದುಕಿದ್ದನೆನ್ನುವುದು ಖಚಿತವಾಗುತ್ತದೆ. ಹಾಗೂ ವಿಷ್ಣುವರ್ಧನನ ಆಳ್ವಿಕೆಯನ್ನು ಅತ್ಯಂತ ನಂಬಲರ್ಹವಾಗಿ ನಿರೂಪಿಸಿರುವ ಕಟ್ಟ ಕಡೆಯ ಶಾಸನ ಇದೇ ಎಂದು ಹೇಳಬಹುದು. ವಿಷ್ಣುವರ್ಧನನ ಮರಣಾನಂತರ ಅವನ ಮಗ ನರಸಿಂಹನು

ರಾಜ್ಯಭಾರ ಮಾಡುತ್ತಿದ್ದುದನ್ನು ವೈಶಿಷ್ಟ್ಯಪೂರ್ಣವಾಗಿ ದಾಖಲಿಸಿರುವ ಒಂದು ಶಾಸನವಿದೆ. ಹಾಸನಜಿಲ್ಲೆ, ತಾಲ್ಲೂಕಿನ ಹೊನ್ನಾವರ ಗ್ರಾಮದ ಆ ಶಾಸನವು ೧೧೪೯ರ ಜನವರಿ ೨೨ ರಂದು ರಚಿತವಾಗಿದೆ. ಆ ಶಾಸನದ ಪಾಠ ಈ ಕೆಳಗಿನಂತಿದೆ.

ಸಾಲು

೩೯ "ಶ್ರೀಮನ್ಮಹಾಪ್ರಧಾನಂ ಹೆಗ್ಗಡೆ ಲಕುಮಯ್ಯಂ ಹೊಯ್ಸಳ ನಾರಸಿಂ
೪೦ ಹ ದೇವಂಗೆ ರಾಜ್ಯಮಂ ನಿಷ್ಕಂಟಕಂ ಮಾಡಿ ಪ್ರತಿಷ್ಠಾಪಿಸಿ ಪ್ರಸಾದ
ದಾನ ಧಾರಾಪೂರ್ವಕಮಾಗಿ ಪಡದು"[೧೮]

ಈ ಒಕ್ಕಣೆಯಿಂದ ತಿಳಿದು ಬರುವ ಅಂಶವೆಂದರೆ ವಿಷ್ಣುವರ್ಧನನ ಮರಣದ ನಂತರ ಆಗ ಕೇವಲ ೧೬ ವರ್ಷದ ಬಾಲಕನಾಗಿದ್ದ ನರಸಿಂಹನು ತನ್ನ ಅಧಿಕಾರವನ್ನು ಸ್ಥಾಪಿಸಬೇಕಾಗಿದ್ದ ಸಂದರ್ಭದಲ್ಲಿ ಎದುರಾಗಿದ್ದ ಕಂಟಕಗಳನ್ನು ಮಹಾ ಪ್ರಧಾನ ಹೆಗ್ಗಡೆ ಲಕುಮಯ್ಯನು ಪರಿಹರಿಸಿ ರಾಜ್ಯವನ್ನು ನಿಷ್ಕಂಟಕ ಮಾಡಿ ನರಸಿಂಹನನ್ನು ಅರಸನನ್ನಾಗಿ ಪ್ರತಿಷ್ಠಾಪಿಸಿ ಪ್ರಸಾದ ದಾನವನ್ನು ಧಾರಾಪೂರ್ವಕವಾಗಿ ಪಡೆದನೆಂದು ಶಾಸನ ದಾಖಲಿಸಿದೆ.

ಈ ಮೇಲ್ಕಂಡ ಆಧಾರಗಳಿಂದ ವಿಷ್ಣುವರ್ಧನನು ೧೧೪೧ರಲ್ಲಿ ಮರಣಿಸಲಿಲ್ಲ. ೧೧೪೮ರ ಅಕ್ಟೋಬರ್ ೨೫ರ ವರೆಗೂ ಬದುಕಿದ್ದನು. ಬಹುಶಃ ಕೆಲವು ದಿನಗಳ ನಂತರ ಆತನು ಮರಣಿಸಿದಾಗ ನರಸಿಂಹನ ಅಧಿಕಾರಕ್ಕೆ ಸಂಚಕಾರ ಒದಗಿದ್ದ ಸಂದರ್ಭದಲ್ಲಿ ಮಹಾಪ್ರಧಾನ ಹೆಗ್ಗಡೆ ಲಕುಮಯ್ಯನು ನರಸಿಂಹನ ಪರವಾಗಿ ಹೋರಾಡಿ ನರಸಿಂಹನ ಅಧಿಕಾರವನ್ನು ಸ್ಥಿರಪಡಿಸಿದ್ದಾನೆ ಎಂದು ಹೇಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. William coelho; *The Hoysala vamsa.* P. 116.
೨. J. Duncan M., Derret ; The Hoysalas a medieval Indian Royal family P. 68.
೩. ಡಾ. ಎಂ. ವಿ. ಕೃಷ್ಣರಾವ್., ಎಂ. ಕೇಶವಭಟ್ಟ : **ಕರ್ನಾಟಕದ ಇತಿಹಾಸ ದರ್ಶನ** ಪು. ೨೪೧.
೪. Dr. Suryanath U Kamath: *History of Karnataka.*
೫. ಡಾ. ಎಂ. ವಿ. ನರಸಿಂಹ ಮೂರ್ತಿ (ಸಂ), EC 11. ಪೀಠಿಕೆ. ಪು. ೬೦.
೬. Dr. P.B. Desai: *A History of Karnataka* : p. 260.
೭. EC. 10, ಅರಸೀಕೆರೆ 149 (V ಅಕೆ 110), ಕೆಲ್ಲಂಗೆರೆ ೧೧೪೨ ಮಾರ್ಚ್ ೪, ಪುಟ. ೧೯೨.
೮. EC. ೭, ನಾಗಮಂಗಲ ೧೬೯ (IV ನಾಮಂ ೯೪), ಕಸಲಗೆರೆ ೧೧೪೨ ಡಿಸೆಂ. ೨೪ ಪು. ೧೬೭).
೯. EC. ೪, ಚಾನ ೧೧೭ (IV ಚಾನ ೨೦), ಬಾಗಳಿ, ೧೧೪೨, ಡಿ.ಸೆಂ. ೨೪, ಪುಟ. ೬೭.
೧೦. EC. ೧೦, ಅರ ೩೦೮ (XV ಅಕೆ ೨೩೩), ಕೋಳಿಗುಂದ, ೧೧೪೪ ಏಪ್ರಿಲ್, ೧೦ ಪು. ೩೭೪.
೧೧. EC. ೯, ಬೇಲೂರು ೧೮೩ (V ಬೇ ೨೨೮), ಬಳ್ಳೂರು, ಕ್ರಿ.ಶ. ೧೧೪೫ ಮಾರ್ಚ್ ೧೦, ಪು. ೧೭೪.
೧೨. EC. ೯, ಬೇಲೂರು ೪೫೮ (V ಬೇ ೧೭೮), ಪಂಡಿತನಹಳ್ಳಿ, ಕ್ರಿ.ಶ. ೧೧೪೬, ಪುಟ. ೪೨೪.
೧೩. EC. ೭, ಮಳವಳ್ಳಿ ೬೨, ಮಾರೇಹಳ್ಳಿ ೧೧೪೮ ಅಕ್ಟೋಬರ್ ೨೫, ಪು. ೩೮೪.
೧೪. **ಇತಿಹಾಸ ದರ್ಶನ**., (ಸಂ.) ಡಾ. ಸೂರ್ಯನಾಥ್ ಕಾಮತ್, ಸಂ. ೨, ಪುಟ. ೪೧-೪೪.
೧೫. EC. ೯, ಪೀಠಿಕೆ ಪು. ೫೮.
೧೬. EC. ೮, ಹಾಸನ ೧೪, ಮುಗಳೂರು, ಕ್ರಿ.ಶ. ೧೧೪೭ ಡಿಸೆಂಬರ್ ೨೫. ಪು. ೨೪೮.
೧೭. EC. ೧೬, ತುಮಕೂರು ಜಿಲ್ಲೆ* (ಚಿಕ್ಕನಾಯಕನಹಳ್ಳಿ) (ಅನುಬಂಧ) ನಿರುವಗಲ್ಲು ೭೬, ಪು. ೧೮*.
೧೮. EC. ೮, ಹಾಸನ ೯೫ (V ಹಾ ೬೫, ೬೬), ಹೊನ್ನಾವರ, ೧೧೪೯. ಜನವರಿ ೨೨, ಪು. ೩೦೬.

ಡಾ. ಎಂ.ಜಿ. ಚಂದ್ರಕಾಂತ್, ಎಂ.ಜಿ. ನಾಗರಾಜ್.*

ಕೊಡಗಿನ ಕೊಂಗಾಳ್ವರು ಮತ್ತು ಜೈನಧರ್ಮ

ಕೊಡಗಿನಲ್ಲಿ ಕೊಂಗಾಳ್ವರು ಕ್ರಿ.ಶ. ೧೦೦೪ರ ವೇಳೆಗೆ ವಂಶ ಸ್ಥಾಪಿಸಲು ಕಾರಣನಾದ, ಅದೇ ಸುಮಾರಿನ ಚೋಳ ಮಹಾಮಹೀಪತಿ ರಾಜಕೇಸರಿವರ್ಮ, ಪನಸೋಗೆ ಯುದ್ಧದಲ್ಲಿ ಗಂಗರನ್ನು ಸೋಲಿಸಿದ್ದ. ಈ ಸಮಯದಲ್ಲಿ ಚೋಳರಿಗೆ ಜಯತಂದು ಕೊಡುವಲ್ಲಿ ಕೊಂಗಾಳ್ವರ ಮನಿಜನು ಮುಖ್ಯ ಪಾತ್ರ ವಹಿಸಿದ್ದಂತೆ ತೋರುತ್ತದೆ. ಬಹುಶಃ ಚೋಳರ ಗೆಲುವಿನ ಸೂಚನೆ ಕಂಡು ಗಂಗರಲ್ಲಿದ್ದ ತಮ್ಮ ನಿಷ್ಠೆಯನ್ನು ಕೊಂಗಾಳ್ವರು ಬದಲಾಯಿಸಿ ಚೋಳನಿಷ್ಠರಾದಂತಿದೆ. ಕೊಡಗಿನ ಕ್ರಿ.ಶ. ೧೦೦೪ರ ಮಾಲಂಬಿ ಶಾಸನೋಕ್ತ 'ಕವೇರ ಕನ್ಯಕಾ ಸಖೀಯಮಾನ ಚೋೞ ಮಹಾ ಮಹೀಪತಿ ಶ್ರೀ ರಾಜಕೇಸರಿವರ್ಮ ಪೆಮ್ಮ್ರನಡಿಯು ಮನಿಜನಿಗೆ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂದು ಪಟ್ಟ ಕಟ್ಟಿ ಮಾಲವ್ವಿಯನ್ನು ಅವನ ನೆಲೆವೀಡು ಮಾಡಿ ನಿಲ್ಲಿಸಿದ ವಿಷಯವಿದೆ.[೧] ಅಂದರೆ ಈ ಮನಿಜ 'ಕೊಡಗಿನ ಕೊಂಗಾಳ್ವರ' ಮೂಲಪುರುಷ ನೆನಿಸುತ್ತಾನೆ. ಅಂತಾಗಿ ಕೊಡಗಿನ ಕೊಂಗಾಳ್ವರು ಆ ವಂಶಿಕರಲ್ಲಿ 'ನಂತರದ ಕೊಂಗಾಳ್ವ'ರಾಗಿರಬೇಕು. ಶಾಸನದ ದೃಷ್ಟಿಯಿಂದ ಕೊಂಗಾಳ್ವರಿಗೆ 'ಕ್ಷತ್ರಿಯತ್ವ'ವನ್ನು ಮಾನಿಸಿದ ಕುರುಹು ಇದ್ದು, ಹಿಂದೆ ಅವರು ಸಾಮಾನ್ಯವರ್ಗದ ನಾಯಕರಾಗಿದ್ದರು, ಬೇರೆ ನಾಡುಗಳಲ್ಲೂ ಇದ್ದರು ಎಂಬ ಸೂಚನೆ ಒದಗುತ್ತದೆ. ಇದರಿಂದ ಕೊಡಗಿನಲ್ಲಿ ರಾಜ್ಯ ಸ್ಥಾಪನೆಗೆ ನಿಲ್ಲುವ ಮೊದಲೂ ಕೊಂಗಾಳ್ವ ವಂಶದವರಿದ್ದು ಅವರು 'ಮೊದಲ ಕೊಂಗಾಳ್ವರು ಅಥವಾ ಮೂಲ ಕೊಂಗಾಳ್ವ'ರೆನಿಸಿದ್ದರು, ಎನ್ನಬಹುದು. ಇದಕ್ಕೆ ವಿವಿಧ ಶಾಸನಗಳಿಂದ ೮-೯ನೇ ಶತಮಾನದಿಂದಲೇ ಪುರಾವೆಗಳು ಸಿಗುತ್ತವೆ. 'ಕೊಂಗಾಳ್ವ' ಶಬ್ದದ ಕೊಂಙ್ಗ, ಕೊಂಗಾಳ, ಕೊಂಗ ಎಂಬ ಪದ ಘಟಕಗಳನ್ನು ಶಾಸನಗಳಿಂದ ಹೆಕ್ಕಿ ನೋಡುವಲ್ಲಿ ಅವೆಲ್ಲ ಗಮನಕ್ಕೆ ಬರುತ್ತವೆ. ಅಲ್ಲದೆ 'ಕೊಙ್ಗಣಿ' ಶಬ್ದವನ್ನೂ ಹೀಗೆಯೇ ಪರಿಶೀಲಿಸಬೇಕು.

ಗಂಗ ಮತ್ತು ಕೊಂಗಾಳ್ವರು ಮೂಲನೆಲೆಗಳು: ಕ್ರಿ.ಶ. ೫೫೦ರ ಗಂಗರ ದುರ್ವಿನೀತನ ಹುಟ್ಟು ಹಬ್ಬದಲ್ಲಿ ಭೂ ಬಿತ್ತನೆ ಬೀಜ ನೀಡುವ ಸಂದರ್ಭ ಹೇಳುವ ಗುಮ್ಮರೆಡ್ಡಿ ಪುರ ಶಾಸನವನ್ನು, ಕೆತ್ತಿದವನು 'ಯೇನ **ಕೊಙ್ಗಣಿ** ಪೆರ್ನ್ದಟ್ಟಕಾರೇಣ ಲಿಖಿತ' - Kongani perndattkara engraved ಎಂದಿದೆ.

ಗಂಗರಲ್ಲಿ ಶ್ರೀ ಪುರುಷನಿಗೆ (ಕ್ರಿ.ಶ. ೭೫೦) **ಕೊಙ್ಗುಣಿ** ಮಹಾರಾಜ ಎಂದಿರುವಂತೆ[೩] ಅವನೀತನಿಗೆ[೪] ಭೂವಿಕ್ರಮ, ಶಿವಮಾರರಿಗೂ 'ಕೊಙ್ಗುಣಿ' ಎಂಬ ಉಪಾಧಿ ಕಾಣಬರುತ್ತದೆ. ೮-೯ನೇ ಶತಮಾನದ ಹೆಮ್ಮಿಗೆ ಶಾಸನದಲ್ಲಿ ಗಂಗರ ಪೆರ್ಮನಡಿಗೆ, 'ಕೊಙ್ಗುಣಿ ಮಾರಾಜಂ' ಎಂದಿದ್ದರೆ,[೫] ಕ್ರಿ.ಶ. ೮೭೦-೭೧ರ ಗಂಗರ ರಾಚಮಲ್ಲನಾಳ್ವಿಕೆಯಲ್ಲಿ 'ಕೊಙ್ಗಳ್ನಾಡು, ಪೂನಾಡು'ಗಳನ್ನು ಯುವರಾಜ ಭೂತರಸ ಆಳುತ್ತಿದ್ದ ಶಾಸನೋಕ್ತ ವಿಷಯವಿದೆ.[೬] ೯ನೇ ಶತಮಾನದ ಸಂಪಿಗೆಪುರ ಶಾಸನದಲ್ಲಿ, 'ಕೊಙ್ಗಳ್ಕೆಯ' ಪುದಿಗೞ್‌ ಗ್ರಾಮದಾನದ ವಿಷಯವಿದ್ದರೆ,[೭] ಅದೇ ಶತಮಾನದ ಕಟ್ಟೆಮನುಗನಹಳ್ಳಿ ಶಾಸನವು 'ಕೊಙ್ಗುಣಿಗನ್ನಾಡನಾೞ್ಗಾ ಮುಣ್ಣತನ' ವನ್ನು ಕುರಿತು ಹೇಳಿದೆ.[೮] ಹಾಗು ಪೆರ್ವಲೂರಿನ 'ಕೊಂಗುಣಿ'ಯ ಎಂಬ ವೀರ ತುರುಗಾಳಗದಲ್ಲಿ ವೀರಮರಣ ವನ್ನಪ್ಪಿದ ವಿಷಯ ಮತ್ತು ಕೊಙ್ಗಾಳರ (ಕೊಂಗಾಳರ), **ಕೊಡಗೂರರ** ಬೞ್ಗ ಮತ್ತನ್ತೆ ಅೞುಗೆ (It is like the families of **Kongalas** and Kodaguras weeping) ಎಂದಿದೆ.[೯]

ಈ ಅಂಶಗಳಿಂದ, 'ಕೊಙ್ಗಾಳ್ನಾಡು', 'ಕೊಙ್ಗಾಳರು' ೯ನೇ ಶತಮಾನದಲ್ಲಿಯೆ ಕಾಣಬಂದು ಗಂಗರಲ್ಲಿಯ 'ಕೊಙ್ಗುಣಿ' ಉಪಾಧಿಗೂ ಸಂಬಂಧವಿರುವಂಥ ಸೂಚನೆ ದೊರಕುವಂತಿದೆ. ಗಂಗರು ಕೊಙ್ಗುಣಿ ನಾಡು ಅಥವಾ ಕೊಙ್ಗಳಿನಾಡಿನವರಾಗಿದ್ದರೆ? ಎನಿಸುವಂತಿದ್ದು 'ಮೊದಲ ಕೊಂಗಾಳ್ವರು' ಅಸ್ತಿತ್ವದಲ್ಲಿದ್ದು ಅವರಿಗೂ ಗಂಗರಿಗೂ ಸಂಬಂಧವಿತ್ತೆ? ಎಂಬ ಪ್ರಶ್ನೆಯೂ ಏಳುತ್ತದೆ. ಕೊಂಗಾಳರು ಮತ್ತು ಕೊಡಗೂರರು ಎಂದಿರುವಲ್ಲಿ ಕೊಡಗು ಮತ್ತು ಕೊಙ್ಗಾಳ್ನಾಡುಗಳ ಶಾಸನೋಕ್ತ ಅಸ್ತಿತ್ವವೂ ಸೂಚನೆ ಆಗುವಂತಿದೆ. ಕೊಙ್ಗಣಿ (ಕೊಙ್ಗುಣಿ), ಎಂಬುದು ಪ್ರದೇಶ ವಾಚಿ ಶಬ್ದವಾಗಿದ್ದು ಆ ಸ್ಥಳದವರಿಗೆ ಅಂಥ ಉಪಾಧಿ ಅಂಟಿರ ಬಹುದು. ಗಂಗರು ಮಣ್ಣಿನ ಮಕ್ಕಳಾಗಿ, ಕೃಷಿಕರಾಗಿದ್ದರು ಎಂಬ ಮಾತಿರುವಲ್ಲಿ 'ಕೊಂಗು' ಎಂದರೆ ಅಡಕೆ ಎಂಬ ಅರ್ಥವೂ ಇರುವಲ್ಲಿ, ಅಡಕೆ ಬೆಳೆವ ಪ್ರದೇಶದ ಒಡೆಯರಾಗಿ 'ವರ್ಮ'ರೆನಿಸಿ 'ಕೊಙ್ಗುಣಿವರ್ಮ' ಎಂಬ ಉಪಾಧಿ ಅವರಿಗೆ ಬಂದಿದ್ದರೆ, 'ಮೊದಲಿನ ಕೊಙ್ಗಾಳ'ರೂ ಆ ಪ್ರದೇಶದಲ್ಲಿ ಗಂಗರ ಅಧೀನ ನಾಯಕರಾಗಿದ್ದಿರಬೇಕೆನಿಸುತ್ತದೆ. ಇಲ್ಲಿ 'ಣ' ಮತ್ತು 'ಳ'ಗಳು ಪರ್ಯಾ

* ಶ್ರೀ ಅನರ್ಘ್ಯ ಜಚನಿ ಕೃಪ, ೨೨೧, ೭೮ನೇ ಅಡ್ಡರಸ್ತೆ ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - ೫೬೦ ೦೧೦

ರೋಚ್ಚಾರಗಳಾಗಿರುವಂತಿದೆ. ಕನಿಷ್ಠತಮ (ಧ್ವನಿ) ಯುಗ್ಮಗಳಲ್ಲಿ ವ್ಯಂಜನ ಧ್ವನಿಮಾಗಳ ಪೈಕಿ ।ಙ್। ÷ ಳ್।- ಎಳೆ, ಎಣೆ; ಇತ್ಯಾದಿಗಳು ಕಾಣಬರುವುದು, ಇದಕ್ಕೆ ಕಾರಣವಾಗಿರುವಂತಿದೆ.

ಕ್ರಿ.ಶ. ೯೯೮-೯೯ರ ಮಗ್ಗೆ ಶಾಸನ[೧೦], ಕ್ರಿ.ಶ ೧೦೩೭ರ ಅಂಕನಾಥಪುರ ಶಾಸನದಲ್ಲಿ[೧೧] 'ಕೊಂಗೂಣಿ ಗಾವುಣ್ಡ', 'ಕೊಂಗುಣಿ ಗಾವುಣ್ಡ'; ೯ನೇ ಶತಮಾನದ ಕಟ್ಟೆಮನುಗನಹಳ್ಳಿ ಶಾಸನದಲ್ಲಿ[೧೨] 'ಪೆರ್ವಯಲ ಕೊಙ್ಗುಣಿ' ಎಂಬ ವ್ಯಕ್ತಿನಾಮಗಳು ಅವರ (ವಂಶ) ನೆಲೆಸೂಚಿಯಾಧಾರಿತವೆನಿಸುವಂತಿವೆ. ಕ್ರಿ.ಶ. ೯೦೪ರ ಗಟ್ಟವಾಡಿ ಶಾಸನವು[೧೩] 'ಬೂತುಗೇನ್ದ್ರಃ...... ಗಜ ಮಹಾಶಾಸ್ತ್ರೇ ಕರೇಣಾತ್ಮಜಃ **ಕೊಂಙ್ಗಾನ್ವಾರಣ** ಬನ್ದ ವಾರಣಕರಾಞ್ಜಿತ್ವಾ ರಣೇ ಪಞ್ಚವಾರ್ಯ್ಯುಕ್ತಪ್ರಾಕ್ತನ...;' (Butugendra - omniscent in great science of elephants... he five times overcame in the battle the Kongas who resisted the tying of elephants.) ಎಂದಿದೆ. ಇದೇ ಮಾತು. ಕ್ರಿ.ಶ. ೯೦೪-೦೬ ರ ಕೆರೆಹಳ್ಳಿ ಶಾಸನದಲ್ಲೂ[೧೪] '....**ಕೊಂಗನ್ವಾರಣ** ಬನ್ದವಾರಕರಙ್ ಜಿತ್ವಾ 'ರಣೇ ಪಂಚಮಯ್ರ್ಯುಕ್ತಂ ಪ್ರಾಕ್ತನ..' ಎಂದು ಬಂದಿದೆ. ಹಾಗು ಶಿವಾರ್ಯ್ಯನಿಗೆ ಧಾರಾಪೂರ್ವಕವಾಗಿ 'ಕೊಂಗನಾಡು ವಿಷಯ'ದಲ್ಲಿ ದಾನಕೊಟ್ಟದ್ದನ್ನೂ ಹೇಳಿದೆ. ಕ್ರಿ.ಶ. ೧೦೧೮-೫೪ರ ೧ನೇ ರಾಜಾಧಿರಾಜನ ಕಾಲದ ಕೆಂಪನಪುರ ಶಾಸನದಲ್ಲಿ[೧೫] 'ಕೊಙ್ಗಮಂಡಲ'ದ ಪ್ರಸ್ತಾಪವಿದ್ದು, ತೇದಿ ಇಲ್ಲದ ಗುಂಬಳ್ಳಿ ತಮಿಳು ಶಾಸನದಲ್ಲಿ 'ಕೊಙ್ಗುಲ'ದ ವಾಚ್ಚಿ ಗಾಮುಣ್ಡ[೧೬] ಎಂದಿದೆ; ಕ್ರಿ.ಶ. ೧೦೪೯-೫೦ರ ಸಮಯದ ಮಂಗಲ ಶಾಸನದಲ್ಲಿ[೧೭] 'ವಙ್ಗಣರ್ ಕೊಞ್ಗಣರ್ (ಕೊಂಗಣರ್)' ಎಂಬ ಎಂಬ ಪ್ರಯೋಗ ಕಾಣಬರುವಲ್ಲಿ 'ಕೊಙ್ಗಣ' ಒಂದು ಪ್ರದೇಶವೆಂದೇ ಸಾಬೀತಾಗುತ್ತದೆ. ಅದು ನಾಡುಗಳುಳ್ಳ ವಿಷಯವಾಗಿಯೂ ಕಾಣಬರುತ್ತದೆ; 'ಮಂಡಲ' ವಾಗಿಯೂ, ಕಾಣಬರುತ್ತದೆ.

ಕ್ರಿ.ಶ. ೧೧೫೬ರ ಮುದುಗೆರೆ ಶಾಸನದಲ್ಲಿ[೧೮] '..ಈ ತುಳುದೇಶಂ ಚಂಗಭೂಪಾವನಿ ನೆಗಳ್ದ ಬಯಲುನಾಡು ಕೊಂಗೂರ್ವೀಪಾಳಸ್ತಳಮುದ್ಯತು ಚೋಳಮಂಡಳನಿರುಂಗೊಳ ರೊದ್ದ ಪ್ರಸಿದ್ಧಂಗಳಾಗಿರ್ದೆಡೆಯಾ....' ಹಾಗು ಚೋಳಮಂಡಲದ 'ಕೊಂಗಿನ ದೇಶದ ಭೂಮಿಪಾಳಕರ್ನ್ನಡುಂಗಿ' ಎಂದು ಹೊಯ್ಸಳ ನರಸಿಂಹನ ಸಂದರ್ಭದಲ್ಲಿ ಹೇಳಿರುವುದು; ಕ್ರಿ.ಶ. ೧೧೮೮ರ ಬನ್ನೂರು ಶಾಸನದಲ್ಲಿ[೧೯] 'ತಟ್ಟೈಕ್ಕಾಡು **ಕೊಙ್ಗುನಜ್ಗೆಲ ಕೊಯಮುದೂರ್** ಉಚ್ಚಙ್ಗಿ, ೧೩-೧೪ನೇ ಶತಮಾನದ ಬೆಟ್ಟಹಳ್ಳಿ ಶಾಸನದಲ್ಲಿ[೨೦] ತಟ್ಟೈಕಾಡು ನುಳಮ್ಬಪಾಡಿ ಕೊಙ್ಗುನ ಙ್‌ಗಿಲಿ **ಕೊಯಙ್‌ಙೂರುಚ್ಚಙ್ಗಿ**.....ಪೊಯ್ಸಳ ವೀರಬಲ್ಲಾಳ... ಕುಡಙ್ಗ್ಗಿ ಯಾಗಮಣ್ಣರುಕ್ಕು.... ಎಟುತ್ತುಮಯನಾಡ್ಯೆ ಮಣ್ಡಲ ದೇವರ್ಮಗ **ಕೊಙ್ಗಾಟ್‌ವಾರ್**...'; ೧೦-೧೧ನೇ ಶತಮಾನದ ತಳನೂರು ಶಾಸನಗಳಲ್ಲಿ[೨೧] '**ಕೊಂಗುಣಿಗರ** ಕಾಳ್ಗಾವುಂಡ;' 'ಮಸ್ತಿಯ ವಿಸ್ವಕರ್ಮ **ಕೊಂಗುಣಿಯರ** ಮಾಯಣಾಚಾರಿ' ಎಂದಿರುವುದು; ಕ್ರಿ.ಶ. ೧೧೨೨ರ ಶಾಂತಿಗ್ರಾಮದ ಶಾಸನದಲ್ಲಿ[೨೨] 'ಮೂಡಲು ನಂಗಲಿಯ ಹಡಿಯಘಟ್ಟ ತೆಂಕಲು **ಕೊಂಗು** ಚೇರಮನ ಮಲೆ ಹಡುವಲು ಬಾರಕೂರ ಘಟ್ಟವಾಡಿಯಾ ಬಡಗಲು ಹೆಜ್ದೊರೆ ಸಾವಿಮಲೆ' ಹಾಗು ಕ್ರಿ.ಶ. ೧೩೭೭ರ ಹಬಸೂರು ಶಾಸನದಲ್ಲಿ[೨೩] *'ಹೊಯಿಸಣ ದೇಶೇ ಕಾವೇರ್ಯಾ ಉತ್ತರ ತೀರೇ ಕೊಂಗನಾಡು ಸಜ್ಜಕೇ ವಿಷಯೇ'* ಎಂದು ಕೊಂಗನಾಡಿನ ಕಾವೇರಿಗಡಿಯನ್ನು ಹೇಳಿರುವುದು; ಕ್ರಿ.ಶ. ೧೧೨೩ರ ಕಲ್ಲವತ್ತಿ ಶಾಸನದಲ್ಲಿ[೨೪], 'ತೆಂಕಲು ಕೊಂಗು ಚೇರಮನಮಲೆ ಪಡುವಲು ಬಾರಕನೂರಗಟ್ಟಂ ಪಡಗಲು (ಬಡಗಲು) ಪೆದ್ದೊಙು' ಆದಿಯಾಗೆ,' ಎಂದು ಕಾವೇರಿಯ ದಕ್ಷಿಣಕ್ಕೆ ಇದ್ದ **ಕೊಂಗುನಾಡು** ಎಂದಿರುವುದು; ಚೋಳರಕಾಲದಲ್ಲಿ ಕೊಂಗಿನದೇಶವೆನಿಸಿ ಅವರಿಗೆ ಆ ಭಾಗದ ಮೇಲೆ ಪ್ರಭಾವವಿದ್ದುದು; ಕೊಙ್ಗು ಹಾಗು ಕೊಯಮದೂರ್ (ಕೊಯಮತ್ತೂರು) ಎಂಬವು ಬೇರೆ ನಾಡುಗಳಾಗಿರುವುದು (ಕನ್ನಡ ನಿಘಂಟಿ ನಲ್ಲಿ ಕೊಯಮದೂರು ಎಂದರೆ, ಕೊಯಮತ್ತೂರು ಪ್ರದೇಶದ ಹೆಸರು ಎಂದಿರುವುದಕ್ಕೆ ಬದಲಾಗಿ ಇಲ್ಲಿ ಬೇರೆ ಅರ್ಥ ಕಾಣಬರುತ್ತದೆ) ಇವೆಲ್ಲ ಬಹುಶಃ ವಿವಿಧ ಕಾಲಗಳಲ್ಲಿನ 'ಕೊಙ್ಗು' ಪ್ರದೇಶದ ವಿಸ್ತಾರದ ಸೂಚನೆ ನೀಡಿರುವಂತಿದೆ; ಅಂದರೆ **'ಕೊಂಗುಣಿ'** ಎಂಬುದು ಸ್ಥಳ ವಾಚಿಯಾಗಿ- ಕುಲನಾಮವಾಚಿ ಯಾಗಿ ಬಳಕೆಯಾಗಿರುವುದು ಹೀಗೆಲ್ಲ ಕಾಣಬರುತ್ತದೆ.

ಹೀಗೆಯೇ ೧೧ನೇ ಶತಮಾನದಲ್ಲಿ ಕೊಙ್ಗವಿನಾಟ್ಟೈಲ್[೨೫] (ಕೊಂಗವಿನಾಡು), ೧೦ನೇ ಶತಮಾನದಲ್ಲಿ ಕೊಂಗ ನಾಡೆಟ್ಟಿತ್ತುಂ,[೨೬] ಹುಣಸೂರು ಶಾಸನವೊಂದು (ಶಾ.ಸಂ. ೯೨, ರೈಸ್ ಆವೃತ್ತಿ, ಕ್ರಿ.ಶ. ೯೨೦) 'ಕೊಂಗಲ್ನಾಡೆಣ್ಬಾಸಿರ ಮನಿಙು'ಯಪ್ಪನಾಳುತ್ತಿರೆ, ಎಂದಿರುವುದರಿಂದ ಗಂಗರ ಆಳ್ವಿಕೆಯ ಕಾಲದಲ್ಲಿ 'ಕೊಂಗಲ್ನಾಡು ಎಂಟು ಸಾವಿರದ' ಅಸ್ತಿತ್ವ ಕಂಡುಬರುತ್ತದೆ. ೧೩-೧೪ನೇ ಶತಮಾನದಲ್ಲಿ ಕೊಙ್ಗಯರ್ (ರೆಟ್ಟೊನೂ) ಙಿಮ್ (Kongayar seven hundred)[೨೭] ಎಂದು ಕೊಂಗುನಾಡಿನ ಏರಿಳಿತದ ವಿಸ್ತಾರಗಳನ್ನು ಶಾಸನಗಳು ಸೂಚಿಸಿ ಅದು ಕೊಯಮದೂರಿನಿಂದ ಅರಕಲಗೂಡು, ಕೃಷ್ಣರಾಜನಗರ, ಮಳವಳ್ಳಿ ಪ್ರದೇಶಗಳಲ್ಲಿ ವಿವಿಧ ಭಾಗಗಳನ್ನು ಹೊಂದಿತ್ತು ಎಂಬ ಸೂಚನೆ ನೀಡುತ್ತವೆ. ಈಗಾಗಲೇ ಹೇಳಿದಂತೆ ಕೊಂಗು ಎಂದರೆ 'ಅಡಕೆ', ಒಂದು ಬಗೆ ಸಸ್ಯ, ಧಾನ್ಯ ಎಂಬರ್ಥವೂ ನಿಘಂಟಿನಲ್ಲಿ ದೊರಕುವ ಕಾರಣ ಒಂದು ನಿರ್ದಿಷ್ಟ ಅಥವಾ ಅಡಕೆ ಬೆಳೆವ ಪ್ರಮುಖ ಪ್ರದೇಶ ಈ ಕೊಙ್ಗಾಲ್ವ ಅಥವಾ ಕೊಙ್ಗುಣಿ ಅಥವಾ ಕೊಙ್ಗು ಪ್ರದೇಶವೆನಿಸಿ, ಸಸ್ಯವಾಚಿ ನಾಮವನ್ನು ಹೊಂದಿತ್ತೆನ್ನ

ಬಹುದು. ಇಂಥ ಪ್ರದೇಶವೊಂದರಿಂದ ಬಂದ ಕೊಂಗಾಳ್ವರು, ಕೊಡಗಿನಲ್ಲಿ ತಮ್ಮ ಹೊಸ ಶಾಖೆಯಿಂದ ಪ್ರಸಿದ್ಧರಾದರೆನಿಸುತ್ತದೆ.

'ಣ' ಎಂಬುದು (ಗಣಿತ) 'ಐದು' ಎಂಬ ಸಂಖ್ಯೆಯ ಸಂಕೇತ; ಕೊನೆಗೆ ಸೇರುವ 'ಣಾಂತ' ಶಬ್ದ (೧೯೭೭ರ ಕ.ಕ. ನಿಘಂಟು ಪು. ೨೦೩೫; ಕೊಂಗುಣಿ=ಕೊಂಗಣಿ) 'ಕೊಜ್ಗಣ' ದಲ್ಲಿರುವಲ್ಲಿ **ಕೊಂಗ** ಅಥವಾ **ಕೊಜ್ಗು** ಎಂದರೆ ಸಸ್ಯವಾಚಿ ಪ್ರಾಧಾನ್ಯದ ಐದು ದೇಶ ಅಥವಾ ನಾಡುಗಳ ಆಳ್ವಿಕೆ ಹೊಂದಿದ್ದವರು **ಕೊಜ್ಗಣರು-ಕೊಜ್ಗುಣಿಯರು** ಎಂಬ ಅರ್ಥ ಹೊರಡಬಹುದು. ಅಂಥ ನಾಡವರು 'ಕೊಂಗಾಳು' (ಕೊಂಗುಭಟರು!) ಎನಿಸಿ ಪ್ರಬಲರೆನಿಸಿದ್ದಿರಬಹುದು. ಅಂಥ ಕೊಂಗಣರನ್ನು ಒಂದು ಕಾಲಕ್ಕೆ ಗೆದ್ದಿರುವ ಸಂದರ್ಭವಿದ್ದು '**ಕೊಜ್ಗುಣಿವರ್ಮ**' ಎಂಬ ಕ್ಷತ್ರಿಯ ಸೂಚಕ ಶಬ್ದ ಗಂಗರಸರಿಗೆ ಒದಗಿರಬಹುದೆನಿಸುತ್ತದೆ. ಗಂಗರು ಕಂಚಿಯಲ್ಲೂ ಇದ್ದರಲ್ಲ! ಇಂಥ ಕೊಂಗ (ಕೊಜ್ಗನಾಡು) ನಾಡಿನಲ್ಲಿ ಕೊಯಮದೂರು ಇದ್ದು ಗಂಗರಿಗೆ 'ಮೊದಲ ಕೊಂಗಾಳ್ವರು' ಸೋತು ಅಧೀನರಾಗಿ ಅವರ ಸೇನಾನಾಯಕರಾಗಿದ್ದಿರಬೇಕು. ಇವರು ಗಂಗರ ಅಧೀನರಾಗಿ ೯ನೇ ಶತಮಾನದ ಮಧ್ಯಭಾಗದಿಂದ ೧೦ನೇ ಶತಮಾನದ ಕೊನೆಯವರಿವಿಗೆ ನಂಜನಗೂಡು, ಹೆಗ್ಗಡದೇವನಕೋಟೆ, ಚಾಮರಾಜನಗರ ಬಯಲನಾಡು (ವೈನಾಡು), ಉತ್ತರ ಕೊಡಗಿನ ಗಡಿಯವರೆಗೆ ಗಂಗರ ಸಾಮಾನ್ಯ ಮಾಂಡಳಿಕರಾಗಿ ಮೊದಲಿಗೆ ನಾಡುಭಾಗಗಳನ್ನು ಆಳುತ್ತಿದ್ದಂತೆ ಶಾಸನಗಳಿಂದ ಸೂಚಿತವಾಗುವಂತಿದೆ. ಗಂಗರ ವಂಶ ಸಂಬಂಧ ವನ್ನು ಇವರೂ ಬೆಳಸಿಕೊಂಡಿದ್ದರೂ, ಚೋಳರ ಪ್ರಭಾವಕ್ಕೆ ತೆರೆದುಕೊಂಡದ್ದು ಮುಂದಿನ ಶಾಸನೋಕ್ತ ಘಟನೆಗಳಿಂದ ತಿಳಿದುಬರುತ್ತದೆ.

ಚೋಳರು ಪನಸೋಗೆ ಯುದ್ಧದಲ್ಲಿ ಕ್ರಿ.ಶ. ೧೦೦೪ರ ಸುಮಾರಿನಲ್ಲಿ ಗಂಗರನ್ನು ಸೋಲಿಸಿದರು. ಆ ಹೊತ್ತಿಗೆ ಕೊಂಗಾಳ್ವರು ಗಂಗರ ಬಗೆಗಿನ ನಿಷ್ಠೆಯನ್ನು (ಈ ಮೊದಲೇ ಸೂಚಿಸಿರುವಂತೆ) ಬದಲಿಸಿ ತಮ್ಮ ಮೂಲನೆಲೆಯ ಚೋಳರಲ್ಲಿ ಸೈನಿಕ ದಂಡನಾಯಕರಾದಂತೆ ತೋರುತ್ತದೆ. ಹೀಗಾಗಿ ಗಂಗರೆದುರು, ಚೋಳರ ಪರವಾಗಿ ಪನಸೋಗೆಯಲ್ಲಿ ಕಾದು ಜಯತಂದು ಕೊಟ್ಟರು. ಈ ಪ್ರದೇಶದ ಪರಿಚಯವೂ ಅವರಿಗೆ ಚೆನ್ನಾಗಿ ಇದ್ದುದೂ ಇದಕ್ಕೊಂದು ಪೋಷಕ ಕಾರಣವೆನಿಸುತ್ತದೆ. ಕೊಂಗಾಳ್ವರು ಜಯ ತಂದುಕೊಟ್ಟ ಸಾಕ್ಷಿಯಾಗಿ ಕೊಡಗಿನ ಮಾಲಂಬಿ ಶಾಸನದ ವಿಷಯವೇ ಇದೆ.[೨೮]

'**ಚೋಳ ಕುಳ ಗಘನ ಗಭಸ್ತಿ ಮಾಳಿ**' ಸಕಲ ಜನ ದುರಿತ ಹರಣ ನಿಪುಣ
ಕವೇರ ಕನ್ಯಕಾ ಸಖೀಯಮಾನ **ಚೋಟಿ** ಮಹಾ ಮಹೀಪತಿ
ಶ್ರೀರಾಜಕೇಸರಿವರ್ಮ್ಮ ಪೆರ್ಮ್ಮನಡಿಗಳ್ಮ**ನಿಜಂಗೆ** ಪನಸೋಗೆಯ
ಕಾಳಗದಲೊಡ್ಡಿ ಕೆಯ್ದಂ ನೆಱಿದಿಕ್ಕು ಬ। ರೆನೆನ್ದು ಆತನ ನಡಹಿದರ್ಸ್ವತ್ತರೆನ್ದು
ಪಿರಿದು ಕಾರುಣ್ಯದಿನ್ದ ಪಟ್ಟವ। ಕಟ್ಟಿ ನಾಡ ಕುಡುಗೆನ್ದು ಪಞ್ಚ[ವನ್]
ಮಾರಾಯರ್ಗ್ಗಟ್ಟಲಾತಂ **ಕ್ಷತ್ರಿಯ ಶಿಖಾಮಣಿ। ಕೊಂಗಾಳ್ವನೆನ್ದು ಪಟ್ಟವಂ**
ಕಟ್ಟಿ ಮಾಲವ್ವಿಯನಿತ್ತರಿ। ದಕ್ಕೆ ಗಾವುಣ್ಡ ರಾಚಮ್ಮನ ವಂಶಮೆ ಸಾಕ್ಷಿ
ಕಣ್ಣವಂಗಲ। ದ ಆದಿತ್ಯ ಗಾಮುಣ್ಡನುಂ.। ಗಟಿನಿಮ ನನ್ನಿಯ ಮೇರುವುಂ

-ಇದರಿಂದ 'ಕೊಂಗಾಳ್ವರ' ವಂಶದ ನಿಖರ ಸ್ವಾಯತ್ತ ರಾಜಭಾರವು, ಮಾಲವ್ವಿ (ಮಾಲಂಬಿ)ಯಲ್ಲಿ ಮನಿಜನಿಗೆ ಅವನ ಸಾಧನೆಗಾಗಿ ರಾಜಕೇಸರಿವರ್ಮನಿಂದ ಆದೇಶಿತನಾದ ಪಂಚವನ್ ವನ್ ಮಹಾರಾಯನು ಪಟ್ಟಗಟ್ಟಲಾಗಿ ಆರಂಭವಾಯಿತು ಎಂದು ತಿಳಿಯುತ್ತದೆ. ಹೀಗಾಗಿ ಇವನನ್ನು 'ನಂತರದ ಕೊಂಗಾಳ್ವರು' ಅಥವ 'ಕೊಡಗಿನ ಕೊಂಗಾಳ್ವರು' ಅವರ ಮೂಲಪುರುಷನೆನ್ನಬೇಕು. ಬಹುಶಃ ಪಲ್ಲವ ಹಾಗು ಚೋಳರ ಪೋಷಿತ ಮೂಲವನ್ನು ಮನಿಜನ ವಂಶಿಕರು ಸ್ಮರಿಸಿ ಹೀಗೆಲ್ಲ ಹೇಳಿಕೊಂಡಂತಿದೆ. ಪ್ರಸ್ತುತ ಈ ಶಾಸನಕ್ಕೆ ಪೂರಕವಾಗಿ ಅರಕಲಗೂಡಿನ ಸುಳುಗೋಡು ಸೋಮವಾರ ಗ್ರಾಮದ ಕ್ರಿ.ಶ. ೧೦೨೯-೮೦ರ ಶಾಸನವು[೨೯] ಹೇಳುವಂತಿದೆ. ಅದು ಕೊಡಗಿನ 'ಕೊಂಗಾಳ್ವರ' ೪ನೇ ದೊರೆ(!) ರಾಜೇನ್ದ್ರ ಪ್ರಿಥುವೀ ಕೊಂಗಾಳ್ವನ ಕುರಿತು ವರ್ಣಿಸುವಲ್ಲಿ:

ಸ್ವಸ್ತಿ ಸಮಧಿಗತ ಪಞ್ಚ ಮಹಾಶಬ್ದ ಮಹಾಮಂಡಲೇಶ್ವರಂ
ಒಱಿಯೂರ್ಪುರಾಧೀಶ್ವರಂ ಜಟಾ **ಚೋಟಿಕುಳೋದ** ಯಾಚಳ
ಗಭಸ್ತಿಮಾಳಿ ಸೂರ್ಯ್ಯವಂಶ ಶಿಖಾಮಣಿ ಶರಣಾಗತ ವಜ್ರಪಂಜರಂ
ಶ್ರೀಮದ್ರಾಜೇನ್ದ್ರಪ್ರಿಥುವೀ ಕೊಂಗಾಳ್ವಂ

-ಎಂದಿದೆ. ಇಲ್ಲಿ 'ನಂತರದ ಕೊಂಗಾಳ್ವರು' ತಮ್ಮ ಕೊಡಗು ವಂಶದ ಉಗಮಕ್ಕೆ ಚೋಳರು ಕಾರಣ ಹಾಗು ತಾವು ಸೂರ್ಯವಂಶಿಕರು ಎಂದು ಕುಲಶ್ರೇಷ್ಠತೆಯ ಕ್ಷತ್ರಿಯಾನ್ವಯ ಮಾಡಿ ಹೇಳಿಕೊಂಡಿರುವುದೂ ಸ್ಪಷ್ಟವಾಗಿದೆ. ಅಲ್ಲದೆ 'ಚೋಳಕುಳ ಗಘನಗ ಭಸ್ತಿಮಾಳಿ' ಎಂದು ಚೋಳ ರಾಜಕೇಸರಿವರ್ಮನಿಗಿರುವ ವಂಶಬಿರುದಿನಂತೆ, ಅದೇ ಅರ್ಥದ ಬಿರುದನ್ನು ಕೊಂಗಾಳ್ವರೂ ಅಂಟಿಸಿಕೊಂಡಿರುವುದು ಗಮನಾರ್ಹ. ಅಂದರೆ ಚೋಳವಂಶದ ಗಗನಕ್ಕೆ ಕಿರಣಮಾಲೆಯಂತೆ ಇರುವಂಥವರು ಎಂದಾಗಿದೆ. ಚೋಳರಿಗೆ ತಂಜಾವೂರು ಅಲ್ಲದೆ ತಿರುಚನಾಪಳ್ಳಿಯ ಸನಿಹದ **ಒಱಿಯೂರು** ಕೂಡ ಒಂದು ರಾಜಧಾನಿಯಾಗಿತ್ತಲ್ಲವೆ? ಕೊಂಗಾಳ್ವನ ವರ್ಣನೆಯಲ್ಲಿ ಈ ಊರಿನ ಪ್ರಸ್ತಾಪ ಬರುವಲ್ಲಿ,

'ಮೊದಲ ಕೊಂಗಾಳ್ವರು' **ಒಱುೆಯೂರು** ಪ್ರದೇಶದವರಾಗಿದ್ದಿರಬಹುದೆಂಬ ಸೂಚನೆ ದೊರೆಯುತ್ತದೆ. ಅವರ ವಂಶಿಕವಾಗಿ ರಾಜೇನ್ದ್ರ ಪ್ರಥ್ವಿ ಕೊಂಗಾಳ್ವ ಈ ಬಿರುದನ್ನು ಬಳಸಿರುವಂತಿದೆ.

ಇನ್ನು ಶ್ರೀರಂಗದಲ್ಲಿ 'ಅಂತ್ಯರಂಗ ಶ್ರೀರಂಗನಾಥನ' ಗುಡಿಯನ್ನು ಧರ್ಮವರ್ಮಚೋಳನ ನಂತರ ಗಿಳಿಚೋಳ, ಮಹೇಂದ್ರ ಚೋಳ, ಕುಲೋತ್ತುಂಗಚೋಳ, ರಾಜೇಂದ್ರ ಚೋಳ (ರಾಜಕೇಸರಿವರ್ಮ ಪೆರ್ಮನಡಿ) ಮುಂತಾದವರೆಲ್ಲ ಅಭಿವೃದ್ಧಿಗೊಳಿಸಿದ ರಾಜರಾಗಿದ್ದರು.[೨೦] ೧೦ನೇ ಶತಮಾನದ ಅಂತ್ಯದಲ್ಲಿ ಬೆಳಕಿಗೆ ಬಂದ **ವಿಜಯಾಲಯ ಬುಡಕಟ್ಟಿನ ತಂಜಾವೂರು ಚೋಳರು** ಶೈವವೈಷ್ಣವ ಸಮನ್ವಯ ಪರಂಪರೆಯವರಾಗಿದ್ದು ಗಂಗವಾಡಿಯನ್ನು ಗೆದ್ದವರಾಗಿದ್ದಾರೆ.[೨೧] ಈ ವಂಶದ ಕ್ರಿ.ಶ. ೧೦೦೦ಳರ ರಾಜೇಂದ್ರ ಚೋಳನನ್ನು ಕೊಡಗಿನ ಮಾಲಂಬಿ ಶಾಸನವು 'ಕವೇರಕನ್ಯಕಾ ಸಖೀಯಮಾನ ಚೋಟಮಹಾ ಮಹೀಪತಿ ಶ್ರೀರಾಜಕೇಸರಿವರ್ಮ್ಮ ಪೆರ್ಮ್ಮನಡಿಗಳ್' ಎಂದಿದ್ದು ಕೊಡಗಿನ ಕಾವೇರಿಯೊಡನೆ ಅವನ ಅವಿನಾಭಾವ ಸಂಬಂಧವನ್ನು ಸೂಚಿಸುವಂತಿದೆ. (ಆದರೆ ತಮಿಳುನಾಡಿಗೆ ಕಾವೇರಿಯ ಹರಿವು ಸರಾಗವಾಗಿರುವಂತ ನೋಡಿಕೊಳ್ಳಲು ಆ ಪ್ರದೇಶಗಳ ಮೇಲಿನ ಹಿಡಿತ ಸಾಧಿಸಲು ಚೋಳರು ಮಾಡಿದ ಉಪಾಯ, ಈ ಆಕ್ರಮಣಗಳು, ಎಂದೆನಿಸುತ್ತದೆ. ಅಂತಾಗಿ ಕೊಡಗಿನ ಮೇಲೇರಿ ಬಂದು ಕೊಂಗಾಳ್ವರ ಮೂಲಕ ತಮ್ಮ ಆಶಯ ಕಾಪಾಡಿಕೊಂಡಂತೆ ತೋರುತ್ತದೆ) ವಿಜಯನಗರದರಸುವಂಶಿಕ ೨ನೇ ರಂಗರಾಯನ ಸೋದರಳಿಯ ತಿರುಮಲನು ಶ್ರೀರಂಗದ ಕಾವೇರಿ ತಟದಲ್ಲಿರುವ ಶ್ರೀರಂಗನಾಥನ ಗುಡಿ ನೋಡಿ ಹಂಪೆಯ ಕಿಷ್ಕಿಂದಾ ಪ್ರದೇಶದಲ್ಲಿ ತುಂಗಭದ್ರಾ ತೀರದಲ್ಲೊಂದು ಶ್ರೀರಂಗನಾಥನ ಗುಡಿ ಕಟ್ಟಿಸಿದ ವಿಷಯವಿದೆ.[೨೨] ಹೀಗೆಯೇ ತಮ್ಮಲ್ಲಿರುವಂತೆ ಶ್ರೀರಂಗನಾಥನ ಗುಡಿಯೊಂದನ್ನು ಕೊಡಗಿನಲ್ಲೂ ಕಟ್ಟಿಸುವ ಪ್ರೇರಣೆಯು ಈ ಮೊದಲೇ ಚೋಳರಿಗೆ ಒದಗಿರುವುದು ಸಹಜವಾಗಿತ್ತು. ಕೊಡಗಿನ ಚಂಗಾಳ್ವರನ್ನು ೧೧ನೇ ಶತಮಾನದ ಆದಿಯಲ್ಲಿ ಸೋಲಿಸಿ ತಮ್ಮ ಸಂಸ್ಕೃತಿಯನ್ನು ಕೊಡಗಿನಲ್ಲಿ ಚೋಳರು ಹರಡಲು ಶ್ರೀರಂಗನಾಥನ ಗುಡಿಯನ್ನು ಕಾವೇರಿ ಕವಲು ಪ್ರದೇಶದಲ್ಲಿ ಕಟ್ಟಿಸಿದರೆಂದು ಕೃತಿಯೊಂದು ತಿಳಿಸುತ್ತದೆ.[೨೩] ರಾಜೇಂದ್ರಚೋಳನ ಸೇನಾಪತಿ ಪಂಚವನ್ ಮಹಾರಾಯನು ಈ ಚೋಳಪರಂಪರೆಯಿಂದ ಪ್ರಭಾವಿತನೂ ರಾಜನಿರ್ದೇಶಿತನೂ ಆಗಿ ಗಂಗರ ಮಾಂಡಲಿಕರಾಗಿದ್ದ ಚಂಗಾಳ್ವರ ಕೊಡಗಿನ ಪ್ರದೇಶವನ್ನು ಪನಸೋಗೆಯ ಯುದ್ಧಾನಂತರ ಗೆದ್ದಮೇಲೆ, ಕಾವೇರಿಯ ಪೂರ್ವದಂಡೆಯಲ್ಲಿ ಶ್ರೀರಂಗದ ಪರಿಸರವನ್ನು 'ಗುತ್ತಿ' (ನಂಜರಾಯಪಟ್ಟಣ-ಹೊಸಪಟ್ಟಣದ ನಡುವೆ)ಯಲ್ಲಿ ಕಂಡುಕೊಂಡು, ಶೈವ-ವೈಷ್ಣವ ಸಮನ್ವಯದ ಸಂಕೇತವಾಗಿ ಊರುಕಟ್ಟಿ ವೀರಭದ್ರನಗುಡಿ *(ಕೊಡಗುಜಿಲ್ಲಾ ಗ್ಯಾಸೆಟಿಯರ್ ೧೯೬೫, ಪು. ೪೪)* ಹಾಗು ಶ್ರೀರಂಗನಾಥನ ಗುಡಿಯನ್ನು ನಿರ್ಮಿಸಿರಬೇಕು.

ಕೊಡಗು ಶ್ರೀರಂಗ ಪಟ್ಟಣ : ಕಾವೇರಿ ದಕ್ಷಿಣ ದಂಡೆಯ ತುದಿ, ಸಿದ್ದಾಪುರ-ದಾಸವಾಳ ಗ್ರಾಮ ಪ್ರದೇಶದಲ್ಲಿ, ಒಂದು ಕಾಲಕ್ಕೆ ಗುಹ್ಯಗ್ರಾಮದ ಬಳಿ ಪಶ್ಚಿಮದಿಂದ ಪೂರ್ವಕ್ಕೆ ಕಾವೇರಿ ಹರಿದು ಬರುತ್ತಿದ್ದಾಗ ಸಿದ್ದಾಪುರದ ಬಳಿ ಆಗ್ನೇಯಕ್ಕೆ ತಿರುಗಿ ಅಲ್ಲಿಂದ ಈಶಾನ್ಯಕ್ಕೆ ತಿರುಗುವಲ್ಲಿ ಇಂಗ್ಲಿಷ್ 'u' ಆಕಾರದಲ್ಲಿ ತಿರುಗುತ್ತಿತ್ತು. ಕಾವೇರಿಯ ಮತ್ತೊಂದು ಕವಲಾದ **ಮಹಾಂದೋಡು** ಅದರ ಪಶ್ಚಿಮ ಕವಲಿನ ನದೀ ಪಥವಿದ್ದ ನೆಲೆ ಬಿಂದುವಿನಿಂದ (ಇಂದು ಪಥ ಒಣಗಿದ್ದರೂ ಆ ಪ್ರದೇಶವೆಲ್ಲ ಫಲವತ್ತಿನಿಂದ ಕೂಡಿದೆ) ಕಾವೇರಿಯು ದಕ್ಷಿಣೋತ್ತರ ವಾಗಿ ಇಂದು ಹರಿಯುತ್ತಿದ್ದಾಳೆ.[೨೪] ನಂಜರಾಯಪಟ್ಟಣ ಪ್ರದೇಶದಲ್ಲಿ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಹಿನ್ನೆಲೆಗಳನ್ನೆಲ್ಲ ತಿಳಿದುಕೊಂಡ ಚೋಳ ಸೇನಾಪತಿ ಸಿದ್ದಾಪುರದ ಬಳಿಯಿಂದ ನಂಜರಾಯಪಟ್ಟಣ ಪ್ರದೇಶವೆಲ್ಲ ಸೇರಿದಂತೆ ಬಹುಶಃ ಮೊದಲ 'ಕೊಡಗು ಶ್ರೀರಂಗಪಟ್ಟಣ'ದ ಪ್ರಾದೇಶಿಕ ವಿಭಾಗವನ್ನು ನಿರ್ದೇಶಿಸಿ ಕೊಂಗಾಳ್ವರ ನಿರ್ವಹಣೆಗೆ ನೀಡಿರಬೇಕೆನಿಸುತ್ತದೆ. ಹೀಗಾಗಿ ಸಿದ್ದಾಪುರದ ಬಳಿಯಿಂದ 'ರಂಗಪಟ್ಟಣ' ನಿರ್ಮಿತವಾಯಿತೆಂಬ ಜನಪದ ಬಾಯ್ದೆರೆ ಇತಿಹಾಸ ಬೆಳೆದಂತೆ ಕಾಣುತ್ತದೆ. ಸಿದ್ದಾಪುರದ ಬಳಿಯ ಗುಹ್ಯದಲ್ಲಿ ಕಾವೇರಿದಂಡೆಯಲ್ಲಿ ಅಗಸ್ತ್ಯೇಶ್ವರ ದೇಗುಲವಿದೆ. ತಮಿಳುನಾಡಿಗೂ ಅಗಸ್ತ್ಯನಿಗೂ ತುಂಬು ನಂಟಿರುವುದೂ ಈ ಸಂದರ್ಭಕ್ಕೆ ಮತ್ತಷ್ಟು ಗಮನಾರ್ಹವಾಗುತ್ತದೆ. ಚಂಗಾಳ್ವ ರಾಜಗುವರ ಬೊಪ್ಪದೇವನ ಸಂಬಂಧದ ಅರಕಲಗೂಡು ಶಾಸನದಲ್ಲಿ 'ಶ್ರೀರಂಗಪಟ್ಟಣ' ಎಂದಿರುವ ಕಾರಣ ಕ್ರಿ.ಶ. ೧೨೪೫ರ ಮುನ್ನವೂ ಅದೇ ಹೆಸರಿತ್ತೆಂದರೆ ಆರಂಭದಿಂದಲೂ ಹೆಸರು 'ರಂಗಪಟ್ಟಣ' ಎನ್ನುವ ಬದಲಿಗೆ ಇದ್ದು, ರೂಢಿಗೊಂಡಿತ್ತು. ಅದೇ ಚೋಳರ ಕಾಲದ ಕೊಡಗಿನ ಮೊದಲ ಶ್ರೀರಂಗಪಟ್ಟಣ ಅರ್ಥಾತ್ 'ಕೊಡಗುಶ್ರೀರಂಗಪಟ್ಟಣ'. ಈ 'ಮೊದಲ ಶ್ರೀರಂಗಪಟ್ಟಣದ' ಉತ್ತರ ಭಾಗಕ್ಕೆ (ಇಂದಿನ ದುಬಾರೆ ಕಾಡು) ಪಂಚಲಿಂಗೇಶ್ವರ ಗುಡಿ, ಪಾರ್ವತಿ-ದುರ್ಗೆಯರ ಗುಡಿ, ಅಮ್ಮಾಳೆ ಕೆರೆಗಳು (ಮೂರು ಅಮ್ಮನ್ ಕೆರೆಗಳು ಇದ್ದವು, ಈಗ ಒಣಗಿಹೋಗಿವೆ) ಹಾಗು ನಂಜರಾಯಪಟ್ಟಣದ ಕಾವೇರಿಯ ಪೂರ್ವದಂಡೆ (ನಿಖರವಾಗಿ ಹೇಳಿದರೆ ಆಗ್ನೇಯ ದಿಸೆಗೆ ಹೊಳೆಯ ತುಸುನಡುಭಾಗದಲ್ಲಿ)ಯಲ್ಲಿ ಚೋಳಪ್ರತಿಷ್ಠಾ ವೀರಭದ್ರ[೨೫] ಗುಡಿಯನ್ನು ಪಂಚವನ್ ಮಹಾರಾಯ ಕಟ್ಟಿಸಿದ. ಪಂಚಲಿಂಗೇಶ್ವರ ಗುಡಿಯ ಬಳಿ ಇರುವ ದುರ್ಗೆಯ ಆಸೀನ ಶಿಲ್ಪ ಬಹು ಕಲಾತ್ಮಕ ಚೋಳಶೈಲಿಯ ಶಿಲ್ಪವಾಗಿದೆ. ಗುಡಿ ತುಂಬ ಶಿಥಿಲವಾಗಿದೆ. ಸ್ತಂಭಗಳು ಉರುಳಿಬಿದ್ದಿವೆ. ನಂಜರಾಯಪಟ್ಟಣದ ಕಾವೇರಿ

ದಂಡೆಯಲ್ಲಿ ವೀರಭದ್ರಗುಡಿಯ ಕರಿಯ ಶಿಲಾಸ್ತಂಭಗಳೂ ಅವಶೇಷಗಳೂ ಅಡ್ಡಾದಿಡ್ಡಿಯಾಗಿ ರಾಶಿ ಬಿದ್ದಿವೆ.

ನಂಜರಾಯಪಟ್ಟಣ-ಹೊಸಪಟ್ಟಣದ ಪೂರ್ವ ದಿಸೆಯಲ್ಲಿ ಕಾವೇರಿಯ ಹರಿವು ಕವಲುಗೊಂಡಿದೆ. ಈ ಕವಲುಗಳ ನಡುವಣ ಎತ್ತರದ **ಗುತ್ತಿ** ಪ್ರದೇಶದಲ್ಲಿ ವೈಷ್ಣವಪರವಾದ ಶ್ರೀರಂಗನ ಗುಡಿಗೆ ಚೋಳರ ಕಾರಣ ಅಸ್ತಿಭಾರವಾಗಿರಬೇಕು. ಮುಂದೆ ಬಹುಶಃ ಹೊಸಪಟ್ಟಣದ ನೆರೆಗಿರುವ 'ರಂಗಸಮುದ್ರ'ವನ್ನು 'ಮಧ್ಯಂತರ ಚಂಗಾಳ್ವರ' ಪೈಕಿಯ ರಂಗರಾಜನು (ಕ್ರಿ.ಶ. ಸು. ೧೪೫೦!) ತನ್ನ ಹೆಸರಿನಲ್ಲಿ ರೂಪಿಸಲು ಇಲ್ಲಿದ್ದ ಶ್ರೀರಂಗನ ಗುಡಿಯ ಸಾನ್ನಿಧ್ಯವೂ ಕಾರಣವಾಗಿರಬೇಕು. ಈ ಹಿನ್ನೆಲೆಗಳನ್ನೆಲ್ಲ ಗಮನಿಸಿದರೆ ೧೧ನೇ ಶತಮಾನದ ಆರಂಭದ ಸುಮಾರಿನಲ್ಲಿ 'ಕೊಡಗು ಶ್ರೀರಂಗಪಟ್ಟಣ'ದ ನಿರ್ಮಾಣಕ್ಕೆ ಅಸ್ತಿಭಾರ ಬಿದ್ದಿರುವಂತೆ ಕಾಣುತ್ತದೆ. ಚೋಳರಿಗೆ ಮಾಂಡಳಿಕರಾಗಿದ್ದ ಚಂಗಾಳ್ವರು ಮುಂದೆ ಕೊಂಗಾಳ್ವರನ್ನು ಗೆಲ್ಲುವವರಿಗೆ ಅಥವಾ ಕೊಂಗಾಳ್ವರಿಗೆ ಕೊಡಗಿನಲ್ಲಿಯ ಅಸ್ತಿತ್ವ ಕ್ರಿ.,ಶ. ೧೧೭೬ರಲ್ಲಿ ಮುಗಿಯುವವರಿವಿಗೆ ಈ 'ಕೊಡಗುಶ್ರೀರಂಗಪಟ್ಟಣ' ಪ್ರದೇಶ ಅಭಿವೃದ್ಧಿಗೊಂಡು ಕೊಂಗಾಳ್ವರ ಅಧೀನದಲ್ಲಿದ್ದಿರಬೇಕು. (ಹೊಯ್ಸಳ ಸೋಮೇಶ್ವರನು ಚಂಗಾಳ್ವ ರಾಜಕುಮಾರರಿಗೆ ರಾಜಧಾನಿಯಾಗಿಸಿ ಕೊಡಗುಶ್ರೀರಂಗಪಟ್ಟಣದಲ್ಲಿ ಆಡಳಿತಕ್ಕೆ ನಿಲ್ಲಲು ಆಣತಿ ಮಾಡಿದ್ದು ಶಾಸನೋಕ್ತವಿದೆಯಷ್ಟೆ. ಆ ಹಿನ್ನೆಲೆಯಲ್ಲಿ ಚಂಗಾಳ್ವರ ಕಾಲದಲ್ಲಿ ಕೊಡಗುಶ್ರೀರಂಗಪಟ್ಟಣದ ಉಗಮ ಎಂದು ಭಾವಿಸಿದ್ದು, ಹಾಗೆಯೇ ಈ ಮೊದಲು ಬರೆದಿದ್ದ ನನಗೆ, ಕೊಂಗಾಳ್ವರ ಕುರಿತು ಶೋಧಿಸುವಲ್ಲಿ, ಅದರ ಉಗಮ ಇನ್ನೂ ಪೂರ್ವದ್ದು ಎಂದು ಅರಿವಿಗೆ ಬಂತು.) ಇಂಥ ಪ್ರಮುಖ ಪಟ್ಟಣವಾಗಿ ಸಿದ್ದುದರಿಂದಲೇ ಹೊಯ್ಸಳ ಸೋಮೇಶ್ವರ, ಕೊಂಗಾಳ್ವರ ಕೊಡಗು ಶ್ರೀರಂಗಪಟ್ಟಣವನ್ನು ಕ್ರಿ.ಶ. ೧೨೪೫ ೧೨೫೨ರ ವೇಳೆಗೆ ಚಂಗಾಳ್ವ ರಾಜಕುಮಾರರಾದ ಸೋಮದೇವರಸ ಬೊಪ್ಪದೇವರಸರಿಗೆ ರಾಜಧಾನಿ ಮಾಡಿಕೊಳ್ಳಲು ಶಾಸನೋಕ್ತವಾಗಿ ಆದೇಶಿಸಿದನೆಂದು ತೋರುತ್ತದೆ. (ಅರಕಲಗೂಡು ಶಾಸನ ೫೩)

ಕೊಂಗಾಳ್ವರ ಶಾಸನಗಳು : ಮೈಸೂರು ಜಿಲ್ಲೆಯಲ್ಲಿ ೧೨ನೆಯ ಶತಮಾನಾಂತ್ಯದವರೆಗೆ, ಹಾಸನ ಜಿಲ್ಲೆಯಲ್ಲಿ ೧೩ನೇ ಶತಮಾನದ ಮೊದಲ ದಶಕದ ಸುಮಾರಿನವರೆಗೆ, ಕೊಡಗಿನಲ್ಲಿ ೧೨ನೆಯ ಶತಮಾನದ ಉತ್ತರಾರ್ಧದವರೆಗೆ ಕಾಣಬರುತ್ತವೆ.

ಮೈಸೂರು ಜಿಲ್ಲೆ ಕೃಷ್ಣರಾಜನಗರದ ಕ್ರಿ.ಶ. ೧೦೭೯ರ ಶಾಸನ ಹಾಗೂ ಕ್ರಿ.ಶ. ೧೧೦೪-೦೫ರ ಶಾಸನದಲ್ಲಿ ತ್ರಿಭುವನಮಲ್ಲ ಕೊಂಗಾಳ್ವ ದೇವನು ಆಳುತ್ತಿರುವಾಗ ಸಾಲಿಗ್ರಾಮದ ಮೇಲೆ ಏರಿ ಬಂದ ಚಂಗಾಳ್ವರ ಮೇಲೆ ಕಾಳಗವಾದದ್ದು ಉಕ್ತವಾಗಿದೆ.[೩೬] ಕ್ರಿ.ಶ. ೧೦೭೯-೮೦ರ ಅರಕಲಗೂಡು ಶಾಸನದಲ್ಲಿ[೩೭] ರಾಜೇಂದ್ರ ಪ್ರಥ್ವೀಕೊಂಗಾಳ್ವನನ್ನು 'ಅದಟರಾದಿತ್ಯ ತ್ರಿಭುವನಮಲ್ಲ' ಎಂದು ಉಕ್ತ ಮಾಡಿದೆ. ಹೊಳೆನರಸೀಪುರ ತಾ. ಶಾಸನ (ಕ್ರಿ.ಶ. ೧೧-೧೨ ಶತಮಾನ)ದಲ್ಲಿ 'ಶ್ರೀಮನ್ಮಹಾಮಂಡಳೇಶ್ವರನಧಟರಾದಿತ್ಯ ತ್ರಿಭುವನಮಲ್ಲ ಚೋಳ ಕೊಂಗಾಳ್ವ' ಎಂದಿದೆ.[೩೮] ಕೃಷ್ಣರಾಜನಗರದ ಎರಡೂ ಶಾಸನಗಳಲ್ಲಿ 'ತ್ರಿಭುವನಮಲ್ಲ ಕೊಂಗಾಳ್ವದೇವ' ಎಂಬ ಹೆಸರಿನ ರೂಪವಿದ್ದು ಅರಕಲಗೂಡು ಶಾಸನದಲ್ಲಿ 'ರಾಜೇಂದ್ರಪೃಥ್ವೀ ಕೊಂಗಾಳ್ವ' ಎಂದಿದ್ದು, ಬಿರುದು 'ಅದಟರಾದಿತ್ಯ ತ್ರಿಭುವನಮಲ್ಲ' ಎಂದಿರುವುದನ್ನು ನೋಡಿದರೆ ಹಾಗೂ ಹೊಳೆನರಸೀಪುರ ಶಾಸನದಲ್ಲಿ ಕೊಂಗಾಳ್ವ ದೊರೆಗೆ ಅದೇ ಬಿರುದಿರುವಲ್ಲಿ ಎರಡೂ ಹೆಸರುಗಳು ಈ ಕೊಂಗಾಳ್ವ ದೊರೆಗಿದ್ದುವೇ? ಅಥವಾ ಅವರು ಕೊಂಗಾಳ್ವ ವಂಶದ ರಾಜ ಮತ್ತು ಯುವರಾಜರೇ ಎಂಬ ಅನುಮಾನ ಒದಗುತ್ತದೆ. ಅಲ್ಲದೆ ಬಿರುದುಗಳು ಚಾಲುಕ್ಯರ ಪ್ರಭಾವದ್ದಾಗಿದ್ದರೆ, ಕಲ್ಯಾಣಿ ಚಾಲುಕ್ಯರಿಗೆ ಕೊಂಗಾಳ್ವರು ನಿಷ್ಠೆ ತೋರಿದರು ಅಂದರೆ ಮಾಡಲಿಕರಾದರು ಎನ್ನಬಹುದು. ಹೀಗಾಗಿ ಶೌರ್ಯಸೂಚಕ ಹಾಗೂ ಮಾಂಡಲಿಕಸೂಚಕ ಬಿರುದುಗಳಾಗಿ ಕೊಂಗಾಳ್ವ ದೊರೆಗಳಿಗೆ ಅದು ಅಂಟಿತ್ತು ಎನ್ನಬಹುದು. ಈ ಪೃಥ್ವೀ ಕೊಂಗಾಳ್ವನು ೬ನೇ ವಿಕ್ರಮಾದಿತ್ಯನಿಗೆ ಮಾಂಡಲಿಕನಾಗಿ 'ತ್ರಿಭುವನಮಲ್ಲ' ಎಂಬ ಬಿರುದು ಧರಿಸಿದನೆನ್ನಲಾಗಿದೆ (ಕೊಡಗು ಜಿಲ್ಲಾ ಗ್ಯಾಸೆಟಿಯರ್, ೧೯೯೨, ಪು. ೭೩) ಅಂದರೆ ಕೊಡಗಿನ ಪ್ರದೇಶವೂ ಕೆಲಕಾಲ ಕಲ್ಯಾಣಿ ಚಾಲುಕ್ಯರ ಆಳ್ವಿಕೆಗೆ ಮಾಂಡಲಿಕರ ಮೂಲಕ ಸೇರಿತ್ತು, ಎನ್ನುವುದಾಗುತ್ತದೆ.

ಇಂದು ಹಾಸನ ಜಿಲ್ಲೆಯಲ್ಲಿರುವ ಶಾಸನಗಳ ಪೈಕಿ. ಅರಕಲಗೂಡಿನ ಕ್ರಿ.ಶ. ೧೦೨೬ರ ಹೆಣ್ಣೂರು ಶಾಸನದಲ್ಲಿ[೩೯] ರಾಜೇಂದ್ರಚೋಳ ಕೊಂಗಾಳ್ವನು ಮುಣ್ಡಪೊಯ್ಸಳನ ಮೇಲೆ ಏರಿ ಹೋಗಿ ಮಣ್ಣೆಯ ಕಾಳಗದಲ್ಲಿ ಗೆದ್ದು ಇರ್ಗ್ಗಡಲಕೋಟೆಯನ್ನು ವಶಪಡಿಸಿಕೊಂಡ ವಿಷಯವಿದೆ. ಹಾಗು 'ಕೊಂಗಳಾಚಾರಿ' ಎಂಬ ವ್ಯಕ್ತಿನಾಮವೂ ಇದೆ. ಅರಕಲಗೂಡಿನ ಇನ್ನೊಂದು ಶಾಸನದಲ್ಲಿ ಇದೇ ದೊರೆಯ ಕಾಲದ ವೀರಗಲ್ಲು ಶಾಸನದಲ್ಲಿ ಕೊಂಗಳ ಗಾವುಣ್ಡನೆಂಬ ಊರನಾಯಕನ ಅಧಿಕಾರವನ್ನು ಪ್ರಸ್ತಾಪಿಸಿದೆ.[೪೦] ಶಾಸನವು ಇರುವ ಸ್ಥಳನಾಮವಾದ 'ಕೊಂಗಳಲೆ' 'ಗಮನಾರ್ಹವಾಗಿದ್ದು. ಅದು ಕೊಂಗಾಳ್ವ ಮೂಲದ್ದೆನಿಸುತ್ತದೆ. ಕ್ರಿ.ಶ. ೧೦೬೬ರ ಮಲ್ಲಿಪಟ್ಟಣ ಶಾಸನವು[೪೧] ರಾಜೇಂದ್ರ ಪೃಥ್ವಿ ಕೊಂಗಾಳ್ವ ನಾಳಿಕೆಯಲ್ಲಿ ಪಳಿಗವೆರ್ಗ್ಗಡೆಯು ಇಡಿಗ್ಗುಳೂರ (ಉಳುಮೇಶ್ವರ!) ದೇವಾಲಯ ಮಾಡಿಸಿ ಮುಲೆಯಾಳಜೀಯರ್ ನಲ್ಲೂರ್ಪಳ್ಳಿ ನೀಲಕಂಠ ರವಿಭಟಾರರಿಗೆ ಗ್ರಾಮವನ್ನೂ ಧಾರೆಎರೆದು ಕೊಟ್ಟಿರುವ ಸಂಗತಿಯಿಂದಾಗಿ ಕೊಂಗಾಳ್ವರು ಜೈನರಾಗಿದ್ದರೂ,

ಧರ್ಮಸಮನ್ವಯ ಜನಜೀವನವನ್ನು ಉತ್ತೇಜಿಸಿದುದರ ಸಂಕೇತವಿದಾಗುತ್ತದೆ. ಇದೇ ದೊರೆಯ ಆಳ್ವಿಕೆಯಲ್ಲಿ ಸುಳುಗೋಡು ಸೋಮವಾರ ಗ್ರಾಮದ ಬಸದಿ ಶಾಸನವು ಕ್ರಿ.ಶ. ೧೦೭೯-೮೦ ರಲ್ಲಿ ಅದಟರಾದಿತ್ಯ ಚೈತ್ಯಾಲಯದ ದೇವಾರಾಧನೆಗೆ ಹಾಗು ಮೂಲಸಂಘದ ಕಾಣೂರ್ಗ್ಗಣದ ತಗರಿಗಲ್ಗಚ್ಛದ ಗಣ್ಡವಿಮುಕ್ತ ಸಿದ್ಧಾಂತದೇವರಿಗೆ ಬಸದಿಯನ್ನು ನಿರ್ಮಿಸಿ ತಳೆಗಳನಿಯ ಭೂಮಿಯನ್ನು ದಾನವಾಗಿ ಕೊಟ್ಟ ವಿಷಯವನ್ನು ಹೇಳಿದೆ.[೪೨] 'ಕೊಂಗಾಳ್ವ ಜೈನಗೃಹಂ ನಾಡೆ ಬೆಡಂಗುವೆತ್ತದಟರಾದಿತ್ಯಾವ ನೀನಾಥ ಕೀರ್ತಿಗಡರ್ಪ್ಪಿರ್ಪ್ಪ ವೋಲಾರ್ಪ್ಪು ತೋರ್ಪ್ಪುದೆನೆ ಮತ್ತವಣ್ಣೆಪಂ ಬಣ್ಣಿಪಂ' (The elegance of Kongalva Jina temple which was a support to the fame of Adataraditya) ಎಂಬ ಕಾವ್ಯಮಯವಾದ ವರ್ಣನೆಯೂ ಜೈನಬಸದಿಗಿರುವುದು ಕೊಂಗಾಳ್ವರ ಜೈನಸಮಯದ ಪ್ರೀತಿ ಹಾಗೂ ಭಕ್ತಿಯ ದ್ಯೋತಕವಾಗಿದೆ. ಅ.ಗೂ.ತಾ ದೊಡ್ಡ ಬೆಮ್ಮತ್ತಿ ಶಾಸನ ದಲ್ಲಿಯೂ[೪೩] ಈ ದೊರೆಯ ಆಳ್ವಿಕೆ ಹೇಳುತ್ತ ಬೆಟ್ಟಮತ್ತಿಯ ಮಾಕಬ್ಬೆ ಪ್ರತಿಷ್ಠಿಸಿದ ಆದಿತ್ಯದೇವರಿಗೆ, ಈ ದೊರೆಯು ನೈವೇದ್ಯ ಕಾರ್ಯಕ್ಕೆಂದು ಭೂದಾನ ಬಿಟ್ಟ ಸಂಗತಿ ತಿಳಿಸಿದೆ. ಕ್ರಿ.ಶ. ೧೦೯೪ರ ಚಿಕ್ಕ ಬೆಮ್ಮತ್ತಿ ಶಾಸನವು[೪೪] ರೇಚಿಸೆಟ್ಟಿಯು ನಿರ್ಮಿಸಿದ ಪೊಲ್ಲೇಶ್ವರ (ಪಲ್ಲಾದಿತ್ಯದೇವರು) ದೇಗುಲದಲ್ಲಿ, ಅವನ ಮೊಮ್ಮಗಳು ಚರುವಕಬ್ಬೆಯು ನಂದಿಮಂಟಪ, ಭೈರವದೇಗುಲ, ಭಗವತಿ, ನಾರಾಯಣ ಹಾಗು ಇತರ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದ ಸಂಗತಿ ಈ ಕೊಂಗಾಳ್ವ ದೊರೆಯ ಕಾಲದಲ್ಲಿ ನಡೆದಿದೆ. ಅಂದರೆ ಕೊಂಗಾಳ್ವರು ಸೂರ್ಯವಂಶಿಗಳೆಂದೂ ಹೇಳಿಕೊಂಡಿರುವುದರಿಂದ, *ಅದಟರಾದಿತ್ಯ ಚೈತ್ಯಾಲಯ, ಆದಿತ್ಯದೇಗುಲ, ಪಲ್ಲಾದಿತ್ಯ ದೇಗುಲದ* ವಿವರಗಳನ್ನು *'ಆದಿತ್ಯ'* ಶಬ್ದದ ಸಹಿತ ಗಮನಿಸಿದರೆ. ಜಿನಾಲಯ ಹಾಗು ಇತರ ದೇಗುಲಗಳಲ್ಲಿ ಸೂರ್ಯದೇವರ ಪ್ರತಿಷ್ಠೆಯನ್ನು, ಪೂಜೆಯನ್ನು ಅವರು ಉತ್ತೇಜಿಸಿರುವಂತೆ ತೋರುತ್ತದೆ.

೧೧ನೇ ಶತಮಾನದ ಮರೂರು ಶಾಸನದಲ್ಲಿ[೪೫] ವೀರಕೊಂಗಾಳ್ವನ ಮಹಾಪ್ರಧಾನ ಬಮ್ಮದೇವ ಯಂಕೇಶ್ವರ (ಅರ್ಕೇಶ್ವರ) ದೇವರಿಗೆ ದೇವದಾನ ನೀಡಿದ ಸಂಗತಿ ಇದ್ದು ಕೊಂಗಾಳ್ವನು ಮೊಳತೆಯಬೀಡಿನಲ್ಲಿ ಆಳುತ್ತಿದ್ದ ವಿಷಯವಿದೆ; ಹೊಳೆನರಸೀಪುರದ ೧೧ನೇ ಶತಮಾನದ ಶಾಸನದಲ್ಲಿ[೪೬] ಈ ವೀರಕೊಂಗಾಳ್ವದೇವನು ಸತ್ಯವಾಕ್ಯ ಜಿನಾಲಯವನ್ನು ಮಾಡಿಸಿ ಹೆಣ್ಣೆಗಡಲು ಎಂಬ ಗ್ರಾಮದಾನ ನೀಡಿರುವ ಹಾಗು ಜೈನಗುರು ಪ್ರಭಾಚಂದ್ರ ಸಿದ್ಧಾಂತದೇವರ ಶಿಷ್ಯನಾಗಿದ್ದ ಬಗ್ಗೆಯೂ ತಿಳಿಸಲಾಗಿದೆ. ಇದು ಕೊಂಗಾಳ್ವರ ಜಿನಧರ್ಮದ ಅನುಸರಣೆಯ ಸಂಕೇತವೇ ಆಗಿದೆ. ಆದರೆ ಹೊಳೇನರಸೀಪುರದ ಇನ್ನೊಂದು ಶಾಸನದಲ್ಲಿ[೪೭] ಪ್ರಭಾಚಂದ್ರದೇವರ ಶಿಷ್ಯನೆಂಬ ಹಾಗು ಹೆಣ್ಣೆಗಡಲ ಗ್ರಾಮದಾನ ಮಾಡಿರುವ 'ವೀರಕೊಂಗನೃಪ' ಎಂಬ ಹೆಸರು, ವೀರಕೊಂಗಾಳ್ವದೇವನಿಗೇ ಅನ್ವಯ ಎಂದರೆ, ಅದು ಅವನಿಗಿದ್ದ ಎರಡನೇ ಹೆಸರು ಎಂದಾಗುತ್ತದೆ; ಇಲ್ಲವೆಂದರೆ ವಂಶಾವಳಿಯಲ್ಲಿನ ಇನ್ನೊಬ್ಬ ದೊರೆಯ ಅಸ್ತಿತ್ವವನ್ನು ಹೇಳುತ್ತದೆ ಎನ್ನಬೇಕು. ಕ್ರಿ.ಶ. ೧೧೭೧ರ ಮೂಡಲಹಿಪ್ಪೆ ಶಾಸನದಲ್ಲಿ[೪೮] ವೀರದುದ್ದ ಕೊಂಗಾಳ್ವನು (ಹಾಸನಜಿಲ್ಲೆ) ಮೊಳತೆ ಬೀಡಿನಲ್ಲಿ ರಾಜ್ಯವಾಳುತ್ತಿದ್ದ ಬಗ್ಗೆ ಹೇಳಿದೆ. ಅಂದರೆ ಕೊಂಗಾಳ್ವರ ಉಪರಾಜಧಾನಿ ಹಾಗು ವಂಶದ ಇನ್ನೊಬ್ಬ ದೊರೆ **ವೀರದುದ್ದ ಕೊಂಗಾಳ್ವನನ್ನು** ಪ್ರಸ್ತಾಪಿಸಿದಂತಾಗುತ್ತದೆ. ಮೂಡಲಹಿಪ್ಪೆಯ ಈಶ್ವರ ದೇಗುಲದ ಕ್ರಿ.ಶ. ೧೧೭೭ರ ಇನ್ನೊಂದು ಶಾಸನವೂ ವೀರದುದ್ದ ಕೊಂಗಾಳ್ವ ದೇವವನ್ನು ಪ್ರಸ್ತಾಪಿಸುತ್ತದೆ. ಕೊಡಗಿನಲ್ಲಿ ಕ್ರಿ.ಶ. ೧೧೭೫ರ ಸುಮಾರಿಗೆ ಇವರ ಅಸ್ತಿತ್ವ ಮುಗಿಯೆಂತೆಂದರೂ, ಹಾಸನ ಜಿಲ್ಲೆಯಲ್ಲಿ (ಬಹುಶಃ ಅಂದಿನ ಕೊಡಗಿನ ಭಾಗಗಳಲ್ಲಿ) ಕೊಂಗಾಳ್ವರ ಅಸ್ತಿತ್ವ ಮುಂದುವರಿದುದರ ಕುರುಹು ಈ ಶಾಸನಗಳಿಂದ ಕಾಣುತ್ತದೆ. ಮೊಳತೆಯಬೀಡು ಅಂದಿನ ಕೊಡಗಿಗೆ ಸೇರಿದ್ದಿರಬೇಕೆನಿಸುತ್ತದೆ. ೧೧-೧೨ನೇ ಶತಮಾನದ ಅರಕಲಗೂಡು ತಾ. ಸುಳುಗೋಡು ಸೋಮವಾರ ಗ್ರಾಮದ ಶಾಸನ ಹಾಗು ಹೊಳೇನರಸೀಪುರ ತಾ. ಅಂಕನಾಥಪುರ ಶಾಸನದಲ್ಲಿ.[೫೦] ದುದ್ದಮಲ್ಲರಸನ (ದುದ್ದಮಲ್ಲದೇವ) ಹೆಸರು ಜಿನಾಲಯ ನಿರ್ಮಿಸುವಲ್ಲಿ ಹಾಗು ಗ್ರಾಮದಾನ ಮಾಡುವಲ್ಲಿ ಬಂದಿದ್ದು ಕೊಂಗಾಳ್ವ ವಂಶಿಕನೆಂದು ಶಾಸನ ಸಂಪುಟವು ಪರಿಗಣಿಸಿದೆ.[೫೦] ಆದರೆ 'ಕೊಂಗಾಳ್ವ' ಎಂಬ ಉಪಾಧಿ ಅಲ್ಲಿ ಕಾಣಬರುವುದಿಲ್ಲ. ಕೊಡಗಿನ ಕ್ರಿ.ಶ. ೧೦೯೫ರ ಯಡೂರು ಶಾಸನದಲ್ಲಿಯೂ 'ದುದ್ದರಸ' ಎಂಬ ಶಿವಾರಾಧಕ ಹಾನಗಲ್ಲು ಕದಂಬರ ಪೈಕಿಯ ಅರಸನ ಹೆಸರಿದೆ. ಆ ಶಾಸನ ಸೂಚಿತ ಕಾಲದಲ್ಲಿಯೇ ಅವನು ತೀರಿದ್ದ ಕಾರಣ ಈ ದುದ್ದಮಲ್ಲರಸ ಅವನಿಂದ ವಿಭಿನ್ನನಾಗಿರುವಂತಿದೆ. ಕೊಡಗಿನಲ್ಲಿಯಂತು ಸೋಮವಾರಪೇಟೆ ತಾಲೂಕು ಹಾನುಗಲ್ಲು ತಾಕೇರಿ ಮಾರ್ಗದಲ್ಲಿ 'ದುದ್ದಗಲ್ಲು' ಎಂಬ ಗ್ರಾಮವಿದೆ. ಅದು ಹಾನುಗಲ್ಲು ಕದಂಬ ವಂಶಿಕ ಅರಸನ ನೆನಪಿನದೋ ಅಥವಾ ಕೊಂಗಾಳ್ವರ ದುದ್ದಮಲ್ಲರಸನ ಸಂಬಂಧದ್ದೋ ಎಂಬುದು ಸ್ಪಷ್ಟವಿಲ್ಲ. ಬಹುತೇಕ 'ಯಡೂರು ದುದ್ದರಸನಿಗೇ (ಹಾನುಗಲ್ಲು ಕದಂಬವಂಶಿಕನಾಗಿ) ಹಾನುಗಲ್ಲು ಗ್ರಾಮದ ಸಮೀಪವಿರುವ ಕಾರಣ ಅನ್ವಯವಿರಬೇಕು.

ಅರಕಲಗೂಡು ತಾ. ೧೧ನೇ ಶ.ದ ಮುಗುಳೂರು ಶಾಸನದಲ್ಲಿ[೫೧] ಪ್ರಥಿವೀಕೊಂಗಾಳ್ವನ ಹೆಸರು ಬಂದಿರುವಲ್ಲಿ ಅದು ರಾಜೇನ್ದ್ರ ಪ್ರಥ್ವೀ ಕೊಂಗಾಳ್ವನಿಗೆ ಅನ್ವಯವೇ ಅಥವಾ ಕೊಂಗಾಳ್ವರ ಇನ್ನೊಬ್ಬದೊರೆಗೆ ಅನ್ವಯವೇ ಎಂಬುದು ಸ್ಪಷ್ಟವಿಲ್ಲ. ೧೧-೧೨ನೇ ಶತಮಾನದ ಜೋಡಿಕುಪ್ಪೆ ಶಾಸನದಲ್ಲಿ[೫೨]

ಚಂಗಾಳ್ವರಿಗು ಕೊಂಗಾಳ್ವರಿಗೂ ನಡೆದ ಯುದ್ಧದ ಸಂದರ್ಭವಿದ್ದರೆ ಅಂಕನಾಥಪುರ ಶಾಸನದಲ್ಲಿ '**ಕದಂಬ ಕುಲಾನ್ತಕ ತೆಂಗಾಳ್ವ**' ಎಂದಿದೆ,[೫೩] ವಿನಾ ಕ್ರಿ.ಶ. ೧೨೧೩ರ ದೊಡ್ಡಮಗ್ಗೆ ಶಾಸನೋಕ್ತ[೫೪] ಮೊಳತೆ ಬೀಡಿನಲ್ಲಿ ಆಳುತ್ತಿದ್ದ ರಾಜೇಂದ್ರ ಬಿಲ್ಲ ಕೊಂಗಾಳ್ವನ ಹೆಸರೇ ಆ ಅವಧಿಯಲ್ಲಿ ಶಾಸನ ಸಂಪುಟವು (ಪು.xxix) ನಮೂದಿಸಿರುವಂತೆ ಬರುವುದಿಲ್ಲ.. ಜೊತೆಗೆ ಅಮೃತೇಶ್ವರ ಹಾಗು ಮಲ್ಲಿನಾಥದೇವರಿಗೆ ಬಿಲ್ಲುಬೇಟೆಯ ಚಿಕ್ಕನಾಯಕ ಅಂಕೆಯಕ್ಕ ಹಾಗು ಸಮಸ್ತ ಪ್ರಜೆಗವುಡುಗಳು ಭೂದಾನವಿತ್ತ ಬಗ್ಗೆ ಪ್ರಸ್ತಾಪವಿದೆ. ಈ ಅಂಶಗಳು ಚಂಗಾಳ್ವರಿದ್ದಾಗ, ಕೊಂಗಾಳ್ವರು ಮಾಲವ್ವಿಯಿಂದ ರಾಜ್ಯವಾಳುತ್ತಿದ್ದರೂ ಅಂದಿನ ಕೊಡಗಿನ ಭಾಗಗಳಲ್ಲಿ ಅವರ ನಡುವೆ ಯುದ್ಧ ನಡೆದ ಸಂಗತಿ ಇದ್ದರೂ ಕ್ರಿ.ಶ. ೧೧೭೬ರ ವರೆಗಿನ ಅವರ ಅಲ್ಲಿನ ಅಸ್ತಿತ್ವ ಇದ್ದೇ ಇತ್ತು, ಎಂದು ತಿಳಿಸುವಂತಿವೆ. ಬಹುಶಃ ಈ ಯುದ್ಧಗಳ ಕಾರಣ ಮಾಲಂಬೀ (ಮಾಲವ್ವಿ)ಯಿಂದ ಮೊಳತೆಬೀಡಿಗೆ ಕೊಂಗಾಳ್ವರು ರಾಜಧಾನಿಯನ್ನು ಬದಲಾಯಿಸಿಕೊಂಡಂತಿದೆ. 'ಕದಂಬ ಕುಲಾನ್ತಕ ತೆಂಗಾಳ್ವ', ಎಂದಿರುವ ಕಾರಣ ಹಾನುಗಲ್ಲು ಕದಂಬ ಶಾಖೆಯ ಕೊಡಗಿನ ಕದಂಬರನ್ನು ಅವರು ಸೋಲಿಸಿರಬಹುದೇ ಎನಿಸುತ್ತದೆ. ಆದರೆ ಕೊಡಗಿನ ಕ್ರಿ.ಶ. ೧೦೯೫ರ ಯಡೂರು ಶಾಸನದಲ್ಲಿ[೫೫] ಹಾನುಗಲ್ಲು ಕದಂಬ ಶಾಖೆಯ 'ದುದ್ದರಸ'ನ ಯುದ್ಧ ಪ್ರಸಕ್ತಿಕಾಣದೆ ಧರ್ಮ್ಮವೆಸಗಿ ಶಿವಲೋಕ ಪ್ರಾಪ್ತನಾಗಲ್ ಎಂದಷ್ಟೇ ಇದ್ದು ಅವನ ತಮ್ಮ ಜುಂಜರಸ ಪರೋಕ್ಷ ವಿನಯದಲ್ಲಿ ಶಾಸನ ಹಾಕಿಸಿದ ವಿಷಯವಿದೆ. ಇದು ವೀರಶಾಸನವೆಂದಿರುವ ಕಾರಣ ಯುದ್ಧದ ಸಂದರ್ಭ ವಾಗಿತ್ತು ಎನ್ನುವುದಾದರೆ 'ತೆಂಗಾಳ್ವ'ನು ದುದ್ದರಸನನ್ನು ಸೋಲಿಸಿದನೆನ್ನಬೇಕಾಗುತ್ತದೆ. ಈ ತೆಂಗಾಳ್ವನು ಕೊಂಗಾಳ್ವ ವಂಶಿಕ ಎಂಬುದು ಶಾಸನದಿಂದ ಸ್ಪಷ್ಟವಿಲ್ಲ. ಅಲ್ಲದೆ ಶಾಸನದ ಕಾಲವನ್ನು ೧೧-೧೨ನೇ ಶತಮಾನವೆಂದಿರುವ ಕಾರಣ ದುದ್ದರಸನೊಡನೆ ಕಾಳಗಕೊಟ್ಟವನು ಇವನೇ ಎಂಬುದಕ್ಕೆ ಇನ್ನಷ್ಟು ಆಧಾರಗಳು ಬೇಕಾಗುತ್ತದೆ. ಇಲ್ಲವೆ ಹಾಸನ ಜಿಲ್ಲೆಯಲ್ಲಿದ್ದ ಹಾನುಗಲ್ಲು ಕದಂಬ ಶಾಖೆಯವರನ್ನು (ಮಂಜರಾಬಾದ್ ಕದಂಬರ ಪೈಕಿಯ ದೊರೆಯೊಬ್ಬನನ್ನು) 'ತೆಂಗಾಳ್ವನು' ಸೋಲಿಸಿರುವ ಸಾಧ್ಯತೆಯನ್ನು ಹೇಳಬಹುದು. ಈ 'ತೆಂಗಾಳ್ವನು' ಧ್ವನಿಸಾಮ್ಯದ ದೃಷ್ಟಿಯಿಂದ 'ಚೆಂಗಾಳ್ವನು' ಎಂದರೆ ಹಾನುಗಲ್ಲು ಕದಂಬ ಹಾಗು ಚಂಗಾಳ್ವರ ನಡುವಣ ಯುದ್ಧವೆನಿಸುತ್ತದೆ. ಆದರೆ ಯಡೂರಿಗೆ ಸನಿಹವೆನ್ನಬಹುದಾದ ಚಿಕ್ಕತೋಳೂರಿನ ಕೊಂಗಾಳ್ವರ ಶಾಸನವು ಈಚೆಗೆ ಬೆಳಕಿಗೆ ಬಂದಿದ್ದು ಅವರ ಆಳ್ವಿಕೆ ವಿಷಯವಿರಲು, 'ಕೊಂಗಾಳ್ವರ ಸಂದರ್ಭವನ್ನು ಮತ್ತೆ ಪರಿಶೀಲಿಸಬೇಕಾಗುತ್ತದೆ. ಕೊಂಗಾಳ್ವರು ಬಹುಶಃ ಕ್ರಿ.ಶ. ೧೧೭೬ರ ನಂತರ ಕೊಡಗಿನ ಭಾಗದಿಂದ ಪೂರ್ಣವಾಗಿ (ಇಂದಿನ ಹಾಸನ ಜಿಲ್ಲೆಗೆ) ರಾಜಧಾನಿಯನ್ನು ವರ್ಗಾಯಿಸಿಕೊಂಡು ಮೊಳತೆ ಬೀಡಿನಲ್ಲಿ ಕ್ರಿ.ಶ. ೧೨೧೩ರ ಮೊದಲ ದಶಕದ ಸುಮಾರಿನ ವರೆಗೂ ರಾಜ್ಯವಾಳಿರುವಲ್ಲಿ ೧೩ನೇ ಶತಮಾನದವರಿವಿಗೂ ಅವರ ಅಸ್ತಿತ್ವವಿತ್ತೆಂದಾಗುತ್ತದೆ. ಆದರೆ ಕೊಡಗಿನಲ್ಲಿ ಉದಿಸಿದ 'ನಂತರದ ಕೊಂಗಾಳ್ವರ' ವಂಶಿಕರಾಗಿ ಕೊಡಗು ಹಾಗು ಹಾಸನ ಜಿಲ್ಲೆಯ ಭಾಗಗಳನ್ನು ಅವರು ಆಳಿದರು. ೧೩ನೇ ಶತಮಾನದಲ್ಲಿ ಅವರು ಶಿವಪರವಾದುದೂ ಸೂಚನೆಗೊಳ್ಳುತ್ತದೆ. ಅದಕ್ಕೆ ಮೊದಲು ಕೊಡಗಿನಲ್ಲಾಗಲಿ ಹಾಸನ ಜಿಲ್ಲೆಯಲ್ಲಾಗಲಿ ಅವರು ಬಹುತೇಕ ಜಿನಸಮಯವನ್ನೆ ಪರಿಪಾಲಿಸುತ್ತಿದ್ದುದು ಕಾಣಬರುತ್ತದೆ. ಇನ್ನು ತೇದಿ ಇಲ್ಲದೆ ಅರಕಲಗೂಡು ತಾ. ಕೃಷ್ಣರಾಜಕಟ್ಟೆಯ ವೀರಗಲ್ಲು ಶಾಸನದಲ್ಲಿ[೫೬] 'ಬಡಿವಕೊಂಗಾಳ್ವ' ಎಂಬ ಹೆಸರು ಬಿರುದು ಸಹಿತವಾದದ್ದು ಎನಿಸುತ್ತದೆ; ೧೧ನೇ ಶತಮಾನದ ವೀರ ಕೊಂಗಾಳ್ವನಿಗೆ ಅನ್ವಯವಾಗುವಂತಿದೆ. ಆ ಶಾಸನದಲ್ಲಿ ಬರುವ 'ಬಡಿವ ಕೊಂಗಾಳ್ವ ಸೇನವಾಡರಿಚಟುಲಂ' ಎಂಬಲ್ಲಿ ಕೊಂಗಾಳ್ವರ ಸೈನ್ಯವಾಡವು ಶತ್ರುಭಯಂಕರವಾಗಿತ್ತು ಎಂಬರ್ಥ ಬರಬಹುದು! ಕೊಡಗಿನ ಕೊಂಗಾಳ್ವ ವಂಶಿಕ ದೊರೆಗಳ ಆಳ್ವಿಕೆಯ ವಿಸ್ತಾರವನ್ನು ಗಮನಿಸಬೇಕಾದ ಕಾರಣ ಈ ಮೇಲಿನ ಶಾಸನೋಕ್ತ ವಿಷಯಗಳನ್ನು ಪರಿಶೀಲಿಸಲಾಯಿತು. ಈ ಹಿನ್ನೆಲೆಯಲ್ಲಿ ಕೊಂಗಾಳ್ವರ ವಂಶಾವಳಿಯನ್ನು ಪುನಾರಚಿಸಬೇಕಾಗುತ್ತದೆ.

ಕೊಡಗಿನ ಪ್ರಕಟಿತ ೧೨ ಹಾಗು ಹೊಸ ೩ ಶಾಸನಗಳು ಸೇರಿದಂತೆ ೧೫ ಕೊಂಗಾಳ್ವರ ಶಾಸನಗಳ ಪೈಕಿ ೧೧ನೇ ಶತಮಾನದ ಮಾಲಂಬಿ ಶಾಸನವು 'ಮನಿಜ'ನ ಮೂಲಕ ಕೊಂಗಾಳ್ವರ ಕೊಡಗಿನಸ್ತಿತ್ವವು ಆರಂಭವಾದ ಬಗ್ಗೆ ಹೇಳಿದೆಯಷ್ಟೆ. ಇದು ಚೋಳರು ಕ್ರಿ.ಶ. ೧೦೦೪ರ ಸುಮಾರಿನಲ್ಲಿ ಗಂಗರನ್ನು ಪನಸೋಗೆಯಲ್ಲಿ ನಿರ್ಣಾಯಿಕವಾಗಿ ಸೋಲಿಸಿದ ಮೇಲೆ ಘಟಿಸಿದ ಸಂಗತಿ. ಮಾಲಂಬಿ ಸುತ್ತಲಿನ ಏಳು ಸಾವಿರ ಸೀಮೆ ಮನಿಜನ ಅಧೀನಕ್ಕೆ ಬಂದ ಪ್ರದೇಶವೆಂದು ಶಾಸನ ಸಂಪುಟವು ಅಭಿಪ್ರಾಯಿಸಿದೆ (ಎ.ಕ. ಸಂ ೧, ಪ್ರಸ್ತಾವನೆ, ಪು. xxxii). ಈ ಏಳು ಸಾವಿರ ಸೀಮೆಯ ಅಂದಿನ ವ್ಯಾಪ್ತಿಗೆ ನಂಜರಾಯಪಟ್ಟಣ ಪ್ರದೇಶದ ಭಾಗವೂ ಇತ್ತೇ ಎಂಬುದು ಸ್ಪಷ್ಟವಿಲ್ಲ. ಚೋಳರು ನಂಜರಾಯಪಟ್ಟಣ ಪ್ರದೇಶದ ಕಾವೇರಿಯ ಪೂರ್ವದಂಡೆಯಲ್ಲಿ 'ಚೋಳ ಪ್ರತಿಷ್ಠಾ ವೀರಭದ್ರ'ನನ್ನು ಸ್ಥಾಪಿಸಿದರೆಂದಿರುವುದರಿಂದ [ಕೊಡಗು ಜಿಲ್ಲಾ ಗ್ಯಾಸೆಟಿಯರ್ (ಸಂ) ಬಿ. ಎನ್. ಸತ್ಯನ್, ೧೯೬೫ ಪು. ೪೫] ಕೊಡಗು ಶ್ರೀರಂಗಪಟ್ಟಣವನ್ನು ಕೆಲಸಮಯದಲ್ಲಿ ರೂಪಿಸಿರುವ ಕಾರಣ, ಹಾಗು ಜೈನಧರ್ಮಿ ಕೊಂಗಾಳ್ವರ ಪುನರುತ್ಥಾನವಾಗಿರುವಲ್ಲಿ ನಂಜರಾಯಪಟ್ಟಣದಲ್ಲಿ ಭಿನ್ನಗೊಂಡ ಜಿನನ ಶಿಲ್ಪವೂ, ಬಸದಿಯೂ ಇದ್ದ ಅವಶೇಷಗಳು

ಕಾಣಬರುವಲ್ಲಿ, ಈ ಪ್ರದೇಶದ ಉಸ್ತುವಾರಿಯನ್ನು ಚೋಳರು ಕೊಂಗಾಳ್ವರಿಗೆ ಆರಂಭಕ್ಕೆ ವಹಿಸಿರುವಂತೆ ತೋರುತ್ತದೆ. ಕೊಡಗಿನ ಈ ಕೊಂಗಾಳ್ವರನ್ನು ಹಿಂದೆ ಪುರಾವೆಗಳಿಂದ ಚರ್ಚಿಸಿರುವ ಹಿನ್ನೆಲೆಯಲ್ಲಿ 'ನಂತರದ ಕೊಂಗಾಳ್ವರು' ಎನ್ನಬೇಕಾಗುತ್ತದೆ. ಮಾಲಂಬಿ ಶಾಸನವು ಮುಖ್ಯವಾಗಿ ಕೊಂಗಾಳ್ವರ 'ಕ್ಷತ್ರಿಯತ್ವ'ವನ್ನು ಪ್ರಸ್ತಾಪಿಸಿ ರಾಜಧಾನಿಯನ್ನು ನಿರ್ದಿಷ್ಟಗೊಳಿಸಿದೆ. ಈ ಮಾಲಂಬಿ ಅವರ ಮೊದಲ ರಾಜಧಾನಿಯಾಗಿತ್ತು; ಪಟ್ಟದ ಅಧಿಕೃತ ನೆಲೆ ಆಗಿತ್ತು.

೧೧ನೇ ಶತಮಾನದ ಮೆಣಸ ಶಾಸನದಲ್ಲಿ[೫೭] 'ಕೊಂಗ್ಗಾಳ್ವ' ರಾಜ್ಯಂಗೆಎ ಎಂದಿದ್ದರೂ. ಯಾವ ಕೊಂಗಾಳ್ವ ದೊರೆ, ಎಂದು ನಿರ್ದಿಷ್ಟಗೊಳ್ಳುವುದಿಲ್ಲ. ಮಾಲಂಬಿ ಶಾಸನದ 'ಪಂಚವನ್ ಮಹಾರಾಯನು' ಒಂದನೇ ರಾಜರಾಜನ ಮಗ ಚೋಳಯುವ ರಾಜ ರಾಜೇಂದ್ರ ಚೋಳನೆಂಬ ಊಹೆಯನ್ನು (ಶಾಸನಸಂಪುಟ: ಪ್ರಸ್ತಾವನೆ ಪು.xxxi) ಪರಿಗಣಿಸಿದರೆ: 'ಮನಿಜನನ್ನು', 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ'ನೆಂದು ಪಟ್ಟಗಟ್ಟಿರುವಲ್ಲಿ. ರಾಜೇಂದ್ರ ಚೋಳನಿಂದ ಪಟ್ಟವಾಗಿರುವಲ್ಲಿ ರೈಸರು ಊಹಿಸಿರುವ ಕ್ರಿ.ಶ. ೧೦೨೬ರ ರಾಜೇಂದ್ರಚೋಳ **ಕೊಂಗಾಳ್ವ** ದೊರೆ, ಮೆಣಸ ಶಾಸನದ 'ಕೊಂಗಾಳ್ವ' ನಿಗೂ ಅನ್ವಯಗೊಳ್ಳುತ್ತದೆಂದೆನಿಸುತ್ತದೆ. ಆದರಿಂದ ಇತಿಹಾಸದ ತಲೆಮಾರಿನ ಸಾಮಂಜಸ್ಯಕ್ಕೂ ಧಕ್ಕೆ ಬರುವುದಿಲ್ಲ. ಈ ಶಾಸನವು ತುರುಗೋಳ ವೀರಶಾಸನವಾಗಿದ್ದು, ಕಾಯ್ದು ಮಡಿದ ಸುಂದರನ್, ಕೊಮಾರನ್ ಅವರ ವೀರವೇಳೆವಾಳಿತನ ಸೂಚಿಸುವಂಥ ಅವರ ಶಿಲ್ಪಗಳೂ ಇದ್ದು ಬುಡದಲ್ಲಿ ಅವರ ಹೆಸರನ್ನು ಕೆತ್ತಲಾಗಿದೆ. ಕ್ರಿ.ಶ. ೯೧೧ರ ಗಂಗರ ಕಾಲದ ಕೊಡಗಿನ ಪ್ರಥಮ ವೀರ ವೇಳೆವಾಳಿ ಶಾಸನವಾದ ಗುಡಗೂರಿನ ಹೊಸ ಶಾಸನದಲ್ಲಿ,[೫೮] ಬರುವ ವೇಳವಾಳಿ 'ಶಕ್ರಮನ್' ಎಂಬ ಹೆಸರಿನಂತೆಯೇ ಮೆಣಸಶಾಸನದ ವೀರರ ಹೆಸರೂ ಹೋಲುವಂತಿದೆ. ಅಂಥ ವೇಳವಾಳಿ ವಂಶ ಪರಂಪರೆ ಕೊಂಗಾಳ್ವರ ಆಳ್ವಿಕೆ ಪ್ರದೇಶದಲ್ಲಿ ಮುಂದುವರಿದ ಸೂಚನೆ ಮೆಣಸ ಶಾಸನದಲ್ಲಿರುವಂತಿದೆ. ಬಹುಶಃ 'ರಾಜೇಂದ್ರ ಚೋಳ ಕೊಂಗಾಳ್ವ' ಎಂಬುದು ಈ ಹಿನ್ನೆಲೆಗಳಲ್ಲಿ ಮನಿಜನಿಗೇ ಪಟ್ಟಗಟ್ಟಿದವನ ಹೆಸರಿನ ಸ್ಮರಣೆಯ ಉಪಾಧಿಸಹಿತವಾಗಿ ಅನ್ವಯವಿರಬಹುದೆ? ಎನಿಸುತ್ತದೆ. ಕುಸುಬೂರಿನ ೧೧-೧೨ನೇ ಶತಮಾನದ ಹೊಸ ಶಾಸನದಲ್ಲಿ ಕೊಂಗಾಳ್ವರ ಆಳ್ವಿಕೆಯನ್ನು ಹೇಳಿದೆ. ಅದು ಕೋಳಾಹಳಕೊಂಗ ನಿಜಮಾನಯ ವಿಗಟಾಬ್ಬಿಚೋಳ ಕೊಂಗಾಳ್ವ, ಎಂಬ ದೊರೆ(!) ಯನ್ನೂಹೆಸರಿಸಿದೆ. ಅರಕಲಗೂಡು ತಾ. ಕ್ರಿ.ಶ. ೧೦೨೬ರ ಹೆಣ್ಣೂರು ಶಾಸನದಲ್ಲೂ, ರಾಜೇಂದ್ರಚೋಳ ಕೊಂಗಾಳ್ವನ ಆಳಿಕೆಯ ಪ್ರಸ್ತಾಪವಿರುವಲ್ಲಿ ಕೊಡಗಿನ ಇದೇ ದೊರೆಯ ಆಳ್ವಿಕೆ ಅಲ್ಲಿಯವರೆಗೆ ಇತ್ತು ಎಂದಾಗುತ್ತದೆ. ಹಾಗು ಅವನು ಮುಣ್ಡಪೊಯ್ಸಳನೆಂಬ ಹೊಯ್ಸಳ ವಂಶಿಕನ ಮೇಲೆ ಗೆಲವು ಪಡೆದ ಕೊಂಗಾಳ್ವನಾಗಿದ್ದಾನೆ. ಹೆಣ್ಣೂರು, ಕೊಡಗಿನ ಶನಿವಾರ ಸಂತೆಯ ನೆರೆಯ ಹೆಗ್ಗಡಹಳ್ಳಿ, ಎಸಳೂರು ಇತ್ಯಾದಿ ಗಡಿಗ್ರಾಮಗಳ ಸನಿಹದ ಗ್ರಾಮವೇ ಆಗಿದ್ದು, ಅಂದಿನ ಏಳುಸಾವಿರ ಸೀಮೆಯ ವ್ಯಾಪ್ತಿಯನ್ನು ಸೂಚಿಸುವಂತಿದೆ.

ಕ್ರಿ.ಶ. ೧೦೫೮ರ ಕೊಡಗಿನ ಪ್ರಸಿದ್ಧ ಜೈನಕೇಂದ್ರವಾದ ಮುಳ್ಳೂರಿನ ಪಾರ್ಶ್ವನಾಥ ಬಸದಿ ಶಾಸನದಲ್ಲಿ,[೫೯] ಉಕ್ತನಾದ ರಾಜೇಂದ್ರ ಕೊಂಗಾಳ್ವನು ಬಸದಿಗೆ ದಾನ ಮಾಡಿದ ವಿಷಯವಿದೆ. ತಲೆಮಾರಿನ ಕಾಲಾವಧಿ ಗಮನಿಸಿದರೆ ಇವನು ಎರಡನೇ ರಾಜೇಂದ್ರ (ಚೋಳ) ಕೊಂಗಾಳ್ವ ಆಗಿರುವಂತೆ ಕಾಣುತ್ತದೆ. ಇದಲ್ಲದೆ ರಾಜಾಧಿರಾಜ ಕೊಂಗಾಳ್ವ ಹಾಗು ಅವನ ಅಬ್ಬೆ ಪೋಚಬ್ಬರಸಿಯನ್ನು ಹೆಸರಿಸಿ 'ದ್ರವಿಳಗಣದ ನಂದಿಸಂಘದ ರುಂಗಳಾನ್ವಯದ ಗುಣಸೇನ ಪಣ್ಡಿತ ದೇವರ್ಗ್ಗೆ' ಕಾಜುಗ್ಗೊಂಡ ಹಳ್ಳಿ (ಕಾಂಜೋಡು ಗ್ರಾಮ) ಹಾಗು ಇತರ ಭೂದಾನವನ್ನು ಆಕೆ ಮಾಡಿದ ಬಗ್ಗೆ ಹೇಳಲಾಗಿದೆ. ಪೋಚಬ್ಬರಸಿ ಎರಡನೇ ರಾಜೇಂದ್ರ ಕೊಂಗಾಳ್ವನ ಪತ್ನಿ ಎಂದು ಶಾಸನ ಸಂಪುಟದ ಪ್ರಸ್ತಾವನೆಯಲ್ಲಿ ನಮೂದಿಸಲಾಗಿದೆ. ೧೧ನೇ ಶತಮಾನದ ಮುಳ್ಳೂರು ಪಾರ್ಶ್ವನಾಥಬಸದಿಯ ಶಾಸನಗಳಲ್ಲಿ,[೬೦] 'ರಾಜೇಂದ್ರ ಚೋಳ ಕೊಂಗ್ಗಾಳ್ವನ ಪುತ್ರ ರಾಜಾಧಿರಾಜ ಕೊಂಗ್ಗಾಳ್ವ' ಹಾಗು 'ರಾಜಾಧಿರಾಜ ಕೊಂಗಾಳ್ವನಬ್ಬೆ ಪೋಚಬ್ಬರಸಿ' ಎಂದಿದ್ದು ಜೈನಗುರು ಗುಣಸೇನ ಪಣ್ಡಿತದೇವರಿಗೆ ಬಸದಿ ಮಾಡಿಸಿ ವಾಸಸ್ಥಾನ ಸಹಿತ ದಾನವಿತ್ತ ಸಂಗತಿ ಇದೆ. ಆದರೆ ೬೯ನೇ ಶಾಸನದಲ್ಲಿ 'ರಾಜಾಧಿರಾಜ' ಎಂಬ ಹೆಸರು ಊಹಾಪಾಠ ವಾಗಿದೆ. ರಾಜೇಂದ್ರಚೋಳ ಕೊಂಗಾಳ್ವನ ಕಾಲಮಾನದ ದೃಷ್ಟಿಯಿಂದ ಸದ್ಯಕ್ಕೆ ಆ ಊಹಾಪಾಠವನ್ನು ಒಪ್ಪಿದರೆ ಅವನು ಯುವರಾಜನಾಗಿದ್ದ ಸೂಚನೆಯೂ ದೊರೆಯುತ್ತದೆ. ಕೊಂಗಾಳ್ವರಸರ ಜಿನಸಮಯದ ನಿಷ್ಠೆ ಹಾಗು ಪ್ರೋತ್ಸಾಹದ ಚಿತ್ರವೂ ಈ ಶಾಸನಗಳಿಂದ ದೊರೆಯುತ್ತದೆ.

ಕ್ರಿ.ಶ. ೧೦೭೦ರ ಹೊಸ ಹಳ್ಳಿ ಶಾಸನಗಳಲ್ಲಿ[೬೧] ರಾಜೇಂದ್ರ ಪೃತುವಿ ಕೊಂಗಾಳ್ವನು (ರಾಜೇಂದ್ರ ಪೃಥುವಿ ಕೊಂಗಾಳ್ವ) ಉಕ್ತಗೊಂಡಿದ್ದು ಹೊಷಹಳ್ಳಿ ವೀರ ಸಿದ್ದೇಶ್ವರ, ಮಹಾದೇವರಿಗೆ, ಅರ್ಚ್ಚನಾಭೋಗಕ್ಕೆ ಕೆರೆಯ ನಿರ್ವಹಣೆಗೆ ೪೦ ಗದ್ಯಾಣ ನೀಡಿದ; ಹಾಗು ೧೦ ಖಂಡುಗ ಭೂಮಿಯನ್ನು ನೀರಗಾವುಣ್ಡನಿಂದ ಕೊಂಡು ದೇವರಿಗೆ ನೀಡಿದ ವಿಷಯವಿದೆ. 'ಪತ್ತು ಖಣ್ಡುಮೆಯ ಆಡವಲಂ' ಅನ್ನು ಅರ್ಚನಾಭೋಗಕ್ಕೆ ಕೊಡಬೇಕು ಎಂದಿದೆ. ಅಂದರೆ ಕ್ಷೀರಾಭಿಷೇಕವೂ ದೇವರಿಗೆ ಈ ಭೋಗದಲ್ಲಿ ಸೇರುವುದರಿಂದ ಗೋಸಂಪತ್ತಿನ ಅಗತ್ಯವೆನಿಸುತ್ತದೆ. ಈ ಗೋವಿನ ಮೇವಿಗಾಗಿ

ಕೊಟ್ಟ ಭೂಮಿ 'ಆಡವಲಂ' ಗೋಮಾಳವಾಗಿತ್ತೆನಿಸುತ್ತದೆ. ಅದೊಂದು ರೀತಿ **ಅಡವಿ ಹೊಲ**! ಅಥವಾ ಗದ್ದೆಯ ನೆರೆಗಿರುವ ಗೆರೆಕಾಡು ಆಗಿದ್ದು, ಕೊಡಗಿನ ಸಂದರ್ಭಕ್ಕೆ ಅನ್ವಯವೆನಿಸುತ್ತದೆ. ಕೊಂಗಾಳ್ವ ದೊರೆ ಶಿವದೇಗುಲಕ್ಕೆ ನೀಡಿದ ದಾನ ಎಂದರೆ ಜೈನಧರ್ಮನಿಷ್ಠನಾಗಿಯೂ ಧರ್ಮಸಮನ್ವಯ ತೋರಿದ ಸಂಗತಿಯಾಗಿರಬೇಕು. ಕೊಡಗಿನ ಧಾರ್ಮಿಕ ನೆಲೆಯನ್ನು ಗುರುತಿಸಿ ಅದರಂತೆ ನಡೆದುಕೊಂಡಿರಬೇಕೆನಿಸುತ್ತದೆ. ಚೌಡ್ಲುವಿನ ಕ್ರಿ.ಶ. ೧೦೮೩ರ ಹೊಸ ವೀರಶಾಸನ ಹಾಗು ಕುಸುಬೂರಿನ ಕ್ರಿ.ಶ. ೧೦೮೭ರ ಹೊಸ ವೀರಶಾಸನದಲ್ಲಿ 'ಕೊಂಗಾಳುವ ಭಟ' ಎಂಬ ಶಬ್ದಗಳಿದ್ದು, ವೀರಗಲ್ಲುಗಳ ಮೇಲೆ ಶೈವಪರವಾದ ಶಿವಲಿಂಗ ಹಾಗು ಮಾಹೇಶ್ವರ (ತಮ್ಮಡಿ!) ಅರ್ಚಕ ಶಿಲ್ಪಗಳಿವೆ. ಇದು ಕೊಂಗಾಳ್ವರ ಸಂಬಂಧದ್ದೆಂದರೆ ಜೈನ ಕೊಂಗಾಳ್ವರ ಕಾಲದ ಧರ್ಮ ಸಮನ್ವಯದ ಚಿತ್ರ ದೊರಕಿದಂತಾಗುತ್ತದೆ. ಇದೆಲ್ಲ ಚೋಳರಿಂದ ಪ್ರತಿಷ್ಠಾಪನೆಗೊಂಡ ಕೊಂಗಾಳ್ವ ಶಾಖೆಯ ಕೊಡಗಿನ ಅರಸುವಂಶವೊಂದು ಚೋಳರಿಗೆ ಸಲ್ಲಿಸಿದ ಸಾಂಸ್ಕೃತಿಕ ಕೃತಜ್ಞತೆ ಆಗಿದೆ.

ಕ್ರಿ.ಶ. ೧೦೭೭ರ ಮುಳ್ಳೂರು ಶಾಸನದಲ್ಲಿ[೬೨] ರಾಜೇಂದ್ರ ಚೋಳ ಕೊಂಗಾಳ್ವನ ಆಳ್ವಿಕೆ ಹಾಗು ಅವನ ಪಟ್ಟದರಸಿ ಪದ್ಮಲದೇವಿ ಎಂದಿದೆ; ೧೧ನೇ ಶ. ದ ಪಾರ್ಶ್ವನಾಥ ಬಸದಿ ಶಾಸನದಲ್ಲಿ[೬೩] 'ಲದೇವಿ... ಪ್ರಿಥುವೀ ಕೊಂಗಾಳ್ವನರಸಿ...' ಎಂದಿದ್ದು, ಕ್ರಿ.ಶ. ೧೦೬೬-೯೪ರ ಅವಧಿಯಲ್ಲಿ ರಾಜೇಂದ್ರ ಪೃಥ್ವಿ ಕೊಂಗಾಳ್ವನಾಳ್ವಿಕೆಯು ಅರಕಲಗೂಡಿನ ಶಾಸನಗಳಲ್ಲಿ (೧೩೩, ೧೪೬, ೧೫೧,೧೬೮) ಬರುವುದರಿಂದ ರಾಜೇಂದ್ರಚೋಳ ಕೊಂಗಾಳ್ವನಿಗೆ, 'ರಾಜೇಂದ್ರ ಪೃಥ್ವಿ ಕೊಂಗಾಳ್ವನೆಂಬ' ಹೆಸರೂ ಇದ್ದು ಅವನ (ಇನ್ನೊಬ್ಬ ದೊರೆ ಅಲ್ಲವೆಂದರೆ) ರಾಣಿ ಪದುಮಲದೇವಿ ಎಂದಾಗುತ್ತದೆ. ೧೧ನೇ ಶತಮಾನದ ಮುಳ್ಳೂರಿನ ಪಾರ್ಶ್ವನಾಥ ಬಸದಿಯ ಇನ್ನೊಂದು ಶಾಸನದಲ್ಲಿ[೬೪] 'ರುಗ್ಮಿಣಿ ಮಹಾದೇವಿಯ ಪ್ರತಿಷ್ಠೆ' ಎಂದಿರುವುದು; ಕ್ರಿ.ಶ. ೧೩೯೦ರ ಮುಳ್ಳೂರಿನ ಚಂದ್ರನಾಥ ಬಸದಿ ಶಾಸನದಲ್ಲಿ[೬೫] ಪೂರ್ವಸ್ಮರಣೆಮಾಡಿ ಎರಡನೇ ರಾಜಾಧಿರಾಜ ಕೊಂಗಾಳ್ವ ಹಾಗು ಅವನ ರಾಣಿ ರುಗ್ಮಿಣಿದೇವಿ ಸಹಿತವಾಗಿ, ತನ್ನ ತಾಯಿ ಪೋಚಬ್ಬರಸಿಯ ಪುಣ್ಯಾರ್ಥವಾಗಿ ದೇವಪ್ರತಿಷ್ಠೆ ಮಾಡಿ ಗ್ರಾಮದಾನ ಮಾಡಿದ್ದುದನ್ನು ವಿಜಯನಗರದ ಇಮ್ಮಡಿ ಹರಿಹರನ ಕಾಲದಲ್ಲಿ ಗುಂಡಪ್ಪದಂಡನಾಯಕನ ಮೂಲಕ ಪುನರ್ ಮುಂದುವರಿಸಿ, ಪಾರ್ಶ್ವನಾಥ ದೇವರಿಗೆ, ಕಾರಗೋಡು ಗ್ರಾಮಕ್ಕೆ ಅಂಣಾಂಗಪುರವೆಂದು ಹೆಸರಿಟ್ಟು ದಾನ ನೀಡಿದ ವಿಷಯವಿದೆ. ಹೀಗೆ ವಿಜಯನಗರದರಸರ ಕಾಲದಲ್ಲೂ ಬಸದಿಗೆ ಕೊಂಗಾಳ್ವರ ದಾನ ಪುನರ್ನವೀಕರಿಸಲಾಯಿತೆಂದರೆ ಆಗ್ಯೂ ಜೈನಧರ್ಮದ ಪ್ರಭಾವ ತಿಳಿಯುವಂತಾಗುತ್ತದೆ. ಕೊಡಗಿನಲ್ಲಿ ಕೊಂಗಾಳ್ವರ ಕೊನೆಯ ಶಾಸನವಾದ ಕ್ರಿ.ಶ. ೧೧೭೫ರ ನಂದಿಗುಂದ ಶಾಸನದಲ್ಲಿ[೬೬] ಮಹಾಮಮಂಡಲೇಶ್ವರ ವೀರಚೋಳ ಕೊಂಗಾಳುವ ದೇವನು ಮುಳ್ಳೂರು ೭೦ಕ್ಕೆ ಕೆಲವು ತೆರಿಗೆಗಳ ಪರಿಹಾರವನ್ನು ನೀಡಿದ ವಿಷಯದೆ. ಈ ಹೊತ್ತಿಗೆ ಕೊಂಗಾಳ್ವರು ಹೊಯ್ಸಳರ ಮಾಂಡಲೇಶ್ವರರಾಗಿದ್ದುದರ ಸೂಚನೆ ಇದಾದರೂ, ಕ್ರಿ.ಶ. ೧೧೧೬ರ ವೇಳೆಗೆ ಚೋಳರು, ಹೊಯ್ಸಳರಿಗೆ ಸೋತಮೇಲೆ, ಆ ಸಮಯದಿಂದಲೇ ಕೊಂಗಾಳ್ವರೂ ಹೊಯ್ಸಳ ಮಾಂಡಲಿಕರಾದರು.

ರಾಜೇಂದ್ರ ಪ್ರಥ್ವಿಕೊಂಗಾಳ್ವನ ಕಾಲದಲ್ಲಿ ಹಾಸನ ಜಿಲ್ಲೆಯ ಮೊಳತೆಬೀಡು ಕೊಂಗಾಳ್ವರ ಎರಡನೆ ರಾಜಧಾನಿಯಾದಂತೆ ತೋರುತ್ತದೆ. ಬಹುಶಃ ಚಂಗಾಳ್ವರೊಡನಾದ ಯುದ್ಧಗಳೂ ಅದಕ್ಕೆ ಕಾರಣವಿರಬೇಕು. ಕ್ರಿ.ಶ. ೧೧೭೫ರ ನಂತರ ಕೊಂಗಾಳ್ವರು ಪೂರ್ಣವಾಗಿ ಮೊಳತೆಬೀಡಿನ ಆಸರೆಗೆ ಸಾಗಿದಂತಿದೆ. ಆದರೆ ಹೊಯ್ಸಳ ಸೇನಾಪತಿ ಪುನೀಶನು ಕ್ರಿ.ಶ. ೧೧೧೬ರಲ್ಲಿ ವೀರಕೊಂಗಾಳ್ವನನ್ನು ಸೋಲಿಸಿದ ಮೇಲೆ, ಕೊಂಗಾಳ್ವನು ಹೊಯ್ಸಳರ ಸಾಮಂತನಾಗಿದ್ದ. ತನ್ನ ಪುತ್ರಿ ಚಾಂದಲಾದೇವಿಯನ್ನು ಹೊಯ್ಸಳ ವಿಷ್ಣುವರ್ಧನನಿಗೆ ಮದುವೆ ಮಾಡಿಕೊಟ್ಟ ಇದಲ್ಲದೆ ಕ್ರಿ.ಶ. ೧೧೭೧ರಲ್ಲಿ ಕೊಂಗಾಳ್ವ ರಾಜಗುವರಿ ಪದುಮಲದೇವಿ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ರಾಣಿಯಾದಳೆನ್ನಲಾಗಿದೆ. ಅಂದರೆ ಹೊಯ್ಸಳರ ಮಾಂಡಲಿಕರಾದ ಮೇಲೆ ಹೀಗೆ ಕೊಂಗಾಳ್ವರು ವೈವಾಹಿಕ ಸಂಬಂಧಗಳನ್ನು ಬೆಳಸಿಕೊಂಡಿರಬೇಕು.

ಅಂಜನಗಿರಿಯ ಜೈನ ಬಸದಿಯ ಕ್ರಿ.ಶ. ೧೧೭೬ರ ಶಾಸನದಲ್ಲಿ[೬೭] ತಾತಂಗಿಯ ಶ್ರೀಮಾಘಣಂದಿ ಭಟ್ಟಾರಕ ದೇವರು, ಬಸದಿಯಲ್ಲಿ ಶಾಂತಿನಾಥ ದೇವರ ಪ್ರತಿಷ್ಠೆ ಮಾಡಿದ ವಿಷಯ; ಪಟ್ಟಣದ ನಖರಂಗಳು, ಶಾಂತಿನಾಥ ದೇವರ ವಿಗ್ರಹ ಮಾಡಿಸಿದ ವಿಷಯ (ಮಡಿಕೇರಿ೬); ನಯಕೀರ್ತಿ ಸಿದ್ಧಾಂತ ಚಕ್ರವರ್ತಿಗಳ ಗುಡ್ಡ ಅಶ್ವಾಧ್ಯಕ್ಷ ಹರಿಯಣ್ಣ ಹೆಗ್ಗಡೆ ಅನಂತನಾಥನ ವಿಗ್ರಹ ಮಾಡಿಸಿಕೊಟ್ಟ ವಿಷಯ (ಮಡಿಕೇರಿ ೭); ಕಲಕಂದೂರಿನ ಜೈನ ಬಸದಿಯಲ್ಲಿ ಕ್ರಿ.ಶ. ೧೩೮೦ರಲ್ಲಿ ಮಾಣಿಕದೇವರು ಪ್ರತಿಷ್ಠೆ ಮಾಡಿದ ಸಂಗತಿ (ಸೋ. ಪೇಟೆ ೫೮); ೧೧ನೇ ಶತಮಾನದಲ್ಲಿ ಗುಣಸೇನ ಪಣ್ಡಿತದೇವರು ಮುಳ್ಳೂರಿನ ಶಾಂತೀಶ್ವರ ಬಸದಿಯ ಬಳಿ ನಖರರಿಂದ ಮಾಡಿಸಿದ ನಾಗಭಾವಿಯ ವಿಷಯ (ಸೋ ಪೇ ೩೯); ಕ್ರಿ.ಶ. ೧೦೪೪ರ ದೊಡ್ಡ ಕಣಗಾಲ ಶಾಸನದಲ್ಲಿ ಪ್ರಭಾಚಂದ್ರ ದೇವರ ನಿಸದಿಯನ್ನು ಮಾಡಿಸಿದ ಉಲ್ಲೇಖ (ಸೋ. ಪೇ ೪೯); ಇವುಗಳಿಂದ ಕೊಂಗಾಳ್ವರ ಕಾಲದಲ್ಲಿ ಜೈನಧರ್ಮದ ಪ್ರಭಾವ, ಜೈನಗುರುಗಳ ವ್ಯಕ್ತಿತ್ವ ಹಾಗೂ ಜನತೆಯು ನೀಡಿದ ದಾನಗಳ ಹಾಗು ಶಿಲ್ಪಗಳ ಚಿತ್ರ ಸಿಗುತ್ತದೆಯಲ್ಲದೆ ಅದು

ಬಸದಿಯ ಕಾಡು ಜಿನಗರ್ಭಗೃಹದ ಸಾಲುಜಿನಪೀಠ ಜಿನಶಾಸನ



ಮುಂದಿನ ಶತಮಾನಗಳಲ್ಲಿ ಬೀರಿದ ಪ್ರಭಾವದ ನಿದರ್ಶನಗಳನ್ನು ಕಾಣುವಂತಾಗುತ್ತದೆ.

ವಿಶೇಷತಃ ಕ್ರಿ.ಶ. ೧೫೪೪ರ ಅಂಜನಗಿರಿಯ ಬಸದಿ ಶಾಸನದಲ್ಲಿ[೬೮] ಸುವರ್ನ್ಣಾವತಿ ನದಿ (ಹಾರಂಗಿ ಹೊಳೆ)ಯಲ್ಲಿ ಮುಳುಗಿಸಿದ್ದ ೧೨ನೇ ಶತಮಾನದ ಅಗ್ರನಿವಾಸಿ ಶಾಂತಿ ತೀರ್ಥೇಶ್ವರ ಹಾಗು ಅನಂತನಾಥಸ್ವಾಮಿ ವಿಗ್ರಹಗಳನ್ನು ಮರದ ಬಸದಿಯಲ್ಲಿ ತಂದು ಪ್ರತಿಷ್ಠಾಪಿಸಿದ ಸಂಗತಿ ಇದೆ. ಅಂದರೆ ಕೊಡಗಿನಲ್ಲಿ ಜೈನಧರ್ಮದ ೧೬ನೇ ಶತಮಾನದ ವಿಜಯನಗರ ಕಾಲದಲ್ಲಿಯ ಅಸ್ತಿತ್ವ ಹಾಗು ಜನಪ್ರೀತಿಯ ಸಂಕೇತವಿದಾಗಿದೆ. ಮುಳ್ಳೂರಿನಂತೆಯ ಅಂಜನಗೇರಿಯೂ (ಅಂಜನಗಿರಿ) ಪ್ರಮುಖ ಜೈನಕೇಂದ್ರವಾಗಿ ಮುಂದುವರಿದಿತ್ತು ಎಂದೂ ತಿಳಿಯುತ್ತದೆ. ಇದಲ್ಲದೆ ಈ ಶಾಸನದಲ್ಲಿ ನಂಜರಾಯಪಟ್ಟಣಕ್ಕೆ ಸಲ್ಲುವ ಬೆಮ್ಮತ್ತಿ ಬೂತನಹಳ್ಳಿ ಮಲಗನಕೆರೆಯ ಸಮಸ್ತ ಹಲರು, ಹನಸೋಗೆಯ ಆದಿ ಶ್ರೀ ಅವ್ವಗಳು, ಭುಜಬಲಿ ಶ್ರೀ ಅವ್ವಗಳು, ಶಾಂತಿ ತೀರ್ಥೇಶ್ವರ, ಅನಂತನಾಥಸ್ವಾಮಿ ಬಸದಿಯ ಗರ್ಭಗೃಹದ ಕಲುಗೆಲಸಕ್ಕೆ ತಮ್ಮ ಗುರು ಚಾರುಕೀರ್ತಿ ಪಂಡಿತದೇವನಿಗೆ ಹೊಂನ್ನು ೩೦ ಗದ್ಯಾಣ ದಾನಮಾಡಿದ ಸಂಗತಿ ಇದೆ. ಈ ಕಾಲದಲ್ಲಿ ಇದ್ದ ನಂಜರಾಯಪಟ್ಟಣದ ಚಂಗಾಳ್ವ ದೊರೆ ಶ್ರೀಮನ್ಮಹಾ ಮಂಡಲೇಶ್ವರ ಶ್ರೀಕಂಠ ಅರಸುವೇ ಆಗುತ್ತಾನೆ.

ಅಂಜನಗಿರಿ ಶಾಂತೀಶ್ವರ ಬಸದಿಗೆ ಬಿದಿರೆಯ ಸಿತಾಳ ಮಳಿಗೆಯ ಸಮಸ್ತ ಹಲರು, ಕಂನಡಿಗ ಹಲರು, ನಾನಾದೇಸಿಯ ಹಲರು ಮಾಡಿದ ಧರ್ಮ ಎಂದಿರುವಲ್ಲಿ ಪರಂಪರೆಯಿಂದ ಕೊಡಗಿನ ಈ ಬಸದಿ ಬಹಳ ಪ್ರಸಿದ್ಧವಿತ್ತು ಎಂಬುದರ ಸಾಕ್ಷ್ಯ ಸಿಗುತ್ತದೆ. ವಿವಿಧ ನೆಲೆಯ ಜಿನಧರ್ಮಿಗಳು ಇಲ್ಲಿ ದಾನ ನೀಡಿದ್ದರು. ಆ ಹೊತ್ತಿನ ವೀರಶೈವ ಚಂಗಾಳ್ವ ಅರಸರೂ ಜೈನಧರ್ಮಕ್ಕೆ ಹಿಂದಿನಿಂದ ಚಂಗಾಳ್ವ ಪರಂಪರೆಗೆ ಒಗ್ಗಿದ್ದಂತೆ ಜೈನಧರ್ಮಕ್ಕೂ ಪ್ರೋತ್ಸಾಹ ನೀಡಿದ್ದರೆಂದಾಗುತ್ತದೆ. ಹಲ ಎಂದರೆ ಅಳತೆ, ಬೇಸಾಯ, ತೂಕ ಎಂಬರ್ಥವಿರುವಲ್ಲಿ ಹಲರು ಎಂಬ ಶಬ್ದ ವರ್ತಕವರ್ಗಕ್ಕೆ ಸಂಬಂಧಿಸುತ್ತದೆ. 'ನಾನಾದೇಸಿ' ಎಂಬ ವಾಣಿಜ್ಯ ಸಂಘವೂ ೧೪ನೇ ಶತಮಾನದಲ್ಲಿ ಪ್ರಚಾರವಿತ್ತು. ಹೀಗಾಗಿ ಅಂಜನಗಿರಿ ಕೇವಲ ಧಾರ್ಮಿಕ ಕೇಂದ್ರವಲ್ಲದೆ ನಂಜರಾಯ ಪಟ್ಟಣದಂತೆ ವಾಣಿಜ್ಯಕೇಂದ್ರವೂ ಆಗಿತ್ತು ಎಂಬ ಸೂಚನೆ ಲಭ್ಯವಾಗುತ್ತದೆ.[೬೯]

ಒಂದು ಕಾಲಕ್ಕೆ ಕೊಂಗಾಳ್ವರು ರೂಪಿಸಿದ ಈ ಜೈನಕೇಂದ್ರದ ಪ್ರಸಿದ್ಧಿ ಹೀಗೆ ಈವರೆಗೂ ಬೆಳೆದದ್ದು ಗಮನಾರ್ಹವಾಗಿದೆ. ಕೊಂಗಾಳ್ವರ ಕಾಲದ ಈ ಬಸದಿ ದಾರುಮಯವಾಗಿದ್ದದ್ದು ಮುಂದೆ ಕಲ್ಲು ಕಟ್ಟಡದ್ದಾಯಿತು. ಇದೊಂದು ಚಚ್ಚೌಕಾರದ ಕಟ್ಟಡ. ಕಲ್ಲು ಚಪ್ಪಡಿಗಳ ಚಪ್ಪಟೆ ಮಾಡನ್ನು ಹೊಂದಿದೆ. ಸ್ತಂಭಗಳಿರುವ ಮುಖಮಂಟಪ ಒಳ ಅಂಕಣದಲ್ಲಿ ಶಾಸನ, ಜಗತಿಯ ಮೇಲೆ ಸಾಲು ಜಿನ ಬಿಂಬಗಳಿದ್ದುದರ ಕುರುಹಾಗಿ ಜಗತಿ ಕಟ್ಟೆ ಇದೆ. ಈ ವಿಗ್ರಹಗಳೆಲ್ಲ ಕೊಂಗಾಳ್ವರ ಕಾಲದ್ದಾಗಿದ್ದು ಇಂದು ಮಡಿಕೇರಿ ಮ್ಯೂಸಿಯಂನಲ್ಲಿವೆ. ಈ ಬಸದಿಯ ಸುತ್ತ ಜಿನದೇವರ ಕಾಡು ಬಹಳ ವಿಶಾಲವಾಗಿದ್ದು, ಇಂದಿಗೂ ರಕ್ಷಿತವಾಗಿದೆ. ಕೊಂಗಾಳ್ವರ ಕಾಲದ ಜೈನ ಮಂದಿರದ ವಾಸ್ತು ಸೂಚಕವಾಗಿ ೧೬ನೇ ಶತಮಾನದಲ್ಲಿ ಜೀರ್ಣೋದ್ಧಾರ ಗೊಂಡು, ಹಿಂದಿನ ಚಹರೆಗಳನ್ನು ತೋರುವಂತಿದೆ.

ಕ್ರಿ.ಶ. ೮೮೮ರಲ್ಲಿ ಸತ್ಯವಾಕ್ಯಕೊಂಗುಣಿವರ್ಮನ ಕಾಲದಲ್ಲಿ, ಪೆಣ್ಣೆಗಡಂಗದ ಸತ್ಯವಾಕ್ಯ ಜಿನಾಲಯದ ನಿರ್ವಹಣೆಗಾಗಿ ಶಿವನಂದಿ ಸಿದ್ಧಾಂತ ದೇವರ ಶಿಷ್ಯ ಸರ್ವನಂದಿ ಮುನಿಗೆ ನೀಡಿದ ಶಾಸನೋಕ್ತ ಭೂದಾನ; ಕ್ರಿ.ಶ. ೯೭೮ರ ರಾಚಮಲ್ಲನ ಕಾಲದಲ್ಲಿ ಪೆರ್ಗದೂರು (ಪೆಗ್ಗೂರು) ಬಸದಿಯ ನಿರ್ವಹಣೆಗಾಗಿ ಶಿಷ್ಯ ಅನಂತವೀರ್ಯಂಗಳು, ಗುರು ಗುಣಸೇನ ಪಂಡಿತ ಭಟ್ಟಾರಕರಿಗೆ ಪೆಗ್ಗದೂರು ಹಾಗು ಪೊಸವಾಡಗ (ಈಗ ಬಾಡಗ) ಗ್ರಾಮದಾನವನ್ನು ಶಾಸನೋಕ್ತವಾಗಿ ನೀಡಿರುವುದು; ಕ್ರಿ.ಶ ೧೦೫೦ರ ನಲ್ಲೂರು ಶಾಸನದ ರೀತ್ಯಾ ಚಾಂಗಳದ ಬಸದಿಯ ಬಳಿ ಶ್ರೀ ಮದುವಂಗನಾಡಿನ ಕಿವಿರಿಯ್ಯಂಗಳಿಗೆ ನಿಸದಿಗಲ್ಲು ಹಾಕಿಸಿರುವುದು[೨೦] ಇವೆಲ್ಲ ದ. ಕೊಡಗಿನಲ್ಲಿ ಅದೂ ವೀರರಾಜೇಂದ್ರಪೇಟೆ ತಾಲೂಕಿನಲ್ಲಿ ಕೊಂಗಾಳ್ವರ ಪೂರ್ವ ಕಾಲಕ್ಕೂ (ನಲ್ಲೂರು ಶಾಸನ ಬಿಟ್ಟರೆ) ಜೈನಧರ್ಮದ ಪ್ರಾಬಲ್ಯವಿದ್ದ ಸೂಚಕವಾಗಿ ಕಾಣುತ್ತವೆ. ಜನಜೀವನದಲ್ಲಿ ಮಿಂದಿದ್ದ ಬಗೆ ತಿಳಿಸುತ್ತವೆ. (ಪೆಗ್ಗೂರಿನ ಶಾಸನವು ಕಳೆದ ದಶಕದಲ್ಲಿಯೂ ಸುರಕ್ಷಿತವಾಗಿದ್ದು, ಬಹಳ ಕಲಾತ್ಮಕ ಮೇಲ್ ಶಿಲ್ಪವನ್ನು ಹೊಂದಿ ನಿಂತಿತ್ತು) ಆದರೆ ಉತ್ತರ ಕೊಡಗಿನಲ್ಲಿ ಜಿನಧರ್ಮದ ಪ್ರಭಾವವನ್ನು ಗಂಗರ ನಂತರ ಪ್ರತಿಷ್ಠಾಪಿಸಿದವರೆ ಕೊಂಗಾಳ್ವರು ಎಂಬುದು ಅಲ್ಲಿಯೂ ಇಂದು ಕಂಡುಬರುವ ವಿವಿಧ ಶಾಸನಗಳಿಂದ ವಿದಿತವಾಗುತ್ತದೆ.

ಉತ್ತರ ಕೊಡಗಿನಲ್ಲಿ ಸೋಮವಾರಪೇಟೆ ತಾಲೂಕಿಗೆ ಬಸದಿ ನಿರ್ಮಾಣಗಳು ಹೆಚ್ಚು ಸೀಮಿತಗೊಂಡಿರುವ ಕಾರಣ ವೆಂದರೆ ಕೊಂಗಾಳ್ವರ ಆಳಿಕೆಯೆ. ಆದರೆ ಗಂಗರ ಕಾಲದಲ್ಲೂ ಅದೂ ಪ್ರಭಾವಶಾಲಿ ಆಗಿತ್ತು. ಕಲ್ಕಂದೂರಿನ ಜೈನ ಬಸದಿ ಆವರಣದಲ್ಲಿ ಪಾರ್ಶ್ವನಾಥ ತೀರ್ಥಂಕರರ ೧೦೦೮ನೇ ವಿಶೇಷ ಪೂಜೆ ೧೨.೬.೨೦೦೧ರಂದು ನಡೆದದ್ದು ('ಶಕ್ತಿ' ಪತ್ರಿಕಾ ವಾರ್ತೆ ೧೩.೬.೨೦೦೧) ಕೊಡಗಿನಲ್ಲಿ ಉಳಿದಿರುವ ಜಿನಧರ್ಮದ ಸ್ಥೂಲ ಸಂಕೇತವೆನಿಸುತ್ತದೆ.

ಇತ್ತೀಚಿಗೆ ಸೋಮವಾರಪೇಟೆ ತಾ. ಕಲ್ಲಪ್ಪನಹಳ್ಳಿ ಹಾಗು ಚಿಕ್ಕತೋಳೂರು ಗ್ರಾಮದಲ್ಲಿ ಸುಂದರವಾದ ಜಿನಬಸದಿಗಳು ಪತ್ತೆ ಆಗಿವೆ.[೨೧] ಪಾಳುಬಿದ್ದಿರುವ ಚಿಕ್ಕ ತೋಳೂರಿನ ಬಸದಿಯ ಬಳಿ ಅಪ್ರಕಟಿತ ಸ್ತಂಭ ಶಾಸನಗಳೂ ಪತ್ತೆ ಆಗಿದ್ದು ಜಿನಸ್ತ್ರೀ ಲೋಕಬ್ಬೆ ಅರಸಿಯು ಸಲ್ಲೇಖನ ವ್ರತದಿಂದ ಮುಡಿಪಿದ ವಿಷಯ; ಮಹಾಸತಿಯಾದ ವಿಷಯ ಶಾಸನ; ಕೊಂಗಾಳ್ವರ ಅರಸು ವಂಶದವನಾದ ನಿಜರಸದೇವನ ಕಾಲದ ವೀರಭಟರು, ರಾಜ್ಯ ರಕ್ಷಣೆಗಾಗಿ ಹೋರಾಡಿ ಮಡಿದ ವಿಷಯವಿದೆ ಎಂದು ಡಾ. ಎನ್. ಹವಳಯ್ಯ ಹಾಗು ಎಚ್. ಎಂ. ನಾಗರಾಜರಾವ್ ಅವರು ಓದಿರುವ ಪಠ್ಯಕ್ಕನುಸಾರವಾಗಿ ಪತ್ರಿಕಾ ಪ್ರಕಟನೆಯೂ ಬಂದಿದೆ.[೨೨] ಈ ಜೈನರ ಸ್ಮಾರಕ ೧೦ನೇ ಶತಮಾನಕ್ಕಿಂತಲೂ ಮುನ್ನಿನದು ಎಂಬ ಅಭಿಪ್ರಾಯವನ್ನು ಮಾನ್ಯ ಮಾಡಿದರೆ, ಅದು ಕೊಂಗಾಳ್ವರ ಪೂರ್ವದ ಗಂಗರ ಕಾಲದ್ದಾಗಿ, ಬಹುಶಃ ಆಗ ಚಂಗಾಳ್ವರು ಜಿನಧರ್ಮಾನುಸಾರಿಗಳಾಗಿದ್ದ ಕಾರಣ ಅವರಿಂದ ನಿರ್ಮಿತ ವಾಗಿದ್ದಿರಬಹುದು. ಅಥವಾ ಗಂಗ ಎಱೆಯಪ್ಪರಸನ ಕಾಲದ ನಿರ್ಮಾಣವಾಗಿರುವ ಸಾಧ್ಯತೆಯೂ ಇದೆ. ಕಾರಣ ಸನಿಹದ ಸೋ. ಪೇಟೆ ತಾ. ಬೇಳೂರು- ಗುಡುಗೂರಿನ ಕ್ರಿ.ಶ. ೯೧೧ರ ಹೊಸ ಶಾಸನದಲ್ಲಿ ಎಱೆಯಪ್ಪನ ಈ ಪ್ರದೇಶದಾಳ್ವಿಕೆ ಉಕ್ತವಾಗಿದೆ.[೨೩]

ಇನ್ನು ಹೊಸ ಶಾಸನದಲ್ಲಿ ಉಕ್ತನಾಗಿರುವವನೆನ್ನಲಾದ 'ನಿಜರಸದೇವ' ಎಂಬ ಹೆಸರು. ಅದೂ ೧೦-೧೧ನೇ ಶತಮಾನದ ಕೊಂಗಾಳ್ವರಲ್ಲಿ ಅಪರೂಪದ ಹೆಸರಾಗುತ್ತದೆ. ಸದ್ಯ ಲಭ್ಯವಿರುವ ಯಡೂರು, ನಂದಿಗುಂದ ಶಾಸನಗಳಲ್ಲಿ (ಎ.ಕ.೧, ಸೊ.ಪೇ. ೬೨ ಯಡೂರು, ನಂದಿಗುಂದ) ಉಕ್ತರಿರುವ ದುದ್ದರಸ, ಜುಂಜರಸ, ತೋಳೂರ ದುದ್ದರಸ, ಇವರೆಲ್ಲ ಹಾನುಗಲ್ಲು ಕಂದಬ ವಂಶದ ಕೊಡಗಿನ ಶಾಖೆಯಕದಂಬ ಅರಸರ ಪೈಕಿಯವರಾಗಿದ್ದಾರೆ. ಹೆಸರಿನ ಸಾಮ್ಯ ಹಾಗು 'ನಿಜ' ಎಂಬ ಶಬ್ದದ ಪಾರಿಭಾಷಿಕ ಅರ್ಥವನ್ನು ಗ್ರಹಿಸುವುದಾದರೆ, ನಿಜದೇವರಸ ಹಾನುಗಲ್ಲು ಕದಂಬರ ವಂಶಿಕ ಶಾಖೆಯ ಅರಸನಿರಬಹುದು ಅಥವಾ ಕೊಂಗಾಳ್ವರ ಪೈಕಿಯವನೆಂದೇ ಎನ್ನುವುದಾದರೆ ಶೈವಕ್ಕೆ ತೆರೆದುಕೊಂಡ ಕೊಂಗಾಳ್ವರ ಪೈಕಿಯ ಅರಸನೊಬ್ಬನಾಗಬಹುದು. ಅಥವಾ ಚಂಗಾಳ್ವ ಸಂಬಂಧದವನೂ ಆಗಬಹುದು. ಇಲ್ಲವೆ ಜಿನಧರ್ಮಿಯಾಗಿದ್ದೂ ಯಕ್ಕೋಟಿ ಜಿನಾಲಯದ ಪರಂಪರೆಯಂತೆ ಶೈವಪರ ಹೆಸರನ್ನೋ, ಶೈವಮಾನಿತ ಹೆಸರನ್ನೋ ಹೊಂದಿದ ವನಾಗಿರಬಹುದು. ಕ್ರಿ.ಶ. ೧೦-೧೧ ಶತಮಾನದ ಹಲಸುಲಿಗೆ ಶಾಸನದಲ್ಲಿ ಸ್ವಸ್ತಿಶ್ರೀ 'ನಿಜಮ್ಮ' ನೆ ಪಡೆದರಿಯ ಪಳ್ಳಕ್ಕೆ ವೆಳೆಯಳ್ದ 'ಸತ್ತಂ'; ಅದೇ ಕಾಲದ ರಾಜೇಂದ್ರಪುರ ಶಾಸನದಲ್ಲಿ ನಿಜಕುಳ ಪವಿತ್ರ ಕಮಳ ಚರಿತ್ತಂ; ಕ್ರಿ.ಶ ೧೧೬೫ರ ಕುಮರುಗೋಡಿನ ಶಾಸನದ 'ನಿಜಗೌಂಡಿ'; ೧೫ನೇ ಶತಮಾನದ ಶಂಭುಪುರ ಶಾಸನದ 'ನಿಜಲಿಂಗನೆ ಗತಿ'; ಕ್ರಿ.ಶ. ೧೬೭೧ರ ಸುತ್ತೂರು ಶಾಸನದ 'ಸ್ಥಾನಿಕ ನಿಜಲಿಂಗ ಒಡೆಯ' - ಈ ಉಲ್ಲೇಖಗಳೆಲ್ಲ[೨೪] ಶೈವಪರವಾಗಿಯೆ ಬಂದಿರುವಲ್ಲಿ 'ನಿಜರಸದೇವ' ಮೂಲವನ್ನು ಶಾಸನವು ಪೂರ್ಣವಾಗಿ ಪ್ರಕಟವಾದ ಮೇಲೆಯೆ ಗಮನಿಸಬೇಕಾಗುತ್ತದೆ. ಕುಸುಬೂರಿನ ಅಪ್ರಕಟಿತ ಶಾಸನದಲ್ಲಿಯೂ ನಿಜಮಾನೆಯರಸನ ಹೆಸರಿರುವ ಕಾರಣ ಆ ಹೆಸರು ಗಮನಾರ್ಹವಾಗುತ್ತದೆ.

ಚಿಕ್ಕತೋಳೂರಿನಲ್ಲಿ ನಾಡತ್ತಮ್ಮನ ದೇವರಕಾಡು, ಸುಗ್ಗಿ ದೇವರಕಾಡು, 'ಬೀರಬಟ್ಟದ ಅರವಾಸಿ ದೇವರಕಾಡು'[೨೫] ಹಾಗು ವಿಶಿಷ್ಟ ಬಗೆಯ ರಾಜಗೊಡೆಯುಳ್ಳ ವೀರಗಲ್ಲುಗಳೂ ಕಾಣಬರುತ್ತವೆ. ಇಲ್ಲಿ 'ಬೀರಬಟ್ಟ'ದ ಎಂದರೆ ಮುಖ್ಯ

ಸೇನಾಪಟ್ಟದವನೊಬ್ಬನಿದ್ದು ಜಿನಭಕ್ತನಿದ್ದನೆಂದು ತೋರುತ್ತದೆ. ಗಂಗರಲ್ಲಿ ಬರುವ 'ಪೆರ್ಮುಡಿವಟ್ಟಂ'ನಂತೆಯೇ ಇದೊಂದು ಸ್ಥಾನಪದವಿ ಇದ್ದು ಕುಮಾರವೃತ್ತಿ ಯಾ ಬೀಳಾನುವೃತ್ತಿಯ ಅರಸುವೊಬ್ಬನಿಲ್ಲಿದ್ದಿರಬೇಕು ಎನಿಸುತ್ತದೆ. 'ಅರವಾಸಿ ದೇವರು' ಎನ್ನುವಾಗ ಬಹುಶಃ ೨೪ ತೀರ್ಥಂಕರರಲ್ಲಿ ೧೮ನೇ ತೀರ್ಥಂಕರ 'ಅರನಾಥ'ನ ಬಸದಿ ಇಲ್ಲಿದ್ದು ಆ ಜಿನನಾಥನ ಭಕ್ತನಾಗಿದ್ದ ಸೇನಾಧಿಪತಿಪಟ್ಟದವನು ಈ ಬಸದಿಯನ್ನು ಕಟ್ಟಿಸಿರುವಂತಿದೆ; ಹಾಗು ಕೊಡಗಿನ ಪರಂಪರೆಯಂತೆ ಜಿನಕಾಡೊಂದನ್ನು ರೂಪಿಸಿ ಬಸದಿಗೆ ಅರ್ಪಿಸಿದಂತಿದೆ. ವೀರರಾಜೇಂದ್ರಪೇಟೆ ತಾ. 'ಅರಮೇರಿ'ಯು ಒಂದು ಕಾಲಕ್ಕೆ 'ಅರನಾಥ' ನೆಲೆಯಾಗಿತ್ತೆಂದು ಈಗಾಗಲೇ ತೋರಿಸಲಾಗಿದೆ (ಇತಿಹಾಸದರ್ಶನ; ಸಂ. ೧೧/ ೧೯೯೬, ಪು. ೭೬) ಅಂದರೆ ದಕ್ಷಿಣಕೊಡಗಿನಲ್ಲಿ ಆರನಾಥನ ಬಸದಿಯಿದ್ದಂತೆ, ಉತ್ತರಕೊಡಗಿನಲ್ಲಿಯೂ ಅರನಾಥನ ಬಸದಿಯೊಂದಿತ್ತೆಂದು ಈ ದೇವರ ಕಾಡಿನ ಅಸ್ತಿತ್ವ ಹಾಗು ಹೆಸರು ಸೂಚಿಸುವಂತಿದೆ. ಪ್ರಸ್ತುತ ಬೆಳಕಿಗೆ ಬಂದಿರುವ ಬಸದಿ ಮಾತ್ರ ಬಹಳ ಸುಂದರವಾದ ಬಸದಿಯಾಗಿದೆ. ಇಲ್ಲಿನ ವೀರಗಲ್ಲುಗಳು ಹುಲಿಬೇಟೆ, ಕಾಳಗ, ಯುದ್ಧ ಪ್ರಸಕ್ತಿಯ ಹಾಗು ಬಹುಶಃ ಕುಮಾರವೃತ್ತಿ ಸೂಚಿಸುವ ಶಿಲ್ಪಗಳ, ಕಾಳಾಮುಖ ಯಾ ಮಾಹೇಶ್ವರ(ಯಾ ತಮ್ಮಡಿ!) ಅರ್ಚಕರಿರುವ ಶಿಲ್ಪಗಳನ್ನು ಹೊಂದಿವೆ. ವೀರಮಾಸ್ತಿ ಎಂಬ ಹೆಸರಿನಲ್ಲಿಯೆ ಬಹುಶಃ 'ಚಿಕ್ಕ ತೋಳೂರು' ಹೆಸರುಗೊಂಡಿರುವುದು ಗಮನಕ್ಕೆ ಬರುತ್ತದೆ. ಜೈನ ಹಾಗು ಶೈವ ಸಮಯಗಳ ಸಮನ್ವಯ ರೂಪವಾದ ಯಕ್ಕೋಟಿ ಸಮಯದ ಸುಳುಹೂ ಇಲ್ಲಿ ಕಾಣಿಸುತ್ತದೆ. ಹೀಗೆಯೆ ಕುಸುಬೂರಿನ ಅಪ್ರಕಟಿತ ಶಾಸನವಾದ ಕ್ರಿ.ಶ. ಸು. ೧೦೭೦-೧೧೦೫ರ (ತ್ರಿ) ಭುವನಮಲ್ಲ ಕೊಂಗಾಳ್ವದೇವನ ಶಾಸನದಲ್ಲಿ 'ನಿಜಮಾನೆಯರಸ, ಚೋಳ ಕೊಂಗಾಳ್ವ, ವಿಗಜಾಬ್ಬಿ ಚೋಳ,' ಎಂದಿದ್ದು ಚೌಡ್ಲುವಿನ ಇಂಥದೇ ಅಪ್ರಕಟಿತ ಶಾಸನದಲ್ಲಿ (ಕ್ರಿ.ಶ. ೧೦೮೬) ವೀರಚೋಳ ಭುವನವೀರ ಕೊಂಗಾಳ್ವದೇವ, ಕೋಳಾಹಳಕೊಂಗ ಮುಂತಾದವರ ಪ್ರಸ್ತಾಪವಿದ್ದು ಅವರಿದ್ದ ಜೈನ ಪರಿಸರವನ್ನು ಸೂಚಿಸುವಂತಿದೆ; ಅಂದಿನ ಆಚಾರಗಳು ಇಂದಿನ ಸುಗ್ಗಿಕಟ್ಟೆ ಹಬ್ಬಗಳಲ್ಲಿ ಪ್ರತಿಧ್ವನಿಸಿರುವುದೂ ವಿಶೇಷ.

ಹಾಗೆಯೆ ಈ ಪ್ರದೇಶದಲ್ಲಿ ೧೦-೧೧ನೇ ಶತಮಾನದಲ್ಲಿ ಜೈನಪ್ರಭಾವವೂ ಇದ್ದ ಬಗ್ಗೆ ಬಸದಿಗಳ ಅವಶೇಷಗಳಿವೆ; ಕಲ್ಕಂದೂರಿನಲ್ಲಿ ಇಂದಿಗೂ ಜಿನ ಬಸದಿ ಇದ್ದು ಪೂಜಾದಿಗಳು ನಡೆಯುತ್ತಿವೆ; ನೆರೆಯ ಯಡೂರಿನಲ್ಲಿದ್ದ ಜಿನಶಿಲ್ಪಗಳನ್ನು ಕಲ್ಕಂದೂರಿಗೆ ಸಾಗಿಸಿರುವುದಿದೆ.

ಶನಿವಾರಸಂತೆ ಬಳಿಯ ಹೊಸೂರು ಗ್ರಾಮದ ಬೆಟ್ಟದ ಮೇಲೆ ಬಸವೇಶ್ವರ ಗುಡಿ ಸನಿಹದಲ್ಲಿ ಪಾಳು ಬಿದ್ದ ಜೈನ ಬಸದಿಯೊಂದು ಪತ್ತೆ ಆಗಿದೆ (ಶಕ್ತಿ ಪತ್ರಿಕೆ ೨೦.೩.೨೦೦೩) ಬಸದಿಯ ಬಾಗಿಲವಾಡದ ಲಲಾಟದಲ್ಲಿ ತೀರ್ಥಂಕರನ ಉಬ್ಬು ಶಿಲ್ಪವಿದೆ. ಬಸದಿಯಲ್ಲಿ ಜಿನನ ವಿಗ್ರಹಗಳೂ ಭುವನೇಶ್ವರಿಯೂ ಇವೆ. ತೀರ್ಥಂಕರ ಶಿಲ್ಪವನ್ನು ಹೊಂದಿರುವ ಮೂರು ಶಿಲಾ ಶಾಸನಗಳೂ ಕಂಡು ಬಂದಿವೆ.

ಕೊಂಗಾಳ್ವರ ಕಾಲದ್ದೆನ್ನಬಹುದಾದ ಈ ಬಸದಿ ಜೀರ್ಣೋದ್ಧಾರಗೊಳ್ಳಬೇಕಿದೆ. ಹಾಲೇರಿ ಅರಸರ ಕಾಲದಲ್ಲಿ ಚರ್ಚು, ಮಸೀದೆಗಳಿಗೆ ನೆರವುಗೊಟ್ಟಂತೆ, ಪಳ್ಳಿ-ಬಸ್ತಿಗಳಿಗೂ ಧರ್ಮ ಸಾಮರಸ್ಯ ತೋರಿ ನೆರವು ನೀಡಿದ್ದಿದೆ. ದೊಡ್ಡವೀರ ರಾಜೇಂದ್ರ ಒಡೆಯನ ಕಾಲದಲ್ಲಿ ಬಸದಿಗೆ ದಾನ ನೀಡಿರುವ ಸಂಗತಿ ಅವನ ಕ್ರಿ.ಶ. ೧೮೦೬ರ ಅಪ್ರಕಟಿತ ನಿರೂಪವೊಂದರಿಂದ ತಿಳಿದು ಬರುತ್ತದೆ. ಅಮರಸೂಳ್ಯದ ಬಸದಿಯ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮೊತ್ತವನ್ನು (೨ ಬಸ್ತಿಗಳಿಗೆ) ನಿಖರವಾಗಿ ನಮೂದಿಸಿ ನೀಡಿರುವ ವಿಷಯವಿದೆ. ಅಂತಾಗಿ ಹಾಲೇರಿ ಅರಸರ ಕಾಲದಲ್ಲೂ ಬಸದಿಗಳ ನಿರ್ವಹಣೆ ಹಾಗಿ ಜೈನರೂ ಸಾಕಷ್ಟು ಸಂಖ್ಯೆಯಲ್ಲಿದ್ದರೆಂದಾಗುತ್ತದೆ. ಕೊಡಗಿನ ಗ್ರಾಮಗಳಲ್ಲಿ ಜೈನಸಂಬಂಧಿಯಾದ ಬ್ರಹ್ಮದೇವರ ಕಾಡುಗಳು, ಬ್ರಹ್ಮದೇವರ ಬನಗಳು ಸೋಮವಾರಪೇಟೆ ತಾ. ಶಾಂತಳ್ಳಿ, ಕುಮಾರಳ್ಳಿ, ಶೆಟ್ಟಳ್ಳಿ, ತಾಕೇರಿ, ಮುವತ್ತೊಕ್ಲು, ತೋಳೂರ ಶೆಟ್ಟಳ್ಳಿ, ಮಡಿಕೇರಿ ತಾಲ್ಲೂಕಿನಲ್ಲಿ ಹಾಗು ವೀರರಾಜೇಂದ್ರಪೇಟೆ ತಾ. ನಾಂಗಾಲದಲ್ಲಿ ಬಸ್ತಿ ದೇವರಕಾಡುಗಳು ಕಂಡು ಬರುತ್ತವೆ. ಸರ್ವೆ ಆಗಿ ಶಿಸ್ತುವಿನಲ್ಲಿ ನಿರೂಪಿತವಾಗಿವೆ. ಇವು ಕ್ರಿ.ಶ. ೧೯೦೦ರ ಜಿ. ಎಫ್. ಮೆಕ್ಲೆ ಜಾನ್‌ನ ವರದಿಯಲ್ಲೂ ನಮೂದಿತಗೊಂಡಿವೆ. ದೊಡ್ಡ ವೀರರಾಜೇಂದ್ರ ಒಡೆಯ (ಕ್ರಿ.ಶ. ೧೭೮೦-೧೮೦೯) ೨ನೇ ಲಿಂಗರಾಜೇಂದ್ರ ಒಡೆಯನ (೧೮೧೧-೧೮೨೦)ಶಿಸ್ತುಗಳಲ್ಲಿ ವರ್ಗೀಕೃತಗೊಂಡು ಇವೆಲ್ಲ ನಮೂದಾಗಿದ್ದಂಥವು. ಅಂತಾಗಿ ಕೊಡಗಿನಲ್ಲಿ ದೇವರಕಾಡು ಪರಂಪರೆ ಪ್ರತಿಗ್ರಾಮಗಳಲ್ಲಿದ್ದು, ಜಿನಾಲಯ ಬಸದಿಗಳಿಗೂ ಕ್ರಿ.ಶ. ೮೮೮ರಿಂದ ಹಿಡಿದು ೧೯ನೇ ಶತಮಾನದಲ್ಲಿಯೂ ಜಿನಕಾಡುಗಳು ಮುಂದುವರಿದದ್ದು ಗಮನಾರ್ಹ. ಜೈನರಾಗಿದ್ದವರಲ್ಲಿ ಅನೇಕರು ಮತಾಂತರ ಗೊಂಡೋ, ಅನ್ಯ ಜನಾಂಗದ ಧರ್ಮಾಚರಣೆಯನ್ನು ಅನುಸರಿಸಿ ಬೆರೆತುಹೋದರೂ (ಜೈನಿರ ಎಂಬ ಕೊಡವಗೌಡ ಮನೆಪೆದ-ಮನೆಹೆಸರೂ ಇದೆ) ಜೈನ ಪ್ರಭಾವ ಅವರ ಮೇಲೆ ಉಳಿದು ಬಂದಿದೆ. ಇದೆಲ್ಲ ಬ್ರಹ್ಮದೇವರ ಕಾಡು, ಬ್ರಹ್ಮದೇವರ ಬನ; ಸುಗ್ಗಿಕಟ್ಟೆ ಹಬ್ಬದ ಆಚಾರಗಳಲ್ಲಿ ಮಿಡಿಯುವುದನ್ನು ಇಂದಿಗೂ ಕಾಣಬಹುದು.

ಯಡೂರಿನ ಸುಗ್ಗಿಕಟ್ಟೆ ಹಬ್ಬದಲ್ಲಿ ಸಬತಾಯಿಗೆ ಎಡೆ ನೀಡುವಲ್ಲಿ ಬಾಯಿಗೆ ಬಟ್ಟೆ ಕಟ್ಟಿಕೊಂಡು ನೀಡುವುದು; ಯಡೂರು ಚೌಡ್ಲುವಿನ ಸುಗ್ಗಿಕಟ್ಟೆ ಹಬ್ಬಗಳಲ್ಲಿ ಅಜ್ಜಿಬನ (ಅಜ್ಜಿಯರು: 'ಜೈನ ಸಂಪ್ರದಾಯದ ಒಂದು ಪಾರಿಭಾಷಿಕ ಶಬ್ದ'ಗಳಲ್ಲಿ ಹೀಗೆಯೇ

ಎಡೆನೀಡಿ ಆಚಾರಗಳನ್ನು ಪಾಲಿಸುವುದು ಇಂದಿನ ಅಲ್ಲಿಯ ಗೌಡ ಜನಾಂಗಗಳಲ್ಲಿವೆ. ಇವೆಲ್ಲ ಒಂದು ಕಾಲಕ್ಕೆ ಇಲ್ಲೆಲ್ಲ ಇದ್ದ ಜೈನ ಪ್ರಾಬಲ್ಯದ ಇಂದಿನ ಅವಶೇಷ ಆಚಾರಗಳಾಗಿವೆ.

ಈ ಮೊದಲು ಪತ್ತೆಯಾದ ಗುಡಗೂರು (ಸೋಮವಾರ ಪೇಟೆ. ತಾ. ಬೇಳೂರು ಸಮೀಪದ ವೇಳೆವಾಳಿ ಶಾಸನವೂ ಕ್ರಿ.ಶ. ೯೯೮ರ ಗಂಗರ ಎಱುೆಯಪ್ಪನ ಕಾಲದ್ದಾಗಿದ್ದು. ಅದು 'ಹರತಿಸಿರಿ' ಯಲ್ಲಿ ಪ್ರಕಟವಾಗಿದೆ. ಅಂತಾಗಿ ಉತ್ತರಕೊಡಗಿನ ಈ ಜಿನಧರ್ಮ ಪರಿಸರ ಜಿನಧರ್ಮಿ ಕೊಂಗಾಳ್ವರಿಗೆ ಆತ್ಮೀಯ ಪರಿಸರವೆ ಆಗಿತ್ತು ಎನಿಸುತ್ತದೆ.

ಮುಳ್ಳೂರಿನ ಕ್ರಿ.ಶ.೧೦೫೦ರ ಶ್ರೀ ಶಾಂತಿನಾಥಸ್ವಾಮಿಯ ಬಸದಿ, ಕಲ್ಲುಕಟ್ಟಡದ್ದು. ಈಗ ಪೂಜೆನಡೆಯುತ್ತಿಲ್ಲ; ಅಲ್ಲಿನ ಕ್ರಿ.ಶ. ೧೦೫೮ರ ಪಾರ್ಶ್ವನಾಥ ಬಸದಿಯದೂ ಅದೇ ಪರಿಸ್ಥಿತಿ; ಹೀಗೆಯೇ ಮುಳ್ಳೂರಿನ ಕ್ರಿ.ಶ. ೧೦೬೨ರ ಶ್ರೀ ಚಂದ್ರನಾಥ ಬಸದಿ, ಕ್ರಿ.ಶ. ೧೫೮೮ರಲ್ಲಿ ಜೀರ್ಣೋದ್ಧಾರಗೊಂಡ ೧೨ನೇ ಶತಮಾನದ ಅಂಜನಗಿರಿಯ ಶ್ರೀ ಶಾಂತಿನಾಥ ಬಸದಿಗಳಲ್ಲೂ ಇದೇ ಪರಿಸ್ಥಿತಿ. ಮುಳ್ಳೂರಿನ ಶ್ರೀ ಶಾಂತಿನಾಥ ಬಸದಿಮಾತ್ರ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ವ್ಯವಸ್ಥೆಗಿದೆ. ಹಾನುಗಲ್ಲು ಅಂಚೆ ಕಲ್ಕಂದೂರಿನ ಸಮಾಜ ಬಾಂಧವರಿಂದ (ಸಮಿತಿ) ೧೯೭೫ರಲ್ಲಿ ಜೀರ್ಣೋದ್ಧಾರಗೊಂಡ, ಬಸದಿಯ ಶಿಲಾ ಕಟ್ಟಡದಲ್ಲಿ ಇಂದ್ರವರ್ಗದ ಪಂಡಿತರಿಂದ ಪೂಜಿಸಲ್ಪಡುವ ಪದ್ಮಾಸನಸ್ಥ ಶ್ರೀಪಾರ್ಶ್ವನಾಥ ಸ್ವಾಮಿಯ ಪೂಜೆಯು, ಪಾರ್ಶ್ವನಾಥ ಬಸದಿಯಲ್ಲಿ ಇಂದಿಗೂ ನಡೆಯುತ್ತಿದೆ. ಈ ಬಸದಿಯು ಕ್ರಿ.ಶ. ೧೩೮೦ರಲ್ಲಿ ನಿರ್ಮಿತವಾದುದಾಗಿದೆ. ಮುಳ್ಳೂರಿನ ಪಾರ್ಶ್ವನಾಥ, ಶಾಂತಿನಾಥ, ಚಂದ್ರನಾಥ ಬಸದಿಗಳು ಕೊಂಗಾಳ್ವರ ಕಾಲದಲ್ಲಿ ಕಗ್ಗಲ್ಲಿನಿಂದ ನಿರ್ಮಿತವಾದ ಸರಳ ಮಂದಿರಗಳಾಗಿ ಈ ಜಿನಮೂರ್ತಿಗಳು ಅವರ ಕಾಲದ ಕಲಾತ್ಮಕ ಶಿಲ್ಪಗಳಾಗಿವೆ. ಮುಳ್ಳೂರು ಬಸದಿಗಳ ಪ್ರೇರಕಶಕ್ತಿಯಾಗಿದ್ದ ದ್ರಾವಿಡ ಸಂಘ ನಂದಿಗಣ ಇರುಂಗಲಾನ್ವಯದ ಪುಷ್ಪಸೇನ ಸಿದ್ಧಾಂತ ದೇವರ ಶಿಷ್ಯರಾದ ಗುಣಸೇನ ಪಂಡಿತ ಅಂದಿನ ಅತ್ಯಂತ ಪ್ರಭಾವಶಾಲಿ ಆಚಾರ್ಯರಾಗಿದ್ದ. ಹೊಯ್ಸಳ ದೊರೆ ವಿನಯಾದಿತ್ಯನ ಗುರುವೂ ಆಗಿದ್ದ.[೭೭]

ವಿಶೇಷವಾಗಿ ಮುಳ್ಳೂರಿನ ಬಸದಿಗಳ ಮುಖ್ಯ ಆಚಾರ್ಯ ನಾಗಿದ್ದ ಗುಣಸೇನ ಪಂಡಿತನು ಮಹಾವಿದ್ವಾಂಸನಾಗಿ ಶ್ರವಣ ಬೆಳಗೊಳದಲ್ಲಿ ಪ್ರಸಿದ್ಧಿಗೊಂಡಿದ್ದ. ಅವನು ಕ್ರಿ.ಶ. ೧೦೬೪ರಲ್ಲಿ ಮೋಕ್ಷಲಕ್ಷ್ಮೀ ನಿವಾಸಕ್ಕೆ ಸಸ್ದು ಹೋದಾಗ 'ಅರ್ಹನ್ತಾದಿ ರತ್ನತ್ರಯ, ಸಕಳ ಮಹಾಶಬ್ದ ಶಾಸ್ತ್ರಾಗಮಾದಿ ಸ್ಥಿರಷಟ್ತರ್ಕ ಪ್ರವೀಣರ್' ಎಂದೆಲ್ಲ ಮುಳ್ಳೂರಿನ ಶಾಸನವು, ವರ್ಣಿಸಿದೆ.[೭೭] ಅವನು ನಿಸದಿಗೊಂಡಾಗ ಶ್ರವಣ ಬೆಳಗೊಳದ ಶಾಸನವೊಂದು ಮುಳ್ಳೂರಿನ 'ವೈಡೂರ್ಯ ಸಾರವಸಧಿಯೆ' ಕಳೆದುಹೋಯಿತೆಂದು ವರ್ಣಿಸಿದೆ.

ಕೊಂಗಾಳ್ವರ ಶಾಸನಗಳಲ್ಲಿ ಜೈನಗುರುಗಳನ್ನು ಗೌರವದಿಂದ ಸ್ಮರಿಸಿ, ಕಟ್ಟಿಕೊಟ್ಟ ಬಸದಿಗಳು, ಸ್ತ್ರೀಯರಿಗಿದ್ದ ಗೌರವದ ಕುರುಹಾಗಿ ರಾಜಮಾತೆ, ರಾಣಿ, ಬಹುಶಃ ಕೆಲವು ಅಧಿಕಾರಿಗಳ ಪತ್ನಿಯರ ಹೆಸರುಗಳು, ಜನಸಾಮಾನ್ಯರ ಹೆಸರುಗಳು ನಮೂದಿತವಾಗಿರುವ ಬಗೆ ಆಕರ್ಷಕವಾಗಿದೆ. ಈ ಸ್ತ್ರೀಗೌರವ ಕೊಡಗಿನ ಸಂಸ್ಕೃತಿಯ ದ್ಯೋತಕವಾಗಿ ಇಂದಿಗೂ ಉಳಿದು ಬಂದಿದೆ. ಇವರ ಶಾಸನಗಳ ಭಾಷೆ ಗಂಭೀರ ಕನ್ನಡದ ದೇಸಿಯ ಗಂಡುತನ, ಪ್ರಸಾದ ಹಾಗು ಪ್ರಾಸದ ಗೆಲುವುಗಳನ್ನು ಹೊಂದಿರುವುದಾಗಿದೆ; ಅದಕ್ಕೆ 'ಪೊನ್ನಱುೆಕೊಟ್ಟು ಮಣ್ಣಱುೆಕೊಣ್ಡು ಪಟ್ಟವಕಟ್ಟಿ ನಾಡ ಕುಡುಗೆಸ್ದು; ದೇವರ ಗುಡ್ಡಿ ಮಾಡಿಸಿದ ಬಸಿದಿ; ಬಿಟ್ಟಿ ಬೆಸ ಹಡುವಗೇರಿಗೆ ಪರಿಹಾರವಂ ಬಿಟ್ಟು,' ಇತ್ಯಾದಿ., ಸಾಲುಗಳೆ ಸಾಕ್ಷಿ. ಕೆಲಮಟ್ಟಿಗೆ ಭಾಷಾ ಸ್ಖಾಲಿತ್ಯಗಳೂ ಇವೆ. ಆದರೆ ತಮಿಳು ಪ್ರಭಾವಗಳ ನಡುವೆ ತಮ್ಮ ಕನ್ನಡತನದ ಪ್ರಭಾವಕ್ಕೆ ಒತ್ತುಗೊಟ್ಟು ಕೊಂಗಾಳ್ವರು ನಡೆದುಕೊಂಡರು. ಅದು ಬಹುಶಃ ಜಿನಧರ್ಮಾನುಸರಣೆಯ ಕಾರಣವಾಗಿರಬೇಕು.

ಸ್ಥಳನಾಮಗಳ ದೃಷ್ಟಿಯಿಂದ [ತೆಂ]ಕುನಾಡೆಪ್ಪತ್ತು, ಮಾಲವ್ವಿ, ಹಾರುವನಹಳ್ಳಿ, ಕಾಜ್ಞೊಂಡಹಳ್ಳಿ (ಕಾಂಜೋಡು), ನಿಡುತ, ತೋಳೂರು, ಗನಹೂರು (ಗಣಗೂರು) ಮುಂತಾದ ಗ್ರಾಮಗಳು ಸುಮಾರು ಸಾವಿರ ವರುಷದ ಇತಿಹಾಸದ ಹರಿವಿನಲ್ಲಿ ತೇಲಿ ಬದುಕುಳಿದಿರುವುದು ಗಮನಾರ್ಹ. ಆರ್ಥಿಕ ಜಾಯಮಾನದಲ್ಲಿ ಖಣ್ಡುವೆಯ ಆಡವಲಂ (ಮೀಸಲು ಹೊಲ, ಗೋಮಾಳ!) ಆಯದಾಯ ಹಣ, ಸುಂಕ ಬೆಡುಂಗುನಲ್ಲೆತ್ತು ಪರಿಹಾರ, ಗದ್ಯಾಣ, ಬಿಟ್ಟಿಬೆಸ, ಇತ್ಯಾದಿಗಳ ಚಾಲ್ತಿ ಕಾಣಬರುತ್ತದೆ. ಬಿಟ್ಟಿ ಬೆಸದಲ್ಲಿ ಜೀತ ಎನ್ನುವ ಇಂದಿನ ಕಲ್ಪನೆ ಸಾಂದರ್ಭಿಕವಾಗಿ ಬಂದಿರುವಲ್ಲಿ, ಅಂದಿಗೆ 'ಮುಯ್ಯಾಳು' ಎಂಬ ವಿನಿಮಯ ಕೃಷಿ ಸೇವೆಯ ಪರಿಕಲ್ಪನೆ ಇದ್ದು, ಊಳಿಗಮಾನ್ಯ ಆಳು, ಒಡೆಯ ಎಂಬ ಹವಣುಗಳು ಅಲ್ಲಿ ಅಡಗಿತ್ತು ಎನಿಸುವುದಿಲ್ಲ. ಕೊಡಗಿನ ಈ ಪರಂಪರೆಯ ಪಳೆಯುಳಿಕೆ ಇಂದಿಗೂ ಅಲ್ಲಲ್ಲಿ ಕೆಲವೆಡೆ ಕಾಣಬರುತ್ತದೆ. ಅದು ಅಂದಿಗೆ ಇದ್ದ ಆತ್ಮೀಯ ಸಂಬಂಧಗಳ ಕಾರಣ ಅವಮಾನದ ಬಗೆ ಆಗಿರಲಿಲ್ಲ.

ಕೊಂಗಾಳ್ವರ ಕಾಲದ ಸಾಂಸ್ಕೃತಿಕ ಬದುಕು ಸ್ವಚ್ಛ ವಾಗಿತ್ತೆನ್ನಲು, ಕ್ರಿ.ಶ. ೧೧೩೫ರ ನಂದಿಗುಂದ ಶಾಸನದಲ್ಲಿ ಬರುವ ಅಣ್ಣತಮ್ಮಂದಿರ ಮಕ್ಕಳ ಸಂಬಂಧದ ಚಿತ್ರ, ದಾನದ ಬಗೆಗಳು, ಬಸದಿಯ ಗುರುಗಳಿಗೆ ನೀಡಿರುವ ದಾನದ ರೀತಿ ಗಮನಾರ್ಹ ಸಾಕ್ಷಿಗಳೆನಿಸುತ್ತವೆ.

ಕೊಡಗಿನ ವೈಶಿಷ್ಟ್ಯವೆನಿಸುವ ಮನೆಪೆದಗಳಿಗೆ (ಮನೆತನದ ಹೆಸರು) ಹಿನ್ನೆಲೆಯೆಂಬಂತೆ, ಕೊಂಗಾಳ್ವರ ಆಳ್ವಿಕೆಯ ಸಮಯದಲ್ಲಿ ಹಾಗು ನಂತರದಲ್ಲಿ ಅರಸುವಂಶಿಕರ ಕಾರಣದಿಂದಲೋ, ಮೂಡಿಬಂದ ಪ್ರಭಾವವೂ ಇದೆ. ಇದಕ್ಕೆ ಸಾಕ್ಷಿಯಾಗಿ,

ಕೊಂಗಾಂಡ, ಕೊಂಗೀರಂಡ, ಕೊಂಗೆರ ಕೊಂಗೇಟಿರ ಹಾಗು ಕೊಂಗಳಾಚಾರಿ, ಹೆಣ್ಣು ಕೊಂಗೊಳಲಿ ಎಂಬ ವ್ಯಕ್ತಿ, ಗ್ರಾಮನಾಮ ಗಳೂ ಇದ್ದು ಜನಜೀವನದಲ್ಲಿ ಕೊಂಗಾಳ್ವ ವಂಶವು ಮಿಂದಿರುವ ಬಗೆ ಎನಿಸುತ್ತದೆ. ಚೋಳ ಚಕ್ರವರ್ತಿಗಳಿಂದ ಕೊಡಗಿನಲ್ಲಿ ಪ್ರತಿಷ್ಠಾಪನೆಗೊಂಡರೂ ಹೆಸರಿನ ಉಪಾಧಿಯಾಗಿ 'ಚೋಳ' ಎಂಬ ಹೆಸರನ್ನು ಕೆಲವು ತಲೆಮಾರಿನವರೆಗೆ ಅಂಟಿಸಿಕೊಂಡು ಚೋಳನಿಷ್ಠೆ ತೋರಿದರು. ಆದರೆ ಅವರ ಎಲ್ಲ ಶಾಸನಗಳು ಕನ್ನಡ ಭಾಷೆಯವಾಗಿದ್ದು, ಆಡಳಿತ ಭಾಷೆಯೂ ಕನ್ನಡವೇ ಆಗಿದ್ದುದು ಕೊಡಗಿನ ಮಣ್ಣಿಗೆ ಅವರು ಸಲ್ಲಿಸಿದ ಸಾಂಸ್ಕೃತಿಕ ಸೇವೆ ಎನಿಸುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ.ಸಂ.೧ (ಹೊಸತು)., ೧೯೭೨, ಕೊಡಗುಜಿಲ್ಲೆ, ಸೋಮವಾರಪೇಟೆ ೬೫ (ಮಾಲಂಬಿ), ಮೈ.ವಿ.ವಿದ್ಯಾಲಯ

೨. E.C. XVII (Kolar Dt. Supplementary Inscriptions), 1965, (ed.) M. Sheshadri, Srinivasapura Tq 120 (ದಲಸನೂರು ಹೋಬಳಿ ಗುಮ್ಮರೆಡ್ಡಿಪುರ, ಕ್ರಿ.ಶ. ೫೫೦)

೩.-೪. ಎ.ಕ. ೧೧ (ಹೊಸತು)., ೧೯೯೮, ಚಿಕ್ಕಮಗಳೂರು ಜಿಲ್ಲೆ, ಮೂಡಗೆರೆ ೧೦೧ (ಜಾವಳಿ, ಕ್ರಿ.ಶ. ೭೫೦); ಎ.ಕ. ೫ (ಹೊಸತು), ೧೯೭೬, ಮೈಸೂರು ಜಿಲ್ಲೆ, ಕೃಷ್ಣರಾಜನಗರ ೧೦೫ (ಗಳಕೇಕೆರೆ, ತಾಮ್ರಶಾಸನ, ಕ್ರಿ.ಶ. ೮೯೦)

೫. ಎ.ಕ. ೫ (ಹೊಸತು)., ೧೯೭೬, ಮೈಸೂರು ಜಿಲ್ಲೆ, ತಿ. ನರಸೀಪುರ ೨೫೧ (ಹೆಮ್ಮಿ ಗೆ, ೮-೯ನೇ ಶತಮಾನ)

೬. ಎ.ಕ. ೩ (ಹೊಸತು)., ೧೯೭೪, ನಂಜನಗೂಡು ೩೮೫ (ಹುಸುಕೂರು)

೭. ಅದೇ., ಗುಂಡ್ಲುಪೇಟೆ ೯೨, (ಸಂಪಿಗೆಪುರ, ೯ನೇ ಶತಮಾನ)

೮. ಅದೇ., ಹೆಗ್ಗಡದೇವನಕೋಟೆ ೫, (ಕಟ್ಟೆಮನುಗನಹಳ್ಳಿ, ೯ನೇ ಶತಮಾನ)

೯. ಕನ್ನಡ ಭಾಷಾವ್ಯಾಸಂಗ., ೧೯೭೯, (ಸಂ) ಸಂಗಮೇಶ ಸವದತ್ತಿ ಮಠ, ಕಲಬುರ್ಗಿ, ಪು. ೭೬

೧೦. ಎ.ಕ. ೩ (ಹೊಸತು)., ಅದೇ, ಹೆ.ಕೋ. ೧೪೨ (ಮಗ್ಗೆ, ಕ್ರಿ.ಶ. ೯೯೮-೯೯)

೧೧. ಅದೇ., ಹೆಕೋ ೭ (ಅಂಕನಾಥಪುರ, ಕ್ರಿ.ಶ. ೧೦೩೭)

೧೨. ಅದೇ., ಹೆ.ಕೋ. ೫ (ಕಟ್ಟೆಮನುಗನಹಳ್ಳಿ)

೧೩. ಅದೇ., ನಂ.ಗೂ. ೪೦೨ (ಗಟ್ಟವಾಡಿ, ಕ್ರಿ.ಶ. ೯೦೪)

೧೪. ಎ.ಕ. ೪ (ಹೊಸತು)., ೧೯೭೫, ಮೈಸೂರುಜಿಲ್ಲೆ, ಚಾಮರಾಜನಗರ ೩೫೪ (ಕೆರೆಹಳ್ಳಿ ತಾಮ್ರಶಾಸನ, ಕ್ರಿ.ಶ. ೯೦೪-೦೬), ಮೈ.ವಿ.ವಿ. ವಿದ್ಯಾಲಯ

೧೫. ಅದೇ., ಚಾಮರಾಜನಗರ ೧೪೬ (ಕೆಂಪನಪುರ)

೧೬. ಅದೇ., ಯಳಂದೂರು ೧೮೫ (ಗುಂಬಳ್ಳಿ ತಾಮ್ರಶಾಸನ)

೧೭. ಅದೇ., ಚಾಮರಾಜನಗರ ೧೩೨ (ಮಂಗಲ ತಮಿಳು ಶಾಸನ, ಕ್ರಿ.ಶ. ೧೦೪೯-೫೦)

೧೮. ಎ.ಕ. ೮ (ಹೊಸತು)., ೧೯೮೪, ಹಾಸನಜಿಲ್ಲೆ, ಹಾಸನ ೧೪೨ (ಮುದುಗೆರೆ, ಕ್ರಿ. ೧೧೫೬), ಮೈ.ವಿ.ವಿ

೧೯. ಎ.ಕ.. ೫ (ಹೊಸತು)., ಅದೇ, ತಿ. ನರಸೀಪುರ ೭೦ (ಬನ್ನೂರು, ಕ್ರಿ.ಶ. ೧೧೮೮)

೨೦. ಅದೇ., ತಿ. ನರಸೀಪುರ ೮೭ (ಬೆಟ್ಟಹಳ್ಳಿ, ೧೩-೧೪ನೇ ಶತಮಾನ)

೨೧. ಎ.ಕ. ೪ (ಹೊಸತು)., ಅದೇ, ಚಾಮರಾಜನಗರ ೧೨೩ (ತೆಳನೂರು, ೧೦-೧೧ನೇ ಶತಮಾನ; ಚಾಮರಾಜನಗರ ೧೨೨ : ತೆಳನೂರು, ಕ್ರಿ.ಶ. ೧೧೬೯)

೨೨. ಎ.ಕ. ೮ (ಹೊಸತು), ಅದೇ, ಹಾಸನ ೧೬೭ (ಶಾಂತಿಗ್ರಾಮ, ಕ್ರಿ.ಶ. ೧೧೨೨)

೨೩. ಎ.ಕ. ೫ (ಹೊಸತು)., ಅದೇ, ಕೃಷ್ಣರಾಜನಗರ ೭೭ (ಹಬಸೂರು, ಕ್ರಿ.ಶ. ೧೩೭೭)

೨೪. ಎ.ಕ. ೮., ಅದೇ, ಹಾಸನ ೭೬ (ಕಲ್ಲವತ್ತಿ, ಕ್ರಿ.ಶ. ೧೧೨೩)

೨೫. ಅದೇ., ಕೃಷ್ಣರಾಜನಗರ ೧೧೬ (ಮೂಡುಕೊಪ್ಪಲು, ೧೧ನೇ ಶತಮಾನ)

೨೬. ಅದೇ., ಕೃಷ್ಣರಾಜನಗರ ೪೧ (ಚಿಕ್ಕ ಹನಸೋಗೆ, ೧೦ನೇ ಶತಮಾನ)

೨೭. ಎ.ಕ.೭ (ಹೊಸತು)., ೧೯೭೯, ಮಂಡ್ಯ ಜಿಲ್ಲೆ, ಮಳವಳ್ಳಿ ೧೨೧ (ಪುರಿಗಾಲಿ, ಕ್ರಿ.ಶ. ೧೩-೧೪ ಶತಮಾನ)

೨೮. ಎ.ಕ. ೭ (ಹೊಸತು)., ೧೯೭೨, ಕೊಡಗುಜಿಲ್ಲೆ, ಸೋಮವಾರಪೇಟೆ ೬೫ (ಮಾಲಂಬಿ, ೧೧ನೇ ಶತಮಾನ)

೨೯. ಎ.ಕ. ಸಂ. ೮ (ಹೊಸತು)., ಹಾಸನಜಿಲ್ಲೆ, ಅರಕರಲಗೂಡು ೧೩೩ (ಸುಳಗೋಡು ಸೋಮವಾರ, ಕ್ರಿ.ಶ. ೧೦೭೯-೮೬)

೩೦. ಎಚ್. ಜಿ. ರಾಮ್ಯೆಂಗಾರ್., ೧೯೮೭., ಶ್ರೀ ವೈಷ್ಣವ ನಿತ್ಯಾನುಸಂಧಾನ, ಬೆಂಗಳೂರು, ಪು. ೧೨೮

೩೧. ಎದುರ್ಕುಳ ಶಂಕರನಾರಾಯಣ ಭಟ್., ೧೯೮೭, ಕಾವೇರಿ ವೈಭವ, ಭಾಗಮಂಡಲ, ಪು. ೨೪೫

೩೨. B.A. Salatore., *Social and political life in Vijayanagara Empire* Vol II, Madras, p. 140

೩೩. K. Nagarajan., 1975, *Cauvery,* New Delhi, pp. 22, 25

೩೪. ಎಂ.ಜಿ. ನಾಗರಾಜ್., 'ಭೂ ಇತಿಹಾಸದ ಬೆಳಕಿನಲ್ಲಿ ಕೊಡಗಿನ ಕಾವೇರಿ ಮತ್ತು ಗಂಗೆ' **ಇತಿಹಾಸದರ್ಶನ**, ಸಂ. ೧೦/೧೯೯೫, ಪು. ೧೪೭

೩೫. **ಕೊಡಗು ಜಿಲ್ಲಾ ಗ್ಯಾಸೆಟಿಯರ್**., ೧೯೬೫, (ಸಂ) ಬಿ. ಎನ್. ಸತ್ಯನ್, ಪು. ೪೪-೪೫

೩೬. ಎ.ಕ. ಸಂ. ೫ (ಹೊಸತು)., ಮೈಸೂರು ಜಿಲ್ಲೆ, ಅದೇ, ಕೃ.ನಗರ ೬೬ (ಸಾಲಿಗ್ರಾಮ ಕ್ರಿ.ಶ. ೧೦೭೯) ಕೃ.ನಗರ ೬೭ (ಸಾಲಿಗ್ರಾಮ ಕ್ರಿ.ಶ. ೧೧೦೪-೧೧೦೫)

೩೭. ಎ.ಕ. ಸಂ. ೮ (ಹೊಸತು)., ಅದೇ, ಅರಕಲಗೂಡು ೧೩೩ (ಸುಳಗೋಡು ಸೋಮವಾರ, ಕ್ರಿ.ಶ. ೧೦೭೯-೮೦)

೩೮. ಅದೇ., ಹೊಳೆನರಸೀಪುರ ೧೩೫ (ಗುಬ್ಬಿ, ೧೧-೧೨ನೇ ಶತಮಾನ)

೩೯. ಅದೇ., ಅರಕಲಗೂಡು ೧೪೩ (ಹೆಣ್ಣೂರು, ಕ್ರಿ.ಶ. ೧೦೨೬)

೪೦. ಅದೇ., ಅರಕಲಗೂಡು ೧೪೫ (ಕೊಂಗಳಲೆ, ೧೧ನೇ ಶತಮಾನ)

೪೧. ಅದೇ., ಅ.ಗೂ. ೧೬೮ (ಮಲ್ಲಿಪಟ್ಟಣ, ಕ್ರಿ.ಶ. ೧೦೬೬)

೪೨. ಅದೇ., ಅ.ಗೂ. ೧೩೩ (ಸುಳುಗೊಡು ಸೋಮವಾರ, ಕ್ರಿ.ಶ. ೧೦೭೯-೮೦)

೪೩. ಅದೇ., ಅ.ಗೂ. ೧೫೧ (ದೊಡ್ಡಬೆಮ್ಮತ್ತಿ, ಕ್ರಿ.ಶ. ೧೦೯೧)

೪೪. ಅದೇ., ಅ.ಗೂ. ೧೪೬ (ಚಿಕ್ಕಬೆಮ್ಮತ್ತಿ, ಕ್ರಿ.ಶ. ೧೦೯೪)

೪೫. ಅದೇ., ಅ.ಗೂ. ೩೧(ಮರೂರು; ೧೧ನೇ ಶತಮಾನ)

೪೬. ಅದೇ., ಹೊಳೆನರಸೀಪುರ ೭ (೧೧ನೇ ಶತಮಾನ)

೪೭. ಅದೇ., ಹೊ.ನ.೮ (೧೧ನೇ ಶತಮಾನ)

೪೮. ಅದೇ, ಹೊ.ನ. ೧೦೮ (ಮೂಡಲಹಿಪ್ಪೆ, ಕ್ರಿ.ಶ. ೧೧೭೧)

೪೯. ಅದೇ., ಹೊ. ನ. ೧೦೬ (ಮೂಡಲಹಿಪ್ಪೆ, ಕ್ರಿ.ಶ. ೧೧೭೭)

೫೦. ಅದೇ., ಅ.ಗೂ. ೧೩೯ (ಸುಳುಗೋಡು ಸೋಮವಾರ) ಹೊ.ನ ೫೬ (ಅಂಕನಾಥಪುರ)

೫೧. ಅದೇ, ಅ.ಗೂ. ೧೨೪ (ಮುಗುಳೂರು, ೧೧-೧೨ ಶ.ಮಾನ)

೫೨. ಅದೇ ಅ.ಗೂ ೧೨೫ (ಜೋಡಿಕುಪ್ಪೆ, ೧೧ನೇ ಶತಮಾನ)

೫೩. ಅದೇ., ಹೊ.ನ. ೫೯ (ಅಂಕನಾಥಪುರ, ೧೧-೧೨ನೇ ಶತಮಾನ)

೫೪. ಅದೇ, ಅ.ಗೂ. ೩೫ (ದೊಡ್ಡಮಗ್ಗೆ, ಕ್ರಿ.ಶ. ೧೨೧೩)

೫೫. ಎ.ಕ. ೧ (ಹೊಸತು)., ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾ. ೬೨ (ಯಡೂರು, ಕ್ರಿ.ಶ. ೧೦೯೫)

೫೬. ಎ.ಕ. ಸಂ.೮ (ಹೊಸತು)., ಹಾಸನ ಜಿಲ್ಲೆ, ಅದೇ, ಅರಕಲಗೂಡು ೧೭೦ (ಕೃಷ್ಣರಾಜಕಟ್ಟೆ)

೫೭. ಎ.ಕ. ಸಂ. ೧ (ಹೊಸತು)., ಅದೇ, ಸೋಮವಾರ ಪೇಟೆ೬೭ (ಮೆಣಸ, ೧೧ನೇ ಶತಮಾನ)

೫೮. ಎಂ.ಜಿ.ನಾಗರಾಜ್., 'ಕೊಡಗಿನ ಕೊಲೆಕಲ್ಲುಗಳು', **ಹರತಿಸಿರಿ** (ಸಂ) ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ, ೧೯೮೭, ಪು. ೭೩೨

೫೯. ಎ.ಕ. ಸಂ. ೧ (ಹೊಸತು)., ಅದೇ, ಸೋಮವಾರಪೇಟೆ ೭೨ (ಮುಳ್ಳೂರು, ಕ್ರಿ.ಶ. ೧೦೫೯)

೬೦. ಅದೇ., ಸೋ. ಪೇಟೆ ೬೯, ೬೮ (ಮಳ್ಳೂರು, ೧೧ನೇ ಶತಮಾನ)

೬೧. ಅದೇ., ಸೋ. ಪೇಟೆ, ೪೮, ೪೯ (ಹೊಸಹಳ್ಳಿ, ಕ್ರಿ.ಶ. ೧೦೭೦)

೬೨-೬೩ ಅದೇ., ಸೋ. ಪೇಟೆ ೮೧ (ಮುಳ್ಳೂರು ಕ್ರಿ.ಶ. ೧೦೭೭); ಸೋಮವಾರ ಪೇಟೆ ೩೭ (ಮುಳ್ಳೂರು)

೬೪-೬೫ ಅದೇ., ಸೋ.ಪೇಟೆ ೭೦ (ಮುಳ್ಳೂರು); ಸೋ. ಪೇಟೆ ೭೫ (ಮುಳ್ಳೂರು, ಕ್ರಿ.ಶ. ೧೩೯೦)

೬೬ ಅದೇ., ಸೋ. ಪೇಟೆ ೮೭ (ನಂದಿಗುಂದ, ಕ್ರಿ.ಶ. ೧೧೭೫)

೬೭. ಅದೇ., ಮಡಿಕೇರಿ ೪ (ಕ್ರಿ.ಶ. ೧೧೭೬)

೬೮. ಅದೇ., ಮಡಿಕೇರಿ ೧೯ (ಅಂಜನಗಿರಿ, ಕ್ರಿ.ಶ. ೧೫೪೪)

೬೯. ಎಂ.ಜಿ. ನಾಗರಾಜ್., 'ವಿಜಯನಗರ ಕಾಲದ ಕೊಡಗು', **ವಿಜಯನಗರ ಅಧ್ಯಯನ ಸಂಪುಟ**. ೭, (ಸಂ) ಕೆ. ಆರ್. ರಾಮಕೃಷ್ಣ, ಟಿ. ಎಸ್. ಗಂಗಾಧರ, ಟಿ. ಎಮ್. ಮಂಜುನಾಥಯ್ಯ, ಹೊಸಪೇಟೆ, ೨೦೦೩, ಪು. ೩೫

೭೦. ಎ.ಕ. ಸಂ. ೧ (ಹೊಸತು)., ಅದೇ, ವೀರರಾಜೇಂದ್ರಪೇಟೆ ೯೬ (ಬಿಳಿಯೂರು, ಕ್ರಿ.ಶ ೮೮೮); ೯೮ (ಪೆಗ್ಗೂರು, ಕ್ರಿ.ಶ. ೯೭೮); ೧೦೧ (ನಲ್ಲೂರು, ಕ್ರಿ.ಶ. ೧೦೫೦)

೭೧. 'ಶಕ್ತಿ' ಪತ್ರಿಕೆ (೧೩.೬.೨೦೦೩) ಮಡಿಕೇರಿ; ಹೆಚ್. ಕೆ. ರಮೇಶ್ ಎಂಬುವರು ಇವುಗಳನ್ನು ಪತ್ತೆ ಮಾಡಿದ ಬಗ್ಗೆ ವರದಿಯಾಗಿದೆ.

೭೨. '**ಕನ್ನಡ ಪ್ರಭ**' ದಿನಪತ್ರಿಕೆ (೯.೭.೨೦೦೩); ಈ ಶಾಸನಗಳು ದಿನೇಶ್ ಎಂಬುವರ ಕಾಫಿತೋಟದಲ್ಲಿ ಪತ್ತೆಯಾಗಿವೆ ಎನ್ನಲಾಗಿದೆ. ಪಟೇಲ ಮುತ್ತಣ್ಣ, ಪಟೇಲ್ ಪೂವಯ್ಯನವರ ಜಮೀನಿನಲ್ಲಿ ಈ ಬಸದಿ ಇರುವುದೆಂದು ಶ್ರೀ ವಿಜಯಕುಮಾರ್ (ಶ್ರೀ ಪಟೇಲ್ ಪೂವಯ್ಯನವರ ಪುತ್ರ) ತಿಳಿಸಿದ್ದಾರೆ. ಒಟ್ಟಾರೆ ಪ್ರಾಚೀನ ಬಸದಿ, ಹೊಸ ಶಾಸನಗಳು ಪತ್ತೆ ಆದದ್ದು ಮುಖ್ಯ.

೭೩. ಎಂ.ಜಿ. ನಾಗರಾಜ್., 'ಕೊಡಗಿನ ಕೊಲೆಕಲ್ಲುಗಳು', **ಹರತಿಸಿರಿ**, ಅದೇ., ಪು. ೭೩೨

೭೪. ಎ.ಕ.೯ (ಹೊಸತು) ೧೯೯೦, ಸಕಲೇಶಪುರ ೧೪ (ಹಲಸುಲಿಗೆ); ಸಕಲೇಶಪುರ ೩೬ (ರಾಜೇಂದ್ರಪುರ; ಎ.ಕ. ೧೧ (ಹೊಸತು), ೧೯೯೮, ಮೂಡಗೆರೆ ೩೧ (ಕಮರುಗೋಡು); ಎ.ಕ. ೪ (ಹೊಸತು)., ಚಾಮರಾಜನಗರ ೪೦೭ (ಶಂಭುಪುರ); ಎ.ಕ. ೩ (ಹೊಸತು; ೧೯೭೪ ನಂಜನಗೂಡು ೨೩೩ (ಸುತ್ತೂರು)

೭೫. Micke John: *List of Devara Kadus*, 1900

೭೬. **ಕರ್ನಾಟಕದ ದಿಗಂಬರ ಜಿನಮಂದಿರಗಳು**., ೧೯೯೪, (ಸಂ) ಎಸ್. ಬಿ. ವಸಂತರಾಜಯ್ಯ, ಕರ್ನಾಟಕ ದಿಗಂಬರ ಜೈನ ಮಹಾಮಂಡಲ, ಬೆಂಗಳೂರು, ಪು. ೧೨-೧೩, ಹಾಗು ಪ್ರಸ್ತಾವನೆ ಪು. iv

೭೭. ಎ.ಕ. ಸಂ. ೧ (ಹೊಸತು)., ಅದೇ ಸೊ. ಪೇಟೆ ೭೧ (ಮುಳ್ಳೂರು, ಕ್ರಿ.ಶ. ೧೦೬೪)

ಡಾ. ಗಣಪತಿ ಗೌಡ. ಎಸ್.*

ಉತ್ತರ ಕನ್ನಡ ಜಿಲ್ಲೆಯಲ್ಲಿ ವೈಷ್ಣವಧರ್ಮ

ಸಹ್ಯಾದ್ರಿಯಿಂದಾಗಿ ಕರ್ನಾಟಕದ ಪೂರ್ವಭಾಗದಿಂದ ಪ್ರಾಕೃತಿಕವಾಗಿ ಬೇರ್ಪಟ್ಟಿರುವ ಕರಾವಳಿ ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯೂ ಒಂದು. ಅತ್ತ ಸಾಗರ, ಇತ್ತ ಸಹ್ಯ ಪರ್ವತದ ಉತ್ತುಂಗ ಸಾಲು. ಇವುಗಳ ನಡು ನಡುವೆ ಈ ಜಿಲ್ಲೆ ಬಹುಮಟ್ಟಿಗೆ ತನ್ನ ಪ್ರಾಕೃತಿಕ ಅಖಂಡತೆಯನ್ನು ಉಳಿಸಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಮಹತ್ವದ ಪ್ರದೇಶವಾಗಿದ್ದರೂ ಧರ್ಮ-ಸಂಸ್ಕೃತಿ-ಕಲೆಗಳಲ್ಲಿ ತನ್ನದೇ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ. ಇಂಥ ಜಿಲ್ಲೆಯಲ್ಲಿನ ವೈಷ್ಣವ ಧರ್ಮದ ಕುರಿತು ಇಲ್ಲಿ ವಿಶ್ಲೇಷಿಸುವಾಗ ದೊರೆತ ಶಿಲ್ಪ ಮತ್ತು ಶಾಸನಗಳನ್ನು ಮಾತ್ರ ಗಮನಿಸಲಾಗಿದೆ.

ಕ್ರಿ.ಶ. ೨ನೇ ಶತಮಾನದಲ್ಲಿ ವೈಷ್ಣವಧರ್ಮ ದಖ್ಖನ್ನಿನಲ್ಲಿ ಅಸ್ತಿತ್ವದಲ್ಲಿದ್ದುದರ ಬಗ್ಗೆ ಶಾತವಾಹನರ ರಾಣಿ ನಾಗಮೂಲನಿಕಾಳ ನಾನಾಘಡ ಗುಹಾಶಾಸನ ಆಧಾರವಾಗಿದೆ.[೧] ಆದರೆ ಈ ಕಾಲಕ್ಕೆ ವೈಷ್ಣವಧರ್ಮಕ್ಕೆ ಸೇರಬಹುದಾದ ಯಾವುದೇ ದಾಖಲೆಗಳು ಈ ಜಿಲ್ಲೆಯಲ್ಲಿ ಲಭ್ಯವಿಲ್ಲ. ಕ್ರಿ.ಶ. ೨ನೇ ಶತಮಾನದ ಕೊನೆ ಮತ್ತು ೩ನೇ ಶತಮಾನದ ಆದಿಯಲ್ಲಿ ವೈಷ್ಣವಧರ್ಮಕ್ಕೆ ಸೇರಿದ ಪ್ರಾಚೀನ ಶಿಲ್ಪಗಳು ಇಲ್ಲಿ ಲಭ್ಯವಾಗುತ್ತವೆ. ಈ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೊಂತಪಾಲದಲ್ಲಿ ದೊರೆತ ವಿಷ್ಣುವಿಗ್ರಹವು ಜಿಲ್ಲೆಯಲ್ಲಿ ದೊರೆತ ವೈಷ್ಣವ ವಿಗ್ರಹಗಳಲ್ಲಿಯೇ ಅತ್ಯಂತ ಪ್ರಾಚೀನವಾದದ್ದು. ಮೂರ್ತಿಶಿಲ್ಪ ಲಕ್ಷಣದ ಆಧಾರಗಳ ಮೇಲೆ ಇದು ಚುಟು-ಆನಂದರ ಕಾಲಕ್ಕೆ ಸೇರಿದ್ದೆಂದು ಹೇಳಲಾಗಿದೆ.[೨] ಇದೇ ವಂಶದ ಚಕ್ರವರ್ತಿಗಳು ವಿಷ್ಣುಸ್ಕಂದ, ವಿಷ್ಣುರುದ್ರ ಮೊದಲಾದ ಹೆಸರನ್ನು ಇಟ್ಟುಕೊಂಡಿರುವರು ಇಲ್ಲಿ ಗಮನಾರ್ಹವಾಗಿದೆ.

ಈ ಜಿಲ್ಲೆಯಲ್ಲಿ ಕನ್ನಡದ ಪ್ರಥಮ ಮನೆತನವಾದ ಕದಂಬರು ಆಳ್ವಿಕೆಗೆ ಬಂದರು. ಇವರು ಬಹುಮಟ್ಟಿಗೆ ವೈದಿಕ ಧರ್ಮಾವಲಂಬಿಗಳಾಗಿದ್ದರೂ, ಬ್ರಹ್ಮದೇಯ ದಾನಗಳನ್ನು ಮಾಡಿರುವದು ಶಾಸನಗಳಿಂದ ತಿಳಿದು ಬರುತ್ತದೆ. ಇವರು ವೇದಾಧ್ಯಯನ ಮತ್ತು ಯಜ್ಞಯಾಗಾದಿಗಳಲ್ಲಿ ನಿರತರಾಗಿದ್ದರೆಂದು ತಾಳಗುಂದ ಶಾಸನ ತಿಳಿಸುತ್ತದೆ. ರವಿವರ್ಮ ಕೃಷ್ಣವರ್ಮ ಮುಂತಾದವರು ಅಶ್ವಮೇಧ ಯಜ್ಞಗಳನ್ನು ನೆರವೇರಿಸಿದ್ದರು. ಕದಂಬರ ಹೆಸರುಗಳಲ್ಲಿ ಕೆಲವಷ್ಟು ವೈಷ್ಣವ ಹೆಸರುಗಳಾಗಿವೆ. ಬನವಾಸಿಯಲ್ಲಿ ದೊರೆತ ಮೃಗೇಶವರ್ಮನ ಶಾಸನ ಸಂಸ್ಕೃತದಲ್ಲಿ ವಿಷ್ಣು ಸ್ತುತಿಯನ್ನು ಪ್ರಾರಂಭಿಸುತ್ತದೆ. ಇದನ್ನು ಗಮನಿಸಿದ ವಿದ್ವಾಂಸರು ಈ ಶಾಸನ ಬಹುಶಃ ವಿಷ್ಣುದೇವಾಲಯದ ಮುಂದಿದ್ದಿರಬೇಕೆಂದು ವಾದಿಸಿದ್ದಾರೆ.[೩]

ಕ್ರಿ.ಶ. ೫-೬ನೇ ಶತಮಾನಕ್ಕೆ ಬಂದ ಹಾಗೆ ವೈಷ್ಣವ ಧರ್ಮಕ್ಕೆ ಇಲ್ಲಿ ಭದ್ರ ನೆಲೆ ದೊರೆತಂತೆ ಕಂಡು ಬರುತ್ತದೆ. ಯಾಕೆಂದರೆ ಈ ಜಿಲ್ಲೆಯಲ್ಲಿ ದೊರೆಯುವ ವೈಷ್ಣವ ಶಿಲ್ಪಗಳ ಸಂಖ್ಯೆ ಹೆಚ್ಚಾಗುತ್ತ ಹೋಗುತ್ತವೆ. ಬನವಾಸಿ, ಕಾರವಾರ ತಾಲ್ಲೂಕಿನ ಸಿದ್ದರ ಅಂಕೋಲ ತಾಲ್ಲೂಕಿನ ಬೆಂಗಣಿ, ಹೊನ್ನಾವರ ತಾಲ್ಲೂಕಿನ ಬಳ್ಳೂರು[೪] ಸಿದ್ಧಾಪುರ ತಾಲ್ಲೂಕಿನ ಮುಗ್ದೂರು[೫] ಮೊದಲಾದ ಕಡೆ ನರಸಿಂಹನ ಮೂರ್ತಿಗಳು ದೊರೆತರೆ, ವಿಷ್ಣುವಿನ ಮಾಧವನ ರೂಪದಲ್ಲಿರುವ ಮೂರ್ತಿಗಳು ಹೊನ್ನಾವರ ತಾಲ್ಲೂಕಿನ ಹೈಗುಂದ[೬] ಅಂಕೋಲಾ ತಾಲ್ಲೂಕಿನ ಸುಂಕೇರಿ[೭] ಸಿದ್ಧಾಪೂರ ತಾಲ್ಲೂಕಿನ ಮುಗ್ದೂರು[೮] ಮೊದಲಾದ ಕಡೆ ಲಭ್ಯವಾಗುತ್ತವೆ.

ಆದರೆ ಕ್ರಿ.ಶ. ೬-೭ನೇ ಶತಮಾನದಿಂದ ಹಿಡಿದು ಕ್ರಿ.ಶ. ೧೧ನೇ ಶತಮಾನದವರೆಗಿನ ಯಾವುದೇ ದಾಖಲೆಗಳು ಅಲಭ್ಯವಿರುವ ಕಾರಣ ಇಲ್ಲಿಯ ವೈಷ್ಣವ ಧರ್ಮದ ಪರಿಸ್ಥಿತಿಯ ಕುರಿತು ವಿವರಿಸುವುದು ಕಷ್ಟ. ಆದುದರಿಂದ ಈ ಧರ್ಮಕ್ಕೆ ಸರಿಸಾಟಿಯಾಗಿ ಪ್ರಬಲವಾದ ಯಾವುದೋ ಇನ್ನೊಂದು ಧರ್ಮ ನಿಂತಿರಬಹುದೇ? ಅಥವಾ ಈ ಕ್ಷೇತ್ರದಲ್ಲಿನ ಅನ್ವೇಷಣಾ ಕಾರ್ಯ ಇನ್ನೂ ತೀವ್ರವಾಗಬೇಕಾಗಿದೆಯೇ? ಮುಂದಿನ ದಿನಗಳಲ್ಲಿ ಇದಕ್ಕೆ ಪೂರಕಮಾಹಿತಿ ಲಭ್ಯವಾಗಬಹುದೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಯಾಕೆಂದರೆ ಹೊನ್ನಾವರದ ಕೇಕಯ ಚಿತ್ರಸೇನನ ಶಾಸನ[೯], ಭೋಜ ಅಶಂಕಿತವರ್ಮನ ಅಂಕೋಲಾ ತಾಲ್ಲೂಕಿನ ಹಿರೇಗಟ್ಟಿ ಶಾಸನ[೧೦] ಮತ್ತು ಕಾರವಾರದ ಬಬ್ರುವಾಡದಲ್ಲಿ ದೊರೆಯುವ ಬುದ್ಧನ ಮೂರ್ತಿ[೧೧] ಮೊದಲಾದವರನ್ನು ಗಮನಿಸಿದರೆ ಆರ್ಯಸಂಘ ಇಲ್ಲಿ ಬಲವಾಗಿರುವುದು ಕಂಡು ಬರುತ್ತವೆ. ಬಹುಶಃ ಬೌದ್ಧ ಧರ್ಮ ಈ ಸಂದರ್ಭದಲ್ಲಿ ವೈಷ್ಣವ ಧರ್ಮಕ್ಕೆ ಪ್ರಬಲ ಪೈಪೋಟಿಯ ಧರ್ಮವಾಗಿದ್ದಿರಬಹುದೇ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಆದರೆ ಹಿರೇಗುತ್ತಿ ಪ್ರಥ್ವಿವರ್ಮ ರಾಜನ ಶಾಸನ[೧೨] ಅಗ್ನಿವೇಶ್ಯ ಗೋತ್ರದ ಮಾಧವಾರ್ಯನನ್ನು ಹೆಸರಿಸಿದರೆ, ಹಿರೇಗುತ್ತಿ ಅಂಶಕಿತ ರಾಜನ ಶಾಸನ[೧೩] ಭಾರದ್ವಾಜ ಗೋತ್ರದ ಗೋವಿಂದಸ್ವಾಮಿಯನ್ನು ಹೆಸರಿಸುತ್ತಿದೆ.

* ಇತಿಹಾಸ ಉಪನ್ಯಾಸಕರು, ಫೀ.ಮಾ.ಕೆ.ಎಂ. ಕಾರಿಯಪ್ಪ ವಿಶ್ವವಿದ್ಯಾನಿಲಯ ಕಾಲೇಜು, ಮಡಿಕೇರಿ - ಕೊಡಗು, ೫೭೧ ೨೦೧

ಕ್ರಿ.ಶ. ೧೦ನೇ ಶತಮಾನದ ಸುಮಾರಿಗೆ ಆಳ್ವಿಕೆಗೆ ಬಂದ ಶಿಶುಗಲಿ ಪಾಂಡ್ಯರ ಕಾಲದಲ್ಲಿ ಪುನಃ ವೈಷ್ಣವಧರ್ಮ ಇಲ್ಲಿ ರಾಜಾಶ್ರಯ ಪಡೆದುಕೊಳ್ಳಲು ಪ್ರಾರಂಭಿಸಿತು. ಕ್ರಿ.ಶ. ೧೧೪೦ರ ತುಂಬೋಳ್ಳಿ ಶಾಸನ ತಿಳಿಸುವಂತೆ ಸ್ವಸ್ತಿ ಶಕವರ್ಷ ೧೦೬೨ರ ರೌದ್ರ ಸಂವತ್ಸರದ ಪುಶ್ಯ ಶುದ್ಧ ೧೩ ಉತ್ತರಾಯಣ ಸಂಕ್ರಮಣ ವ್ಯತಿಪಾತಯೋಗ ಕೂಡಲು ಕನ್ನೆದಾನ ಅಗ್ರಹಾರ ತುಂಬೊಳ್ಳಿಯಲ್ಲಿ ಮಾಡಿಸಿದ ವಿಷ್ಣು ವಿಗ್ರಹಕ್ಕೆ ಮತ್ತು ಅಲ್ಲಿಯ ಪೂಜೆಗೆ, ಶ್ರೀಗಂಧಕ್ಕೆ, ಚೈತ್ರಪವಿತ್ರಕ್ಕೆ, ಮಠದ ಮಾಣಿಗೆ, ಪ್ರತಿ ತಿಂಗಳು ನಡೆಯುವ ಭಾರತಕ್ಕೆ, ನೈವೇದ್ಯಕ್ಕೆ ಅನೇಕ ಗ್ರಾಮಗಳನ್ನು ದಾನ ಬಿಟ್ಟ ವಿಷಯ ತಿಳಿದು ಬರುತ್ತದೆ.[೧೪] ಇಲ್ಲಿಯ ವಿಷ್ಣುವಿನ ವಿಗ್ರಹ ಅತ್ಯಂತ ಮನೋಹರವಾಗಿದ್ದು ಚೋಳರ ಪ್ರಭಾವವನ್ನು ಇಲ್ಲಿಯ ವಿಷ್ಣು ಶಿಲ್ಪದಲ್ಲಿ ಕಾಣಬಹುದು.

ಕುಮಟಾ ತಾಲ್ಲೂಕಿನ ಅಡತಾರೆಯಲ್ಲಿ ಎರಡು ಶಾಸನವಿದೆ. ಇದು ಶಕವರ್ಷ ೧೦೮೯, ಸರ್ಬ್ಬಜಿತ್ ಸಂವತ್ಸರ, ಭಾದ್ರಪದ ಶುದ್ಧ ಸಪ್ತಮಿ ಬುಧವಾರ (ಕ್ರಿ.ಶ. ೧೧೬೨ ಆಗಸ್ಟ್ ೨೩) ಪಟ್ಟಣ ತೈಲವರ್ಮನನ್ನು ಹೆಸರಿಸಿ ಆತನ ತಮ್ಮ ಮಾವುಲಿದೇವ ಮತ್ತು ಮೊಮ್ಮಗ ವೀರದೇವ ಈ ಶಾಸನವನ್ನು ಪ್ರತಿಪಾಲಿಸಿದ ವಿಷಯ ಹೇಳಿ, ಅಲ್ಲಿಯ ಕೇಶವ ದೇವರಿಗೆ ನೀಡಿದ ದಾನವನ್ನು ತಿಳಿಸುತ್ತದೆ.[೧೫]

ಚಂದಾವರದ ಕದಂಬರು ವೈಷ್ಣವ ಧರ್ಮದ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಟ್ಟರು. ಈ ವಂಶದ ಹಿರಿಯ ದಂಡನಾಯಕನಾಗಿದ್ದ ಕೀರ್ತಿನಾರಾಯಣ ದಂಡನಾಯಕರು ಚಂದಾವರದಲ್ಲಿ ಪರಿಪೂರ್ಣ ಯೋಗಾನರಸಿಂಹನ ವಿಗ್ರಹವನ್ನು ಸ್ಥಾಪಿಸಿ ಅದರ ಅಂಗಭೋಗ ಮತ್ತು ರಂಗಭೋಗಕ್ಕೆ ದತ್ತಿ ಬಿಟ್ಟ ವಿಷಯವನ್ನು ಕ್ರಿ. ಶ. ೧೨೨೩ರ ಶಾಸನ ತಿಳಿಸುತ್ತದೆ.[೧೬]

ವಿಜಯನಗರದ ಆಳ್ವಿಕೆ ಕಾಲದಲ್ಲಿ ಅವರ ಮಾಂಡಲಿಕರಾಗಿ ಅನೇಕರು ಕರಾವಳಿ ಜಿಲ್ಲೆಯಲ್ಲಿದ್ದರು. ಅವರಲ್ಲಿ ನಗಿರೆ ರಾಜ್ಯದ ಮಾಂಡಳಿಕರಾಗಿದ್ದ ಪದುಮಲದೇವಿ ಕೃಷ್ಣ ದೇವರಾಯನ ಆಳ್ವಿಕೆಯಲ್ಲಿ ಕ್ರಿ.ಶ. ೧೫೨೬ರ ಜೂನ್ ೨೪ ರವಿವಾರದಂದು ಗೋಪಣ ಸೇನುಬೋವನ ಮಗನಾದ ಮಹಾಳಪ್ಪ ಸೇನುಬೋವರು ಧರ್ಮಮಾಡಿ ಗೋಕರ್ಣ ಕ್ಷೇತ್ರದೊಳಗೆ ಕುಂಬಿಟಿಯ ವರ್ಧಮಾನ ಸಂತತಿಯ ಮಹಾಬಳ ದೇವರಸರ ಮಕ್ಕಳು ಬೊಂಮಿ ದೇವರಸರು ಸಂಗೀರಾಯರಸನ ಮಕ್ಕಳು ಮಹಾಬಳದೇವರಸರು, ಮೊದಲಾದವರ ಕೈಯಲ್ಲಿ ಭೂಮಿಯನ್ನು ಖರೀದಿಸಿ ರಘುನಾಥ ದೇವ ಮತ್ತು ಅದಕ್ಕೆ ಹೊಂದಿದ ಮಠವನ್ನು ನಿರ್ಮಿಸಿದರು ಎಂದು ಕುಮಟಾ ತಾಲ್ಲೂಕಿನ ಮಿರ್ಜಾನ ಶಾಸನದಿಂದ ತಿಳಿದು ಬರುತ್ತದೆ.[೧೭]

ಭಟ್ಕಳದ ಕೇತಪ್ಪೈ ನಾರಾಯಣ ದೇವಾಲಯದಲ್ಲಿ ದೊರೆತ ಶಾಸನವೊಂದು ಕ್ರಿ.ಶ. ೧೫೪೬ರ ಕಾಲಕ್ಕೆ ಸೇರಿದೆ. ಚೆನ್ನಾದೇವಿ ಅಮ್ಮನ ಕಾಲದ ಈ ಶಾಸನದಲ್ಲಿ ಕೇತಪ್ಪೈ ನಾರಾಯಣ ದೇವಾಲಯದ ನಿರ್ಮಾಣದ ಬಗ್ಗೆ ವಿವರಣೆ ಇದೆ. ದೇವರ ನಿತ್ಯ ನೈವೇದ್ಯಕ್ಕಾಗಿ ತೆರಿಗೆ ರಹಿತವಾದ ಭೂಮಿಯನ್ನು ದಾನ ನೀಡಿರುವದನ್ನು ಇದು ಪ್ರಸ್ತಾಪಿಸುತ್ತದೆ. ಈ ಶಾಸನದಲ್ಲಿ ಹೇಳಿರುವ ಕೇತಪ್ಪೈ ಗೋವಾ ರಾಜ್ಯದ ಕುಡುಲೇರಿಯಿಂದ ಬಂದನೆಂಬುದನ್ನು ಇದು ದೃಢಪಡಿಸುತ್ತಿದೆ. ಆದರೆ ಈತ ಭಟ್ಕಳಕ್ಕೆ ಬಂದ ಕಾರಣ ವನ್ನು ಮಾತ್ರ ಶಾಸನ ಪ್ರಸ್ತಾಪಿಸುವುದಿಲ್ಲ. ಇಲ್ಲಿಯ ವೈಷ್ಣವರ ಉಪಹಾರಕ್ಕಾಗಿ ಭೂಮಿಯನ್ನು ದತ್ತಿ ಬಿಡಲಾಗಿತ್ತು.[೧೮]

ಕೇತಪ್ಪೈನ ಮಕ್ಕಳಾದ ದಾಮಪ್ಪಯ್ಯ, ವಾಮನಪ್ಪಯ್ಯ, ತಿಮ್ಮಪ್ಪಯ್ಯ ಮಾದಪ್ಪಯ್ಯ ಮತ್ತು ಕ್ರಿಷ್ಣಪ್ಪಯ್ಯ ಈ ಮೇಲಿನ ದೇವಾಲಯಕ್ಕೆ ಅಪಾರ ದಾನ ನೀಡಿರುವುದಾಗಿ ಕ್ರಿ.ಶ. ೧೫೫೪ರ ಶಾಸನ[೧೯] ತಿಳಿಸಿದರೆ, ನಾರಾಣ ಹೆಬ್ಬಾರನ ಮಗ ಜಮ್ಮಿ ಹೆಬ್ಬಾರ ಬ್ರಾಹ್ಮಣರ ಊಟೋಪಚಾರಕ್ಕಾಗಿ ಭೂಮಿ ಮತ್ತು ಹಣವನ್ನು ದಾನ ನೀಡಿದ್ದುದಾಗಿ ತಿಳಿದು ಬಂದಿದೆ.[೨೦] ಇದೇ ಕಾಲದ ಇನ್ನೊಂದು ಶಾಸನ ತಿಳಿಸುವಂತೆ ನಾರಾಯಣ ದೇವರಿಗೆ ಕೇತಪ್ಪೈ ಮತ್ತು ಆತನ ಐದು ಜನ ಮಕ್ಕಳ ಹೆಸರಲ್ಲಿ ಪ್ರತಿನಿತ್ಯ ಸೇವೆ ಸಲ್ಲಿಸಬೇಕಾಗಿತ್ತು.

ಗೇರುಸೊಪ್ಪೆಯ ರಾಣಿ ಚೆನ್ನಾಭೈರಾದೇವಿ ಜೈನ ಧರ್ಮಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದರೂ, ವೈಷ್ಣವ ಧರ್ಮದ ಏಳ್ಗೆಗೆ ಶ್ರಮಿಸಿದ್ದಳೆನ್ನುವದಕ್ಕೆ ಆಧಾರಗಳಿವೆ. ಈಕೆಯ ಆಳ್ವಿಕೆಯಲ್ಲಿ ತಿಮ್ಮಪ್ಪ ಸೇನಬೋವ ಮತ್ತು ಆತನ ಮೊಮ್ಮಗನಾದ ಕರಣಿಕ ಮಲ್ಲರಸ ತಿರುವೆಂಗಳನ (ವೆಂಕಟೇಶ)ದೇವಾಲಯವನ್ನು ನಿರ್ಮಿಸಿದ್ದರು. ಈ ದೇವರ ದಿನನಿತ್ಯದ ಪೂಜೆ ಪುನಸ್ಕಾರಕ್ಕಾಗಿ ೩೬ ಮೂಡೆ ಹಿಡುವಳಿ ಸಿಗುವ ಭೂಮಿಯನ್ನು ದಾನಮಾಡಲಾಗಿತ್ತು. ಇದರಿಂದ ನೈವೇದ್ಯ, ಹೂಹಾರ, ಸಂಜೆ ನೈವೇದ್ಯ, ಗಂಧ ಊದಬತ್ತಿ, ದೀಪ, ಆರತಿ ಜೊತೆಗೆ ಕಾರ್ತಿಕ ಮಾಸದಲ್ಲಿ ನಡೆಯುವ ವಿಶೇಷ ಹಬ್ಬಕ್ಕೂ ಈ ದತ್ತಿಯನ್ನು ಸದ್ವಿನಿಯೋಗಪಡಿಸಿಕೊಳ್ಳಲಾಗುತ್ತಿತ್ತು.[೨೧]

ಶಿರ್ಶಿ ತಾಲ್ಲೂಕಿನ ಸೋಂದಾ ವೈಷ್ಣವ ಧರ್ಮದ ಒಂದು ಪ್ರಮುಖ ಕೇಂದ್ರ. ಇದು ಕ್ರಿ.ಶ. ೧೩ನೇ ಶತಮಾನದ ಮಧ್ಯ ಭಾಗದಿಂದ ವೈಷ್ಣವ ಧರ್ಮದ ಪ್ರಮುಖ ಕೇಂದ್ರವಾಗಿ ಬೆಳೆದುಕೊಂಡು ಬಂದಿತು. ಸಹಸ್ರಲಿಂಗದಲ್ಲಿ ದೊರೆಯುವ ಕದಂಬ ತ್ರಿಭುವನ ಮಲ್ಲನ ಶಾಸನದಂತೆ,[೨೨] ಪ್ರಕಾಶತೀರ್ಥರ ಶಿಷ್ಯರಾದ ರಾಜೇಂದ್ರಭಾರತೀಯರು ಇಲ್ಲಿ ಕೇಶವಮೂರ್ತಿಯನ್ನು ಪ್ರತಿಷ್ಠಾಪಿಸಿದರು. ದೊರೆ ಎರಡನೇ ಅರಸಪ್ಪ ನಾಯಕ

ಸಹಸ್ರಲಿಂಗದಲ್ಲಿನ ಶಂಕರ ಮಠಕ್ಕೆ ಸೇರಿದ ಮಠವೊಂದನ್ನು ಸ್ವರ್ಣವಲ್ಲಿಗೆ ವರ್ಗಾಯಿಸಿದನೆಂದು ತಿಳಿದುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಕಳ್ಳರು ಮಠದ ಆಸ್ತಿಯನ್ನು ಪದೇ ಪದೇ ದೋಚುತ್ತಿದ್ದುದೇ ಆಗಿತ್ತೆಂದು ಇತ್ತೀಚಿನ ಸಂಶೋಧನೆ ತಿಳಿಸುತ್ತದೆ.[೨೩]

ಮಠದ ಪಕ್ಕದಲ್ಲಿಯೇ ಅರಸಪ್ಪನಾಯಕ ಲಕ್ಷ್ಮೀನರಸಿಂಹ ದೇವಾಲಯವನ್ನು ನಿರ್ಮಿಸಿದನು. ಆ ಸಂದರ್ಭದಲ್ಲಿ ಚಂದ್ರಶೇಖರ ಸರಸ್ವತಿಯವರು ಈ ಮಠದ ಮಠಾಧೀಶರಾಗಿದ್ದರು ಎನ್ನುವದು ಮಠದಲ್ಲಿ ದೊರೆತ ಕ್ರಿ.ಶ. ೧೬೭೪ರ ಶಾಸನ ತಿಳಿಸುತ್ತದೆ.[೨೪] ಸವಾಯಿ ರಾಮಚಂದ್ರ ಸೋದೆಯ ಚಕ್ರವರ್ತಿಯಾಗಿದ್ದಾಗ ಸ್ವರ್ಣವಳ್ಳಿ ಮಠಾಧೀಶರಾದ ಸರ್ವಜ್ಞ ಸರಸ್ವತಿಯವರು ರಾಜನ ಶ್ರೇಯಸ್ಸನ್ನು ಬಯಸಿ ವೈದಿಕಯಜ್ಞ ಕೈಗೊಂಡಿದ್ದರೆಂದು ತಿಳಿಸುತ್ತದೆ.

ಕ್ರಿ.ಶ. ೧೬ನೇ ಶತಮಾನದಲ್ಲಿ ಮಾಧ್ವ ಪಂಥದ ವಾದಿರಾಜರು ಸೋಂದಾದಲ್ಲಿ ವೈಷ್ಣವ ಧರ್ಮದ ಪ್ರಗತಿಗಾಗಿ ಶ್ರಮಿಸಿದರು. ೧೫೮೩ರಲ್ಲಿ ವಾದಿರಾಜರು ತ್ರಿವಿಕ್ರಮನ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪಿಸಿದರು.[೨೫] ಇಮ್ಮಡಿ ಅರಸಪ್ಪ ನಾಯಕ ಅಧಿಕ ಮೊತ್ತದ ದಾನವನ್ನು ಈ ಮಠಕ್ಕೆ ನೀಡಿದನು. ತ್ರಿವಿಕ್ರಮ ದೇವಾಲಯದ ಮುಂದಿರುವ ಧ್ವಜಸ್ತಂಭವನ್ನು ವಾದಿರಾಜರ ಶಿಷ್ಯರಾದ ವೇದನಿಧಿತೀರ್ಥರು ಸ್ಥಾಪಿಸಿದರು.

ಬನವಾಸಿ ಮಧುಕೇಶ್ವರ ದೇವಾಲಯದಲ್ಲಿರುವ ಶಾಸನದಂತೆ[೨೬] ಇಮ್ಮಡಿ ಅರಸಪ್ಪನ ಮಗಳಾದ ಅರಸಾದೇವಿ ಹಳೆಯ ನರಸಿಂಹನ ವಿಗ್ರಹವನ್ನು ಬದಲಿಸಿ ಹೊಸ ವಿಗ್ರಹವನ್ನು ಪ್ರತಿಷ್ಠಾಪಿಸಿ ಪೂಜೆ ಮತ್ತು ನೈವೇದ್ಯಕ್ಕಾಗಿ ದಾನ ನೀಡಿದ್ದಳೆಂದು ತಿಳಿದು ಬಂದರೆ, ಅರಸಪ್ಪನಾಯಕನ ಮಗ ರಾಮಚಂದ್ರನಾಯಕನ ಶಾಸನದಂತೆ ಇಲ್ಲಿಯ ಲಕ್ಷ್ಮೀನಾರಾಯಣ ದೇವಾಲಯವನ್ನು ಕುಂದಾಪುರದ ವ್ಯಾಸರಾಯರ ಮಠದ ರಘುಪತಿತೀರ್ಥರ ಶಿಷ್ಯರಾದ ಹಯಗ್ರೀವತೀರ್ಥರು ನೋಡಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಸೋಂದಾ ಅರಸರ ಕಾಲದಲ್ಲಿ ವೀರಶೈವ ಧರ್ಮ ತನ್ನ ಪ್ರಾಬಲ್ಯವನ್ನು ಗಳಿಸಿಕೊಳ್ಳಲೂ ಪ್ರಾರಂಭಿಸಿದರೂ, ವೈಷ್ಣವ ಧರ್ಮವೇನೂ ಪ್ರಭಾವ ಹೀನವಾಗಲಿಲ್ಲ. ಯಾಕೆಂದರೆ ಇಂದಿನವರೆಗೂ ಇಲ್ಲಿಯ ಮಠ ತನ್ನ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದನ್ನು ನೋಡಿದರೆ ವೀರಶೈವ ಧರ್ಮಕ್ಕೆ ಅರಸರು ರಾಜಾಶ್ರಯ ನೀಡಿದ್ದರೂ ಉಳಿದವರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಇಂದು ಈ ಜಿಲ್ಲೆಯಲ್ಲಿ ಹಲವು ವರ್ಗದವರು ವೈಷ್ಣವ ಧರ್ಮವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಒಟ್ಟಿನಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ವೈಷ್ಣವ ಧರ್ಮ ಈ ಭಾಗದಲ್ಲಿ ಪ್ರಾಚೀನ ಕಾಲದಿಂದಲೇ ಅಸ್ತಿತ್ವಕ್ಕೆ ಬಂದು ಬಹುಜನರು ಅನುಸರಿಸಿದ ಧರ್ಮವಾಗಿ ಬೆಳೆಯಿತು ಎಂದು ಹೇಳಬಹುದು.


ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Sircar D.C., *Select inscriptions bearing on Indian History,* vol - I, No 82. P. 193.
೨. ಅ. ಸುಂದರ., 'ಇತ್ತೀಚಿನ ಕೆಲವು ಪುರಾತತ್ವ ಸಂಶೋಧನೆಗಳು', **ಕರ್ನಾಟಕ ಭಾರತಿ** ಸಂ. VIII/2. ಪು. ೧೫.
೩. Padigar S.V., *The cult of Vishnu in Karnataka,* Karnatak University, Dharwad.
೪. ಅ ಸುಂದರ., 'ಪ್ರಾಚೀನ ಕರ್ನಾಟಕದಲ್ಲಿ ನರಸಿಂಹ ಶಿಲ್ಪದ ವಿಕಾಸ ಒಂದು ವಿವೇಚನೆ', **ಸಂಶೋಧನೆ**, ಎಂ. ಚಿದಾನಂದಮೂರ್ತಿಯವರ ಗೌರವ ಗ್ರಂಥ, ಪು. ೭೮೪-೭೯೩.
೫. ಗಣಪತಿ ಗೌಡ., 'ಮುಗ್ದೂರಿನ ಎರಡು ಪ್ರಾಚೀನ ಶಿಲ್ಪಗಳು', **ಕರ್ನಾಟಕ ಭಾರತಿ**, ಸಂ. XXIv/3 ಪು. ೮೧-೮೪.
೬. ಅ ಸುಂದರ., 'ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು', **ಕರ್ನಾಟಕ ಭಾರತಿ**, ಸಂ. VIII/2 ಪು. ೧೦-೧೨.
೭. ಅ. ಸುಂದರ., 'ಸಿದ್ಧರ ಮತ್ತು ಸುಂಕೇರಿ ಗ್ರಾಮಗಳಲ್ಲಿನ ಎರಡು ಅಪರೂಪದ ಶಿಲಾಮೂರ್ತಿಗಳು, **ಕರ್ನಾಟಕ ಭಾರತಿ**, ಸಂ. XXI/3 ಪು. ೧೨೧-೩೧.
೮. ಗಣಪತಿ ಗೌಡ., 'ಮುಗ್ದೂರಿನ ಎರಡು ಪ್ರಾಚೀನ ಶಿಲ್ಪಗಳು', ಕರ್ನಾಟಕ ಭಾರತಿ, ಸಂ. XXIV/3 ಪು. ೮೧-೮೪.
೯. Gopal B.R., Corpus of Kadamba Inscriptions Vol. I. No. 17.
೧೦. *Epigraphia Indica.,* Vol. XXXIII, pp. 63-64.
೧೧. ಅ ಸುಂದರ., 'ಉತ್ತರ ಕನ್ನಡ ಜಿಲ್ಲೆಯ ಅಪೂರ್ವ ಶಿಲ್ಪಗಳು', **ಮಾನವಿಕ ಭಾರತಿ**, ಸಂ. ೩/೨ ಪು. ೧-೨.
೧೨. *Epigraphia Indica,* Vol XXXIII Pp. 70-75.
೧೩. ಅದೇ ಪು. ೭೦-೭೫.
೧೪. ಗಣಪತಿ ಗೌಡ., **ಕರ್ನಾಟಕ ಭಾರತಿ**, ಸಂ. XXIII/7 ಪು. ೨೧-೩೨.
೧೫. ಅದೇ. ಪು. ೧೦೪-೧೦೮.

೧೬. Sampath M.D., Chandavara Inscription of Kadamba Bhairadevarasa, *Journal of the Epigraphical Society of India*, Vol. XI., pp. 88-94.
೧೭. *Karnataka Inscriptions,* Vol. VI No. 69, pp. 186-90, Dharwad.
೧೮. *Annual Report of South Indian Epigraphy,* 1965-66, pp. B No. 367.
೧೯. ಅದೇ ನಂ. ೩೭೦.
೨೦. ಅದೇ., ನಂ. ೩೭೧.
೨೧. *Mysore Archaeologcial Report.,* 1928, No. 112.
೨೨. *Annual Report & South India Epigraphy.,* 1939-40.
೨೩. Hegde P.R., Sonda : *A Cultural Study, an unpublished,* M. Phill dissertatio, K.U. Dharwad, p. 95.
೨೪. Epigraphia Indica., Vol. XXXII, pp. 79-81.
೨೫. *Annual Report of South Indian Epigraphy.,* 1939-40 No. 75.
೨೬. *South Indian Inscriptions.,* Vol. XX. No. 241.

★ ★ ★ ★

ವಿಶ್ವರೂಪ ದರ್ಶನ



(ಕೃಪೆ : ಅ.ಲ.ನರಸಿಂಹನ್)

ರಣಾರಂಗದಲಿ ನೆಂಟರನು ನೋಡಿ ನಿರ್ಲಿಪ್ತ-ಶಸ್ತ್ರ ಸನ್ಯಾಸಿ ಅರ್ಜುನ
ರಥವ ನಡೆಸಿದ ಮುಂಬದಿಯ ಅಶ್ವ ಸಾರಥಿ
ನುಡಿದ, ಮೋಹಗಳ ಕಳೆದು ಆದು ಗೆಲ್ಲು ವಿಶ್ವ
ಎಂದವನು ತೋರಿದನು ವಿಶ್ವರೂಪದರ್ಶನ
ತ್ರಿವಿಕ್ರಮ ಆದವನು ವಾಮನ
ಇತಿಹಾಸಕ್ಕೆ ಭಾರತದೀ ಘಟನೆ ವೀರಸಂಸ್ಕೃತಿಯ ಬೇರು

ವ. ರಮೇಶ ಕಾರಂತ*

ಹಲಸನಾಡು ಮನೆತನ


ಈಗಿನ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೆಲವೇ ಕೆಲವು ಪುರಾತನ ಹಾಗೂ ಪ್ರತಿಷ್ಠಿತ ಮನೆತನಗಳಲ್ಲಿ ಹಲಸನಾಡು ಮನೆತನವೂ ಒಂದು. ಹಲಸನಾಡು ಕುಂದಾಪುರ ಪಟ್ಟಣದಿಂದ ಈಶಾನ್ಯಕ್ಕೆ ೧೫ಕಿ.ಮೀ. ದೂರದಲ್ಲಿರುವ ಪುಟ್ಟಹಳ್ಳಿ. ಇದು ಒಂದು ಕಾಲಕ್ಕೆ ಬಗ್ವಾಡಿ ಹೋಬಳಿಯ ಒಂದು ದೊಡ್ಡ ಮಾಗಣೆಯಾಗಿ ಹದಿನಾರು ಗ್ರಾಮಗಳ ಕೇಂದ್ರವಾಗಿತ್ತು. ಈಗ ಹಲಸನಾಡು ಊರಿನ ಹೆಸರು ಹಲಸನಾಡು ಮನೆತನದಿಂದಾಗಿ ಮಾತ್ರ ಉಳಿದಿದೆ. ಕ್ರಿ.ಶ. ೧೫೬೫ರ ರಕ್ಕಸತಂಗಡಿಯ ನಿರ್ಣಾಯಕ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಮಣ್ಣುಪಾಲಾಗಿ ಹೋದ ನಂತರ ತುಳುನಾಡು ಕೆಳದಿಯ ನಾಯಕರ ನೇರ ಪ್ರಭಾವಕ್ಕೆ ಒಳಗಾದುದು, ಐತಿಹಾಸಿಕ ಸತ್ಯ. ಆದರೆ ಇದಕ್ಕೂ ಮೊದಲೆ ಕೆಳದಿಯ ವೆಂಕಟಪ್ಪನಾಯಕನು ತುಳುನಾಡಿನ ಹಲವಾರು ತುಂಡರಸರನ್ನು ಸದೆ ಬಡಿದು ಅಲ್ಲಿ ತನ್ನ ರಾಜ ಪ್ರತಿನಿಧಿಗಳನ್ನು ನೇಮಿಸಿ ಅವರಿಗೆ, "ಸ್ಥಳದ ಸೇನಬೋವಿಕೆ, ದಂಡಿಗೆ, ಪಾಲಕಿ, ಹಿಡಿಗುದುರೆ, ಸತ್ತಿಗೆ, ಪಶ್ಯ ಉಭಯ ದೀವಟಿಗೆ, ಚಲುರಿ, ಹೃದಯಹಾರ, ಸುರುಮಾಲ, ಸಗ್ಗಳೆ, ಕಾಳಂಜಿ ನಡೆದು ಡಬು, ಕೊಂಬು, ಕರ್ಣ, ನಿಶಾನಿ, ಸರ್ವಮಾಂನ್ಯ, ಉಂಬಳಿ, ಸ್ಥಾನಮಾಂನ್ಯ, ಮುಂತಾದ ತೇಜಮಾಂನ್ಯವಂನು ಪಡದು ವಪ್ಪಿ ಸಾಧನ, ರಾಯಸ, ಶಾಸನಂಗಳಂನು ಮಾಡಿಕೊಂಡು.... ನೀನು ಸಂತಾನ ಪಾರಂಪರರ್ಯವಾಗಿ ಅನುಭವಿಸಿ ಬರದು ಪ್ರಾಕು, ಪ್ರಮಾಣ ಸಲುವ ಉಂಬಳಿ ಸ್ಥಳ ವೆಚ್ಚ ಸಂಬಳವನು ತೆಗ್ದುಕೊಂಡು ಕಾಲಂಪ್ರತಿಯಲ್ಲೂ ನಂಮ ಅರಮನಿಗೆ ಲೆಖವಂನು ಬರದು ನಾಡು, ದೇಶಕ್ಕೂ ನಮಗೂ ಅನುಗುಣವಾಗಿ ಸತ್ಯ ಮುಟ್ಟಿ ಸೇವೆಯೇ ಪ್ರಧಾನವಾಗಿ ನಡಕೊಳ್ಳುತ್ತಾ ಬಾಹದೆಂದು...." ಶಾಸನವನ್ನು ಬರೆಸಿದ್ದನು. ಹೀಗೆ ಕೆಳದಿಯ ಅರಸರಿಂದ ಮನ್ನಣೆಗೊಂಡ ಒಂದು ಮನೆತನವೇ ಈ ಹಲಸನಾಡು ಮನೆತನ.

ಹಲಸನಾಡು ಮನೆತನದ ಪೂರ್ವಿಕರು ಘಟ್ಟದ ಮೇಲಿನವರಾಗಿದ್ದು ನಂತರ ಹಲಸನಾಡಿಗೆ ಬಂದು ನೆಲೆನಿಂತರು ಎಂದು ಡಾ. ವಸಂತಮಾಧವರ ಹೇಳಿಕೆ. ಲಭ್ಯ ದಾಖಲೆಗಳ ಪ್ರಕಾರ ಹಲಸನಾಡು ಸೂರಪ್ಪಯ್ಯ ಮತ್ತು ಸಂಕಪ್ಪಯ್ಯ ಆದಿಯಲ್ಲಿ ಸ್ಥಳದ ಸೇನಬೋವರಾಗಿದ್ದು ಅವರ ಸಂತತಿಯ ನಾಗಪ್ಪಯ್ಯ ಮತ್ತು ಚನ್ನಪ್ಪಯ್ಯ ಎಂಬುವರು ಕೆಳದಿಯ ರಾಣಿ ಚೆನ್ನಮ್ಮಾಜಿಯ ನಂತರ ಪಟ್ಟಕ್ಕೆ ಬಂದ ಬಸಪ್ಪನಾಯಕ (ಕ್ರಿ.ಶ. ೧೬೯೮-೧೭೧೪) ನ ಕಾಲದಿಂದ ಚನ್ನಬಸಪ್ಪನಾಯಕನ ಕಾಲದ ತನಕ ಆ ರಾಜರ ಆಸ್ಥಾನದಲ್ಲಿ ಮಂತ್ರಿಗಳಾಗಿದ್ದರೆಂದು ತಿಳಿದುಬರುತ್ತದೆ. "ಕೆಳದಿ ನೃಪವಿಜಯ"ದ ದಶಮಾಶ್ವಾಸ ಪುಟ. ೨೦೭ರಲ್ಲಿ, 'ಭೂಮಿಗೆ ಅತಿಶ್ರೇಷ್ಠಳಾದ ಚೆನ್ನಮಾಂಬೆಯ ತರುವಾಯ ಆಕೆಯ ಮಗ ಬಸವಪ್ಪನಾಯಕನು ರಾಜ್ಯಭಾರವನ್ನು ವಹಿಸಿಕೊಂಡು ಅತ್ಯಂತ ಸಂಭ್ರಮದಿಂದ ಬಾಳಿದನು, ವ॥ ಅದು ಯಾವ ರೀತಿಯೆಂದರೆ ಬಸವಪ್ಪನಾಯಕನು ತನ್ನ ತಂದೆ ಮರಿಯಪ್ಪ ಶೆಟ್ಟರು... ಚನ್ನಪ್ಪಯ್ಯ ಅದೇ ಅದೇ ನಾಗಪ್ಪಯ್ಯ ಮುಂತಾದ ಮಂತ್ರಿಗಳು..." ಎಂಬ ಉಲ್ಲೇಖವಿದೆ. ಅದೇ ಕೃತಿಯ ೧೧ನೆಯ ಆಶ್ವಾಸದ ಕೊನೆಯಲ್ಲಿ, "ಇವರು ಉಭಯತರ (೨ನೇ ಸೋಮಶೇಖರನಾಯಕ ಮತ್ತು ಬಸವಪ್ಪನಾಯಕ) ಕಾಲದಲ್ಲೂ ಅರಮನೆಯಲ್ಲಿ ಬದುಕುಗಳ ಮಾಡಿದವರು - ಹಲಸನಾಡು ನಾಗಪ್ಪ" ಎಂಬ ಹೆಸರು ಕಂಡು ಬರುತ್ತದೆ. ಅಲ್ಲದೆ ಕರ್ನಲ್ ಮೆಕೆನ್ಜಿ ಬರೆಯಿಸಿದ "ಕಬ್ಬುನಾಡು ಕೈಫಿಯತ್ತಿನಲ್ಲಿ, "ಈ ಮಾಗಣೆಯ ಶಾನುಬೋವರು ಸಂಕಪ್ಪಯ್ಯನ ಕಡೆಯಿಂದ ಹಲಸನಾಡು ಚನ್ನಪ್ಪಯ್ಯ ಎಂಬ ಉಲ್ಲೇಖವಿದೆ. ಹಾಗೂ "ಯಳೆರೆ ಮಾಗಣೆ ಕೈಫಿಯತ್ತಿ"ನಲ್ಲಿ ಮಾಗಣೆ ಶಾನುಬೋವರು ಹಲಸನಾಡು ಚನ್ನಪ್ಪಯ್ಯನವರು ಸೋಮಶೇಖರ ನಾಯಕನ ಕಾಲದಲ್ಲಿ ಕಾಣಿಕೆ ಕೊಟ್ಟು ಈ ಮಾಗಣೆಯನ್ನು ತಮ್ಮ ಹೆಸರಿಗೆ ಮಾಡಿಕೊಂಡರೆಂಬ ಉಲ್ಲೇಖವಿದೆ. "ಹಲಸನಾಡು ಮಾಗಣೆ ಕೈಫಿಯತ್ತಿ"ನಲ್ಲೂ, "ಪಾಕು ಶಂಕರನಾರಾಯಣ ಭಟ್ಟನ ಕಾಲದಾರಭ್ಯ ಸ್ಥಳಪ್ರತಿ ಹಲಸನಾಡು ನಾಗಪ್ಪಯ್ಯನ ಹಿರಿಯರು ಲಕ್ಷ್ಮೀನಾರಾಯಣ ನಾಯಕರ ಕಾಲದಾರಭ್ಯ ತುಕಡಿ ಅಖೈರುವರೆಗೆ ನಡೆದು ಬಂತು. ಉಭಯ ಪ್ರತಿ ಚನ್ನಪ್ಪಯ್ಯ ಮಾದಪ್ಪವೊಡೇರ ಕಾಲದಾರಭ್ಯ ನಡೆದುಬಂತು, ಕುಂಪಣಿ ದರಬಾರು ಆದಮೇಲೆ ಹಲಸನಾಡು ಚನ್ನಪ್ಪಯ್ಯನವರ ಕಡೆಯವರಿಗೆ ರಾಮಪ್ಪಯ್ಯ, ನಾಗಪ್ಪಯ್ಯನ ಕಡೆಯವರಿಗೆ ರಾಮಪ್ಪಯ್ಯ" ಎಂಬ ಉಲ್ಲೇಖವಿದೆ.

ಕೆಳದಿಯ ಅರಸು ೨ನೇ ಸೋಮಶೇಖರನಾಕನ ಕಾಲದಲ್ಲಿ ಅರಮನೆಯ ಊಳಿಗದಲ್ಲಿದ್ದ ನಾಗಪ್ಪಯ್ಯ, ಚನ್ನಪ್ಪಯ್ಯನವರಲ್ಲದೆ ಸೂರಪ್ಪಯ್ಯನವರ ಮಾದಪ್ಪವೊಡೇರು ಕರಣಿಕರಾಗಿದ್ದುದು ತಿಳಿದು ಬರುತ್ತದೆ. ಇದೇ ಕಾಲದಲ್ಲಿ ಸ್ಥಳದ ಸೇನಬೋವಿಕೆ ಮಾಡಿ

* ವಿಜಯಾ ಬ್ಯಾಂಕ್, 'ಪುನರ್ವಸು', ವಾಸ, ಮತ್ತು ಅಂಚೆ: ಉಳವಿ, ತಾ. ಸೊರಬ, ಜಿಲ್ಲೆ : ಶಿವಮೊಗ್ಗ

ಕೊಂಡವರಲ್ಲಿ ಹಲಸನಾಡು ಸುಬ್ಬರಾಯರು ಒಬ್ಬರು. ಮಾದಪ್ಪವೊಡೇರು ೨ನೇ ಸೋಮಶೇಖರನಾಯಕರಿಂದ ಉತ್ತಾರವಾಗಿ ಪಡೆದ ಈಗಿನ ಬಂಟ್ವಾಳ ತಾಲೂಕಿನ ಸರವಾಡಿಯ ಶರಭೇಶ್ವರ (ಮಹಾದೇವ) ಹಾಗೂ ವೆಂಕಟರಮಣ ದೇಗುಲದ ಆಸ್ತಿಯಿಂದ ಅಲ್ಲಿ, ಕುಮಾರಧಾರಾ ಹಾಗೂ ನೇತ್ರಾವತಿನದಿ ತಟದಲ್ಲಿ ಸೋಮಶೇಖರಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ ಬ್ರಾಹ್ಮಣರನ್ನು ನಿಲ್ಲಿಸಿ ಆ ಎರಡು ದೇಗುಲಗಳ ಜೀರ್ಣೋದ್ಧಾರ





ಮಾಡಿಸಿ ದೇಗುಲದ ನಿತ್ಯ ಕಟ್ಟಳೆ, ರಥೋತ್ಸವವನ್ನು ಸಾಂಗವಾಗಿ ನಡೆಸಿಕೊಂಡು ಬರುವಂತೆ ಮಾಡಿದುದಾಗಿ ಈ ಮನೆತನದವರ ಬಳಿ ಇರುವ ಸರಪಾಡಿ ಆಸ್ತಿಯ ಹಕ್ಕಿನ ವ್ಯಾಜ್ಯಕ್ಕಾಗಿ ಮಂಗಳೂರು ಕೋರ್ಟಿನ 'ನಡವಳಿಕೆ'ಯಲ್ಲಿ ಹೇಳಿದೆ. ಇದೇ ಮಾದಪ್ಪಯ್ಯನವರು ಕುಂದಾಪುರ ತಾಲೂಕಿನಲ್ಲಿರುವ ಶುಕ್ತಿಮತಿ ಹಾಗೂ ವಾರಾಹಿ ನದಿಗಳ ತಟದಲ್ಲಿರುವ ಸವಡದಲ್ಲಿಯೂ ಅಗ್ರಹಾರವನ್ನು ನಿಲ್ಲಿಸಿದ್ದಾಗಿ ಇದೇ ತಾಲೂಕಿನ ವಡೇರಹೋಬಳಿಯ ನರಸಿಂಹ ಕಾರಂತರ (ಕೋಣೆ ಕಾರಂತರು) ಮನೆಯಲ್ಲಿರುವ ದಾಖಲೆ ಯೊಂದು ತಿಳಿಸುತ್ತದೆ. ೧೯೩೮ರಲ್ಲಿ ಜೆ. ಎಫ್ ಹಾಲ್ಸ್‌ರ ಸಂಪಾದಕತ್ವದಲ್ಲಿ ಹೊರಬಂದ ಮದ್ರಾಸ್ ಜಿಲ್ಲಾ ಗೆಝೆಟೀಯರ್ ನಲ್ಲಿ ಇದೇ ಮಾದಪ್ಪ ವೊಡೇರು ಕೊಲ್ಲೂರಿನ ಮೂಕಾಂಬಿಕಾ ದೇಗುಲದ ಜೀರ್ಣೋದ್ಧಾರಕ್ಕೆ ಸಹಾಯ ಮಾಡಿದ್ದಲ್ಲದೆ ಅದೇ ದೇಗುಲದ ಆವರಣದಲ್ಲಿ ವಿಶಿಷ್ಟವಾದ ಈಶ್ವರ (ಪಾರ್ಥೇಶ್ವರ) ದೇಗುಲವನ್ನು ಕಟ್ಟಿಸಿದುದಾಗಿ ಹೇಳಿದೆ. ಇದೇ ಗೆಜೆಟೀಯರನಲ್ಲಿ, "The Karnik of the Nagar Rajas the Brahmin Madappayya of Halsanadu referred to under Basrur seems to have also helped in the renovation (Mukambika temple of Kollur) and there is a special shrine to a lingam installed by him in the compound." ಹಲಸನಾಡು ಚನ್ನಪ್ಪಯನವರು ಗೋಕರ್ಣದ ಮಹಾಬಲೇಶ್ವರ ದೇಗುಲಕ್ಕೆ ಚಿನ್ನದ ಕಲಶವನ್ನು ನೀಡಿದುದಲ್ಲದೆ ಅದರ ಮುಖಮಂಟಪವನ್ನು ಕಟ್ಟಿಸಿ ಗರ್ಭಗೃಹದ ಜೀರ್ಣೋದ್ಧಾರವನ್ನು ನಡೆಸಿದ್ದರು. ಅಲ್ಲದೆ ಗೋಕರ್ಣದಲ್ಲಿ ಅಗ್ರಹಾರವನ್ನು ಕಟ್ಟಿಸಿ ಬ್ರಾಹ್ಮಣರಿಗೆ ಬಿಟ್ಟುಕೊಟ್ಟುದಾಗಿ ಗೋಕರ್ಣದಲ್ಲಿ ಶಾಸನವಿದ್ದುದಾಗಿ ಮದ್ರಾಸ್ ಗೆಜೆಟೀಯರ್ ತಿಳಿಸಿದೆ.

ಕೆಳದಿಯ ದೊರೆ ೨ನೇ ಸೋಮಶೇಖರನಾಯಕನ ಕಾಲದಲ್ಲಿ ಹಲಸನಾಡು ಮಾಗಣೆಯ ಒಡೆತನವನ್ನು ಸ್ಥಳದ ಸೇನಬೋವಿಕೆಯನ್ನು ಹೊಂದಿದ್ದ ಹಲಸನಾಡು ಸುಬ್ಬರಾಯರು ರಾಜಕಾರ್ಯದಲ್ಲಿ ನಿಷ್ಣಾತರು, ನಿಷ್ಠುರ ಆಡಳಿತಗಾರರು ಆಗಿದ್ದರೆಂದು ತಿಳಿದುಬರುತ್ತದೆ. ವಡೇರ ಹೋಬಳಿಯ ದಿ. ನರಸಿಂಹ ಕಾರಂತರ ಮನೆಯಲ್ಲಿ ದೊರೆತ ಅಪೂರ್ವ ದಾಖಲೆಯೊಂದು ಕರಣಿಕ ವೆಂಕಟಪತಿಅಯ್ಯನು ತಾನು ಕಟ್ಟಿಸಿದ ತೀರ್ಥರಾಜಪುರದ ಸುರೇಶ್ವರ ದೇಗುಲದ ಸಮೀಪ ತೀರ್ಥಹಳ್ಳಿಯ ಮಂಜರ ಪರಮೇಶ್ವರ ಭಟ್ಟರು ಕಟ್ಟಿಸಿದ ವೆಂಕಟಾಪುರದ ಅಗ್ರಹಾರದಲ್ಲಿರುವ ವೆಂಕಟೇಶ್ವರ ದೇವಸ್ಥಾನಕ್ಕೆ ಕೊಟ್ಟ ಉತ್ತಾರ ಸಾಲದ್ರಿಂದ ಭದ್ರರಾಜಪುರದ ಅಗ್ರಹಾರಕ್ಕೆ ಉತ್ತರವಾದ

ವಿರೂಪಪುರ ಗ್ರಾಮದಿಂದ ಅಪ್ಪಾಜಿ ವೆಂಕಟಾದ್ರಿ ಭಟ್ಟನ ಮಗ ದೇವರು ಭಟ್ಟರಿಗೆ ಉತ್ತಾರವಾದ ಸ್ವಾಸ್ತೆವಳಗೆ ಗ ೧೨ನ್ನು ಕ್ರಯಕ್ಕೆ ತೆಗೆದು ಕೊಂಡುದನ್ನು ಪ್ರಶ್ನಿಸಿ ಬರೆದ ಪತ್ರವೊಂದು ಹಲಸನಾಡು ಸುಬ್ಬರಾಯರ ನಿಷ್ಠುರ ಆಡಳಿತಕ್ಕೆ ನಿದರ್ಶನವಾಗಿದೆ. ಆ ಪತ್ರದ ಉಲ್ಲೇಖ ಹೀಗಿದೆ - "ಶ್ರೀಮದ್ಯ ಜನಾದಿಷ್ಟ ಕರ್ಮನಿರುಕ್ತರಾದ ವೇದಮೂರ್ತಿಗಳಾದಂಥ ತೀರ್ಥಳಿ ಮಂಜರ ಪರಮೇಶ್ವರ ಭಟ್ಟರಿಗೆ ಹಲಸನಾಡ ಸುಬ್ಬರಾಯನು ಮಾಡುವ ನಮಸ್ಕಾರ, ಪ್ರಮೋದೂತ ಮಾಘ ಶು. ೨ವರೆಗೆ ಕ್ಷೇಮದಲು ಯಿದೇವೆ ತಂಮ ಕ್ಷೇಮ ಕುಶಲಕ್ಕೆ ಬರಶಿ ಕಳುಹಿಶಿ ಮಾಡುವಂತೆ ಮಾಡಸಬೇಕು. ತರುವಾಯ ನಮ್ಮ ವೆಂಕಟರಮಣ ದೇವರ ವಿರುಪಾಪುರ ಸ್ವಾಸ್ತೆಯನ್ನು ನೀವು ಪಟ್ಟೆ ಬರಶಿಕೊಂಡು ಯಿಧೀರಿ, ಎಂಬ ವರ್ತಮಾನ ಕೇಳಿದಾಯಿತ್ತು. ನಮ್ಮ ಸ್ವಾಸ್ತೆ ದೇವರದು ನಂಮ ವಿನಹ ಯಾರ ಕಯಲಾದ್ರೂ ನೀವು ಬರಶಿಕೊಂಡರೆ ಅದು ಶಾಶ್ವತವಾಗದು ಯೆಂಬ ಅರಿವು ನಿಂವು ಬಲ್ಲವರಾಗಿ ಯಿದ್ದ ಮೇಲೆ ನಾವು ಬರೆಯಬೇಕೆಂಬುಧು ಯಿಲ್ಲವಷ್ಟೆ. ಈಗ ಆ ಸ್ವಾಸ್ತೆಯ ಬಗೆಯಲ್ಲೂ ನಿಂಮಿಂದ ಹೇರಳ ಹಣ ಬರಬೇಕಾಗುತ್ತದೆ. ಯಿಾ ಬಗ್ಗೆ ನೀಂವು ಆ ಗ್ರಾಮದ ಹುಂಟುಳಿ ಸಂದಾಗಿಂದ ಆದಾಯ ವೆಚ್ಚದ ಲೆಖ ತೆಗೆದುಕೊಂಡು ಬಂದು ಲೆಖ ಪಡ್ಯಿಚಾ ಮಾಡಿ ಬಾಕಿಯಾದ ಹಣ ಸಂದಾಯ ಮಾಡಿ ಕೊಟ್ಟು ಹೋಗುವದು. ಯಿಾ ಬಗ್ಗೆ ನೀಂವು ಸ್ವಸ್ತೆ ಮಾಡ್ಸಿ... ಜನರ ಕಯ ಬರಶಿಕೊಂಡು ಯಿದೇವೆ ಯೆಂಬ ಉಮೇದಿಯಿಂದ ಕುನಡತೆ ಉಂಟಾದರೆ ಕೆಲಸಕ್ಕೆ ಬರಲರಿಯದು... ನಿಂಮಿಂದ ಬರತಕ್ಕ ಹಣ ಪಡಿಚ್ಯಾ ಮಾಡ್ಸಿ ಹೋಗದೆ ಯಿದ್ದರೆ ಕೂಡಲೆ ಯಿದರ ಅನುಭವ ತಮಗೆ ಮನವರಿಕೆ ಆದೀತು. ಇನ್ನು ಮೇಲೆ ಆ ಸ್ವಾಸ್ತೆ - ಫಲ, ಅವಜು, ಕಾಸು ನೀಂವು ತೆಗೆದುಕೊಳಕ್ಕೆ ಅಸರಿಲ್ಲ, ಯಿಾ ವಿವರ ಮನವರಿಕೆ ಆಗಬೇಕು, ಇಂತಿ ನಮಸ್ಕಾರ"


ಹಲಸನಾಡು ಮನೆತನದವರು ಕೆಳದಿಯ ಅರಸೊತ್ತಿಗೆಯ ಅಂತ್ಯದೊಡನೆ ಅರಮನೆಯ ನೇರ ಸಂಪರ್ಕದಿಂದ ದೂರಾದರೂ ನಂತರದ ಹೈದರಾಲಿ ಟಿಪ್ಪು ಸುಲ್ತಾ ಹಾಗೂ ಕುಂಪಣಿ ಸರಕಾರ, ಪ್ರಾದೇಶಿಕ ಆಡಳಿತದಲ್ಲಿ ತಲೆ ಹಾಕುವ ತನಕ ವೃತ್ತಿಯಿಂದ ಸೇನಬೋವರಾಗಿಯೂ ಆರ್ಥಿಕವಾಗಿ ಸ್ಥಿತಿವಂತ ಜಮೀನ್ದಾರ ರಾಗಿಯೂ ಸರ್ವಜನ ಮನ್ನಣೆಗೆ ಪಾತ್ರರಾಗಿದ್ದರು. ಈ ಮನೆತನದ ಸುಬ್ಬರಾಯರು (೧೮೨೯ ಸುಮಾರಿಗೆ ಗತಿಸಿದರು) ಸಾವುಕಾರ ಸುಬ್ಬರಾಯರೆಂದೇ ಪರಿಚಿತರಾಗಿದ್ದರು. ಅವರು ಕೃಷಿ ಮೂಲ ಉತ್ಪನ್ನಗಳ ಸಗಟು ವ್ಯಾಪಾರಿಗಳಾಗಿದ್ದು ಆ ಕಾಲದಲ್ಲಿ ಅತ್ಯಂತ ಸಿರಿವಂತರಾಗಿದ್ದರೆಂದು ತಿಳಿದುಬರುತ್ತದೆ. ಸುಬ್ಬರಾಯರು ಗಂಗೊಳ್ಳಿ ಹಾಗೂ ಬೈಂದೂರು ಬಂದರುಗಳ ಮೂಲಕ ಹಾಗೂ ಅಲ್ಲಿನ ಭಂಡಸಾಲೆಗಳ ಮೂಲಕ ವಹಿವಾಟು ನಡೆಸುತ್ತಿದ್ದರೆಂದು ತಿಳಿದು ಬರುತ್ತದೆ. ಹಿಂದೆ ಉಲ್ಲೇಖಿಸಿದ ಮಾದಪ್ಪಲ ವೊಡೇರ ಮೊಮ್ಮಗ ಚೆನ್ನಪ್ಪಯ್ಯನವರು ನಿಸ್ಸಂತತಿಯಾಗಿ ಗತಿಸಿದ ಕಾರಣ ಅವರ ಪತ್ನಿ ಸಾವಿತ್ರಮ್ಮನವರು ಆ ಕಾಲದ ಕುಂದಾಪುರದ ಪ್ರತಿಷ್ಠಿತ ಮನೆತನಗಳಲ್ಲೊಂದಾದ ವಡೇರಹೋಬಳಿಯ ಕಾರಂತರ ಮನೆತನದ ವಾಸ್ತೇವ ಕಾರಂತರ ಮಗ ರಾಮಪ್ಪಯ್ಯನವರನ್ನು ೧೮೩೭ರಲ್ಲಿ ದತ್ತಕ ಮಾಡಿಕೊಂಡರು (ರಾಮಪ್ಪಯ್ಯನವರ ತಾಯಿ ಹಾಗೂ ಹಲಸನಾಡು ಚನ್ನಪ್ಪಯ್ಯನವರ ಪತ್ನಿ ಸಾವಿತ್ರಮ್ಮ ಸೋದರಿಯರಾಗಿದ್ದರೆಂದು ಕಾರಂತರಮನೆಯ ಹಿರಿಯರು ಹೇಳುತ್ತಾರೆ.) ಇದೇ ರಾಮಪ್ಪಯನವರು ಹಕ್ಲಾಡಿ ಗ್ರಾಮದ ಪಟೇಲರಾಗಿ ಸೇವೆ ಸಲ್ಲಿಸಿದ್ದರು. ಇವರ ಪುತ್ರರಾದ ಮಾದಪ್ಪಯ್ಯ, ಸದಾಶಿವಯ್ಯ, ಚನ್ನಪ್ಪಯ್ಯ ಎಂಬವರಲ್ಲಿ ಹಿರಿಯರಾದ ಮಾದಪ್ಪಯ್ಯನವರು ಕುಂದಾಪುರ ತಾಲೂಕು ಬೋರ್ಡಿನ ಪ್ರೆಸಿಡೆಂಟರಾಗಿದ್ದರು. ಈ ಮನೆತನದಲ್ಲಿ ಬಂದಿರುವ ಡಾ. ಎಚ್. ವೆಂಕಟರಮಣಯ್ಯನವರು ಮಾದಪ್ಪಯ್ಯನವರ ಕಿರಿಯ ತಮ್ಮ ಚನ್ನಪ್ಪಯ್ಯನವರು, ಹಾಗೂ ಇವರ ಮಗ ರಾಮಚಂದ್ರಯ್ಯನವರು ಸೇವಾಕಾರ್ಯಗಳಿಂದ ಪ್ರಸಿದ್ಧರಾಗಿದ್ದಾರೆಂದು.

ಈ ಲೇಖನದೊಂದಿಗೆ ದಾಖಲಿಸಿರುವ ಹಲಸನಾಡು ಮನೆತನದ ವಂಶವೃಕ್ಷವನ್ನು ಗಮನಿಸಿದರೆ ಕೆಳದಿಯ ಅರಸರಲ್ಲಿ ಮಂತ್ರಿಯಾಗಿದ್ದ ಹಲಸನಾಡ ನಾಗಪ್ಪಯ್ಯ ಮತ್ತು ಚನ್ನಪ್ಪಯ್ಯನವರು ಹಾಗೂ ಕರಣಿಕರಾಗಿದ್ದ ಮಾದಪ್ಪಯ್ಯನವರು ಸಮಕಾಲೀನರಾಗಿದ್ದು ಹಲಸನಾಡಿನವರೇ ಆಗಿದ್ದಾಗ್ಯೂ ಎರಡು ಬೇರೆಯೇ ವಂಶಗಳು ಇರಬಹುದೇ ಎಂಬ ಅನುಮಾನ ಮೂಡುತ್ತದೆ. ಆದರೂ ಉಭಯತರು ಸಂಬಂಧಿಗಳಾಗಿದ್ದರು ಎನ್ನುವುದರಲ್ಲಿ ಅನುಮಾನ ವಿಲ್ಲ. ಏಕೆಂದರೆ ಮದ್ರಾಸ್ ಗೆಜೆಟೀಯರ್‌ನಲ್ಲಿ ಕೆಳದಿಯ ಸೋಮಶೇಖರ ನಾಯಕನ ಕಾಲದಲ್ಲಿದ್ದ ಹಲಸನಾಡು ಚನ್ನಪ್ಪಯ್ಯನವರು ಹಲಸನಾಡು ಮಾದಪ್ಪಯ್ಯನವರ ಬಂಧುಗಳೆಂದು ಹೇಳಿದೆಯೇ ಹೊರತು ಸೋದರರೆಂದು ಹೇಳಿಲ್ಲ. ಜತೆಯಲ್ಲಿ ವಡೇರ ಹೋಬಳಿಯಲ್ಲಿರುವ ಹಲಸನಾಡು ನಾಗಪ್ಪಯನವರ ಮಗ ಹಲಸನಾಡು ವೆಂಕಟರಮಣ ಯಾನೆ ಅಪ್ಪಣ್ಣಕಾರಂತರು ಮಾದಪ್ಪಯ್ಯನವರು ತಮಗೆ ತಾಯಿಯ ಕಡೆಯಿಂದ ಬಂಧುಗಳೆಂದು ಸದ್ರಿ ಹಲಸನಾಡು ಮನೆತನದವರು ತಮ್ಮ ಸರಪಾಡಿ ಆಸ್ತಿಯ ಬಗೆಗಿನ ವ್ಯಾಜ್ಯದ ಸಂಬಂಧದಲ್ಲಿ ಮಂಗಳೂರು ಕೋರ್ಟಿನಲ್ಲಿ ೧೮೩೯ರಲ್ಲಿ ಹೇಳಿಕೆ ನೀಡಿದ್ದಾರೆ. ಹೀಗಾಗಿ ಹಲಸನಾಡಿನಲ್ಲಿ ಎರಡು ಪ್ರಮುಖ ಮನೆತನಗಳಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಆದರೆ ಹಲಸನಾಡು ವೆಂಕಟರಮಣ ಕಾರಂತರ ಪೂರ್ವಜರ ವಿವರ ಅವರ ತಂದೆ ನಾಗಪ್ಪನವರ ಹೊರತಾಗಿ ಹಿಂದಿನದು ಏನೂ ತಿಳಿಯದ ಕಾರಣ ಈ ಬಗ್ಗೆ ಏನೂ ಹೇಳಲಾಗುವುದಿಲ್ಲ.

ಸುಮಾರು ೩೦೦ ವರ್ಷಗಳಿಗಿಂತಲೂ ಹಿಂದಿನಿಂದ ನಡೆದುಬಂದ ಹಲಸನಾಡು ಮನೆ ಹಾಗೂ ಮನೆತನ ಹಲವು ದಂತಕಥೆಗಳಿಗೆ ಕೇಂದ್ರ ಸ್ಥಾನ, ಹಲಸನಾಡು ಮನೆಯಲ್ಲಿರುವ ರೆಕಾರ್ಡ್ ಕೋಣೆಯೊಳಗಿನ ದಾಖಲೆಗಳನ್ನು ಅಧ್ಯಯನ ಮಾಡಿದರೆ ಗತಕಾಲದ ಇತಿಹಾಸದ ಮೇಲೆಬೆಳಕು ಚೆಲ್ಲಿದಂತಾಗುತ್ತದೆ. ಗತಕಾಲದ ಕುರುಹಾಗಿ ನಿಂತಿದ್ದ ಹಲಸ ನಾಡುಮನೆ ಆದರೊಳಗಿನ ಸುಂದರ ಕಾಷ್ಠ ಶಿಲ್ಪಗಳು ನಿಜಕ್ಕೂ ಮುಂದಿನ ತಲೆಮಾರಿನವರಿಗಾಗಿ ಉಳಿಸಿಕೊಳ್ಳತಕ್ಕುದಾಗಿದೆ.

(ಈ ಲೇಖನವನ್ನು ಬರೆಯಲು ಪ್ರೇರೇಪಿಸಿದ ಕೆಳದಿಯ ಶ್ರೀ ಗುಂಡಾಜೋಯಿಸರನ್ನು, ಮಾಹಿತಿ ನೀಡಿ ಸಹಕರಿಸಿದ ಡಾ. ಎಚ್. ರಾಮಮೋಹನ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.)

ಹಲಸನಾಡು ಮನೆತನದ ವಂಶವೃಕ್ಷ



ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಲಿಂಗಣ್ಣಕವಿ., **ಕೆಳದಿ ನೃಪವಿಜಯ.**
೨. **ದಕ್ಷಿಣ ಕನ್ನಡ ಜಿಲ್ಲಾ ಕೈಫಿಯತ್ತು.**
೩. ಹಲಸನಾಡು ಸುಬ್ಬರಾಯರ ಪತ್ರ (೧೭೩೨).
೪. **ಮದ್ರಾಸ್ ಜಿಲ್ಲಾ ಗೆಜಿಟೀಯರ್** (೧೯೩೮), ಜೆ. ಎಫ್. ಹಾಲ್ಸ್.
೫. ಹಲಸನಾಡು ಮಾಗಣೆಯಿಂದ ಕ್ರೋಧನ ಹಾಗೂ ಕಾದ್ರಿ ಸಂವತ್ಸರಕ್ಕೆ ಇನಾಮು ಉತ್ತಾರ ಲೆಕ್ಕ.
೬. ಕೆಳದಿ ವೆಂಕಟಪ್ಪ ನಾಯಕರು ಕಿರೆಕೈಯ ಸಂಕಣ್ಣ ಸೇನಬೋವರ ನಾರಣಸೇನಬೋವರಿಗೆ ನೀಡಿದ ತಾಮ್ರಶಾಸನದ ಪಾಠ (ವಿ.ವಿ. ಕಾರಂತರ ಸಂಗ್ರಹ).
೭. ಕೆ.ವಿ. ರಮೇಶ ಮತ್ತು ಎಮ್. ಜೆ. ಶರ್ಮಾ., **ತುಳುನಾಡಿನ ಶಾಸನಗಳು.**
೮. ಎಚ್. ರಾಮಮೋಹನ ನೀಡಿದ ಹಲಸನಾಡು ಮನೆತನದ ವಂಶವೃಕ್ಷ.
೯. ಹಲಸನಾಡು ಮನೆತನದವರ ಸರಪಾಡಿ ಆಸ್ತಿ - ವ್ಯಾಜ್ಯಕ್ಕೆ ಸಂಬಂಧಿಸಿದ ಕೋರ್ಟ್ ಪ್ರೊಸೀಡಿಂಗ್ಸ್.

ಡಾ. ಪುಂಡಿಕ್ಯಾ ಗಣಪಯ್ಯ ಭಟ್*

ತುಳುನಾಡಿನ ಕೆಲ್ಲ ಅರಸರು

ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ತುಳುನಾಡಿನ ವಿವಿಧ ಪ್ರದೇಶಗಳಲ್ಲಿ ಸುಮಾರು ಹದಿನಾಲ್ಕರಷ್ಟು ರಾಜಮನೆತನಗಳು ಆಳ್ವಿಕೆ ನಡೆಸಿದ್ದವು ಎಂಬ ವಿಚಾರ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಈ ಪೈಕಿ ಕೆಲ್ಲ ಅರಸು ಮನೆತನ ಅತ್ಯಂತ ಪ್ರಾಚೀನವಾದದ್ದು. ಆದರೆ ಈ ಅರಸುಮನೆತನದ ಕುರಿತ ಕ್ರಮಬದ್ಧವಾದ ಅಧ್ಯಯನ ಈವರೆಗೆ ನಡೆದಿಲ್ಲವಾಗಿ ತುಳುನಾಡಿನ ಇತಿಹಾಸದ ಪುಟಗಳಲ್ಲಿ ಕೆಲ್ಲ ಅರಸರಿಗೆ ಸಿಗಬೇಕಾದ ನ್ಯಾಯೋಚಿತವಾದ ಸ್ಥಾನ ಸಿಗಲಿಲ್ಲ ಎನ್ನಬಹುದು.

'ಕೆಲ್ಲ' ಎಂಬ ಪದದ ಮೂಲ ಸ್ಪಷ್ಟವಾಗುವುದಿಲ್ಲ. ಪ್ರಾಯಶಃ ಇದು ದ್ರಾವಿಡ ಪದವಾದ ಕೆಲಿ (ತಮಿಳು) ಗೆಲ್ (ಕನ್ನಡ, ತುಳು) ಎಂಬುದರಿಂದ ಹುಟ್ಟಿಕೊಂಡಿದ್ದು,[೧] ಗೆಲವನ್ನು ಸಾಧಿಸು, ಜಯಶಾಲಿಯಾಗಲಿ ಎಂಬ ಅರ್ಥವನ್ನು ಸೂಚಿಸುವ ಹಿನ್ನೆಲೆಯಲ್ಲಿ ಇದೊಂದು ಗುಣವಾಚಿಯಾದ ಹೆಸರು ಎಂದು ತಿಳಿದುಕೊಂಡರೆ ತಪ್ಪಾಗಲಾರದು. ಕ್ರಿ.ಶ. ಆರನೇ ಶತಮಾನದ ಕದಂಬ ರವಿವರ್ಮನ ಹೊನ್ನಾವರ ತಾಮ್ರಶಾಸನದಲ್ಲಿ ಕೇಕೆಯ ವಂಶದ ಅರಸನಾದ ಚಿತ್ರಸೇನನನ್ನು ಕೆಲ್ಲ, ಮಹಾಕೆಲ್ಲ ಎಂಬ ಬಿರುದುಗಳಿಂದ ಗುರುತಿಸಿರುವುದನ್ನು[೨] ಗಮನಿಸಿದಾಗ 'ಕೆಲ್ಲ' ಎಂಬ ಹೆಸರು ಗುಣವಾಚಕ ಎಂಬ ಮೇಲಿನ ಹೇಳಿಕೆಗೆ ಸಮರ್ಥನೆ ದೊರಕುತ್ತದೆ. ಆದರೆ ತುಳುನಾಡಿನಲ್ಲಿ ಈ ಹೆಸರು ಅರಸುಮನೆತನವೊಂದರ ವಂಶನಾಮವಾಗಿ ಬಳಕೆಯಲ್ಲಿತ್ತು ಎಂಬುದಿಲ್ಲಿ ಉಲ್ಲೇಖಾರ್ಹ.

ಕೆಲ್ಲ ಅರಸರು ಮೂಲತಃ ಕಾರ್ಕಳ ತಾಲೂಕಿನ ಕೆಲ್ಲ ಪುತ್ತಿಗೆಗೆ ಸೇರಿದವರು ಎನ್ನಲಾಗಿದೆ. ಪುತ್ತಿಗೆ ಎಂಬ ಹೆಸರಿನ ಊರು ಕೆಲ್ಲರ ನೆಲೆಯಾಗಿದ್ದುದರಿಂದ ಕೆಲ್ಲಪುತ್ತಿಗೆ ಎನಿಸಿಕೊಂಡಿತು. ಎಂಬ ಅಭಿಪ್ರಾಯವೂ ಇದೆ. ಈ ಊರು ಕಾರ್ಕಳ ತಾಲೂಕಿನ ಮಾರ್ನಾಡು ಗ್ರಾಮಕ್ಕೆ ಸೇರಿದ್ದು, ತುಳುನಾಡಿನ ಜಾನಪದ ಸಾಹಿತ್ಯದಲ್ಲಿ ಬರುವ 'ಕಲ್ಕುಡಪಾಡ್ದನ'ದಲ್ಲಿ ಈ ಇಡೀ ಗ್ರಾಮವನ್ನೇ ಕೆಲ್ಲತ್ತ ಮಾರ್ನಾಡು (ಕೆಲ್ಲರ ಮಾರ್ನಾಡು) ಎಂದು ಗುರುತಿಸಲಾಗಿರುವುದೂ ಗಮನಿಸಬೇಕಾದ ವಿಚಾರ.[೩] ಈ ಅರಸರು ಜೈನ ಮತಾವಲಂಬಿಗಳಾಗಿದ್ದರು ಎನ್ನಲಾಗುತ್ತಿದ್ದು, ಇಂದಿಗೂ ಈ ಪ್ರದೇಶದ ಜೈನಧರ್ಮೀಯರಲ್ಲಿ ಹಲವಾರು ಕೆಲ್ಲ ಎಂಬ ಅಂಕಿತನಾಮವನ್ನು ಹೊಂದಿರುವುದನ್ನು ನೋಡಬಹುದು. ಖಚಿತವಾದ ಆಧಾರಗಳ ಕೊರತೆಯಿಂದಾಗಿ ಈ ಅರಸುಮನೆತನದ ಇತಿಹಾಸವನ್ನು ನಿಖರವಾಗಿ ಪುನಾರಚಿಸಲು ಕಷ್ಟ ಸಾಧ್ಯ. ಕೆಲ್ಲರ ಖಚಿತ ಉಲ್ಲೇಖವಿರುವ ಸುಮಾರು ೨೫ರಷ್ಟು ಶಾಸನಗಳು ಲಭ್ಯವಿದ್ದರೂ ಈ ಪೈಕಿ ಎರಡು ಮೂರು ಶಾಸನಗಳನ್ನು ಹೊರತುಪಡಿಸಿ ಉಳಿದೆಲ್ಲವೂ ವೀರಗಲ್ಲು ಹಾಗು ವೀರಸ್ಮಾರಕಗಳ ರೂಪದಲ್ಲೋ ಇದ್ದು ಇವುಗಳಲ್ಲಿ ಹೆಚ್ಚಿನವೂ ತೇದಿಯ ವಿವರಗಳನ್ನು ನೀಡದಿರುವುದು ಇವರ ಇತಿಹಾಸ ರಚನೆಯ ಕಾರ್ಯಕ್ಕೆ ತೊಡಕನ್ನುಂಟುಮಾಡುವ ಅಂಶಗಳು. ಅಲ್ಲದೆ ಈ ಶಾಸನಗಳಲ್ಲಿ ದೊರಕುವ ವಿವರಗಳೂ ಅತ್ಯಲ್ಪ ಹಾಗೂ ಅಪೂರ್ಣ ಎಂಬುದನ್ನಿಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕು. ತುಳುನಾಡಿನಲ್ಲಿ ಕೆಲ್ಲರ ಉಲ್ಲೇಖವಿರುವ ಸುಮಾರು ಹತ್ತರಷ್ಟು ಶಾಸನಗಳನ್ನು ಗುರುತಿಸಲಾಗಿದ್ದು ಇನ್ನುಳಿದ ಶಾಸನಗಳು ತುಮಕೂರು, ಚಿಕ್ಕಮಗಳೂರು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಹರಡಿಹೋಗಿರುವುದನ್ನು ಕಂಡಾಗ ಕೆಲ್ಲ ಅರಸರ ಇತಿಹಾಸದ ಬೇರುಗಳು ಎಷ್ಟೊಂದು ವ್ಯಾಪಕವಾಗಿ ಹಬ್ಬಿಕೊಂಡಿವೆ ಎಂದು ಆಶ್ಚರ್ಯವಾಗುತ್ತದೆ.

ತುಳುನಾಡಿನ ಕೆಲ್ಲ ಅರಸರ ಕುರಿತ ಪ್ರಾಚೀನತಮ ಉಲ್ಲೇಖವಿರುವುದು ಕ್ರಿ.ಶ. ೫ನೇ ಶತಮಾನಕ್ಕನ್ವಯಿಸುವ ಹಲ್ಮಿಡಿ ಶಾಸನದಲ್ಲಿ ಎಂಬುದು ವಿದ್ವಾಂಸರ ಅಭಿಪ್ರಾಯ. ಹಲ್ಮಿಡಿ ಶಾಸನದ ೯-೧೦ನೇ ಸಾಲುಗಳಲ್ಲಿ ಬರುವ "ಪಶುಪತಿ ನಾಮಧೇಯನಾಸರಕ್ಕೆಲ್ಲ ಭಟರಿಯಾ ಪ್ರೇಮಾಲಯ ಸುತನ್ಗೆ" ಎಂಬ ಉಲ್ಲೇಖವನ್ನು ಶಾಸನವನ್ನು ಪ್ರಥಮವಾಗಿ ಸಂಪಾದಿಸಿದ ಎಂ. ಎಚ್. ಕೃಷ್ಣರೂ ಸೇರಿದಂತೆ ಹಲವಾರು ಇತಿಹಾಸಕಾರರು "ಎಲ್ಲ ಭಟರಿಯಾ ಪ್ರೇಮಾಲಯಸುತ" ಎಂಬುದಾಗಿ ವ್ಯಾಖ್ಯಾನಿಸಿದ್ದರು.[೪] ಆದರೆ ಈ ಶಾಸನವನ್ನು ಹೊಸದಾಗಿ ವ್ಯಾಖ್ಯಾನಿಸಿದ ಎಂ. ಎಂ. ಕಲಬುರ್ಗಿಯವರು ಅದು "ಸರಕ್ಕೆಲ್ಲ ಭಟರಿ" ಎಂದಾಗಬೇಕೆಂದೂ, ಸರಕ್ಕೆಲ್ಲ ಎಂಬುದು ಅರಕೆಲ್ಲ ಎಂಬ ಹೆಸರಿನ ಪ್ರಾಚೀನ ರೂಪವಿರಬೇಕೆಂದೂ ಸೂಚಿಸಿದ್ದಾರೆ.[೫] ಕೆ. ವಿ. ರಮೇಶ್, ಜಿ. ಎಸ್. ಗಾಯಿ ಮೊದಲಾದವರೂ ಅದು 'ಅರಕೆಲ್ಲ' ಎಂಬ ಹೆಸರಿರಬಹುದು ಎಂಬ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ.[೬] ಈ ವಾದವನ್ನು ಒಪ್ಪುವುದಾದಲ್ಲಿ ಹಲ್ಮಿಡಿ ಶಾಸನದಲ್ಲಿ ನೀಡಲಾದ ವಿವರಗಳಂತೆ ಕದಂಬ ಕಾಕುಸ್ಥವರ್ಮನ ಪಕ್ಷದಿಂದ ಕೇಕೆಯ - ಪಲ್ಲವರೊಡನೆ ಹೋರಾಡಿದ ವಿಜ ಅರಸು ಎಂಬಾತನು ಅರಕೆಲ್ಲ ಎಂಬಾತನ ಮಗ ಮತ್ತು ಆತ ಆಳುಪ

* ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಶ್ರೀ ಧವಲಾ ಕಾಲೇಜು, ಮೂಡುಬಿದರೆ - ೫೭೪ ೨೨೭

ಅರಸರನಿಗೆ ಸಂಬಂಧಿಸಿದವನಾಗಿರಬೇಕು ಎಂದು ಅರ್ಥೈಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಲ್ಲಿ ಅರಕೆಲ್ಲನ ಮಗನಾದ ವಿಜ ಅರಸನು ಕಾಕುಸ್ಥವರ್ಮನೊಂದಿಗೆ ಮಿತ್ರತ್ವವನ್ನು ಹೊಂದಿದ್ದ ಆಳುಪ ಅರಸನ ಸೇನೆಗೆ ಸೇರಿದ್ದವನಾಗಿರಬೇಕು ಎಂದು ಊಹಿಸಬಹುದು. ಕೆಲ್ಲ ಅರಸರು ಆಳುಪರ ಅಧೀನರಾಗಿದ್ದುಕೊಂಡು ಅಧಿಕಾರನಡೆಸುತ್ತಿದ್ದ ಬಗ್ಗೆ ನಂತರದ ಶಾಸನಗಳಲ್ಲಿ ಉಲ್ಲೇಖವಿರುವುದು ಈ ಮೇಲಿನ ವಾದವನ್ನು ಸಮರ್ಥಿಸುತ್ತದೆ. ಇದರಂತೆ, ಕ್ರಿ.ಶ ೫ ನೇ ಶತಮಾನದ ಮಧ್ಯಭಾಗದ ಹೊತ್ತಿಗಾಗಲೆ ಕೆಲ್ಲ ಅರಸರು ಪ್ರಾಬಲ್ಯಕ್ಕೆ ಬಂದಿದ್ದು ಇವರು ಆಳುಪರ ಅಧೀನರಾಗಿದ್ದುಕೊಂಡು ಕಾರ್ಯನಿರ್ವಹಿಸುತ್ತಿದ್ದರೆನ್ನಬಹುದು.

ತುಳುನಾಡಿನಲ್ಲಿ ಲಭ್ಯವಿರುವ ಕೆಲ್ಲರ ಕುರಿತ ಖಚಿತವಾದ ಉಲ್ಲೇಖವಿರುವ ಪ್ರಾಚೀನತಮ ದಾಖಲೆಯೆಂದರೆ ಆಳುಪವಂಶದ ಮಾರಮ್ಮ ಆಳುವರಸನ (ಕ್ರಿ.ಶ. ೮೪೦-೮೭೦) ಉದ್ಯಾವರ ಶಾಸನ.[೭] ಈ ಶಾಸನದಲ್ಲಿ ಬರುವ 'ಅರಕೆಲ್ಲರಾ ನಾಟು ಮುದಿಮೆಯುಳ್' ಎಂಬ ಉಲ್ಲೇಖದ ಆಧಾರದಲ್ಲಿ ಅರಕೆಲ್ಲನೆಂಬ ಅಧಿಕಾರಿಯು ಉದ್ಯಾವರ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಎಂದು ತಿಳಿಯಲಾಗಿದೆ.[೮] ಕ್ರಿ.ಶ. ೮ನೇ ಶತಮಾನದ ಹೊತ್ತಿಗೆ ಕೆಲ್ಲರು ತಮ್ಮನ್ನು ಗಂಗ ಅರಸರ ಜೊತೆಗೆ ಗುರುತಿಸಿಕೊಳ್ಳುವುದನ್ನು ಕಂಡಾಗ ಆ ಹೊತ್ತಿಗೆ ಕೆಲ್ಲ ವಂಶದವರು ಗಂಗ ಅರಸರ ಅಧೀನರಾಗಿಯೂ ಕಾರ್ಯನಿರ್ವಹಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ತುಳುನಾಡಿನ ಕೆಲ್ಲರಿಗೂ ಗಂಗ ಅರಸರಿಗೂ ಹೇಗೆ ಸಂಪರ್ಕ ಉಂಟಾಯಿತೆನ್ನುವುದು ಕುತೂಹಲಕರ. ಕ್ರಿ.ಶ. ೮ನೇ ಶತಮಾನದ ಮಧ್ಯಭಾಗಕ್ಕನ್ವಯಿಸುವ ಆಳುಪ ಇಮ್ಮಡಿ ಆಳುವರಸನ ಬೆಳ್ಮಣ್ ತಾಮ್ರಶಾಸನದಲ್ಲಿ ಎರೆಯಪ್ಪರಸ ಎಂಬುವನ ಪ್ರಸ್ತಾಪವಿರುವುದು ಈ ದೃಷ್ಟಿಯಿಂದ ಗಮನಾರ್ಹ.[೯] ಎರೆಯಪ್ಪರಸ ಎಂಬ ಹೆಸರು ಕರ್ನಾಟಕದ ರಾಜಮನೆತನಗಳ ಪೈಕಿ ಗಂಗವಂಶದ ಅರಸರಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದ್ದುದನ್ನು ಕಂಡಾಗ ಬೆಳ್ಮಣ್ಣು ಶಾಸನದಲ್ಲಿ ಹೇಳಲಾದ ಎರೆಯಪ್ಪರಸನು ಗಂಗವಂಶಕ್ಕೆ ಸೇರಿದವನಾಗಿದ್ದು ಇಮ್ಮಡಿ ಆಳುವರಸನೊಂದಿಗೆ ನಿಕಟ ಸ್ನೇಹ ಸಂಬಂಧವನ್ನು ಹೊಂದಿದ್ದಿರಬೇಕು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಕ್ರಿ.ಶ. ೯ ನೇ ಶತಮಾನಕ್ಕನ್ವಯಿಸುವ ಬಂಟ್ರ ಶಾಸನದಲ್ಲಿ ಉಲ್ಲೇಖಿತವಾದ ಕೆಲವು ವ್ಯಕ್ತಿನಾಮಗಳ ಆಧಾರದಲ್ಲಿ ಆಳುಪರಿಗೂ ಗಂಗರಿಗೂ ಏನೋ ಒಂದು ರೀತಿಯ ಸಂಬಂಧವಿದ್ದಿರಬೇಕೆಂದು ಕೆ. ವಿ. ರಮೇಶ್ ಅಭಿಪ್ರಾಯ ಪಟ್ಟಿದ್ದಾರೆ.[೧೦] ಉಡುಪಿ, ಉದ್ಯಾವರ ಬಾರ್ಕೂರು ಮುಂತಾದೆಡೆಗಳಲ್ಲಿ ಗಂಗರ ನಾಣ್ಯಗಳು (ಆನೆಕಾಸು) ಸಾಕಷ್ಟು ಸಂಖ್ಯೆಯಲ್ಲಿ ದೊರಕಿವೆ ಎಂಬ ನಾಣ್ಯತಜ್ಞ ಮುಕುಂದ ಪ್ರಭುಗಳು ನೀಡಿದ ವೈಯಕ್ತಿಕ ಮಾಹಿತಿಯೂ ತುಳುನಾಡಿಗೂ ಗಂಗರಿಗೂ ಇದ್ದ ಸಂಬಂಧವನ್ನು ದೃಢಪಡಿಸುತ್ತದೆ. ಪ್ರಾಯಶಃ ತುಳುನಾಡಿನಲ್ಲಿ ಆಳುಪ ಅರಸರ ಅಧೀನರಾಗಿದ್ದ ಕೆಲ್ಲ ವಂಶದವರು ಆಳುಪರಿಗೂ ಗಂಗರಿಗೂ ಇದ್ದ ಸಂಬಂಧದ ಹಿನ್ನೆಲೆಯಲ್ಲಿ ಗಂಗ ಅರಸರ ಸಂಪರ್ಕಕ್ಕೆ ಬರುವ ಮೂಲಕ ಅವರ ಸೇವೆಗೆ ಸೇರಿಕೊಂಡು ಗಂಗ ಸಾಮ್ರಾಜ್ಯದಲ್ಲಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿರಬೇಕು ಎಂದು ಊಹಿಸಿದರೆ ತಪ್ಪಾಗಲಾರದು.

ಗಂಗ ಅರಸರ ಅಧೀನ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ ಕೆಲ್ಲ ಅರಸು ಮನೆತನದವರ ಪೈಕಿ ಸಿಯಗೆಲ್ಲ ಮತ್ತು ಅರಕೆಲ್ಲ ಮುಖ್ಯರಾದವರು. ಗಂಗ ಅರಸರಾದ ಶ್ರೀಪುರುಷ (ಕ್ರಿ.ಶ. ೭೨೫-೭೮೮) ಮತ್ತು ಇಮ್ಮಡಿ ಶಿವಮಾರನ (ಕ್ರಿ.ಶ. ೭೮೮-೮೧೨) ಸೇವೆಯಲ್ಲಿದ್ದ ಸಿಯಗೆಲ್ಲನು ದಂಡನಾಯಕನಾಗಿ ಮಾತ್ರವಲ್ಲದೆ ಮುರಗೂರು ನಾಡು ಮತ್ತು ನಂತರ ಕೆಸುಮಣ್ಣು ನಾಡಿನ ರಾಜ್ಯಪಾಲನಾಗಿಯೂ ಕಾರ್ಯನಿರ್ವಹಿಸಿದ್ದ ಎಂಬುದು ಗಮನಾರ್ಹ.[೧೧] ತುಮಕೂರು ಜಿಲ್ಲೆಯ ಹಿರೇಗುಂಡಗಲ್ ಎಂಬಲ್ಲಿ ಶ್ರೀ ಪುರುಷ ಮತ್ತು ಶಿವಮಾರನ ಆಳ್ವಿಕೆಯಲ್ಲಿ ಗಂಗರು ಮತ್ತು ರಾಷ್ಟ್ರಕೂಟರ ನಡುವೆ ನಡೆದ ಕಾಳಗವನ್ನು ಸೂಚಿಸುವ ೧೮ ವೀರಗಲ್ಲುಗಳು ಕಂಡುಬಂದಿದ್ದು ಈ ಪೈಕಿ ೮ ವೀರಗಲ್ಲುಗಳಲ್ಲಿ ಸಿಯಗೆಲ್ಲನ ಹೆಸರಿರುವುದನ್ನು ಕಾಣಬಹುದು.[೧೨]. ಒಂದು ವೀರಗಲ್ಲಿನಲ್ಲಿ ಆತನನ್ನು ಸಿಯಕೆಲ್ಲ ಎಂದು ಉಲ್ಲೇಖಿಸಲಾಗಿದೆ.[೧೩] ಗಂಗ ಶ್ರೀಪುರುಷನಿಗೂ ರಾಷ್ಟ್ರಕೂಟ ಒಂದನೆಯ ಕೃಷ್ಣನಿಗೂ ನಡೆದ ಯುದ್ಧಗಳಲ್ಲಿ ಸಿಯಗೆಲ್ಲನು ಗಂಗರ ಸೇನೆಯ ದಂಡನಾಯಕನಾಗಿ ಮಹತ್ವದ ಪಾತ್ರವನ್ನು ವಹಿಸಿದ್ದಿರಬೇಕು. ಈ ಯುದ್ಧಗಳು ಕ್ರಿ.ಶ. ೭೬೮ರ ನಂತರ ನಡೆದಿದ್ದರಬೇಕು ಎಂದು ಶೇಕ್‌ಆಲಿಯ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೪]

ಶ್ರೀಪುರುಷನ ನಂತರ ಪಟ್ಟಕ್ಕೆ ಬಂದ ಇಮ್ಮಡಿ ಶಿವಮಾರನಿಗೂ ಸಿಯಗೆಲ್ಲನು ನಿಷ್ಠನಾಗಿದ್ದ ಎಂಬುದಕ್ಕೆ ಶಾಸನಾಧಾರಗಳಿವೆ. ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹೊಳವನಹಳ್ಳಿಯಲ್ಲಿ ದೊರಕಿದ ವೀರಗಲ್ಲು ಸಿಯಗೆಲ್ಲರಸನ ಆಳು ರಣಕೇತುವಿನ ಮಗ ದೇವಯ್ಯ ಎಂಬಾತನು ನೊಳಬಂನು ತಗಳೂರ ಕೋಟೆಯನ್ನು ವಶಪಡಿಸುವ ಸಂದರ್ಭ ನಡೆದ ಹೋರಾಟದಲ್ಲಿ ಮಡಿದ ಎಂಬ ಮಾಹಿತಿಯನ್ನು ನೀಡುತ್ತದೆ.[೧೫] ಶ್ರೀಪುರುಷನ ಮರಣಾನಂತರ ಆತನ ಮಕ್ಕಳಾದ ಇಮ್ಮಡಿ ಶಿವಮಾರ ಮತ್ತು ದುಗ್ಗಮಾರನ ನಡುವೆ ನಡೆದ ದಾಯಾದಿ ಕಲಹದಲ್ಲಿ ನೊಳಂಬ ಅರಸನಾದ ಸಿಂಗಪೋತನು ಶಿವಮಾರನ ಪಕ್ಷದಿಂದ ದುಗ್ಗಮಾರನ ವಿರುದ್ಧ ಹೋರಾಡಿದ್ದಕ್ಕೆ ದಾಖಲೆಯಿದೆ.[೧೬] ಪ್ರಾಯಶಃ ಹೊಳವನಹಳ್ಳಿಯಲ್ಲಿ ದೊರಕಿದ, ಸಿಯಗೆಲ್ಲನ ಉಲ್ಲೇಖವಿರುವ ವೀರಗಲ್ಲಿನಲ್ಲಿರುವ ವಿವರಗಳು

ಈ ಯುದ್ಧಕ್ಕೆ ಸಂಬಂಧಿಸಿರಬೇಕು. ಆ ಯುದ್ಧದಲ್ಲಿ ಶಿವಮಾರನ ಪರವಾಗಿದ್ದ ನೊಳಂಬ ಸಿಂಗಪೋತನು ತಗಳೂರನ್ನು ವಶಪಡಿಸಿಕೊಂಡ ಸಂದರ್ಭ ಸಿಯಗೆಲ್ಲನೂ ಸಿಂಗಪೋತನ ಜೊತೆಯಲ್ಲಿ ಶಿವಮಾರನ ಕಡೆಯಿಂದ ದುಗ್ಗಮಾರನ ವಿರುದ್ಧ ಹೋರಾಟದಲ್ಲಿ ಭಾಗಿಯಾಗಿದ್ದಿರಬೇಕು ಎಂದು ತಿಳಿಯಬಹುದು. ಇಮ್ಮಡಿ ಶಿವಮಾರನಿಗೂ ರಾಷ್ಟ್ರಕೂಟ ಮುಮ್ಮಡಿ ಗೋವಿಂದನಿಗೂ ನಡೆದ ಹೋರಾಟದಲ್ಲೂ ಸಿಯಗೆಲ್ಲನು ಪಾಲ್ಗೊಂಡಿದ್ದ ಎಂಬುದಕ್ಕೆ ಶಾಸನಾಧಾರವಿದೆ. ತುಮಕೂರು ಜಿಲ್ಲೆಯ ಹಿರೇಗುಂಡಗಲ್‌ನಲ್ಲಿ ಗುರುತಿಸಲಾದ ವೀರಗಲ್ಲೊಂದರಲ್ಲಿ ಈ ಬಗ್ಗೆ ಪ್ರಸ್ತಾಪವಿದ್ದು ಕಾಗಿಮೊಗೆಯೂರ್ ಎಂಬಲ್ಲಿ ನಡೆದ ಈ ಯುದ್ಧದಲ್ಲಿ ಸಿಯಗೆಲ್ಲನು ಮಡಿದ ಎಂಬ ವಿಚಾರವನ್ನು ತಿಳಿಸಿಲಾಗಿದೆ.[೧೭]

ಗಂಗರ ಇತಿಹಾಸದ ಕುರಿತು ಸಂಶೋಧನೆಮಾಡಿರುವ ಶೇಕ್ ಆಲಿಯವರು ಮತ್ತು ಎಂ. ವಿ. ಕೃಷ್ಣರಾವ್ ಅವರು ಸಿಯಗೆಲ್ಲನು ಶ್ರೀ ಪುರುಷನ ಮಕ್ಕಳಲ್ಲೊಬ್ಬನಿರಬೇಕೆಂದೂ ಆತನೂ ಶ್ರೀ ಪುರುಷನ ಮರಣಕ್ಕಿಂತ ಮೊದಲೇ ಮಡಿದಿರಬೇಕೆಂದೂ ಸೂಚಿಸಿದ್ದಾರೆ.[೧೮] ಆದರೆ ಇದಕ್ಕೆ ಯಾವುದೇ ಆಧಾರಗಳನ್ನು ಸೂಚಿಸಿಲ್ಲ. ಆದ್ದರಿಂದ ಈ ಅಭಿಪ್ರಾಯ ಸ್ವೀಕಾರಾರ್ಹ ಎನಿಸುವುದಿಲ್ಲ. ಸಾಮಾನ್ಯವಾಗಿ ತಿಳಿದಿರುವಂತೆ ಶ್ರೀ ಪುರುಷನಿಗೆ ಶಿವಮಾರ, ದುಗ್ಗಮಾರ ಮತ್ತು ವಿಜಯಾದಿತ್ಯ ಎಂಬ ಮೂರು ಮಂದಿ ಗಂಡು ಮಕ್ಕಳಿದ್ದರೇ ಹೊರತು ಸಿಯಗೆಲ್ಲ ಎಂಬ ಮಗನಿದ್ದ ಎಂಬುದಕ್ಕೆ ಯಾವುದೇ ಆಧಾರವಿಲ್ಲ. ಅಲ್ಲದೆ ಮೇಲೆ ಸೂಚಿಸಲಾದ ವಿವರಗಳು ಶ್ರೀಪುರುಷನ ಮರಣಾನಂತರ ಸಿಯಗೆಲ್ಲನು ಶಿವಮಾರನಿಗೂ ಸಹಾಯವನ್ನು ಮಾಡಿದ್ದ ಎಂಬ ಮಾಹಿತಿಯನ್ನು ನೀಡುವುದರಿಂದ, ಸಿಯಗೆಲ್ಲನು ಗಂಗರ ಅಧೀನನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಓರ್ವ ಅಧಿಕಾರಿ ಮತ್ತು ದಂಡನಾಯಕನಾಗಿದ್ದ ಎಂಬ ವಾದಕ್ಕೆ ಹೆಚ್ಚಿನ ಸಮರ್ಥನೆ ದೊರಕುತ್ತದೆ. ಕೆಲ್ಲ ಅರಸರಲ್ಲಿ ಸೇಬ್ಯಕೆಲ್ಲ, ಸೇವ್ಯಗೆಲ್ಲ ಎಂಬ ಹೆಸರುಗಳು ಸಾಮಾನ್ಯವಾಗಿ ಕಂಡುಬರುವುದು ಮತ್ತು ವೀರಗಲ್ಲೊಂದರಲ್ಲಿ ಸಿಯಗೆಲ್ಲನನ್ನು ಸಿಯಕೆಲ್ಲ[೧೯] ಎಂದು ಸ್ಪಷ್ಟವಾಗಿ ಗುರುತಿಸಿರುವುದನ್ನು ಗಮನಿಸಿದಾಗ ಈತ ಕೆಲ್ಲವಂಶಕ್ಕೆ ಸೇರಿದವನೆಂಬ ವಿಚಾರ ಖಚಿತವಾಗುತ್ತದೆ.

ಗಂಗ ಅರಸರಾದ ಇಮ್ಮಡಿ ಎರೆಗಂಗ ನೀತಿಮಾರ್ಗ (ಕ್ರಿ.ಶ. ೯೦೭-೯೧೯) ಮತ್ತು ಮುಮ್ಮಡಿ ರಾಚಮಲ್ಲ (ಕ್ರಿ.ಶ. ೯೨೫-೯೩೫) ರ ಆಳ್ವಿಕೆಯ ಕಾಲದಲ್ಲೂ ಕೆಲ್ಲ ಅರಸರು ಗಂಗರಿಗೆ ತಮ್ಮ ನಿಷ್ಠೆಯನ್ನು ಮೆರೆದ ಬಗ್ಗೆ ದಾಖಲೆಗಳಿವೆ. ಈ ಈರ್ವರು ಗಂಗ ಅರಸರ ಅಧೀನ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದವ ಕೆಲ್ಲವಂಶದ ಅರಕೆಲ್ಲ. ಎರೆಗಂಗ ನೀತಿಮಾರ್ಗನ ಕಾಲಕ್ಕನ್ವಯಿಸುವ ಗುಬ್ಬಿ ವೀರಗಲ್ಲು ಶಾಸನದ ಪ್ರಕಾರ ಅರಕೆಲ್ಲನ ಮಗನಾದ ಮಾರಗನ್ ಎಂಬಾತ ಎರೆಯರ್ (ಎರೆಗಂಗ) ನ ಆಜ್ಞೆಯಂತೆ ಎಗೆಯೂರು ಎಂಬಲ್ಲಿ ವಲ್ಲವರಸನ ಮೇಲೆ ಧಾಳಿಮಾಡಿ ಯುದ್ಧದಲ್ಲಿ ಮರಣಹೊಂದಿದ.[೨೦] ಇಲ್ಲಿ ಹೇಳಲಾದ ವಲ್ಲವರಸನು ರಾಷ್ಟ್ರಕೂಟ ದೊರೆಯಿರಬೇಕೆಂದೂ, ಆತ ರಾಷ್ಟ್ರಕೂಟ ಇಮ್ಮಡಿ ಕೃಷ್ಣನಿರಬೇಕೆಂದೂ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.[೨೧] ಇದರಂತೆ, ಇಮ್ಮಡಿ ಎರೆಗಂಗ ಮತ್ತು ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ನಡುವೆ ನಡೆದ ಹೋರಾಟದಲ್ಲಿ ಅರಕೆಲ್ಲ ಮತ್ತು ಆತನ ಮಗ ಮಾರಗನ್ ಗಂಗರ ಪಕ್ಷದಿಂದ ಹೋರಾಡಿದ್ದರೆಂಬ ವಿಚಾರ ಸ್ಪಷ್ಟವಾಗುತ್ತದೆ.

ಗಂಗ ಮುಮ್ಮಡಿ ರಾಚಮಲ್ಲ ಮತ್ತು ನೊಳಂಬ ಅಣ್ಣಿಗ (ಕ್ರಿ.ಶ. ೯೩೪-೯೪೦) ಅವರ ಮಧ್ಯೆ ನಡೆದ ಯುದ್ಧದಲ್ಲೂ ಅರಕೆಲ್ಲ ಮತ್ತು ಆತನ ಕುಟುಂಬದವರು ಗಂಗರ ಪಕ್ಷದಿಂದ ಹೋರಾಡಿದ್ದರೆಂಬ ಕುರಿತು ಚಿಕ್ಕಮಗಳೂರು ಜಿಲ್ಲೆಯ ಹೊಸಹಳ್ಳಿಯಲ್ಲಿ ದೊರೆತ ಶಾಸನದಲ್ಲಿ ಉಲ್ಲೇಖವಿದೆ.[೨೨] ಈ ಶಾಸನದಲ್ಲಿ ನೀಡಲಾದ ವಿವರಗಳಂತೆ ಅರಕೆಲ್ಲನ ಮಗನಾದ ಅಣ್ಣೆ ಕಂದರ್ಪ ಮತ್ತು ಅರಕೆಲ್ಲನ ಮೊಮ್ಮಗ ಪೊಯ್ಸಳ ಮಾರುಗ ಎಂಬಾತ ನೊಳಂಬ ಅಣ್ಣಿಗನ ವಿರುದ್ಧ ನಡೆದ ಯುದ್ಧದಲ್ಲಿ ಭಾಗವಹಿಸಿ ಸಿರಿವೂರು ಎಂಬಲ್ಲಿ ವೀರಮರಣ ಹೊಂದಿದರು. ಇದರ ಸೇಡನ್ನು ತೀರಿಸುವ ಉದ್ದೇಶದಿಂದ ಅರಕೆಲ್ಲನ ಆಜ್ಞೆಯಂತೆ ಕೆಲ್ಲಗಾವುಂಡ ಎಂಬಾತನೂ ಅಣ್ಣಿಗನ ವಿರುದ್ಧ ಹೋರಾಡಿ ಮಡಿದನು. ಈ ಶಾಸನದಲ್ಲಿ ಅರಕೆಲ್ಲನನ್ನು ' ಸಮರೈಕ ಪಾರ್ಥ, ಮಾರ್ಬಲರಾಮ, ಸಾಮನ್ತ ಚೂಡಾಮಣಿ' ಎಂಬ ವಿಶೇಷಣಗಳಿಂದ ಗುರುತಿಸಿರುವುದನ್ನು ಕಂಡಾಗ ಆತ ಗಂಗ ಅರಸರ ನಿಷ್ಠ ಸಾಮಂತರಲ್ಲಿ, ದಂಡನಾಯಕರಲ್ಲಿ ಒಬ್ಬನಾಗಿದ್ದ ಎಂಬುದು ವ್ಯಕ್ತವಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಮರಲೆಯಲ್ಲಿ ಗುರುತಿಸಲಾದ ಕ್ರಿ.ಶ ೯-೧೦ ನೇ ಶತಮಾನಕ್ಕನ್ವಯಿಸುವ ತ್ರುಟಿತ ಶಾಸನವೊಂದರಲ್ಲಿ ಅರಕೆಲ್ಲನ ಉಲ್ಲೇಖವಿದೆ.[೨೩]

ಕೆಲ್ಲ ಅರಸರಿಗೂ ಗಂಗರಿಗೂ ಇದ್ದ ಸಂಬಂಧವನ್ನು ಪರೋಕ್ಷವಾಗಿ ಸೂಚಿಸುವ ಶಾಸನವೊಂದು ದಕ್ಷಿಣಕನ್ನಡ ಜಿಲ್ಲೆಯ ಪೊಳಲಿಯಲ್ಲಿ ಕಂಡುಬಂದಿದೆ. ಕ್ರಿ.ಶ. ೯-೧೦ನೇ ಶತಮಾನದ್ದೆಂದು ಗುರುತಿಸಲಾದ ಈ ಶಾಸನದಲ್ಲಿ ಸೇಬ್ಯ ಅರಕೆಲ್ಲ ಎಂಬಾತನು ದೂರದ ತಲಕಾಡಿನಲ್ಲಿ ಮಡಿದದ್ದು ಮತ್ತು ಅದರಿಂದ ನೊಂದ ಆತನ ಸೇವಕ ಪಲ್ಯವಣ ಅಳಿಗಾನಪ ಎಂಬಾತನು ಅಗ್ನಿ ಪ್ರವೇಶ ಮಾಡಿ ಪ್ರಾಣತ್ಯಾಗಮಾಡಿದ್ದರ ಉಲ್ಲೇಖವಿದೆ.[೨೪] ತಲಕಾಡು ಗಂಗರ ರಾಜಧಾನಿ ಎಂಬುದು ಸರ್ವವಿದಿತ. ಸೇಬ್ಯಅರಕೆಲ್ಲನು ತಲಕಾಡಿನಲ್ಲಿ ಮಡಿದ ಮಾಹಿತಿಯನ್ನು ನೀಡುವ ಶಾಸನ ತುಳುನಾಡಿನಲ್ಲಿ ದೊರಕಿರುವುದು ಅರ್ಥಪೂರ್ಣ. ಇದು ಸೇಬ್ಯ

ಅರಕೆಲ್ಲನು ತುಳು ನಾಡಿಗೆ ಸೇರಿದವನೆಂದೂ ಆತನು ಗಂಗರ ಜೊತೆಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದನೆಂದೂ ನಿರೂಪಿಸುತ್ತದೆ. ಪ್ರಾಯಶಃ ಇಮ್ಮಡಿ ಎರೆಗಂಗ ನೀತಿಮಾರ್ಗ ಮತ್ತು ಮುಮ್ಮಡಿರಾಚಮಲ್ಲ ದಂಡನಾಯಕರಲ್ಲೊಬ್ಬನಾಗಿದ್ದ ಅರಕೆಲ್ಲನೂ ಪೊಳಲಿ ಶಾಸನದಲ್ಲಿ ಉಲ್ಲೇಖಿತ ನಾಗಿರುವ ಸೇಬ್ಯ ಅರಕೆಲ್ಲನೂ ಓರ್ವನೇ ವ್ಯಕ್ತಿಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಗಂಗವಂಶದವರ ಆಳ್ವಿಕೆಯ ಕೊನೆಯತನಕವೂ ಕೆಲ್ಲರು ಗಂಗರಿಗೆ ನಿಷ್ಠರಾಗಿದ್ದಿರಬೇಕು. ಕ್ರಿ.ಶ. ೧೦೦೪ರಲ್ಲಿ ತಲಕಾಡಿನ ಮೇಲೆ ನಡೆದ ಚೋಳರ ಧಾಳಿಯಲ್ಲಿ ರಕ್ಕಸಗಂಗನು ಸೋತು ಗಂಗರ ಆಳ್ವಿಕೆಯು ಕೊನೆಗೊಂಡಾಗ, ಚೋಳರ ಪ್ರಾಬಲ್ಯವನ್ನು ತಡೆಯಲು ಗಂಗರ ಅಧೀನರಾಗಿದ್ದ ಅನೇಕ ತುಂಡರಸರು ಒಗ್ಗಟ್ಟಿನಿಂದ ಮಾಡಿದ ಕೊನೆಯ ಪ್ರಯತ್ನದ ವಿವರಗಳಿವೆ ಕ್ರಿ.ಶ. ೧೦೦೬ರ ಕಲಿಯೂರು ಶಾಸನದಲ್ಲಿ[೨೫] ಆಗ ತಲಕಾಡಿನ ಬಳಿಯ ಕಲಿಯೂರಿನಲ್ಲಿ ನಡೆದ ಯುದ್ಧದಲ್ಲಿ ಈ ತುಂಡರಸರೆಲ್ಲ ಚೋಳರ ದಂಡನಾಯಕ ಅಪ್ರಮೇಯನಿಂದ ಸೋಲಿಸಲ್ಪಟ್ಟು ಓಡಿ ಹೋದರು ಎಂದು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಚೋಳರ ವಿರುದ್ಧ ಹೋರಾಡಿದ ಈ ತುಂಡರಸರ ಪೈಕಿ ನೊಳಂಬ, ಶಾಂತರ, ಶಬರ, ಸೇನವಾರ ಮುಂತಾದವರ ಜೊತೆಗೆ ಅರಕೆಲ್ಲ ಎಂಬಾತನ ಹೆಸರೂ ಉಲ್ಲೇಖಿಸಲ್ಪಟ್ಟಿರುವುದೂ ಈ ದೃಷ್ಟಿಯಿಂದ ಗಮನಾರ್ಹ.

ತಮ್ಮ ಆಶ್ರಯದಾತರಾಗಿದ್ದ ಗಂಗರ ಪತನಾನಂತರ, ಕ್ರಿ.ಶ. ೧೧ನೇ ಶತಮಾನದ ಹೊತ್ತಿಗೆ, ಕೆಲ್ಲರು ಪುನಃ ತಮ್ಮ ತಾಯ್ನೆಲವಾದ ತುಳುನಾಡಿಗೆ ಮರಳಿ ಆಳುಪರ ಆಶ್ರಯದಲ್ಲಿ ತಮ್ಮ ರಾಜಕೀಯ ಭವಿಷ್ಯವನ್ನು ರೂಪಿಸಿಕೊಂಡಂತೆ ತೋರುತ್ತದೆ. ಈ ದೃಷ್ಟಿಯಿಂದ, ತುಳುನಾಡಿನಲ್ಲಿ ಕೆಲ್ಲರ ರಾಜಧಾನಿಯಾಗಿದ್ದ ಕೆಲ್ಲ ಪುತ್ತಿಗೆಯಲ್ಲಿ ದೊರೆತ ವೀರಸ್ಮಾರಕಗಳಲ್ಲಿರುವ ಬರಹಗಳು ಮಹತ್ವದ್ದೆನಿಸುತ್ತವೆ. ಕೆಲ್ಲರ ಹೆಸರಿರುವ ಆರು ಸ್ಮಾರಕ ಶಾಸನಗಳನ್ನಿಲ್ಲಿ ಗುರುತಿಸಲಾಗಿದ್ದು ಇವು ಕ್ರಿ.ಶ ೧೧-೧೨ನೇ ಶತಮಾನಕ್ಕೆ ಅನ್ವಯಿಸುವಂಥವು ಎನ್ನಲಾಗಿದೆ.[೨೬] ಈ ಪೈಕಿ ಒಂದು ಶಾಸನದಲ್ಲಿ ಶಕವರ್ಷ ೯೮೪ (ಕ್ರಿ.ಶ. ೧೦೬೩) ರ ಉಲ್ಲೇಖವಿದೆ. ಈ ಆರು ಶಾಸನಗಳಲ್ಲಿ ಕಲಿಕೆಲ್ಲ, ಸೇಬ್ಯಕೆಲ್ಲ ಮತ್ತು ಆತನ ಸಹೋದರ ಪಯಿದರಕೆಲ್ಲನ ಹೆಸರುಗಳ ಪ್ರಸ್ತಾಪವಿದ್ದು ಈ ಪೈಕಿ ಸೇಬ್ಯಕೆಲ್ಲ ಮತ್ತು ಪಯಿದರಕೆಲ್ಲನನ್ನು ಪುತ್ತಿಗೆಯವರು ಎಂದು ಸ್ಪಷ್ಟವಾಗಿ ಗುರುತಿಸಲಾಗಿದೆ. ಇದರಂತೆ, ಕ್ರಿ.ಶ. ೧೧ನೇ ಶತಮಾನದ ಹೊತ್ತಿಗೆ ಕೆಲ್ಲ ಅರಸರು ಕೆಲ್ಲ ಪುತ್ತಿಗೆಯನ್ನು ತಮ್ಮ ರಾಜಕೀಯ ಕೇಂದ್ರವನ್ನಾಗಿ ಪುನಃ ರೂಪಿಸಿಕೊಂಡಿದ್ದರೆಂಬುದು ಖಚಿತವಾಗುತ್ತದೆ. ಕಲಿಕೆಲ್ಲ, ಸೇಬ್ಯಕೆಲ್ಲ ಮತ್ತು ಪಯಿದರಕೆಲ್ಲ ರು ವೀರಮರಣವನ್ನು ಹೊಂದಿದ ನೆನಪಿಗಾಗಿ ಈ ವೀರ ಸ್ಮಾರಕಗಳನ್ನು ನಿಲ್ಲಿಸಲಾಯಿತೆಂಬ ವಿಚಾರ ಅವುಗಳಲ್ಲಿನ ಬರಹಗಳಿಂದ ವ್ಯಕ್ತವಾಗುತ್ತದೆ. ಇವರು ಯಾವ ಯುದ್ಧದಲ್ಲಿ ಪಾಲ್ಗೊಂಡು ಮಡಿದರು ಎಂಬ ವಿವರಗಳು ಲಭ್ಯವಿಲ್ಲ. ಕ್ರಿ.ಶ. ೧೧-೧೨ನೇ ಶತಮಾನದ ಅವಧಿಯಲ್ಲಿ ತುಳುನಾಡಿನ ಮೇಲೆ ಚೋಳರು, ಗೋವಾಕದಂಬರು ಮತ್ತು ಹೊಯ್ಸಳರು ನಡೆಸಿದ ದಾಳಿಗಳ ಕುರಿತು ವಿವಿಧ ಶಾಸನಗಳಲ್ಲಿ ವಿವರಗಳಿವೆ.[೨೭] ಚೋಳ ಒಂದನೆಯ ರಾಜೇಂದ್ರನು ಧಾಳಿ ನಡೆಸಿ ತುಳುನಾಡನ್ನು ಆಕ್ರಮಿಸಿದ ಸಂದರ್ಭ ಕ್ರಿ.ಶ ೧೦೨೦ರಲ್ಲಿ ಆಳುಪರಸ ಬಂಕಿದೇವನು ಶಾಂತರ ಹಾಗೂ ಇತರರನ್ನು ಜೊತೆ ಮಾಡಿಕೊಂಡು ತುಳುನಾಡಿನಿಂದ ಚೋಳರನ್ನು ಬಡಿದಟ್ಟಲು ಮಾಡಿದ ಹೋರಾಟದ ಕುರಿತು ಶಾಸನೋಲ್ಲೇಖವಿದೆ. ಆಳುಪ ಪಟ್ಟಿಯೊಡೆಯನ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೦೨೬ರ ಸುಮಾರಿಗೆ ಗೋವಾ ಕದಂಬರ ಒಂದನೇ ಜಯಕೇಶಿಯು ಚಾಲುಕ್ಯ ಆರನೇ ವಿಕ್ರಮಾದಿತ್ಯನ ಪಕ್ಷದಿಂದ ತುಳುನಾಡಿನ ಮೇಲೆ ಧಾಳಿ ನಡೆಸಿದ್ದ. ಕ್ರಿ.ಶ. ೧೨ನೇ ಶತಮಾನಾರಂಭದಲ್ಲಿ ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಯಲ್ಲಿ ಆತ ತುಳುನಾಡಿನ ಮೇಲೆ ದಂಡಯಾತ್ರೆಯನ್ನು ಗೈದು ಈ ಪ್ರದೇಶವನ್ನು ವಶಪಡಿಸಿಕೊಂಡ ವಿಚಾರವನ್ನು ದಾಖಲೆಗಳು ನಿರೂಪಿಸುತ್ತವೆ. ಪ್ರಾಯಶಃ ಈ ಯಾವುದೋ ಯುದ್ಧಗಳ ಸಂದರ್ಭ ಮೇಲೆ ಉಲ್ಲೇಖಿಸಲಾದ ಕೆಲ್ಲ ವೀರರು ಆಳುಪರಸರ ಪಕ್ಷದಿಂದ ಹೋರಾಡಿ ಮಡಿದಿರಬೇಕೆಂದು ಊಹಿಸಬಹುದು.[೨೮]

ಶಾಸನಗಳಿಂದ ವ್ಯಕ್ತವಾಗುವಂತೆ ಕ್ರಿ.ಶ ೧೨ನೇ ಶತಮಾನದ ಆರಂಭದ ಹೊತ್ತಿಗೆ ಕೆಲ್ಲ ವಂಶದವರು ತುಳುನಾಡಿನಲ್ಲಿ ತಮ್ಮದೇ ಆದ ರಾಜಕೀಯ ಅಸ್ತಿತ್ವನ್ನು ಹೊಂದಿದ್ದರು. ಕ್ರಿ.ಶ. ೧೧೧೮ರ ವೇಣೂರ್ರು ಮತ್ತು ಉಳಿಪಾಡಿ ಶಾಸನಗಳಲ್ಲಿ[೨೯] ಮಹಾ ಮಂಡಲೇಶ್ವರ ಸೇವೆಗೆಲ್ಲರಸನು ಪೂಂಜಳಿಕೆ ಮತ್ತು ಚಾಲೂಳ್ಕೆ ಎಂಬ ಎರಡು ಪ್ರದೇಶಗಳನ್ನು ಆಳುತ್ತಿದ್ದ ಎಂಬ ಕುರಿತ ವಿವರಗಳಿವೆ. ಪೂಂಜಳಿಕೆ ಎಂಬುದು ಶಾಸನವು ಲಭ್ಯವಾದ ವೇಣೂರು ಪ್ರದೇಶಕ್ಕೆ ಅನ್ವಯಿಸುವ ಹೆಸರಾಗಿದ್ದಿರಬೇಕು. ಕ್ರಿ.ಶ. ೧೬-೧೭ನೇ ಶತಮಾನದ ಅಜಿಲ ಅರಸರ ಶಾಸನಗಳಲ್ಲಿ ಈ ಪ್ರದೇಶವನ್ನು ಪುಂಜಳಿಕೆಯ ರಾಜ್ಯ ಎಂದು ಗುರುತಿಸಲಾಗಿರುವುದು ಈ ಹೇಳಿಕೆಗೆ ಸಮರ್ಥನೆಯನ್ನು ನೀಡುತ್ತದೆ.[೩೦] ಚಾಲೂಳ್ಕೆ ಎಂಬುದು ಇನ್ನೊಂದು ಶಾಸನವು ದೊರೆತ ಮಂಗಳೂರು ತಾಲೂಕಿನ ಉಳಿಪಾಡಿ ಪ್ರದೇಶಕ್ಕೆ ಅನ್ವಯಿಸುವ ಹೆಸರಾಗಿರಬೇಕು. ಸೇವ್ಯಗೆಲ್ಲರಸನ ಮಹಾಮಂಡಲೇಶ್ವರ ಎಂಬ ಬಿರುದನ್ನು ಗಮನಿಸಿದಾಗ ಈತ ಸಾಮಂತ ಅರಸನಿದ್ದಿರಬೇಕು ಮತ್ತು ಪ್ರಾಯಶಃ ಅಂದಿನ ತುಳುನಾಡನ್ನಾಳುತ್ತಿದ್ದ ಆಳುಪ ಅರಸ ಕವಿ ಆಳುಪೇಂದ್ರನ ಅಧೀನ ಅರಸನಾಗಿದ್ದಿರಬೇಕೆಂದು ಊಹಿಸಿದರೆ ತಪ್ಪಾಗಲಾರದು. ಈ ಸೇವ್ಯಗೆಲ್ಲರಸನೇ ಅನಂತರದ ಶತಮಾನಗಳಲ್ಲಿ ವೇಣೂರು ಪ್ರದೇಶದಲ್ಲಿ ಆಳ್ವಿಕೆನಡೆಸಿದ ಅಜಿಲವಂಶದ ಮೊದಲ ದೊರೆಯಿರಬೇಕು ಎಂಬ ಅಭಿಪ್ರಾಯವೂ ಇದೆ.[೩೧]

ಶಾಸನಗಳು ನಿರೂಪಿಸುವಂತೆ ಕೆಲ್ಲವಂಶದವರು ಜೈನಧರ್ಮಾವಲಂಬಿಗಳಾಗಿದ್ದರು. ಕೆಲ್ಲ ಪುತ್ತಿಗೆಯಲ್ಲಿ ಗುರುತಿಸಲಾದ ಕೆಲ್ಲರ ಶಾಸನಗಳಲ್ಲಿ ಕೆಲ್ಲರ ಶಾಸನಗಳಲ್ಲಿ 'ಜೈನ ಬಳಿ'ಗಳ ಉಲ್ಲೇಖವಿರುವುದು.[೩೨] ಈ ದೃಷ್ಟಿಯಿಂದ ಮಹತ್ವ ಪೂರ್ಣ. ಅಲ್ಲದೆ, ಗಂಗ ಇಮ್ಮಡಿ ರಾಚಮಲ್ಲನ ಕಾಲಕ್ಕನ್ವಯಿಸುವ ಮಂಡ್ಯ ಜಿಲ್ಲೆಯ ಕ್ಯಾತನಹಳ್ಳಿಯ ಶಾಸನದಲ್ಲಿ ಕೆಲ್ಲ ಬಸದಿಯ ಉಲ್ಲೇಖವಿದ್ದು ಇದು ಕೆಲ್ಲರೂ ಜೈನಧರ್ಮೀಯ ರಾಗಿದ್ದರೆಂಬುದನ್ನು ಪರೋಕ್ಷವಾಗಿ ಸಮರ್ಥಿಸುತ್ತದೆ.[೩೩] ಕೆಲ್ಲ ಎಂಬ ಕುಲನಾಮವು ಇಂದಿಗೂ ತುಳುನಾಡಿನ ಜೈನರಲ್ಲಿ ಪ್ರಚಲಿತವಿರುವುದನ್ನು ಗಮನಿಸಬಹುದು.

ಕೆಲ್ಲ ಅರಸರಿಗೆ ಸಂಬಂಧಿಸಿದ ಶಾಸನಗಳ ಪೈಕಿ ಒಂದೆರಡನ್ನು ಹೊರತುಪಡಿಸಿ ಉಳಿದೆಲ್ಲವೂ ವೀರಗಲ್ಲುಗಳ ಸ್ವರೂಪದವೂ ಎಂಬೂದು ಅವರ ಶೌರ್ಯ, ಸಾಹಸಗಳಿಗೆ ನಿದರ್ಶನಗಳೆನ್ನಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. *Kittel's Kannad - English Dictionary,* (ed.) by Mariappa Bhat (1977, Madras), p. 599; T. Burrow and M.B. Emeneau (1961), *A Dravidian Etymological Dictionary,* No. 1641.
೨. Epigraphia Indica, XXVII, p. 33-34.
೩. ವಿವೇಕರೈ ಬಿ.ಎ., (೧೯೮೫, ಬೆಂಗಳೂರು), **ತುಳುಜನಪದ ಸಾಹಿತ್ಯ** ಪು. ೭೬; ಪಾಲ್ತಾಡಿ ರಾಮಕೃಷ್ಣ ಆಚಾರ್ (೧೯೯೮, ಪುತ್ತೂರು), ಕಲ್ಕುಡ ಕಲ್ಲುರ್ಟಿ, ಪು. ೧೭.
೪. Krishna M.H., (1936), Lithic Record found at Halmidi, *Mysore Archaeological Report,* pp 78-81; Srikanta Shastry., *Sources of Karnataka History,* Vol I p. 20; ಹನುಮಂತ ರಾವ್ ಎಂ., (೧೯೪೨), "ಕನ್ನಡದ ತೀರ ಹಳೆಯ ಶಾಸನ", **ಕನ್ನಡ ನುಡಿ,** ಪು. ೩೫೮-೫೯.
೫. ಕಲಬುರ್ಗಿ ಎಂ. ಎಂ., (೧೯೮೯, ಬೆಂಗಳೂರು), **ಕನ್ನಡ ನಾಮ ವಿಜ್ಞಾನ,** ಪು ೩೧; "ಹಲ್ಮಿಡಿ ಶಾಸನದ ಪ್ರೇಮಾಲಯ ಸುತನ್", **ಮಾರ್ಗ-೩** (೧೯೯೫), ಪು ೩-೬.
೬. Ramesh K.V., (1984, New Delhi), *Inscriptions of the Western Gangas,* foot note in p. XXIII; Gai G.S. (1991) "Halmidi Inscription of Kakustha Bhattora - A Fresh Study", Studies in Indian Epigraphy, VI 17, foot Note in p. 16.
೭. ಕೆ. ವಿ ರಮೇಶ್., ಎಂ. ಜೆ. ಶರ್ಮ (೧೯೭೮, ಉಡುಪಿ), **ತುಳುನಾಡಿನ ಶಾಸನಗಳು,** ನಂ. ೨೧.
೮. Ramesh K.V., (1970, Dharwar), *A History of South Kanara,* p. 85.
೯. **ತುಳುನಾಡಿನ ಶಾಸನಗಳು,** ಪೂರ್ವೋಕ್ತ, ನಂ. ೩.
೧೦. ರಮೇಶ್ ಕೆ. ವಿ., (೧೦೯೯, ಉಡುಪಿ), **ತುಳುನಾಡಿನ ಇತಿಹಾಸ,** ಪು. ೪೧.
೧೧. *Epigraphia Carnatica,* Vol XVI (1955)., Supplimentary, Inscriptions in the Tumkur District. No. 86, 95, 96.
೧೨. Ibid, No 86, 87, 91, 93, 94, 95, 96, 99.
೧೩. ibid, no. 95.
೧೪. Sheik Ali., (1976), *History of the Western Gangas,* p. 85.
೧೫. *Epigraphia Carnatica,* vol XII, (1904), Mi 38.
೧೬. Krishnamurthy M.S., (1980, Mysore), *The Nolamabas,* p. 56-57.
೧೭. *Epigraphia Carnatica,* Vol XIV, Tm 90.
೧೮. Sheik Ali., op-cit, p. 82, 87, 200; M.V. Krishna Rao (1936, Madras), Gangas of Talakad, p. 60.
೧೯. *Epigraphia Carnatica.,* Vol XVI, Supplimentary Inscriptions in the Tumkur District no. 95.
೨೦. *Epigraphia Carnatica.,* Vol XVI, GB. 63.
೨೧. Krishnamurthy M.S., op-cit, foot note in p. 111; Sheik Ali, op-cit, p. 115.
೨೨. *Epigraphia Carnatica* Vol XI., (1998) em. 47. ಕೆಲ್ಲವಂಶದವರಲ್ಲಿ ಹೊಯ್ಸಳ ಎಂಬ ಹೆಸರು ಕ್ರಿ.ಶ. ೧೦ನೇ ಶತಮಾನದ ಮಧ್ಯಭಾಗದಲ್ಲೇ ಪ್ರಚಲಿತವಿತ್ತು ಮತ್ತು ಅದು ಚಿಕ್ಕಮಗಳೂರು ಜಿಲ್ಲೆಯಲ್ಲಿ ದೊರಕಿದ ಶಾಸನವೊಂದರಲ್ಲಿ ಉಲ್ಲೇಖಗೊಂಡಿದೆ ಎಂಬ ವಿಚಾರ ಕುತೂಹಲಕರ ಹಾಗೂ ಅಧ್ಯಯನ ಯೋಗ್ಯ.
೨೩. *Epigraphia Carnatica* Vol XI., (1998), em 106.
೨೪. Ramesh K.V., *A History of South Kanara,* p. 88.
೨೫. *Epigraphia Carnatica,* Vol V (1976), Tn 220.
೨೬. Narasimhamurthy P. N., (1985) "Some Interesting Names and Terms in the memorial Epigraphs of Kella puttege, *studies in indian place, Names,* Vol-6, pp. 32-37, ARSIE 1978-79 No. 178-183.
೨೭. ಈ ಮೂರೂ ಧಾಳಿಗಳ ವಿವರಗಳಿಗೆ ನೋಡಿ, Ramesh KV., A History of south kanara, p. 103, 107, 110.
೨೮. ಹೊಯ್ಸಳ ವಿಷ್ಣುವರ್ಧನನ ತುಳುನಾಡಿನ ಧಾಳಿಯ ಸಂದರ್ಭ ನಡೆದ ಹೋರಾಟದಲ್ಲಿ ಈ ಕೆಲ್ಲವೀರರು ಮಡಿದಿರಬಹುದೆಂದು ಪಿ.ಎನ್. ನರಸಿಂಹ ಮೂರ್ತಿಯವರ ಅಭಿಪ್ರಾಯ. ನೋಡಿ, Narasimha Murthy., P.N. op-cit, p. 36.
೨೯. *South Indian Inscriptions* Vol VII., no 258, ARSIE 1929-30, No. 531.
೩೦. Gururaja Bhatt., (1975), Manipal) *Studies in Tuluva History and Culture,* pp. 92-96.
೩೧. ಎಸ್. ಡಿ. ಶೆಟ್ಟಿ., (೨೦೦೨, ಉಡುಪಿ), **ತುಳುನಾಡಿನ ಜೈನ ಧರ್ಮ,** ಪು. ೮೯.
೩೨. "ಬಳಿ" ಎಂದರೆ ವೈದಿಕ ಸಮಾಜದಲ್ಲಿನ ಗೋತ್ರಗಳಂತೆ, ಜೈನರಲ್ಲಿರುವ ಕುಟುಂಬ ಸೂಚಕವಾದ ಹೆಸರುಗಳು.
೩೩. *Epigraphia Carnatica* Vol VI., (1977), P. Pura no. 16, p. 113-14.

ಪ್ರೊ. ಜಿ.ಎಸ್. ದೀಕ್ಷಿತ್*

ಬಸವಣ್ಣನವರ ಒಂದು ಐತಿಹಾಸಿಕ ವಚನದ ವಿಶ್ಲೇಷಣೆ

ಅರಸು ವಿಚಾರ, ಸಿರಿಯು, ಶೃಂಗಾರ, ಸ್ಥಿರವಲ್ಲ ಮಾನವಾ
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ
ಒಬ್ಬ ಜಂಗಮದ ಅಭಿಮಾನದಿಂದ
ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು
ಸಂದಿತ್ತು ಕೂಡಲ ಸಂಗಮದೇವ ನಿಮ್ಮ ಕವಳಿಗೆಗೆ.[೧]

-ಈ ವಚನದಲ್ಲಿ ಎರಡು ವಿಷಯಗಳಿವೆ. ಮೊದಲನೆಯದು, ಕಲ್ಯಾಣ ಹಾಳಾಗಿದ್ದು. ಅದರಿಂದ ನಾವು ಕಲಿಯ ತಕ್ಕದ್ದೇನೆಂದರೆ. ಅರಸನ ಅಧಿಕಾರ, ಸಂಪತ್ತು ಮತ್ತು ಸೌಂದರ್ಯಗಳು ಸ್ಥಿರವಲ್ಲ. ಯಾಕೆಂದರೆ ಕಲ್ಯಾಣ ಕ್ರಿ.ಶ. ೧೦೭೫ರಿಂದ ೧೧೨೫ರ ವರೆಗೆ ಆರನೇ ವಿಕ್ರಮಾದಿತ್ಯನ ರಾಜಧಾನಿಯಾಗಿ ಮೆರೆದಿದ್ದನ್ನು ಅವನ ಆಸ್ಥಾನ ಕವಿ ವಿಜ್ಞಾನೇಶ್ವರನು ಅಂತಹ ಪಟ್ಟಣ ಹಿಂದೆ ಇರಲಿಲ್ಲ. ಇಂದಿಲ್ಲ, ಮುಂದೆ ಇರುವುದಿಲ್ಲವೆಂದು ಹೊಗಳಿದ್ದಾನೆ. ಕೇವಲ ೬೦ ವರ್ಷಗಳ ನಂತರ, ವಿಕ್ರಮಾದಿತ್ಯನ ನಂತರ ಆಳಿದ ಅವನ ಮಕ್ಕಳ ಮತ್ತು ನಂತರ ಆಳಿದ ಬಿಜ್ಜಳ ಕಲಚುರಿ ಮತ್ತು ಅವನ ಮಕ್ಕಳ ನಂತರದ ಕಾಲದಲ್ಲಿ ಕಲ್ಯಾಣ ನೆಲಸಮವಾಯಿತು.

ಎರಡನೆಯದಾಗಿ ಕಲ್ಯಾಣ ಮತ್ತು ಚಾಳುಕ್ಯರು ಹೇಗೆ ಹಾಳಾದರೆನ್ನುವುದನ್ನು ಈ ವಚನದಲ್ಲಿ ಹೇಳಿದೆ. ಈ ಪಟ್ಟಣದ ಮತ್ತು ಚಾಳುಕ್ಯರ ಪತನಕ್ಕೆ ಅನೇಕ ಕಾರಣಗಳಿರಬಹುದು. ಇಲ್ಲಿ ಹೇಳಿರುವುದು, ಕೊನೆಯ ಕಾರಣ. ಅದು ಏನೆಂದರೆ, ಒಬ್ಬ ಜಂಗಮದ ಅಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು. ಇದರಲ್ಲಿ ಹೇಳಿರುವ ಚಾಳುಕ್ಯರಾಯನು ಯಾರು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಅನೇಕ ಉತ್ತರಗಳನ್ನು ವಿದ್ವಾಂಸರು ಕೊಟ್ಟಿದ್ದಾರೆ. ಗೋವಿಂದ ಪೈ ಮತ್ತು ಪಿ. ಬಿ. ದೇಸಾಯಿಯವರು ಮೂರನೇ ತೈಲನೆಂದಿದ್ದರೆ, ಎಲ್. ಬಸವರಾಜು ಅವರು ಮೂರನೆ ತೈಲನ ಕಾಲದಲ್ಲಿ ಅಂದರೆ ೧೧೬೨ರಲ್ಲಿ ಅಲ್ಲ, ನಾಲ್ಕನೇ ಸೋಮೇಶ್ವರನ ಕಾಲದಲ್ಲಿ ಅಂದರೆ ೧೧೮೯ರಲ್ಲಿ ಎಂದು ಊಹಿಸಿದ್ದಾರೆ.

ಯಾವ ಚಾಳುಕ್ಯರಾಯನ ಕಾಲದಲ್ಲಿ ಅವರ ಆಳಿಕೆ ತೆಗೆಯಿತ್ತೆಂದು ತಿಳಿದುಕೊಳ್ಳಲು ಬಿಜ್ಜಳನ ಅಂತ್ಯಕಾಲದ ಇತಿಹಾಸವನ್ನು ತಿಳಿದುಕೊಳ್ಳುವುದು ಅವಶ್ಯ. ೧೧೬೭ರಲ್ಲಿ ಬಿಜ್ಜಳನು ರಾಜ್ಯತ್ಯಾಗ ಮಾಡಿ ತನ್ನ ಎರಡನೇ ಮಗ ಸೋವಿದೇವನಿಗೆ ಪಟ್ಟವನ್ನು ಕಟ್ಟಿದನು. ಸೋವಿದೇವ ಮತ್ತು ಅವನ ತಮ್ಮಂದಿರು ೧೧೮೩-೮೪ರವರೆಗೂ ಆಳಿದರು. ಆ ವರ್ಷ ನಾಲ್ಕನೇ ಸೋಮೇಶ್ವರರು ಕಲಚುರಿಗಳನ್ನು ನಾಶಮಾಡಿದನು. ನಾಲ್ಕನೇ ಸೋಮೇಶ್ವರನನ್ನು ಹೊಯ್ಸಳ ಎರಡನೇ ವೀರ ಬಲ್ಲಾಳನು ಸೋಲಿಸಿದನು. ಅವನನ್ನು ಯಾದವ ಅಥವಾ ಸೇವುಣ ಭಿಲ್ಲಮನು ಸೋಲಿಸಿ ಕಲ್ಯಾಣವನ್ನು ಕಿತ್ತುಕೊಂಡನು. ಇದು ಆಗಿದ್ದು ೧೧೮೯-೯೦ರಲ್ಲಿ ಅಷ್ಟೊತ್ತಿಗೆ ಕಲ್ಯಾಣವು ಅಧೋಗತಿಗೆ ಇಳಿದಿತ್ತು.

ನನ್ನ ಪ್ರಕಾರ ವಚನದಲ್ಲಿ ಹೇಳಿರುವ ಚಾಳುಕ್ಯರಾಯನು ಮೂರನೇ ತೈಲನೂ ಅಥವಾ ಅವನ ಮಗ ನಾಲ್ಕನೆ ಸೋಮೇಶ್ವರನೂ ಅಲ್ಲ, ಬಿಜ್ಜಳನೆ ಆ ಚಾಳುಕ್ಯರಾಯ. ಈ ಅಭಿಪ್ರಾಯಕ್ಕೆ ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆಯ ಆಧಾರ. ಆ ಚರಿತ್ರೆಯಲ್ಲಿ[೨] ಒಂದು ಹೇಳಿಕೆಯ ಸಾರಾಂಶ ಹೀಗಿದೆ:

"ಬಿಜ್ಜಳನು ಶಿವಭಕ್ತನಾದ ಹರಳಯ್ಯ ಮತ್ತು ಮಧುವಯ್ಯ ಅವರನ್ನು ಅವರ ತಪ್ಪಿಗಾಗಿ ದಂಡಿಸಲು ನಿಶ್ಚಯಿಸಿದ್ದರಿಂದ ಅವನ ಐಶ್ವರ್ಯವು ಅವನಿಯಲ್ಲಿ ಚಾಳುಕ್ಯ ಎಂಬ ಹೆಸರಿಲ್ಲದಂತೆ, ಕಲ್ಯಾಣ ಕಟಕ ಸಮೇತ ನಾಶವಾಗಲೆಂದು ಬಸವಣ್ಣನವರು ಶಪಿಸಿದರು. ಜಗದೇವ ಮತ್ತು ಮೊಲ್ಲ ಬೊಮ್ಮಯ್ಯ ಇವರುಗಳು ಬಿಜ್ಜಳನನ್ನು ಕೊಂದರು."

ಬಿಜ್ಜಳನಿಗೆ ಬಸವಣ್ಣನವರು ಕೊಟ್ಟ ಶಾಪ ಮತ್ತು ಅವರ ವಚನ ಎರಡೂ ಒಂದೇ ವಿಷಯಕ್ಕೆ ಸಂಬಂಧಿಸಿವೆ. ಎಲ್ಲಾ ವೀರಶೈವ ಪುರಾಣಗಳು ವಚನಗಳನ್ನು ಮತ್ತು ಪಾರಂಪರಿಕ ಇತಿಹಾಸಗಳನ್ನು ಆಧರಿಸಿವೆ. ಮೇಲಿನ ಹೇಳಿಕೆಯಲ್ಲಿ ಬಿಜ್ಜಳನು ಹರಳಯ್ಯ-ಮಧುವಯ್ಯ-ಇವರನ್ನು ದಂಡಿಸಿದ್ದರಿಂದ ಅವನ ಐಶ್ವರ್ಯವು, ಚಾಳುಕ್ಯವೆನ್ನುವ ಹೆಸರು ಮತ್ತು ರಾಜಧಾನಿ ಕಲ್ಯಾಣ ಮಾಯವಾದವೆಂದಿದೆ. ಇದರಲ್ಲಿ ಬಿಜ್ಜಳನ ಅಂತ್ಯ ಮತ್ತು ಚಾಳುಕ್ಯ ವಂಶದ ಅಂತ್ಯ ಒಂದೇ ಎಂದಿದೆ. ಇದಲ್ಲಿ ಬಿಜ್ಜಳನನ್ನು ಕಲಚುರಿ ವಂಶದವನೆಂದು ಕರೆಯದೆ, ಚಾಳುಕ್ಯ ವಂಶದವನೆಂದು ಹೇಳಿದೆ. ವೀರಶೈವ ಪುರಾಣಗಳನ್ನು ಎಲ್ಲಿಯೂ ಬಿಜ್ಜಳನನ್ನು ಕಲಚುರಿ ವಂಶದವನೆಂದು ಕರೆದಿಲ್ಲ, ಚಾಳುಕ್ಯ ವಂಶದವನೇ ಎಂದು ಹೇಳಿದೆ. ಬಹುಶಃ ಪುರಾಣಗಳನ್ನು ಬರೆಯುವಾಗ ಎರಡೂ ವಂಶಗಳ

* 'ಸ್ವಸ್ತಿ' ಸಂಖ್ಯೆ೧, ೧೫ನೇ ಕ್ರಾಸ್, ನವೋದಯನಗರ, ಧಾರವಾಡ - ೫೮೦ ೦೦೩

ವ್ಯತ್ಯಾಸ ಗೊತ್ತಿಲ್ಲದೆ, ಎರಡೂ ಒಂದೇ ಎಂದು ಹೀಗೆ ಬರೆದಿರಬಹುದು. ಅಥವಾ ಬಿಜ್ಜಳ ಆರನೇ ವಿಕ್ರಮಾದಿತ್ಯನ ಮಗಳ ಮಗ ಮತ್ತು ಮೂರನೇ ತೈಲಪ ಮಗನ ಮಗ. ಆದ್ದರಿಂದ ಇಬ್ಬರೂ ಒಂದೇ ಅಂದರೆ ಚಾಳುಕ್ಯ ಮನೆತನದವರೆಂದು ಪೌರಾಣಿಕರು ಅಂದುಕೊಂಡಿರಬಹುದು. ಏನೇ ಆದರೂ ಬಿಜ್ಜಳ ಕಲಚುರಿವಂಶದವನೆಂದು ಒಂದು ಪುರಾಣವೂ ಹೇಳಿಲ್ಲ. ಆದ್ದರಿಂದ ಬಸವಣ್ಣನವರು ಬಿಜ್ಜಳನ ರಾಜ್ಯವನ್ನು ಚಾಳುಕ್ಯ ರಾಜ್ಯವೆಂದು ಕರೆದಿದ್ದಾರೆ. ಮುಂದೆ ಇದೇ ಶಾಸನದಲ್ಲಿ ಜಗದೇವಮೊಲ್ಲ ಬೊಮ್ಮಯ್ಯಗಳು ಕೊಂದರೆಂದೂ ಹೇಳಿದೆ. ಅವರು ಹಾಗೆ ಮಾಡಲು ಕಾರಣವನ್ನು ವಚನದಲ್ಲಿ ಜಂಗಮದ ಅಭಿಮಾನದಿಂದ ವೆಂದು ಹೇಳಿದೆ. ಹೀಗೆ ವಚನ ಮತ್ತು ಪಂಡಿತಾರಾಧ್ಯ ಚರಿತ್ರೆ ಒಂದಕ್ಕೊಂದು ಪೂರಕವಾಗಿವೆ. ಈ ಎರಡೂ ಆಧಾರಗಳಿಂದ ಚಾಳುಕ್ಯ ಅಂದರೆ ಕಲಚುರಿ ಎಂದೂ ಮತ್ತು ಜಂಗಮದ ಅಭಿಮಾನವು ಚಾಳುಕ್ಯರಾಯನ ಆಳಿಕೆ ತೆಗೆದುದರ ಕಾರಣವೆಂದೂ ಸ್ಪಷ್ಟವಾಗಿ ಹೇಳಿದೆ. ಜಗದೇವ ಮೊಲ್ಲಬೊಮ್ಮಯ್ಯಗಳು ಜಂಗಮದ ಅಂದರೆ ಬಸವಣ್ಣನವರ ಮೇಲಿನ ಅಭಿಮಾನದಿಂದ ಬಿಜ್ಜಳನನ್ನು ಕೊಂದರು. ಹಾಗೆ ಕೊಂದದ್ದರಿಂದ ಚಾಳುಕ್ಯರಾಯನ ಅಂದರೆ ಬಿಜ್ಜಳನ ಆಳಿಕೆ ಮುಗಿಯಿತು. ಹೀಗೆ ಅರ್ಥ ಮಾಡಬೇಕೆಂದು ನನ್ನ ಅಭಿಪ್ರಾಯ.

ಎಲ್. ಬಸವರಾಜು ಅವರು[೩] ಈ ವಚನದಲ್ಲಿರುವ ಚಾಳುಕ್ಯರಾಯ, ನಾಲ್ಕನೇ ಸೋಮೇಶ್ವರ (೧೧೮೩-೮೯) ಅವನ ಆಳಿಕೆ ಮುಗಿದಿದ್ದು ೧೧೮೯. ಅದಕ್ಕೆ ಕಾರಣ ಅವನನ್ನು ಹೊಯ್ಸಳ ಎರಡನೇ ವೀರಬಲ್ಲಾಳ ಸೋಲಿಸಿ ಪದಚ್ಯುತನನ್ನಾಗಿ ಮಾಡಿದ. ಅಲ್ಲಿಯವರೆಗೂ ಬಸವಣ್ಣನವರು ಜೀವಂತವಿದ್ದರು. ಆಗ ಕಲ್ಯಾಣ ಹಾಳಾಗಿರಲಿಲ್ಲ. ಸೇವುಣ ಭಿಲ್ಲಮನು ಹೊಯ್ಸಳ ವೀರಬಲ್ಲಾಳನನ್ನು ಸೋಲಿಸಿ ಕಲ್ಯಾಣವನ್ನು ಗೆದ್ದ. ಅಲ್ಲಿಂದ "ಕಲ್ಯಾಣದ ಜೀವಕಳೆಗೆ ಇತಿ ಶ್ರೀಯಾಗಿರಬೇಕೆಂದು ಗೋವಿಂದ ಪೈಗಳು (ಮೂರು ಉಪನ್ಯಾಸಗಳು, ಪು - ೭೩) ಊಹಿಸಿರುವುದು ನಿಜವಾದರೆ ಕಲ್ಯಾಣ ಹಾಳಾದುದು ಕ್ರಿ.ಶ. ಸುಮಾರು ೧೧೮೭-೯೧ರ ಮಧ್ಯಂತರದಲ್ಲಿ. ಕನಿಷ್ಠ ಪಕ್ಷ ಅಲ್ಲಿಯ ವರೆಗಾದರೂ ಬಸವಣ್ಣನವರು ಬದುಕಿದ್ದರು. ಹೀಗಾಗಿ ಚಾಳುಕ್ಯ ರಾಯನ ಆಳ್ವಿಕೆ ಮುಗಿದ ಮತ್ತು ಕಲ್ಯಾಣ ಹಾಳಾದ ಮಾತಿರುವ ಈ ವಚನ - ಬಸವಣ್ಣನವರು ಭಂಡಾರಿ ಪದವಿಯಿಂದ ನಿವೃತ್ತರಾಗಿ ಕೂಡಲ ಸಂಗಮಕ್ಕೆ ಹೋಗಿ ಅಲ್ಲಿ ನೆಲೆಸಿದ್ದ ಕಾಲಕ್ಕೆ ಬರೆದುದಾಗಿರಬೇಕು."

ಬಸವರಾಜು ಅವರು ಜಂಗಮದ ಅಭಿಮಾನದಿಂದ ಕಲ್ಯಾಣ ಹಾಳಾಯಿತೆಂದು ಹೇಳುವುದಿಲ್ಲ. ಅವರ ಪ್ರಕಾರ ಕಲ್ಯಾಣ ಹಾಳಾಗಿದ್ದು, ಸೇವುಣ ಭಿಲ್ಲಮನು ಅದನ್ನು ವಶಪಡಿಸಿ ಕೊಂಡಂದಿನಿಂದ ಅದರ ಜೀವಕಳೆಗೆ ಇತಿ ಶ್ರೇಯಾಯಿತೆನ್ನುವುದನ್ನು ಒಪ್ಪಿಕೊಂಡಿದ್ದಾರೆ. ಹೀಗೆ ಹೇಳುವುದರಿಂದ ಅವರ ಪ್ರಕಾರ ಕಲ್ಯಾಣ ಹಾಳಾಗಿದ್ದು ೧೧೮೭-೧೧೯೧. ನನ್ನ ಪ್ರಕಾರ ೧೧೮೩-೧೧೮೮ ಕಾಲದ ಬಗ್ಗೆ ನಮ್ಮಿಬ್ಬರಲ್ಲಿ ಭಾರೀ ವ್ಯತ್ಯಾಸವಿಲ್ಲ. ಅವರು ಬಸವಣ್ಣನವರು ೧೧೮೯ರವರೆಗು ಜೀವಿಸಿದ್ದರೆನ್ನುತ್ತಾರೆ. ನಾವು ಕಲ್ಯಾಣಕ್ರಾಂತಿ ಆಗಿದ್ದು ೧೧೮೩-೮೮; ಬಸವಣ್ಣನವರು ಐಕ್ಯವಾಗಿದ್ದು ೧೧೮೫-೮೬ ಎಂದು ವಾದಿಸಿದ್ದೇನೆ. ಬಿಜ್ಜಳನ ಸಂತತಿ ೧೧೮೩-೮೮ರಲ್ಲಿ ಮುಗಿದ ಕೂಡಲೆ ಕಲ್ಯಾಣದ ಇತಿಹಾಸ ಮುಗಿಯಿತು. ಬಸವರಾಜು ಅವರು ಹೇಳಿದ ಹಾಗೆ ಸೇವುಣರು ಅದನ್ನು ೧೧೮೭-೯೧ರಲ್ಲಿ ಗೆಲ್ಲುವ ಹೊತ್ತಿಗೆ ಅದರ ನಾಶವಾಗಿ ಹೋಗಿತ್ತು.

ನಾನು ಹೋದ ಸಮ್ಮೇಳನದಲ್ಲಿ ಹೇಳಿದಂತೆ ನಾಲ್ಕನೇ ಸೋಮೇಶ್ವರನ ಸೇನಾಪತಿ ಬಮ್ಮರಸನೂ ಬಿಜ್ಜಳನ ಕೊಲೆಗೆ ಕಾರಣ. ಅದೇ ಸಮ್ಮೇಳನದಲ್ಲಿ ಬಿಜ್ಜಳ ಮತ್ತು ಬಮ್ಮರಸರ ನಡುವೆ ವೈಮನಸ್ಸಿನ ಕಾರಣ, ಬಿಜ್ಜಳ ಬಮ್ಮರಸನ ತಂದೆ ಕಾವಣನನ್ನು ಕೊಂದದ್ದು ಎಂದು ಹೇಳಿದ್ದೇನೆ. ಪ್ರಸ್ತುತ ವಚನ ಮತ್ತು ಬಸವಣ್ಣನವರ ಶಾಪ ಇವೆರಡರಿಂದ ಜಗದೇವ ಜಂಗಮದ ಅಭಿಮಾನದಿಂದ ಕೊಂದನೆಂದು ಹೇಳಿರಬಹುದು. ನನ್ನ ತರ್ಕವೇನೆಂದರೆ ಜಗದೇವನೊಬ್ಬನಿಂದಲೇ ಅಥವಾ ಜಗದೇವ-ಮೊಲ್ಲಬೊಮ್ಮಯರಿಂದ ಬಿಜ್ಜಳನ ಕೊಲೆ ಸಾಧ್ಯವಾಗುತ್ತಿರಲಿಲ್ಲ. ಅವರಿಗೆ ಬಮ್ಮರಸನ ಸೈನ್ಯ ಬಲದ ಬೆಂಬಲದಿಂದ ಸಾಧ್ಯವಾಗಿರ ಬೇಕು. ಆದ್ದರಿಂದ ಕಲ್ಯಾಣ ಕ್ರಾಂತಿಯಾಗಿದ್ದು ೧೧೮೩-೮೮ರಲ್ಲಿ ಹೀಗೆ ವಚನ ಮತ್ತು ಪುರಾಣಗಳು ಹೇಳುವ ಹಾಗೆ ಜಗದೇವ ಅವರು ಜಂಗಮದ ಅಭಿಮಾನಕ್ಕೆ ಮತ್ತು ಬಮ್ಮರಸ ಚಾಳುಕ್ಯ ರಾಜ್ಯ ಸ್ಥಾಪನೆಗೆ ಮತ್ತು ಸೇಡನ್ನು ತೀರಿಸಿಕೊಳ್ಳಲಿಕ್ಕೆ ಬಿಜ್ಜಳನನ್ನು ಮುಗಿಸಬೇಕಾಗಿತ್ತು. ಹೀಗಾಗಿದ್ದನ್ನು ಪುರಾಣಗಳು ಬಸವಣ್ಣನವರ ಶಾಪದಿಂದ ಆಯಿತೆಂದಿವೆ.

ಗೋವಿಂದ ಪೈಯವರು ವಚನದಲ್ಲಿ ಹೇಳಿರುವ ಚಾಳುಕ್ಯ ರಾಯ ಮೂರನೇ ತೈಲನಿರಬೇಕೆನ್ನುತಾರೆ. ಜಂಗಮದ ಅಭಿಮಾನವೆನ್ನುವುದಕ್ಕೆ ಜಂಗಮರನ್ನು ಹಿಂಸಿಸಿದುದಕ್ಕೆ ಎಂದು ಅರ್ಥೈಸಿದ್ದಾರೆ. ಮೂರನೆ ತೈಲ ಜಂಗಮರನ್ನು ಹಿಂಸಿಸಿದ. ಕೋಶದಲ್ಲಿ ಅಭಿಮಾನವೆಂದರೆ ಹಿಂಸಿಸು ಎಂದೂ ಇದೆ. ಇವರು ಈ ಅರ್ಥವನ್ನು ಒಪ್ಪಿಕೊಂಡು ಮೂರನೇ ತೈಲ ಜಂಗಮರನ್ನು ಹಿಂಸಿಸಿದನು. ಆದ್ದರಿಂದ ಬಸವಣ್ಣನನಿಗೆ ಇದನ್ನು ಸಹಿಸ ಲಾಗಲಿಲ್ಲ. ಸಹಜವಾಗಿ ಅವರು ಮೂರನೇ ತೈಲನ ವಿರುದ್ಧವಾದರು. ಬಿಜ್ಜಳನಿಗೆ ಮೂರನೇ ತೈಲನನ್ನು ಮನೆಗೆ ಕಳಿಸಿ ಅವನ ಸಿಂಹಾಸನವನ್ನು ಆಕ್ರಮಿಸಬೇಕಾಗಿತ್ತು. ಆದ್ದರಿಂದ ಬಿಜ್ಜಳ

ಮತ್ತು ಬಸವಣ್ಣನವರು ಸೇರಿ ಮೂರನೇ ತೈಲನನ್ನು ಪದಚ್ಯುತ ಮಾಡಿದರೆಂದು ವಾದಿಸಿದ್ದಾರೆ. ಈ ವಾದವನ್ನು ನಂಬಲಸಾಧ್ಯ. ಯಾಕೆಂದರೆ ಮೂರನೇ ತೈಲ ಜಂಗಮವನ್ನು ಹಿಂಸಿಸಿದ್ದಕ್ಕೆ ಪುರಾವೆ ಇಲ್ಲ. ಅದಲ್ಲದೆ ಬಸವಣ್ಣನವರು ಇನ್ನೊಬ್ಬರ ಕೊಲೆಗೆ ಸಮ್ಮತಿಸಿದರೆಂದು ಹೇಳುವುದು ಅವರ ತತ್ವಕ್ಕೆ ವಿರೋಧವಾದದ್ದು.

ಪಿ.ಬಿ. ದೇಸಾಯಿಯವರು, ವಚನದಲ್ಲಿರುವ ಚಾಳುಕ್ಯರಾಯ, ಪೈ ಅವರು ಹೇಳಿದಹಾಗೆ ಮೂರನೇ ತೈಲನೇ ಎಂದು ಹೇಳುತ್ತಾರೆ. ಇವರ ಪ್ರಕಾರ ಬಿಜ್ಜಳನು ಹಳೇ ತರಹ ಶೈವ. ಅವನಿಗೆ ಹೊಸ ಶಿವಭಕ್ತರು ಅಥವಾ ಹೊಸ ಶೈವರು ಸೇರುತ್ತಿದ್ದಿಲ್ಲ. ಆದರೆ ಚಾಳುಕ್ಯರು ಮತೀಯ ವಿಷಯದಲ್ಲಿ ಉದಾರರು. ಮೂರನೇ ತೈಲನು ಇತರ ಚಾಳುಕ್ಯ ರಾಜರಂತೆ ಎಲ್ಲಾ ಮತಗಳನ್ನು ಪ್ರೋತ್ಸಾಹಿಸಿದನು ಮತ್ತು ನೂತನ ಶಿವಭಕ್ತರನ್ನು ಅಥವಾ ಜಂಗಮರನ್ನು ಅಭಿಮಾನದಿಂದ ನೋಡಿದನು. ಮೂರನೇ ತೈಲನು ಜಂಗಮರನ್ನು ಅಭಿಮಾನದಿಂದ ನೋಡಿದ್ದು ಅವನನ್ನು ತೆಗೆದು ಹಾಕಲು ಬಿಜ್ಜಳನಿಗೆ ಇನ್ನೂ ಒಂದು ಕಾರಣವು ಸಿಕ್ಕಿತು. ಆದ್ದರಿಂದ ಬಿಜ್ಜಳನು ಅವನನ್ನು ಬದಿಗೊತ್ತಿ ಅವನ ಸ್ಥಾನಕ್ಕೆ ೧೧೬೨ರಲ್ಲಿ ಬಂದನು. ೧೧೬೮ರಲ್ಲಿ ಬಸವಣ್ಣನ ಅನುಯಾಯಿಗಳು ಬಿಜ್ಜಳನನ್ನು ಕೊಂದರು. ದೇಸಾಯಿಯವರ ಈ ಅಭಿಪ್ರಾಯಕ್ಕೆ ೧೧೬೮ರಲ್ಲಿ ಬಿಜ್ಜಳನ ಕೊಲೆಯಾಯಿತೆನ್ನುವುದಕ್ಕೆ ಯಾವ ಆಧಾರವು ಇಲ್ಲ. ೧೧೮೩-೮೪ರಲ್ಲಿ ಇದು ಆದುದಕ್ಕೆ ಅನೇಕ ಪುರಾವೆಗಳನ್ನು ನಾನು ತೋರಿಸಿದ್ದೇನೆ ಮತ್ತು ಮೂರನೇತೈಲನಿಗೆ ಹೊಸಶೈವರು ಅಥವಾ ಶಿವಭಕ್ತರ ಬಗ್ಗೆ ಅಭಿಮಾನ ಇತ್ತೆನ್ನುವುದು ಸಂಶಯಾಸ್ಪದ.

ಗೋವಿಂದ ಪೈಗಳು ಮೂರನೆ ತೈಲ ಜಂಗಮರನ್ನು ಹಿಂಸಿಸಿದನೆಂದು ಹೇಳಿದರೆ, ದೇಸಾಯಿಯವರು ಮೂರನೇ ತೈಲ ಜಂಗಮರನ್ನು ಅಭಿಮಾನದಿಂದ ಪ್ರೋತ್ಸಾಹಿಸಿದನೆಂದು ಅಭಿಪ್ರಾಯ ಪಡುತ್ತಾರೆ. ಇಬ್ಬರೂ ಅವರು ಹೇಳುವ ಕಾರಣಗಳಿಂದ ಬಿಜ್ಜಳನ ಕೊಲೆ ೧೧೬೦ರ ದಶಕದಲ್ಲಿ ಆಯಿತೆನ್ನುತ್ತಾರೆ. ಆದರೆ ಆಗ ವಚನ ಹೇಳಿದ ಹಾಗೆ ಚಾಳುಕ್ಯ ರಾಯನ ಅಥವಾ ಬಿಜ್ಜಳನ ಆಳಿಕೆ ತೆಗೆಯಲಿಲ್ಲ. ಅದು ತೆಗೆದದ್ದು ೧೧೮೩-೮೪ರಲ್ಲಿ. ಈ ಅಭಿಪ್ರಾಯವನ್ನು ವಚನ, ಬಸವಣ್ಣನವರ ಶಾಪ ಮತ್ತು ಅಣ್ಣಿಗೆರೆಯ ಆತೇವಿಯ ಶಾಸನ ಅನುಮೋದಿಸುತ್ತವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಸಂಖ್ಯೆ ೬೨೫., **ಬಸವಣ್ಣನವರ ವಚನ ಸಂಪುಟ**. [ಸಂ]., ಎಂ. ಎಂ. ಕಲಬುರ್ಗಿ.

೨. ತೆಲುಗು ವಿಶ್ವವಿದ್ಯಾಲಯ ಪ್ರಕಟಣೆ ಪು. ೨೦೩.

೩. **ಬಸವಣ್ಣನವರ ಷಟ್ಸ್ಥಲದ ವಚನಗಳು**, ಪು. ೨೧೮.

೪. P.B. Desai., *Basaveshwara and his times*, p. 154: The Virasaiva Puranas..... except in rare instances do not specify the kalachuri dynasty of Bijjala who is generally described as if he belogned to the chalukya house. ಪಂಡಿತಾರಾಧ್ಯ ಚರಿತ, ಮಹಿಮಾಪ್ರಕರಣ ಪು. ೧೮೯-೧೯೦.

೫. Sri Chilakuri Narayana Rao writes in the introduction "Bijjala had insulted Virasaiva devotees (names given), Basava cursed that the Chalukyas with their capital and kingdom would get destroyed. Basava Purana Says that Basava saw this happen before his death. ಕೊನೆಯ ವಾಕ್ಯದಿಂದ ಬಸವಣ್ಣನವರು ತಮ್ಮ ಶಾಪ ಸತ್ಯವಾದುದನ್ನು ಅಂದರೆ ಬಿಜ್ಜಳ ಸತ್ತದ್ದನ್ನು ನೋಡಿ ಐಕ್ಯವಾದರು. ಅಂದರೆ ಬಿಜ್ಜಳನ ಅಂತ್ಯ ನಾನು ಹೇಳಿದ ಹಾಗೆ ೧೧೮೩-೮೪ನಲ್ಲಿ ಆಗಿದ್ದರೆ, ಅವರು ಐಕ್ಯರಾಗಿದ್ದು ೧೧೮೫-೮೬ನಲ್ಲಿ ಎಂದು ಹೇಳಬಹುದು.

೬. ಮೇಲಿನ ಮೊದಲಿನ ಟಿಪ್ಪಣಿಗೆ ಪೂರಕವಾಗಿ ಪಿ. ಬಿ. ದೇಸಾಯಿಯವರ ಪುಸ್ತಕದ ೨೪೭ನೆ ಪುಟದಲ್ಲಿ ಹೀಗಿದೆ.
These Writers (authors of veerasaiva puranas) whenever they refer to his family mention it as Chalukya only.. Singiraja, in one place describes Bijjala as a scion of the Chalukya Kalachuri house and in another place explicitely addressed him as lord of the Kalachuri house.

ಡಾ|| ದೇವರಕೊಂಡಾರೆಡ್ಡಿ*

ಶ್ರವಣಬೆಳಗೊಳದ ಶಾಸನದ ಹಿನ್ನೆಲೆಯಲ್ಲಿ ಕುಲಸಂಬಂಧೀ ಕಟ್ಟಳೆಗಳು ಕಲಹಗಳು

ಮತೀಯ ಮತ್ತು ಜನಾಂಗೀಯ ಕಲಹಗಳು ಭೂಭಾಗದ ಯಾವುದೇ ಭಾಗದಲ್ಲೂ ಸಣ್ಣ ಕಾರಣ ದೊರೆತರೂ ಭುಗಿಲ್ಲನೆ ಸ್ಫೋಟಿಸುತ್ತವೆ. ಇಂತಹ ಕಲಹಗಳು ಬಹು ಹಿಂದಿನಿಂದಲೂ ಒಂದಲ್ಲಾ ಒಂದು ಕಡೆ ನಡೆಯುತ್ತಲೇ ಇದ್ದವು. ತೀರ ಕೆಲವಕ್ಕೆ ದಾಖಲೆಗಳಿದ್ದರೆ ಬಹಳಷ್ಟು ಗಲಭೆಗಳಿಗೆ ದಾಖಲೆಗಳಿಲ್ಲ. ಕನ್ನಡ ಶಾಸನಗಳಲ್ಲಿ ಉಲ್ಲೇಖವಾಗಿರುವ ಸೀಮಾ ಸಂಬಂಧಿ ಕಲಹಗಳು, ತುರುಗಾಳಿಗ, ಪೆಂಡಿರುಡೆಯುರ್ಚುವುದು ಮುಂತಾದುವನ್ನು ಈ ಗುಂಪಿಗೆ ಸೇರಿಸಬಹುದು. ಈ ಗಲಭೆಗಳೆಲ್ಲಾ ಪ್ರತೀಕಾರ ತೀರಿಸಿಕೊಳ್ಳಲು ಪ್ರೇರಣೆ ನೀಡುತ್ತಿದ್ದವು. ಈ ಪ್ರೇರಣೆಗೆ ಸಣ್ಣ ಕಾರಣ ಅಥವಾ ಪ್ರಭಾವಿಗಳ ಒತ್ತಾಸೆ ದೊರೆತಲ್ಲಿ ಪ್ರತೀಕಾರಕ್ಕೆ ಮುಂದಾಗುತ್ತಿದ್ದವು.

ಶ್ರವಣಬೆಳಗೊಳದ ಪುನರ್ಮುದ್ರಣದ ಆವೃತ್ತಿಯ ೪೭೫ನೆಯ ಸಂಖ್ಯೆಯ ಶಾಸನವು ಮತೀಯ ಗಲಭೆಯೊಂದರ ದಾಖಲೆಯನ್ನು ನೀಡುತ್ತಿದೆ. ಎರಡು ವಿಭಿನ್ನ ಮತೀಯ ಗುಂಪುಗಳ ಮಧ್ಯೆ ನಡೆದ ಘರ್ಷಣೆಯಲ್ಲಿ ಸಾವು-ನೋವುಗಳು ಆಗಿದ್ದಿರಬಹುದು. ಈ ಶಾಸನವನ್ನು ಅರ್ಥೈಸುವಾಗ ಜೈನರಿಗೂ-ವೈಷ್ಣವರಿಗೂ ಕಲಹಗಳಾದುವೆಂದೂ ಅದನ್ನು ಬುಕ್ಕರಾಯನು ಪರಿಹರಿಸಿ ಮತೀಯ ಸೌಹಾರ್ದತೆಯನ್ನು ಮೆರೆದನೆಂದೂ ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿರುತ್ತಾರೆ.

ಭಾರತದಲ್ಲಿ ಮತ-ಮತಗಳ ಮಧ್ಯೆ, ಕುಲ-ಕುಲಗಳ ಮಧ್ಯೆ ನಡೆದ, ನಡೆಯಬಹುದಾದ ಜಗಳಗಳು ಹೊಸದೇನಲ್ಲ. ಕ್ರಿಪೂ. ಮೂರನೆಯ ಶತಮಾನದಲ್ಲಿ ಅಶೋಕನು ತನ್ನ ಶಾಸನವೊಂದರಲ್ಲಿ ಯಾವುದೇ ಧರ್ಮವನ್ನು ಟೀಕಿಸುವವನು ಮೊದಲು ತನ್ನ ಧರ್ಮವನ್ನು ಚೆನ್ನಾಗಿ ಅಭ್ಯಾಸಮಾಡಲಿ ಎಂಬರ್ಥದಲ್ಲಿ ಹೇಳಿದ್ದಾನೆ. ಇದೂ ಸಹ ಅಶೋಕನ ಕಾಲದಲ್ಲಿಯೂ ಮತೀಯ ಗಲಭೆಗಳಿತ್ತು, ಮೇಲು ಕೀಳೆಂಬ ಭಾವನೆ ಜನಗಳಲ್ಲಿ ಇತ್ತು ಎಂಬುದನ್ನು ಪರೋಕ್ಷವಾಗಿ ತಿಳಿಸುತ್ತದೆ. ಶ್ರವಣಬೆಳಗೊಳದ ಶಾಸನದ ಹಿನ್ನೆಲೆಯಲ್ಲಿ ಈ ಗಲಭೆಗಳನ್ನು ಧಾರ್ಮಿಕ ಘರ್ಷಣೆ ಎಂಬುದಕ್ಕಿಂತ ಕುಲಾಚಾರದ ಕಟ್ಟಳೆಯ ಜಗಳ ಎನ್ನುವುದು ಸೂಕ್ತ. ಈ ಕಾಲಕ್ಕೆ ಜೈನಧರ್ಮ ದಕ್ಷಿಣ ಕರ್ನಾಟಕದಲ್ಲಿ ಶ್ರೀವೈಷ್ಣವ ಮತೀಯರ ಪ್ರಭಾವದಿಂದ ಸಂಕಷ್ಟಕ್ಕೆ ಒಳಗಾದರೆ ಉತ್ತರ ಕರ್ನಾಟಕದಲ್ಲಿ ವೀರಶೈವ ಅಥವಾ ಲಿಂಗಾಯತ ಎಂಬ ಏಕಾಂತ ಪಂಥದವರಿಂದ ಸಂಕಷ್ಟಕ್ಕೆ ಒಳಗಾಗುತ್ತದೆ. ಏಕಾಂತದ ರಾಮಯ್ಯ, ಹುಲಗೆರೆಯ ಆದಯ್ಯ ಇವರೆಲ್ಲಾ ಸಣ್ಣ ಕಾರಣಗಳಿಗಾಗಿ ಜೈನರ ಮೇಲೆ ಹರಿಹಾಯುತ್ತಾರೆ. ಜೈನರನ್ನು ಕೊಂದಂತೆಯೂ ತಿಳಿಯುತ್ತದೆ. ಬುಕ್ಕರಾಯನ ಕಾಲದಲ್ಲಿ ನಡೆದ ಜಗಳವು ಬಹುಶಃ ಕಲ್ಲೆಹ ಪಟ್ಟಣದಲ್ಲಿ ನಡೆದಿರಬೇಕು. ಇದಕ್ಕೆ ಕಾರಣವನ್ನು ಹೀಗೆ ಊಹಿಸಬಹುದು. ದಕ್ಷಿಣದಲ್ಲಿ ಶ್ರೀವೈಷ್ಣವ ಪಂಥದ ಪ್ರಭಾವಕ್ಕೆ ಸಿಕ್ಕಿ ಅನೇಕ ಜೈನ ಕುಟುಂಬಗಳು ಶ್ರೀ ವೈಷ್ಣವ ದೀಕ್ಷೆಯನ್ನು ಪಡೆಯುತ್ತಾರೆ. ಉತ್ತರದಲ್ಲಿ ವೀರಶೈವ। ಲಿಂಗಾಯತರಾಗುತ್ತಾರೆ. ಇಂತಹ ಸನ್ನಿವೇಶದಲ್ಲಿ ಮತಾಂತರವಾಗದೆ ಉಳಿದ ಜೈನರು ತೀರಾ ಅಲ್ಪ ಸಂಖ್ಯಾತರಾಗುತ್ತಾರೆ. ಆಗ ಇವರ ಕೆಲವು ಮತೀಯ ಆಚರಣೆಗಳನ್ನು ಈ ಮತಾಂತರವಾದ ಜನರು ಪ್ರಶ್ನಿಸಿರಬೇಕು. ಹೀಗೆ ಪ್ರಶ್ನೆ ಮಾಡಿದಾಗ ನಡೆದಿರಬಹುದಾದ ಜಗಳವೇ ಈ ಬುಕ್ಕರಾಯ ಕಾಲದ ಜಗಳ.

ಮತಾಂತರದಲ್ಲಿ ಮೂರು ಪ್ರಕ್ರಿಯೆಗಳಿದ್ದು ಕಡಿಮೆ ಜನ ಮತಾಂತರ ಹೊಂದಿದಲ್ಲಿ, ತಮಗೆ ರಕ್ಷಣೆ ದೊರೆಯಬಹುದಾದ ಸ್ಥಳಕ್ಕೆ ವಲಸೆ ಹೋಗುತ್ತಾರೆ. ಊರಿನ ಬಹುಪಾಲು ಜನ ಮತಾಂತರವಾದಾಗ ಮತಾಂತರವಾದವರ ಉಪಟಳಕ್ಕೆ ಬೆದರಿ ಮೂಲದಲ್ಲಿದ್ದವರು ರಕ್ಷಿತ ಸ್ಥಳಕ್ಕೆ ವಲಸೆ ಹೋಗುತ್ತಾರೆ. ಸಾಮಾನ್ಯವಾಗಿ ಊರಿನ ಅರ್ಧ ಜನ ಮತಾಂತರವಾದಾಗ ಯಾರೂ ಊರು ತೊರೆಯುವುದಿಲ್ಲ. ಇಂತಹ ಸಂದರ್ಭದಲ್ಲಿ ಗಲಭೆ ನಡೆಯಲು ಹಾಗೂ ಕಟ್ಟಳೆಗಳನ್ನು ಮುರಿಯಲು, ಮೇಲುಗೈ ಸಾಧಿಸಲು ಜನ ಪ್ರಯತ್ನಿಸುತ್ತಾರೆ. ಕಲ್ಯದಲ್ಲಿ ಇಂತಹ ಪ್ರಕ್ರಿಯೆ ನಡೆದಿರಬೇಕು. ಏಕೆಂದರೆ ಇಲ್ಲಿನ ಜೈನರು ರಕ್ಷಣೆ ಪಡೆಯಲು ಸಮೀಪದ ಹೂಜಿಗಲ್ಲು ಎಂಬಲ್ಲಿ ಕೆಲವು ಕಾಲ ನೆಲೆಸಿದಂತೆ ಅಲ್ಲಿನ ಅವಶೇಷಗಳಿಂದ ತಿಳಿಯಬಹುದಾಗಿದೆ.

ಇಂತಹ ಜಗಳಗಳು ಕರ್ನಾಟಕದಲ್ಲಿ ಹಿಂದೆ ನಡೆದಿರಲು ಅಥವಾ ನಡೆಯಲು ಕಾರಣಗಳನ್ನು ಅವಲೋಕಿಸೋಣ. ಮಾನ್ವಿ ತಾಲೂಕಿನ ಶಿರವಾಡದ ಕ್ರಿ.ಶ. ೯ನೆಯ ಶತಮಾನದ

* ಮುಖ್ಯಸ್ಥರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

ಶಾಸನವೊಂದು ಆವೂರಿನ ೨೦೦ ರ್ವರು (ಮಹಾಜನರು) 'ಸಮಯಸ್ಥಿತಿ'ಯನ್ನು ಮಾಡುತ್ತಾರೆ. ಅದರಂತೆ ಕೊಡಬೇಕಾದವರು ೨೦,೧೦, ೫ರ ಲೆಕ್ಕದಲ್ಲಿ ನೀಡಬೇಕಿತ್ತು. ತಪ್ಪಿದಲ್ಲು ಒಂದಕ್ಕೆ ಎರಡರಷ್ಟನ್ನು ನೀಡಬೇಕಿತ್ತು. ಇದನ್ನು ಮೀರಿದವನಿಗೆ ಶಿಕ್ಷೆ ಇಂತಹುದೆಂದು ಹೇಳಿಲ್ಲ. ಆದರೆ ನಾಯಿ, ಕತ್ತೆ ಮತ್ತು ಚಾಂಡಾಳನು ಅವನ ಪತ್ನಿಯ ಸಂಗಮಾಡಿದಂತೆ ಎಂದಿದೆ (ಮಾನ್ವಿ ೭೫). ಲಿಂಗಸೂರು ತಾಲೂಕಿನ ಕರಡಿಕಲ್ಲಿನ ಕ್ರಿ.ಶ. ೧೦೭೯ರ ಶಾಸನವು ಸಾಮಾನ್ಯ ಜನರು ಸಾಮಾಜಿಕವಾಗಿ ಆಚರಿಸಬೇಕಿದ್ದು ಕೆಲವು ನಡಾವಳಿಗಳನ್ನು ವಿಧಿಸಿದೆ. ಊರಿನ ಹೆಗ್ಗಡೆ ಸೂಕ್ಷ್ಮ ಶಿವಭಟಾರನು ಪ್ರಮುಖ ತಪೋಧನರ ಸಮೇತವಿದ್ದು ದಾಸಿಸೆಟ್ಟಿ ಮತ್ತು ವ್ಯಾಪಾರಿ ಸಮೂಹಕ್ಕೆ ನಡೆಮುಡಿ ಮುಂತಾದ ಸೌಲಭ್ಯಗಳನ್ನು ನೀಡುತ್ತಾನೆ. ಇದನ್ನು ಮೀರಿದವನು ಸತ್ತಲ್ಲಿ ಹಂದಿ, ನಾಯಿ ಸತ್ತಂತೆ ಎಂದು ಶಾಪಾಶಯ ವಿಧಿಸಿದ್ದಾನೆ.

ಶಾಸನದ ಮುಂದಿನ ಭಾಗ ಪ್ರಮುಖವಾದದ್ದು ಅಂತ್ಯ ಜಾತಿಯವರು ಯಾರೂ ಅಂಗಡಿ ಬೀದಿಯೊಳಗೆ ಮದುವೆಯ ಬಂಡಿಯನ್ನು ಏರಿ ಬರಬಾರದು. ಬಂದಿದ್ದೇ ಆದರಲ್ಲಿ ಹನ್ನೆರಡು ಗದ್ಯಾಣ ಹೊನ್ನನ್ನು ದಂಡವಾಗಿ ತೆರಬೇಕಿತ್ತು. ಇದನ್ನು ಮೀರಿದರೆ ಬಲ್ಲವರಸ ಮತ್ತು ರಾಜಗುರು ದೇವನ ಆಣೆ ಎಂದು ಆಣೆಯನ್ನು ಇಡಲಾಗಿದೆ. ಅದೇ ಶಾಸನ ಮುಂದುವರಿದು ಯಾವುದಕ್ಕೆ ಎಷ್ಟೆಷ್ಟು ದಂಡ ಎಂದು ಹೇಳಿ, ಅಪರಾಧ ಮಾಡಿದವರಿಗೆ ದಂಡದ ಪ್ರಮಾಣವನ್ನು ಹೇಳಿದೆ. '.... ಯಾರನ್ನಾದರೂ ಹೊಡೆದರೆ ಹೊಡೆದವನಿಗೆ ೧೨ ಪಣ ದಂಡ, ಅಡಿಕೆಎಲೆ ರಸವನ್ನು ಜಗಳದಲ್ಲಿ ಯಾರಿಗಾದರೂ ಉಗುಳಿದರೆ, ಹಾಗೆಯೇ ಚಪ್ಪಲಿಯಲ್ಲಿ ಹೊಡೆದರೆ, ಉಗಿದವನಿಗೆ ಮತ್ತು ಹೊಡೆದವನಿಗೆ ಆರು ಪಣ ದಂಡ. ಕತ್ತಿಯನ್ನು ಝಳಪಿಸಿದರೆ ೧೨ ಪಣ ದಂಡ, ಇರಿದರೆ ಮೂರು ಗದ್ಯಾಣ ದಂಡ, ಸಾಯಿಸಿದಲ್ಲಿ ಸಾಯಿಸಿದವನಿಗೆ ಸಾವೇ ಶಿಕ್ಷೆ. ಕೊಲೆಯ ಮೇಲೆ ಯಾವ ರಿಯಾಯತಿಯೂ ಇಲ್ಲ ಎಂದಿದೆ (ಲಿಂಗ.೬)

ದೇವಗಿರಿಯಾದವರ ಕಾಲದ ಮುದಗಲ್ಲ ಶಾಸನವೊಂದರಲ್ಲಿ (ಕ್ರಿ.ಶ. ೧೨೧೫) ವ್ಯಾಪಾರಿಗಳು, ಅಧಿಕಾರಿಗಳು, ಜನಗಳು ಸೇರಿ ದೇವರ ಸೇವೆಗೆಂದು ಭೂದಾನದ ಜೊತೆಗೆ ವ್ಯಾಪಾರಿಗಳ ಮನೆಯಲ್ಲಿ ನಡೆಯುವ ಕಾರ್ಯಗಳಲ್ಲಿ ಅಂದರೆ ಶೋಭನ ನಡೆದರೆ ಚೌವಲ ನೀಡಬೇಕು ಮದುವೆಯಾರಲ್ಲಿ ಗಂಡಿನಕಡೆಯಿಂದ ಒಂದು ಚೌವಲ ಹೆಣ್ಣಿನ ಕಡೆಯಿಂದ ಒಂದು ಚೌವಲ, ಬೇರೆ ಊರಿಗೆ ಮದುವೆಗೆ ಕಳುಹಿಸಿದರೆ ತಲಾ ಒಂದು ಹಣ ಹಾಗವನ್ನು, ಪುತ್ರೋತ್ಸವವಾದಲ್ಲಿ ಎರಡು ಹಾಗವನ್ನು, ಓದು ಕಲಿಯಲು ಆರಂಭಿಸಿದಾಗ ೨ ಹಾಗವನ್ನು ಉಪನಯನವಾದಲ್ಲಿ ಎರಡು ಹಾಗವನ್ನು ಹೊಸಮನೆಗೆ ಹೋದಲ್ಲಿ ಎರಡು ಹಾಗವನ್ನು, ಒಕ್ಕಲಿಗನು ಚೈತ್ರದಲ್ಲಿ ಎರಡು ಹಾಗವನ್ನು ಉಪನಯನ ಸಂದರ್ಭದಲ್ಲಿ ಒಂದು ಹಾಗವನ್ನು ನೀಡಬೇಕೆಂದು ಕಟ್ಟಳೆ ಮಾಡುತ್ತಾರೆ. (ಲಿಂಗ ೪೯)

ಶ್ರವಣಬೆಳಗೊಳದ ಶಾಸನದಲ್ಲಿ ಜೈನರ ಮೇಲೆ ಅನ್ಯಾಯಗಳು ನಡೆದು ದೂರೆಗೆ ದೂರು ನೀಡಿದಾಗ, ರಾಜನು 'ಪೂರ್ವ ಮರ್ಯಾದೆಯಲು ಪಂಚಮಹಾವಾದ್ಯಗಳೂ, ಕಲಶವು ಸಲ್ಲುವುದು' ಎಂದು ತೀರ್ಮಾನಿಸಿ ಈ ಮಾಡಿದ ಕಟ್ಟಳೆಯನ್ನು 'ಆವನೊಬ್ಬನು ಮೀರಿದರೆ ರಾಜದ್ರೋಹಿ ಸಂಘ ಸಮುದಾಯಕ್ಕೆ ದ್ರೋಹಿ' ಎಂದು ತಿಳಿಸುತ್ತಾನೆ (ಶ್ರ.ಬೆ. ೪೭೫).

ಮಾನ್ವಿತಾಲೂಕಿನ ಕಲ್ಲೂರು ಗ್ರಾಮದ ಜನರಿಗೆ ಶ್ರೀ ಶೈಲದಿಂದ ಬಂದ ನಿರೂಪದಂತೆ ಕಾರುಹುಣ್ಣಿಮೆ ದಿನ ಎತ್ತುಗಳನ್ನು ಓಡಿಸಿ ಕಿಚ್ಚುಹಾಯಿಸಿ ಅವುಗಳಿಗೆ ಕಟಬಾಯಲ್ಲಿ ಉಣಿಸಬೇಕು. ಅಮಾವಾಸ್ಯೆ ದಿನ ಸತ್ತಲ್ಲಿ ಮಣ್ಣು ಮಾಡಬಾರದು. ಯೆತ್ತು ಸತ್ತರೆ ಬಂಡಿಯ ಮೇಲೆ ತೆಗೆದುಕೊಂಡು ಹೋಗಬೇಕು. ಯೆತ್ತು ಸತ್ತರೆ ಅಸ್ತಿಯ ನಿಕ್ಷಿಸುವುದು. ಈ ಮರಿಯಾದೆಯಲ್ಲಿ ನಡೆದರೆ ಮಳೆ ಬೆಳೆ ಸಂಪಾದಿತನ ಗ್ರಾಮಕ್ಕೆ ಜಯ. ಇದಕ್ಕೆ ಉಪೇಕ್ಷೆ ಮಾಡುವರು ಅವರೇ ಅನ್ಯಾಯಿಗಳು. ಧರ್ಮಕ್ಕೆ ಜಯ ಎಂದಿದೆ (ಮಾನ್ವಿ. ೬೨).

ಕ್ರಿ.ಶ. ೧೫೮೫ರ ಸಿಂಧನೂರು ತಾಲೂಕಿನ ಮುಕುಂದಿ ಶಾಸನದಲ್ಲಿ ಅಲ್ಲಿನ ಮಾಂಡಳಿಕ ಊರಿನ ಗವುಡರಿಗೆ, ಸಮಸ್ತ ಹಟಗಾರರಿಗೆ ಅವರ ಬಿನ್ನಹದ ಮೇರೆಗೆ ಕವುಲನ್ನು ನೀಡುತ್ತಾನೆ. ಅದರ ಪ್ರಕಾರ ಸೋಮ ಬೀದಿಯ ಮೆರವಣಿಗೆಯಲ್ಲಿ ನೀವು ನಿಮ್ಮ ಶುಭ ಕಾರ್ಯಗಳಲ್ಲಿ ಮದುವೆಯನು ಮಾಡುವಾಗ ಮಂಗಳ ಕಳಸ... ತಳಕಳಸ ಸಮೇತ ಮೆರವಣಿಗೆ ಮಾಡಲು ಅನುಮತಿ ನೀಡಿದ ಉಲ್ಲೇಖವಿದೆ. (ಸಿಂಧ-೧೦)

ಲಿಂಗಸೂರಿನ ಒಂದು ಶಾಸನದಲ್ಲಿ ಕೊಟ್ಟ ದಾನಕ್ಕೆ ಯಾರಾದರೂ ತಪ್ಪಿದಲ್ಲಿ ಕುಲಾಚಾರ, ಶಿವಾಚಾರಕ್ಕೆ ಹೊರಗು ಎಂದಿದೆ (ಲಿಂಗ. ೨೩). ಇವಲ್ಲದೆ ಕಲ್ಯಾಣದ ಚಾಳುಕ್ಯರ ಕೆಲವು ಶಾಸನಗಳಲ್ಲಿ ಅಲ್ಲಿನ ಮಾಂಡಲೀಕರಿಗೆ ಕೆಲವು ವಿಶಿಷ್ಟ ವಾದ್ಯಗಳ ಸಮೇತ ಬರಬಹುದು. ಹೈಹೆಯ ಅರಸನಿಗೆ ಮಾಲೆ ಪಱೆ ಘೋಷಣವೂ, ಇನ್ನೊಬ್ಬ ರಾಜನಿಗೆ ಕಂಬಲಪಱೆ ಘೋಷಣೆಯ ಹಕ್ಕ ಇದ್ದುವು. ದೇಕಬ್ಬೆಯ ತಂದೆಗೆ ಚೋಳರಾಜನು ಪಲ್ಲವಸತ್ತಿಗೆ, ಝಲ್ಲಳಿ ಮುಂತಾದವನ್ನು ನೀಡಿದ್ದ. ಇವೆಲ್ಲಾ ಇವರ ಅಂತಸ್ತು ಮರ್ಯಾದೆಗಳನ್ನು ಸೂಚಿಸುತ್ತಿದ್ದವು. ಇದಕ್ಕಿಂತ ಹೆಚ್ಚಿಗೆ ಆಶಿಸಿದಲ್ಲಿ ರಾಜಶಿಕ್ಷೆಗೆ ಒಳಗಾಗಬೇಕಿತ್ತು. ಹಾಗೆಯೇ ತಮ್ಮನ್ನು ಗುರುತಿಸಿಕೊಳ್ಳಲು ಪ್ರತ್ಯೇಕ ಧ್ವಜಗಳೂ ಇದ್ದವು. ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಒಂದು ಅಂಶವನ್ನು ಗಮನಿಸಬಹುದು. ಕಟ್ಟಳೆ ವಿಧಿಸಿದ್ದಂತೆ ನಡೆಯದಿದ್ದಲ್ಲಿ ಅದನ್ನು

ಮೀರಿದ ವ್ಯಕ್ತಿಗೆ ದಂಡ ವಿಧಿಸಬಹುದಿತ್ತು. ಕುಲ ಅಥವಾ ಧರ್ಮದಿಂದ ಹೊರಗೆ ಹಾಕಬಹುದಾದ, ಬಹಿಷ್ಕಾರದ ಶಿಕ್ಷೆಯನ್ನು ವಿಧಿಸಬಹುದಿತ್ತು. ಹೀಗಾಗಿ ಕುಲದ ಅಥವಾ ಗ್ರಾಮದ ಕಟ್ಟಳೆಗಳನ್ನು ಮೀರಿ ನಡೆಯುತ್ತಿರಲಿಲ್ಲ. ಗ್ರಾಮದಲ್ಲಿ ಎರಡು ವಿಭಿನ್ನ ಮತೀಯರು ಸೇರಿದಾಗ ಅಥವಾ ವಿಭಿನ್ನ ಕುಲ, ಪಂಗಡದವರು ಸೇರಿದಾಗ ಅವರವರ ಕುಲಾಚಾರದಂತೆ ನಡೆಯಬೇಕಿತ್ತು. ಸ್ವಾತಂತ್ರ್ಯ ಪೂರ್ವದ ಹಾಗೂ ಸ್ವಾತಂತ್ರ್ಯೋತ್ತರದ ಎರಡು ದಶಕಗಳವರೆಗೆ ದಕ್ಷಿಣ ಕರ್ನಾಟಕದಲ್ಲಿ, ಮುಖ್ಯವಾಗಿ ಎರಡು ಪಣಗಳ ಮಧ್ಯೆ ನಡೆಯುತ್ತಿದ್ದ ತಿಕ್ಕಾಟವನ್ನು ಗಮನಿಸಿದಾಗ, ಬುಕ್ಕರಾಯನ ಶಾಸನದ ಘಟನೆಗೆ ಸ್ಪಷ್ಟ ಕಾರಣವನ್ನು ತಿಳಿಯಬಹುದು. ಗ್ರಾಮ ಅಥವಾ ಪಟ್ಟಣಗಳಲ್ಲಿ ಆಯಾ ಜಾತಿಗೆ ಮೀಸಲಾದ ಕೇರಿಗಳಿದ್ದವು ಈ ಕೇರಿಗಳು ಒಂಬತ್ತು ಫಣದವರು ಹಾಗೂ ೧೮ಫಣದವರ ಕೇರಿಗಳಾಗಿ ವಿಂಗಡಣೆಯಾಗಿರುತ್ತಿದ್ದವು. ಒಂಬತ್ತು ಪಣದವರೆಂದರೆ ಮುಖ್ಯವಾಗಿ ಆಚಾರರು, ನಗರ್ತರು ಗಾಣಿಗರು ಮಾದಿಗರು ಮುಂತಾದವರು. ೧೮ ಪಣದವರೆಂದರೆ ಮುಖ್ಯವಾಗಿ ಗೊಲ್ಲರು, ಅಗಸರು ಹೊಲೆಯರು ಮುಂತಾದವರು. ಒಂಬತ್ತು ಪಣದವರು ೧೮ ಪಣದವರ ಬೀದಿಗೆ ಯಾವುದೇ ಕಾರಣದಿಂದ ಮದುವೆಯ ಅಥವಾ ಮನೆಯ ಮಂಗಳ ಕಾರ್ಯಗಳ ಮೆರವಣಿಗೆ ಒಯ್ಯುವಂತಿರಲಿಲ್ಲ. ಊರೊಟ್ಟಿನ ದೇವತಾ ಕಾರ್ಯಗಳಿಗೆ ಈ ನಿಯಮ ಅನ್ವಯವಾಗುತ್ತಿರಲಿಲ್ಲ. ಅವರ ಬೀದಿಗಳಲ್ಲಿ ಮಾತ್ರ ಈ ಮಂಗಳ ಕಾರ್ಯಗಳ ಮೆರವಣಿಗೆ ನಡೆಸಿಕೊಳ್ಳಬಹುದಿತ್ತು. ಇದರಲ್ಲಿ ಸ್ವಲ್ಪ ಲೋಪವಾದರೂ ಹೊಡೆದಾಟ-ಬಡಿದಾಟವಾಗುತ್ತಿತ್ತು. ಹಾಗೆಯೇ ಹೊಲೆಯರು (ಬಲಗೈಯವರು) ಇರುವ ಗ್ರಾಮದಲ್ಲಿ ಮಾದಿಗರು (ಎಡಗೈ) ಶುಭ ಕಾರ್ಯಗಳಿಗಾಗಲೀ, ದೇವರ ಮೆರವಣಿಗೆಗಾಗಲೀ ಹಲಗೆ ಬಡಿಯುವಂತಿಲ್ಲ. ಇದು ಕಟ್ಟಳೆ. ಇದು ಮೀರಿದಲ್ಲಿ ಜಗಳ ನಡೆಯುತ್ತಿತ್ತು.

ಜೈನಮತದ ಪರಂಪರೆಯಲ್ಲಿ ಮುನಿಗಳಿಗೆ ಆಹಾರ ನೀಡುವುದೂ ಪ್ರಮುಖ ಕಾರ್ಯ. ಮುನಿಗಳನ್ನು ಊಟಕ್ಕೆ ಆಹ್ವಾನಿಸಬೇಕಾದಲ್ಲಿ ಕಲಶವನ್ನು ಹಿಡಿದಿರಬೇಕು. ಹಿಂದೂ ಧರ್ಮೀಯರಿಗೂ ಕಳಶ ಬಹು ಪ್ರಮುಖವಾದದ್ದು. ಹಿಂದೆ ಹೇಳಿದಂತೆ. ಜೈನ ಮತೀಯರು ಅನೇಕ ಗ್ರಾಮಗಳಲ್ಲಿ ಮತಾಂತರ ಹೊಂದಿ, ಅಳಿದುಳಿದ ಜೈನರು ತಮ್ಮ ಸಂಪ್ರದಾಯಕ್ಕನುಗುಣವಾಗಿ ಮಂಗಳಕಾರ್ಯದಲ್ಲಿ ಅಥವಾ ಮದುವೆಯ ಮೆರವಣಿಗೆ, ಅವರು ಧಾರ್ಮಿಕ ಮೆರವಣಿಗೆಯಂತಹ ಸಂದರ್ಭಗಳಲ್ಲಿ ಪಂಚವಾದ್ಯಗಳನ್ನು ಬಾಜಿಸುತ್ತಾ ಕಲಶದ ಸಮೇತ ಬಂದಾಗ, ಜೈನೇತರರು ಹೆಚ್ಚಿಗೆ ಇದ್ದ ಊರುಗಳಲ್ಲಿ ಇದಕ್ಕೆ ಅಡ್ಡಿ ಪಡಿಸುತ್ತಾರೆ. ಹಿಂದೆಯೇ ತಿಳಿಸಿದಂತೆ ಇದಕ್ಕೆ ನಮ್ಮಲ್ಲಿದ್ದ ಕುಲಾಚಾರಗಳು ಕಾರಣವಾಗುತ್ತವೆ. ಪಣಕಟ್ಟುಗಳು ಲೆಕ್ಕದಲ್ಲಿ ಜೈನರನ್ನು ವ್ಯಾಪಾರಿ ಪಣದ ಗುಂಪಿಗೆ ಗುರ್ತಿಸಿಕೊಂಡಿದ್ದು ಒಂದು ಕಾರಣವಾದರೆ, ಅತಿ ಕಡಿಮೆ ಸಂಖ್ಯೆಯಲ್ಲಿದ್ದ ಜೈನರು ದಿಗಂಬರ ಮುನಿಗಳನ್ನು ಕರೆತರುತ್ತಿದ್ದದೂ ಕಾರಣವಿರಬಹುದು. ಮಧ್ಯಕಾಲೀನ ಕರ್ನಾಟಕದಲ್ಲಿ ಇತರ ಕುಲಗಳಿಗಿಂತ ಯಾದವ ಅಥವಾ ಗೊಲ್ಲ ಕುಲದವರು ತೀವ್ರ ಮತೀಯವಾದಿಗಳಾಗಿದ್ದ ದಾಖಲೆಗಳು ಕ್ರೈಸ್ತ ಜೈಸೂಯಟ್ ಪತ್ರಗಳಿಂದ ತಿಳಿಯುತ್ತದೆ. ಹೀಗಾಗಿ ಜೈನಕುಲದ ಮೆರವಣಿಗೆಗಳು ಪಂಚಮಹಾವಾದ್ಯ ಮತ್ತು ಕಲಶ ಸಮೇತ ಬರುವುದನ್ನು ಇಂತಹ ಕೆಲವು ಕುಲಗಳು ಸಹಿಸದೆ ತಡೆಯೊಡ್ಡಿವೆಯೆಂದು ಊಹಿಸಬಹುದಾಗಿದೆ. ಸಿಂಧನೂರು ಶಾಸನದಲ್ಲಿ ಹೇಳಿರುವಂತೆ ಕೆಲವರಿಗೆ ಕೆಲವು ಬೀದಿಗಳಲ್ಲಿ ಮೆರವಣಿಗೆ ನಿಷೇಧವಿತ್ತು. ನಿಗದಿತ ಬೀದಿಯಲ್ಲಿ ತಳಕಳಸ ಸಮೇತ ಮೆರವಣಿಗೆ ನಡೆಸಲು ಬಹುಶಃ ಹಣವನ್ನು ಕೊಡಬೇಕೆಂಬ ನಿಯಮವಿದ್ದಂತೆ ಈ ಶಾಸನದಿಂದ ತಿಳಿಯುತ್ತದೆ. ಕರಡಕಲ್ ಶಾಸನದಲ್ಲಿಯಂತೂ ಬಂಡಿಯನ್ನೇರಿ ಅಂತ್ಯಜಾತಿಯವರು ನಿಗದಿತ ಬೀದಿಯಲ್ಲಿ ಮೆರವಣಿಗೆ ಮಾಡುವುದನ್ನು ನಿಷೇಧಿಸಿದೆ. ಇಂತಹವನ್ನು ಮೀರಿದಾಗ ತೀವ್ರ ದಂಡ ವಿಧಿಸುತ್ತಿದ್ದರು. ಇಲ್ಲವೇ ಕುಲ ಅಥವಾ ಧರ್ಮದಿಂದ ಹೊರಗೆ ಹಾಕುತ್ತಿದ್ದರು.

ಶ್ರವಣಬೆಳಗೊಳದ ಶಾಸನದ ಪ್ರಕಾರ ಬುಕ್ಕರಾಯನು ಎರಡೂ ಮತಗಳಿಗೆ ಭೇದವಿಲ್ಲ; ಜೈನರಿಗೆ ಪಂಚಮಹಾವಾದ್ಯ ಮತ್ತು ಕಲಶ ಸಲ್ಲುತ್ತದೆ ಎಂಬ ತೀರ್ಪು ನೀಡಿದ. ಇವು ಹಿಂದೆ ಜೈನರು ಆಚರಿಸುತ್ತಿದ್ದ ಆಚರಣೆಗಳ ಭಾಗವಾಗಿದ್ದವು. ಇವಕ್ಕೆ ವಿರೋಧ ಬಂದಿದ್ದರಿಂದ ರಾಜನ ಮಧ್ಯ ಪ್ರವೇಶ ಅನಿವಾರ್ಯವಾಯಿತು. ವಾಸ್ತವವಾಗಿ ಮೇಲುನೋಟಕ್ಕೆ ಜೈನರಿಗೆ ಈ ಕಟ್ಟಳೆ ಒಪ್ಪಿಗೆಯಾದರೂ ಇದನ್ನು ಪಾಲನೆ ಮಾಡಲು ವೈಷ್ಣವರಿಗೆ ಜೈನರೇ ಹಣಕೊಡಬೇಕಾದ ಸ್ಥಿತಿ ಬರುತ್ತದೆ. ಅಷ್ಟೇ ಅಲ್ಲ ಜೈನಮತದ ಚಟುವಟಿಕೆಗಳ ಕೇಂದ್ರವಾದ ಶ್ರವಣಬೆಳಗೊಳದ ಭಂಡಾರ ಬಸ್ತಿಯಲ್ಲಿ ರಾಮಾನುಜರ ಸ್ತುತಿಯಿಂದ ಆರಂಭವಾಗುವ ಶಾಸನ ಹಾಗೂ ಜಿನನ ಬದಲಾಗಿ ಕಲಶದ ಚಿತ್ರವನ್ನು ಅದರಲ್ಲಿ ಕೆತ್ತಲಾಗಿದೆ. ಅಷ್ಟರಮಟ್ಟಿಗೆ ಜೈನರು ಈ ಕಟ್ಟಳೆಯನ್ನು ತಮ್ಮದಾಗಿಸಿಕೊಳ್ಳಲು - ತಮ್ಮ ಸ್ವಂತಿಕೆಗಳನ್ನು ಬಿಟ್ಟು ಕೊಡಬೇಕಾಯಿತು. ಕಟ್ಟಳೆಯಂತೆ ಬೇರೆಯವರಿಗೆ ಹಣ ನೀಡಿ ತಮ್ಮ ಬಸದಿಗಳನ್ನು, ಜೀವಗಳನ್ನು ಅವರ ಕೈಲಿ ನೀಡಿ ರಕ್ಷಣೆ ಪಡೆಯಬೇಕಾಯಿತು.

ಜಿ.ಎಸ್. ಭೂಸಗೊಂಡ*

ಅಜ್ಞಾತ ಕಲಾವಿದ ಚಂದ್ರವರ್ಮ

ಭಾರತೀಯ ಚಿತ್ರಕಲೆಯ ದಂತಕತೆ ರಾಜಾರವಿವರ್ಮ. ಆಧುನಿಕ ಭಾರತೀಯ ಕಲೆಯ ಪಿತಾಮಹನೆಂಬ ಹೆಗ್ಗಳಿಕೆಗೆ ಪಾತ್ರನಾಗುವದರ ಜೊತೆಗೆ ೧೯ನೇ ಶತಮಾನದಲ್ಲಿ ಅತ್ಯಂತ ಜನಪ್ರಿಯನಾಗಿ ಹೋದ. ಇವನು ರಾಜಕುಟುಂಬದಲ್ಲಿ ಹುಟ್ಟಿ ಅಚ್ಚರಿಪಡುವಂತಹ ಕಲಾವಿದನಾಗಿ ಜನ್ಮ ಕಳೆದ.

ಈ ರಾಜಾರವಿವರ್ಮನಿಗೆ ಸರಿಸಮಾನವಾಗಿ ನಿಲ್ಲಬಲ್ಲ, ವಾಸ್ತವಿಕ ನೆಲಗಟ್ಟಿನಲ್ಲಿ ಕಲಾತ್ಮಕ ಮಾನದಂಡಗಳಿಂದ ಅಳೆದರೆ, ಚಂದ್ರವರ್ಮ ರವಿವರ್ಮನಿಗಿಂತ ಮಿಗಿಲೆನಿಸುತ್ತಾನೆ. ಹಾಗಾದರೆ ಈ ಚಂದ್ರವರ್ಮ ಯಾರು.?

ಕರ್ನಾಟಕದಲ್ಲಿ ಜಿಲ್ಲಾ ಕೇಂದ್ರ ವಿಜಾಪೂರ ಇಲ್ಲಿಂದ ೨೧ ಕಿ.ಮೀ. ಪಶ್ಚಿಮಕ್ಕೆ ಹೋದರೆ ತಿಕೋಟ ಎಂಬ ಊರು. ಅಲ್ಲಿಂದ ದಕ್ಷಿಣಕ್ಕೆ ೬ ಕಿ.ಮೀ ಹೋದರೇ ಒಂದು ಕುಗ್ರಾಮ ಸಿಗುತ್ತದೆ. ಇಂದಿಗೂ ನಾಗರೀಕತೆಯ ಯಾವ ಸೌಲಭ್ಯವೂ ಇಲ್ಲದಿರುವ "ಕೋಟ್ಯಾಳ" ಎಂಬ ಚಿಕ್ಕಗ್ರಾಮದಲ್ಲಿ ಚಂದ್ರವರ್ಮ ಹುಟ್ಟಿದ.

ಚಂದ್ರವರ್ಮ ಇದು ಅವನ ತಾಯಿ ಇಟ್ಟ ಹೆಸರಲ್ಲ. ಚಿತ್ರಕಲಾ ರಂಗದಲ್ಲಿ ಮಾಡಿದ ಅಪ್ರತಿಮ ಸೇವೆಗೆ ಔಂದ ರಾಜಾ ಶ್ರೀಮಂತ ಬಾಳಾಸಾಬಪಂಥ್ ಕೊಟ್ಟ ಬಿರುದು. ಅವನ ನಿಜವಾದ ಹೆಸರು ಭರಮಣ್ಣಪ್ಪ ರತ್ನಪ್ಪ ಕುಂಬಾರ ನಂತರದಲ್ಲಿ ಬಿ. ಆರ್. ಕೋಟ್ಯಾಳಕರ ಆಗಿದ್ದು.

ಮೂಲತಹ ಕುಂಬಾರ ವಂಶಜನಾದ್ದರಿಂದ ಮಣ್ಣಿನಲ್ಲಿಯ ಕಲೆಯ ಪ್ರಾವೀಣ್ಯತೆ ಕಲ್ಲಿನಲ್ಲಿಯೂ ಮೂಡಿತು. ಪಕ್ವತೆ ಹೆಚ್ಚಾದಾಗ ಚಿತ್ರಕಲೆಯಲ್ಲಿ ಸಂಪೂರ್ಣ ಅರಳಿತು. ಹೊಟ್ಟೆ ಪಾಡಿಗಾಗಿ ಹುಟ್ಟಿದ ಊರು ತೊರೆದು, ತಾಯಿ, ಅಳಿಯನೊಂದಿಗೆ ವಿಜಾಪೂರದಲ್ಲಿ ಉಮರ್ಜಿಯವರ ಅಡತಿಯಲ್ಲಿ ಸ್ವಲ್ಪ ದಿವಸ ಕೆಲಸ, ಕೂಲಿನಾಲಿ ಮಾಡುತ್ತಾ ಮಹಾರಾಷ್ಟ್ರದ ಸೋಲಾಪೂರಕ್ಕೆ ಪಯಣ. ಲಕ್ಷ್ಮಿ ಗುಡಿ, ಮಧುಲಾ ಮಾರುತಿ ದೇವಸ್ಥಾನದ ಕಟ್ಟೆಯ ಮೇಲೆ ಇವರ ವಾಸ್ತವ್ಯ. ಮಣ್ಣಿನಲ್ಲಿ ಮಾಡಿದ ಗಂಗೆ, ಗೌರಿ, ಗಣಪತಿ, ಮುಂತಾದವುಗಳನ್ನು ಮಾರಿ ಜೀವನ ಸಾಗಿಸುವುದು, ಕ್ರಮೇಣ ಅಲ್ಲಿನ ವೃತ್ತಿ ನಿರತ ಫೋಟೋಗ್ರಾಫರ ಜಿ.ವ್ಹಿ. ಜಿರಗೆಯವರ ಪರಿಚಯವಾಗಿ ಚಿತ್ರಕಲಾರಂಗದಲ್ಲಿ ಅದ್ಭುತ ವ್ಯವಸಾಯ ಮಾಡಿದ. ಇಲ್ಲಿರುವಷ್ಟು ದಿವಸ ನಾಡಿಗೆ ನೀಡಿದ ವೀರಶೈವ ಧರ್ಮದ ಕಲಾಕೃತಿಗಳು ಅಗಣಿತ.

ಈ ಚಂದ್ರವರ್ಮ (ಬಿ.ಆರ್.ಕೆ) ನ ಬಗ್ಗೆ ಮೊದಲು



ಸುಳಿವು ನೀಡಿದ್ದು, ನನ್ನ ಸಹೋದರ ಶಿಕ್ಷಕ ಸಿದ್ದು ಭೂಸಗೊಂಡ. ಇನ್ನೊಂದೆರಡು, ದಶಕ ಕಳೆದರೆ ಈಗಿರುವ ಅಲ್ಪಸ್ವಲ್ಪ ಅವನ ಕಲಾಕೃತಿಗಳು ಕಣ್ಮರೆಯಾಗಿ, ಚಂದ್ರವರ್ಮಾ, ಬಿರುದಾಂಕಿತ, ಭರಣಮಣ್ಣಪ್ಪ ಕುಂಬಾರನನ್ನು ಯಾರು ಸ್ಮರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ಸ್ವಭಾವತಹ ಅತ್ಯಂತ ಮುಗ್ಧ ಮನಸ್ಸಿನ ಭರಮಣ್ಣಪ್ಪ ೧೯೦೨ ರಿಂದ ೧೯೦೬ರ ಮಧ್ಯದಲ್ಲಿ ಜನಿಸಿರಬಹುದೆಂದು ತರ್ಕಿಸಲಾಗಿದೆ. ೯೮ ವರ್ಷ ವಯಸ್ಸಿನ ಧರ್ಮಪತ್ನಿ ಗಂಗಮ್ಮ ಸದ್ಯ ಮುದೋಳದಲ್ಲಿದ್ದಾಳೆ. ಅಳಿಯನಾದ ಗಂಗಮ್ಮನ ತಮ್ಮ ೯೬ ವರ್ಷ ವಯಸ್ಸಿನ ಈರಪ್ಪ ಕುಂಬಾರ ವಿಜಾಪೂರ ಜಿಲ್ಲೆಯ ಮನಗೂಳಿಯಲ್ಲಿದ್ದಾರೆ. ಇವರೆಲ್ಲರನ್ನು ಸಂಪರ್ಕಿಸಿದಾಗ, ಜನನದಿಂದ ಮರಣದವರೆಗೆ ಮಾಹಿತಿ ಸಿಕ್ಕಿತು. ಕತ್ತಲೆಯಲ್ಲಿಯೇ ಉಳಿದ ಕಲಾವಿದನ ಸೇವೆ ಸ್ಮರಣೆಗೆ ಬಂತು. ಅವನ ಜೀವನ ಹಾಗು ಸಾಧನೆ ಕುರಿತು ದಾಖಲು ಮಾಡುವ ಆಸೆ ಮೂಡಿತು.

ಬಿ. ಆರ್. ಕೆ. ಸಂಪೂರ್ಣ ನಿರಕ್ಷರಿ (ಸಹಿ ಮಾಡುವುದನ್ನು ಬಿಟ್ಟು) ಇವನ ಕೃತಿಗಳನ್ನು ಸಹೃದಯರು, ಮತ್ತು ಕಲಾವಿದರು, ಶ್ರೀ ಸಾಮಾನ್ಯ ಕೂಡಾ ನಿಂತು ನಿಬ್ಬೆರಗಾಗಿ ನೋಡುವಂತಿದೆ. ಕೇವಲ ಚಿತ್ರಿತ ವಿಷಯದಿಂದಲೇ ರೋಮಾಂಚನಗೊಳ್ಳುವ

* ಚಿತ್ರಕಲಾ ಶಿಕ್ಷಕರು, ತಿಕೋಟ, ಬಿಜಾಪುರ ಜಿಲ್ಲೆ - ೫೮೬ ೧೨೦

ಸಾಮಾನ್ಯ ಪ್ರೇಕ್ಷಕನಷ್ಟೆ ಕುತೂಹಲದಿಂದ ಕಲಾವಿದರು, ಕಲಾವಿಮರ್ಶಕರು, ಚಿತ್ರಕಲೆಯದೇ ಆದ ವ್ಯಾಕರಣದ ಮೂಲಕ ಎಂದರೇ ರೇಖೆ (ಲೈನ್) ಆಕಾರ (ಸೇಪ) ಮೈವಳಿಕೆ (ಟಿಕ್ಚರ) ತೆರವು (ಸ್ಪೇಸ್) ಸಂಯೋಜನೆ (ಕಂಪೋಸಿಶಸನ್) ವರ್ಣ (ಕಲರ್) ಇತ್ಯಾದಿ ದೃಷ್ಟಿಯಿಂದ ನೋಡಿ ಅಭ್ಯಸಿಸಲು ಆನಂದಪಡಲು ಸಾಧ್ಯವಿದೆ.

ಕೃತಿ ರಚಿಸುವ ಪೂರ್ವದಲ್ಲಿ ಸ್ಕೆಚ್ ಮಾಡಿಕೊಳ್ಳುತ್ತಿದ್ದರು. ಆ ಆಲೇಖ್ಯ ರಚನೆ (ಸ್ಕೇಚ್) ಅತ್ಯಂತ ಸೂಕ್ಷ್ಮ ಮತ್ತು ದೇಹರಚನಾಶಾಸ್ತ್ರಕ್ಕೆ (Anotomical) ಅನುಗುಣವಾಗಿರುತ್ತಿದ್ದವು. ವಿಶೇಷವಾಗಿ ಮೈವಳಿಕೆ (Texture) ಮತ್ತು ಯಥಾದರ್ಶನ (Perspective) ಕ್ಕೆ ಅವರು ನೀಡಿದ ಪ್ರಾಶಸ್ತ್ಯ ಅವರ ಕೃತಿಗಳನ್ನು ನೋಡಿಯೇ ತಿಳಿದುಕೊಳ್ಳಬೇಕು. ಜಲವರ್ಣ, ತೈಲವರ್ಣ ಎರಡರಲ್ಲೂ ಅಭ್ಯಸಿಸಿದ್ದು ಕಂಡು ಬರುತ್ತದೆ. ಆದರೆ ತೈಲವರ್ಣದಲ್ಲಿ ಸಂಪೂರ್ಣ ಹಿಡಿತ (Command) ಅವರಲ್ಲಿತ್ತು. ಚಿತ್ರಕಲೆ ಷಡಂಗಗಳನ್ನು ಚಾಚೂ ತಪ್ಪದೇ, ಪ್ರತಿಯೊಂದು ಕೃತಿಯಲ್ಲಿ ಮೆಳೈಸಿದ್ದು, ಗಮನಾರ್ಹ ಅಂಶ. ಪಶು ಪಕ್ಷಿಗಳಾಗಲೀ ವಿವಿಧ ವಯೋಮಾನದ ಸ್ತ್ರೀ ಪುರುಷರಾಗಲೀ ಹೂ ಹಣ್ಣು ಬಳ್ಳಿಗಳಾಗಲೀ, ನಿರ್ಜೀವ ನಿತ್ಯೋಪಯೋಗಿ ವಸ್ತುಗಳಾಗಲೀ ನೈಜತೆಯ ಮೂರ್ತಿವೆತ್ತಂತೆ ಕಂಡು ಬರುವವು. ಇಂತಹ ಸೌಂದರ್ಯ ಪ್ರಭೆಯ ಪರಿಣಾಮ (Effect) ಅವರ ಕಲಾಕೃತಿಗಳಲ್ಲಿ ಎದ್ದು ಕಾಣುತ್ತದೆ.

ಬಿ.ಆರ್. ಕೆ. ಅಧ್ಯಾತ್ಮಿಕ ಜೀವಿ. ಸೋಲಾಪೂರದಲ್ಲಿದ್ದಷ್ಟು ಕಾಲ ದಿನಾಲೂ ಪುರಾಣ, ಪ್ರವಚನದ ಶ್ರವಣ ಮಾಡುತ್ತಿದ್ದರು. ಮನೆಗೆ ಬಂದು ಪೆನ್ಸಿಲಿನಿಂದ ಸ್ಕೇಚ್ ಮಾಡುವುದು, ದಿನಾಲೂ ಚಿತ್ರ ರಚನೆಯಲ್ಲಿಯೇ ಕಾಲ ಕಳೆಯುತ್ತಿದ್ದರು. ಸೋಲಾಪುರ ದಲ್ಲಿದ್ದಷ್ಟು ದಿವಸ, ವೀರಶೈವಧರ್ಮಕ್ಕೆ ಸಂಬಂಧಿಸಿದಂತೆ ಸಾವಿರಾರು ಕಲಾ ಕೃತಿ ರಚಿಸಿರುವ ಸಾಧ್ಯತೆಗಳಿವೆ. ಇಲ್ಲಿಯವರೆಗೆ ನನಗೆ ೧೨ ಮೂಲಕೃತಿಗಳು ೪೬ ಪ್ರತಿಕೃತಿಗಳು (prints) ಒಟ್ಟು ೫೮ ಕೃತಿಗಳ ಲಭ್ಯವಾಗಿವೆ.

ಸೋಲಾಪೂರದಿಂದ ಔಂದ ರಾಜಾ ಬಾಳಾಸಾಹೇಬ ಪಂಥ ಪ್ರತಿನಿಧಿ ಇವನನ್ನು ತನ್ನ ಆಸ್ಥಾನ ಕಲಾವಿದನನ್ನಾಗಿ ಸ್ವೀಕರಿಸಿ, ಸಂಪೂರ್ಣ ರಾಜಾಶ್ರಯ ನೀಡುತ್ತಾನೆ. ಅಷ್ಟೇ ಅಲ್ಲ ಇವನನ್ನು ತನ್ನ ಗುರುವಿನ ಸಮಾನವಾಗಿ ಮನ್ನಣೆ ನೀಡುತ್ತಾನೆ. ಅದಕ್ಕೆ ಕಾರಣ ಸ್ವತಃ ರಾಜನೂ ಶ್ರೇಷ್ಠ ಕಲಾವಿದನಿರುವುದರಿಂದ, ಅವನಿಗೆ ಬಿ. ಆರ್. ಕೆ. ಬಗ್ಗೆ ಎಲ್ಲಿಲ್ಲದ ಗೌರವಾದರಗಳಿತ್ತು. ಅಲ್ಲಿದ್ದಷ್ಟು ದಿವಸ ರಾಜನಾಣತಿಯಂತೆ ಶಿವಾಜಿ ಜೀವನ, ರಾಮಾಯಣ, ಮಹಾ ಭಾರತದ ಸನ್ನಿವೇಶಗಳು, ಭಾವಚಿತ್ರಗಳು, ಶಿವನ ಲೀಲೆಗಳು ಕುರಿತು, ಕೃಷ್ಣ ಲೀಲೆಗಳ ಕುರಿತು ಅನೇಕಾನೇಕ ಕಲಾಕೃತಿಗಳನ್ನು ರಚಿಸಿದ.



ಹೆಚ್ಚಾಗಿ ಬಹುತೇಕ ಕೃತಿಗಳೆಲ್ಲಾ ಅಡ್ಡಗಲವಾಗಿದ್ದು (oblong) ಸಾಮಾನ್ಯವಾಗಿ ೫ ಅಡಿ ಅಗಲ ೪ ಅಡಿ ಎತ್ತರದ ಕೃತಿಗಳೇ ಜಾಸ್ತಿ. ಕ್ಯಾನವಾಸಮೇಲೆ ರಚಿಸಿದ ಇವರ ಕೃತಿಗಳಲ್ಲಿ ಎಲ್ಲಿಯೂ ವರ್ಣ ಪ್ರಖರತೆ ಕಂಡು ಬರುವುದಿಲ್ಲ. ವರ್ಣ ನಿರ್ವಹಣೆಯಲ್ಲಿ ಭಾವಮುದ್ರಾ ಪ್ರಭಾವ ಎದ್ದು ಕಾಣುವುದು. ಮುಖ್ಯ ವಸ್ತುಗಳಿಗೆ ಕೂಡುವಷ್ಟೇ ಪ್ರಾಮುಖ್ಯತೆ ಇಡೀ ಫಲಕದ ಎಲ್ಲ ವಸ್ತುಗಳಿಗೂ ನೀಡಿದ್ದರಿಂದ ವಿಷಮದ ಪ್ರದೇಶ (Negative Space) ಕಾಣಲು ಸಾಧ್ಯವಿಲ್ಲ. ಔಂದದಲ್ಲಿನ ಭವಾನಿ ವಸ್ತು ಸಂಗ್ರಹಾಲಯದಲ್ಲಿ (Museum) ೮-ಕೃತಿಗಳಿದ್ದು, ರಾಜವಾಡದಲ್ಲಿನ ಪೂಜಾ ಕೋಣೆಯಲ್ಲಿ ೧೧-ಕೃತಿಗಳು (ಮೂಲ ಕೃತಿಗಳು) ನೋಡಲು ಸಿಗುತ್ತವೆ. ಉಳಿದಂತೆ ಯಾವ ಕೃತಿಗಳು ಸಿಗುತ್ತಿಲ್ಲ.

ಚಿತ್ರಿತ ಕೃತಿಗಳೆಲ್ಲಾ ಏಕತಾನತೆಯನ್ನು ತರುವಂತಹವೆ, ನೋಡುತ್ತ ನಿಂತರೇ ನೋಡುಗನನ್ನು ಮುಂದೆ ಬಿಡುವುದೇ ಇಲ್ಲ. ಕೃತಿ ನೋಡಿದ ಪ್ರತಿಯೊಬ್ಬನೂ ಕಲಾಕೃತಿಯೊಂದಿಗೆ ಮಾತ ನಾಡುತ್ತಾನೆ. ಆಗಾಗ ಮೂಕಪ್ರೇಕ್ಷಕನಾಗಿ ದೇವದೇವತೆಗಳನ್ನು ಕಂಡು ಆನಂದಿಸುತ್ತಾನೆ. ಆ ಹೊತ್ತಿಗಾಗಲೇ ದೇಶದ ಉದ್ದಗಲಕ್ಕೂ ರವಿವರ್ಮ ಹೆಸರು ಮಾಡಿದ್ದ. ಅವನಷ್ಟೇ ಶ್ರೇಷ್ಠಮಟ್ಟದ ಕೃತಿಗಳನ್ನು ರಚಿಸಿದ ಬಿ. ಆರ್. ಕೆ. ಅವರನ್ನು ಔಂದ ರಾಜಾ ಇವನಿಗೆ "ಚಂದ್ರವರ್ಮ" ಎಂದು ಬಿರದು ನೀಡಿ ಬೆಳ್ಳಿ ಖಡೆ ಹಾಕಿ ಸನ್ಮಾನಿಸಿದ.

ಸ್ವಾತಂತ್ರ್ಯ ದೊರೆತ ನಂತರ ಸಂಸ್ಥಾನಗಳ ವಿಲೀನೀಕರಣ ಪ್ರಕ್ರಿಯೇ ಪ್ರಾರಂಭವಾದಾಗ ಮೊಟ್ಟ ಮೊದಲು ವಿಲೀನವಾದ ಸಂಸ್ಥಾನ ಸಾತಾರ ಜಿಲ್ಲೆಯ ಔಂದ ಸಂಸ್ಥಾನ. ವಿಲೀನೀಕರಣದ

ನಂತರ ರಾಜಾಶ್ರಯ ತಪ್ಪಿತು. ಅಲ್ಲಿನ ಎಲ್ಲ ಕಲಾವಿದರೂ ತಮಗೆ ತಿಳಿದಂತೆ ಚದುರಿದರು. ಬಿ. ಆರ್. ಕೆ. ತನ್ನ ಪರಿವಾರ ಸಮೇತ ಹುಟ್ಟೂರಿಗೆ ಬಂದರು.

ಬರುವಾಗ ಗುಣವಾಗಲಾರದ ಉದರಬೇನೆಯೊಂದು ಇವನೊಂದಿಗೆ ಬಂತು. ಇಲ್ಲಿ ಬಂದ ಮೇಲೆ ಅದು ಇನ್ನಷ್ಟು ಉಲ್ಬಣವಾಯಿತು. ಚಿಕಿತ್ಸೆಗಾಗಿ ಹಣದ ಕೊರತೆಯಂಟಾಯಿತು. ಎಲ್ಲವನ್ನು ಮಾರಿದ್ದಾಯ್ತು. ರಾಜಹಾಕಿದ್ದ ಬೆಳ್ಳಿ ಖಡೆ ಅದನ್ನು ಮಾರಿದ್ದಾಯ್ತು. ಆದರೂ ಚಿಕಿತ್ಸೆ ಫಲಕಾರಿಯಾಗದೇ ೧೯೫೭ರ ಸುಮಾರಿಗೆ ಚಿತ್ರಕಲಾರಂಗದ ಪ್ರಜ್ವಲಿತ ತಾರೆಯೊಂದು ಅಸ್ತಂಗತವಾಯಿತು.

ಸುಮಾರು ೬೦ ವರ್ಷಂತಗಳನಷ್ಟೆ ಕಂಡ ಈ ಕಲಾವಿದ "ನನಗೆ ಪರಮೇಶ್ವರನೇ ಗುರು ನಾನು ಯಾರಿಂದಲೂ ಕಲಿತಿಲ್ಲ" ಎಂದು ಹೇಳುತ್ತಿದ್ದನಂತೆ. ರವಿವರ್ಮ ಚಂದ್ರವರ್ಮನ ಕೃತಿಗಳನ್ನು ನೋಡಿದಾಗ ಇದು ಇವರದೇ ಕೃತಿ ಎಂದು ಹೇಳುವುದು ಅಷ್ಟು ಸುಲಭದ ಮಾತಲ್ಲ. ಅಷ್ಟೊಂದು ಸಾಮ್ಯತೆ ಕಂಡು ಬರುತ್ತದೆ.

ರಾಜಾಶ್ರಯ ಕೊಟ್ಟ ಆ ರಾಜರು ಚಂದ್ರವರ್ಮನ ಕೃತಿಗಳನ್ನು ಜರ್ಮನಿಯ ತಾಂತ್ರಿಕ ಸಹಾಯಕರಿಂದ ಅತ್ಯಂತ ಕಡಿಮೆ ಬೆಲೆಯಲ್ಲಿ ಜನಸಾಮಾನ್ಯರ ಮನಸೆಳೆಯುವಂತೆ ತೈಲವರ್ಣದ ಮುದ್ರಣ (ಜಲಿಯೋ ಗ್ರಾಫಿ) ಪದ್ಧತಿಯಲ್ಲಿ ಮುದ್ರಿಸಿ ಎಲ್ಲ ಕಡೆ ಪ್ರಸಾರ ಮಾಡಿದರು.

★ ★ ★ ★

ಶಿಲ್ಪಶಾಸ್ತ್ರದಲ್ಲಿ :
'ಕಲಾನಾಂ ವರಂ ಚಿತ್ರಂ' - ಎಂದರೆ ಕಲೆಗಳಲ್ಲಿ ಚಿತ್ರಕರ್ಮವೇ ಉತ್ತಮ
ಚಿತ್ರದ, ಆರು ಅಂಗಗಳು :
ರೂಪಭೇದಾಃ ಪ್ರಮಾಣಾನಿ ಭಾವ ಲಾವಣ್ಯ ಯೋಜನಂ।
ಸಾದೃಶ್ಯಂ ವರ್ಣಕಾರಂಗಃ ಇತಿ ಚಿತ್ರಂ ಷಡಂಗಮ್॥
(ಷಡಂಗದ ಶ್ಲೋಕ)

ಚಿತ್ರದಲ್ಲಿ ಅಡಕವಾಗಿರುವ ಆಕೃತಿಗಳು,
ಅವುಗಳ ಅಳತೆ, ಕಾಣಿಸುವ ಭಾವ, ಎದ್ದು ನಿಲ್ಲುವ
ಚೆಲುವು, ಆಕೃತಿ, ಪ್ರಕೃತಿ ರೂಪ ಪದಾರ್ಥ ಹೋಲಿಕೆ
ಬಣ್ಣಗಳ ವಿನ್ಯಾಸ
(ಕೃಪೆ : ಕರ್ನಾಟಕದ ಕಲೆಗಳು - ಮೊದಲ ಸಂಪುಟ)



ಮುಸ್ಲಿಂ ಕ್ಯಾಲಿಗ್ರಫಿಯಲ್ಲಿ ಚಿತ್ರಕಲೆ
(ಕೃಪೆ : ಕಲಾವಿಕಾಸ - ಅ.ಲ.ನರಸಿಂಹನ್)

ಪ್ರೊ. ಲಕ್ಷ್ಮಣ್ ತೆಲಗಾವಿ*

ಚಿತ್ರದುರ್ಗದ ಲಡಾಯಿ ಲಾವಣಿ: ಪ್ರಥಮ ಪ್ರಕಟಿತ ಆಕರ

ಯಂ. ವೀರಮುದ್ದಣ್ಣ



೧


ಚಿತ್ರದುರ್ಗ ನಾಯಕ ಅರಸರ ಚರಿತ್ರೆ ಅಧ್ಯಯನಕ್ಕೆ ಲಭ್ಯವಿರುವ ಆಕರಗಳಲ್ಲಿ ಜನಪದ ಸಾಹಿತ್ಯ ಪ್ರಕಾರವೂ ಸೇರಿದ್ದು, ಇದರಲ್ಲಿ ಲಾವಣಿ ಸಾಹಿತ್ಯವೂ ಇದೆ. ಚಿತ್ರದುರ್ಗ 'ಚಿತ್ರದುರ್ಗದ ಲಡಾಯಿ ಲಾವಣಿ' ಪ್ರಥಮ ಪ್ರಕಟಿತ ಆಕರವೆನಿಸಿದೆ. ಈ ತನಕ ಯಾರದೇ ಗಮನಕ್ಕೆ ಬಾರದೆ ಅಜ್ಞಾತವಾಗಿಯೇ ಉಳಿದುಬಂದ ಈ ಲಾವಣಿ ಈಗ ಮೊದಲಬಾರಿಗೆ ಇಲ್ಲಿ ಪ್ರಸ್ತಾಪಗೊಳ್ಳುತ್ತಿದೆ.

ಬೆಂಗಳೂರು ಬುಕ್ ಡಿಪೊ ಇವರಿಂದ ೧೯೦೫ರಲ್ಲಿ ಪ್ರಕಾಶಿತವಾದ 'ಚಿತ್ರದುರ್ಗದ ಲಡಾಯಿ ಲಾವಣಿ'ಯ ಕರ್ತೃ 'ಮೈಸೂರು ಪುಟ್ಟಣ್ಣನವರ ಕೊಮಾರ ಯಂ. ವೀರಮುದ್ದಣ್ಣ'. ಚಿತ್ರದುರ್ಗ ಸಂಸ್ಥಾನದ ಕೊನೆಯ ಅರಸ ರಾಜಾ ವೀರಮದಕರಿ ನಾಯಕ (೧೭೫೪-೧೭೭೯) ಮತ್ತು ಶ್ರೀರಂಗಪಟ್ಟಣದ ನವಾಬ ಹೈದರಾಲಿಖಾನರ ನಡುವೆ ನಡೆದ ನಿರ್ಣಾಯಕ ಯುದ್ಧದ ವರ್ಣನೆ ಇವರ ಲಾವಣಿಯ ಕಥಾವಸ್ತು. ಇದು ಹತ್ತು ಪುಟಗಳಲ್ಲಿ ನಿರೂಪಿತವಾಗಿದೆ.

ಕರ್ಣಾಟಕ ಕವಿಚರಿತೆ (ಸಂಪುಟ ೩: ೨೩೪) ಗುರುತಿಸುವಂತೆ, ಯಂ. ವೀರ ಮುದ್ದಣ್ಣ (ಎಂ. ವೀರಮುದ್ದಯ್ಯ) ವೀರಶೈವ ಕವಿ: ಮೈಸೂರು ಬಿ. ಪುಟ್ಟಣ್ಣನವರ ಮಗ. ಇವರು ರಚಿಸಿರುವುದೆಂದರೆ ಸಿರಿಯಾಳ ಚರಿತ್ರೆ (ಲಾವಣಿ ಮತ್ತು ಕೃಷ್ಣರಾಜ ಪಟ್ಟಾಭಿಷೇಕದ ಲಾವಣಿ. ಆದರೆ ಇದೇ ವೀರಮುದ್ದಣ್ಣನ ವರಿಂದಲೇ ರಚಿತವಾದ 'ಪಿರಿಯಾಪಟ್ಟಣದ ಲಡಾಯಿ ಲಾವಣಿ'ಯಾಗಲೀ ಪ್ರಸ್ತುತ 'ಚಿತ್ರದುರ್ಗದ ಲಡಾಯಿ ಲಾವಣಿ' ಯಾಗಲೀ ಇಲ್ಲಿ ಉಲ್ಲೇಖಗೊಳ್ಳದಿರುವುದು ಗಮನಾರ್ಹ.

★ ★ ★

ವೀರ ಮುದ್ದಣ್ಣರನ್ನು "ಕರ್ಣಾಟಕ ತುರಾಮಂಡಲಿಯ ಗುರುವರರಾದ ಮೈಸೂರು ಯಂ. ಪುಟ್ಟಣ್ಣನವರ ಸಾಕುಮಗ,



ಲಾವಣಿ ಪುಸ್ತಕದ ಮುಖಪುಟ

* ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ - ೫೮೩ ೨೭೬

ುರಾ ಬಿರುದಾಂಕಿತರಾದ, ಖಡಕ್ ಲಾವಣಿ ಕವಿರಾಟ್, ಲಾವಣಿ ಲೇಖಕ ಮತ್ತು ಗಾಯಕ"ರೆಂದು ಗುರುತಿಸಲಾಗುತ್ತದೆ. ದ್ದರಿಂದ ಹರದೇಶಿ (ಹರಿದಾಸ) ಸಂಪ್ರದಾಯದ ತುರಾಮಜ್ಮಕ್ಕೆ ಸೇರಿದವರು ವೀರಮುದ್ದಣ್ಣ. ತುರಾದವರು ಹರಿ (ವಿಷ್ಣು) ಪರವಾದವರು. 'ಚಿತ್ರದುರ್ಗದ ಲಡಾಯಿ ಲಾವಣಿ' ಪುಸ್ತಕದಲ್ಲಿ ೧೦ರಿಂದ ೨೨ರವರೆಗಿನ ೧೩ ಪುಟಗಳು 'ಗೌರಿ ಹಬ್ಬದ ತುರ್ರಾ ಲಾವಣಿ' ಯನ್ನೊಳಗೊಂಡಿದೆ. ಇದರ ಅಂತ್ಯದಲ್ಲಿ ನಾಗೇಶರ (ನಾಗೇಶ=ಶಿವ; ಶಿವನ ಪರವಾದ ಕಲ್ಗಿಮಜ್ಮದವರ) ಎದುರಿನಲ್ಲಿ ಹರದೇಶಿಯುರಾದ (ಹರಿ ಅಥವಾ ವಿಷ್ಣುಪರವಾದ ತುರಾಮಜ್ಮದವರ) ವೀರಮುದ್ದಣ್ಣನವರು 'ಶಕ್ತಿ'ಯ ಪರ ಹಾಡಿದ ಬಗೆಗೆ ಈ ಕೆಳಗಿನಂತೆ ಸೂಚನೆಯಿದೆ:

ಪರಮಹರುಷದಿಂ ಪೇಳ್ವನಾ ಪುಟ್ಟಂಣ ಕುಂತ ಸಭೆದಾಗೆ।
ನಿರುತ ಧ್ಯಾನಿಸೊ ನಾಗೇಶಿ ನೀನು ತೂರ್ಯತೀತನೀಗೆ।
ಮೆರವದು ಡಬ್ಬಿನ ಮ್ಯಾಲೆ ತುರ್ರವು ಮೈಸೂರು ಭಸ್ಮಾಗೆ।
ವೀರ ಮುದ್ದಣ್ಣ ಕುಂತು ಪಾಡುವನು ವೈರಿಯೆದುರಿನಾಗೆ।
ಮರೆದಿದೆ ನಂನಿಂದ ಗಾನ ಕೇಳ್ವದಕೆ ಅಖಾಡ ಸೊಗಸಾಗೆ॥

ವಿಶೇಷವೆಂದರೆ, ಶಿವ-ವಿಷ್ಣು (ಹರಿ-ಹರ) ಈರ್ವರು ಒಂದೇ ಸ್ವರೂಪದವರಾದರೂ ಅದನ್ನು ಬಿಟ್ಟು 'ಶಕ್ತಿ'ಯ ಪರ ಹಾಡುವಂತೆ ತುರಾಮಜ್ಮದವರು ವಾದಿಸುವುದು ಗಮನಾರ್ಹ. ಆದರೆ ಮೊದಲು 'ಶಕ್ತಿ'ಯ ಪರ ಹಾಡುತ್ತಿದ್ದ ತುರಾಮಜ್ಮಕ್ಕೆ ಸೇರಿದ ಗಾಯಕರು ಎದುರಾಳಿಗಳಿಂದ, ಅಂದರೆ ಕಲ್ಗಿಮಜ್ಮದವರಿಂದ ಸೋಲು ಅನುಭವಿಸತೊಡಗಿದ ನಂತರ ಅವರು 'ಶಿವ'ನ ಪರವಾಗಿ ಹಾಡತೊಡಗಿದರಂತೆ. ಇಂಥಾ ಲಾವಣಿಗಳನ್ನು ವಾದದ ಲಾವಣಿ ಅಥವಾ ಅಧ್ಯಾತ್ಮದ ಲಾವಣಿಯೆನ್ನಲಾಗುತ್ತದೆ. ಸಾಮಾನ್ಯವಾಗಿ ತುರಾ-ಕಲ್ಗಿವಾದದ ಲಾವಣಿಯನ್ನು 'ಗಂಡು-ಹೆಣ್ಣಿನ ವಾದದ ಲಾವಣಿ'ಯೆಂತಲೂ 'ಗುರು-ಶಿಷ್ಯರ ವಾದದ ಲಾವಣಿ'ಯೆಂತಲೂ ಕರೆಯುವುದುಂಟು. ಕರ್ನಾಟಕದಲ್ಲಿ ತುರಾ-ಕಲ್ಗಿವಾದದ ಲಾವಣಿಯವರು ಇದ್ದ ಊರುಗಳು ಹಲವಾರಿದ್ದರೂ, ಚಿತ್ರದುರ್ಗ ಜಿಲ್ಲೆಯ ಮಟ್ಟಿಗೆ, ಚಿತ್ರದುರ್ಗ ಮತ್ತು ಮಾಯಕೊಂಡ (ಈಗ ದಾವಣಗೆರೆ ಜಿಲ್ಲೆ)ಗಳಲ್ಲಿ ಮಾತ್ರ ಈ ಸಂಪ್ರದಾಯ ಈಚಿನವರೆಗೂ ಉಳಿದುಕೊಂಡು ಬಂದಿದ್ದಿತು. ಹಾಗೆಯೇ, ತುರಾಮಜ್ಮಕ್ಕೆ ಯಂ. ಪುಟ್ಟಣ್ಣನವರು ಮೂಲಗುರುವೆನಿಸಿದ್ದರೆ, ಕಲ್ಗಿಮಜ್ಮಕ್ಕೆ ಮೂಲಗುರು ಮೈಸೂರಿನ ಬಿ. ಗೂಳಯ್ಯ.

ಸುಮಾರು ೧೮೫೩ರ ವೇಳೆಗೆ ಬರಮಣ್ಣ, ನಾಗೇಶರು (ಕಲ್ಗಿಮಜ್ಮದವರು) ಚಿತ್ರದುರ್ಗದ ಮುರುಘರಾಜೇಂದ್ರಸ್ವಾಮಿಗಳ ಮಠದ ದಸರಾ ಉತ್ಸವ ಕುರಿತು 'ಮುರಿಗೆಸ್ವಾಮಿಗಳ ಸಿಂಗಾರದ ಪದ' / 'ಮುರಿಗೆಸ್ವಾಮಿಗಳವರ ಪದ'ವೆಂಬ ಲಾವಣಿ ರಚಿಸಿದುದುಂಟು. ಇದನ್ನು ಪ್ರಥಮ ಲಾವಣಿಯೆಂದು ಪರಿಗಣಿಸಬಹುದಾದರೂ ಇದು ಮಠವೊಂದರ ಉತ್ಸವವನ್ನು ದಾಖಲಿಸುವ ಸಾಂಸತಿಕ ಮಹತ್ವದ ಲಾವಣಿ ಅಷ್ಟೆ; ವೀರಮುದ್ದಣ್ಣನವರ ಲಾವಣಿಯಂತೆ ಚಾರಿತ್ರಿಕ ಕಥಾವಸ್ತುವನ್ನು ಒಳಗೊಂಡುದುದಲ್ಲ. ವೀರಮುದ್ದಣ್ಣನವರು ಪ್ರತ್ಯೇಕವಾಗಿ ಮುರಿಗೇಸ್ವಾಮಿಗಳವರನ್ನು ಕುರಿತು 'ಶ್ರೀ ಮುರುಗರಾಜೇಂದ್ರಸ್ವಾಮಿಗಳ ಲಾವಣಿ'ಯನ್ನು ರಚಿಸಿರುವುದುಂಟು. ಈ ಲಾವಣಿಯನ್ನು ಚಿತ್ರದುರ್ಗ ಬೃಹನ್ಮಠದ ಸಮಾರಂಭವೊಂದರಲ್ಲಿ ಹಾಡಿದಾಗ ಸ್ವಾಮಿಗಳು ಇವರಿಗೆ ಶಾಲು ಹೊದೆಸಿ ಗೌರವ ಸಂಭಾವನೆ ನೀಡಿ ಗೌರವಿಸಿದರಂತೆ. ಏನೇ ಇದ್ದರೂ ೨೦ನೇ ಶತಮಾನದ ಆದಿಯಲ್ಲಿ ಇವರು ರಚಿಸಿದ 'ಚಿತ್ರದುರ್ಗದ ಲಡಾಯಿ ಲಾವಣಿ' ಅಪ್ಪಟ ಚಾರಿತ್ರಿಕ ಕಥಾವಸ್ತುವನ್ನೊಳಗೊಂಡ, ಚಾರಿತ್ರಿಕ ಸಂದರ್ಭವೊಂದನ್ನು ಆಧರಿಸಿದ ಹಾಗೂ ಚಿತ್ರದುರ್ಗ ನಾಯಕ ಅರಸರ ಚರಿತ್ರೆಗೆ ನೇರವಾಗಿ ಸಂಬಂಧಿಸಿದ ಪ್ರಥಮ ಪ್ರಕಟಿತ ಲಾವಣಿಯೆಂಬುದು ಇಲ್ಲಿ ಮುಖ್ಯ.

ವೀರಮುದ್ದಣ್ಣನವರನ್ನು ಹೊರತುಪಡಿಸಿದರೆ, ಈ ತನಕ ಚಿತ್ರದುರ್ಗ ನಾಯಕ ಅರಸರನ್ನು ಕುರಿತು ಲಾವಣಿಗಳನ್ನು ರಚಿಸಿದವರಲ್ಲಿ ಬಿ. ನೀಲಕಂಠಯ್ಯ, ಸಿ. ರಂಗಯ್ಯ, ಜಿ.ಎಸ್. ಗುಂಡಪ್ಪ, ಬಸವರಾಜ್, ಕೆ.ವಿ. ಮಂಜುನಾಥರಾವ್, ಮಾ.ನಂ. ನಂಜಪ್ಪ, ಎಸ್. ಕೆ. ಗೋವಿಂದಪ್ಪ ಮೊದಲಾದವರು ಮುಖ್ಯರು. ಇವರ ಸಾಲಿಗೆ ಚಿತ್ರದುರ್ಗ ಲಾವಣಿಕಾರರಾದ ಕೋಟೆ ಓಬಯ್ಯ ಮತ್ತು ಇವರ ಶಿಷ್ಯ ಬೆಂಕಿ ತಿಮ್ಮಯ್ಯ ಹಾಗೂ ಹಿರಿಯೂರು ತಾಲ್ಲೂಕಿನ ಮೇಟಿಕುರ್ಕೆ ರಂಗಪ್ಪರನ್ನೂ ಸೇರಿಸಬಹುದು. ಆದರೆ ಚಿತ್ರದುರ್ಗ ಚಾರಿತ್ರಿಕ ಲಾವಣಿಯನ್ನು ಮುದ್ರಿಸಿ ಹೊರತಂದವರ ಪೈಕಿ ವೀರಮುದ್ದಣ್ಣನವರೇ ಪ್ರಥಮರು. ವಿಷಾದದ ಸಂಗತಿಯೆಂದರೆ, ಇದನ್ನು ಯಾರೊಬ್ಬರೂ ಚಿತ್ರದುರ್ಗ ಚರಿತ್ರೆಗೆ ಸಂಬಂಧಿಸಿದ ಆಕರಗಳ ಸಾಲಿನಲ್ಲಿಟ್ಟು ಅಧಿಕೃತವಾಗಿ ದಾಖಲಿಸದೆ ಹೋದುದು. ಇಂಥಾ ನಿರ್ಲಕ್ಷಕ್ಕೆ ಈ ಕೃತಿಯ ಪ್ರತಿಗಳು ಸುಲಭವಾಗಿ ದೊರೆಯದಿದ್ದುದೂ ಕಾರಣವಿದ್ದಿರಬೇಕು.

೨

ಮೈಸೂರು ಅರಸೊತ್ತಿಗೆಯ ಪರವಾದುದು 'ಚಿತ್ರದುರ್ಗದ ಲಡಾಯಿ ಲಾವಣಿ'. ಇದರಲ್ಲಿ ಕಾಣಿಸಿರುವ ಮುಖ್ಯ ವ್ಯಕ್ತಿಯೆಂದರೆ ಹೈದರ್‌ಅಲಿ. ಈತನೊಡನೆ ಆದ್ಯತೆಯೊಡನೆ ಮೈಸೂರು ದೊರೆಯನ್ನೂ ಚಿತ್ರಿಸಲಾಗಿದೆ. ಈ ಕೃತಿಯ ಕರ್ತೃ ವೀರಮುದ್ದಣ್ಣನವರು ಮೈಸೂರಿನವರೇ ಆದುದರಿಂದ ಅವರು ಮೈಸೂರು ಸಿಂಹಾಸನಕ್ಕೆ ನಿಷ್ಠೆ ತೋರುವುದು ಸ್ವಾಭಾವಿಕ. ಆದರೆ ಸ್ವತಂತ್ರ ಮನೋಧರ್ಮದ ಪ್ರಜ್ಞಾವಂತ ಲಾವಣಿಕಾರರಂತೆ ತೋರುವ ವೀರಮುದ್ದಣ್ಣ, ಚಿತ್ರದುರ್ಗ ಸಂಸ್ಥಾನಕ್ಕಾಗಲೀ ರಾಜಾ ವೀರಮದಕರಿ ನಾಯಕನಿಗಾಗಲೀ ಅಗೌರವ ತೋರದೆ ಎಚ್ಚರವಹಿಸಿ ಲಾವಣಿ ರಚಿಸಿರುವುದು ಮೆಚ್ಚತಕ್ಕ ಅಂಶ.

ಇನ್ನು 'ಚಿತ್ರದುರ್ಗದ ಲಡಾಯಿ ಲಾವಣಿ'ಯ ಪ್ರಮುಖ ಅಂಶಗಳನ್ನು ಇಲ್ಲಿ ಪರೀಶೀಲಿಸುವುದು ಅಗತ್ಯ. ಬೆಟ್ಟದ ಚಾಮರಾಜನ ಕಾಲದಲ್ಲಿ ಹೈದರಾಲಿಯು ಚಿತ್ರದುರ್ಗದ ಮೇಲೆ ದಾಳಿ ನಡೆಸಿ ಅದನ್ನು ಆಕ್ರಮಿಸಿಕೊಂಡ ಕಥಾವಸ್ತು ಈ ಲಾವಣಿಯದು. ಆದರೆ ಕಾಲಮಾನ ವ್ಯತ್ಯಾಸದ ಕಾರಣವಾಗಿ ಯಾವ ಅರಸ ಈ ಅವಧಿಯಲ್ಲಿ ಮೈಸೂರು ಸಿಂಹಾಸನದ ಮೇಲಿದ್ದನೆಂಬುದು ಸ್ಪಷ್ಟಪಡುವುದಿಲ್ಲ. ಸುಮಾರು ೧೭೬೦ರಲ್ಲಿ ಮೈಸೂರು ಸಿಂಹಾಸನವನ್ನೇರಿದ ಎಂಟನೇ ಚಾಮರಾಜನೇ ಲಾವಣಿಕಾರರು ಹೇಳುವ ಬೆಟ್ಟದ ಚಾಮರಾಜನಿರಬಹುದು. ೧೭೭೪ರ ಬೇಲೂರು ಶಾಸನ (ಬೇಲೂರು ೬೫) ಸಹ ಎಂಟನೇ ಚಾಮರಾಜನೇ ಈ ಅವಧಿಯಲ್ಲಿ ಮೈಸೂರು ಅರಸನಾಗಿದ್ದ ನೆನ್ನುತ್ತದೆ. ಮೈಸೂರು ಚರಿತ್ರೆಯು ತಿಳಿಸುವಂತೆ ಈ (ಬೆಟ್ಟದ) ಚಾಮರಾಜ ಸಿಂಹಾಸನದ ಅಧಿಪತಿಯಾಗಿದ್ದರೂ ಮೈಸೂರಿನ ನಿಜವಾದ ಆಡಳಿತಗಾರನಾಗಿದ್ದವನು ಹೈದರ್ಆಲಿಯೇ.

ಹದಿನೆಂಟು ಪದ್ಯ/ನುಡಿಗಳಿಂದ ಕೂಡಿದ ಈ ಲಾವಣಿಯ ಪಲ್ಲವಿ ಇದು:

ಚಿತ್ರದುರ್ಗದ ಲಡಾಯಿ ಹೇಳುತಿನಿ ಕೇಳಿರಿ ಸಭೆಯೆಲ್ಲಾ!
ಮರ್ತ್ಯದಿ ಬಹದ್ದೂರ್ ಗೆದ್ದ ಶಿಪಾಯಿ ಪಾಳ್ಯಗಾರನೆಲ್ಲ ।।ಪ।।

ತನ್ನ ಸಮಕಾಲೀನ ಎಲ್ಲ ಸಿಪಾಯಿ-ಪಾಳೆಯಗಾರರನ್ನು ಸೋಲಿಸಿದ ಹೈದರಾಲಿಯನ್ನು ಸಮರ್ಥಿಸುತ್ತದೆ ಈ ಲಾವಣಿಯ ಪಲ್ಲವಿ. ಮುಂದೆ ಈ ಲಾವಣಿಯ ಉದ್ದಕ್ಕೂ ಹೈದರ್‌ನ ನೇರವಾಗಿ ಪ್ರಸ್ತಾಪಿಸದೆ 'ಬಹುದ್ದೂರ್ ಶಿಪಾಯಿ' ಎಂದಷ್ಟೆ ಹೇಳಲಾಗಿದೆ. ಮೈಸೂರು ಅರಸನ ಅಧೀನದಲ್ಲೆ ಹೈದರ್ ಇದ್ದುದನ್ನು ಇದು ಸೂಚಿಸುತ್ತದೆನ್ನ ಬಹುದು. ಪಲ್ಲವಿಯ ನಂತರದಲ್ಲಿ ಲಾವಣಿಯು ಚಿತ್ರದುರ್ಗದ ರಾಜಾವೀರ ಮದಕರಿನಾಯಕನ ಪ್ರತಾಪವನ್ನು ಹೀಗೆ ವರ್ಣಿಸುತ್ತದೆ:

ಏಳುಸುತ್ತಿನ ಕೋಟೆಯ ಕಟ್ಟಿ ಚಕ್ರಬಿಂಬದಾಂಗೆ।
ಇಳೆಯೊಳು ಇಪ್ಪತ್ತಾರು ಪಾಳ್ಯಗಾರರು ನಡುಗುತಿರುವರ್ ಇವಗೆ।
ಮಲನಾಡವರಿಗೆ ಗಂಡ ಮೈಸೂರವರ್‌ಪಿಂಡಯೆಂಬುತೀಗೆ।
ಪಾಳ್ಯಗಾರರಿಗೆ ಮಿಂಡ ಆದ ಮದಕೇರಿಭೂಪ ಹೀಗೆ।
ಪೊಗಳಿಸಿಕೊಂಬುತ ಇದ್ದ ಭೂಪತಿ ನಾಲ್ಕುದೇಶದ್ ಮ್ಯಾಗೆ।
ಇಳೆ ರಾಜಾದಿರಾಜರೆಲ್ಲರು ನಡುಗುತಿದ್ದರೀಗೆ।
ತಲ್ಲಣಿಸುವರ್ ಎಲ್ಲಾ ಪಾಳ್ಯಗಾರರು ತಮ್ಮ ವೃದಯದಾಗೆ।
ನಿಲ್ಲದೆ ಕಪ್ಪಕಾಣಿಕೆಯಿತ್ತರು ತಂದು ಪಾದದೆಡೆಗೆ।
ಬಲೆ ರುಸ್ತುಂ ತಾರಾಗಿಯಿದ್ದನು ಚಿತ್ರದುರ್ಗದಾಗೆ।
ತಲ್ಲಣಿಸುವುದು ಮದಕೇರಿನಾಯ್ಕನ ನೋಡಿ ಜಗವೊಳಗೆ।
ಯಾರು ಕಾಣೆ ಇವನಂತೆ ಪರಾಕ್ರಮಿ ಶೀಮೆಭೂಮಿಲೆಲ್ಲ।।

ಲಾವಣಿಯು ಮುಂದುವರೆದು ಹೇಳುವಂತೆ, ಈ ಮದಕರಿಭೂಪನ ಏಟನ್ನು ತಾಳಲಾರದೆ ಎಷ್ಟೋ ಚಕ್ರವರ್ತಿಗಳು ಅರಣ್ಯಪಾಲಾದರು. ಸಂಪಿಗೆ ಸಿದ್ದೇಶ್ವರ, ಏಕನಾಥೇಶ್ವರಿ, ಉಚ್ಚಂಗಿಯರಂಥಾ ದುರ್ಗದ ದೈವಗಳ ಕೃಪೆಯಿಂದಾಗಿ ಬಾಳುತಾ ಬದುಕಿದವನು ಈ ಮದಕರಿ. ಇಂಥಾ ಪರಾಕ್ರಮ ಪುರುಷನಿಗೆ ಈ ಭೂಮಿಯಲ್ಲಿ ಎದುರು ಯಾರು? ಈ ವಾರ್ತೆಯನ್ನು ಕೇಳಿದ ಹೈದರ್ ಆಲಿ (ಬಹದ್ದೂರ್ ಸಿಪಾಯಿ) ಮದಕರಿಭೂಪನ ವಿರುದ್ಧ ಯುದ್ಧ ಮಾಡಲು ಮೈಸೂರುಭೂಪನ ಅಪ್ಪಣೆ ಕೇಳುತ್ತಾನೆ. ಆರಂಭದಲ್ಲಿ ಮೈಸೂರು ರಾಜ ಇದಕ್ಕೆ ಸಮ್ಮತಿಸುವುದಿಲ್ಲ. ಹಿಂದೂ-ಮುಸಲ್ಮಾನ್ ಕುಲದಲ್ಲಿ ಹೈದರ್‌ನಂಥಾ ಸಮವೀರರನ್ನು ಯಾರನ್ನೂ ಕಂಡಿಲ್ಲವೆಂತಲೂ ಈತನಕ ಆತನನ್ನು ಮಗನಂತೆ ಕಾಪಾಡಿಕೊಂಡಿರುವೆನೆಂತಲೂ ಹೇಳುತ್ತಾನೆ. ಮದಕರಿನಾಯಕನಿಗೆ ಸಂಪಿಗೆ ಸಿದ್ದೇಶ್ವರನ ದಯೆಯಿದೆ. ಅವನೊಬ್ಬ ಕೇಡುಗಾರ, ಅವನೊಡನೆ ಕದನ ಬೇಡವೆನ್ನುತ್ತಾನೆ. ಈವರೆಗೆ ಹೈದರ್ ಮಾಡಿದ ಪರಾಕ್ರಮವೇ ಸಾಕೆನ್ನುತ್ತಾ ಮದಕರಿಯಿಂದ ದೂರವಿರಲು ಹಾಗೂ ಚಂದದಿಂದ ಭೋಜನ ಮಾಡಿಕೊಂಡು ಮನೆಯಲ್ಲಿರಲು ಸೂಚಿಸುತ್ತಾನೆ. ಈ ಮಾತನ್ನು ಕೇಳಿ ಬೇಸರಗೊಂಡ ಹೈದರ್, ಇಂದು ಅಪ್ಪಣೆ ಕೊಡದೆ ಹೋದರೆ ತಲೆ ಕತ್ತರಿಸಿಕೊಳ್ಳುವೆ; ಅರಸನ ಉಪ್ಪುತಿಂದು ಬದುಕುತ್ತಿರುವ ಕಂದನಿಗೆ ವೀಳ್ಯ ಕೊಟ್ಟು ಆಶೀರ್ವದಿಸು ಎಂದು ಒತ್ತಾಯಿಸುತ್ತಾನೆ. ಆಗ ನಿರ್ವಾಹವಿಲ್ಲದೆ ಅರಸ ಬೇಡವೆಂದರೂ ಹಟ ಹಿಡಿದ ಹೈದರ್‌ನ ಮಾತಿಗೆ ಸಮ್ಮತಿಸಬೇಕಾಗುತ್ತದೆ. ಯುದ್ಧ ನಡೆಸಲು ಲೆಕ್ಕವಿಲ್ಲದಷ್ಟು ಆನೆ, ಕುದುರೆ, ಮಾರ್ಬಲ ಮತ್ತು ಹಣ ನೀಡಲು ಆಜ್ಞಾಪಿಸುತ್ತಾನೆ ಅರಸ. ಮದಕರಿಯನ್ನು ಜಯಿಸಿಬರಲೆಂದೂ ಶ್ರೀರಂಗನ ಕೃಪೆಯಿರಲೆಂದೂ ಹಾರೈಸುತ್ತಾನೆ.

ಮೈಸೂರು ಅರಸನ ಸೇನೆ ಚಿತ್ರದುರ್ಗದ ಆಕ್ರಮಣಕ್ಕೆ ಸಿದ್ಧತೆ ನಡೆಸುತ್ತದೆ. ಒಂದು ಲಕ್ಷ ತುರುಗ, ಹತ್ತುಸಾವಿರ ಆನೆ, ಐದು ಸಾವಿರ ಒಂಟೆ ಹಾಗೂ ಲೆಕ್ಕವಿಲ್ಲದಷ್ಟು ಮಂದಿ ಮಾರ್ಬಲ-ಇದು ಒಟ್ಟು ಸೇನಾಬಲ. ಇದರಲ್ಲಿದ್ದುದು ಧೀರ ವಜೀರರು, ಮಾವುತರು, ನಿಶಾನಿಯವರು, ವಿಧವಿಧ ಫೌಜು ಪಟುಭಟರು; ಹಾಗೂ ಮದ್ದಿನಗಾಡಿಗಳು, ಒಂದು ಸಾವಿರ ಜಂಜಾಲ್ ಫಿರಂಗಿಗಳು; ಭರ್ಜಿ, ಸಾಂಗ, ಈಟಿ, ಮುದ್ಗರ, ಪರಶು, ಹಲಾಯುಧ, ಡೊಂಕಣಿ, ಸುರಗಿ, ಚಾಪಾಯುಧ ಇತ್ಯಾದಿ ಮೂವತ್ತೆರಡು ಹತ್ಯಾರಗಳು ಇತ್ಯಾದಿ. ಇಂಥಾ ಸುಸಜ್ಜಿತ ಸೇನೆ ಮೈಸೂರು ಅರಮನೆಯ ಎದುರಿನಲ್ಲಿ ಸಾಲಾಗಿ ನಿಲ್ಲುತ್ತದೆ. ಇದನ್ನು ಸ್ವತಃ ವೀಕ್ಷಿಸಿದ ಚಾಮರಾಜಭೂಪತಿಯು ಹೈದರ್‌ನನ್ನು ತನ್ನ ಅರಮನೆಗೆ ಬರಮಾಡಿಕೊಂಡು ಇಷ್ಟು ಸೇನಾಬಲ ಸಾಕಾಗುತ್ತದೆಯೇ ಎಂದು ಪ್ರಶ್ನಿಸಿದಾಗ ಹೈದರ್ ಇಷ್ಟು ಸಾಕು ಎನ್ನುತ್ತಾನೆ.

ಅಂಬಾರಿಯೇರಿಸಿದ ಆನೆಯ ಮೇಲೆ ಹೈದರ್ ಕುಳಿತರೆ, ಆತನ ಮಗ ಟೀಪೂ ಸುಲ್ತಾನ್ ಕುದುರೆಯೇರುತ್ತಾನೆ. ತಂದೆ-ಮಗ

ಈರ್ವರೂ ಸೇನೆಯನ್ನು ನಡೆಸುತ್ತಾರೆ. ಘನ ಘೋಷಣೆ ಭೋರ್ಗರೆಯುತ್ತಿರಲು ಸೈನ್ಯದಲ್ಲಿಯ ವಿವಿಧ ಜನರು ಮುಂದೆ ಮುಂದೆ ಹೆಜ್ಜೆಹಾಕುತ್ತಾರೆ. ಸೇನೆ ಮೊದಲು ಬೆಂಗಳೂರನ್ನು ತಲುಪಿ ಅಲ್ಲಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿ ಹಿರಿಯೂರಿಗೆ ಬರುತ್ತದೆ. ಏಳನೇ ದಿವಸಕ್ಕೆ ಚಿತ್ರಗದುರ್ಗವನ್ನು ಮುಟ್ಟುತ್ತದೆ. ಇಲ್ಲಿಗೆ ಬರುವ ವೇಳೆಗೆ ಕಟ್ಟಿ ತಂದಿದ್ದ ಬುತ್ತಿಯೆಲ್ಲಾ ತೀರಿಹೋಗುತ್ತದೆ. ಅಲ್ಲಿಯೇ ಬೀಡುಬಿಟ್ಟ ಸೈನಿಕರು ಡೇರೆಗಳನ್ನು ಹಾಕಿಕೊಳ್ಳುತ್ತಾರೆ.

ಹೈದರಾಲಿಯ ಮಂತ್ರಿ-ಪ್ರಧಾನಿಗಳು ಎದುರಿಗಿದ್ದ ದುರ್ಗವನ್ನು ವೀಕ್ಷಿಸುತ್ತಾರೆ. ಎತ್ತ ನೋಡಿದರೂ ಗುಡ್ಡ-ಪರ್ವತ. ಆಕ್ರಮಣವೇ ಅಸಾಧ್ಯ. ಶ್ರೀರಂಗಪಟ್ಟಣಕ್ಕೆ ಹೋಗುವ ಮಾರ್ಗವೇ ತಿಳಿಯದು. ದುರ್ಗದ ಷಹರನ್ನು ಪತ್ತೆಹಚ್ಚಲಾಗುವುದಿಲ್ಲ. ಇಷ್ಟಾದರೂ ಹೈದರ್‌ನ ಸೇನೆ ಚಿತ್ರದುರ್ಗಕ್ಕೆ ಮುತ್ತಿಗೆ ಹಾಕುತ್ತದೆ. ನಾಲ್ಕು ದಿಕ್ಕಿಗೂ ಫಿರಂಗಿಗಳನ್ನು ನಿಲ್ಲಿಸಿ ಹಾರಿಸಲಾಗುತ್ತದೆ. ಆದರೆ ಇದಕ್ಕೆ ಉತ್ತರಿಸುವುವೆಂದರೆ ಗಿಡ-ವೃಕ್ಷ-ತೋಪುಗಳು ಮಾತ್ರ. ಆದರೆ ಸೈನಿಕರು ಇವನ್ನೆಲ್ಲಾ ನಿವಾರಿಸಿಕೊಂಡು ದುರ್ಗದೊಳಗಿನ ಜನರ ಮೇಲೆ ಬಂದೂಕು ಹಾರಿಸುತ್ತಾರೆ. ಪರಿಣಾಮವಾಗಿ ದುರ್ಗದ ಜನರು ದಿಕ್ಕುದಿಕ್ಕಿಗೆ ಓಡಲಾರಂಭಿಸುತ್ತಾರೆ. ದುರ್ಗದಲ್ಲಿ ಬೊಬ್ಬೆ ಆಗತೊಡಗುತ್ತದೆ.

ಇತ್ತ ಮದಕರಿಭೂಪನ ವೀರಭಟರು ಈ ಮುತ್ತಿಗೆಗೆ ತಕ್ಕ ಉತ್ತರ ಕೊಡಲು ಕಾತರಿಸುತ್ತಾರೆ. ಮದಕರಿಯ ಅಪ್ಪಣೆ ಪಡೆದು ಹೈದರ್‌ನ ಸೇನೆಯನ್ನು ಎದುರಿಸುತ್ತಾರೆ. ಈ ಸಂದರ್ಭ ಲಾವಣಿಯನ್ನು ನಿರೂಪಿತವಾಗಿರುವುದು ಹೀಗೆ:

ಅಂದಮಾತ ಕೇಳಿ ಕೊಟ್ಟ ಹುಕೂಮನು ತನ್ನ ವೀರರಿಗೆ।
ಬಂದಿತು ಲಷ್ಕರ್ ಮೂರುಲಕ್ಷವು ಪೋಂದೆ ರಭಶಿನಾಗೆ।
ಬಂದು ಶಿಪಾಯ್ಗಳು ಏರಿದರಂಣ ತಮ್ಮ ಕೋಟೆ ಮೇಗೆ।
ನಿಂದು ಪಿರಂಗಿಯ ಬುಜು(ರ್ಜ್)ನ ಮ್ಯಾಲೆ ಇಟ್ಟರು ಲೈನಾಗೆ।
ಒಂದೆ ಸಮಾದನ್‌ದನ್ ಎಂಬುತಲಿಯಿತ್ತು ಶಬ್ದ ಹಾಗೆ।
ಮಂದಿ ಮಾರ್ಭಲ ಕಡಿದರಂಣ ನೋಡು ಪುರುಷತ್ತಿಲ್ಲದಂಗೆ।
ಚಂದ್ರಾಯುಧಗಳು ಮಿಂಚುತಲಿತ್ತು ಅವರವರ ಕರದಾಗೆ।।
ಅಂದು ಗಾಭರಿಯಾದ ಬಹದ್ದೂರ್ ತನ್ನ ಮನಶಿನಾಗೆ।
ನಿಂದು ಬರುತಲಿದೆ ಗುಂಡುಗಳ್ ಡಂ ಡಂ ಎಂಬುತ ಬರದಾಗೆ।
ತಂದೆಯಾದ ಸಂಪಿಗೆ ಸಿದ್ದೇಶ್ವರ ಕಾದುಯಿರುವ ಇವರ್ಗೆ।
ಎತ್ತ ನೋಡಿದರು ಮದಕರಿಭೂಪತಿ ದಂಡು ಕಡಿದವನಲ್ಲ।।
ದಡೆಲ್ ದಡೆಲ್ ಯೆಂಬೊ ಗುಂಡಿನ ಶಬ್ದಿ ಬಂದು
ಶಿಪಾಯಿಗಳನ್ನು।
ಬಡಿಲ್ ಬಡೆಲ್ ಮಾಡಿ ಕೊಂದು ಹಾಕುತಲಿತ್ತು ಜನರಿಗಿನ್ನು।
ರುಂಡ ವಂದುಕಡೆ ಮುಂಡ ವಂದುಕಡೆ ರಕ್ತದ ಕೋಡಿಯನು।
ತುಂಡು ಮಾಡುವರು ಕಡಿದು ಖಡ್ಗದಿ ಈಜುತ ನದಿಯನ್ನು।
ದುಂಡುಮೀಶೆ ತಿರುಹುತ ಶಿಪಾಯ್ಗಳು ಹೊಕ್ಕು ಕಡಿದವರಿನ್ನು।
ಚಂಡು ಹಾರಿದಂಗೆ ಶಿರಗಳು ಹಾರಿಬೀಳ್ವವು ಧರೆಗಿನ್ನು।।
ರುಂಡಮಾಲಧರವೋರ್ವನೆ ಬಲ್ಲ ಆಗುವ ಲಡಾಯನ್ನು।
ಕಂಡಕಂಡ ಕಡೆಗೆ ಹೋಡಿದರಂಣ ಶಿಪಾಯಿಗಳು ಯಿನ್ನು।
ಮಂಡಲದೊಳು ಇಂತಾ ಲಡಾಯಿ ಹಾಗಲಿಲ್ಲ ಯಾವಕಾಲಕಿಂನು।
ಗಂಡುಗಲಿದೋರ್ದಂಡ ಮದಕರಿಭೂಪ ಯಿದ್ದ ತಾನು।
ಗಂಡನಾಗಿದ್ದನು ಬಹದ್ದೂರಿಗೆ ಲಡಾಯ್ಗೆ ಬರಲಿಲ್ಲ।।

ದುರ್ಗದವರು ನಾನಾ ಆಯುಧಗಳನ್ನು, ತಂತ್ರಗಳನ್ನು ಬಳಸಿ ಶತ್ರುಸೇನೆಗೆ ಸರಿಯಾಗಿ ಉತ್ತರಿಸುತ್ತಾರೆ. ಒಂದು ನಿಮಿಷವೂ ಬಿಡದೆ ದುರ್ಗದ ಪಟುಭಟರು ನಡೆಸುವ ಸಾಹಸವನ್ನು ಮದಕರಿಭೂಪನು ದುರ್ಗದ ಕೋಟೆಯ ಮೇಲೆ ನಿಂತು ನೋಡುತ್ತಾನೆ. ಹನುಮನಾಯಕ, ಕಸ್ತೂರಿನಾಯಕರಂಥವರೆಲ್ಲರೂ ನಾಲ್ಕುದಿಕ್ಕಿನಲ್ಲೂ ಕಟ್ಟಿ ಹೊಡೆಯುತ್ತಾರೆ. ದುರ್ಗದ ಬಳಿಯಲ್ಲಿ ರಕ್ತಪ್ರವಾಹ ಹರಿಯುತ್ತದೆ. ಮತಿವಂತೆ ಉಚ್ಚಂಗಿಯಲ್ಲಮ್ಮ ಪ್ರಜೆಗಳನ್ನು ರಕ್ಷಿಸಿದರೆ, ಏಕನಾಥೇಶ್ವರಿ ರಣರಂಗದಲ್ಲಿ ನಿಂತು ದಂಡಿನವರನ್ನು ಉತ್ತೇಜಿಸುತ್ತಾಳೆ. ಅಲ್ಲಿಂದ ಮದಕರಿಯು ರಂಗಪ್ಪನಾಯಕ, ಕೆಂಗಲನಾಯಕರ ಸಹಿತ ತನ್ನ ಮಹಲಿಗೆ ಹಿಂದಿರುತ್ತಾನೆ.

ದುರ್ಗದ ಬೇಡಪಡೆಯ ಸಾಹಸವನ್ನು ಹೈದರ್ ಸಹಾ ಒಂದೆಡೆ ನಿಂತು ಕಣ್ಣಾರೆ ವೀಕ್ಷಿಸುತ್ತಾನೆ; ಎಷ್ಟು ಸಾಹಸ ಮಾಡಿದಾಗ್ಯೂ ಎಂದಿಗೂ ದುರ್ಗದ ಪಟ್ಟಣವನ್ನು ಆಕ್ರಮಿಸಲು ಸಾಧ್ಯವಾಗದೆಂದು ಉದ್ಗರಿಸುತ್ತಾನೆ. ಶ್ರೀರಂಗನಾಥನ ಧ್ಯಾನವ ಮಾಡುತಾ ಚಿಂತೆಯಲ್ಲಿ ತನ್ನ ಡೇರೆಯೊಳಗೆ ಮಲಗಿದ ಹೈದರ್‌ಗೆ ದರ್ಶನ ನೀಡಿದ ರಂಗನಾಥನಿಂದ ದುರ್ಗವನ್ನು ಆತನ ಕೈವಶ ಮಾಡಿಕೊಡುವೆನೆಂಬ ಆಶ್ವಾಸನೆ ದೊರೆಯುತ್ತದೆ. ತನ್ನ ಬಹಳಷ್ಟು ಸೇನೆ ಕಾಳಗದಲ್ಲಿ ನಾಶವಾದ ಬಗೆಗೆ ಹೈದರ್ ಚಿಂತಿಸುತ್ತಾನೆ. ಹನ್ನೆರಡು ವರುಷಗಳಷ್ಟು ಕಾಲ ಹೋರಾಟ ನಡೆಸಿದರೂ ದುರ್ಗ ತನ್ನ ಕೈವಶವಾಗದ ಬಗೆಗೆ ನೊಂದುಕೊಳ್ಳುತ್ತಾನೆ. ಆದ್ದರಿಂದ ತನ್ನ ಉಳಿದ ಸೈನ್ಯವನ್ನು ತೆಗೆದುಕೊಂಡು ಮೈಸೂರಿಗೆ ಹಿಂದಿರುಗುವ ಮಾರ್ಗದಲ್ಲಿ ಹಿರಿಯೂರಿಗೆ ಬರುತ್ತಾನೆ. ಆದರೆ ಇದನ್ನು ಕಂಡ ದುರ್ಗದ ಕಳ್ಳಿಬೇಲಿ ನರಸಪ್ಪನು ಹೈದರ್‌ಗೆ ಪತ್ರ ಬರೆದು ಮದಕರಿ ನಾಯಕನನ್ನು ಸೆರೆಹಿಡಿದು ಕೊಡುವೆನೆಂದು ಭರವಸೆ ನೀಡುತ್ತಾನೆ. ಇದರಿಂದಾಗಿ ಹೈದರ್‌ನ ದಂಡು ಕೂಡಲೇ ದುರ್ಗದತ್ತ ಮರಳಿ ಬರುತ್ತದೆ.

ಈಗ ಭೀಕರ ಕಾಳಗ ಕೈಗಟ್ಟುತ್ತದೆ. ಹೈದರ್‌ನ ಸೈನಿಕರು ತುರ್ತುಫಿರಂಗಿಯನ್ನು ಎತ್ತಿ ದುರ್ಗದ ಕೋಟೆಗೆ ಹೊಡೆಯ ಲಾರಂಭಿಸುತ್ತಾರೆ. ಮರೆಮೋಸದಿಂದ ದಂಡು ದುರ್ಗದ ಕೋಟೆಯೊಳಗೆ ನುಗ್ಗಲಾರಂಭಿಸುತ್ತದೆ. ವನಕೆ ಬಾಗಿಲಿನ ಗುಟ್ಟಿನದಾರಿಯನ್ನು ತೋರಿಸಿಕೊಡುತ್ತಾನೆ ಕಳ್ಳಿಬೇಲಿ ನರಸಪ್ಪ. ಆದರೆ ಈ ವನಕೆಬಾಗಿಲಿನಲ್ಲಿ ನುಗ್ಗುವ ಹೈದರ್‌ನ ಸೈನಿಕರಲ್ಲಿ

ಮೂರುಸಾವಿರಕ್ಕೂ ಹೆಚ್ಚುಮಂದಿ ಈ ಬಾಗಿಲಿನ ಬಳಿಯೇ ಮಡಿಯುತ್ತಾರೆ. ಹೈದರ್ ಇದನ್ನು ಕಳ್ಳಿಬೇಲಿ ನರಸಪ್ಪನಿಗೆ ಕರಕರ ಕಾಗದ ಬರೆದು ತಿಳಿಸುತ್ತಾನೆ. ಆಗ ನರಸಪ್ಪನು ಸೈನಿಕರಿಗೆ ನಿಶಾನಿದುರ್ಗವನ್ನು ಏರುವಂತೆ ಮಾಡಿ ವನಕೆ ಬಾಗಿಲಿನ ಬಳಿ ಸಾಹಸ ತೋರಿದ ದುರ್ಗದ ವೀರನನ್ನು ಫಿರಂಗಿಯಿಂದ ಹೊಡೆದು ಸಾಯಿಸಲು ಸಹಾಯ ಮಾಡುತ್ತಾನೆ. ಆಗ ಸೇನೆ ಇದೇ ಬಾಗಿಲಿನಿಂದ ಕೋಟೆಯೊಳಗೆ ನುಗ್ಗಿ ಮುತ್ತಿಗೆ ಹಾಕಿ ಅಂತಿಮವಾಗಿ ಮದಕರಿನಾಯಕನನ್ನು ಸೆರೆಹಿಡಿಯುತ್ತದೆ. ಹನ್ನೆರಡು ವರುಷಗಳಿಂದ ಕೈವಶವಾಗದ ದುರ್ಗ ಕೊನೆಗೂ ಹೈದರ್‌ನ ವಶವಾಗುತ್ತದೆ. ಕೋಟೆಯ ಮೇಲೆ ಝಾಂಡಾ ಛಡಾಯಿಸಿ ಕುಶಾಲಫಿರಂಗಿಯನ್ನೂ ಹಾರಿಸಲಾಗುತ್ತದೆ. ದುರ್ಗದ ಪಟ್ಟಣವನ್ನು ಸೂರೆ ಮಾಡ ಲಾಗುತ್ತದೆ. ದುರ್ಗ ತನ್ನ ಕೈವಶವಾದ ಸಮಾಚಾರವನ್ನು ಹೈದರ್ ಮೈಸೂರು ದೊರೆ ಬೆಟ್ಟದ ಚಾಮರಾಜನಿಗೆ ಪತ್ರಮುಖೇನ ತಿಳಿಸುತ್ತಾನೆ.

ಹೀಗೆ ಚಿತ್ರದುರ್ಗ ಲಡಾಯಿ ವಿವರಗಳನ್ನು ಸುದೀರ್ಘ ವಾಗಿ ನೀಡುವ ವೀರಮುದ್ದಣ್ಣನವರು, ಲಾವಣಿಯ ಅಂತ್ಯದಲ್ಲಿ ಎರಡೇ ಸಾಲುಗಳಲ್ಲಾದರೂ ದುರ್ಗದರಸ ಮದಕರಿನಾಯಕನ ಶೌರ್ಯವನ್ನು ಹೊಗಳುತ್ತಾರೆ. ಈ ಲಾವಣಿ ಮೈಸೂರು ಅರಸನ ಪರವಾದರೂ ಅಂತ್ಯದಲ್ಲಿ ದುರ್ಗದರಸನ ಪರವಾದ ನಿಲುವನ್ನು ಸೂಕ್ಷ್ಮವಾಗಿಯಾದರೂ ಪ್ರದರ್ಶಿಸುತ್ತದೆ. ಧೀರನಾಗಿದ್ದೂ ಮೋಸದಿಂದ ಸೆರೆಸಿಕ್ಕ ಮದಕರಿನಾಯಕನ ಬಗೆಗಿನ ಸಹಾನುಭೂತಿಯೂ ಇಲ್ಲಿ ಲಾವಣಿಕಾರರ ಮೇಲೆ ಪರಿಣಾಮ ಬೀರಿರಬಹುದು. ಹೈದರ್‌ಬಾಯಿಯಿಂದ ಬಂದ ಲಾವಣಿ ಯಲ್ಲಿರುವ ನುಡಿಗಳಿವು:

ಬಾರವರುಷ ಶ್ರಮಪಟ್ಟು ಹಿಡಿದೆನೊ ದುರ್ಗವೆಂಬೊ ಷಹರಾ।
ಧರೆಯೊಳು ಕಾಣೆನು ಯಿಂತ ಪರಾಕ್ರಮಿ ಯನಗಿಂತಲೂ ಶೂರಾ।
ಧಾರುಣಿಯೊಳಗೆಲ್ಲಾ ಹೆಚ್ಚು ಅನಿಸಿಕೊಂಡಿದ್ದ ಪಾಳ್ಯಗಾರಾ।

ಮದಕರಿನಾಯಕನಂಥಾ ಧೀರ ಅರಸನನ್ನು ಸೆರೆಹಿಡಿದ ವಿವರ ತಿಳಿದು ಸಂತೋಷಿಸುತ್ತಾನೆ ಮೈಸೂರು ಭೂಪತಿ. ಆತನ ಅಪ್ಪಣೆಯಂತೆ ಮೈಸೂರಿನಲ್ಲಿ ಎರಡು ಸಾವಿರ ಕುಶಾಲಫಿರಂಗಿಗಳು ಹಾರಿದವಂತೆ; ಹಾಗೂ ಪ್ರಜೆಗಳಿಗೆ ಮನಸಾರೆ ಸಕ್ಕರೆ ಹಂಚಿ ಸಂಭ್ರಮಿಸಿದರಂತೆ!

★ ★ ★

ಮೇಲೆಯೇ ಹೇಳಿದಂತೆ, ಈ ಲಾವಣಿಯ ಕಥಾವಸ್ತು ಶ್ರೀರಂಗಪಟ್ಟಣದ ನವಾಬ ಹೈದರ್ ಅಲಿಖಾನ್ ಮತ್ತು ಚಿತ್ರದುರ್ಗದ ರಾಜಾ ವೀರಮದಕರಿನಾಯಕರ ನಡುವೆ ನಡೆದ ನಿರ್ಣಾಯಕ ಯುದ್ಧ ಸಂದರ್ಭವನ್ನು ಕುರಿತದ್ದು. ಕರ್ನಾಟಕ ಚರಿತ್ರೆಯಲ್ಲಿ ಕಂಡು ಬರುವಂತೆ, ಹೈದರ್‌ಅಲಿಯ ರಾಜಕೀಯ ಸ್ಥೈರ್ಯಕ್ಕೆ ನೇರ ಸವಾಲೆಸೆದ ನಾಯಕ ಸಂಸ್ಥಾನಗಳಲ್ಲಿ ಚಿತ್ರದುರ್ಗವೇ ಪ್ರಥಮ ಹಾಗೂ ಅಂತಿಮ. ಹೀಗಾಗಿ ಈ ಯುದ್ಧ ಘಟನೆಗೆ ಲಾವಣಿಕಾರರೂ ಆದ್ಯತೆ ನೀಡಿದುದು ಸಹಜ. ಈ ಯುದ್ಧಘಟನೆ ಜನಮನದಲ್ಲಿ ಮನೆಮಾಡಿಕೊಂಡುದರ ಪ್ರತೀಕವೇ ವೀರಮುದ್ದಣ್ಣನವರ 'ಚಿತ್ರದುರ್ಗದ ಲಡಾಯಿ ಲಾವಣಿ'.

ಚಿತ್ರದುರ್ಗದ ವಿರುದ್ಧ ಈ ನಿರ್ಣಾಯಕ ಯುದ್ಧ ನಡೆದುದು ೧೭೭೯ರಲ್ಲಿ. ಇದಕ್ಕೆ ಮುನ್ನ ೧೭೬೨, ೧೭೭೪ ಮತ್ತು ೧೭೭೭ರಲ್ಲಿ ಮೂರುಬಾರಿ ಯುದ್ಧ ಪ್ರಯತ್ನಗಳು ನಡೆದಿದ್ದರೂ ಅವು ಕಾಳಗದ ಸ್ವರೂಪದಲ್ಲಿರದೆ ಯುದ್ಧಾಹ್ವಾನ, ಸಂಧಾನ, ಒಪ್ಪಂದಗಳ ಹಂತದಲ್ಲೆ ನಿಂತುಹೋದಂಥವು. ಆದರೆ ೧೭೭೯ರ ಅಂತಿಮ ಯುದ್ಧದಲ್ಲಿ ದುರ್ಗದ ಪತನವಾಯಿತು. ಭೀಮಾಜಿ ಪಂತ್‌ನ 'ಚಿತ್ರದುರ್ಗದ ಬಖೈರು' ಈ ಯುದ್ಧ ಸಂದರ್ಭವನ್ನು ನಿಖರವಾಗಿ ಚಿತ್ರಿಸುತ್ತದೆ. ಮುಖ್ಯವಾಗಿ, ಚಿತ್ರದುರ್ಗ ಕೋಟೆಯ ಮೇಲೆ ನಡೆಸಿದ ಫಿರಂಗಿದಾಳಿಯ ರೋಚಕ ವಿವರ ದೊರೆಯುತ್ತದೆ ಇದರಲ್ಲಿ. ದುರ್ಗದ ವೀರಭಟರು ನಡೆಸಿದ ಭೀಕರ ಕದನದ ಹಲವಾರು ಸಂದರ್ಭಗಳು ಇಲ್ಲಿ ಕಾಣಸಿಗುತ್ತವೆ.

ವೀರಮುದ್ದಣ್ಣನವರು ತಮ್ಮ ಲಾವಣಿಯಲ್ಲಿ ಕೆಲವು ಬದಲಾವಣೆಗಳನ್ನು ತೋರಿಸುತ್ತಾರೆ. ಇದು ಅವರ ಪ್ರಯತ್ನದ ಮಟ್ಟಿಗೆ ಸ್ವಾಭಾವಿಕವಾದುದು. ಇದರ ಲಾವಣಿಯಲ್ಲಿ ಕೆಲವು ಸಾಂಪ್ರದಾಯಿಕ ವಿವರಗಳು ತಲೆಹಾಕಿದ್ದು, ತಮ್ಮ ಸಾಹಿತ್ಯಕ ಗುಣದಿಂದ ಕೇಳುಗರನ್ನು/ ಓದುಗರನ್ನು ರಂಜಿಸಲೆತ್ನಿಸುತ್ತವೆ. ಅಲ್ಲದೆ, ಇದರಲ್ಲಿ ಉತ್ಪ್ರೇಕ್ಷಿತ ಅಂಕಿ-ಅಂಶಗಳಿವೆ. ಚಾರಿತ್ರಿಕ ಸಂದರ್ಭ ಗಳನ್ನೂ ಹಿಂದೂಮುಂದಾಗಿಯೂ ನಿರೂಪಿಸಿರುವುದುಂಟು. ಮುಖ್ಯವಾಗಿ, ತನ್ನ ಕೊನೆಯ ಪ್ರಯತ್ನದಲ್ಲಿ ಹೈದರ್ ಚಿತ್ರದುರ್ಗದ ವಿರುದ್ಧ ಸತತವಾಗಿ ಹೋರಾಡಿದುದು ನಾಲ್ಕು ತಿಂಗಳ ಮಟ್ಟಿಗಾದರೂ, ಲಾವಣಿಯಲ್ಲಿ ಇದನ್ನು ಹನ್ನೆರಡು ವರುಷವೆಂದು ತೋರಿಸಲಾಗಿದೆ.

ಇಂಥಾ ವ್ಯತ್ಯಾಸಗಳೇನೇ ಇದ್ದರೂ ಈ ನಿರ್ಣಾಯಕ ಯುದ್ಧಘಟನೆ ಕುರಿತು ನಿರ್ದಿಷ್ಟ ವಿವರ ಒದಗಿಸಲು ಪ್ರಯತ್ನಿ ಸುತ್ತದೆ ಈ ಲಾವಣಿ. ಯುದ್ಧವನ್ನು ನಿರಾಕರಿಸುವ 'ಅರಸ', ಯುದ್ಧೋತ್ಸಾಹವನ್ನು ತೋರಿಸುವ 'ಬಹುದ್ದೂರ್ ಸಿಪಾಯಿ'ಯರ ಸಂದರ್ಭ ಈ ಲಾವಣಿಯಲ್ಲಿ ಮಾರ್ಮಿಕವಾಗಿ ಚಿತ್ರಣಗೊಂಡಿದೆ. ಮೈಸೂರು ಮತ್ತು ಚಿತ್ರದುರ್ಗ ಸೈನ್ಯಗಳ ನಡುವಣ ಹೋರಾಟವು ಯಾವುದೇ ಪಕ್ಷಪಾತವಿಲ್ಲದೆ ಸಮಾನ ಆದ್ಯತೆಯೊಡನೆ ನಿರೂಪಣೆಗೊಂಡಿರುವುದು ಇಲ್ಲಿಯ ವೈಶಿಷ್ಟ್ಯ. ದುರ್ಗದರಸ

ಮದಕರಿನಾಯಕನನ್ನು ಯಾವುದೇ ಸಂಕೋಚವಿಲ್ಲದೆ ಮಲನಾಡವರಿಗೆ ಗಂಡ, ಮೈಸೂರವರ್ ಪಿಂಡ, ಗಂಡುಗಲಿ ಮೋರ್ದಂಡ, ಪಾಳ್ಯಗಾರರಿಗೆ ಮಿಂಡ, ಬಹದ್ದೂರನಿಗೆ ಗಂಡ ಇತ್ಯಾದಿಯಾಗಿ ಕೊಂಡಾಡುವ ಲಾವಣಿಕಾರ, ಮದಕರಿನಾಯಕನಿಗೆ ಇಲ್ಲಿ ವಿಶೇಷ ಆದ್ಯತೆ ನೀಡಿರುವರೆಂಬುದು ಸ್ಪಷ್ಟಪಡುತ್ತದೆ. ಈ ಎಲ್ಲ ಅಂಶಗಳು ಹಿನ್ನೆಲೆಯಲ್ಲಿ, ಚಿತ್ರದುರ್ಗದ ಮಟ್ಟಿಗೆ 'ಚಿತ್ರದುರ್ಗ ಲಡಾಯಿ ಲಾವಣಿ' ಪ್ರಥಮ ಪ್ರಕಟಿತ ಕೃತಿ; ಹಾಗೂ ಯಂ. ವೀರಮುದ್ದಣ್ಣನವರು ಪ್ರಥಮ ಚಾರಿತ್ರಿಕ ಲಾವಣಿಕಾರರೆಂದು ಭಾವಿಸಲಡ್ಡಿಯಿಲ್ಲ.


(ಈ ಲಾವಣಿ ಪುಸ್ತಕವನ್ನು ನೀಡಿದ ಭದ್ರಾವತಿಯ ಸಿ. ಪರಶುರಾಮನಾಯ್ಕ್, ಯಂ. ವೀರಮುದ್ದಣ್ಣನವರ ಭಾವಚಿತ್ರವನ್ನು ಒದಗಿಸಿದ ಬೆಂಗಳೂರಿನ ಎ.ಎನ್. ರುದ್ರಪ್ಪ, ಲಾವಣಿಕಾರರ ಬಗೆಗೆ ವಿಶೇಷ ಮಾಹಿತಿ ಕೊಟ್ಟ ಬೇಗೂರಿನ ಬಿ. ರಾಮಯ್ಯ, ಮಾಯಕೊಂಡದ ಎಸ್.ಕೆ. ಗೋವಿಂದಪ್ಪ, ಚಿತ್ರದುರ್ಗದ ಲಾವಣಿ ಬಸವರಾಜ್ ಹಾಗೂ ಸಹಕರಿಸಿದ ವಿದ್ವಾಂಸ ಎಸ್. ಶಿವಣ್ಣ ಅವರಿಗೆ ಕೃತಜ್ಞನಾಗಿದ್ದೇನೆ.)

★ ★ ★ ★



ಲಾವಣಿಯಿರಲಿ, ಹಾಡಿರಲಿ, ಸ್ತೋತ್ರವಿರಲಿ
ಏಕನಾದದ ಮಿಡಿತವಿರಲಿ
ಏಕನಾದೇಶ್ವರಿಯ ಕಣ್ಣ ಕಾಂತಿಯಲಿ
ಬಿದ್ದವರ, ಅಡಿಯಾದವರ ಇತಿಹಾಸ ಪ್ರತಿಫಲನ
ಆತ್ಮ ವಿಶ್ವಾಸದ ಹರಳು ವರ್ಣವಿಭಜನೆಗೊಂದು ಸಂಚಲನ

ಡಾ. ಎಫ್.ಟಿ. ಹಳ್ಳಿಕೇರಿ*



ಅಯ್ಯಪ್ಪ ಕವಿಯ ಚಿದಾನಂದಾವಧೂತ ಚಾರಿತ್ರ : ಒಂದು ಅಪ್ರಕಟಿತ ಕೃತಿ

ಶರಣ ಸಂತ ಸೂಫಿ ಪಂಥಗಳಂತೆ ಅವಧೂತ ಪರಂಪರೆಯೊಂದು ಕರ್ನಾಟಕದಲ್ಲಿ ಬೆಳೆದು ಬಂದಿದೆ. ಅವಧೂತ ಎಂದರೆ ಸಂಸಾರ ಬಂಧನದಿಂದ ದೂರವಾಗಿ ಆತ್ಮನಲ್ಲಿಯೇ ವಿಹರಿಸುವವನು, ವರ್ಣಾಶ್ರಮಗಳನ್ನು ಮೀರಿದವನು, ಗುರುವಿನ ಮೂಲಕ ಸದ್ಗತಿಯನ್ನು ಹೊಂದುವವನು ಎಂಬಿತ್ಯಾದಿ ಅರ್ಥಗಳಿವೆ. ಈ ಪರಂಪರೆಗೆ ಸಾವಿರ ವರ್ಷಗಳ ಇತಿಹಾಸವಿದ್ದರೂ, ಸಾಹಿತ್ಯದ ಮೂಲಕ ಅದು ಹೆಚ್ಚು ಜನಪ್ರಿಯಗೊಂಡದ್ದು ೧೭ ಮತ್ತು ೧೮ನೆಯ ಶತಮಾನಗಳಲ್ಲಿ. ಮಹಾಲಿಂಗರಂಗ (೧೬೭೫), ನಿರಂಜನಾವಧೂತ (೧೭೦೦), ಚಿದಾನಂದಾವಧೂತ (೧೭೨೫), ಅವಧೂತ ಶಿವಯೋಗಿ (೧೯೫೦), ನಿರಂಜನಾರ್ಯ (೧೭೫೦), ನಿತ್ಯಾನಂದಾವಧೂತ (೧೮೦೦), ಪೂರ್ಣಾನಂದ ಅವಧೂತ ಶಿವಯೋಗಿ - ಇನ್ನೂ ಮೊದಲಾದವರು ತಮ್ಮ ಆಳವಾದ ಚಿಂತನೆ, ತರ್ಕಬದ್ಧವಾದ ಸಿದ್ಧಾಂತಗಳಿಂದ ಆಧ್ಯಾತ್ಮ, ವೇದಾಂತ ವಿಷಯಗಳನ್ನೊಳಗೊಂಡ ವಿಶಿಷ್ಟ ಕೃತಿಗಳನ್ನು ರಚಿಸಿದ್ದಾರೆ. ಆ ಮೂಲಕ ಸಮಾಜದಲ್ಲಿ ಜನಜಾಗೃತಿಯನ್ನುಂಟುಮಾಡುವಲ್ಲಿ ಇದರ ಪಾತ್ರ ನಗಣ್ಯವಾದುದೇನಲ್ಲ.



ಚಿದಾನಂದಾವಧೂತರು ಅವಧೂತ ಪರಂಪರೆಯಲ್ಲಿಯೇ ಅತ್ಯಂತ ಪ್ರಮುಖರೆನಿಸುತ್ತಾರೆ. ಜ್ಞಾನಸಿಂಧು, ದೇವಿ ಮಹಾತ್ಮೆ, ಕಥಾಸಾಗರ, ಚಿದಾನಂದ ಲಹರಿ, ಚಿದಾನಂದ ರಗಳೆ, ತತ್ವ ಚಿಂತಾಮಣಿ ಹೀಗೆ ಹತ್ತಾರು ವೈವಿಧ್ಯಮಯವಾದ ಕೃತಿಗಳು ಇವರಿಂದ ರಚನೆಗೊಂಡಿವೆ. ಅವಧೂತ ಸಾಹಿತ್ಯದ ಸಮೃದ್ಧಿಗೆ ಕಾರಣರಾದ ಚಿದಾನಂದಾವಧೂತರನ್ನು "ಕವಿಗಳಲ್ಲಿ ಅವಧೂತ ಅವಧೂತರಲ್ಲಿ ಕವಿ" ಎಂದೂ ಕರೆಯಬಹುದು. ಅಷ್ಟರ ಮಟ್ಟಿಗೆ ಇವರ ಕೃತಿಗಳು ಸಂಖ್ಯೆ ಮತ್ತು ಸತ್ವದಿಂದ ಅಧಿಕ ಪ್ರಮಾಣದಲ್ಲಿವೆ. ಒಟ್ಟು ಈತನ ಜೀವನ, ವ್ಯಕ್ತಿ ವೈಶಿಷ್ಟ. ಹಾಗೂ ಸಾಧನೆಗಳನ್ನು ತಿಳಿಸಿಕೊಡುವ ಒಂದು ಅಪ್ರಕಟಿತ ದೇಶೀಕಾವ್ಯವಾಗಿದೆ, ಅಯ್ಯಪ್ಪಕವಿಯ ಚಿದಾನಂದಾವಧೂತ ಚಾರಿತ್ರ.[೧]

ಹಸ್ತಪ್ರತಿ ವಿವರ

೧. ಹಂಪಿಯ ಗಾಯತ್ರಿ ಪೀಠದ ಪ್ರತಿ

ಇದು ೮೧/೨x ೬ ೧/೨" ಆಕಾರದ ಆಧುನಿಕ ಕಾಗದ ರೂಪದ ಹಸ್ತ ಪ್ರತಿ. ಅಕ್ಷರಗಳು ದುಂಡಾಗಿದ್ದು, ಕೃತಿ ಸಮಗ್ರವಾಗಿದೆ.

ಆದಿ : ಓಂ ತತ್ಸತ್ ಬ್ರಹ್ಮಣೇ ನಮಃ॥ ಶಕೆ ೧೮೮೨ ಶಾರ್ವರಿ ನಾಮ ಸಂವತ್ಸರ ಶ್ರಾವಣ ಬ॥೫ ಗುರುವಾಸರೆ ಶ್ರೀ ಗುರು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಚಿದಾನಂದ ಅವಧೂತ ರಾಜಯೋಗಿಗಳು ಇವರ ಚಾರಿತ್ರ ಬರೆಯುವುದಕ್ಕೆ ಪ್ರಾರಂಭ ಮಾಡಿದ್ದು ॥ ಶ್ರೀರಸ್ತು ಸಿದ್ಧಿರಸ್ತು ಶುಭಮಸ್ತು ಕಲ್ಯಾಣಮಸ್ತು ಆಯುರಾರೋಗ್ಯ ಐಶ್ವರ್ಯಮಸ್ತು ಸತಿಪುತ್ರ ಪೌತ್ರಾದಿ ಸಕಲ ಸಂಪದ ವೃದ್ಧಿ ರಸ್ತು.। ಬಾಲಲೀಲಾ ಬರೆಯುವುದಕ್ಕೆ ಆರಂಭ॥

* ಪ್ರವಾಚಕರು, ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ - ೫೮೩ ೨೭೬

ಅಂತ್ಯ : ಶಕೆ ೧೮೮೨ ಶರ್ವರಿನಾಮ ಸಂವತ್ಸರ ಆಶ್ವಿನ ಶು|| ೧೦ ವಿಜಯದಶಮಿ ಭಾರ್ಗವಾರ ಸಮಾಪ್ತವಾದುದು. ಇದನ್ನು ಬರೆದವರು ಸರಸ್ವತಿಬಾಯಿ ತಂದೆ ಸಣ್ಣವೀರಪ್ಪ ಕುದುರಿಮೋತಿಯಿವರು. ಇದನ್ನು ಓದುವವರು ಇದರಲ್ಲಿ ಏನಾದರೂ ಹಸ್ತದೋಷಗಳಿದ್ದರೆ ತಮ್ಮ ಪುತ್ರಿ ಎಂದು ಭಾವಿಸಿ ತಿದ್ದಿಕೊಂಡು ಓದಬೇಕೆಂದು ಭಿನ್ನಹಗಳು|| ಸಮಸ್ತ ಗುರುವರ್ಯರ ಸಾಧುಸತ್ಪುರುಷರ ಸದ್ಭಕ್ತರ ಪಾದಕಮಲಂಗಳಿಗೆ ನನ್ನ ಅನೇಕ ದೀರ್ಘದಂಡ ನಮಸ್ಕಾರಗಳು|| ಶ್ರೀ ಗುರು ಚಿದಾನಂದ ಅವಧೂತನ ಕೃಪೆಯಿಂದ ಗ್ರಂಥವು ಸಮಾಪ್ತವಾದುದು|| ಈಗ ಈ ಪ್ರತಿಯು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿದೆ. (ಕ್ರಮಾಂಕ ೨೩೩).

೨. ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ತಲೆಕಟ್ಟು ಗ್ರಾಮದ ಅಂಕಲಿಮಠದ ವೀರಭದ್ರಸ್ವಾಮಿಗಳವರ ಪ್ರತಿ|| ೬"x೮" ಆಕಾರದ ಕಾಗದ ಪ್ರತಿಯಿದ್ದು, ಅಕ್ಷರಗಳು ಸಾಧಾರಣವಾಗಿವೆ. ಕೇವಲ ೯ ಪುಟಗಳಿದ್ದು, ಕೃತಿ ಅಸಮಗ್ರವಾಗಿದೆ.

ಆದಿ ; ಶ್ರೀ ಚಿದಾನಂದ ಸದ್ಗುರುವೇ ನಮಃ। ಚಿದಾನಂದ ಅವಧೂತ ಚರಿತೆ ಬರೆಯುವುದಕ್ಕೆ ಶುಭಮಸ್ತು। ಶುಭಮಸ್ತು। ಕೇಳಿ ಜನ ಸರ್ವವೆಲ್ಲ ಚಿದಾನಂದ ಅವಧೂತ ಬಾಲಯೋಗಿ ರಾಜಯೋಗಿ ಚರಿತವಾ || ಪಲ್ಲವಿ||

ಅಂತ್ಯ : ಆತ ಬೆಳದು ಸಿದ್ಧರೊಳು ಖ್ಯಾತನಾಗಿ ಬ್ಯಾರೆಯಾಶ್ರ ಮಾತಗೇಯು ಕಪಿಲ ಮಾಡಿರೇ ಕೇಳಿಜನಾ ದಾತನಾಗಿ ಸರ್ವ ತಪದಿ ಮಾತನೆನಿಸಿಕೊಳುತ ಮುನಿಜನಾತಿಶಯದೊಳಿರ್ದ ಹರುಷದೀ ಕೇಳಿ ಜನ|| ೧೨೩||

(ಈ ಪ್ರತಿಯು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿದೆ. ಕ್ರಮಾಂಕ ೪೫೭.೧)

ಮೇಲಿನ ಪುಷ್ಪಿಕೆಗಳಿಂದ ತಿಳಿದುಬರುವುದೇನೆಂದರೆ ಈಗಿನ ಕೊಪ್ಪಳ ಜಿಲ್ಲೆಯಲಬುರ್ಗಾ ತಾಲ್ಲೂಕಿನ ಕುದರಿಮೋತಿ ಗ್ರಾಮದ ಸಣ್ಣವೀರಪ್ಪನವರ ಮಗಳಾದ ಸರಸ್ವತಿಬಾಯಿ ೧೯೬೦ರಲ್ಲಿ ಚಿದಾನಂದಾವಧೂತ ಚಾರಿತ್ರವನ್ನು ಲಿಪ್ಯಂತರಗೈದಿದ್ದಾಳೆ. ಕೇವಲ ೪೨ ವರ್ಷಗಳ ಹಿಂದೆ ಮಹಿಳೆಯೊಬ್ಬಳಿಂದ ಸಿದ್ಧಗೊಂಡಿರುವುದೊಂದು ಈ ಹಸ್ತಪ್ರತಿಯ ವಿಶೇಷವಾಗಿದೆ.

ಕೃತಿ ಸ್ವರೂಪ

೭ ಸಂಧಿ, ೯೭೨ ಸಾಂಗತ್ಯ ಪದ್ಯಗಳನ್ನೊಳಗೊಂಡ ದೀರ್ಘಕಾವ್ಯವಾಗಿದ್ದು, ಅವುಗಳ ವಿವರ ಇಂತಿದೆ :

ಸಂಧಿ	ವಿಷಯ	ಪದಸಂಖ್ಯೆ
೧.	ಬಾಲ್ಯವಿವರ	೧೪೫
೨.	ಕ್ಷೇತ್ರಸಂಚಾರ	೧೩೬
೩.	ಸದ್ಗುರು ಕಟಾಕ್ಷ	೧೦೯
೪.	ಹಠಯೋಗ	೭೪
೫.	ರಾಜಯೋಗ	೧೧೨
೬.	ಕಾಶೀಯಾತ್ರೆ	೧೮೦
೭.	ಚಿದಾನಂದ ಅವಧೂತರ ಚರಿತ್ರೆ	೨೧೫

ಹೀಗೆ ಏಳು ಸಂಧಿಗಳಲ್ಲಿ ಚಿದಾನಂದಾವಧೂತರ ಜೀವನ ಪಥವನ್ನು ಸವಿವರವಾಗಿ ಕವಿ ನಿರೂಪಿಸಿದ್ದಾನೆ. ಪ್ರತಿ ಸಂಧಿಯ ಆರಂಭದಲ್ಲಿ ರಾಗತಾಳಗಳ ನಿರ್ದೇಶನವಿದ್ದು, ತಮ್ಮಿಚ್ಚೆ ರಾಗ, ರೂಪಕ ತಾಳಗಳನ್ನು ಮಾತ್ರ ಎಲ್ಲ ಸಂಧಿಗಳಿಗೂ ಬಳಸಲಾಗಿದೆ. ನಂತರದಲ್ಲಿ

ಕೇಳಿಜನ ಸರ್ವವೆಲ್ಲ ಚಿದಾನಂದ ಅವಧೂತ
ಲೋಲರಾಜಯೋಗಿ ಚರಿತವಾ||

ಎಂಬ ಪಲ್ಲವಿ ಬರುತ್ತದೆ. ಇದು ಪ್ರತಿಸಂಧಿಯ ಆರಂಭದಲ್ಲಿಯೂ ಪುನರಾವರ್ತನೆಗೊಳ್ಳುತ್ತದೆ. ಸಂಧಿಗಳ ಕೊನೆಯಲ್ಲಿ "ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಚಿದಾನಂದಾವಧೂತ ಸದ್ಗುರುವರ್ಯ ಚರಣ ಪದ್ಮದ್ವಿರೇಫ ಅಯ್ಯಪ್ಪ ವಿರಚಿತ ಚಿದಾನಂದ ಅವಧೂತ ಚಾರಿತ್ರದಲ್ಲಿ...." ಎಂದು ಕವಿ ಹೇಳಿಕೊಂಡಿದ್ದಾನೆ. ಪ್ರತಿ ಪದ್ಯವೂ ನಾಲ್ಕು ಪಾದಗಳನ್ನೊಳಗೊಂಡಿದೆ. ಎರಡು ಮತ್ತು ನಾಲ್ಕನೆಯ ಪಾದಗಳ ಕೊನೆಯಲ್ಲಿ "ಕೇಳಿ ಜನ" ಎಂಬುದು ಪುನರಾವರ್ತನೆ ಯಾಗುತ್ತದೆ. ಸಂಧಿಗಳ ಕೊನೆಗೆ ಅಂಬಾದೇವಿ ಶಾಂಭವಿ ಕುರಿತ ಸ್ತುತಿರೂಪವಾದ ಮಂಗಳಾರತಿ ಪದಗಳಿವೆ.

ಕವಿಯ ಇತಿವೃತ್ತ

ಚಿದಾನಂದಾವಧೂತ ಚಾರಿತ್ರದ ಕರ್ತೃ ಅಯ್ಯಪ್ಪ. ಈತ ತನ್ನ ವೈಯಕ್ತಿಕ ವಿವರಗಳನ್ನು ಕೆಲವೇ ಮಾತುಗಳಲ್ಲಿ ಹೇಳಿರುವನು

ಹಿರಿಯಹಟ್ಟಿ ಕುಲಕರಣಿ ರುಗ್ವೇದಿ ಅತ್ರಿಋಷಿಯ
ರಿರುವ ಶಾಂಡಲ್ಯ ಗೋತ್ರದ
ಪರಮ ತಿಳವಿಕುಳ್ಳ ಪೊಂಪಣ್ಣನುದರದಲ್ಲಿ
ಉದ್ಭವಿಸಿದಯ್ಯಪ್ಪನು|| (೧-೧೧)

ಒಂದೇ ಪದ್ಯದಲ್ಲಿ ತನ್ನ ಇತಿವೃತ್ತವನ್ನು ಹೇಳಿ ಮುಗಿಸುತ್ತಾನೆ ಕವಿ. ಕರ್ನಾಟಕಾಂಧ್ರ (ಬಳ್ಳಾರಿ ಜಿಲ್ಲಾ ಶಿರಗುಪ್ಪ ತಾಲ್ಲೂಕು) ಗಡಿಭಾಗದ ಆದವಾನಿ ಸಮೀಪವಿರುವ ಹಿರಿಯಹಟ್ಟಿ ಕವಿಯ ಊರು. ಅಲ್ಲಿರುವ ಕುಲಕರ್ಣಿ ಪೊಂಪಣ್ಣ ಈತನ ತಂದೆ. ಸಾಧು ಸರ್ವರ ತನಯ (೭-೧), ಸುಶೀಲ (೩-೧೦೮), ⁻ಠಳ ಅಯ್ಯಪ್ಪ (೪-೨) ಎಂದು ಕವಿ ತನ್ನನ್ನು ಕರದುಕೊಂಡಿದ್ದನ್ನು ಬಿಟ್ಟರೆ ಮತ್ತಾವುದೇ ವಿಷಯವನ್ನು ಹೇಳಿಲ್ಲ.

ಗುಣಹೀನರಾದವರಿಗೆ, ಗುರುಪಾದ ದೂರರಿಗೆ, ಪತ್ನಿಯನ್ನು ಬಡಿಯುವವನಿಗೆ, ಕೊಟ್ಟ ಗಂಟು ನುಂಗುವವರಿಗೆ, ಸತಿಗೆ ಅಜ್ಞೆ

ಮಾಡಿವವನಿಗೆ, ಸರ್ವರನ್ನು ಬೊಗಳುತಿಹ ಚ್ಯುತನಿಗೆ, ಜುಟ್ಟು ಜನಿವಾರ ಘಳಿಗೆ ಘಳಿಗೆಗೊಮ್ಮೆ ಹರಿದುಕೊಂಬುವವನಿಗೆ ಸತ್ಯ ಚರಿತೆಯಾದ ಚಿದಾನಂದಾವಧೂತ ಚಾರಿತ್ರವ ಹೇಳಲಾಗದು ಎಂದು ಹೇಳುವಲ್ಲಿ ಕವಿಯ ನಿಷ್ಠುರ ಸ್ವಭಾವವನ್ನು ಅರಿತುಕೊಳ್ಳ ಬಹುದು.

ಕಥಾಸಾರ.

ಅವಧೂತನಾಗಿ ಹುಟ್ಟಿ ಅವಧೂತನಾಗಿ ಬೆಳೆದು ಅವಧೂತನಾಗಿಯೇ ಸತ್ತ ಚಿದಾನಂದಾವಧೂತರನ್ನು ಕುರಿತು ಹುಟ್ಟಿರುವ ಏಕೈಕ ಕೃತಿಯಿದು. ಕವಿ ಅಯ್ಯಪ್ಪನು ಚಿದಾನಂದಾ ವಧೂತರ ಶಿಷ್ಯ ಬಳಗದಲ್ಲಿದ್ದವನು. ಈ ಕಾರಣವಾಗಿ ಈ ಚರಿತ್ರೆಗೊಂದು ಪರಿಪೂರ್ಣತೆ ಪ್ರಾಪ್ತವಾಗಿದೆ. ಏಳು ಹಂತಗಳಲ್ಲಿ ನಿರೂಪಗೊಂಡ ಇವರ ಜೀವನಕ್ರಮ ಹೀಗಿದೆ :

ಸಂಧಿ : ೧ ಬಾಲ್ಯವಿವರ : ಆದವಾನಿ ಸಮೀಪವಿರುವ ಹಿರಿಯ ಹರಿವಾಣ ಗ್ರಾಮದಲ್ಲಿ ಲಕ್ಷ್ಮಿಪತಿ ಮತ್ತು ಅನ್ನಮ್ಮ ದಂಪತಿಗಳಿದ್ದರು. ಶ್ರೀ ನರಸಿಂಹನ ಪರಮಭಕ್ತರಾದ ಇವರಿಗೆ ಗಂಡು ಮಗುವು ಜನಿಸಿತು. ಆತನ ಹೆಸರು ಝುಂಕಪ್ಪ. ತಂದೆ-ತಾಯಿಗಳ ಪ್ರೀತಿ ವಾತ್ಸಲ್ಯದಿಂದ ಬೆಳೆದ ಈತ ನಾಲ್ಕೆ ವರ್ಷಗಳಲ್ಲಿ ವೇದ, ಉಪನಿಷತ್ತು, ಮಂತ್ರಗಳನ್ನು ಅಣ್ಣ ನರಸಪ್ಪನಿಂದ ಕಲಿತುಕೊಂಡನು. ಮುಂದೆ ಕೆಲವು ತಿಂಗಳುಗಳ ತರುವಾಯ ಲಕ್ಷ್ಮಿಪತಿಯ ಅಣ್ಣತಮ್ಮಂದಿರು ಆಸ್ತಿಯನ್ನು ಪಾಲುಮಾಡಿಕೊಂಡು ಪ್ರತ್ಯೇಕವಾಗಿ ವಾಸಮಾಡಹತ್ತಿದರು. ಇದರಿಂದ ತೊಂದರೆಗೊಳಗಾದ ಲಕ್ಷ್ಮಿಪತಿ ತನ್ನ ಹೆಂಡತಿ ಮಕ್ಕಳೊಂದಿಗೆ ಉಪಜೀವನಕ್ಕಾಗಿ ಗಂಗಾವತಿ ಸಮೀಪದ ಹೆಬ್ಬಾಳ ಗ್ರಾಮಕ್ಕೆ ಬಂದು ನೆಲಸುತ್ತಾರೆ.

ತಂದೆ ತಾಯಿಗಳು ತೀರಿಕೊಂಡ ನಂತರ ಗಂಗಾವತಿಯ ಪದಕಿ ಪಾರುಪತ್ಯಗಾರ ಮನೆತನದ ನಾಗಪ್ಪನ ಮಗಳಾದ ಪಂಪಕ್ಕನ ಆಶ್ರಯದಲ್ಲಿ ಝುಂಕಪ್ಪ ಬೆಳೆಯತೊಡಗುತ್ತಾನೆ. ಒಂದು ದಿನ ತುಂಗಭದ್ರಾ ನದಿಗೆ ಸ್ನಾನಕ್ಕೆಂದು ಹೋದಾಗ ಶ್ರೀದೇವಿಯ ಪಂಪಕ್ಕನ ರೂಪದಲ್ಲಿ ಬಂದು "ನೀನು ಇನ್ನು ಹೆಚ್ಚು ವೇಳೆಗಳೆಯದೆ ಅಯೋಧ್ಯೆಯ್ಯಲ್ಲಿರುವ ಮಹಾಜ್ಞಾನಿ ಸದ್ಗುರು ಕೊಂಡಪ್ಪನಿಂದ ಮುಕ್ತಿಯನ್ನು ಪಡೆ'' ಎಂದು ಉಪದೇಶವಿತ್ತಳು. ಆಕೆಯ ಅಜ್ಞಾನುಸಾರ ಝುಂಕಪ್ಪನು ಅಯೋಧ್ಯೆಗೆ ಬಂದನು. ಗುರು ಕೊಂಡಪ್ಪನು "ನಿನ್ನ ಸುದೈವದ ಮೇಲೆ ಜ್ಞಾನೋದಯದ ಅವಲಂಬನವಿದೆ. ಧರ್ಮವು ಜೀವನದಲ್ಲಿ ಬರೆಯದೆ ಜೀವನವು ಸುಂದರವಾಗುವಂತಿಲ್ಲ" ಎಂದು ಬೋಧಿಸಿದನು. ಸದ್ಗುರುವಿನ ಅಪೇಕ್ಷೆಯಂತೆ ಝುಂಕಪ್ಪನು ನಯವಿನಯ, ಭಯ -ಭಕ್ತಿ, ಶ್ರದ್ಧೆ-ನಿಷ್ಠೆಗಳಿಂದ ಗುರು ಸೇವೆಯಲ್ಲಿ ಕಾರ್ಯತತ್ಪರನಾದನು.

ಸಂಧಿ : ೨ ಕ್ಷೇತ್ರ ಸಂಚಾರ : ಝುಂಕಪ್ಪನ ಗುರುಸೇವಾ ಮನೋಭಾವದ ಕಾರ್ಯವೈಖರಿಯನ್ನು ಗಮನಿಸಿದ ಕೊಂಡಪ್ಪನು ಈತನನ್ನು 'ಚಿದಾನಂದ'ನೆಂದು ಕರೆದನು. ಗುರುವಿನ ಮಾತಿನಂತೆ ಎಲ್ಲ ಭಕ್ತಾದಿಗಳು ಅದೇ ಹೆಸರಿನಿಂದ ಕರೆಯಹತ್ತಿದರು. ಒಂದು ದಿನ "ಮಗೂ, ಚಿದಾನಂದ, ಇನ್ನು ಮೇಲೆ ನೀನು ಕೇವಲ ನನ್ನ ಹತ್ತಿರವಿದ್ದುಕೊಂಡು ಕಾಲಹರಣ ಮಾಡುವುದಕ್ಕಿಂತ ಪುಣ್ಯ ಕ್ಷೇತ್ರಗಳಿಗೆ ಹೋಗಿ ಬಾ" ಎಂದು ಗುರು ಆದೇಶವಿತ್ತನು. ಅದರನ್ವಯ ಚಿದಾನಂದರು ಅಯೋಧ್ಯೆಯಿಂದ ಕ್ಷೇತ್ರ ಸಂಚಾರವನ್ನು ಕೈಗೊಂಡರು.

ಆಲಂಪುರಿಯ ಜೋಗಳಾಂಬ, ಶ್ರೀಶೈಲ ಪರ್ವತದ ಮಲ್ಲಿಕಾರ್ಜುನ, ಅಹೋಬಲದ ನಾರಸಿಂಹ, ವೇಮುಲವಾಡದ ರಾಜೇಶ್ವರಿ, ರಾಚೋಟಿಯ ವೀರಭದ್ರೇಶ್ವರ, ತಿರುಪತಿಯ ವೆಂಕಟೇಶ್ವರ, ಕಂಚಿಯ ಕಾಮಾಕ್ಷಿ, ಮಧುರೆ ಮೀನಾಕ್ಷಿ, ತಿರುಚನಾಪಳ್ಳಿಯ ರಂಗನಾಯಕ, ಉಡುಪಿಯ ಶ್ರೀ ಕೃಷ್ಣ, ಕೋಟೇಶ್ವರ, ಗೋಕರ್ಣ, ಕೊಲ್ಲಾಪುರದ ಮಹಾಲಕ್ಷ್ಮಿ, ಮೈಲಾರ, ಕಾಶಿ, ಹರಿದ್ವಾರ, ಕೇದಾರ, ಶೃಂಗೇರಿ ಶಾರದೆ ಹೀಗೆ ಹತ್ತು ಹಲವು ತೀರ್ಥಕ್ಷೇತ್ರ, ಪುಣ್ಯಕ್ಷೇತ್ರಗಳಿಗೆ ದರ್ಶನವಿತ್ತು ಪಂಪಾಕ್ಷೇತ್ರಕ್ಕೆ ಬರುತ್ತಾರೆ. ಸರ್ವಕ್ಷೇತ್ರಗಳ ದರ್ಶನ ಮಹಿಮೆಗಳನ್ನು ಸವಿಸ್ತಾರವಾಗಿ ಗುರು ಕೊಂಡಪ್ಪನಿಗೆ ಚಿದಾನಂದರು ವಿವರಿಸಿ ಹೇಳುತ್ತಾರೆ.

ಸಂಧಿ : ೩ ಸದ್ಗುರು ಕಟಾಕ್ಷ : ಪಂಪಾಕ್ಷೇತ್ರದಿಂದ ಗುರುವಿನೊಂದಿಗೆ ಅಯೋಧ್ಯಾನಗರಕ್ಕೆ ಬಂದಾಗ ಭಕ್ತಾದಿಗಳೆಲ್ಲ ಇವರನ್ನು ಗೌರವಪೂರ್ವಕವಾಗಿ ಸ್ವಾಗತಿಸಿದರು. ಸುಕ್ಷೇತ್ರಗಳ ಮಹಿಮೆ, ಅಲ್ಲಿ ನಡೆದ ಆಶ್ಚರ್ಯಕರ ಘಟನೆಗಳನ್ನು ಸಮಾಧಾನ ದಿಂದ ಭಕ್ತಾದಿಗಳಿಗೆಲ್ಲ ತಿಳಿ ಹೇಳುವರು. ಎಲ್ಲ ಕ್ಷೇತ್ರಗಳಿಗಿಂತ ವಾಲುಗೊಂಡದ ಕ್ಷೇತ್ರವು ಅತ್ಯಂತ ಆಕರ್ಷಕವಾಗಿತ್ತು. ಅಲ್ಲಿರುವ ವೀರಮ್ಮ ಎಂಬ ಗುರುಭಕ್ತಳ ಅಚಲವಾದ ಶ್ರದ್ಧೆ, ಸದಾಚಾರಗಳು ಆ ಕ್ಷೇತ್ರದ ಕುರುಹುಗಳಂತಿದ್ದವು. ವೀರಮ್ಮನಂತೆ ಚಿದಾನಂದರು ಶ್ರೀ ಗುರುವಿನಲ್ಲಿ ವಿಶ್ವಾಸವಿಟ್ಟು, ಅಯೋಧ್ಯೆಯ ವಿರೂಪಾಕ್ಷೇಶ್ವರನ ದೇವಸ್ಥಾನದಲ್ಲಿ ಭಜನೆ, ಕೀರ್ತನೆ, ಶಾಸ್ತ್ರಗಳನ್ನು ಹೇಳುತ್ತಿದ್ದರು.

ಪುಟ್ಟಪ್ಪನೆಂಬ ವೈಶ್ಯನಿಂದ ಸಾಲ ಪಡೆದ ಘಟನೆ, ಕನಕಗಿರಿ ಪ್ರಾಂತದ ದಂಡನಾಯಕ ಜೋಗಿಯ ಅಯೋಧ್ಯಾ ನಗರದ ಮುತ್ತಿಗೆ, ಪಂಪಾಕ್ಷೇತ್ರದಲ್ಲಿ ಘಟಸರ್ಪದ ಮಹಿಮೆ, ಅಭ್ಯಂಗ ಸ್ನಾನಕ್ಕೆ ಬೇಕಾದ ತುಪ್ಪದ ಹುಡುಕಾಟ, ಅಂಜನಾದ್ರಿಯಲ್ಲಿ ಹೆಬ್ಬುಲಿಯ ಭೇಟಿ, ಸದ್ಗುರುವಿನ ಹಿತೋಪದೇಶ ಮುಂತಾದ ಸನ್ನಿವೇಶಗಳು ಚಿದಾನಂದರ ಶ್ರದ್ಧೆ, ನಿಷ್ಠೆ, ಅಚಲವಾದ ಭಕ್ತಿಯನ್ನು ಪರೀಕ್ಷಿಸುವಂತಿದೆ.

ಸಂಧಿ: ೪ಹಠಯೋಗ : ಅಯೋಧ್ಯೆ ಗ್ರಾಮದ ನದಿ ದಂಡೆಯಲ್ಲಿರುವ ಅಶ್ವತ್ಥ ವೃಕ್ಷದ ಕಟ್ಟೆಯು ಯೋಗಾಭ್ಯಾಸಕ್ಕೆ ತುಂಬ ಪ್ರಶಸ್ತವಾದ ಸ್ಥಳ. ಅಲ್ಲಿ ಚಿದಾನಂದರು ಹಠಯೋಗದಲ್ಲಿ ನಿರತರಾದರು. ಪ್ರಾಣಾಯಾಮ ಮಾಡುವಾಗ ಪೂರಕ, ಕುಂಭಕ, ರೇಚಕಗಳ ವಿಧಾನದಲ್ಲಿ ಮನಸ್ಸು ಮತ್ತು ಪ್ರಾಣವಾಯುಗಳನ್ನು ತಡೆದು ನಿಲ್ಲಿಸಿ, ಆಧಾರಚಕ್ರದವರೆಗೆ ಶ್ವಾಸವನ್ನೇರಿಸಿ ತಾನು ಬ್ರಹ್ಮ ಸ್ವರೂಪಿಯಾಗಿ 'ಹ' ಎಂಬ ಸೂರ್ಯಸ್ವರ ಹಾಗೂ 'ಠ' ಎಂಬ ಚಂದ್ರಸ್ವರಗಳಿಂದ ಯೋಗಸಾಧನೆಯನ್ನು ಮಾಡುವುದೇ ಹಠಯೋಗ. ಈ ಯೋಗವು ಭ್ರಷ್ಟಾಚಾರಿಗಳಿಗೆ, ಅಜ್ಞಾನಿಗಳಿಗೆ, ನೀಚರಿಗೆ, ತಲೆತಿರುಕರಿಗೆ, ಗುರುದ್ರೋಹಿಗಳಿಗೆ, ನಾಸ್ತಿಕರಿಗೆ, ಹರಗುರು ನಿಂದಕರಿಗೆ ಪ್ರಾಪ್ತವಾಗುವುದಿಲ್ಲ. ಕೇವಲ ಒಂದೇ ವರ್ಷದಲ್ಲಿ ಹಠಯೋಗವನ್ನು ಸಾಧಿಸಿ, ಗುರುವಿನ ಪ್ರೀತಿಗೆ ಪಾತ್ರರಾಗುತ್ತಾರೆ ಚಿದಾನಂದರು.

ಸಂಧಿ : ೫ ರಾಜಯೋಗ : ರಾಜಯೋಗವೆಂದರೆ ಯೋಗ ಸಾಧಕನು ಎದುರಿಗೆ ಒಂದು ಕಪ್ಪು ಅಥವಾ ಕಪ್ಪು ಮಿಶ್ರಿತ ನೀಲಿ ಬಣ್ಣದ ಶೂನ್ಯವನ್ನಿಟ್ಟುಕೊಂಡು ಅದರಲ್ಲಿ ತನ್ನ ದೃಷ್ಟಿಯನ್ನು ನಿಲ್ಲಿಸಿ, ಹೃದಯ ಮಧ್ಯದಲ್ಲಿ ಇಷ್ಟದೇವತೆಯ ಸ್ಮರಣೆಯನ್ನು ಮಾಡಿ ಒಳ್ಳೆಯ ದೃಢ ವಿಶ್ವಾಸದಿಂದ ಸಾಗಿಸಿದರೆ, ಕಾಲಾವಕಾಶದಲ್ಲಿ ಆ ಚಿಚ್ಛಕ್ತಿಯ ಕೃಪೆಯಿಂದ ಮುಮುಕ್ಷುವಿನ ಮನಸ್ಸು ನಿರ್ಮಲವಾಗಿ ಯೋಗ ಸಾಧನೆಯಲ್ಲಿ ವಿಜಯಹೊಂದಿ ಮೋಕ್ಷ ಪ್ರಾಪ್ತಿಯಾಗುವುದು. ಇಂಥ ರಾಜಯೋಗವನ್ನು ಹಠಯೋಗದ ನಂತರವೇ ಸಾಧಿಸಬೇಕು. ಈ ಸಾಧನೆಗಾಗಿಯೇ ಚಿದಾನಂದರು ಕಂಪ್ಲಿ ಗ್ರಾಮದ ಹೊರವಲಯದ ಕಾಲುವೆ ದಂಡೆಯ ಮೇಲಿನ ರೇವಣ್ಣನ ಕಟ್ಟೆಯ ಮೇಲಿನ ಶ್ರೀ ಶಂಭು ಮಹಾದೇವನ ದೇವಾಲಯವನ್ನು ಆರಿಸಿಕೊಳ್ಳುತ್ತಾರೆ.

ರಾಜಯೋಗವನ್ನು ಸಾಧಿಸಿ ಮರಳಿ ಗುರುವಿನ ಬಳಿ ಬಂದಾಗ, ಗುರುಗಳೂ ಸೇರಿದಂತೆ ಮನೆಯವರೆಲ್ಲ ಚಿದಾನಂದರಿಗೆ ಮದುವೆ ಮಾಡಬೇಕೆಂದು ಯೋಚಿಸುತ್ತಾರೆ. ಆದರೆ ಅವರು ಮದುವೆಯಾಗಲು ಒಪ್ಪುವುದಿಲ್ಲ. ತುಂಬ ಒತ್ತಾಯ ಮಾಡಿದಾಗ ಗುರುವಿನ ಮುಂದೆಯೇ ಎಲ್ಲರಿಗೂ "ಭಕ್ತಿಯೇ ತಾಯಿ, ಜ್ಞಾನವೇ ತಂದೆ, ಸತ್ಯವೇ ಸತಿ, ಬುದ್ಧಿಯೇ ಅಣ್ಣ, ಶಾಂತಿಯೇ ಮಗಳು" ಎಂದು ತಿಳಿ ಹೇಳುತ್ತಾರೆ. ಆದರೂ ಮದುವೆ ಮಾಡುತ್ತೇವೆಂದು ಮತ್ತೆ ಹಠ ಹಿಡಿದಾಗ ಊರನ್ನೇ ಬಿಟ್ಟು ಹೊರಟು ಕಾಶಿಯತ್ತ ಹೋಗುತ್ತಾರೆ.

ಸಂಧಿ :೬ ಕಾಶಿಯಾತ್ರೆ : ಚಿದಾನಂದರು ಬಳಗಾನೂರು, ಕೂಡ್ಲೂರು, ಶಿವಪೇಟೆ, ಯದುಲಾಪುರ, ಚಾಂದಪಟ್ಟಣ, ಮಡಲಾ ಮಾರ್ಗವಾಗಿ ಕಾಶಿಯತ್ತ ಪ್ರಯಾಣ ಬೆಳೆಸಿದರು. ಪ್ರತಿಯೊಂದು ಊರಿನಲ್ಲಿ ಭಕ್ತಾದಿಗಳಿಂದ ಸತ್ಕಾರಗೊಂಡು, ಉಪದೇಶಗೈಯ್ಯುತ್ತ ಜನಜಾಗೃತಿಯನ್ನು ಮಾಡುವುದನ್ನು ಕವಿ ಅತ್ಯಂತ ಮನಮೋಹಕವಾಗಿ ಚಿತ್ರಿಸಿದ್ದಾನೆ. ಯಾವ ಕರ್ಮವು ಬ್ರಹ್ಮ ಸ್ವರೂಪವನ್ನು ವ್ಯಕ್ತ ಮಾಡುವುದೋ ಅದೇ ಸತ್ಕರ್ಮ; ಈ ಪ್ರಪಂಚವನ್ನೇ ಬ್ರಹ್ಮರೂಪವನ್ನಾಗಿ ಮಾಡುವ ಕರ್ಮವು, ಎಂದು ಇತ್ಯಾದಿಯಾಗಿ ಉಪದೇಶಿಸುತ್ತ ಕಾಶಿಗೆ ಬಂದು ಅಲ್ಲಿಯ ವಿಶ್ವೇಶ್ವರತೀರ್ಥ ಗುರುಗಳ ಆಶೀರ್ವಾದ ಪಡೆದರು.

ಸಂಧಿ : ೭ ಚಿದಾನಂದ ಅವಧೂತರ ಚರಿತ್ರೆ : ಕಾಶಿ ಕ್ಷೇತ್ರದಿಂದ ಮರಳಿ ನೇರವಾಗಿ ಕಂಪಲಿ ಗ್ರಾಮಕ್ಕೆ ಬಂದ ಇವರನ್ನು ಭಕ್ತಾದಿಗಳು "ಚಿದಾನಂದರು ಅವಧೂತರಾಗಿ, ಸಿದ್ಧಪುರುಷರಾಗಿ ಬಂದಿರುವರು. ನಮ್ಮನ್ನು ಸ್ಮರಿಸಿಕೊಂಡು ಬಂದುದನ್ನು ನೋಡಿದರೆ ನಾವೇ ಧನ್ಯರು" ಎನ್ನುತ್ತಾ ಹೃದಯಂಗಮವಾಗಿ ಭಕ್ತಿ-ಭಾವಗಳಿಂದ ಅವರನ್ನು ಬರಮಾಡಿಕೊಂಡರು. ಕೆಲವೇ ದಿನಗಳಲ್ಲಿ ಜ್ಞಾನಸಿಂಧು ಎಂಬ ಆಧ್ಯಾತ್ಮ ಕೃತಿಯನ್ನು ಭಕ್ತಾದಿಗಳ ಅಪೇಕ್ಷೆಯ ಮೇರೆಗೆ ರಚಿಸಿದರು. ನಂತರ ಕಂಪಲಿಯಿಂದ ಉಳಿಯನೂರಿನ ಹೊಳೆಯ ದಂಡೆಯ ಮೇಲಿರುವ ಅರಳಿಯ ಗಿಡದ ಕಟ್ಟೆಯ ಮೇಲೆ ಕುಳಿತುಕೊಂಡು ಯೋಗಾಭ್ಯಾಸದಲ್ಲಿ ನಿರತರಾದರು.

ಉಳಿಯನೂರಿನಿಂದ ನೇರವಾಗಿ ಸಿದ್ಧಗಿರಿಗೆ ಬಂದ ಚಿದಾನಂದಾವಧೂತರು ಅಂಬಾದೇವಿಯ ಸನ್ನಿಧಿಯಲ್ಲಿ ದೇವಿ ಮಹಾತ್ಮೆ, ಚಿದಾನಂದ ಲಹರಿ, ಬಗಳಾಂಬ ಶತಕ, ಆಧ್ಯಾತ್ಮ ಶತಕ, ಕಥಾಸಾಗರ ಮುಂತಾದ ವೇದಾಂತ ವಿಷಯಗಳನ್ನೊಳಗೊಂಡ ಕೃತಿಗಳನ್ನು ರಚಿಸಿದರು. ಮುಂದೆ ಬಗಳ ಚಕ್ರದಲ್ಲಿ ಐಕ್ಯವಾದರು. ಇದನ್ನು ಓದಿದವರಿಗೆ, ಕೇಳಿದವರಿಗೆ ಮಂಗಳಮಯವು. ಇದು ಚಿದಾನಂದಾವಧೂತ ಚಾರಿತ್ರದ ಸ್ಥೂಲವಾದ ಕಥಾಸಾರ.

ಕೃತಿ ವಿಶೇಷತೆ

೧. ಚಿದಾನಂದಾವಧೂತರ ಜೀವನ, ಸಾಧನೆಗಳನ್ನು ವಿವರವಾಗಿ ತಿಳಿಸಿಕೊಡುವ ಏಕೈಕ ಕೃತಿ ಇದಾಗಿದೆ.

೨. ಚಿದಾನಂದಾವಧೂತರು ಕಂಪ್ಲಿಯ ಮಠದೊಳಗೆ ಮೌಖಿಕವಾಗಿ ಹೇಳುತ್ತಿದ್ದ ನೂರು ಕೀರ್ತನೆಗಳು, ಜ್ಞಾನಸಿಂಧು ಮೊದಲಾದ ಕೃತಿಗಳನ್ನು ಪದಕಿ ತಿರುಕಪ್ಪ ಎಂಬ ಹತ್ತು ವರ್ಷದ ಬಾಲಕ ಬರೆದುಕೊಳ್ಳುತ್ತಿದ್ದ ಸಂಗತಿಯನ್ನು ಕೃತಿ ಹೇಳುತ್ತದೆ.

೩. ಐತಿಹಾಸಿಕವಾಗಿಯೂ ಈ ಕೃತಿ ಕೆಲವು ಸಂಗತಿಗಳತ್ತ ಗಮನವನ್ನು ಸೆಳೆಯುತ್ತದೆ. ಉದಾ ; ಆನೆಗೊಂದಿ ಸುಬೇದಾರ ಅಣ್ಣಪ್ಪ, ಕಾರಭಾರಿ ಪೊಂಪಕ್ಕ, ಕನಕಗಿರಿಯ ಜೋಗಿ, ಪ್ರಧಾನಿ ವೆಂಕಟಾಜಿ, ಅರಸು ಸುಬ್ಬ.

೪. ಚಿದಾನಂದಾವಧೂತರು ತಮ್ಮ ಜೀವಿತದ ಬಹು ಭಾಗವನ್ನು ಕಳೆದದ್ದು ಅಯೋಧ್ಯೆ ಗ್ರಾಮದಲ್ಲಿ. ಆರ್. ನರಸಿಂಹಾಚಾರರು "ಅಯೋಧ್ಯೆ ಆವ ಊರಿಗೆ ಅನ್ವಯಿಸುತ್ತದೆಯೋ ತಿಳಿಯಲಿಲ್ಲ. ಶೃಂಗೇರಿ ಎಂದೂ ಕೆಲವರು ಊಹಿಸುತ್ತಾರೆ"[೨] ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ಗ್ರಾಮ ಕಂಪ್ಲಿ-ಗಂಗಾವತಿ ರಸ್ತೆಯಲ್ಲಿ ಬರುವ ಚಿಕ್ಕಜಂತಕಲ್ ಊರಿನಿಂದ ನಾಲ್ಕು ಕಿ.ಮೀಗಳ ಅಂತರದಲ್ಲಿ ತುಂಗಭದ್ರಾ ನದಿ ದಂಡೆಯ ಮೇಲಿದೆ. ಇದಕ್ಕೆ ಚಿದಾನಂದಾವಧೂತ ಚಾರಿತ್ರದಲ್ಲಿ ಸ್ಪಷ್ಟವಾದ ಉಲ್ಲೇಖಗಳಿವೆ. ಇದರಲ್ಲಿ ಬರುವ ಹೆಬ್ಬಾಳು ಅಯೋಧ್ಯೆ ಆನೆಗೊಂದಿ ಕಂಪ್ಲಿ, ಕನಕಗಿರಿ ಮುಂತಾದ ಗ್ರಾಮಗಳು ಗಂಗಾವತಿ ಸುತ್ತಮುತ್ತ ಬರುವುದರಿಂದ ಗಂಗಾವತಿ ಸಮೀಪವಿರುವ ಅಯೋಧ್ಯೆ ಚಿದಾನಂದಾವಧೂತರ ಗ್ರಾಮವೆಂಬುದು ಸ್ಪಷ್ಟವಾಗುತ್ತದೆ.

ಕಾವ್ಯೋಕ್ತ ಉಲ್ಲೇಖಗಳನ್ನು ಅನುಸರಿಸಿ ನಾನು ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಕೊಂಡಾಗ ಚಿದಾನಂದಾವಧೂತರ ಆಶ್ರಮ, ಯೋಗಾಸನಕ್ಕೆ ಕುಳಿತುಕೊಳ್ಳುತ್ತಿದ್ದ ಅಶ್ವತ್ಥ ಕಟ್ಟೆಯ ಬಗೆಗಿನ ಕುರುಹುಗಳು, ಅಯೋಧ್ಯಾ ಗ್ರಾಮದ ಸಮೀಪದ ನದಿದಂಡೆಯ ಮೇಲೆ ಕಂಡುಬಂದವು. ಚಿದಾನಂದಾವಧೂತ ಚಾರಿತ್ರದಲ್ಲಿ ಬರುವ ಉಲ್ಲೇಖಕ್ಕೂ ಇಲ್ಲಿರುವ ಸ್ಥಳಕ್ಕೂ ಸಾಮ್ಯತೆ ಕಂಡುಬರುತ್ತದೆ. ಈ ಕಾರಣವಾಗಿ ಚಿದಾನಂದಾವಧೂತರ ಅಯೋಧ್ಯೆ ಶೃಂಗೇರಿಯಲ್ಲ. ಗಂಗಾವತಿ ಸಮೀಪವಿರುವ ಅಯೋಧ್ಯೆ ಗ್ರಾಮ. ಇದಲ್ಲದೆ ಇವರು ಶಾಸ್ತ್ರ, ಪುರಾಣ, ಪ್ರವಚನ, ಕೀರ್ತನೆಗಳನ್ನು ಹೇಳುತ್ತಿದ್ದ ವಿರೂಪಾಕ್ಷೇಶ್ವರ ದೇವಸ್ಥಾನ ಅಯೋಧ್ಯೆ ಯಲ್ಲಿ ಇದೆ. ಚಿದಾನಂದಾವಧೂತರ ಬಗೆಗೆ ಈ ಭಾಗದ ಜನರು ತುಂಬ ಭಕ್ತಿ-ಗೌರವದಿಂದಿರುವುದನ್ನು ನಾನು ಗಮನಿಸಿದ್ದೇನೆ. ಪ್ರತಿವರ್ಷವೂ ನದಿ ದಂಡೆಯಲ್ಲಿರುವ ಅಶ್ವತ್ಥಕಟ್ಟೆಯ ಬಳಿ ಸುತ್ತಮುತ್ತಲಿನ ಊರಿನ ಜನರೆಲ್ಲ ಸೇರಿ ಜಾತ್ರೆಯನ್ನು ನೆರವೇರಿಸುತ್ತಾರೆ.

೫. ಗಂಗಾವತಿ ಸಮೀಪವಿರುವ ಕನಕಗಿರಿಯಲ್ಲಿ ಈತನ ಹೆಸರಿನ ಚಿಕ್ಕ ದೇವಾಲಯವಿದೆ. ಅದರ ಮುಂಭಾಗದಲ್ಲಿ "ಶ್ರೀ ಸದ್ಗುರು ಚಿದಾನಂದ ಅವಧೂತರು" ಎಂದು ಬರೆಯಲಾಗಿದೆ. ಇಲ್ಲಿಯೇ ಚಿದಾನಂದಾವಧೂತರು ಸಮಾಧಿ ಹೊಂದಿದರೆಂಬುದು ಅಲ್ಲಿಯ ಜನರ ಅಭಿಪ್ರಾಯವಾಗಿದೆ. ಅಲ್ಲದೇ ಈ ದೇವಾಲಯದ ಸಮೀಪ ಒಂದು ಹಳೆಯದಾದ ಮನೆಯಿದೆ. ಅಲ್ಲಿ ಶ್ರೀ ದೇವಿ ಪುರಾಣದ ಪ್ರವಚನವನ್ನು ಪಠನ ಮಾಡುವ ಸಾಧುಗಳೊಬ್ಬರಿದ್ದಾರೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಗಂಗಾವತಿ ಪ್ರದೇಶದಲ್ಲಿ ಚಿದಾನಂದಾವಧೂತರ ಪ್ರಭಾವ-ಪ್ರಸಿದ್ಧಿ ಈಗಲೂ ಸಾಕಷ್ಟಿದೆ.[೪]

೬. ಕಾವ್ಯದ ಛಂದಸ್ಸಿನ ಬಗೆಗೆ ಕವಿ ಏನನ್ನೂ ಹೇಳದೆ ಹೋದರೂ, ಇದು ಸಾಂಗತ್ಯದಲ್ಲಿದೆ.

ಏಳು ಮಕ್ಕಳಾ ತಾಯಿ ಭೂತವಲ್ಲ ಪಿಶಾಚಿಯಲ್ಲ
ಲೋಲರಾಜ ರಾಜೇಶ್ವರಿ ಕೇಳಿ ಜನ
ಬಾಲಕರು ಸಪ್ತಮಾತೃಕೆಗಳು ಆರಿಗೆಯು
ಹೇಳುವೆನು ಅವರ ನಾಮವ ಕೇಳಿ ಜನ

೭. ಕಾವ್ಯ ರಚನೆಯಾದ ಬಗೆಗೆ ಎಲ್ಲಿಯೂ ಉಲ್ಲೇಖವಿಲ್ಲ. ಬಹುಶಃ ಚಿದಾನಂದಾವಧೂತರ ಶಿಷ್ಯ ಪರಂಪರೆಯಲ್ಲಿ ಬರುವ ಅಯ್ಯಪ್ಪ ಕವಿ ೧೯ನೆಯ ಶತಮಾನದ ಆದಿಭಾಗದಲ್ಲಿ ಈ ಕಾವ್ಯವನ್ನು ರಚಿಸಿರಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎನ್. ಜಿ. ಜಾಜಿಗೌಡರ ಅವರು ಈ ಕಾವ್ಯದ ಕಥಾಸಾರವನ್ನು ೧೯೬೭ರಲ್ಲಿ ಪ್ರಕಟಿಸಿದ್ದಾರೆ. ನೋಡಿ : **ಸತ್ಪುರುಷ ಶ್ರೀ ಚಿದಾನಂದಾವಧೂತರ ಆಧ್ಯಾತ್ಮ ಚರಿತ್ರೆ**, ಎಂ. ಎಸ್. ಶಾಬಾದಿಮಠ ಬುಕ್ ಡಿಪೋ ಸ್ಟೇಷನ್ ರಸ್ತೆ, ಗದಗ

೨. ಆರ್. ನರಸಿಂಹಾಚಾರ್., **ಕರ್ನಾಟಕ ಕವಿಚರಿತೆ**, ಸಂ.೩, ಪು. ೭೫

೩. ಕೆ. ಜಗನ್ನಾಥ ಶಾಸ್ತ್ರಿಯವರು, ಕ್ಷೇತ್ರಕಾರ್ಯ ಕೈಗೊಂಡು ಈ ಅಂಶಗಳತ್ತ ಗಮನ ಸೆಳೆದಿದ್ದಾರೆ ನೋಡಿ : **ಚಿದಾನಂದಾವಧೂತ**, ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ, ಬೆಂಗಳೂರು ೧೯೯೮

೪. ಅಯೋಧ್ಯೆ ಗ್ರಾಮದ ರೈತ ಶ್ರೀ ಸುಣಗಾರ ವಿರುಪಣ್ಣ ಹಾಗೂ ನಮ್ಮ ವಿಭಾಗದ ಸಂಶೋಧನ ವಿದ್ಯಾರ್ಥಿ ಶ್ರೀ ಪವನ್ ಕುಮಾರ್ ಅವರು ನಾನು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ನನ್ನೊಂದಿಗಿದ್ದು ತುಂಬ ಉಪಯುಕ್ತವಾದ ಮಾಹಿತಿಗಳನ್ನು ನೀಡಿ ಸಹಕರಿಸಿದ್ದಾರೆ ಇವರೀರ್ವರಿಗೆ ನಾನು ಕೃತಜ್ಞನಾಗಿದ್ದೇನೆ.

ಡಾ|| ಬಿ. ವ್ಹಿ ಶಿರೂರ*

ಮುಂಡರಗಿ ಭೀಮರಾಯನ ಪರಿಷ್ಕೃತ ಲಾವಣಿ ಪದ*

ಧೀರ೧ಕುಂಪಣಿ ಸರದಾರ ಟೇಲರಸಾಹೇಬಗ್ಯಾರು
ಸರಿ೨ ಈ೩ಜಗದೊ೩ಳಗ
ಸಾರಿ ಹೇಳಿ೪[1] ಹನ್ನೆರಡು ಗಂಟೆಗೆ
ಸೂರೆ ಮಾಡಿದ ಭೀಮರಾಯ ದೊ೫ರಿಗೆ೫||*
ದೇಶದೇಶದೊ೬೭ಳೆಲ್ಲ೬೭ ಕುಂಪಣಿಯವರು
ಹುಕುಂ ಮಾಡಿದರು
ದೊಡ್ಡ ದೊಡ್ಡ ಕಿಲ್ಲೆಗಳನ್ನು ಕೆ೭ಡವಿ೭ದರು
ಮೀರಿದ ದೊರೆಗಳ ಸೆರೆ ಹಾಕಿದರು
ತಪ್ಪಿ೮ಲಿ [3]ಶಿವನು ಸಿಗಲು[3]೮ ಬಿಡದಿಹರು
ಧರ್ಮ೯[4]ದಿ೯[4] ರಾಜ್ಯ೧೦ನೆಲ್ಲ ಆ೧೦ಳುವರು
ಹಮ್ಮಿಗಿ ದೇಸಾಯಿ ೧೧ಭೀಮರಾಯರು೧೧
ತಿಳಿ೫ದು೧೨ ಹಗೆಯ೧೩ [5] ಮಾಡಿದರು|| ೧

ಚೆನ್ನಪಟ್ಟಣ೧[1]ದ ಮನ್ನೆ೧ ಭರತ[1]ಪುರ
ಪುಣ್ಯಶಹರ ಡಿಳ್ಳಿ೨ಯ೨ವಳಗೆ
ಮೀರಿದ ದೊರೆಗಳ ಜಗಳದ ಒಳಗೆ
ಸೋತು೨ ಸೆರೆ೩ಯ ಬಿದ್ದದುಂಟು೨ ಇಂದಿಗೆ೩
[3]ಟೀಪು೪ ರಂತವ೪ ಭೂಮಿಗೆ[3]
೫ದೊಡ್ಡ ಕೆರ್ಲೆ[4] ಕಟ್ಟಿಸಿದ ಮನಿಸೆ೪
[5]ಇಂಥ ೫ಕೋಟೆ೬ ದೊರೆಗಳೊಳು[5] ಸಾ೬ಟಿಯುಂಟೆ
೭ಈ೭ಕೀಟಕ ಭೀಮರಾಯ[6] ದೊ೮[6]ರಿಗೆ೮[1]|| ೨**

ಮದ್ದುಗುಂಡು ಸೋರುಪ್ಪು ಗಂಧಕ
ಇದ್ದು ಅಡಗಿಸಿಕೊ[7]ಂ೯ಡಿಹ೯[7]ರು
ಭಾರಿ ಶಿ[8]ಕ್ಷೆಗೆ೧೦ ಅವರು೧೦ [8] ಒಳಗಾ[9] ೧೧ಗಿ ಹ[9] ೧೧ರು
ಕುಂಪಣಿಯವರು ಸಾರಿ ಹೇಳಿದರು
ದೇಶದ ಮದ್ದುಗುಂಡು ಕೊಂ [10]ಡ[10]ರು
೧೨ಹಮ್ಮಿಗಿ ದೇಸಾಯಿ ಬಳಿಗೆ ಬಂ[11]ದ[11]ರು೧೨
ಮದ್ದು ಗುಂಡು ಕಠಾ[12]ರಿ[12] ಕತ್ತಿ
[13]೧೩ನಿನ್ನಿರ [13] ಕೊಡು ಎಂ[13][14]ದ[13]ರು|| ೩

೧೪ಕೇಳಿ ಮಾತವ ಹೇಳಿದ ನ೧೪ನ್ನೊಳು
೧೫ಬಹಳ ಬ್ಯಾಡ೧೫ ತುಸು ನೀ೧೬ವು೧೬
ಹುಲುಬಿಸಿ ಕೊಟ್ಟರೆ ಶಿಕ್ಷಕೆ ನಾವು ಪಾತ್ರ೧೭ [15]
೧೮ಎ೧೮ನಲಿಕೆ[16] ಬಿ[16]ಟ್ಟರು[17] ತಾ[17]ವು
[18]ಅ[18]ವರಲಿ೧೯ ಬಾಳ೧೯ ಆಯುಧ ಇ೨೦ದ್ದಾವು೨೦
ಶಾನುಭೋಗ[19]ಗೆ [19]ತಿಳಿದು ಬರೆದ ಉತ್ತರವು
ಧಾರವಾಡ೨೧ಕೆ೨೧ ಉತ್ತರ ಮುಟ್ಟಲು
೨೨ಆಗ ೨೨ಕುದುರಿ ಬಂ೨೦ದ[20]ವು೨೦|| ೪

ಎಲ್ಲಿ ಹಮ್ಮಿಗಿ ಎಲ್ಲಿ ದೇಸಾಯಿ ಎಲ್ಲಿ ಮದ್ದು ಗುಂಡು
ಎನುತ೧[1]೬ ಒಂಟಿ೧ ಪೋಲೀಸ೨[1] ನಗುತ
ಕರಸಿದ ಶ್ಯಾನುಭೋಗ೩ನ[2] ಊರ್ಗ್ಹೊ೩ಗುತ[2]
ತೋರಿಸು ಮದ್ದು ಗುಂಡು ಎಮ೪ಗೆನು೪ತ
ದೇಸಾಯಿ೫ ಬಳಿ೫ಗೆ ಬಂದರು[3]ಬ೬ಲು೬ [3] ತುರ್ತಾ

* ಈ ಲಾವಣಿಯನ್ನು ಮೊದಲು ಪ್ರಕಟಿಸಿದವರು ವಿದ್ಯಾರತ್ನ ಆರ್. ಎಸ್. ಪಂಚಮುಖಿ ಅವರು (**ಕರ್ನಾಟಕ ಜಾನಪದ ಗೀತೆಗಳು**, ಕರ್ನಾಟಕ ರಿಸರ್ಚ್ ಇನ್ಸ್ಟಿಟ್ಯೂಟ್, ಧಾರವಾಡ, (೧೯೫೩). ಇದನ್ನೇ ಶ್ರೀ ತಿರುಮಲ ತಾತಾಚಾರ್ಯಶರ್ಮ ಅವರು ೧೯೫೭ರಲ್ಲಿ **'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ'** (ಮೈಸೂರು ಸಂಸ್ಥಾನದ ಸರಕಾರ, ಬೆಂಗಳೂರು) ಎಂಬ ಕೃತಿಯಲ್ಲಿ ಇನ್ನೂ ಹೆಚ್ಚು ದೋಷಗಳಿಂದ ಮುದ್ರಿಸಿದ್ದಾರೆ (ಪು. ೧೧೦-೧೧೬). ಇದರ ಪಲ್ಲ 'ಧೀರ ಕುಂಪಣಿ ಸರದಾರ ಟೈಲರ್ ಸಾಹೇಬಗ್ಯಾರು ಸರಿಯೊ ಧರೆಯೊಳಗೆ', ಎಂಬುದು ಅವುಗಳಲ್ಲಿ ಪ್ರಾರಂಭದಲ್ಲಿ ಬರದೆ ಒಂದು ಪದ್ಯದ ನಂತರ ಬಂದಿದೆ. ಅದು ಪಲ್ಲ ಎಂಬುದನ್ನು ಮುಂದೆ ಪದ್ಯ ಮುಗಿದ ಮೇಲೂ ಪಂಚಮುಖಿಯವರೇ ಸಂಕೇತಿಸಿದ್ದಾರೆ. ೧೯೯೧ರಲ್ಲಿ ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರು ಸಂಪಾದಿಸಿದ "ಫ್ಲೀಟರು ಸಂಗ್ರಹಿಸಿದ ಲಾವಣಿಗಳು" ಕೃತಿಯಲ್ಲಿ (ಕ.ಅ.ಸಂಸ್ಥೆ. ಮೈ. ವಿ.ವಿ.) ಈ ಪಲ್ಲ ಮೊದಲಿಗೆ ಬಂದಿದೆ.

ಡಾ. ಎಂ. ಎಂ. ಕಲಬುರ್ಗಿ ಅವರ ಬಳಿ ಇರುವ ಒಂದು ಕಾಗದ ಪ್ರತಿಯಲ್ಲಿಯೂ ಈ ಪಲ್ಲ ಪ್ರಾರಂಭದಲ್ಲಿದ್ದು ಅಲ್ಲಿಯ ಕೆಲವು ಪದ್ಯಗಳು ಮತ್ತು ಪದ್ಯದ ಸಾಲುಗಳು ಪಂಚಮುಖಿ ಅವರ ಪ್ರತಿಯಿಂದ ಹಿಂದುಮುಂದಾಗಿವೆ. ಅಲ್ಲದೆ ಪಂಚಮುಖಿ ಮತ್ತು ಕ್ಯಾತನಹಳ್ಳಿ ಅವರ ಪ್ರತಿಯ ೨೫ನೆಯ ಪದ್ಯಕ್ಕೆ ಬದಲು ಇಲ್ಲಿ ಮೂರು ಹೆಚ್ಚಿನ ಪದ್ಯಗಳಿವೆ. ಕಥಾ ನಿರೂಪಣೆಯ ದೃಷ್ಟಿಯಿಂದ ಡಾ. ಕಲಬುರ್ಗಿ ಅವಳ ಬಳಿ ಇರುವ ಪ್ರತಿ ಹೆಚ್ಚು ಸಹಾಯವನ್ನೊದಗಿಸದಿದ್ದರೂ ಗಮನಿಸಬೇಕಾದ ಪ್ರತಿ ಎಂದು ಇಲ್ಲಿ ಆ ಪ್ರತಿಯ ಪೂರ್ತಿ ಪಾಠವನ್ನು ಕೊಡಲಾಗಿದೆ. ಅಡಿಟಿಪ್ಪಣಿಯಲ್ಲಿ ಪಂಚಮುಖಿ (ಪಂ. ಕನ್ನಡ ಅಂಕಿ) ಮತ್ತು ಕ್ಯಾತನಹಳ್ಳಿ (ಕ್ಯಾ ಇಂಗ್ಲಿಷ್ ಅಂಕಿ) ಅವರ ಪ್ರತಿಯ ಭಿನ್ನ ಪಾಠಗಳನ್ನು ಕೊಡಲಾಗಿದೆ.

* ಇದು ಪಂಚಮುಖಿ ಅವರಲ್ಲಿ ಎರಡನೆಯ ಪದವಾಗಿ ಬಂದಿದೆ. ಆದರೆ ಇದು ಪಲ್ಲ. ಅಲ್ಲಿ ಮೇಲಿನ ಎರಡು ಸಾಲು, ಕೆಳಗಿನ ಎರಡು ಸಾಲು ಮೇಲೆ ಕೆಳಗಾಗಿವೆ. ಪಂಚಮುಖಿ ಅವರು ಇದನ್ನು ಒಂದು ಪದ್ಯವಾಗಿ ಗಣಿಸಿರುವುದರಿಂದ ಅವರ ಪದ್ಯಗಳ ಅನುಕ್ರಮಣಿಕೆಯಲ್ಲಿ ಒಂದೊಂದು ಸಂಖ್ಯೆ ಹೆಚ್ಚಾಗುತ್ತ ಹೋಗಿದೆ. ಕ್ಯಾತನಹಳ್ಳಿ ಅವರು ಇದನ್ನು ಪಲ್ಲವಾಗಿಯೇ ಕೊಟ್ಟಿದ್ದಾರೆ (ಇದು ಪಂಚಮುಖಿ ಅವರಲ್ಲಿ ಮೂರನೆಯ ಪದ್ಯವಾಗಿ ಬಂದಿದೆ.)

* ೧೩, ಮಂಜುನಾಥ ನಗರ, ಹುಬ್ಬಳ್ಳಿ - ೩೦

ಮೆಲ್ಲ[2]ನಿವರು ಎನ್ನ[2]ಕೊಲ್ಲ[೮]ಬಂದರು ಎಂದು
[೯]ನಿಲ್ಲದೋ[4]ಡಿ ಹೋದ[೯][4] ದೇಸಾಯಿ ಅಳುತ॥ ೫
ಬಣ್ಣಗುಂದಿ[5]೧೦ದ[5]೧೦ ಮಾರಿ ಸಣ್ಣ೧೧ದು೧೧ ಮಾಡಿ೧೨
ಬೆಣ್ಣೆ ಹಳ್ಳಿಗೆ ಓಡಿ೧೩ಬಂದು೧೩
ಭೀಮರಾಯಗೆ ಹೇ೧೪ [6] ಳಿದ೧೪ [6]ಶಿವ ಶಿವಯೆಂದು
ಸಾವಿನ ಕಾಲ೧೫ ನಮಗೆ೧೫ ಬಂತೆಂದು
೧೬[7] ಅದರ ೧೬[7]ವರ್ತಮಾನ ಇಂತೆಂದು
೧೭[8]ಹೇಳಿದ೧೭ [8]ಕಣ್ಣ ತುಂಬ ನೀರ ತಂದು
೧೮ಎನ್ನ ಹಣವು ದಳವು [9]ನಿಮ್ಮ ಪುರಕೆ
ಇನ್ನು೧೮ [9]ಭಯವು[10] ಬ್ಯಾ[10]ಡೆಂದು॥ ೬

ಕಷ್ಟಬಂದ ಕಾಲ೧೯ಕ್ಕೆ೧೯ ಮಾತುಗ೨೦ಳು
ಎ[11]ಷ್ಟು೨೦ ಆಡ೨೧ಲಿ೨೧ಬಹುದು
ಮರಣ ಬಂದ ಕಾಲ೨೨ ೧೨ ಕ್ಕೆ ಇದರಾಗುವ[12]ದು೨೨
ಕುಂಪಣಿಯವ೨೩ರು೨೩ [13]ಮೇಲೆ [13]ಕತ್ತಿ
ಹಿರಿ[24]ದಾರು೨೪ 14
೨೫ಹೋದರು ನಮ್ಮ[15] 15 ಬಾಜಿರಾಯ೨೫ ಮುರಿದು
೨೬ [17]ನಿ[17]ಮ್ಮ ೨೬ಂದೇನಾಗುವ[18]ದೆಂದೆ[18]ರಿದು
ದಿಟ್ಟ ಭೀಮರಾಯ೨೭ [19]ಹಣೆ ಮುಟ್ಟಿ ಎನ್ನ೨೭ 19
[20]ಅದೃಷ್ಟ೨೮ಯೆಂದನು೨೮[20]ಮೀಸಿಯಮುರಿದು॥ ೭

ಬಿಡುಬಿಡು ದೇಸಾಯಿ ಹಿಡಿ ಹಿಡಿ ಕತ್ತಿ[1]
ನಡಿನಡಿ ಕುದುರೆಯ ನ್ನೇರು೧[2] ಕರಿಕರಿ ಸಾಯ್ಸುದಿಬ್ಬರು೧[2]
೨[3]ಇನ್ನೂರ೨ ಬಂಟರನು ಕ೩ರಿಶ್ಯಾರು೩[3]
ಹಮ್ಮಿಗಿ ಪುರ೪ವ ಹೊಕ್ಕರು೪[4]
[5]ಶ್ಯಾನುಭೋಗನ ಕಿವಿ ಮೂಗ[5] ಕೋ೫ಸಿದರು೫
ಬಂದ ಸವಾರ೬ರ೬ ಕಡಿ[6]ದು ಬಡಿದು[6]
೭ದುಂದು[7] ಕಾ[7]ರ೭ ಮಾಡಿ೮ಬಿ[8]ಟ್ಟರು೮॥ ೮

ಕೊರ್೯[9]ತ್೯[9]ಯಿಲ್ಲ೧೦ [10]ದ[10]೧೦ ಹಣ ಭರತಿ ಚಕ್ಕಡಿ
ತಿರಗದ[11] ೧೧ಎಳಿಯೊ[11] ಎ[11]ತ್ತುಗಳು
೧೨ಬಂದು೧೨ ಹೊಕ್ಕ೧೩೧೨ರು೧೩ ಡಂ೧೨ಬಳದೊಳು
ಸುಲಗಿ ಮಾಡಿ೧೪ [13]ತ್ತ೧೪ ೧೩ಂದ ಹಣ[14]ಗ[14]ಳು
15 ೧೫ಹರೋ೧೫ಗೇರಿ೧೬ ಒ೧೬ ಡಿ೧೫ ದ ಹಗಲೊಳು
ಕಾಲೂ೧೭ [16]ರಿಗೆ[16] ಇಳಿದ[17] ನು ೧೭ಇರುಳೊಳು
ಚೋರನಾಗಿ ತಾ ದಾರಿ ಹಿಡಿದು
೧೮[18]ರಥವೇರಿ[18] ಕುಳಿತ೧೮ ಕುಮ್ಮಟದೊಳು॥ ೯

ಗ[19]ಜ೧೯ವೀಜ ಮಾಡಿದ೧೯[19] ನಿಜವಿದು ಭೀಮರಾಯ
ತಜ[20]ವೀಜ[20] ಮಾಡಿದನೆಂದು
ಪ್ರಜೆಗಳು[21] ಅ[21]ತಿ ಭಯ೨೦ದಲ್ಲಿ೨೦
೨೧[22]ಆವ[22]ನೊಂದು೨೧ ಲಿಂಗಸೂರ ಭಾವಣಿ[23]
ಭುಗಿ[23]ಭುಗಿಲೆಂದು
ಭೀಮರಾಯ೨೨ನ೨೨ ಹೆಂಡ೨೩[24] ರುನ[24] ೨೩ಹಿಡಿತಂದು
ಕೊಪ್ಪಳ ರೆಲ್ಲಿ೨೪ದೊಳಗ೨೪ ಇಟ್ಟ೨೫ನ೨೫ಂದು
ಕಾಳಯು೨೬ಕ್ತಿ೨೬ ಸಂವತ್ಸರ ಅಧಿಕ೨೭ [26]ಜೇಷ್ಠ೨೭
ಬಹುಳ೨೮ [27]ದಶಮಿ ದಿವಸದಂದು೨೮[27]॥ ೧೦

ಹೆಂಡರ[1] ಸೆರೆ[1]ಯೆನು ಕಂಡು ಬದುಕುವ೧
೨ಪು೨ಡ[2] ಭೀಮರಾಯ ತಾನು
ರಾತ್ರಿಲಿ ೩ ಕು[3]ಮಟವ ಬಿಟ್ಟು ಹೊರ[3]೪ಟ೪[3]
ಬೆಳ೫ಗು೫ ಜಾವ೬ದೊಳಗ೬ ಬಂದಾನು
ಕೊಪ್ಪಳದಗಸಿ೭ ಮುರಿ೮ದು ಹೊ[5]ಕ್ಕ[5]ನು೮
ಹೆಂಡರ ಮಕ್ಕಳ[6]ನ್ನು[6] ಕೂಡಿದನು
ಒಳಗೆ ಸಿಕ್ಕ ಜನ೯ರನ್ನು೯ ಜುಲಮೀಲೆ
ಸಂಬಳ ಗೊತ್ತು ಮಾಡಿದನು ॥ ೧೧

ಭೀಮರಾಯ ಕೊಪ್ಪಳ೧೦ [7]ಹೊಕ್ಕನೆಂದರೆ
ಹೆದರಿದ೧೦ [7]ಸುಭೇದಾರ
ಲಿಂಗಸೂರ ಭಾವಣಿ೧೧ಯಿಂದ೧೧ ಸಾವಿರ
[8]೧೨ಕು[8]ರಪಿನ೧೨ಮಂದಿ ತಂದ ಸರದಾರ
ಕೊಪ್ಪಳಸುತ್ತ ಕುದುರೆ[9]ಯ[9] ಪಾರ
ನಾಲ್ಕು ೧೩ಕ೧೩ಡಿಗೆ೧೩ ತೋಪು೧೪ಗಳ೧೪ ತಯಾರ
ಹೂಡಿ ಹೊ೧೫ಡದ೧೫ ನೆಲೆಯಿಲ್ಲದ[10]
ಗುಂಡು೧೬[11]ಗಳ೧೬ ೧೧
೧೭ಮಾಡಿದನ[12]ನು[12] ಚೂರಚೂರ॥ ೧೨

ಪುಂಡ ಭೀಮರಾಯ ಕುಂಡಿಚಣ್ಣ
ಜೋಡು ಗುಂಡಿನ೧೮ ಕರೂ[13]ಲು೧೮ [13]ಪಿಡಿದು ೧೯[14]
ಬರುವ೧೯
ಆಗಸೀಲಿರುವ ತೋಪುಗಳ ಹಿ[14]ಡಿದು
ಹೊರೆ೨೦ಗಳ ದಂ[15]ಡು[15] ಹೊಡದನು೨೦ ಹಲ್ಲ ಕಡಿದು
ಹಸಿದ ಸಿಂಹನಂತೆ ಕೂ[16]ಗ೨೧ 16
ಕೊಪ್ಪಳ ಮಂದಿ[17]ಯೆಲ್ಲ[17] ಬಯವಿಡಿದು
ಎತ್ತಣ ಪೀ೨೨ [18]ಡೆಯು ಮು[18] ೨೨ತ್ತಿಕೊಂಡಿತೆಂದು
ಜನ[19]ರು [19]ಮೌನ ಹಿಡಿದು॥ ೧೩

[1]ಧಡಧಡಯೆಂದು ಎಡಬಲದೊಳು[1]
ಬಿಡದೆ೧ [2]ಹಾರುವ೧ [2]ತೋಪುಗಳು ಗುಂಡು
೨ಹೊಡಿಯಲು ಕದಗಗಸಿ[3]೨ ತುಂಡುತುಂಡು
ಹಮ್ಮಿಗಿ ದೇಸಾಯಿ ಭೀಮರಾಯ ಕಂಡು
ಗ[4]ಚ್ಚಿನ[3]ಲ್ಲ್ಯಾಕೆ[4] ಹೊಕ್ಕರು[3] ಭಯಗೊಂಡು
೪ [5]ಒಂದು ಕ್ಷಣ ತಾಕಲಿಲ್ಲ೪ [5]ಗುಂಡು
೫ಗಡಬಡ ಗದ್ದಲ ಕೂಗೊ೫ಅರ್ಭಟ೬ಗೆ೬[6]
೭ಅಡಗಿ೭ ನಿಂತಿತು ೮ [7]ವಳಗಲಿ ವಳಗಲ[7] ೮ ದಂಡು॥ ೧೪

ಕೊಪ್ಪಳ[8]೯ಗ೮[9] ಸಪ್ಪಳಡಗಿ[9]ತು
೧೦ನಿಲ್ಲುದು೧೦ ಕಂಡು[9] ಸರದಾರ
ಕರಕರ ಹಲ್ಲ ತಿಂದ೧೧ [10] ಅಭಾರ೧೧
೧೨ಹಲ್ಲಕೆ ಬಿಟ್ಟನು[10] ಕೆಂಪು೧೨ ಮಾರಿಯವರ
ಫಡಫಡ ಗುಂಡು ೧೩ ಸುಡುತ ಮಲತವರ೧೩
ಬೆನ್ನು ಹತ್ತಿ೧೪ ಕಡಿದ೧೪ ಮು೧೫ನ್ನೂರ೧೫
ಗಚ್ಚಿನಕೋಟೆಯೊ೧೬ಳಗೆ ಭೀಮರಾಯ

ಹಚ್ಚಿ ಹೊಡದ ರಣಶೂರ[11]ಶೂರ[೧೬] ॥ ೧೫
[೧೭] [12]ಕಲತ ಜನದೊಳು [೧೭][12]ಧೂಳ ಮುಸು[13]ಕಿತು[13]
ಕಾಳಗವಾದೀತು[೧೮] [14]ಭರ್ಪೂರ[೧೮][14]
ಹಾಲ[೧೯] [15]ಬಲಿ[೧೯][15]ಕೋಟೆ[16]ಯೊಳಗೆ ಸಂಹಾರ
ಎತ್ತಿ ಕಡಿ[೨೦]ದ[17]ರೆ ಮೂಡಿ ಬಂದಾರ[೨೦] [17]
[18]ಕಾಲೊಳಗೆಬಿ[೨೧]ದ್ದು ಹೊರಳ್ಯಾಡು[೨೧] [18]
ಜಗಳದ ಹೋಲಿಕಿ[೨೨]ಕರ್ಣಾರ್ಜುನರ
ಹೇಳಬೇಕು [1]ಸರಿ[೧]ಮಾಡಿ[೧]
ಹಮ್ಮಿಗಿ ದೇಸಾಯಿ ಭೀಮರಾಯರು[1]॥೧೬
[೨]ಹಿಂದಣ[೨]ಯುಗದೊಳು ಇಂದ್ರ[೩][2]ಜಾತನ[೩][2] ರಾಮ
ಚಂದ್ರ[3]ನು [3]ಬಲಹೊಡೆದಂತೆ
ಅಂಗದ ರಾಕ್ಷಸ[೪][4]ದೊಳು[೪][4]ಹೊಕ್ಕಂತೆ
ಭೀಮರಾಯರು ಜಗಳ[5]ಮಾಡಿ[೫]ದರು[೫][5]
[೬][6]ಅದಕಂತೆ[೬][6] ಗುಂಡಿ[೭]ಶಬ್ದ[೮][7]ಗಳು[೮][7] ಅಳ್ದುರಿದಂತೆ
ದೇಸಾಯಿ[8] [೯]ಹೇಳಿದರಂತೆ[೯] [8]
ಇಂದಿನ [9] ದಿನ ಒಂದು ಉಳಿದರೆ ನಮ್ಮ[9]
ಮಂದಿ[೧೦] [10]ಬರುವುದು[೧೦] ಇಲ್ಲೂ[10] ಚಿಂತಿ॥ ೧೭
ಕಿ[11][೧೧]ತ್ತಿದ[11][೧೧] ಕತ್ತಿ ಕೈಯೆತ್ತಿ[12] [೧೨]ಮುತ್ತಿತು[೧೨][12]
ಕೇಳು[೧೩] ಭಂಟಾರ[೧೩]
[13]ಭೀಮರಾಯ[೧೪] [14]ನ ಕೂಡಹೊಂಟ ಭಂಟಾರ[14]
ಸರದಾರ[15] ಕಡಿದರೆ[೧೪] ಹಾರುತಿದ್ದವು ಶಿರ
[೧೫]ಎದಿಯ ಮೇಲೆ ಹರವುತೈತೆ[೧೫] [15]ಕೆಂಪನೆತ್ತರ
[೧೬] [16]ಒಮ್ಮಿಲೆ ಗುಂಡ ಹಾರಿದವು[16][೧೬] ಸಾವಿರ
ಹಮ್ಮಿಗಿ ದೇಸಾಯಿ ಭೀಮರಾಯರು
ಅದೇ ಕ್ಷಣಕೆ ಸಂಹಾರ॥ ೧೮
ಸತ್ತ ಭೀಮರಾಯ [೧೭]ವ್ಯರ್ಥವಾ[೧೭]ದೀತ[17]ಂದು
[18]ಅಂಕಲಿರುವ[18][೧೭] ಭಂಟಾರ
ಹೊತ್ತ ಕತ್ತಿ ತುಬಾಕಿ[೧೮] [19]ಬಿಟ್ಟು ಓಡಿದರು[೧೮]
[೧೯]ದೌಡಮಾಡಿ[೧೯] ಓಣ [೨೦]ಬಿದ್ದು ಹೋ[೨೦]ದರು
[೨೧]ಒಳ್ಳೆ ಬಂಟರನ[೨೧] ಹುಡುಕಿ [೨೨]ತಂದಾರು[೨೨]
ಹೆಡಮುರ[೨೩]ಗಿಯನೆ ಕಡೆಯಿದರು[೨೩]
ಹತ್ತುಹತ್ತು[೨೪] ಜನರನ[19] ನಿಲ್ಲಿಸಿ[೨೪] ಗುಂಡಿಲಿ
ಹೊಡೆ[20]ದರು[20]॥ ೧೯
[1]ಯಾ[1]ರು ಹೇಳಿದರು [೧]ಊ[2] ರೊ[2]ಳಗೆ[೧]
ಪಿತೂರ ನ[೨]ಡೆ[3]ಸಿ[3]ದ ಸುದ್ದಿಯನು[೨]
ಟೇಲರ ಸಾಹೇಬನೆಲ್ಲ ಕೇಳಿದನು
ಮೋದಿ[4]ನ[೩]ಯಾರ ಜ[4]ನಾಯಕ[5]
ಆರೇರ[6] ಲಕ್ಷ್ಮ ಸಿಂಗನು[೩]
ಧರೆಯ ಜಪ್ತಿ[6] ಮಾಡಿ[೪][7]ಸಿ[7] ಹಾಕಿ[8]ದರು[8] ಬೇಡಿಯನು[೪]
ಬೆಣ್ಣೆ ಹಾಲು[೫] [9] ಸವಿವೂತ[9]
ಬಾಯೊಳಗೆ[೫] ಹಿಡಿ[9] ಮಣ್ಣ ವಗಿ[10]ರಿ[10]ಯೆಂದ[11]ನು॥೨೦
ಎಲ್ಲಿ ನೋಡಿದ[೬]ರೆ ಅಲ್ಲಿ[೬] ಮದ್ದು ಗುಂ[೭]ಡು
[12]ಎಲ್ಲ [12]ಕಿಲ್ಲೆ ಎಲ್ಲ[೭] ದೊಡ್ಡದೊಡ್ಡ ತೋಪುಗಳ
ವಡಸಿದರಲ್ಲ
[೮][13]ಕರಬಿದ[13] ಗೋಡಿಯ[14]ನು[೮] ಕೆಡವಿದ[೯]ರ[೯]ಲ್ಲ
[೧೦]ಇದ್ದವರನಟ್ಟಿ ತಂದು[14] ನೀರೊಳು ಹಾಕಿದ್ದು ಲೆಕ್ಕವಿಲ್ಲ
ಗಡಬಡ ಕೂಗೊ ಅರ್ಭಟಕೆ ಅಡಗಿ ನಿಂತಿತು
ಒಳಗಳ ದಂಡೆಲ್ಲ[೧೦] [14] ॥ ೨೧*
ಅಯ್ಯಯ್ಯೋಯೆಂದು ಭೀಮರಾಯನ ಹೆಂಡರು
[೧೧]ಹೊ[15]ಯ್ಕೊ[15]ಂಡರು ಹಣೆ ಹಣೆಯ ಭೋರೆಂದು[೧೧] [16]
ಹರಿ[17]ದರು[17] ಕರಿಮಣಿಯ
ಕೊಲ್ಲುವರೇನೋ ಶಿವನೆ ಗುಣಮಣಿಯ
[೧೨] [18]ಕಣ್ಣೀರು ಸುರಿತಾವೆ ಹನಿಯ ಕಾಣುತ ಸರದಾರ
ಬಹಳ ಕರುಣ ಬಂದು ಹೊಕ್ಕರು[೧೨]
ಬೆಣ್ಣೆ ಹಳ್ಳಿಯ ಮನೆಯ[18]॥ ೨೨*
ಪೂರ್ವಜ[1]ಲ್ಮದೊ[೧]ಳಗಿರುವದು
ಬ್ರಹ್ಮಬರಬರದಿಹನು[೧][1]
ಹಮ್ಮಿಗಿ ದೇಸಾಯಿ ಭೀಮರಾಯರನು
[7][೨]ರಣದೊಳು ಪುಂಡ ತಂದ ಬಂಟರನು[೨][2]
ಗವಿಮಠ ಬಯ[3]ಲಿಗೆ[3][೩] ಹಾಕಿಸಿದನು[೩]
[೪][4]ಪಿಲ್ಲೆ ಸಾ(?) ಬಂದು ನೋಡಿದನು
ಭೀಮರಾಯವಿಲ್ಲವೆಂದು ಟೇಲರ ಸಾಬ
ಹುಕುಂ ಮಾಡಿದನು[೪] [4]॥ ೨೩*
ತಳಮಳ ಆದವೆಂದು ತೇಲಿಸಿ ಬರದ ಉತ್ತರ
ನೋಡಿ ಕಣ್ಣ ಕಣ್ಣಿಗೆ ನೀರ ತಂದು
ಕೆಟ್ಟ ಸರಕಾರಕೆಂದ ಸರದಾರಗೆ
ವರ್ತಮಾನ ಹತ್ತಲಿಲ್ಲವೆಂದು ಚಿಂತೀಲಿ
ಬಾಲೇಸಾಬ ಕೊಪ್ಪಳಕ್ಕೆ ಬಂದು
ಒಂದು ಹುಕುಮು ನೋಡಿದೆ
ಹೆಂಡರಿಗೆ ಮಂಡೆ ಕೂದಲ ಬಳಿ ವಡವಡಿದು
ಮಕ್ಕಳನ ಗುಂಡೀಲಿ ಹೊಡೆಯೆಂದನು॥ ೨೪*
ಬೆಲೆ (?) ಸರದಾರ ಆದ ಪಿತೂರಿ
ಮಾಡಿದ ಕಾರ್ಭಾರ
ಆದರ ವಿಸ್ತರ ಕೇಳಿದನು ದೇಸಾಯಿ ಭೀಮರಾಯ
ಭೀಮರಾಯ ಮಾಡಿದ ಸುದ್ದಿ ತಿಳಿದಾನು
ಆಗ ರಣಹತ್ತ(?) ದೊಳು ತನೆ ಹೊಕ್ಕಾನು
ತನ್ನ ಮನಸಿನಾಗೆ ತಿಳಿದು ಅಳಲಿನಾಕ್ಕೆನು(?)
ಅವರ ಹತ್ತುವ ಕುದುರಿಯ ಚಿನ್ನದ ಕತ್ತಿ
ರಚಿಸುವ ಕಠಾರಿಯ ತಾಯಂದರೇನು
ಹುಚ್ಚು ಹಿಡಿಸಿ ಭೀಮರಾಯ
ಗಚ್ಚಿನ ಕ್ಲಿಲ್ಯಾದೊಳಗ ಮಾಯವಾದನು॥೨೫
ಕುಂಪಣಿಯವರು ಕೊಪ್ಪಳದೊಳಗೆ
ಜಗಳ ಮಾಡಿದರೆಂದು
ರಾಜ್ಯದ ಮ್ಯಾಗ ತಮ್ಮಡು (?) ನಡಸಿದರು ಬಂದು

ಮುಂದಿನ ಜನಕೆ ಗೊತ್ತಿರಲೆಂದು
ತಾವು ತಾಲೂಕಿಗೆ ಆಗ ಕುದುರೆಗಳು ಬಂದು
ತಪ್ಪಿಸಿಕೊಂಡು ಹೋದಹೋದ ಜನಗಳನು
ಹಿಡಿತಂದು ರಾಜದೊಳಗಿನ ಹೆಂಡರು ಮಕ್ಕಳು
ಸೂರೆ ಆಯಿತೆಂದು ಅಳುತರೆ ಮನಸಿಗೆ ತಂದು।। ೨೬*
ರಂಗರಾಯನ ತಾಯಿ
ಭೀಮರಾಯ ಸತ್ತ ಸುದ್ಧಿಯ ಕೇಳಿ^೧ದಳು^೧

ಹಾಹಾ ಕಂದಾ ಎಂದು^೧ ಹೊರಳಿ^೧ದಳು
^೨ಹಿಂದೆಚಕ್ರವ್ಯೂಹ^೨ಕೋಟೆಯೊಳು
ಅಭಿ²ಮನ್ಯು ಸತ್ತ² ಕೌರವರೊಳು
ಈ ಪರಿ ² ^೩ಆದೀತು ಜಗದೊಳು
ಭೀಮರಾಯ ಕೊಪ್ಪಳಕಿಲ್ಲೆ
ಎರಡು ದಿವಸ ಆಳಿದನೆಂದಳು
ಈಗ ಹೇಳಿದ ಲಾವಣಿಪದ ಗೈಯೆಂದಳು³।। ೨೭

ಶ್ರೀ ಶ್ರೀ ಶ್ರೀ

ಆಧಾರಸೂಚಿ ಮತ್ತು ಟಿಪ್ಪಣಿಗಳು

ಪಲ್ಲ+ಪದ್ಯ ೧ : ಪಂ. ೧-೧ಥಿ ೨+ಯೊ ೩-೩ಧರೆಯೊ ೪+ದ ೫-೫ಯಾ ೬-೬ಳು ಎ ೭.೭. ಡಿಸಿ ೮-೮-ವೆ ಸಿಗದ ಶಿವನ ೯-೯ದ ೧೦-೧೦ವನ್ನ ೧೧-೧೧ರು ಇದು ೧೨+ತಿಳಿದು ೧೩+೧೩x
ಕ್ಯಾ 1+ದ 2-2 ಳುಯಲ್ಲಿ 3-3 ಸಿಗಲು ಶಿವನ 4x5.5 ಯದ್ದಾಗೆಯ

ಪದ್ಯ ೨+ ಪಂ ೧-೧ ದೊಳು ಹೊನ್ನ ೨-೨ ೩-೩ ಆಳುವರಿಂದೀಗೆ, ೪-೪ ಎಂದರಂತೆ ೫-೫ ಹೆಸರಿಗೆ ಕಿಲ್ಲೇವು ಕಟ್ಟಿಸಿದವರಿಗ, ೬-೬ ಪಾಲಿಗೆ ಶಾ೭-೭ ಹೊಸ ೮-೮ರೆಯೆ
ಕ್ಯಾ 1-1 ಹೊಂನ ಭರತಿ ಪುರ, 2.2 ಧರೆಯೊಳಿಹ್‌ರು 3.3 ದೊಡ್ಡ ಟೀಪುಯಂದರೆ ತ್ರಿಭೂಮಿಗೇ ದೊಡ್ಡ, 4-4 ಗಳು ಕಟ್ಟಿಸಿದವನಿಗೇ, 5-5 ಸೋತುಕೊಂಡರೆ 6-6.x. ಇದು ಪಂಚಮುಖಿಯವರಲ್ಲಿ ೧ನೆಯ ಪದ್ಯವಾಗಿದೆ.

ಪದ್ಯ ೩ ಪಂ. ೯-೯ ಬುವ ೧೦-೧೦ xx೧೧-೧೧ ಗುವ ೧೨-೧೨x ೧೩-೧೩ ನಿಮ್ಮಲ್ಲಿದ್ದರೆ ಕೊಡಲೆಂ
ಕ್ಯಾ 7.7 ಡವ 8.8 ಕ್ಷಕಕೆ. 9.9. ಗುವ 10-10 ಡಾ. 11-11 ದಾ 12-12 x 13.13. ನಿಮಗಿದ್ದರೆ 14.14. ದಾ

ಪದ್ಯ ೪. ಪಂ. ೧೪-೧೪ ಹೇಳದ ಮಾತನು ಕೇಳದೆ ಎ ೧೫-೧೫ ಭಾಳ ಬ್ಯಾಡೋ ೧೬-೧೬ನು ೧೭+ರು ೧೮-೧೮ ಅ ೧೯-೧೯ ಬಹಳ ೨೦-೨೦ದ್ದವರು ೨೧-೨೧ಕೆ ೨೨-೨೨.x
ಕ್ಯಾ 15+ರು 16-16ಕೊ 17-17 ಟಾ 18-18- ಇ 19-19 20-20 ದಾ

ಪದ್ಯ ೫ ಪಂ, ೧-೧ ಠಾಣಾ ೨ಟ+ಬಂದನು ೩.೩ ನೂರ ಹೊ ೪-೪ಗೆಂಬು ೫-೫ ಬಳ ೬-೬ಹು ೭-೭ ಕೆ ಇವರು ೮+ಲಿಕೆ ೯-೯ ಓಡ್ಯಾನು
ಕ್ಯಾ 1-1 ಟಣಪೂಲಸಿ ಬಂದನು 2-2 ತುರ್ತ 3-3x4-4. ದ

ಪದ್ಯ ೬ ಪಂ. ೧೦-೧೦x ೧೧-೧೧x ೧೨+ಕೊಂಡು ೧೩-೧೩ ಹೋಗಿ ೧೪-೧೪-ಳ ತಾನ ೧೫-೧೫ x ೧೬-೧೬ ಆದ ೧೭-೧೭ ತಿಳಿಸಿದ ೧೮-೧೮ ಎನ್ನದು ಹಣಗಳು ನಿನ್ನದು ಮರಣವು ಅನಲಿಕ್ಕೆ ನಿನ್ನಗೆ
ಕ್ಯಾ 5-5x6-6 ಳುತಾನೆ 7-7 ಆದರ 8-8 ತಿಳುಹಿದ 9-9 ನಿಂನದು ಮರಣ ಕಿನ್ನು 10-10 ಬೇ

ಪದ್ಯ ೭ ಪಂ. ೧೯-೧೯ಕೆ ೨೦-೨೦ಳೆಷ್ಟಾದರೂ ೨೧-೨೧x೨೨-೨೨ಕ ಇದು ಇರದು ೨೩-೨೩ರ ೨೪-೨೪ದು ೨೫-೨೫ ಹೊರಟನು ಟೀಪು ಬರಖಾರ ೨೬-೨೬ ನನ್ನಿ ೨೭-೨೭ ಮುಟ್ಟಿ ಹಣೆಯ ೨೮.೨೮ವೆಂದು
ಕ್ಯಾ 11-11 ಷ್ಟಾದರೂ ಆಡ 12-12 ಕಾಲಕಿದು ಯಿರದು 13-13ರಮ್ಯಾಲೆ 14-14ದು 15-15 ಟೋಪು. ೧೬+ಸ 17-17ನ 18-18x 19-19 ಮುಟ್ಟ ಹಣೆಯರಿದು ೭೦-೭೦ ರುಷ್ಟಯೆಂದು

ಪದ್ಯ 8 ಪಂ. ೧-೧ x ೨-೨ ಇರುತಲಿ ೩-೩ ರಸಿದನು ೪-೪ ಆ ಕ್ಷಣಕ್ಕೆ ಹೊಕ್ಕನು ೫-೫ ಯ್ಯಾನು ೬-೬ನ ೭-೭ ದುಮ್ಮುದುಡುಕು ೮-೮ದನು
ಕ್ಯಾ 1+ಯ 2-2ಕರಿಯ ಖರಿಯ ಸಾಹೇಬರಿಬ್ಬಾರು 3-3 ಹೊಂನು ತಿಂನೊ ಭಂಟರ ಕರಸಿದರು. 4-4 ವಾಕ್ಷಣ ಹೊಕ್ಕಾರು. 5-5 ಕಿವಿಮೂಗು ಶಾನಭೋಗನ 6-6 ಬಡಿಯಂದು 7-7 ಕೆ 8-8 ಟ್ಟಾರು

ಪದ್ಯ ೯ ಪಂ. ೯-೯ ತಿ ೧೦-೧೦ದ ೧೧-೧೧ಳೆದವು ೧೨-೧೨ಹೋಗಿ ೧೩-೧೩ ಸು ೧೪-೧೪ ತೆಗೆದ ೧೫-೧೫ ಹಾರುವ ೧೬-೧೬ ಬ ೧೭-೧೭ರು ಮ್ಯಾಲೆ ಇಳಿದ ೧೮-೧೮ ಏರಿಕುಂತನು
ಕ್ಯಾ 9-9- ತಿ 10-10x11-11 ಳಿಯದೆ ೧೨-೧೨ ನುಡೊ 13 ತೆಗೆದ 14-14 ಗಾ 15-15 ಹಾರೋರಗೇರಿ ಬಡಿ 16-16ರ ಮ್ಯಾಲೆ 17-17 x 18-18 ಮೇಲೇರಿ

ಪದ್ಯ ೧೦ ಪಂ. ೧೯-೧೯ ಬಿಜಿ ಆದಿತು ೨೦-೨೦ ಗೊಂಡು ೨೧-೨೧xx೨೨-೨೨ರ ೨೩-೨೩ರ ಇಬ್ಬರಳ ೨೪-೨೪ದಲ್ಲಿ ೨೫-೨೫ರೆ ೨೬-೨೬ ಕ್ತ ೨೭-೨೭x೨೮-೨೮ ತಿಥಿ ಮುಂದೊಂದು
ಕ್ಯಾ 19-19 ಜಬಿಜಿ ಆದಿತು. 20-20 ವಿಜ 21-21ರಿ 22-22 ಮನ 23-23xx 24-24ರ ಯಿಬ್ಬರ 25-25ರ 26-26 ಕ್ತಾಕ್ಷಿನಾಮಸಂವತ್ಸರ 27-27 ಮುಂದೆ ತಿಥಿವಂದೂ

ಪದ್ಯ ೧೧ ಪಂ. ೧+ನು ೨-೨ಭ ೩-೩ಗು ೪-೪ಟಾನು ೫-೫ ಗಿನ ೬-೬ದಲಿ ೭+ಯನು ೮-೮ ದಾನು ೯-೯ ರಿಗೆಲ್ಲ
ಕ್ಯಾ 1-1 ಸೆರಿ 7.7 ಭಂಡನೆ 3-3 ಟಾನು 4-4 ಗೊ 5-5- ಕ್ಯಾ 6-6 ನೆ

ಪದ್ಯ ೧೨ ಪಂ. ೧೦-೧೦ ಕೆ ಬಂದಾನೆಂದು ಆಗ ಬರೆದನು ೧೧-೧೧ಇತ್ತೊ ೧೨-೧೨ ತುರ್ತಿನ ೧೩.೧೩ ಡೆ ೧೪-೧೪x ೧೫-೧೫ಡೆದನು ೧೬-೧೬xx ೧೭+ಕಿಲ್ಲೆ

ಕ್ಯಾ 7-7 ವ ಹೊಕ್ಕಾನೆಂದು ನಬರ 4-4ತು 9-9ಗಳು 10-10ಡಿಯನಲಿಯಿಲ್ಲದ 11-11 ಳು ಕಿಲ್ಲ 12-12x

ಪದ್ಯ ೧೩+ಪಂ. ಇದು ಪಂಚಮುಖಿ ಅವರಲ್ಲಿ ೧೬ನೆಯ ಪದ್ಯವಾಗಿದೆ. ೧೮-೧೮ ಕರಹಲ್ ೧೯-೧೯ ಗುರ್ಜು ೨೦-೨೦ ಗಿನ ಮಂದಿ ಮ್ಯಾಲ್ ೨೧+ ಹೊಡೆದು ೨೨-೨೨ ಡೊಂದೂ

ಕ್ಯಾ 13-13ಲಿ 14-14 ಭಾರ ಜರಗಿಸಿ ತೋಪು ಝು 15 ಡಿಗೆ 16-16 ಗ್ದೊಡಿದು 17-17ಯಲ್ಲಿ 18-18 ಡಿ ಹ 19-19ಗಳು

ಪದ್ಯ ೧೪ ಪಂ. ೧-೧ ಹೊಡವ ೨-೨ ಹೊಡಿತಕ್ಕೆ ಕಿಲ್ಲೆವಾದೀತು ೩-೩ ಕೋಟಿ ಹತ್ಯಾರೆ ೪-೪ ಕ್ಷಣ ಕ್ಷಣಕೆ ಹಾರಲಿಲ್ಲ ಒಂದು ೫-೫ ಡಭಡಭ ೬-೬ ದೊಳು ೭-೭ ಒಳಗಡಗಿ ೮-೮ ಒಳಗಿನ

ಕ್ಯಾ 1-1 ಧಡಾಯಂದಡೆ ಬಲದೊಳು 7-7 ಹೊಡೆವ 3-3 ಹೊಡಿಯಲಿಕಾಯ್ತು ಆಗಸಿ 4-4 ಚೀಕೋಟಿ 5-5 ಕಡಿತನಕ್ಹಾರವಿಲ್ಲ ಒಂದೂ 6-6 ದೊಳು 7-7 ವಳ

ಪದ್ಯ ೧೫ ಪಂ. ೯-೯ ದೊಳಗಿನ ೧೦-೧೦ ನಿಪ್ಪಣ ೧೧-೧೧ ಭರ್ಬಾರ ೧೨-೧೨ ಅಲ್ಲಿ ಬಿಟ್ಟ ಕುಂಪಣಿ ೧೩-೧೩ ಸಟ್ಟ ಮೇಲ್ತವರ ೧೪-೧೪ ಕೊಂಡ ೧೫-೧೫ದ್ದೂ ೧೬-೧೬ ಯೊಳು ಹಚ್ಚಿ ಹೊಡೆದನು ಭೀಮ ರಣಶೂರ

ಕ್ಯಾ ೮-೮ ದೊಳಗೆ 9-9 ತಾಪದ ಕಂಡ 10-10 ನು ಬಲ್ಲ ಭಾರಾ ಹಲ್ಲಾ ಬಿಟ್ಟ 11-11x

ಪದ್ಯ ೧೬ ಪಂ. ೧೭-೧೭ ಕಾಲ ತುಳಿತದೊಳು ೧೮-೧೮ ಪೂರಾ ೧೯-೧೯ ಭಾವಿ ೨೦-೨೦ ವಂತ ಭಂಟರಾ ೨೧-೨೧ದ್ದ ನೋಡಿ ಹೊರಳುವರಾ ೨೨+ಮಾಡಿ

ಕ್ಯಾ 12-12 ಕಾಲ ತುಳಿವುತ 13-13 ಕಲು 14-14 ಪೂರಾ 15-15xx 16+ಬಾವಿ 17-17 ಮಲತ ಬಂಟಾರಾ 18-18 ಕಣನೊಳು ಬಿದ್ದೇಳದೆ ಹೊರಳುವರಾ

ಪದ್ಯ ೧೭ ಪಂ. ೧-೧xx ೨-೨ ಇಂದಿನ ೩-೩ ಜೀತು ೪-೪ ನಬಲ ೫-೫ ಹೋದಂತೆ ೬-೬x ೭+ನ ೮-೮x ೯-೯ಗೆ ಹೇಳತಾನ ಇಂತೆ ೧೦-೧೦ ಬಂದೀತು

ಕ್ಯಾ 1-1 ಹಂಮಿಗಿ ದೇಶಾಯಿ ಭೀಮರಾಯರಿಬ್ಬಾರಾ 7-7 ಜಿತನು 3-3ಸ 4-4 ಭಯ 5-5 ಯಿದರಂತೆ 6-6xx 7-7xx 8-8 ಗಾಗೆ ಹೇಳತಾನೆ ನಿಂತೆ 9-9 ದೋಳೇನಾದ್ರೆ ನಂಮದು 10-10 ಬಂದಿತೆಂಬುದಿಲ್ಲ

ಪದ್ಯ ೧೮ ಪಂ. ೧೧-೧೧ ತ್ತ ೧೨-೧೨ ಸುತ್ತ ಮುತ್ತ ೧೩-೧೩ ತಾನ ಭಂಟರನ ೧೪-೧೪ ಕೂಡಿ ಹೊಡದಾ ರಣಶೂರಾ ತಡೆಯದ ೧೫-೧೫ ಹರಿಯುತಲೈತೋ ೧೬-೧೬ ಒಮ್ಮೆ ಗುಂಡು ಹಾರಿತೋ

ಕ್ಯಾ 11-11ತ್ತು 12-12 ಸುತ್ತಾ ಮುತ್ತಾತ್ತಾ 13+ಕಡಿಯಲಿ ಹಾರುತಿದ್ದವು ಸೀರಾ 14-14 ಕೂಡಿ ಹೊಡದ 15-15 ಹರಿವುತಲಿತ್ತು 16-16 ಹಾರಿತು ಗುಂಡುವಂಮಿಗೆ

ಪದ್ಯ ೧೯: ಪಂ. ೧೭-೧೭ ಎತ್ತ ಹೋದನೆಂದ್ಹತ್ತರಿದ್ದ ೧೮-೧೮ಗಳ ಬಿಟ್ಟಾರು ೧೯-೧೯ ದೊಡ್ಡ ದೊಡ್ಡ ೨೦-೨೦ ಹಿಡಿದು ಓಡಿ ೨೧-೨೧ ಹುಡ ೨೨-೨೨ ತರಿದ ಭಂಟರನು ೨೩-೨೩ ಕಟ್ಟಿಬಿಟ್ಟಾರು ೨೪-೨೪ ಮಂದಿನ್ನ ಕಣ್ಣು ಕಟ್ಟಿ ೨೫-೨೫ದು ಕೊಂದಾರು

ಕ್ಯಾ 17-17 ಯಿತೆ 18-18 ವತ್ತಿಲಿರುವ 19-19 ಬಿಸುಟುವರಾ ಹತ್ತು ಹತ್ತು ಜನರನ್ನು 20-20ದು ಕೊಂದರು.

ಪದ್ಯ ೨೦: ಪಂ. ೧-೧ ಇವರೊಳು ೨-೨ ಡೆದ ಸುದ್ದಿಗಳ ಇನ್ನು ೩-೩ ನಾಯಕರೆಂಬ ನಾಯಕರನು ೪-೪ ಬಿಟ್ಟನು ಬೇಡಿಯನ್ನು ಹಾಕಿಸಿದನು. ೫-೫ ಸವಿ ಉಣ್ಣವರ ಬಾಯಲಿ

ಕ್ಯಾ 1-1 ದಾ 2-2 ರು ಒ 3-3x 4.4.0 ನಾಯಕ ರಾಜ 5+ನು 6-6 ದರಮೋಜಿ ರಾಯಂಣನು ದರಿಯಾಪ್ತಿ 7-7 x 8-8ಸಿದ 9-9 ಉಣ್ಣುವ ಬಾಯಲಿ 10-10x 11+ವ

*ಪದ್ಯ ೨೧: ಪಂ. ಇದು ಪಂಚಮುಖಿ ಅವರಲ್ಲಿ ೨೪ನೆಯ ಪದ್ಯವಾಗಿದೆ. ೬-೬ರೂ ಇಲ್ಲ ೭-೭ ಡಿಲ್ಲಾ ಲೆಕ್ಕವಿಲ್ಲದೆ ೮-೮ ಜಗಳಾದ ಹರಿಯ ೯-೯ ಬಿಟ್ಟ. ೧೦-೧೦ಕೆಡವಿಲ್ಲೈನೆ ಮಾಡಿದರಲ್ಲ ಜಗದೊಳು ಕುಂಪಣಿದೊರೆಗಳಿಗೆ ಈಡ ಇಲ್ಲಾ. ಇದ್ದ ಮದ್ದು ಗುಂಡು ನೀರೊಳಗೆ ಹಾಕಿಸಿಬಿಟ್ಟದ್ದೆಷ್ಟು ಲೆಕ್ಕವಿಲ್ಲಾ॥

ಕ್ಯಾ 12-12 ಯಿಲ್ಲದಿಲ್ಲ 13-13 ಹರಿಯಿದ್ದ 14-14ನೆಲ್ಲಾ ಕೆಡಹಿಸಿ ಲಯವ ಮಾಡಿಸಿ ಬಿಟ್ಟರಲ್ಲ ಜಗದೊಳು ಕುಂಪಣಿ ಧೊರಿಗೆಣೆಯಿಲ್ಲಾ ಯಿದ್ದ ಮದ್ದು ಗುಂಡು ನೀರೊಳಗೆ ಹಾಕಿಸಿಬಿಟ್ಟಿದ್ದುಯಷ್ಟು ಲೆಕ್ಕವಿಲ್ಲಾ॥

*ಪದ್ಯ ೨೨: ಪಂ. ೧೧-೧೧ ಬಡಕೊಂಡರೋ ಹಣೆಹಣೆಯ ಭೋರೆಂದಳುತ ೧೨-೧೨ ಕಾಂಬುವನೇನೋ ಇನ್ನ ಇಂಥ ದೊರೆಯಾ ಕಣ್ಣೀರು ಸುರಿಸುತಾರೆ ಹನಿ ಹನಿಯ ಕಣ್ಣತು ಸರದಾರ ಕರುಣದಿ ಕಳುಹಲು

ಕ್ಯಾ 15-15 ಡಕೊ 16+ಭೋರೆಂದು ಅಳುತಾ 17-17ದು 18-18 ಯಂದಿಗೆ ಕೂಡವು ನಿಂನಂತ ಧಣಿಯ ಕಾಣುತ ಸುರಿದವು ಕಂಣೀರು ಹನಿಯಾ॥ ಕಾಣುತ ಸರದಾರ ಕಳುಹಲು ಕರುಣದಿ ಬಂದ ಹೊಕ್ಕರ ಬೆಂಣೆ ಹಳ್ಳಿಯಾ

*ಕ್ಯಾತನಹಳ್ಳಿ ಅವರಲ್ಲಿ ಇಲ್ಲಿಯ ೨೨ ಮಾತ್ತು ೨೩ ನೆಯ ಪದ್ಯಗಳು ೨೩, ೨೨ ಆಗಿವೆ.

ಪದ್ಯ ೨೩: ಪಂ. ಇದು ಪಂಚಮುಖಿ ಅವರಲ್ಲಿ ೨೧ನೆಯ ಪದ್ಯ ಕ್ಯಾತನಹಳ್ಳಿ ಅವರಲ್ಲಿ ೨೨ನೆಯ ಪದ್ಯವಾಗಿದೆ.

ಪಂ. ೧-೧ ಳು ಈರ್ವರು ಅರಭಾಷಣ ಬಲ್ಲ ಇದನ್ನು ೨.೨ ಕಾಲ್ವಿಡಿದೆಳೆದು ತಂದ ಪ್ರತಿಗಳನ್ನು ಟೇಲರಸಾಹೇಬ ಹುಕುಮು ಮಾಡಿದನು ೩-೩ ಎಳಸಿದನು. ೪-೪ ಸುತ್ತಲೂರ ಜನರು ನೋಡಿ ಮರಗುತ ಅಳುತಾರೆ ನೋಡಿ ಹೆಣಗಳನು

ಕ್ಯಾ 1-1 ಸ್ಮದೊಳು ಯೀರ್ವರೇನಾಹರು ಪಾರ್ವತಿನಲ್ಲೆ ಬಲ್ಲರಿದನು 2-2 ಕಾಲ್ಹಿಡದು ಯಳಸಿ ತಂದರು ಶ್ರವಗಳನ್ನು 3-3 ರೊಳು 4-4 ಸುತ್ತಾಲುವೂರ ಜನರು ಮರುಗಿ ಅಳುತಾರೆ ನೋಡಿ ಹೆಣಗಳನು.

*ಪದ್ಯ ೨೪, ೨೫, ೨೬ ಈ ಮೂರೂ ಪದ್ಯಗಳು ಅಸ್ಪಷ್ಟವಿವೆ. ಇವು ಪಂಚಮುಖಿ ಮತ್ತು ಕ್ಯಾತನಹಳ್ಳಿ ಅವರಲ್ಲಿ ಇಲ್ಲ. ಬೇರೆ ಇವೆ.

ಪಂಚಮುಖಿ ಅವರಲ್ಲಿ ಇರುವ ಪದ್ಯ:

ಕಾಳಮೂಳ ತಾ ಬಾಳ ಪದಗಳೆಂದು
ಅಸಲಾ ಕಲ್ಮುಗಳಿನ್ನೊಂದು
ಭೀಮರಾಯ ಮಾಡಿಬಿಟ್ಟ ಇಂತೆಂದು
ಲಾವಣಿ ಹೇಳಿಸಯ್ಯ ಇನ್ನೊಂದು
ಮುಂದಿ ಜನಕೆ ಗೊತ್ತು ಇರಲೆಂದು
ಭೀಮರಾಯ ಕೊಪ್ಪಳ ಕಿಲ್ಲೆದೊಳಗ
ಎರಡು ಇಲ್ಲೆಂದು।। ೨೫

ಕ್ಯಾತನಹಳ್ಳಿ ಅವರಲ್ಲಿ ಇರುವ ಪದ್ಯ

ಕಾಳಮೂಳ ಮತ್ತೇಳಲಿಲ್ಲ ಬಹಳ
ಬಾಧೆಗಳಾದವೆಂದು
ಹಾಸನು ಕಲುಮು ಇದ್ದದನೊಂದು
ಮುಂದಿನ ಜನಕಿಂದು ಗೊತ್ತಿರಲೆಂದು
ಭೀಮರಾಯ ಮಾಡಿದಾಟ ಇಂತೆಂದು
ಹೇಳಿದ ಬಾವಾ ಸಾಹೇಬ ಯಿಂನೊಂದು
ಭೀಮರಾಯ ಕೊಪ್ಪಳ ಕಿಲ್ಲೆದಲ್ಲಿ
ಯಿಂನೆರಡು ದಿವಸ ಯಿರಲೆಂದೂ।। ೨೪

ಪದ್ಯ ೨೭ ಪಂ. ಇದು ಪಂಚಮುಖಿ ಅವರಲ್ಲಿ ೨೬ನೆಯ ಪದ್ಯವಾಗಿದೆ.

೧-೧ xx ೨-೨ ಚಕ್ರಹ ಬಿಂಬದ ೩-೩ ಜಗಳವಾಯಿತು ಕೊಪ್ಪಳದೊಳು ಪುಂಡರೀಕನಯನ ಶ್ರೀ ಬಂಡೆರಂಗನ ನೆನೆದಳು
ಕ್ಯಾ. ಇದು ಕ್ಯಾತನಹಳ್ಳಿ ಅವರಲ್ಲಿ ೨೫ನೆಯ ಪದ್ಯವಾಗಿದೆ.

1.1 ಮರುಗಿದಳು 2.2 ಮಾನ್ಯ ಮಾಡಿನು 3.3 ಆಯಿತು ಕೊಪ್ಪಳದೋಳು ಪುಂಡರೀಕನಯನ ವರನಯನ ಮುನಿದ ಶ್ರೀಭಂಡಿರಂ ನನೆದಳೊ ಲಾವಣಿಯ [ಸಮಗ್ರ ವಿಶ್ಲೇಷಣೆಯನ್ನು "ಜಾನಪದ ೧೯೯೨" (ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು) ರಲ್ಲಿಯ ನನ್ನ ಲೇಖನ (ಪು. ೧೧೪) ದಲ್ಲಿ ನೊಡಬಹುದು.]

★ ★ ★ ★

ಕಾವ್ಯಕ್ಕೆ ಕೋಟೆ ಇತಿಹಾಸದ ಘಟನೆಗಳ
ವಕ್ರೀಭವಿಸಿ ನೋಡುವಾಸೆ
ತನ್ನ ಶಬ್ದ ವಸ್ತುಗಳಲ್ಲಿ ನಾಟಕೀಯವಾಗುವಾಸೆ
ಲಾವಣಿಗೆ ಇತಿಹಾಸದ ಘಟನೆಗಳನ್ನೆಲ್ಲ
ವರ್ತಮಾನದ ಶಬ್ದದಂಕೆಯಲಿ ಹಿಡಿದಿಡುವಾಸೆ



ಡಾ. ಕೆ.ಎಂ. ಮೈತ್ರಿ*

ಸಿಂದಿಗೇರಿ ನೀಲಮ್ಮನ ಚರಿತ್ರೆ

ಬಳ್ಳಾರಿ ತಾಲೂಕಿನ ಸಿಂದಿಗೇರಿ ಒಂದು ಪುಟ್ಟ ಗ್ರಾಮ. ಇದು ನಿರ್ಲಕ್ಷಿತ ಚರಿತ್ರೆಯಲ್ಲಿ ದಾಖಲಾಗುವ ನೀಲಮ್ಮನ ಹುಟ್ಟೂರು. ಇಲ್ಲಿಯ ಲಾಳಗೊಂಡರ ಕೆಂಚನಗೌಡ ಪೋರಮ್ಮನ ಮಗಳಾದ ನೀಲಮ್ಮಳು ಪವಾಡ ಸದೃಷ್ಯಳು. ಆಧ್ಯಾತ್ಮ ಶಿಖರವೇರಿದ ಇವಳು ಉತ್ತರ ಕರ್ನಾಟಕದಾದ್ಯಂತ ಸುಮಾರು ೮೦೦ ಮಠಗಳ ಸಂಸ್ಥಾಪಕಳು. ಇವಳ ಚರಿತ್ರೆಯ ಎಳೆಗಳನ್ನು ಬಳ್ಳಾರಿಯ ಹಂಡೆ ಕುರುಬರ ಬಾಲದ ಹನುಮಪ್ಪ ನಾಯಕನ ವಂಶಜರೊಂದಿಗೆ, ಮೈಸೂರಿನ ಹೈದರ ಅಲಿ ಮತ್ತು ಟಿಪ್ಪು ಸುಲ್ತಾನನೊಂದಿಗೆ ಹಾಗೂ ಕೊಟ್ಟೂರು ಸ್ವಾಮಿಗಳೊಂದಿಗೆ ಹೆಣೆಯಲಾಗಿದೆ. ಕ್ರಿ.ಶ. ೧೭೦೦ ರಿಂದ ೧೭೮೦ ರ ಮಧ್ಯೆ ಬಾಳಿದ ನೀಲಮ್ಮ ಮಹಾನ್ ಶರಣೆ ಎಂದು ಚಿತ್ರಿಸಲಾಗಿದೆ. ಇವಳ ಬಗ್ಗೆ ಇರುವ ಜನಪದ ಐತಿಹ್ಯ, ಕಥೆ, ಕಾವ್ಯ, ಗೀತೆ, ದಾನಪತ್ರ ಮತ್ತು ಹೆಳವರ ದಾಖಲೆಗಳು ಇವಳ ನಿರ್ಲಕ್ಷಿತ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಸಹಕಾರಿಯಾಗಿವೆ. ಕುರುಗೋಡು, ಮುದ್ದಾಪುರ, ಕದಡಿಗಳಲ್ಲಿ ನೀಲಮ್ಮನ ಜಾತ್ರೆಗಳು ಜರುಗುತ್ತವೆ. ಭಕ್ತರು ಇವಳನ್ನು ದೈವವೆಂದು ನಂಬಿ ನಡೆದುಕೊಳ್ಳುತ್ತಿದ್ದಾರೆ. ಇವಳ ವಾಸ್ತವ ಇತಿಹಾಸದ ಶೋಧವೇ ಈ ಪ್ರಬಂಧದ ಮುಖ್ಯ ಉದ್ದೇಶ.

ಸಿಂದಿಗೇರಿ : ಬಳ್ಳಾರಿ ತಾಲೂಕಿನ ಪುಟ್ಟ ಗ್ರಾಮಗಳಾದ ಸಿಂದಗೇರಿ ಮತ್ತು ಸಿಂದವಾಳ ಎಂಬ ಊರುಗಳ ಕುರುಗೋಡು ಸಿಂದ ಅರಸರ ಹಿನ್ನೆಲೆಯನ್ನು ಹೊಂದಿರುವುದಾಗಿ ಕೆ. ಎಂ. ವೀರಭದ್ರ ಶರ್ಮ ತಮ್ಮ ಬಳ್ಳಾರಿ ಜಿಲ್ಲೆಯ ಕೆಲವು ಸ್ಥಳನಾಮಗಳು ಎಂಬ ಲೇಖನದಲ್ಲಿ ತಿಳಿಯಪಡಿಸಿದ್ದಾರೆ. ಸಿಂದರು ಕುಂತಲ ದೇಶದ ಪ್ರಭುಗಳು (ಹನುಮಂತರೆಡ್ಡಿ. ವೈ: ೧೯೮೫ : ೩೩). ಕುಂತಲರಲ್ಲಿಯ ಸಿಂದಿಯವರ ನೆಲೆಯೇ ಸಿಂದಗೇರಿ ಯಾಗಿರುವುದು. ಕುಂತಲ ಎಂದರೆ ಕೂದಲು ಅಥವಾ ಉಣ್ಣೆ (ತುಪ್ಪಟ) ಎಂದರ್ಥ. ಇದು ವಿಶೇಷವಾಗಿ ಉತ್ಪತ್ತಿಯಾಗುವ ದೇಶಕ್ಕೆ ಯಾ ಪ್ರದೇಶಕ್ಕೆ ಕುಂತಲ ದೇಶವೆಂಬ ಹೆಸರಾಯಿತು. ಯಾದವರಸರ ರಾಷ್ಟ್ರವೇ ಕುಂತಲ; ಭೋಜರ ವಿದರ್ಭ ದೇಶವೂ ಕುಂತಲ; ಬಳ್ಳಾರಿ ಜಿಲ್ಲೆಯವರೆಗೂ ಕುಂತಲ (ಹನುಮಂತಯ್ಯ, ವಿ.ಆರ್: ೧೯೫೮: ೨೫-೬). ಹೀಗಾಗಿ ಕುಂತಲರೆಂದರೆ ಕುರಿಪಾಲಕರೆಂದರ್ಥವಾಯಿತು. ಕುರಿಯ>ಕೂದಲು>ಕುಂದಲ ಕುಂತಲವಾಗಿರುವ ಸಾಧ್ಯತೆಗಳಿವೆ. ಕುರಿಗಾರರಲ್ಲಿಯ ಸೆರೆ(ಪಾನಿಯ)ಗಾರರಿಗೆ ಸಿಂದಿಗಾರರೆಂತಲೂ ಕರೆಯುವರು. ಸಿಂಧು ಎಂದರೆ ಸಮುದ್ರ ನೀರು. ಸಿಂದಿ ಎಂದರೆ ನೀರಾ ಎಂಬ ಅರ್ಥವಿರುವುದು. ಹಿಂದೆ ಇಲ್ಲಿ ಸಿಂದಿ ಬನಗಳಿದ್ದವು. ಸಿಂದಿಯ ಮರದಿಂದ ಸಿಂದಿ ಇಳಿಸಿ ಮಾರುವ ನೆಲೆಗೆ ಅಥವಾ ಕೇರಿಗೆ ಸಿಂದಿಗೇರಿ ಅಥವಾ ಸಿಂಧಿಗೇರಿ ಎಂದು ಕರೆದಂತಿದೆ. ಹೀಗಾಗಿ ಇತ್ತೀಚಿನವರೆಗೂ ಈ ಗ್ರಾಮದ ಪರಿಸರದಲ್ಲಿ ಯಥೇಚ್ಛವಾಗಿ ತಾಳೆ ಮರಗಳಿಂದ ಪಾನೀಯ ಪಡೆಯಲಾಗುತ್ತಿತ್ತು. ಎಂದು ಹೇಳಲಾಗುತ್ತದೆ. ಸಿಂದಿಯ ವ್ಯವಹಾರಿಗಳು ಕಾಲಾಂತರದಲ್ಲಿ ಬಲಾಢ್ಯರಾಗಿ ಅರಸರಾಗಿ ರಾಜ್ಯಭಾರ ಮಾಡಿದರು. ಕುರುಗೋಡು ಸಿಂದರ ಮೂಲವೂ ಸಿಂದಿಯ ವ್ಯವಹಾರದ ಸಿಂಧಿಗೇರಿ ಆಗಿರುವ ಸಾಧ್ಯತೆಗಳಿವೆ.

ನೀಲಮ್ಮ : ಸಿಂದಿಗೇರಿ ಬಳ್ಳಾರಿ ತಾಲೂಕಿನ ಒಂದು ಸಣ್ಣ ಊರು. ಇಲ್ಲಿಯ ಪೋತಪ್ಪ, ಸುಂಕಲಮ್ಮ, ರಾಮಲಿಂಗೇಶ್ವರ, ಬಸವಣ್ಣ, ಆಂಜನೇಯ, ಮಲ್ಲಪ್ಪತಾತ ಮುಂತಾದ ದೇವಸ್ಥಾನಗಳು ಜನತೆಯಲ್ಲಿ ಭಕ್ತಿಯ ಹೊಳೆಯನ್ನು ಹರಿಸಿವೆ. ಗೂಳ್ಯದ ಗಾದಿಲಿಂಗಪ್ಪ ತಾತನ ಆದೇಶದಂತೆ ಮಲ್ಲಪ್ಪತಾತ (೧೭೮೦-೧೮೭೫)ನವರು ಸಿಂದಿಗೇರಿಯನ್ನು ತನ್ನ ಕರ್ಮಭೂಮಿಯನ್ನಾಗಿರಿಸಿಕೊಂಡು ಮಹಾತ್ಮರಾದವರು (ಪ್ರಭಾನಂದ ಪಂಡಿತರು: ೧೯೯೫). ಇದೇ ಊರಿನ ಲಾಳಗೊಂಡರ ವಂಶದಲ್ಲಿ ಜನಿಸಿ ಮಹಾಶಿವಶರಣೆ ಎಂದು ಖ್ಯಾತಿ ಪಡೆದು, ನೀಲಮ್ಮಳು ಇಂದಿಗೂ ಈ ಭಾಗದ ಜನಪದ ದೈವವಾಗಿದ್ದಾಳೆ. ಈ ಶಿವಶರಣೆಯ ಕುರಿತಾದ ದಂತಕಥೆಗಳು, ಐತಿಹ್ಯಗಳು, ಕಾವ್ಯಗಳು, ಜನಪದ ಗೀತೆಗಳು, ಹೆಳವರ ದಾಖಲೆಗಳು, ನೀಲಮ್ಮನ ಹೆಸರಿನ ಮಠಗಳು ಮೊದಲಾದ ಪ್ರಕಟಿತ ಹಾಗೂ ಅಪ್ರಕಟಿತ ಮಾಹಿತಿಗಳು ಇವಳ ಜೀವನ ಮತ್ತು ಪವಾಡ ಲೋಕದ ಮೇಲೆ ಬೆಳಕು ಚೆಲ್ಲುವ ಮೂಲಕ ಅದ್ಭುತವಾದ ಚರಿತ್ರೆಯನ್ನು ಕಟ್ಟಿ ಕೊಡುತ್ತವೆ.

ಪ್ರಕಟಿತ ಸಾಹಿತ್ಯ: ನೀಲಮ್ಮನ ಜೀವನ ಮತ್ತು ದರ್ಶನದ ಮೇಲೆ ಬೆಳಕು ಚೆಲ್ಲುವ ಇದುವರೆಗಿನ ಪ್ರಕಟಿತ ಸಾಹಿತ್ಯದಲ್ಲಿ ಹಲವಾರು ಗೊಂದಲಗಳಿವೆ. ೧೯೫೮ರಲ್ಲಿ ಪ್ರಕಟಗೊಂಡ ವಿ.ಆರ್. ಹನುಮಂತಯ್ಯನವರ ಭಾರತ ದೇಶದ ಕುರುಬರ ಚರಿತ್ರೆಯಲ್ಲಿ ನೀಲಮ್ಮನ ಕುರಿತ ಮಾಹಿತಿ ಹೀಗೆ ದಾಖಲಿ

* ಮುಖ್ಯಸ್ಥರು ಮತ್ತು ಪ್ರವಾಚಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ - ೫೮೩ ೨೭೬

ಸಲಾಗಿದೆ: "ಬಳ್ಳಾರಿಯ ಪಾಳೇಗಾರರಲ್ಲಿ ಹಂಡೇ ಕುರುಬರ ಬಾಲದ ಹನುಮಪ್ಪ ನಾಯಕನ ಮಗನಾದ ಹಂಡೇ ರಾಮಪ್ಪ ನಾಯಕನ ಕಾಲಕ್ಕೆ ಬಳ್ಳಾರಿಯ ವೈಭವವು ಇನ್ನೂ ಹೆಚ್ಚಿತು. ಹಂಡೇ ರಾಮಪ್ಪನಾಯಕನು ತನ್ನ ಪಾಳೆಯವನ್ನು ವಿಸ್ತರಿಸಿ ಕುರುಗೋಡು, ತೆಕ್ಕಲಕೋಟೆ ಇವುಗಳನ್ನು ವಶಪಡಿಸಿಕೊಂಡನು. ಈತನು ಬಳ್ಳಾರಿ ಪ್ರಾಂತ್ಯದ ಅಕ್ಕಮಹಾದೇವಿ ಎನಿಸಿಕೊಂಡಿದ್ದ ಶಿವಶರಣೆ ಕುರುಗೋಡು ನೀಲಮ್ಮನವರಿಗೆ ಪ್ರಿಯಶಿಷ್ಯನಾಗಿದ್ದನು. ನೀಲಮ್ಮನವರು ನಾಯಕನಿಗೆ ಸಂತಾನವಾಗಲು ವರಪ್ರದಾನ ಮಾಡಿದುದರಿಂದ ನೀಲಮ್ಮನವರ ಮಠಕ್ಕೂ, ನೀಲಮ್ಮನವರ ಉಪದೇಶದ ಗುರುಗಳಾದ ಬಳ್ಳಾರಿಯ ಕೊಟ್ಟೂರ ಸ್ವಾಮಿಗಳ ಮಠಕ್ಕೂ ಅನೇಕ ಇನಾಮುಗಳನ್ನು ಕೊಟ್ಟಂತೆ ದಾಖಲೆಗಳಿರುತ್ತವೆ. ನಾಯಕನ ಕಾಲದಲ್ಲಿಯೇ ಕುರುಗೋಡಿನಲ್ಲಿ ನೀಲಮ್ಮನವರ ಮಠವೂ ನೀಲಮ್ಮನವರ ಇಷ್ಟದೇವರಾದ ದೊಡ್ಡ ಬಸವೇಶ್ವರನ ದೇವಸ್ಥಾನವೂ ತುಂಬಾ ಪ್ರಸಿದ್ಧಿಗೆ ಬಂದು ಈಗಲೂ ಪ್ರೇಕ್ಷಣೀಯಗಳಾಗಿರುತ್ತವೆ" (ಹನುಮಂತಯ್ಯ, ವಿ.ಆರ್., ೧೯೫೮, ೨೦೦-೧).

ಬಾಲದ ಹನುಮಪ್ಪ ನಾಯಕ (ಕ್ರಿ.ಶ.೧೫೬೭-೧೬೩೨)ನ ಮಗನಾದ ಹಂಡೇ ರಾಮಪ್ಪ ನಾಯಕನ ಕಾಲದೊಂದಿಗೆ ನೀಲಮ್ಮನ ಕಾಲಮಾನ ಸರಿದೂಗಿಸುವುದು ಕಷ್ಟ. ಕಾರಣ ಹೈದರಲಿಯು ಕ್ರಿ.ಶ. ೧೭೭೫ರಲ್ಲಿ ಈ ಪ್ರದೇಶವನ್ನು ವಶಪಡಿಸಿಕೊಂಡಿದ್ದಾಗ ನೀಲಮ್ಮಳು ಕುರುಗೋಡು ಮಠದಲ್ಲಿದ್ದ ವಿಷಯ ಬಳ್ಳಾರಿ ಜಿಲ್ಲೆ ಗ್ಯಾಸೆಟಿಯರ್‌ನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: *".....Much later, Kurugodu was one of the forts in the possession of Paleyagar Hanumappa Nayaka referred to under Bellary. The present village and the fort were built by Devappa, a descendant of Hanumappa Nayaka, in 1701-02 and probably improved the fort, Haider Ali took this place in 1775 and probably improved the fort. .....Attached to the temple, is what is known as 'Neelamma's matha' held in great esteem. Neelamma was the daughter of a resident of Sindigeri, five miles east of Kurugodu, who lived during Haider Ali's rule. She is said to have led a very virtuous life and is credited with having performed miracles" (Bellary District Gazetteer: 1972:696).* ಕುರುಗೋಡು ಪಾಳೆಯಗಾರನಾದ ಹಂಡೆ ಕುರುಬರ ಬಾಲದ ಹನುಮಪ್ಪ ನಾಯಕನ ವಂಶದ ಹಿರೇ ರಾಮಪ್ಪನಾಯಕನು ಶಿವಶರಣೆ ನೀಲಮ್ಮನ ಮಠ ಮತ್ತು ಕೊಟ್ಟೂರುಸ್ವಾಮಿ ಮಠಗಳಿಗೂ ಕ್ರಿ.ಶ.೧೭೨೬ರಲ್ಲಿ ಭೂದಾನ ದತ್ತಿ ನೀಡಿದ ವಿವರಗಳನ್ನು ಕೊಟ್ಟೂರು ಸ್ವಾಮಿ ಮಠದ ಸನ್ನದುಗಳು (ದೇವರಕೊಂಡಾರೆಡ್ಡಿ : ೧೯೯೮:೧೪೧-೩) ತಿಳಿಸುತ್ತವೆ. ಹೀಗಾಗಿ ನೀಲಮ್ಮಳಿಂದ ಸಂತಾನವಾಗಲು ವರಪ್ರದಾನ ಪಡೆದವನು ಬಾಲದ ಹನುಮಪ್ಪ ನಾಯಕನ ಮಗ ರಾಮಪ್ಪ ನಾಯಕನಾಗಿರದೆ ಆತನ ಸಂತತಿಯವನೇ ಆದ ಹಿರೇ ರಾಮಪ್ಪ ನಾಯಕನಾಗಿರುವನು. ಹೈದರ ಆಲಿ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆ ಈ ಭಾಗದಲ್ಲಿ ೧೭೭೬ ರಿಂದ ೧೭೯೨ರವರೆಗಿತ್ತು. ಆ ಸಂದರ್ಭದಲ್ಲಿ ಟಿಪ್ಪು ಸುಲ್ತಾನನು ಕುತಬುದಿಖಾನನಿಗೆ ಕುರುಗೋಡು ಜಾಗಿರಿಯನ್ನು ನೀಡುವನು (ಕಲಬುರ್ಗಿ ಎಂ.ಎಂ: ೧೯೯೪:೨೦೩).

ಕುತಬುದಿನ್‌ಖಾನನು ನಿಲಮ್ಮನ ಮಠದ ಮೇಲೆ ದೌರ್ಜನ್ಯ ನಡೆಸುವ ವಿಷಯ ಹಾಗೂ ನೀಲಮ್ಮನವರು ಇದನ್ನು ತಮ್ಮ ದಿವ್ಯ ದೃಷ್ಟಿಯಿಂದ ಅರಿಯುವ ವಿಷಯುದ ಜೊತೆಗೆ ನೀಲಮ್ಮನವರ ಜೀವನದ ಇತರೆ ಘಟನೆಗಳನ್ನು ಹೊಸಪೇಟೆಯ ಶ್ರೀ ಜ. ಕೊಟ್ಟೂರು ಸ್ವಾಮಿ ಮಠದಲ್ಲಿ ದೊರೆತ ಕಾಗದದಿಂದ ಅರಿಯಬಹುದಾಗಿದೆ. ಈ ಮಾಹಿತಿಯು ಶಿವಶರಣೆ ನೀಲಮ್ಮ ಎಂಬೀ ಶಿರೋನಾಮೆಯಲ್ಲಿ ಹೇಮಕೂಟ ಪತ್ರಿಕೆಯು ಹೀಗೆ ಪ್ರಕಟಿಸಿದೆ: **ಶಿವಶರಣೆ ನೀಲಮ್ಮ** (ಹೊಸಪೇಟೆಯ ಶ್ರೀ ಜ. ಕೊಟ್ಟೂರು ಸ್ವಾಮಿ ಮಠದಲ್ಲಿ ದೊರೆತ ಕಾಗದದಿಂದ)

"ಶ್ರೀಮನ್ನಿರಾಭಾರಿ ದೇಶಿಕಾಚಾರ್ಯವರ್ಯ ಶಿವಾನುಭವ ಚರಪಟ್ಟಾಧ್ಯಕ್ಷ ವಿದ್ಯಾರಣ್ಯನಗರ ಸುಶೋಭಿತ ಹೇಮಾದ್ರಿ ಪೀಠಾಧಿಪ ಶ್ರೀ ಮತ್ಕಪ್ಪಿನ ಚನ್ನಬಸವೇಶ್ವರ ಸ್ವಾಮಿಗಳವರ ವಂಶಾನುವರ್ತಿಗಳಾದ ಶ್ರೀ ಮರಿ ಕೊಟ್ಟೂರು ಮಹಾಸ್ವಾಮಿಗಳವರ ಕರಸರ್ಸಿರುಹ ಶ್ರೀಮನ್ನಿರಂಜನ ಶ್ರೀ ಕೊಟ್ಟೂರು ಸ್ವಾಮಿಗಳವರ ಸನ್ನಿಧಿಯಿಂದಾ

ಕುರುಗೋಡು ಸಮಸ್ತ ದೈವಾಚಾರದವರಾದ ಮಠ, ಮಹತ್ತು, ಸರನಾಡ ಗೌಡರು, ಊರಗೌಡರು, ದೇಸಾಯಿ, ಶೆಟ್ಟಿ ಸಾದ್ರಿ ದೈವಾಚಾರ ದವರಿಗೆ ಅನೇಕ ಧನಕನಕ ವಸ್ತುವಾಹನ ಆಂದೋಳನಾದಿ ಸಮಸ್ತ ಆಯಿಸ್ವರ್ಯವಾಗಲೆಂದು ತ್ರಿಕಾಲದಲ್ಲಿ ಜಪ ಶಿವಾರ್ಚನ ಕಾಲದಲ್ಲಿ ರೂಹಿಸಿಕೊಂಡು ಮಾಡುವ ಅನೇಕ ಆಶಿಷ ಅದಾಗಿ ಬಹುಧಾನ್ಯ ಸಂ॥ರದ ಜೇಷ್ಟ ಶು॥೭ರಲ್ಲಿ ಚರತಿಂಥಿಣಿಸಮೇತ ಹೊಸಪೇಟೆ ಭಕ್ತರ ಭಕ್ತಿ ಸುಕ್ಷೇತ್ರದಲ್ಲಿ॥ ॥ ಸಾಮ್ರಾಜ್ಯ ವೈಭವದೊಡನೆ ಇದ್ದೇವು. ತಮ್ಮ ಆ ಬಾಲಾದಿಗಳ ಕುಶಲಗಳನ್ನು ಆಗಿಂದಾಗ್ಯೆ ಬಿನ್ನಹ ಪತ್ರ ದ್ವಾರಾ ತಿಳ್ಸುವಲ್ಲಿ ಕೇವಲ ಪಿಠಾಭಿಮಾನಿಗಳೇ ಇರುತ್ತೀರಿ. ತತ ಪತ್ರಿಕಾಭಿಪ್ರಾಯ ವೇನೆಂದ್ರೆ, ನಿಮ್ಮ ಗ್ರಾಮದಲ್ಲಿರುವ ನಮ್ಮ ಅಧಿಕಾರಕ್ಕೆ ಸೇರಿದ ಮಾತೋಶ್ರೀ ನೀಲಮ್ಮನವರ ಮಠವು ಅನಾದಿ ಕಾಲದಿಂದಲೂ ನಮ್ಮ ಗುರುಗಳಾದ ಶ್ರೀ॥ ॥ ಚನ್ನಬಸವ ಸ್ವಾಮಿಗಳವರಿಗೆ ದ್ವಿತಿಯ ಶಂಭುವೆಂದೆನಿಸಿದ ಗ್ರಾಮದೇವರು ಯೆನಿಸಿರುವ ಶ್ರೀ ದೊಡ್ಡಬಸವೇಶ್ವರ ಸುವಿರಾಜಮಾನನಾಗಿರುವನು. ಈತನ ಅರ್ಧಾಂಗಿನಿ ಯಳಾದ ಶ್ರೀಮತಿ ನೀಲಮ್ಮ ಅಮ್ಮನವರು. ಶಿಂದಿಗೇರಿ ಬಳ್ಳಾರಿ ತಾಲೂಕಿನಲ್ಲಿರುತ್ತದೆ. ಆ ಊರಲ್ಲಿ ಗೌಡರ ಮಗಳು, ಈ ಗೌಡರು ಲಾಳಗೊಂಡ ವಂಶಿಯರು, ಈ ನೀಲಮ್ಮನವರು ಆ ವಂಶದಲ್ಲಿ ಜನಿಸಿದರು. ನೀಲಮ್ಮ ನವರು ೭ ವರುಷ ಆದಕೂಡಲೇ ವೈರಾಗ್ಯ ಹುಟ್ಟಿ ಕುರುಗೋಡಿಗೆ ಬಂದು ದೊಡ್ಡ ಬಸವೇಶ್ವರನ ಹಿಂದೆ ಬೇವಿನ ಗಿಡದ ಅಡಿಯಲ್ಲಿ ಇರಲಿಕ್ಕಾಗಿ ಪೂಜಾರಿ ದೇವರ ಪೂಜೆ ಮಾಡುವುದಕ್ಕೆಂದು ಆ ಸ್ಥಾನಕ್ಕೆ ಬರಲು ಆ ಹೆಣ್ಣುಮಗಳ

ಪೂರ್ವೋತ್ತರಗಳನ್ನೆಲ್ಲ ವಿಚಾರಿಸಿಕೊಂಡು ಸಜ್ಜೇದ ಹೊಲದಲ್ಲಿರುವ ವಿರಕ್ತಮಠಕ್ಕೆ ಬಂದು ಶ್ರೀಮತ್ಕಪ್ಪಿನ ಚನ್ನಬಸವೇಶ್ವರ ಸ್ವಾಮಿಗಳವರಿಗೆ ಪೂಡಮಟ್ಟು ಈ ಸಂಗತಿಯನೆಲ್ಲ ಹೇಳಲು, ಆಗ ಶ್ರೀಗಳು ತಮ್ಮ ಮರಿಗಳನ್ನು ದೇವಸ್ಥಾನಕ್ಕೆ ಅಮ್ಮನವರನ್ನು ಕರೆಯುವುದಕ್ಕೆ ಕಳುಹಿಸಿದರು. ಅಮ್ಮನವರು ಬಂದನಂತರ ಪೂರ್ವೋತ್ತರನ್ನೆಲ್ಲ ವಿಚಾರಿಸಿ ಶಿಂದಿಗೇರಿಯಲ್ಲಿರುವ ತಮ್ಮ ಮರಿ ಬಂದನಂತರ ಶ್ರೀ ನೀಲಮ್ಮನವರನ್ನು ಊರಿಗೆ ಬಾಯೆಂದು ಕರಿಯಲು ಸದ್ರಿ ಅಮ್ಮನವರು ಬಹಳ ರಂಬಾಟ ಮಾಡಿ ಬರುವುದಿಲ್ಲವೆಂದು ಹೇಳಲು, ತಾಯಿತಂದಿಗಳು ಪರಾಮರ್ಶಿ ಕರೆದುಕೊಂಡು ಹೋಗೋಣವೆಂದು ಆ ದಿನ ಮಠದಲ್ಲಿಯೇ ಇದ್ದರು. ದ್ವಿತೀಯ ಶಂಭುವಾದ ಶ್ರೀದೊಡ್ಡಬಸವೇಶ್ವರನು ರಾತ್ರಿಯಲ್ಲಿ ಶ್ರೀಗಳವರ ಸ್ವಪ್ನದಲ್ಲಿ ಜಂಗಮಾಕಾರ ವೇಷವನ್ನು ತೊಟ್ಟು ಈ ಹುಡಿಗಿ ನನ್ನ ವಸ್ತು ಇರುತ್ತದೆ. ನಾನೇ ಆ ವಸ್ತುವನ್ನು ಸೃಷ್ಟಿ ಮಾಡಿರುತ್ತೇನೆ. ಆದ ಕಾರಣ ಈ ಹುಡುಗಿಯನ್ನು ನಿಮ್ಮ ಪಾದಕ್ಕೆ ಅಡ್ಡಗೆಡವಿಕೊಂಡು ದೀಕ್ಷತ್ರಯದಿಂದ ಶುದ್ಧೀಕರಣವನ್ನು ಮಾಡಿ ಜಂಗಮದೀಕ್ಷೆ ಕೊಟ್ಟು ಕ್ರಿಯಾದೀಕ್ಷೆ ಮಾಡಿರಿ ಎಂದು ಸ್ವಪ್ನವಾಗಲು ಶ್ರೀಗಳರವರು ನಿದ್ರೆಯಿಂದ ಎಚ್ಚೆತ್ತು ಕುಳಿತುಕೊಂಡು ಈ ವಿಷಯವನ್ನು ಲೋಕದವರಿಗೆ ಹೇಳಿದರೆ ಮೆಚ್ಚಾರೆ, ಮೆಚ್ಚಲರಿಯರು ಎಂದು ಪವಡಿಸಲು ಮತ್ತು ಸ್ವಪ್ನವಾಗಲು ನೀನು ವರವುಳ್ಳ ದೇವರಾದರೆ ಆ ತಂದೆತಾಯಿಗಳ ಕನಸಿನಲ್ಲಿ ಹೋಗಿ ಹೇಳಿದರೆ ನಾವು ಹೇಳೇವು ಎಂದು ಆಡಿಕೊಳ್ಳುಲು, ಆಗ ದೊಡ್ಡ ಬಸವೇಶ್ವರನು ಯಥಾ ಪ್ರಕಾರ ಸದ್ರಿ ವೇಷವನ್ನು ಧರಿಸಿ ನೀಲಮ್ಮನವರ ತಂದೆತಾಯಿಗಳ ಸ್ವಪ್ನದಲ್ಲಿ ಪ್ರಕಾಶಮಾನವಾಗಿ, ಎಲೈ ಭಕ್ತರುಗಳಿರಾ ನಿನ್ನ ಮಗಳನ್ನಾಗಿ ಇರುವ ಈ ಹುಡಿಗಿಯನ್ನು ಈ ಸ್ವಾಮಿಗಳವರಿಗೆ ಒಪ್ಪಿಸಿ ಪ್ರಸ್ತಪ್ರಯೋಜನ ಮಾಡಿಸಿ ಹೋಗಿರಿ ಎಂದು ಸ್ವಪ್ನವಾಗಲು, ಸದ್ರಿ ತಂದೆತಾಯಿಗಳು ಎಚ್ಚತ್ತು ಶ್ರೀಗಳವರಿಗೆ ಹೇಳಲು ಅಹುದು ಇದೇ ಪ್ರಕಾರ ನಮಗೆ ಸ್ವಪ್ನವಾಯಿತು ಎಂದು ಹೇಳಲು, ಮರುದಿನ ತಮ್ಮ ಬಂಧುಗಳನ್ನು ಊರ ಜನರನ್ನು ಕರೆಸಿ ಪ್ರಸ್ತಪ್ರಯೋಜನ ಮಾಡಿಸಿ ಸದ್ರಿ ನೀಲಮ್ಮನವರನ್ನು ಸದ್ರಿ ಶ್ರೀಗಳವರಿಗೆ ಒಪ್ಪಿಸಿ ಈಕೆಯನ್ನು ನಮ್ಮ ಮಗಳಲ್ಲ ನಿಮ್ಮ ಮಗಳು ಎಂದು ಒಪ್ಪಿಸಿ ತಮ್ಮ ನಿವಾಸಕ್ಕೆ ತೆರಳಿದರು. ಹೋದ ನಂತರ ಮಠ ಮಹತ್ತು ಯಾವತ್ತರನ್ನು ಕರಿಸಿಕೊಂಡು **ಅಮ್ಮನವರಿಗೆ ಜಂಗಮದೀಕ್ಷೆಯನ್ನು** *ಕೊಟ್ಟು ಅಮ್ಮನವರಿಗೆ ತಮ್ಮ ಮರಿದೇವರಾದ ಶಿಂದಿಗೇರಿ ವಿರಕ್ತಮಠದ ಚನ್ನಬಸವಸ್ವಾಮಿಗಳನ್ನು ಕ್ರಿಯಾಮೂರ್ತಿಗಳನ್ನಾಗಿ ಮಾಡಿ ಗವೀಮಠದ ಕೆಳಗಣ ಚನ್ನವೀರಯ್ಯನ ಚೌಕಿಯಲ್ಲಿ ಅಮ್ಮನವರನ್ನು ಇಟ್ಟರು. ಚನ್ನವೀರಯ್ಯನ ಚೌಕಿಯಂಬುವದು ಈಗ ಇರುವ ನೀಲಮ್ಮನವರ ಮಠಕ್ಕೆ ಈ ಹೆಸರು ಇತ್ತು. ತದನಂತರ ಶ್ರೀಗಳವರೇ ಕತೃಗಳಾಗಿಯಿದ್ದರು. ನಂತರ ಅಮ್ಮನವರಿಗೆ ದೇವತ್ವ ಸಂಭವಿಸಿ ಭೂತ ಭವಿಷ್ಯದ್ವರ್ತಮಾನ ಸಂಭವಿಸಿ ಲೋಕದಲ್ಲಿ ಅಘನಘಟನೆ ಕಾರ್ಯಗಳನ್ನುಂಟುಮಾಡಿ ದೊಡ್ಡಬಸವೇಶ್ವರನ ಗುಡಿ, ಚನ್ನವೀರಯ್ಯನ ಚೌಕಿ ಎಂಬುವನ್ನು ಕಟ್ಟಿಸಿದರು. ಇದಕ್ಕೆ ಈಗ ನೀಲಮ್ಮನ ಮಠವೆಂದು ಹೆಸರು ಬಂದಿರುತ್ತದೆ. ಮತ್ತು ಅಮ್ಮನವರ ಹೆಸರು ಮೊದಲು ಕೆಂಚಮ್ಮ ಎಂಬುವ ಹೆಸರು ಇದ್ದಿತು. ಶ್ರೀಗಳವರು ಅಮ್ಮನವರಿಗೆ ನೀಲಮ್ಮನವರು ಎಂದು ಹೆಸರಿಟ್ಟವರು. ಹೀಗಿರಲಿಕ್ಕಾಗಿ ನೀಲಮ್ಮನವರ ವಾರ್ತೆಯನ್ನು ಕುತುಬಖಾನನೆಂಬವನು ಕೇಳಿ ಮಠದ ಮೇಲೆ ದೌರ್ಜನ್ಯ ನಡೆಸಬೇಕೆಂದು ಕುರುಗೋಡಿಗೆ ಹೊರಟನು. ನೀಲಮ್ಮನವರು ತಮ್ಮ ದಿವ್ಯ ದೃಷ್ಟಿಯಿಂದ ಇದನ್ನರಿತು ಶ್ರೀಮತ್ಕಪ್ಪಿನ ಚನ್ನಬಸವಸ್ವಾಮಿಗಳವರಿಗೆ ದಾನಪತ್ರ ಬಿನ್ನಹ ಪತ್ರ ಬರೆದುಕೊಟ್ಟು ಮೊಗಲಾಯ ಸೀಮೆಯಾನ ಸುರಪುರದ ಇಲಾಖೆಗೆ ದಯಮಾಡಿಸಿ ಅಲ್ಲಿ ಪವಾಡವನ್ನುಂಟು ಮಾಡಿ ಭಕ್ತರುಗಳ ಕಡೆಯಿಂದ ಮಠ......". ಇಲ್ಲಿಂದ ಮುಂದೆ ವಿಷಯ ಸಿಕ್ಕಿಲ್ಲ ಎಂದು ಹೇಮಕೂಟದ ಸಂಪಾದಕರು ತಿಳಿಸುತ್ತ ಈ ಸಂಬಂಧ ೧೯.೧೨.೧೯೩೭ರಲ್ಲಿಯ ಸಿರಿಗೇರಿ ಏಕಾಂಬ್ರಯ್ಯ ನವರು ಬರೆದ ಲೇಖನದ ಮಾಹಿತಿಯನ್ನು ಮುಂದುವರೆದು ಹೀಗೆ ಪ್ರಕಟಿಸಿದ್ದಾರೆ.*

"ನೀಲಮ್ಮನ ತಂದೆ ಹೆಸರು ಕೆಂಚನಗೌಡ, ತಾಯಿ ಹೆಸರು ಪೋರಮ್ಮ, ಇವರುಗಳ ಮಗಳೇ ಕೆಂಚಮ್ಮ. ಏಳು ವರುಷ ಪರಿಯಂತರ ಹುಟ್ಟಿದ ಮನೆಯಲ್ಲಿದ್ದು ಎಂಟನೆಯ ವರುಷದಲ್ಲಿ ಹಗಲು ಹೊತ್ತು ಹೊಲಕ್ಕೆ ಹೋದಲ್ಲಿ ಅಲ್ಲಿ ಅತ್ಯದ್ಭುತವಾದ ಆಕಾರವನ್ನು ಕಂಡು ಹೆದರಿ ಮೂರ್ಛೆಹೊಂದಿ ಜನರ ಸಂಗಡ ಮಾತಾಡವೇ ಮೌನದಲ್ಲಿ ಇರಲಾಗಿ ತಂದೆತಾಯಿಗಳು ಕೇಳಿ ಪ್ರಳಾಪಿಸಿ ಮನೆಗೆ ಕರೆದುಕೊಂಡು ಹೋಗಿ ನಾನಾ ರೀತಿಯಲ್ಲಿ ಉಪಚಾರ ಮಾಡಿದ ಕಾಲಕ್ಕೂ ಅರುವು ಹುಟ್ಟದೇ ಹದಿನೆಂಟು ದಿವಸದ ಪರಿಯಂತರ ಇರಲಾಗಿ ಒಂದು ದಿನ ತಾಯಿ ಪೋರಮ್ಮ ತಲಿಗೆರೆಯಬೇಕೆಂದು ತುಪ್ಪ ತೆಗೆದುಕೊಂಡು ಬಂದು ತಲಿಗೆ ಹೂಡಿ ನೀರೆರದು ಸೀರೆಯು ತರುವುದರೊಳಗೆ ಬಚ್ಚಲಲ್ಲಿ ಬಯಲಾಗಿ ಹೋಗಿ ಏಳು ದಿವಸ ಪರಿಯಂತರ ಯಾರಿಗೂ ಕಾಣದೆ ಇದ್ದು ಶಿಂದಿಗೇರಿಯಿಂದ ಕುರುಗೋಡಿಗೆ ಹೋಗಿ ದೊಡ್ಡ ಬಸವೇಶ್ವರನ ಹಿಂದೆ ಇರಲಾಗಿ..." ಎಂದು ಮುಂತಾಗಿ ವಿಷಯ ಬಂದಿದೆ. (ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿಗಳು (ಸಂ) : ೧೯೭೭:೧-೨೧).

ಸಂಪಾದಕರು ಒದಗಿಸಿದ ಮೇಲಿನ ಬಹುತೇಕ ಮಾಹಿತಿಯು ಜನಪದರಲ್ಲಿರುವಂತಹದ್ದಾಗಿದೆ. ಆದರೆ, ನೀಲಮ್ಮನಿಗೆ ಅವರ ತಂದೆತಾಯಿಗಳು ಪ್ರಸ್ತಪ್ರಯೋಜನ ಮಾಡಿಸಿ ಸದ್ರಿ ಶ್ರೀಗಳವರಿಗೆ ಒಪ್ಪಿಸುವ ಮಾಹಿತಿ ಬೇರೆಡೆ ಲಭ್ಯವಿಲ್ಲದಿರುವುದು ಚಿಂತನಾರ್ಹವಾದುದು. ಕುರುಗೋಡಿನ ನೀಲಮ್ಮನ ಮಠದಲ್ಲಿ ನೀಲಮ್ಮನ ತೂಗುಮಂಚವಿದ್ದು ಅದರ ಮೇಲೆ ಇರುವ ಮೂರ್ತಿ ನೀಲಮ್ಮನದೆಂದು ಹೇಳಲಾಗುವುದು. ಆದರೆ, ಆ ಮೂರ್ತಿಗೆ ಮೀಸೆಗಳಿರುವವು. ನೀಲಮ್ಮಳಿಗೆ ಮೀಸೆಗಳೇಕೆ ಎಂದು ಮಠದ ಪೂಜಾರಿಯವರನ್ನು ಪ್ರಶ್ನಿಸಿದಾಗ ಪೂಜಾರಿಯವರು ವಾಸ್ತವವೇನೆಂಬುದು ತಿಳಿಸಿದರು. ಆ ಮೂರ್ತಿ ಪೂಜಾರಿಯವರ ಮನೆದೈವ ಈರಣ್ಣನೆಂದು ಹೇಳಿದರು. ನೀಲಮ್ಮನದೆಂದು ಹೇಳಲಾಗದು ಆದರೆ, ನೀಲಮ್ಮನದೆಂದು ಹೇಳಲಾಗುವ ಒಂದು ಜೊತೆ ಪಾದುಕೆಗಳೂ ಅಲ್ಲಿರುವವು. ಈ ಮಠದ ಬಚ್ಚಲಲ್ಲಿಯೇ ನೀಲಮ್ಮ ಬಯಲಾದಳೆಂದು ಜನಪದರು ಅಲ್ಲಿರುವ ಒಂದು ಸ್ಥಳ ತೋರಿಸಿ ಹೇಳುವುದುಂಟು. ಆದರೆ ಸ್ಥಳವನ್ನು ಪರಿಶೀಲಿಸಿದಾಗ ಆ ಸ್ಥಳ ಬಚ್ಚಲಾಗಿರದೆ ಅದೊಂದು ಅಧ್ಯಾತ್ಮಕ್ಕಾಗಿ ಇಲ್ಲವೆ ಧಾರ್ಮಿಕ ಕ್ರಿಯೆಗಾಗಿ ಬಳಸುವ ಸ್ಥಳವಾಗಿರುವ ಸಾಧ್ಯತೆಗಳು ಕಂಡು ಬರುತ್ತವೆ. ನೀಲಮ್ಮ ಸಿಂದಿಗೇರಿಯ ತನ್ನ ಮನೆಯ ಬಚ್ಚಲಿನಿಂದ ಬಯಲಾದುದಕ್ಕೂ ಅಲ್ಲಿಯವರು ಒಂದು ಬಚ್ಚಲು ಕಲ್ಲು ತೋರಿಸುವುದುಂಟು ಮತ್ತು ಆ ಬಚ್ಚಲು ಕಲ್ಲಿಗೆ ಭಕ್ತಿಯಿಂದ ಪೂಜಿಸುವುದುಂಟು. ಪ್ರಸ್ತುತ ಕುರುಗೋಡು ನೀಲಮ್ಮನ ಮಠವೂ ಮೂಲತಃ ಅದೊಂದು ಜೈನ ಮಠವಾಗಿರುವ ಸಾಧ್ಯತೆಯಿದೆ. ಕಾರಣ ಕಟ್ಟಡ ವಿನ್ಯಾಸ ಮತ್ತು ಶಿಲ್ಪಗಳಲ್ಲಿ ಹಲವಾರು ಜೈನ ಸಂಕೇತಗಳಿವೆ. ಹಂಡೆ ಕುರುಬರ ಬಾಲದ ಹನುಮಪ್ಪ ನಾಯಕನ ವಂಶಸ್ಥರಲ್ಲಿಯ ದ್ಯಾವಪ್ಪನಾಯಕ, ಪ್ರಸನ್ನಪ್ಪನಾಯಕ ಮೊದಲಾದವರು ಕುರುಗೋಡಿನ ನೀಲಮ್ಮನ ಭಕ್ತರಾಗಿದ್ದರು. ಇವರು ನೀಲಮ್ಮನಿಗೆ ಕುರುಗೋಡು ಮಠದಲ್ಲಿರುವ ತೂಗು ಮಂಚವನ್ನು ನೀಡಿದವರು. ಜೊತೆಗೆ ಹಲವಾರು ಮಠಗಳಿಗೆ

ದಾನದತ್ತಿಗಳನ್ನು ನೀಡಿದವರು ಮತ್ತು ಬಾವಿಗಳನ್ನು ತೋಡಿಸಿದವರೆಂಬುದಕ್ಕೆ ಇವರ ದಾನಪತ್ರಗಳೇ ಸಾಕ್ಷಿಯಾಗಿರುವು.

ಹಂಡೆ ಕುರುಬರ ಬಾಲದ ಹನುಮಪ್ಪ ನಾಯಕನ ವಂಶಸ್ಥರಲ್ಲಿಯ ದ್ಯಾವಪ್ಪನಾಯಕ, ಪ್ರಸನ್ನಪ್ಪನಾಯಕ ಮೊದಲಾದವರಿಂದ ಸ್ವಿಕರಿಸಿದ ದಾನದತ್ತಿಗಳಲ್ಲಿ ಹಲವು ಕೊಟ್ಟೂರು ಸ್ವಾಮಿಗಳಿಗೆ ದಾನವಾಗಿ ನೀಡಿರುವ ವಿಷಯ ಹೇಮಕೂಟ ಪತ್ರಿಕೆ ಹೀಗೆ ಪ್ರಕಟಿಸಿದೆ:

ನೀಲಮ್ಮನವರ ದಾನಪತ್ರ (ಶಾ.ಶ. ೧೬೫೦) ಶ್ರೀ ಗುರು ಬಸವ ಲಿಂಗಾಯ ನಮಃ ಶ್ರೀಮತ್ಪರಮ ಕೈಲಾಸ ಪುರವರಾಧೀಶ್ವರ ಸಿಂಹ್ವಾಸನಾರೂಢ ಕಳೇವರಮಪ್ಪ ನಂದೀಶಾದಿ ಪ್ರಮಥಗಣಂಗಳ ಸಂಪ್ರದಾಯವಿಡಿದೊಪ್ಪುವ ತೋಂಟದ ಶಿದ್ದಲಿಂಗಾಚಾರ್ಯ ಕೃಪಾ ಪ್ರಸನ್ನರಾದ ತದ್ಗುರು ಬೋಧಾಮೃತ ರಸವಾಂತು ವುಪದೇಶಿಸುವಲ್ಲಿ ಶರಣ ಜನಹೃದಯಾನಂದ ಪ್ರಭಾಪುಂಜ ರಂಜಿತರಾದ ರ॥ ರಾ ॥ ಕ॥ ಬಳ್ಳಾರಿ ಶಿವಾನುಭವ ಚರಮೂರ್ತಿಗಳಾದಂಥ ಕಪ್ಪಿನ ಚನ್ನಬಸವ ಸ್ವಾಮಿಗಳವರ ಪಾದಪದ್ಮಂಗಳಿಗೆ ಶ್ರೀ ಶ್ರೀ ಶ್ರೀ ಶ್ರೀ ಯುಷ್ಮದತ್ಯಂತ ಪ್ರಿಯಶಿಷ್ಯರಾದ ನೀಲಮ್ಮನು ತ್ರಿಕಾಲದಲ್ಲಿ ಮಾಡ್ವ ದೀರ್ಘ ನಮಸ್ಕಾರ ಬಿನ್ನಹವು ಆ॥ ಕೀಲಕ ಸಂ॥ ರದ ಕಾರ್ತಿಕ ಶು॥ ೫ ಯಲ್ಲು ಕೆಂಭಾವಿ ಮುದ್ದನೂರು ಭಕ್ತ ಭಕ್ತಿ ಸುಕ್ಷೇತ್ರದಲ್ಲಿ ತಮ್ಮ ಸೇವೆಯೊಳಗೆ ಪರಾಮನ ಮಗ್ನವಾಗಿದ್ದೀತೆ. ಮೇಲಾಗಿ ಪಾದದ ಕೃಪೆಯಿಂದಲು ಶ್ರೀದೇವರ ದಯೆಯಿಂದಲು ನಡುವಂತ ತಲೆ ಸಮಾಪ್ತಿಯನ್ನೆದುವ ಕಾಲ ಸಮೀಪಿಸಿ ಬಂತು. ಯಿಪ್ಪರೊಳಗೆ ಪಾದದ ಕೃಪೆಯಿಂದ ಲಿಂಗದೊಳಗೆ ಅಡಕವಾಗುವುದಕ್ಕೆ ಅಪ್ಪಣೆ ಆಗಲಿ ಯಂದು ವಿಜ್ಞಾಪಿಸಿಕೊಂಡುಯಿದ್ದೀತೆ. ಪಾದವು ಯಾವ ರೀತಿಯಲ್ಲಿ ಅಮಲೈಕ್ಯ ಮಾಡಿಕೊಳ್ಳುತ್ತಾಯಿದ್ದಿತೋ ಪಾದವೇ ಬಲ್ಲದು. ಯೀ ಶಿವಾಯಿ ಕುರುಗೋಡಲ್ಲಿ ಕೊಟ್ರಪ್ಪಗೆ ಸರಕಾರದವರ ಕಡೆಯಿಂದ ಬಹಳ ಮಾನಪರೀಕ್ಷೆಗಳು ಆದವು. ಅರ್ಥಮಾನ ಪ್ರಾಣ ಕೂಡ ಹಾನಿಯಾಗಿ ಹೋಯಿತು. ಯಂದು ಸನ್ನಿಧಾನದಿಂದ ಬಂದಂಥ ಪ್ರಥಮಯ್ಯನವರು ಕುರುಗೋಡು ನಾಡ ದೇಶಾಯಿ ಮೊದಲಾದಂಥವರು ಮುಕ್ತ ಹೇಳಿದರು. ಶ್ರೀದೇವರ ಕೃಪೆಯಿಂದ ಅವರವರು ಪಡೆದಷ್ಟು ಅವರಿಗೆ. ಯಾರ ಯತ್ನವೇನದೆ ಯಲ್ಲಾ ಪೂರ್ವತ್ರಕ್ಕೂ ಶ್ರೀಕರ್ತೃಗಳೇ ಯಿದ್ದೀರಿ. ನನಗೆ ವಂದು ಕೆಲಸವಿಲ್ಲವು. ನನಗೆ ಆಯಿಕ್ಯ ಪದವಿಗೆ ಅಪ್ಪಣೆ ಆಗಬೇಕು. ಹ್ಯಾಗು ಪಾದದ ಹೆಸರಿನ ಮೇಲೆ ಆದ ಮಠಗಳು ಶಿಂದಿಗೇರಿ, ಕುರುಗೋಡು, ಹಂಪೆ, ಯಿಪ್ಪತ್ತೆವರು, ಕೆಂಚನ ಗೌಡನ ಗುಡ್ಡ, ಮುದ್ದಲಾಪುರ, ಕುಡತ್ನಿ, ದರೋಜಿ, ಹಾವಿನಮಡು, ಗುಮುದ ಮೊದಲಾದ ವಗೈರೆ ಗ್ರಾಮಗಳಲ್ಲಿ ಯಿರುವಂಥ ಮಠಮಾನ್ಯಗಳು ಇಷ್ಟೊತ್ತಿಗೆ ಪಾದಕ್ಕೆ ಹೊಂದಿ ಪಾದದ ಸೇವೆಗೆ ಅನುಕೂಲವಾಗಿದ್ದಾವೆ. ಪುನಹ ಯೀ ದೇಶದಲ್ಲಿ ಕೆಂಭಾವಿ, ಮುದ್ದನೂರು, ಚಿಕ್ಕಮುದ್ದನೂರು, ತಾಳಿಕೋಟೆ, ಮುದ್ದೇಬಾಳು ಮುಂತಾದ ಗ್ರಾಮಗಳಲ್ಲಿ ಭಕ್ತರುಗಳು ಮಾಡಿಕೊಟ್ಟು ಇರುವಂಥ ಮಠಗಳು ಸ್ವೀಕರಿಸಿಕೊಳ್ಳುವುದಕ್ಕೆ ಭಾದ್ಯರೇಯಿದ್ದೀರಿ. ಯೀಗ ಸುರಾಪುರದ ನಿಷ್ಟೆ ವೀರಭದ್ರಪ್ಪನವರು ಬರಕೊಟ್ಟ ಪತ್ರ ಸನ್ನಿಧಾನಕ್ಕೆ ಕಳಿಹಿಸಿಯಿದ್ದೇವು. ಯೀ ಪತ್ರದಲ್ಲಿ ಯಿದ್ದ ಮಠಗಳು ಸಹ ಸ್ವೀಕರಿಸಬೇಕಾಗಿ ಯಿದುವರ್‍ಗು ಸಂಪಾದಿಸಿದ ಮಠಗಳು ತಮಗೆ ಅರ್ಪಿತ ಮಾಡಿಯಿದ್ದೇನೆ. ಯಿನ್ನು ಮೇಲೆ ಸಂಪಾದಿಸಿದ ಮಠಗಳಿಗೆ ತಾವೇ ಬಾಧ್ಯರಾಗಿ ಯಿರುತ್ತೀರಿ. ಯೀ ವಿಷಯದಲ್ಲಿ ಪಾದಕ್ಕೆ ವಿಶೇಷವಾಗಿ ಬಿನ್ನಹ ಪತ್ರಿಕೆಯಲ್ಲಿ ಬರಸುವುದಕ್ಕೆ ಶಕ್ತಳಲ್ಲವು. ಮುಕ್ತ ಬಂದಂಥ ಪ್ರಮಥೈಯ್ಯನವರು ಶೃತಿಗೊಳಿಸಲಾಗಿ ಸಕಲವು ಚಿತ್ತಕ್ಕೆ ವೇದ್ಯವಾದೀತು.

ಯಿಂತೀ ದೀರ್ಘದಂಡ ನಮಸ್ಕಾರ ಬಿನ್ನಹವು
ಯಿ ಗೀಟು ನೀಲಮ್ಮನ ವಪ್ಪಿತ
ಕುರುಗೋಡು ಸರ ನಾಡಗೌಡ ಕೊಮಾರಪ್ಪನು
ನಾಡಗೌಡ ಸಂಬಣ್ಣಗೌಡ
ಕೇಶವರಾವು ಹೇಮಾದ್ರಿ ಗು। ಸರದೆ। ನಾಡ
ಕು॥ಪ॥ ಕುರುಗೋಡು
ನಾಡಗೌಡ ಪಾ॥ ಮೂಕೆ
ಪ॥ ಮೂಕೆ ದೇಶಾಯಿ ದೆ॥ ಮೆಂಪಯ್ಯನು
ದೇ॥ ತಿಮ್ಮಪ್ಪನ ವಪ್ಪಿತವು ಕೆಂಭಾವಿ ಗುರುನಂಜನಗೌಡರ ಮುದ್ದಪ್ಪ
ದೇ॥ ರುಕುಮಣನ ವಪ್ಪಿತ ನಾ॥ ಮಲಗೌಡನು
ನರಸಪ್ಪ ದೆ॥ ಸೂರಾಪುರಂ ರಾಯಪ್ಪ ನಾಯ್ಕ
ನಾಡ ಕು॥ ವೆಂಕಪ್ಪ ಲವಾರು
ನಾಡ ಕು॥ ದಾಸಪ್ಪನು ನಾಡ ಕು॥ ಶೇಷಪ್ಪ
ನಾಡಗೌಡ ಹಿರೇದೊಡ್ಡನಗೌಡ ಗೌಡ
ಮಠಪತಿ ಕರಿಬಸಯ್ಯ ಶೆ॥ಕರಿಬಸಪ್ಪ

(ಮತ್ತೆ ಮೂರು ಸಹಿ ಮೋಡಿಯಲ್ಲಿವೆ) (ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿಗಳು (ಸಂ) : ೧೯೮೦: ೧೫-೧೬).

ಹಂಡೆ ಕುರುಬರ ಬಾಲದ ಹನುಮಪ್ಪನಾಯಕನ ವಂಶಸ್ಥರಲ್ಲಿಯ ಹಿರೇ ರಾಮಪ್ಪ ನಾಯಕ (೧೭೭೯-೧೭೨೫) ಮೊದಲಾದವರು ಕುರುಗೋಡಿನ ನೀಲಮ್ಮನ ಮಠಕ್ಕೆ ದಾನದತ್ತಿಗಳನ್ನು ನೀಡಿದ ಎರಡನೇ ವರ್ಷವೇ ನೀಲಮ್ಮನು ಕೊಟ್ಟೂರು ಮಠಕ್ಕೆ ಇಡೀ ಆಸ್ತಿಯನ್ನು ದಾನಪತ್ರದಲ್ಲಿ ಬರೆದು ಕೊಡುವುದರ ಹಿಂದೆ ಯಾವುದೋ ಬಲವಾದ ಕಾರಣವಿರಬೇಕು. ಇಲ್ಲವೆ ಈ ದಾನಪತ್ರವೆ ಆಸ್ತಿಯ ಆಸೆಗಾಗಿ ಸೃಷ್ಟಿಸಿರಬಹುದೆ ಎಂಬ ಶಂಕೆಗಳು ಉದ್ಭವಿಸುತ್ತವೆ. ಕಾರಣ ನೀಲಮ್ಮ ೧೭೭೬ರವರೆಗೆ ಅಂದರೆ ಟಿಪ್ಪು ಸುಲ್ತಾನನ ಜಾಗಿರಿಯನ್ನು ನೋಡಿಕೊಳ್ಳುತ್ತಿದ್ದ ಕುತುಬುದ್ದೀನ್‌ಖಾನ (೧೭೭೬) ಕಪ್ಪಿನ ಚನ್ನಬಸವ ಸ್ವಾಮಿಗಳು (೧೫೫೧೮) ನೀಲಮ್ಮನ ಸಮಕಾಲೀನರು ಎಂಬುದಕ್ಕೆ ದೊರೆತಿರುವ ಆಧಾರಗಳು ಹೊಂದಾಣಿಕೆಯಾಗುತ್ತಿಲ್ಲ.

ಮೌಖಿಕ ಸಾಹಿತ್ಯ : ನೀಲಮ್ಮನ ಕುರಿತ ಜನಪದ ಕಥನಕಾವ್ಯ, ಗೀತೆ, ಕಥೆ, ನಾಟಕ, ಐತಿಹ್ಯ, ನಂಬಿಕೆ, ಆಚರಣೆಗಳು ಅನುಪಮವಾಗಿರುವವು. ಇವು ನೀಲಮ್ಮಳನ್ನು ಅರಿಯಲು ಸಹಾಯಕವಾಗುವವು.

ಪ್ರತಿ ವರ್ಷ ಗೌರಿ ಹುಣ್ಣಿಮೆಗೆ ೮ ದಿವಸ ಸಿಂದಿಗೇರಿಯಲ್ಲಿ ಹಾಗೂ ಹೋಳಿಹುಣ್ಣಿಮೆಗೆ ದೊಡ್ಡ ಬಸವೇಶ್ವರ ಜಾತ್ರೆಯಲ್ಲಿ ಕುರುಗೋಡಿನಲ್ಲಿ ಮತ್ತು ದಿನನಿತ್ಯ ಹೊಲಮನೆಯ ಕೆಲಸಗಳಾದ ಕಳೆ ತೆಗೆಯುವ, ರಾಶಿ ಮಾಡುವ, ಕುಟ್ಟುವ, ಬೀಸುವ ಸಂದರ್ಭಗಳಲ್ಲಿ ನೀಲಮ್ಮನ ಕಥನಕಾವ್ಯ ಜನಪದದಿಂದ ಹಾಡಲ್ಪಡುವವು. ನೀಲಮ್ಮನ ಹುಟ್ಟೂರು ಸಿಂದಿಗೇರಿಯಲ್ಲಿ ಶ್ರೀಮತಿ ಲಕ್ಷ್ಮಮ್ಮ ಗಂಡ ತಿಪ್ಪಣ್ಣ ಚಲುವಾದಿ (೬೫) ಮತ್ತು ಅವರ ಸಂಗಡಿಗರಾದ ಹನುಮಂತಮ್ಮ ದೇವದಾಸಿ (೩೨), ಹುಲಿಗಮ್ಮ ಗಂಡ ತಿಮ್ಮಪ್ಪ ಚಲುವಾದಿ (೨೮), ನೀಲಮ್ಮ

ಗಂಡ ರುದ್ರಪ್ಪ ಚಲುವಾದಿ (೨೪) ಎಲ್ಲರೂ ಸಿಂದಿಗೇರಿ ಊರಿನವರು. ಇವರು ಪ್ರತಿ ವರ್ಷ ಗೌರಿ ಹುಣ್ಣಿಮೆಗೆ ೮ದಿವಸ ಸಿಂದಿಗೇರಿಯಲ್ಲಿ ನೀಲಮ್ಮನ ಕಥನಕಾವ್ಯವನ್ನು ಮಾನಸಿಕ ನೆಮ್ಮದಿ ಹಾಗೂ ಜೀವನ ಶುಭಕ್ಕೆ ಭಕ್ತಿಯಿಂದ ಹಾಡುವರು.

ಇವರು ಹಾಡುವ ಕಥನಕಾವ್ಯದ ರೀತ್ಯಾ ನೀಲಮ್ಮನ ತಾಯಿಯ ಹೆಸರು ಪೋರಮ್ಮ. ಅಣ್ಣನ ಹೆಸರು ರಾಮಭೂಪ. ಊರು ಸಿಂದಿಗೇರಿ. ಪೋರಮ್ಮನ ಮಗಳಾದ ನೀಲಮ್ಮನ ಪಡೆಯಲು ಬಸವದೇವನೊಬ್ಬನು ಗೂಳಿ ಮೇಲೆ ಬರುವ ಪರಿ ಈ ಕಾವ್ಯದಲ್ಲಿ ಹೀಗೆ ಚಿತ್ರಿತವಾಗಿದೆ.

ಆರು ಗೋಧಿ ರೊಟ್ಟಿ ಹೋರಿಮ್ಯಾಲ ಹೇರಿಕೊಂಡು
ಆರೊರುಷ ಬಸವ ತಿರುಗಿದ ಸೋಬಾನ್ವೆ
ಆರೊರುಷ ಬಸವ ತಿರುಗಿದ ಸಿಂಧಿಗೇರಿ
ನಾರಿ ಪೋರಮ್ಮನ ಮಗಳಿಗೆ ಸೋಬಾನ್ವೆ

ಪೋರಮ್ಮನ ಮಗಳಾದ ನೀಲಮ್ಮನ ಪಡೆಯಲು ಬರುವ ಬಸವ, ಕೊಟ್ಟೂರು ಸ್ವಾಮಿ ಮಠ ಪರಂಪರೆಯ ೧೨ನೇ ಸ್ವಾಮಿ ಶ್ರೀಚನ್ನಬಸವ ದೇವರಾಗಿರಬಹುದಾಗಿದೆ.

ನೀಲಮ್ಮ, ಸಿಂದಿಗೇರಿಯ ತನ್ನ ಮನೆಯ ಅಂಗಳದ ಬಚ್ಚಲಿನಿಂದ ಬಯಲಾಗಿರುವ ವಿಷಯ ಜನಜನಿತವಾಗಿರುವುದು. ಕಾವ್ಯದಲ್ಲಿಯೂ ಈ ವಿಷಯ ಹೀಗೆ ಅಡಕವಾಗಿರುವುದು.

ಅಮ್ಮ ಬಚ್ಚಲಕ್ಕ ನೀಲಮ್ಮ ಜಳಕಕ್ಕೆ ಬಂದಾಳೆ ತಂದೇನಂದಾಳ ಅಮ್ಮ ಮಾಯಕಾರ ಜಂಗಮಯ್ಯ ಭಿಕ್ಷೆಗೆ ಬಂದಾನೆ ತಂದೇನಂದಾಳ ಅಮ್ಮ ಭಿಕ್ಷಾವ ತರಲಾಕ ತಾಯಿ ಒಳಯಾಕ ಹೋಗ್ಯಾಳೆ ತಂದೇನಂದಾಳ ಅಮ್ಮ ಬಚ್ಚಲದಾಗಳ ನೀಲಾನ ಎತ್ತಿಕೊಂಡಾನೆ ತಂದೇನಂದಾಳ ಅಮ್ಮ ಮಾಯಕಾರ ಜಂಗಮಯ್ಯ ಮಾಯವಾಗ್ಯಾನೆ ತಂದೇನಂದಾಳ

ಇಲ್ಲಿ ಭಿಕ್ಷೆಗೆ ಬಂದ ಜಂಗಮನು ನೀಲಾಳನ್ನು ಅಪಹರಿಸಿರುವ ವಿಷಯ ಅನಾವರಣಗೊಳ್ಳುವುದು. ಆದರೆ ಈ ವಿಷಯ ಕೊಟ್ಟೂರು ಸ್ವಾಮಿ ಮಠಗಳಿಂದ ಪ್ರಕಟಗೊಂಡ ಹೇಮಕೂಟದ ಯಾವುದೇ ಸಂಚಿಕೆಯಲ್ಲಿಯೂ ಪ್ರಸ್ತಾವಾಗದಿರುವುದು ಚಿಂತಾನಾರ್ಹವಾದುದು.

ನೀಲಮ್ಮಳನ್ನು ಹುಡುಕಲು ತಾಯಿ ಪೋರಮ್ಮ ಊರು ಕೇರಿ, ಕಾಡುಮೇಡು, ಗುಡ್ಡಗಾಡು, ಹಳ್ಳಕೊಳ್ಳಬಾವಿಗಳನ್ನು ಸುತ್ತಾಡುವಳು. ಎಲ್ಲಿಯೂ ಸಿಗದಿದ್ದಾಗ ಹಾಸಿಗೆ ಹಿಡಿಯುವಳು. ಹೊಲದಿಂದ ಮನೆಗೆ ಬಂದ ಅಣ್ಣ ರಾಮಭೂಪ ತಾಯಿಯಿಂದ ವಿಷಯ ತಿಳಿದುಕೊಂಡು ಹುಡುಕುವನು. ಕುರುಗೋಡು ಹಳ್ಳದಲ್ಲಿ ನೀಲಮ್ಮನ ಹೆಜ್ಜೆಗುರುತು ಹಿಡಿಯುವನು. ರಾಮಭೂಪ ಕುರುಗೋಡು ಬಸವ ಕೊಟ್ಟೂರು ಬಸವಗೆ ತನ್ನ ಮಾನ್ಯದ ಸರನಾಡ ಗೌಡ್ಕಿ ನೀಡುವುದಾಗಿ ಹೇಳಿದಾಗಲೂ ಕೊಟ್ಟೂರು ಬಸವ ನೀಲಮ್ಮನ ವಿಷಯ ತನಗೆ ಗೊತ್ತಿಲ್ಲವೆಂದು ಹೇಳಿದಾಗ ರಾಮಭೂಪನು

ನನ್ನ ಚಕ್ರ ಕೊಡ್ಲಿಲಿ ನಿನ್ನ ಪೊಕ್ಕೆ ಕಡದೇನೆ ತಂದೇನಂದಾನ
ನನ್ನ ಬೆಳ್ಳಿ ಕೊಡ್ಲಿಲಿ ನಿನ್ನ ತುಳದೆಬಿಟ್ಟೇನೆ ತಂದೇನಂದಾನ

ಎಂದು ಹೆದರಿಸಿದಾಗಲೂ ಕೊಟ್ಟೂರು ಬಸವ ನೀಲಮ್ಮನ ಸುಳಿವು ನೀಡದಿದ್ದಾಗ ನೀಲಮ್ಮನ ತಾಯಿ ಪೋರಮ್ಮ ಅಸಹಾಯಕಳಾಗಿ ಶಪಿಸುವಳು.

ನೀಲಮ್ಮ ಚಲುವಿ. ಇವಳನ್ನು ಕೊಟ್ಟೂರು ಬಸವನು ಮೆಚ್ಚಿದ ಪರಿ ಇಲ್ಲಿ ಹೀಗೆ ವ್ಯಕ್ತವಾಗುವುದು.

ಜೋಳಿಗೆ ಚೆಂದ ಭಿಕ್ಷಾಕ ಹೋಗಿದ್ದೆ
ಮೆಚ್ಚಿಬಂದಾ ಈಕೆ ಚಲವಿಗೆ ಸೋಬಾನ್ವೆ

ನೀಲಮ್ಮನ ಮೇಲೆ ಕೊಟ್ಟೂರು ಬಸವನ ಗಾಢವಾದ ಪ್ರಭಾವ ಮೊದಲಿನಿಂದಲೇ ಆಗಿತ್ತು. ಕೊಟ್ಟೂರು ಬಸವನ ಬರುವಿಕೆಯನ್ನು ನೀಲಮ್ಮಳು ಕಾಯುತ್ತಿದ್ದ ಪರಿ ಇಲ್ಲಿ ಹೀಗೆ ವ್ಯಕ್ತವಾಗುವುದು.

ಹತ್ತಮಂದ್ಯೋರಿದ್ದಾಗೆ ಹೊತ್ತವೇ ನೋಡುತ್ತಿದ್ದೆ
ಹುಚ್ಚೆಬ್ಬಿಸಿ ನನ್ನ ಕರತೆಂದ್ಯೋ ಸೋಬಾನ್ವೆ

ಬಳ್ಳಾರಿಯ ದೊರೆಗಳಾದ ಹಂಡೆ ಕುರುಬರ ಬಾಲದ ಹನುಮಪ್ಪ ನಾಯಕನ ವಂಶಜರು ಕೊಟ್ಟೂರು ಸ್ವಾಮಿ ಹಾಗೂ ನೀಲಮ್ಮನ ಮಠಗಳಿಗೆ ಅಲ್ಲಲ್ಲಿ ದಾನದತ್ತಿಗಳನ್ನು ನೀಡಿರುವುದಕ್ಕೆ ದಾಖಲೆಗಳು ಸಾಕ್ಷಿಯಾಗಿವೆ. ಕುರುಗೋಡು ನೀಲಮ್ಮನ ಮಠದಲ್ಲಿರುವ ತೂಗುಮಂಚ ನೀಡಿದವರೂ ಈ ದೊರೆಗಳೆ ಅದೆಲ್ಲ ಹಾಡಿನಲ್ಲಿ ಬಂದಿದೆ.

ಶಿವಶರಣೆ ಸಿಂದಿಗೇರಿ ನೀಲಮ್ಮನವರ ಜಾನಪದ ಹಾಡು: ಈ ಹಾಡನ್ನು ಹಾಡಿ ಬರೆದು ಹಸ್ತಪ್ರತಿ ನೀಡಿದವರು ಸಿಂದಿಗೇರಿ ಊರಿನ ೮೦ ವರ್ಷದ ಶ್ರೀಮತಿ ದೊಡ್ಡನಗೌಡ್ರ ಬಸಮ್ಮನವರು. ಇವರು ಲಾಳಗೊಂಡರು ಮತ್ತು ನೀಲಮ್ಮನ ವಂಶಜರು. ಇವರ ಮತ್ತು ಶ್ರೀಮತಿ ಲಕ್ಷ್ಮಮ್ಮ ಚಲುವಾದಿಯವರು ಹಾಡಿರುವ ನೀಲಮ್ಮನ ಕಥನಕಾವ್ಯದಲ್ಲಿ ಯಾವುದೇ ಹೇಳಿಕೊಳ್ಳುವಂತಹ ವ್ಯತ್ಯಾಸಗಳಿಲ್ಲ. ಕಥನಕಾವ್ಯದಲ್ಲಿ ಸೋಬಾನ್ವೆ ಮತ್ತು ತಂದೇನಂದಾಳ ಎಂಬ ಸೊಲ್ಲುಗಳು ಹಿನ್ನೆಲೆ ಗಾಯಕರಿಂದ ಹಾಡಲ್ಪಡುವವು. ಇದರಿಂದ ಮುಖ್ಯ ಗಾಯಕಿಗೆ ಕಾವ್ಯದ ಮುಂದಿನ ಸಾಲು ನೆನಪಿಸಿಕೊಳ್ಳಲು ಹಾಗೂ ಅಲ್ಪ ವಿಶ್ರಾಂತಿ ಪಡೆಯಲು ಸಹಾಯಕವಾಗುವುದು ಈ ಹಾಡುಗಳನ್ನು ಕುರುಗೋಡಿನ ಕುರುಬ ಸಮುದಾಯದವರೂ ಡೊಳ್ಳಿನ ಮೇಲೆ ಹಾಡುವರು.

ಕುರುಗೋಡು ಶ್ರೀ ದೊಡ್ಡ ಬಸವೇಶ್ವರರ ಸುಪ್ರಭಾತ: ಕುರುಗೋಡು ಶ್ರೀ ದೊಡ್ಡ ಬಸವೇಶ್ವರ, ಸಿಂದಿಗೇರಿಯ ನೀಲಮ್ಮನ ಅವಿನಾಭಾವ ಸಂಬಂಧದಲ್ಲಿ ಜನಪದರ ಭಾವನೆಗಳನ್ನು

ಹನುಮಂತರೆಡ್ಡಿ. ವೈ ಮತ್ತು ಮಾರುತೀಶ (೧೯೮೬:೧೦) ಅವರು ಸುಪ್ರಭಾತದಲ್ಲಿ ಹೀಗೆ ಹೆಣೆದಿರುವರು.

> ಸಿಂದಿಗೇರಿಯ ಶಿವಭಕ್ತೆ ನೀಲಮ್ಮನು ನಿನಗೊಲಿದು ಬಂದು
> ನಿನ್ನಯ ಸನಿಹದಿ ನಿಂದು, ತಪವಂಗೈದು
> ನಿನ್ನಯ ಕೃಪಾಕಟಾಕ್ಷದಿಂ ಮಹಾನ್ ಶಿವಶರಣೆಯಾಗಿ
> ಅಂತರ್ದಾನವ ನೈಯ್ದಿದ್ದು ಇಂದಿಗೂ ನಿನ್ನಯ ಪಕ್ಕದಲ್ಲಿ
> ಕುರುಹಾಗಿ ಮಂಡಿಸಿಹಳಯ್ಯ ಹೇ ಭಕ್ತ ಜನ ಪೋಷಕ
> ಶಾಂತಿದೂತ ನಂದೀಶ ತವ ಸುಪ್ರಭಾತವು ನಿನಗೆ
> ಏಳು ಏಳಯ್ಯ ಬೆಳಗಾಯಿತೇಳಯ್ಯ ದೊಡ್ಡ ಬಸವೇಶ
> ಸುಪ್ರಭಾತವು ನಿನಗೆ ॥೧೦॥

ಶಿವಶರಣೆ ನೀಲಾಂಬಿಕೆ ದೇವಿಯ ಮಹಾತ್ಮೆ ನಾಟಕ: ೧೯೯೧ರಲ್ಲಿ ಕುಮಾರ ನಿಡಗುಂದಿಯವರಿಂದ ವಿರಚಿತ ಶ್ರೀ ಶಿವಶರಣೆ ನೀಲಾಂಬಿಕೆ ದೇವಿಯ ಮಹಾತ್ಮೆ ನಾಟಕವು ನೀಲಮ್ಮನ ಕುರಿತಾದ ನಾಟಕವಾಗಿ ಹಸ್ತಪ್ರತಿಯಲ್ಲಿದ್ದು, ರೂಲ್ಡ ಕಾಪಿಯಲ್ಲಿ ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ೨೭೭ ಪುಟಗಳಲ್ಲಿ ಸುಂದರವಾಗಿ ಬರೆಯಲ್ಪಟ್ಟಿದೆ. ಇದನ್ನು ಗದಗ ಜಿಲ್ಲೆಯ ಕದಡಿ ಗ್ರಾಮದ ಶ್ರೀ ನೀಲಾಂಬಿಕೆ ನಾಟ್ಯ ಸಂಘದಡಿಯಲ್ಲಿ ಶ್ರಾವಣ ಮಾಸದಲ್ಲಿ ಜರುಗುವ ಕದಡಿಯ ನೀಲಮ್ಮನ ಜಾತ್ರೆಯಲ್ಲಿ ಪ್ರದರ್ಶನ ಗೊಳ್ಳುತ್ತಿದೆ. ಇದರಲ್ಲಿ ಒಟ್ಟು ೨೫ ಪ್ರವೇಶಗಳಿವೆ. ನೀಲಮ್ಮನ ಕುರಿತಿರುವ ಜನಪದ ಕಥೆ, ನಂಬಿಕೆ, ಆಚರಣೆ ಮತ್ತು ಐತಿಹ್ಯ ಗಳನ್ನು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿ ಇದರಲ್ಲಿ ಬಳಸಿ ಕೊಳ್ಳಲಾಗಿದೆ. ಜೋಳದರಾಶಿ ದೊಡ್ಡನಗೌಡರ ಸಹಾಯದಿಂದ ಜೋಳದರಾಶಿ ಗ್ರಾಮದ ಚಲುವಾದಿ ಕಲಾವಿದೆಯರಿಂದ ನೀಲಮ್ಮನ ಕಾವ್ಯ ಪಡೆದು, ಕಥೆ ಕಟ್ಟಿ ಆರಂಭದಲ್ಲಿ ನಾಟಕ ಆಡಲಾಗುತ್ತಿತ್ತು ಎಂದು ಕದಡಿಯ ನೀಲಾಂಬಿಕಾ ನಾಟ್ಯ ಸಂಘದವರು ಹೇಳುವರು. ಐತಿಹಾಸಿಕ ಹಿನ್ನೆಲೆಯ ಈ ಚರಿತ್ರೆಯನ್ನು ಪೌರಾಣಿಕರಿಸಿ ನೀಲಮ್ಮನನ್ನು ದೈವತ್ವಕ್ಕೇರಿಸಿದ ಈ ನಾಟಕ ಕಥಾಸಾರ ಹೀಗಿದೆ:

ಭೂಮಂಡಲದಲ್ಲಿ ಕರಾಳ ಛಾಯಿಸಿರುವುದು. ಅಧರ್ಮ ತಾಂಡವವಾಡುತಿರುವುದು. ಈ ಸುದ್ದಿ ನಾರದರಿಂದ ಕೈಲಾಸಕ್ಕೆ ತಿಳಿಸುವರು. ಪರಿಹಾರಕ್ಕಾಗಿ ಶಿವಪಾರ್ವತಿಯ ಭುವಿಗಿಳಿಸಿ ಪರಿಹರಿಸಲು ಪ್ರಯತ್ನಿಸುವರು. ಪಾರ್ವತಿ ಒಪ್ಪುವಳು.

ತುಂಗಭದ್ರ ನದಿ ದಂಡೆಯ ಹಂಪಿ, ಒಂದು ಪುಣ್ಯಕ್ಷೇತ್ರ. ಇದರ ಸಮೀಪದ ಕುರುಗೋಡು, ಸಿಂಧರು ಆಳಿದ ಹಾಗೂ ದೊಡ್ಡ ಬಸವೇಶ್ವರ ನೆಲೆಸಿದ ಪವಿತ್ರ ಸ್ಥಳ. ಕುರುಗೋಡು ಸಮೀಪದ ಸಿಂದಿಗೇರಿ ಸಿಂಧರ ಮೂಲ ನೆಲೆ. ಸಿಂದಿಗೇರಿಯ ಪೋರಮ್ಮ ಶಿವಭಕ್ತೆ. ಕೆಂಚನಗೌಡ ಪೋರಮ್ಮನ ಗಂಡ. ಬಡವರು ಮಕ್ಕಳಿಗಾಗಿ ಪರಿತಪಿಸುವರು. ಮನೆದೇವರಾದ ಗಿರಿಮಲ್ಲಯ್ಯ ಮತ್ತು ಎಲ್ಲಮ್ಮ ದೇವರಿಗೆ ಮೊರೆಹೋಗುವರು. ಶಿವಪಾರ್ವತಿಯರಾಗಿ ಅವರು ವರ ನೀಡುವರು. ಪಾರ್ವತಿಯು ನೀಲಮ್ಮಳಾಗಿ ಪೋರಮ್ಮನ ಉದರದಲ್ಲಿ ಜನಿಸುವಳು. ನಂದಿ ದೊಡ್ಡಬಸವನಾಗಿ ಹಾಗೂ ಶಿವ ಜಂಗಮನಾಗಿ ಭುವಿಯಲ್ಲಿ ಉದಯಿಸುವರು. ಸಿಂದಿಗೇರಿಯಲ್ಲಿ ನೀಲಮ್ಮನ ಶಿವಭಕ್ತೆಯಾಗಿ ರೂಪುಗೊಳ್ಳುತ್ತಿರುವುದು ತಂದೆ ಕೆಂಚನಗೌಡನಿಗೆ ಬೇಡವಾಗುವುದು. ಮಗಳ ಕೊಲೆಯ ಯತ್ನ ವಿಫಲಗೊಳ್ಳುವುದು. ಪವಾಡ ಸದೃಶ್ಯವಾಗಿ ಹಾವುಗಳಿಂದ ಹುಲ್ಲಿನ ಹೊರೆ ಕಟ್ಟಿಕೊಂಡು ಮನೆಗೆ ಬರುವಳು. ನೀಲಮ್ಮನ ಆದೇಶದಂತೆ ಹಾವುಗಳು ತಂದೆ ಕೆಂಚನಗೌಡನಿಗೆ ಕಚ್ಚುವವು. ಗೌಡ ಮರಣವನಪ್ಪುವನು. ತಾಯಿ ಪೋರಮ್ಮನ ಕಣ್ಣು ತಪ್ಪಿಸಿ ನೀಲಮ್ಮ ಜಂಗಮನೊಂದಿಗೆ ಪರಾರಿಯಾಗುವಳು.

ಸಿಂದಿಗೇರಿಯಿಂದ ಪರಾರಿಯಾದ ನೀಲಮ್ಮ ಕುರುಗೋಡಿನ ಗುಹೆಯೊಂದರಲ್ಲಿ ತಪಗೈಯ್ಯುವಳು. ಕುರುಗೋಡು ದೊಡ್ಡ ಬಸವನಿಂದ ಗುರುದೀಕ್ಷೆ ಪಡೆಯುವಳು. ಕಾಲಾಂತರದಲ್ಲಿ ಕುರುಗೋಡು ಸುಡುಗಾಡಿನಲ್ಲಿ ತಪಗೈಯ್ಯುವ ನೀಲಮ್ಮಳಿಗೆ ಹಂಪಿಯ ದಂಡನಾಯಕ, ಸೇನಾಧಿಪತಿ ನೋಡುವರು. ದಂಡನಾಯಕ ನೀಲಮ್ಮಳೊಂದಿಗೆ ಒಂದಾಗಲು ಪ್ರಯತ್ನಿಸಿ ವಿಫಲಗೊಳ್ಳುವನು. ನೀಲಮ್ಮನ ತಪವನ್ನು ಭಂಗಗೊಳಿಸಲು ಮೊಲದ ಮಾಂಸವನ್ನು ಲಿಂಗದ ಮೇಲೆ ದಂಡನಾಯಕ ಇಟ್ಟು ಕಳುಹಿಸುವನು. ಅದು ಮಲ್ಲಿಗೆ ಹಾರವಾಗುವದು. ನೀಲಮ್ಮ ದಂಡನಾಯಕನಿಗೆ ಶಪಿಸುವಳು. ಸೇನಾಧಿಪತಿ ಹಂಪಿಯಲ್ಲಿ ನೀಲಮ್ಮನ ಮಠ ಕಟ್ಟಿಸುವನು. ನೀಲಮ್ಮ ಕುರುಗೋಡಿನಲ್ಲಿ ದೊಡ್ಡಬಸಪ್ಪನ ಗುಡಿ ಕಟ್ಟಿ ತೇರು ಎಳೆದು ಜಾತ್ರೆ ಜರುಗಿಸುವಳು. ಕುರುಗೋಡು ಕುರುಬರಿಗೆ ಹರಸುವಳು. ಕುರುಬರು ನೀಲಮ್ಮನ ಗುಡಿ ಕಟ್ಟಿ ಜಾತ್ರೆ ಜರುಗಿಸುವರು. ನೀಲಮ್ಮ ಇಂದಿನ ಗದಗ ಜಿಲ್ಲೆಯ ಕದಡಿಯ ಕಡೆಗೆ ದೊಡ್ಡ ಬಸವ (ಕಂಟ್ಯಾ)ನ ಜೊತೆಯಲ್ಲಿ ಲೋಕ ಸಂಚಾರ ಕೈಗೊಳ್ಳುವಳು. ದಾರಿ ಉದ್ದಕ್ಕೂ ದುಷ್ಟರನ್ನು ಶಿಕ್ಷಿಸುತ್ತ ಶಿಷ್ಟರನ್ನು ರಕ್ಷಿಸುತ್ತ ಹರಸುತ್ತ ಮುಂದೆ ಸಾಗುವಳು. ಬನದಟ್ಟಿಯ ಬ್ರಾಹ್ಮಣ ಮಾಧವರಾಯನಿಗೆ ಮಕ್ಕಳ ಫಲ ನೀಡುವಳು. (ಮುದ್ದಾಪುರದ ಪತ್ತಾರ ಬಸವಣೆಪ್ಪನಿಂದ ಅವಮಾನಿತಳಾಗಿ ಶಪಿಸುವಳು. ಗುತ್ತಿಗನೂರಿನಾಗ ಬರಡ ಎಮ್ಮೆಗಳಿಗೆ ಫಲವಂತಿಗೆ ನೀಡಿ ಹಾಲಿನ ಹೊಳೆ ಹರಿಸುವಳು.) ದೇವಸಮುದ್ರದ ದನಕಾಯುವ ಮಕ್ಕಳ ಕುಚೇಷ್ಟೆಗೆ ಶಪಿಸುವಳು. ಗೆಣಿಕೆಹಾಳದಲ್ಲಿ ಕಣ್ಣು ಹೋದವರಿಗೆ ಕಣ್ಣು ಬರಿಸುವಳು. ಕಲ್ಲುಕಂಬದಾಗ ಸತ್ತ ಕೂಸನ್ನು ಬದುಕಿಸುವಳು. ಕದಡಿಯ ಫಕೀರ ಅಲ್ಲಾವುದೀನ್‌ನಿಗೆ ಗುಟ್ಟು ಹೇಳುವಳು. ಆತ ಗುಟ್ಟು ರಟ್ಟು ಮಾಡಿರುವುದಕ್ಕೆ ಶಪಿಸುವಳು. ಕಲ್ಮಠದಲ್ಲಿ ದೊಡ್ಡಬಸವ ಲೀನವಾಗುವನು ಕದಡಿಯ ಕಲ್ಲಮ್ ಕರಕಿ (ಕದಡಿ ಸ್ಮಶಾನ)ವಲ್ಲಿ ನೀಲಮ್ಮ ವಾಸಿಸುವಳು. ಕುಡುವೊಕ್ಕಲಿಗರವಳೆಂದು ಗುರುತಿಸಿ

ಕೊಳ್ಳುವಳು. ಕದಡಿಯವರಿಗೆ ಅಭಯಹಸ್ತ ನೀಡುವಳು. ಬಳ್ಳಾರಿಯ ಗಡಗಿ ಪರಸಪ್ಪನವರಿಗೆ, ಸಕ್ಕರಿ ಕರಡೆಪ್ಪನವರಿಗೆ ಆಶೀರ್ವದಿಸುವಳು. ಗೋಜನೂರ ಭರಮಪ್ಪ, ಸರಾಫದ ಶಿವಪ್ಪ, ಕುರುಬರ ಭೀಮಪ್ಪ, ಹೊಲೆಯರ ಗಿರಿಯಪ್ಪರಿಗೆ ವರವ ನೀಡಿ ಹರಸುವಳು. ಸಂಶಿ, ಮಾಗಳ, ಹುಯಿಲಗೋಳ ಜನರಿಗೆ ವರವನ್ನು ಕೊಡುವಳು. ಸೊರಟೂರು ದೇಶಗತಿ ಬ್ರಾಹ್ಮಣ ಧಣಿಯ ಸ್ಥಳದಲ್ಲಿ ಕದಡಿಯಲ್ಲಿ ನೀಲಮ್ಮ ನೆಲೆಸಿದಳು. ದೇಶಗತಿ ಬ್ರಾಹ್ಮಣ ಅಲ್ಲಿಂದ ಬಿಡಿಸಲು ಪ್ರಯತ್ನಿಸುವನು. ಅವನ ಉದ್ಧಟತನದಿಂದ ಅವಮಾನ ಕ್ಕೊಳಗಾಗಿ ನೀಲಮ್ಮ ಶಾಪಕೊಡುವಳು. ನೀಲಮ್ಮಳಿಗೆ ಕದಡಿ ಬಿಡಿಸಲು ಆಗುವುದಿಲ್ಲ. ಕದಡಿ ಕಲ್ಯಾಣವಾಗಿಸಿ ನೀಲಮ್ಮ ಅಲ್ಲಿಯೇ ನೆಲೆಸುವಳು. ಹಂಪಿಯ ದಂಡನಾಯಕನು ದರ್ಶನ ಪಡೆದು ಕ್ಷಮೆ ಕೇಳುವನು. ನೀಲಮ್ಮನ ೮೦೦ ಮಠಗಳು ಉದಯಿಸಿದವು. ಶುದ್ಧ ಶ್ರಾವಣ ಮಾಸದಲ್ಲಿ ತನ್ನ ಜಾತ್ರೆಯನ್ನು ಕದಡಿಯಲ್ಲಿ ನೆರವೇರಿಸಲು ಕದಡಿಯ ಭಕ್ತರಿಗೆ ಹೇಳಿ ನೀಲಮ್ಮ ಅಲ್ಲಿಯೇ ಕೈಲಾಸ ಸೇರುವಳು. ಹಾಗೆಯೇ ಜಾತ್ರೆ ಜರುಗುವುದು. ಭಕ್ತರು ದರ್ಶನ ಪಡೆದು ಪುನೀತರಾಗುವರು.

ಈ ನಾಟಕದಲ್ಲಿ ಸೃಷ್ಟಿಸಿದ ಪಾರಿಯ ಪಾತ್ರ ಬಹು ಮುಖ್ಯವೆನಿಸುವುದು. ಕಾರಣ ನೀಲಮ್ಮನ ಪವಾಡಗಳೆಲ್ಲವೂ ಪಾರಿಯ ಕನಸಿನಿಂದ ಬಹಿರಂಗಗೊಳ್ಳುವವು. ಆದರೆ ಪಾರಿಯ ಯೌವನ ಇಡೀ ನಾಟಕದಲ್ಲಿ ಕರಗುವುದೇ ಇಲ್ಲ. ಬೇರೆ ಪಾತ್ರಗಳಿಗೂ ಹುಟ್ಟು, ಬೆಳವಣಿಗೆ, ಸಾವುಗಳಿದ್ದಂತೆ ಪಾರಿಯ ಪಾತ್ರಕ್ಕಿಲ್ಲ. ಈ ಪಾತ್ರ ಮನರಂಜನೀಯವಾಗಿದ್ದು ನಾಟಕದ ಮುಂದುವರಿಕೆಗೆ ಸಹಕಾರಿಯಾಗಿರುವುದು.

ಈ ನಾಟಕದಲ್ಲಿ ಮುಖ್ಯವಾಗಿ ರಾರಾವಿ ಎಲ್ಲಮ್ಮ ಮತ್ತು ಗಿರಿಮಲ್ಲಯ್ಯ ದೈವಗಳು ನೀಲಮ್ಮನ ಮನೆದೇವರಾಗಿದ್ದರೂ ನಾಟಕದ ಮುಂದುವರಿದ ಭಾಗದಲ್ಲಿ ಈ ದೈವಗಳೂ ಎಲ್ಲಿಯೂ ಪ್ರಧಾನವಾಗಿ ಕಂಡುಕೊಳ್ಳುವುದೇ ಇಲ್ಲ. ಬದಲಾಗಿ ನೀಲಮ್ಮ ಮತ್ತು ಕುರುಗೋಡು ದೊಡ್ಡ ಬಸವೇಶ್ವರರ ಅವಿನಾಭಾವ ಸಂಬಂಧ ಮುಂದುವರಿಯುವುದು. ತಮ್ಮ ಮನೆದೈವಗಳ ವಾರಗಳು ಭಾನುವಾರ, ಮಂಗಳವಾರ ಮತ್ತು ಶುಕ್ರವಾರವಿದ್ದರೂ ನೀಲಮ್ಮನ ನಾಮಕರಣ ಸೋಮವಾರ ಜರುಗಿಸುವುದರಿಂದ ಇಲ್ಲಿ ಲಿಂಗಾಯತರ ಪ್ರಭಾವ ಎದ್ದು ಕಾಣುವುದು. ನೀಲಮ್ಮ ದನ ಕಾಯುವುದು, ನೇಗಿಲಯೋಗಿ ಬಸವನೇ ತನ್ನ ದೈವವೆಂದು ಒಪ್ಪಿ ನಡೆಯುವುದು ಪಶುಪಾಲನೆಯ ಹಿನ್ನೆಲೆಯನ್ನು ಧ್ವನಿಸುವುದು. ನೀಲಮ್ಮನ ಕೊನೆ ದಿನಗಳಲ್ಲಿ ನಂದಿಯ ರೂಪದಲ್ಲಿಯೇ ದರ್ಶನ ನೀಡುವುದು ಒಂದು ವಿಶೇಷವೇ. ತಂದೆ ಕೆಂಚನಗೌಡ ನಾಸ್ತಿಕನು. ಜಂಗಮರೊಂದಿಗಿನ ತನ್ನ ಮಗಳ ಸಲಿಗೆ ಸಹಿಸದವನು. ಮಾನಮರ್ಯಾದೆಗಾಗಿ ತನ್ನ ಮಗಳಾದ ನೀಲಮ್ಮನನ್ನೇ ಕೊಲ್ಲಲು ಹೊಂಚು ಹಾಕಿ ನಾಗರಾಜ (ಹಾವು)ನನ್ನು ಬಿಡುವನು. ಇದನ್ನರಿತ ನೀಲಮ್ಮ ಅದೇ ಹಾವಿನಿಂದ ಕಚ್ಚಿಸಿ ತಂದೆಯನ್ನು ಕೊಲ್ಲಿಸುವಳು. ತಂದೆಯ ಸಾವಿಗೆ ನೀಲಮ್ಮ ಸಂತೋಷಗೊಳ್ಳುವಳು. ತಾಯಿಯ ಕಣ್ಣು ತಪ್ಪಿಸಿಕೊಂಡು ಜಂಗಮನೊಂದಿಗೆ ಓಡಿಹೋಗಲು ನೀಲಮ್ಮ ಸಿದ್ಧಗೊಳ್ಳುವಳು. ಹಲವಾರು ಪವಾಡಗಳನ್ನು ಗೈಯುವಳು. ಅಷ್ಟೇ ವಿರೋಧಿಗಳಿಂದ ಅವಮಾನಿತಗೊಳ್ಳುವಳು, ವಿರೋಧಿಗಳನ್ನು ಎದುರಿಸಿ ಕದಡಿಯಲ್ಲಿ ಶಿವಸಾಯುಜ್ಯ ಗೊಳ್ಳುವಳು.

ಐತಿಹ್ಯಗಳು

೧. ದಾವಣಿ ಲಾಳಗೊಂಡ ಲಿಂಗಾಯುತರು: ನೀಲಮ್ಮನ ಕಾಲಮಾನದಿಂದಲೇ ಲಾಳಗೊಂಡರಲ್ಲಿ ದಾವಣಿಯವರೆಂಬ ಒಂದು ಪ್ರಭೇದ ಜನ್ಮತಾಳಿ ಬೆಳಕಿಗೆ ಬಂದಿರುವುದು. ಈ ಸಂಬಂಧ ಹೆಳವರು ಹೇಳುವ ಮಹತ್ವದ ಐತಿಹ್ಯವೊಂದು ಈ ಕೆಳಗಿನಂತಿದೆ.

ಲಾಳಗೊಂಡರು ಮೂಲತ: ಪಶುಪಾಲಕರು. ಇವರಲ್ಲಿ ನೀಲಮ್ಮನ ಸೋದರರು ಕುರುಗೋಡು ಸಮೀಪದ ಸಿಂದಿಗೇರಿಯಲ್ಲಿ ಆನೆಗೊಂದಿ ಅರಸರ ಅಧೀನದಲ್ಲಿ ಸರನಾಡಗೌಡ್ಕಿ ಮಾಡುತ್ತಿದ್ದರು. ನೀಲಮ್ಮ ಸುಂದರಿ, ಶಿವಶರಣೆ ಮತ್ತು ಕುರುಕೋಡು ದೊಡ್ಡ ಬಸಪ್ಪನ ಭಕ್ತೆಯಾಗಿದ್ದಳು. ಇವಳ ಸೌಂದರ್ಯದ ಸುದ್ದಿ ಕೇಳಿದ ಆನೆಗೊಂದಿ ಅರಸ ಇವಳನ್ನು ನೋಡಲೆಂದೇ ಎಲ್ಲರಿಗೆ ಊಟಕ್ಕೆ ಆಮಂತ್ರಿಸುವನು. ಎಲ್ಲರೂ ಊಟಕ್ಕೆ ಬರುವರು. ಆದರೆ, ನೀಲಮ್ಮ ಮಾತ್ರ ಬರುವುದಿಲ್ಲ. ಅರಸ ನೀಲಮ್ಮನ ಸೋದರರಿಗೆ ನೀಲಮ್ಮಳನ್ನು ಊಟಕ್ಕೆ ಕಳುಹಿಸಲು ಹೇಳುವನು. ಸೋದರರು ಅರಸನ ಆಜ್ಞೆಯಂತೆ ತಮ್ಮ ಸೋದರಿ ನೀಲಮ್ಮಳಿಗೆ ಊಟಕ್ಕೆ ಹೋಗಲು ಹೇಳುವರು. ಆಗ ನೀಲಮ್ಮಳು ನೀವು ಊಟ ಮಾಡಿದ ಮೇಲೆ ನಾನೂ ಊಟ ಮಾಡಿದ ಹಾಗೆ ಅಂತ ಅರಸನಿಗೆ ತಿಳಿಸಲು ತಮ್ಮ ಸೋದರರಿಗೆ ಹೇಳುವಳು. ಸೋದರರು ಹಾಗೆಯೇ ಅರಸನಿಗೆ ಹೇಳಿದಾಗ, ಅರಸನು ಅದು ಹೇಗೆ ಸಾಧ್ಯ, ಹಾಗಾದರೆ ನೀವು ಊಟ ಮಾಡಿರುವುದನ್ನೇ ನಿಮ್ಮ ಸೋದರಿಗೆ ಕಾರಲು (ವಾಂತಿ ಮಾಡಲು) ಹೇಳಿರೆಂದನು. ಆಗ ಅರಸ ಹೇಳಿದ ಮಾತನ್ನು ಸೋದರಿಗೆ ತಿಳಿಸಿದ್ದಾಗ, ಸೋದರಿ ನೀಲಮ್ಮ ಸೋದರರು ಊಟ ಮಾಡಿರುವುದನ್ನೇ ಕಾರಿ ಪವಾಡ ಸಾದೃಶ್ಯಳಾದಳು. ಅರಸನ ಮನದಿಚ್ಛೆ ಫಲಿಸುವುದಿಲ್ಲ. ಕೋಪಗೊಂಡ ಅರಸ ವಾದಿಮಾಡಿ ಸರನಾಡಗೌಡ್ಕಿ ಕಸಿದುಕೊಳ್ಳುವನು ಮತ್ತು ತನ್ನ ರಾಜ್ಯ ಬಿಟ್ಟು ಹೋಗಲು ನೀಲಮ್ಮನ ಸೋದರರಿಗೆ ಆಜ್ಞಾಪಿಸುವನು. ನೀಲಮ್ಮ, ಅವಳ ಸೋದರರು ಮತ್ತು ಲಾಳಗೊಂಡ ಬಂಧುಗಳನೇಕರು ಸಂಸಾರ ಸಮೇತ ತುಂಗಭದ್ರ ನದಿದಾಟಿ ಇಂದಿನ ಮುಂಡರಗಿ ತಾಲೂಕಿನ ಬಾಗೋಡಿಗೆ ಬಂದರು. ಇವರೊಂದಿಗೆ ತಂದಿದ್ದ ಸಹಸ್ರಾರು ದನಗಳನ್ನು ಕಟ್ಟಲು ಹಗ್ಗವಿರಲಿಲ್ಲ. ಆಗ ನೀಲಮ್ಮ

ಗೂಟ ಹೊಡೆದು ತನ್ನ ಕೊರಳಾಗಿನ ಬಂಗಾರದ ಸರಗಿಯಿಂದ ದಾವಣಿ ಮಾಡಿ ದನಗಳನ್ನು ಕಟ್ಟಿ ಪವಾಡಗೈದಳು. ಅಂದಿನಿಂದ ಇವರಿಗೆ ದಾವಣಿಯವರೆಂಬ ಹೆಸರು ಪ್ರಾಪ್ತವಾಯಿತು. ಲಾಳಿ ಹೊಡೆಯುವ (ಹಿಂದಕ್ಕೆ ಮುಂದಕ್ಕೆ ಹೆಜ್ಜೆ ಹಾಕುವ) ಗೂಳಿ ಎತ್ತು ತೆಗೆದುಕೊಂಡು ಬಳ್ಳಾರಿಯತ್ತ ಬಂದು ನೆಲೆಗೊಂಡವರಿಗೆ ಲಾಳಿಗೊಂಡರೆಂಬ ಹೆಸರು ಮುಂದುವರಿಯಿತು ಎಂದು ವಕ್ತ ಯಲ್ಲಪ್ಪ ಹೆಳವರು ಹೇಳುವರು.

ದಾವಣಿಯವರೆಂಬ ಹೆಸರಿನ ಲಾಳಗೊಂಡರು ತೊಳಲಿ, ಮಾಗಳದಲ್ಲಿ ಗೌಡ್ಕಿ ಮಾಡಿದರು. ಧಾರವಾಡ ಜಿಲ್ಲೆಯ ಮಾರಡಗಿ, ನೆಲ್ಲಿಹರವಿ, ತಡಸ, ಜಿನ್ನೂರು, ಕಲಾನೂರು, ಬಾಗೋಳಿ, ಹಾಸಗಟ್ಟಿ, ಚಿನ್ನೂರು, ಬಿದರಳ್ಳಿ, ಬಾಗೋಡಿ, ಬಾಗೇವಾಡಿ, ಪರಸ್, ನೆಲ್ಲೇರಿ, ಮುಕ್ಕುಂದಿ, ಹವನೂರುಗಳಲ್ಲಿ ಬಿಜಾಪುರ ಜಿಲ್ಲೆಯ ಕಲಕೇರಿ, ಬೀಳಗಿ, ಅಲಿಗೇರಿ, ಜಕಾನ್ನಟ್ಟಿ, ಗುದನ್ನಟ್ಟಿ, ಹಿರೆನಂದಿ, ಕೆರೂರು, ಧರ್ಮಟ್ಟಿ, ಹುಲಿಕಟ್ಟಿ, ಚಿಲಕಿಬಾವಿಗಳಲ್ಲಿ ಬೆಳಗಾವಿ ಜಿಲ್ಲೆಯ ಮಂಟೂರು, ಸಿರವಾಳ, ಚಿಂತಲಿಗಳಲ್ಲಿ ಮತ್ತು ಗುಲಬರ್ಗಾ ಜಿಲ್ಲೆಯ ಅ(ಕ)ಕ್ಕೇರಿ ಹಾಗೂ ಶಿವಮೊಗ್ಗ ಜಿಲ್ಲೆಯ ಸುಮನಹಳ್ಳಿ ಇತ್ಯಾದಿ ಗ್ರಾಮಗಳಲ್ಲಿಯೂ ದಾವಣಿ ಯವರೆಂಬ ಲಾಳಗೊಂಡರ ಗೌಡ್ಕಿ ಮಾಡಿದರೆಂದು ಯಲ್ಲಪ್ಪ ಹೆಳವರು ಹೇಳುವರು.

ಹೈನ ನೀಡುವುದಕ್ಕೆ ಮತ್ತು ಕಣಿ ತೋಡುವುದಕ್ಕೆ ನಿರ್ಬಂಧಃ ಬಳ್ಳಾರಿ ತಾಲೂಕಿನ ಗೆಣಿಕೆಹಾಳದಲ್ಲಿ ಲಾಳ ಗೊಂಡರು ಯಾರಿಗೂ ಹೈನ ಮಾರುವುದಿಲ್ಲ. ತಮ್ಮ ಸಮುದಾಯದವರು ಮರಣ ಹೊಂದಿದಾಗ ಶವಸಂಸ್ಕಾರದ ಕುಣಿಯನ್ನು ತಮ್ಮವರೆ ತೋಡಿ ಕೊಳ್ಳುವರು. ಈ ಸಂಪ್ರದಾಯ ಇಂದಿಗೂ ಮುಂದುವರಿಸಿಕೊಂಡು ಬಂದಿರುವುದರ ಹಿಂದಿರುವ ಐತಿಹ್ಯವೊಂದು ಹೀಗಿರುವುದು:

ಕುರುಗೋಡಿನ ನೀಲಮ್ಮನ ಮನೆಯಲ್ಲಿ ಮಾದಿಗ ಜಾತಿಯ ರಾಮ ಎಂಬ ಯುವಕ ದನ ಕಾಯಲು ಇದ್ದನು. ದನ ಬಿಟ್ಟುಕೊಂಡು ಹೋಗಬೇಕಿದ್ದ ರಾಮನು ಒಂದು ದಿನ ದನದೊಂದಿಗೆ ಹೋಗದೆ ಕದ್ದು ನೀಲಮ್ಮಳನ್ನು ನೋಡಲು ಮರೆಯಾಗಿ ನಿಂತಿದ್ದ. ಇದರಿಂದ ರಾಮನಿಗೆ ಕೆಲಸದಿಂದ ಬಿಡಿಸಿ ಇನ್ನ ಮುಂದೆ ಮಾದಿಗ ಜಾತಿಯವರಿಗೆ ಹಾಲು, ಮೊಸರು, ಮಜ್ಜಿಗೆ, ನೀಡಕೂಡದು ಮತ್ತು ಅವರಿಂದ ಕುಣಿ ತೋಡಿಸಿಕೊಳ್ಳ ಕೂಡದು ಎಂದು ನಿರ್ಧರಿಸಿ ತಮ್ಮ ಜಾತಿಯವರಿಗೆ ಕಟ್ಟೆಚ್ಚರ ಇಟ್ಟಳು. ಅದರಂತೆಯೇ ಗೆಣಿಕೆಹಾಳದ ಲಾಳಗೊಂಡರು ಇಂದಿಗೂ ನಡೆದುಕೊಳ್ಳುತ್ತಿದ್ದಾರೆ. ಈ ಐತಿಹ್ಯವನ್ನೇ ಗೆಣಿಹಾಳದ ವಕ್ತ ಶ್ರೀ ಪಂಪನಗೌಡರು ಹೀಗೂ ಹೇಳುವರು: ಪರದೆ ಹಿಂದೆಯೇ ನೀಲಮ್ಮ ಇರುತ್ತಿದ್ದರು. ಒಂದು ದಿನ ಮಾದರ ರಾಮನಿಗೆ ಕರ ಬಿಡಲು ಹೇಳಿದಾಗ ಬಿಟ್ಟಿದೆ ಅಮ್ಮ ಅಂತ ಹೇಳುವನು. ನೀಲಮ್ಮ ಹಾಲು ಕರದ ಮೇಲೆ ಮತ್ತೇ ರಾಮನಿಗೆ ಕರ ಬಿಡಲು ಹೇಳಿದಾಗ ಕರದ ಮಗ್ಗುಲಲ್ಲಿ ಬಚ್ಚಿಕೊಂಡ ರಾಮ ಬಿಟ್ಟೆಯಮ್ಮ ಎಂದು ಹೇಳುವನು. ಆಗ ಎಲೋ ಕರ ಬಿಟ್ಟು ಹೊರಗೆ ಹೋಗದೆ ನನ್ನನ್ನು ನೋಡಲು ಇಲ್ಲಿಯೇ ಕುಳಿತಿಯಾ ಎಂತಹ ಅನ್ಯಾಯ ಮಾಡಿದಿಯಾ. ನನ್ನನ್ನು ನೋಡುವ ಆಶೆ ನಿನಗಾಯಿತಾ ಅಂತ ಅವಳು ಗೆಣಿಕೆಹಾಳದ ತಮ್ಮ ಲಾಳಗೊಂಡ ಬಂಧುಗಳಿಗೆ ಇನ್ನ ಮುಂದೆ ಮಾದಿಗರಿಗೆ ಹಾಲು, ಮೊಸರು, ಮಜ್ಜಿಗೆ ನೀಡಬೇಡಿರಿ, ಮಾರಬೇಡಿರಿ ಅವರಿಂದ ಕುಣಿ ತೋಡಿಸಿಕೊಳ್ಳಬೇಡಿರೆಂದು ಹೇಳಿದಳು. ಅಂದಿನಿಂದ ನೀಲಮ್ಮನ ಹೇಳಿಕೆಯಂತೆ ಗೆಣಿಕೆಹಾಳದ ಲಾಳಗೊಂಡರು ಹೈನ ನೀಡುವುದಕ್ಕೆ ಮತ್ತು ಕುಣಿ ತೋಡುವುದಕ್ಕೆ ಮಾದಿಗರಿಗೆ ನಿರ್ಬಂಧ ಹೇರಿ ತಮ್ಮ ಕುಣಿ ತಮ್ಮವರಿಂದಲೇ ತೋಡಿಸಿಕೊಳ್ಳುವ ಸಂಪ್ರದಾಯ ಮುಂದುವರಿಸಿದ್ದಾರೆ. ಆದರೆ ಇತ್ತೀಚೆಗೆ ಹಾಲು ಮಾರಲು ಆರಂಭಿಸಿದ್ದಾರೆ. ಹಾಲು ಮಾರುವ ಕುಟುಂಬಗಳಿಗೆ ಸುಖವಿಲ್ಲವೆಂದು ಹೇಳುವರು.

ನೀಲಮ್ಮನ ಕುರಿತಾದ ಹಲವಾರು ಚಿಂತನಾರ್ಹ ವಿಷಯಗಳೂ ಇವೆ.

ಕದಡಿ ನೀಲಮ್ಮ : ಸಿಂಧಿಗೇರಿ ನೀಲಮ್ಮ, ಕುರುಗೋಡು ನೀಲಮ್ಮ ಮತ್ತು ಕದಡಿ ನೀಲಮ್ಮ ಬೇರೆ ಬೇರೆಯಲ್ಲ. ಈ ಮೂರು ಸ್ಥಾನಗಳಲ್ಲಿ ನೀಲಮ್ಮ ಗಟ್ಟಿಯಾಗಿ ನೆಲೆನಿಂತು ಭಕ್ತರ ಮನದಿಚ್ಛೆಯನ್ನು ಪೂರೈಸಿದುದರ ಫಲವಾಗಿ ಈ ಮೂರು ಸ್ಥಾನಗಳ ಭಕ್ತರು ನೀಲಮ್ಮ ತಮ್ಮ ಸ್ಥಾನದವಳೆಂದು ಗುರುತಿಸುವುದುಂಟು. ಸಿಂದಿಗೇರಿ ಮತ್ತು ಕುರುಗೋಡುಗಳಿಗಿಂತಲೂ ಕದಡಿಯಲ್ಲಿ ನೀಲಮ್ಮನ ಪ್ರಚಾರಕ ಅಂಶಗಳು ಅಧಿಕವಾಗಿರುವವು.

ಕದಡಿ, ಗದಗ ಜಿಲ್ಲೆಯ ಒಂದು ಪುಟ್ಟಗ್ರಾಮ. ಇದು ನೀಲಮ್ಮನ ಕೈವಲ್ಯ ಸ್ಥಾನ ಎಂಬುದೊಂದು ವಿಶೇಷ. ಈ ಗ್ರಾಮದಲ್ಲಿ ಲಾಳಗೊಂಡರ ಕುಟುಂಬಗಳಿಲ್ಲ. ನೀಲಮ್ಮ ಕುಡುವೊಕ್ಕಲಿಗರವಳು ಎಂದು ನಂಬುವರು. ಇಲ್ಲಿಯ ಕುಡುವೊಕ್ಕಲಿಗರು, ಕುರುಬರು, ಲಿಂಗಾಯುತರು ವಿಶೇಷವಾಗಿ ನೀಲಮ್ಮನಿಗೆ ನಡೆದುಕೊಳ್ಳುವರು. ಸಿಂದಿಗೇರಿ ಮತ್ತು ಕುರುಗೋಡು ಪರಿಸರದ ಭಕ್ತರಿಗೆ ನೀಲಮ್ಮನ ಐಕ್ಯಸ್ಥಾನದ ಮಾಹಿತಿ ಸ್ಪಷ್ಟವಾಗಿ ಗೊತ್ತಿಲ್ಲ. ಆದರೆ ಕದಡಿಯ ಭಕ್ತರು ನೀಲಮ್ಮನ ಐಕ್ಯಸ್ಥಾನ ಕದಡಿಯೇ ಇರುವುದು ಎಂದು ಭಕ್ತಿಯಿಂದ ನಡೆದುಕೊಳ್ಳುವರು. ನೀಲಮ್ಮ ಸುಮಾರು ೨೦೦ ವರ್ಷಗಳ ಹಿಂದೆ ೨೫ ವರ್ಷದ ವಯಸ್ಸಿನಲ್ಲಿ ಕದಡಿಗೆ ಬಂದಿರ ಬಹುದಾಗಿದೆ. ಅವಳು ಎತ್ತಿನ ಮೇಲೆ ಬಂದವಳು ಯಾರಿಗೂ ಕಾಣುತಿರಲಿಲ್ಲ. ದರ್ಶನವೂ ನೀಡುತ್ತಿರಲಿಲ್ಲ. ಡಬ್ಬಗಳ್ಳಿನ ಸ್ಮಶಾನದಲ್ಲಿ ವಾಸವಾಗಿದ್ದಳು. ಎತ್ತಿನ ಗಂಟೆಯ ಶಬ್ದ ಕೇಳಿದಾಗ ಮಾತ್ರ ನೀಲಮ್ಮ ಬಂದಿರುವಳೆಂದು ತಿಳಿದು ಭಕ್ತರು ಎತ್ತಿನ

ದರ್ಶನ ಪಡೆಯುತ್ತಿದ್ದರು. ನೀಲಮ್ಮನ ಮಾತು ಕೇಳುತ್ತಿತಷ್ಟೆ ನೀಲಮ್ಮ ಕಾಣುತ್ತಿರಲಿಲ್ಲ, ಆದರೆ ಹುಯಿಲಗೋಳದ ಮಹಮದ್‌ನು ನೀಲಮ್ಮನನ್ನು ನೋಡುವನು ಮತ್ತು ಶಿಷ್ಯನಾಗುವನು. ನೋಡಿರುವುದನ್ನು ಯಾರಿಗೂ ಹೇಳಕೂಡದೆಂದು ನೀಲಮ್ಮ ಆತನಿಗೆ ಹೇಳಿದಳು. ಆತನಿಗೆ ಒಳ್ಳೆಯದಾಗುವುದು. ಆದರೆ ಆತ ಈ ವಿಷಯ ಕುಡುವೊಕ್ಕಲಿಗರಿಗೆ ಬಾಯಿತಪ್ಪಿ ಹೇಳಿದ್ದರಿಂದ ರಕ್ತಕಾರಿ ಸಾಯುವನು. ಹುಯಿಲಗೋಳದಿಂದ ಇಂದಿನ ಕುಂದಗೋಳ ತಾಲೂಕಿನ ಸಂಶಿಗೆ ಹೋಗುತ್ತಿದ್ದ ದಾರಿಯಲ್ಲಿ ಒಂದು ಸತ್ತ ಹೆಣವನ್ನು ನೀಲಮ್ಮ ಬದುಕಿಸುವಳು. ಹುಯಿಲಗೋಳ ಮತ್ತು ಸಂಶಿಯಲ್ಲಿ ಭಕ್ತರು ನೀಲಮ್ಮನ ಗದ್ದುಗೆ ಮಾಡಿ ಪೂಜಿಸುವರು. ಈ ಭಾಗದಲ್ಲಿ ಹಲವಾರು ಪವಾಡಗಳನ್ನು ಮಾಡಿ ಅಪಾರ ಭಕ್ತರನ್ನು ಪಡೆದಳು. ಕೊನೆಗೆ ಕದಡಿಯ ಡಬ್ಬಗಳ್ಳಿನ ಸ್ಮಶಾನದಲ್ಲಿ ಐಕ್ಯವಾದಳು ಎಂದು ವಕ್ತೃಗಳಾದ ಹನುಮಂತಪ್ಪ ಪೂಜಾರ, ಶಿವಣ್ಣ ದೇಸಾಯಿ, ಪಿ.ಆರ್. ಗೋಜನೂರು ಅವರು ಹೇಳುವರು. ನೀಲಮ್ಮನ ವಕ್ತೃಸ್ಥಾನದಲ್ಲಿ ನೀಲಮ್ಮನ ಸುಂದರವಾದ ದೇವಸ್ಥಾನ ಕಟ್ಟಲಾಗಿದೆ. ದೇವಸ್ಥಾನಕ್ಕೆ ಸಂಬಂಧಿಸಿದಂತೆ ಒಟ್ಟು ೨ ಎಕರೆ ೫ ಗುಂಟೆ ಭೂಮಿಯಿರುವುದು. ಅದು ಮೊದಲು ಸ್ಮಶಾನ ಭೂಮಿಯಾಗಿದ್ದು ಸೊರಟೂರು ದೇಸಾಯಿಯವರ ದಾಗಿತ್ತು. ದೇವಸ್ಥಾನದಲ್ಲಿ ನೀಲಮ್ಮನ ಮೂರ್ತಿ ಸ್ಥಾಪಿಸಲಾಗಿದೆ. ಕಪ್ಪು ಶಿಲ್ಪದ ನೀಲಮ್ಮನ ಮೂರ್ತಿ ನೋಡಲು ಮನೋಹರ ವಾಗಿದೆ. ದೇವಸ್ಥಾನವು ಹಿರೆಹಳ್ಳದ ದಡದಲ್ಲಿದೆ. ದೇವಾಲಯಕ್ಕೆ ಹೊಂದಿಕೊಂಡು ದೇವಸ್ಥಾನದ ಪೂಜಾರಿಯ ಮನೆಯಿದೆ. ೨೩ವರ್ಷದ ಶ್ರೀ ಮಹಾದೇವಯ್ಯನವರು ಈ ಮಠದ ಪ್ರಸ್ತುತ ಮಠಿ ಸ್ವಾಮಿಗಳಾಗಿರುವರು. ದೇವಾಲಯದ ಅಂಗಳದಲ್ಲಿ ನೀಲಮ್ಮನ ತೇರಿದೆ. ಇಲ್ಲಿಂದ ಸುಮಾರು ಅರ್ಧ ಕಿಲೋ ಮೀಟರ ದೂರದಲ್ಲಿ ನೀಲಮ್ಮಳು ಮೊದಲು ಬಂದು ನೆಲೆಗೊಂಡಳೆಂದು ಹೇಳಲಾಗುವ ಸ್ಥಳವಿದೆ. ಅದಕ್ಕೆ ನೀಲಮ್ಮನ ಪಾದುಗಟ್ಟೆ ಎಂದೆನ್ನುವರು. ಶ್ರಾವಣ ಮಾಸದಲ್ಲಿಯ ನೀಲಮ್ಮನ ಜಾತ್ರೆಯ ನೀಲಮ್ಮನ ದೇವಸ್ಥಾನದಿಂದ ಪಾದುಗಟ್ಟೆಯವರೆಗೆ ಭಕ್ತರು ತೇರು ಎಳೆಯುವರು. ಆಸುಪಾಸಿನ ಗ್ರಾಮದ ಸಹಸ್ರಾರು ಭಕ್ತರು ಜಾತ್ರೆಯಲ್ಲಿ ಭಾಗವಹಿಸಿ ದರ್ಶನ ಪಡೆಯುವರು. ಕದಡಿಯಲ್ಲಿ ನೀಲಮ್ಮ, ನೀಲಪ್ಪ ಎಂಬ ಹೆಸರಿನ ಜನರು ಹೆಚ್ಚಾಗಿರುವರು. ಅಸುಂಡಿ ನೀಲಮ್ಮನ ತಾಯಿಯ ತವರೂರು ಕದಡಿ. ಇವಳು ಮಹಾಶರಣೆ. ಗದುಗಿನಲ್ಲಿ ಇವಳದೊಂದು ಮಠವಿದೆ. ಇವಳಿಗೆ ಈ ಹೆಸರು ಪ್ರಾಪ್ತವಾಗಲು ಕದಡಿ ನೀಲಮ್ಮನ ಖ್ಯಾತಿಯೇ ಕಾರಣ. ಕರ್ನಾಟಕದಲ್ಲಿ ಸುಮಾರು ೫೦ ಮಠಗಳು ನೀಲಮ್ಮನದಿವೆ ಎಂದು ಭಕ್ತರು ಹೇಳುವರು. ನೀಲಮ್ಮ ಜಾತ್ಯಾತೀತವಾಗಿ ಬೆಳೆದಿರುವುದಕ್ಕೆ ಕದಡಿಯ ಭಕ್ತರೇ ಸಾಕ್ಷಿ.

ಕುರುಗೋಡು ನೀಲಮ್ಮ: ನೀಲಮ್ಮನ ಕರ್ಮಸ್ಥಾನ ಕುರುಗೋಡು. ಕುರು ಎಂದರೆ ಬೆಟ್ಟ, ಗೊಂಡ ಎಂದರೂ ಬೆಟ್ಟವೇ. ಕುರುವುಗೊಂಡ ಎಂಬ ಪದದಿಂದಲೇ ಕುರುಗೋಡು ಪದವಾಗಿರಬೇಕೆಂದೂ ಊಹೆಗೆ ಬರುತ್ತದೆ (ಚನ್ನಮಲ್ಲಿಕಾರ್ಜುನ: ೧೯೫೮: ೩.೨೧). ಕುರುವುಗೊಂಡ > ಕುರುಗೋಡಾಗಿರುವುದು. ಗೊಂಡರು ಇಲ್ಲಿಯ ಮೂಲನಿವಾಸಿಗಳು. ಅಲ್ಲಿಯ ಮೂಲಿಗರಿಗೆ ಕುರುವುಗೊಂಡ > ಕುರುಬಗೊಂಡ ಎಂದೂ ಕರೆಯಲಾಗಿ ಕಾಲಾಂತರದಲ್ಲಿ ಕುರುಗೋಡು ಎಂದು ಕರೆದಂತಿದೆ. ಇಂದಿಗೂ ಇಲ್ಲಿಯ ಕುರುಬರಲ್ಲಿ ಗೊಂಡ ಹೆಸರಿನ ಎಡೆಗಳಿವೆ. ಶಂಭಗೊಂಡನು ಹಾವಗೊಂಡನ ಮೊಮ್ಮಗನು. ಹಾವಗೊಂಡನ ಸಮಾಧಿ ಕಲ್ಲುಗ್ಡೇಶ್ವರ (ಬೀರೇಶ್ವರ) ದೇವಸ್ಥಾನದಲ್ಲಿದೆ. ಕುರುಬರ ಈರಕಾರ ಹಾವಗೊಂಡನು ನೀಲಮ್ಮನ ಸಮಕಾಲೀನನೆಂದು ಹೇಳಲಾಗುವುದು. ಇವರ ವಂಶಜರು ಕುರುಗೋಡಿನಲ್ಲಿರುವರು. ಗೊಂಡಮೂಲದ ಕುರುಬಗೊಂಡರು ಕಾಲಾಂತರದಲ್ಲಿ ಕುರುಬರೆಂದು ಕರೆಯಲ್ಪಟ್ಟರು. ಕುರಿಗಾರರೆ ದನಗಾರರಾದ ಮೇಲೆ ಕಿರುಗೋಡೇ ಕುರುಗೋಡಾಗಿರುವಂತಿದೆ. ಗೊಂಡ(ಬೆಟ್ಟ) ರಲ್ಲಿಯ ಕುರಿಗಾರರಿಗೆ ಕುರುಬಗೊಂಡರೆಂದು ಕರೆದರೆ, ಅಲ್ಲಿಂದ ಕವಲೊಡೆದ ದನಗಾರರಿಗೆ ಲಾಳಗೊಂಡರೆಂದು ಕರೆಯಲಾಗಿದೆ. ಲಾಳಗೊಂಡರಿಗೆ ಕುರಿಗಿಂತಲು ದನದ ಮೇಲೆ ಭಕ್ತಿ ಹೆಚ್ಚು. ಹೀಗಾಗಿ ಕಾಲಾಂತರದಲ್ಲಿ ಕಿರು(ಸಣ್ಣ)ಕೋಡಿನ ನಂದಿಯ ಹುಟ್ಟಿಗೆ ಲಾಳಗೊಂಡರೇ ಕಾರಣರಾಗುವರು. ಕಿರುಗೋಡು> ಕುರುಗೋಡಾಗಿರುವುದಾಗಿ ಹೇಳಲಾಗುವುದು. ಬೃಹದಾಕಾರದ ಬಂಡೆಗಲ್ಲಿನಲ್ಲಿ ಕಿರು(ಸಣ್ಣ)ಕೋಡಿನ ನಂದಿಯನ್ನು ಬೃಹದಾಕಾರದಲ್ಲಿ ಕೆತ್ತಿ ಅದನ್ನೇ ದೊಡ್ಡ ಬಸಪ್ಪ(ಸಣ್ಣ ಕೊಂಬಿನ ದೊಡ್ಡ ನಂದಿ) ಎಂದು ಕರೆಯಲಾಗಿತ್ತು. ಬಹುಸಂಖ್ಯಾತ ಲಾಳಗೊಂಡರಿಗೆ ಕುರುಗೋಡು ದೊಡ್ಡಬಸವೇಶ್ವರನೇ ಮನೆದೈವನಾಗಿರುವನು. ಮೂಲದ ಕುರುವುಗೊಂಡರು ಲಾಳಗೊಂಡರಾದ ಮೇಲೆ ಈ ಸ್ಥಳದ ಮೂಲ ಕುರುವುಗೊಂಡ>ಕುರುಗೋಡು ನಾಮ ಮರೆಮಾಚಿ ಕಿರುಗೋಡು>ಕುರುಗೋಡಾಗಿರುವ ಹೆಸರು ಖ್ಯಾತಿಗೊಂಡಂತಿದೆ. ಈ ದೈವಕ್ಕೆ ನಾಯಕರು, ಕುರುಬರು, ಲಾಳಗೊಂಡರು ಭಕ್ತಿಯಿಂದ ನಡೆದುಕೊಳ್ಳುವರು. ಜಾತ್ರೆಯನ್ನು ಹೋಳಿ ಹುಣ್ಣಿಮೆಯಂದು ಪ್ರತಿ ವರ್ಷ ಜರುಗಿಸುವರು.

ಲಾಳಗೊಂಡರು ಕುರುಗೋಡು ಪರಿಸರದ ಮೂಲಿಗರು. ಇಲ್ಲಿಯ ದೊಡ್ಡಬಸವೇಶ್ವರ ದೇವಸ್ಥಾನ ಮತ್ತು ನೀಲಮ್ಮನ ಮಠ ಲಾಳಗೊಂಡರ ಸಾಂಸತಿಕ ಚರಿತ್ರೆಯ ಕೇಂದ್ರ ಬಿಂದು ಗಳಾಗಿರುವವು. ನೀಲಮ್ಮನ ಕುರಿತಿರುವ ಜನಪದರಲ್ಲಿಯ ಅಮೂಲ್ಯ ಮಾಹಿತಿಗಳು ಚಿಂತನಾರ್ಹವಾಗಿವೆ.

೧. ಕೊಟ್ಟೂರು ಸ್ವಾಮಿ ಮತ್ತು ನೀಲಮ್ಮನ ನಡುವೆ ಸದಾ

ಘರದೆ ಇರುತ್ತಿತ್ತು. ಸ್ವಾಮಿಗೆ ಪರದೆಯಾಚೆ ಪಾದಪೂಜೆ ಮಾಡುತ್ತಿದ್ದ ನೀಲಮ್ಮನ ಚೆಲುವನ್ನು ನೋಡಲಾಶೆಯಾಯಿತು. ಆಗ ಘರದ ಕಿತ್ತಿ ನೋಡಿದ ಸ್ವಾಮಿ ಕುರುಡಾದ ಕತೆ ಇದೆ.

೨. ಕುರುಗೋಡಿನಲ್ಲಿ ನೀಲಮ್ಮ ಸ್ನಾನ ಮಾಡಿಕೊಂಡ ಮೇಲೆ ಗೋಡೆ ಮೇಲೆ ಕುಳಿತು ತಲೆ ಒಣಗಿಸಿಕೊಳ್ಳುತ್ತಿದ್ದಳಂತೆ. ಪಕ್ಕದ ಬಡಿಗೇರವನೊಬ್ಬನು ಅಕಸ್ಮಾತ್ ಇವಳನ್ನು ನೋಡಿದನಂತೆ. ಆಗ ನೀಲಮ್ಮ ಅವನ ಬಡತನ ತಿಳಿದು ಸಿರಿವಂತಿಕೆ ದಯಪಾಲಿಸಿದಳಂತೆ. ಇದನ್ನು ಪಕ್ಕದ ಬಣಜಿನೊಬ್ಬ ಹೀಗೆಯೇ ಪ್ರಯತ್ನಿಸಿದರೂ ನೀಲಮ್ಮ ಹರಸಲಿಲ್ಲ. ಆಗ ಬಣಜಿಗರವನು ಸತ್ಯ ಹೇಳಿದ ಮೇಲೆ ಇನ್ನು ಮುಂದೆ ಬಡಿಗರವಂದು ಅಷ್ಟಕಷ್ಟೆ ಎಂದು ನೀಲಮ್ಮ ಹೇಳಿದಳಂತೆ. ಅಂದಿನಿಂದ ಆ ಬಡಿಗರ ಕುಟುಂಬ ಬಡತನದಿಂದ ಬಳಲುತಿದೆ ಎಂದು ಕುರುಗೋಡಿನ ವಕ್ತೃ ಉಮಾಪತಿಗೌಡರು ಹೇಳುವರು.

೩. ನೀಲಮ್ಮನ ಕಂಟ್ಲ್ಯಾ ಗೆಣಿಕೆಹಾಳಿನ ಶಾಂತೇಶ್ವರ ಗುಡಿ ಹತ್ತಿರ ಬರುತಿತ್ತಂತೆ. ಪರದೆ ಹಿಂದಿನಿಂದಲೇ ನೀಲಮ್ಮ ಮಾತಾಡುತ್ತಿದ್ದಳಂತೆ. ಯಾರಿಗೂ ಕಾಣುತ್ತಿದ್ದಿಲ್ಲವಂತೆ. ನಾಯಕನಹಟ್ಟಿ ತಿಪ್ಪೇರುದ್ರ ಸ್ವಾಮಿಯ ತೇರಿಗೆ ನೀಲಮ್ಮ ಹೋಗುತ್ತಿದ್ದಳಂತೆ ಎಂದು ಗೆಣಿಕೆಹಾಳದ ವಕ್ತೃ ವಿರುಪಾಕ್ಷಿಗೌಡ ಹೇಳುವರು.

೪. ಲಿಂಗಾಯತರ ಕುರುಡು ಹುಡುಗಿಗೆ ಐನರವನು ಮದುವೆಯಾಗಿ ಕುರುಗೋಡು ನೀಲಮ್ಮನ ಮಠಕ್ಕೆ ಸೇವೆಗೆ ನಿಂತನಂತೆ. ಆಗ ಅವಳಿಗೆ ಕಣ್ಣು ಬಂದವಂತೆ. ಅವರ ವಂಶಜರೆ ಇಂದಿನ ನೀಲಮ್ಮನ ಮಠದ ಪೂಜಾರಿಗಳಂತೆ ಎಂದು ನೀಲಮ್ಮನ ವಂಶಾವಳಿಯ ಕುರುಗೋಡಿನ ವಕ್ತೃ ಶ್ರೀಮತಿ ಬಸಮ್ಮಗಂಡ ಮರೇಗೌಡ ಸರನಾಡಗೌಡ (ವಂಶಾವಳಿ :೨: B೨) ಅವರು ಹೇಳುವರು. ಹೆಳವರು ನೀಡುವ ಕುರುಗೋಡು ನೀಲಮ್ಮನ ಮಠದ ವಂಶಾವಳಿಯ ಪ್ರಕಾರ ಮಠದ ಪೂಜಾರಿಗಳ ಪೂರ್ವಜರ ಪೂರ್ವಿಸ್ಥಳ ಕೆಂಬಾವಿ. ಅವರು ಕೆಂಬಾವಿ ಗೌಡ್ಕಿ ಬಿಟ್ಟು ವೋರಬಾವಿಗೆ ಬಂದರು, ಬಿಟ್ಟು ಕುರುಗೋಡಿಗೆ ಬಂದರು ನೀಲಮ್ಮನ ಮಠದಲ್ಲಿ ನಿಂತರು. ಮೂಲಪುರುಷ ದೊಡ್ಡ ಬಸನಗೌಡ. ಸಣ್ಣಬಸನಗೌಡರ ದೊಡ್ಡಬಸನಗೌಡರ ವಂಶಾವಳಿ ಯಲ್ಲಿ ವೀರನಗೌಡ ಅವರ ಮಗ ದೊಡ್ಡನಗೌಡ ಅವರ ಮಗ ಪ್ರತಾಪಯ್ಯ ಸ್ವಾಮಿಗಳು ಅವರ ಮಗ ಬಸಯ್ಯ ಅವರ ಮಗ ರಾಗವಾಂಕಯ್ಯ ಅವರ ಮಗ ಬಸಯ್ಯ ಅವರ ಮಗ ಷಡಕ್ಷರಯ್ಯ ಅವರ ಮಗ ರಾಜಶೇಖರಯ್ಯ (ವಂಶಾವಳಿ ೫ ನೋಡಿ). ರಾಜಶೇಖರಯ್ಯ (೫.೨) ಅವರು ಪ್ರಸ್ತುತ ಕುರುಗೋಡು ನೀಲಮ್ಮನ ಮಠದ ಪೂಜಾರಿಗಳಿರುವರು. ಹೆಳವರ ವಂಶಾವಳಿ ಯನ್ನು ಅವಲೋಕಿಸಿದಾಗ ದೊಡ್ಡ ಬಸನಗೌಡ ಮತ್ತು ಸಣ್ಣ ಬಸನಗೌಡರು ಲಾಳಗೊಂಡರು. ಇವರು ನೀಲಮ್ಮನ ಪೂರ್ವಿಕರು ಎಂಬುದನ್ನು ವಂಶಾವಳಿ ೧ ರಿಂದ ೪ ರಲ್ಲಿ ಹೇಳಿಯಾಗಿದೆ. ನೀಲಮ್ಮನ ಮಠದ ವಂಶಾವಳಿಯಲ್ಲಿಯೂ ಇವರೇ ಮೂಲ ಪುರುಷ ರಿರುವುದರಿಂದ ಪ್ರಸ್ತುತ ಮಠದ ಸ್ವಾಮಿಗಳ ಹಿನ್ನೆಲೆಯೂ ಲಾಳಗೊಂಡರಿಂದಲೇ ಮುಂದುವರಿದಿರುವ ಸಾಧ್ಯತೆಗಳಿವೆ. ನೀಲಮ್ಮನ ಮಠದ ವಂಶಾವಳಿಯಲ್ಲಿಯ ದೊಡ್ಡನ ಗೌಡರ ಮಗಳೇ ಕುರುಗೋಡಿನ ಸರನಾಡಗೌಡರ ವಕ್ತೃ ಶ್ರೀಮತಿ ಬಸಮ್ಮ ಅವರು ಹೇಳುವ ಕುರುಡಿಯಾಗಿರಬಹುದು. ದೊಡ್ಡನಗೌಡರು ತನ್ನ ಕುರುಡಿ ಮಗಳಿಗೆ ಮದುವೆ ಮಾಡಿಕೊಳ್ಳಲು ಮುಂದೆ ಬಂದ ಪ್ರತಾಪಯ್ಯ ನವರಿಗೆ ಮನಿ ಅಳಿಯನನ್ನಾಗಿ ಮಾಡಿಕೊಂಡಿರ ಬಹುದು. ಅವರ ಸಂತತಿಯ ಮುಂದಿನ ಮಕ್ಕಳಿಗೆಲ್ಲ ಜಂಗಮ ದೀಕ್ಷೆಯಾಗಿರಬಹುದು. ಕಾರಣ ಅವರ ಮುಂದಿನ ಸಂತತಿ ಯವರಲ್ಲಿ ಧರ್ಮ, ಅಧ್ಯಾತ್ಮವನ್ನು ಪ್ರತಿಪಾದಿಸುವ ಹೆಸರುಗಳೊಂದಿಗೆ ಆ ಹೆಸರುಗಳ ಮುಂದೆಲ್ಲಾ ಐಯ್ಯ, ಸ್ವಾಮಿ ಎಂಬ ಎಡೆಗಳು ಮುಂದುವರೆದಿವೆ. ಇಲ್ಲವೆ ದೊಡ್ಡನಗೌಡನ ಮಗನು ಜಂಗಮ ದೀಕ್ಷೆ ಪಡೆದು ನೀಲಮ್ಮನ ಮಠದಲ್ಲಿ ತನ್ನ ಸೇವೆಯನ್ನು ಮುಂದುವರೆಸಿರಲೂ ಬಹುದು. ಇನ್ನೂ ಹಲವರ ಅಭಿಪ್ರಾಯದ ಪ್ರಕಾರ ನೀಲಮ್ಮನ ಮಠದಲ್ಲಿರುವ ಈಗಿನ ಸ್ವಾಮಿಗಳ ಪೂರ್ವಜರು ಮೂಲತಃ ಜಂಗಮರಲ್ಲ. ಅವರು ಲಿಂಗಾಯತರು ಮತ್ತು ನೀಲಮ್ಮನ ಮಠದ ಸೇವೆಗಾಗಿ ಬಂದವರು ಎಂದು ಹೇಳಲಾಗುವುದು. ಹಿಂದೆ ಲಾಳಗೊಂಡರೇ ಈ ಮಠದ ಸೇವಕರಾಗಿದ್ದಾಗ ಭಕ್ತರು ಇವರ ಪಾದಪೂಜೆ ಮಾಡುತ್ತಿದ್ದರಂತೆ. ಆದರೆ ಲಾಳಗೊಂಡರು ಮೂಲತಃ ಜಂಗಮರಲ್ಲದಿರುವುದರಿಂದ ಪಾದಪೂಜೆ ನಿರಾಕರಿಸಿದರಂತೆ. ಹೀಗಾಗಿ ಅಲ್ಲಿಂದ ಈಗಿರುವ ಮಠದ ಪೂರ್ವಿಕ ಜಂಗಮರು ಈ ಮಠದ ಸೇವೆಗೆ ಬಂದರಂತೆ ಎಂದೂ ಹೇಳಲಾಗುವುದು. ಕುರುಗೋಡು ನೀಲಮ್ಮನ ಮಠದ ಪ್ರಸ್ತುತ ಪೂಜಾರಿಗಳು ಜಂಗಮರಾಗಿರುವುದಕ್ಕೆ ಹೆಳವರ ದಾಖಲಾತಿಯಲ್ಲಿಯ ಮಳಿ ಬಗಿ, ಉಜ್ಜನಿ ಸಿಂಹಾಸನ ಮತ್ತು ವೀರಭದ್ರ ದೇವರು ಇವುಗಳು ಸಾಕ್ಷಿಯಾಗಿ ನಿಲ್ಲುವವು.

೫. ಹಂಡೆ ಕುರುಬರ ಅರಸನೊಬ್ಬನಿಗೆ ಮಕ್ಕಳಿರಲಿಲ್ಲವಂತೆ. ನೀಲಮ್ಮಳಿಂದ ಮಕ್ಕಳ ಫಲ ಕೇಳಿ ಹೆಂಡತಿ ಮನೆಗೆ ಬಂದಳಂತೆ. ಗಂಡ ಇದನ್ನು ಕೇಳಿ ಅದ್ಹ್ಯಾಂಗ ಮಕ್ಕಳು ಆಗುತಾವಂತ ನೋಡೋಣ ಅಂತ ಹೆಂಡತಿಯಿಂದ ದೂರ ಆದನಂತೆ. ಹೆಂಡತಿಗೆ ಮಕ್ಕಳಾಗದಿರಲು ನೀಲಮ್ಮನೇ ಕಾರಣ ಎಂದು ನೀಲಮ್ಮಳೊಂದಿಗೆ ಜಗಳವಾಡಿದನಂತೆ. ಆಗ ನೀಲಮ್ಮ ನಿಮ್ಮ ಮನೆ ನಾಶವಾಗಲೆಂದು ಶಾಪ ಕೊಟ್ಟಳಂತೆ. ಅಂದಿನಿಂದ ಹಂಡೆ ಕುರುಬರು ನಾಶವಾಗಹತ್ತಿದರಂತೆ ಎಂದು ಕುರುಗೋಡಿನ ಹಂಡೆ ಕುರುಬರ ವಕ್ತೃ ಶ್ರೀಮತಿ ಪಾರ್ವತಮ್ಮ ಉದ್ದಾರು ಹೇಳುವರು. ಕುರುಗೋಡಿನಲ್ಲಿ ಕೇವಲ ಒಂದು ಹಂಡೆ ಕುರುಬರ ಮನೆಯಿರುವುದು. ಇವರು ತಮ್ಮನ್ನು ಹಂಡೆ ವಜೀರ, ಹಂಡೆ ರಾವುತ ಇಲ್ಲವೆ ವೀರಶೈವರೆಂದು ಹೇಳಿಕೊಳ್ಳುವರು. ಕುರುಬರೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡುವುದಿಲ್ಲ. ಹತ್ತಿ ಕಂಕಣದವರು. ಇವರ ಮನೆದೇವರು ತೆಕ್ಕಲಕೋಟೆಯ ವರವಿನ ಮಲ್ಲಯ್ಯ. ಈ ದೈವಕ್ಕೆ ಕುರುಬರು, ಲಾಳಗೊಂಡರು ನಡೆದು ಕೊಳ್ಳುವರು. ಹಂಡೆ ಕುರುಬರ ಕಳ್ಳುಬಳ್ಳಿಯವರು ತೆಕ್ಕಲಕೋಟೆ, ಬಳ್ಳಾರಿ, ಹೆರಕಲ್ಲು, ಹೆರೂರು ಬಸವನ ಬಾಗೇವಾಡಿ, ಬಿಜಾಪುರ, ಆಲಮಟ್ಟಿ, ಕರ್ನೂಲುಗಳತ್ತ ಇರುವರು. ಇವರಿಗೆ ಬಳ್ಳಾರಿಯ ಪರಿಸರವನ್ನು ಆಳಿದ ತಮ್ಮ ಪೂರ್ವಿಕರ ಸ್ಪಷ್ಟ ಮಾಹಿತಿಯಿಲ್ಲ. ಆದರೆ ವಿ.ಆರ್. ಹನುಮಂತಯ್ಯ ಅವರ ದಾಖಲೆಯ ಪ್ರಕಾರ ಹಂಡೆ ಕುರುಬರಲ್ಲಿಯ ರಾಮಪ್ಪನಾಯಕನಿಗೆ ನೀಲಮ್ಮ ಮಕ್ಕಳ ಫಲ ನೀಡಿರುವುದಾಗಿ ಅದಕ್ಕಾಗಿ ರಾಮಪ್ಪನಾಯಕನು ನೀಲಮ್ಮನ ಮಠಕ್ಕೆ ಮತ್ತು ಕೊಟ್ಟೂರುಸ್ವಾಮಿಗಳ ಮಠಕ್ಕೆ ದಾನ ದತ್ತಿಗಳನ್ನು ನೀಡಿರುವ ಮಾಹಿತಿ ದೊರೆಯುತ್ತದೆ. ಹೀಗಾಗಿ ವಕ್ತೃ ಉದ್ದಾರು ಅವರು

ನೀಲಮ್ಮನನ್ನು ಕುರಿತು ನೀಡಿರುವ ಮಾಹಿತಿ ಒಪ್ಪಲು ಕಷ್ಟ ವಾಗುವುದು.

೬. ಇಂದಿನ ಹೊಸಪೇಟೆ ತಾಲೂಕಿನ ಕಂಪ್ಲಿ ಹತ್ತಿರದ ನಂ. ೧೧೦ ಮುದ್ದಾಪುರ ಗ್ರಾಮದ ಮಠದವನನ್ನು ನೋಡಕೂಡದೆಂದು ಹೇಳಿದಾಗಲೂ ಮಠದವನು ನೀಲಮ್ಮಳನ್ನು ನೋಡಿದ್ದಕ್ಕಾಗಿ ಅವನ ಕಣ್ಣು ಹೋದ ಹಾಗೂ ಅವನ ವಂಶಜರಿಗೆ ಕಣ್ಣು ದೋಷ ಇರುವ ಕತೆ ಇದೆ. ನೀಲಮ್ಮ ಮುದ್ದಾಪುರದ ಮಠದಲೊಂದು ಬಿಲ್ವಪತ್ರೆ ಮರದಡಿ ಕುಳಿತಿರುತಿದ್ದಳು. ಬಿಲ್ವಪತ್ರಿಯ ಮರವನ್ನು ಕಡಿಯ ಬಾರದೆಂದಿದ್ದರೂ ಆ ಮರ ಕಡಿದು ನಾಶವಾದರಂತೆ.

೭. ಕುರುಗೋಡು ಗುಹೆಯೊಂದರಲ್ಲಿ ಕಕ್ಕಯ್ಯ ಎಂಬ ಶರಣ ಇದ್ದ. ಹೀಗಾಗಿ ಆ ಗುಹೆಗೆ ಕಕ್ಕಯ್ಯನ ಗುಹೆ ಎಂದು ಕರೆಯುವರು. ಆತನೇ ಕುರುಗೋಡಿನಲ್ಲಿ ಒಂದು ಮಠ ಕಟ್ಟಿಸಿದೆ. ಅದಕ್ಕೆ ಕಕ್ಕಯ್ಯನ ಮಠ ಎಂದೆನ್ನುವರು. ಒಮ್ಮೆ ನೀಲಮ್ಮ ತನ್ನ ತಾಯಿಯೊಂದಿಗೆ ಕುರುಗೋಡಿಗೆ ಬಂದಾಗ ಕಕ್ಕಿಯ್ಯನ ಮಠಕ್ಕೆ ನೀರು ಕುಡಿಯಲು ಹೋಗುವವಳು. ನೀಲಮ್ಮಳನ್ನು ನೋಡಿದ ಕಕ್ಕಯ್ಯ ನೀಮ್ಮನ ತಾಯಿಗೆ ನೀಲಮ್ಮಳನ್ನು ತನ್ನಲ್ಲಿಯೆ ಬಿಟ್ಟುಹೋಗಲು ಹೇಳುವಳು ನೀಲಮ್ಮಳ ತಾಯಿ ನೀಲಮ್ಮಳಿಗೆ ಕಕ್ಕಯ್ಯನ ಮಠದಲ್ಲಿಯೇ ಬಿಟ್ಟು ಹೋಗುವಳು. ನೀಲಮ್ಮ ಕಕ್ಕಯ್ಯನವರಿಗೆ ನಡೆದುಕೊಂಡು ಶರಣೆಯಾಗುವಳು. ಕಕ್ಕಯ್ಯನ ಸಮಾಧಿ ಸ್ಥಳವೇ ಕಕ್ಕಯ್ಯನ ಮಠವಾಗಿರುವುದು. ಇದು ಕುರುಗೋಡು ದೊಡ್ಡಬಸವೇಶ್ವರ ದೇವಸ್ಥಾನದ ಹೊರಾವರಣದಲ್ಲಿ ಬಳ್ಳಾರಿ ರಸ್ತೆಯಲ್ಲಿದೆ. ಇದನ್ನು ಇಂದು ಕೊಟ್ಟೂರು ಸ್ವಾಮಿಗಳ ಮಠವೆಂದು ಗುರುತಿಸಲಾಗುವುದು.

ಕಕ್ಕಯ್ಯನವರು ಕೊಟ್ಟೂರು ಸ್ವಾಮಿ ಮಠದಲ್ಲಿ ಪಾದದರ್ಶನ ಕೊಡುತ್ತಿದ್ದರಂತೆ. ನೀಲಮ್ಮ ಪಾದಪೂಜೆ ಮಾಡುತ್ತಿದ್ದಳಂತೆ. ಸಾಮಾನ್ಯರು ಸ್ವಾಮಿಗಳೇ ನೀವು ನಿಮ್ಮ ಪಾದಗಳನ್ನು ನೀಲಮ್ಮನ ಪಾದ ಪೂಜೆಗೆ ಕೊಡುತ್ತಿರಲ್ಲ. ನೀವು ನೀಲಮ್ಮನ ಮುಖ ನೋಡಿದ್ದೀರಾ ಅಂತ ಕೇಳಿದರಂತೆ. ಸ್ವಾಮಿಗಳು ನೋಡಿಲ್ಲ ವೆಂದಾಗ, ಸಾಮಾನ್ಯರು ನಿಮ್ಮಂತಹ ಸ್ವಾಮಿ, ಮುಖ ನೋಡದೆ ನೀವೇಕೆ ಪಾದ ದರ್ಶನ ಕೊಡುತ್ತೀರಿ ಎಂದು ಪ್ರಶ್ನಿಸಿದರಂತೆ. ಮುಖ ನೋಡ ಬೇಕೆಂದು ಸಾಮಾನ್ಯ ಭಕ್ತರು ಹೇಳಿದಂತೆ, ಕಕ್ಕಯ್ಯನೋರು ನೀಲಮ್ಮನಿಗೆ ತನ್ನ ಪಾದಗಳನ್ನು ಪೂಜೆಗೆ ಕೊಟ್ಟಾಗ ಚಾಕುವಿನಿಂದ ಪರದೆ ಹರಿದು ಮುಖ ನೋಡಿದ್ದರಂತೆ. ಆಗ ಕಕ್ಕಯನವರ ನೆರಳು ನೀಲಮ್ಮನ ಮೇಲೆ ಬೀಳುವುದಂತೆ. ನಿನ್ನ ಮುಖ ನೋಡಿದೆ ನೀಲಮ್ಮ ಎಂದು ಕಕ್ಕಯನವರು ಹೇಳಿದಾಗ ನೀಲಮ್ಮಳು ನಿನ್ನ ಕಣ್ಣು ಹೋಗಲೆಂದು ಹೇಳುವಳಂತೆ. ಆಗ ಕಕ್ಕಯ್ಯನವರ ಕಣ್ಣು ಹೋಗುವವಂತೆ. ಆಗಲೆ ಆ ತಪ್ಪಿಗಾಗಿ ಕಕ್ಕಯ್ಯನವರು ಅಂದರೆ ಕೊಟ್ಟೂರು ಮಠದವರು ತಮ್ಮ ೭೭೦ ಮಠಗಳನ್ನು ನೀಲಮ್ಮಳಿಗೆ ಕೊಡುವರಂತೆ ಎಂದು ಕುರುಗೋಡಿನ ಕುರುಬರ ವಕ್ಕ ದೊಡ್ಡ ಬಸಪ್ಪ ಅವರು ಹೇಳುವರು. ಒಂದು ಕಾಲದಲ್ಲಿ ಶ್ರೀ ಪೀಠದ ಶಾಖೆಗಳಾಗಿ ೭೭೦ ಮಠಗಳು ನಾಡಿನ ತುಂಬೆಲ್ಲ ಬೆಳಗಿದವು. ೭೬ ಸಾವಿರ ಎಕರೆ ಭೂಸ್ವಾಮ್ಯವನ್ನು ಈ ಪೀಠ (ಕೊಟ್ಟೂರು ಸ್ವಾಮಿ ಪೀಠ) ಪಡೆದಿತ್ತು. ಆದರೆ ಕಾಲಾಂತರದಲ್ಲಿ ವಿಪ್ಲವಗಳಿಂದ ಅವೆಲ್ಲ ಲುಪ್ತವಾಗಿ ಕೇವಲ ೩೦ ಮಠಗಳು ಬಳ್ಳಾರಿ, ಚಿತ್ರದುರ್ಗ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಗ್ರಾಮ ನಗರಗಳಲ್ಲಿ ಉಳಿದಿವೆ (ಉಮಾಪತಿ ಶಾಸ್ತ್ರಿ ಗೌ.ಮ. ೧೯೮೩:xii-xiv). ಕೊಟ್ಟೂರು ಸ್ವಾಮಿಗಳ ಪೀಠದ ಅಧೀನದಲ್ಲಿಯ ೩೦ ಮಠಗಳಲ್ಲಿ ಕುಡುತಿನಿ ಮತ್ತು ಕುರುಗೋಡಿನ ನೀಲಮ್ಮನ ಮಠಗಳೂ ಒಳ ಗೊಂಡಿರುವವು. ಆದರೆ, ಕುರುಗೋಡಿ ನಲ್ಲಿಯ ನೀಲಮ್ಮನ ಮಠದ ಪ್ರಸ್ತುತ ಪೂಜಾರಿಗಳು ರಾಜಶೇಖರಯ್ಯ ನವರಿರುವರು. ಇವರು ಕೊಟ್ಟೂರುಸ್ವಾಮಿ ಮಠದವರೊಂದಿಗೆ ಯಾವುದೇ ಧನಾತ್ಮಕ ಸಂಬಂಧ ಮುಂದುವರಿಸಿರುವುದಿಲ್ಲ. ನೀಲಮ್ಮನ ನಾಟ್ರಕದಲ್ಲಿಯೂ ನೀಲಮ್ಮನ ೮೦೦ ಮಠಗಳ ಪ್ರಸ್ತಾಪ ಬರುವುದು. ಈ ೮೦೦ ಮಠಗಳಲ್ಲಿ ೭೭೦ ಮಠಗಳು ಕೊಟ್ಟೂರು ಸ್ವಾಮಿಗಳಿಂದ ಬಂದವು ಮತ್ತು ಇನ್ನುಳಿದ ೩೦ ಮಠಗಳು ನೀಲಮ್ಮ ಅರ್ಜಿಸಿದವಾಗಿರ ಬಹುದಾಗಿವೆ. ಆದರೆ, ಈ ೮೦೦ ಮಠಗಳನ್ನು ಹುಡುಕುವುದು ಇಂದು ಕಷ್ಟಸಾಧ್ಯ. ನೀಲಮ್ಮ ಕಾಲವಾದ ಮೇಲೆ ಕಾಲಾಂತರದಲ್ಲಿ ಕೊಟ್ಟೂರು ಸ್ವಾಮಿ ಪೀಠದ ಹಿನ್ನೆಲೆಯ ೭೭೦ ಮಠಗಳು ಕೊಟ್ಟೂರು ಸ್ವಾಮಿ ಪೀಠದ ಪರಂಪರೆಯವರು ಮರಳಿ ಪಡೆದಂತಿದೆ. ಉಳಿದ ೩೦ ನೀಲಮ್ಮನ ಮಠಗಳಲ್ಲಿ ಹಲವು ಮಾತ್ರ ಸ್ಥಳೀಯ ಭಕ್ತರ ಆಸ್ಥೆಯಿಂದ ಬದುಕುಳಿದಿವೆ. ಉದಾ: ಸಿಂದಿಗೇರಿ, ಕುರುಗೋಡು, ಮುದ್ದಾಪುರ, ಹಂಪಿ, ಹೊಸರು, ಕುಡುತಿನಿ, ಹುಯಿಲಗೋಳ, ಸಂಶಿ, ಕದಡಿ, ಗುತ್ತಿಗನೂರು ಗಳಲ್ಲಿರುವ ನೀಲಮ್ಮನ ಮಠಗಳು. ಇನ್ನುಳಿದವು ಕಾಲಗರ್ಭದಲ್ಲಿ ಕರಗಿ ಹೋಗಿವೆ. ಆದರೆ, ಕೊಟ್ಟೂರುಸ್ವಾಮಿ ಪರಂಪರೆಯ ಚರಿತ್ರೆಯಲ್ಲಿ ೭೭೦ ಮಠಗಳ ಶ್ರೀ ಪೀಠಕ್ಕೆ ನೀಲಮ್ಮ ಪೀಠಾಧ್ಯಕ್ಷೆಯಾಗಿರುವ ವಿಷಯ ದಾಖಲೆಯಿರುವುದು ಚಿಂತನಾರ್ಹವಾದದ್ದು. ಕೊಟ್ಟೂರು ಸ್ವಾಮಿ ಮಠದವರ ಒಂದು ಪರಂಪರೆಯಿರುವಂತೆ ನೀಲಮ್ಮನ ಮಠದವರಲ್ಲಿ ಒಂದು ಪರಂಪರೆ ಇಲ್ಲದೆ ಇರುವುದರಿಂದ ನೀಲಮ್ಮನ ಮಠಗಳ ಬೆಳವಣಿಗೆ ಹೇಳಿಕೊಳ್ಳುವಂತಿಲ್ಲ. ನೀಲಮ್ಮನ ಮಠಗಳಿಗೂ ಒಂದು ಪರಂಪರೆಯ ಚೌಕಟ್ಟು ಅವಶ್ಯಕವೆನಿಸುವುದು.

ಕುರುಗೋಡಿನ ಮಾದಿಗರ ಓಣಿಯಲ್ಲಿ ಕೆಂಚಮ್ಮನ ಗುಡಿಯೊಂದಿದೆ. ಈ ಗುಡಿಯ ದೇವತಾ ಕಾರ್ಯಕ್ಕೆ ಪ್ರತಿವರ್ಷ ಕಾರ್ತಿಕ ಮಾಸದ ಕೊನೆಯ ಶುಕ್ರವಾರ ಕುರುಗೋಡಿನ ನೀಲಮ್ಮನ ವಂಶಜರಾದ ಲಾಳಗೊಂಡರ ಸರನಾಡಗೌಡರು ನಿಯಮಾನು ಸಾರವಾಗಿ ಹೂ, ಹಣ್ಣು, ಕಾಯಿ, ಕರ್ಪೂರ ಅರ್ಪಿಸುವ ಸಂಪ್ರದಾಯವಿದೆ. ನಾಲ್ಕಾರು ವರ್ಷಗಳಿಗೊಮ್ಮೆ ಕೋಣಗಳ ಬಲಿ ಕೊಟ್ಟಾಗ ಕೋಣದ ತಲೆಯನ್ನು ಸರನಾಡಗೌಡರ ಮನೆಯಲ್ಲಿ ಇಡುವ ಸಂಪ್ರದಾಯವೂ ಇತ್ತು. ಈಗ ನಿಂತುಹೋಗಿದೆ. ಇಲ್ಲಿಯ ಗುಡಿಯೊಳಗಿನ ಕೆಂಚಮ್ಮನ ಮೂರ್ತಿಗೆ ಪರದೆಯಾಗಿ ಗೋಡೆ ಯೊಂದಿರುವುದು. ಇದು ನೀಲಮ್ಮಳನ್ನೇ ಪ್ರತಿನಿಧಿಸು ವಂತಿದೆ. ಕಾರಣ ನೀಲಮ್ಮಳ ಬಾಲ್ಯದಲ್ಲಿಯ ಹೆಸರು ಕೆಂಚಮ್ಮ ಎಂದಿರುವುದು. ಮಾದಿಗರು ನೀಲಮ್ಮನ ಮೂಲದ ಕೆಂಚಮ್ಮನ ಹೆಸರಿಂದಲೇ ಆರಾಧನೆಯನ್ನು ಮುಂದುವರಿಸಿದಂತಿದೆ.

೮. ಕುರುಗೋಡಿನಲ್ಲಿ ಪ್ರಸ್ತುತ ನೀಲಮ್ಮನ ಮಠವು ಪೂರ್ವದಲ್ಲಿ ಜೈನರ ಬಸದಿಯಾಗಿರುವ ಸಾಧ್ಯತೆಗಳಿವೆ. ಮಠದ ಹಲವೆಡೆ ಜೈನರ ಸಂಕೇತಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಹಂಡೆ ಕುರುಬ ಅರಸರು ನೀಡಿದರೆನ್ನಲಾದ ತೂಗುಮಂಚ ಮಠದಲ್ಲಿದೆ. ಅದರ ಮೇಲೆ

ಈರಣ್ಣನ ಮೂರ್ತಿಯು ಇಂದಿನ ಮಠದ ಸ್ವಾಮಿಗಳಿಂದ ಪೂಜೆಗೊಳ್ಳುತ್ತಲಿದೆ. ಆ ಮೂರ್ತಿ ಈ ಮಠದ ಪ್ರಸ್ತುತ ಸ್ವಾಮಿಯ ಮನೆದೇವರೆಂದು ಹೇಳಲಾಗುತ್ತದೆ. ಪ್ರತಿವರ್ಷ ಹೋಳಿ ಹುಣ್ಣಿಮೆಯಂದು ಜರಗುವ ಕುರುಗೋಡು ದೊಡ್ಡ ಬಸವೇಶ್ವರ ಜಾತ್ರೆಯಲ್ಲಿ ನೀಲಮ್ಮನದೆಂದು ಹೇಳಲಾಗುವ ತೇರು ಎಳೆಯಲಾಗುತ್ತಿತಂತೆ. ಸುಮಾರು ೪೦ ವರ್ಷಗಳ ಹಿಂದೆ ತೇರು ಮುರಿದು ಬಿದ್ದಿದಂದಿನಿಂದ ಇಂದಿನವರೆಗೂ ಕುರುಗೋಡು ನೀಲಮ್ಮನ ಮಠದ ಸ್ವಾಮಿಗಳು ಒಂದು ವಿಶೇಷ ರಥದಲ್ಲಿ ಕುಳಿತು ಮೆರವಣಿಗೆಗೊಳ್ಳುವ ಕೊಟ್ಟೂರು ಸ್ವಾಮಿಗಳು ಮತ್ತು ನೀಲಮ್ಮನ ಮಠದ ಸ್ವಾಮಿಗಳು ಮೆರವಣಿಗೆಗೊಳ್ಳುತ್ತಿದ್ದರಂತೆ. ಹೀಗಾಗಿಯೇ ಜನಪದರು ನೀಲಮ್ಮನ ಮಠಕ್ಕೂ ದೊಡ್ಡ ಬಸವೇಶ್ವರ ದೇವಸ್ಥಾನಕ್ಕೂ ಸಂಬಂಧವನ್ನು ಕಲ್ಪಿಸುವುದು ಸಹಜವಾಗಿದೆ. ವಾಸ್ತವದಲ್ಲಿ ದೊಡ್ಡ ಬಸವೇಶ್ವರ ದೇವಸ್ಥಾನದಲ್ಲಿರುವ ನೀಲಮ್ಮ ಸಿಂದಿಗೆ ನೀಲಮ್ಮ ಆಗಿರಲಾಳೆಂದು ವೆಂಕಟಾಚಾರ್ ಜೋಶಿ ಪೂಜಾರಿಗಳು ಹೇಳುವರು. ಜಾತ್ರೆಯ ಮೆರುಗಿಗಾಗಿ ಜಾತ್ರೆಯ ಸಂದರ್ಭದಲ್ಲಿ ಮತ್ತು ಇತರ ದಿನಗಳಲ್ಲಿ ದೊಡ್ಡಬಸವೇಶ್ವರ ದೇವಸ್ಥಾನದಿಂದ ನೀಲಮ್ಮಳ ಮಠದವರೆಗೆ ವಿಭಿನ್ನ ಆಚರಣೆಗಳು ಮುಂದುವರೆದಿದೆ. ಕಾರಣ ನೀಲಮ್ಮನ ಮಠ ದೊಡ್ಡ ಬಸವೇಶ್ವರ ದೇವಸ್ಥಾನದಿಂದ ದೂರದಲ್ಲಿದ್ದು ಕುರುಗೋಡು ಊರಲ್ಲಿದೆ. ಊರ ಜನರಿಗೆ ದೊಡ್ಡ ಬಸವೇಶ್ವರರ ದರ್ಶನವಾಗಲೆಂದು ನೀಲಮ್ಮನ ಮಠದವರೆಗೂ ಸಾಂಪ್ರದಾಯಿಕ ವಾಗಿ ಆಚರಣೆಗಳು ಸಾಗುತ್ತಿವೆ. ಜಾತ್ರೆಯಲ್ಲಿ ನಾಯಕರಿಗೆ, ಕುರುಬರಿಗೆ, ಬಡಿಗರಿಗೆ ಇತ್ಯಾದಿ ಆಯಾ ಸಮುದಾಯಗಳಿಗೆ ವಿಶೇಷ ಕೆಲಸಗಳನ್ನು ಹಂಚಲಾಗಿತ್ತು ಎನ್ನುವುದಕ್ಕೆ ಸಾಂಪ್ರದಾಯಿಕವಾಗಿ ಇಂದಿಗೂ ಸಾಂಗವಾಗಿ ಸಾಗುವ ಮಾನಗಳು ಸಾಕ್ಷಿಯಾಗಿವೆ. ಪ್ರಸ್ತುತ ಕುರುಗೋಡಿನ ನೀಲಮ್ಮ ಮಠದ ಸ್ವಾಮಿಗಳು ರಾಜಶೇಖರಯ್ಯ ಅವರು ಇರುವರು. ಇವರ ತಮ್ಮ ಜಗನಾಥಯ್ಯ ಅವರ ಮಗ ಪ್ರಕಾಶಯ್ಯ ಮತ್ತು ಮಗಳು ರೂಪ ಇವರು ಸಿಂದಿಗೇರಿಯ ನೀಲಮ್ಮನ ಮಠದ ಪೂಜಾರಿಗಳಾಗಿರುವರು.

ಸಿಂಧಿಗೇರಿ ನೀಲಮ್ಮನ ಮಠ : ಸಿಂದಿಗೇರಿ, ನೀಲಮ್ಮನ ಜನ್ಮಸ್ಥಾನ. ಇಲ್ಲಿಯ ನೀಲಮ್ಮನ ಮನೆಯಲ್ಲಿ ನೀಲಮ್ಮ ಸ್ನಾನ ಮಾಡುತ್ತಿದ್ದ ಬಚ್ಚಲು ಕಲ್ಲು ಇರುವುದು. ಇದನ್ನು ಮನೆ ಹೊರಗಿನ ಗೋಡೆಯೊಂದರಲ್ಲಿ ಹೊಂದಿಸಿ ಪೂಜಿಸಲಾಗುತ್ತಿದೆ. ಸಿಂದಿಗೇರಿಯ ನೀಲಮ್ಮನ ವಂಶಜರು ಮನೆಯ ಜಾಗವು ಪಕ್ಕದ ಗ್ರಾಮ ಶಾನವಾಸಪುರದ ಲಾಳಗೊಂಡ ಗೌಡರಿಗೆ ಮಾರಲಾಯಿತು. ಮನೆಯ ಬಾಗಿಲುಗಳು ಚೆನ್ನಾಗಿದ್ದವು. ಅವನ್ನು ಶಾನವಾಸಪುರದ ಗೌಡರು ತಮ್ಮ ಮನೆಗೆ ಅಳವಡಿಸಿಕೊಂಡರು. ಅಂದಿನಿಂದ ಗೌಡರಿಗೆ ಕಾಯಿಲೆ ಹೆಚ್ಚಾಯಿತು. ಬಾಗಿಲುಗಳನ್ನು ವಾಪಸು ತಂದು ನೀಲಮ್ಮಳ ವಂಶಜರ ಮನೆಗೆ ತಂದು ಕೂಡಿಸಿದ ನಂತರ ಗೌಡರ ಕಾಯಿಲೆ ವಾಸಿಯಾಗುವುದು. ಕಾಲಾಂತರದಲ್ಲಿ ಆ ಬಾಗಿಲುಗಳು ಕೊಳೆತು ಹೋದವು. ಅವನ್ನು ಸಿಂದಿಗೇರಿಯ ನೀಲಮ್ಮನ ಮಠದಲ್ಲಿ ಇಡಲಾದವು.

ಸಿಂದಿಗೇರಿಯ ನೀಲಮ್ಮನ ಮಠದ ಪೂಜಾರಿತನವನ್ನು ಪ್ರಕಾಶಯ್ಯ ಮತ್ತು ಅವರ ಸೋದರಿ ರೂಪ ಅವರು ನಿಭಾಯಿಸುವರು. ಇವರು ಕುರುಗೋಡಿನ ನೀಲಮ್ಮನ ಮಠದ ಪೂಜಾರಿಗಳಾದ ರಾಜಶೇಖರಯ್ಯನ ಸಂಬಂಧಿಗಳು(ವಂಶವೃಕ್ಷ ೫ ನೋಡಿ). ಸಿಂದಿಗೇರಿಯಲ್ಲಿ ನೀಲಮ್ಮನ ಮಠಕ್ಕೆ ೮೦ ಎಕರೆ ಭೂಮಿಯಿರುವುದು. ಈ ಭೂಮಿ ಈ ಗ್ರಾಮದ ನೀಲಮ್ಮನ ಸಂಬಂಧಿಗಳಾದ ಸರನಾಡ ಗೌಡರ ಹೊಲಗಳಿಗೆ ಹೊಂದಿಕೊಂಡು ಇರುವವು. ಸಿಂದಿಗೇರಿಯಲ್ಲಿ ನೀಲಮ್ಮನ ಸುಂದರವಾದ ಮಠವೊಂದಿದೆ. ಇದಕ್ಕೆ ಗ್ರಾಮದ ಎಲ್ಲ ಜನವರ್ಗಗಳು ನಡೆದುಕೊಳ್ಳುತ್ತಾರೆ. ಈ ಮಠವು ಲಾಳಗೊಂಡರ ಸರನಾಡಗೌಡ ಮನೆತನದ ಸಮೀಪದಲ್ಲಿರುವುದು.

ಕುರುಗೋಡು ನೀಲಮ್ಮನ ಮಠ ಹಂಪಿ: ಕಲೆ, ವಾಸ್ತುಶಿಲ್ಪಕ್ಕೆ ಹಂಪಿಯು ವಿಶ್ವಖ್ಯಾತಿ ಪಡೆದಿದೆ. ಇಲ್ಲಿಯ ವಿರೂಪಾಕ್ಷ ದೇವಾಲಯದ ಪೂರ್ವಗೋಪುರದ ಎದುರಿನ ವಿಶಾಲವಾದ ಅಂಗಳಕ್ಕೆ ಹಂಪೆ ಬಜಾರು ಇಲ್ಲವೆ ಪಂಪಾ ರಥ ವಿಧಿ ಅಥವಾ ತೇರುಬೀದಿಯೆಂದು ಕರೆಯುವರು. ಇದರ ವ್ಯಾಪ್ತಿಯು ವಿರೂಪಾಕ್ಷ ದೇವಾಲಯದ ಪೂರ್ವಗೋಪುರದಿಂದ ಎದುರು ಬಸವಣ್ಣನವರೆಗೆ ಇರುವುದು (ಸೇಮಶೇಖರ್ ಎಸ್. ವೈ: ೧೯೯೭:೯). ಈ ಸಾಲು ಮಂಟಪದಲ್ಲಿ ನೀಲಮ್ಮನ ಮಠ ಎಂದು ಹೇಳಲಾಗುವ ಎರಡು ಅಂತಸ್ತಿನ ಕಟ್ಟಡವೊಂದಿದೆ. ಇದು ವಿರೂಪಾಕ್ಷ ದೇವಸ್ಥಾನ ಮತ್ತು ಎದುರು ಬಸವಣ್ಣನ ಮಧ್ಯದ ಸಾಲು ಮಂಟಪಗಳಲ್ಲಿ ಉತ್ತರಾಭಿಮುಖವಾಗಿ ಇದೆ. ಈ ಸಾಲು ಮಂಟಪಗಳು ಧರ್ಮಕಾರ್ಯಕ್ಕಾಗಿ ಮತ್ತು ವ್ಯಾಪಾರಕ್ಕಾಗಿ ಕಟ್ಟಿಸಲ್ಪಟ್ಟಿವೆ. ಧರ್ಮಕ್ಷೇತ್ರವಾಗಿದ್ದ ವಿರೂಪಾಕ್ಷ ದೇವಾಲಯ ಬಜಾರವು ಮುತ್ತು ರತ್ನ ವ್ಯಾಪಾರ ಕೇಂದ್ರವೂ ಆಗಿತ್ತು. ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಈ ಮಂಟಪಗಳು ಹಾಳು ಬಿದ್ದವು. ಆದರೆ, ಹಂಪಿ ಜಾತ್ರೆಯಲ್ಲಿ ಈ ಸಾಲು ಮಂಟಪಗಳು ಭಕ್ತರಿಂದ ಕಂಗೊಳಿಸುತ್ತಿದ್ದವು. ಕುರುಗೋಡು ನೀಲಮ್ಮ ಪ್ರತಿ ವರ್ಷ ಹಂಪಿಯ ವಿರೂಪಾಕ್ಷನ ಜಾತ್ರೆಗೆ ಬರುತ್ತಿದ್ದಳು. ಈ ಸಾಲು ಮಂಟಪಗಳಲ್ಲಿ ತಂಗುತ್ತಿದ್ದಳು. ಅನ್ನ ಮತ್ತು ಅಧ್ಯಾತ್ಮ ದಾಸೋಹ ನಡೆಸುತ್ತಿದ್ದಳು. ಆ ಸ್ಥಳವೇ ಇಂದು ಕುರುಗೋಡು ನೀಲಮ್ಮನ ಮಠ ಎನಿಸಿಕೊಂಡಿದೆ. ಕುರುಗೋಡು ಶಿವಶರಣೆ ನೀಲಮ್ಮನ ಮಠ ಹಂಪಿ ಎಂಬ ನಾಮಫಲಕವೂ ಹೊಂದಿದೆ. ಮಂಟಪಕ್ಕೆ ಮಠ ಎಂದು ಕರೆಯಲಾಗಿದೆ. ಈ ಮಂಟಪ ಜೀರ್ಣಾವಸ್ಥೆಯಲ್ಲಿದೆ. ಈಗ ಈ ಮಂಟಪದಲ್ಲಿ ದನಕಾಯೋ ಗಂಗಪ್ಪನ ಕುಟುಂಬ ವಾಸಿಸುವುದು. ಗಂಗಪ್ಪ ೯೦ ವರ್ಷದ ವೃದ್ಧ. ಈತನ ಮೂಲ ಸಿರಗುಪ್ಪ ತಾಲೂಕಿನ ಸಿದ್ರಾಮಪುರ ಗ್ರಾಮ. ಈತನೊಂದಿಗೆ ಈ ಮಠದ ಮಂಟಪದಲ್ಲಿ ಇವನ ಕುಟುಂಬವೆಲ್ಲ ಇದೆ. ಅವರ ಬಗ್ಗೆ

ದನಕಾಯೋ ಗಂಗಪ್ಪನವರು ತಮ್ಮ ಅನುಭವವನ್ನು ಹೀಗೆ ಬಿಚ್ಚಿಡುವರು. ಕುರುಗೋಡು ನೀಲಮ್ಮನ ಮಠದ ಪೂಜಾರಿಗಳಾಗಿದ್ದ ಬಸಯ್ಯನವರು ಮತ್ತು ಷಡಕ್ಷರಯ್ಯ ನವರು ಪ್ರತಿವರ್ಷದವನದ ಹುಣ್ಣಿಮೆಯಂದು ನಡೆಯುವ ಹಂಪಿ ಜಾತ್ರೆಯ ಸಂದರ್ಭದಲ್ಲಿ ಭಕ್ತರೊಂದಿಗೆ ಇಲ್ಲಿಗೆ ಬರುತ್ತಿದ್ದರು. ಬಂದು ಈ ಮಠದ ಮಂಟಪದಲ್ಲಿ ತಂಗುತ್ತಿದ್ದರು. ಕಾಯಿ ಕರ್ಪೂರ ನೈವೇದ್ಯ ಅರ್ಪಿಸಿ ದಾಸೋಹ ನಡೆಸುತ್ತಿದ್ದರು. ಆದರೆ, ಅನಂತರದ ಕುರುಗೋಡು ನೀಲಮ್ಮನ ಮಠದ ಭಕ್ತರು ಮತ್ತು ಪೂಜಾರಿಗಳ್ಯಾರು ಈ ಮಠಕ್ಕೆ ಪೂಜೆ ಸಲ್ಲಿಸಲು ಬರುತ್ತಿಲ್ಲ ಎಂದು ಅವರು ಖೇದ ವ್ಯಕ್ತಪಡಿಸುವರು.

ಶಿವಶರಣೆ ನೀಲಮ್ಮನ ಮಠ ಮುದ್ದಾಪುರ ೧೦: ಹೊಸಪೇಟೆ ತಾಲೂಕಿನ ಕಂಪ್ಲಿ ಪಟ್ಟಣದ ಸಮೀಪದ ಮುದ್ದಾಪುರ ೧೦ ಒಂದು ಪುಟ್ಟ ಗ್ರಾಮ. ಇದು ನೀಲಮ್ಮ ಬಾಳಿದ ಊರು. ಇಲ್ಲಿ ನೀಲಮ್ಮನ ಮಠವಿದೆ. ಮಠದಡಿಯಲ್ಲಿ ನಾಲ್ಕಾರು ಎಕರೆ ಭೂಮಿಯೂ ಮಠಕ್ಕೆ ಹೊಂದಿಕೊಂಡೂ ಇರುವುದು. ನೀಲಮ್ಮನ ಕಾಲದೆಂದು ಹೇಳಲಾಗುವ ಮಠ, ಬಾವಿ ಮತ್ತು ನೀರಿನ ಡೋಣಿ ಇವು ಮಠದ ಪರಿಸರದಲ್ಲಿವೆ. ಮಠದ ಸಮೀಪದ ಸುಂಕಲಮ್ಮ, ಬಸವೇಶ್ವರ, ಈಶ್ವರ, ರಂಗನಾಥ ಮತ್ತು ಹನುಮಾನ ದೇವಾಲಯಗಳಿವೆ. ಕಳೆಯ ಊರು ಸುಂಕಲಮ್ಮನ ಗುಡಿಯ ಪರಿಸರದಲ್ಲಿತ್ತೆಂದು ಕುರುಹುಗಳನ್ನು ತೋರಿಸುತ್ತ ನೀಲಮ್ಮನ ಚರಿತ್ರೆಯನ್ನು ಮಠದ ಪೂಜಾರಿತನವನ್ನು ನಿರ್ವಹಿಸುತ್ತಿರುವ ವಕ್ತೃ ಶ್ರೀಮತಿ ರತ್ನಮ್ಮನವರು ಹೀಗೆ ಬಿಚ್ಚಿಡುವರು:

ಪ್ರತಿವರ್ಷ ಶ್ರಾವಣ ಮಾಸದ ಕೊನೆಯ ಸೋಮವಾರ ಮುದ್ದಾಪುರ ೧೦ ರಲ್ಲಿ ನೀಲಮ್ಮನ ಜಾತ್ರೆ ಜರುಗುತ್ತದೆ. ಊರಿನ ಜನರೆಲ್ಲ ಸೇರಿ ಜಾತ್ರೆ ಜರುಗಿಸುವರು. ಜಾತ್ರೆಯ ಹಿಂದಿನ ದಿನವಾದ ಭಾನುವಾರದಂದು ಮುದ್ದಾಪುರ ೧೦ ಗ್ರಾಮದ ಐದು ಜನ ಯುವಕರು ಸ್ನಾನಮಾಡಿ ಕಾಲ್ನಡಿಗೆಯಲ್ಲಿ ತನು ಬಿಂದಿಗೆಯಲ್ಲಿ ಗಂಗೆಯನ್ನು ತರಲು ಕುರುಗೋಡು ನೀಲಮ್ಮನ ಚೌಕಿ ಮಠಕ್ಕೆ ಹೋಗುವರು. ಕುರುಗೋಡಿನಲ್ಲಿಯ ಗುಡ್ಡದಲ್ಲಿಯ ಚೌಕಿಮಠದ ಹತ್ತಿರದ ಬಾವಿಯಿಂದ ತನುನೀರು ತುಂಬಿಕೊಂಡು ಮರುದಿನ ಬೆಳಿಗ್ಗೆ ಕಾಲ್ನಡಿಗೆಯಲ್ಲಿ ಮುದ್ದಾಪುರದ ಎದುರು ಬಸವಣ್ಣನಲ್ಲಿಗೆ ಬರುವರು. ಎದುರು ಬಸವಣ್ಣ ಮುದ್ದಾಪುರದಿಂದ ಸ್ವಲ್ಪ ದೂರದಲ್ಲಿ ಅಡವಿಯಲ್ಲಿದೆ. ಮುದ್ದಾಪುರದ ಗ್ರಾಮಸ್ಥರೆಲ್ಲ ಸೇರಿ ನೀಲಮ್ಮನ ತನುನೀರು ಅಂದರೆ ನೀಲಮ್ಮನನ್ನು ಕರೆತರಲು ಪಾಲಕಿಸಮೇತ ಎದುರು ಬಸವಣ್ಣನಲ್ಲಿಗೆ ಹೋಗುವರು. ಇಂದು ಪಾಲಕಿ ಬದಲಾಗಿ ತೇರು ಬಳಸಲಾಗುತಿದೆ. ಜಾತ್ರೆಯಲ್ಲಿ ಈ ಊರಿನ ಕೃಷ್ಣಗೊಲ್ಲರ ಎತ್ತಿನ ಹಿಂದೆ ಮೆರವಣಿಗೆ ಸಾಗುವುದು. ಈ ಎತ್ತಿಗೆ ಭಾನುವಾರವೇ ಸ್ನಾನಮಾಡಿಸಿ ಪೂಜೆ ಸಲ್ಲಿಸಿ ನೀಲಮ್ಮನ ಮಠದಲ್ಲಿ ಬಿಡುವ ಸಂಪ್ರದಾಯವಿದೆ. ಈ ಎತ್ತಿನ ಹಿಂದೆಯೆ ತೇರು ಸಾಗುವುದು. ಈ ಎತ್ತು ನೀಲಮ್ಮನ ಮಠದ ಬಾಗಿಲಲ್ಲಿ ಮೊದಲು ಬಲಗಾಲಿಟ್ಟರೆ ಊರಿಗೆ ಒಳ್ಳೆಯದಾಗುವುದೆಂದು ಮತ್ತು ಎಡಗಾಲಿಟ್ಟರೆ ಕೆಡಕಾಗುವುದೆಂದು ಭಕ್ತರು ತಿಳಿದುಕೊಳ್ಳುವರು. ಈ ಎತ್ತು ಕೃಷ್ಣಗೊಲ್ಲರ ಮನೆಯಿಂದ ನೀಲಮ್ಮನ ಮಠಕ್ಕೆ ಹೋಗುವಾಗ ಮತ್ತು ಮಠದಿಂದ ಮನೆಗೆ ಬಂದಾಗ ಮನೆಯವರಿಂದ ಪೂಜಿಸಲ್ಪಡುವುದು. ನೀಲಮ್ಮನ ಜಾತ್ರೆಯಲ್ಲಿ ಈ ಎತ್ತಿಗೆ ವಿಶೇಷ ಗೌರವ ಲಭ್ಯವಾಗುವುದು. ಇಂತಹ ಎತ್ತು ಅಸುನೀಗಿದರೆ ಅದನ್ನು ಹೂಳಲಾಗುವುದು. ಕಟುಕರಿಗೆ ಮಾರಲಾಗುವುದಿಲ್ಲ. ಬೇಡವಾದಾಗ ಕೃಷಿಕರಿಗೆ ಮಾರುವರು. ಇದು ಪಶುಪಾಲನೆ ಮತ್ತು ಬಸವಣ್ಣನನ್ನು ಪ್ರತಿನಿಧಿಸುವುದು. ಜಾತ್ರೆಗೆ ಬಂದ ಭಕ್ತರು ಹುಗ್ಗಿಯ ಪ್ರಸಾದ ಸ್ವೀಕರಿಸುವರು. ಊರಿನ ಜನರೆಲ್ಲ ಅಂದು ಹೋಳಿಗೆ ಮಾಡಿ ನೀಲಮ್ಮನಿಗೆ ಅರ್ಪಿಸುವರು. ಮುಟ್ಟಾದ ಹೆಂಗಸರು ಮತ್ತು ಈ ಊರಿನ ಮಾದಿಗ ಜಾತಿಯವರು ಮಠದೊಳಗೆ ಪ್ರವೇಶಿಸುವುದಿಲ್ಲ. ಗದಗ ತಾಲೂಕಿನ ಕದಡಿ ಗ್ರಾಮದಲ್ಲಿಯ ನೀಲಮ್ಮನ ಜಾತ್ರೆಯೂ ಶ್ರಾವಣ ಮಾಸದ ಕೊನೆಯ ಸೋಮವಾರವೇ ಜರುಗುವುದು.

ಮುದ್ದಾಪುರ ೧೦ ಗ್ರಾಮದ ವಕ್ತೃ ಶ್ರೀಮತಿ ರುದ್ರಮ್ಮ ಹಳೇಗೌಡರು ನೀಲಮ್ಮನ ಪವಾಡಗಳನ್ನು ಅಂದರೆ ಕುರುಗೋಡಿನಿಂದ ಬಂದ ಹೋರಿ ಕುರಿತ ಪವಾಡವನ್ನು ಹೇಳುತ್ತಾರೆ.

ಮುದ್ದಾಪುರ ೧೦ ಗ್ರಾಮದಲ್ಲಿ ಕಾರೆಕಲ್ಲಿನೋರು ಬಡಿಗತನ ಮಾಡುತ್ತಿದ್ದ ಪತ್ತಾರ ಬಸವಣ್ಣೆಪ್ಪ ಎಂಬ ವೀರಶೈವರು ಇದ್ದರಂತೆ. ಇವರು ಕುರುಗೋಡಿನಿಂದ ಬಂದ ಹೋರಿ ಕುರಿತ ಕುತೂಹಲಕ್ಕಾಗಿ, ಮಠದಲ್ಲಿ ಹೋಗಿ ನೀಲಮ್ಮನ ನೋಡಿದಾಗ ರಕ್ತಕಾರಿ ಸಾಯುವ ಶಾಪಕ್ಕೆ ಗುರಿಯಾದ ಕತೆಯೂ ಇದೆ. ಈ ಶಾಪಗ್ರಸ್ಥ ಕುಟುಂಬದಲ್ಲಿ ಇಂದಿಗೂ ಅಂಗವೈಕಲ್ಯವಿರುವುದಾಗಿ ಜನಪದರು ಹೇಳುವುದುಂಟು. ಆದರೆ, ಇದನ್ನು ಆ ಪತ್ತಾರ ಕುಟುಂಬದ ಶ್ರೀ ಬುಳ್ಳಪ್ಪ (೪೫) ಅವರು ಒಪ್ಪುವುದಿಲ್ಲ.

ಮುದ್ದಾಪುರ ೧೦ ಗ್ರಾಮದ ನೀಲಮ್ಮನ ಮಠದ ಆಡಳಿತವನ್ನು ನಂದೀಶ್ವರಯ್ಯನವರು ನೋಡಿಕೊಳ್ಳುವರು. ಇವರು ಕುರುಗೋಡು ನೀಲಮ್ಮನ ಮಠದ ಪೂಜಾರಿಗಳ ಕಳ್ಳುಬಳ್ಳಿಯವರಾಗಿದ್ದು' ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿರುವರು (ವಂಶವೃಕ್ಷ ೫ ನೋಡಿ). ಮಠವು ಜೀರ್ಣಾವಸ್ಥೆಗೆ ಬಂದಾಗ ವಕ್ತೃ ಶ್ರೀಮತಿ ರುದ್ರಮ್ಮನವರ ತಂದೆಯವರು ಜೀರ್ಣೋದ್ಧಾರ ಕಾರ್ಯಕೈಗೊಂಡು ೪೦ ತೊಲಿಯ ಎರಡು ಬೆಳ್ಳಿಯ ಪಾದುಕೆಗಳನ್ನು ಮಾಡಿಸಿ ಮಠಕ್ಕೆ ಸಮರ್ಪಿಸಿ ಒಂದು ಎಕರೆ ಭೂಮಿಯನ್ನು ಮಠಕ್ಕಾಗಿ ಬುಕ್ಕಸಾಗರದಲ್ಲಿ ದಾನವಾಗಿ ನೀಡಿದರು.

ಆದರೆ ಆ ಭೂಮಿಯನ್ನು ನೀಲಮ್ಮನ ಮಠದವರು ಬೇರೆ ಮಠಕ್ಕೆ ಮಾರಿದರು. ಮತ್ತು ನಾಲ್ಕು ವರ್ಷಗಳ ಹಿಂದೆ ಜಾತ್ರೆಯಲ್ಲಿ ಪಾದುಕೆಗಳು ಮಠದಿಂದ ಕಳುವಾದವೆಂದು ವಕ್ತ ಶ್ರೀಮತಿ ರುದ್ರಮ್ಮನವರವರು ಹೇಳುವರು. ಮಠದ ಕಂಪೌಂಡ್‌ನ್ನು ನಂದೀಶ್ವರಯ್ಯನವರು ಕಟ್ಟಿಸಿರುವರು. ಮಠದ ಒಂದು ಭಾಗ ಅಂಗನವಾಡಿ ಶಾಲೆಗೆ ಬಳಸಲಾಗುತ್ತಿದೆ. ೧೯೩೦ರಿಂದ ಪ್ರಸ್ತುತ ಮಠದ ಪೂಜಾರಿಗಳ ನ್ಯಾಯಾಲಯದ ತೀರ್ಪಿನಂತೆ ತಮ್ಮ ಆಡಳಿತ ಮುಂದುವರಿಸಿದ್ದಾರೆ. ಆ ಮೊದಲು ಈ ನೀಲಮ್ಮನ ಮಠದ ವ್ಯಾಜ್ಯ ನ್ಯಾಯಾಲಯದಲ್ಲಿತ್ತು. ಈ ಮಠಗಳು ತಮ್ಮವವೆಂದು ಕೊಟ್ಟೂರು ಸ್ವಾಮಿಗಳು ನ್ಯಾಯಾಲಯಕ್ಕೆ ಹೋಗಿದ್ದರು. ನ್ಯಾಯಾಲಯದಲ್ಲಿ ತೀರ್ಪು ಪ್ರಸ್ತುತ ಮಠದ ಸ್ವಾಮಿಗಳ ಪರವಾಯಿತ್ತು. ಮುದ್ದಾಪುರ ೧೦ ನೀಲಮ್ಮನ ಮಠದ ಆಸ್ತಿ ಸದುಪಯೋಗ ಮಾಡಿಕೊಂಡು ಜನಪರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಅವಶ್ಯಕವಾಗಿದೆ.

ಕುಡತಿನಿ ನೀಲಮ್ಮನ ಮಠ: ಬಳ್ಳಾರಿ ತಾಲೂಕಿನ ಕುಡುತಿನಿ ಒಂದು ಹಳೆಯ ಗ್ರಾಮ. ಇಲ್ಲಿಯ ನೀಲಮ್ಮನ ಮಠ ನೀಲಮ್ಮನೇ ಕಟ್ಟಿಸಿ ತನ್ನ ಗುರುಗಳಾದ ಕೊಟ್ಟೂರು ಸ್ವಾಮಿಗಳಿಗೆ ಸಮರ್ಪಿಸಿರುವುದಾಗಿ ಇಲ್ಲಿಯ ಪ್ರಸ್ತುತ ಸ್ವಾಮಿಗಳಾದ ಶ್ರೀ ಮರಿಮಹಾಂತ ದೇಶಿಕರು ಹೇಳುವರು. ಇವರು ವಿರಕ್ತ ಪರಂಪರೆಯ ಕೊಟ್ಟೂರು ಸ್ವಾಮಿಗಳ ಶಾಖಾ ಮಠ ಕುಡತಿನಿಯ ನೀಲಮ್ಮನ ಮಠದ ಗುರುಗಳು. ಈ ಮಠದಡಿಯಲ್ಲಿ ೮೦ ಎಕರೆ ಭೂಮಿ ಇತ್ತು. ಈಗ ೨೫ ಎಕರೆ ಭೂಮಿ ಈ ಮಠದಡಿಯಲ್ಲಿರುವುದು.

ಜಂಗಮ, ಸ್ವಾಮಿ, ದೇವರು ಮತ್ತು ನೀಲಮ್ಮ : ಸಿಂದಿಗೇರಿಯ ತನ್ನ ಮನೆಯಲ್ಲಿ ಸ್ನಾನಮಾಡುತ್ತಿರುವಾಗ ಬಚ್ಚಲು ಮನೆಯಿಂದಲೇ ನೀಲಮ್ಮಳನ್ನು ಜಂಗಮನೋರ್ವನು ತನ್ನ ಜೋಳಿಗೆಯಲ್ಲಿ ಹಾಕಿಕೊಂಡು ಪರಾರಿಯಾದನೆಂಬ ವಿಷಯ ಜನಜನಿತವಾಗಿರುವುದು. ನೀಲಮ್ಮಳು ಸ್ನಾನ ಮಾಡಿದ ಬಚ್ಚಲು ಕಲ್ಲು ಜನಮಾನಸದಲ್ಲಿ ಹಸಿರಾಗಿರುವುದು. ಈ ಕಲ್ಲನ್ನು ಇಂದಿಗೂ ಭಕ್ತರು ಸಿಂದಿಗೇರಿಯಲ್ಲಿ ಪೂಜಿಸುವರು. ನೀಲಮ್ಮನನ್ನು ಅಪಹರಿಸಿದ ಜಂಗಮನು ಕೊಟ್ಟೂರು ಸ್ವಾಮಿ ಮಠದ ಪರಂಪರೆಯವನು. ಜನಪದರು ಸ್ವಾಮಿಗಳಿಗೆ ಜಂಗಮರು ಎಂದು ಕರೆದಿರುವರು. ಹೀಗಾಗಿ ಜಂಗಮ ಮತ್ತು ಸ್ವಾಮಿ ಬೇರೆ ಬೇರೆ ಅಲ್ಲ. ಕೊಟ್ಟೂರು ಸ್ವಾಮಿ ಮಠದ ಪರಂಪರೆಯಲ್ಲಿ ಇದುವರೆಗಿನ ೧೯ ಜನ ಗುರುಗಳಲ್ಲಿ ಜಂಗಮರೆಂದು ಕರೆಸಿಕೊಳ್ಳುವವರ್ಯಾರೂ ಇಲ್ಲ. ಆದರೆ, ಇವರಲ್ಲಿ ಒಬ್ಬರು ಮಾತ್ರ ದೇವರು ಎಂದು ಕರೆಸಿಕೊಂಡಿದ್ದಾರೆ. ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳು (ಕ್ರಿ.ಶ. ೧೫೧೮) ಕೊಟ್ಟೂರು ಸ್ವಾಮಿ ಮಠದ ಪರಂಪರೆಯ ಸಂಸ್ಥಾಪಕ ಗುರುಗಳು. ಕೊಟ್ಟೂರು ಸ್ವಾಮಿ ಮಠವು ವಿರಕ್ತ ಪರಂಪರೆಯನ್ನು ಹೊಂದಿರುವುದು. ಬಾಲ್ಯಾವಸ್ಥೆಯಲ್ಲಿಯೇ ನೀಲಮ್ಮ ಈ ಪರಂಪರೆಯ ೮ನೇ ಗುರುಗಳಾಗಿದ್ದ ಶ್ರೀ ಮರಿ ಕೊಟ್ಟೂರು ಸ್ವಾಮಿ(ಕ್ರಿ.ಶ. ೧೭೦೭) ಗಳಿಂದ ಧರ್ಮದೀಕ್ಷೆ ಪಡೆದಂತಿದೆ. ಈ ಕಾಲಾವಧಿಯಲ್ಲಿಯೇ ಈ ಪರಂಪರೆಯ ೧೨ನೇ ಗುರುಗಳಾದ ಶ್ರೀಚನ್ನಬಸವ ದೇವರು (ಕ್ರಿ.ಶ. ೧೭೪೬) ಕೊಟ್ಟೂರು ಸ್ವಾಮಿ ಮಠದ ಪರಂಪರೆಯಲ್ಲಿ ಕುರುಗೋಡು ಅಥವ ಸಿಂದಿಗೇರಿ ಶಾಖಾ ಮಠದ ಮರಿ ಸ್ವಾಮಿಗಳಾಗಿರಬಹುದು. ನೀಲಮ್ಮ ವಿರಕ್ತೆಯಾಗಲು ಈ ಶ್ರೀ ಚನ್ನಬಸವ ದೇವರೇ ಕಾರಣರಾಗಿರಬಹುದು ಎಂದೆನಿಸುತ್ತದೆ. ದೇವರು, ದೇವಿ, ಶರಣ, ಶರಣೆ, ಅಣ್ಣ, ಅಕ್ಕ, ಅಪ್ಪ, ಅವ್ವ, ತಾಯಿ, ಮಾತೆ ಇತ್ಯಾದಿ ಅಡ್ಡ ಹೆಸರಿನ ಗುರುಗಳು ಕರ್ನಾಟಕದ ಹಲವೆಡೆ ಕಾಣಸಿಗುವರು. ಈ ಪದಗಳು ದೇವರಿಗೆ ಸಮಾನವಾದವುಗಳು. ಈ ತರಹದ ಅಡ್ಡ ಹೆಸರಿನ ಮಹಾತ್ಮರು ಜನ್ಮತಃ ಜಂಗಮರು ಅಥವ ಸ್ವಾಮಿಗಳಾಗಿರಲಾರರು. ಉದಾ: ಬೀದರ ಜಿಲ್ಲೆಯ ಭಾಲ್ಕಿಯ ಹಿರೇಮಠದ ಶ್ರೀಚನ್ನಬಸವ ಪಟ್ಟದೇವರು ಮತ್ತು ಶ್ರೀ ಬಸವಲಿಂಗ ಪಟ್ಟದೇವರು ಲಿಂಗಾಯತರು. ಧಾರವಾಡದ ಶ್ರೀ ರೇವಣಸಿದ್ಧೇಶ್ವರ ಮುನ್ನೂರ ಮಠದ ಶ್ರೀ ಬಸವರಾಜ ದೇವರು ಕುರುಬರು. ಬೀದರಿನ ಸಮೀಪದ ಕೌಠಾ ಗ್ರಾಮದ ಶ್ರೀ ಬೆಲ್ದಾಳ ಸಿದ್ರಾಮ ಶರಣರು ಹೊಲೆಯರು. ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷರಾದ ಶ್ರೀ ಸಿದ್ರಾಮಣ್ಣ ಶರಣರು ಕುರುಬರು. ಕಲಬುರ್ಗಿಯ ಶರಣ ಬಸವೇಶ್ವರ ಸಂಸ್ಥಾನದ ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪ, ಪೂಜ್ಯ ಶ್ರೀ ಶರಣ ಬಸಪ್ಪ ಅಪ್ಪರು ಲಿಂಗಾಯಿತರು. ೧೨ನೇ ಶತಮಾನದ ಶರಣರೆಲ್ಲ ತಳವರ್ಗದವರು. ಇವರು ಜನ್ಮತಃ ಜಂಗಮರು ಅಥವ ಸ್ವಾಮಿಗಳಲ್ಲ. ಇವರು ಸಾಧಕರು. ಸಾಧನೆಯಿಂದ ಗುರುಸ್ಥಾನ ಪಡೆದವರು. ಹೀಗಾಗಿ ಕೊಟ್ಟೂರು ಸ್ವಾಮಿ ಮಠದ ಗುರುಪರಂಪರೆಯಲ್ಲಿ ೧೨ನೇ ಗುರುಗಳಾಗಿದ್ದ ಶ್ರೀ ಚನ್ನಬಸವ ದೇವರು ಜನ್ಮತಃ ಜಂಗಮರು ಅಥವ ಸ್ವಾಮಿಗಳಾಗಿರದೇ ಅವರು ಲಾಳಗೊಂಡರಾಗಿರುವ ಸಾಧ್ಯತೆಗಳಿವೆ. ಇವರು ನೀಲಮ್ಮನಿಗಿಂತ ನಾಲ್ಕಾರು ವರ್ಷ ವಯಸ್ಸಿನಲ್ಲಿ ಹಿರಿಯರಾಗಿದ್ದು ನೀಲಮ್ಮನ ಕಳ್ಳುಬಳ್ಳಿಯವರಾಗಿರಬಹುದಾಗಿದೆ. ವಿರಕ್ತರು ಸಾಮಾನ್ಯವಾಗಿ ಸ್ತ್ರೀ ವ್ಯಾಮೋಹಿಗಳಾಗಿರುವುದಿಲ್ಲ. ಅದ್ಯಾಗೂ ಕೊಟ್ಟೂರು ಸ್ವಾಮಿ ಮತ್ತು ನೀಲಮ್ಮನ ಮಧ್ಯೆ ಈ ಸಂಬಂಧ ಹಲವೆಡೆ ವ್ಯಕ್ತವಾಗುತ್ತದೆ. ಜನಪದರಲ್ಲಿಯ ಕೊಟ್ಟೂರು ಸ್ವಾಮಿಗಳೇ ಶ್ರೀಚನ್ನಬಸವ ದೇವರು ಆಗಿರುವ ಸಾಧ್ಯತೆಗಳಿವೆ. ನೀಲಮ್ಮನೊಂದಿಗೆ ಇವರ ಕಾಲ ಮತ್ತು ವಯಸ್ಸು ಹೊಂದಾಣಿಕೆಯಾಗುವುದು. ಶ್ರೀ ಚನ್ನಬಸವ ದೇವರ ಚರಿತ್ರೆಯಿಂದ ನೀಲಮ್ಮನ ಚರಿತ್ರೆ ಅನಾವರಣಗೊಳಿಸಬಹುದಾಗಿದೆ. ಈ ಸಂಬಂಧ ಒಂದು ವಿಶೇಷ ಅಧ್ಯಯನದ ಅವಶ್ಯಕತೆಯಿದೆ.

ಜನ್ಮ - ಕರ್ಮ - ಕೈವಲ್ಯ : ನೀಲಮ್ಮನ ಜನ್ಮಸ್ಥಾನ ಇಂದಿನ ಬಳ್ಳಾರಿ ತಾಲೂಕಿನ ಸಿಂದಿಗೇರಿ (ನಾಡಗೌಡರ ತಿಪ್ಪೇರುದ್ರಗೌಡ : ೧೯೭೬:೧೮) ಗ್ರಾಮವಾಗಿರುವುದು. ಕರ್ಮಸ್ಥಾನ ಅದೇ ತಾಲೂಕಿನ ಕುರುಗೋಡು (Bellary District Gazetteer: 1972: 696) ಗ್ರಾಮವಾಗಿದ್ದರೆ ಕೈವಲ್ಯಸ್ಥಾನ ಗದಗ ತಾಲೂಕಿನ ಕದಡಿ (ನಾಡಗೌಡರ ತಿಪ್ಪೇರುದ್ರಗೌಡ ೧೯೭೬-೧೯) ಗ್ರಾಮವಾಗಿರುವುದು. ಜನ್ಮಸ್ಥಾನವಾದ ಸಿಂದಿಗೇರಿಯಲ್ಲಿ ಲಾಳಗೊಂಡ ಸಮುದಾಯದ ಒಟ್ಟು ೨೯ ಕುಟುಂಬಗಳಿರುವವು. ಅದರಲ್ಲಿ ೯ ಕುಟುಂಬಗಳು ನೀಲಮ್ಮನ ಕಳ್ಳುಬಳ್ಳಿಗೆ ಸಂಬಂಧಿಸಿರುವವು. ಇದರಲ್ಲಿ ೫ ಕುಟುಂಬಗಳು ಸರನಾಡಗೌಡ ಮತ್ತು ೪ ಕುಟುಂಬಗಳು ದೊಡ್ಡನಗೌಡ ಮನೆತನದ ಹೆಸರುಗಳಿಂದ ಗುರುತಿಸಲ್ಪಡುವವು. ಈ ೯ ಕುಟುಂಬಗಳವರ ಮನೆ ಮತ್ತು ಹೊಲಗಳು ನೀಲಮ್ಮನ ಮಠ ಮತ್ತು ಹೊಲಕ್ಕೆ ಹತ್ತಿಕೊಂಡು ಸಮೀಪದಲ್ಲಿರುವವು. ಕುರುಗೋಡಿನಲ್ಲಿ ಸರನಾಡಗೌಡರಾಗಿದ್ದ ನೀಲಮ್ಮನ ಕಳ್ಳುಬಳ್ಳಿಯಲ್ಲಿಯ ಮಾದೇಗೌಡರ ವಂಶದ ೨ ಕುಟುಂಬಗಳು ಸಿಂದಿಗೇರಿಯಲ್ಲಿರುವವು. ಕುರುಗೋಡು ನೀಲಮ್ಮನ ಕರ್ಮಭೂಮಿ. ಇಲ್ಲಿ ಲಾಳಗೊಂಡ ಸಮುದಾಯದ ಒಟ್ಟು ೩೮ ಕುಟುಂಬಗಳಿರುವವು. ಅದರಲ್ಲಿ ೧೦ ಕುಟುಂಬಗಳವರು ನೀಲಮ್ಮನ ರಕ್ತ ಸಂಬಂಧಿಗಳಾಗಿದ್ದು ಸರನಾಡಗೌಡ ಎಂಬ ಮನೆತನದ ಹೆಸರುಗಳನ್ನು ಹೊಂದಿರುವವು. ಇದರಲ್ಲಿ ೫ ಕುಟುಂಬಗಳು ಎದುರು ಬಸವಣ್ಣನ ಕಟ್ಟೆ ಹತ್ತಿರ (ವಂಶಾವಳಿ:೨) ಮತ್ತು ಇನ್ನೂ ೫ ಕುಟುಂಬಗಳು ನೀಲಮ್ಮನ ಮಠದ ಸಮೀಪ ನೆಲೆಸಿರುವವು. ಕುರುಗೋಡು ಹತ್ತಿರದ ಮುಷ್ಟಗಟ್ಟೆ ಗ್ರಾಮದಲ್ಲಿ ಲಾಳಗೊಂಡ ಸಮುದಾಯದ ಒಟ್ಟು ೫೫ ಕುಟುಂಬಗಳವರು ನೀಲಮ್ಮನ ರಕ್ತ ಸಂಬಂಧಿಗಳಾಗಿದ್ದು ಸಿಂದಿಗೇರಿಯವರು ಎಂಬ ಮನೆತನದ ಹೆಸರುಗಳನ್ನು ಹೊಂದಿರುವರು. ಈ ಕುಟುಂಬದ ಪೂರ್ವಿಕರು ಸಿಂದಿಗೇರಿ ಯಿಂದ ಮುಷ್ಟಗಟ್ಟೆ ಗ್ರಾಮಕ್ಕೆ ವಲಸೆಗೊಂಡಿರುವರು. ಈ ಗ್ರಾಮದಲ್ಲಿಯ ಸೋಮಲಾಪುರದವರು ಎಂಬ ಲಾಳಗೊಂಡರ ಮನೆತನಗಳು ಸಹ ಆ ಹಿನ್ನೆಲೆಯನ್ನೇ ಹೊಂದಿರುವುದಾಗಿ ತಿಳಿದು ಬಂದಿರುವುದು. ಈ ಮನೆತನದ ಕುಟುಂಬಗಳು ಸಿಂದಿಗೇರಿ, ಸೋಮಲಾಪುರ ಮಾರ್ಗವಾಗಿ ಮುಷ್ಟಗಟ್ಟೆ ಗ್ರಾಮದಲ್ಲಿ ಕಾಲಾಂತರದಲ್ಲಿ ವಲಸೆಗೊಂಡು ನೆಲೆನಿಂತಿರುವಂತಿದೆ.


ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಶಿರಿಗೇರಿ ಹತ್ತಿರದ ಗುಂಡಿಗನೂರು ಒಂದು ಸಣ್ಣ ಊರು. ಈ ಊರಲ್ಲಿ ಲಾಳಗೊಂಡ ಸಮುದಾಯದ ಒಟ್ಟು ೩೩ ಕುಟುಂಬಗಳಿರುವವು. ಅದರಲ್ಲಿ ೭ ಕುಟುಂಬಗಳು ನೀಲಮ್ಮನ ರಕ್ತ ಸಂಬಂಧಿಗಳಾಗಿದ್ದು ಕೆಂಚಪ್ಪನವರು ಎಂಬ ಮನೆತನದ ಹೆಸರನ್ನು ಹೊಂದಿರುವವು (ವಂಶಾವಳಿ:೪). ಕಾರಣ ನೀಲಮ್ಮನ ತಂದೆಯ ಹೆಸರು ಕೆಂಚನಗೌಡ ಎಂದೇ ಇರುವುದು. ಇದರಿಂದ ಇವರು ಕೆಂಚನಗೌಡನ ವಂಶಜರೆಂಬುದು ಸಾಧಿತವಾಗುವುದು.

ಗದಗ ತಾಲೂಕಿನ ಕದಡಿಯೇ ನೀಲಮ್ಮನ ಕೈವಲ್ಯಸ್ಥಾನವೆಂದು ಕದಡಿಯ ಭಕ್ತರ ಬಲವಾದ ನಂಬಿಕೆ. ಇಲ್ಲಿನ ಮಠದಲ್ಲಿ ನೀಲಮ್ಮನವರ ಸುಂದರ ಶಿಲ್ಪದ ಮೂರ್ತಿ ಇದ್ದು ಪ್ರತಿವರ್ಷ ಶ್ರಾವಣ ಮಾಸದಂದು ಜಾತ್ರೆ, ರಥೋತ್ಸವ ಜರುಗುತ್ತದೆ. ಶಂಸಿಯಲ್ಲಿ ನೀಲಮ್ಮನ ಗದ್ದುಗೆ ಇರುವುದು.

ಮತ ಮತ್ತು ಕಾಲದ ನಿಖರ ಅಂಶಗಳು : ಹಾಲುಮತದ ಲಾಳಗೊಂಡರು ಶೈವರಾಗಿ ವೀರಶೈವರಾಗಿ, ಲಿಂಗಾಯತರಾದವರು. ನೀಲಮ್ಮ ಲಾಳಗೊಂಡ ಸಮುದಾಯದವಳೆಂಬುದಕ್ಕೆ ಹಲವಾರು ಪ್ರಮಾಣಗಳಿವೆ. ನೀಲಮ್ಮನ ಹುಟ್ಟೂರು ಇಂದಿನ ಬಳ್ಳಾರಿ ತಾಲೂಕಿನ ಸಿಂದಿಗೇರಿ ಗ್ರಾಮ. ಇವಳ ತಂದೆ ಕೆಂಚನಗೌಡ, ತಾಯಿ ಪೋರಮ್ಮ ಹಾಗೂ ಸಹೋದರ ರಾಮಭೂಪ. ಇವರು ಸರನಾಡ ಗೌಡರು. ನೀಲಮ್ಮನ ಕರ್ಮಭೂಮಿ ಕುರುಗೋಡು. ಅಲ್ಲಿ ನೀಲಮ್ಮನ ಮಠವಿದೆ. ನೀಲಮ್ಮನ ಕೈವಲ್ಯಸ್ಥಾನ ಇಂದಿನ ಗದಗ ಜಿಲ್ಲೆಯ ಕದಡಿ ಗ್ರಾಮ. ನೀಲಮ್ಮನ ದಿಕ್ಷಾ ಗುರುಗಳು ಕೊಟ್ಟೂರು ಪರಂಪರೆಯ ಶ್ರೀ ಮರಿ ಕೊಟ್ಟೂರು ಸ್ವಾಮಿಗಳು (ಕ್ರಿ.ಶ. ೧೭೦೭). ನೀಲಮ್ಮನ ಮನೆದೇವರು ಗಿರಿಮಲ್ಲಯ್ಯ ಮತ್ತು ರಾರಾವಿ ಯಲ್ಲಮ್ಮ. ಇವಳು ಶಿವಶರಣೆಯಾಗಿರುವಳು. ನೀಲಮ್ಮನ ಕಾಲ ಸುಮಾರು ೧೭೦೦ ರಿಂದ ೧೭೭೭. ನೀಲಮ್ಮನ ಮಠಗಳು ಸಿಂದಿಗೇರಿ, ಕುರುಗೋಡು, ಮುದ್ದಾಪುರ, ಕದಡಿ, ಗುತ್ತಿಗನೂರು, ಹಂಪಿ, ಹೊಸೂರು, ಹುಯಿಲಗೋಳ, ಸಂಶಿ, ಕುಡುತಿನಿಗಳಲ್ಲಿರುವವು.

ವಂಶಾವಳಿ : ೧
ಸಿಂದಿಗೇರಿ ನೀಲಮ್ಮನ ಕಳ್ಳುಬಳ್ಳಿಯ ಸರನಾಡಗೌಡರು


ಶ್ರೀಯಾದಿ ವಂಶಾವಳಿ ಇವರು ಕುಲದಲ್ಲಿ ಲಾಳಗೊಂಡರು. ಗುರುಗಳು ಶೋಲಬಯ್ಯ ಸ್ವಾಮಿ, ದೇವರು ರಾರಾವಿ ಎಲ್ಲಮ್ಮ ಮತ್ತು ಕುರುಗೋಡು ದೊಡ್ಡ ಬಸವಣ್ಣ. ಪೂರ್ವಿಸ್ಥಳ ಬದ್ರಿಕೋಟಿ ಬಿಟ್ಟು ಚಿಂದಿ ಚಿಂದಾವಾರಕ್ಕೆ ಬಂದರು. ಬಿಟ್ಟು ತೆಗ್ಗಿನ ಸಿದ್ದಾಪೂರಕ್ಕೆ ಬಂದರು. ಬಿಟ್ಟು ಕುರುಗೋಡಕ್ಕೆ ಬಂದರು ಸರನಾಡ ಗೌಡ್ಕಿ ಪಡೆದರು. ಇವರ ಸಂತತಿಯಲ್ಲಿ ಮಹಾದೇವಗೌಡರ ಪುತ್ರರಾದ (೧) ದೊಡ್ಡತಿಮ್ಮನಗೌಡ (ಹೆಂಡತಿ ನೀಲಮ್ಮ) ೨) ಸಣ್ಣತಿಮ್ಮನಗೌಡ (ಹೆಂಡತಿ ಪಾರ್ವತಮ್ಮ) ಎಂಬುವವರು ಸಿಂದಿಗೇರಿಗೆ ಬಂದು ನೆಲೆಸಿರುತ್ತಾರೆ. ಅವರ ವಂಶಾವಳಿ ವಿವರ ಹೀಗಿದೆ:



ವಂಶಾವಳಿ ದಾಖಲೆ : ಹೆಳವರ ಫಕೀರಪ್ಪ ಇಮ್ಮಡಿ, ವಯಸ್ಸು ೫೫, ನಾಗಶೆಟ್ಟಿಕೊಪ್ಪ ಗ್ರಾಮ, ಹಳಿಯಾಳ ತಾಲೂಕ, ಉತ್ತರ ಕನ್ನಡ ಜಿಲ್ಲೆ (೨೦೦೦)

ವಂಶಾವಳಿ : ೨
ಸಿಂಧಿಗೇರಿ ನೀಲಮ್ಮನ ಕಳ್ಳುಬಳ್ಳಿಯ ಕುರಗೋಡು ಸರನಾಡಗೌಡರು

ಶ್ರೀಯಾದಿ ವಂಶಾವಳಿ ಇವರು ಕುಲದಲ್ಲಿ ಲಾಳಗೊಂಡರು. ಗುರುಗಳು ಶೋಲಬಯ್ಯ ಸ್ವಾಮಿ, ದೇವರು ರಾರಾವಿ ಎಲ್ಲಮ್ಮ ಮತ್ತು ಕುರುಗೋಡು ದೊಡ್ಡ ಬಸವಣ್ಣ. ಪೂರ್ವಿಸ್ಥಳ ಬಿದ್ರಿಕೋಟೆ ಬಿಟ್ಟು ಚೆಂದಿ ಚೆಂದಾವಾರಕ್ಕೆ ಬಂದರು. ಅಲ್ಲಿ ಬಿಟ್ಟು ತಗ್ಗಿನ ಸಿದ್ಧಾಪುರಕ್ಕೆ ಬಂದರು. ಅಲ್ಲಿ ಬಿಟ್ಟು ಕುರುಗೋಡಕ್ಕೆ ಬಂದರು. ಸರನಾಡ ಗೌಡ್ಕಿ ಪಡೆದವರ ವಿವರ: (ಶಿದ್ದನಗೌಡರ ಕುಟುಂಬದ ವಂಶಾವಳಿ)




* ಶಂಕರಗೌಡ ಬದಾಮಿಯಲ್ಲಿ ಇಂಜನೀಯರ್ ಆಗಿರುವರು.

** ಮಲ್ಲಪ್ಪಗೌಡ ಸೊಂಡೂರು ತಾಲೂಕಿನ ನರಸಾಪುರದ ಕೆ.ಇ.ಬಿ.ಯಲ್ಲಿ ಕೆಲಸ ನಿರ್ವಹಿಸುವರು.

ವಂಶಾವಳಿ ದಾಖಲೆ: ಹೆಳವರ ಫಕೀರಪ್ಪ ಇಮ್ಮ ಡಿ. ವಯಸ್ಸು. ೫೫. ನಾಗಶೆಟ್ಟಿಕೊಪ್ಪ ಗ್ರಾಮ. ಹಳಿಯಾಳ

ವಂಶಾವಳಿ : ೩
ಸಿಂಧಿಗೇರಿ ನೀಲಮ್ಮನ ಕಳ್ಳುಬಳ್ಳಿಯ ಕುರುಗೋಡಿನ ಸರನಾಡಗೌಡರು


ಶ್ರೀ ಯಾದಿ ವಂಶಾವಳಿ ಇವರು ಕುಲದಲ್ಲಿ ಲಾಳಗೊಂಡರು. ಗುರುಗಳು ಶೋಲಬಯ್ಯ ಸ್ವಾಮಿ, ದೇವರು ರಾರಾವಿ ಎಲ್ಲಮ್ಮ ಮತ್ತು ಕುರುಗೋಡು ದೊಡ್ಡ ಬಸವಣ್ಣ. ಪೂರ್ವಿಸ್ಥಳ ಬದ್ರಿಕೋಟ ಬಿಟ್ಟು ಚೆಂದಿ ಚೆಂದಾವಾರಕ್ಕೆ ಬಂದರು. ಬಿಟ್ಟು ತೆಗ್ಗಿನ ಸಿದ್ದಾಪುರಕ್ಕೆ ಬಂದರು. ಬಿಟ್ಟು ಕುರುಗೋಡಕ್ಕೆ ಬಂದರು ಸರನಾಡ ಗೌಡ್ಕಿ ಪಡೆದರು. (ಚೆನ್ನಬಸವನಗೌಡರ ಕುಟುಂಬದ ವಂಶಾವಳಿ)



೪ ಕಲ್ಲು ಕಂಬ ಗ್ರಾಮದಲ್ಲಿರುವರು
ವಂಶಾವಳಿ ದಾಖಲೆ ; ಹೆಳವರ ಫಕೀರಪ್ಪ ಇಮ್ಮಡಿ (೨೦೦೦)

ವಂಶಾವಳಿ : ೪
ಸಿಂದಿಗೇರಿ ನೀಲಮ್ಮನ ಕಳ್ಳುಬಳ್ಳಿಯ ಗುಂಡಿಗನೂರು ಗ್ರಾಮದ ಗೌಡರು

ಶ್ರೀಯಾದಿ ವಂಶಾವಳಿ ಕಂಚಿನ ಪತ್ರ ನಕಲು ಶಾಲಿವಾನ ಶಕೆ ೬೮೦ ಇವರು ಕುಲದಲ್ಲಿ ಲಾಳಗೊಂಡರು. ಗುರುಗಳು ಶಿಂದಿಗೇರಿ ಸೋಲಬಯ್ಯ ಸ್ವಾಮಿ, ಮನಿದೇವರು ಕುರುಗೋಡು ಬಸವಣ್ಣ ರಾರಾವಿ ಎಲ್ಲಮ್ಮ. ಪೂರ್ವಿಸ್ಥಳ ಚೆಂದಿ ಚೆಂದಾವರದ ಗೌಡರು. ಬಿಟ್ಟು ತೆಗ್ಗಿನ ಸಿದ್ದಾಪುರಕ್ಕೆ ಬಂದರು. ಬಿಟ್ಟು ಕುರುಗೋಡಕ್ಕೆ ಬಂದರು. ಬಿಟ್ಟು ಶಿಂದಿಗೇರಿಗೆ ಬಂದರು ಗೌಡ್ಕಿ ಪಡೆದರು. ಬಿಟ್ಟು ಗುಂಡಿನೂರಿಗೆ ಬಂದ್ರು. ಅಡ್ಡ ಹೆಸರು ಶಿಂದಿಗೇರಿ ಗೌಡರು. ಇವರ ವಂಶಾವಳಿ ವಿವರ:



ಕೆಂಚನಗೌಡ ಹಿರೇದೊಡ್ಡನಗೌಡ ಸಣ್ಣ ದೊಡ್ಡನಗೌಡ

ಲಿಂಗನಗೌಡ (ಸಿದ್ಧಮ್ಮ) ಬಸನಗೌಡ (ಬಸಮ್ಮ) ಬಸನಗೌಡ ಮಲ್ಲನಗೌಡ

೧. ಜಂಬನಗೌಡ (ಹಂಪಮ್ಮ) ೨ ದೊಡ್ಡ ಬಸನಗೌಡ ೬೫ (ಮಾಹಂತಮ್ಮ ೪೮) ೩ ಪಂಪನಗೌಡ ೬೦ (ಸುಂದ್ರಮ್ಮ ೫೫)

ನಾಗನಗೌಡ (ನಾಗರತ್ನಮ್ಮ) ಪಂಪನಗೌಡ ೩೮ (ಪೂರ್ಣಮ್ಮ ೩೬) ಲಿಂಗನಗೌಡ (ಅಕ್ಕಮಹಾದೇವಿ) ಯಲ್ಲನಗೌಡ ೩೫ (ರಾಜಮ್ಮ ೩೦) ಶೇಖರಗೌಡ ೩೦ (ಸರಸ್ವತಿ ೨೫) ವೀರನಗೌಡ ೨೭ ಬಸವರಾಜ ೨೫

ರೇಣಮ್ಮ ಮಂಜುನಾಥ ಚನ್ನಬಸನಗೌಡ ೧.೫.೧ ವಿಶ್ವನಾಥಗೌಡ ೩

೧.೨.೧ ಪುಸ್ಪಾವತಿ ೧೨ ಮಹಾಂತೇಶ೧೦ ಯಲ್ಲನಗೌಡ ೮ ೧.೪.೧. ಸುರೇಶಗೌಡ ೯ ಶಿವರಾಜ ಗೌಡ೭ ವಿನೋದಗೌಡ ೫

೧.೩.೧ ದಿವಾಕರ ಗೌಡ ಜೋತೆಮ್ಮ

೨.೧ ರೇಣುಕಮ್ಮ ೧೪ ೨.೨ ಮಲ್ಲಿಕಾರ್ಜುನ ೨.೩ ನೀಲಮ್ಮ ೧೨ ೨.೪ ಮಲ್ಲಮ್ಮ ೧೧ ೨.೫ ಸಿದ್ಧಮ್ಮ ೧೦ ೩.೧ ಶಿವಕುಮಾರಗೌಡ ೨೫ ೩.೨ ಸವಿತಾ ೧೪ ೩.೩ ದಾಕ್ಷಾಯಣಿ ೧೩ ೩.೪ ಯಲ್ಲನಗೌಡ ೧೨

ವಂಶಾವಳಿ ದಾಖಲೆ: ಹೆಳವರ ಫಕೀರಪ್ಪ ಇಮ್ಮಡಿ (೨೦೦೦)

ವಂಶಾವಳಿ : ೫

ಕುರುಗೋಡು ಮತ್ತು ಸಿಂಧಿಗೇರಿ ನೀಲಮ್ಮನ ಮಠದ ಪೂಜಾರಿಗಳ ವಂಶಾವಳಿ ಶ್ರೀಯಾದಿ ವಂಶಾವಳಿ ಕಂಚನ ಪತ್ರ ನಕಲು ಶಾಲಿವಾನ ಶಕೆ ೭೮೦ ಇವರು ಬಗಿ ಮಳಿ ಬಗಿ ಉಜ್ಜನಿ ಸಿಂಹಾಸನ ದೇವರು ವೀರಭದ್ರ ದೇವರು ಪೂರ್ವಿಸ್ಥಳ ಕೆಂಬಾವಿ ಗೌಡ್ಕಿ ಬಿಟ್ಟು ವೊರಬಾವಿಗೆ ಬಂದರು ಬಿಟ್ಟು ಕುರುಗೋಡಕ್ಕೆ ಬಂದರು ನೀಲಮ್ಮನ ಮಠದಲ್ಲಿ ನಿಂತರು.

ದೊಡ್ಡಬಸವನಗೌಡ ಸಣ್ಣ ಬಸವನಗೌಡ

ವೀರನಗೌಡ ಬಸವನ ಗೌಡ

ದೊಡ್ಡನಗೌಡ

ಪರ್ವತಯ್ಯ ಸ್ವಾಮಿ

ಬಸಯ್ಯ

ದೊಡ್ಡಯ್ಯ ರಾಘವಂಕಯ್ಯ

ಬಸಯ್ಯ ಬಸಯ್ಯ=ಗಂಗಮ್ಮ ಮರಿ ಬಸಯ್ಯ=ಗೌರಮ್ಮ

ಚಂದ್ರಮೌಳಿ ಸ್ವಾಮಿ=ನಾಗರತ್ನಮ್ಮ

ಶಿವಪ್ರಸಾದ ಗಿರಿಶ ರೇಖಾ ರೂಪ

ಪರ್ವತೇಶಯ್ಯ=ರೇಣುಕಾದೇವಿ ಷಡಕ್ಷರಯ್ಯ=ಹಂಪಮ್ಮ ನಂದೀಶ್ವರಯ್ಯ=ವಿಜಯಮ್ಮ ಶ್ರೀಕಂಠಯ್ಯ=ವಿಮಲಾದೇವಿ

ನಾಗೇಂದ್ರ ಪ್ರಭು ಸ್ವಾಮಿ=ವಿಜಯಲಕ್ಷ್ಮಿ ಮಂಜುನಾಥಯ್ಯ=ಸಂಧ್ಯಾ ಪ್ರಸನ್ನ ಸ್ವಾಮಿ=ಸವಿತ ರವಿಸ್ವಾಮಿ=ಮಮತ ಸಚಿನ ದೀಪಾಲಿ

ಪರ್ವತೇಶಯ್ಯ ಅಭಿಲಾಶ ಸ್ವಾಮಿ ಸಂಜಿವ ತೆಜೆಶ್ವನಿ ಮನಿಶ

**ರಾಜಶೇಖರಯ್ಯ ೫೨ ಗಾಯತ್ರಮ್ಮ ೪೫ ಜಗನಾಥಯ್ಯ ೫೦ ಶೋಭಾ ೪೫ ಉಮಾಪತಯ್ಯ ೪೪ ಶ್ರೀದೇವಿ ೪೦ ಸದಾನಂದಯ್ಯ ೪೦ ಶಾಂತಮ್ಮ ೩೫ ಮಾಂತೇಶಯ್ಯ ೩೭

ಮಂಜುಳ ೨೬ ರೇಖಾ ೨೫ ನಳಿನಿ ೨೪ ಪ್ರೇಮಕುಮಾರ ಸ್ವಾಮಿ ೨೨

***ಪ್ರಕಾಶಯ್ಯ ೨೪ ***ರೂಪ ೧೮ ಅವಿನಾಶಯ್ಯ ೧೦ ಮನೋಹರಯ್ಯ ೮ ಕಾರ್ತಿಕ ಸ್ವಾಮಿ

* ಮುದ್ದಾಪುರ ೧೦ ನೀಲಮ್ಮನ ಮಠಕ್ಕೆ ಸಂಬಂಧಿಸಿದವರು ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿರುವರು.
** ಕುರುಗೋಡ ನೀಲಮ್ಮನ ಮಠದ ಪ್ರಸುತ ಪೂಜಾರಿಗಳು.
*** ಸಿಂಧಿಗೇರಿ ನೀಲಮ್ಮನ ಮಠದ ಪ್ರಸುತ್ತ ಪೂಜಾರಿಗಳು.

ವಂಶಾವಳಿ ದಾಖಲೆ ; ಹೆಳವರ ಫಕೀರಪ್ಪ ಇಮ್ಮಡಿ (೨೦೦೦)

ಆಧಾರಸೂಚಿ ಮತ್ತು ಟಿಪ್ಪಣಿಗಳು

* ಅ. ಗ್ರಂಥಗಳು

೨. ಉಮಾಪತಿ ಶಾಸ್ತ್ರಿ ಗೌ.ಮ.(ಸಂ)., **ಹಂಪೆ- ಹೇಮಕೂಟ ಸಿಂಹಾಸನಾಧೀಶ್ವರ ಶ್ರೀಜಗದ್ಗುರು ಕೊಟ್ಟೂರು ಸ್ವಾಮಿ ಗುರು ಪರಂಪರೆ** (ಹೊಸಪೇಟೆ: ಶ್ರೀಜಗದ್ಗುರು ಕೊಟ್ಟೂರು ಸ್ವಾಮಿ ಮಠ, ೧೯೮೩).

೩. ಕಲಬುರ್ಗಿ, ಎಂ.ಎಂ., **ಕರ್ನಾಟಕದ ಕೈಫಿಯತ್ತುಗಳು** (ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೪) ಪುಟ. ೨೦೩.

೪. ಕಾಶಿನಾಥಶಾಸ್ತ್ರಿಗಳು., **ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ** (ಮೈಸೂರು: ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ೧೯೬೪).

೫. ಕುಮಾರ ನಿಡಗುಂದಿ., **ಶ್ರೀ ಶಿವಶರಣೆ ನೀಲಾಂಬಿಕೆ ದೇವಿಯ ಮಹಾತ್ಮೆ**, ೧೯೯೧, ಹಸ್ತಪ್ರತಿ, ಪು.೭೭.

೬. ಚಂದ್ರಶೇಖರಶಿವಾಚಾರ್ಯ ಸ್ವಾಮಿಗಳು., ವೀರಶೈವ **ಪಂಚಪೀಠ ಪರಂಪರೆ**(ಹೊನ್ನಾಳಿ: ಚಿನ್ನಚೇತನ, ಬೃಹಚ್ಚಿಲಾ ಮಠ: ೧೯೮೮).

೭. ಚನ್ನಮಲ್ಲಿಕಾರ್ಜುನ., ವೀರಶೈವ **ಪಂಚಾಚಾರ್ಯ ಚರಿತ್ರೆ**: ಶ್ರೀ ರೇವಣಸಿದ್ಧರು (ಬ್ಯಾಡಗಿ:ಶ್ರೀನಿರಂಜನ ಚನ್ನಬಸವ ಸ್ವಾಮಿಗಳು ವಿರಕ್ತಪಂಚಾಚಾರ್ಯ ಚರಿತ್ರೆ: ಶ್ರೀ ರೇಣ್ಣಸಿದ್ಧರು (ಬ್ಯಾಡಗಿ:ಶ್ರೀ ನಿರಂಜನ ಚನ್ನಬಸವ ಸ್ವಾಮಿಗಳು ವಿರಕ್ತಮಠ :೧೯೫೮). ಪುಟ೩೭೧.

೮. ಚಿದಾನಂದ ಮೂರ್ತಿ, ಎಂ., **ವೀರಶೈವ ಧರ್ಮ. ಭಾರತೀಯ ಸಂಸ ತಿ** (ಹಿಂದೂ:ಲಿಂಗಾಯತ) (ಬೆಂಗಳೂರು: ಮಿಂಚು ಪ್ರಕಾಶನ, ೨೦೦೦)

೯. ದೇವರಕೊಂಡಾರೆಡ್ಡಿ., **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ** ೧, ಬಳ್ಳಾರಿ ಜಿಲ್ಲೆ (ವಿದ್ಯಾರಣ್ಯ : ಕನ್ನಡ ವಿಶ್ವವಿದ್ಯಾಲಯ, ಹಂಪಿ,೧೯೯೮) ಪುಟ.೧೪೧ -೩

೧೦. ನಾಡಗೌಡರ ತಿಪ್ಪೇರುದ್ರಗೌಡ (ಲೇ).,ಕುರುಗೋಡ ಐತಿಹ್ಯ, **ಹೇಮಕೂಟ** ಮಾಸ ಪತ್ರಿಕೆ (ಹೊಸಪೇಟ: ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ) ಸಂಪುಟ೨, ಸಂಚಿಕೆ ೨, ಅಗಸ್ಟ ೧೯೭೬, ಪುಟ ೧೮.

೧೧. ಪ್ರಭಾನಂದ ಪಂಡಿತರು., **ಸಿಂದಿಗೇರಿ ಶ್ರೀ ಶಿವಶರಣ ಮಲ್ಲೇಶ್ವರನ ಪುರಾಣವು**(ರೌಡಕುಂದ:ಹಿರಿಯಮಠ, ಸಿಂಧನೂರು ತಾಲೂಕು, ೧೯೯೫).

೧೨. ರಮೇಶ ಮೂಲಗ., **ಬೀದರ ಜಿಲ್ಲೆಯ ವೀರಶೈವ ಮಠಗಳು: ಒಂದು ಅಧ್ಯಯನ** (ಹುಲಸೂರ: ಶ್ರೀ ಗುರುಬಸವೇಶ್ವರ ಸಂಸ್ಥಾನಮಠ, ೧೯೯೫)

೧೩. ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿಗಳು (ಸಂ).," ನೀಲಮ್ಮನವರ ದಾನಪತ್ರ" **ಹೇಮಕೂಟ**, ಮಾಸ ಪತ್ರಿಕೆ, ಸಂಪುಟ೬, ಸಂಚಿಕೆ ೪, ಅಕ್ಟೋಬರ್ ೧೯೮೦, ಪುಟ ೧೫-೧೬

೧೪. ಸಿದ್ಧರಾಮ ಶಾಸ್ತ್ರಿಗಳು., **ಶ್ರೀನಾಳಗೊಂಡೇಶ್ವರ ಪುರಾಣ ಕಾವ್ಯಂ** (ಕಲಬುರ್ಗಿ: ಶ್ರೀ ದೊಡ್ಡಪ್ಪ ಅಪ್ಪ ಉರ್ಫ್ ಶರಣಬಸವೇಶ್ವರ ಸಾಧು ಮಹಾರಾಜ, ೧೯೬೩).

೧೫. ಸೋಮಶೇಖರ ಎಸ್.ವೈ., **ಹಂಪೆಯ ಬಜಾರುಗಳು** (ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,೧೯೯೭) ಪು.೮-೧೩.

೧೬. ಹನುಮಂತಯ್ಯ, ವಿ.ಆರ್., **ಭಾರತ ದೇಶದ ಕುರುಬರ ಚರಿತ್ರೆ** (ಬೆಂಗಳೂರು: ವಿ.ಎಸ್.ಕೆ. ಪ್ರಿಂಟರ್ಸ್, ಅರಳಿ ಪೇಟೆ, ೧೯೫೮) ಪು.೨೫-೬

೧೭. ಹನುಮಂತರೆಡ್ಡಿ, ವೈ., **ಕುರುಗೋಡು ಕ್ಷೇತ್ರ ದರ್ಶನ** (ಕುರುಗೋಡು: ಜ್ಞಾನವಾಹಿನಿ ಪ್ರಕಾಶನ, ೧೯೮೫)

೧೮. -(ಲೇ)., ಕುರುಗೋಡು ಪಟ್ಟಣ ಪ್ರದೇಶದ ಸಾಂಸತಿಕ ಇತಿಹಾಸ, **ಶತಮಾನೋತ್ಸವ ಸ್ಮರಣ** (ಕುರುಗೋಡು: ಸರಕಾರಿ ಹಿರಿಯ. ಪ್ರಾಥಮಿಕ ಶಾಲೆ, ೧೯೮೫) ಪು.೩೩.

೧೯. ಹನುಮಂತರೆಡ್ಡಿ ವೈ.ಮಾರುತೀಶ. (ಸಂ) ಕುರುಗೋಡು ಶ್ರೀ ದೊಡ್ಡ ಬಸವೇಶ್ವರ ಸ್ವಾಮಿಯ ಸುಪ್ರಭಾತ, **ಸಾವಧಾನ. ಪುರ್ಟ** -೧೧, ದಿನಾಂಕ ೩೧.೩.೧೯೮೬

೧೯. Anantha Krishna Iyer, L.K. *The Mysore Tribes and Castes*(New Delhil : Mittal Publications, 1998), Vol. II, PP.34. Mysore *State Gazetter: Bellary District(*Bangalore: Govt. Press, 1972) P.696.

೨೦. Thurston, Edger., *Castes and Tribes of Southern India*(New Delhi: Asian Educational Services, 1987), Vol.IV, PP.264-5

ಆ. ವಕ್ತೃಗಳ ವಿವರ

೨೨. ಶ್ರೀಮತಿ ದೊಡ್ಡನಗೌಡ್ರ ಬಸಮ್ಮ ಗಂಡ ಮಲ್ಲನಗೌಡ(೮೦) ಲಾಳಗೊಂಡರು, ಗ್ರಾಮ ಸಿಂದಿಗೇರಿ, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ: ೨೩.೬.೨೦೦೦, ಕ್ಯಾಂಪ್ ಸಿಂದಿಗೇರಿ):, ಯಲ್ಲಪ್ಪ ಹೆಳವ(೬೦) ಹಿರಿನಂದಿ ಗ್ರಾಮ. ಗೋಕಾಕ ಗ್ರಾಮ. ಗೋಕಾಕ ತಾಲೂಕು. ಬೆಳಗಾವಿ ಜಿಲ್ಲೆ. (ಸಂದರ್ಶನ ದಿನಾಂಕ: ೧೮.೪.೨೦೦೧, ಕ್ಯಾಂಪ್ ಗದಗ); ಹನುಮಂತಪ್ಪ ಪೂಜಾರ (೭೦) ಗೊಲ್ಲರು, ನಾಟಕ ಮಾಸ್ತರ್, ಗ್ರಾಮ ಕದಡಿ, ತಾಲೂಕು ಗದಗ (ಸಂದರ್ಶನ ದಿನಾಂಕ :೨೦.೪.೨೦೦೧, ಕ್ಯಾಂಪ್: ಕದಡಿ).

೨೩. ಶಿವಣ್ಣ ದೇಸಾಯಿ (೪೮) ಕುಡುವೊಕ್ಕಲಿಗರು, ನಾಟಕ ಪಾತ್ರಸಾಲಿ ಗ್ರಾಮ ಕದಡಿ, ತಾಲೂಕು ಗದಗ (ಸಂದರ್ಶನ ದಿನಾಂಕ:೨೦.೪.೨೦೦೧, ಕ್ಯಾಂಪ್ ಕದಡಿ).

೨೪. ಪಿ.ಆರ್. ಗೋಜನೂರು (೫೫) ಕುಡುವೊಕ್ಕಲಿಗರು, ಗ್ರಾಮ ಕದಡಿ, ತಾಲೂಕು ಗದಗ (ಸಂದರ್ಶನ ದಿನಾಂಕ: ೨೦.೪.೨೦೦೧, ಕ್ಯಾಂಪ್: ಕದಡಿ) ಎಚ್.ಪಂಪನಗೌಡ (೭೧) ಲಾಳಗೊಂಡರು, ಗ್ರಾಮ ಗೆಣಿಕೆಹಾಳು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ :೧೫.೬.೨೦೦೧, ಕ್ಯಾಂಪ್: ಗೆಣಿಕೆಹಾಳು).

೨೫. ರೆಡ್ಡಿ ವಿರೂಪಾಕ್ಷಗೌಡ ಪರನಗೌಡ (೫೦) ಲಾಳಗೊಂಡರು, ಗ್ರಾಮ ಗೆಣಿಕೆಹಾಳು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ:೧೫.೬. ೨೦೦೧, ಕ್ಯಾಂಪ್: ಗೆಣಿಕೆಹಾಳು).

೨೬. ವೆಂಕಟೇಶಾಚಾರ್ ಜೋಶಿ (೫೦) ಬ್ರಾಹ್ಮಣ, ಬ್ಯಾಂಕ ಉದ್ಯೋಗಿ, ಗ್ರಾಮ ಕುರುಗೋಡು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ :೨೮.೩.೨೦೦೨, ಕ್ಯಾಂಪ್: ಕುರುಗೋಡು); ಕೆ.ಎಂ. ಉಮಾಪತಿಗೌಡ (೪೮) ಲಾಳಗೊಂಡರು, ಗ್ರಾಮ ಕುರುಗೋಡು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ : ೧೫.೬.೨೦೦೧, ಕ್ಯಾಂಪ್: ಕುರುಗೋಡು).

೨೭. ಕಲ್ಲುಗ್ಗಡೆಪ್ಪ ತಂದೆ ದೇವರಪ್ಪ (೮೦) ಕುರುಬರು, ಗ್ರಾಮ ಕುರುಗೋಡು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ : ೧೫.೬.೨೦೦೧,ಕ್ಯಾಂಪ್: ಕುರುಗೋಡು).

೨೮. ಮಲ್ಲೇಶಪ್ಪ ತಂದೆ ಸಣ್ಣಪ್ಪ ಶಾನಾಳ (೫೮) ಕುರುಬರು, ಗ್ರಾಮ ಕುರುಗೋಡು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ :೧೫.೬.೨೦೦೧, ಕ್ಯಾಂಪ್ ಕುರುಗೋಡು)

೨೯. ದೊಡ್ಡ ಬಸಪ್ಪ ತಂದೆ ಗುಡ್ಡಪ್ಪ (೭೦) ಕುರುಬರು, ಗ್ರಾಮ ಕುರುಗೋಡು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ :೧೫,೬.೨೦೦೧, ಕ್ಯಾಂಪ್: ಕುರುಗೋಡು).

೩೦. ಶ್ರೀಮತಿ ಪಾರ್ವತಮ್ಮ ಗಂಡ ರುದ್ರಪ್ಪ ಉದ್ದಾರು (೭೦) ಹಂಡೆ ಕುರುಬರು, ಗ್ರಾಮ ಕುರುಗೋಡು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ : ೧೪.೬.೨೦೦೧, ಕ್ಯಾಂಪ್: ಕುರುಗೋಡು).

೩೧. ಶ್ರೀಮತಿ ಬಸಮ್ಮ ಗಂಡ ಮರೇಗೌಡ ಸರನಾಡಗೌಡರು(೬೦) ಲಾಳಗೊಂಡರು, ಗ್ರಾಮ ಕುರುಗೋಡು, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ :೧೪.೬.೨೦೦೧, ಕ್ಯಾಂಪ್ ಕುರುಗೋಡು).

೩೨. ಡಾ.ಎಸ್.ಸಿ.ಪಾಟೀಲ(೪೫) ಪ್ರವಾಚಕರು, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ೫೮೩ ೨೭೬ (ಸಂದರ್ಶನ ದಿನಾಂಕ:೨.೭.೨೦೦೧, ಕ್ಯಾಂಪ್: ವಿದ್ಯಾರಣ್ಯ).

೩೩. ಫಕೀರಪ್ಪ ಇಮ್ಮಡಿ (೫೫) ಹೆಳವರು, ಗ್ರಾಮ ನಾಗಶೆಟ್ಟಿ ಕೊಪ್ಪ, ಹಳಿಯಾಳ ತಾಲೂಕು, ಉತ್ತರ ಕನ್ನಡ ಜಿಲ್ಲೆ (ಸಂದರ್ಶನ ದಿನಾಂಕ : ೨೩.೭.೨೦೦೧, ಕ್ಯಾಂಪ್: ವಿದ್ಯಾರಣ್ಯ).

೩೪. ಶ್ರೀಮತಿ ಲಕ್ಷ್ಮಮ್ಮ ಗಂಡ ತಿಪ್ಪಣ್ಣ ಚಲುವಾದಿ (೬೫) ಮುಖ್ಯ ಗಾಯಕಿ, ಗ್ರಾಮ ಸಿಂಧಿಗೇರಿ, ತಾಲೂಕು ಬಳ್ಳಾರಿ. (ಸಂದರ್ಶನ ದಿನಾಂಕ: ೧೩.೬. ೨೦೦೧, ಕ್ಯಾಂಪ್: ಸಿಂಧಿಗೇರಿ).

೩೫. ದನಕಾಯೋ ಗಂಗಪ್ಪ ತಂದೆ ರಾಮಪ್ಪ (೯೦) ವಾಲ್ಮೀಕಿ, ಗ್ರಾಮ ಹಂಪಿ, ತಾಲೂಕು ಹೊಸಪೇಟೆ, ಜಿಲ್ಲೆ ಬಳ್ಳಾರಿ (ಸಂದರ್ಶನ ದಿನಾಂಕ:೧೮.೫.೨೦೦೨, ಕ್ಯಾಂಪ್: ಹಂಪಿ).

೩೬. ಶ್ರೀಮತಿ ರತ್ನಮ್ಮ ಗಂಡ ಬಸಯ್ಯ (೪೦) ಐನೋರು, (ನೀಲಮ್ಮನ ಮಠದ ಪೂಜಾರಿಗಳು) ಗ್ರಾಮ ಮುದ್ಧಾಪುರ ೧೦, ತಾಲಾಕು ಹೊಸಪೇಟೆ, ಜಿಲ್ಲೆ ಬಳ್ಳಾರಿ ಶ್ರೀಮತಿ ರುದ್ರಮ್ಮ ಹಳೆಗೌಡರು (೯೦) ಬಣಜಿಗರು, ಗ್ರಾಮ ಮುದ್ದಾಪುರ ೧೦, ತಾಲೂಕು ಹೊಸಪೇಟ, (ಸಂದರ್ಶನ ದಿನಾಂಕ :೧೯.೫.೨೦೦೨, ಕ್ಯಾಂಪ್: ಮುದ್ದಾಪುರ ೧೦).

೩೭. ಶ್ರೀ ಸಿದ್ಧಯ್ಯ ಆಧುನಿಕ ಒಡೆಯರ (೬೪) ಗೊಂಡರ ಒಡೆಯರು, ತೋಪ ಗಲ್ಲಿ, ಹಮನಾಬಾದ, ಬೀದರ ಜಿಲ್ಲೆ (ಸಂದರ್ಶನ ದಿನಾಂಕ : ೨೦.೫.೨೦೦೨, ಕ್ಯಾಂಪ್: ಹಮನಾಬಾದ).

★ ★ ★ ★



ಜಾನಪದ ಜುಂಜಪ್ಪನ ಮೆರವಣಿಗೆಯ ಸಡಗರ
ಛತ್ರಿ ಚಾಮರ ಪೆಟ್ಟಿಗೆಯು ತುಂಬಿದ ಒಡವೆ ಸುಗ್ಗಿಯಾಗರ
ಜನಪದದೆದೆಯ ತುಂಬು ಭಾವದ ಲವಲವಿಕೆಯ ಸಾರ
ಮಳೆಯ ಗೊಡವೆಗೆ ದೇವಗುಂಡಿಯ ಮೀಯಲು
ಸಾಗುವ ಜುಂಜಪ್ಪ, ತಾಮಿಂದು ಜಗವ ಮೀಯಿಸಲು
ಮಳೆಗಾಗಿ ಬಯಕೆಯಾ ನವಿಲುಗರಿಗಳಲ್ಲಿ ಬೀಸುವ ನನಸುಗಳ ಸಾರ
ಜನಪದಕ್ಕೊಂದು ಉಡುಗೊರೆಯು ಸಾಕಾರ

ಡಾ|| ಎ.ಕೆ. ಶಾಸ್ತ್ರಿ*

ಶ್ರೀರಾಮಚಂದ್ರಾಪುರ ಮಠಕ್ಕೆ ಸಂಬಂಧಿಸಿದ ಗೋಕರ್ಣದ ದಾಖಲೆಗಳು

ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಲ್ಲಿರುವ ಶ್ರೀರಾಮಚಂದ್ರಾಪುರ ಮಠದ ಚರಿತ್ರೆ ಆದಿ ಶಂಕರಾಚಾರ್ಯರಷ್ಟೇ ಪುರಾತನವಾದುದು.[೧] ಆದಿ ಶಂಕರಾಚಾರ್ಯ, ಅವರ ಶಿಷ್ಯ ಶ್ರೀ ಸುರೇಶ್ವರಾಚಾರ್ಯ ಮತ್ತು ಶ್ರೀ ಸುರೇಶ್ವರರ ಶಿಷ್ಯರಾದ ಶ್ರೀ ವಿದ್ಯಾನಂದಾಚಾರ್ಯರಿಂದ ಗೋಕರ್ಣದಲ್ಲಿ ಪ್ರಾರಂಭವಾದ ಗುರುಪರಂಪರೆ, ಇಂದು ಪೀಠದಲ್ಲಿ ವಿರಾಜಿಸಿರುವ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳವರೆಗೆ ಅವಿಚ್ಛಿನ್ನವಾಗಿ ಸಾಗಿಬಂದಿದೆ. ರಘುಕುಲದ ಶ್ರೀರಾಮ ದೇವರನ್ನೇ ಶ್ರೀಮಠದಲ್ಲಿ ಪ್ರಧಾನವಾಗಿ, ಪೂಜಿಸುವುದರಿಂದ, ಶ್ರೀ ವಿದ್ಯಾನಂದರಿಂದ ಗೋಕರ್ಣದಲ್ಲಿ ಸ್ಥಾಪಿತವಾದ ಮಠ, **'ರಘೂತ್ತಮ ಮಠ'** ಎಂದೇ ಪ್ರಸಿದ್ಧಿಗೆ ಬಂದಿತು. ಗೋಕರ್ಣದ **ರಘೂತ್ತಮ ಪೀಠ**ವನ್ನು ೧೫ನೇ ಶತಮಾನದಲ್ಲಿ ಅಲಂಕರಿಸಿದ ಶ್ರೀರಾಘವೇಶ್ವರ ಭಾರತಿಗಳ ರಘೂತ್ತಮ ಮಠದ ಕೊನೆಯ ಸ್ವಾಮಿಗಳು ಶ್ರೀ ರಾಘವೇಶ್ವರ ಭಾರತಿಗಳ ಶಿಷ್ಯರಾದ ರಾಮಚಂದ್ರ ಭಾರತೀ ಮತ್ತು ರಘೋತ್ತಮ ಭಾರತಿಗಳು, ಸು. ಕ್ರಿ.ಶ. ೧೫೦೦ರ ಅವಧಿಯಲ್ಲಿ, ಕ್ರಮವಾಗಿ, ರಾಮಚಂದ್ರಾಪುರ ಮಠ ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಕ್ಕಾರನಲ್ಲಿ ಮಠ ಸ್ಥಾಪಿಸಿದರೆಂದು ತಿಳಿದು ಬರುತ್ತದೆ. ಈ ರೀತಿಯಾಗಿ ರಾಮಚಂದ್ರ ಭಾರತಿಗಳಿಂದ ರಾಮಚಂದ್ರಾಪುರದ ಗುರುಪರಂಪರೆ ಪ್ರಾರಂಭವಾಯಿತು. ಮುಂದೆ ೧೯ನೇ ಶತಮಾನದ ಆದಿಯಲ್ಲಿ ಹೊನ್ನಾವರ ತಾಲೂಕಿನಲ್ಲಿಯ ಕೆಕ್ಕಾರ ಮಠ ರಾಮಚಂದ್ರಾಪುರ ಮಠದಲ್ಲಿ ವಿಲೀನಗೊಂಡಿತು. ವಿಜಯನಗರದ ಸಮ್ರಾಟರು, ಕೆಳದಿ ನಾಯಕರು, ಅನೇಕ ಸಂಸ್ಥಾನಿಕರು ಮತ್ತು ಬ್ರಿಟಿಷರು ಶ್ರೀಮಠವನ್ನು ಪೋಷಿಸಿ, ಗುರುಗಳಿಗೆ ಸಕಲ ಮರ್ಯಾದೆಗಳನ್ನು ನೀಡಿ ಗೌರವಿಸಿದ್ದರಿಂದ, ಶ್ರೀರಾಮಚಂದ್ರಾಪುರ ಮಠ ಸಾಕಷ್ಟು ಪ್ರಸಿದ್ಧಿಗೆ ಬಂದಿತು. ಹವ್ಯಕ ಬ್ರಾಹ್ಮಣರೇ[೨] ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಮಠದ ಶಿಷ್ಯರಾಗಿದ್ದರೂ ಕೂಡ, ರಾಮಕ್ಷತ್ರಿಯರು, ಬೋವಿಗಳು, ಗೋಮಂತಕರು, ಕೋಡಿಗರು, ಹರಿಕಂತರು, ಅಂಬಿಗರು ಮತ್ತು ಅಮ್ಮಕೊಡವ ಸಮಾಜದವರೂ ಶ್ರೀಮಠದ ಶಿಷ್ಯರಾಗಿರುವದು ಗಮನಾರ್ಹವಾಗಿದೆ. ಶ್ರೀಮಠದ ಶಿಷ್ಯಪರಿವಾರ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು ಮತ್ತು ಕೇರಳಗಳಲ್ಲಿ ಹಿಂದಿನಿಂದಲೂ ನೆಲೆಸಿದೆ. ಪ್ರಸ್ತುತದಲ್ಲಂತೂ ಎಲ್ಲೆಡೆ ಪಸರಿಸಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಸ್ವರ್ಣವಲ್ಲೀ ಮಠವೂ ಹವ್ಯಕ ಬ್ರಾಹ್ಮಣರ ಇನ್ನೊಂದು ಪ್ರಮುಖ ಮಠ ಎಂಬುದನ್ನು ಪ್ರಸ್ತುತದಲ್ಲಿ ಸ್ಮರಿಸಿಕೊಳ್ಳಬಹುದು.[೩]

ಶ್ರೀರಾಮಚಂದ್ರಾಪುರ ಮಠದ ಚರಿತ್ರೆಯ ಮೇಲೆ ಬೆಳಕು ಬೀರುವ, ಗೋಕರ್ಣಕ್ಷೇತ್ರದಲ್ಲಿ ಲಭ್ಯವಾದ ಕೆಲವು ಆಯ್ದ ದಾಖಲೆಗಳಲ್ಲಿಯ ಮಹತ್ವದ ಅಂಶಗಳನ್ನು ಪ್ರಸ್ತುತದಲ್ಲಿ ಪರಿಚಯಿಸಲಾಗುವದು.[೪]

ಶಕವರ್ಷ ೧೩೨೧ನೆಯ ಶುಕ್ಲ ಸಂವತ್ಸರದ ಮಾಘ ಬ. ೩೦ ರಂದು ಋಷ್ಯಶೃಂಗಪುರದ ಭಾರತೀಕೃಷ್ಣತೀರ್ಥರ ಶಿಷ್ಯರಾದ ಶ್ರೀವಿದ್ಯಾರಣ್ಯರು ಗೋಕರ್ಣದ ರಘೂತ್ತಮ ಮಠದ ಸೀತಾರಾಮಚಂದ್ರ ಭಾರತಿಗಳ ಶಿಷ್ಯ ಚಿದ್ಬೋಧ ಭಾರತೀ ಸ್ವಾಮಿಗಳಿಗೆ ಕೊಟ್ಟ ವೈಭವ ತಾಮ್ರಶಾಸನ[೫], ಶಾಲಿವಾಹನ ಶಕವರ್ಷ ೧೩೮೬ನೇ ಸ್ವಭಾನು ಸಂವತ್ಸರದ ಭಾದ್ರಪದ ಕೃಷ್ಣ ೨, ಗುರುವಾರದಂದು ಗೋಕರ್ಣ ರಘೂತ್ತಮ ಮಠದ ರಾಘವೇಶ್ವರ ಭಾರತೀ ಶ್ರೀ ಪಾದಂಗಳಿಗೆ ವಿಜಯನಗರದ ಇಮ್ಮಡಿ ದೇವರಾಯ ಮಹಾರಾಯರು ಕೊಟ್ಟ ವೈಭವ ತಾಮ್ರಶಾಸನ[೬], ಮತ್ತು ರಾಮಚಂದ್ರಾಪುರ ಮಠದ ಸ್ವಾಮಿಗಳು ತಮ್ಮ ಶಿಷ್ಯ ವರ್ಗ ಇದ್ದಲ್ಲಿಗೆ ಪರಿವಾರ ಸಮೇತ ಸಂಚರಿಸುವಾಗ, ಅವರಿಗೆ ಅನುಕೂಲಗಳನ್ನು ಒದಗಿಸಿಕೊಟ್ಟು, ಅಟಕಾಯಿಸದೆ ಬಿಡಬೇಕಾಗಿ, ಸಂಬಂಧಿಸಿದ ಅಧಿಕಾರಿವರ್ಗದವರಿಗೆ, ೧೯ನೇ ಶತಮಾನದಲ್ಲಿ ಕೆನರಾದ ಕಲೆಕ್ಟರ್ ಅಲೆಕ್ಝಾಂಡರ್ ರೀಡ್, ಸಬ್‌ಕಲೆಕ್ಟರ್ ಜ್ಯೊಂಟ್ ಮೆಜಿಸ್ಟ್ರೇಟ್ ಹೀಲ್, ಕಲೆಕ್ಟರ ಮೆಜಿಸ್ಟ್ರೇಟ್ ಥಾಮಸ್ ಹ್ಯಾರಿಸ್, ಕಲೆಕ್ಟರ ಮೆಜಿಸ್ಟ್ರೇಟ್ ವೈವಸ್, ಅಡಿಶನಲ್ ಸಬ್ ಕಲೆಕ್ಟರ್ ಜ್ಯೊಂಟ್ ಮೆಜಿಸ್ಟ್ರೇಟ್ ವಾಶಿಂಗಟನ್, ಕಲೆಕ್ಟರ್ ಮೆಜಿಸ್ಟ್ರೇಟ್ ಮಾಲ್ಟಬಿ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಎ. ಅರ್ಥರ ಮೆಕ್‌ಡೊನಾಲ್ಡ್ ಅವರು, ರಹದಾರಿಗೆ ಸಂಬಂಧಿಸಿ ಹೊರಡಿಸಿದ ಆಜ್ಞಾಪತ್ರಗಳು[೭] ಗೋಕರ್ಣದಲ್ಲಿ ಲಭಿಸಿವೆ. ಇವುಗಳ ಹೊರತಾಗಿ, ರಥೋತ್ಸವದ ಸಂದರ್ಭದಲ್ಲಿ ತಾವು ರಥ ಹತ್ತಿ, ಮಹರಥಗಾಣಿಕೆ ಸಲ್ಲಿಸುವದಿಲ್ಲವೆಂದು, ಕೊಂಕಣಿಗರು ವ್ಯಯ ಸಂವತ್ಸರ (ಕ್ರಿ.ಶ ೧೭೬೭) ದಲ್ಲಿ ಶ್ರೀ ರಾಘವೇಶ್ವರ ಭಾರತಿಗಳಿಗೆ

* 'ಭವಾನಿ', ವಿ.ಎಸ್.ಎಸ್. ರೈಸ್‌ಮಿಲ್ ಹತ್ತಿರ, ಸಿರಸಿ- ೫೮೧೪೦೨.

ಬರೆಸಿಕೊಟ್ಟ ಬಿನ್ನವತ್ತಳೆ[೮], ಪಡಿಹಾರಕ್ಕಳ ಜಾತಿ ಜನರಿಂದ ವರ್ಷಕಾಣಿಕೆ ವಸೂಲಿ[೯], ಗೋಕರ್ಣದ ಮಹಾಬಲೇಶ್ವರ ಲಿಂಗಕ್ಕೆ ಅಷ್ಟಬಂಧ ಜೀರ್ಣೋದ್ಧಾರ ಮಹೋತ್ಸವ[೧೦], ಗೋಕರ್ಣದ ರಘೂತ್ತಮ ಮಠದ ಜೀರ್ಣೋದ್ಧಾರ[೧೧], ಶ್ರೀರಾಮಚಂದ್ರ ದೇವರ ಸನ್ನಿಧಿಯಲ್ಲಿ ನಡೆಯುವ ರಥೋತ್ಸವಕ್ಕಾಗಿ ರಥ ನಿರ್ಮಾಣ,[೧೨] ಗೋಕರ್ಣದಲ್ಲಿ ಅಗ್ನಿಷ್ಟೋಮ[೧೩], ಗೋಕರ್ಣದಲ್ಲಿ ದೀಕ್ಷಿತ ದಾಮೋದರ ಉಫಾಧ್ಯಾಯರು ನಡೆಸುವ ಸೋಮಯಾಗ[೧೪], ನವರಾತ್ರಿ, ದೀಪಾವಳಿ ಉತ್ಸವಗಳು[೧೫] ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ದಾಖಲೆಗಳೂ ಗೋಕರ್ಣದಲ್ಲಿ ಲಭ್ಯವಾಗಿವೆ.

ಪ್ರಸ್ತುತದಲ್ಲಿ, ದೃಷ್ಟಾಂತಕ್ಕಾಗಿ ಕೆಲವು ದಾಖಲೆಗಳ ಸಮಿಕ್ಷೆಯನ್ನು ಮಾಡಲಾಗಿದೆ. ಶ್ರೀಮನ್ಮಹಾರಾಜಾಧಿರಾಜ ವೀರಪರಮೇಶ್ವರ ವೀರಪ್ರತಾಪ ದೇವರಾಜು ಮಹಾರಾಜರು ಸ್ವಧರ್ಮದಲ್ಲಿ ಸಮಸ್ತ ದೇಶಗಳನ್ನು ಪ್ರತಿಪಾಲಿಸುತ್ತಿದ್ದ ಕಾಲದಲ್ಲಿ, ಋಷ್ಯಶೃಂಗ ಪುರಾಧಿವಾಸ ಭಾರತೀಕೃಷ್ಣತೀರ್ಥ ಗುರುಕರಕಮಲ ಸಂಜಾತರಾದ ವಿದ್ಯಾರಣ್ಯ ಶ್ರೀಪಾದಂಗಳು, ಶಕವರ್ಷ ೧೩೨೧ನೆಯ ಶುಕ್ಲ ಸಂವತ್ಸರದ ಮಾಘ ಬ. ೩೦ (ಕ್ರಿ.ಶ. ೧೩೯೯) ರಂದು, ಗೋಕರ್ಣದ ಶ್ರೀ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ, ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಶ್ರೀಮದ್ಭೋಗವರ್ಧನವಾಲ ಪುರುಷಾಧಿಷ್ಠಿತ, ಗೋಕರ್ಣದ ರಘೂತ್ತಮ ಮಠದ ಸೀತಾರಾಮಚಂದ್ರ ಭಾರತೀ ಶಿಷ್ಯ ಚಿದ್ಬೋಧ ಭಾರತೀ ಸ್ವಾಮಿಗಳಿಗೆ, ಉಭಯ ಸಂಪ್ರದಾಯವು ಏಕವಾದ್ದರಿಂದ, ಸಿಂಹಾಸನ, ಕಿರೀಟ, ಐಕ್ಯಗಾಂದೋಳಿಕ (ಅಡ್ಡಪಲ್ಲಕ್ಕಿ), ಶ್ವೇತಛತ್ರ, ಉಭಯ ಚಾಮರ, ಮಕರ ತೋರಣ, ವ್ಯಜನ (ಬೀಸಣಿಗೆ), ಹಗಲು ಜ್ಯೋತಿ, ಪೀತ ಪಿಶಂಗ ವರ್ಣ (ಹಳದಿ-ಕಂದು ಬಣ್ಣ) ಪತಾಕೆ, ತಾಳ, ಶಂಖ, ಚಕ್ರಾದಿ ವಾದ್ಯ, ಮೊದಲಾದವುಗಳನ್ನು ದಯಪಾಲಿಸಿ, ಇವೆಲ್ಲವುಗಳಿಂದ ಯುಕ್ತವಾಗಿ, ನಾಲ್ಕು ದೇಶಗಳನ್ನು ಸಂಚರಿಸಿ, ಪ್ರಕಾಶಿತರಾಗಿ, ಪೂರ್ವ ಮರ್ಯಾದೆಗೆ ಶ್ರೇಷ್ಠರಾಗಿ, ಹೈವ ದೇಶಸ್ಥಿತ, ಹೈವ ದ್ರಾವಿಡ ಸಂಜ್ಞಿತ (ಸಂಜ್ಞೆ=ನಾಮಧೇಯ), ಬ್ರಾಹ್ಮಣ್ಯ ಧರ್ಮಾಚಾರವಿಚಾರ ತತ್ಪುರಸ್ಸರ (ಪರಸ್ಪರ=ಮುನ್ನಡೆ), ಪ್ರಾಯಶ್ಚಿತ್ತ, ಅಗ್ರ ತೇಜುಪೂಜೆ (ಪ್ರಧಾನ ಮತ್ತು ಗೌರವಯುತ ಪೂಜೆ) ಸ್ಥಾನಮಾನ್ಯ, ಗೋಕರ್ಣ ಮಂಡಲಾಚಾರ್ಯತ್ವ ಮೊದವಾದ್ದನ್ನು ಪ್ರಕಾಶಿಸಿಕೊಂಡು, ಆಚಂದ್ರಾರ್ಕ ಸ್ಥಾಯಿಗಳಾಗಿ ಬನ್ನಿರಿ ಎಂದು ತಾಮ್ರಶಾಸನವನ್ನು ಬರೆಸಿಕೊಟ್ಟರು.[೧೬]

ಶಾಲಿವಾಹನ ಶಕವರ್ಷ ೧೩೮೬ನೇ ಸ್ವಭಾನು ಸಂವತ್ಸರದ ಭಾದ್ರಪದ ಕೃಷ್ಣ ೨ ಗುರುವಾರದಂದು, ಇಮ್ಮಡಿ ದೇವರಾಯ ಮಹಾರಾಯರು ಶ್ರೀ ಚಿದ್ಬೋಧ ಭಾರತೀ ಶ್ರೀಪಾದಂಗಳ ಗುರುಕರಕಮಲ ಸಂಜಾತ ಶ್ರೀ ಗೋಕರ್ಣ ರಘೂತ್ತಮ ಮಠದ ರಾಘವೇಶ್ವರ ಭಾರತೀ ಶ್ರೀಪಾದಂಗಳಿಗೆ, ಶ್ರೀವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಪಂಚದೀವಟಿಕಾದ್ವಯ ಆಂದೋಲಿ ಕೋಪರೀ ಪಂಚಕಲಶ, ಮೊದಲಾದ್ದನ್ನು ಅಧಿಕರಿಸಿ ಕೊಟ್ಟರೆಂದು ಇನ್ನೊಂದು ತಾಮ್ರಶಾಸನವು ತಿಳಿಸುತ್ತದೆ.[೧೭]

ಬ್ರಿಟಿಷ್‌ರ ಕಾಲದ ರಹದಾರಿಗೆ ಸಂಬಂಧಿಸಿದ ಅನೇಕ ಕಾಗದ ಪತ್ರಗಳು ಗೋಕರ್ಣದಲ್ಲಿ ಲಭ್ಯವಾಗಿವೆ. ರಾಮಚಂದ್ರಾಪುರ ಮಠದ ಶ್ರೀರಾಘವೇಂದ್ರ ಭಾರತೀ ಸ್ವಾಮಿಯವರು ಬ್ರಾಹ್ಮಣ ಜನ ೧೦೦, ಶೂದ್ರ ಜನ ೫೦, ಊಳಿಗದವರು ೧೨ ಬಂದೂಕು ೩, ಕತ್ತಿ ೩ ಪಾಲಕಿ ೧, ಆನೆ ೨, ಒಂಟೆ ೨, ಕುದುರೆ ೧೦ ಮತ್ತು ಬಿರದು ಬಾವಲಿಗಳೊಂದಿಗೆ ಗೋಕರ್ಣ, ಮಿಡಜಾನ (ಮಿರ್ಜಾನ), ಗೇರಸಪ್ಪೆ ಚಂದಾವರ, ಸೋಂದೆ, ಬಿಳಗಿ, ಬಾರಕೂರು, ಮಲಯಾಳ ಮುಂತಾದ ತಮ್ಮ ಶಿಷ್ಯವರ್ಗ ಇದ್ದಲ್ಲಿಗೆ ಸಂಚಾರ ಮಾಡುವಲ್ಲಿ, ನಿಮ್ಮ ನಿಮ್ಮ ಸರಹದ್ದು ಮಾರ್ಗವಾಗಿ ಬಂದು ಯೋಗ್ಯ ಕ್ರಮಕೂಲಿ ಕೊಟ್ಟಲ್ಲಿ, ಜೀನಸು, ಮಜೂರಿ ಆಳಿಗೆ ಕುಮಕು (ಸಹಾಯ) ಮಾಡಿ, ಅಟಕಾಯಿಸದೆ ಬಿಡುವಂತೆ, ತಹಸೀಲದಾರ, ಪೇಷಾಕಾರ, ಶಿರಸ್ತೆದಾರ, ಮಣಿಗಾರ, ಶ್ಯಾನಭೋಗ, ಪಟೇಲ, ಉಗ್ರಾಣಿ, ಪೋಲಿಸ್ ರಫೆದಾರ, ಪ್ಯಾದೆ ಮುಂತಾದವರಿಗೆ, ತಾರೀಕು ೧ ನೇ ಮಾಹೆ ಫೆಬ್ರವರಿ ೧೨೨೮ನೇ ಫಸಲಿ (ಕ್ರಿ.ಶ. ೧೮೧೯) ಬಹುಧಾನ್ಯ ಸಂವತ್ಸರದ ಮಾಘ ಶು ೭, ಸೋಮವಾರದಂದು, ಕನಡಾ ಜಿಲ್ಲಾ ಕಲೆಕ್ಟರ್, ಮ್ಯಾಜಿಸ್ಟ್ರೇಟ್, ಆನರೆಬಲ್ ಥಾಮಸ್ ಹ್ಯಾರಿಸ್ ಅವರು ತಮ್ಮ ವಿಠ್ಠಲ ಮೊಕ್ಕಾಮಿನಿಂದ ರಹದಾರಿಗೆ ಸಂಬಂಧಿಸಿದ ಆಜ್ಞೆ ಹೊರಡಿಸಿದರು.[೧೮] ಪೂರ್ವದಿಂದಲೂ ನಡೆದು ಬಂದ ಪದ್ಧತಿಯನ್ನು ಬ್ರಿಟಿಷ್ ಅಧಿಕಾರಿಗಳು ಗೌರವಿಸಿದರೆಂದು ರಹದಾರಿಗೆ ಸಂಬಂಧಿಸಿದ ಅನೇಕ ಆಜ್ಞಾ ಪತ್ರಗಳು ಖಚಿತಪಡಿಸುತ್ತವೆ.

ಗೋಕರ್ಣದ ಶ್ರೀ ಮಹಾಬಲೇಶ್ವರ ಲಿಂಗಕ್ಕೆ ಅಷ್ಟಬಂಧ ಜೀರ್ಣೋದ್ಧಾರ ಮಹೋತ್ಸವ ಕಾರ್ಯವು ಜಯಸಂವತ್ಸರದ ಚೈತ್ರ ಬಹುಳ ೧೩ಯಿಂದ ವೈಶಾಖ ಶುದ್ಧ ೧೦ ವರೆಗೆ ನಡೆಯುವದರಿಂದ, ಆ ಮಹಾಕಾರ್ಯವು ಪ್ರಜೆಗಳಿಗೂ, ರಾಜರಿಗೂ ಕ್ಷೇಮಕರವಾದುದರಿಂದ, ಸರ್ವರೂ ತಮ್ಮ ತಮ್ಮ ಭಕ್ತಿ ಪುರಸ್ಸರವಾಗಿ, ಶಕ್ತ್ಯಾನುಸಾರ ದ್ರವ್ಯ ಸಹಾಯ ಮಾಡಿಕೊಟ್ಟು, ತಕ್ಕ ಪುಣ್ಯಗಳನ್ನು ಪಡೆದು, ಇಹಪರ ಸುಖಪ್ರಾಪ್ತಿಯಲ್ಲಿ ಹೆಚ್ಚಿನ ಮನಸ್ಸು ಕೊಡುವಂತೆ, ಶ್ರೀರಾಮಚಂದ್ರಾಪುರ ಮಠದ ಶ್ರೀರಾಘವೇಶ್ವರ ಭಾರತೀ ಸ್ವಾಮಿಗಳು, ಜಯಸಂವತ್ಸರದ ಚೈತ್ರ ಶು. ೧೧, ಚಂದ್ರವಾರ, (ಸು. ಕ್ರಿ.ಶ. ೧೮೯೫) ಗೋಕರ್ಣದಲ್ಲಿಯ ರಘೂತ್ತಮ ಮಠದ ವಸತಿಯಿಂದ, ತಮ್ಮ ಅತ್ಯಂತ ಪ್ರಿಯ

ಶಿಷ್ಯರಾದ ಉತ್ತರ ಕನ್ನಡ ಜಿಲ್ಲಾ, ದಕ್ಷಿಣ ಕನ್ನಡ ಜಿಲ್ಲಾ, ಮಲಯಾಳ, ಮೈಸೂರ ಸೀಮೆ ಮುಂತಾದ ಸ್ಥಳ ನಿವಾಸಿಗಳಾದ ಹವ್ಯಕ ದ್ರಾವಿಡ ಬ್ರಾಹ್ಮಣ ವೈದಿಕ ಗ್ರಹಸ್ಥರಿಗೆ ಶ್ರೀ ನಾರಾಯಣ ಸ್ಮರಣ ಪೂರ್ವಕವಾಗಿ ಆಶೀರ್ವದಿಸಿ ಕಳುಹಿಸಿದ ಆಜ್ಞಾಪತ್ರವು ಗೋಕರ್ಣದಲ್ಲಿ ಲಭಿಸಿದೆ.[೧೯] ಆಜ್ಞಾಪತ್ರವು ಗುರುಗಳ ಬಿರುದಾವಳಿಗಳೊಂದಿಗೆ ಪ್ರಾರಂಭವಾಗುತ್ತದೆ. "ಶ್ರೀಮತ್ಪರ ಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನ ನಿಷ್ಠ ಷಡ್ದರ್ಶನ ಸ್ಥಾಪನಾಚಾರ್ಯ ತಪಶ್ಚಕ್ರವರ್ತ್ಯನಾದ್ಯ ವಿಚ್ಛಿನ್ನ ಗುರುಪರಂಪರಾ ಪ್ರಾಪ್ತ ಸಕಲ ನಿಗಮಾಗಮ ಸಾರಹೃದಯ ಸಾಂಖ್ಯ ತ್ರಯ ಪ್ರತಿಪಾದಕ ವೈದೀಕ ಮಾರ್ಗ ಪ್ರವರ್ತಕ ಸರ್ವ ತಂತ್ರ ಸ್ವತಂತ್ರಾದಿ ರಾಜಧಾನಿ ವಿದ್ಯಾನಗರ ಮಹಾರಾಜಧಾನಿ ವೈಭವ ಸಿಂಹಾಸನಾಧೀಶ್ವರ ವ್ಯಾಖ್ಯಾನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜಗುರು ಗೋಕರ್ನ ಮಂಡಲಾಚಾರ್ಯ ಶ್ರೀಮಚ್ಛತಃಶೃಂಗಪುರವರಾಧೀಶ್ವರ ಶ್ರೀಮಚ್ಛರಾವತೀತೀರವಾಸ ಶ್ರೀಮದ್ರಾಮಚಂದ್ರಾಪುರ ಮಠಸ್ಥ ಶ್ರೀಮದ್ರಾಮಚಂದ್ರಪಾದ ಪದ್ಮಾರಾಧಕ ಶ್ರೀ ಮದ್ರಾಘವೇಂದ್ರ ಭಾರತೀ ಶ್ರೀಗುರುಕರಕಮಲ ಸಂಜಾತ ಶ್ರೀ ಮದ್ರಾಘವೇಶ್ವರ ಭಾರತೀ ಶ್ರೀ ಸ್ವಾಮಿಭಿಃ",[೨೦] ಎಂಬ ಬಿರುದಾವಳಿಗಳೊಂದಿಗೆ ಪ್ರಾರಂಭವಾದ ಆಜ್ಞಾಪತ್ರ, "ಈ ಭೂಮಂಡಲದಲ್ಲಿ ಪ್ರಸಿದ್ಧವಾದ ಶ್ರೀಗೋಕರ್ನ ಮಹಾಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ಪರಮೇಶ್ವರನು ತನ್ನ ಆತ್ಮಲಿಂಗ ರೂಪವಾದ ಶ್ರೀ ಮಹಾಬಲೇಶ್ವರ ಲಿಂಗದಲ್ಲಿ ನಿರಂತರ ಸನ್ನಿಹಿತನಾಗಿದ್ದಾನೆಂಬ ಇತ್ಯಾದಿ ವಚನಗಳೆಲ್ಲಾ ಪುರಾಣೋಕ್ತ ವಾಗಿರುವದು ಎಂಬುದು ಸರ್ವರ ತಿಳವಳಿಕೆಗೆ ಬಂದಿರುವ ಮಾತೆ ಸರಿ...", ಎಂಬ ಪೀಠಿಕೆಯನ್ನೂ ಹೊಂದಿದೆ. ಜೀರ್ಣೋದ್ಧಾರ ಮಹೋತ್ಸವಕ್ಕಾಗಿ ದ್ರವ್ಯ ಸಹಾಯ ಮಾಡಿ, ಶ್ರೇಯೋಭಿವೃದ್ಧಿ ಪಡೆಯುವಂತೆ ಶ್ರೀಗಳು ತಮ್ಮ ಶಿಷ್ಯರಿಗೆ ಅಪ್ಪಣೆ ವಿಧಿಸಿದರು.

ಶ್ರೀರಾಮಚಂದ್ರ ಭಾರತೀ ಗುರಕರಕಮಲ ಸಂಜಾತ ಶ್ರೀರಾಘವೇಂದ್ರ ಭಾರತೀ ಸ್ವಾಮಿಗಳು, ಗೋಕರ್ಣ ಕ್ಷೇತ್ರದ ರಘೂತ್ತಮ ಮಠದ ಜೀರ್ಣೋದ್ಧಾರ ಕೆಲಸದಲ್ಲಿ ಸಹಕರಿಸುವಂತೆ, ಹೇಮಳಂಬಿ ಸಂವತ್ಸರದ ಜ್ಯೇಷ್ಠ ಶು. ೧೫ (ಸು. ಕ್ರಿ.ಶ. ೧೮೯೮) ಯಂದು, ಗೋಕರ್ಣ ಕ್ಷೇತ್ರಸ್ಥ ಹಿರೆಭಟ್ಟ ಅಡಿ ಬಿಜ್ಜೂರು ಪಾಳ್ಯ ಮುಂತಾದ ಮಹಾಜನಂಗಳಿಗೆ ಬರೆದ ಆಶೀರ್ವಾದ ಪತ್ರ, ಶ್ರೀರಾಮಚಂದ್ರ ದೇವರ ಸನ್ನಿಧಿಯಲ್ಲಿ ರಥೋತ್ಸವದ ಬಗ್ಗೆ ರಥ ನಿರ್ಮಾಣ ಕಾರ್ಯಕ್ಕಾಗಿ ದ್ರವ್ಯಾನುಕೂಲ ಮಾಡಿಕೊಡುವಂತೆ ಪ್ಲವ ಸಂವತ್ಸರದ ಚೈತ್ರ ಬ. ೭, ಮಂಗಳವಾರದಂದು (ಸು. ಕ್ರಿ.ಶ. ೧೯೦೨) ಶ್ರೀ ರಾಘವೇಶ್ವರ ಭಾರತೀ ಗುರುಕರಕಮಲ ಸಂಜಾತ ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳು ಹಿರೇಭಟ್ಟ ಅಡಿ ಬಿಜ್ಜೂರು ಪಾಳ್ಯ ಮುಂತಾದ ವಿದ್ವನ್ಮಹಾಜನಂಗಳಿಗೆ ಬರೆದ ಆಶೀರ್ವಾದ ಪತ್ರ[೨೨], ಹಾಗೂ ಈ ಹಿಂದೆ ನಮೂದಿಸಲಾದ ಇನ್ನೂ ಅನೇಕ ವಿಷಯಗಳನ್ನು ಕುರಿತು ಗೋಕರ್ಣದಲ್ಲಿ ದೊರೆತ ದಾಖಲೆಗಳು ವಿವೇಚಿಸುತ್ತವೆ.

ಒಟ್ಟಿನಲ್ಲಿ, ಶ್ರೀರಾಮಚಂದ್ರಾಪುರ ಮಠಕ್ಕೆ ಸಂಬಂಧಿಸಿದ ಗೋಕರ್ಣದಲ್ಲಿಯ ಚಾರಿತ್ರಿಕ ದಾಖಲೆಗಳು, ಗೋಕರ್ಣದೊಂದಿಗೆ ರಾಮಚಂದ್ರಾಪುರ ಮಠದ ಸಂಬಂಧವನ್ನು ತಿಳಿಸುವುದರ ಜೊತೆಗೆ, ಕಳೆದ ಆರು ಶತಮಾನಗಳ ಶ್ರೀಮಠದ ಚರಿತ್ರೆ ಮತ್ತು ಕರ್ನಾಟಕದಲ್ಲಿಯ ಒಂದು ಬಹು ವಿಸ್ತಾರವಾದ ಮತ್ತು ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಸುಂದರ ವಾಗಿರುವ ಪ್ರದೇಶದ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳನ್ನೂ ಬೆಳಕಿಗೆ ತರುತ್ತವೆ. ಆದರೂ, ಶ್ರೀಮಠದ ವ್ಯವಸ್ಥಿತವಾದ ಗುರುಪರಂಪರೆ, ಎಲ್ಲ ಗುರುಗಳ ಕಾಲ, ಗುರುಗಳಿಗೆ ಮತ್ತು ಮಠಕ್ಕೆ ಪ್ರಾಪ್ತವಾದ ಬಿರುದಾವಳಿಗಳು, ಲಾಂಛನಗಳು, ಮರ್ಯಾದೆಗಳು, ಮಠದ ಆಡಳಿತ, ಗುರು-ಶಿಷ್ಯರ ಸಂಬಂಧ, ಗುರುಗಳ ಸಾಧನೆಗಳು, ಮಠದಲ್ಲಿಯ ಕೆಲವು ಮಹತ್ವದ ಚಾರಿತ್ರಿಕ ಘಟನೆಗಳು, ಶ್ರೀಮಠದೊಂದಿಗೆ ಅರಸರು ಮತ್ತು ಅಧಿಕಾರಿ ವರ್ಗದವರು ಇರಿಸಿಕೊಂಡ ಸಂಬಂಧ, ಇತ್ಯಾದಿ ವಿಷಯಗಳು ಇನ್ನೂ ಸ್ಫುಟವಾಗಿ ಬೆಳಕಿಗೆ ಬರಬೇಕಾಗಿವೆ. ಈ ದಿಶೆಯಲ್ಲಿ, ಸಕಲ ರೀತಿಯ ಆಕಾರ ಸಾಮಗ್ರಿಗಳ ಸಂಗ್ರಹ, ಅವುಗಳ ರಕ್ಷಣೆ ಮತ್ತು ವಸ್ತುನಿಷ್ಠವಾದ ಅಧ್ಯಯನ ತ್ವರಿತವಾಗಿ ಆಗಬೇಕಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಶ್ರೀರಾಮಚಂದ್ರಾಪುರ ಮಠದ ಚರಿತ್ರೆಗೆ ಸಂಬಂಧಿಸಿ ಈ ಕೆಳಗಿನ ಪುಸ್ತಕಗಳನ್ನು ಗಮನಿಸಿ:
೧. ಗ.ಸು. ಪಾಟೀಲ, '**ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಸಂಕ್ಷಿಪ್ತ ಇತಿಹಾಸ**', ತೀರ್ಥಹಳ್ಳಿ, ೧೯೫೮.
೨. ದತ್ತಾತ್ರೇಯ ಎಂ. ಆರ್., '**ಹವ್ಯಕ ಗುರುಪೀಠಮ್**' ತುಮರಿ (ಸಾಗರ), ೧೯೯೩
೩. ಭಟ್ಟ ಭಾಸ್ಕರ ಕೆ. ಎಸ್., '**ಶ್ರೀಗುರುಕೃಪಾ ತರಂಗಿಣಿ**', ತೀರ್ಥಹಳ್ಳಿ, ೧೯೮೯
೪. 'ಎಪಿಗ್ರಾಫಿಯಾ ಕರ್ನಾಟಿಕಾ'., ಸಂ. VII, ಬೆಂಗಳೂರು, ೧೯೬೫
೫. ಟಿ. ಎಸ್. ಹಳೆಮನೆ., '**ಹಿಸ್ಟರಿ ಆ್ಯಂಡ್ ಆ್ಯಂಟಿಕ್ವಿಟಿಸ್ ಆಫ್ ರಾಮಚಂದ್ರಾಪುರ ಮಠ**' (ಅಪ್ರಕಟಿತ) ಕ. ವಿ., ಧಾರವಾಡ

೨. ಹವ್ಯಕರ ಮೂಲ ಕುರಿತು ಈ ಕೆಳಗಿನ ಗ್ರಂಥಗಳನ್ನು ಗಮನಿಸಿ:
೧. '**ಸ್ಕಂದ ಪುರಾಣ**' (ಸಹ್ಯಾದ್ರಿಕಾಂಡ)
೨. ಎಚ್. ಎಂ. ತಿಮ್ಮಪ್ಪ., ಕಲಸಿ, '**ಹವ್ಯಕರ ಇತಿಹಾಸ**', ೧೯೯೦

೩. ಡಾ|| ಎ.ಕೆ. ಶಾಸ್ತ್ರಿ., ೧೯೯೫, '**ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು**, ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು,
೨. ಡಾ|| ಎ. ಕೆ. ಶಾಸ್ತ್ರಿ, '**ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ**'.

೪. ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಾಲಯದ ಧರ್ಮದರ್ಶಿ ಮಂಡಳಿಯ ಅಧ್ಯಕ್ಷರಾದ ವಿದ್ವಾನ್ ವಿಘ್ನೇಶ್ವರ ದಾಮೋದರ ದೀಕ್ಷಿತರು ಸಂಗ್ರಹಿಸಿದ ದಾಖಲೆಗಳಿಂದ ಆಯ್ದ ದಾಖಲೆಗಳನ್ನು ಪ್ರಸ್ತುತ ಲೇಖನದಲ್ಲಿ ಪರಿಚಯಿಸಲಾಗಿದೆ. ಕನ್ನಡದಲ್ಲಿರುವ ಈ ದಾಖಲೆಗಳು ಕಾಗದದ ಪುಟಗಳಲ್ಲಿ ಉಲ್ಲೇಖಗೊಂಡಿವೆ.

೫. ಕೆ. ವೆಂಕಟ್ರಮಣ ಶಾಸ್ತ್ರಿ ಸೂರಿ., '**ರಾಮಚಂದ್ರಾಪುರ ಮಠದ ತಾಮ್ರಶಾಸನ ಮತ್ತು ಸನದು ಸೂತ್ರಗಳ ಸಂಗ್ರಹ**', ಮುಂಬಯಿ, ೧೯೮೯

೬. ಅದೇ.

೭. ಅದೇ.

೮. ಡಾ|| ಎ. ಕೆ. ಶಾಸ್ತ್ರಿ, ಹಿ. ರೆ.ಕೆ.ಡಿ ೨೪೩ **(ದಿ ಹಿಸ್ಟಾರಿಕಲ್ ರಿಕಾರ್ಡ್ಸ್ ರಿಲೇಟಿಂಗ್ ಟು ದಿ ಕೆನರಾ ಡಿಸ್ಟ್ರಿಕ್ಟ್, ಅಪ್ರಕಟಿತ)**, ಯು.ಜಿ.ಸಿ., ದಿಲ್ಲಿ

೯. ಅದೇ, ೨೪೪

೧೦. ಅದೇ, ೨೪೫

೧೧. ಅದೇ, ೨೪೬

೧೨. ಅದೇ, ೨೪೭

೧೩. ಅದೇ, ೨೪೮

೧೪. ಅದೇ, ೨೪೯

೧೫. ಅದೇ, ೨೫೦

೧೬. ಪೂರ್ವೋಕ್ತ, 'ರಾಮಚಂದ್ರಾಪುರ ಮಠದ ತಾಮ್ರಶಾಸನ ಮತ್ತು ಸನದು ಸೂತ್ರಗಳ ಸಂಗ್ರಹ', ಪು. ೧;
ಶೃಂಗೇರಿ ಜಗದ್ಗುರು ಪೀಠದಲ್ಲಿ ವಿದ್ಯಾರಣ್ಯರು ೧೨ನೆಯವರು. ಶಾಸನದಲ್ಲಿ ನಮೂದಿಸಲಾದ, ಕಾಲಕ್ಕೆ ಸಂಬಂಧಿಸಿದ ಅಸಂಗತ ವಿಷಯವೆಂದರೆ, ಶಾಸನದಲ್ಲಿ ನಮೂದಿಸಿದಂತೆ, ಶಾ. ಶ ೧೩೨೧ (ಕ್ರಿ.ಶ. ೧೩೯೯)ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಇಮ್ಮಡಿ ಹರಿಹರನು (ಕ್ರಿ.ಶ. ೧೩೭೭-೧೪೦೪) ಆಳುತ್ತಿದ್ದನೇ ಹೊರತು, ಮೊದಲನೇ ದೇವರಾಯ (ಕ್ರಿ.ಶ. ೧೪೦೬-೧೪೨೨) ಅಲ್ಲ. ಅದರಂತೆ, ಇನ್ನೊಂದು ವಿವಾದಾಸ್ಪದ ಸಂಗತಿಯೆಂದರೆ, ವಿದ್ಯಾರಣ್ಯರು ಕ್ರಿ.ಶ. ೧೩೮೦-೮೬ರ ಅವಧಿಯಲ್ಲಿ ಶೃಂಗೇರಿ ಪೀಠವನ್ನು ಅಲಂಕರಿಸಿದ್ದರಿಂದ, ಶಾಸನದ ಕಾಲ ಕ್ರಿ.ಶ. ೧೩೯೯ ಹೇಗಿರಲು ಸಾಧ್ಯ? ಇವುಗಳ ಹೊರತಾಗಿ, ಇನ್ನೂ ಒಂದು ಅಸಂಗತ ಸಂಗತಿ ಎಂದರೆ, ಶಾಸನದಲ್ಲಿ ನಮೂದಿಸಿದಂತೆ ಶಕ ೧೩೨೧ ಶುಕ್ಲ ಸಂವತ್ಸರಕ್ಕೆ ಸರಿಹೊಂದುವುದಿಲ್ಲ. ಶಕ ೧೩೧೧ ಶುಕ್ಲ ಸಂವತ್ಸರಕ್ಕೆ ಹೊಂದುತ್ತದೆ. ಆದರೆ ಮಠದ ಪೂರ್ವ ಚರಿತ್ರೆಯನ್ನು ರಾಜ ಮಹಾರಾಜರಿಂದ ಪೂರ್ವದಿಂದಲೂ ಮನ್ನಣೆ ಪಡೆದಿದ್ದನ್ನೆಲ್ಲ ಅವಲೋಕಿಸಿದಾಗ ಮೂಲಶಾಸನದ ಪ್ರತಿಮಾಡಿದವರು ತಪ್ಪಾಗಿ ಉಲ್ಲೇಖಿಸಿರುವುದು ಸುಸ್ಪಷ್ಟ. ಶೃಂಗೇರಿ ಮಠದ ಕಡತವೊಂದರಲ್ಲಿ ದೊರೆಯುವ ಇದೇ ಶಾಸನದ ಪ್ರತಿ (ಕಡತ ೧೪೧, ದಾಖಲೆ ೧೭)ಯಲ್ಲಿ ಶಕವರ್ಷ ೧೩೧೧ ಶುಕ್ಲ ಸಂವತ್ಸರ ಎಂದು ಸ್ಪಷ್ಟವಾಗಿ ನಮೂದಿಸಲಾಗಿದ್ದು, ಗೋಕರ್ಣದಲ್ಲಿ ದೊರೆತ ಶಾಸನದ ಪ್ರತಿಯೂ ಅದೇ ಆಗಿದ್ದರಿಂದ, ಅಲ್ಲಿ ನಮೂದಿಸಿದ ಶಾ.ಶ ೧೩೨೧ ತಪ್ಪು ಎಂಬುದು ಖಚಿತವಾಗುತ್ತದೆ. ಶೃಂಗೇರಿ ಕಡತದಲ್ಲಿ ನಮೂದಿಸಿದಂತೆ, ವಿದ್ಯಾರಣ್ಯರು ಶಾ. ಶ. ೧೩೧೧ (ಕ್ರಿ.ಶ. ೧೩೮೯)ರ ವರೆಗೆ ಇದ್ದರೇ? ಎಂಬುದು ಇನ್ನೊಂದು ಪ್ರಶ್ನೆ.

೧೭ ಅದೇ, ಪು. ೨ ಮತ್ತು ; ಶಾಸನದಲ್ಲಿ ತಿಳಿಸಿದಂತೆ, ಶಾ. ಶ. ೧೩೮೬ರಲ್ಲಿ ಇಮ್ಮಡಿ ದೇವರಾಯನು ವಿಜಯನಗರದ ಸಮ್ರಾಟನಾಗಿರದೆ, ಮಲ್ಲಿಕಾರ್ಜುನನು ಸಮ್ರಾಟನಾಗಿದ್ದನು.

೧೮. ಅದೇ, ಪು. ೪ ಮತ್ತು ೫; ಇದೇ ಪುಸ್ತಕದಲ್ಲಿ ಪು. ೩-೧೬ರ ವರೆಗಿನ ದಾಖಲೆಗಳೆಲ್ಲವೂ ರಹದಾರಿಗೆ ಸಂಬಂಧಿಸಿದ ನಿರೂಪಗಳಾಗಿವೆ.
ಶೃಂಗೇರಿ, ಸ್ವರ್ಣವಲ್ಲಿ ಮುಂತಾದ ಮಠಗಳಲ್ಲಿಯ ಕಾಗದ ಪತ್ರ ಮತ್ತು ಕಡತಗಳಲ್ಲಿಯೂ ಆ ಮಠಗಳಿಗೆ ಸಂಬಂಧಿಸಿದ ರಹದಾರಿ ಪತ್ರಗಳು ಲಭಿಸಿವೆ.

೧೯. ಹಿ.ರೆ.ಕೆ.ಡಿ ೨೪೫

೨೦ ಬಿರುದಾವಳಿಗಳನ್ನು ಯಾವ ಯಾವ ಯತಿಗಳ ಕಾಲದಲ್ಲಿ ಯಾರಿಂದ ದಯಪಾಲಿಸಲಾಯಿತೆಂಬುದರ ಕುರಿತು ವಿಶೇಷ ಅಧ್ಯಯನ ಅಗತ್ಯ.

೨೧. ಹಿ.ರೆ.ಕೆ.ಡಿ, ೨೪೬

೨೨ ಅದೇ., ೨೪೭

ಕೆಳದಿ ಗುಂಡಾಜೋಯಿಸ್*

ಗೋಕರ್ಣ ಶ್ರೀರಾಮಚಂದ್ರಾಪುರ ಮಠದ ಪುರಾತತ್ವ ಸರ್ವೇಕ್ಷಣೆ

ಕ್ರಿ.ಪೂ. ೬ನೆಯ ಶತಮಾನದಲ್ಲಿ ಗೌತಮ ಬುದ್ಧನಿಂದ ಬೌದ್ಧ ಧರ್ಮವೂ ರೂಪುಗೊಂಡಿತು. ಬುದ್ಧನು ನಾಲ್ಕು ಆರ್ಯ ಸತ್ಯಗಳನ್ನು ಅಷ್ಟಾಂಗ ಮಾರ್ಗವನ್ನೂ ಕಾಶಿಯ ಮೃಗದಾವದಲ್ಲಿ ಬೋಧಿಸಿ, ಐವರು ಬ್ರಾಹ್ಮಣರನ್ನು ಬೌದ್ಧ ಭಿಕ್ಷುಗಳಾಗಿರಿಸಿದನು[೧]. ಶ. ೬೩೦ರಿಂದ ೬೪೪ರವರೆಗೆ ಭಾರತದಲ್ಲಿ ಸಂಚರಿಸಿದ ಹೂಯೆನ್‌ತ್ಸ್ಯಾಂಗನು ಭಾರತದ ಬೌದ್ಧರ ಸಂಘಾರಾಮಗಳ ಕುರಿತು ಉಲ್ಲೇಖಿಸಿದ್ದಾನೆ. ದಕ್ಷಿಣ ಭಾರತದ ಕೊಂಕಣಪುರದ ಕುರಿತು ಉಲ್ಲೇಖಿಸುತ್ತ "ದ್ರಾವಿಡ ದೇಶದಿಂದ ನಾನು ೭೦ ಭಿಕ್ಷುಗಳೊಡಗೂಡಿ ಹೊರಟು ನೈರುತ್ಯ ದಿಕ್ಕಿಗೆ ಪ್ರಯಾಣ ಮಾಡಿ ನಾನಾ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದೆನು. ಮುಂದೆ ಹೋಗುವಾಗ ಒಂದು ದೊಡ್ಡ ಅರಣ್ಯ ಸಿಕ್ಕಿತು. ಇಲ್ಲಿ ಹಾಡು ಹಗಲು ದರೋಡೆಕೋರರು ತಂಡ ತಂಡವಾಗಿ ತಿರುಗುತ್ತಿರುತ್ತಾರೆ. ಹೋಗುವಾಗ ಒಂದಾದ ಮೇಲೊಂದು ಹಾಳು ಬಿದ್ದ ನಗರಗಳೂ ಹಳ್ಳಿಗಳೂ ಸಿಕ್ಕಿದುವು. ಇಂತಹ ಪ್ರದೇಶದಲ್ಲಿ ಸಂಚರಿಸಿದ ನಂತರ ಕೊಂಕಣಪುರವೆಂಬ ನಾಡು ಸಿಕ್ಕಿತು.[೨] ಕೊಂಕಣಪುರದಲ್ಲಿ ೪೦೦ ಬೌದ್ಧ ಸಂಘಾರಾಮಗಳೂ ೧೦,೦೦೦ ಕ್ಕೂ ಹೆಚ್ಚು ಬೌದ್ಧ ಅನುಯಾಯಿಗಳೂ ಇದ್ದಾರೆ, ರಾಜನ ಅರಮನೆಯ ಬಳಿ ೩೦೦ ಭಿಕ್ಷುಗಳಿಂದ ಕೂಡಿದ ದೊಡ್ಡ ಸಂಘಾರಾಮವಿದೆ. ಈ ವಿಹಾರದಲ್ಲಿ ೩ ಅಡಿ ಎತ್ತರದ ಸಿದ್ದಾರ್ಥನ ತಲೆ ಬುರುಡೆ ಇದೆ. ಇದನ್ನು ಸೊಗಸಾಗಿ ಅಲಂಕರಿಸಿ ಕರಂಡದಲ್ಲಿಟ್ಟಿದ್ದಾರೆ. ಪ್ರತಿ ಉಪವಾಸದ ದಿನ ಇದನ್ನು ಹೊರತೆಗೆದು ಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ. ನಗರದ ಬಳಿ ಇನ್ನೊಂದು ವಿಹಾರವಿದೆ. ಅಲ್ಲಿ ಗಂಧದ ಮರದಲ್ಲಿ ಕಡೆದಿರುವ ೧೦ ಅಡಿ ಎತ್ತರದ ಮೈತ್ರೇಯನ ವಿಗ್ರಹವಿದೆ. ಇದು ಆಗಾಗ್ಯೆ ಪ್ರಜ್ವಲಿಸುತ್ತಿರುತ್ತದೆ. ಈ ವಿಹಾರವನ್ನು ಇಪ್ಪತ್ತು ದಶಲಕ್ಷ ಅರ್ಹತರು ಕಡೆದರೆಂದು ಹೇಳುತ್ತಾರೆ," ಎಂದಿದ್ದಾನೆ. ಹೀಗೆ ಭಾರತದ ಎಲ್ಲೆಡೆಯಲ್ಲಿಯೂ ಅಪಾರ ವಾಗಿರುವ ಬೌದ್ಧಧರ್ಮದ ಸಂಘಾರಾಮಗಳ ಪ್ರಭಾವಗಳ ಮಧ್ಯೆ, ಭಾರತದಲ್ಲಿ ಹಿಂದೂ ಸನಾತನ ಧರ್ಮ ಸಂರಕ್ಷಣೆಗೆ ಮಠಗಳನ್ನು ಸ್ಥಾಪಿಸಿದರು ಶಂಕರಾಚಾರ್ಯರು. ಜವಾಹರಲಾಲ್‌ರವರೇ ನುಡಿದಂತೆ-

In the eight century Shankaracharya one of the greatest of India's phylosophers started religious orders or mutts for Hindu Sanyasins or monks, this was an adoption of the old Buddhist practice of the Sangha. previously there had been no such organisations of Sanyasins in Brahmanism.

ಬುದ್ಧನ ಸಂಘಾರಾಮದಂತೆ ಭಾರತದಲ್ಲಿರುವ (ಹಿಂದೂ) ಮಠಗಳ ಪ್ರವರ್ತಕರು ಆದ್ಯ ಶಂಕರಾಚಾರ್ಯರೆಂದು ಮ್ಯಾಕ್ಸ್ ಮುಲ್ಲರ್ ಉಲ್ಲೇಖಿಸಿದ್ದಾರೆ. ರಾಜಾಜಿಯವರೂ ಶಂಕರರ ಈ ಮಠ ಸ್ಥಾಪನೆ ಕುರಿತು ಕೊಂಡಾಡಿದ್ದಾರೆ. ಶಾಸನಗಳಲ್ಲಿ "ಯತಿಭಿಕ್ಷಾಸ್ವಾಸ್ತೆ ಧರ್ಮ"ಕ್ಕೆ ಭೂದಾನ ನೀಡಿದ ಮಾಹಿತಿಗಳಿವೆ. ಗೇರುಸೊಪ್ಪೆಯ ಜೈನ ಪಾಳೆಯಗಾರರು, ಶಂಕರಮಠಕ್ಕೆ ಇಂತಹ ಧರ್ಮ ನೀಡಿದ ಮಾಹಿತಿಯೂ ಕಂಡು ಬಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಸರಕಾರವೂ ಧಾರ್ಮಿಕ ರಕ್ಷಣೆಗಾಗಿ "ಶಂಕರಾಚಾರ್ಯರ ಯತಿಭಿಕ್ಷಾ" ತೆರಿಗೆ ವಿಧಿಸಿದ್ದು ನನ್ನ ಸಂಶೋಧನೆಯಲ್ಲಿ ಎಂ. ಎಚ್. ಕೃಷ್ಣರವರ ಸಂಗ್ರಹದಲ್ಲಿ ಕಂಡುಬಂದಿದೆ.[೩]

ಮಠಾಮ್ನಾಯಗಳು

ಕರ್ನಲ್ ಮೆಕಂಜೀ ದಾಖಲಿಸಿದಂತೆ ಆಮ್ನಾಯಗಳು ಈ ಕೆಳಕಂಡಂತಿವೆ.

೧. ದಕ್ಷಿಣ ದಿಶಿ ರಾಮಕ್ಷೇತ್ರಂ, ಆದಿವರಾಹೋ ದೇವತಾ, ಶಾರದಾದೇವಿ, ತುಂಗಭದ್ರಾತೀರ್ಥಂ, ಶೃಂಗೇರಿ ಮಠಃ, ಭೂರಿವಾಳ ಸಂಪ್ರದಾಯಃ, ತತ್ರ ಪ್ರವರ್ತಕ ಸನ್ಯಾಸ ನಾಮಾನಿ ಸಂಪ್ರದಾಯಾಶ್ಚದಶ

೧ ಪಶ್ಚಿಮ ಸಮುದ್ರತೀರೇ, ದ್ವಾರಕಾಕ್ಷೇತ್ರೇ, ಸಿದ್ಧೇಶ್ವರೋ ದೇವತಾ, ಭದ್ರಕಾಳೀದೇವೀ, ಗೋಮತೀತೀರ್ಥಂ ಶಾರದಾ ಮಠ ಕೀಟವಾಳ ಸಂಪ್ರದಾಯ, ತಂತ್ರ ಪ್ರವರ್ತಕೋ ಹಸ್ತಾಮಲಕಾಚಾರ್ಯಃ ಸನ್ಯಾಸ ನಾಮಾನಿ ಆಶ್ರಮತೀರ್ಥ ಇತಿದ್ವಯಂ

೧ ಉತ್ತರದಿಶಿ ಬದರಿಕಾಶ್ರಮ ಕ್ಷೇತ್ರೇ ನಾರಾಯಣೋ ದೇವತಾ, ಪೂರ್ಣಗಿರೀದೇವೀ, ಅಲಕನಂದಾತೀರ್ಥಂ,

* ಕೆಳದಿ ಮ್ಯೂಸಿಯಂ, ಕೆಳದಿ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

ಜ್ಯೋತೀರ್ಮಠಃ, ಆನಂದವಾಳ ಸಂಪ್ರದಾಯಃ ತತ್ರ ಪ್ರವರ್ತಕಃ ತೋಟಕಾಚಾರ್ಯಃ ಸನ್ಯಾಸ ನಾಮಾನಿ ಗಿರಿ ಪರ್ವತ ಸಾಗರ ಇತಿ ತ್ರಯಂ

೧. ಪೂರ್ವದಿಶಿ ಪುರುಷೋತ್ತಮ ಕ್ಷೇತ್ರೇ ಜಗನ್ನಾಥೋ ದೇವತಾ ವಿಮಲಾದೇವೀ ಮಹೋದಧಿ ತೀರ್ಥಂ ಭೋಗವಾಳ ಸಂಪ್ರದಾಯಃ ತತ್ರ ಪ್ರವರ್ತಕಃ ಪದ್ಮಪಾದಾಚಾರ್ಯಃ ಸನ್ಯಾಸ ನಾಮಾನಿ ವನ ಅರಣ್ಯ ಇಂದ್ರ ಇತಿ ತ್ರಯಂ[೪]

ಯತಿಧರ್ಮನಿರ್ಣಯದಲ್ಲಿ ದೀಕ್ಷಾನಾಮ ಕುರಿತಂತೆ "ಇಂದ್ರ ಸರಸ್ವತಿ ಸಂಪ್ರದಾಯ"ವೊಂದು - "ಪೂರ್ವೋಕ್ತ ತೀರ್ಥಾಶ್ರಮಾ ದೀನಾಂ ಮಧ್ಯೇ ಕೇಷಾಶ್ಚಿನ್ನಾಮ್ನಾಂ ಸ್ವಸ್ವಶೀಲಾಚಾರ ಮಹತ್ತಾಮಿಮಾನೇನ ಜಾತಾ ಸಂಪ್ರದಾಯಾಸ್ತತ್ತನ್ನಾಮಭೇಶಾಶ್ಚ ....ಸರಸ್ವತೀ ಸಂಪ್ರದಾಯ ಭೇದೌ ಆನಂದ ಸರಸ್ವತೀ ಇಂದ್ರ ಸರಸ್ವತೀ ಚೇತಿ" ಎಂಬಂತೆ Personal Preference of one yati starts a sampradaya and in this way the Indra Saraswati sampradaya must have started.[೫]

ಈ ರೀತಿ ಪ್ರಸ್ತಾಪಿಸಿರುವುದು ಹತ್ತು ಮಠಗಳ ಅಸ್ಥಿತ್ವವನ್ನು ನಿರ್ದೇಶಿಸುತ್ತದೆ. ಚಿದ್ವಿಲಾಸ ಶಂಕರವಿಜಯ ಮಠೋತ್ಪತ್ತಿ ನಿರೂಪಣಾಧ್ಯಾಯ ಹಾಗೂ ತಿಗಳಾರಿ ಲಿಪಿ ಹಸ್ತಪ್ರತಿ ಗ್ರಂಥಗಳಲ್ಲಿರುವ "ರಘೂತ್ತಮ ಮಠೋದ್ಧಾರಃ" ಕೃತಿಯ ನನ್ನ ಅನ್ವೇಷಣೆಯಲ್ಲಿ ಶಂಕರರು ಗೋಕರ್ಣದಲ್ಲಿ ಸ್ಥಾಪಿಸಿದ ಹವ್ಯಕರ ಗುರುಪೀಠವನ್ನು ಕುರಿತಂತೆ ನೂತನ ಅಂಶವೊಂದು ಶಂಕರರ ಚರಿತ್ರೆಯಲ್ಲಿ ಕಂಡು ಬಂದಿದೆ. ಶ್ರೀ ರಾಮಚಂದ್ರಾಪುರಮಠದಲ್ಲಿ ಹೊಸದಾಗಿ ಲಭಿಸಿರುವ, ಗೂಡಲಿಪಿಯಲ್ಲಿರುವ ಮೂಲ ಆಕರ ಸಾಮಗ್ರಿ ಇದೆ.*

ಹವ್ಯಕರ ಗೂಡ ತಿಗಳಾರಿ ಲಿಪಿ

ಗೌತಮ ಬುದ್ಧನ ಕೆಲವೇ ಕಾಲದ ಸಮಕಾಲೀನತೆಯಿಂದಿರುವ ೬೪ ಲಿಪಿಗಳು ಹಾಗೂ ಹೀರಾಚಂದ್ ಓಝಾರವರ ೨೭೭ ಲಿಪಿ ಮಾಲೆಗಳಲ್ಲಿ ಕಂಡುಬಾರದ **ತಿಗಳಾರಿ** ಲಿಪಿಯು ಲಿಪಿಶಾಸ್ತ್ರ ಇತಿಹಾಸದಲ್ಲಿ ಪ್ರಾಮುಖ್ಯವಾದುದು.[೬] ಎಪಿಗ್ರಾಫಿಯಾ ಕರ್ನಾಟಿಕಾ ಸಂ. III ತಿರುಮಕೂಡ್ಲು ನರಸೀಪುರ ಶಾಸನದಲ್ಲಿ-ಹಾಗೂ ಕಿಟ್ಟೆಲ್ ನಿಘಂಟಿನಲ್ಲಿ

ಅ. ನಾಗರ ಕನ್ನಡ ತಿಗುಳಾರ್‍ಯ್ಯವನೋದಿಸುವ ಬಾಲಶೀಕ್ಷೆ ಉಪಾಧ್ಯರ ಜೀವಿತಕ್ಕೆ ವರ್ಷ ೧ ಕ್ಕೆ ಗದ್ಯಾಣಂ ಆಱು.

ಆ. ತಿಗಳಾರಿ > ತಿಗಳಾಡಿ k.n. the characters in use among Brahamans in Kanara District for the Sanskrit Language; Akin to Grantha Lipi of Tamilians. The Malayalam Characters owe their origin to **Tigalari**; ಆರ್ಯ > a respectable, venerable man; an Arya a man of good family, an elder. ಎಂದಿದೆ.

ಭಾರತ ಸರಕಾರದ ಸಂಶೋಧನಾ ಯೋಜನೆಯಲ್ಲಿ ಪ್ರಕಟವಾದ Catalogue of Ancient Tigalari palm Leaf Manuscripats in India Vol I ನಲ್ಲಿ ವಟ್ಟೆಬುತ್ತು ಹಾಗೂ ಮಲೆಯಾಳಿ ಕವಲಿನಿಂದ ವೈದಿಕ ಸಾಹಿತ್ಯ ರಚನೆಯಲ್ಲಿ ಉದ್ಭವಿಸಿದ ಈ ಲಿಪಿ ಬಗ್ಗೆ ವಿವರವಾಗಿ ನಾನು ಚರ್ಚಿಸಿದ್ದು ಪುನರುಕ್ತಿಸುವುದು ಅನುಚಿತ. ಇದರ ಮಹತ್ವವನ್ನು ಮನಗಂಡು ಜಪಾನ್ ಭಾಷೆಯಲ್ಲಿ ಆ ಸರಕಾರದ "ಕಿಟನೋಮಾರು" ಸಂಚಿಕೆಯಲ್ಲಿಯೂ ಪ್ರಕಟವಾಗಿದೆ. ದಿ ೮.೬.೨೦೦೧ ರಂದು National Colloquium on palaeographic Art of India and South East Asia ವಿದ್ವತ್ ಸಭೆಯಲ್ಲಿಯೂ ಹಾಗು Archaeological Institute of Americaದಲ್ಲಿಯೂ ತಿಗಳಾರಿ ಲಿಪಿ ಕುರಿತು ಪ್ರಬಂಧ ಮಂಡಿಸಿದ್ದೇನೆ. ವೈದಿಕ ಸಾಹಿತ್ಯಗಳಾದಿಯಾಗಿ ಶಂಕರರ ಸೌಂದರ್ಯಲಹರಿ, ಪಂಚಸಾರ, ಕರ್ಮವಿಪಾಕ[೭] ಮೊದಲಾದ ಕೃತಿಗಳು ಈ ಲಿಪಿಯಲ್ಲಿವೆ. ಪ್ರಚಲಿತವಿಲ್ಲದ ಸರಸ್ವತೀ ಲಿಪಿ ಮುಂತಾದ ಪ್ರಾಂತೀಯ ಲಿಪಿಗಳು ಸಿಮ್ಲಾದಲ್ಲಿ ರಾಷ್ಟ್ರಪತಿ ಗ್ರಂಥ ಭಂಡಾರದಲ್ಲಿರುವ ಲಿಪಿ ವಿಜ್ಞಾನ ಕೋಶದಂತೆ ಕರ್ನಾಟಕದಲ್ಲಿರುವ ಪ್ರಕಟಿತ-ಅಪ್ರಕಟಿತ ಲಿಪಿ ಗಣತಿಯು ಮುಂದಿನ ಸಂಶೋಧನಾ ಪೀಳಿಗೆಗೆ ಸಂರಕ್ಷಿಸಬೇಕಾದ ಅಗತ್ಯ ಎಂದಿಗಿಂತಲೂ ಈಗ ಹೆಚ್ಚಾಗಿದೆ. ತಿಗಳಾರಿ ಲಿಪಿ ಕುರಿತಂತೆ ಗೋಕರ್ಣದಲ್ಲಿ ಕ್ರಿ.ಶ. ೧೬೭೫ರಂದು ಸಂಚರಿಸಿದ ಇಂಗ್ಲಿಷ್ ವೈದ್ಯಾಧಿಕಾರಿ ಫ್ರಾಯರ್‌ನ ಪ್ರವಾಸಿ ಕಥನವೂ ಈ ಕೆಳಕಂಡಂತಿದ್ದು ಗಮನಾರ್ಹವಾಗಿದೆ.

"Gokarna temple is a university of brahmans, being precious old manuscripts of their own cabalas or mysterious understood only by the Brahmins. The Libraries were also old manuscripts understood by the Brahmins alone.

This though a principal University, can boast of no Bodlean or Vatican thier libraries being old manuscripts of their own cabalas or mysteries understood only by the Brahmins. They live not under a collegiate confinement, but in pretty Neat Houses.[೮೮]

ಈ ಹಸ್ತಪ್ರತಿಗಳು ತಿಗಳಾರಿ ಲಿಪಿಯನ್ನೊಳಗೊಂಡಿರಬಹುದಾಗಿದೆ.[೮೯]

ರಘೂತ್ತಮ ಮಠೋದ್ಧಾರ : ಹಸ್ತಪ್ರತಿ

ವಿದ್ಯಾರಣ್ಯ ಕಾಲಜ್ಞಾನ, ಗುರುವಂಶ ಕಾವ್ಯಮ್, ಜ್ಞಾನದೀಪಿಕಾ, ಗುರುಪರಂಪರಾ (ಕೊಂಕಣಾಭ್ಯುದಯಮ್)

ಗುರುತ್ನಮಾಲಾ (ಕುಂಭೋಕೋಣಂ) ಮುಂತಾದ ಗುರುಪೀಠಗಳ ಪರಂಪರಾ ಕೃತಿಗಳಂತೆ ಶ್ರೀರಾಮಚಂದ್ರಾಪುರ ಮಠದ ಐತಿಹಾಸಿಕ ಅಂಶಗಳಿಂದ ಕೂಡಿದ "ರಘೂತ್ತಮ ಮಠೋದ್ಧಾರಃ" ಕೃತಿಯು "ಧರ್ಮಪ್ರವೃತ್ತಿ" ತಾಳೆಯೋಲೆ ಗ್ರಂಥಗಳ ಕಟ್ಟಿನಲ್ಲಿ ನನಗೆ ಲಭಿಸಿತು. ಪ್ರಾಚ್ಯವಸ್ತು ಸಂಶೋಧನಾ ಇಲಾಖೆ ಹಾಗೂ ಭಾರತದ ಪುರಾತತ್ವ ಇಲಾಖೆಯ ಅಧಿಕಾರಿಗಳಿಗೆ ಸರ್ವೇಕ್ಷಣೆಯಲ್ಲಿ ಮಠದಲ್ಲಿರುವ ತಾಮ್ರಶಾಸನ ಮತ್ತು ಇತರೆ ಪುರಾತತ್ವ ಸಾಮಗ್ರಿಗಳು ಲಭಿಸಿವೆ. ಆದರೆ ಗುರುಪೀಠದ ಚಾರಿತ್ರಿಕಾಂಶ ವನ್ನೊಳಗೊಂಡ 'ರಘೂತ್ತಮ ಮಠೋದ್ಧಾರ' ಹಸ್ತಪ್ರತಿಯು ಗಮನಕ್ಕೆ ಬಂದಿರಲಿಲ್ಲ. ಈ ಕೃತಿಯಲ್ಲಿ ಉಲ್ಲೇಖನಗೊಂಡಂತೆ ಶಂಕರರು ಗೋಕರ್ಣದಲ್ಲಿ ಮಠವನ್ನು ಸ್ಥಾಪಿಸಿ ವಿದ್ಯಾನಂದಾ ಚಾರ್ಯರನ್ನು ಗುರುಪೀಠದ ಅಧ್ಯಕ್ಷರನ್ನಾಗಿ ನಿಯಮಿಸಿದ್ದು ಗಮನಾರ್ಹವಾಗಿದೆ. ಋಷ್ಯಶೃಂಗದಲ್ಲಿ ಸುರೇಶ್ವರಾಚಾರ್ಯರನ್ನು ಪ್ರತಿಷ್ಠಾಪಿಸಿದಂತೆ ಶತಶೃಂಗದಲ್ಲಿ.

ಇತ್ಯುಕ್ತ್ವಾ ಶಂಕರಾಚಾರ್ಯಃ ಶತಶೃಂಗಸ್ಯಮೂರ್ಧನಿ।
ಅಶೋಕೋ ರಾಜತೇಯತ್ರ ಸ್ಥಾಪಯಿತ್ವಾ ಮಠಂ ವರಮ್॥
ವರದಾಖ್ಯೇನ ಮುನಿನಾ ಪ್ರಾಪ್ತರಾಮಾದಿ ವಿಗ್ರಹಾನ್।
ಚಂದ್ರಮೌಲಿಂ ದಿವ್ಯಲಿಂಗಂ ಪಾದುಕಾಂ ದಿವ್ಯ ದರ್ಶನಾಮ್॥
ವಿದ್ಯಾನಂದಯತೇರ್ದತ್ವಾ ಪುನಸ್ತೋಷ ಮವಾಪ್ತವಾನ್।
ರಘೂಣಾಮುತ್ತಮೋ ರಾಮೋ ರಘೂತ್ತಮ ಇತಿ ಸ್ಮೃತಃ॥

ಹೀಗೆ ಶಂಕರರು ಮಠವನ್ನು ಸ್ಥಾಪಿಸಿದ ಕುರಿತು ಚಿದ್ವಿಲಾಸ ಶಂಕರವಿಜಯ ಮತ್ತು ರಘೂತ್ತಮ ಮಠೋದ್ಧಾರಗಳ ಉಲ್ಲೇಖನವು ಕಂಡುಬಂದಿದೆ.[೯] ಪುರಾಣನಾಮ ಚೂಡಾಮಣಿ ಯಲ್ಲಿ ಹಾಗೂ ಕೆಳದಿ ನೃಪವಿಜಯದಲ್ಲಿ ಉಲ್ಲೇಖನಗೊಂಡಂತೆ ಅಗಸ್ತ್ಯ ತೀರ್ಥವೂ, ಕೆಳದಿ ರಾಜ್ಯಧಾನಿ ಬಿದನೂರು (ಈಗಿನ ಹಳೇನಗರ) ಸಮೀಪವೇ ಇದೆ. ರಘೂತ್ತಮ ಮಠೋದ್ಧಾರದಲ್ಲಿರುವ ಅನೇಕ ಅಂಶಗಳು ಶಾಸನೇತ್ಯಾದಿ ಪುರಾತತ್ವ ಸಂಶೋಧನೆ ಗಳಲ್ಲಿಯೂ ವ್ಯಕ್ತಪಟ್ಟಿದೆ.

"ಶ್ರೀಮದ್ರಾಮ ಮಹಾಮಂತ್ರ ಮನನಾಸಕ್ತ ಚೇತಸಾ", "ಭೋಗ ವರ್ಧನವಾಳ ಪರುಷಾಧಿಷ್ಠಿತ" ಮುಂತಾದ ಭಾಗಗಳಲ್ಲಿ ಶಾಸನ ಸಂಖ್ಯೆ ಎಪಿಗ್ರಾಫಿಯಾ ಕರ್ನಾಟಕಾ ಸಂಪುಟVIII ನಗರ ೬೮ರಲ್ಲಿ ಕಂಡಂತೆ ಶಂಕರಾಚಾರ್ಯ ಸುರೇಶ್ವರಾಚಾರ್ಯರೀರ್ವರ ಶಿಷ್ಯ ವಿದ್ಯಾನಂದಾಚಾರ್ಯ ಪರಂಪರಾ ಪುರಸ್ಸರ ಚಿದ್ಬೋಧ ಭಾರತಿ ಕುರಿತು ಮೈಸೂರು ಪುರಾತತ್ವ ವರದಿ ೧೯೩೩ ಶೃಂಗೇರಿ ಮಠದ ಶಾಸನಗಳವರೆಗೆ.

"The Ramachandrapur Math is also known as Raghuthama Matha of Gokarna in some grants (Nagar 64, 67-68) The next grant (No 27) which also refers to purushottamaranya shows that he was supervising the temple of Mahabala at Gokarna. The village Manjuguni given under the present grant is near Honnavar on the west coast in the same district at Gokarna. The references to Gokarna and to the food offering to God Sri Ramachandra and the absence of any allusion to Sringeri or to the pontiffs of the Sringeri Matt make it possible that the present grant and the next one were made in favour of a Guru of the Ramachandrapur Matt.

The chief deity worshipped in this Matt is Rama while Chandramouli (or Shiva) is the principle God worshipped in the Sringeri Matt, Grants to this Matt by the early kings of Vijayanagar are recorded in several copper plate grants(EC VIII Nagar 64, 66, 67, 68, 69; MAR 1923 Nos 66, 67) In these plates the heads of the Matt are praised as worshippers of God Ramachandra and grants of land are said to have been made for the service of God Ramachandra as in the present record (See No 67, of MAR 1923 Nagar 64, 69 etc.) perhaps the present record registers a grant to

ರಥೋತ್ಸವ ಮಂಡಲವನ್ನೊಳಗೊಂಡ
ಆಗಮ ಗ್ರಂಥ ಹಸ್ತಪ್ರತಿಗಳು (ತಿಗಳಾರಿ ಲಿಪಿ)



the head of the Ramachandrapur Math and not to the Sringeri Gurus - ಅಲ್ಲದೆ ಈ ರೀತಿ ದಾಖಲಿಸಲಾಗಿದೆ:

ಸುರೇಶ್ವರಾಖ್ಯವರ್ಯಸ್ಯ ಶಿಷ್ಯೋಯನ್ಮೃಧ್ವವೇದ್ವರಃ।
ಮಹಾವಾಕ್ಯಂ ಸಂಪ್ರದಾಯಃ ವೇದಾನಾಮಾನಿವೈದಶ॥

ಶಂಕರರ 'ಸೌಂದರ್ಯ ಲಹರಿ'ಯಲ್ಲಿರುವ ೬೪ ಮಂಡಲ ತಂತ್ರಗಳಾದಿಯಾಗಿ, ಶ್ರೀಚಕ್ರ ಮುಂತಾದ ವೈದೀಕ ಪಟಲಗಳು ಹಾಗೂ ಇವುಗಳ ರಹಸ್ಯಗಳನ್ನು ವಿಶ್ವಶಾಂತಿಗಾಗಿ ಮಹಾದಾರ್ಶನಿಕ ಶಂಕರ, ವಿದ್ಯಾರಣ್ಯ, ತಮಿಳುನಾಡಿನ ಕರ್ನಾಟಕ ಮಂತ್ರಿ ಗೋವಿಂದ[೧೦] ದೀಕ್ಷಿತರು, ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಧರರು, ಶ್ರೀ ಚಂದ್ರಶೇಖರ ಭಾರತಿ ಹಾಗೂ ಕಂಚಿ ಕಾಮಕೋಟಿ ಪೀಠದ ಮಹಾಚಾರ್ಯರು ಮುಂತಾದ ಯತಿವರೇಣ್ಯರು ಸಾಧಿಸಿ ಧಾರ್ಮಿಕ ಔನ್ನತ್ಯವನ್ನು ಸಾಧಿಸಿದರು.

MANDALAS FOR PEACE



ಒಂದು ಕಾಲದಲ್ಲಿ ಕಾಂಬೋಡಿಯಾ ಪ್ರದೇಶವೂ ಭಾರತದ ಅಂಗವಾಗಿದ್ದು, ಸುರೇಶ್ವರಾಚಾರ್ಯರು ತಮ್ಮ ಶಿಷ್ಯ 'ಶಿವಸೋಮಾ'ನನ್ನು ಅಲ್ಲಿಗೆ ಧರ್ಮಪ್ರಸಾರಕ್ಕೆ ಕಳಿಸಿದ್ದು ಗಮನಾರ್ಹ. ವೀರಶೈವರ ವೀರಾಗಮದ ಮಂಡಲ ರಹಸ್ಯಗಳು ಉದ್ಧರಣ ಪಟಲಗಳಲ್ಲಿ ಅಭಿವ್ಯಕ್ತಗೊಂಡಿವೆ.[೧೧] ಶ್ರೀ ಚಕ್ರ ಮೊದಲುಗೊಂಡು ವೈದೀಕ ಮಂಡಲಗಳು ಕುರಿತು ರಷ್ಯಾ ವಿದ್ವಾಂಸ ಅಲೆಕ್ಸೇಯ್ ಕುಲ್ಯಾಚೀವ್ ಹಾಗೂ ಅಲೆಕ್ಸಾಂಡರ್ ಸಪ್ಪಾಯ್ ಹಾಗೂ ಲ್ಯೂತ್‌ಸ್ಕೋ ರವರು ೧೯೬೯ರಲ್ಲಿ ಪ್ರಕಟಿಸಿದ ಉದ್ಗ್ರಂಥದಲ್ಲಿ ಅವಲೋಕಿಸಬಹುದು.[೧೨]


ಶ್ರೀರಾಮಚಂದ್ರಾಪುರ ಮಠದ ಶಾಸನಗಳು

ಶ್ರೀ ಗುರು ಪೀಠದಲ್ಲಿರುವ E.C. Vol VIII Nr ೬೪ರ ಕ್ರಿ.ಶ. ೧೫೦೭ರ ವಿಜಯನಗರ ವೀರನರಸಿಂಹನ ಶಾಸನದಲ್ಲಿರುವ ವೀರಣಾಚಾರಿ (ಲೇಖಪಾಲಕ) ಕುರಿತಂತೆ ಕುಂಭಕೋಣಂ ಮಠದಲ್ಲಿರುವ ಶಾಸನದಲ್ಲಿರುವ ಈ ಕೆಳಕಂಡ ಅಂಶವು ಗಮನಾರ್ಹವಾಗಿದೆ.

Next comes a set of Vijayanagar grants. Two of them are by vira Narasimha (1505-9) of which the first is dated s. 1429 Sukla, Magha Mahodya, S. 1429 is A.D. 1507. But Sukla is A.D. 1510. If we overlook this discrepancy, we have to accept 1507. since Narasimhas reign terminated in 1509. The name of the engraver Viranasari, son of Mallanna Asari is correct. His name occurs in the copper plates between 1507 and 1523.[೧೩]

ದಿ. ೩.೮.೧೪೬೪ರ ನಗರ ೬೯ನೇ ಶಾಸನ ದಿ. ೧೯.೮.೧೪೬೪ ನಗರ ೬೮ನೇ ಶಾಸನಗಳು ವಿಜಯನಗರ ಚಕ್ರವರ್ತಿಯು ಕೇವಲ ೬ ದಿನಗಳಲ್ಲಿ ಎರಡು ಶಾಸನ ನೀಡಿರುವುದು ಆಸಕ್ತಿದಾಯಕವಾಗಿದೆ. ಮಲ್ಲಿಕಾರ್ಜುನನು ಆರಗ ಮಂಡಲದಲ್ಲಿ ತನ್ನ ಮಗನ ನಾಮಕರಣೋತ್ಸವ ಸಂದರ್ಭದಲ್ಲಿ ಒಂದು ಹಳ್ಳಿಯನ್ನು ದಾನವಾಗಿ ನೀಡಿದ್ದು ಕಂಡು ಬರುತ್ತದೆ. ಅಡಿಕೆ ಮರಗಳನ್ನು ಬೆಳೆಸಲು ಶ್ರೋತ್ರೀಯ ಅಗ್ರಹಾರದಲ್ಲಿ ದಾನ ನೀಡಿದ್ದು ಹಾಗೂ ಹಳ್ಳಿಯ ಹೊಲಗದ್ದೆಗಳಲ್ಲಿ ಮತ್ತು ಇತರ ಭೂಮಿಯಲ್ಲಿ ಮೇಯುವ ಜಾನುವಾರುಗಳಿಗೆ ದೊಡ್ಡಿಯನ್ನು ನಿರ್ಮಿಸುವ ಸಲುವಾಗಿ ಭೂದಾನವಿತ್ತ ಉಲ್ಲೇಖವಿದೆ.

ಗೋಕರ್ಣದ ರಾಘವೇಶ್ವರ ಶ್ರೀಪಾದಂಗಳವರಿಗೆ ತಾಮ್ರಪತ್ರವನ್ನು ನೀಡಿದ್ದಲ್ಲದೆ ಮಲ್ಲಿಕಾರ್ಜುನನು ಹವ್ಯಕ ಬ್ರಾಹ್ಮಣ ಶ್ರೋತ್ರಿಯರ ಬಗ್ಗೆ ವಿಶೇಷ ಆಸಕ್ತಿಯಿದ್ದುದೂ ಕಂಡುಬರುತ್ತದೆ. ವಿಜಯನಗರ ವಿದ್ಯಾರಣ್ಯರು ಚಿದ್ಬೋಧಭಾರತೀಸ್ವಾಮಿಗಳಿಗೆ ನೀಡಿದ ದಾನವನ್ನು ಮಲ್ಲಿಕಾರ್ಜುನನು ಸ್ವೀಕರಿಸಿ ಅದರೊಂದಿಗೆ ಕೆಲವು ಸೇರ್ಪಡೆ ಮಾಡಿದನು. ಶಾಸನದಲ್ಲಿ ಪಂಚ ದೀವಿಟಿಗೆ ಮತ್ತು ಪಲ್ಲಕ್ಕಿಯ ಮೇಲೆ ಪಂಚಕಲಶವನ್ನು ಹೊಂದಲು ಅನುಮತಿ ನೀಡಿದ್ದುದು ತಿಳಿಸುತ್ತದೆ. ಹಲವಾರು ಅಂಶಗಳು ರಾಯರೇಖೆ ಗಳಲ್ಲಿಯೂ ಉಲ್ಲೇಖನಗೊಂಡಿರುವುದೂ ತಿಳಿದು ಬರುತ್ತದೆ.[೧೪] ಶ್ರೀರಾಮ ಚಂದ್ರಾಪುರ ಮಠದ ಶಾಸನ ಸಂಪುಟ ೬,೧೧,೨೧ನೇ ಶಾಸನಗಳು ವಿಜನಯಗರ ದೇವರಾಯನಿಗೆ ಆರೋಗ್ಯ ಹಾರೈಸಿ ನೀಡಿದ ಶಾಸನಗಳಾಗಿವೆ. ವಿಜಯನಗರ ಬುಕ್ಕರಾಯನ ಕ್ರಿ.ಶ. ೧೩೯೭ರ ಅಪ್ರಕಟಿತ ತಾಮ್ರಶಾಸನದಲ್ಲಿಯೂ ಅಡಕೆ ತೆಂಗು



ಮಂಡಲ ರಹಸ್ಯವನ್ನೊಳಗೊಂಡ ಉದ್ಧರಣ ಪಟಲಗಳು
(ವೀರಶೈವ)

ಬಾಳೆ ತೋಟದ ಪ್ರಸ್ತಾಪವಿದೆ. (ಡಾ. ವೆಂಕಟೇಶ್ ಜೋಯಿಸ್ ಲೇಖನ, ವಿಜಯನಗರ ಅಧ್ಯಯನ ಸಂಪುಟ ೬. ಪುಟ ೬೪) EC. Vol VIII Nr ೬೫, ೬೬ನೇ ಶಾಸನದಲ್ಲಿ ಸೋಮಣ ನಾಯಕನ ಬಗ್ಗೆ ಮಾಹಿತಿಗಳು ಉಪಲಬ್ಧವಿವೆ. ಸ್ವರ್ಣವಲ್ಲೀ ಮಠದ ತಾಮ್ರಶಾಸನ ಭಾಷಾಪತ್ರಿಕೆಯೂ ವಿದ್ಯಾರಣ್ಯರ ಶಾಸನದಂತೆ ಆಸಕ್ತಿ ದಾಯಕವಾಗಿದೆ. ಶ್ರೀ ರಾ. ಮಠದ ಅಪ್ರಕಟಿತ ಶಾಸನ ಸಂಖ್ಯೆ ೬ ರ ಹೊನ್ನಾವರದ ಭಾಯಣ್ಣನ ಶಾಸನದಲ್ಲಿ ಕಂಡು ಬರುವ ಯತಿಭಿಕ್ಷೆಗೆ ನೀಡಿದ ಭೂದಾನ, ಹಡಗು, ಬಿಟ್ಟಿ ಉಲ್ಲೇಖನಗಳು ಗಮನಾರ್ಹವಾಗಿವೆ. ಮದರಾಸಿನಲ್ಲಿರುವ ಗೋಕರ್ಣದ ೨೦೦ ಅಪ್ರಕಟಿತ ಶಾಸನಗಳಲ್ಲಿ ಶ್ರೀರಾಮ ಚಂದ್ರಾಪುರ ಮಠದ ಬಗ್ಗೆ ಮಾಹಿತಿಗಳೂ ಕಂಡುಬಂದಿವೆ. ಇವುಗಳು ಬೆಳಕು ಕಾಣಬೇಕಾಗಿದೆ.[೧೫] ತಿಗಳಾರಿ ಲಿಪಿಯಲ್ಲಿರುವ ಧರ್ಮಪರಿಷತ್ತು, ಕೆಳದಿ ಸಂಶೋಧನಾಲಯದಲ್ಲಿ ತಿಗಳಾರಿ ಲಿಪಿಯಲ್ಲಿರುವ ಕೊಂಕಣಿಗರ ಭಾಷಾ ಪತ್ರಿಕೆಗಳಲ್ಲಿರುವ ಮಾಹಿತಿಗಳೂ ಗಮನಾರ್ಹವಾಗಿವೆ. ಗೋಕರ್ಣದ ಅಪ್ರಕಟಿತ ಗಣಪರ್ಯನ ತಾಮ್ರ ಶಾಸನವೊಂದೂ ಮಠದಲ್ಲಿದೆ. ಕೆಳದಿ ಇಮ್ಮಡಿ ಬಸಪ್ಪನಾಯಕನ ಕ್ರಿ.ಶ. ೧೬೬೭ನೇ ರಕ್ತಾಕ್ಷಿ ಬಂದ ಅಪ್ರಕಟಿತ ಶಾಸನ ಪ್ರತಿಯೊಂದು ಮಠದ ಪತ್ರಾಗಾರದಲ್ಲಿ ಕಂಡು ಬಂದಿದ್ದು, ಇದರಲ್ಲಿರುವ ಹುಜೂರು ನಾಗಣ್ಣ, ಹಲಸನಾಡ ನಾಗಪ್ಪನ ಸಂಗತಿಯೂ ಕುತೂಹಲಕರವಾಗಿದೆ.

ಅಮೂಲ್ಯ ಚಾರಿತ್ರಿಕ ದಾಖಲೆ

ಶ್ರೀರಾಮಚಂದ್ರಾಪುರ ಮಠದ ಪತ್ರಾಗಾರದ ಅಪೂರ್ವ ದಾಖಲೆಗಳನ್ನು ಸಂಶೋಧನೆಗೆ ಅಳವಡಿಸುವಲ್ಲಿ ಬೆಳಕಿಗೆ ತರಲು ಪೂಜ್ಯ ಶ್ರೀರಾಘವೇಶ್ವರ ಭಾರತೀ ಶ್ರೀಪಾದಂಗಳ ನನಗೆ ಅನುಗ್ರಹಿಸಿದ್ದಾರೆ ಮಠಗಳ ಚರಿತ್ರೆಯಲ್ಲಿಯೇ ಅಪೂರ್ವವೆನಿಸಿದ ಶೃಂಗೇರಿ - ರಾಮಚಂದ್ರಾಪುರ ಗುರುಪೀಠಗಳ ಯತಿವರೇಣ್ಯರ ಈ ಕೆಳಗಿನ ಸಮಾಗಮದ ಸಂಗತಿಯ ಪತ್ರಾಗಾರದಲ್ಲಿ ಗೋಚರಿಸಿದ್ದು ಅಮೂಲ್ಯ ಚಾರಿತ್ರಿಕ ದಾಖಲೆಗಳಲ್ಲಿವೆ - ಅದರ ಪಠ್ಯ ಭಾಗ:

ಪತ್ರ ಸಂಖ್ಯೆ ೧೪

ಸಾಲು

೧. ರಾಮಚಂದ್ರಾಪುರದವರ್‍ರಿಗೂ ಶೃಂಗೇರ್‍ರಿಯವರ್‍ರಿಗೂ ಭೇಟಿ ಆದ್ದು.
೨ ಶೃಂಗೇರ್‍ರಿಯವರ್‍ರಿಗೂ ರಾಮಚಂದ್ರಪುರದವರ್‍ರಿಗೂ ಸಮಕ್ಷಮದಲ್ಲಿ ಭೆಟಿ ಆದ ವಿವರ್‍ರಾ
೩ ಶೃಂಗೇರ್‍ರಿ ಅಭಿನವ ಸಚಿದಾನಂದ ಭಾರತಿ ಶ್ರೀಪಾದಂಗಳವರು ಯೀಶ್ವರ ಸಂವತ್ಸರದ ಪುಷ್ಯ ಶು
೪ ದ್ಧ ೧ಲೂ ಮಂಗಳವಾರ ಸಂಕ್ರಾಂತಿ ಸ್ನಾನಕ್ಕೆ ತೆರಳಿ ಬಂದಲ್ಲಿ ರಾಘವೇಶ್ವರ ಭಾರತೀ ಶ್ರೀಪಾದಂಗಳಿಗೂ
೫ ಭೇಟಿಯಾದ ವಿವರಾ।। ಕರುಣಿಕ ವಸ್ತಾತ್ರೆ ಕೃಷ್ಣಪ್ಪಯ್ಯಾ ಸ XX ನ ವಿಶ್ವೇಶ್ವರ್‍ರೈಯ್ಯಾ ಅವಸರ್‍ರ
೬ ಬಾಧ್ಯರೆ ಚಂನಪ್ಪಯ್ಯ ಚಿಂನಭಂಡಾರದ ಪುರುಷೋತ್ತಮಯ್ಯನ ಮಗ ಹೂವೈಯ್ಯ
೭ ಮುಕುಂದ ಪಂಡಿತರು ಹಲಸನಾಡ ನಾಗಪ್ಪಯ್ಯ ಗಂಗವಳಿ ಕೆಶವ್ವಯ್ಯಾ ಬಾಸ್ತಿ ಲಕ್ಷ್ಮಿನಾರಾ
೮ ಯಣ್ಣೈಯ್ಯಾ ಹಿರೆಮಠದ ಶ್ಯಾ। ಕೊಲ್ಲೂರ್‍ರೈಯ್ಯಾ ಕಣಿವೆ ಬಾಗಿಲ ಹರಕಾರ ಪರಮೈಯ್ಯಾ ಕೊಲ್ಲೂ
೯ ರ ಸುಬಂಣ ಅಡಿಗಳೂ ಚಂದಾವಾರದ ಶಂಭುಲಿಂಗ ಭಟರು ಭಾಂಡ್ಯಾರ ಕೊಂಡಿಭಟ್ರು
೧೦ ಜಳರ್‍ರೆ ಚಂನಪ್ಪಯ್ಯ ಆ ಅಗ್ರಹಾರದ ಶಂಕರ ನಾರಾಯಣ ಶಾಸ್ತ್ರಿಗಳೂ ಶ್ರಿಂಗೆರ್‍ರಿ ಶಿ
೧೧ ವಶಂಕರಶಾಸ್ತ್ರಿಗಳು ಬಾಲಕೃಷ್ಣಶಾಸ್ತ್ರಿಗಳೂ ಕಬುನಾಡ ಪರಮೇಶ್ವರ ಶಾಸ್ತ್ರಿಗಳೂ
೧೨ ಶ್ರಿಂಗೆರ್‍ರಿ ಶ್ಯಾ। ಲಕ್ಷ್ಮಿಪತಿಯಯ್ಯ ಮುಂತಾದವರ ಭೇಟಿಯಾದ್ದು ಪ್ರವರರು

ಉಮಾಪತಿ ಗೊ

೧೩ ಣಪ್ಪನ ದೆವಸ್ತಾನದಿಂದಾ ವಿಶ್ವೆಶ್ವರ ದೆವಸ್ತಾನಕ್ಕೆ ತೆರಳಿ ಬಂದಲ್ಲಿ ಮಠದಿಂದ ರಾಘವೇಶ್ವರ ಭಾ

೧೪ ರತಿ ಶ್ರೀಪಾದಂಗಳವರು ಪಾಲಕಿ ಸ್ವೆತಛತ್ರ ಕನಕ ಚಾಮರ ಹಸ್ತ ನಿಶಾನಿ ದಿವಾಜ್ಯೋತಿ ಮಕ

೧೫ ರತೊರಣ ಧವಳ ಶಂಖ ಮುಂತ್ತಾದ ಬಿರದುಗಳಿಂದಾ ವಿಶ್ವೇಶ್ವರ ದೇವಸ್ತಾನಕ್ಕೆ ತೆರಳಿ ಅಲ್ಲಿಂದಾ

೧೬ ಆವಿಗೆ ಮೇಲೆ ತೆರಳಿ ಅವರ್ರುಬ್ರು ಪೂಜಾ ಮಂಟಪದಲ್ಲು ನಿಂತು ಧರಿಶಿನವಾಗಿ ದೆವರ ಮಂ

೧೭ ಗಳಾರತಿ ಮಾಡಿಶಿ ಪ್ರಸಾದ ತೆಗೆದುಕೊಂಡು ನಂಮ ಮಠಕ್ಕೆ ತೆರಳಬೇಕೆಂದು ಹೇಳಿ ಪೂರ್ವ ಪ್ರ

೧೮ ಕಾರ ಬಿರದು ಬಾವಲಿ ಮುಂತ್ತಾಗಿ ತೆರಳಿ ಬಂದರ್ರು ಅಭಿನವ ಸಚಿದಾನಂದ ಭಾರತಿ ಶ್ರೀಪಾದಂ

೧೯ ಗಳವರು ಸ್ನಾನ ಮುಗಿಶಿ ಮಠಕ್ಕೆ ತೆರಳಿ ಬಂದಲ್ಲಿ ಯಿವರ ಮಠದ ಚಾವಡಿ ಬಾಗಿಲ ಪರ್ರಿಯಂ

೨೦ ತ್ರ ಹೊಗಿ ಕರಕೊಂಡು ಬಂದು ರಾಮಚಂದ್ರದೆವರ್ರಿಗೆ ಮಂಗಳಾರತಿ ಮಾಡ್ಸಿ ಅಲ್ಲಿ ಉಡುಗರ್ರೆ

೨೧ ಶಾಲು ವಲ್ಲಿ ಬಗ್ಯೆ ೮೯೦ ಯಿವರ್ರಿಗೂ ಯಿದೆ ಪ್ರಕಾರ ಶಾಲು ವಲ್ಲಿ ಬಗ್ಯೆ ೫೯೦ ವಂನ್ನು ಕೊಟ್ಟರ್ರು.

೨೨. ಯಿತ್ಕರ್ತರ್ರು ಜಪದ ವೆಳೆಯಕೆ ತೆರಳಿದರ್ರು ಆಮೆಲೆ ಯಿವರ್ರು ವಳಕ್ಕೆ ತೆರಳಿ ಬಂದರ್ರು

೨೩ ಆಮೇಲೆ ಚಂದ್ರಮೌಳೇಶ್ವರ್ರ ದೆವರ ಮಂಗಳಾರತ್ತಿ ನೊಡಿ ತಿರುಗಾ ತೆರಳಿ ಬಂದರ್ರು ಅವರ್ರು

೨೪ ರಾಮಚಂದ್ರದೇವರ ಮಂಗಳಾರತಿಗೆ ಬಂದು ತಿರುಗಾ ಜಪದ ವಳಕ್ಕೆ ತೆರಳಿದರ್ರು ಪೂರ್ವ ಪ್ರಕಾ

೨೫ ರ್ರ ಜನರ ಉಪಂತಿ (ಜ) ೧೦೦ಕ್ಕೆ ಯಿಂದ್ತಿತ್ತು ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಈ ಚಾರಿತ್ರಿಕ ದಾಖಲೆಯು ಮಠದ ಪತ್ರಾಗಾರದ ಕಟ್ಟು ಸಂಖ್ಯೆ ೪೬ರಲ್ಲಿ (೧೮೧೪ರಲ್ಲಿ ಸ್ಂಗ್ರಹಿಸಿ ಬರೆದ ವಾಲೆಗಳು) ಪತ್ರ ಸಂಖ್ಯೆ ೧೪ರಲ್ಲಿ ಕಂಡುಬಂದಿದೆ. ಗುರುಪೀಠದಲ್ಲಿ ದಾಖಲಿಸಿದ ಈ ಸಂಗತಿಯು ಮಠಗಳ ಧಾರ್ಮಿಕ ಇತಿಹಾಸ ಸಂಶೋಧನೆಯಲ್ಲಿ ಮುಂದಿನ ಪೀಳಿಗೆಗೆ ಆದರ್ಶಪ್ರಾಯವಾಗಿದೆ. ಈ ದಾಖಲೆಯಲ್ಲಿ ಕಂಡು ಬರುವ ಚಿನ್ನಭಂಡಾರದವರು, ಹಲಸನಾಡ ನಾಗಪ್ಪನ ಉಲ್ಲೇಖನವು ಲಿಂಗಣ್ಣ ಕವಿಯ ನೃಪವಿಜಯನದಲ್ಲಿ ಕಂಡುಬಂದಿದೆ. ಈ ದಾಖಲೆಯಲ್ಲಿ ಶಾ. ಶ. ದ ಉಲ್ಲೇಖವಿಲ್ಲದ ಕಾರಣದಿಂದ ಕೆಳದಿ ನೃಪವಿಜಯದ ೧೧ನೇ ಆಶ್ವಾಸದ ಅಂತ್ಯದ ಉಲ್ಲೇಖವೊಂದರಲ್ಲಿರುವ ಶಾ. ಶ. ೧೬೭೭ರ ಭಾವ ಸಂವತ್ಸರದಿಂದ ಈ ದಾಖಲೆಯಲ್ಲಿ ಹೇಳಿದ ಈಶ್ವರ ಸಂವತ್ಸರದವರೆಗೆ ಪರಿಗಣಿಸಿದಲ್ಲಿ ಈಶ್ವರ ಸಂವತ್ಸರವು ಶಾ.ಶ. ೧೬೮೦ಕ್ಕೇ ಸೇರಿದ್ದು. ಕ್ರಿ.ಶ. ೧೭೫೮ಕ್ಕೆ ಸರಿಹೋಗುತ್ತದೆ. ಡಾ. ಎ.ಕೆ. ಶಾಸ್ತ್ರಿಗಳ ಪ್ರಕಾರ ಶೃಂಗೇರಿ ಗುರುಪೀಠದ ೨೮ನೆಯ ಶ್ರೀ ಅಭಿನವ ಸಚ್ಚಿದಾನಂದ ಭಾರತಿ (I) ರ ಕಾಲವೂ ೧೭೪೧ರಿಂದ ೧೭೬೭ರವರೆಗೆ ಇದೆ.[೧೬] ಇದೇ ಚಾರಿತ್ರಿಕ ದಾಖಲೆಯಲ್ಲಿ ಕಂಡು ಬರುವ ಶ್ರೀರಾಮಚಂದ್ರಾಪುರ ಮಠ ಗುರು ಪೀಠದಲ್ಲಿ ೨೮ನೆಯ ಶ್ರೀ ರಾಘವೇಶ್ವರ ಭಾರತೀ ಶ್ರೀಪಾದಂಗಳ (V) ಕಾಲವೂ ಸರಿ ಸುಮಾರಾಗಿ ಹೋಲುತ್ತಿದೆ. ಇದೇ ಸಮಯದಲ್ಲಿ ಕೆಳದಿ ರಾಜಧಾನಿ ಬಿದನೂರಿಗೂ (ಹಳೇನಗರ) ಶೃಂಗೇರಿ ಗುರುಗಳು ಭೇಟಿಯಿತ್ತಿರುವುದೂ ಕಂಡುಬರುತ್ತದೆ. ಜನಸಾಮಾನ್ಯರ ಧಾರ್ಮಿಕಸುಧಾರಣೆಯಲ್ಲಿ ಧಾರ್ಮಿಕ ಗುರುಪೀಠಗಳ ಇಂತಹ ಸಮಾಗಮದ ದಾಖಲೆಯು ಚರಿತ್ರಾರ್ಹವಾಗಿದ್ದು ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಿದೆ. ಸಮಾಗಮ ಜರುಗಿದ ಪುರಾತನ ಉಮಾಪತಿ ದೇವಾಲಯವೂ ಅಪೂರ್ವ ದಶಾವತಾರವನ್ನೊಳಗೊಂಡ ಶಿಲ್ಪ ಕಲಾತ್ಮಕತೆಯನ್ನೊಳಗೊಂಡು, ಕೆಳದಿ ಅರಸರ ಕಾಲದ ಈ ಶಿಲ್ಪ ಕಲಾಸಂಪತ್ತು ಈವರೆಗೂ ಯಾರ ಗಮನಕ್ಕೂ ಬಂದಿರಲಿಲ್ಲ.*[೧೭]

ಶಂಕರರ ಸ್ಥಾಪನೆಯಲ್ಲಿ ಕಂಡುಬರುವ ನಾಲ್ಕು ಮಠಗಳಲ್ಲದೆ ಇತರೆ ಮಠಗಳ ಸಾಲಿನಲ್ಲಿ ಗೋಕರ್ಣ (ಶ್ರೀರಾಮ ಚಂದ್ರಾಪುರ)





ರಘೂತ್ತಮ ಮಠವೂ ಸೇರಿದ್ದು ತಿಗಳಾರಿ ಲಿಪಿ ಕೃತಿಯ "ರಘೂತ್ತಮ ಮಠೋದ್ಧಾರಃ" ಉಲ್ಲೇಖನದಲ್ಲಿ ಕಂಡುಬರುತ್ತದೆ. ದಿ। ಮಂಜೇಶ್ವರ ಗೋವಿಂದ ಪೈ ಹಾಗೂ ಗಣಪತಿರಾವ್ ಐಗಳು ಆದಿಯಾಗಿ ವಿದ್ವಾಂಸರ ಅಭಿಪ್ರಾಯದಂತೆ ಉಡುಪಿ, ತಿರುಪತಿ ಮುಂತಾದೆಡೆಗಳಲ್ಲಿ ಶಂಕರರು ಸ್ಥಾಪಿಸಿದ ಮಠಗಳು ಕಾಲ ವೈಪರೀತ್ಯಗಳಿಂದ ಗೋಚರಕ್ಕೆ ಕಂಡುಬಂದಂತಿಲ್ಲ. ಉಡುಪಿಯಲ್ಲಿ ಕೃಷ್ಣ ಮಂದಿರಕ್ಕಿಂತಲೂ ಪ್ರಾಚೀನವಾದ ಅನಂತೇಶ್ವರ - ಚಂದ್ರಮೌಳೀಶ್ವರ ದೇವಸ್ಥಾನಗಳ ಸನ್ನಿಧಿಯಲ್ಲಿ, ಮಧ್ವಾಚಾರ್ಯರಿಗಿಂತಲೂ ಮುಂಚೆಯೇ ಪ್ರತಿಷ್ಠಿತವಾದ ಕೃಷ್ಣ ಮಠವಿತ್ತೆಂದೂ, ಅದ್ವೈತದ ಪರಂಪರೆಯ ಅಚ್ಯುತ ಪ್ರೇಕ್ಷರು ಮಧ್ವರ ಗುರುಗಳಾಗಿದ್ದರೆಂದೂ ಇತಿಹಾಸವೂ ಸಾರುತ್ತದೆ.[೧೮] ಕ್ರಿ.ಶ. ೧೧೯೮ರಿಂದ ೧೨೭೮ರವರೆಗಿದ್ದ ಶ್ರೀ ಮಧ್ವಾಚಾರ್ಯರು ತಮ್ಮ ೩೭ ಕೃತಿಗಳಲ್ಲಿ ಮಹಾನ್ ದಾರ್ಶನಿಕ ಶಂಕರಾಚಾರ್ಯರನ್ನು ಕುರಿತು "ಶಂಕರ ವಿಜಯ" ಮತ್ತು ಶಂಕರಾಚಾರ್ಯಾವತಾರ ಕಥೆ ರಚಿಸಿದ್ದೂ ವ್ಯಕ್ತಪಡುತ್ತದೆ. ವಿದ್ಯಾತೀರ್ಥರಿಂದ ಪ್ರತಿಷ್ಠಿತವಾದ ಅಷ್ಟಯತಿಗಳೂ ಹಿಂದೆಯೇ ಇದ್ದುದೂ ಹೊಯ್ಸಳರ ಇತಿಹಾಸದಲ್ಲಿ ಉಕ್ತವಾಗಿದೆ.[೧೯]

ಇತಿಹಾಸದ ಶ್ರೀರಾಮಚಂದ್ರಾಪುರ ಮಠ

ಕೆಳದಿ ರಾಜಧಾನಿ (ಬಿದನೂರ ಈಗಿನ ಹಳೇ ನಗರ) ಸಮೀಪವಿರುವ ಶ್ರೀ ರಾಮಚಂದ್ರಾಪುರ ಗುರುಪೀಠ ಧಾರ್ಮಿಕವಾಗಿಯೂ ಐತಿಹಾಸಿಕವಾಗಿಯೂ ಪ್ರಾಮುಖ್ಯತೆ ಪಡೆದಿದೆ. ವಿವಿಧ ಪಂಥಗಳ ಗುರುಪೀಠವನ್ನು ಒಗ್ಗೂಡಿಸಿ ಧರ್ಮ ಪರಿಷತ್ತು ಜರುಗಿದ ಚರಿತ್ರಾರ್ಹ ಸ್ಥಳ. ಆದಿಯಾಗಿ ಇತಿಹಾಸದ ಪತ್ರಾಗಾರದಲ್ಲಿ ಕಂಡುಬಂದಂತೆ ಮಹಾನ್ ಯತಿವರೇಣ್ಯ ಶ್ರೀ ಶ್ರೀಧರ ಸ್ವಾಮಿಗಳು ಶೃಂಗೇರಿ ವಿದ್ಯಾತೀರ್ಥ ಜಗದ್ಗುರುಗಳ ಸಂಗಮ, (೧೯೬೫ರಲ್ಲಿ ವರದ ಪುರದಲ್ಲಿ) ಉಡುಪಿ ಪೇಜಾವರ ಮಠದ ಶ್ರೀಗಳ ಆಹ್ವಾನದಂತೆ[೨೦] ಅದ್ವೈತ-ದ್ವೈತ ಸಂಗಮದ ಸಂಕೇತವಾಗಿ ಉಭಯ ಗುರುಪೀಠಗಳ ಸಂದರ್ಶನ, ಶ್ರೀರಾಮಚಂದ್ರಾಪುರ ಮಠದ ಪತ್ರಾಗಾರದಲ್ಲಿ ಕಂಡುಬರುವಂತೆ[೨೧] ಶೃಂಗೇರಿ ಹಾಗೂ ಶ್ರೀರಾಮಚಂದ್ರಾಪುರ ಗುರುಪೀಠಗಳು ಒಟ್ಟಿಗೆ ಸೇರಿ ಕೆಳದಿ ರಾಜಧಾನಿಯ ಸಮೀಪದಲ್ಲಿರುವ ಜಯನಗರ ಉಮಾಪತಿ ದೇವಾಲಯದಲ್ಲಿ ಭಕ್ತರಿಗೆ ನೀಡಿದ ಸಂದರ್ಶನ ಅಸಾಧಾರಣ ಸಂಗತಿಗಳಾಗಿದ್ದು ಮುಂದಿನ ಭವಿಷ್ಯ ಜನಾಂಗಕ್ಕೆ ಧಾರ್ಮಿಕ ಕ್ರಾಂತಿಯುಂಟು ಮಾಡಬಲ್ಲದು. ಹೊಸನಗರಕ್ಕೆ ಕೇವಲ ಹತ್ತು ಕಿಲೋಮೀಟರ್ ದೂರದಲ್ಲಿರುವ ಈ ದೇವಾಲಯ ಪುರಾತತ್ವ ಕಲಾತ್ಮಕ ದೇಗುಲವಾಗಿದ್ದು, ಇವುಗಳ ಸಾರಸಂಗ್ರಹವನ್ನು ಬಿತ್ತರಿಸಿ, ಜನ ಸಾಮಾನ್ಯರ ಧಾರ್ಮಿಕ ಸುಧಾರಣೆಯಲ್ಲಿ ಜಯನಗರವನ್ನು ಪ್ರವಾಸಿ ಕ್ಷೇತ್ರವನ್ನಾಗಿ ಸರಕಾರ ಹಾಗೂ ಸಮಾಜವು ಮತಭೇದವಿಲ್ಲದೆ ಅಭಿವೃದ್ಧಿ ಪಡಿಸುವುದು ಅತ್ಯಗತ್ಯ ಕರ್ತವ್ಯವಾಗಿದೆ. ಸರ್ವಧರ್ಮ ಸಮನ್ವಯತೆಯಲ್ಲಿ ಇದೊಂದು ಪವಿತ್ರ ಕ್ಷೇತ್ರವಾಗಬಲ್ಲುದು. ಶ್ರೀ ಶಂಕರಾಚಾರ್ಯರನ್ನು ಕುರಿತು. A curious mixture of phylosopher and a scholar, a saint, and tin addition to all this, a practical reformer and an able organisor ಎಂದು ನೆಹರೂ ಉದ್ಗರಿಸಿದಂತೆ, ಈ ಅಂಶಗಳಿಂದ ಕೂಡಿದ ಪೂಜ್ಯ ಶ್ರೀ ರಾಘವೇಶ್ವರ ಭಾರತೀ ಶ್ರೀಪಾದಂಗಳವರ ಮಾರ್ಗದರ್ಶನವು ಮುಂದಿನ ಪೀಳಿಗೆಗೆ ಅಗತ್ಯವಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ : ಪ್ರೊ. ತಾಳ್ತಜೆ ವಂಸತಕುಮಾರ ಪು. ೧೬**
೨. ಇಲ್ಲಿ ಉಕ್ತವಾದ ಕೊಂಕಣಪುರ ಬನವಾಸಿಯಲ್ಲಿ ಇರುವುದಾಗಿ ವಿದ್ವಾಂಸರ ಅಭಿಪ್ರಾಯ: Law B.C. Geography of Early Budhlism
೩. ಮದರಾಸಿನ ಸೆಂಟ್ ಪೋರ್ಟ್ ಜಾರ್ಜ್ ಸಂಗ್ರಹಾಲಯದಲ್ಲಿ ಇಂತಹ ಮಾಹಿತಿಗಳಿವೆ. ಹೀಗೆಯೇ *The Greatness of Sringeri* by T.k. Balasubramanya Aiyar, Srirangam ನಲ್ಲಿಯೂ ಅವಲೋಕಿಸಿಬಹುದು. ಖ್ಯಾತ ವಿದ್ವಾಂಸ ಎಂ. ಎಚ್. ಕೃಷ್ಣರವರ ಮಹಾಪ್ರಬಂಧವು ಅಪ್ರಕಟಿತವಾಗಿದೆ.
೪. ಡಾ. ಎಂ. ಎಂ. ಕಲ್ಬುರ್ಗಿ., **ಕರ್ನಾಟಕದ ಕೈಫಿಯತ್ತುಗಳು**; ಪು. ೧೩೪
೫. *The Truth about the Kumbhakonam Mutt,* part II, K.R. Venkataraman - page 246
೬. ಸ್ವಾತಂತ್ರ್ಯ ಪೂರ್ವದಲ್ಲಿ ಸರಕಾರದಿಂದಲೇ ಕೆಳದಿಯಲ್ಲಿ ನಡೆಸುತ್ತಿದ್ದ ವೇದಪಾಠ ಶಾಲೆಯಲ್ಲಿ 'ತಿಗಳಾರಿ' ಲಿಪಿ ವ್ಯಾಸಂಗವೂ ಇದ್ದು, ಆಗ ಅನೇಕ ವಿದ್ವಾಂಸರು ತರಬೇತಿ ಪಡೆದರು.
೭. ಖ್ಯಾತ ವಿದ್ವಾಂಸ- ಶ್ರೀರಾಮಚಂದ್ರ ಶಾಸ್ತ್ರೀ ಅವರಿಂದ ಪ್ರಕಟಿತ.

೮.ಅ. Dr. John Fryers *Account of India* (London 1873)

೮.ಆ. ನನ್ನ ಈ ಅನ್ವೇಷಣೆ-ಸಂಶೋಧನೆಯನ್ನು, Switzerland Rolex Award (೧೧.೫.೧೯೯೮)ನವರೂ ಗಮನಕ್ಕೆ ತೆಗೆದುಕೊಂಡಿದ್ದಾರೆ.

೯. **ಗುರುಭಾರತೀ.**, (ಸಂ.) ವಿದ್ವಾನ್ ಶ್ರೀ ಶೇಷಾಚಲಶರ್ಮಾ ಮತ್ತು ವಿದ್ವಾನ್ ಕೆ. ಎಸ್. ಭಾಸ್ಕರಭಟ್ಟರ ಲೇಖನ; ಶ್ರೀ ಶಂಕರರ ಅಖಂಡ ಭಾರತ ಯಾತ್ರೆ ಕುರಿತು (ಕ್ರಿ. ಶ. ೮ನೇ ಶತಮಾನದಲ್ಲಿ) ಭಾರತ ನಕ್ಷೆ ಗಮನಿಸಬೇಕು.

೧೦. ೧. ಗೋವಿಂದದೀಕ್ಷಿತರ ಚರಿತ್ರೆಯ ಹಸ್ತಪ್ರತಿ (ಅಪ್ರಕಟಿತ) ದೊರಕಿಸುವಲ್ಲಿ ಶ್ರೀ ಚಿರಂಜೀವಿಸಿಂಗ್ ಐಎಎಸ್, ಅವರು ನನಗೆ ತುಂಬ ಸಹಾಯ ಮಾಡಿದ್ದಾರೆ. ಅವರಿಗೆ ಕೃತಜ್ಞತೆಗಳು, ೨. ವಿಜಯನಗರ ಅಧ್ಯಯನ ಸಂ.೬ ಪು. ೮೪.

೧೧. ಪ್ರಸಾದ ಸಂ. ೧೭, ಸಂ. ೩; ಮಾರ್ಚ್ ಏಪ್ರಿಲ್ ೨೦೦೨ರಲ್ಲಿ "ಪುರಾತನ ಹಸ್ತಪ್ರತಿಯಲ್ಲಿ ಕಂಡುಬರುವ ಉದ್ಧರಣ ಪಟಲಗಳು" ಜೆ. ಎಸ್.ಎಸ್ ಮಹಾವಿದ್ಯಾಪೀಠ, ಮೈಸೂರು.

೧೨. Madhu Kahnna., *The Tantric Symbol of Cosmic Unity,* Thomas & Hindson, B.A.S. Printers Ltd., Cambrindgeshire ಸೋವಿಯತ್ ದೇಶ., ನವೆಂಬರ್ ೧೯೮೪ ಸಂ. ನಂ. ೨೧ ಮತ್ತು *Span* May, June 2002 - Washington ಬೌದ್ಧ ಭಿಕ್ಷುಕ ಲಾಮಾಗಳು ಇದನ್ನು ತೀವ್ರವಾಗಿ ಗಮನಿಸುತ್ತಿರುವ ಚಿತ್ರ ನೋಡಿರಿ.

೧೩. *The Truth about the Kumbhakonam mutt.,* 1963, pt II K.R. Venkataraman., Madras

೧೪. ವಿಜಯನಗರ ರಾಯರೇಖೆ"ಯ ಹಸ್ತಪ್ರತಿಯೊಂದೂ (ಅಪ್ರಕಟಿತ) ಲಭಿಸಿದ್ದು, ಈ ಕುರಿತು ಅಧ್ಯಯನ ನಡೆಸಿರುವೆನು; ಇದನ್ನು ಪಡೆಯುವಲ್ಲಿ ಶ್ರೀ ಚಿರಂಜೀವಿ ಸಿಂಗ್ ರವರ ಸಹಾಯವನ್ನು ಮರೆಯುವಂತಿಲ್ಲ; (**ಮರೆಯಲಾಗದ ಮಹಾಸಾಮ್ರಾಜ್ಯ** ಬಿ. ಸೂರ್ಯ ನಾರಾಯಣರಾವ್, ಕನ್ನಡ ವಿಶ್ವವಿದ್ಯಾನಿಲಯ ಪು. ೩೬೧.

೧೫. ನಾನು ಹಸ್ತಪ್ರತಿ ಸಿದ್ಧಪಡಿಸಿರುವೆನು.

೧೬. *A History of Sringeri* : Appendix III.

೧೭. ಕೆಳದಿ ಅರಸರ ಕಾಲದ ಈ ದೇವಾಲಯದ ಫೋಟೋ ಬಗ್ಗೆ ನೋಡಿರಿ.


೧೮. ಕಡವ ಶಂಭುಶರ್ಮಾ., ೧೯೭೦, ತುಳುದೇಶ ಭಾಷಾ ವಿಚಾರವು (ಪುತ್ತೂರು), ಪು. ೩೬.

೧೯. *Anfrechis Catalogue catalogorum* pts 1,2,3 leipzing pt I p.46 (studies in Tuluva History by Dr. Gururaj Bhat.

೨೦. ಕ್ರಿ.ಶ. ೧೮೪೧ರಂದು ಪೇಜಾವರ ಶ್ರೀಗಳು ಶೃಂಗೇರಿ ಶ್ರೀಗಳಿಗೆ ಆಹ್ವಾನವಿತ್ತು ಒಟ್ಟಿಗೇ ಕಲೆತುದುದರ ಚಾರಿತ್ರಿಕ ದಾಖಲೆಯ ಗಮನಾರ್ಹ ಪತ್ರವೊಂದು ಕಂಡುಬಂದಿದೆ (**ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ : ಅಧ್ಯಯನ ಸಂಶೋಧನೆ.** ಡಾ. ವಸಂತಮಾಧವ. ೧೯೯೮, ಪು. ೭೦).

೨೧. ಅನುಬಂಧ ನೋಡಿರಿ (ಚಾರಿತ್ರಿಕ ದಾಖಲೆಯ ಛಾಯಾಚಿತ್ರ).

ಅನುಬಂಧ



ವಿಶ್ವನಾಥ ಎಸ್. ಶೇಟ್*

ಶ್ರೀ ರಾಮಚಂದ್ರಾಪುರ ಮಠ: ಬಿಳಗಿ ಸೀಮೆಯಲ್ಲಿ ಅದರ ಕಾಲುಮಠಗಳು

ಮಲೆನಾಡನ್ನೊಳಗೊಂಡು ಪಶ್ಚಿಮ ಕರಾವಳಿಯ ಉದ್ದಕ್ಕೂ ೨೬೫ ವರ್ಷಗಳವರೆಗೆ ಆಳಿದ ಕೆಳದಿ ಅರಸರ ನಾಡಿನಲ್ಲಿರುವ ಶ್ರೀರಾಮಚಂದ್ರಾಪುರ ಮಠ ಈ ರಾಜ್ಯಾಳ್ವಿಕೆಯ ಹೊರಗೂ ಕಾಲು ಮಠಗಳನ್ನು ಹೊಂದಿ ಧಾರ್ಮಿಕ ಸಾಂಸ್ಕೃತಿಕ ಶೈಕ್ಷಣಿಕ ಪ್ರಸಾರದ ಧ್ಯೇಯೋದ್ದೇಶದಿಂದ ಸಮಾಜದ ಹಿತ ಚಿಂತನೆ ಮಾಡಿದೆ.

ಬ್ರಹ್ಮರ್ಷಿ ಅಗಸ್ತ್ಯರಿಂದ ಅರ್ಚಿಸಲ್ಪಟ್ಟು ಶ್ರೀವರದ ಮುನಿಗಳಿಗೆ ಅನುಗ್ರಹಿಸಲ್ಪಟ್ಟ ಶ್ರೀ ಪಟ್ಟಾಭಿರಾಮ, ಸೀತೆ, ಲಕ್ಷ್ಮಣ ಶ್ರೀ ತಪೋರಾಮ, ಸೀತೆ, ಲಕ್ಷ್ಮಣ ಹೀಗೆ ಆರು ಮೂರ್ತಿಗಳನ್ನು ಶ್ರೀ ಶಂಕರ ಭಗವತ್ಪಾದರಿಗೆ ಅರ್ಪಿಸಿದರೆನ್ನುವ ಕಥಾ ಪರಂಪರೆ ಇದೆ. ಹಾಗೂ ತಾವು ಅರ್ಚನೆ ಮಾಡುತ್ತಿರುವ ಚಂದ್ರಮೌಳೀಶ್ವರ ದಿವ್ಯಲಿಂಗವನ್ನು ಶ್ರೀ ಗೋಕರ್ಣಕ್ಷೇತ್ರದ ಸಮೀಪವಿರುವ "ಅಶೋಕ" ಎಂಬ ಸ್ಥಳದಲ್ಲಿ ನೂತನವಾಗಿ ಮಠ ಒಂದನ್ನು ನಿರ್ಮಾಣಮಾಡಿಸಿ ಅದಕ್ಕೆ "ಶ್ರೀ ರಘೋತ್ತಮ" ಎಂದು ನಾಮಕರಣ ಮಾಡಿ ಅವಿಚ್ಛಿನ್ನವಾಗಿ ಪೂಜೆ ನಡೆಯುವಂತೆ ವ್ಯವಸ್ಥೆಮಾಡಿದರು. ಹಾಗೂ ತಮ್ಮ ಶಿಷ್ಯರಾದ ಸುರೇಶ್ವರರಿಂದ ಸಂನ್ಯಾಸ ದೀಕ್ಷಿತರಾದ ಶ್ರೀ ವಿದ್ಯಾನಂದಾಚಾರ್ಯರನ್ನು ಗೋಕರ್ಣ ಮಂಡಲದ ಪ್ರಥಮ ಆಚಾರ್ಯರನ್ನಾಗಿ ನಿಯೋಜಿಸಿದರು. (ಹವ್ಯಕರ.ಗುರು ಪೀಠ, ಪುಟ ೨೧೦ಲೇಖಕ ವಿದ್ವಾನ್ ಶ್ರೀ ಎಂ. ಆರ್. ದತ್ತಾತ್ರೇಯ ೨೦೦೧)

ಇಲ್ಲಿಂದ ೧೧ನೆಯವರಾದ ಶ್ರೀ ರಾಘವೇಶ್ವರ ಭಾರತೀಯವರಿಗೆ ಈರ್ವರು ಶಿಷ್ಯರಿದ್ದು ಉಭಯತ್ರರು ಎರಡು ಮಠಗಳ ನಿರ್ಮಾಪಕರಾದರು. ಇವರಲ್ಲಿ ಶ್ರೀರಾಮಚಂದ್ರ ಭಾರತಿಗಳು ಈ ರಾಮಚಂದ್ರಾಪುರಮಠವನ್ನು ಸ್ಥಾಪಿಸಿದರು. ಕ್ರಿ.ಶ. ೧೫೦೦ರ ಸುಮಾರಿನಲ್ಲಿ ಕೆಳದಿ ಸಂಸ್ಥಾನವೂ ಇದೇ ಅವಧಿಯಲ್ಲಿ ರೂಪುಗೊಂಡಿರುವುದು ಗಮನಾರ್ಹ.

ಶ್ರೀರಾಘವೇಂದ್ರ ಭಾರತಿಯವರ ಕಿರಿಯ ಶಿಷ್ಯರಾದ ಶ್ರೀ ರಘೋತ್ತಮ ಭಾರತಿಗಳು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕೆಕ್ಕಾರು ಗ್ರಾಮದಲ್ಲಿ ತಮ್ಮ ಹೆಸರಿನಿಂದ ಶ್ರೀ ರಘೋತ್ತಮ ಮಠ ಸ್ಥಾಪಿಸಿದರು. ಶ್ರೀ ರಘೋತ್ತಮ ಮಠ ೧೩ ತಲೆಮಾರುಗಳ ತನಕ ಮುಂದುವರೆದು ನಂತರ ಶ್ರೀ ರಾಮಚಂದ್ರಾಪುರ ಮಠದ ೩೧ನೆಯ ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳ ಆಡಳಿತಕ್ಕೆ ಒಳಪಟ್ಟಿತು. ತುಂಗಾತೀರದಲ್ಲಿರುವ ತೀರ್ಥಹಳ್ಳಿ ಮಠವು ಹವ್ಯಕ ಪೀಠದ ೩೨ನೆಯ ಗುರುಗಳಾದ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳವರ ಕಾಲದಲ್ಲಿ ಪ್ರಧಾನ ಮಠದೊಳಗೆ ವಿಲೀನವಾಯಿತು. ಹೀಗೆ ಹವ್ಯಕರ ಪ್ರಧಾನ ಮಠವಾದ ರಾಮಚಂದ್ರಾಪುರ ಮಠಕ್ಕೆ ಗುರುಪೀಠಾಧೀನ ಸುಮಾರು ೪೦ ಮಠಗಳಿವೆ ಎಂದು ತಿಳಿದು ಬರುತ್ತದೆ. (ಹ. ಗು. ಪೀಠಂ.ಲ.)

ಶ್ರೀರಾಮಚಂದ್ರಾಪುರ ಮಠವು ೧೨ ಎಕರೆ ಕ್ಷೇತ್ರ ವಸತಿ ನಿಮಿತ್ತ ಮಾತ್ರ ಹೊಂದಿದೆ.

ಉತ್ತಮ ಅಡಿಕೆ ತೋಟ ೧೦ ಎಕರೆ; ಬತ್ತಬೆಳೆಯುವ ಗದ್ದೆ ೨೪ ಎಕರೆ;
ತೆಂಗು ಬೆಳೆಯುವ ಕ್ಷೇತ್ರ ೧೧ ಎಕರೆ; ಖುಷ್ಕಿ ಜಮೀನು ೨೧ ಎಕರೆ;
= ಒಟ್ಟು ೬೬ ಎಕರೆ

ಈ ಮಠವು ನಾಡಿನ ಹಲವು ಸ್ತರದ ಭಕ್ತರನ್ನು ಹೊಂದಿದ್ದು ವಿಶೇಷ ಪೂಜೋತ್ಸವದಲ್ಲಿ ಹವ್ಯಕರು ಹಾಗೂ ಹವ್ಯಕೇತರರೂ ಸೇರಿ ಸೇವೆಸಲ್ಲಿಸಿ ತಮ್ಮ ಶ್ರದ್ಧೆಯನ್ನು ವ್ಯಕ್ತಪಡಿಸಿ ಗುರುಗಳಾಶಿರ್ವಾದ ಪಡೆದು ಮರಳುತ್ತಾರೆ. ಸಂಸ್ಕೃತಿ, ನೀತಿ ಶಿಕ್ಷಣ, ಪುರಾಣ ಕಾವ್ಯ ಪಠನ, ಭಾಷೆ, ತರ್ಕವ್ಯಾಕರಣ ಗಣಿತ ನಾಡಪದ್ಧತಿಯಲ್ಲಿ ರೋಗಿ ಚಿಕಿತ್ಸೆ, ಗೋರಕ್ಷಣೆ. ಕೃಷಿ ಇತ್ಯಾದಿ ಪರಿಜ್ಞಾನ ನೀಡುತ್ತ ಮಠ ಅಗ್ರಹಾರಗಳು ಸಮಾಜ ಸಂಸ್ಕೃತಿಯ ಬೆನ್ನೆಲುಬಾಗಿದ್ದವು. ಕಾರಣ ಮಠ ಅಗ್ರಹಾರಗಳಿಗೆ ಅವುಗಳ ಬೆಳವಣಿಗೆಗೆ ಪೋಷಣೆಗೆ ಅರಸರುಗಳ ದತ್ತಿದಾನಗಳೂ ಗಣನೀಯವಾಗಿರುತ್ತಿತ್ತು. ಉದಾಹರಣೆಗೆ - ೧೭೪೮ರಲ್ಲಿ ಮೈಸೂರು ದೊರೆ ಆಸ್ಥಾನದ ದಳವಾಯಿ ದೇವರಾಯ ಶ್ರೀ ರಾಮಚಂದ್ರಾಪುರ ಮಠಕ್ಕೆ ೧೨೦ ಜನ ವೇದಾಂತ ವಿದ್ವಾಂಸರನ್ನು ಸಕಲ ವ್ಯವಸ್ಥೆಯೊಂದಿಗೆ ಅಗ್ರಹಾರ ನಿರ್ಮಿಸಿ ಬೃಹತ್ ವಿದ್ಯಾಲಯಕ್ಕೆ ಸಹಾಯಕನಾಗಿದ್ದನೆಂದು (ವಿ.ಕೊ. ಸಂ. ೪ ಪುಟ ೧೪೩ರಲ್ಲಿ) ಉಲ್ಲೇಖವಿದೆ. ಮುಂದೆ ೧೮೦೭ರಲ್ಲಿ ಯಳಂದೂರು ಪೂರ್ಣಯ್ಯನಿಗೆ ಅದರ ಜಹಗೀರಿಯನ್ನು ಕೊಟ್ಟನಂತರ ಅನುದಾನ ಸ್ಥಗಿತವಾಗಿ ತೊಂದರೆಗೆ ಒಳಗಾಯಿತೆಂದು ತಿಳಿದುಬರುತ್ತದೆ. ಮುಂದೆ ಕಂಪನಿ ಸರಕಾರಗಳ ಆಡಳಿತೆಯಲ್ಲಿ ಈ ಶಿಕ್ಷಣ ಕೇಂದ್ರಗಳನ್ನು ನಡೆಸಲಾಗದೆ ಕೇವಲ ಧಾರ್ಮಿಕ ಶ್ರದ್ಧಾಕೇಂದ್ರಗಳಾಗಿ ಮಾತ್ರ ಉಳಿದವು ಎಂದು ಡಾ|| ಸಾ.ಶಿ. ಮರುಳಯ್ಯನವರ ಕೆಳದಿ ಕನ್ನಡ ಸಾಹಿತ್ಯ

* ಹಾಸಿಕಟ್ಟಾ ಅಂಚೆ, ಸಿದ್ದಾಪುರ ತಾ. ಉತ್ತರಕನ್ನಡ ಜಿಲ್ಲೆ - ೫೮೧ ೩೫೫

ಇತಿಹಾಸದಲ್ಲಿ ನಮೂದನೆ ಇದೆ. ಹಾಗೂ ಕರ್ನಾಟಕ ಶಿಕ್ಷಣ ಇತಿಹಾಸದಲ್ಲಿಯೂ ಹೇಳಿದೆ. ರಾಮಚಂದ್ರಾಪುರಮಠವು ಶ್ರೀ ಶಂಕರ ಭಗವತ್ಪಾದರ ಪಾರಮಾರ್ಥಿಕ ಚಿಂತನೆಯನ್ನ ಹೆಚ್ಚು ಸಾಧಿಸಿದೆ ಎಂದು, ಪಾರಂಪರಿಕ ಶ್ರದ್ಧೆ ಇದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಬಿಳಗಿ ಆಳರಸರ ಕ್ಷೇತ್ರದಲ್ಲಿ ಶ್ರೀರಾಮಚಂದ್ರಾಪುರದ ಕಾಲುಮಠಗಳು ಮೂಲದಲ್ಲಿ ಮೇಲಿನ ಸಂಗತಿಗಳನ್ನೆ ತಿಳಿಸುತ್ತವೆ.

ಬಿಳಗಿ ಅರಸರು ಐಸೂರು ಮೂಲದಿಂದ ಪ್ರಾರಂಭಿಸಿ (ಅಂಡಣ್ಣ ಮೂಲಪುರುಷ ೧೪೫೦ರ ಸುಮಾರು) ಬಿಳಗಿಯಲ್ಲಿ ನೆಲೆಯಾಗಿ ಸುಮಾರು ೩೦೦ ವರ್ಷಗಳಷ್ಟು ಕಾಲ ಆಳ್ವಿಕೆ ನಡೆಸಿರುವರು. *ಬಿಳಗಿ ಅರಸರ ವಂಶಾವಳಿ* ಎಂಬ ಕಾವ್ಯ ಕೃತಿಯಿಂದ ತಿಳಿದು ಬರುತ್ತದೆ. ೧೬೫೦ರ ನಂತರ ಕೆಳದಿ ಅರಸರ ಅಧೀನರಾಗಿದ್ದರೆಂದು ಕೆಳದಿ ಇತಿಹಾಸ ಚರಿತ್ರೆಯಿಂದ ಮನನ ವಾಗುತ್ತದೆ. ಇವರ ಆಡಳಿತೆ ಈಗಿನ ಸಿದ್ಧಾಪುರ ತಾಲೂಕಿನ ಹಲವು ಭಾಗ ಹಾಗೂ ತಾಳುಗುಪ್ಪದವರೆಗೆ ಇತ್ತೆಂದು ಕೆಲವು ಶಾಸನಾಧಾರಗಳಿವೆ. ಈ ರಾಜರುಗಳ ಚರಿತ್ರೆಯಲ್ಲಿ ಬಾನ್ಕುಳಿ, ಕ್ಯಾದಗಿ, ಬಿದ್ರಕಾನು, ಕೊಂಬಿನಮಠ ಇತ್ಯಾದಿಗಳ ಉಲ್ಲೇಖ ವಿರುವುದಿಲ್ಲ. ಹಾಗಾಗಿ ಇಲ್ಲಿ ಹೆಸರಿಸಿದ ಮಠಗಳು ಬಿಳಗಿ ಅರಸರಾಡಳಿತ ಕೊನೆಗೊಂಡ ನಂತರವೇ ರೂಪಗೊಂಡಿರ ಬೇಕೆಂದು ಊಹಿಸ ಬೇಕಾಗುತ್ತದೆ.

ಬಾನ್ಕುಳಿ ಮಠವು ಸಿದ್ಧಾಪುರ ತಾಲೂಕಿನ ಕೇಂದ್ರದಿಂದ ಕುಮಟಾ ರಸ್ತೆಯ ೪ ಕಿ.ಮಿ. ಅಂತರದಲ್ಲಿ ಇರುತ್ತದೆ. ಹೆದ್ದಾರಿಯಿಂದ ೧೫ ಕಿ.ಮೀ ಒಳಗಡೆ ಬಲಕ್ಕೆ ಹೋದರೆ ಕಾಣುವದೇ ಬಾನ್ಕುಳಿಮಠ. ಈ ಮಠವು ಉತ್ತಮ ಗರ್ಭಗುಡಿ ಹೊಂದಿದ್ದು ನೂರಾರು ವಿದ್ಯಾರ್ಥಿಗಳಿಗೆ ಆಶ್ರಯಿಸಿರಲು ಇಮಾರತನ್ನು ಹೊಂದಿದೆ. ೧೯೫೪ನೇ ಫೆಬ್ರವರಿಯಲ್ಲಿ ಇದು ಶ್ರೀರಾಮ ಚಂದ್ರಾಪುರಂ ಮಠದಲ್ಲಿ ವಿಲೀನವಾಯಿತು. ಈಗ ಇದರ ಆಸ್ತಿ ವಿವರಗಳೆಂದರೆ ನೂರಾರು ವಿದ್ಯಾರ್ಥಿಗಳು ಹಾಗೂ ಭಕ್ತ ಮಂಡಳಿಯವರ ಕಾರ್ಯ ಚಟುವಟಿಕೆಗೆ ಅನುಕೂಲವಾಗುವ ದೊಡ್ಡದಾದ ಸ್ವತಂತ್ರ ಇಮಾರತನ್ನು ಹೊಂದಿದೆ. ವಿಶಾಲವಾದ ಸಭಾಂಗಣ ಹೊಂದಿದೆ. ಈ ಮಠಕ್ಕೆ ಅಡಿಕೆ ತೋಟ - ೫ ಎಕರೆ, ಬತ್ತ ಬೆಳೆಯುವ ಗದ್ದೆ ೨೦ ಎಕರೆ, ತೆಂಗಿನ ಮರಗಳ ಸಂಖ್ಯೆ ೧೦೦ ಕ್ಕಿಂತಲೂ ಹೆಚ್ಚಿವೆ. ಹಾಗೂ ನವೀನವಾಗಿ ಕೃಷಿ ನಡೆಯುತ್ತಿದೆ. ಒಟ್ಟು ವಿಸ್ತೀರ್ಣ ೨೫ ಎಕರೆಗಳಷ್ಟಿದೆ.

ಮಠದಲ್ಲಿ ಆದರಾತಿಥ್ಯ ಸತ್ಕಾರ; ನಡೆದುಕೊಂಡು ಬಂದಿದೆ. ಉತ್ತಮ ಆಡಳಿತ ಮಂಡಳಿ ಹಾಗು ವಿವಿಧ ಕಮಿಟಿಗಳು ಇವೆ. ಮಠದ ಅಭಿವೃದ್ದಿಗೆ ಶ್ರೀ ರಾಮಚಂದ್ರಾಪುರ ಮಠದ ಗುರುಗಳಾ ದೇಶದಂತೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಚಿಂತನಾತ್ಮಕ ಪ್ರಗತಿಪರ ಕಾರ್ಯಕ್ರಮಗಳನ್ನು ನಿರ್ವಹಿಸಿ ಅವು ಮಠದ ಶ್ರೇಯಸ್ಸಿಗೆ ಭಾಜಕವಾಗಿವೆ. ಬಾನ್ಕುಳಿ ಮಠದ ಆವಾರದಲ್ಲಿ ೮ ಯತಿಗಳ ಸಮಾಧಿಗಳಿರುತ್ತಿದ್ದು ಅವರ ಕಾಲಮಾನ ತಿಳಿದು ಬರುತ್ತಿಲ್ಲ.

ಆರಾಧನೆಯ ದೇವತಾ ಮೂರ್ತಿಗಳು ಹಾಗೂ ಉತ್ಸವಗಳು : ಶ್ರೀರಾಮ ಸೀತಾ ಲಕ್ಷ್ಮಣ ಪಟ್ಟಾಭಿರಾಮ, ನಟರಾಜ, ಹಾಗೂ ಲಕ್ಷ್ಮೀನಾರಾಯಣ, ಲಕ್ಷ್ಮೀನರಸಿಂಹ ರಾಜರಾಜೇಶ್ವರಿ, ವರದರಾಜ, ಸಾಲಿಗ್ರಾಮ ಇತ್ಯಾದಿಗಳು ೩ ಅಂತಸ್ತಿನ ಸಿಂಹಪೀಠದಲ್ಲಿ ವಿರಾಜಮಾನವಾಗಿವೆ. ನಿತ್ಯಪೂಜೆ ಹಾಗೂ ಯಾವುದೇ ಭಕ್ತರು ಅಪೇಕ್ಷೆ ಪಟ್ಟರೆ ಸಂಕಟ ಪರಿಹಾರಾರ್ಥ ವಿಶೇಷ ಪೂಜೆ, ಪಾರಾಯಣ ವ್ರತಾದಿಗಳನ್ನು ನಡೆಸುವ ಹಾಗೂ ಪ್ರಸಾದ ಕಳಿಸುವ ವ್ಯವಸ್ಥೆ ಇದೆ. ಆಡಳಿತಮಂಡಲಿ ಪಾಠ ಪ್ರವಚನ ಸಾಮೂಹಿಕ ಉಪನಯನ ಕಲ್ಯಾಣ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ನವರಾತ್ರಿ ಪೂಜೆ ಶ್ರೀರಾಮಜಯಂತೀ (ಚೈತ್ರ ಶುದ್ಧ ನವಮಿ)ಯಂದು ವರ್ಷಂಪ್ರತಿ ವಿಜೃಂಭಣೆಯಿಂದ ಪೂಜೋತ್ಸವ ಹಾಗೂ ಸಾಂಸತಿಕ ಕಾರ್ಯಕ್ರಮಗಳೂ ನಡೆಯುತ್ತಿವೆ.

ಕ್ಯಾದಗಿಮಠ : ಇದು ಬಾನ್ಕುಳಿಮಠದ ಅಧೀನ ಮಠವಾಗಿರುತ್ತದೆ. ಸಿದ್ಧಾಪುರ ಕುಮಟಾ ಹೆದ್ದಾರಿಯಲ್ಲಿ ಇರುತ್ತದೆ. ಇಲ್ಲಿ ನಿಯಮಿತ ಯತಿಗಳಿರುವದಿಲ್ಲ. ಹಿಂದೆ ಹೇಳಿಕೆಯ ಇತಿಹಾಸದಂತೆ ೧೫೦ ವರ್ಷಗಳಷ್ಟು ಪೂರ್ವದಲ್ಲಿ ಮಠ ಸ್ಥಾಪನೆಯಾಗಿ ಶೈಕ್ಷಣಿಕ ಧಾರ್ಮಿಕ ಕಾರ್ಯನಿರತವಾಗಿರುವದೆಂದು ತಿಳಿದು ಬರುತ್ತದೆ. ಇಲ್ಲಿಯೂ ಶ್ರೀ ಶಂಕರ ಭಗವತ್ಪಾದರಿಂದ ರೂಪಗೊಂಡ ಪರಂಪರೆಯಂತೆ ಗಂಗಾ, ವಿಶ್ವೇಶ್ವರ, ಸೂರ್ಯ, ಗಣಪತಿ, ಅಂಬಿಕಾ, ಶಿವ, ಅಲ್ಲದೆ ಇಂದ್ರಾಣಿ, ದೇವಿ, ವಾಸುದೇವ ಸಾಲಿಗ್ರಾಮ, ನರಸಿಂಹ ಸಾಲಿಗ್ರಾಮ ಪೂಜೆ ನಿತ್ಯ ನಡೆಯುತ್ತದೆ. ಇಲ್ಲಿ ಮಠದ ಅರ್ಚಕರು ಆ ಭಾಗದ ಪೌರೋಹಿತ್ಯದ ಹೊಣೆ ಹೊಂದಿದವರಿರುತ್ತಾರೆ. ಮಠವು ಪಾಠಶಾಲೆಯಿಂದ ಪ್ರಾರಂಭ ಗೊಂಡಿತೆನ್ನಲಾಗಿದೆ.

ಕ್ಯಾದಗಿಯ ಮೂಲ ಮಠವು ಭವಂತಿ ಮನೆಯಾಗಿತ್ತು. ಮಣ್ಣುಕಟ್ಟಿಗೆ ಇಮಾರತು ಆಗಿದ್ದು ೧೯೬೬ರ ಅವಧಿಯಲ್ಲಿ ಜೀರ್ಣಗೊಂಡು ಮಠ ಕುಸಿಯಿತು. ನಂತರ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳು ದೇವರ ಪೀಠ ಮೂರ್ತಿಪೂಜಾ ಉಸ್ತುವಾರಿಯನ್ನು ನೋಡಿ ಕೊಳ್ಳುವಂತೆ ಈಗಿನ ಶ್ರೀ ಗಣಪತಿದೇವರು ಭಟ್ಟರ ಮನೆಯ ಹಿರಿಯರಿಗೆ ನಿರ್ದೇಶಿಸಿದಂತೆ ಪೂಜೆ ನಡೆಯುತ್ತಿದೆ. ಊರ ಹವ್ಯಕ ಭಕ್ತ ಮಂಡಳಿಯವರು ಸೇರಿ ಹಿಂದಿನಿಂದ ನಡೆದು ಬಂದಂತೆ ನವರಾತ್ರಿ ಉತ್ಸವವನ್ನು ನವರಾತ್ರಾರಂಭದಿಂದ ಕಾರ್ತಿಕ ಶುದ್ಧ ಚವತಿಯವರೆಗೆ ಪ್ರತಿದಿನ ಗ್ರಾಮಸ್ಥರ ಸರದಿಯಂತೆ ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ಆ ಸಮಯದಲ್ಲಿ ಸುವಾಸಿನಿಯರಿಗೆ ಬಾಗಿನ ನೀಡಿ ಗೌರವಿಸುವುವ ಸಂಪ್ರದಾಯ ನಡೆದು ಬಂದಿದೆ.

ನವರಾತ್ರಿಯಲ್ಲಿ ದೇವಿಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಪಕ್ಕದ ಗಣಪತಿ ದೇವಾಲಯದವರೆಗೆ ಮೆರವಣಿಗೆ ನಡೆಯುತ್ತದೆ. ದೇವರ ಗರ್ಭಗುಡಿಯಲ್ಲಿ ಉಪನೀತರಾಗದವರಿಗೆ ಸ್ತ್ರೀಯರಿಗೆ ಪ್ರವೇಶವಿಲ್ಲ ಎಂದು ಆ ಕ್ಷೇತ್ರಕ್ಕೆ ಹೋದಾಗ ತಿಳಿಯಿತು. ಈಗ ಈ ಮಠಕ್ಕೆಂದು ಅರ್ಚಕರ ಕುಟುಂಬಕ್ಕೆ ಉಳಿದಿರುವ ಜಮೀನು, ಬಾಗಾಯತು ೧ ಎಕರೆ, ೧೭ ಗುಂಟೆ ಖುಷ್ಕಿ ಜಮೀನು, ೨ ಎಕರೆ ಒಂಗುಂಟೆ ಭೂಮಿ ಇರುತ್ತದೆ. ಇನ್ನೂ ಕೆಲವು ಭೂಮಿ ಮೂಲಗೇಣಿ ಚೌಲಗೇಣಿ ರೂಪದಲ್ಲಿ ರೈತರಲ್ಲಿಯೇ ಉಳಿದಿರುವುದಾಗಿ ತಿಳಿದುಬರುತ್ತದೆ. ಹಾಗೆಂದು ಮಠದ ಆಸ್ತಿ ವಿವರಗಳ ಬಗೆಗಾಗಲಿ ಯಾವುದೇ ಚಟುವಟಿಕೆ ಬಗೆಗಾಗಲಿ ಕಾಗದ ಪತ್ರಗಳು ಲೇಖನಗಳಾಗಲಿ ಲಭ್ಯವಿಲ್ಲ.

ಬಿದರಕಾನುಮಠ ; ಹವ್ಯಕ ಗುರುಪೀಠದ ಗುರು ಪರಪಂರೆಯಲ್ಲಿ ೧೬ನೆಯವರಾದ ಶ್ರೀ ಅನಂತೇಂದ್ರ ಭಾರತೀ ಸ್ವಾಮಿಗಳವರಿಂದ ಸ್ಥಾಪಿತವಾಯಿತೆನ್ನುವದಾಗೀ ಶ್ರೀ ಹವ್ಯಕ ಗುರುಪೀಠಂ ಪುಸ್ತಕದಲ್ಲಿ ನಮೂದನೆ ಇರುತ್ತದೆ. ಈ ಮಠದ ಇಮಾರತು ಬಿದ್ದು ಹೋಗಿ ನೂರಾರು ವರ್ಷಗಳೆ ಕಳೆದಿವೆ. ಮಠವಿರುವ ಕುರುಹು ಮಾತ್ರ ಕಾಣುತ್ತದೆ. ವಿವರಣೆಯನ್ನು ಬಿದ್ರಕಾನ ಮಟದ ಭಟ್ಟರ ಮನೆಯವರಿಂದ ಪಡೆಯಬಹುದು. ಒಂದು ಎಕರೆಯಷ್ಟು ವಿಸ್ತೀರ್ಣದಲ್ಲಿ ಸರ್ವಋತು ನೀರು ತುಂಬಿರುವ ಕೆರೆಯೊಂದಿದೆ. ಮಠದ ಪೂಜಾ ಕಾರ್ಯಕ್ರಮ ನಡೆಸಿಕೊಂಡು ಹೋಗುವ ಭಟ್ಟರಿಗೆ ಕನ್ಯಾದಾನ ಮಾಡಿಕೊಡುವಾಗ ಮುಂಡೂಸರ ಸಣ್ಣಪ್ಪ ಹೆಗಡೆಯವರು ಸುಮಾರು ೩೦೦ ವರ್ಷಗಳ ಹಿಂದೆ ೪ ಎಕರೆ ಬಾಗಾಯತು, ೨ ಎಕರೆ ಗದ್ದೆಯನ್ನು ನೀಡಿ ಮಠಕ್ಕೆ ಸಹಕಾರ ಮಾಡಿದ್ದರು ಎನ್ನುವುದು ಪರಂಪರಾಗತವೆ ವಿನಹ ಅಧಿಕೃತ ಎನ್ನಬಹುದಾದ ಯಾವದೇ ಶಾಸನ ಲೇಖನಗಳು ದೊರೆಯುತ್ತಿಲ್ಲ. ಮಠದ ಅಂಗವಾಗಿ ನವರಾತ್ರಿ ಉತ್ಸವ ನಡೆಯುವದೆಂದು ಭಟ್ಟರ ಮನೆಯವರಿಂದ ತಿಳಿದು ಬರುತ್ತದೆ. ಈ ನವರಾತ್ರಾ ಉತ್ಸವಗಳಲ್ಲಿ ಶಾರದಾ ಪೂಜೆ ಪಾಠಾಧ್ಯಯನ ನಡೆಯುತ್ತಿದೆ. **ಕೊಂಬಿನ ಮಠ:** ಈ ಮಠ ಸಿದ್ಧಾಪುರ ತಾಲೂಕಿನ ಹೇಮಗಾರ ಹಾಗೂ ಕಸಗೆ ಊರ ಗಡಿಯಲ್ಲಿತ್ತೆಂದು ಉಲ್ಲೇಖ ಮಾತ್ರ ಇದೆ. ಈಗ ಈ ಊರ ಹೆಸರು ಕೊಂಬಿಕ್ಕೈ ಎಂದು ಕರೆಯುತ್ತಾರೆ. ಸುತ್ತ ಎತ್ತರ ಗುಡ್ಡಗಳಿದ್ದು ಮಧ್ಯ ಗದ್ದೆ ಬಾಗಾಯತನ್ನು ಹೊಂದಿದ ಊರಿದು.

ವಿಶೇಷವೆಂದರೆ ದಳವಾಯಿ ದೇವರಾಯರ ಕೊಡುಗೆಯಿಂದಾಗಿ ಶ್ರೀರಾಮಚಂದ್ರಾಪುರ ಮಠವು ಅನೇಕ ವಿದ್ವಾಂಸರನ್ನು ಸಮಾಜಕ್ಕೆ ನೀಡಿದೆ. ಮುಂದೆ ೧೮೦೭ರ ನಂತರ ಅನುದಾನ ಸ್ಥಗಿತಗೊಂಡು ಜೀವನಾನುಕೂಲಕ್ಕೂ ಹೆಣಗಾಡುತ್ತಿದೆ ಎಂದೆನ್ನಿಸುತ್ತದೆ. ಇಲ್ಲಿ ಸಿದ್ಧರಾದ ವಿದ್ವಾಂಸರುಗಳೇ ಅನೇಕ ಕಡೆ ಪಾಠ ಪ್ರವಚನ ವೈದಿಕ ಕಾಯಕ ಪ್ರವೃತ್ತರಾಗಿ ಮಠ ಮನೆಗಳಲ್ಲಿ ಸೇವೆಸಲ್ಲಿಸಿದ್ದು ತಿಳಿದು ಬರುತ್ತದೆ. ಆ ಕಾಲದಲ್ಲಿ ಸ್ಥಾನಿಕ ಶಿಕ್ಷಣ ಪ್ರೇಮಿಗಳ ಹಾಗೂ ದಾನಿಗಳ ಆಶ್ರಯ ಪಡೆದ ಶಿಕ್ಷಣ ಕೇಂದ್ರಗಳೇ ಮಠಗಳಾಗಿ ಪಾಠ ಶಾಲೆಗಳಾಗಿ ದೇವಾಲಯಗಳಾಗಿ ಶ್ರದ್ಧಾ ಕೇಂದ್ರಗಳಾಗಿ ರೂಪಾಂತರ ಹೊಂದಿರಬಹುದು. ಉದಾಹರಣೆಗಾಗಿ ಕೆಳದಿ ವಿದ್ವಾಂಸರಾದ ಶ್ರೀ ಸುಬ್ಬಾಭಟ್ಟರ ಮಗ ಅಣ್ಣೀ ಭಟ್ಟರಿಗೆ ಹೊಸ ತೋಟದ ಶ್ರೀ ಗಣಪಭಟ್ಟರ ಮಗ ಅರಸು ಭಟ್ಟರು ಭೂಮಿಯನ್ನು ಕೊಟ್ಟು ಪಾಠಶಾಲೆ ಪ್ರಾರಂಭಿಸಿದ ಕೂಗಲಬಳ್ಳಿ ಮಠ (ಸಿದ್ದಾಪುರ ತಾಲ್ಲೂಕನ ಹೆಗ್ಗರಣೆ) ದಲ್ಲಿಯ ದಾನಪತ್ರದಿಂದ ತಿಳಿದು ಬರುತ್ತದೆ. (ಹೆರೂರ ಸೀಮೆ ಇತಿಹಾಸ ಸಮೀಕ್ಷಾಧ್ಯಯನ., ಶ್ರೀ ಅತ್ತಿಮುರುಡು ವಿಶ್ವೇಶ್ವರ, ೧೯೯೯)ರಲ್ಲಿ ಉಲ್ಲೇಖವಿದೆ.

ಹೀಗೊಂದು ಸಮೀಕ್ಷೆಯಂತೆ ೩-೪ನೇ ಶತಮಾನದಿಂದ ಸುಮಾರು ೧೭ನೇ ಶತಮಾನದವರೆಗೆ ಶೇಕಡ ೩೫ರಿಂದ ೪೦ ಶಿಕ್ಷಣವಿದ್ದದ್ದು ಒಮ್ಮಲೆ ೧೭ರಿಂದ ೧೯ನೇ ಶತಮಾನಾವಧಿಯಲ್ಲಿ ೧೨ಕ್ಕೆ ಇಳಿದಿರುವುದು ಕರ್ನಾಟಕ ಶಿಕ್ಷಣ ಇತಿಹಾಸ ಹಾಗೂ ಭಾರತ ಶಿಕ್ಷಣ ಇತಿಹಾಸದಲ್ಲಿ ಕಂಡುಬರುತ್ತದೆ. ಆದರೆ ಈ ೧೨ಶೇಕಡಾ ಶಿಕ್ಷಣ ಉಳಿದಿರುವದಾದರೆ ಶ್ರೀ ಮಠಗಳ ಶೈಕ್ಷಣಿಕ ಕಳಕಳಿಯಿಂದ ಇದರಲ್ಲಿ ೪೦ಕ್ಕಿಂತ ಹೆಚ್ಚು ಶಾಖಾ ಮಠಗಳನ್ನು ಹೊಂದಿರುವ ಶ್ರೀ ರಾಮಚಂದ್ರಾಪುರ ಮಠವು ಅವಿಚ್ಛಿನ್ನವಾದ ಗುರು ಪರಂಪರೆಯೊಂದಿಗೆ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಸುಧಾರಣಾ ಚಿಂತನೆಯೊಂದಿಗೆ ನಿರಂತರ ಒಡನಾಡಿದೆ; ಮುಂದಿನ ಸಮಾಜಕ್ಕೆ ಸ್ಫೂರ್ತಿಯಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಶ್ರೀ ಹವ್ಯಕ ಗುರುಪೀಠಂ** (ಸಂಸತ ಐತಿಹಾಸಿಕ ಕಾವ್ಯ-ಕನ್ನಡ ಭಾವಾನುವಾದ ಸಹಿತ).
೨. **ಸತ್ಯ ಸಂಗತಿ** (ಕಿರುಗ್ರಂಥ).
೩. **ಹೇರೂರು ಸೀಮೆ ಇತಿಹಾಸ** (ಅತ್ತಿಮುರುಡು ವಿಶ್ವೇಶ್ವರ ೧೯೯೯).
೪. **ಕೆಳದಿ ಅರಸರ - ಕನ್ನಡ ಸಾಹಿತ್ಯ ಇತಿಹಾಸ** (ಸಾ.ಶಿ. ಮರುಳಯ್ಯ).
೫. **ಕನ್ನಡ ವಿಶ್ವಕೋಶ** ಸಂ. ೪ ಹಾಗೂ ೧೨, (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಅಮರಕೋಶ.
೬. ೧೪೦೯ರ ವಿಜಯನಗರ ವೀರ ಪ್ರತಾಪದೇವರಾಯನ ಚಿದ್ಬೋದ ಭಾರತೀಯವರಿಗೆ ವೈಭವ ತಾಮ್ರಶಾಸನ ಕೊಟ್ಟಿದ್ದು.
೭. ೧೫೫೬ರ ಶಾಸನ. ಬಂಕೆ ಅರಸ ಹಾಗೂ ಶಂಕರ ದೇವಮ್ಮ ಕೊಡಚಾದ್ರಿಯಲ್ಲಿ ಪುನಃ ಪ್ರತಿಷ್ಠೆ ಮಾಡಿ ರಾಮಚಂದ್ರಾಪುರ ಮಠಕ್ಕೆ ಉಸ್ತುವಾರಿ ವಹಿಸಿ ಆರಗ ಸೀಮೆಯ ೨೨ ಗ್ರಾಮಗಳನ್ನು ದತ್ತಿ ನೀಡಿದೆ.

ಡಾ. ಜೆ.ವಿ. ಕಲ್ಲಾಪುರ*

ಶ್ರೀರಾಮಚಂದ್ರಾಪುರ ಮಠದ ಹಸ್ತಿದಂತ ಸಿಂಹಾಸನ

ವಿಶ್ವದ ಅದ್ಭುತಗಳ ಶ್ರೇಣಿಗೆ ಸೇರಬೇಕಾದ ಅತೀ ಸೂಕ್ಷ್ಮ ಕಲಾಕೌಶಲ್ಯದಿಂದ ನಿರ್ಮಿತವಾಗಿರುವ "ಹಸ್ತಿದಂತ ಸಿಂಹಾಸನವು" ಹೊಸನಗರ ತಾಲೂಕಿನ ಶ್ರೀರಾಮಚಂದ್ರಾಪುರ ಮಠದಲ್ಲಿದೆ. ಈ ಮಠವನ್ನು ಆದಿ ಶಂಕರಾಚಾರ್ಯರು ಶ್ರೀಕ್ಷೇತ್ರ ಗೋಕರ್ಣದಲ್ಲಿ ಸಂಸ್ಥಾಪಿಸಿದರು. ಗೋಕರ್ಣದ ಕಡಲತಡಿಯಿಂದ ಎತ್ತರದಲ್ಲಿರುವ ಅಶೋಕ ಎಂಬ ಪುಣ್ಯಸ್ಥಳದಲ್ಲಿ ಈ ಮಠವಿದೆ. ಶ್ರೀಪೀಠದ ಪ್ರಥಮ ಪೀಠಾಧಿಪತಿಗಳು ಶ್ರೀವಿದ್ಯಾನಂದಾಚಾರ್ಯರು. ಶಂಕರಭಗವತ್ಪಾದರು ಶ್ರೀವಿದ್ಯಾನಂದಂಗೆ ಶ್ರೀಸುರೇಶ್ವರಾಚಾರ್ಯರಿಂದ ಸಂನ್ಯಾಸ ದೀಕ್ಷೆಯನ್ನು ಕೊಡಿಸಿದರು ಎಂದು ತಿಳಿಯುತ್ತದೆ. ಶ್ರೀಮಠದ ಪರಂಪರೆಯಲ್ಲಿ ಇದುವರೆಗೂ ಮೂವತ್ತೈದು ಮಂದಿ ಪೀಠಾಧಿಪತಿಗಳು ಆಗಿ ಹೋಗಿದ್ದಾರೆ. ಈಗಿರುವ ಪರಮಪೂಜ್ಯ ಶ್ರೀಶ್ರೀರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಮೂವತ್ತಾರನೆಯವರಾಗಿದ್ದಾರೆ. ಶ್ರೀಶಾಲಿವಾಹನ ಶಕ ೧೯೨೨ ನೇ ಪ್ರಮಾಥಿ ಸಂವತ್ಸರದ ವೈಶಾಖ ಶುದ್ಧ ಏಕಾದಶೀ ಸೋಮವಾರ ಹೊಸನಗರದ ಶ್ರೀರಾಮಚಂದ್ರಾಪುರ ಮಠದಲ್ಲಿ ಹಸ್ತಿದಂತ ಸಿಂಹಾಸನದಲ್ಲಿ ವಿರಾಜಮಾನರಾದ ಯತಿ ಶ್ರೇಷ್ಠರಾದ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮಿಗಳವರ ಪ್ರಥಮ ಪೀಠಾರೋಹಣ ಸಮಾರಂಭ ನಡೆಯಿತು.

ಸಿಂಹಾಸನ ರಚನೆಗೆ ಹಿನ್ನೆಲೆ

ಶ್ರೀಮಠದ ಪರಂಪರೆಯಲ್ಲಿ ಬಂದ ಮೂವತ್ಮೂರನೆಯ ಪೀಠಾಧಿಪತಿಗಳಾಗಿದ್ದ ಶ್ರೀಶ್ರೀಶ್ರೀ ರಾಮಚಂದ್ರಭಾರತೀ ಸ್ವಾಮಿಗಳು ಮಹಾತಪಸ್ವಿಗಳು, ಪ್ರಕಾಂಡ ಪಂಡಿತರು. ಅವರು ತಮ್ಮ ವಿದ್ವತ್ತನ್ನು ಪ್ರಚುರ ಪಡಿಸಿ ಕಂಚಿಯ ಮಹಾರಾಜರಿಂದ ಮದಭರಿತವಾದ ಆನೆಯನ್ನು ಬಹುಮಾನವಾಗಿ ಪಡೆದರು; ಅದರ ಮದವನ್ನು ಅಡಗಿಸಿದರು. ಅದಕ್ಕೆ ಶ್ರೀರಾಮ ಎಂಬ ಹೆಸರಿಟ್ಟು ಪ್ರೀತಿಯಿಂದ ಸಲಹಿದರು. ಈ ಆನೆ ಶ್ರೀಗಳವರು ಪೂಜೆ ಮಾಡುವಾಗ ತಾನಾಗಿಯೆ ಬಂದು ಚಾಮರ ಸೇವೆ ಮಾಡುತಿತ್ತೆಂಬ ಪ್ರತೀತಿ ಇದೆ. ಕೆಲವು ಕಾಲದ ನಂತರ ಆನೆಯು ಅನಾರೋಗ್ಯದಿಂದ ಬಳಲಿ ದೇಹತ್ಯಾಗ ಮಾಡಿತು. ತನ್ನ ಪ್ರೀತಿಗೆ ಪಾತ್ರವಾದ ಆ ಆನೆಯ ಹೆಸರು ಶಾಶ್ವತವಾಗುಳಿಯಬೇಕೆಂದು ಅಪೇಕ್ಷಿಸಿ ಶ್ರೀರಾಮಚಂದ್ರ ಭಾರತಿ ಮಹಾಸ್ವಾಮಿಗಳು ಅದರ ದಂತವನ್ನೇ ಉಪಯೋಗಿಸಿ ಅಪೂರ್ವವಾದ ಕಲಾಕೌಶಲ್ಯದಿಂದ ಕೂಡಿದ ಸಿಂಹಾಸನವನ್ನು ನಿರ್ಮಾಣ ಮಾಡಿಸಿದರು. ಈ ಸಿಂಹಾಸನ ನಿರ್ಮಾಣಕ್ಕೆ ತಗುಲಿದ ಕಾಲ ಸುಮಾರು ಹದಿನಾರು ವರ್ಷಗಳು. ವಾಸ್ತುಶಾಸ್ತ್ರ ಮತ್ತು ಶಿಲ್ಪಶಾಸ್ತ್ರ ಪಾರಂಗತರಾದ ಪ್ರತಿಭಾಶಾಲಿ ಶಿಲ್ಪಿಗಳ ಕುಶಲತೆಗೆ ಇದು ಸಾಕ್ಷಿಯಾಗಿದೆ. ಇದರ ನಿರ್ಮಾಣ ಮಾಡಿದವರು ಮೂಡಗೋಡು ಹಿರಿಯಣ್ಣಪ್ಪ ಮತ್ತು ಕುಟುಂಬದವರು. ಇದರ ನಿರ್ಮಾಣವು ಸೊರಬ ತಾಲೂಕಿನ ಹೊಸಬಾಳೆ



* ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.

ಪುಟ್ಟಪ್ಪನವರ ಮನೆಯಲ್ಲಿ ಆಗಿದೆ. ಇದಕ್ಕೆ ಸಂಬಂಧಿಸಿದಂತೆ ಸಿಂಹಾಸನದ ಮೇಲಿನ ಶಾಸನವು ಇಂತಿದೆ. ಅಷ್ಟದಿಕ್ಪಾಲಕರ ಕೆಳಗೆ (ಬಲಭಾಗ) - "ಜಗದ್ಗುರು ಶ್ರೀ ಶಂಕರಾಚಾರ್ಯಸಿದ್ಧಿ ಪರಂಪರಾಗತ ಶ್ರೀರಾಮಚಂದ್ರಾಪುರ ಮಠಸ್ಥ ರಾಘವೇಶ್ವರ ಭಾರತೀಯ ಸ್ವಾಮಿ ಕರಕಮಲ ಸಂಜಾತ ಶ್ರೀರಾಮಚಂದ್ರ ಭಾರತೀ ಸ್ವಾಮಿಗಳಿಗೋಸ್ಕರ; (ಯಡಭಾಗ) ಹೊಸಬಾಳೆ ಪುಟ್ಟಪ್ಪ ಮತ್ತು ಸಹೋದರರಿಂ ಮೂಗುಡಿಗಾರ ಹಿರಿಯಣ್ಣಪ್ಪನಿಂದ ತಯಾರಿಸಲ್ಪಟ್ಟಿದ್ದು ಶಾ:ಶ: ೧೮೩೯ ಪಿಂಗಲವತ್ಸರ ಶಾ : ಶ: ೧೮೫೫ ಶ್ರೀಮುಖವತ್ಸರ.



ಹಸ್ತಿದಂತ ಸಿಂಹಾಸನ

ಸಿಂಹಾಸನದ ಶಿಲ್ಪಿ ಮೂಡಗೋಡು ಹಿರಣ್ಯಪ್ಪ (ಕ್ರಿ.ಶ. ೧೮೬೭ - ೧೯೪೩)

ಗುಡಿಗಾರ ಸಮಾಜಕ್ಕೆ ಕೀರ್ತಿಯನ್ನು ತಂದ ಹಲವಾರು ಗಣ್ಯರಲ್ಲಿ ದಿವಂಗತ ಮೂಡುಗೋಡು ಹಿರಣ್ಯಪ್ಪನವರು



ಪ್ರಮುಖರು. ಇವರು ೧೮೬೭ರಲ್ಲಿ ಮೂಡುಗೋಡು (ಸೊರಬ ತಾಲ್ಲೂಕು)ನಲ್ಲಿ ಜನಿಸಿದರು. ಇವರ ತಂದೆ ಮತ್ತು ಹಿರಿಯರ ಮಾರ್ಗದರ್ಶನದಲ್ಲಿ ಶ್ರೇಷ್ಠಮಟ್ಟದ ಕಲಾ ಕೃತಿಗಳನ್ನು ರಚಿಸುವ ಪಾಂಡಿತ್ಯ ಸಂಪಾದಿಸಿದ್ದರು. ಶಿಲ್ಪ ಕಲೆಯ ಸಂಪ್ರದಾಯಗಳನ್ನು ದಂತ ಮತ್ತು ಶ್ರೀಗಂಧದ ಕೃತಿಗಳಿಗೆ ಶಾಸ್ತ್ರೋಕ್ತವಾಗಿ ಸಂಪ್ರದಾಯ ಬದ್ಧವಾಗಿ ಅಳವಡಿಸಿ ನೂತನ ವಿನ್ಯಾಸಗಳೊಂದಿಗೆ ಕೃತಿಗಳನ್ನು ರಚಿಸುತ್ತಿದ್ದರು. ಹಿರಣ್ಯಪ್ಪನವರು ಮೈಸೂರಿನ ನೂತನ ಅರಮನೆ ನಿರ್ಮಾಣದಲ್ಲಿ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ಇವರ ನಿರ್ದೇಶನದಲ್ಲಿ ಅವರ ಸಂಗಡಿಗರು ಸುಮಾರು ಹನ್ನೆರಡು ವರ್ಷಗಳ ಕಾಲ ದಂತ, ಗಂಧ ಮತ್ತು ಇತರ ಜಾತಿಯ ಮರಗಳನ್ನು ಉಪಯೋಗಿಸಿಕೊಂಡು "ಅಂಬಾ ವಿಲಾಸ ತೊಟ್ಟಿಲು, ಸಭಾಂಗಣ, ಕಂಬ-ಕಮಾನುಗಳಲ್ಲಿ ಪಶು-ಪಕ್ಷಿಗಳಿಂದ ಕೂಡಿದ ಬಳ್ಳಿಗಳನ್ನು" ನಾಜೂಕಾಗಿ ಕೆತ್ತಿದ್ದಾರೆ. ಅರಮನೆಯಲ್ಲಿ "ದಂತದ ಶಿವತಾಂಡವ ನೃತ್ಯದ ಫಲಕ, ಶ್ರೀಶಂಕರ ಪ್ರದೋಶ ಕಾಲದರ್ಶನ ಫಲಕ, ಗಣೇಶ, ಈಶ್ವರ ಪಾರ್ವತಿ ನಂದಿ" ಮುಂತಾದ ವಿಗ್ರಹಗಳು ತುಂಬಾ ಆಕರ್ಷಕವಾಗಿವೆ. ದಂತ ಮತ್ತು ಗಂಧದಲ್ಲಿ ರೇಷ್ಮೆದಾರಗಳಂತೆ ಎಳೆ ಎಳೆಗಳನ್ನು ಕತ್ತರಿಸಿ ತಯಾರಿಸಿದ ಚಾಮರ ಅದ್ಭುತವಾಗಿದ್ದು, ಕೂದಲಿನಲ್ಲಿ ತಯಾರಿಸಿದ ಚಾಮರದ ಹಾಗೆ ಈ ಚಾಮರಗಳನ್ನು ಬೀಸಿದಾಗ ತಂಪಾದ ಗಾಳಿ ಬರುವುದಂತೆ. ಹಿರಣ್ಯಪ್ಪನವರು ದಂತದ ೧೬ ಪಗಡೆ ಕಾಯಿಗಳಲ್ಲಿ ರಾಮಾಯಣದ ದೃಶ್ಯಗಳನ್ನು ಕೊರೆದು ಮಹಾರಾಜರಿಗೆ ನೀಡಿ ಸನ್ಮಾನಿತರಾಗಿದ್ದಾರೆ.

ಇಂತಹ ಶ್ರೇಷ್ಠ ಕಲಾವಿದರಾದ ಹಿರಣ್ಯಪ್ಪನವರು ಶ್ರೀ ರಾಮಚಂದ್ರಾಪುರದ ದಂತ ಸಿಂಹಾಸನವನ್ನು ರಚಿಸಲು ಕ್ರಿ.ಶ. ೧೮೯೮ ರಿಂದ ೧೯೪೯ರ ವರೆಗೆ ಪೀಠಾಧಿಪತಿಗಳಾಗಿದ್ದ ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳವರು ಆಹ್ವಾನಿಸಿದಾಗ ಸಂತೋಷದಿಂದ, ಮನಸ್ಸಿನಲ್ಲಿ ಕಲ್ಪಿಸಿಕೊಂಡ ಸಿಂಹಾಸನದ ನಕ್ಷೆಯನ್ನು ತಯಾರಿಸಿ ಶ್ರೀ ಗುರುಗಳ ಮುಂದಿಟ್ಟರಂತೆ. ಅದನ್ನು ನೋಡಿ ಗುರುಗಳು ವೀಳ್ಯವನ್ನು ಕೊಟ್ಟು ಸಿಂಹಾಸನದ ರಚನೆಗೆ ಆಶೀರ್ವದಿಸಿದರಂತೆ.


ಈ ಸಿಂಹಾಸನವು ಶ್ರೀ ಮಠದ ಮೇಲ್ವಿಚಾರಕ ಹೊಳಬಾಳೆ ಪುಟ್ಟಪ್ಪನವರ ಮನೆಯ ಮಹಡಿಯಲ್ಲಿ ರಚನೆಯಾಗಿದೆ. ಚಿನ್ನ,

ಬೆಳ್ಳಿ ಮತ್ತು ಪಚ್ಚೆಗಳೂ ಅಲ್ಲದೆ ದಂತವನ್ನೂ ಉಪಯೋಗಿಸಿಕೊಂಡು ೧೬ ವರ್ಷಗಳ ಸತತ ಶ್ರಮದಿಂದ ೯ ಅಡಿ ಎತ್ತರದ ಸಿಂಹಾಸನವನ್ನು ರಚನೆ ಮಾಡಿದ್ದಾರೆ. ಹಿರಣ್ಯಪ್ಪನವರ ಜೊತೆಯಲ್ಲಿ ಭಾಗಿಗಳಾದ ಪ್ರಮುಖ ಗುಡಿಗಾರ ಕಲಾವಿದರುಗಳೆಂದರೆ ಮರೂರು ಗಣಪತಪ್ಪ, ದೊಡ್ಡಮನೆ ಗಣಪತಪ್ಪ, ಕೆರೋಡಿ ಗಣಪತಪ್ಪ, ಬಿ. ಗಣಪತಪ್ಪ, ಟಿ. ಶೇಷಪ್ಪ, ಬಿ. ವೆಂಕಟಪ್ಪ, ಬನವಾಸಿ ರಾಮಚಂದ್ರಪ್ಪ, ಬನವಾಸಿ ಹನುಮಂತಪ್ಪ, ದೊಡ್ಡಣ್ಣಪ್ಪ, ಶಾಪೂರು ರಾಮಚಂದ್ರಪ್ಪ, ಮೇಲಿನ ಮನೆ ಚಿಕ್ಕಪ್ಪ, ಜಡೆ ಹಿರಣ್ಯಪ್ಪ, ಕರ್ಜಗಿ ಪುಟ್ಟಪ್ಪ ಮತ್ತು ಸಿದ್ದಾಪುರದ ಚಿತ್ರಕ ಬಂಧುಗಳು ಎಂದು ತಿಳಿದುಬರುತ್ತದೆ.

ಸಿಂಹಾಸನದ ವಿವರ

ಸಿಂಹಾಸನವು ತಳಭಾಗದಲ್ಲಿ ಚೌಕಾಕಾರವಾಗಿಯೂ ಮಧ್ಯಭಾಗದಲ್ಲಿ ಅಷ್ಟಕೋನಾಕೃತಿಯಲ್ಲಿದೆ. ಪೂರ್ಣ ಸಿಂಹಾಸನವನ್ನು ನಾಲ್ಕು ಸಿಂಹಗಳು ಪಾದೋಪಾದಿಯಲ್ಲಿ ಹೊತ್ತು ನಿಂತಿವೆ. ಸಿಂಹಗಳ ಕಣ್ಣುಗಳಿಗೆ ಪಚ್ಚೆ ಹರಳುಗಳನ್ನು ಅಳವಡಿಸಿ ಕಲಾವಿದರು ಅವನ್ನು ಜೀವಂತಗೊಳಿಸಿದ್ದಾರೆ. ಬೇಟೆ ಮತ್ತು ಎಬೋನಿ ಹಲಗೆಗಳ ಜೋಡಣೆ ಅತ್ಯಂತ ಗಟ್ಟಿಯಾಗಿದ್ದು, ಹಲಗೆಗಳನ್ನು ಜೋಡಿಸಿದ ಸ್ಥಳದಲ್ಲಿ ನೀರು ಹಾಯಿಸಿದರೂ ನೀರು ಸೋರದ ಹಾಗೆ ಕೂಲು ಜೋಡಣೆ (dowelling) ಕ್ರಮವು ಶಿಲ್ಪಿಗಳ ಕೈಚಳಕವನ್ನು ಪ್ರದರ್ಶಿಸುತ್ತದೆ. ಬೇಟೆ ಹಾಗೂ ಎಬೋನಿ ಬಂಕಗಳ (ಹಲಗೆ) ಹಿನ್ನೆಲೆಯಲ್ಲಿ ಬಂಗಾರದ ಮುಲಾಮನ್ನು ಬಳಿದ ಲೋಹದ ತಗಡುಗಳನ್ನು ಅಳವಡಿಸಿ ಅತ್ಯಂತ ನಾಜೂಕಿನ ಕೆತ್ತನೆ ಕೆಲಸಗಳಿಂದ ಸಜ್ಜುಗೊಳಿಸಿದ್ದಾರೆ. ದಂತದ ಹಲಗೆಗಳನ್ನು ಮಾಡಲು ಸ್ವತಃ ತಯಾರಿಸಿ ಹದಗೊಳಿಸಿದ ಗರಗಸವನ್ನು





ಉಪಯೋಗಿಸಿದ್ದಾರೆ. ಅವುಗಳ ಮೇಲೆ ಮಹಾಭಾರತ ಮತ್ತು ರಾಮಾಯಣದ ದೃಶ್ಯಗಳನ್ನು ಮನಮೋಹಕವಾಗಿ ಪಾರು ಹಾಕಿ ಕುಸುರೀ ಕೆತ್ತನೆಯ ಚಿತ್ರಣಗಳನ್ನು ಪ್ರದರ್ಶಿಸಿದ್ದಾರೆ. ಸಿಂಹಾಸನದ ಕೆಳಭಾಗದ ಅಂಕಣಗಳಲ್ಲಿ ಪೂರ್ಣ ಮಹಾಭಾರತ ದರ್ಶನ ಮಾಡಿಸಿದ್ದಾರೆ.[೧೧] ಅರ್ಜುನನು ಗಾಂಡೀವ ಬಿಲ್ಲಿನ ಪ್ರದರ್ಶನ, ಕೌರವ ಮತ್ತು ಪಾಂಡವರ ಆಸ್ಥಾನ, ಕುಂತಿಯೊಡನೆ ಪಾಂಡವರು, ಭೀಮ, ಕರ್ಣ ಮುಂತಾದ ಬಲಶಾಲಿಗಳ ಯುದ್ಧ ಕೌಶಲ್ಯ ಮುಖ್ಯವಾದವು. ಮಧ್ಯಭಾಗದ ಸಿಂಹಾಸನದಲ್ಲಿ ಕರ್ಣಾರ್ಜುನರ ಯುದ್ಧ, ಚಕ್ರವ್ಯೂಹ ದೃಶ್ಯಗಳು ನಾಜೂಕಿನಿಂದ ಸೂಕ್ಷ್ಮವಾಗಿ ಕೆತ್ತಿದ ವ್ಯಕ್ತಿಗಳ ಭಾವಭಂಗಿ, ಪಕ್ಷಿ-ವೃಕ್ಷ-ಬಳ್ಳಿಗಳಲ್ಲದೆ ಅನೇಕ ಪ್ರಾಣಿಗಳ ಜೀವಂತ ಚಿತ್ರಣ ರಚಿಸಿದ್ದಾರೆ. ಸಿಂಹಾಸನದ ಕೈಪಿಡಿಗಳಲ್ಲಿ ಅಷ್ಟದಿಕ್ಪಾಲಕರು ಹಾಗೂ ದಶಾವತಾರದ ಕೆತ್ತನಗೆಳಿವೆ.

ಸಿಂಹಾಸನದ ಪ್ರಭಾವಳಿಯಲ್ಲಿ ಹದಿನೈದು ಹಲಗೆಗಳನ್ನು ಅಳವಡಿಸಿದ್ದು ಅರ್ಧಚಂದ್ರಾಕೃತಿಯಲ್ಲಿ ಜೋಡಿಸಿದ್ದಾರೆ. ಇಲ್ಲಿ ಕಲಾವಿದರೂ ರಾಮಾಯಣದ ಸಂಪೂರ್ಣ ದರ್ಶನ ಮಾಡಿಸಿದ್ದಾರೆ. ಇವುಗಳಲ್ಲಿ ಶ್ರೀರಾಮನ ಜನ್ಮ ವೃತ್ತಾಂತ, ಸೀತಾ ಸ್ವಯಂವರ, ಗುಹನು ರಾಮ-ಸೀತಾ-ಲಕ್ಷ್ಮಣರನ್ನೂ ನದಿ ದಾಟಿಸುವ ದೃಶ್ಯ, ವಾಲೀ ಸುಗ್ರೀವರ ಯುದ್ಧ, ಶೂರ್ಪಣಕಿಯ ಮೂಗನ್ನು ಕೊಯ್ದ ಚಿತ್ರಣ, ಸೇತುಬಂಧನ, ರಾಮ-ರಾವಣರ ಯುದ್ಧ, ಶ್ರೀರಾಮ ಪಟ್ಟಾಭಿಷೇಕ, ಲವ-ಕುಶ ಜನನ, ಸೀತಾ ಲವಕುಶರು ರಾಮನನ್ನು ಭೇಟಿಯಾದುದು, ಸೀತೆ ಭೂಮಿಯಲ್ಲಿ ವ್ಯಕ್ತವಾಗುವ ಸನ್ನಿವೇಶ ದೃಶ್ಯಗಳು ಅತ್ಯಂತ ಕಲಾಕೌಶಲ್ಯತೆಯಿಂದ ಮನಮೋಹಕವಾಗಿ ಸೃಷ್ಟಿಸಿದ್ದಾರೆ. ಸಿಂಹಾಸನದ ಪ್ರಭಾವಳಿಯ ಹಿಂದುಗಡೆ ೯ ಅಡಿಗಳ ಎತ್ತರದ ಬೆಳ್ಳಿಯ ದಂಡದ ಮೇಲೆ ರೇಷ್ಮೆ ವಸ್ತ್ರದ ಛತ್ರಿ ಇದ್ದು, ಮುತ್ತುಗಳಿಂದ ಪೋಣಿಸಿದ ತೋರಣವು ಸಿಂಹಾಸನದ ಅಂದವನ್ನು ಹೆಚ್ಚಿಸಿದೆ." ಸಿಂಹಾಸನದ ಕುಸುರಿನ ಕೆಲಸದಲ್ಲಿ ಹೊಯ್ಸಳ ಶಿಲ್ಪ ಸಂಪ್ರದಾಯವನ್ನು ಅಳವಡಿಸಿಕೊಂಡಿದ್ದಾರಂತೆ.

ಸಿಂಹಾಸನದ ಕಿರು ಪರಿಚಯ

ಈ ಸಿಂಹಾಸನವನ್ನು ಅತ್ಯಂತ ಸಮೀಪದಿಂದ ಅಧ್ಯಯನ ಮಾಡಿ ವಿವರಣೆಗಳನ್ನು ಸಂಗ್ರಹಿಸಿ ಸಂಪೂರ್ಣ ಪರಿಚಯ ಮಾಡಿಸುವುದು ಸಾಧ್ಯವಾಗಿಲ್ಲದಿದ್ದರೂ ಗಾಜಿನ ಮನೆಯೊಳಗಿರಿಸಿದ್ದ ಸಿಂಹಾಸನವನ್ನು ದೂರದಿಂದಲೇ ಛಾಯಾಚಿತ್ರ ತೆಗೆದು ವಿವರಗಳನ್ನು ಸಂಗ್ರಹಿಸಿ ಕೊಟ್ಟಿರುತ್ತೇನೆ. ಆನೆ ದಂತದಲ್ಲಿ ಕೆತ್ತಿದ ಅತೀ ಸೂಕ್ಷ್ಮ ಕುಸುರಿ ಕೆತ್ತನೆಗಳಿಂದ ನಿರ್ಮಿತವಾಗಿರುವ ಈ ಸಿಂಹಾಸನವು ನಾಲ್ಕು ಹಂತಗಳನ್ನು ಹೊಂದಿದೆ. ಮೊದಲ ಹಂತದಲ್ಲಿ ನಾಲ್ಕು ಸಿಂಹಗಳಿಂದ ಕೂಡಿದ ಕಾಲುಗಳಿವೆ. ಎರಡನೆ ಹಂತದಲ್ಲಿ ಚೌಕಾಕಾರದ ಸ್ತರವಿದ್ದು ಅದರಲ್ಲಿ ಮುಂಭಾಗದಲ್ಲಿ ಏಳು ಹಾಗೂ ಎಡ ಬಲ ಭಾಗಗಳಲ್ಲಿ ಏಳೇಳು ಸೂಕ್ಷ್ಮ ಕೆತ್ತನೆಗಳನ್ನು ಕಾಣಬಹುದಾಗಿದೆ. ಈ ಪಟ್ಟಿಕೆಗಳಲ್ಲಿ ಮಹಾಭಾರತದ ಘಟನೆಗಳನ್ನು ಕೆತ್ತಲಾಗಿದೆ. ಅವುಗಳೆಂದರೆ - ಸಹದೇವನ ಯುದ್ಧ; ಶಕುನಿಯ ಯುದ್ಧ, ಸೂರ್ಯನಿಗೆ ಕೃಷ್ಣನು ಚಕ್ರವನ್ನು ಮರೆಮಾಡಿರುವುದು; ಅರ್ಜುನನು ಅಗ್ನಿ ಪ್ರವೇಶಮಾಡುತ್ತಿರುವುದು; ಸೈಂಧವಾದಿಗಳು ಅರ್ಜುನನ್ನು ನೋಡುತ್ತಿರುವುದು; ಕರ್ಣನು ಶಕ್ತಿಯನ್ನು ಬಿಡುತ್ತಿರುವುದು; ಘಟೋತ್ಕಚನ ಯುದ್ಧ. ಮೂರನೆ ಹಂತದಲ್ಲಿ ಸಿಂಹಾಸನವನ್ನು ಪಂಚಭುಜಾಕೃತಿಯಲ್ಲಿ ರಚಿಸಲಾಗಿದೆ. ಅದರಲ್ಲಿ ಅರ್ಜುನನು ಕರ್ಣನೊಡನೆ ಯುದ್ಧ ಮಾಡುತ್ತಿರುವುದು; ತುಳಸೀವನ ಪ್ರವೇಶ ಇತ್ಯಾದಿ ಕೆತ್ತನೆಗಳಿವೆ. ನಾಲ್ಕನೇ ಹಂತದಲ್ಲಿ ಆಸನದ ವ್ಯವಸ್ಥೆಯಿದ್ದು ಎಡಬಲಗಳಲ್ಲಿ ಕೈಪಿಡಿಗಳಿವೆ. ಈ ಕೈಪಿಡಿಗಳನ್ನು ಮೂರು ಹಂತಗಳಲ್ಲಿ ರಚಿಸಲಾಗಿದ್ದು ಮೊದಲ ಹಂತದಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಬಲಭಾಗದಲ್ಲಿ - ಈಶಾನ, ಕುಬೇರ, ವಾಯುವ್ಯ, ವರುಣ ಹಾಗೂ ಎಡಭಾಗದಲ್ಲಿ ನಿರರುತಿ, ಯಮ, ಅಗ್ನಿ, ಇಂದ್ರರನ್ನು ಕೆತ್ತಲಾಗಿದೆ. ಇದರ ಮೇಲಿದ ಸ್ತರದಲ್ಲಿ ದಶಾವತಾರಗಳನ್ನು ಕೆತ್ತಲಾಗಿದೆ. ಅದರ ಮೇಲಿನ ಸ್ತರದಲ್ಲಿ ಸುಂದರವಾದ ಕಂಭಗಳನ್ನು ಕಡಿಯಲಾಗಿದೆ. ಸಿಂಹಾಸನದ ಪ್ರಭಾವಳಿಯಲ್ಲಿ ರಾಮಾಯಣ ಹಾಗೂ ಭಾಗವತದ ಕೆಲವು ಪ್ರಮುಖ ಚಿತ್ರಗಳನ್ನು ಕಡೆಯಲಾಗಿದ್ದು ಪ್ರಭಾವಳಿಯ ಮೇಲ್ಭಾಗದಲ್ಲಿ ಕೀರ್ತಿಮುಖವಿದ್ದು ಅದರ ಕೆಳಭಾಗದಲ್ಲಿ ಸೀತಾ ಸಹಿತ ಶ್ರೀರಾಮ ಲಕ್ಷ್ಮಣ ಹಾಗೂ ಆಂಜನೇಯರ ಸುಂದರ ಕೆತ್ತನೆಯಿದೆ.

ಸಿಂಹಾಸನದ ಎಲ್ಲಾ ಕೆತ್ತನೆಗಳಿಗೆ ಮೆರಗು ನೀಡುವ ಸಲುವಾಗಿ ಹಿನ್ನೆಲೆಯಲ್ಲಿ ಬಂಗಾರದ ತಗಡನ್ನು ಅಳವಡಿಸಲಾಗಿದೆ ಹಾಗೂ ಪ್ರತಿಯೊಂದು ದೇವತಾ ಪ್ರತಿಮೆಯ ಕಣ್ಣು ಆಭರಣಗಳ ಸ್ಥಾನದಲ್ಲಿ ವಜ್ರ ವೈಢೂರ್ಯ, ಮರಕತ, ಮಾಣಿಕ್ಯವೆ ಮೊದಲಾದ ನವರತ್ನಗಳನ್ನು ಅಳವಡಿಸಿದ್ದು ಇದರಿಂದ ಸಿಂಹಾಸನವು ಮತ್ತು ಮನೋಹರವಾಗಿ ಕಂಗೊಳಿಸುತ್ತಿದೆ. ಪರಮಪೂಜ್ಯ ಶ್ರೀರಾಮ ಚಂದ್ರಭಾರತೀ ಮಹಾಸ್ವಾಮಿಗಳವರ ಅದ್ವಿತೀಯವಾದ ವಿದ್ವತ್ತಿನ ಮಹತ್ವವು ಸಿಂಹಾಸನದಲ್ಲಿ ಮೂರ್ತೀಭವಿಸಿದಂತೆ ಚಿತ್ರಿತವಾಗಿದೆ.

ಈ ಸಿಂಹಾಸನವನ್ನು ಮೊದಲಬಾರಿಗೆ ಸರ್ವಧಾರಿ ಸಂವತ್ಸರದ ಮಾಘ ಬಹುಳ ಅಮಾವಾಸ್ಯೆಯ ದಿನ ಫೆಬ್ರವರಿ ೧೯೪೯ ಗೋಕರ್ಣದ ಶ್ರೀ ಮಹಬಲೇಶ್ವರನ ಸನ್ನಿಧಿಯಲ್ಲಿ ಶ್ರೀರಾಮಚಂದ್ರಭಾರತೀ ಸ್ವಾಮಿಗಳು ಆರೋಹಣ ಮಾಡಿದರು. ನಂತರ ಶ್ರೀರಾಘವೇಂದ್ರ ಭಾರತೀ ಮಹಾಸ್ವಾಮಿಗಳು ಹೊಸನಗರದ ಶ್ರೀರಾಮಚಂದ್ರಾಪುರ ಮಠದಲ್ಲಿ ಶಾ: ಶ: ೧೮೯೯ (ಕ್ರಿ.ಶ. ೧೯೭೭) ನೆಯ ಪಾರ್ಥಿವನಾಮ ಸಂವತ್ಸರದ ಶುದ್ಧ ಪಂಚಮಿ ಶುಕ್ರವಾರ (೧೮.೩.೧೯೭೭) ಸನ್ಯಾಸ ದೀಕ್ಷೆ ಪಡೆದು ಅದೇ ದಶಮಿ ಸೋಮವಾರ (೨೧.೩.೧೯೭೭) ಸಿಂಹಾಸನಾರೋಹಣ ಮಾಡಿದರು. ಈಗಿನ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ೧೯೯೯ರ ಏಪ್ರಿಲ್‌ನಲಿ ಸಿಂಹಾಸನಾರೋಹಣ ಮಾಡಿರುತ್ತಾರೆ. ಈ ಮೂರು ಸಂದರ್ಭಗಳಲ್ಲಿ ಮಾತ್ರ ಹಸ್ತಿದಂತ ಸಿಂಹಾಸನವನ್ನು ಭಕ್ತರಿಗೆ ನೋಡಲವಕಾಶವಾಗಿದೆ.

(ಈ ಪ್ರಬಂಧ ರಚಿಸಲು ಬೇಕಾದ ಎಲ್ಲ ಮಾಹಿತಿಗಳನ್ನು ಒದಗಿಸಿರುವ ಪರಮಪೂಜ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿ ಗಳವರಿಗೆ ಆಭಾರಿಯಾಗಿದ್ದೇನೆ. ಮಠದ ಸಿಬ್ಬಂದಿಗಳಿಗೂ ಮಿತ್ರ ಚೀಟಿನ ಅಶೋಕ ಹೆದ್ಲಿಯರಿಗೆ ಧನ್ಯವಾದಗಳು. ಅಧ್ಯಕ್ಷರು ಮತ್ತು ಸದಸ್ಯರು, ಕೆಳದಿ ವಸ್ತು ಸಂಗ್ರಹಾಲಯ ವಿಶಿಷ್ಠ ಸಮಿತಿಯವರಿಗೆ ಧನ್ಯವಾದಗಳು.)

*(ಮೂಡುಗೋಡು ಹಿರಣ್ಣಪ್ಪನವರ ಮತ್ತು ಸಿಂಹಾಸನದ ಬಗ್ಗೆ ಮಾಹಿತಿ ನೀಡಿದ ಗುಡಿಗಾರ ಪುಟ್ಟಸ್ವಾಮಿ ಮತ್ತು ಕುಟುಂಬದವರಿಗೆ ಧನ್ಯವಾದಗಳು.)

ಡಾ॥ ಬಿ. ನಂಜುಂಡಸ್ವಾಮಿ*

ತೀರ್ಥಹಳ್ಳಿ ತಾಲೂಕ್ ದೂರ್ವಾಸಪುರದ (ತುಂಗಭದ್ರ ತೀರದ) ಮುಳಬಾಗಿಲ ಕೃಷ್ಣಾನಂದ ಮಠ ಪರಂಪರೆ

ಮುಳುಬಾಗಿಲ ಕೃಷ್ಣಾನಂದ" ಮಠವು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ದೂರ್ವಾಸಪುರ ಎಂಬ ಕ್ಷೇತ್ರದಲ್ಲಿದೆ. ಈ ಮಠಕ್ಕೆ ಸ್ಪಷ್ಟವಾದ ಮಾಹಿತಿ M.A.R. (೧೯೧೯) ೯ಲನೇ ಪ್ಯಾರಾದಲ್ಲಿ ನೀಡಲಾಗಿದೆ.

ಈ ಮಠದಲ್ಲಿ ಇದ್ದ ತಾಮ್ರಶಾಸನದ ವಿವರ M.A.R. 1919 ಪುಟ ೩೭-೩೯ರಲ್ಲಿ ಬಂದಿದ್ದು, ಶಾಸನದ ವಿವರವನ್ನು ರಾ॥ ನರಸಿಂಹಾಚಾರ್‌ರವರು ನೀಡಿದ್ದಾರೆ. ಆದರೆ ಶಾಸನ ಪಾಠ ಸಂಪೂರ್ಣವಾಗಿ ಎಲ್ಲಿಯೂ ಅಚ್ಚಾಗಿಲ್ಲ. ಆ ವಿವರವನ್ನು ಯಥಾವತ್ತಾಗಿ ಕೊಡಲಾಗಿದೆ. *"A COPY OF COPPER GRANT RECEIVED FROM THE SMARTH MATHA OF THE BHAGAVATA SAMPRADAYA AT MULUVAGIL, TIRITHAHALLI TALUK. REFERS ITSELF TO THE REIGN OF THIS KING. FROM A TELAUGU NOTE AT THE END OF THE COPY WE LEARN THAT THE ORIGINAL CON-SISTED OF THREE PLATES. BUT THE COPY IS FULL OF GAPS AND MISTAKES. AFTER INVOCATION OF THE BOAR INCARNATION OF VISHNU AND GANAPATHI, IT GIVES THE PURANIC GENEOLOGY FROM THE MOON TO TURVASU AND THEN PROCEEDS TO SAY THAT IN THAT (LINE) AROSE SRI-RAGA RAYA, SON OF GOPALA-RAYA AND VENGAMAMBA. AFTER A FEW VERSES IN THE KING'S PRAISE. IT STATES THAT ON THE NEW MOON DAY OF THE MONTH PUSHYA IN THE YEAR SARVARI (1660) HE MADE A GRANT OF LAND TO THE PARAMAHAMSA PARIVRAJAKACHARYA WORSHIPPER OF VISHNU, PROFICIENT IN THE VEDAS, AGNIMURDHA KRISHANANDA-YATI OF MULVAYIPURI, DISCIPLE OF SACHIDANADA THE SPIRITUAL SUCCES-SION OF THE MATHA IS GIVEN THUS: NARADA, VYASA, SUKA, GAUDARAIA, GOVINDA, KSHIRASVAMI, VITHALA, SRIDHARA AND VISHNU-SVAMI. WE ARE THEN TOLD THAT SRI- RANGA RAYA OF THE ATRI GOTRA AND APASTAMBHA- SUTRA, A SECTION OF THE ARVITI FAMILY, SON OF GOPALA-RAJA AND VENGAMAMBA GRANDSON OF RAGNA-RAJA AND TIMMADEVI, AND GREAT GRANDSON OF VENKATESH AND RAMGAMBA, GRANTED, ON THE OCCASION OF ARDHODAYA, WITH ALL THE USUAL RIGHTS THE TWO VILLAGES RANAGHATA AND HIREKALYANI, SITUATED IN BELUR-SIME TO THE ASCETIC. AS IT IS THE COPY IS VERY DEFECTIVE. IF IT HAD BEEN CORRECT AND COMPLETE, IT WOULD HAVE FURNISHED VALUABLE INFORMATION ABOUT VERY LITTLE KNOWN MATHA IN THE REPORT 1916 PARA 105, IS NOTICEDS AN-OTHER COPPER PLATE INSCRIPTION IN THE POS-SESSION OF THE SRIGERI MAHTA WHICH RECORDS THE GRANT OF ANOTHER VILLAGE NAMED SURAPURA TO THE SAME SVAMIS BY THE KING IN 1661*

ಸಾರ್ವರಿ ಸಂವತ್ಸರದ ಪುಷ್ಯ ಮಾಸದ ಪೌರ್ಣಮಿಯಲ್ಲು ಅಗ್ನಿಮುದ್ರ ಕೃಷ್ಣಾನಂದ ಯತಿವರರ ಕರಸಂಜಾತ ಸಚ್ಚಿದಾನಂದ ಸ್ವಾಮಿಗೆ ಶ್ರೀರಂಗರಾಯದೇವ ಮಹಾರಾಯ ಕೊಟ್ಟ ಈ ತಾಮ್ರ ಶಾಸನದ ಕಾಲ "ಕ್ರಿ.ಶ ೧೬೬೦. ಈ ಶಾಸನದ ಸಂಪೂರ್ಣ ಪಾಠ ಪ್ರಕಟಣೆಯಾಗಬೇಕಾಗಿತ್ತು. ಮಠದ ಖಜಾನೆಯಲ್ಲಿ ಈ ತಾಮ್ರಶಾಸನವಿರಬಹುದು ಅದನ್ನು ಹುಡುಕಿ ಪ್ರಕಟಿಸಬೇಕು.

ಚಿಕ್ಕಮಗಳೂರು E.C.XI ೧೯೯ಲರ ಸಂಪುಟದಲ್ಲಿ ಶೃಂಗೇರಿ ೩೭ (ರಿ ೧೯೩೩-೨೭) ಈ ಮಠಕ್ಕೆ ಸಂಬಂಧಪಟ್ಟ ತಾಮ್ರಶಾಸನ ಪ್ರಕಟಗೊಂಡಿದೆ. ಸದ್ಯ ಈ ಶಾಸನ ಶೃಂಗೇರಿ ಖಜಾನೆಯಲ್ಲಿ ಇದೆ. ಈ ಶಾಸನದ ಬಗ್ಗೆ ಸಂಪಾದಕರು ಮುನ್ನುಡಿಯಲ್ಲಿ ೧೧ ಕ್ರಿ.ಶ ೧೬೬೧ರ ಮತ್ತೊಂದು ಶಾಸನವು (ಶೃಂ ೩೭) ಸಚ್ಚಿದಾನಂದ ಭಾರತೀ ಸ್ವಾಮಿಗಳ ಶಿಷ್ಯರಾದ ಕೃಷ್ಣಾನಂದ ಸ್ವಾಮಿಗಳನ್ನು ಉಲ್ಲೇಖಿಸುತ್ತದೆ." ಎಂದಿದ್ದಾರೆ. ತೆಲುಗು ಭಾಷೆಯಲ್ಲಿ ಇರುವ ಈ ಶಾಸನವನ್ನು ಅಧ್ಯಯನ ಮಾಡಿದಾಗ, "ಶೃಂಗೇರಿ ಸಂಸ್ಥಾನ ಮಠದ ಶಾಸನವಲ್ಲ"; ಮಠದ ಸಂಗ್ರಹಕ್ಕೆ ಬೇರೆ ಮೂಲದಿಂದ ತಾಮ್ರಶಾಸನ ಸೇರ್ಪಡೆಯಾಗಿದೆ, ಎಂದು ತಿಳಿಯುತ್ತದೆ. ಅಂದಿನ ದಿನಮಾನದ ವಿದ್ವಾಂಸರು ಶೃಂಗೇರಿ ಮಠದ ಶಾಸನ ಎಂದು ಭ್ರಮಿಸಲು ಕಾರಣ ಶಾಸನದಲ್ಲಿ ಉಲ್ಲೇಖಗೊಂಡಿರುವ ಕಾಲಮಾನದಲ್ಲಿ "ಮೊದಲನೇ ಸಚ್ಚಿದಾನಂದಭಾರತೀ ಸ್ವಾಮಿಗಳು" ಶೃಂಗೇರಿ ಧರ್ಮ ಸಿಂಹಾಸನದ ಮೇಲೆ ವಿರಾಜಮಾನರಾಗಿದ್ದರು. ಅವರ ಕಾಲ ೧೬೨೨-

* ಪಂಡಿತ್ ತಾರಾನಾಥ್ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಗಾಯಿತ್ರಿ ಟಾಕೀಸ್ ಪಕ್ಕ, ಬಿ. ಹೆಚ್. ರಸ್ತೆ, ತುಮಕೂರು - -೫೭೨ ೧೦೨

೧೬೬೩. ಪ್ರಕಟಿತ ತೆಲುಗು ಶಾಸನದ ಕಾಲ ಶಾಲಿವಾಹನ ಶಕ ೧೫೮೨ ಪ್ಲವನಾಮ ಸಂವತ್ಸರದ ಕಾರ್ತಿಕ ಶು ೧೫, ಇದು ಇಂಗ್ಲೀಷ್ ತೇದಿ ೨೭ ನೇ ಅಕ್ಟೋಬರ್ ಕ್ರಿ.ಶ. ೧೬೬೧ಕ್ಕೆ ಹೊಂದಿಕೊಳ್ಳುತ್ತದೆ. ಈ ಕಾರಣವೇನೋ ಈ ತಾಮ್ರಶಾಸನವನ್ನು ಶೃಂಗೇರಿ ಮಠದ ಇತಿಹಾಸಕ್ಕೆ ಸೇರಿಸಿಬಿಡಲಾಗಿದೆ.

"The Throne of Transcedental wisdom (IIIrd edition 199) ಪುಸ್ತಕವನ್ನು ಬರೆದ ಕೆ. ಆರ್. ವೆಂಕಟ ರಮಣರವರು ಈ ಶಾಸನದ ಬಗ್ಗೆ "A Passing Mention may be made of the Grant in 1660 By Sri Ranga Raya III, Who was then in Belur, of the Village of Surpura to Krishananda Saraswathi of Mulvai Matha (Tirthalli Taluk) A Worshiper of the Lotous Feet of Sri Sachidananda (Surpur Grant MAR1916 p. 63 & 1933 No. 39 Mohayogindra. Aslo copper Plate in Sringeri) ಎಂದಿದ್ದಾರೆ. ಕೆ. ಆರ್. ವೆಂಕಟರಮಣ ಅವರ ಬರಹದಲ್ಲು ಮುಳುಬಾಗಿಲು ಮಠದ ಕೃಷ್ಣಾನಂದ ಸ್ವಾಮಿ, ಸಚ್ಚಿದಾನಂದ ಮಹಾಯೋಗೀಂದ್ರ ಸ್ವಾಮಿಗಳ ಪಾದಕಮಲವನ್ನು ಅರ್ಚನೆ ಮಾಡುತ್ತಾ ಇದ್ದರು, ಅನ್ನುವ ಧ್ವನಿ ಇದೆ. ಶೃಂಗೇರಿ ಮಠದ ಸಚ್ಚಿದಾನಂದ ಮಹಾಸ್ವಾಮಿಗಳೆ ಇಲ್ಲಿ ಉಲ್ಲೇಖಗೊಂಡಿರುವರು ಎಂದು ಕೆ. ಆರ್. ವೆಂಕಟರಮಣ ರವರು ಹೇಳಿರುವುದು ಸರಿಯಿಲ್ಲ. ತೆಲಗು ತಾಮ್ರಶಾಸನದ ಪಾಠದ ಸಾಲು ಹೀಗಿದೆ:

೧ .... ೧ ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕವರ್ಷಂ
೨ ಬ್ಬುಲು ೧೫೮೨ ಪ್ಲವನಾಮಸಂವತ್ಸರ ಕಾರ್ತಿಕ ಶು ೧೫ಲು
೩ ಆತ್ರೇಯಗೋತ್ರ ಆಪಸ್ತಂಬತಸೂತ್ರ ಯಜುಶ್ಯಾಬಾಧ್ಯಾ
೪ ಯುಲಯಿನ।ಅರ್ವೀಟಿ ರಾಮರಾಜುರಂಗಪರಾಜ್ಯವಾರಿ ಪೌತ್ರ
೫ ಲಯಿನ ಗೋಪಾಲರಾಜಯ್ಯವಾರಿ ಪುತ್ರಲಯಿನ। ಶ್ರೀಮದ್ರಾಜಾಧಿರಾ
೬ ಜ ರಾಜಪರಮೇಶ್ವರ ಶಅರೀವೀರಪ್ರತಾಪ ಶ್ರೀವೀರ ಶ್ರೀರಂಗರಾಯದೇವ
೭ ಮಹಾರಾಯಲಯ್ಯವಾರು ಸದ್ವಿನಯ ಭಯಭಕ್ತುಲಾ ಸಾಷ್ಟಾ (ಗ)ದಂ
೮ ಡಂ ಬೆಟ್ಟಿ ಸಮರ್ಪಿಂಬೈನ ಭೂದಾನ ಗ್ರಾಮಧರ್ಮ ಶಾಸನಮು। ಜಲಗರಮಾ
೯ ನಿ ಸೂರಾಪುರಮು ಅನೆ ಗ್ರಾಮಮು। ಗೋಪಾಳ ಸ್ವಾಮಿ ಪೂಜಕು। ಯೀ
೧೦ ತಥಾತಿಥಿಪೂಣ್ಯ ಕಾಲಮೆಂದ್ದು। ಸಹಿರಣ್ಯೋದಕದಾನಧಾರಾ
೧೧ ಪೂರ್ವ ಕಂಬ್ಬುಗಾ। ಶ್ರೀ ವೆಂಕೈಟೇಶ್ವರ ಪ್ರೀತಿಗಾ ಶ್ರೀಚಂನಕೇಶವಸ್ವಾಮಿಸನ್ನಿ
೧೨ ಧಿನಿ ತ್ರಿಕರಣ ತ್ರಿವಾಚಕಂಗಾ। ಶ್ರೀ ಕೃಷ್ಣಾರ್ಪ್ಪಣಂಗಾ ಸಮರ್ಪ್ಪಿ
೧೩ ಂಚ್ಚಿನ ಭೂದಾನಾಗ್ರಾಮಧರ್ಮ ಶಾಸನವಮು॥..................

ಆದರೆ ಶಾಸನ ರಚನೆಯೂ ಅದ್ವೈತ ಸಂಪ್ರದಾಯದ ಮಠ ಪರಂಪರೆಯನ್ನು ಹೋಲುತ್ತದೆ. ಶೃಂಗೇರಿ ಸಂಸ್ಥಾನದ ಉಲ್ಲೇಖನ ಬಂದಿಲ್ಲ. ಶಾಸನದಲ್ಲಿ ಬಂದಿರುವ "ಸರ್ವತಂತ್ರ ಸ್ವತಂತ್ರ" ಈ ಪದ ಪ್ರಯೋಗದಿಂದ ಈ ಮಠ ಯಾವ ಹಿರಿಯ ಮಠದ ಅಧೀನವಲ್ಲ ಸ್ವತಂತ್ರ ಮಠ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಈ ತಾಮ್ರಶಾಸನದ ವಿಷಯವನ್ನು ಪುಷ್ಟೀಕರಿಸುವ ಶಿಲಾ ಶಾಸನಗಳು ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿ ಇವೆ. ಸಂಪೂರ್ಣ ಪಾಠ ಪ್ರಕಟವಾಗದೆ ಇರುವ "ರನ್ನಗಟ್ಟೆ" ತಾಮ್ರ ಶಾಸನದ ವಿಜಯವನ್ನು ಪುಷ್ಟೀಕರಿಸುವ ಶಿಲಾಶಾಸನವು ಲಭ್ಯವಿದೆ.

೪೮೧ (EC. IX ೧೯೩೪-೩) ಸೂರಾಪುರ ಗ್ರಾಮದ ಪೂರ್ವಕ್ಕೆ ನೆಟ್ಟಿರುವ ಕಲ್ಲು

೧. ಶ್ರೀರಂಗರಾ ೩. ಪ್ಪನಾಯಕ ಮ ೫ ಟಕು ಯಿಟಿ
೨ ಯಲು ಕ್ರಿಷ್ಣ ೪ ಲೊಗಾಲ್ಮ ೬ ನ ಲಕ್ಷ್ಮೀಪುರ

ರನ್ನಗಟ್ಟ EC ೪೮೫ (ರಿ ೧೯೨೬-೮) ತಿರುಮಲದೇವರ ಗುಡಿಯ ಮುಂದೆ ನೆಟ್ಟಿರುವ ಕಲ್ಲು.

೧ ಸ್ವಸ್ತಿ ಶ್ರೀ ವಿಜಯಾಭ್ಯುದಯಶಾಲಿವಾಹನಶ
೨ ಕವರುಷ ೧೫೫೨ನೆಯ ಶಾರ್ವರಿಸಂವತ್ಸರದ ಪುಷ್ಯ
೩ ಬ ೧೦ ಲೂ ಶ್ರೀಮತು ಮುಳುವಾಗಿಲ ಕೃಷ್ಣಾನಂ
೪ ದಸ್ವಾಮಿಗಳವರಿಗೆ ಶ್ರೀರಂಗರಾಯದೇವರಾಯ
೫ ರವರು ಸಹಿರಣ್ಯೋದಕ ದಾನ ಧಾರಾಪೂರ್ವಕವಾ
೬ ಗಿ ಕೊಟ್ಟ ರಣಗಟ್ಟ ಚತುಸ್ಸೀಮೆಯನು

....

....

ಪ್ರಕಟಿತ ಈ ಎರಡು ಶಿಲಾಶಾಸನಗಳು ಈ ಮಠಕ್ಕೆ ನೀಡಿದ ತಾಮ್ರಶಾಸನಕ್ಕೆ ಸಾಕ್ಷಿಯಂತೆ ಇವೆ. ಸಂಪೂರ್ಣ ಪಾಠ ಲಭ್ಯ ಇರುವ ಸೂರಾಪುರ ಗ್ರಾಮದ ಇನಾಮತಿಯನ್ನು ತಾಮ್ರಶಾಸನದಲ್ಲಿ ಲಕ್ಷ್ಮೀಪುರದ ಉಲ್ಲೇಖ ಬಂದಿಲ್ಲ. ಸೂರಾಪುರ ಗ್ರಾಮದ ಒಂದು ಭಾಗ ಲಕ್ಷ್ಮೀಪುರ ಆಗಿರಬಹುದು. ಗ್ರಾಮದ ದೊಡ್ಡ ಭಾಗವನ್ನು ದತ್ತಿ ನೀಡಿ "ಗ್ರಾಮಧರ್ಮಶಾಸನವೆಂದೆ" ಶಾಸನದಲ್ಲಿ ಸ್ಪಷ್ಟವಾಗಿ ಹೇಳಿದೆ. ಪ್ರಕಟಿತ ತಾಮ್ರಶಾಸನದಲ್ಲಿ ಬೇಲೂರು ಕ್ರಿಷ್ಣಪ್ಪನಾಯಕರ ಉಲ್ಲೇಖ ಬಂದಿಲ್ಲ. ಶಿಲಾಶಾಸನದಲ್ಲಿ ಬೇಲೂರು ಸೀಮೆಯನ್ನು ಕ್ರಿಷ್ಣಪ್ಪನಾಯಕ ಆಳ್ವಿಕೆ ಮಾಡುತ್ತಾ ಇದದ್ದು ಸ್ಪಷ್ಟವಾಗುತ್ತದೆ. ಶಿಲಾಶಾಸನದಲ್ಲಿ ಶಾಸನದ ವಿಷಯವನ್ನು ಸಂಕ್ಷಿಪ್ತವಾಗಿ ಕೆತ್ತಲಾಗಿದೆ.

ರನ್ನಗಟ್ಟ ಶಿಲಾಶಾಸನದ ಕಾಲ ಶಾಸನದಲ್ಲಿರುವಂತೆ "ಶಾಲಿವಾಹನ ಶಕವರುಷ ೧೫೮೨ ನೆಯ ಶಾರ್ವರಿಸಂವತ್ಸರದ ಪುಷ್ಯ ೧೦ಲೂ" ನಮಗೆ ಸಂಪೂರ್ಣ ತಾಮ್ರಶಾಸನದ ಪಾಠ ಲಭ್ಯವಿಲ್ಲದೆ ಶಾಸನದ ಸಾರಾಂಶ ಪ್ರಕಟವಾಗಿರುವ ಲೇಖನದಲ್ಲಿ ಲಿಖಿತವಾಗಿರುವ ಕಾಲ "New Moon day of the Month pushya in the year sarvari". ಈ ಸ್ವಲ್ಪ ಬದಲಾವಣೆಯಿಂದ ಶಿಲಾಶಾಸನ, ತಾಮ್ರಶಾಸನ ಎರಡು ೧೯೨೫ ನಾಲ್ಕು ಅಥವಾ

ಐದು ದಿವಸ ಅಂತರದಲ್ಲಿ ರಚನೆಯಾಗಿದೆ. ತಾಮ್ರಶಾಸನದಲ್ಲಿ "ಅರ್ಥೋದಯ".

ಸಮಯದಲ್ಲಿ ಈ ಶಾಸನವನ್ನು ನೀಡಲಾಯಿತು ಎಂದು ಹೇಳಲಾಗಿದೆ. ತಾಮ್ರ ಶಾಸನದಲ್ಲಿ "ರನ್ನಗಟ್ಟ", "ಹಿರೇಕಲ್ಯಾಣಿ" ಬೇಲೂರು ಸೀಮೆಯ ಎರಡು ಗ್ರಾಮಗಳನ್ನು ದಾನ ನೀಡಲಾಗಿದೆ ಎಂದುತಿಳಿಸಿದರೆ ಶಿಲಾಶಾಸನವು "ಹಿರೇ ಕಲ್ಯಾಣಿ" ಬಗ್ಗೆ ಏನೋ ಹೇಳುವುದಿಲ್ಲ. ರನ್ನಗಟ್ಟದ ಒಂದು ಭಾಗ ಹಿರೇಕಲ್ಯಾಣಿ ಇರಬೇಕು. ಕ್ಷೇತ್ರಕಾರ್ಯದಿಂದ ಈ ಗೊಂದಲವನ್ನು ಪರಿಹರಿಸಬಹುದು.

ಮಾರ್ಚ್ ೧೯೩೩ ಪುಟ ೧೮೩-೧೮೪ರ ಪುಟದಲ್ಲಿ ಶೃಂಗೇರಿ ಮಠದ ಖಜಾನೆಯಲ್ಲಿ ಇರುವ ಮುಳುಬಾಗಿಲು ಮಠದ ತೆಲುಗು ತಾಮ್ರಶಾಸನದ ಬಗ್ಗೆ ಈ ಮಾತುಗಳನ್ನು ಹೇಳಲಾಗಿದೆ. "It is intereting to know how the copper plate grant Recording Endowment ot the mulvay (Mulbagal) Matt come into the Possession of the sringeri that the village surapura was sold by the mulbagal matt at some time to the Sringeri Matt, and hence the presence of the grant in the latter, matt which also enjoys the said village granted." ಈ ಮೇಲಿನ ಮಾತುಗಳಿಂದ ಮುಳುಬಾಗಿಲು ಮಠದ ತಾಮ್ರಶಾಸನ ಶೃಂಗೇರಿ ಮಠಕ್ಕೆ ಹೇಗೆ ಬಂತು ಎಂಬುದು ಸ್ಪಷ್ಟವಾಯಿತು. ಈ ತಾಮ್ರಶಾಸನದ ಪಾಠವನ್ನು "ಶೃಂಗೇರಿ ಮಠದ ಕರಡೇ ಕಾಗದದ ಪುಸ್ತಕದಲ್ಲಿ" ಬರೆದಿರುವುದನ್ನು ಪಾಠ ಸಮೇತ MAR. ೧೯೩೪ ಪುಟ ೧೩೭ ರಲ್ಲಿ ದಾಖಲಾಗಿದೆ.

ಕೆಳದಿ ವೆಂಕಟಪ್ಪ ನಾಯಕ (೧೯೯೧-೧೯೬೧) ಆಳ್ವಿಕೆಯ ಕಾಲದ ಒಂದು ತಾಮ್ರ ಶಾಸನದ ಸಂಕ್ಷಿಪ್ತ ವರದಿ ಮಾರ್ಚ್ ೧೯೧೯ರಲ್ಲಿ ವರದಿಯಾಗಿದೆ. ಪೂರ್ಣಪಾಠ ಲಭ್ಯವಾಗಿಲ್ಲ.

ಕೆಳದಿ ವೆಂಕಟಪ್ಪನಾಯಕನ ಆಳ್ವಿಕೆಯ ಕಾಲದ ಈ ತಾಮ್ರಶಾಸನ, ಚಂದ್ರಗ್ರಹಣ ಪೌರ್ಣಮಿ, ಆಶ್ವೀಜ ಮಾಸ ಸೋಮವಾರ ಶಾಲಿವಾಹನ ಶಕ ೧೫೮೩ರಂದು, ಸಹೋದರ ಶಿವಪ್ಪನಾಯಕನ ಶಿವಲೋಕ ಪ್ರಾಪ್ತಿಗಾಗಿ ಮೂದ್ವಾ ಖಂಡಸೀಮೆ, ಸೀತೂರು ಸೀಮೆಯ ೨೫೯ ವರಹ ೧/೨ ಆಣೆಯ ಬೆಲೆ ಬಾಳುವ ಭೂಮಿಯನ್ನು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಸಾರಾವಾರ ಪಾರೀಣ ಯಮನಿಯ ಮೌದ್ಯಷ್ಟಾಂಗ ಯೋಗನಿರುತ ಗುರುಪರಂಪರಾಪ್ರಾಪ್ತ ಶ್ರೀಮದ್ವೈದಿಕ ಮಾರ್ಗಪ್ರದರ್ಶಕ ವಿಷ್ಣುಸ್ವಾಮೀ ಸಂಪ್ರದಾಯಪ್ರವರ್ತಕ ಕೃಷ್ಣಾನಂದಸ್ವಾಮಿಗಳ ಶಿಷ್ಯರಾದ ಸಚ್ಚಿದಾನಂದ ಯೋಗೀಂದ್ರ ಸ್ವಾಮಿಗಳಿಗೆ ಕೊಟ್ಟ ಭೂದಾನ. ಈ ಭೂದಾನದಿಂದ ಮಠದ ಸೇವೆ ದಾನಧರ್ಮಗಳು ನಡೆಯಲಿ ಎಂದು ಮುನಿವೃಂದದಲ್ಲಿ ತುಂಗಭದ್ರಾ ನದಿ ತೀರದಲ್ಲಿ ಕಟ್ಟಿದ ಮುಳುಬಾಗಿಲು ಮಠಕ್ಕೆ ನೀಡಿದ ಭೂದಾನದ ತಾಮ್ರಶಾಸನ.

ಕೆಳದಿ ಅರಸರ ಶಾಸನ ಸಂಪುಟದಲ್ಲಿ ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಮುಳಬಾಗಿಲು ಸ್ಥಳದ ಹೋತನಕಟ್ಟೆ ಅಶ್ವತ್ಥಾಚಾರ್ಯರ ಸಂಗ್ರಹದಲ್ಲಿ ಕ್ರಿ.ಶ. ೧೬೬೬ರ ಶಾಸನವಿದ್ದು ಕೆಳದಿ ಸೋಮಶೇಖರ ಭೂಪಾಲನ ಕಾಲಮಾನದ ಈ ಶಾಸನದ ಸಂಸ್ಕೃತ ಕನ್ನಡ ಎರಡು ಭಾಷೆಯಲ್ಲೂ ಲಿಖಿಸಲ್ಪಟ್ಟಿದೆ. "ಸೋಮಶೇಖರನಾಯಕರ" ಶ್ರೇಯೋಭಿವೃದ್ಧಿಗಾಗಿ" ಭದ್ರ ಸಮುದ್ರದ ಅಗ್ರಹಾರವನ್ನು ಮಹಾಜನಂಗಳಿಗೆ ಕೊಟ್ಟ ಭೂದಾನದ ವಿವರ ಶಾಸನದ ಅಧ್ಯಯನದಿಂದ ತಿಳಿದು ಬರುತ್ತದೆ.

ಘನಗಿರಿ ಅರ್ಥಾತ್ ಪೆನುಗೊಂಡೆಯಲ್ಲಿ ವಿಜಯನಗರ ಪರಂಪರೆಯ ರಾಜರ ಸಿಂಹಾಸನ ನೆಲೆಗೊಳ್ಳುವಂತೆ ತಮ್ಮ ಪರುಷಹಸ್ತದಿಂದ ಪಟ್ಟಾಧಿಕಾರವನ್ನು ನೆರವೇರಿಸಿದ, ಸರ್ವತಂತ್ರ ಸ್ವತಂತ್ರರಾದ ಮುಳಬಾಗಿಲ ಸಚ್ಚಿದಾನಂದ ಸ್ವಾಮಿಗಳ ಪ್ರಶಿಷ್ಯರಾದ ಕೃಷ್ಣಾನಂದ ಸ್ವಾಮಿಗಳ ಶಿಷ್ಯರಾದ ತುಂಗಾಭದ್ರತೀರದ ಮುನಿವೃಂದ ಪುರವರಾಧೀಶ್ವರರಾದ ಸಚ್ಚಿದಾನಂದ ಸ್ವಾಮಿಗಳು ಕೆಳದಿ ನೃಪ "ಸೋಮಶೇಖರನಾಯಕರಿಗದೆ" ಶ್ರೇಯಸ್ಸು ಉಂಟಾಗಲೆಂದು ಭದ್ರ ಸಮುದ್ರದ ಅಗ್ರಹಾರವನ್ನು ಮಹಾಜನಂಗಳಿಗೆ ಹಂಚಿದ ಭೂಮಿಯ ವಿವರವನ್ನು ತಿಳಿಸುವ ತಾಮ್ರಶಾಸನ:

ಶಿವಗುರುಭಕ್ತಿಪರಾಯಣರಾದ ಕೆಳದಿಸದಾಶಿವನಾಯಕರ ವಂಶೋದ್ಭವರಾದ ಸಂಕಣನಾಯಕರ ಪ್ರಪೌತ್ರರು ಸಿದ್ಧಪ್ಪನಾಯಕರ ಪೌತ್ರರು ಶಿವಪ್ಪನಾಯಕರ ಪುತ್ರರಾದ ಭದ್ರಪ್ಪನಾಯಕರೂ ನಮ ಮಠಧರ್ಮಕ್ಕೆ ಶಿವಾರ್ಪಿತವಾಗಿ ಕೊಟ್ಟ ಶಾಸನಸ್ಥವಾದ ಸೀಮೆಯನ್ನು ಪ್ಲವ ಸಂವತ್ಸರದ ಮಾಘ ಶುದ್ಧ ೭ ಆದಿವಾರದಲ್ಲು. ತೀರ್ಥರಾಜಪುರದ ತುಂಗಭದ್ರಾ ತೀರದಲ್ಲಿ ಭದ್ರಪ್ಪನಾಯಕರೂ ಹಿರಣ್ಯಗರ್ಭ ಮಹಾದಾನ ಮಾಡುವ ಪುಣ್ಯಕಾಲದಲ್ಲಿ ನಮ್ಮ ಗುರುಗಳಾದ ಕೃಷ್ಣಾನಂದ ಸ್ವಾಮಿಗಳು ಭದ್ರಪ್ಪನಾಯಕನಿಗೆ ಸೂರ್ಯ ಚಂದ್ರ ಇರುವ ತನಕ ಧರ್ಮಕೀರ್ತಿ ಇರಬೇಕು ಎಂದು ಭದ್ರಪ್ಪನಾಯಕನ ಹೆಸರಿನಲ್ಲಿ ಮಠದ ಆರಾಧ್ಯದೈವ ಗೋಪಾಲಕೃಷ್ಣ ಸ್ವಾಮಿಯ ಪ್ರೀತ್ಯರ್ಥವಾಗಿ ನೀಡಿದ ಭೂಸ್ವಾಸ್ಥ. ಹೀಗೆ ತಮ್ಮ ಗುರುಗಳ ಕಾಲದಲ್ಲಿ ಕೊಟ್ಟ ಭೂ ಸ್ವಾಸ್ಥಿಗೆ ಶಾಸನವನ್ನು ಲಿಖಿಸಿದ್ದು ಶಿಷ್ಯನಾದ ಸಚ್ಚಿದಾನಂದ ಸ್ವಾಮಿಗಳು ಪೀಠಾರೋಹಣ ಮಾಡಿದ ಮೇಲೆ ಗುರುಶಿಷ್ಯ ಸಂಬಂಧವನ್ನು ನಾವು ಇಲ್ಲಿ ಗಮನಿಸಬೇಕು. ಈ ಶಾಸನದ ೨೭ನೇ ಸಾಲಿನಲ್ಲಿ ಸಂಸ್ಕೃತ ಭಾಷೆಯಲ್ಲಿ "ಸರ್ವತಂತ್ರ ಸ್ವತಂತ್ರೇಷು ಮುಳಬಾಗಿಲ ನಾಮನಿ ಸಿಂಹಾಸನಾಧಿ ಪತಿಷು। ವಿದ್ಯಾವಿನಯ ಶಾಲಿಷು। ಕ್ಷೀರಸ್ವಾಮಿ ಪ್ರಶಿಷ್ಯೇಷು ಮಹಾಮಹಿಮ ಚಾರುಷು। ಸಚ್ಚಿದಾನಂದ ಶಿಷ್ಯೇಷು। ಕೃಷ್ಣಾನಂದಾ ಖ್ಯಯೋಗಿಷು..."

ಈ ಮೇಲಿನ ಸಾಲಿನ ಅಧ್ಯಯನದಿಂದ ಈ ಪರಂಪರೆಯ ಆದ್ಯರಾದ ಸಚ್ಚಿದಾನಂದಸ್ವಾಮಿಗಳಿಗೆ "ಕ್ಷೀರಸ್ವಾಮಿ' ಎಂಬ ಇನ್ನೊಂದು ಪರ್ಯಾಯ ಹೆಸರು ಇದ್ದು ಅವರು ಹಾಲಿನ ವ್ರತ ನಡೆಸುತ್ತಾ ಇದ್ದಿರಬೇಕು. ಆ ಬಗ್ಗೆ ವಿವರ ಲಭ್ಯ ಇಲ್ಲ. ಕ್ಷೀರಸ್ವಾಮಿಗಳ ಪ್ರಶಿಷ್ಯ ಸಚ್ಚಿದಾನಂದ ಸ್ವಾಮಿಗಳು ಅವರ ಶಿಷ್ಯ ಕೃಷ್ಣಾನಂದಯೋಗಿಗಳು. ಶಾಸನದ ಕನ್ನಡ ಅವತರಣಿಕೆಯಲ್ಲಿ ಕ್ಷೀರಸ್ವಾಮಿ ಹೆಸರು ಪ್ರಸ್ತಾಪವಾಗಿಲ್ಲ. ಸಚ್ಚಿದಾನಂದಸ್ವಾಮಿ ಎಂದೆ ಲಿಖಿಸಲ್ಪಟ್ಟಿದೆ.

ಕೆಳದಿ ಅರಸರಾದ ಹಿರಿಯ ಬಸಪ್ಪನಾಯಕರು ಕೆಳದಿ ನಾಡನ್ನು ಆಳಿದ್ದು ೧೯೬೭-೧೭೧೪ರ ಕಾಲಮಾನದಲ್ಲಿ, ಇವರ ಆಳ್ವಿಕೆಯ ಕಾಲದ ತೀರ್ಥಹಳ್ಳಿ ತಾಲ್ಲೂಕಿನ ಗೋಪಾಲಪುರದ ಅಗ್ರಹಾರದ ಸುಬ್ಬಾಭಟ್ಟರಿಂದ ಬಂದ ತಾಮ್ರಶಾಸನದ ಕಾಲ "ಶಾಲಿವಾಹನಶಕ ವರುಷ ೧೬೨೦ನೆಯ ಯೇಶ್ವರ ಸಂವತ್ಸರದ ಮಾಘ ಶು ೧೫ ರಲ್ಲಿ ವೆಂಕಪ್ಪನ ಪುತ್ರ ರಂಗಣ್ಣನಿಗೆ ನೀಡಿದ ಕ್ರಯದಾನ ಶಾಸನದ ಆರವತ್ತನೆ ಸಾಲಿನಲ್ಲಿ ಈ ವಿವರವಿದೆ. (ಕೆಳದಿ ವೆಂಕಟೇಶ ಸಂಪಾದಿತ : ಕೆಳದಿ ಅರಸರ ಶಾಸನ ಸಂಪುಟ, ೩೧೧ನೇ ಶಾಸನ ಪು. ೨೨೧)

೬೦..... ೧೦ ಮುಳುಬಾಗಿಲ ಕೃಷ್ಣಾನಂದಸ್ವಾಮಿಗಳೂ ತಂದು

೬೧ ಮಠಕ್ಕೆ ಉತ್ತರವಾದ ಸ್ವಾಸ್ಥವಳಗೆ ದೇವತಾವೆಚ್ಚ ಕೊಟ್ಟ ಬಗೆಯಲ್ಲೂ

ಇಮ್ಮಡಿ ಸೋಮಶೇಖರನಾಯಕರ ಆಳ್ವಿಕೆ ೧೭೩೯-೧೭೫೪, ಇವರ ಕಾಲಮಾನದ ಶೃಂಗೇರಿ ಮಠದಲ್ಲಿ ಇರುವ ತಾಮ್ರಶಾಸನದಲ್ಲಿ ಮುಳುಬಾಗಿಲು ಮಠದ ಉಲ್ಲೇಖವಿದೆ: (ಕೆಳದಿ ಅರಸರ ಶಾಸನ ಸಂಪುಟ ೨೪೯ ನೇ ಶಾಸನ, ಪುಟ ೪೩೫) ಈ ಶಾಸನದ ಕಾಲ "ಶೇ. ೧೬೫೨ ನೆಯ ಸೌಂಮ್ಯ ಸಂವತ್ಸರದ ಶ್ರಾವಣ ಶುದ್ಧ ೧೫ ಅರ್ಥಾತ್ ಕ್ರಿ.ಶ. ೧೭೩೦ ರ ಕಾಲಮಾನದ ಈ ಶಾಸನದಲ್ಲಿ ಮುಳುಬಾಗಿಲ ಸ್ವಾಮಿಗಳ ಉಲ್ಲೇಖ ಇದೆ.

೩೪ ರಾದ ಹೆಚ್ಚಿಗೆಯಿಂದ ಸಂಗಾ ಮುಳುವಾಗಿಲ ಸ್ವಾಮಿಗ

೩೫ ೪ಗೆ ಉತ್ತಾರವಾಗಿದ ಬ್ಗಗೆ ಒದಲು ಉತ್ತಾರ ಕೊಟ್ಟು ಯೀ

ಇಮ್ಮಡಿ ಸೋಮಶೇಖರನಾಯಕರ ಕಾಲದ ತೀರ್ಥಹಳ್ಳಿ ವೆಂಕಟರಮಣಾಚಾರ್ಯರಲ್ಲಿದ್ದ ತಾಮ್ರಶಾಸನದ ಕಾಲ ಶಾ.ಶ. ೧೬೪೬ನೆಯ ಶೋಭಕ್ರುತಸಂವತ್ಸರದ ಶ್ರಾವಣ ಶುಧ ೫, ಇಂಗ್ಲೀಷ್ ತೇದಿ ೧೭೨೪ ರ ಈ ತಾಮ್ರಶಾಸನದಲ್ಲಿಯೂ ಮುಳುಬಾಗಿಲ ಸ್ವಾಮಿಗಳ ಉಲ್ಲೇಖ ಇದೆ.

೧೪೯ ಉಭಯಂ ಗ ೯ ಮುಳಬಾಗಿಲ ಸ್ವಾಮಿಗಳು ಉತ್ತಾರವಾದ ಸ್ವಾಸ್ತೆಯಿಂ

೧೫೦ ದ ತುಕೋಪಂದಿತನ ಅಗ್ರಹಾರ ದೇವಸ್ಥಾನಕೆ ತಂಮದಿ ಹಸಲಗೊಡನಿ ಕಾ

ಶ್ರೀಮಜ್ಜಗದ್ಗುರು ಶ್ರೀ ಕೂಡ್ಲೀ - ಶೃಂಗೇರಿ ಸಂಸ್ಥಾನ ೧೯೬೫ರಲ್ಲಿ ಪ್ರಕಟಿಸಿದ "ಪ್ರಾಚೀನ ಶಾಸನ ಲೇಖನ ಸಂಗ್ರಹ" ಸಂಪುಟದಲ್ಲಿ ಈ ಮಠಕ್ಕೆ ಸಂಬಂಧ ಎರಡು ನಿರೂಪಗಳು ಅಚ್ಚಾಗಿವೆ. ಸಂಪಾದಕರು ಮುಳಬಾಗಿಲ ಕೃಷ್ಣಾನಂದ ಮಠ "ಈ ಮಠವು ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿಯ ಹತ್ತಿರ ದೂರ್ವಾಸಪುರ ಎಂಬ ಕ್ಷೇತ್ರದಲ್ಲಿದೆ. ಈ ಮಠದ ಸದಾನಂದ ತೀರ್ಥ ಸ್ವಾಮಿಗಳು, ೧೭೯೮ ಮತ್ತು ೧೮೦೨ ಓ.ಡಿ. ಯಲ್ಲಿ ಸೀತೂರು ಮತ್ತು ರಾಣಿಬೆನ್ನೂರಲ್ಲಿ ತಮ್ಮ ಮಠಕ್ಕೆ ಇದ್ದ ಒಟ್ಟು ೨೪ ವರಹದ ಭೂಮಿಯನ್ನು ಕೂಡಲಿ ಮಠದಲ್ಲಿರುವ ಶ್ರೀ ವಿದ್ಯಾಶಂಕರ ದೇವರಿಗೆ ದಾನ ಮಾಡಿರುತ್ತಾರೆ.

ಮುಳಬಾಗಿಲು ಕೃಷ್ಣಾನಂದ

ಲೇಖನ ಪಿಂಗಳ ಪುಷ್ಯ ಶು. ೫ ಶಾ.ಶ. ೧೭೧೯ ಕ್ರಿ.ಶ. ೧೭೯೮
ನಮಶ್ರಂದ್ರ ಶರಶ್ಚಂಬಿ ಚಂದ್ರ ಚಾಮರ ಚಾರವೇ
ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭುವೇ
ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲೀವಾಹನ ಶಕ ವರ್ಷ
೧೭೧೯ ಸಿಂಗಳನಾಮ ಸಂವತ್ಸರ
ಪುಷ್ಯ ಶು ೫ ಸ್ಥಿರ ವಾಸರದಲ್ಲಿ ಹುಬ್ಬಳ್ಳಿ ಸ್ಥಳದಲ್ಲಿ ಶ್ರೀ ಕೊಡಲೀ
ಮಠದಲ್ಲಿ ಇರುವ ಶ್ರೀ ಶ್ರೀ ಶ್ರೀಂಗೇರಿ ದೇವರ
ದೀಪಾರಾಧನಾ ನಿಮಿತ್ತವಾಗಿ ಮುಳುಬಾಗಿಲ ಶ್ರೀಮದಭಾವದ
ಕೃಷ್ಣಾನಂದ ಯೋಗೀಂದ್ರ ಕರಕಮಲ ಸುಜಾತರಾದ
ಶ್ರೀ ಸದಾನಂದ ತೀರ್ಥ ಸ್ವಾಮಿಗಳು ನಮ್ಮ ಶ್ರೀ ಗುರುಗಳ ಆರಾಧನಾ
ದಿವಸ, ಇದೇ ಪಂಚಮೀ ದಿವಸದಲ್ಲಿ
ಇಕ್ಕೇರಿ ೧೨ ಅಕ್ಷರದಲ್ಲಿ ಹನ್ನೆರಡು ವರಹಾದ್ದು ಭೂ ಸ್ವಾಸ್ಥಿಯನ್ನು ನಮ್ಮ
ಉಂಬಳೀ ಶೀತೂರ ಗ್ರಾಮದಲ್ಲಿ
ಇದ್ದಂಥಾದ್ದನ್ನು ಶ್ರೀ ವಿದ್ಯಾ ಶಂಕರದೇವರ ಪ್ರೀತ್ಯರ್ಥವಾಗಿ ತ್ರಿಕರಣ
ಪೂರ್ವಕವಾಗಿ ಕೊಟ್ಟಿದ್ದು ಸರಿ ನಮ್ಮ
ಶಿಷ್ಯ ಪಾರಂಪರ್ಯವಾಗಿ ನಡೆಶಿ ಕೊಳ್ಳುತ್ತಾ ಬಂದೇವು, ಎಂದು ನಮ್ಮ
ಆತ್ಮ ಸಂತೋಷದಿಂದ ಬರಸಿ ಕೊಟ್ಟ ದಾನ

ಈ ಎರಡು ನಿರೂಪಗಳ ಅಧ್ಯಯನದಿಂದ ಒಂದು ಮಠದ ಸ್ವಾಮಿಗಳು ಇನ್ನೊಂದು ಮಠದ ಪೂಜಾದಿಗಳಿಗೆ ಹೇಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಾ ಇದ್ದರು ಎಂಬುದು ತಿಳಿದು ಬರುತ್ತದೆ. ಕ್ರಿ.ಶ ೧೭೯೮ರ ಕಾಲಮಾನದ ನಿರೂಪದಲ್ಲಿ ಶ್ರೀಮದಭಾವವ ಕೃಷ್ಣಾನಂದ ಯೋಗೀಂದ್ರ ಸ್ವಾಮಿಗಳ ಕರಸಂಜಾತರಾದ ಶ್ರೀ ಸದಾನಂದ ತೀರ್ಥ ಸ್ವಾಮಿಗಳು ತಮ್ಮ ಗುರುಗಳ ಆರಾಧನೆ ದಿನ ಶ್ರೀ ವಿದ್ಯಾ ಶಂಕರದೇವರ ಪೀತ್ಯರ್ಥವಾಗಿ ದಾನ ಮಾಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. ೧೮೦೨ ರ ಕಾಲದ ಎರಡನೇ ನಿರೂಪವು "ಭಾಗವತ ಸಂಸ್ಥಾನಾಧೀಶವ್ರ ಶ್ರೀ ಸದಾನಂದ ತೀರ್ಥಸ್ವಾಮಿಗಳು' ಅಶೇಷ ಪುಣ್ಯ ಪ್ರಾಪ್ತರ್ಥ ಪ್ರತಿವರ್ಷದಲ್ಲಿ ದೀಪಾರಾಧನ ನಿಮಿತ್ತ ದಾನಮಾಡಿ ಕೊಡಲಿ ಶೃಂಗೇರಿ ಜಗದ್ಗುರುಗಳಲ್ಲಿ ಪೂರ್ಣ ಅನುಗ್ರಹವನ್ನು ಬೇಡಿದ್ದಾರೆ. ಈ ನಮ್ಮ ಭೂದಾನಕ್ಕೆ ನಮ್ಮ ಶಿಷ್ಯ ಪ್ರಿಯಶಿಷ್ಯರು ಅನ್ಯಥಾ ಮಾಡಲಿಕ್ಕಿಲ್ಲ. ಎಂದು ತಮ್ಮ ಶಿಷ್ಯರ ಬಗ್ಗೆ ಅಪಾರವಾದ ನಂಬಿಕೆ ಸ್ವಾಮಿಗಳಿಗೆ.

ಧರ್ಮಪ್ರಭು ಮುಮ್ಮಡಿಯವರು ಕೊಟ್ಟ ಸನ್ನದು MAR. ೧೯೩೪ ಪುಟ ೧೮೨-೮೩ರಲ್ಲಿ ಪ್ರಕಟವಾಗಿದೆ. ಅದರ ಪಾಠ ಇಂತಿದೆ:

ಶ್ರೀ ಚಾಮರಾಜನಡೇರ ತನುಜ ಕೃಷ್ಣ ರಾಜವರ್ತೇರು ತೀರ್ಥಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಮುಳುಬಾಗಿಲು ಭಾಗವಂತ ಸಂಪ್ರದಾಯದ ಮಠದ ಏಜಂಟರು ಹಾಜರ್ಮಾಡಿದ ಸನ್ನದು

೧ ಬನಾಮ। ಅಮೀರಾನೆ ಶಿರಷ್ತೆದಾರಾನ ಹಾಲ ಇಸ್ತಕ ಬಾಲಿ ಮೊಕದ್ದಮಾನೆಮುಜೌಯ್ಯಾತ್ತಾ ಲೋಕೇಕಸಬಾ ನಗರ ಸರಕಾರ ದಾರೂಲರಿಯಾಸತ ಮೈಯಿಶೂರು। ಬಿದಾ ನದ್ದದ್ದರಿವಿಲ್ಲ ತಾಲೋಕ ಮಜಕೂರ ಪೈಕಿ ಹುರುಳಿ ಶೀತ್ತು ರಮಾಗಣೆಗೆ ದಾಖಲಾಗಿ ಯಿರುವ ಮುಳುಬಾಗಿಲೆಂಬ ಗ್ರಾಮದಲ್ಲಿ ಯಿರುವ। ಭಾಗವತ ಸಂಪ್ರದಾಯ ಶ್ರೀ ಕೃಷ್ಣಾನಂದ ಸ್ವಾಮಿಗಳವರಿಗೆ ಮವುಜೆ ಮಜಕೂರಿನಲ್ಲೂ ಪ್ರಾಕು
ರೇಖೆ ಭೂಮಿ ವುತ್ತಾರ ಯಿದ್ದದ್ದು ಹೈದರಿ ೧೯೦೬ ಕೈ
ಹಾಲಿ ಯಿನಾಮತ್ತಿಯಲ್ಲು ಜಾರಿಯಿರುವುದು ೧೨೬||೧|| =
ಭೂಮಿ ಪುತ್ತಾರ ಹೋಗಲಾಗಿ। ಸಾಲಿಯಾನ ಜೋಡಿ
೩೩||೧|| = ಬರುತ್ತಾ ಯಿದ್ದದ್ದು ಸರಿಯಷ್ಟೆ ಆ
ಬಗ್ಗೆ ಶ್ರೀ ಸ್ವಾಮಿಗಳವರು ಹಜೂರಿಗೆ ಬಂದು ಯಿದ್ದು
ಶ್ರೀ ಮಠದ ಧರ್ಮ್ಮಕ್ಕೆ ಸಾಲದೆಂದು ಹೇಳಿಕೊಂಡ

....

ಂನ್ನು ಶಿರಷ್ಟೆದಾರ ಲೆಖಕೆ ಬರೆಶಿ ಅಸಲು ಸನದು ಶ್ರೀ
ಸ್ವಾಮಿಗಳವರ ಮಠಕೆಕ ವಾಪಸು ಕೊಡುವುದು। ಪ್ರಜೋತ್ಪ (ತ್ತಿ)
ಸಂವತ್ಸರದ ಮಾಘ ಶು ೨ ತಾರೀಖು ೧೬ನೆ ಮಾಹೆ (ಜನ)
ವರಿ ಸಂನ್ ೧೮೧೨ನೆ ಇಸವಿ ಬತ್ತು ಮುನಿಶಿ ತಿಮ್ಮಪ್ಪ ಹ
ಜೂರು (ಬೇರೆ ಅಕ್ಷರದಲ್ಲಿ) ನೂರು ಆರುವರ ಹಪ್ಪೈದರಿ ಮೂರು ಹಣ
ಹೈದರಿ ನಡಸುಕೊಂಡು ಬ
ರುದು ಶ್ರೀಕೃಷ್ಣ

ಭಾಗವತ ಸಂಪ್ರದಾಯದ ಶ್ರೀ ಕೃಷ್ಣಾನಂದ ಸ್ವಾಮಿಗಳು, ಮೈಸೂರು ನಗರಕ್ಕೆ ಒಂದು ಮುಮ್ಮಡಿ ಕೃಷ್ಣರಾಜ ಒಡೆಯರವರನ್ನು ಭೇಟಿ ಮಾಡಿ ಈಗ ನಮ್ಮ ಮಠಕ್ಕೆ ನೀಡುತ್ತಿರುವ ಹಣ ನಮ್ಮ ಠದ ಧರ್ಮಕ್ಕೆ ಸಾಲದೆಂದು, ಹೆಚ್ಚು ಹಣ ನೀಡಬೇಕೆಂದು ಹೇಳಿಕೊಂಡದ್ದರಿಂದ, ಹೆಚ್ಚು ಹಣ ಮಂಜೂರು ಮಾಡಿ ನೀಡಿದ ಸನ್ನದ್ದು. ಅಸಲು ಸನ್ನದನ್ನು ಮಠಕ್ಕೆ ವಾಪಸ್ಸು ಕೊಡಿಸಿ ಶಿರಸ್ತೇದಾರ್ ಅವರ ಲೆಖಕ್ಕೆ ಬರೆದು ಕೊಳ್ಳಲು ಆಜ್ಞೆ ಮಾಡಿದ್ದಾರೆ. ಸನ್ನದ್ದು ಬರೆದವನು ಮುನಿಕೆ ತಿಮ್ಮಪ್ಪ. ಪ್ರಜೋತ್ಪತ್ತಿ ಸಂವತ್ಸರದ ಮಾಘ ಶು ೨ ತಾರೀಖು ೧೬ನೆ ಮಾಹೆ ಜನಪರಿ ಸಂನ್ ೧೮೧೨ ನೇ ಇಸವಿಯಲ್ಲಿ ಈ ಸನ್ನದ್ದು ಲಿಖಿಸಲ್ಪಿಟ್ಟದೆ.

ಮಾರ್ಚ್ ೧೯೩೪ಪು ೧೮೪ರಲ್ಲಿ "ತೀರ್ಥಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಮುಳಬಾಗಿಲು ಮಠದ ತಾಮ್ರ ಶಾಸನ" ಪ್ರಕಟವಾಗಿದೆ. ಈ ಶಾಸನ ಈ ಮಠಕ್ಕೆ ಸಂಬಂಧಪಟ್ಟದ್ದು ಅಲ್ಲ. ಶಾ. ಶ ೧೫೬೨ ನೆಯ ವಿಕ್ರಮ ಸಂವತ್ಸರದ ಆಶ್ವೀಜ ೩೭ ಆದಿ ವಾರದಲ್ಲೂ ಶೃಂಗೇರಿ ಅಭಿನವ ನ್ರುಸಿಹ್ವಭಾರತಿ ಸ್ವಾಮಿಗಳ ಶಿಷ್ಯರಾದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಗಳು! ವಸಿಷ್ಠಗೋತ್ರದ ಆಶ್ವಲಾಯುನ ಸೂತ್ರದ ರುಕ್ಕುಶಾಖೆಯು ಚಿಂನ ಭಂಡಾರದ ರಾಮಕ್ರುಷ್ಣಪ್ಪರಸರ ಪುತ್ರರಾದ ಪುರುಷೋತ್ಮರಸರ ಪುತ್ರರು ರಾಮಕ್ರಷ್ಣಪ್ಪನರಸರಿಗೆ ಪಾಲಿಸ್ತ ಭೂದಾನದ ತಾಂಬ್ರ ಶಾಸನ ಈ ತಾಮ್ರಶಾಸನ ಕಾಲಧರ್ಮದಿಂದ ಮನೆತನಗಳ ಏರುಪೇರಿ ನಿಂದ ಮುಳುಬಾಗಿಲು ಮಠಕ್ಕೆ ಬಂದಿರಬಹುದು. ಅಥವಾ ಚಿಂನ ಭಂಡಾರದ ವಂಶದವರಿಂದ ದಾನದ ಭೂಮಿ ಯನ್ನು ಮುಳು ಬಾಗಿಲು ಮಠದವರು ಕೊಂಡಿರಬಹುದು.

ಶ್ರೀ ಭಾಗವತೀಯ ಜಗದ್ಗುರು ಶ್ರೀ ಬಾಲಕೃಷ್ಣಾನಂದ ಸಂಸ್ಥಾನಂ ಗಜಾರಣ್ಯ ಕ್ಷೇತ್ರ, ತಲಕಾಡು ಈ ಮಠದ ಪೀಠಾರೋಹಣ ನೆನಪಿನ ಸಂಚಿಕೆ ೧೯೯೯ರಲ್ಲಿ ಪ್ರಕಟವಾಗಿದೆ. ಈ ಸಂಚಿಕೆಯಲ್ಲಿ ೧೯೮೨ರಲ್ಲಿ ಮುದ್ರಣಗೊಂಡ ಶ್ರೀಶುಕಭಾಷ್ಯಮ್ ಗ್ರಂಥಕ್ಕೆ ಶ್ರೀ ಶ್ರೀ ಶ್ರೀಮದಭಿನವ ಬಾಲಕೃಷ್ಣಾನಂದ ಸ್ವಾಮಿಭಿಃ ಬರೆದ ಶ್ರೀಮುಖವನ್ನು ಯಥಾವತ್ತಾಗಿ ಮುದ್ರಿಸಲಾಗಿದೆ. ಶಿರೋಭಾಗದಲ್ಲಿ ಈ ರೀತಿ ಲಿಖಿಸಲ್ಪಟ್ಟಿದೆ "ಶ್ರೀ ಮತ್ಪರಮಹಂಸ ಪರಿವ್ರಾಜಕಚಾರ್ಯ ವರ್ಯಪದ ವಾಕ್ಯ ಪ್ರಮಾಣ ಪಾರಾವಾರ ಪಾರೀಣಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನನಿಷ್ಠ ಗರಿಷ್ಠತ ಪಶ್ಚಕ್ರವರ್ತ್ಯ ನಾದ್ಯ ವಿಚ್ಛಿನ್ನ ಗುರು ಪರಂಪರಾ ಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ ಸಕಲ ನಿಗಮಾಗಮ ಸಾರಹೃದಯ ವೈದಿಕಮಾರ್ಗಪ್ರವರ್ತಕ ನಿಖಿಲ ವೇದಾರ್ಥ ಪ್ರಕಾಶಕ ವ್ಯಾಖ್ಯಾನ ಸಿಂಹ್ಮಾಸನಾಧೀಶ್ವರ ಸರ್ವತಂತ್ರ ಸ್ವತಂತ್ರಾದಿ ರಾಜಧಾನೀ ವಿದ್ಯಾನಗರ ಕರ್ನಾಟಕ ಸಿಂಹಾಸ ನಾಧೀಶ್ವರ ತುಂಗಭದ್ರಾ ತೀರವಾಸ ಋಶ್ಯಶೃಂಗಮ ಮಧ್ಯವರ್ತಿ ಶ್ರೀ ಮುಳುವಾಗಿಲು ಸಿಹ್ಮಾಸನಾಧೀಶ್ವರ ಕಾವೇರಿ ತೀರವಾಸ ಗಜಾರಣ್ಯ ಕ್ಷೇತ್ರ ಪುರವಾಧೀಶ್ವರ ಶ್ರೀ ್ದಶಗಕಾಚಾರ್ಯಾರಾಪಿಧಿತಸ್ವಸ್ತಿ ಸಮಸ್ತೋಪ ನಿಷತ್ಸಂಸ್ತೂಯಮಾನ ಶ್ರೀ ಗೋಪಾಲ ಕೃಷ್ಣೋಪಾಸಕ ಶ್ರೀ ಭಾಗವತ ಮತ ಪ್ರವರ್ತಕ.......

ಈ ಮೇಲಿನ ಶ್ರೀಮುಖದ ನಿರೂಪದಿಂದ ತಲಕಾಡು ನಗರದಲ್ಲಿ ಇರುವ "ಬಾಲಕೃಷ್ಣಾನಂದ ಮಠ" ಭಾಗವತ ಸಂಪ್ರದಾಯದ್ದು ಅದಕ್ಕೆ ಮೂಲ ತುಂಗಭದ್ರಾ ನದಿ ತೀರದ ಮುಳಲುವಾಯಿ ಅಥವಾ ಮುಳುಬಾಗಿಲು ಎಂದು ಸ್ಪಷ್ಟ ವಾಗುತ್ತದೆ. ಕರ್ನಾಟಕದಲ್ಲಿ ಹರಿ-ಹರ ಭೇದವನ್ನು ಹೇಳದೆ ಉಭಯರನ್ನು ಅರ್ಚನೆ ಅರ್ಪಣೆಯಿಂದ ಸಂತೃಪ್ತಿಗೊಳಿಸುವ ಸಂಪ್ರದಾಯವನ್ನು ಭಾಗವತ ಸಂಪ್ರದಾಯ ಎಂದು ಕರೆಯುತ್ತಾರೆ. ಕೇರಳದ ಎಡನೀರು ಮಠವು ಭಾಗವತ ಸಂಪ್ರದಾಯದ್ದು. ಮುಳು ಬಾಗಿಲು-ದೂರ್ವಾಸಪುರ ಭಾಗವತ ಮಠದಲ್ಲಿ ಸಚ್ಚಿದಾನಂದ ತೀರ್ಥ ಸ್ವಾಮಿಗಳ ನಂತರ ಶ್ರೀ ಶ್ರೀ ಕೃಷ್ಣಾನಂದ ಸ್ವಾಮಿಗಳು ಸದ ಪೀಠದಲ್ಲಿ ವಿರಾಜಮಾನರಾಗಿದ್ದಾರೆ. ಶ್ರೀಮಠದ ಭೂಮಿ ಯನ್ನು ಪ್ರಾಥಮಿಕ ಶಾಲೆ ಕಟ್ಟಡ ಕಟ್ಟಿಸಲು ದಾನ ನೀಡಿದ್ದರಿಂದ "ಕೃಷ್ಣಾನದ ಸರ್ಕಾರಿ ಪ್ರಾಥಮಿಕ ಶಾಲೆ" ಯಿಂದ ವಿದ್ಯಾ ಪ್ರಸಾರವಾಗುತ್ತಿದೆ.

ಅಳಿದು ಉಳಿದಿರುವ ಕಾಗದ ಪತ್ರಗಳು, ಹಸ್ತ ಪ್ರತಿಗಳು, ನಿರೂಪಗಳು, ಶಾಸನಗಳ ಸಹಾಯದಿಂದ ತೀರ್ಥಹಳ್ಳಿ ತಾಲ್ಲೂಕಿನ ದೂರ್ವಾಸಪುರದ "ಮುಳುಬಾಗಿಲ ಭಾಗವತ ಸಂಪ್ರದಾಯದ ಮಠದ" ಇತಿಹಾಸವನ್ನು ರಚಿಸಬೇಕಾಗಿದೆ.(ಈ ಮಠ ಕೆಲವು ಮಾಹಿತಿಗಳನ್ನು ನೀಡಿದ ಸಂಶೋಧಕರಾದ ಸಂತೇಬೆನ್ನೂರು ಸಮತೀಂದ್ರನಾಡಿಗ್ ರವರಿಗೆ ಗೌರವ ಪೂರ್ವಕವಾದ ವಂದನೆಗಳು.)

ಡಾ|| ಡಿ. ಎನ್. ಯೋಗೀಶ್ವರಪ್ಪ*

ಚಿತ್ರದುರ್ಗ ಭರಮಣ್ಣನಾಯಕನ ಕೌಟುಂಬಿಕ ಜೀವನ: ಸಮೀಕ್ಷೆ

ವಿಜಯನಗರ ಸ್ಥಾಪನೆಯೊಂದಿಗೆ ಕೆಲವು ನೂತನ ರಾಜಕೀಯ ಶಕ್ತಿಗಳು ಹೊಯ್ಸಳ ನಾಡಿನಲ್ಲಿ ಅಸ್ತಿತ್ವಕ್ಕೆ ಬಂದವು. ಇವುಗಳಲ್ಲಿ ಚಿತ್ರದುರ್ಗ ನಾಯಕರೂ ಒಂದು. ಕ್ರಿ.ಶ. ೧೬ನೇ ಶತಮಾನದ ಮಧ್ಯಕಾಲದಿಂದ ೧೮ನೇ ಶತಮಾನದ ಉತ್ತರಾರ್ಧದವರೆಗೆ ಎರಡು ಶತಮಾನಗಳಿಗೂ ಹೆಚ್ಚುಕಾಲ ಇವರು ಆಳ್ವಿಕೆ ಮಾಡಿದರು. ಈ ರಾಜ್ಯ ಬಯಲು ನಾಡಿನ ಪ್ರದೇಶದಲ್ಲಿ ವಿಸ್ತಾರವಾಗಿದ್ದುದರಿಂದ ಕೆಳದಿ ನಾಯಕರದಷ್ಟು ಶ್ರೀಮಂತವಾಗಿಲ್ಲದಿದ್ದರೂ ಮಿಲಿಟರಿ ದೃಷ್ಟಿಯಿಂದ ಮಹತ್ವದ ಸ್ಥಾನಪಡೆದಿದೆ. ಇಲ್ಲಿ ಮತ್ತಿ ಮತ್ತು ಬಿಳಿಚೋಡು ಎಂಬ ಎರಡು ಸಂತತಿಗಳ ಪ್ರಮುಖ ನಾಯಕರು ರಾಜಕೀಯ ಕ್ಷೇತ್ರದಲ್ಲಿ ಧೀಮಂತರಾಗಿದ್ದುದಲ್ಲದೆ ಸಾಂಸ ತಿಕ ನಾಯಕರಾಗಿ ಮೆರೆದರು. ವಿಜಯನಗರದರಸರು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುನ್ನಡೆದು, ಅವರ ಸಂಸತಿ ಪರಂಪರೆಯನ್ನು ರಕ್ಷಿಸಿದ್ದಲ್ಲದೆ ಪ್ರಾದೇಶಿಕ ಮಟ್ಟದ ಬುಡಕಟ್ಟು ಮತ್ತು ರಾಷ್ಟ್ರೀಯ ಮಟ್ಟದ ಶಿಷ್ಟ ಸಂಸತಿಯನ್ನು ಸಂಯೋಜಿಸುವುದರ ಜೊತೆಗೆ ಸಾಂಸತಿಕ ಸಂಪರ್ಕವನ್ನು ಸೃಷ್ಟಿಸಿದರು. ಇಂತಹವರಲ್ಲಿ ಭರಮಣ್ಣ ನಾಯಕನೂ ಕೂಡಾ ಒಬ್ಬನಾಗಿದ್ದಾನೆ. ಬಿಳಿಚೋಡು ಸಂತತಿಯ ಬಿಚ್ಚುಗತ್ತಿ ಭರಮಣ್ಣ ನಾಯಕನೆಂದೇ ಪ್ರಸಿದ್ಧನಾದ ಈತ ಕ್ರಿ.ಶ. ೧೬೮೯ರಿಂದ ೧೭೨೧ ರವರೆಗೆ ರಾಜ್ಯಭಾರ ಮಾಡಿದ್ದಾನೆ. ರಾಯದುರ್ಗ, ಹರಪನಹಳ್ಳಿ, ತರೀಕೆರೆ, ಗುಡೇಕೋಟೆ, ಜರಿಮಲೆ ಮೊದಲಾದ ಸುತ್ತಮುತ್ತಲ ಸಂಸ್ಥಾನಿಕರನ್ನು ಯಶಸ್ವಿಯಾಗಿ ಎದುರಿಸಿದನು. ಮರಾಠರು, ಸಿರಾದ ಮೊಗಲ್‌ಸುಭೇದಾರರು ಇವನ ಪ್ರಾಬಲ್ಯ ಅರಿತು ಸಹಕರಿಸಿದರು. ತನ್ನ ಶಕ್ತಿ ಸಾಮರ್ಥ್ಯಗಳಿಂದ ಚಿತ್ರದುರ್ಗಕ್ಕೆ ರಾಜಕೀಯ ಸ್ಥಿರತೆ ಮತ್ತು ಘನತೆಯನ್ನು ತಂದನು. ಇಂತಹ ಸಾಹಸಿಯ ಕೌಟುಂಬಿಕ ಜೀವನದ ಅಧ್ಯಯನ ಮಾಡುವುದು ಈ ಲೇಖನದ ಉದ್ದೇಶ.

ಆಕರಗಳು

ಇತಿಹಾಸದಲ್ಲಿ ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ವೈಯುಕ್ತಿಕ ಜೀವನದ ಬಗೆಗಾಗಲೀ ಅಥವಾ ಅವನ ಕುಟುಂಬದ ಬಗೆಗಾಗಲೀ ದೊರಕುವ ಮಾಹಿತಿ ಕಡಿಮೆ. ಆದ್ದರಿಂದಲೇ ಚರಿತ್ರಕಾರರು ಅವರ ವೈಯುಕ್ತಿಕ ಜೀವನಕ್ಕಿಂತ ಸಾರ್ವಜನಿಕ ಜೀವನದ ಸಂಗತಿಗಳನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತಾರೆ. ಆದರೆ ಭರಮಣ್ಣ ನಾಯಕ ಇದರಿಂದ ಹೊರತಾಗಿದ್ದು, ಆತನ ಕೌಟುಂಬಿಕ ಜೀವನದ ಬಗ್ಗೆ ಕೆಲವು ಮಾಹಿತಿಗಳನ್ನು ವಿವಿಧ ಆಕರಗಳಿಂದ ಸಂಗ್ರಹಿಸಲಾಗಿದೆ. ಎಂ.ಎಸ್. ಪುಟ್ಟಣ್ಣನವರ ಚಿತ್ರದುರ್ಗದ ಪಾಳೆಗಾರರು ಎಂಬ ೧೯೨೪ರಲ್ಲಿ ಪ್ರಕಟಗೊಂಡ ಕೃತಿ ಅವನ ಕುಟುಂಬದ ಬಗ್ಗೆ ಅಲ್ಪ ಸ್ವಲ್ಪ ವಿವರ ನೀಡಿದೆ. ಡಾ. ಎಂ.ಎಂ. ಕಲಬುರ್ಗಿ ಸಂಪಾದಿಸಿರುವ ಕರ್ನಾಟಕದ ಕೈಫಿಯತ್ತುಗಳು, ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಪಾದಿಸಿರುವ ಚಿತ್ರದುರ್ಗ ಬಖೈರು ಹಾಗೂ ಹಿರೇಮದಕರಿ ನಾಯಕನ ತಾರಾವಳಿ, ಲೇಖನಗಳಾದ ಮೀರ ಸಾಬಿಹಳ್ಳಿ ಶಿವಣ್ಣನವರ ನಾಯಕನ ಹಟ್ಟಿ ಪಾಳೆಯಗಾರರು ಡಾ| ಡಿ.ಎನ್. ಯೋಗೀಶ್ವರಪ್ಪನವರ ಜರಿಮಲೆನಾಯಕರು[೬] ಕೆಲ ವಿವರಗಳನ್ನು ನೀಡುತ್ತವೆ. ಇತ್ತೀಚೆಗೆ ಈ ಲೇಖನದ ಲೇಖನಿಗೆ ಮೆಕಂಜಿಯ ಅಪ್ರಕಟಿತ ಹಸ್ತ ಪ್ರತಿಯೊಂದು ದೊರೆತಿದ್ದು, ಅದು ಭರಮಣ್ಣನಾಯಕನ ಕುಟುಂಬಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ನೀಡುತ್ತಿದ್ದು ಅದನ್ನು ಇತರ ಆಕರಗಳೊಂದಿಗೆ ಹೋಲಿಕೆ ಮಾಡುತ್ತಾ ಅವನ ಕುಟುಂಬ ಜೀವನದ ವಿವರಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ.

ರಾಜಾನಾಂ ಬಹುವಲ್ಲಭಾಃ ಎಂಬುದು ರಾಜರ ಅಂತಃಪುರಕ್ಕೆ ಸಂಬಂಧಪಟ್ಟಂತೆ ಬಹಳ ಪ್ರಾಚೀನ ಸೂಕ್ತಿ. ರಾಜರೂ ಹಾಗೂ ಅವರ ಪ್ರಜೆಗಳು ಅಧಿಕ ಪತ್ನಿಯರನ್ನು ಹೊಂದಿದ್ದ ಅನೇಕ ನಿದರ್ಶನಗಳು ಶಾಸನಗಳಲ್ಲೂ ದೊರೆಯುತ್ತವೆ. ಹೊಯ್ಸಳ ದೊರೆ ನರಸಿಂಹದೇವನು ೩೮೪ ಪತ್ನಿಯರನ್ನು ಹೊಂದಿದ್ದನೆಂದು ಕ್ರಿ.ಶ ೧೧೬೧ರ ಶಾಸನ ಹೇಳುತ್ತದೆ. ವಿದೇಶಿ ಪ್ರವಾಸಿಗರ ವರದಿಯಲ್ಲಿ ವಿಜಯನಗರದ ಅರಸರ ಬಹುಪತ್ನಿಯರ ಸಂಖ್ಯೆಯನ್ನು ಕುರಿತು ಸಾಹಿತ್ಯ ಕೃತಿಗಳಲ್ಲಿ ನಿರ್ದಿಷ್ಟ ಅಂಕಿಗಳು ದೊರೆಯದಿದ್ದರೂ ರಾಜರು ಬಹು ವಲ್ಲಭೆಯರನ್ನು ಹೊಂದಿದ್ದರು ಎಂಬುದಕ್ಕೆ ಸಾಕಷ್ಟು ಸಾಕ್ಷಾಧಾರಗಳು ದೊರೆಯುತ್ತವೆ. ಉದಾಹರಣೆಗೆ ಕಂಪಿಲನ ವೈಭವವನ್ನು ವರ್ಣಿಸುವಾಗ ನಂಜುಂಡ ಕವಿಯು

'ರಾಣಿಯಯ ಪಲಬರು ಪೊಸಗಾಡಿ ವಡೆದಿರುತಿಹರಾ ಕರ್ಣಾಟ ವಸುಧಾದೀಶ ಕಂಪಿಲಗೆ...... ನೃತ್ಯದಿಂದ ಜೋಕ ವೆತ್ತನವ ನಚ್ಚಣಿಯಿರಾ ರಾಯಗನೇಕವಿಹುದು'.....ಎಂದು ಹೇಳಿ ಕೊನೆಗೆ ರಾಜನಿಗೆ ಅಂತಃಪುರದಲ್ಲಿ ಇಷ್ಟೊಂದು ಜನರಾಣಿಯರಿದ್ದರೂ ಹರಿಹರದೇವಿ ಎಂಬ ಪಟ್ಟದರಸಿ ಇದ್ದುದಾಗಿ

* ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು

ಹೇಳುವನು[೮]. ಆದುದರಿಂದ ರಾಜವಂಶದಲ್ಲಿ ಬಹುಪತ್ನಿತ್ವ ಸಾಮಾನ್ಯವಾದ ಸಂಗತಿಯಾಗಿತ್ತು ಎಂದು ಹೇಳಬಹುದು.

ವಿಜಯನಗರದರಸರ ಸಮಕಾಲೀನರಾಗಿದ್ದ ಚಿತ್ರದುರ್ಗದ ನಾಯಕರೂ ತಮ್ಮ ವೈಯುಕ್ತಿಕ ಜೀವನದಲ್ಲಿ ಈ ಪದ್ಧತಿಯನ್ನೇ ಅನುಸರಿಸಿದರು. ಬಹುಪತ್ನಿತ್ವ ಅಂದು ಹೆಚ್ಚಾಗಿ ರಾಜಮನೆತನದವರು ಮತ್ತು ಶ್ರೀಮಂತ ಮನೆತನದವರಲ್ಲೇ ಅಲ್ಲದೆ ಸಾಮಾನ್ಯ ವರ್ಗದವರೂ ಇದರಿಂದ ಹೊರತಾಗಿರಲಿಲ್ಲ ಎಂಬುದನ್ನು ಕೆಳದಿ ಅರಸರ ಕಾಲದಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ್ದ ಪಿಯತ್ರೋಡೆಲ್ಲಾ ವೆಲ್ಲಾನ ಬರವಣಿಗೆಯಿಂದ ತಿಳಿಯಬಹುದು. ಚಿತ್ರದುರ್ಗದ ಸಮಕಾಲೀನ ಕೆಳದಿ ಮನೆತನದ ದೊರೆಗಳು ಸಾಮಾನ್ಯವಾಗಿ ೩-೪ ಪತ್ನಿಯರನ್ನು ಹೊಂದಿರುವ ಬಗ್ಗೆ ಕೆಳದಿ ನೃಪವಿಜಯದಲ್ಲಿ ಉಲ್ಲೇಖಗಳಿವೆ. ಉದಾ: ಕೆಳದಿ ಶಿವಪ್ಪನಾಯಕನು ೫ ಪತ್ನಿಯರನ್ನು ಹೊಂದಿದ್ದರೆ, ಹಿರಿಯ ಬಸವಪ್ಪನಾಯಕನಿಗೆ ನಾಲ್ಕುಜನ ಪತ್ನಿಯರು. ಬಹುರಾಜರಿಗೆ ಕನಿಷ್ಠ ಇಬ್ಬರು ಪತ್ನಿಯರು ಇರುವುದು ಕಾಣುತ್ತದೆ[೯]. ಆದುದರಿಂದ ಅಂದು ಸಮಾಜದ ಮೇಲ್‌ಸ್ತರದಲ್ಲಿದ್ದ ಪ್ರಭಾವಶಾಲಿ ಜನರು ಹೆಚ್ಚು ಪತ್ನಿಯರನ್ನು ಹೊಂದುವುದು ಸರ್ವೇಸಾಮಾನ್ಯವಾದ ಸಂಗತಿಯಾಗಿತ್ತು. ಕರ್ನಾಟಕದ ಮಧ್ಯಭಾಗದ ಅತ್ಯಂತ ಪ್ರಬಲ ರಾಜಮನೆತನವಾಗಿದ್ದ ಚಿತ್ರದುರ್ಗ ನಾಯಕ ವಂಶದಲ್ಲಿ ಹೆಚ್ಚು ಕಡಿಮೆ ಎಲ್ಲಾ ನಾಯಕರು ಕನಿಷ್ಠ ಇಬ್ಬರು ಪತ್ನಿಯರನ್ನು ಹೊಂದಿದ್ದರೆಂದು ದಾಖಲೆಗಳಿಂದ ಗೊತ್ತಾಗುತ್ತದೆ. ಉದಾಹರಣೆಗೆ ಚಿತ್ರದುರ್ಗದ ಒಬಳಣ್ಣ ನಾಯಕನಿಗೆ ೫ಜನ ಪತ್ನಿಯರು[೧೦]. ಕಸ್ತೂರಿ ರಂಗಪ್ಪನಾಯಕನಿಗೆ ೧೨ಜನ”, ಇಮ್ಮಡಿ ಮದಕರಿ ನಾಯಕನಿಗೆ ೩೦ಜನ ರಾಣಿಯರು ಇದ್ದರೆಂದು ತಿಳಿದು ಬರುತ್ತದೆ.

ಮಡದಿಯರು

ತನ್ನ ಪೂರ್ವಜರ ಪರಂಪರೆಯನ್ನೇ ಮುಂದುವರಿಸಿದ ನಾಯಕ ಬರಮಣ್ಣನು ರಾಣಿಯರನ್ನು ಪಡೆಯುವುದರಲ್ಲಿ ದಾಖಲೆ ಸೃಷ್ಟಿಸಿದ್ದಾನೆ. ಇವನಿಗೆ ಒಟ್ಟು ೩೩ಜನ ಮಡದಿಯರು ಇದ್ದರೆಂದು ಮೆಕಂಜಿ ತಿಳಿಸುತ್ತಾನೆ. ಅವರುಗಳೆಂದರೆ,[೧೩]

೧. ದೊಡ್ಡಸಿದ್ದವ್ವ
೨. ದೊಡ್ಡಗೌಡವ್ವ
೩. ಹುಚ್ಚವ್ವ
೪. ರಂಗವ್ವ
೫. ಸಣ್ಣಸಿದ್ದವ್ವ
೬. ಜರಮಲೆ ಬಂಗಾರವ್ವ
೭. ಚಿಕ್ಕವೀರವ್ವ
೮. ಹುಲಿಗಮ್ಮ ಜೀರವ್ವ
೯. ಹಲಗಳವ್ವ
೧೦. ದೊಡ್ಡ ತಿಮ್ಮವ್ವ
೧೧. ಕರಿಸಿದ್ದವ್ವ
೧೨. ಹಂದಿನೂರು ಜೀರವ್ವ
೧೩. ದೊಡ್ಡ ಚನ್ನವೀರವ್ವ
೧೪. ಚಿಕ್ಕ ಚನ್ನವೀರವ್ವ
೧೫. ಚಿಕ್ಕ ಹುಚ್ಚವ್ವ
೧೬. ದೊಡ್ಡ ಕೃಷ್ಣವ್ವ
೧೭. ಚಿಕ್ಕ ಕಾಶವ್ವ
೧೮. ಬೋರವ್ವ
೧೯. ಚಿಕ್ಕಬಸವ್ವ
೨೦. ಹಂಪವ್ವ
೨೧. ಚಿಕ್ಕಲಿಂಗವ್ವ
೨೨. ಪುಟ್ಟ ರಂಗವ್ವ
೨೩. ಚಿಕ್ಕ ಲಿಂಗವ್ವ
೨೪. ಬೊಮ್ಮವ್ವ
೨೫. ಕಾಮಟಿ ಸಿದ್ದವ್ವ
೨೬. ಗಂಗವ್ವ
೨೭. ಮಾದವ್ವ
೨೮. ಹುಚ್ಚವ್ವ
೨೯. ಚನ್ನವ್ವ
೩೦. ಬೋರವ್ವ
೩೧. ಮಾದವ್ವ
೩೨. ಜೀರವ್ವ
೩೩. ತೋಪಕ್ಕ.

ಇವರಲ್ಲಿ ಹಲವರು ವಿವಿಧ ನಾಯಕ ಮನೆತನಗಳಿಗೆ ಸೇರಿದವರಾಗಿದ್ದಿರಬಹುದು. ಅವರಲ್ಲಿ ಬಂಗಾರವ್ವ ನಾಗತಿಯು ಗುಡೇಕೋಟ ನಾಯಕ ಮನೆತನಕ್ಕೆ ಸೇರಿದವಳಾಗಿದ್ದು ಭರಮಣ್ಣ ನಾಯಕ ಗುಡೇಕೋಟೆ ಮೇಲೆ ಕ್ರಿ.ಶ. ೧೬೯೯ರಲ್ಲಿ ದಾಳಿ ಮಾಡಿದಾಗ ಅವರ ಕಡೆಯ ಸಕ್ಕರೆ ನಾರಣಪ್ಪನು ಮಧ್ಯಸ್ಥಿಕೆ ವಹಿಸಿ ಗುಡೇಕೋಟೆ ಹೆಣ್ಣು ಮಗಳು ಬಂಗಾರವ್ವ ಮಾಗತಿಯನ್ನು ಭರಮಣ್ಣ ನಾಯಕನಿಗೆ ಕೊಟ್ಟು ವಿವಾಹ ಮಾಡಿಸಿ ಯುದ್ಧ ಸ್ಥಗಿತಗೊಳಿಸಿದನು[೧೪]. ಹೀಗೆ ದುರ್ಬಲನಾದ ರಾಜ ಪ್ರಬಲ ಶಕ್ತಿಯೊಂದಿಗೆ ಹೋರಾಡಲು ಸಾಧ್ಯವಾಗದೇ ಇದ್ದಾಗ ವೈವಾಹಿಕ ಸಂಬಂಧದ ಮೂಲಕ ರಾಜ್ಯ ಉಳಿಸಿಕೊಳ್ಳುತ್ತಿದ್ದುದು ಸಾಮಾನ್ಯವಾದ ಸಂಗತಿಯಾಗಿತ್ತೆಂದು ಚರಿತ್ರೆಯಲ್ಲಿನ ಅನೇಕ ಘಟನೆಗಳು ತಿಳಿಸುತ್ತವೆ.

ವಿಜಯನಗರಕ್ಕೆ ಭೇಟಿ ನೀಡಿದ್ದ ನ್ಯೂನಿಜ್‌ನು ರಾಜರು ಬಹಳ ಮಡದಿಯರನ್ನು ಹೊಂದುವುದು ಬಹಳ ಘನವಾದುದೆಂದು ಬಗೆಯುತ್ತಾರೆ[೧೫] ಎಂದಿದ್ದಾನೆ. ಪೋರ್ಚುಗೀಸ್ ಪ್ರವಾಸಿಗ ಬಾರ್ಬೋಸಾನು ವಿಜಯನಗರದ ಜನತೆಯ ಬಗೆಗೆ ತಿಳಿಸುತ್ತಾ ರಾಜ ಮತ್ತು ಅವನ ಪ್ರಜೆಗಳು ವಿವಾಹ ಕಾನೂನಿಗನುಗುಣವಾಗಿ ಮದುವೆಯಾಗುತ್ತಾರೆ. ಆದಾಗ್ಯೂ ಸ್ಥಿತಿವಂತರು ಅನೇಕ ಮಡದಿಯರನ್ನು ಹೊಂದಿರುವರು[೧೬]. ಅಬ್ದುಲ್‌ರಜಾಕ್‌ನ ವರದಿಯಂತೆ, ಜನಗಳು ಹೇಳುವುದು ನಿಜವಾದರೆ ರಾಜನ ಅಂತಃಪುರದಲ್ಲಿ ಇರುವ ರಾಣಿಯರು ಮತ್ತು ಇಟ್ಟುಕೊಂಡವರು ಏಳುನೂರು ಇದ್ದಾರೆ. ದೇಶದಲ್ಲಿ ಎಲ್ಲಿಯಾದರೂ ಸರಿಯೇ ರೂಪವತಿಯಾದ ಹುಡುಗಿ ಇದ್ದಾಳೆಂದು ಗೊತ್ತಾದರೆ, ಆಕೆಯ ತಂದೆ ತಾಯಿಗಳ ಒಪ್ಪಿಗೆ ಪಡೆದ ಕೂಡಲೇ ಆಕೆಯನ್ನು ವೈಭವಯುತವಾಗಿ ಕರೆತಂದು ಅಂತಃಪುರಕ್ಕೆ ಸೇರಿಸುತ್ತಾರೆ. ಅಂದಿನಿಂದ ಮತ್ತಾರೂ ಆಕೆಯನ್ನು ನೋಡುವಂತಿಲ್ಲ. ಆದರೆ ಆಕೆಗೆ ಅಂತಃಪುರದಲ್ಲಿ ಅತ್ಯುನ್ನತ ಗೌರವ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಚಿತ್ರದುರ್ಗದ ಭರಮಣ್ಣ ನಾಯಕನು ಸ್ಥಿತಿವಂತ ಬಲಶಾಲಿಯಾಗಿದ್ದರಿಂದಲೇ ಹಲವು ಮಡದಿಯರನ್ನು

ಹೊಂದಿದ್ದಾನೆ. ಇವರಲ್ಲಿ ತಂದೆ ತಾಯಿಗಳ ಒಪ್ಪಿಗೆ ಪಡೆದು ಕರೆ ತಂದವರೂ, ಶಾಸ್ತ್ರೋಕ್ತವಾಗಿ ವಿವಾಹವಾದವರೂ, ಶಾಂತಿ ಸ್ಥಾಪನೆಗೋಸ್ಕರ ಬಲವಂತದಿಂದ ಕರೆತಂದವರೂ ಸೇರಿದ್ದರಿಂದಲೇ ಆತನ ಮಡದಿಯರ ಸಂಖ್ಯೆ ೩೩ನ್ನು ತಲುಪಿತು ಎಂದು ಹೇಳಬಹುದು. ಇವರಲ್ಲಿ ಪ್ರಧಾನ ಪತ್ನಿಗೆ ಹೆಚ್ಚಿನ ಮನ್ನಣೆ ಇದ್ದು ಸಾರ್ವಜನಿಕವಾಗಿ ರಾಜನೊಂದಿಗೆ ಕಾಣಿಸಿಕೊಳ್ಳುವ ಅರ್ಹತೆ ಹೊಂದಿದ್ದಳು. ಅಲ್ಲದೆ ಅವಳ ಮಗನೇ ರಾಜನ ಉತ್ತರಾಧಿಕಾರಿ ಯಾಗುತ್ತಿದ್ದನು. ಇಲ್ಲಿ ಹಿರೇಮದಕರಿನಾಯಕನು ಭರಮಣ್ಣನಾಯಕನ ಉತ್ತರಾಧಿಕಾರಿಯಾಗಿದ್ದನೆಂದು ಇವರ ಚರಿತ್ರೆಯು ತಿಳಿಸುತ್ತದೆ. ಇವನ ಮಾತಾಪಿತೃಗಳ ಬಗ್ಗೆ ಹಿರೇಮದಕರಿನಾಯಕನ ತಾರಾವಳಿ ಈ ರೀತಿ ತಿಳಿಸುತ್ತದೆ.

> ಕ್ಷೀರಾಬ್ದಿಯಲಿ ಚಂದ್ರ ಪುಟ್ಟಿದಂದದಲಿ
> ನಾರಿ ಸಿದ್ದಾಂಬೆ ಭರಮೇಂದ್ರನುದರದಲಿ
> ಭೂರಮಣ ಮದಕರಿ ಜನಿಸಿ ಸುಖವಿರಲಿ.[೧೮]

ಇದರ ಆಧಾರದ ಮೇಲೆ ಹೇಳುವುದಾದರೆ ಹಿರೇಮದಕರಿ ನಾಯಕನ ತಾಯಿ ಸಿದ್ಧಾಂಬ. ಇವಳೇ ಭರಮಣ್ಣನಾಯಕನ ಐದನೇ ಪತ್ನಿಯಾಗಿದ್ದು ಮೆಕಂಜಿ ನೀಡಿರುವ ಪಟ್ಟಿಯಲ್ಲಿನ ಸಣ್ಣ ಸಿದ್ದವ್ವನೇ ಸಿದ್ದಾಂಬೆಯಾಗಿದ್ದಳೆಂದು ತೀರ್ಮಾನಿಸಬಹುದು.

ಗಂಡುಮಕ್ಕಳು :- ಹೀಗೆ ಅನೇಕ ಮಡದಿಯರನ್ನು ಹೊಂದಿದ್ದ ಭರಮಣ್ಣ ನಾಯಕ ಎಷ್ಟು ಮಕ್ಕಳನ್ನು ಪಡೆದಿದ್ದ ಎಂಬುದು ಕುತೂಹಲಕಾರಿಯಾದ ಸಂಗತಿ. ಅಪ್ರಕಟಿತ ಮೆಕಂಜಿಯ ದಾಖಲೆಯಲ್ಲಿ ತಿಳಿಸಿರುವಂತೆ ಇವನು ೩೧ಗಂಡು ಮಕ್ಕಳನ್ನು ೯ಜನ ಹೆಣ್ಣುಮಕ್ಕಳನ್ನು ಪಡೆದಿದ್ದನು. ಗಂಡು ಮಕ್ಕಳ ಹೆಸರು ಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಭರಮಣ್ಣ ಹೆಸರಿನ ಇಬ್ಬರೂ, ಕೆಂಪಣ್ಣ ಹೆಸರಿನ ನಾಲ್ಕುಜನ, ದೊಡ್ಡಕಾಟಣ್ಣ ಹೆಸರಿನ

೧) ದೊಡ್ಡ ಜಂಪಣ್ಣ
೨) ಓಡೋ ಜಂಕಪ್ಪಯ್ಯ
೩) ಭರಮಣ್ಣ
೪) ಕೊಂಪೆ ಜಂಪ ಚಿಕ್ಕಣ್ಣ
೫) ಸಿದ್ದಲಿಂಗಪ್ಪ
೬) ಚಿತ್ರನಾಯಕ
೭) ದೊಡ್ಡ ಲಿಂಗಣ್ಣ
೮) ಕೆಂಪಣ್ಣ
೯) ದ್ಯಾವಪ್ಪ ನಾಯಕ
೧೦) ಲಿಂಗಣ್ಣ
೧೧) ದೊಡ್ಡ ಭರಮಣ್ಣ
೧೨) ಮೆದಕೆರೆ ನಾಯಕ
೧೩) ಚಿಕ್ಕ ಜಾವಣ್ಣ
೧೪) ದೊಡ್ಡ ಕಾಟಣ್ಣ
೧೫) ಚಿಕ್ಕ ಕಾಟಣ್ಣ
೧೬) ಚಿಕ್ಕ ಲಿಂಗಣ್ಣ
೧೭) ಚಿಕ್ಕ ಭರಮಣ್ಣ
೧೮) ಪರಶುರಾಮಪ್ಪ
೧೯) ಚಿಕ್ಕ ಭರಮಣ್ಣ
೨೦) ದೊಡ್ಡ ಕಾಟಣ್ಣ
೨೧) ಚಿಕ್ಕ ಕಾಟಣ್ಣ
೨೨) ಭರಮಣ್ಣ
೨೩) ಕರೆಕಾಟಯ್ಯ
೨೪) ಮೂಜನ ಲಿಂಗಣ್ಣ
೨೫) ಕೆಂಪಣ್ಣ
೨೬) ಲಿಂಗಣ್ಣ
೨೭) ಬಡೇಲಿಂಗಣ್ಣ
೨೮) ಕೆಂಪಣ್ಣ
೨೯) ಲಿಂಗಣ್ಣ
೩೦) ಕಾಟಣ್ಣ
೩೧) ಕೆಂಪಣ್ಣ

ಇಬ್ಬರೂ, ಚಿಕ್ಕಕಾಟಣ್ಣ ಹೆಸರಿನ ಹಾಗೂ ಚಿಕ್ಕಭರಮಣ್ಣ ಎಂಬ ಹೆಸರಿನ ಇಬ್ಬರೂ ಕಾಣಸಿಗುತ್ತಾರೆ. ಮೆಕಂಜಿ ತಿಳಿಸಿದಂತೆ ಪ್ರತಿಯೊಬ್ಬ ಮಡದಿಯೂ ಮಗುವಿಗೆ ಜನ್ಮ ನೀಡಿದುದು ಗೊತ್ತಾಗುತ್ತದೆ. ಯಾರೂ ಬಂಜೆಯರಾಗಿರಲಿಲ್ಲ. ಅವನ ಮಕ್ಕಳ ವ್ಯಕ್ತಿನಾಮಗಳನ್ನು ಗಮನಿಸಿದರೆ ಬಾಂಧವ್ಯಸೂಚಕ, ವೃತ್ತಿಸೂಚಕ ಮತ್ತು ಗೌರವವಾಚಿ ಎಂದು ವಿಭಜಿಸಬಹುದು. ಇಲ್ಲಿ ಬರುವ ಅಪ್ಪ, ಅಣ್ಣ, ಅಯ್ಯ ಬಾಂಧವ್ಯ ವಾಚಿಗಳಾದರೆ, ಮದಕರಿನಾಯಕ, ಚಿತ್ರನಾಯಕ, ದ್ಯಾವಪ್ಪನಾಯಕ ಹೆಸರುಗಳು ವೃತ್ತಿಸೂಚಕಗಳಾಗಿವೆ

> ಉದಾಹರಣೆಗೆ ಭರಮ + ಅಣ್ಣ- ಭರಮಣ್ಣ
> ಸಿದ್ದಲಿಂಗ + ಅಪ್ಪ -ಸಿದ್ಧಲಿಂಗಪ್ಪ
> ಚಿತ್ರ + ನಾಯಕ -ಚಿತ್ರನಾಯಕ.

ವ್ಯಕ್ತಿಯ ಹೆಸರಿನ ಮೊದಲು ಬರುವ ವಿಶೇಷಣೆಗಳಾದ ದೊಡ್ಡ, ಚಿಕ್ಕ, ಬಡೇ, ಇತ್ಯಾದಿ ಗೌರವ ಸೂಚಿಗಳಾಗಿವೆ. ಒಂದೇ ಹೆಸರಿನ ಅನೇಕ ವ್ಯಕ್ತಿಗಳಿದ್ದಾಗ ಅವರನ್ನು ಗುರ್ತಿಸುವುದಕ್ಕಾಗಿ ಗೊಂದಲ ನಿವಾರಣೆಗೆ ಈ ವಿಶೇಷಣಗಳನ್ನು ಇವರು ಬಳಸಿರುವುದು ಕಂಡುಬರುತ್ತದೆ.

ಈತನ ಮಕ್ಕಳು ಒಬ್ಬರಿಗಿಂತ ಒಬ್ಬರು ಪರಾಕ್ರಮ ಶಾಲಿಗಳಾಗಿದ್ದರು. ಇವರ ಶಕ್ತಿಯಿಂದಲೇ ಭರಮಣ್ಣ ಪರಾಕ್ರಮ ಶಾಲಿಯಾಗಿ ಮೆರೆದು ಅಜೇಯನಾಗಿದ್ದು. ಇವನ ಸಮರಗಳ ಬಗ್ಗೆ 'ಸಮರವಿಜಯ' ಕೃತಿ ರಚನೆಯಾಗಿದ್ದು ತನ್ನ ವಂಶದ ಬೇರೆ ನಾಯಕರುಗಳ ಬಗ್ಗೆ ಇಂತಹ ಕೃತಿ ರಚನೆಯಾಗಿಲ್ಲದೆ ಇರುವುದನ್ನು ನೋಡಿದರೆ ಇವನ ವಿಜಯಗಳಿಗೆ ಮುಖ್ಯಕಾರಣ ಆತನ ಪತ್ನಿಯರು ಮತ್ತು ಮಕ್ಕಳು. ಉದಾಹರಣೆಗೆ, ಬಿಜಾಪುರದ ದಿಲಾವರ್‌ಖಾನ್ ತನ್ನ ಮನ್‌ಸಬ್‌ದಾರರ ಜೊತೆ ದುರ್ಗದ ಮೇಲೆ ದಾಳಿ ಮಾಡಿದಾಗ ಆಡಿವಾಲದ ಬಳಿ ನಡೆದ ಯುದ್ಧದಲ್ಲಿ ಭರಮಣ್ಣ ಗಾಯಗೊಂಡು ಹಿಂತಿರುಗಿದ ಸಮಯದಲ್ಲಿ ಆತನ ಮಕ್ಕಳಾದ ಮದಕರಿನಾಯಕ, ದಂಡಿನ ಜಂಪಣ್ಣ ನಾಯಕ, ಭರಮಣ್ಣನಾಯಕ, ಕಾಟಪ್ಪನಾಯಕ, ಲಿಂಗಣ್ಣನಾಯಕ, ಗಂಗಣ್ಣ ನಾಯಕರು ಆಕ್ರೋಶಗೊಂಡು ೧೮ ಅಂಬಾರಿಗಳಲ್ಲಿ ಕೂತು ಯುದ್ಧ ಮಾಡುತ್ತಿದ್ದ ಸರದಾರರನ್ನು ಹೊಡೆದು ನವಾಬರನ್ನು ಸೆರೆ ಹಿಡಿದು ೪ ಪಿರಂಗಿ, ೧೦ ಆನೆಗಳನ್ನು ವಶಪಡಿಸಿಕೊಂಡರು.[೨೦] ಇಂತಹ ಬುದ್ದಿವಂತ, ಶಕ್ತಿ ಶಾಲಿಯಾದ ಮಕ್ಕಳನ್ನು ಕೇವಲ ರಾಜಧಾನಿಯಲ್ಲಿಟ್ಟುಕೊಂಡು ಸೇನಾ ಉಸ್ತುವಾರಿಯನ್ನು ನೀಡದೆ ಅವನು ಅವರನ್ನು ತನ್ನ ರಾಜ್ಯದ ಪ್ರಮುಖ ಆಯಕಟ್ಟಿನ ಸ್ಥಳಗಳಿಗೆ ನೇಮಕ ಮಾಡಿದ್ದನು.

ದೊಡ್ಡೇರಿ ಕೋಟೆಗೆ ಕಾಟಪ್ಪನಾಯಕನನ್ನು, ಹೊಸದುರ್ಗಕ್ಕೆ ದಂಡಿನ ಜಂಪಣ್ಣನಾಯಕರನ್ನು, ಮೊಳಕಾಲ್ಮೂರು ಕೋಟೆಗೆ ಬರಮಣ್ಣನಾಯಕರನ್ನು ಕಣಕುಪ್ಪೆ ಕೋಟೆಗೆ ಜಂಪಣ್ಣನಾಯಕರನ್ನು ನೇಮಿಸಿ ಆ ಕೋಟೆಗಳ ಉಸ್ತುವಾರಿ ನೀಡಿದನು. ಇವರುಗಳಿಂದಲೇ ರಾಜ್ಯಕ್ಕೆ ಭದ್ರವಾದ ರಕ್ಷಣೆ ದೊರೆತು ಭರಮಣ್ಣ ನಾಯಕ ಯುದ್ಧದಲ್ಲಿ ಅಜೇಯವಾಗಲಿಕ್ಕೆ ಕಾರಣವಾಯಿತು.

ಹೆಣ್ಮುಕ್ಕಳು ಮತ್ತು ಸಂಬಂಧ

ಬರಮಣ್ಣ ನಾಯಕನು ೯ಜನ ಹೆಣ್ಣುಮಕ್ಕಳನ್ನು ಪಡೆದಿದ್ದರು. ತನ್ನ ಎರಡನೇ ಪತ್ನಿಯಿಂದ ಮಾದವ್ವ, ನಾಲ್ಕನೆಯ ವಳಿಂದ ಕಾಟಕ್ಕ, ಎಂಟನೆಯವಳಿಂದ ಚಾಮವ್ವ ೨೧ನೆಯವಳಿಂದ ದೊಡ್ಡ ಸಾಟವ್ವ, ೨೨ನೆಯವಳಿಂದ ಕಾಟಕ್ಕೆ, ೨೩ನೆಯವಳಿಂದ ಕೆಂಪಕ್ಕ, ೨೪ನೆಯವಳಿಂದ ರಂಜವ್ವ, ೨೭ನೆಯವಳಿಂದ ಮಾದವ್ವ, ೩೧ನೆಯವಳಿಂದ ಕಾಟಕ್ಕ. ಇವನು ತನ್ನ ಎಲ್ಲಾ ಹೆಣ್ಣು ಮಕ್ಕಳನ್ನು ಸಾಂಪ್ರದಾಯಿಕ ವಿಧಿ ವಿಧಾನಗಳಿಂದ ತನ್ನ ನೆರೆಹೊರೆಯ ನಾಯಕರುಗಳಿಗೆ ವಿವಾಹ ಮಾಡಿಕೊಂಡು ಸಂಬಂಧವನ್ನು ಬೆಳೆಸಿದ್ದನು. ತನ್ನ ಮಗಳಾದ ಚಾಮವ್ವಳನ್ನು ಆನೆಗೊಂದಿ ರಾಯನಿಗೆ ವಿವಾಹ ಮಾಡಿಕೊಡುವುದರ ಮುಖಾಂತರ ಸಂಬಂಧ ಬೆಳೆಸಿದ್ದನು.[೨೩] ದೊಡ್ಡ ಸಂಟವ್ವಳನ್ನು ವಾಜೆಂಜರಿ(ಹೊದಿಗೆರೆ?) ಕುಮಾರನಿಗೆ, ಕಾಟಕ್ಕಳನ್ನು ರತ್ನಗಿರಿ ರಾಜನಿಗೆ ವಿವಾಹ ಮಾಡಿಕೊಡಲಾಗಿತ್ತು.[೨೪] ಆಗ ರತ್ನಗಿರಿಯಲ್ಲಿ ರಂಗಪ್ಪ ರಾಜನ ಆಳ್ವಿಕೆ ಇತ್ತು. ತನ್ನ ಮತ್ತೊಬ್ಬ ಮಗಳಾದ ಕೆಂಪಕ್ಕಳನ್ನು ಜರಿಮಲೆ ಬೊಮ್ಮಣ್ಣ ನಾಯಕನಿಗೆ[೨೫] ವಿವಾಹ ಮಾಡಿಕೊಡುವುದರ ಮುಖಾಂತರ ದೀರ್ಘಕಾಲದ ಯುದ್ಧಕ್ಕೆ ಪೂರ್ಣವಿರಾಮ ಹಾಕಿದನು.

ರಂಜವ್ವಳನ್ನು ಹಾವನೂರು ಹನುಮಂತನಾಯಕನಿಗೂ, ಕಾಟಕ್ಕಳನ್ನು ಕನಕಗಿರಿ ಪಾಳೆಗಾರ ಕಾಳಪ್ಪನಾಯಕನಿಗೆ ವಿವಾಹ ಮಾಡಿಕೊಟ್ಟಿದ್ದನು.[೨೬] ಭರಮಣ್ಣ ನಾಯಕನು ಹಟ್ಟಿ ಪಾಳೆಗಾರ ಮಲ್ಲಪ್ಪನಾಯಕನೊಂದಿಗೆ ಯುದ್ಧ ಮಾಡಿ ಅವನನ್ನು ಪರಾಭವಗೊಳಿಸಿ ತನ್ನ ಮಗಳಾದ ಮಾದವ್ವಳನ್ನು ಅವನಿಗೆ ವಿವಾಹ ಮಾಡಿಕೊಟ್ಟು ನಾಯಕನ ಹಟ್ಟಿಯನ್ನು ಅವನಿಗೆ ಹಿಂತಿರುಗಿಸಿ ಕೊಡುತ್ತಾನೆ.[೨೭] ತರೀಕೆರೆ ನಾಯಕರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದುದನ್ನು ಯುಗಟಿ ಕೈಫಿಯತ್ತು ತಿಳಿಸುತ್ತದೆ. ಅದರ ಪ್ರಕಾರ.[೨೮] ಚಿತ್ರದುರ್ಗ ಭರಮಣ್ಣನಾಯಕನು ತನ್ನ ಮಗಳನ್ನು ಯೀ ತರೀಕೆರ್‍ರೆ ಸಂವಸ್ಥಾನಿಕರ ಮನಿಗೆ ಕೊಟ್ಟು ಮದುವೆ ಮಾಡಿದಾಗ ದೇಣಿಗೆ ಬಳುವಳಿಯಾಗಿ ಕೊಟ್ಟುದು:

೧ ಹಿರಿಯೂರ್‍ರು ನಾಡು, ೧ ವಕಲಗೆರಿ ನಾಡು

೧ ಕುಂಕನಡವಿನ ನಾಡು

ಯೀ ಪಟ್ಟಾಭಿರಾಮಪ್ಪ ನಾಯಕನಿಗೆ.........ರಿ ದುರ್ಗದ ಭರಮಣ ನಾಯಕನ ಮಗಳನ್ನು ಮದುವೆ ನಡ್ಸುವಾಗೆ ಆ ಭರಮಣ್ಣ ನಾಯಕ ಬಳುವಳಿಯಾಗಿ ಕೊಟ್ಟ ನಾಡು: ಈ ದಾಖಲೆಯಿಂದ ಭರಮಣ್ಣನಾಯಕನು ತನ್ನ ಮಗಳನ್ನು ತರೀಕೆರೆಯ ಪಟ್ಟಾಭಿ ರಾಮನಾಯಕನಿಗೆ ವಿವಾಹ ಮಾಡಿಕೊಟ್ಟು ತನ್ನ ಅಳಿಯನಿಗೆ ಬಳುವಳಿಯಾಗಿ ಮೂರು ನಾಡುಗಳನ್ನು ನೀಡಿದನೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ತನ್ನ ಹೆಣ್ಣುಮಕ್ಕಳನ್ನು ಸುಸ್ಥಿತಿಯಲ್ಲಿರುವ ಮನೆತನಗಳಿಗೆ ಹಾಗೂ ಅಳಿಯಂದಿರಿಗೆ ಬಳುವಳಿರೂಪದಲ್ಲಿ ನಾಡಿನ ಆದಾಯ ಸಹಿತವಾಗಿ ನೀಡಿ ಸಂತೋಷದಲ್ಲಿಡಲು ಪ್ರಯತ್ನಿಸುತ್ತಿದ್ದುದು ಭರಮಣ್ಣನಾಯಕನ ಕುಟುಂಬದ ವಿವರ ಗಳಿಂದ ತಿಳಿದುಬರುತ್ತದೆ.

ಭರಮಣ್ಣನಾಯಕನ ಕೌಟುಂಬಿಕ ಜೀವನದ ಸಂಗತಿಗಳಿಂದ ಕೆಲವು ತೀರ್ಮಾನಗಳನ್ನು ಮಾಡಬಹುದು. ಈ ತೀರ್ಮಾನಗಳು ಪ್ರಾಯಶಃ ಎಲ್ಲಾ ಶ್ರೀಮಂತ, ಕುಟುಂಬಗಳಿಗೆ ಅಂದು ಅನ್ವಯ ವಾಗುತ್ತಿದ್ದಿರಬಹುದು.

ಒಂದನೆಯದಾಗಿ ಭೂಮಿಯ ಮೇಲಿನ ಸೌಂದರ್ಯ, ಒಳಗಿನ ಸಂಪತ್ತು ರಾಜ್ಯದ ಸ್ವತ್ತಾಗಿದ್ದುದರಿಂದಲೇ ರಾಜನಿಗೆ ಹೊನ್ನು ಮತ್ತು ಹೆಣ್ಣಿನ ಆಸೆ ಹೆಚ್ಚಾಗಿ ಬಲಾತ್ಕಾರದಿಂದ ಅನೇಕ ಮುಗ್ಧ ಸ್ತ್ರೀಯರು ರಾಜರುಗಳ ಅಂತಃಪುರ ಸೇರಬೇಕಾಗಿತ್ತು.

ಎರಡನೆಯದಾಗಿ, ಇವರ ಕುಟುಂಬದಲ್ಲಿ ಪ್ರೇಮ ಮದುವೆಗೆ ಅವಕಾಶವಿರಲಿಲ್ಲ ಮೂರನೆಯದಾಗಿ, ಇವರು ವೈವಾಹಿಕ ಸಂಬಂಧಗಳ ಮೂಲಕ ನೆರೆಹೊರೆಯ ರಾಜ್ಯಗಳೊಂದಿಗೆ ಸೌಹಾರ್ದತೆಯನ್ನು ಕಾಪಾಡಿಕೊಂಡಿದ್ದರು. ನಾಲ್ಕನೆಯದಾಗಿ, ಆಗ ಬಹುಪತ್ನಿತ್ವ ಸರ್ವೆಸಾಮಾನ್ಯವಾಗಿದ್ದುದರಿಂದ, ಶ್ರೀಮಂತರು, ಹಣವಂತರು ಅನೇಕ ಮಂದಿ ಮಡದಿಯರು, ಉಪಪತ್ನಿಯರನ್ನು ಹೊರಿಸಲು ಹಾತೊರೆಯುತ್ತಿದ್ದರು. ಐದನೆಯದಾಗಿ, ಹಲವು ಮಡದಿಯರನ್ನು ಹೊಂದುವುದು ಸಮಾಜದಲ್ಲಿ ಪೌರುಷದ ಸಂಕೇತವಾಗಿತ್ತು. ಆದ್ದರಿಂದಲೇ ಭರಮಣ್ಣನಾಯಕ ೩೩ಜನ ಪತ್ನಿ, ಉಪಪತ್ನಿಯರನ್ನು ಹೊಂದಲು ಕಾರಣವಾಗಿದೆ.

ಆರನೆಯದಾಗಿ, ಇವರ ಮನೆತನದಲ್ಲಿ ಅಳಿಯನಿಗೆ ನಾಡುಗಳನ್ನು ಬಳುವಳಿಯಾಗಿ ನೀಡುವ ಪದ್ಧತಿ ಇತ್ತು. ಅದು ಇಂದಿನ ವರದಕ್ಷಿಣೆಯನ್ನು ನೆನಪಿಸುತ್ತದೆ. ಏಳನೆಯದಾಗಿ, ಇವನಿಗಿಂತ ಮಕ್ಕಳ ಸಂಖ್ಯೆಯಲ್ಲಿ ಗಂಡುಮಕ್ಕಳೇ ಹೆಚ್ಚಾಗಿ ಇರುವುದರಿಂದ ಇವರದು ಪುರುಷ ಸಂತಾನ ಪ್ರಭುತ್ವ ವಂಶವೆಂದು ಹೇಳಬಹುದು.

ಕೊನೆಯದಾಗಿ ಎಲ್ಲಾ ಪತ್ನಿಯರಿಗೂ ಮಕ್ಕಳಿರುವುದನ್ನು ನೋಡಿದರೆ ಯಾರಿಗೂ ಬಂಜೆತನವಿರಲಿಲ್ಲ. ಇಷ್ಟೊಂದು ಜನ ಮಡದಿಯರ ನಿರ್ವಹಣೆಗೆ ರಾಜ ಏನಾದರೂ ವೈದ್ಯಕೀಯ ತಂತ್ರ ಬಳಸುತ್ತಿದ್ದನೇ ಎಂಬ ಸಂದೇಹ ಉಂಟಾಗುತ್ತದೆ ಎಂದು ಹೇಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಂ.ಎಸ್ ಪುಟ್ಟಣ್ಣ., (೧೯೯೭), **ಚಿತ್ರದುರ್ಗ ಪಾಳೆಯಗಾರರು**, ಕಾವ್ಯಾಲಯ ಪ್ರಕಾಶನ, ಮೈಸೂರು.

೨. **ಕರ್ನಾಟಕದ ಕೈಫಿಯತ್ತುಗಳು**., (೧೯೯೪), (ಸಂ.) ಎಂ.ಎಂ. ಕಲಬುರ್ಗಿ, ಪ್ರಸಾರಾಂಗ ಹಂಪೆ.

೩. **ಚಿತ್ರದುರ್ಗ ಬಖೈರು**.., (೧೯೬೮), (ಸಂ.) ಹುಲ್ಲೂರು ಶ್ರೀನಿವಾಸ ಜೋಯಿಸ್, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

೪. **ಹಿರೇಮದಕರಿನಾಯಕನ ತಾರಾವಳಿ-ಚಂದ್ರವಳ್ಳಿ-ಚಿತ್ರದುರ್ಗ**., (ಸಂ.) ಹುಲ್ಲೂರು ಶ್ರೀನಿವಾಸ ಜೋಯಿಸ.

೫. ಮೀರ ಸಾಬಹಳ್ಳಿ ಶಿವಣ್ಣ., 'ಹಟ್ಟಿಪಾಳೆಯಗಾರರು', **ದಕ್ಷಿಣ ಕರ್ನಾಟಕದ ಅರಸು ಮನೆತನಗಳು**, ಪ್ರಸಾರಂಗ- ಹಂಪೆ.

೬. ಡಿ.ಎನ್. ಯೋಗೀಶ್ವರಪ್ಪ., 'ಜರಿಮಲೆನಾಯಕರು,' **ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ**, ಸಂಪುಟ-೮೦, ಸಂಚಿಕೆ ೨-೨೦೦೨, ಬೆಂಗಳೂರು.

೭. ನಂಜುಂಡ ಕವಿ., **ರಾಮನಾಥ ಚರಿತೆ**, ಸಂಧಿ-೫ ಪದ್ಯ-೨೧ರಿಂದ ೨೪.

೮. -ಅದೇ-

೯. **ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ**., (ಸಂ.) ಎಂ ಎಂ ಕಲಬುರ್ಗಿ, ಬಿ. ಎಸ್. ರಾಮಭಟ್ಟ, ಪು. ೨೫೦.

೧೦. ಎಂ ಎಸ್ ಪುಟ್ಟಣ್ಣ., **ಚಿತ್ರದುರ್ಗ ಪಾಳೆಯಗಾರರು**, ಪು೨೭-೨೮.

೧೧. ಅದೇ ಪು-೩೩.

೧೨. ಅದೇ ಪು-೩೬.

೧೩. ಮೆಕಂಜಿ ಹಸ್ತಪ್ರತಿ (ಅಪ್ರಕಟಿತ)..

೧೪. ಎಂ.ಎಸ್ ಪುಟ್ಟಣ್ಣ., **ಚಿತ್ರದುರ್ಗ ಪಾಳೆಯಗಾರರು**, ಪು-೫೩.

೧೫. **ರಾಬರ್ಟ ಸಿವೆಲ್**., ಎ ಫಾರ್‌ಗಾಟನ್ ಎಂಪೈರ್, (ಕನ್ನಡ ಅನುವಾದ : ಡಾ। ಸದಾನಂದ ಕನವಳ್ಳಿ), **ಪು-೩೮೬**.

೧೬. ಬಾರ್ಬೋಸಾ., **ದಿ ಬುಕ್ ಆಫ್ ಡ್ಯೂರೆಟ್ ಬಾರ್ಬೋಸಾ ಪು. ೧೧೬**.

೧೭. **ಪ್ರವಾಸಿ ಕಂಡ ಇಂಡಿಯಾ**., ಸಂ. ೨, ಪು. ೧೬೨.

೧೮. **ಹಿರೇಮದಕರಿ ನಾಯಕನ ತಾರಾವಳಿ**., ಪು-೬೩, ಚಂದ್ರವಳ್ಳಿ.

೧೯. ಮೆಕಂಜಿ ಹಸ್ತ ಪ್ರತಿ.

೨೦. ಎಂ.ಎಸ್ ಪುಟ್ಟಣ್ಣ., **ಚಿತ್ರದುರ್ಗ ಪಾಳೆಯಗಾರರು**, ಪು-೫೬.

೨೧. ಚಿತ್ರದುರ್ಗ ಬಖೈರು., ಪು. ೫೧.

೨೨. ಮೆಕಂಜಿ ಹಸ್ತಪ್ರತಿ.

೨೩. ಅದೇ.

೨೪. ಅದೇ.

೨೫. ಡಿ. ಎನ್ ಯೋಗಿಶ್ವರಪ್ಪ., 'ಜರಿಮಲೆ ನಾಯಕರು', **ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ**, ೨೦೦೨.

೨೬. ಮೆಕಂಜಿ ಹಸ್ತಪ್ರತಿ.

೨೭. i. ಮೆಕಂಜಿ ಹಸ್ತಪ್ರತಿ.

ii. ಮೀರ ಸಾಬಹಳ್ಳಿ ಶಿವಣ್ಣ., **ನಾಯಕನಹಟ್ಟಿ ಪಾಳೆಗಾರರು**, ದ.ಕ.ಅ.ಮ.ಯ.ಪ್ರ.-೮೫.

೨೮. **ಕರ್ನಾಟಕ ಕೈಫಿಯತ್ತುಗಳು**., ೧೯೯೪, ಪು. ೧೧೨-೧೧೫, ಪ್ರಸಾರಾಂಗ ಹಂಪೆ.

ಕುಂ.ಬಾ. ಸದಾಶಿವಪ್ಪ*

ನೊಳಂಬವಾಡಿ - ೩೨೦೦೦ ರಾಜ್ಯ ಹಾಗೂ ಉಚ್ಚಂಗಿ ಪಾಂಡ್ಯರು

ನೊಳಂಬವಾಡಿ - ೩೨೦೦೦ ರಾಜ್ಯ.

ನೊಟಿ - [ಳ] ನೊಣ - ನೊಳ, ನೊಳಂಬರು, - ನೊಣಂಬರು ನೊಣಬರು ಎಂಬುದು ಒಂದು ಜನಾಂಗ. ಇವರಿಗೆ ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕುರುಗೋಡು, ಸಿರುಗುಪ್ಪ, ಬಳ್ಳಾರಿ, ರಾಣಿಬೆನ್ನೂರು, ಹಾವೇರಿ, ಗದಗ, ಧಾರವಾಡ ಭಾಗಗಳಲ್ಲಿ ಕುಡಿ ಒಕ್ಕಲಿಗರು ಎಂದು ಕರೆಯುವರು. ಕುರುಬ + ಒಕ್ಕಲಿಗ = ಕುರಿ ಒಕ್ಕಲಿಗ -ಕುಡಿಒಕ್ಕಲಿಗ, ಕುಡಿಯೊಕ್ಕಲಿಗರೆಂದು ಕರೆಯಲ್ಪಡುವರು. ಬಳ್ಳಾರಿ ತಾಲ್ಲೂಕು ಕುರುಗೋಡು ಬಸವೇಶ್ವರ ಗುಡಿ ಕ್ರಿ.ಶ. ೨೬-೬-೧೧೭೭ರ ಶಾಸನದಲ್ಲಿ "ಕುಡಿಯೊಕ್ಕಲ ಮಕ್ಕಳಿನೂರ್ಗ್ಗಳೊಪ್ಪುಗು" ಎಂಬ ಉಲ್ಲೇಖವಿದೆ. ಪ್ರಾಚೀನ ಕಾಲದಿಂದ ಈಚಿನ ಕಾಲದವರೆಗೂ ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಕಾರ್ಯ ಆರಂಭಿಸುವ ಮುನ್ನ ಪೂಜೆಯು ಕುರುಬರಿಂದ ನಡೆಯುತ್ತಿದ್ದಿತು. ಕಾಲಾಂತರದಲ್ಲಿ ಕುಡಿ ಒಕ್ಕಲಿಗರು ಲಿಂಗವಂತ ಧರ್ಮ ಸ್ವೀಕರಿಸಿದರು. ಸ್ವೀಕರಿಸಿದ ಕಾಲ ಮತ್ತು ಕಾರಣಗಳು ಗೊತ್ತಾಗಿಲ್ಲ. ಇವರಿಗೆ ನೊಣಬ ಲಿಂಗವಂತರೆಂದೂ ಕರೆದರು. ಈ ಜನಾಂಗ ಹೆಚ್ಚಾಗಿ ಚಿತ್ರದುರ್ಗ, ಶಿವಮೊಗ್ಗ, ಹೊನ್ನಾಳಿ, ತುಮಕೂರು, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಕಂಡುಬರುವುದು.

ಪ್ರಾಚೀನ ಕಾಲದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಮತ್ತು ಮಹಾಮಾಂಡಳಿಕರಾಗಿ ಕನ್ನಡ ನೆಲವನ್ನು ಆಳಿದ ಒಂದು ಅರಸು ವಂಶ ಮೂಲದಲ್ಲಿ ಕುರುಬರೇ ಇರಬೇಕು. ಅವರೇ ಕುಡಿ ಒಕ್ಕಲಿಗರು. - ನೊಣಬರು - ನೊಳಂಬರು. ಇವರ ಮನೆದೇವರು ನೊಳಂಬೇಶ್ವರ. ಹರಪನಹಳ್ಳಿ ತಾಲ್ಲೂಕು ಕೆರೆಗುಡಿಹಳ್ಳಿ, ಬೆಣ್ಣೆಹಳ್ಳಿ ಬಳಿ ಬಾಡೆ ಶಾಸನಗಳಲ್ಲಿ ಅರಸೀಕೆರೆ, ನೊಳಂಬೇಶ್ವರ, ಬಾಡದ ನೊಳಂಬೇಶ್ವರ ಮೋರಿಗೆರೆ ಶಾಸನದಲ್ಲಿ ನೊಳಂಬೇಶ್ವರ ಮತ್ತು ಹರಿಹರ ಉಚ್ಚಂಗಿದುರ್ಗಗಳ ನೊಳಂಬೇಶ್ವರ ದೇವರ ಪ್ರಸ್ತಾಪವಿದೆ. ಈ ಅರಸರು ನೊಳಂಬ ಪಲ್ಲವರೆಂದೂ ಕರೆದುಕೊಂಡಿರುವರು. ಆಂಧ್ರ ಮತ್ತು ತಮಿಳು ನಾಡುಗಳಲ್ಲಿ ಈಗಲೂ ಕುರುಬರಗೌಡರು ದೊರಕುವರು.

ಈ ನೊಳಂಬರು ಆಳಿದ ರಾಜ್ಯಕ್ಕೆ ನೊಳಂಬಳಿಗೆ - ನೊಳಂಬ ವಾಡಿ ೩೨೦೦೦ ಎಂದು ಕರೆದಿರಬೇಕು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅವರ ಸಾಮ್ರಾಜ್ಯದ ದಕ್ಷಿಣ ಭಾಗದ ಅಂದರೆ ತುಂಗಭದ್ರಾ ನದಿಯ ಆಸುಪಾಸಿನ ಭಾಗಗಳು ನೊಳಂಬವಾಡಿ - ೩೨೦೦೦ ಆಗಿದ್ದಿತು. ಈ ನೊಳಂಬವಾಡಿ - ೩೨೦೦೦ ದ ಒಂದು ಪ್ರಮುಖ ಉಪವಿಭಾಗವೇ ಕದಂಬಳಿಗೆ ಸಾಸಿರ ಎಂದು ಪಿ.ವಿ. ಕೃಷ್ಣಮೂರ್ತಿಯವರು **"ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು"** ಪುಸ್ತಕದಲ್ಲಿ ಕದಂಬಳಿಗೆ ಸಾಸಿರ ಲೇಖನದಲ್ಲಿ ತಿಳಿಸಿರುವರು.

ನೊಳಂಬ ಪಲ್ಲವರು ಪೂರ್ವಕ್ಕೆ ಪೆನ್ನಾರು ಪಶ್ಚಿಮಕ್ಕೆ ಹಗರಿ ನದಿಗಳು ಅನಂತಪುರ, ಚಿತ್ರದುರ್ಗ,ತುಮಕೂರು ಜಿಲ್ಲೆಗಳನ್ನೊಳಗೊಂಡ ನೊಳಂಬಳಿಗೆ - ೧೦೦೦ದ ಮೇಲೆ ರಾಜ್ಯ ಆಳಿದರು. ಹತ್ತನೆಯ ಶತಮಾನದ ಆರಂಭದ ಹೊತ್ತಿಗೆ ಇವರ ಆಡಳಿತ ೩೨೦೦೦ ಜಿಲ್ಲೆ ಆಯಿತು. ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಜೊತೆ ಬಳ್ಳಾರಿ ಅನಂತಪುರ ಕೋಲಾರ ಬೆಂಗಳೂರು ಜಿಲ್ಲೆಗಳ ಭಾಗಗಳು ಒಳಗೊಂಡಿದ್ದವು. ಶಾಸನಗಳ ಆಧಾರದಂತೆ ಸೇಲಂ ಜಿಲ್ಲೆಯ ಧರ್ಮಪುರಿಯವರೆಗು ಅವರ ಆಡಳಿತ ವ್ಯಾಪಿಸಿತ್ತು. ಹೆಂಜೇರು ಅಥವಾ ಹೇಮಾವತಿ ಅವರ ಮೊದಲ ರಾಜಧಾನಿ ಆಗಿದ್ದಿತು ಎಂಬುದಾಗಿ ಡಾ :: ಎಸ್. ಶ್ರೀಕಂಠಶಾಸ್ತ್ರಿಗಳು Source of Karnataka History ಎಂಬ ಗ್ರಂಥವನ್ನು ಬರೆದರು. ಅದನ್ನು ಡಾ: ಸೂರ್ಯನಾಥ ಕಾಮತರು ಕನ್ನಡಕ್ಕೆ ಅನುವಾದಿಸಿ ಕರ್ನಾಟಕ ಪರಂಪರೆ ಸಂಪುಟ - ೧ರಲ್ಲಿ ಸೇರಿಸಿರುವರು.

ಗುಂಟೂರು ಜಿಲ್ಲೆ ತೆನಾಲಿ ತಾಲ್ಲೂಕು ಕೊಲ್ಲೂರು ಗ್ರಾಮದ ಅನನ್ತ (ಅನಂತ) ಭೋಗೇಶ್ವರ ಗುಡಿ ಕ್ರಿ.ಶ. ೧೧೧೫ - ೧೬ ರ ಸಂಸತ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ತಿಭುವನ ಮಲ್ಲ ದೇವ ವಿಕ್ರಮನ ವಿಚಾರವಿದ್ದು ಪಾಂಡ್ಯರ ವಿಚಾರವಿಲ್ಲ. ಅನಂತಪುರ ಜಿಲ್ಲೆ ಗುತ್ತಿ ತಾಲ್ಲೂಕು ಉರುವಕೊಂಡ ತಾಲ್ಲೂಕು ಕಚೇರಿ ಮುಂದೆ ಇರುವ ಕ್ರಿ.ಶ. ೨೫-೧೨-೧೧೦೯ ರ ಶಾಸನದಲ್ಲಿ ಚಾಲುಕ್ಯ ಚಕ್ರವರ್ತಿ ತಿಭುವನಮಲ್ಲನ ಆಳ್ವಿಕೆಯ ಪ್ರಸ್ತಾಪವಿದ್ದು ಅದರಲ್ಲಿ ಪಾಂಡ್ಯರ ವಿಚಾರವಿಲ್ಲ. ಇದರಿಂದ ನೊಳಂಬವಾಡಿ - ೩೨೦೦೦, ನೊಳಂಬರ ಕಾಲದಲ್ಲಿ ದಕ್ಷಿಣಕ್ಕೆ ಕೋಲಾರ ಹಾಗೂ ಸೇಲಂ ಜಿಲ್ಲೆಯ ಧರ್ಮಪುರಿಯವರೆಗೆ ವ್ಯಾಪಿಸಿದ್ದು, ಪಾಂಡ್ಯರ ಕಾಲದಲ್ಲಿ ಕೇವಲ ಚಿತ್ರದುರ್ಗ, ಶಿವಮೊಗ್ಗದ ಚನ್ನಗಿರಿ, ಬಳ್ಳಾರಿ ಜಿಲ್ಲೆಯ ಪಶ್ಚಿಮಕ್ಕೆ ತುಂಗಭದ್ರಾ ನದಿಯವರೆಗೂ ವ್ಯಾಪಿಸಿದ್ದು ಕಂಡುಬರುವುದು.

* ಲೋಕೋಪಯೋಗಿ ಇಲಾಖೆ ಕಛೇರಿ ಹಿಂಭಾಗ, ಗೋಸಾಯಿ ಗುಡ್ಡ ಹೊಸಪೇಟೆ ರಸ್ತೆ, ಹರಪನಹಳ್ಳಿ, ೫೮೩೧೩೧

ಅನಂತಪುರ ಜಿಲ್ಲೆ ಮಡಕಸಿರಾ ತಾಲ್ಲೂಕು ಹೆಂಜೇರು ಈಗಿನ ಹೇಮಾವತಿ ಗುಡಿಕಂಬದ ಶಾಸನದಲ್ಲಿ ನೊಳಂಬರ ವಂಶಾವಳಿ ವಿವರವಿದೆ. ನೊಳಂಬರು ಕಲ್ಯಾಣ ಚಾಲುಕ್ಯರಿಗೆ ನಿಷ್ಠೆ ತೋರಿಸಿ, ವೈವಾಹಿಕ ಸಂಬಂಧ ಬೆಳೆಸಿ ಸಾಮಂತರಾಗಿ, ಮಂಡಳೇಶ್ವರರಾಗಿ ಕ್ರಿ.ಶ.೭೫೦ ರಿಂದ ೧೦೫೫ -೫೭ರ ವರೆಗೂ ನೊಳಂಬವಾಡಿ -೩೨೦೦೦ರಾಜ್ಯವನ್ನು ಆಳಿದರು. ನಂತರ ಈ ರಾಜ್ಯ ಕಲ್ಯಾಣ ಚಾಲುಕ್ಯರ ವಂಶಜರ ನೇರ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ. ೧೦೬೪ರಲ್ಲಿ ಚಾಲುಕ್ಯ ತ್ರೈಲೋಕ್ಯ ಮಲ್ಲನ ಮಗ ವಿಷ್ಣುವರ್ಧನ ವಿಜಯಾದಿತ್ಯದೇವ ಆಳಿದ್ದು ಗೊತ್ತಾಗುತ್ತದೆ.

ಹೂವಿನಹಡಗಲಿ ತಾಲ್ಲೂಕು ಏಣಗಿ ಗ್ರಾಮದ ಆಂಜನೇಯ ಗುಡಿ, ಕೂಡ್ಲಿಗಿ ತಾಲ್ಲೂಕು ಅಂಬಳಿ ಕಲ್ಲೇಶ್ವರ ಗುಡಿ ಶಾಸನಗಳಲ್ಲಿ ನೊಳಂಬವಾಡಿ ಕುಂತಳ ದೇಶದ ನಾಸಿಕ ಎಂದು ಬಣ್ಣಿಸಿದೆ.

ಉಚ್ಚಂಗಿ ಪಾಂಡ್ಯರು

ಪಾಂಡ್ಯರ ಶಾಸನಗಳಲ್ಲಿ ಹೀಗೆ ಹೇಳಿದೆ:-

"ಯದ್ವಂ ಶಾಂಬರದ್ಯುಮಣಿ ಸುಭ್ಜಟ ಚೂಡಾಮಣಿ ನಿಜಕುಳ ಕಮಳ ಮೂರ್ತ್ತಂಣ್ಡಾಂ ಕಾಂಚಿಪುರವರಾಧೀಶ್ವರಂ"

ಪಾಂಡ್ಯ ಅರಸರ ಹೆಸರುಗಳು ತಮಿಳು ಭಾಷಾ ಶೈಲಿ ಯಲ್ಲಿರುತ್ತವೆ. ಉದಾ:- ಪಲಮಾಂದ ಪಾಂಡ್ಯ, ಇರುಕ್ಕವೇಳ್, ಸೊಂಚಿ ಪಾಂಡ್ಯ, ಸೋಲೆಯ ಪಾಂಡ್ಯ, ನಾಗಿಯಾಂಡರಸಿ. ಇರುಕ್ಕವೇಲ್ - ಎಂದರೆ, ವೇಲ್ ಪದದ ಅರ್ಥ ಶೂರ. ಇವುಗಳನ್ನು ಗಮನಿಸಿದರೆ ಪಾಂಡ್ಯರ ಒಂದು ಶಾಖೆ ತಮಿಳುನಾಡಿನ ಕಂಚಿ ಅಥವ ಪರಿಸರದಿಂದ ಹೊರಟು ಕರ್ನಾಟಕ ಪ್ರದೇಶದ ಕೊಂಕಣದಲ್ಲಿ ನೆಲೆಸಿ ಚಿಕ್ಕ ರಾಜ್ಯ "ಹೈಹ'ವನ್ನು ಶಿಸುಗಲಿ ಮತ್ತು ಉಳುಮೆಗಳಿಂದ ಆಳಿರುವುದು ಗೊತ್ತಾಗುತ್ತದೆ. ಇವರು ಕೂಡಾ ನೊಳಂಬ ವಂಶದವರೇ ಇದ್ದು ನೊಳಂಬರು ಆಗಮಿಸಿದ ತರುವಾಯ ಕನ್ನಡ ನಾಡಿಗೆ ಆಗಮಿಸಿರಬೇಕು. ಆದರೆ ಇವರು ತಮಿಳುನಾಡಿನಿಂದ ಯಾವಾಗ ಬಂದರು? ಮುಂತಾದ ಖಚಿತ ದಾಖಲೆಗಳು ಈವರೆಗೂ ದೊರಕಿಲ್ಲ. ನೀಲಗುಂದ (ಹರಪನಹಳ್ಳಿ ತಾಲ್ಲೂಕು) ಮುಕ್ತೇಶ್ವರ ಗುಡಿ ಕ್ರಿ.ಶ. ೩೦-೧-೧೦೭೯ರ ಶಾಸನದಲ್ಲಿ ಮಹಾಮಂಡಳೇಶ್ವರ ತ್ರಿಭುವನಮಲ್ಲರಾಯ ಪಾಂಡ್ಯದೇವನು ನೊಳಂಬವಾಡಿ - ೩೨೦೦೦ ಮತ್ತು ಕಣೆಯಕಲ್ಲು - ೩೦೦ ಪ್ರದೇಶವನ್ನು ಉಳುವ ನೆಲೆವೀಡಿನಿಂದ ಆಳುತ್ತಿದ್ದನು ಎಂದಿದೆ. ಇವರು ನೊಳಂಬರಂತೆ ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳಲ್ಲಿ ನಿಷ್ಠೆ ತೋರಿಸಿ ಸಾಮಂತರಾಗಿ, ಮಹಾ ಮಂಡಳೇಶ್ವರರಾಗಿ ರಾಜ್ಯವಾಳಿದರು. ತಾವು ಸೂರ್ಯ ವಂಶದವರು, ತಮ್ಮ ಲಾಂಛನ ಮತ್ಸ್ಯ ಎಂದು ತಿಳಿಸಿರುವರು. ಇವರ ವಂಶಾವಳಿ ಅವರು ಬರೆಯಿಸಿದ ಶಾಸನಗಳಿಂದ ಗೊತ್ತಾಗುವುದು. ಈ ವಂಶಾವಳಿ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುವುದು. ಆದ್ದರಿಂದ ಸಂಶೋಧಕ ವಿದ್ವಾಂಸರು ತಮಗೆ ದೊರೆತ ಪಾಂಡ್ಯರ ಹಾಗೂ ಹೊಯ್ಸಳರ ಶಾಸನಗಳ ಆಧಾರಗಳಿಂದ ಪಾಂಡ್ಯರ ವಂಶಾವಳಿಯನ್ನು ಈ ಕೆಳಗಿನಂತೆ ಗುರುತಿಸಿರುವರು.

ವಿಜಯ ಪಾಂಡ್ಯ ಅಥವಾ ಕಾಮದೇವನಿಗೆ ಸೇರಿದ ಬಾಗಳಿಯ ಒಂದು ಸಂಸತ ಶಾಸನದಲ್ಲಿ:-

ಸಾಮ್ರಾಜಃ ಕತಿನಾಮ - ಹೈಹ

ಉಜ್ಜನಿ ಮತ್ತು ಅಂಬಳಿ ಗುಡಿಗಳ ಶಾಸನಗಳಿಂದ ಇವನ

೧) ಚೇದಿ ರಾಜೋ
೨) ಪಾಂಡಿ ಭೂಪಃ
೩) ಇರುಕ್ಕವೇಳೋ
೪) ಶ್ರೀ ರಾಯ ಪಾಂಡೋ - ಸೋಮದೇವಿ - ಮಡದಿ.

ಮಕ್ಕಳು
೧) ಪಂಡಿತ ಪಾಂಡ್ಯ ದೇವ.
೨) ವೀರ ಪಾಂಡ್ಯ ನೃಪಂ
೩) ವಿಜಯ ಪಾಂಡ್ಯಸ್ಯ ನೂನಂ

ಶ್ರವಣ ಬೆಳ್ಗೊಳ ಶಾಸನದಲ್ಲಿ

೧೨೪; ೩೨೪; ಕ್ರಿ.ಶ.೧೧೬೦
೧) ಫಲಮಾಂಡ ಪಾಂಡ್ಯ
೨) ಫಲಕ ಪಾಂಡ್ಯ
೩) ಸೊಂಚಿ ಪಾಂಡ್ಯ
೪) ರಾಯ ಪಾಂಡ್ಯ
೫) ಗೊಲೆಯ ಪಾಂಡ್ಯ
೬) ಕುಮಾರ ವಿಜಯ ಪಾಂಡ್ಯ

ಕರ್ನಾಟಕ ಪರಂಪರೆ ಸಂಪುಟ - ೧ರಲ್ಲಿ

೧) ಮಂಗಯ್ಯ - ಆದಿತ್ಯ ದೇವ
೨) ಚೇದಿ ರಾಜ
೩) ಪಾಂಡ್ಯ
೪) ಪಲಂತನು
೫) ಇರುಕ್ಕವೇಲ್ [ತ್ರಿಭುವನ ಮಲ್ಲ ಪಾಂಡ್ಯ]
೬) ರಾಯ ಪಾಂಡ್ಯ - ಅವನ ಮಕ್ಕಳು
ಅ) ಪಂಡಿತ ಪಾಂಡ್ಯ;
(ಆ) ವೀರ ಪಾಂಡ್ಯ;
(ಇ) ವಿಜಯ - ಕಾಮದೇವ.

ಹುಲ್ಲೂರು ಶ್ರೀನಿವಾಸ ಜೋಯಿಸರ ಪ್ರಕಾರ:-

೧) ಪಳಿತ ಪಾಂಡ್ಯ (ಕ್ರಿ.ಶ. = ೧೦೭೬ - ೧೦೮೩
೨) ಇರುಕ್ಕವೇಲ (೧೦೮೩ - ೧೧೨೭)
೩) ತ್ರಿಭುವನಮಲ್ಲ (೧೧೨೪ - ೧೧೩೮) ರಾಯ ಪಾಂಡ್ಯ
೪) ಪಂಡಿತ ಪಾಂಡ್ಯ (೧೧೩೮ - ೧೧೪೩)
೫) ವೀರ ಪಾಂಡ್ಯ (೧೧೪೩ - ೧೧೬೮)
೬) ವಿಜಯ ಪಾಂಡ್ಯ

ಡಾ;; ಜೆ. ಎಂ. ನಾಗಯ್ಯ ಅವರ ಬಳ್ಳಾರಿ ಜಿಲ್ಲೆಯ ಸಾಂಸ ತಿಕ ಇತಿಹಾಸ ರೀತ್ಯಾ -

೧) ತ್ರಿಭುವನ ಮಲ್ಲರಾಯ ಪಾಂಡ್ಯ
೨) ತ್ರಿಭುವನಮಲ್ಲ ಪಾಂಡ್ಯ ದೇವ
೩) ಮಹಾಮಂಡಳೇಶ್ವರ ವೀರ ಪಾಂಡ್ಯ -೧
೪) ಮಹಾಮಂಡಳೇಶ್ವರ ವಿಜಯ ಪಾಂಡ್ಯ

೫) ತ್ರಿಭುವನ ಮಲ್ಲರಾಯ ಪಾಂಡ್ಯ -೨
೬) ಜಗದೇಕಮಲ್ಲಾ ವೀರಪಾಂಡ್ಯ -೨
೭) ವಿಜಯ ಪಾಂಡ್ಯ
೮) ಕದಂಬ ವಂಶದ ಜಗದಳ ಪಾಂಡ್ಯ

Some Feudatory families of Medieval Karnataka -A study -By Z.K. Ansari

೧) ಆದಿತ್ಯ ದೇವ
೨) ಚೇದಿ ರಾಜ
೩) ಪಲ ಮಾಂದ ಪಾಂಡ್ಯ - ೧
೪) ಇರುಕ್ಕವೇಲ್
೫) ರಾಯ ಪಾಂಡ್ಯ ಆವನ ಮಡದಿ - ಸೋಮದೇವಿ ಅಥವಾ ಸೋವಲದೇವಿ

ರಾಯ ಪಾಂಡ್ಯನ ಮಕ್ಕಳು

೧) ಪಂಡಿತ ಪಾಂಡ್ಯ - ಮಗ ತೈಲಪ
೨) ವೀರ ಪಾಂಡ್ಯ - ಮಡದಿಯರು -
i) ಗಂಗಾ ದೇವಿ
ii) ವಿಜಯ ದೇವಿ
೩) ವಿಜಯ ಪಾಂಡ್ಯ ಅಥವಾ ಕಾಮದೇವ - ಅವನ ಮಕ್ಕಳು
i) ಒಡೆಯ ಅಥವಾ ಉದಯ
ii) ಪಂಡಿತ ಪಾಂಡ್ಯ -೨
iii) ವಿಜಯ ಪಾಂಡ್ಯ -೨

ಪ್ರಸ್ತುತ ಈ ಲೇಖಕನ ಪ್ರಕಾರ:-

೧) ಆದಿತ್ಯ ದೇವ - ಮಂಗಯ್ಯ (ಪಾಂಡ್ಯ ದೇವ)
2) ಚೇದಿ ರಾಜ
೩) ಪಲ ಮಾಂದ ದೇವ ಪಾಂಡ್ಯ -೧
೪) ಇರುಕ್ಕವೇಲ್ -ಅರ್ಥಾತ್ ಪಲಿತ ಪಾಂಡ್ಯ -೨
೫) ರಾಯ ಪಾಂಡ್ಯ - ಮಡದಿ -ಸೋಮದೇವಿ ಅರ್ಥಾತ್ ಸೋವಲ ದೇವಿ

ರಾಯ ಪಾಂಡ್ಯನ ಮಕ್ಕಳು

೧) ಪಂಡಿತ ಪಾಂಡ್ಯ (ರಾಜ್ಯ ಆಳಲಿಲ್ಲ)
೨) ವೀರ ಪಾಂಡ್ಯ (ರಾಜ್ಯ ಆಳಿದ)
೩) ವಿಜಯಪಾಂಡ್ಯ -
ಮಡದಿಯರು i) ಗಂಗಾ ದೇವಿ
ii) ವಿಜಯ ದೇವಿ
ಕಾಮದೇವ (ರಾಜ್ಯ ಆಳಿದ)

ವಿಜಯ ಪಾಂಡ್ಯನ ಮಕ್ಕಳು:

೧) ಒಡೆಯ - ಉದಯ (ರಾಜ್ಯ ಆಳಲಿಲ್ಲ)
೨) ಪಂಡಿತ ಪಾಂಡ್ಯ - ೨ (ರಾಜ್ಯ ಆಳಲಿಲ್ಲ)
೩) ಕುಮಾರ ವಿಜಯ ಪಾಂಡ್ಯ (ರಾಜ್ಯ ಆಳಿದ)
ಮೊದಲ ಪಂಡಿತ ಪಾಂಡ್ಯನ ಮಗ [೧] ತೈಲಪ [ರಾಜ್ಯ ಆಳಲಿಲ್ಲ]
ಜಗದ್ದಳ ಪಾಂಡ್ಯ ರಾಜ್ಯ ಆಳಿದ

ಮಾಹಿತಿ ದೊರಕುತ್ತದೆ. ಕದಂಬ ವಂಶಕ್ಕೆ ಸೇರಿದವನು. ಅಂಬಳಿ ಶಾಸನದಲ್ಲಿ ಇವನನ್ನು ನಳ, ನಹುಷ, ಸಗರ ಖೇಚರ ದಿಲೀಪರಿಗೆ ಹೋಲಿಸಿದೆ.

ಉಜ್ಜಿನಿ ಶಾಸನದಲ್ಲಿ ಇವನನ್ನು ನಳ, ನಹುಷ, ಸಗರ, ಖೇಚರ, ದಿಲೀಪ, ಕಾರ್ತಿ ವೀರ್ಯಾರ್ಜುನರಿಗೆ ಹೋಲಿಸಿ ಬಣ್ಣಿಸಿದೆ. ಇವನಿಗೂ ಪಾಂಡ್ಯರಿಗೂ ಇದ್ದ ಸಂಬಂಧವನ್ನು ತಿಳಿಸಿಲ್ಲ. ಸೋವಲದೇವಿ-ಭಿಲ್ಲವ ಅರಸನ ಮಗಳು. ಅವಳು ವಿಕ್ರಮಾದಿತ್ಯನ ಸಹೋದರಿ. ವಿಕ್ರಮಾದಿತ್ಯರು ಇಬ್ಬರು ಕಾಣಿಸಿಕೊಳ್ಳುವರು. ಇವರು ಯಾರು ಎಂದು ಗುರುತಿಸಬೇಕಿದೆ. ಆದಿತ್ಯದೇವನ ಮಗನೇ ಚೇದಿರಾಜ. ಚೇದಿರಾಜನ ಮಗನೇ ಪಲಮಾಂದ ಪಾಂಡ್ಯ, ಪಲಮಾಂದ ಪಾಂಡ್ಯನ ಮಗನೇ ಪಲಿತ ಪಾಂಡ್ಯ ಅರ್ಥಾತ್ ಇರುಕ್ಕವೇಳ್. ಮೊದಲ ಮೂರು ಜನ ಪಾಂಡ್ಯ, ಅರಸರ ಹೆಸರುಗಳನ್ನು ಶಾಸನಗಳು ಉಲ್ಲೇಖಿಸಿದರೂ ಅವರ ಆಳ್ವಿಕೆ ಕ್ಷೇತ್ರ "ಹೈಹ" ಪ್ರದೇಶ ಶಿಶುಗಲಿ ಉಳುವ, ರಾಜಧಾನಿ ಎಂದಿಷ್ಟೇ ತಿಳಿಸುತ್ತವೆ. ಹೆಚ್ಚಿನ ವಿವರಗಳು ದೊರಕುತ್ತಿಲ್ಲ.

ಪಲಿತ ಪಾಂಡ್ಯ (ಇರುಕ್ಕವೇಳ್) ಕಲ್ಯಾಣ ಆರನೇ ವಿಕ್ರಮಾದಿತ್ಯನಲ್ಲಿ ಸರ್ವಾಧ್ಯಕ್ಷನಾಗಿದ್ದುದನ್ನು ಶಾಸನ ತಿಳಿಸುತ್ತದೆ. ಚಾಲುಕ್ಯ ರಾಜ್ಯದ ಸೈನ್ಯಾಡಳಿತವನ್ನು ಪೂರ್ಣ ಜವಾಬ್ದಾರಿಯಿಂದ ನಿರ್ವಹಿಸುವುದಕ್ಕಾಗಿಯೇ ನೊಳಂಬವಾಡಿ - ೩೨೦೦೦ ರಾಜ್ಯವನ್ನು ತನ್ನ ಮಗ ರಾಯ ಪಾಂಡ್ಯನಿಗೆ ಒಪ್ಪಿಸಿ ಅದರ ಮೇಲ್ವಿಚಾರಣೆಯನ್ನು (ಉಸ್ತುವಾರಿಯನ್ನು) ತಾನು ನೋಡಿ ಕೊಂಡಿರಬೇಕು. ಇದರಿಂದ ತಂದೆ ಮಕ್ಕಳು ಸಂಯುಕ್ತ ಆಳ್ವಿಕೆ ನಡೆಸಿದಂತೆ ಕಂಡು ಬರುವುದು.

ಕ್ರಿ.ಶ. ೧೦೬೪ರಲ್ಲಿ ಶ್ರೀ ಮುದ್ದಣ ದೇವಪ್ಪಯ್ಯ, ಕ್ರಿ.ಶ. ೧೦-೭-೧೦೭೦ರಲ್ಲಿ ದಾಮಪ್ಪಯ್ಯ ಉಚ್ಚಂಗಿ - ೩೦ನ್ನು ಆಳಿದರೆ, ನೊಳಂಬವಾಡಿ -೩೨೦೦೦ವನ್ನು ಪಲ್ಲವ ಪೆರ್ಮಾಡಿ ಆಳುತಿದ್ದು, ಕ್ರಿ.ಶ.೩೧-೫-೧೦೭೪ರಲ್ಲಿ ಹೊಳಲು ಶಾಸನದಲ್ಲಿ ಗಂಡಾರಾದಿತ್ಯ ಚತುರ್ವೇದಿ ಮತ್ತು ಮಂಗಳರ ವಿಚಾರವಿದೆ. ಕೂಡ್ಲಿಗಿ ತಾಲ್ಲೂಕು ಹಳ್ಳ ಹನುಮಂತ ದೇವರ ಗುಡಿ ಕ್ರಿ.ಶ. ೧೦೭೫ ರ ಶಾಸನದಲ್ಲಿ ಕೋಗಳಿಯನ್ನು ಕದಂಬರ ನಾಚಿದೇವನು ಆಳುವುದು ಗೊತ್ತಾಗುವುದು. ಹೂವಿನಹಡಗಲಿ ಕ್ರಿ.ಶ.೧೦೭೭ರ ಶಾಸನದಲ್ಲಿ ಚಾಲುಕ್ಯ ತ್ರಿಭುವನಮಲ್ಲ ಗೋವಿಂದವಾಡಿಯನ್ನು ಆಳುತ್ತಿದ್ದಾಗ ಮಹಾ ಸಾಮಂತ ಘಟ್ಟಿಯರಸ ದಂಡನಾಯಕ ಚಿದ್ದಯ್ಯರ ಹೆಸರುಗಳಿವೆ. ಕ್ರಿ.ಶ ೧೦೭೭ರವರೆಗೂ ಪಾಂಡ್ಯರ ವಿಚಾರ ಉಚ್ಚಂಗಿ ಮತ್ತು ಬಳ್ಳಾರಿ ಭಾಗದಲ್ಲಿ ಕಂಡು ಬರುತ್ತಿಲ್ಲ. ಮಹಾಸಾಮಂತ ಘಟ್ಟಿಯರಸನ ವಿಚಾರ ತ್ರಿಭುವನಮಲ್ಲ ರಾಯ ಪಾಂಡ್ಯನ ಶಾಸನದಲ್ಲಿ ಬರುವುದರಿಂದ ಕ್ರಿ.ಶ. ೧೦೭೭ರ ನಂತರ ಕ್ರಿ.ಶ. ೧೦೭೮ರಲ್ಲಿ ಪಲಿತ ಪಾಂಡ್ಯನ ಆಳ್ವಿಕೆ ಆರಂಭವಾಗಿರಲು ಸಾಧ್ಯ. ಈ ಭಾಗದಲ್ಲಿ ಕ್ರಿ.ಶ. ೧೦೭೯ರ ರಾಯ ಪಾಂಡ್ಯನ ಶಾಸನವೇ ಮೊದಲನೆಯದು. ಇರುಕ್ಕವೇಲ್ ಅರ್ಥಾತ್ ಪಲಿತ ಪಾಂಡ್ಯನ ಆಳ್ವಿಕೆಯ ಆರಂಭದ ಶಾಸನಗಳು ಈವರೆಗೂ ದೊರೆತಿರಲಿಲ್ಲ. ಇತ್ತೀಚೆಗೆ ದೊರೆತ ಎರಡು ತಾಮ್ರ ಫಲಕ

ಶಾಸನಗಳು ಕ.ವಿ.ವಿ.ಹಂಪಿ ಶಾಸನ ಸಂಪುಟ -೧ರಲ್ಲಿ ಪ್ರಕಟವಾಗಿರುತ್ತವೆ.

೧) ಕ್ರಿ.ಶ. ೨೫-೧೨-೧೦೮೭;

೨) ಕ್ರಿ.ಶ. ೩-೯-೧೧೨೩.

ಇವುಗಳಲ್ಲಿ "ಚಾಲುಕ್ಯ ರಾಜ ತ್ರಿಭುವನಮಲ್ಲನು ಕಲ್ಯಾಣಪುರದ ನೆಲೆವೀಡಿನಿಂದ ಆಳುತ್ತಿದ್ದಾಗ ಅವನ ಮಹಾ ಮಂಡಳೇಶ್ವರ ಪಲಿತ ಪಾಂಡ್ಯನು ಬ್ರಾಹ್ಮಣನಿಗೆ ನೀರ್ಗ್ಗುಂದವನ್ನು ದಾನ ನೀಡಿದನು. ಈ ಊರು ಕೋಗಳಿ ಐನೂರು ಬಿಕ್ಕಿಗ - ೭೦ರಲ್ಲಿದ್ದಿತು.";

ಎರಡನೆಯ ಶಾಸನದಲ್ಲಿ "ಚಾಲುಕ್ಯ ಅರಸ ತ್ರಿಭುವನಮಲ್ಲ ಬನವಾಸಿಯಲ್ಲಿ ತಂಗಿದ್ದಾಗ ಅವನ ಸರ್ವಾಧ್ಯಕ್ಷನಾದ, ಪಲಿತ ಪಾಂಡ್ಯನ ಮಗ ರಾಯ ಪಾಂಡ್ಯನ ಕೋರಿಕೆಯಂತೆ ಕೃಷ್ಣ ಫಲಕವನ್ನು ಬ್ರಾಹ್ಮಣರಿಗೆ ದಾನ ನೀಡಿದನು".

ಇದರಿಂದ ಪಲಿತ ಪಾಂಡ್ಯನು ಚಾಲುಕ್ಯ ಆರನೆಯ ವಿಕ್ರಮನ ಆಳ್ವಿಕೆಯ ಆರಂಭದ ಮರುವರ್ಷ ಕ್ರಿ.ಶ. ೧೦೭೮ಕ್ಕೆ ತನ್ನ ಆಳ್ವಿಕೆ ಆರಂಭಿಸಿದಂತೆ ಕಂಡು ಬರುವುದು. (ತಂದೆ ಮಗನಿಗಿಂತ ವಯಸ್ಸಿನಲ್ಲಿ ಹಿರಿಯ). ಈಗ ದೊರೆತ ಎರಡೂ ಶಾಸನಗಳಲ್ಲಿ ಎರಡನೆಯ ಶಾಸನ ಗಣನೆಗೆ ತೆಗೆದುಕೊಂಡಲ್ಲಿ ಕ್ರಿ.ಶ. ೧೦೭೮ ರಿಂದ ೩-೯-೧೧೨೩ರ ವರೆಗೂ ಪಲಿತ ಪಾಂಡ್ಯ ನೊಳಂಬ ವಾಡಿಯ ೩೨೦೦೦ ರಾಜ್ಯವನ್ನು ಆಳಿರಲು ಸಾಧ್ಯ.

೧) ಪಲಿತ ಪಾಂಡ್ಯ - ಕ್ರಿ.ಶ. ೧೦೭೮ ರಿಂದ ೧೧೨೩ = ೪೫ ವರ್ಷ ರಾಯ ಪಾಂಡ್ಯ ತಂದೆಯ ಕೂಡ ಸಂಯುಕ್ತ ಆಳ್ವಿಕೆ (ಕ್ರಿ.ಶ.೧೧೭೯ - ೧೧೨೩) ವರೆಗೆ = ೪೪ ವರ್ಷಗಳು

೨) ರಾಯ ಪಾಂಡ್ಯನ ಸ್ವತಂತ್ರ ಆಳ್ವಿಕೆ (ಕ್ರಿ.ಶ. ೧೧೨೩ - ೧೧೩೪) =೧೬ವರ್ಷ

೩) ವೀರಪಾಂಡ್ಯ (ಕ್ರಿ.ಶ. ೧೧೪೨ - ೧೧೬೩) =೨೧ ವರ್ಷ

೪) ಮೊದಲ ವಿಜಯ ಪಾಂಡ್ಯ - ಕಾಮದೇವ (ಕ್ರಿ.ಶ. ೧೧೬೪ - ೧೧೯೧) =೨೭ ವರ್ಷ

೫) ಕುಮಾರ ವಿಜಯ ಪಾಂಡ್ಯ - ೨ (ಕ್ರಿ.ಶ. ೧೧೯೪ ರಿಂದ ೧೨೦೬-೦೭) = ೧೨-೧೩ ವರ್ಷಗಳು.

ಕ್ರಿಸ್ತ ಶಕ ೨೫-೧೨-೧೦೮೭ ಮತ್ತು ಕ್ರಿಸ್ತ ಶಕ ೩-೯-೧೧೨೩ರ ಎರಡು ತಾಮ್ರ ಶಾಸನ ಮೂರು ಹಲಗೆಗಳು ವರಾಹ ಮುದ್ರೆ; ಕ್ರಿಸ್ತ ಶಕ ೨೫-೧೨-೧೦೮೭ ಮತ್ತು ಕ್ರಿಸ್ತ ಶಕ ೩-೯-೧೧೨೩ರಲ್ಲಿ ನೀರ್ಗುಂದ ಗ್ರಾಮ ಮತ್ತು ಕೃಷ್ಣ ಪಲ್ಲಿಕಗಳನ್ನು ಮಗರಾಯ ಪಾಂಡ್ಯನ ಕೋರಿಕೆಯಂತೆ ಪಲಿತ ಪಾಂಡ್ಯನು ಬ್ರಾಹ್ಮಣರಿಗೆ ದಾನ ನೀಡುವನು. 'ಮಗನ ಕೋರಿಕೆಯಂತೆ' ಎಂದಿದ್ದರಿಂದ ಪಲಿತ ಪಾಂಡ್ಯನೇ ಅರಸ ಎಂದು ತಿಳಿಯುತ್ತದೆ. ಎರಡನೆಯದಾಗಿ ಕಲ್ಯಾಣ ಚಾಲುಕ್ಯರಲ್ಲಿ ಪಲಿತ ಪಾಂಡ್ಯ ಸರ್ವಾಧ್ಯಕ್ಷನಾಗಿದ್ದುದರಿಂದ ನೊಳಂಬವಾಡಿ ೩೨೦೦೦ ರಾಜ್ಯವನ್ನು ನೋಡಿಕೊಳ್ಳಲು ಮಗರಾಯ ಪಾಂಡ್ಯನನ್ನು ನೇಮಿಸಿದಂತೆ ಕಂಡು ಬರುತ್ತದೆ.

ಶಾಸನಗಳಲ್ಲಿ ಈ ಅರಸರ ವಿವಿಧ ಹೆಸರುಗಳು

೧) ಸೊಂಚ ಪಾಂಡ್ಯ

ಇರುಕ್ಕವೇಳ್ - ವೇಲ್

ಪಲಿತ ಪಾಂಡ್ಯ - ಪೊಂಡಿ - ಪಾಂಡ್ಯ

೨) ತ್ರಿಭುವನ ಪಾಂಡ್ಯ

ತ್ರಿಭುವನ ಮಲ್ಲ ಪಾಂಡ್ಯ

ತ್ರಿಭುವನ ಮಲ್ಲ ಪಾಂಡ್ಯರಸ

ತ್ರಿಭುವನ ಮಲ್ಲ ಪಾಂಡ್ಯ ದೇವ

ತ್ರಿಭುವನ ಮಲ್ಲ ರಾಯ ಪಾಂಡ್ಯ

೩) ಗೊಲೆಯ ಪಾಂಡ್ಯ

ವೀರ ಪಾಂಡ್ಯ

ಜಗದೇಕಮಲ್ಲವೀರಪಾಂಡ್ಯ

ತ್ರಿಭುವನಮಲ್ಲವೀರಪಾಂಡ್ಯ

೪) ವಿಜಯ ಪಾಂಡ್ಯ -೧

ಕಾಮದೇವ

ವಿಜಯ ಪಾಂಡ್ಯರಸ

೫) ಕುಮಾರ ವಿಜಯ ಪಾಂಡ್ಯ -೨

ಈ ಅರಸರ ರಾಜಧಾನಿಗಳು

೧) ಶಿಸುಗಲಿ (೨) ಉಳುಮೆ (೩) ಬೆಳ್ಳೂರು - ಬೇಲೂರು (೪) ಉಚ್ಚಂಗಿದುರ್ಗ

ರಾಜ್ಯವಾಳದ ಪಾಂಡ್ಯ ಅರಸರು

೧) ಪಂಡಿತ ಪಾಂಡ್ಯ -೧

೨) ತೈಲಪ (ಪಂಡಿತ ಪಾಂಡ್ಯನ ಪುತ್ರ)

೩) ಉದಯ (ಕಾಮದೇವನ ಪುತ್ರ)

೪) ಪಂಡಿತ ಪಾಂಡ್ಯ -೨ (ಕಾಮದೇವನ ಪುತ್ರ)

೧) ಕ್ರಿ.ಶ. ೧೧೧೬ರಲ್ಲಿ ಹೊಯ್ಸಳರಿಗೂ ಪಾಂಡ್ಯರಿಗೂ ದುಮ್ಮಿ ಬಳಿ ನಡೆದ ಕದನದಲ್ಲಿ ತ್ರಿಭುವನ ಮಲ್ಲ ರಾಯ ಪಾಂಡ್ಯ ಕೊಲ್ಲಲ್ಪಟ್ಟನೆಂದು ಡಾ:ಬಿ. ಆರ್. ಗೋಪಾಲರು ಹೇಳುವರು. ಆದರೆ ತ್ರಿಭುವನ ಮಲ್ಲರಾಯ ಪಾಂಡ್ಯ ಈ ಕದನ ನಡೆದ ಬಳಿಕ ಮುಂದುವರಿದ ಅನೇಕ ಶಾಸನಗಳು ಕ್ರಿ.ಶ.೧೧೨೬ರ ವರೆಗೂ ಹರಪನಹಳ್ಳಿ ತಾಲೂಕಿನಲ್ಲಿ ಮತ್ತು ದಾವಣಗೆರೆ ದುರ್ಗಾಂಬಿಕಾ ದೇವಾಲಯ ಗೋಡೆ ಶಾಸನ ಕ್ರಿ.ಶ.೧೧೩೯ರಲ್ಲಿ ದೊರಕುತ್ತವೆ.

೨) ಎರಡನೆಯದಾಗಿ ಹರಪನಹಳ್ಳಿ ತಾಲ್ಲೂಕು ಚಟ್ನೀಹಳ್ಳಿ

ಕಲ್ಲೇಶ್ವರ ಗುಡಿ ಕ್ರಿ.ಶ. ೨೭-೫-೧೧೪೬ ರ ವೀರ ಪಾಂಡ್ಯನ ಶಾಸನದಲ್ಲಿ ಅಜೇಯ ರಾಯ ಪಾಂಡ್ಯ ಮತ್ತು ರಾಣಿ ಸೋವಲದೇವಿಗೆ ಪುಣ್ಯವಾಗಲೆಂದು ನೊಯ್ಯೇಶ್ವರ ದೇವರ ಸತ್ರಕ್ಕೆ ದಾನ ಬಿಟ್ಟ ಉಲ್ಲೇಖವಿದೆ.

ಮೇಲೆ ತಿಳಿಸಿದ ಈ ಉದಾಹರಣೆಗಳು ತ್ರಿಭುವನಮಲ್ಲ ರಾಯ ಪಾಂಡ್ಯ ಕ್ರಿ.ಶ. ೧೧೧೬ರಲ್ಲಿ ದುಮ್ಮಿ ಬಳಿ ನಡೆದ ಕದನದಲ್ಲಿ ಕೊಲ್ಲಲ್ಪಟ್ಟಿಲ್ಲ ಎಂಬುದನ್ನು ಸಾಬೀತು ಪಡಿಸುತ್ತವೆ.

ಕ್ರಿ.ಶ. ೧೧೯೧ರಲ್ಲಿ ಸೊರಟೂರಿನಲ್ಲಿ ಹೊಯ್ಸಳರಿಗೂ ಸೇವುಣರಿಗೂ ಯುದ್ಧ ಸಂಭವಿಸಿತು. ಸೇವುಣರ ಸೈನ್ಯ ಸೋತು ಲಕ್ಕುಂಡಿ ಕೋಟೆಯನ್ನು ಸೇರಿತು. ಹೊಯ್ಸಳರು ಅಲ್ಲಿಗೂ ಹೋಗಿ ಕೋಟೆಯನ್ನು ಮುತ್ತಿದರು. ಸೋತ ಸೇವುಣರು ಪಲಾಯನ ಮಾಡುತ್ತಿದ್ದರು. ಶತ್ರು ಸೈನ್ಯ ಅವರ ಮೇಲೆ ಬಿದ್ದು ಅವರನ್ನು ಕೊಂದಿತು. ಇದರಲ್ಲಿ ಸೇವುಣರ ಮತ್ತು ಅವರ ಪರ ಹೋರಾಡುತ್ತಿದ್ದ ಅನೇಕ ಯುದ್ಧ ವೀರರು ಕೊಲ್ಲಲ್ಪಟ್ಟರು. ಅವರಲ್ಲಿ ರಾಜ ಭಿಲ್ಲಮ, ದಂಡನಾಯಕ ಜೈತುಗಿ, ಉಚ್ಚಂಗಿ ಪಾಂಡ್ಯ ಕಾಮದೇವ ಮತ್ತು ಅವನ ಮಗ ಉದಯ ಇದ್ದರು. ಎರಡನೆಯ ವೀರ ಬಲ್ಲಾಳನ ಕಾಲ ಕ್ರಿ.ಶ. ೧೧೭೩-೧೨೨೦; ಬಾಗಳಿ ಕಲ್ಲೇಶ್ವರ ಗುಡಿ ಆವರಣದ ಕ್ರಿ.ಶ. ೧೦-೧೧-೧೧೯೩ರ ಒಂದು ಶಾಸನದಲ್ಲಿ ಎರಡನೆಯ ವೀರಬಲ್ಲಾಳನು ಬಾಳ್ಗುಳಿ ನೆಲೆವೀಡಿನಲ್ಲಿದ್ದು ಕಲ್ಲೇಶ್ವರ ದೇವರ ಗುಡಿ ಜೀರ್ಣೋದ್ಧಾರಕ್ಕೆ ನಂದಿಬೇವೂರು ಸಮಸ್ತ ಭೂಮಿ ದಾನ ಮಾಡಿದ್ದು ಅದರಲ್ಲಿ ಪಾಂಡ್ಯ ಅರಸರ ಪ್ರಸ್ತಾಪವಿಲ್ಲ. ಇದು ಕಾಮದೇವ ಮಡಿದದ್ದು ದೃಢಪಡಿಸುತ್ತದೆ. ಕ್ರಿ.ಶ ೧೧೯೪ರಿಂದ ಕಾಮದೇವನ ಕಿರಿಯ ಮಗ ಕುಮಾರ ವಿಜಯಪಾಂಡ್ಯ ಹೊಯ್ಸಳರ ಎರಡನೆಯ ವೀರಬಲ್ಲಾಳನ ಸಾಮಂತನಾಗಿ ನೊಳಂಬವಾಡಿ ರಾಜ್ಯದ ಕೆಲ ಪ್ರದೇಶ ಆಳಿರಬೇಕು.

ಹಿರೇಕುರುವತ್ತಿ ಮಲ್ಲಿಕಾರ್ಜುನ ಗುಡಿ ಕ್ರಿ.ಶ.೧೨೦೬ -೦೭ರ ಹೊಯ್ಸಳರ ಶಾಸನದಲ್ಲಿ ಉಚ್ಚಂಗಿ ಪಾಂಡ್ಯದೇವನ ಅನುಮತಿಯಂತೆ ಮುಕ್ಕರಬೆ ಗ್ರಾಮವನ್ನು ಅಹವಮಲ್ಲೇಶ್ವರ ದೇವರ ಪೂಜಾ ಕಾರ್ಯಕ್ಕೆ ಅರಸ ದಾನ ಮಾಡಿದ್ದು ತಿಳಿಯುವುದು. ಆದರೆ ಯಾವ ಪಾಂಡ್ಯ? ಅವನ ಹೆಸರು ಉಲ್ಲೇಖವಾಗಿಲ್ಲ.

ಹರಪನಹಳ್ಳಿಯಿಂದ ಹೂವಿನಹಡಗಲಿಗೆ, ಹರಪನಹಳ್ಳಿ ಯಿಂದ ಉಚ್ಚಂಗಿದುರ್ಗಕ್ಕೆ, ಮಲೆಬೆನ್ನೂರಿನಿಂದ ಶಿವಮೊಗ್ಗಕ್ಕೆ ಪ್ರಯಾಣ ಮಾಡುವ ರಸ್ತೆಗಳಲ್ಲಿ ಒಂದೊಂದು ಗ್ರಾಮ ದೊರಕುವುವು. ಅವುಗಳಿಗೆ ಕುಮಾರನಹಳ್ಳಿ-ಕೊಮಾರನ ಹಳ್ಳಿಗಳೆಂದು ಕರೆಯುವರು. ಇವು ಪಾಂಡ್ಯರ ಕೊನೆ ಅರಸ ಕುಮಾರ ವಿಜಯ ಪಾಂಡ್ಯನ ಹೆಸರಿನಲ್ಲಿ ಸ್ಥಾಪನೆ ಆಗಿರುವುದಾಗಿ ನಮ್ಮ ಭಾಗದ ವಯೋವೃದ್ಧರು ಹೇಳುವರು.

ಬಾಗಳಿ ಸಂಸತ ಶಾಸನದಲ್ಲಿ ಕಾಲವಿಲ್ಲ. ಸಂಕ್ಷಿಪ್ತವಾಗಿ ಪಾಂಡ್ಯರ ವಂಶಾವಳಿಯನ್ನು ತಿಳಿಸುವುದು. ಶ್ರವಣಬೆಳ್ಗೊಳ ಶಾಸನ ಪಾಂಡ್ಯ ಅರಸರ ಮೂಲ ಹೆಸರುಗಳನ್ನು ವಿವರಿಸಿದೆ. ಕರ್ನಾಟಕ ಪರಂಪರೆ ಸಂಪುಟ ಒಂದರಲ್ಲಿ ಇರುಕ್ಕವೇಲ್ ಎಂಬುವ ಹೆಸರಿನ ತ್ರಿಭುವನ ಮಲ್ಲ ಪಾಂಡ್ಯ ನೊಳಂಬವಾಡಿಯನ್ನು ಆಳಿದ ಎಂದಿದೆ. ಅದರಲ್ಲಿ ಕ್ರಿ.ಶ. ೧೦೮೩, ಕ್ರಿ.ಶ. ೧೧೦೧, ಕ್ರಿ.ಶ. ೧೧೧೩ರ ಶಾಸನಗಳನ್ನು ಉಲ್ಲೇಖಿಸಿದೆ. ಈ ಶಾಸನಗಳ ಅವಧಿಯಲ್ಲಿ ಕಾಣಿಸಿಕೊಳ್ಳುವ ಪಾಂಡ್ಯ ಅರಸ ತ್ರಿಭುವನಮಲ್ಲ ರಾಯ ಪಾಂಡ್ಯ, ಇರುಕ್ಕವೇಲ್ ಅರ್ಥಾತ್ ಪಲಿತ ಪಾಂಡ್ಯ ದೇವ, ರಾಯಪಾಂಡ್ಯನ ತಂದೆ. ಇವನು ಕಲ್ಯಾಣ ಚಾಲುಕ್ಯರಲ್ಲಿ ಸರ್ವಾಧ್ಯಕ್ಷನಾಗಿದ್ದನು.

ಹುಲ್ಲೂರು ಶ್ರೀನಿವಾಸ ಜೋಯಿಸರು ರಾಯ ಪಾಂಡ್ಯನೇ ತ್ರಿಭುವನ ಮಲ್ಲನೆಂದು ಸಮರ್ಥಿಸಿರುವರು. ಡಾ:: ಅನ್ಸಾರಿಯವರು ಇದನ್ನೇ ಬೆಂಬಲಿಸಿರುವರು. ಹುಲ್ಲೂರು ಶ್ರೀನಿವಾಸ ಜೋಯಿಸರು ಮತ್ತು ಡಾ:: ಜೆಡ್.ಕೆ.ಅನ್ಸಾರಿಯವರು ಪಾಂಡ್ಯರ ಆಳ್ವಿಕೆಯ ಕಾಲವನ್ನು ಪ್ರಾಯೋಗಿಕವೆಂದು ನಿರ್ಧರಿಸಿರುವರು. (ಅಂದಾಜು)

ದಿನಕರ ದೇಸಾಯಿ ಮತ್ತು ಬಿ.ಎಲ್.ರೈಸ್ ರವರು ಇರುಕ್ಕವೇಲ್ ಚೇದಿ ರಾಜನ ಸೋದರ ಎಂದಿರುವರು. ಇತ್ತೀಚೆಗೆ ಹೊಸ ಶಾಸನ ಪಲಿತ ಪಾಂಡ್ಯನದು ದೊರೆತ ಬಳಿಕ ಅವರ ವಾದಕ್ಕೆ ತೆರೆ ಬಿದ್ದಿತು. ದಿನಕರ ದೇಸಾಯಿ ಮತ್ತು ಡಾ:: ಜೆ.ಎಂ. ನಾಗಯ್ಯನವರು ತ್ರಿಭುವನ ಮಲ್ಲ ಪಾಂಡ್ಯ ಬೇರೆ, ರಾಯ ಪಾಂಡ್ಯ ಬೇರೆ ಎಂದಿರುವರು. ನಾಗಯ್ಯನವರು ಪಾಂಡ್ಯ ಅರಸರ ಸಂಖ್ಯೆಯನ್ನು ಹೆಚ್ಚಿಸಿರುವರು.

೧) ೩೦-೧-೧೦೭೯ ರ ನೀಲಗುಂದ ಮುಕ್ತೇಶ್ವರ ಗುಡಿ

೨) ೨೬-೧೨-೧೦೭೯ ರ ಬಾಗಳಿ ಕಲ್ಲೇಶ್ವರ ಗುಡಿಗಳ ಸಮಕಾಲೀನ ಶಾಸನಗಳು ಎರಡು. ಒಂದರಲ್ಲಿ ತ್ರಿಭುವನ ಮಲ್ಲರಾಯ ಪಾಂಡ್ಯ ಎಂದಿದ್ದರೆ, ಮತ್ತೊಂದರಲ್ಲಿ ತ್ರಿಭುವನ ಮಲ್ಲ ಪಾಂಡ್ಯ ಎಂದು ಉಲ್ಲೇಖಿಸಿದೆ. "ತ್ರಿಭುವನ ಮಲ್ಲ ಪಾಂಡ್ಯ ದೇವರಾಯ ಪಾಂಡ್ಯನ ಪುತ್ರ ಕ್ರಿಶ.೧೦೮೩ರಿಂದ ಕ್ರಿ.ಶ.೧೧೨೩ರ ವರೆಗೆ ಮಹಾಮಂಡಳೇಶ್ವರನಾಗಿ ಆಳಿದನೆಂದು ಹೇಳಬಹುದು" ಎಂದು ಡಾ::ನಾಗಯ್ಯನವರು ತಮ್ಮ ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ಇತಿಹಾಸ ದರ್ಶನದಲ್ಲಿ ಮೇಲಿನಂತೆ ತಿಳಿಸಿರುವರು.

೧ *ಹರಪನಹಳ್ಳಿ ತಾಲ್ಲೂಕು ಬಾಗಳಿ ಕಲ್ಲೇಶ್ವರ ಗುಡಿ ಕ್ರಿ.ಶ. ೨೨-೬-೧೧೨೬ ರ ಶಾಸನ.*

೨ *ಹರಪನಹಳ್ಳಿ ತಾಲ್ಲೂಕು ದುಗ್ಗತ್ತಿ ಈಶ್ವರ ಗುಡಿ ಬಳಿ ನಿಲ್ಲಿಸಿರುವ ಕ್ರಿ.ಶ. ೧೬-೧೨-೧೧೨೬ ರ ಶಾಸನ ದಾವಣಗೆರೆ ದುರ್ಗಾಂಬಿಕ ದೇವಿ ಗುಡಿ ೧೧೩೯ರ ಶಾಸನಗಳನ್ನು ಡಾ: ನಾಗಯ್ಯನವರು ನೋಡಿದಂತೆ ಕಂಡುಬರುವುದಿಲ್ಲ.*

ಪ್ರಾಚೀನ ಕಾಲದ ಮಹಾಮಂಡಳೇಶ್ವರರು ತಮ್ಮ ಚಕ್ರವರ್ತಿಗಳ ಬಿರುದುಗಳನ್ನು ಧರಿಸಿ ರಾಜ್ಯ ಆಳಿದರು. ಇದನ್ನು ನೊಳಂಬರು ಮತ್ತು ಹೊಯ್ಸಳರು ಶಾಸನಗಳು ದೃಢಪಡಿಸುವುವು.

ಶ್ರೀ.ಜೆ.ಎಂ. ನಾಗಯ್ಯನವರು ತಾವು ಬರೆದು ಪ್ರಕಟಿಸಿದ ಬಳ್ಳಾರಿ ಜಿಲ್ಲೆಯ ಸಾಂಸತಿಕ ಇತಿಹಾಸದಲ್ಲಿ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿ ೩೨೦೦೦ವನ್ನು ಕೇಸವಪುರದ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳಿರುವರು. "ನೆಲೆವೀಡು" ಎಂದರೆ ಇಲ್ಲಿ ರಾಜ್ಯದ ರಾಜಧಾನಿಯಲ್ಲ. ಅರಸ ಕ್ಯಾಂಪು ಮಾಡಿದ ಸ್ಥಳವಾಗಿರುತ್ತದೆ. ಆದಿತ್ಯದೇವ ಮೊದಲ ಅರಸ. ಅವನಿಗೂ ಪಾಂಡ್ಯನೆಂದೇ ಹೆಸರು. ತ್ರಿಭುವನ ಮಲ್ಲರಾಯ ಪಾಂಡ್ಯ ದೇವನು ಗಂಗ, ಚೋಳ ಉಳರನ್ನು ಗೆದ್ದು ಪಾಂಚಾಲರಿಂದ ಕಪ್ಪವನ್ನು ಪಡೆದ. ಒಡೆಯನ ಆಜ್ಞೆಯಂತೆ ರತ್ನಪುರದ ರಾಜನನ್ನು ಸಡೆಬಡಿದನೆಂದು ಹರಪನಹಳ್ಳಿ ತಾಲ್ಲೂಕು ಯರಬಾಳು ಕಲ್ಲೇಶ್ವರಗುಡಿ ಕ್ರಿ.ಶ.೭-೧೨-೧೧೨೨ ರ ಶಾಸನ ತಿಳಿಸುವುದು. ಇಲ್ಲಿ ರತ್ನಪುರ ಎಂದರೆ ಲಕ್ಷ್ಮೇಶ್ವರ ಪಟ್ಟಣ.

ಕ್ರಿ.ಶ.೧೧೨೪ರ ಒಂದು ಶಾಸನದಲ್ಲಿ ಆದಿಯಮರಸ ಕ್ರಿ.ಶ.೧೧೦೬ರ ಶಾಸನದಲ್ಲಿ ದಾಕರಸ, ಜಗಳೂರು ತಾಲ್ಲೂಕು ಕ್ರಿ.ಶ.೧೧೧೧ರ ಶಾಸನದಲ್ಲಿ ಮಹಾಸಾಮಂತ ಮಲ್ಲರಸ ನೊಳಂಬವಾಡಿಗೆ ಅರಸರಿಲ್ಲದ ವೇಳೆಯಲ್ಲಿ ನೋಡಿಕೊಳ್ಳುತ್ತಿದ್ದನು. ಕುಕ್ಕವಾಡಿ -೩೦ಕ್ಕೆ ಒಡೆಯನಾಗಿದ್ದ ಗಂಗರಸ, ಕೋಗಳಿ - ೫೦೦ನ್ನು ಆಳುತ್ತಿದ್ದ ಘಟ್ಟಿಯರಸ, ಯರಬಾಳು ಸ್ವಾಮಿದೇವ, ಕೊಂಚಾಪುರದ ಯಿರುಂಗರಸ, ಮೂವತ್ತರ ಮುತ್ತಿಗೆ ಪ್ರಭುಗಾವುಂಡರು, ರಾವಘಟ್ಟದ ತಿಕ್ಕಿಮಯ್ಯ, ದುಗ್ಗತ್ತಿಯ ಬ್ರಹ್ಮದೇವಯ್ಯ ನಾಯಕ, ಬಿಕ್ಕಿಗ ೭೦ ರ ಬೀರಭಟ್ಟ, ಬಾಗಳಿ ಶಾಸನ ೧೦-೩-೧೧೨೨ ರ ಪ್ರಕಾರ ಪ್ರತಿಕಾರ್ಯದುರಂಧರ, ಸಮಸ್ತ ಪ್ರಶಸ್ತಿ ಸಹಿತ ಶ್ರೀಮನ್ ಮಹಾಪ್ರಧಾನ ದಣ್ಣನಾಯಕ, ಬನ್ನಿಗೋಳದ ಪ್ರಭು ಸೋವರಸ, ಬೆಳಗುತ್ತಿ ಸಿಂಧರು ಹಳ್ಳ ಊರಿನಿಂದ ಆಳುತ್ತಿದ್ದರು. ಅವರು ಪಾಂಡ್ಯರ ಮಿತ್ರರಾಗಿದ್ದರು. ಕದಂಬರ ಮಯೂರಶರ್ಮ ವಿಜಯ ಪಾಂಡ್ಯನ ಸಾಮಂತ ನಾಗಿದ್ದನು. ನಾಗಾತ್ಯರಸ, ಹರಿಹರಸ, ಮಾಚರಸ, ಕುಮಾರ ಕೇತರಸ, ಮಹಾಸಾಮಂತ ಕಾಮಯ್ಯ ನಾಯಕ, ದಂಡನಾಯಕ ರಿಷಿಯಣ್ಣ ಭಟ್ಟ, ದಂಡಾಧಿಪತಿ ರವಿಗ, ಮಹಾಪ್ರಧಾನ ಮಹದೇವಯ್ಯ ಮುಂತಾದವರು ಪಾಂಡ್ಯರ ಸಾಮಂತರಾಗಿ ಮಿತ್ರರಾಗಿ ಸಹವರ್ತಿಗಳಾಗಿದ್ದರು. ಹರಿಹರ ಶಾಸನದಂತೆ ಮಧುಸೂಧನ ಪಾಂಡ್ಯರ ಗುರುವಾಗಿದ್ದನು. "ರಾಯ" ಎಂಬುವ ಪದ ಪಾಂಡ್ಯರ ಕಾಲದಲ್ಲಿ ಹೆಚ್ಚು ಪ್ರಚಲಿತವಿದ್ದು ವಿಜಯನಗರದ ಅರಸರ ಆಳ್ವಿಕೆಯಲ್ಲಿ ಪುನಃ ಮರುಕಳಿಸಿತು. ಬಳ್ಳಾರಿ ಮಂಗಳೂರು ಜಿಲ್ಲೆಗಳಲ್ಲಿ ದೊಡ್ಡವರಿಗೆ ಮತ್ತು ಸರಕಾರಿ ಅಧಿಕಾರಿಗಳಿಗೆ (ಗೌರವಸೂಚಕ) 'ರಾಯರೇ' ಎಂದು ಹಳೇ ಮೈಸೂರು ಭಾಗಗಳಲ್ಲಿ "ಸ್ವಾಮಿ" ಎಂಬುವ ಪದ ಮಹಾರಾಷ್ಟ್ರ ಕನ್ನಡ ಪ್ರದೇಶಗಳಲ್ಲಿ 'ಸಾಹೇಬರೇ' ಪದಗಳು ಪ್ರಚಾರದಲ್ಲಿದ್ದುವು. ಅಖಂಡ ಕರ್ನಾಟಕ ರಾಜ್ಯ ಉದಯದ ನಂತರ 'ಸಾಹೇಬರು' ಎಂಬುದು ಎಲ್ಲ ಭಾಗಕ್ಕೂ ವ್ಯಾಪಿಸಿತು.

ಹೆಚ್ಚು ಊಟ ಮಾಡುವವರಿಗೆ ಈಗಲೂ ನಮ್ಮ ಭಾಗದಲ್ಲಿ ಕೂಳು ಪಾಂಡ್ಯರೆಂದು ಕರೆಯುವರು. ಪಾಂಡ್ಯರಸರು ಬಲಶಾಲಿಗಳಾಗಿದ್ದು ಹೆಚ್ಚು ಆಹಾರ ಸೇವಿಸುತ್ತಿದ್ದರು.

ಧರ್ಮಕಾರ್ಯಕ್ಕೆ ನೆರವು

೧) ಕೆರೆಗುಡಿಹಳ್ಳಿಯ ಈಶ್ವರ ಗುಡಿ ಕ್ರಿ.ಶ. ೨೦-೧೨-೧೧೪೨ರ ಶಾಸನದಲ್ಲಿ ಅರಸೀಕೆರೆ ನೊಳಂಬೇಶ್ವರ ದೇವರಿಗೆ ಪೂಜಾಕಾರ್ಯಕ್ಕೆ ದಾನಬಿಟ್ಟರು.

೨) ಬೆಣ್ಣೆಹಳ್ಳಿ ಬಳಿ ಬಾಡ ಕ್ರಿ.ಶ. ೧೬-೭-೧೧೪೪ ರ ಶಾಸನದಲ್ಲಿ ನೊಳಂಬೇಶ್ವರನಿಗೆ ದಾನ ಮಾಡಿದ್ದು ತಿಳಿಯುತ್ತದೆ.

೩) ರಾಮಘಟ್ಟದ ರಾಮೇಶ್ವರ ಗುಡಿ ಕ್ರಿ.ಶ. ೨೫-೧೨-೧೧೨೨ ರ ಶಾಸನದಲ್ಲಿ ಹಾಲಮರಸ ರಾಮೇಶ್ವರ ದೇವರಿಗೆ ಗುಡಿ ಕಟ್ಟಿಸಿ ರಾಯಪಾಂಡ್ಯನಿಗೆ ನಿವೇದಿಸಿದ ಎಂದಿದೆ.

ನೀರಾವರಿಗೆ ಆದ್ಯತೆ

೧) ಹೂವಿನಹಡಗಲಿ ಕ್ರಿ.ಶ. ೧೧೧೩ರಲ್ಲಿ ಸುಂಕಾಧಿಕಾರಿ ಮುದ್ದರಸ ಗುಡಿ ಮತ್ತು ಕೆರೆಗಳನ್ನು ಕಟ್ಟಿಸಿ ಅವುಗಳ ಜೀರ್ಣೋದ್ಧಾರ ಮಾಡಿದ ಎಂದಿದೆ.

೨) ಉಚ್ಚಂಗಿದುರ್ಗದ ಕ್ರಿ.ಶ. ೨೫-೬-೧೧೬೫ರ ಶಾಸನದಲ್ಲಿ ಚಟ್ಟೀಹಳ್ಳಿ ಚಿಕ್ಕಮ್ಮನ ಕೆರೆಯಿಂದ ಚಟ್ಟನ ಕೆರೆಯ ಉತ್ತರದ ಕೋಡಿಯವರೆಗಿನ ನೀರಾವರಿ ಭೂಮಿಯನ್ನು ಆ ದೇವರಿಗೆ ದಾನ ಬಿಟ್ಟ.

೩) ಅಲಗಿಲವಾಡದ ಕಲ್ಲೇಶ್ವರ ಗುಡಿ ಕ್ರಿ.ಶ. ೨೫-೧೨-೧೧೫೪ರ ಶಾಸನದಲ್ಲಿ ಹಳ್ಳಿ ಮತ್ತು ಎರಡು ಕೆರೆಗಳನ್ನು ಕಟ್ಟಿಸಿದ್ದು ಗೊತ್ತಾಗುವುದು.

೪) ಕ್ರಿ.ಶ. ೧೦-೨-೧೧೧೫ರ ಶಾಸನದಲ್ಲಿ ದಿನವೂ ೫ ಜನರಿಗೆ ಊಟಕ್ಕೆ ಮಿಕ್ಕ ಹಣವನ್ನು ಊರಿನ ಪಿರಿಯ ಕೆರೆಯ ಕೆಲಸಕ್ಕೆ ದಾನವಿತ್ತರು.

ಶಿಕ್ಷಣಕ್ಕೆ ಪ್ರೋತ್ಸಾಹ

೧) ಹಗರಿಬೊಮ್ಮನಹಳ್ಳಿ ರಾಮೇಶ್ವರ ಗುಡಿ ಹನಶಿ ಕ್ರಿ.ಶ. ೧೨-೭-೧೧೧೧ರ ಶಾಸನದಲ್ಲಿ ಪಾಂಡ್ಯ ಅರಸನ ಕಾಲದಲ್ಲಿ ದೇವರ ಅಂಗಭೋಗ ಸ್ನಾನ ನಿವೇದ್ಯಕ್ಕೆ ಅತಿಥಿ

ಅಭ್ಯಾಗತರ ತಪೋಧನರ, ವಿದ್ಯಾರ್ಥಿ, ಆಹಾರ ದಾನ ಖಂಣ್ಡ ಸ್ಪುಟಿತ ಜೀರ್ಣೋದ್ಧಾರಕ್ಕಂ ಎಂದಿದೆ.

೨) ಹರಪನಹಳ್ಳಿ ತಾಲ್ಲೂಕು ಕೆರೆಗುಡಿಹಳ್ಳಿ ಕ್ರಿ.ಶ. ೧೨-೧೨-೧೧೧೧ರ ಶಾಸನದಲ್ಲಿ ಪಾಂಡ್ಯರು ನೊಳಂಬೇಶ್ವರ ದೇವರ ಪೂಜಾ ಮತ್ತು ಓದುವ ಮಕ್ಕಳಿಗೆ ಭೂದಾನ ಮಾಡಿದರು, ಎಂದಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. *Mahamandaleswaras under the Chalukyas of Kalyana* - Desai Dinakar.
೨. *Epigraphia Carnatica* - old series E.D. - B.L Rice.
೩. *South Indian Inscriptions.*
೪. *The Chalukyas of Kalyana and the Kalachuris* - B.R. Gopal.
೫. **ಐತಿಹಾಸಿಕ ಲೇಖನಗಳು - ಹುಲ್ಲೂರು ಶ್ರೀನಿವಾಸ ಜೋಯಿಸರು.**, (ಸಂ.) ಲಕ್ಷ್ಮಣ ತೆಲಗಾವಿ ಮತ್ತು ಎಂ.ವಿ. ಶ್ರೀನಿವಾಸ.
೬. Some Feudatory families of Medieval Karnataka A study-Dr. Z.K.Ansari.
೭. ಡಾ. ಜೆ. ಎಂ. ನಾಗಯ್ಯ; **ಬಳ್ಳಾರಿ ಜಿಲ್ಲೆಯ ಸಾಂಸ ತಿಕ** ಇತಿಹಾಸ, ಕ.ವಿ.ವಿ.ಹಂಪಿ ಪ್ರಕಟಣೆ.
೮. ಪಿ.ವಿ ಕೃಷ್ಣಮೂರ್ತಿ 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು - ಭಾಗ - ೩ ಕದಂಬಳಿಗೆ ಸಾಸಿರ' - ಕ.ವಿ.ವಿ. ಹಂಪಿ ಪ್ರಕಟಣೆ.
೯. **ಕರ್ನಾಟಕ ಪರಂಪರೆ ಸಂಪುಟ** - ೧ ಕನ್ನಡ ಸಂಸತಿ ಇಲಾಖೆ ಪ್ರಕಟಣೆ.
೧೦. ವಯೋವೃದ್ಧರ ಹೇಳಿಕೆಗಳು ೧. ಚಿಕ್ಕೆರೂರು ಗೋವಿಂದಾಚಾರ್ಯರು, ಹರಪನಹಳ್ಳಿ; ೨. ಚಿಕ್ಕಿ ಚಿನ್ನಪ್ಪ ಹಿರೇಕುರುವತ್ತಿ.
೧೧. ಜೋಗೇರ ಹಾಡು - ಜಾನಪದ.

★ ★ ★ ★



ವೈ. ಉಮಾನಾಥ ಶೆಣೈ*

ಚಂದಾವರದ ಕದಂಬ ಕಾಮದೇವರಸ : ಕೆಲವು ಹೊಸ ವಿಚಾರಗಳು ಮತ್ತು ಪರಿಹಾರಗಳು

ಬನವಾಸಿಯ ಕದಂಬ ಅರಸು ಮನೆತನವು ತಾವೇ ಇಬ್ಭಾಗವಾಗಿ ಶಕ್ತಿ ಕುಂದುತ್ತಿದ್ದಾಗ ಅವರ ಮೇಲೆ ನಡೆದ ಚಾಲುಕ್ಯ ಒಂದನೇ ಪುಲಕೇಶಿಯ ಧಾಳಿ (ಕ್ರಿ.ಶ. ಸುಮಾರು ೫೪೦) ಯಿಂದಾಗಿ ಅವರು ಇನ್ನೂ ಬಲಹೀನರಾದರು. ಮುಂದೆ ನಡೆದ ಇಮ್ಮಡಿ ಪುಲಕೇಶಿಯ ಧಾಳಿಯಿಂದಾಗಿ ನುಚ್ಚು ನೂರಾದ ಈ ಅರಸು ಮನೆತನದ ಕೆಲವು ಅರಸು ಕುಮಾರರು ಹಲವು ಕಡೆ ಹಂಚಿ ಹೋಗಿ, ಯಾರ ಗಮನಕ್ಕೂ ಬಾರದೆ, ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ ಕಲ್ಯಾಣಿ ಚಾಲುಕ್ಯರ ಮತ್ತು ಕಲಚೂರ್ಯರ ಅಧೀನದಲ್ಲಿ ಆಳಿದರು. ಗೋವಾ ಮತ್ತು ಹಾನಗಲ್ಲು ಅಲ್ಲದೆ, ಇನ್ನೂ ಸುಮಾರು ಹದಿಮೂರು ಕಡೆ (ಪುನ್ನಾಟ, ಬೇಲೂರು, ಬಂಕಾಪುರ, ಉಚ್ಚಂಗಿ, ನಾಗರಖಂಡ, ದಟ್ಟಹಳ್ಳಿ, ಮಂಜರಾಬಾದ್, ಲುಂಕ, ಮೊಳಕಾಲ್ಮೂರು, ಕೋಗೋಳಿ, ಕೊಡಗು, ಕರಡಿ ಕಲ್ಲು ಮತ್ತು ಚಂದಾವರ)ಗಳಲ್ಲಿ ಇವರು ಆಳಿದುದನ್ನು ಇತಿಹಾಸಕಾರರು ಗುರುತಿಸಿದ್ದಾರೆ.

ಇವರ ಪೈಕಿ ಚಂದಾವರದ ಕದಂಬರು, ಇಂದಿನ ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲೂಕಿನ, ಚಂದ್ರಪುರ ಅಥವಾ ಚಂದ್ರಿಕಾಪುರ ಎಂದು ಕರೆಯಲ್ಪಡುತ್ತಿದ್ದ ಚಂದಾವರದಿಂದ ಆಳಿದರು. ಇವರು ಸಹಜವಾಗಿ ತಮ್ಮನ್ನು ಬನವಾಸಿ ಪುರವರಾಧೀಶ್ವರ, ಜಯಂತಿ ಮಧುಕೇಶ್ವರದೇವ ಲಬ್ಧವರ ಪ್ರಸಾದ, ಗೋಕರ್ಣ ಮಹಾಬಲದೇವ ಪಾದಪದ್ಮಾರಾಧಕ ಎಂದು ಕರೆದುಕೊಂಡಿದ್ದರು. ಆದರೆ ಇದೇ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಇಂದಿನ ಸಾಸಿಗುಳಿಯಿಂದ ಆಳಿದ ಪಾಂಡ್ಯ ಅರಸರು ಇದೇ ಬಿರುದುಗಳನ್ನು ಧರಿಸಿದ್ದರು. ಕಾಮದೇವರಸ ಎಂಬ ಹೆಸರು ಎರಡೂ ಅರಸು ಮನೆತನಗಳಲ್ಲಿ ಸಾಮಾನ್ಯವಾಗಿತ್ತು. ಆದುದರಿಂದ ಈ ಎರಡೂ ಅರಸು ಮನೆತನಗಳ ಇತಿಹಾಸ ಗೋಜಲು ಗೋಜಲಾಗಿತ್ತು. ಸ್ಪಷ್ಟವಾಗಿ ಭಿನ್ನವಾಗಿರುವ ಈ ಎರಡೂ ವಂಶಗಳನ್ನು ಬೇರೆ ಬೇರೆಯಾಗಿ ಗುರುತಿಸಿಕೊಂಡು ಅಧ್ಯಯನ ಮಾಡುವುದು ಇತ್ತೀಚಿಗಿನವರೆಗೂ ಕಷ್ಟವಾಗಿತ್ತು.

ಆದರೆ ಡಾ|| ಶ್ರೀನಿವಾಸ ಪಾಡಿಗಾರರು ಈ ಎರಡೂ ವಂಶಗಳನ್ನು ಪ್ರತ್ಯ ಪ್ರತ್ಯೇಕವಾಗಿ ಗುರುತಿಸಿ ಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಅವರು ಹೇಳುವಂತ ("ಕದಂಬ ಅಧ್ಯಯನ" ೧೯೯೬ರ ಕದಂಬೋತ್ಸವದಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ, ಪುಟ ೬-೮) "ಇತ್ತೀಚೆಗೆ ಶೋಧಿತವಾದ ಅಡತಾರೆಯ ಎರಡು ಶಾಸನಗಳು ಹಾಗೂ ಗುಂಡುಬಾಳದ ಇಮ್ಮಡಿ ಮಲ್ಲದೇವನ ಕಾಲದ ಒಂದು ಶಾಸನ, ಈ ಬಗ್ಗೆ ತುಸು ಮಾಹಿತಿ ನೀಡುತ್ತವೆ. ಅಡತಾರೆಯ ಶಾಸನ (೨೩ ಅಗಸ್ಟ್) ೧೧೯೬ರಲ್ಲಿ ಹೊರಟಿದ್ದು. ಪಟ್ಟಣದ ತೈಲವರ್ಮನು ಅಡತಾರೆ ಗ್ರಾಮವನ್ನೂ ಕಿಚ್ಚು ಸೋಮಯಾಜಿ ಹಾಗು ಮಹಾಜನರಿಗೆ ಅಗ್ರಹಾರವಾಗಿ ದಾನವಿತ್ತನು. ಶಿಲಾಶಾಸನವನ್ನು ತೈಲವರ್ಮನ ತಮ್ಮ ಮಾವುರ ದೇವ ಹಾಗೂ ಮೊಮ್ಮಗ ವೀರದೇವ ನಿಲ್ಲಿಸಿದರು. ಈ ವೀರ ದೇವರಸನ ಮೊಮ್ಮಗ ಕಾಮದೇವರಸ ಹಾಗೂ ಮಹಾಪ್ರಧಾನ ಕೀರ್ತಿ ನಾರಾಯಣ ದಂಡನಾಯಕ ಶಾಸನವನ್ನು ಪ್ರತಿಪಾಲಿಸಿದರು. ಗುಂಡುಬಾಳದ ಕ್ರಿ.ಶ. ೧೧೪೨ (ಡಿಸೆಂಬರ್ ೨೪)ರ ಶಾಸನದಲ್ಲಿ ಪಟ್ಟಣದ ತೈಲನ ಅಳಿಯ ಮಲ್ಲಿದೇವ ಹಾಗೂ ಅವನ ಮಡದಿ, ಅಂದರೆ ತೈಲನ ಮಗಳು ಹಂಪಾದೇವಿ ಉಲ್ಲೇಖಿತರಾಗಿದ್ದಾರೆ. ಈ ಮಲ್ಲದೇವನು ಬಹುಶಃ ಕದಂಬವಂಶದವನಾಗಿರಬೇಕು. ಪಾಂಡ್ಯರ ವಂಶದಲ್ಲಿ ಗಂಡು ಸಂತಾನ ಆಗದೆ ಹೋಗಿ ಹಂಪಾದೇವಿ ಮತ್ತು ಕದಂಬ ಮಲ್ಲಿದೇವನ ಸಂತತಿಗೆ ಆಡಳಿತ ದಾಟಿರಬೇಕು. ಈ ಹೊಸ ಸಂತತಿಯ ಮೊದಲ ಕುಡಿ ಕದಂಬ ವೀರದೇವ ಅಥವಾ ಬೀರದೇವ. ಈತನಿಂದಲೇ ಚಂದಾವರದ ಕಾದಂಬರ ಇತಿಹಾಸ ಆರಂಭವಾಗುತ್ತದೆ".

ಈ ವೀರದೇವ ಅಥವಾ ಬೀರದೇವನ ಮೊಮ್ಮಗನಾದ ವೀರ ಕಾಮದೇವರಸನ ಕುರಿತು ಕೆಲವು ಹೊಸ ಹಾಗೂ ವಿಶೇಷ ಮಾಹಿತಿಗಳನ್ನು ನೀಡುವ ಶಿಲಾ ಶಾಸನವೊಂದು ಇತ್ತೀಚೆಗೆ ಶೋಧಿಸಲ್ಪಟ್ಟಿದೆ. ಇದನ್ನು ಸದ್ಯ ಪ್ರಸ್ತುತ ಪಡಿಸಲಾಗಿದೆ.

ಈ ಕನ್ನಡ ಶಿಲಾಶಾಸನವು ಇತ್ತೀಚೆಗೆ ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಸಂಡಳ್ಳಿ ಎಂಬಲ್ಲಿ ಕುಮಟಾದಿಂದ ಪ್ರಸಿದ್ಧ ಯಾಣ ಶಿಲಾಪರ್ವತಕ್ಕೆ ಹೋಗುವ ರಸ್ತೆ ಬದಿಯ ಗುಡ್ಡದ ಮೇಲಿರುವ ಶ್ರೀ ರಾಜರಾಜೇಶ್ವರಿ ದೇವಾಲಯ ಪರಿಸರದಲ್ಲಿ ಎರಡು ತುಂಡಾಗಿ ಬಿದ್ದಿರುವ ಶಿಲಾ ಘಟಕಗಳ ಮೇಲೆ ಕಂಡು ಬಂದಿದೆ. ಇವೆರಡನ್ನೂ ಜೋಡಿಸಿದಾಗ ಇವುಗಳ ಒಟ್ಟು ಎತ್ತರ ೧ ಮೀಟರ್ ಮತ್ತು ಅಗಲ ೪೬ ಸೆಂಟಿ ಮೀಟರ್ ಮೇಲ್ಭಾಗದ

* ಪ್ರವಾಚಕರು, ಮುಖ್ಯಸ್ಥರು, ಚರಿತ್ರೆ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ. ೫೭೪ ೨೪೦

ತುಂಡಿನ ಮೇಲೆ ಶಿವಲಿಂಗ, ಸೂರ್ಯಚಂದ್ರ, ದನ-ಕರು ಮತ್ತು ನಂದಿಯ ಆಕೃತಿಗಳು ಇರುವುದರಿಂದ ಇದನ್ನು ಪೂಜೆಗೆ ಬಳಸಲಾಗುತ್ತಿದೆ. ಇದರಲ್ಲಿ ಶಾಸನಾರಂಭದ ಶಿವಸ್ತುತಿಯೂ ಇದೆ. ಕೆಳ ಭಾಗದ ತುಂಡಿನ ಮೇಲೆ ಉಳಿದ ೨೪ ಪಂಕ್ತಿಗಳೂ ಇವೆ. ಬಲವಾದ ಹೊಡೆತದಿಂದ ಶಿಲಾಫಲಕ ತುಂಡರಿಸಲ್ಪಟ್ಟಿದ್ದು ದರಿಂದ ಶಾಸನದ ಕೊನೆಯ ಸಾಲುಗಳೂ ಕೆಲವು ಅಕ್ಷರಗಳೂ ನಾಶಗೊಂಡಿವೆ. ಹೊಯ್ಸಳಕಾಲದ ಅಕ್ಷರ ವಿನ್ಯಾಸದಲ್ಲಿ ಬರೆದಿರುವ ಈ ಶಿಲಾ ಶಾಸನವು ನೋಡಲು ಸುಂದರವಾಗಿದೆ.

ಈ ಶಾಸನದ ಕಾಲ ಶಕ ೧೧೪೬ನೇ ರಕ್ತಾಕ್ಷಿ ಸಂವತ್ಸವರದ ವೈಶಾಖ ಶುದ್ಧ ಪಂಚಮಿ ಗುರುವಾರ ಅಂದರೆ ಕ್ರಿ.ಶ.೧೨೬೪ನೇ ಇಸವಿ ಎಪ್ರಿಲ್ ತಿಂಗಳ ೩ನೇ ತಾರೀಕು. ಇದನ್ನು ಬರೆಸಿದಾತ ಚಂದಾವರದ ಅರಸ ಶ್ರೀ ವೀರ ಕಾಮದೇವರಸ. ಆದರೆ ಕೆಲವರು ಈತನನ್ನು ವೀರ ಕಾಮದೇವರಸ ಎಂದೂ ಕರೆದಿದ್ದಾರೆ. ಚಂದಾವರದಿಂದ ಆಳಿದ ಅರಸರ ಪೈಕಿ ಈ ಹೆಸರಿನ ಅರಸ ಇವನೇ ಮೊದಲಿನವನಾಗಿರುವುದರಿಂದ ಈತನನ್ನು ಒಂದನೇ ವೀರಕಾಮದೇವರಸನೆಂದು ಕರೆಯಬಹುದು. ಸಾಸಿಗುಳಿಯ ಪಾಂಡ್ಯರಲ್ಲಿ ಇದೇ ಹೆಸರಿನ ಮೂರು ಜನ ಅರಸರಿದ್ದು. ಅವರ ಅನುಕ್ರಮವಾದ ರೀತಿಯಲ್ಲಿ ಕರೆಯಲಾಗಿದೆ. ಜೊತೆಗೆ ಉತ್ತರ ಕನ್ನಡ ಜಿಲ್ಲಾ ಗಝೆಟಿಯರ್‌ನಲ್ಲಿ ಮೂರು ಕಾಮದೇವರಸರ ಬಗ್ಗೆ ವಿವರಗಳನ್ನಿತ್ತಿದ್ದರೂ, ಆ ಕಾಮದೇವರುಗಳು ಸಾಸಿಗುಳಿಯ ಪಾಂಡ್ಯ ವಂಶದವರೆಂದೂ, ಮೇಲೆ ಉಲ್ಲೇಖಿಸಿದ ಚಂದಾವರದ ಕದಂಬ ಕಾಮದೇವನನ್ನು ಚಂದಾವರದ ಒಂದನೇ ವೀರಕಾಮ ದೇವನೆಂದೂ ಗುರುತಿಸಿಕೊಳ್ಳುವದು ಸರ್ವತ್ರ ಹೆಚ್ಚು ಸ್ಪಷ್ಟತೆಯನ್ನು ನೀಡುತ್ತದೆ. ಈ ನೂತನ ಶೋಧಿತ ಶಿಲಾಶಾಸನದಲ್ಲೆ ಈತನ ಹೆಸರನ್ನು ವೀರ ಕಾಮದೇವನೆಂದೇ ಸ್ಪಷ್ಟವಾಗಿ ಬರೆಯಲಾಗಿದೆ. ಈತನ ಆಳ್ವಿಕೆಯ ಕಾಲವನ್ನು ವಿವಿಧ ಆಕರಗಳ ಅಧ್ಯಯನದ ಸಹಾಯದಿಂದ ಡಾ|| ಶ್ರೀನಿವಾಸ ಪಾಡಿಗಾರರು ಕ್ರಿ.ಶ. ೧೨೩೩-೧೨೪೮ ಎಂದು ಸೂಚಿಸಿದ್ದಾರೆ.

ಪ್ರಸ್ತುತ ಶಾಸನದಲ್ಲಿ ಈ ಅರಸ ಒಂದನೇ ವೀರ ಕಾಮದೇವನು ತನ್ನನ್ನು ತ್ರಿಭುವನ ಚಕ್ರವರ್ತಿ ಎಂದು ಕರೆದು ಕೊಂಡಿದ್ದಾನೆ. ಆದರೆ ಈ ಬಿರುದಿನ ಯತಾರ್ಥತೆ ಸಂದೇಹಾಸ್ಪದ ವಾದುದು. ಯಾಕೆಂದರೆ, ಈತನ ರಾಜ್ಯ ಇಂದಿನ ಹೊನ್ನಾವರ, ಕುಮಟಾ ಮತ್ತು ಅಂಕೋಲ ತಾಲೂಕುಗಳ ಕೆಲವು ಭಾಗಗಳಷ್ಟು ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿತ್ತು. ಆದರೆ, ಅಂದಿನ ಕರಾವಳೀ ಕರ್ನಾಟಕದಲ್ಲಿ ಈ ಬಿರುದಿಗೆ ಪಂಥಾಹ್ವಾನ ನೀಡುವಷ್ಟು ಅಥವಾ ವಿರೋಧಿಸುವಷ್ಟು ಪ್ರಬಲ ಅರಸರೂ ಇರಲಿಲ್ಲ. ಸಮಕಾಲೀನ ಹೊಯ್ಸಳ ದೊರೆ ಸೋಮೇಶ್ವರನಾಗಲೀ (೧೨೩೫-೫೪) ಮೂರನೇ ನರಸಿಂಹನಾಗಲೀ (೧೨೫೪-೯೧) ಪ್ರಬಲ ರಾಗಿರದಿದ್ದ ಕಾರಣ ಹಾಗೂ ಅವರು ತಮ್ಮ ಗಮನವನ್ನು ತಮಿಳುನಾಡು ಕಡೆಗೆ ಹರಿಸಿದುದರಿಂದ ಈತ ತನ್ನ ಈ ಬಿರುದನ್ನು ಅವಿರೋಧವಾಗಿ ಬಳಸಿಕೊಂಡಿರುವಂತೆ ಕಾಣುತ್ತದೆ.


ಈ ಶಾಸನದ ಮೂರನೇ ಪಂಕ್ತಿಯಲ್ಲಿ ಈತನನ್ನು "ವರಾಹಾಲಯಾಭರಣ" ಎಂದು ಕರೆಯಲಾಗಿದೆ. ಈ ವರಾಹಾಲಯವು ಯಾವುದಾಗಿರಬಹುದದೆಂಬುದು ಒಂದು ಪ್ರಶ್ನೆ. ಗೋಮಾಂತಕ (ಗೋವಾ), ಅದರ ದಕ್ಷಿಣಕ್ಕಿರುವುದು ಗೋಕರ್ಣ, ಆದರ ದಕ್ಷಿಣಕ್ಕಿರುವ ಹೊನ್ನಾವರವನ್ನೇ ವರಾಹಾಲಯವೆಂದು ಕರೆದಿರಬಹುದೇ? ಚಂದಾವರದಲ್ಲೆ ಆಳ್ವಿಕೆಯನ್ನು ಪ್ರಾರಂಭಿಸು ವುದಕ್ಕಿಂತ ಮೊದಲು ಈ ಕದಂಬರು ಹೊನ್ನಾವರದಿಂದ ಆಳುತ್ತಿದ್ದರು. ಆದುದರಿಂದ ತನ್ನನ್ನು ಬನವಾಸಿ ಪುರವರಾಧೀಶ್ವರ ಎಂದು ಕರೆದುಕೊಂಡಂತೆ ವರಾಹಾಲಯಾಭರಣ ಎಂದು ಕರೆದು ಕೊಂಡಂತೆ ವರಾಹಾಲಯಾಭರಣ ಎಂದು ಕರೆದುಕೊಂಡಿರುವ ಸಾಧ್ಯತೆ ಇದೆ. ಅಥವಾ ವರಾಹಾವತಾರದಿಂದ ಉದ್ಧಾರಗೊಂಡ ಸಮಗ್ರ ಭೂಮಿಯೇ ವರಾಹಾಲಯವೆಂದು ಗಣಿಸಿ ಈತನು ಅದಕ್ಕೆ ಆಭರಣದಂತಿರುವವನು ಎಂಬ ಅರ್ಥದಲ್ಲೆ ಹಾಗೆ ಕರೆದಿರಬಹುದು.

ವೀರ ಕಾಮದೇವರಸನು ಬೀರದೇವ ಅಥವಾ ವೀರದೇವನ ಮೊಮ್ಮಗನೆಂದು ಇತರ ಶಾಸನಗಳಲ್ಲೆ ಹೇಳಿರುವಂತೆ, ಈ ಶಾಸನದಲ್ಲೆಯೂ ಹೇಳಿದೆ. ಆದುದರಿಂದ ಅಜ್ಜನ ನಂತರ ಈತನೇ ಪಟ್ಟಕ್ಕೆ ಬಂದಿರಬಹುದೆಂದು ತೋರುತ್ತದೆ. ಈತನ ತಂದೆ, ತೈಲ ಅಥವಾ ತೈಲಪನೆಂದು ನಮಗೆ ತಿಳಿದಿದೆಯಾದರೂ ಆತನು ರಾಜ್ಯವಾಳಿದಂತೆ ತಿಳಿದು ಬರುವುದಿಲ್ಲ. ಆದರೆ ಡಾ||ಶ್ರೀನಿವಾಸ ಪಾಡಿಗಾರರು ಮೇಲೆ ಉಲ್ಲೇಖಿಸಿದ ಕದಂಬ ಅಧ್ಯಯನ (ಪುಟ ೮)ದಲ್ಲಿ "ಕ್ರಿ.ಶ. ೧೨೨೫-೩೩ರ ನಡುವೆ ತೈಲನು ಆಳಿದ್ದರೂ ಆಳಿರಬಹುದೇ" ಎಂಬ ಸಂಶಯ ವ್ಯಕ್ತ ಪಡಿಸಿದ್ದಾರೆ. ಒಂದು ವೇಳೆ ಆಳಿರುತ್ತಿದ್ದರೆ, ವೀರಕಾಮದೇವರಸನಿಗಿಂತ ಮೊದಲು ತೈಲನ ಹೆಸರು ಬರುತಿತ್ತೇ ವಿನಃ ಅಜ್ಜ ಬೀರದೇವನ ಹೆಸರು ಬರುತ್ತಿರಲಿಲ್ಲ.

ಈ ಶಾಸನದ ಅಧ್ಯಯನದಿಂದ ವೀರಕಾಮದೇವರಸನು ಶೈವ ಸಂಪ್ರದಾಯಕ್ಕೆ ಸೇರಿದವನೆಂದು ತಿಳಿಯುತ್ತದೆ. ಈತನ "ಮಹಾ ತ್ರಿಪುರಾಂತಕಗಣ, ಪಂಚಮಹಾಶಬ್ದ ಮಹಾಮಾಹೇಶ್ವರಂ, ಜಯಂತಿ ಮಧುಕೇಶ್ವರದೇವಲಬ್ಧ ವರಪ್ರಸಾದ ಗೋಕರ್ಣ ಮಹಾಬಲ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕಂ" ಎಂಬ ಬಿರುದುಗಳೇ ಇದನ್ನು ಸಿದ್ಧಪಡಿಸುತ್ತವೆ.

ಮಹಾ ಪರಾಕ್ರಮಿಯಾದ ಈ ಅರಸನು "ಸುಭಟ ಚೂಡಾಮಣಿ, ಪರಬಲಸಾಧಕ, ಛಲದಂಕರಾಮ". ಆದರೆ ವೈದಿಕ ಧರ್ಮ ಪೋಷಕ, ಶಿಕ್ಷಣಕ್ಕೆ ವಿಶೇಷವಾದ ಪ್ರೋತ್ಸಾಹವನ್ನಿತ್ತನು. ಆದುದರಿಂದ ಈ ಶಾಸನದಲ್ಲಿ ಮೇಲೆ ಉಲ್ಲೇಖಿಸಿರುವ

ದಿನಾಂಕದಂದು, ಶಂಕರ ಉಪಾಧ್ಯಾಯ ಎಂಬವರ ಆರು ಜನ ಮಕ್ಕಳಿಗೆ ವಿಶೇಷವಾದ ಧನ ಮತ್ತು ಭೂದಾನವನ್ನೂ ಮಾಡಿದ್ದ. ಇದನ್ನೂ ತಿಳಿಸುವುದೇ ಈ ಶಿಲಾಶಾಸನದ ಮುಖ್ಯ ಉದ್ದೇಶವಾಗಿತ್ತು. ಶಾಸನದ ಅನುಸಾರ ಶ್ರೀ ಮದನಾಡಿ ಅಗ್ರಹಾರದ ಸಂಕಡಿವಳ್ಳಿಯ ಸಿದ್ಧಾಯದ ಭೂಮಿಯಿಂದ ಆಯ್ವತ್ತು ಹೊನ್ನು ಮತ್ತು ಮೂರು ಸಾವಿರ ಮರಗಳ ಭೂಮಿಯನ್ನು ಸರಿಯಾಗಿ ವಿಭಾಗಿಸಿ, ಶಂಕರ ಉಪಾಧ್ಯಾಯರ ಮಕ್ಕಳಾದ ಗೋವಿಂದ ಪರಿಮಿತ, ತ್ರಿವಿಕ್ರಮ ಪರಿಮಿತ, ನಾರಾಯಣ ಭಟ್ಟ, ಕೇಶವ ಪರಿಮಿತ, ದಾಮೋದರಭಟ್ಟ ಮತ್ತು ವಿಷ್ಣು ಭಟ್ಟಂಗೆ



ಕೊಡಲಾಗಿತ್ತು. ಈ ಧರ್ಮವನ್ನು ಶಾಶ್ವತವಾಗಿ ಪರಿಪಾಲಿಸಿದವರಿಗೆ, ಗಂಗಾತಟದ ಅಗಸ್ತ್ಯ ತೀರ್ಥದಲ್ಲಿ ಸಾವಿರ ಕಪಿಲೆ ದನಗಳನ್ನು ದಾನ ಕೊಟ್ಟ ಪುಣ್ಯದ ಫಲವು ಬರುತ್ತದೆ ಎಂದು ಕೊನೆಯಲ್ಲೆ ಸೂಚಿಸಲಾಗಿದೆ.

ಶಾಸನದ ಪೂರ್ಣ ಪಾಠವು ಈ ರೀತಿ ಇದೆ:

೧. ಶ್ರೀ ಗುರುಭ್ಯೋ ನಮಃ । ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ
೨. ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ
೩. ನಮಸ್ತಸ್ಮೈ। ವರಾಹಾಲಯಭರಣ,ಮಹಾ (ತ್ರಿಪು)
೪. ರಾಂತಕಗಣ, ಯಸ್ಯ ಮರುಃಖಣ ಖಣಾಯತೇ ಸ್ವಸ್ತಿ ಸಮಧಿಗ
೫. ತ ಪಂಚಮಹಾ ಶಬ್ದ ಮಹಾ ಮಾಹೇಶ್ವರಂ ಬನವಾಸಿ
೬. ಪುರವರಾಧೀಶ್ವರಂ ಜ್ಯಯಂತಿ ಮಧುಕೇಶ್ವರ ದೇವಲಬ್ಧ ವರಪ್ರಸಾದಂಸ
೭. ಹಜ? ಮಹಾಮೋದಂ ಶ್ರೀ ಗೋಕರ್ಣ ಮಹಾಬಳ ದೇವರ
೮. ದಿಬ್ಯ ಶ್ರೀ ಪಾದ ಪದ್ಮಾರಾಧಕಂ ಪರಬಳ ಸಾಧಕಂ ಹುಸಿವರ ಶೂ
೯. ಲ ನಿಗಳಂಕಮಲ್ಲ ಛಲದಂಕರಾಮ ಗಂಡರದಾವಣಿ ಕಲಿಗಳ
೧೦. ಮುಖದ ಕೈ ಸುಭಟ ಚೂಡಾಮಣಿ ಸತ್ಯೋಕ್ತಿ ಕಾಮಿನೀ ಲೋಲರು
೧೧. ಮಪ್ಪ ಶ್ರೀಮತು ತ್ರಿಭುವನ ಪ್ರತಾಪ ಚಕ್ರವರ್ತಿ ಶ್ರೀ ವೀರ ಕಾಮದೇವರ್ಸರು
೧೨. ಸ್ವಸ್ತಿ ಸಕ ನ್ರಿಪಕಾಲಾಧಿಕ ಸಂವತ್ಸರ ೧೧೮೬ನೇಯ ರಕ್ತಾಕ್ಷಿ ಸಂವತ್ಸ
೧೩. ರ ವೈಶಾಖ ಶು ೫ ಗು। ಶ್ರೀ ಗೋಕರ್ಣ ಮಹಾಬಳ ದೇವರ ಸಂನಿಧಾನ
೧೪. ದಲು ಬೀರದೇವರ್ಸರ ಮೊಮ್ಮಗ ಶ್ರೀ ವೀರ ಕಾಮದೇವರ್ಸನು ಸಂಖರ ಉಪಾ
೧೫. ಧ್ಯಾಯರ ಮಕ್ಕಳು ಆಱು ಮನುಷ್ಯರಿಗೆ ಶ್ರೀ ಮದನಾಡಿಯ
೧೬. ಗ್ರಹಾರ ಸಂಕಡಿವಳ್ಳಿಯನ್ನು ಸುಪ್ರ್ಯೋ ದಲ ಸಿದ್ಧಾಯ ೧೮೫ದೊಳ
೧೭. ಗೆ ಆಯ್ವತ್ತು ಹೊನ್ನ ಸಿದ್ಧಾಯದ ಮೂರು ಸಾವಿರ ಮರನ ೬ ವ್ರಿತ್ತಿಯಮಾ
೧೮. ಡಿಸಹ ನಮ ಸಿದ್ಧಾಯವಾಗಿ ಕೊಟ್ಟ ಗೋವಿಂದ ಪರಿಮಿತರು ತ್ರಿವಿಕ್ರಮ
೧೯. ಪರಮಿತರು ನಾರಾಯಣ ಭಟ್ಟರು ಕೇಶವ ಪರಮಿತರು ದಾಮೋದರ ಭಟ್ಟ
೨೦. ರು ಇನ್ನು ಆಱುವರಿಗೆ ೬ ವ್ರಿತ್ತಿ ವಿಷ್ಣುಭಟ್ಟರು ಸಹಿತ ಅಱುವರು
೨೧. ದವಟರ ಭಟ್ಟರಿಗೆ ೧ ರಿಂದುರದೊಗಳ. ಈ ಧರ್ಮ್ಮವ ಆ ಗ್ರಾಮ ಸ
೨೨. ದ ಮಂಕಿ ನಾನುದೇಶಿಗಳುಂ ರಾಜ್ಯ ಸ್ಪಪ್ಪರಸುಗಳುಂ ಪ್ರತಿಪಾ (ಅಸು)
೨೩. ವರು ಈ ಧರ್ಮದ ಪ್ರತಿಪಾಲಿಸಿದವರಿಗೆ ಗಂಗೆ?..............
೨೪. ಯಾಗೆ ಅಗಸ್ತ್ಯ ತೀರ್ತ್ಥದಲು ಸಹಸ್ರ ಕಪಿಲ್ಯೆಯ.........
೨೫. ....ಇರಿಸಿ ದಾನಂ ಗೊಟ್ಟೆ ಫಳ............
೨೬. ....ತೀರ್ಥಗ................

ಪು. ಶ್ರೀನಿವಾಸ ಭಟ್ಟ*

ಕಾರ್ಕಳದ ಭೈರವ ಅರಸರ ಬುದ್ಧಿವಂತ ಸೂರಪ್ಪಯ್ಯ

ತುಳುನಾಡಿನ ರೈತರು ಮಳೆಗಾಲದ ದಿನಗಳಲ್ಲಿ, ಮನೆಯೊಳಗೆ ಆಡುವ ಆಟಗಳಲ್ಲಿ ಚೆನ್ನೆಮಣೆಯಾಟವೂ ಒಂದಾಗಿದೆ. ಇದರಲ್ಲಿ ಬೇರೆ ಬೇರೆ ಸ್ವರೂಪದ ಆಟಗಳಿವೆ. ಇವುಗಳಲ್ಲಿ ಒಂದಕ್ಕೆ ಅರಸಾಟವೆಂದು ಹೆಸರು. ಇದನ್ನು ಆಡಲು ಮೂರು ಜನರು ಬೇಕು. ಇವರನ್ನು ಅರಸು, ಬುದ್ಧಿವಂತ, ಪೈತ ಎಂದು ಹೆಸರಿಸಲಾಗುತ್ತದೆ. ಇಲ್ಲಿ ಬುದ್ಧಿವಂತನೆಂದರೆ, ಅರಸನ ಮಂತ್ರಿಯೆಂದು ಗುರುತಿಸಲ್ಪಡುತ್ತಾನೆ. ಈ ನಾಮಧೇಯ ಕೇವಲ ಆಟದಲ್ಲಿ ಮಾತ್ರ ಹೇಳಲ್ಪಡುವುದೋ? ಅಥವ ಬೇರೆ ಕಡೆ ಏನಾದರೂ ಉಲ್ಲೇಖಗಳಿವೆಯೇ? ಎಂದು ಅಧ್ಯಯನ ಮಾಡಿದಾಗ ಸಂಗ್ರಹವಾದ ವಿಷಯಗಳನ್ನು ಹಾಗೆಯೇ ಕಾರ್ಕಳದ ಅರಸರ ಬುದ್ಧಿವಂತನಾಗಿ ಕೀರ್ತಿ ಪಡೆದಿದ್ದ ಸೂರಪ್ಪಯ್ಯನೆಂಬವನ ಕುರಿತು ಶಾಸನೋಕ್ತ ಮಾಹಿತಿಗಳನ್ನು ಇಲ್ಲಿ ಬರೆಯುವ ಪ್ರಯತ್ನಮಾಡಲಾಗಿದೆ. ತುಳುನಾಡಿನಲ್ಲಿ ವೀರಪುಂಗವರೆಂದು ಹೆಸರು ಪಡೆದಿದ್ದ, ಕೋಟಿ ಚೆನ್ನಯರು, ಪೆರುಮಳಬಲ್ಲಾಳನೆಂಬವನ ಬುದ್ಧಿವಂತನನ್ನು (ಮಂತ್ರಿ) ಕೊಂದರೆಂದು ಅವರ ಚರಿತ್ರೆಯಲ್ಲಿ ಹೇಳಲಾಗಿದೆ. ಯಕ್ಷಗಾನ ಪ್ರಸಂಗದಲ್ಲೂ "ಬುದ್ಧಿವಂತನ ಕೊಂದೆವು" ಎಂದು ಆ ಯುಗಳ ವೀರರು ಹೇಳಿದ್ದಿದೆ.

ತುಳುನಾಡಿನ ಕೆಲವು ಶಾಸನಗಳು ಕೂಡ ಬುದ್ಧಿವಂತರನ್ನು ಉಲ್ಲೇಖಿಸಿದ್ದಿದೆ. ಕ್ರಿ.ಶ ೧೩೮೨ರ ಬಾರಕೂರಿನ ಶಿಲಾಲೇಖದಲ್ಲಿ[೧] "ನಾಲ್ವರು ಸೆಟ್ಟಿಗಾರರು ಬುದ್ಧಿವಂತರು ಸಮಸ್ತ ಹಲರು"ಯೆಂಬ ಪದಗಳಿವೆ. ಕ್ರಿ.ಶ. ೧೪೬೭ರ ಮೂಡಬಿದಿರೆ ಚವುಟ ಅರಸರ ತಾಮ್ರ ಶಾಸನದಲ್ಲಿ[೨] "ಬುದ್ಧಿವಂತರು ಕೂಡಿ ತಿದ್ದಿ ಕೊಳ್ಳುವುದು" ಎನ್ನುವ ವಾಕ್ಯವಿದೆ. ಕ್ರಿ.ಶ. ೧೫೧೧ರ ಮೂಡಬಿದಿರೆಯ ಒಂದು ತಾಮ್ರಪಟದಲ್ಲಿ[೩] "ಪುತ್ತಿಗೆಯ ತಿರುಮಲರಾಯ ಅರಸರಾದ ಚವುಟರೂ, ಬುದ್ಧಿವಂತ ಅಂಣ ಸೇನಾಭೋವರೂ, ಆಳುಸಾವಿರ, ಬಳಿಸಾವಿರದವರೂ" ಎಂಬ ಹೇಳಿಕೆಯಿದೆ. ಕೆಳದಿ ಅರಸರ ಶಾಸನ ಸಂಪುಟದಲ್ಲಿ[೪] "ನ್ಯಾಯ ಬಂದರೆ ಹಾಳನ ಹಾಕಿ ಹದಿನಾರು ಮಂದಿ ಬುದ್ಧಿವಂತರು ಕಂಡಪ್ಪಂದದಲಿ ವಿಚಾರಿಸೀಯೆವು" ಎಂದಿರುವ ಕ್ರಿ.ಶ. ೧೬೪೦ರ ಒಂದು ಶಾಸನವು ಮೂಡಬಿದರೆಯಲ್ಲಿದೆ ಎಂದು ಹೇಳಿದೆ. ಕೊಪ್ಪ ತಾಲೂಕಿನ ಹರಿಹರ ಮಠದ ನರಸಿಂಹದೇವರ ಗರ್ಭಗುಡಿಯ ಉತ್ತರ ಬದಿಗೋಡೆಯಲ್ಲಿದೆಯೆಂದು ಹೇಳಲಾಗುವ ಕ್ರಿ.ಶ.೧೫೭೩ಕ್ಕೆ ಸಲ್ಲುವ ಶಾಸನವು "ಹರಿಹರ ಪುರದ ಮಹಾಜನಂಗಳೂ, ಕಾರಕಳದ ಅರಸುಗಳ ಬುದ್ಧಿವಂತರು ಬೆಳ್ಳೊಜಿ'ಯ ತಿಂಮಯ ಸೇನಾಭೋವರು. ಕಾರಬಯಲು ಕುಪ್ಪವಳ್ಳಿಯ ನಾಡವರು" ಎಂದು ಶಾಸನದ ಕಟ್ಟಳೆಗೆ ಸಾಕ್ಷಿದಾರರನ್ನು ಹೆಸರಿಸಿದೆ.

ತುಳುನಾಡಿನ ಅರಸರು ಮಂತ್ರಿಯನ್ನು ಬುದ್ಧಿವಂತನೆಂಬ ವಿಶಿಷ್ಟ ಹೆಸರಿನಿಂದ ಸಂಬೋಧಿಸುತ್ತಿದ್ದರು ಎಂದು ತಿಳಿದಂತೆ ಚಿಕ್ಕಮಗಳೂರು ಜಿಲ್ಲೆಯ ಮೂಡುಗೆರೆ ತಾಲೂಕಿನ ಶ್ರೀಕಳಸೇಶ್ವರ ದೇವಾಲಯದ ಕೆಲವು ಶಾಸನಗಳು ಆ ದೇವರ ಭಕ್ತರಾಗಿದ್ದ, ಕಾರ್ಕಳದ ಭೈರವ ಅರಸರಿಗೆ ಸೂರಪ್ಪಯ್ಯನೆಂಬ ಬುದ್ಧಿವಂತನಿದ್ದನೆಂದು ತಿಳಿಯಪಡಿಸುತ್ತವೆ.[೬] ಕಳಸಕ್ಕೆ ಸಮೀಪದ ಹೊರನಾಡಿನ ಗದ್ದೆಯೊಂದರಲ್ಲಿರುವ ಶಾಸನವು, ಕ್ರಿ.ಶ. ೧೫೦೯ರ ಎಪ್ರಿಲ್ ೨೦ರಂದು ಬರೆಯಲ್ಪಟ್ಟಿದೆ. ಇದರಲ್ಲಿ "ತಮ್ಮಣ್ಣ ಹೆಗ್ಗಡೆಯ ತಮ್ಮ ಮಲ್ಲುಹೆಗ್ಗಡೆಯು ಸೂರಪ್ಪ ಸೇನಾಭೋವರ ಅಳಿಯ ಕಾಶ್ಯಪ ಗೋತ್ರದ ರುಕ್‌ಶಾಖೆಯ ರಾಮಚಂದ್ರದೇವಗಳ ಮಗ ತಿಂಮರಸನಿಗೆ ಕೊಟ್ಟ ಭೂಮಿದಾನ ಕ್ರಯ ಚೀಟು" ಎಂದು ಸೂರಪ್ಪ ಸೇನಾಭೋವನನ್ನು ಹೆಸರಿಸಿದೆ. ಇದೇ ಪರಿಸರದ ನೂಚೆ(ನೂಜಿ)ಯೆಂಬಲ್ಲಿ ನಾಗರಕಟ್ಟೆ ಬಳಿ ನೆಟ್ಟಿರುವ ಶಾಸನವು "ನೂಜಿನ ಹದಿನೇಳು ಮಂದಿ ಸಮಸ್ತರು, ಮೂಲಗುರು, ತನ್ಮೊಳೇಕಸ್ಥರಾಗಿ ಕರಕಳದ ಸ್ಥಳದ ಭಾರದ್ವಾಜಗೋತ್ರದ ರುಕ್‌ಶಾಖೆಯ ಪಂಡರಿನಾಥ ಸೇನಾಭೋವರ ಮಕ್ಕಳು, ಸೂರಪ್ಪಸೇನಾಭೋವರಿಗೆ ಸಹಿರಣ್ಯೋದಕ ದಾನಧಾರಾಪೂರ್ವಕ" ನೂಜಿನ ಗ್ರಾಮವನ್ನು ಬಿಟ್ಟುಕೊಟ್ಟರೆಂದು ಹೇಳಿದೆ. ಇದರ ಕಾಲ ಕ್ರಿ.ಶ. ೧೫೧೫. ಅಗಸ್ಟು ೫. ಶಾಸನದಲ್ಲಿ ಗ್ರಾಮದ ೧೭ಮಂದಿ ಸಾಮಾಜಿಕರನ್ನು ಹೆಸರಿಸಲಾಗಿದೆ. ಸೂರಪ್ಪ ಸೇನಾಭೋವನು, ಗ್ರಾಮದ ಹೆಬ್ಬಾರು ಕಳ ಸಮ್ಮುಖದಲ್ಲಿ ಕಳಸನಾಥದೇವರಿಗೆ, ಕೆಲವು ಸೇವೆಗಳನ್ನು ಮಾಡಿಸಿಕೊಂಡು ಬರಬೇಕೆಂದು ನಿಯಮ ಮಾಡಿ, ಬರೆಸಿದ ಶಾಸನನ ಕಳಸದಲ್ಲಿದೆ. ಕ್ರಿ.ಶ. ೧೫೨೦ ಜುಲೈ ೧ ರಂದು ಕಾರಕಳದ ರಾಮ ಸೇನಾಭೋಮನ, ಮದವಳಿಗೆ ಮಾದರಸಿ ಮತ್ತು ಸಂಗರಸ

* ನಿವೃತ್ತ ಶಿಕ್ಷಕ, ಪಂಚವಟಿ ಅಜಾರು, ಕಟೀಲು, ದಕ್ಷಿಣ ಕನ್ನಡ - ೫೭೪ ೧೪೮

ಸೇನಾಭೋವನ ಮದವಳಿಗೆ ಬೊಂಮರಸಿಯರು ಈ ದತ್ತ ಶಾಸನವನ್ನು ಬರೆಸಿದ್ದರು.

ಕ್ರಿ.ಶ. ೧೫೧೬ ಜುಲ್ಯಾ ೧೩ರಂದು ಲಿಖಿಸಲಾದ ಒಂದು ಶಾಸನವು "ಯಿಂಮಡಿಭೈರರಸ ವೊಡೆಯರು ಆಳುತ್ತಿರುವಾಗ ಅವರ ಚಾವಡಿ ಬುದ್ಧಿವಂತರು ಸೂರಪ್ಪಸೇನಾಭೋವರು, " ಇವರ ಮೂಲಕ ಕಳಸನಾಥ ದೇವಾಲಯ ಜೀರ್ಣೋದ್ಧಾರವಾದ ಘಟನೆಯನ್ನು ಪ್ರಸ್ತಾಪಿಸಿದೆ. ವಿಜಯನಗರದ ಚಕ್ರವರ್ತಿ ಶ್ರೀಕೃಷ್ಣದೇವರಾಯನು, ತುಳುನಾಡಿಗೆ ದಂಡೆತ್ತಿ ಬಂದು, ಮಂಗಳೂರಿನ ಭುವನಾಶ್ರಯ ಅರಮನೆಯಲ್ಲಿ ಬೀಡುಬಿಟ್ಟಿದ್ದು, ಆ ಧಾಳಿಯ ಭಯ ನಿವಾರಣೆಯಾಗಬೇಕೆಂದು ಹರಕೆ ರೂಪದಲ್ಲಿ ಈ ದೇವರ ಕೆಲಸ ನಡೆದಿತ್ತು. ಈ ಶಾಸನದ ಕಾಲದ ಬಳಿಕ ಸಾಧಾರಣ ಒಂದು ತಿಂಗಳಲ್ಲಿ ಎಂದರೆ ಅಗಸ್ತು ತಿಂಗಳ ೧೦ರಂದು ಬರೆದ ಶಾಸನದಲ್ಲಿ "ಶ್ರೀ ಕಳಸನಾಥದೇವರಿಗೆ ಕಾರಕಳದ ಸ್ಥಳದ ಪಂಡರಿನಾಥ ಸೇನಾಬೋವರ ಮಗ ಸೂರಪ್ಪ ಸೇನಾಭೋವರ ಆ ಚಂದ್ರಾರ್ಕ ನಡೆವಂತೆ ಮಾಡಿದ ಧರ್ಮವೆಂದು ಬರೆಯಲಾಗಿದೆ. ಇದರಲ್ಲಿ ಆ ದೇವರ ಸನ್ನಿಧಿಯಲ್ಲಿ ಇಡೀ ವರ್ಷ ನಡೆಯತಕ್ಕ ಅನೇಕ ಸೇವೆಗಳ ಪಟ್ಟಿಯಿದೆ.

ಸೂರಪ್ಪ ಸೇನಾಭೋವನು ಒಬ್ಬ ಮಂತ್ರಿಯಾಗಿದ್ದನೆಂದು ನಿಖರವಾಗಿ ಹೇಳುವ ಶಾಸನವೊಂದು ಕಳಸದಲ್ಲಿದೆ. ಇದರ ಕಾಲ ಕ್ರಿ.ಶ. ೧೫೨೪ ಅಗಸ್ತುಳ. ಇದರಲ್ಲಿ " ಅರಿರಾಯಗಂಡರ ಧಾವಣಿ, ವೀರ ಯಿಂಮಡಿ ಭೈರರಸ ವೊಡೆಯರು ಘಟ್ಟದ ಕೆಳಗೆ ಘಟ್ಟದ ಮೇಲಿನ ರಾಜ್ಯವನು ಆಳುವ ಕಾಲದಲು ಅವರ ಶಿರಃ ಪ್ರಧಾನ ಸೂರಪ್ಪ ಸೇನಾಭೋವರು ಕಳಸದ ಸೀಮೆಯ ಪಾರುಪತ್ಯವ ಮಾಡುತಿಹಲ್ಲಿ" ಎಂಬ ನುಡಿಗಳಿರುವುದು ಗಮನಾರ್ಹವಾಗಿದೆ. ಸೂರಪ್ಪಯ ಸೇನಾಭೋವನು, ಯಿಂಮಡಿ ಭೈರವ ರಾಜನ ಮಂತ್ರಿಯಾಗಿದ್ದನು. ಹಾಗೆಯೇ ಕಳಸ ದೇವಾಲಯ ಜೀರ್ಣೋದ್ಧಾರದ ಮುಖಂಡನಾಗಿದ್ದನು, ಕಳಸದ ಪ್ರದೇಶದ ಆಡಳಿತ ನಡೆಸುತ್ತಿದ್ದನು, ಭಕ್ತರು ದೇವಾಲಯಕ್ಕೆ ಬಿಟ್ಟು ಕೊಟ್ಟ ದಾನದತ್ತಿಗಳನ್ನು ನೋಡಿಕೊಳ್ಳುವ ವ್ಯವಸ್ಥಾಪಕನಾಗಿದ್ದನು, ಮಾತ್ರವಲ್ಲದೆ ಒಂದು ಗ್ರಾಮವನ್ನು ಉಂಬಳಿಯಾಗಿ ಪಡೆದ ಸದ್ಬ್ರಾಹ್ಮಣನಾಗಿದ್ದನೆಂದು, ಉಲ್ಲೇಖಗಳು ದೃಢಪಡಿಸುತ್ತವೆ. ಮಂತ್ರಿಯು ಬುದ್ಧಿಪೂರ್ವಕವಾದ ಸಲಹೆ ಕೊಡುವವನೆಂದು ಸಾಧಾರಣವಾಗಿ ಒಪ್ಪಿಕೊಳ್ಳಬಹುದು.

ಅಮಾತ್ಯಂ, ಬುದ್ಧಿಮಾನ್, ಸಚಿವನೆಂದೆನಲು ಮಂತ್ರಿಯಕ್ಕುಂ[೭] ಎನ್ನುವ ಅರ್ಥಗಳಿವೆ. ಮಂತ್ರೀ ಬುದ್ಧಿ ಸಹಾಯಃ ಅಮಾತ್ಯಃ ಸಚಿವ ಇವು ನಾಲ್ಕು ಮಂತ್ರಿ ಹೆಸರುಗಳು[೮] ಇದಕ್ಕೆಂದು ಅನುಗುಣವಾಗಿ ತುಳುನಾಡಿನ ಅರಸರು 'ಬುದ್ಧಿವಂತ'ನೆಂಬ ಹೆಸರನ್ನು ವ್ಯವಹಾರದಲ್ಲಿರಿಸಿಕೊಂಡಿದ್ದರು. ಈಗಲೂ ಅದು ಚೆನ್ನೆಯಾಟದಲ್ಲಿ ಅಸ್ತಿತ್ವದಲ್ಲಿದೆ.

> ಅತಿಗಂಭೀರನುದಾರಧೀರನು ಮಹಾಸಂಪನ್ನ ಸತ್ಯಾತ್ಮನೂ।
> ರ್ಜಿತ ನಾನಾಲಿಪಿಭಾಷೆಯೊಳ್ ಪರಿಚಿತಂ ಲಂಚಕ್ಕೆ ಕೈ ನೀಡದಂ।
> ವ್ರತಿಸದ್ಧರ್ಮ ವಿಚಾರಶಾಲಿ, ಚತುರೋಪಾಯಗಳ ಬಲ್ಲವಂ।
> ಪತಿಕಾರ್ಯಂ ವರಮಂತ್ರಿಯ್ಯೆ ಹರಹರಾ ಶ್ರೀ ಚೆನ್ನಸೋಮೇಶ್ವರಾ॥

ಇಲ್ಲಿ ಹೇಳಿದ ಮಂತ್ರಿ ಲಕ್ಷಣಗಳೆಲ್ಲ, ಸೂರ್ಯಪ್ಪಯ್ಯನಲ್ಲಿ ಅಂತರ್ಗತವಾಗಿದ್ದವೆಂದು ಒಪ್ಪಿಕೊಳ್ಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ದ.ಭಾ. ಶಾಸನಗಳು., ಭಾಗ ೭ನೇ-೩೭೯.
೨. ೬.೫.೧೯೮೮ರ ಉದಯವಾಣಿ ದೈನಿಕ - ವೈ. ಉಮಾನಾಥ ಶೆಣೈಯವರ ಲೇಖನ.
೩. ಇತಿಹಾಸ ದರ್ಶನ., ಸಂ.೧೬/೨೦೦೧, ಹೊ.ನ.ನೀಲಕಂಠ ಗೌಡ ಮತ್ತು ಯಂ.ಜಿ. ಮಂಜುನಾಥರ ಲೇಖನ.
೪. ಕೆಳದಿ ಅರಸರ ಶಾಸನ ಸಂಪುಟ. ಶಾಸನ ಸಂಖ್ಯೆ.೮೮. (ಸಂ).ಕೆಳದಿ ವೆಂಕಟೇಶ ಜೋಯಿಸ.
೫. ಈ ಶಾಸನದ ಪ್ರತಿ ದಿ. ಸುರತ್ಕಲ್ಲು ವೆಂಕಟರಾಯಾಚಾರ್ಯರಿಂದ ಸಂಗ್ರಹಿಸಿದ್ದು.
೬. ಮುಂದೆ ಸೂಚಿಸಿದ ಶಾಸನಗಳು ಎಪಿಗ್ರಾಫಿಯಾ ಕರ್ನಾಟಿಕ ಭಾಗ ೯ರಲ್ಲಿವೆ.
೭. ಅಭಿನವಮಂಗರಾಜ ನಿಘಂಟು-ಭೂಮಿ ಕಾಂಡ-೫.
೮. ಹಲಾಯುಧ, ೭೦-೨೭೨.
೯. ಸೋಮೇಶ್ವರ ಶತಕ-೬೧.

ಬಿ.ಎಸ್. ರಾಮಭಟ್ಟ*

ಬಿದನೂರು ನಗರ ಒಂದು ವಿಶೇಷ ಅಧ್ಯಯನ

ಒಂದು ರಾಜ್ಯದ ರಾಜಧಾನಿಯನ್ನು ಕಟ್ಟಿಕೊಳ್ಳಲು ಪ್ರಾಕೃತಿಕವಾಗಿ ಜಲಸಂಪನ್ಮೂಲ, ವಿಶಾಲವಾದ ಸ್ಥಳ, ಕೋಟೆಯ ನಿರ್ಮಾಣಕ್ಕೆ ಎತ್ತರದ ಪ್ರದೇಶ, ಸುತ್ತಲೂ ಆವರಿಸಿಕೊಂಡಿರುವ ಗಿರಿದುರ್ಗಗಳು ಸಾರಿಗೆ ಸಂಪರ್ಕ, ಜನವಸತಿ ಮುಂತಾದ ಮೂಲಭೂತ ಸೌಲಭ್ಯಗಳ ಅವಶ್ಯಕತೆಯಿತ್ತು. ಅಥವಾ ಆಡಳಿತದ ದೃಷ್ಟಿಯಿಂದ ರಾಜಧಾನಿಯನ್ನು ಸ್ಥಳಾಂತರಿಸುವಾಗಲೂ ಇದನ್ನು ಪರಿಗಣಿಸಲಾಗುತ್ತಿತ್ತು. ಶಿವಮೊಗ್ಗ ಜಿಲ್ಲೆಯ ಹೊಸ ನಗರ ತಾಲ್ಲೂಕಿನ ಬಿದನೂರು ನಗರವು ಈ ಎಲ್ಲ ಸಂಪನ್ಮೂಲವನ್ನು ಪಡೆದಿರುವುದಲ್ಲಿದೆ. ಇದು ಇಲ್ಲಿಂದ ದಕ್ಷಿಣ ಕನ್ನಡ ಜಿಲ್ಲೆಯ ಅರಬ್ಬಿಕಡಲಿನ ರೇವು ಪಟ್ಟಣಗಳಿಗೆ ನೇರ ಸಂಪರ್ಕವನ್ನು ಪಡೆದಿದ್ದು ಇದರ ಪ್ರಾಮುಖ್ಯತೆ ಪ್ರಾಚೀನದಿಂದಲೂ ಇತ್ತು ಎಂದಾಗಿದೆ. ಈ ಎಲ್ಲ ಕಾರಣಗಳಿಂದ ಬಿದನೂರು ನಗರವನ್ನು ರಾಜಧಾನಿಯನ್ನಾಗಿ ಪರಿವರ್ತಿಸಲಾಗಿತ್ತು. ಇದರ ಮೂರು ಪಾರ್ಶ್ವಗಳಲ್ಲಿ ನದಿಯೊಂದು ಹರಿಯುತ್ತಿದೆ.

ಐತಿಹಾಸಿಕ ಹಿನ್ನೆಲೆ : ಬಿದನೂರು ನಗರದ ಸಮೀಪದಲ್ಲಿರುವ ನಿಲಿಸು ಕಲ್ಲಿನ ಕಾರಣ ಅದು ಪ್ರಾಚೀನ ಮಾನವರ ಒಂದು ನೆಲೆಯಾಗಿತ್ತು ಎಂದು ಪ್ರಾಚ್ಯ ಇತಿಹಾಸ ತಜ್ಞರು ಗುರುತಿಸಿದ್ದಾರೆ. ಸ್ಕಾಂದಪುರಾಣದ ಸನತ್ಕುಮಾರ ಚರಿತೆಯ ಸಹ್ಯಾದ್ರಿ ಖಂಡದಲ್ಲಿ ಈ ಸ್ಥಳವನ್ನು ಬಿದರೂರು ಎಂದು ಹೇಳಿ ಇಲ್ಲಿ ಹರಿಯುವ ನದಿಗೆ ಕಲಾವತಿ ಎಂದು ಕರೆದಿದೆ. ಇಲ್ಲಿರುವ ನೀಲಕಂಠೇಶ್ವರ ಶಿವಲಿಂಗವು ಹುತ್ತದಿಂದ ಉದ್ಭವಿಸಿರುವುದಾಗಿ ಇದೇ ಗ್ರಂಥದಲ್ಲಿ ಹೇಳಿದೆ.[೧]

ಇಂದಿನ ನಗರಕ್ಕೆ ಕಲಂಬುರು[೨] ಬಿದರೂರು[೩] ಬಿದನೂರು[೪] ವೇಣುಪುರ[೫] ಎಂಬ ಹೆಸರಿತ್ತು. ಕ್ರಿ.ಶ ೧೯೧೯ರ ಗ್ರಾಮನಕ್ಷೆಯಲ್ಲಿ ಇದನ್ನು ಮೂಡುಕೊಪ್ಪ ಎಂದು ಹೆಸರಿಸಿದೆ. ಸರ್ ವಾಲ್ಟರ್ ಇಲಿಯಟ್ಟನು ಇಂದಿನ 'ನಗರ'ದಲ್ಲಿ ಶಾತವಾಹನರ ಕ್ರಿ.ಶ. ಎರಡನೆಯ ಶತಮಾನದ ಬಹಳ ಹಳೆಯದಾದ ೪೩ ನಾಣ್ಯಗಳನ್ನು ಕಂಡುಹಿಡಿದಿದ್ದಾನೆ.[೬] ಈ ನಾಣ್ಯಗಳು ಚಂದ್ರವಳ್ಳಿಯಲ್ಲಿ ಸಿಕ್ಕಿದ ಇದೇ ಶಾತವಾಹನರ ನಾಣ್ಯಗಳಿಗಿಂತ ಮೊದಲೇ ಸಿಕ್ಕಿರುವುದು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇದರಿಂದ ನಗರವು ಕ್ರಿ.ಶ. ಸು. ಎರಡನೆಯ ಶತಮಾನದಲ್ಲಿ ಶಾತವಾಹನರ ಆಡಳಿತದಲ್ಲಿದ್ದ ಸಂಭವವಿದೆ.

ಮಂಡಳಿಸಾವಿರವನ್ನು ಆಳುತ್ತಿದ್ದ ಗಂಗರ ದೊರೆ ತ್ರಿಭುವನ ಮಲ್ಲ ನನ್ನಿಯಗಂಗಪೆರ್ಮಾಡಿ (ಕ್ರಿ.ಶ. ೧೧೧೮-೧೧೫೮) ಯ ಕಾಲದಲ್ಲಿ ಬಿದನೂರಿನ ಕಲಂಬೂರು ಎಂಬಲ್ಲಿ ಒಂದು ಜೈನ ಬಸದಿಯನ್ನು ಕಟ್ಟಲಾಗಿತ್ತು. ಇದರಿಂದ ನಗರವು ಕ್ರಿ.ಶ. ೧೨ನೆಯ ಶತಮಾನದಲ್ಲಿ ಜೈನರ ಧರ್ಮಕ್ಕೂ ನೆಲೆಗೊಟ್ಟಿತ್ತೆನ್ನಬಹುದು


ಕೋಟೆಯರಚನೆ : ಕೆಳದಿಯ ದೊರೆ ವೆಂಕಟಪ್ಪನಾಯಕನು (ಕ್ರಿ.ಶ. ೧೫೮೩-೧೬೩೦) ಬಿದನೂರಿನಲ್ಲಿ ಆಳುತ್ತಿದ್ದ ಶಂಕರನಾರಾಯಣ ಭಟ್ಟನನ್ನು ಸೋಲಿಸಿ ನಗರವನ್ನು ವಶಪಡಿಸಿಕೊಂಡು ಇಲ್ಲಿದ್ದ ಕೋಟೆಯನ್ನು ಪ್ರಾಚೀನ ವಾಸ್ತುಶಿಲ್ಪಶಾಸ್ತ್ರದಂತೆ ನಿರ್ಮಿಸಿದಂತೆ ತೋರುತ್ತದೆ. ಇದನ್ನು ಕುರಿತು.

'ಸರ್ವೇಣತು ಪ್ರಯತ್ನೇನ ಗಿರಿದುರ್ಗಂ ಸಮಾಶ್ರಯೇತ್
ಏಷ್ಯಾಂ ಹಿ ಬಾಹುಗುಣ್ಯೇನ ಗಿರಿದುರ್ಗಂ ವಿಶಿಷ್ಯತೆ

-ಎಂಬಂತೆ ಗಿರಿದುರ್ಗದಲ್ಲಿರುವ ಒಬ್ಬ ಬಿಲ್ಲುಗಾರ ಹೊರಗಿನ ನೂರು ಯೋಧರೊಂದಿಗೆ ಯುದ್ಧ ಮಾಡಬಲ್ಲನು ಎಂಬುದು ತಿಳಿಯುತ್ತದೆ. ರಕ್ಷಣೆಯ ದೃಷ್ಟಿಯಿಂದ ಗಿರಿದುರ್ಗವೇ ಶ್ರೇಷ್ಠವೆಂದು ಮನುಸ್ಮೃತಿಯಲ್ಲಿಯೂ ಹೇಳಿದೆ. ಇದರಂತೆ ನಗರದಲ್ಲಿರುವ ಕೋಟೆಯನ್ನು ಒಂದು ಗಿರಿಯ ಮೇಲೆ ಕಟ್ಟಿದೆ. ಕೋಟೆಯ ಒಳಗಿರುವ ಎರಡು ಭಾವಿಗಳಲ್ಲಿ ಹೇರಳವಾದ ನೀರಿದೆ. ಇದರಿಂದ ಇದನ್ನು ಮರುದುರ್ಗವೆಂದೂ ಕರೆಯಬಹುದುದು.

ಕೋಟೆಯನ್ನು ವಾಸ್ತುಶಿಲ್ಪಕ್ಕೆ ಅನುಗುಣವಾಗಿ ವರ್ತುಲ, ಚತುರಸ್ರ ಅಥವಾ ಪದ್ಮಕ ವಿನ್ಯಾಸದಲ್ಲಿ ನಿರ್ಮಿಸಬೇಕು. ಇದರ ಸುತ್ತಲೂ ಆಳವಾದ ಕಂದಕವಿರಬೇಕು. ಇದರಂತೆ ವರ್ತುಲಾಕಾರವಾದ ನಗರದ ಕೋಟೆಯ ಸುತ್ತಲಿನ ಕಂದಕವು ಸು. ಮೂವತ್ತು ಅಡಿ ಆಳವಾಗಿದ್ದು ಇದನ್ನು ಕಲ್ಲು ಮತ್ತು ಇಟ್ಟಿಗೆಯಿಂದ ಗಟ್ಟಿಯಾಗಿ ಕಟ್ಟಿದೆ ಕಂದಕದಿಂದ ನಾಲ್ಕು ದಂಡ ದೂರದಲ್ಲಿ ಕೋಟೆಗೆ ಆಧಾರವಾಗಿ ವಪ್ರ (ತಳಪಾಯ ?) ವನ್ನು ನಿರ್ಮಿಸಿ ಇದರ ಮೇಲೆ ಕೋಟೆಯ ಗೋಡೆಯನ್ನು ಕಟ್ಟಬೇಕೆಂದು ಶಿಲ್ಪಶಾಸ್ತ್ರದಲ್ಲಿ ಹೇಳಿದೆ. ಇದರಂತೆ ನಗರದ ಕೋಟೆಯ ಸುತ್ತಲೂ ಕಲ್ಲಿನಿಂದ ಕಟ್ಟಿದ ಎತ್ತರವಾದ ಆಳ್ವೇರಿ (ಗೋಡೆ)ಯಿದೆ. ಕೋಟೆಯಿಂದ ಇಳಿದು ಹತ್ತಲು ಯೋಗ್ಯವಾದ ಮೆಟ್ಟಿಲುಗಳುಳ್ಳ ಅಟ್ಟಾಲಕ (ಮಾಳಿಗೆ)ವನ್ನು ಕಟ್ಟಬೇಕು. ರಹಸ್ಯಮಾರ್ಗವು ಕೋಟೆಯ

* (ನಿ) ಉಪನ್ಯಾಸಕ, "ಪದ್ಮಶ್ರೀ" ೧೩೯ ೩ ೩ನೇ ಕ್ರಾಸ್, ಗೋಪಾಳಗೌಡ ಬಡಾವಣೆ, ಗೋಪಾಳ. ಶಿವಮೊಗ್ಗ -೫೭೭ ೨೦೧



ಬದಿಯಲ್ಲಿ ಎರಡು ಹಸ್ತದಿಂದ ಎಂಟು ಹಸ್ತ ಅಗಲವಾಗಿದ್ದು ಒಂದು ಮಾರ್ಗವು ಪಕ್ಕದ ಕಾಡಿಗೆ ಹಾಗೂ ಹೊರಗಿನ ಇನ್ನಿತರ ಭಾಗಕ್ಕೆ ಸಂಪರ್ಕಿಸುವಂತಿರಬೇಕೆಂದು ಹೇಳಲಾಗಿದೆ. ನಗರದ ಕೋಟೆಯಲ್ಲಿ ರಹಸ್ಯ ಮಾರ್ಗವಿತ್ತು ಎಂದು ಹೇಳಲಾಗಿದ್ದರೂ ಇದು ಕಂಡು ಬಂದಿಲ್ಲ. ಇದೇ ಕೋಟೆಯಲ್ಲಿ ಸೈನಿಕರು ಅಡಗಿ ಕುಳಿತುಕೊಳ್ಳುವ **ಪ್ರಧಾವಿಶಿಕಾ ಅಥವಾ ಅಂಬುಗಂಡಿ** ಮತ್ತು ಬಾಣ ಬಿಡುವ ನಿಷ್ಕಹದ್ವಾರ ಎಂಬ ರಂಧ್ರಗಳನ್ನು ನೋಡಬಹುದು. ಕೋಟೆಯ ಮಹಾದ್ವಾರವು ಸಹ ವಾಸ್ತುಶಿಲ್ಪದಂತೆ ಸು. ಎಂಟುದಂಡ ಅಥವಾ ಸು. ಮೂವತ್ತು ಅಡಿ ಎತ್ತರವಾಗಿದೆ. ಇದರ ಪಕ್ಕದಲ್ಲಿ ಚಿಕ್ಕದಾದ ಕ್ಷುದ್ರದ್ವಾರವಿದೆ. ಮಹಾದ್ವಾರದಲ್ಲಿ ಇಂದ್ರಕೀಲ ಎಂಬ ಎರಡು ಹಸ್ತ ಪ್ರಮಾಣದ ಎರಡು ಅಗಳಿಗಳಿದ್ದು ಈಗ ಕೋಟೆಯ ಬಾಗಿಲು ಕಣ್ಮರೆಯಾಗಿದೆ. ಹೀಗೆ ನಗರದ ಗಿರಿದುರ್ಗವು ಮನುಸ್ಮೃತಿ ಕಾಮಂದಕ ನೀತಿಸಾರ ಮತ್ತು ಕೌಟಿಲ್ಯನ ಅರ್ಥಶಾಸ್ತ್ರದ ವಿನ್ಯಾಸಕ್ಕೆ ಅನುಗುಣವಾಗಿ ನಿರ್ಮಾಣವಾದಂತೆ ತಿಳಿಯುತ್ತದೆ. ಕೋಟೆಯ ಒಳಭಾಗದಲ್ಲಿ ನಡುವೆ ಎತ್ತರವಾದ ಬತೇರಿಯಿದೆ.

ನಗರದ ಸುತ್ತಲೂ ಐದು ಸುತ್ತಿನ ಕೋಟೆ ಇತ್ತು ಎಂದು ಹೇಳಲಾಗುತ್ತಿದ್ದರೂ ಈಗ ಕೇವಲ ಎರಡು ಸುತ್ತುಗಳನ್ನು ಮಾತ್ರ ಗುರುತಿಸಬಹುದು. ಒಂದೊಂದು ಸುತ್ತಿಗೂ ನಡುವೆ ಎರಡರಿಂದ ಮೂರು ಕಿಲೋಮೀಟರ್ ಅಂತರವಿದೆ. ಗುಡ್ಡ ಬಯಲು ನದಿ ಮತ್ತು ಅರಣ್ಯವನ್ನು ಬಳಸಿಕೊಂಡಿರುವ ಸುತ್ತಿನ ಕಂದಕಗಳು ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಅಡಿ ಆಳವಾಗಿದೆ. ಈ ಸುತ್ತುಗಳು ದುರ್ಗಮವಾದ ಪ್ರದೇಶದಲ್ಲಿಯೂ ಹಾದು ಹೋಗಿವೆ. ನಡನಡುವೆ ಬತೇರಿಗಳಿವೆ. ಕಾರಣಗಿರಿ ದೇವಾಲಯದ ಎದುರಿನ ಗುಡ್ಡದಲ್ಲಿ ಇದನ್ನು ಈಗಲೂ ನೋಡಬಹುದು.



RUINS OF THE PALACE OF BIDANUR
COURTESY: KARNATAKA ARCHAEOLOGICAL DEPARTMENT

ನಗರವು ಎರಡು ಮತ್ತು ಮೂರು ಸುತ್ತಿನ ಕೋಟೆಯಲ್ಲಿ ಹರಡಿಕೊಂಡಿತ್ತು. ನಗರದ ಉತ್ತರ ದಿಕ್ಕಿನ ಮೊದಲ ಸುತ್ತಿನ ಕೋಟೆಯ ಮಹಾದ್ವಾರವನ್ನು ದಿಲ್ಲಿಯಬಾಗಿಲು, ದಕ್ಷಿಣದ ಹನುಮಾನಬಾಗಿಲು ಪೂರ್ವದ ದುರ್ಗದಬಾಗಿಲು ಮತ್ತು ಪಶ್ಚಿಮದ ದೊಡ್ಡಬಾಗಿಲು ಎಂದು ನಾಲ್ಕು ಮಹಾದ್ವಾರಗಳ ಹೆಸರನ್ನು ಹೇಳಿದೆ. ಇವುಗಳಲ್ಲದೆ ಕೊಡಿಯಾಲಬಾಗಿಲು, ಕಾಲ ಸಸಿಬಾಗಿಲು ಮತ್ತು ಸೀಗೆಬಾಗಿಲು ಎಂಬ ಇನ್ನು ಮೂರು ಬಾಗಿಲುಗಳಿದ್ದುದಾಗಿ ತಿಳಿಯುತ್ತದೆ.[೮]

ನಗರೀಕರಣ ಯೋಜನೆ : ಬೆಳೆಯುತ್ತಿದ್ದ ಬಿದನೂರಿಗೆ ಕ್ರಮಬದ್ಧವಾದ ಒಂದು ಯೋಜನೆಯನ್ನು ಸಿದ್ಧಗೊಳಿಸಿ ಜಾರಿಗೆ ತಂದವನು ದೊರೆ ಶಿವಪ್ಪ ನಾಯಕ (ಕ್ರಿ.ಶ ೧೬೪೬-೧೬೬೧). ಈ ಅರಸನು ನಾಲ್ಕು ದಿಕ್ಕಿನಲ್ಲಿರುವ ವರ್ತಕರು ರೈತರು ಸುಗಂಧ ದ್ರವ್ಯಗಳನ್ನು ಮಾರುವವರು, ಕೊಂಕಣಿಗರು ಮುಂತಾದ ಗೌರವಸ್ಥ ಜನರನ್ನು ಬರಮಾಡಿಕೊಂಡನು. ಇವರೆಲ್ಲರೂ ಸುಪ್ರಸಿದ್ಧ ವ್ಯಾಪಾರಿಗಳಾಗಿದ್ದರು. ವೇಣುಪುರದಲ್ಲಿ ಸ್ಥಳ, ನಿವೇಶನ, ಪೇಟೆಗಳನ್ನು ಮತ್ತು ಸಾಲುಬೀದಿಗಳನ್ನು ನಿಯಮಕ್ಕೆ ಅನುಗುಣವಾಗಿ ರಚಿಸಿ ಸ್ಥಿರವಾದ ಶಾಸನ ಬರೆಸಿದನು. ಅಲ್ಲದೆ ಚಿತ್ರಕಾರರು, ಶಿಲ್ಪಿಗಳು, ಕಂಚುಗಾರರು, ಗಾಣಿಗರು, ಕುಂಬಾರರು, ಅಕ್ಕಸಾಲಿಗಳು, ಬಡಗಿ, ಅಗಸರು, ನಾಪಿತರು, ಮುಂತಾದ ನಾನಾ ವಿಧವಾದ ಕುಶಲ ಕರ್ಮಿಗಳನ್ನು ಕರೆಸಿ ನಿವೇಶನಗಳನ್ನು ಏರ್ಪಡಿಸಿ ಶಾಶ್ವತವಾಗಿ ನಿಲ್ಲುವಂತೆ ಮಾಡಿದನು, ಎಂದು ಕೆಳದಿ ನೃಪವಿಜಯದಲ್ಲಿ ಹೇಳಿದೆ (ಪು. ೧೫೯). ಹೀಗೆ ಒಂದು ರಾಜಧಾನಿಯನ್ನು ರಾಜನೇ ಯೋಜನಾಬದ್ಧವಾಗಿ ನಿರ್ಮಾಣ ಮಾಡಿಸಿರುವುದು ಅಪರೂಪವಾಗಿದೆ.

ಪ್ರತಿಯೊಂದು ವೃತ್ತಿಯವರೂ ಒಂದೇ ಪೇಟೆಯಲ್ಲಿ ವಾಸಿಸುವಂತೆ ನಿವೇಶನಗಳನ್ನು ನೀಡಲಾಗಿತ್ತು. ಇವರ ಹೆಸರಿನ ಕುಂಬಾರಕೇರಿ, ಗಾಣಿಗರ ಕೇರಿ, ಬಡಗಿಕೇರಿ, ಅಗಸರಕೇರಿ, ನಾಪಿತರಕ ಕೇರಿ, ಕಂಚುಗಾರರಕೇರಿ, ಕವಾಡಿಗರಕೇರಿ, ಕೊಟ್ನಕೇರಿ, ನೂಲಿಗ್ಗೇರಿ, ಅರಮನೆಕೇರಿ, ಹೂಗಾರರಕೇರಿ, ಚಿನಿವಾರಕೇರಿಗಳಲ್ಲದೆ ಜವಳಿಪೇಟೆ, ಗುಜರಿಪೇಟೆ, ಕೊತ್ತವಾಲಪೇಟೆ, ಚಿಕ್ಕಪೇಟೆ, ಸೋಮವಾರಪೇಟೆ, ಕುರಿಪೇಟೆ ಮತ್ತು ದುಬಾರಿ ತೊಟ್ಟಿ ಎಂಬುದು ಮಾರುಕಟ್ಟೆಗಳಾಗಿತ್ತು.

ರಾಜಧಾನಿ ಬಿದನೂರಿನಿಂದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಹೆದ್ದಾರಿಗಳನ್ನು ನಿರ್ಮಿಸಲಾಗಿತ್ತು. ಪೂರ್ವದ ರಾಜಮಾರ್ಗವು ಐದು ಸುತ್ತಿನ ಕೋಟೆಯನ್ನು ಹಾಯ್ದು ಕೌಲೆದುರ್ಗ, ತೀರ್ಥ ರಾಜಪುರದ ಮೂಲಕ ಬಲ್ಲಾಳರಾಯನ ದುರ್ಗಕ್ಕೂ ಹಾಗೂ ಇನ್ನೊಂದು ಮಾರ್ಗ ಬೇಲೂರಿಗೂ, ಪಶ್ಚಿಮದ ಹೆದ್ದಾರಿಯು ಕೊಲ್ಲೂರಿನ ಮೂಲಕ ಬೈಂದೂರಿಗೂ, ಇನ್ನೊಂದು ಮಾರ್ಗವು ಹುಲಿಕಲ್ಲು ಘಾಟಿಯನ್ನು ಹಾಯ್ದು ಕುಂದಾಪುರ ಗಂಗೊಳ್ಳಿಗೂ ಹಾಗೆಯೇ ಉತ್ತರದ ಹೆದ್ದಾರಿಯು, ಆನಂದಪುರ, ಸಾಗರ ಇಕ್ಕೇರಿಯವರೆಗೆ ಮತ್ತು ಕಳೂರು ಕಟ್ಟೆಯ ಮೂಲಕ ಶಿವೇಶ್ವರ (ಅರನಾಳು)ವನ್ನು ಹಾದು ಶಿವಮೊಗ್ಗದವರೆಗೂ ವಿಸ್ತರಿಸಿತ್ತು. ಚನ್ನಗಿರಿಯ ಮೂಲಕ ಚಿತ್ರದುರ್ಗಕ್ಕೂ ಹೆದ್ದಾರಿಯು ವಿಸ್ತರಿಸಿತ್ತು. ಬಿದನೂರಿನ ಅರಸರು ಪಶ್ಚಿಮ ಸಮುದ್ರತೀರದಲ್ಲಿ ನೆಲಸಿದ್ದ ಅರಬ್ಬರು, ಪೋರ್ಚುಗೀಸರು ಮತ್ತು ಇತರ ಯೂರೋಪಿಯನ್ನರೊಡನೆ ಅತ್ಯಧಿಕ ಪ್ರಮಾಣದಲ್ಲಿ ವ್ಯಾಪಾರ ನಡೆಸುತ್ತಿದ್ದರು. ಇದರಿಂದ ಸರಕು ಸಾಗಣೆಗಾಗಿ ಸರ್ವಋತು ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಿದ್ದರು. ಸು. ೫೦ ಅಡಿ ಅಗಲವಾಗಿದ್ದು ರಸ್ತೆಗೆ ಜಲ್ಲಿ ಹಾಕಿ ಗಟ್ಟಿಸಲಾಗಿತ್ತು. ನಡುವೆ ಸಣ್ಣ ಮೊಹರಿ ಮತ್ತು ಸೇತುವೆಗಳಿದ್ದವು. ಕಾರಣ ಗಿರಿಯಲ್ಲಿ ಇಂಥಹ ಒಂದು ಸೇತುವೆ ಈಗಲೂ ಇದೆ.

ರಾಜಧಾನಿ ವೇಣುಪುರದ ಕಲಾವತಿ ನದಿಗೆ ಹಿರಿಯ ಬಸಪ್ಪನಾಯಕ (ಕಿ.ಶ ೧೬೯೮-೧೭೧೫) ನ ಕಾಲದಲ್ಲಿ ಮೂರು ಸೇತುವೆಗಳನ್ನು ಕಟ್ಟಲಾಗಿದೆ. ಈ ಸೇತುವೆಗಳು ಈಗ ಶರಾವತಿ ಹಿನ್ನೀರಿನಲ್ಲಿ ಮುಳುಗಿವೆ. ಈ ಸೇತುವೆಗಳು ಸು ೩೦ ಅಡಿ ಎತ್ತರ ಹಾಗೂ ೨೦ ಅಡಿ ಅಗಲವಾಗಿವೆ. ಚಿಕ್ಕಪೇಟೆ ಸೇತುವೆ ತಳಭಾಗದಲ್ಲಿ ೧೨ ಕಲ್ಲಿನ ಕಂಬಗಳು ಉಳಿದ ಎರಡರಲ್ಲಿ ತಲಾ ೮ ಮತ್ತು ೧೨ ಕುಂದ (ಕಂಬ)ಗಳಿವೆ. ಕ್ರಮಬದ್ಧವಾಗಿ ಕಲ್ಲನ್ನು ಕತ್ತರಿಸಿ ಜೋಡಿಸಿರುವ ಈ ಕಂಭಗಳು ಇಂದಿಗೂ ಸುಭದ್ರವಾಗಿವೆ.

ರಾಜ್ಯದ ಹೆದ್ದಾರಿಗಳಲ್ಲಿ ಹೆಚ್ಚಾಗಿ ಹೇರೆತ್ತುಗಳ ಮೂಲಕ ಸರಕು ಸಾಗಣೆಯಾಗುತ್ತಿತ್ತು. ಕ್ರಿ.ಶ. ೧೬೭೧ರ ಸಕ್ಕರೆಬೈಲಿನ ಒಂದು ಶಾಸನದಲ್ಲಿ ಹೇರೆತ್ತುಗಳ ಮೂಲಕ ಅಡಿಕೆ, ಮೆಣಸು, ಖೊಬರಿ ಕವಾಚ, ಅಕ್ಕಿ, ಭತ್ತ, ರಾಗಿ, ಉಪ್ಪು, ಹುಳಿ, ಬೆಲ್ಲ ಎಣ್ಣೆ, ಹೊಗೆಸೊಪ್ಪು ಮುಂತಾದ ವಸ್ತುಗಳನ್ನು ಸಾಗಿಸುತ್ತಿದ್ದರೆಂದು ಹೇಳಿದೆ. ರಾಜಧಾನಿಯ ಒಳಗೆ ಸಂಚರಿಸಲು ಕುದುರೆ ಸಾರೋಟನ್ನು ಬಳಸುತ್ತಿದ್ದರೆಂದು ಪ್ರಚಲಿತವಿದೆ.

ಕೋಟೆಯ ಹೊರಭಾಗದಲ್ಲಿ ಇಂದಿನ ಪ್ರೌಢಶಾಲೆ ಇರುವ ಸ್ಥಳವನ್ನು ದೇವುಡಿ ಬಯಲು ಎಂದು ಕರೆಯುತ್ತಿದ್ದು ಇಲ್ಲಿ ಆನೆಗಳ ಲಾಯವಿತ್ತು. ಕೋಟೆಯ ಎದುರುಭಾಗದಲ್ಲಿ ವಿಶಾಲವಾದ ಅರಮನೆಯ ಅವಶೇಷವಿದೆ. ಇದರ ನಿವೇಶನದ ಮೇಲಿದ್ದ ಹೊಳಪಾದ ಕರಿಯ ಕಲ್ಲಿನ ಕಂಬಗಳು ಈಗ ಕಾಣೆಯಾಗಿವೆ. ಈ ಅರಮನೆಯನ್ನು ಚೈನಾ ಇಟ್ಟಿಗೆಗಳಿಂದ ಮತ್ತು ಕಲಾತ್ಮಕ ಕೆತ್ತನೆಗಳಿಂದ ಕಟ್ಟಲಾಗಿತ್ತು. ಐದು ಅಂಕಣದ ಉಪ್ಪರಿಗೆಯ ಮೇಲೆ ಗಾಜಿನ ಭವಂತಿ ಮತ್ತು ಹೊಸ ಭವಂತಿ ಎಂಬ ಎರಡು ಗೋಪುರಗಳಿತ್ತು. ಅಲ್ಲದೆ ಚಂದ್ರ ಮಹಲ್ ಮತ್ತು ವಂಸತಮಹಲ್ ಎಂಬ ಇನ್ನೆರಡು ಹೆಸರುಗಳನ್ನು ಕೆಳದಿ ನೃಪವಿಜಯದಲ್ಲಿ ಹೇಳಿದೆ. ಪ್ರಾಯಶಃ ಅರಮನೆಯನ್ನು ವಿಸ್ತರಿಸಿದ ಹೊಸ ಮಹಲುಗಳಿಗೆ ಈ

ಹೆಸರಿಟ್ಟಿರಬೇಕು. ಸೋಮಶೇಖರನಾಯಕನು ತನ್ನನ್ನು ಭೇಟಿ ಮಾಡಲು ಬಂದವರನ್ನು ಇದೇ ಅರಮನೆಯ ಗಗನ ಮಹಲ್ ಚಾವಡಿಯಲ್ಲಿ ಸಂದರ್ಶನ ನೀಡುತ್ತಿದ್ದನೆಂದು ಹೇಳಲಾಗಿದೆ. (ಕೆ.ನೃ.ವಿ ಪು. ೨೬೩). ವೀರಮ್ಮಾಜಿಯ ಕಾಲದಲ್ಲಿ ಅಗ್ನಿಗೆ ಆಹುತಿಯಾದ ಅರಮನೆಯು ಇದೇ ಆಗಿರಬಹುದು. ಅರಮನೆಯ ನಿವೇಶನದ ಹಿಂಭಾಗದಲ್ಲಿ ಸ್ವಲ್ಪ ದೂರದಲ್ಲಿ ಗೋರಿಮಕ್ಕಿ ಎಂಬಲ್ಲಿ ಕ್ರಿ.ಶ. ೧೮೦೨ರ ಕೆಲವು ಇಂಗ್ಲಿಷ್ ಅಧಿಕಾರಿಗಳ ಗೋರಿಗಳಿವೆ. ಕೋಟೆಯ ಒಳಭಾಗದಲ್ಲಿರುವ ಕಟ್ಟಡದ ಅವಶೇಷವನ್ನು ದರಬಾರು ಹಾಲ್ ಎಂದು ಕರೆಯಲಾಗುತ್ತಿದ್ದು ಇದರಲ್ಲಿಯೇ ಸಂಸ್ಥಾನದ ಸಚಿವಾಲಯದ ಕಡಿತದ ಚಾವಡಿ ಇತ್ತೆಂದು ಹೇಳಲಾಗುತ್ತಿದೆ. ಪೂರ್ತಿಕಟ್ಟಡವನ್ನು ಜಂಬಿಟ್ಟಿಗೆಯಿಂದ ಕಟ್ಟಲಾಗಿದ್ದು ಈಗ ಗೋಡೆಯ ಅವಶೇಷವಿದೆ. ಈ ಕಟ್ಟಡದ ಮುಂದೆ ಎರಡು ಆಳವಾದ ಭಾವಿಗಳಿವೆ.

ಅರಮನೆಯ ಪಶ್ಚಿಮದಲ್ಲಿ ಚನ್ನಮ್ಮಾಜಿಯು ಕಟ್ಟಿಸಿದಳೆಂದು ಹೇಳಲಾಗುತ್ತಿರುವ ಕಲ್ಮಠವಿದೆ. ಇದರಲ್ಲಿರುವ ಗೋಡೆಯ ಚಿತ್ರಗಳು ರಾಜಾರಾಮ, ಚನ್ನಮ್ಮಾಜಿ ಮತ್ತು ಸೇನಾಪತಿಗಳ ಚಿತ್ರವೆಂದು ಹೇಳಲಾಗುತ್ತಿದೆ. ಇವುಗಳಲ್ಲದೆ ಅರ್ಧನಾರೀಶ್ವರ ಮತ್ತು ಗಂಡಭೇರುಂಡದ ಕೆತ್ತನೆಗಳಿವೆ. ಕೋಟೆಯ ಪಕ್ಕದಲ್ಲಿ ವಿಶಾಲವಾದ ಕೆರೆ ಇದೆ.

ಕೋಟೆಯ ಸಮೀಪದ ನೀಲಕಂಠೇಶ್ವರ ದೇವಾಲಯದ ಶಿಖರಕ್ಕೆ ಹಿರಿಯ ಸೋಮಶೇಖರನಾಯಕನು ಚಿನ್ನದ ರಸ ಲೇಪನಮಾಡಿಸಿ ಲೋಹದ ಪಟ್ಟಿಗಳಿಂದ ಸುಂದರವಾಗಿ ಶೋಭಿಸುವಂತೆ ಮಾಡಿದ್ದಾನೆ.[೯] ಈ ದೇವಾಲಯದ ಪಕ್ಕದಲ್ಲಿ ರಾಜಾರಾಮನು ಕಟ್ಟಿಸಿದನೆಂದು ಹೇಳಲಾಗುತ್ತಿರುವ ಪಾರ್ವತಿ ದೇವಾಲಯವಿದೆ. ದೇವಡಿ ಬಯಲಿನಿಂದ ಮುಂದೆ ಹಿರೇಮಠ ಎಂಬ ವಿಶಾಲವಾದ ಮಠದ ಪಾಳು ನಿವೇಶನವಿದೆ. ಇದರ ಸಮೀಪದಲ್ಲಿ ಸುಂದವಾದ ಬಸವಣ್ಣನ ಗುಡಿಯಿದೆ.

ಅರಮನೆಯ ಉತ್ತರ ದಿಕ್ಕಿನ ಹೆದ್ದಾರಿಯಲ್ಲಿ ದುಬಾರಿ ತೊಟ್ಟಿಯನ್ನು ದಾಟಿ ಕುರಿಪೇಟೆಯ ಮೂಲಕ ದಿಲ್ಲಿ ಬಾಗಿಲಿಗೆ ಬರುತ್ತವೇ. ಇದು ರಾಜಧಾನಿ ಸುತ್ತಲಿನ ಕೋಟೆಯ ಮೊದಲ ಸುತ್ತಿನ ಮಹಾದ್ವಾರ. ಸು. ೩೦ ಅಡಿ ಎತ್ತರ ಹಾಗೂ ೧೫ ಅಡಿ ಅಗಲದ ಈ ಬಾಗಿಲಿನಿಂದ ರಾಜಧಾನಿಯನ್ನು ಪ್ರವೇಶಿಸಲು ಅತ್ಯಂತ ಬಿಗಿಯಾದ ಭದ್ರತಾ ವ್ಯವಸ್ಥೆಯಿತ್ತು. ಒಳಗೆ ಪ್ರವೇಶಿಸುವವರನ್ನು ತನಿಖೆಮಾಡಿ ಅನುಮತಿ ಪತ್ರವನ್ನು ನೀಡುವ ಅಧಿಕಾರಿಗೆ **ಚೀಟಿನವರು** ಎಂದೂ ಇದನ್ನು ಪರಿಶೀಲಿಸಿ ಒಳಗೆ ಬಿಡುವ ಅಧಿಕಾರಿಗೆ "ಅಪ್ಪಣೆ" ಯವರೆಂದೂ ಕರೆಯಲಾಗುತ್ತಿತ್ತು. ಎಲ್ಲ ಮಹಾದ್ವಾರಗಳಲ್ಲೂ ಇಂತಹ ವ್ಯವಸ್ಥೆ ಇತ್ತು. ಎಂದು ತಿಳಿಯುತ್ತದೆ. ಇಂದಿಗೂ ಈ ಅಧಿಕಾರಿಗಳ ಮನೆತನದವರು ಹೆದ್ದಲಿ ಎಂಬಲ್ಲಿ ನೆಲಸಿದ್ದಾರೆ.

ಈ ಮಹಾದ್ವಾರದಿಂದ ಮುಂದುವರೆದಿರುವ ಹೆದ್ದಾರಿಯು ನದಿಯನ್ನು ದಾಟಿ ವಳಕಟ್ಟೆಯ ಮಾರ್ಗವಾಗಿ ಕಣಿವೆ ಬಾಗಿಲಿಗೆ ಹಾದು ಹೋಗಿದೆ. ಇಲ್ಲೊಂದು ಕಲ್ಲಿನ ಮಹಾದ್ವಾರವಿದ್ದು ಈಗ ಬಿದ್ದು ಹೋಗಿದೆ. ಇದರ ತಗ್ಗಿನಲ್ಲಿರುವ ಕೆರೆಯ ನೀರು "ಬಸವನ ಬಾಯಿ' ಎಂಬ ತೂಬಿನ ಮೂಲಕ ಹರಿಯುತ್ತಿದ್ದು ಪ್ರಯಾಣಿಕರಿಗೆ ಕುಡಿಯಲು ಹಾಗೂ ವ್ಯವಸಾಯಕ್ಕೂ ಬಳಕೆಯಾಗುತ್ತಿದೆ. ಹೆದ್ದಾರಿಯು 'ಅಕ್ಕಮ ಚೌಕಿ' ಎಂಬ ಸುಂದರವಾದ ಪುಷ್ಕರಣಿಯ ಮೂಲಕ ಕಾರಣಗಿರಿಯ ಗಣಪತಿ ದೇವಾಲಯದ ಬಳಿಯ ಮಹಾದ್ವಾರವೂ ಕಣ್ಮರೆಯಾಗಿದೆ. ಈ ದ್ವಾರದ ಬಳಿಯಲ್ಲಿರುವ ಎರಡು ಆಳವಾದ ಬಾವಿಗಳಲ್ಲಿ ತೋಪಿನ ಗುಂಡುಗಳನ್ನು ತುಂಬಿದ್ದುದು ಗೋಚರಿಸುತ್ತಿತ್ತು. ಈಗ ಏನಾಗಿದೆಯೇ ತಿಳಿಯದು. ಇಲ್ಲಿಯೂ ಒಂದು ಸೊಗಸಾದ ಪುಷ್ಕರಣಿಯಿದೆ.

ಇದೇ ಹೆದ್ದಾರಿಯಲ್ಲಿ ಹಿಂದೆ ಹೇಳಿರುವ ಹಳೆಯ ಸೇತುವೆಯನ್ನು ದಾಟಿ ಮುಂದೆ ಪತೇಪೇಟೆಗೆ ಬರುತ್ತೇವೆ. ಈ ಸ್ಥಳವು ಬಂದು ವಿಶಾಲವಾದ ಮೈದಾನವಾಗಿದ್ದು ಒಂದು ಪಾರ್ಶ್ವದಲ್ಲಿ ಶರಾವತಿ ನದಿಯು ಹರಿಯುತ್ತಿದೆ. ಇದೊಂದು ಸೈನಿಕ ಠಾಣೆ ಮತ್ತು ಕವಾಯತ್ತು ನಡೆಯುತ್ತಿದ್ದ ಸ್ಥಳವೆಂದೂ ಪ್ರಚಲಿತವಿದೆ. ಬಿದನೂರನ್ನು ಮುತ್ತಿಗೆ ಹಾಕಲು ಬಂದ ಔರಂಗಜೇಬನ ಸೈನ್ಯ ಹಾಗೂ ಹೈದನರನ ಸೈನ್ಯವು ಇಲ್ಲಿಯೇ ಬೀಡುಬಿಟ್ಟಿತ್ತೆಂದು ಹೇಳಲಾಗುತ್ತದೆ. ಈ ಬಯಲಿನಲ್ಲಿ ಅಲ್ಲಲ್ಲಿ ಸೈನಿಕರ ಸಮಾಧಿಗಳಿವೆ. ಅನೇಕ ಪಾಳು ನಿವೇಶನಗಳಿವೆ. ನದಿಯ ಆಚೆಯ ದಡದಲ್ಲಿ ಸುಂದರವಾದ ಉಮಾಮಹೇಶ್ವರ ದೇವಾಲಯವಿದೆ. ಪತೇ ಪೇಟೆಯು ನಗರದಿಂದ ಸು. ಏಳು ಕಿ.ಮೀ. ದೂರದಲ್ಲಿದೆ

ರಾಜಧಾನಿಯ ಉತ್ತರದಲ್ಲಿರುವ ಇನ್ನೊಂದು ಸೇತುವೆಯನ್ನು ದಾಟಿ ಸೋಮವಾರಪೇಟೆಯ ಮೂಲಕ ಬಸವನ ಬ್ಯಾಣಕ್ಕೆ ಬರುತ್ತೇವೆ. ಇದು ಅರಮನೆಯ ದನಕರುಗಳು ಮೇಯಲು ಮೀಸಲು ಸ್ಥಳವಾಗಿತ್ತು. ಇಲ್ಲಿಂದ ಮುಂದೆ ಮಹಾನವಮಿ ಬಯಲು ಎಂಬ ವಿಶಾಲವಾದ ಬಯಲಿದೆ. ಅರಸರ ಕಾಲದಲ್ಲಿ ಇಲ್ಲಿ ದಸರೆಯ ಉತ್ಸವ ನಡೆಯುತ್ತಿತ್ತು. ಇದರ ಅಂಗವಾಗಿ ಇಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ಮನರಂಜನೆಗಳು ಬಾಣ ಬಿರುಸುಗಳು. ಬನ್ನಿ ಮುಡಿಯುವುದು, ವೀರರಿಗೆ ಸನ್ಮಾನ ಮುಂತಾದ ಕಾರ್ಯ ಕ್ರಮಗಳಿತ್ತು. ಇಲ್ಲಿರುವ ದಂಡಿನ ಮಾರಿ ಎಂಬಲ್ಲಿ ಪ್ರಾಣ ಬಲಿ ನಡೆಯುತ್ತಿತ್ತು.

ಬಸವನ ಬ್ಯಾಣದಿಂದ ಮುಂದೆ ದೇವಗಂಗ ಎಂಬ ಆಕರ್ಷಕವಾದ ಉಪವನವಿದೆ. ಇಲ್ಲಿ ವಿವಿಧ ವಿನ್ಯಾಸದ ಏಳು ಕೊಳಗಳು ಹಾಗೂ ಒಂದು ದೊಡ್ಡ ಪುಷ್ಕರಣಿಯಿದೆ. ಮೇಲಿನ ಕೆರೆಯಿಂದ ಇವುಗಳಿಗೆ ಕೊಳಾಯಿಗಳ ಮೂಲಕ ನೀರು ಹಾಯಿಸುವ ವ್ಯವಸ್ಥೆಯಿದೆ. ಪುಷ್ಕರಣಿಯ ನಡುವೆ ಸೊಗಸಾದ ಕಲ್ಲಿನ

ಮಂಟಪವಿದೆ. ಹಿಂದೆ ಏಳು ಕೊಳಗಳಿಂದ ನೀರು ಕಾರಂಜಿಯಾಗಿ ಚಿಮ್ಮುತ್ತಿತ್ತು. ಉಪವನದ ಸುತ್ತಲೂ ಹೂವಿನ ತೋಟವಿತ್ತು. ಈಗ ಎಲ್ಲವೂ ಪಾಳಾಗಿದೆ. ಇದನ್ನು ರಾಣಿ ಚನ್ನಮ್ಮಾಜಿಯು ನಿರ್ಮಿಸಿದಳೆಂದು ಹೇಳಲಾಗಿದೆ. ರಾಯಸದ ಗಂಗಾಧರಯ್ಯನು ಇಲ್ಲಿರುವ ಶಿವಾಲಯವನ್ನು ಕಟ್ಟಿಸಿದನು. ಈ ಉಪವನವು ಸು. ೨೮೫ ಅಡಿ ಉದ್ದ ಮತ್ತು ೧೦೦ ಅಡಿ ಅಗಲವಾಗಿದೆ.

ಮಹಾನವಮಿ ಬಯಲಿನಿಂದ ಮುಂದೆ ಹೆದ್ದಾರಿಯು ಬಿಲುಸಾಗರದತ್ತ ಸಾಗಿದೆ. ಈ ಸ್ಥಳದಲ್ಲಿ ವಿವಿಧ ಧರ್ಮೀಯರಿಗಾಗಿ ಒಂದೇ ಕಡೆ ಮೀಸಲಾಗಿಟ್ಟಿದ್ದ ರುದ್ರಭೂಮಿಯಿದೆ. ಅನೇಕ ಸಮಾಧಿಗಳ ಅವಶೇಷವಿದೆ. ಇದೇ ಬಿಲುಸಾಗರದ ಮೂಲಕ ಮೊಗಲರು, ಬಿಜಾಪುರದವರು ಹಾಗೂ ಮರಾಠರು ರಾಜಧಾನಿಗೆ ಮುತ್ತಿಗೆ ಹಾಕಲು ಆಗಮಿಸಿ ಬೀಡು ಬಿಡುತ್ತಿದ್ದರು. ಇದು ಕೋಟೆಯಿಂದ. ಸು. ೬ ಕಿ.ಮೀ. ದೂರದಲ್ಲಿದೆ.

ನೀಲಂಕಠೇಶ್ವರ ದೇವಾಲಯ ಸಮುಚ್ಚಯವು ರಾಜಧಾನಿಯ ಕೇಂದ್ರ ಸ್ಥಳವಾಗಿತ್ತು. ಇಲ್ಲಿದ್ದ ಬೃಹದಾಕಾರವಾದ ಘಂಟೆಯ ಮೇಲೆ Fecit amsteld dami domin ಎಂದು ಬರೆದಿದ್ದು ಕ್ರಿ.ಶ. ೧೭೧೩ರಲ್ಲಿ ಇದನ್ನು ಹಾಲೆಂಡಿನ ಆಮ್‌ಸ್ಟರ್‌ಡಾಂನಲ್ಲಿ ತಯಾರಿಸಿರುವುದು ತಿಳಿದು ಬಂದಿದೆ. ಇದು ಈಗ ಶಿವಮೊಗ್ಗದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಇದೇ ದೇವಾಲಯದ ಪಾರ್ಶ್ವದ ಹೆದ್ದಾರಿಯು ಕೊಲ್ಲೂರು ಘಾಟಿಯತ್ತ ಸಾಗಿದೆ. ಕಲಾವತಿ ನದಿಯ ಸೇತುವೆಯನ್ನು ದಾಟಿದರೆ ನದಿಯ ದಡದಲ್ಲಿ ಶೃಂಗೇರಿ ಮಠ ಮತ್ತು ರಾಘವೇಂದ್ರ ಸ್ವಾಮಿಗಳ ಬೃಂದಾವನವಿದೆ.

ಶಂಕರಮಠದ ಆವರಣದಲ್ಲಿರುವ ಕೊಳದಲ್ಲಿ ಕಮಲದ ಆಕೃತಿಯ ಒಂದು ಘಳಿಗೆ ಬಟ್ಟಲಿದೆ. ಈ ಕೊಳಕ್ಕೆ ಕೊಳಾಯಿಯ ಮೂಲಕ ನೀರು ಸರಬರಾಜಾಗುತ್ತಿತ್ತು. ಘಳಿಗೆಗೆ ಒಮ್ಮೆ ತುಂಬುತ್ತಿದ್ದ ಬಟ್ಟಲು ಕಾಲವನ್ನು ಅಳೆಯುವ ಉಪಕರಣವಾಗಿತ್ತು. ಈಗ ಪಾಳಾಗಿದೆ. ಇದೇ ಮಠಕ್ಕೆ ಹೊಂದಿಕೊಂಡಂತೆ ಒಂದು ಮಹಾವಿದ್ಯಾಲಯದ ಪಾಳು ನಿವೇಶನವಿದೆ. ಇದೇ ಹೆದ್ದಾರಿಯಲ್ಲಿ ಸು. ೫ ಕಿ.ಮೀ. ಮುನ್ನಡೆದರೆ ಪಂಚಮುಖಿ ಆಂಜನೇಯ ದೇವಾಲಯವನ್ನು ಸಂದರ್ಶಿಸಿ ಕಾನಗದ್ದೆಯ ಕೊಪ್ಪಲು ಮಠವನ್ನು ತಲುಪುತ್ತೇವೆ. ವಿಶಾಲವಾದ ಈ ಸ್ಥಳದ ಒಂದು ಭಾಗದಲ್ಲಿ ವೀರಶೈವ ಮಠದ ಪಾಳು ನಿವೇಶನವಿದೆ. ಇನ್ನೊಂದೆಡೆ ಬಿದನೂರನ್ನು ಆಳಿದ ಅರಸರ ಸಾಲು ಸಮಾಧಿಗಳಿವೆ. ಈ ಸಮಾಧಿಗಳು ಶಿವಪ್ಪನಾಯಕ (ಕ್ರಿ.ಶ. ೧೬೪೬-೧೬೬೧) ಕಿರಿಯವೆಂಕಟಪ್ಪನಾಯಕ (೧೬೬೧-೬೨) ಭದ್ರಪ್ಪನಾಯಕ (೧೬೬೨-೬೪) ಹಿರಿಯ ಸೋಮಶೇಖರ ನಾಯಕ (೧೬೬೪-೭೨) ಚನ್ನಮ್ಮಾಜಿ (೧೬೭೨-೯೮) ಹಿರಿಯ ಬಸಪ್ಪನಾಯಕ (೧೬೯೮-೧೭೧೫) ಕಿರಿಯ ಸೋಮಶೇಖರ ನಾಯಕ (೧೭೧೫-೪೧)ಹಾಗೂ ಚನ್ನಬಸವನಾಯನಕ (೧೭೫೫-೫೮) ಗದ್ದುಗೆಗಳಾಗಿವೆ. ಪ್ರತಿಯೊಂದು ಸಮಾಧಿಯ ಮುಂದೆ ರಾಜ ಹಾಗೂ ಅವನೊಂದಿಗೆ ಜೀವಂತ ಸಮಾಧಿಯಾಗಿರಬಹುದಾದ ರಾಣಿ ಮತ್ತು ಪರಿವಾರವನ್ನು ಕೆತ್ತಿ ನಿಲ್ಲಿಸಿದೆ. ಆದರೆ ಸಮಾಧಿಸ್ಥರಾದವರ ಸಮಾಧಿಗಳನ್ನು ಗುರುತಿ ಸುವುದು ಕಷ್ಟಕರವಾಗಿದೆ. ಈ ಸ್ಥಳದಲ್ಲಿ ಇನ್ನು ಕೆಲವು ಗದ್ದುಗೆಗಳು ಕಾಣಿಸಿಕೊಂಡಿವೆ. ಈ ಸಮಾಧಿಗಳನ್ನು ಮೊಟ್ಟಮೊದಲು ನಗರದ ದಿ. ಶಂಕರನಾರಾಯಣ ರಾಯರವರು ಕಂಡುಹಿಡಿದು ನನಗೆ ತೋರಿಸಿದರು. ಇದರ ಸಮೀಪದಲ್ಲಿ ದೊಡ್ಡ ಪುಷ್ಕರಣಿಯಿದೆ.

ಉಪನಗರಗಳು : ರಭಸದಿಂದ ಬೆಳೆಯುತ್ತಿದ್ದ ನಗರಕ್ಕೆ ಉಪನಗರಗಳನ್ನು ನಿರ್ಮಿಸಲಾಗಿತ್ತು. ಕಾನಗದ್ದೆಯಿಂದ ಮುಂದೆ ಬೈಸೆ ಗ್ರಾಮದಲ್ಲಿ ಚಂದ್ರಶೇಖರಪುರ ಎಂಬ ಉಪನಗರವಿದೆ. ಸು. ೬೦ ಎಕರೆ ವಿಸ್ತಾರವಾದ ಈ ಬಡಾವಣೆಯನ್ನು ಹಿರಿಯ ಸೋಮಶೇಖರನಾಯಕನು ನಿರ್ಮಾಣ ಮಾಡಿಸಿದನು. ವಿಶಾಲವಾದ ಅರಮನೆಯ ನಿವೇಶನವು ಈಗ ಪಾಳು ಬಿದ್ದಿದೆ. ಪಾಕಶಾಲೆ, ಸ್ನಾನಗೃಹದಲ್ಲಿ ಜಂಬಿಟ್ಟಿಗೆ ಗೋಡೆಯ ಅವಶೇಷವಿದೆ. ಮೇಲಿನ ಕೆರೆಯಿಂದ ಅರಮನೆಗೆ ಕೊಳಾಯಿಗಳ ಮೂಲಕ ನೀರು ಸರಬರಾಜಾಗುತ್ತಿತ್ತು.

ಈ ಅರಮನೆಯನ್ನು ರಾಜನು ದಾಳಿಂಬ, ನವರಂಗ ಬಿರಿದು (?) ಎಂಬ ಹೆಸರಿನಿಂದ ಕೂಡಿದ ಚಾವಡಿಯ ಮಹಲುಗಳ ಸಾಲನ್ನು ಕಟ್ಟಿಸಿದನೆಂದು ಕೆಳದಿ ನೃಪವಿಜಯದಲ್ಲಿ ಹೇಳಿದೆ (ಪು. ೨೭೪). ಈ ಉಪನಗರದಲ್ಲಿ ಕೆರೆ, ಕಾಲುವೆ, ಬಾವಿಗಳು, ಕೊಳ, ಕಬ್ಬು, ಹೂವಿನ ತೋಟ, ಭತ್ತದ ಗದ್ದೆ ಮತ್ತು ತೋಪುಗಳನ್ನು ಮಾಡಿಸಿದನೆಂದೂ, ನಿವೇಶನಗಳನ್ನು ವಿಂಗಡಿಸಿ ವಾಸಿಸಲು ಬರುವವರಿಗೆ ಹಂಚಿಕೆಮಾಡಿಸಿನೆಂದೂ ಇದೇ ಗ್ರಂಥದಲ್ಲಿ ಉಲ್ಲೇಖಿಸದೆ (ಪು. ೨೭೪).

ಅರಮನೆಯಿಂದ ಸ್ವಲ್ಪ ದೂರದಲ್ಲಿ 'ದಳವಾಯಿ ಜಡ್ಡು ಎಂಬ ಬಯಲಿದೆ. ಇಲ್ಲಿ ಸೈನಿಕರ ಕವಾಯಿತು ನಡೆಯುತ್ತಿತ್ತು. ಇದರಿಂದ ಮುಂದೆ ದಳಗದ್ದೆ ಎಂಬಲ್ಲಿ ಸೈನಿಕರ ಸಾಲು ವಸತಿ ಗೃಹಗಳ ಪಾಳು ನಿವೇಶನಗಳಿವೆ. ಅಲ್ಲಲ್ಲಿ ದೊಡ್ಡ ತೆರೆದ ಬಾವಿಗಳಿವೆ. ದಳಗದ್ದೆಯಿಂದ ಮುಂದೆ ನಾಗಪಟ್ಟಣ ಎಂಬ ಉಪನಗರವಿದೆ. ಹಿರಿಯ ಸೋಮಶೇಖರನಾಯಕನು ಈ ಬಡಾವಣೆಯನ್ನು ನಿರ್ಮಿಸಿ ನಾಗರಿಕ ಸೌಲಭ್ಯಗಳನ್ನು ನೀಡಿದ್ದನು. ಇಲ್ಲಿ ಒಂದು ಅಂದವಾದ ಅರಮನೆಯನ್ನು ಕಟ್ಟಿಸಿದ್ದು ಇದರಲ್ಲಿ ದಾಡಿಮವಿಕಾಸ ಮತ್ತು ಸಾರಂಗ ಎಂಬ ಚಾವಡಿಗಳಿದ್ದವು. ಇಲ್ಲಿ ಸಾವಿಹಾರು ನಾಗರಕಲ್ಲುಗಳಿವೆ. ಅಲ್ಲದೆ ಅನೇಕ ಬೀದಿಗಳು ಮತ್ತು ಪಾಳು ನಿವೇಶನಗಳಿವೆ. ಇಲ್ಲಿನಿಂದ ಮುಂದೆ ಕುದುರೆಗಳ ವ್ಯಾಪಾರ

ನಡೆಯುತ್ತಿದ್ದ ಕುದುರೆ ಬೀರಪ್ಪನ ವೃತ್ತವಿದೆ. ಇಲ್ಲಿ ರಾಜಧಾನಿಯ ಎರಡನೆಯ ಸುತ್ತಲಿನ ಮಹಾದ್ವಾರದ ಅವಶೇಷ ವಿದೆ. ಇಲ್ಲಿರುವ ಒಂದು ದೇವಾಲಯಗಳಲ್ಲಿ ಸುಂದರವಾದ ಕೆತ್ತನೆಗಳಿವೆ.

ನಗರದ ಚಿಕ್ಕಪೇಟೆಯಿಂದ ಮುಂದೆ ಹೊಸಪೇಟೆ ಎಂಬ ವಿಶಾಲವಾದ ಇನ್ನೊಂದು ಬಡಾವಣೆಯಿದೆ. ಈ ಬಡಾವಣೆಯಲ್ಲಿ ಹುಲಿಕಲ್ಲು ಘಾಟಿಗೆ ಹಾದು ಹೋಗುವ ವಿಶಾಲವಾದ ಹೆದ್ದಾರಿ ಯಿಂದ ಬೀದಿಗಳಿಗೆ ಪ್ರವೇಶ ದ್ವಾರವಿದೆ. ಅಲ್ಲದೆ ಸಹಸ್ರಾರು ಮನೆಗಳ ಚೌಕಟ್ಟು, ಅರ್ಧನಿಂತಿರುವ ಗೋಡೆಗಳು ಬೀಸುವ ಕಲ್ಲುಗಳು, ಒರಳು ಕಲ್ಲುಗಳು, ಶೌಚ ಗೃಹಗಳ ಚಪ್ಪಡಿಗಳು ಹಾಗೂ ನೂರಾರು ತೆರೆದ ಬಾವಿಗಳಿವೆ. ಇಲ್ಲಿರುವ ಗದ್ದೆಯ ಸಾಲನ್ನು ಬಾಗಿಲಗದ್ದೆ ಎಂದು ಕರೆಯುತ್ತಾರೆ. ಚಿಕ್ಕಪೇಟೆಯು ನದಿಯತೀರದಲ್ಲಿರುವ ಇನ್ನೊಂದು ಬಡಾವಣೆ. ಇಲ್ಲಿ ಗಂಟೆಗದ್ದೆ, ನೂಲಿಗ್ಗೇರಿ, ಕೊಟ್ನಿಕೇರಿ ಎಂಬ ಹಲವಾರು ಕೇರಿಗಳಿವೆ. ಹೊಸಪೇಟೆಯಿಂದ ಮುಂದೆ ಕಾಚಿಗೇರಿಯ ಮೂಲಕ ಕಳಂಬೂರಿಗೆ ಬರುತ್ತೇವೆ. ಇಲ್ಲಿ ಹೆಚ್ಚಾಗಿ ಜೈನಧರ್ಮೀಯರು ನೆಲಸಿದ್ದರು. ಇಲ್ಲಿಯ ಜಿನಾಲಯವನ್ನು ಮಂಡಳಿ ಸಾವಿರದ ಗಂಗರ ದೊರೆ ತ್ರಿಭುವನ ಮಲ್ಲ ಗಂಗ ಪೆರ್ಮಾಡಿ ದೇವನ ಕಾಲದಲ್ಲಿ ಕ್ರಿ.ಶ. ೧೧೧೮ರಲ್ಲಿ ಬನ್ನಿಕೆರೆ ಶ್ರೀಮಂತ ವ್ಯಾಪಾರಿ ಬರ್ಮಿ ಸೆಟ್ಟಿಯು ಕಟ್ಟಿಸಿದನು. ಈ ಬಸದಿಯು ಪೂರ್ಣವಾಗಿ ಪಾಳಾಗಿದ್ದು ತೀರ್ಥಂಕರರ ಮೂರ್ತಿಯನ್ನು ಶಿವಮೊಗ್ಗದ ಪ್ರಾಚ್ಯವಸ್ತು ಸಂಗ್ರಹಾಲಯ ದಲ್ಲಿಡಲಾಗಿದೆ. ಇಲ್ಲಿ ಒಂದು ಜೈನಮಹಾವಿದ್ಯಾಲಯವಿದ್ದ ಅವಶೇಷವಿದೆ. ಈ ವಿದ್ಯಾಲಯಕ್ಕೆ ಕೆರೆಯಿಂದ ಕಲ್ಲಿನ ಕಾಲುವೆಯ ನೀರನ್ನು ಸರಬರಾಜು ಮಾಡಲಾಗುತ್ತಿತ್ತು.

ಬಾಳೆಯಕೊಪ್ಪ ಎಂಬ ಮತ್ತೊಂದು ಬಡಾವಣೆಯಲ್ಲಿ ಪುಷ್ಕರಣಿ ಮತ್ತು ಅನೇಕ ಬಾವಿಗಳಿವೆ. ಕೆಲವು ಭಾವಿಗಳಿಗೆ ಕಲ್ಲಿನ ಮುಚ್ಚಳವಿದೆ. ಇಲ್ಲಿಯ ಬೀದಿಗಳ ಪಾರ್ಶ್ವದಲ್ಲಿ ಪಾಳು ನಿವೇಶನಗಳಿವೆ. ಇಲ್ಲಿಂದ ಮುಂದೆ ಕರಿಮನೆ ಎಂಬ ಗ್ರಾಮವಿದೆ. ಇಲ್ಲಿ ರಾಜಧಾನಿಯ ಎರಡನೆಯ ಸುತ್ತಿನ ಮಹಾದ್ವಾರದ ಅವಶೇಷವಿದೆ. ಇಲ್ಲಿಂದ ಮುಂದಿನ ರಾಜ್ಯದ ಹೆದ್ದಾರಿಯು ಹುಲಿಕಲ್ಲು ಘಾಟಿಯ ಮೂಲಕ ದಕ್ಷಿಣ ಕನ್ನಡ ಜಿಲ್ಲೆಗೆ ನೇರ ಸಂಪರ್ಕ ಕಲ್ಪಿಸಿದೆ. ವಿಶಾಲವಾದ ಈ ರಾಜಮಾರ್ಗದಲ್ಲಿ ಎಡೆ ಬಿಡದೆ ವ್ಯಾಪಾರದ ಸರಕುಗಳು ಸಾಗಿ ಹೋಗುತ್ತಿತ್ತು. ಅಲ್ಲಲ್ಲಿ ರಕ್ಷಣಾ ಪಡೆಗಳ ಠಾಣೆ ಮತ್ತು ಸುಂಕದ ಕಟ್ಟೆಗಳಿದ್ದವು. ವಿದೇಶಗಳ ರಾಯಭಾರಿಗಳು, ವ್ಯಾಪಾರಿಗಳು ಮತ್ತು ಅಧಿಕಾರಿಗಳು ಇದೇ ಮಾರ್ಗವಾಗಿ ರಾಜಧಾನಿಗೆ ಆಗಮಿಸುತ್ತಿದ್ದರು.

ನಗರದಿಂದ ಸು. ಹತ್ತು ಕಿ.ಮೀ ದೂರದ ಅರಮನೆ ಕೊಪ್ಪ ಎಂಬಲ್ಲಿ ಇಪ್ಪತ್ತೇಳು ಅಂಕಣಗಳ ಒಂದು ಐತಿಹಾಸಿಕ ನಿವಾಸವಿದೆ. ಕಲ್ಲು ಮತ್ತು ಮಣ್ಣಿನಿಂದ ಕಟ್ಟಿರುವ ಈ ಮನೆಯ ಗೋಡೆಯು ಆರು ಅಡಿ ದಪ್ಪವಾಗಿದೆ. ಉಪ್ಪರಿಗೆಗೆ ಹೋಗಲು ಮಣ್ಣಿನ ಮೆಟ್ಟಿಲುಗಳಿವೆ. ಮಹಡಿಯ ಮೂರನೆಯ ಕೊಠಡಿಯ ಮರದ ಬೀರುವಿನ ತಳಭಾಗದ ಬಾಗಿಲು ತೆರೆದಾಗ ಮರದ ಚೌಕಟ್ಟಿನ ಒಂದು ಸುರಂಗ ಮಾರ್ಗಗೋಚರಿಸುತ್ತದೆ. ಇದರ ಮೂಲಕ ತಳಭಾಗದ ಮಾಳಿಗೆಗೆ ಇಳಿಯಬಹುದು. ಇದೊಂದು ರಕ್ಷಣಾತ್ಮಕ ಅರಮನೆಯಂತಿದ್ದು ಇದರಲ್ಲಿ ರಾಜಾರಾಮನನ್ನು ಸಂರಕ್ಷಿಸಿ ಇಡಲಾಗಿತ್ತೆಂದು ಹೇಳಲಾಗುತ್ತಿದೆ.

ಬಿದನೂರು ನಗರದ ಕೋಟೆಯಿಂದ ಉತ್ತರಕ್ಕೆ ಗಲ್ಲಿನಗುಡ್ಡ ಎಂಬಲ್ಲಿ ಅಪರಾಧಿಗಳನ್ನು ಗಲ್ಲಿಗೇರಿಸುತ್ತಿದ್ದ ಸ್ಥಳ ಹಾಗೂ ಕಾರಾಗೃಹಗಳಿವೆ. ಇದರ ಸುತ್ತಲೂ ರಕ್ಷಣಾತ್ಮಕವಾದ ಗೋಡೆ ಮತ್ತು ಬಾಗಿಲಿದೆ.

ಉದ್ದಿಮೆಗಳು ಮತ್ತು ವಸಾಹತುಗಳು : ನಗರದಲ್ಲಿ ಇಂದಿನ ಆಸ್ಪತ್ರೆ ಇರುವ ಸ್ಥಳದ ಸುತ್ತ ಮುತ್ತಲಿನ ಸು. ಐವತ್ತು ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಹಾತು (Industrial Estate) ವಿತ್ತು. ಇದು ಕಲಾವತಿ ನದಿಯವರೆಗೂ ವಿಸ್ತರಿಸಿತ್ತು. ಈ ಸ್ಥಳಕ್ಕೆ ನಿಂಬಯ್ಯ ಎಂಬ ಲೋಹತಜ್ಞನ ಹೆಸರಿನಲ್ಲಿ "ನಿಂಬಯ್ಯನ ಕಾರ್ಖಾನೆ" ಎಂದು ಕರೆಯಲಾಗುತ್ತಿತ್ತು. ಈ ವಸಾಹತುವಿನಲ್ಲಿ ಕಬ್ಬಿಣ, ಕಂಚು, ತಾಮ್ರ ಮತ್ತು ಸೀಸದ ಸಣ್ಣ ಪ್ರಮಾಣದ ಕಾರ್ಖಾನೆಗಳಿತ್ತು. ಇಲ್ಲಿ ತೋಪು ಮತ್ತು ಇದರಲ್ಲಿ ಬಳಸುತ್ತಿದ್ದ ಗುಂಡುಗಳನ್ನು ತಯಾರಿಸಲಾಗುತ್ತಿತ್ತು. ಈ ಗುಂಡಿನ ರಂಧ್ರದಲ್ಲಿ ಸಿಡಿಮದ್ದಿನ ಪುಡಿಯನ್ನು ಸ್ಫೋಟಿಸಲಾಗುತ್ತಿತ್ತು. Some canon balls of different sizes were noticed. The bigger ones have hollow inside as against smaller ones. It is said that the people in charge of the powder magazine used to fill the gun powder in those bigger balls and to fire them afterwards.[೧೦] ಎನ್ನಲಾಗಿದೆ.

ಇದೇ ವಸಾಹತುವಿನಲ್ಲಿ ಪಿಸ್ತೂಲು ಎಂದು ಕರೆಯ ಲಾಗುತ್ತಿದ್ದ ಪ್ರಾಯಶಃ ನಾಡಬಂದೂಕುಗಳನ್ನು ತಯಾರಿಸುತ್ತಿದ್ದ ರೆಂದು ತಿಳಿಯುತ್ತದೆ. ಕೆಳದಿ ಪಾಲಿಟಿಯಲ್ಲಿ 'The pistol also one of the important weapons used in Keladi Army"[೧೧] ಎಂದು ಹೇಳಿದೆ.

ಬಿದನೂರಿನಲ್ಲಿ ಟಂಕಸಾಲೆಯನ್ನು ಸ್ಥಾಪಿಸಲಾಗಿದ್ದರೂ ಅದು ಎಲ್ಲಿತ್ತು ಎಂದು ಸರಿಯಾಗಿ ತಿಳಿದಿಲ್ಲ. ಹಿರಿಯ ಸೋಮಶೇಖರ ನಾಯಕನು ಇದನ್ನು ಆಧುನೀಕರಿಸಿದ್ದನು.[೧೨] ಕ್ರಿ.ಶ. ೧೭೨೬ರ ಒಂದು ದಾಖಲೆಯಂತೆ ಸುಬ್ಬಾಚಾರಿ ಎಂಬುವನು ನಾಣ್ಯದ ಒಂದು ಪಡಿಯಚ್ಚನ್ನು ತಯಾರಿಸಿಟ್ಟು ಇದರ ತೂಕ ೨೪ ಮಣ ಮತ್ತು ಒಂಬತ್ತು ಸೇರುಗಳೆಂದು ಹೇಳಲಾಗಿದೆ.[೧೩]

ಬಿದನೂರಿಗೆ 'ನಗರ' ಎಂಬ ಹೆಸರನ್ನು ಹೇಳದೆ ಮುಂಬಯಿಯ ೩.೧.೧೭೬೪ ರ ವಿದೇಶೀ ಅಧಿಕಾರಿಯ ಪತ್ರದಲ್ಲೂ ಬಿದನೂರು ಎಂದೇ ಹೇಳಿದೆ.[೧೪] ೧೭೬೩ ರಲ್ಲಿಯೇ ಹೈದರನು ಬಿದನೂರನ್ನು ವಶಪಡಿಸಿಕೊಂಡಿದ್ದನು. ಇದಕ್ಕೆ ಹೈದರ್ ನಗರ ಎಂದು ಹೆಸರಿಟ್ಟು ತನ್ನ ಹೆಸರಿನಲ್ಲಿಯೇ ನಾಣ್ಯಗಳನ್ನು ಮುದ್ರಿಸಲು ಆರಂಭಿಸಿದನು. ಹುಲಿಕಲ್ಲು ಘಾಟಿಗೆ ಹೈದರ್ ಘಾಟಿ ಎಂಬ ಹೆಸರಿಟ್ಟು ಅಲ್ಲಿಯ ಒಂದು ಎತ್ತರವಾದ ಸ್ಥಳದಲ್ಲಿ ಒಂದು ಮಹಲನ್ನು ಕಟ್ಟಿಸಿ ಇದಕ್ಕೆ ಹೈದರ್ ಘರ್ ಎಂಬ ಹೆಸರಿಟ್ಟನು. ಇದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದ್ದರೂ ನಂತರ ತನ್ನ ನಿರ್ಧಾರವನ್ನು ಬದಲಿಸಿದನು. ಹೀಗೆ ಹೈದರ್ ಮತ್ತು ನಂತರದ ಬ್ರಿಟಿಷರು ಮತ್ತು ಮೈಸೂರು ಅರಸರ ಕಾಲದಲ್ಲಿ ಇದನ್ನು 'ನಗರ' ಎಂದು ಕರೆದಿರುವ ದಾಖಲೆಗಳಿವೆ.

ಹೈದರ್ ಮತ್ತು ಟೀಪುಸುಲ್ತಾನನ ಕಾಲದಲ್ಲಿ ಇದೊಂದು ದೊಡ್ಡ ಸೈನಿಕ ಕೇಂದ್ರವಾಗಿತ್ತು. ಮೈಸೂರು ಅರಸರ ಆರಂಭದ ಆಡಳಿತದ ಅವಧಿಯಲ್ಲಿ ನಗರ ಡಿವಿಜನ್ ಎಂಬ ವಿಭಾಗೀಯ ಕೇಂದ್ರವಾಗಿತ್ತು. ಆದರೆ ಈ ಕೆಳಗಿನ ಅಂಶಗಳು ಸ್ಪಷ್ಟವಾಗಿಲ್ಲ.

೧. ಬಿದನೂರು ಸು. ೧೨೪ ವರ್ಷಗಳ ಕಾಲ ರಾಜಧಾನಿಯಾಗಿ ಮೆರೆದಾಡಿದ್ದರೂ ಕೇವಲ ಚಿಕ್ಕಪುಟ್ಟ ದೇವಾಲಯಗಳನ್ನು ಮಾತ್ರ ಕಟ್ಟಲಾಗಿದೆ. ಕೆಳದಿ ಮತ್ತು ಇಕ್ಕೇರಿಯಲ್ಲಿರುವಂಥಹ ದೇವಾಲಯಗಳನ್ನೇಕೆ ನಿರ್ಮಿಸಲಿಲ್ಲ?

೨. ನೀಲಕಂಠೇಶ್ವರ ದೇವಾಲಯದ ಗರ್ಭಗುಡಿಯನ್ನು ಮಾತ್ರ ಶಿಲೆಯಿಂದ ಕಟ್ಟಲಾಗಿದೆ. ಗೋಪುರಕ್ಕೆ ಚಿನ್ನದ ರಸ ಲೇಪನ ಮಾಡಿಸಿದ್ದರೂ ಉಳಿದ ಭಾಗವು ಹೆಂಚಿನ ಕಟ್ಟಡವಾಗಿರಲು ಕಾರಣವೇನು?

೩. ಒಳಭಾಗದ ಕಟ್ಟಡವು ಅರಮನೆಯೇ? ದರಬಾರು ಸಭಾಂಗಣವೆ? ಅಥವಾ ಕಡತದ ಚಾವಡಿಯೆ?

೪. ವೀರಮ್ಮಾಜಿಯ ಕಾಲದಲ್ಲಿ ಅಗ್ನಿಗೆ ಆಹುತಿಯಾದ ಅರಮನೆಯು ಯಾವುದು?

೫. ನಗರದ ಸುತ್ತ ಮುತ್ತಲಿನ ಕೆಲವು ಬಾವಿಗಳಲ್ಲಿ ತೋಪಿನ ಗುಂಟುಗಳನ್ನು ತುಂಬಿಟ್ಟಿರಲು ಕಾರಣವೇನು? ಇದಕ್ಕೆಲ್ಲ ಸೂಕ್ತ ಉತ್ತರ ಬೇಕಿದೆ.

ಸಂಶೋಧನೆಯ ಕ್ಷೇತ್ರ

ನಗರದಲ್ಲಿ ಕೆಲವೇ ಶಿಲಾಶಾಸನಗಳು ಮಾತ್ರ ಲಭ್ಯವಾಗಿದೆ. ಇಲ್ಲಿರುವ ಶಂಕರೇಶ್ವರ ಹಾಗೂ ನೀಲಕಂಠೇಶ್ವರ ದೇವಾಲಯದ ಎರಡು ತ್ರುಟಿತ ಶಾಸನಗಳಲ್ಲಿ ವಿಜಯನಗರದಲ್ಲಿ ಹರಿಹರನು ಆಳುತ್ತಿದ್ದಾಗ ಇವನ ಅನುಮತಿಯಂತೆ ಬಿದನೂರು ಸೀಮೆ ಮುಂಗನಾಡು ಹಾಗೂ ಕಬ್ಬುನಾಡು ಸೀಮೆಗಳನ್ನು ಬಂಕಿ ಅರಸರು ಮತ್ತು ಹೊಂನೆಯ ಕಂಬಳಿ ಒಡೆಯರಾದ ಅಮ್ಮಿದೇವಿ ಅಂಮನವರು ಆಳುತ್ತಿದ್ದರೆಂದು ಹೇಳಿದೆ. ನಗರವು ಇವರ ಆಡಳಿತ ಸ್ಥಳವಾಗಿತ್ತು. ಕೆಳದಿಯ ಪ್ರಭು ಇಮ್ಮಡಿ ಸದಾಶಿವನಾಯಕನು ಆರಗ ಮತ್ತು ಕೆಳದಿಯ ಸುತ್ತಮುತ್ತಲಿನ ಸೀಮೆಗಳನ್ನು ವಿಜಯನಗರದ ಅಧೀನದಲ್ಲಿ ಆಳುತ್ತಿದ್ದನೆಂದು ಈಗ ಶಾಸನಗಳಿಂದ ತಿಳಿಯುತ್ತದೆ.

ಬಿದನೂರು ನಗರಕ್ಕೆ ಗೆಶ್ವಾರ್ ದೆ ಮೆಲುವು, ಬಪ್ತೀಸ್, ಡಾ. ಪ್ರಾಯರ್, ನಿಕೋಲೋ ಮುನೂಚಿ, ಪೀಟರ್ ಮಂಡಿ, ಪಿಂಕರ್ಬನ್, ರೋಡ್ರಿಕ್ಸ್ ಮುಂತಾದ ಇಪ್ಪತ್ತಕ್ಕೂ ಹೆಚ್ಚಿನ ಪೋರ್ತುಗೀಜ, ಡಚ್, ಬ್ರಿಟಿಷ್ ಮತ್ತು ಇಟಲಿಯ ಪ್ರವಾಸಿಗರು ಭೇಟಿ ನೀಡಿ ತಾವು ಕಂಡದ್ದನ್ನು ಬರೆದಿಟ್ಟಿದ್ದಾರೆ. ಇವರಿಗಿಂತ ಮೊದಲು ಅರಬ್ ಪ್ರವಾಸಿಗಳು ಆಗಮಿಸಿದ್ದರು. ಇವರೆಲ್ಲರ ವರದಿಗಳು ಬಿದನೂರಿನ ಅಂದಿನ ಜನಜೀವನ ಹಾಗೂ ಇತಿಹಾಸದ ಕೈಗನ್ನಡಿಯಂತಿದೆ.

ರಾಜಧಾನಿ ಬಿದನೂರಿನ ಸುತ್ತಲೂ ಐದರಿಂದ ಆರು ಹರದಾರಿ ವಿಸ್ತೀರ್ಣದ ಕೋಟೆಯಿದೆ. ಇದರಲ್ಲಿ ಇಪ್ಪತ್ತೆರಡು ಬತೇರಿಗಳಿವೆ. ಅಲ್ಲದೆ ಇಪ್ಪತ್ತೆರಡು ಹರದಾರಿ ಪ್ರದೇಶವು ಎತ್ತರವಾದ ಬೆಟ್ಟ ಮತ್ತು ಕಾಡಿನಿಂದ ಕೂಡಿದೆ ಎಂದು ವಿದೇಶೀ ಪ್ರವಾಸಿ ಬುಕನ್ನನು ಬರೆದಿಟ್ಟಿದ್ದಾನೆ.[೧೫] ಸು. ಹತ್ತು ಚದರ ಕಿಲೋಮೀಟರ್ ಗಿಂತ ಹೆಚ್ಚಿನ ವ್ಯಾಪ್ತಿಯಲ್ಲಿ ಹರಡಿದ್ದ ನಗರವು ದಕ್ಷಿಣ ಭಾರತದ ಒಂದು ಸುಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿತ್ತು. ಪಶ್ಚಿಮ ಕರಾವಳಿ ನೆಲಸಿದ್ದ ಅರಬ್ ಮತ್ತು ಪೋರ್ತುಗೀಸರೊಂದಿಗೆ ವ್ಯಾಪಾರ ನಡೆಸುತ್ತಿದ್ದ ಈ ರಾಜ್ಯವು ಸಂಪತ್ತಿನ ಕಣಜವಾಗಿತ್ತು. ಹೈದರ್, ಟೀಪು ಸುಲ್ತಾನ ಮತ್ತು ಬ್ರಿಟಿಷರ ಕಾಲದಲ್ಲಿ ನಗರವು ಒಂದು ಆಯಕಟ್ಟಿನ ಸ್ಥಳವಾಗಿತ್ತು.

ಬಿದನೂರು ನಗರದ ಜನ ಸಂಖ್ಯೆಯು ಎರಡು ಲಕ್ಷಕ್ಕಿಂತ ಹೆಚ್ಚಾಗಿತ್ತೆಂದು ತಿಳಿಯುತ್ತದೆ.[೧೬] ನಗರದಲ್ಲಿ ಐವತ್ತು ಸಾವಿರ ಸೈನಿಕರ ಒಂದು ಠಾಣೆಯನ್ನು ತಾನು ನೋಡಿರುವುದಾಗಿಯೂ, ಇಲ್ಲಿ ಇನ್ನೂ ಹೆಚ್ಚು ಸೈನಿಕರಿರಬಹುದೆಂದು ಪಾದ್ ಲಿಯನಾರ್ಡೋ ತಾಯನೀಸ್ ಬರೆದಿದ್ದಾನೆ. ಇನ್ನೊಂದು ದಾಖಲೆಯಂತೆ ಈ ನಗರದಲ್ಲಿ ಒಂದು ಲಕ್ಷ ಐವತ್ತು ಸಾವಿರ ಸೈನಿಕರಿದ್ದರೆಂದು ತಿಳಿಯುತ್ತದೆ.[೧೭] ಹೀಗೆ ಸು. ನಾಲ್ಕು ಲಕ್ಷ ಜನಸಂಖ್ಯೆಯ ನಗರದಲ್ಲಿ ಕೆಳದಿಯ ಅರಸರ ಕಾಲದಲ್ಲಿ ಹಿಂದೆ ಹೇಳಿರುವಂತೆ ಒಂದು ಕೈಗಾರಿಕಾ ವಸಾಹತುವನ್ನು (Industrial estate) ಸ್ಥಾಪಿಸಿದ್ದು ಗಮನಾರ್ಹವಾದುದು.

ಅನುಬಂಧ - ೧

ಪ್ರೊ. ಬಿ. ರಾಜಶೇಖರಪ್ಪನವರು ಚನ್ನಗಿರಿ ತಾಲ್ಲೂಕಿನ ಹಿರೇಕೋಗಿಲೂರಿನಲ್ಲಿ ಕ್ರಿ.ಶ. ೧೦೪೭ರ ಒಂದು ಅಪ್ರಕಟಿತ ಶಿಲಾಶಾಸನವನ್ನು ಕಂಡು ಹಿಡಿದು ಪ್ರಕಟಿಸಿದ್ದಾರೆ (ಕರ್ನಾಟಕ ಇತಿಹಾಸ ಅಕಾದೆಮಿಯ **ಇತಿಹಾಸ ದರ್ಶನ** ಸಂಪುಟ ೧೭/೨೦೦೨ ಪುಟ ೫೧-೫೪.) ಮೇಲ್ಕಂಡ ಶಾಸನದಲ್ಲಿ ಬಿದರೂರು - ೫೦೦ನ್ನು ನೊಳಂಬ ಪಲ್ಲವರ ನಾಳ್ಗಾವುಂಡನಾಗಿದ್ದ ಸುಬ್ಬಯ್ಯ (ಒಂದನೆಯ ಶುಭತುಂಗ ೨) ಎಂಬುವನು ಆಳುತ್ತಿದ್ದು, ಈ ಶಾಸನವು ನೊಳಂಬ ರಾಜನ ಕಾಲಕ್ಕೆ ಸೇರಿದ್ದೆಂದು ಉಲ್ಲೇಖಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ನೊಳಂಬಪಲ್ಲವರು ಕ್ರಿ.ಶ. ೧೦೪೮ರಿಂದ ೧೦೫೪ರ ವರೆಗೆ ಕೇವಲ ಆರು ವರ್ಷ ಮಾತ್ರ ಆಳಿದರೆಂದು ಬಿ. ಎಲ್. ರೈಸ್ ಹೇಳಿದ್ದಾರೆ. ಶಾಸನೋಕ್ತ ನೊಳಂಬ ಪಲ್ಲವರ ಸುಬ್ಬಯ್ಯನು ಬಿದಿರೂರು - ೫೦೦ನ್ನು ಆಳುತ್ತಿದ್ದಾಗ ಪೊಂಬುಚದಲ್ಲಿ ಸಾಂತರ ದೊರೆ ಒಂದನೆಯ ತೈಲಪದೇವ (ಕ್ರಿ.ಶ. ೧೦೩೫-೧೦೫೦) ನು ಆಳುತ್ತಿದ್ದನು. ನೊಳಂಬರೂ ಮತ್ತು ಸಾಂತರರೂ ಬದ್ಧವೈರಿಗಳಾಗಿದ್ದು ಎರಡು ಬಾರಿ ಕದನಗಳು ನಡೆದಿವೆ.

ಪ್ರೊ. ರಾಜಶೇಖರಪ್ಪನವರು ಬಿದರೂರು ಎಂಬುದು ಹೊಸನಗರ ತಾ.ನ ಬಿದನೂರು ಎಂದು ಹೇಳಿದ್ದಾರೆ. ಆದರೆ ಬಿದನೂರಿಗೆ ಬಿದರೂರು ಎಂಬ ಇನ್ನೊಂದು ಹೆಸರಿದ್ದರೂ ಇದಕ್ಕಿಂತ ಸ್ಪಷ್ಟವಾಗಿ ಸಾಗರ ತಾ. ಬಿದರೂರು ಪ್ರಾಚೀನ ಚೌಟರು ಆಳಿದ ಸ್ಥಳವಾಗಿದೆ. ಇದರಿಂದ ಬಿದರೂರು ಯಾವುದೆಂಬುದು ಸಂದೇಹ ಬರುವಂತಿದೆ. ಚನ್ನಗಿರಿಯ ೮ ಮತ್ತು ೯ನೆಯ ಶಾಸನಗಳಂತೆ ತ್ರೈಲೋಕ್ಯಮಲ್ಲ ಪಲ್ಲವ ನೊಳಂಬ ಪೆರ್ಮಾಡಿಯು ಚೋಳರ ಸೈನ್ಯವನ್ನು ಓಡಿಸಿ ಬಮ್ಮಿಕೂರಿನಲ್ಲಿ ಬೀಡುಬಿಟ್ಟನೆಂದು ಬಿ. ಎಲ್. ರೈಸ್‌ರವರು ಹೇಳಿದ್ದಾರೆ. ನೊಳಂಬ ಪಲ್ಲವರ ನಾಲ್ಕು ಶಾಸನಗಳು ಕ್ರಮವಾಗಿ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿವೆ. ಹೊನ್ನಾಳಿ ತಾ. ನೇರಲಿಗುಂಡಿಯ ೧೧೯ ನೆಯ ಶಾಸನದಲ್ಲಿ ತ್ರೈಲೋಕ್ಯಮಲ್ಲ ನೊಳಂಬ ಪೆರ್ಮಾಡಿಯು ಕ್ರಿ.ಶ. ೧೦೫೪ರಲ್ಲಿ ಈ ಪ್ರದೇಶದಲ್ಲಿ ಆಳುತ್ತಿದ್ದನೆಂದು ತಿಳಿಯುತ್ತದೆ. ಶಾಸನೋಕ್ತ ಸುಬ್ಬಯ್ಯನು ಕೋಗಿಲೂರಿನಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿದ್ದಾನೆ.

ಶಿವಮೊಗ್ಗ ಜಿಲ್ಲೆಯಲ್ಲಿ ಪಲ್ಲವರ ಆಡಳಿತದ ಬಗ್ಗೆ ಈವರೆಗೂ ಒಂದಾದರೂ ಶಾಸನವು ಲಭ್ಯವಾಗಿರಲಿಲ್ಲ ಅಲ್ಲದೆ ಬಿದರೂರು ೫೦೦ ಎಂಬ ಒಂದು ಆಡಳಿತ ವಿಭಾಗವು ಅಸ್ತಿತ್ವದಲ್ಲಿತ್ತೆಂದು ತಿಳಿದು ಬಂದಿರಲಿಲ್ಲ. ಮೊಟ್ಟ ಮೊದಲ ಬಾರಿ ಪ್ರೊ. ರಾಜಶೇಖರಪ್ಪನವರು ಕೋಗಿಲೂರು ಶಾಸನವನ್ನು ಬೆಳಕಿಗೆ ತಂದು ಇತಿಹಾಸಕ್ಕೆ ಅಪೂರ್ವ ಕೊಡುಗೆ ನೀಡಿದ್ದಾರೆ.

ಅನುಬಂಧ-೨

ಒಂದು ಐತಿಹ್ಯ : ಬಿದನೂರು ನಗರದಲ್ಲಿ ಕುದುರೆ ಬೀರಪ್ಪನ ವೃತ್ತವಿರುವುದನ್ನು ಹಿಂದೆಯೇ ಹೇಳಿದೆ. ಇವನು ಒಬ್ಬ ತುಂಡರಸನಂತಿದ್ದು ಕುದುರೆ ವ್ಯಾಪಾರವನ್ನು ಸಹ ನಡೆಸುತ್ತಿದ್ದನೆಂದು ಸ್ಥಳೀಯರು ಹೇಳುತ್ತಾರೆ. ತಾ. ೧೦.೧೦ ೨೦೦೨ರ ಪ್ರಜಾವಾಣಿಯಲ್ಲಿ ಶಿವಾನಂದಕಳವೆಯವರು ಬರೆದ ಲೇಖನದಲ್ಲಿ ಭಟ್ಕಳದ ಶಿರಾಳಿಯ ಸಮೀಪದ ಒದ್ದೆಗದ್ದೆಯಲ್ಲಿ ಇವನು ಒಂದು ದೇವಾಲಯ ಕಟ್ಟಿಸಿದ್ದನ್ನು ಹೇಳಿದ್ದಾರೆ. ಪ್ರಾಯಶಃ ಇವನು ಬಿದನೂರು ನಗರದ ಅರಸರ ಅಧೀನದ ಒಬ್ಬ ಧೀರೋದತ್ತನಾಯಕನಾಗಿದ್ದು ಕುದುರೆ ವ್ಯಾಪಾರವನ್ನು ನಡೆಸುತ್ತಿರಬೇಕು. ಬಿದನೂರಿನಲ್ಲಿ ಇವನು ದೊಡ್ಡ ಪ್ರಮಾಣದಲ್ಲಿ ತನ್ನ ವಹಿವಾಟು ನಡೆಸುತ್ತಿದ್ದ ಕಾರಣ ಇವನ ಹೆಸರನ್ನು ಇಟ್ಟಿರಬಹುದು. ಆದರೂ ಇದರ ಬಗ್ಗೆ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

(ಬಿದನೂರು ನಗರದ ಕ್ಷೇತ್ರಕಾರ್ಯದಲ್ಲಿ ದಿ. ಶಂಕರನಾರಾಯಣ ರಾಯರು ತಮ್ಮ ಜೀವಿತ ಕಾಲದಲ್ಲಿ ನನ್ನೊಂದಿಗೆ ಬಂದು ಅನೇಕ ಮಾಹಿತಿಗಳನ್ನು ಮತ್ತು ಐತಿಹ್ಯಗಳನ್ನು ತಿಳಿಸಿದ್ದನ್ನು ಮರೆಯುವಂತಿಲ್ಲ.)

(ಕ್ರಿ.ಶ. ೧೯೧೯ನೆಯ ಇಸವಿಯ ಬಿದನೂರಿನ ಗ್ರಾಮದ ನಕ್ಷೆಯನ್ನು ನೀಡಿ ಹೊಸನಕ್ಷೆಯನ್ನು ಸಿದ್ಧಪಡಿಸಲು ಸಹಕರಿಸಿರುವ ಶ್ರೀಯುತ ಬಿ. ಆರ್. ಶ್ರೀಕಂಠಮೂರ್ತಿ ಉಪತಹಶೀಲ್ದಾರ್ ಹೊಸನಗರ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಕೃತಜ್ಞನಾಗಿದ್ದೇನೆ.)

ಆಧಾರಸೂಚಿ ಮತ್ತು ಟಿಪ್ಪಣಿಗಳು


೧. **ಕೆಳದಿ ನೃಪವಿಜಯ.,** (ಸಂ.) ಕೆ. ಗುಂಡಾಜೋಯ್ಸ್., ಪು. ೧೨೧.
೨. Hampa Nagarajiah., *Later Gangas of Mandali thousand.*
೩. **ಕೆಳದಿ ನೃಪವಿಜಯ.,** ಪು. ೧೪೭.
೪. ಇದೇ., ಪು. ೧೨೧.
೫. ಇದೇ ಪು. ೧೫೫.
೬. The earliest find of Satavahana coins in Mysore State recorded by Sir walter Elliot who refers to a parcel of forty three very old looking pieces of a large find in Nagar or Bedanur before Chandravalli (Hayavadana Rao Mysore Gazetter P. 73).
೭. ಕ್ರ.ಸಂ. ಎಂರಡರಂತೆ. ಪು. ೨೯.
೮. **ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ.,** (ಸಂ.) ಡಾ. ಎಂ. ಎಂ. ಕಲಬುರ್ಗಿ, ಬಿ. ಎಸ್. ರಾಮಭಟ್ಟ, ಪು. ೭೨
೯. **ಕೆಳದಿ ನೃಪ ವಿಜಯವು.** ೨೭೫.
೧೦ K.N. Chitnis., *Keladi polity.* p. 179.
೧೧. ಇದೇ. ಪು. ೧೬೧.
೧೨. ಇದೇ.
೧೪. Public Diary No. 42/1764 p. 3 D 3.1 1764 in Keladi Polity p. 242.
೧೫. Buchanan. A Journey P. II p. 383-384 London 1907.
೧೬. ಮಾಸ್ತಿ ವೆಂಕಟೇಶ್ ಐಯ್ಯಂಗಾರ್, **ಚನ್ನಬಸವನಾಯಕ,** ಪು. ೯೭.
೧೭. ಶಿವಮೂರ್ತಿಶಾಸ್ತ್ರಿ., **ಬಿದನೂರು ಪ್ರಭು ಶಿವಪ್ಪನಾಯಕ,** ಪು. ೪೮.

ಡಾ। ಹೆಚ್. ಚಂದ್ರಶೇಖರ*

ಕೆಳದಿ ರಾಜ್ಯದ ರಾಜಧಾನಿಗಳ ಭೂವೈಜ್ಞಾನಿಕ ಅಧ್ಯಯನ

ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾದನಂತರ ಸಮರ್ಥವಾಗಿ ಸುಮಾರು ೨೬೫ ವರ್ಷಗಳ ಕಾಲ ರಾಜ್ಯ ಭಾರ ಮಾಡಿ ಕನ್ನಡ ಸಂಸತಿಯನ್ನು ಉಳಿಸಿ ಬೆಳೆಸಿದ ಕೀರ್ತಿ ಕೆಳದಿ ಅರಸು ಮನೆತನಕ್ಕೆ ಸಲ್ಲುತ್ತದೆ. ಆರಂಭದಲ್ಲಿ ವಿಜಯನಗರ ಸಾಮ್ರಾಟರ ಸಾಮಂತರಾಗಿದ್ದ ಈ ಅರಸು ಮನೆತನದ ಮೊದಲ ಸ್ವತಂತ್ರ ಅರಸು ಚೌಡಪ್ಪನಾಯಕನು. ದಿನಾಂಕ ೮.೧.೧೫೦೦ರಂದು ಕೆಳದಿಯಲ್ಲಿ ಈ ನಾಯಕನಿಗೆ ಪಟ್ಟಾಭಿಷೇಕವಾಯಿತು.[1] ಅಲ್ಲಿಂದ ೧೭೬೩ರವರೆಗೆ ಒಟ್ಟು ೧೭ ಅರಸರು ಮತ್ತು ಇಬ್ಬರು ರಾಣಿಯರು ಈ ಅರಸು ಮನೆತನವನ್ನು ಮನ್ನಡೆಸಿದರು. ಅರಸು ಮನೆತನದ ರಾಜಧಾನಿಯೂ ಆರಂಭದಲ್ಲಿ ಕೆಳದಿಯಲ್ಲಿ ಸ್ಥಾಪನೆಗೊಂಡರೂ ರಕ್ಷಣಾ ದೃಷ್ಟಿಯಿಂದಾಗಿ ಇಕ್ಕೇರಿಗೂ, ಬಿದನೂರಿಗೂ ಮತ್ತು ಕೆಲಕಾಲ ಭುವನಗಿರಿಗೂ (ಕವಲೆದುರ್ಗ) ಅದನ್ನೂ ಸ್ಥಳಾಂತರಿಸಲಾಯಿತು. ರಾಜಧಾನಿಗಳ ಸ್ಥಳಾಂತರ ಪ್ರಕ್ರಿಯೆಗೆ ಆಯಾ ಸ್ಥಳದ ಭೂಮ್ಯಾಕೃತಿ ಲಕ್ಷಣಗಳು (Geomorphological features) ಮತ್ತು ಜಲ ವಿಜ್ಞಾನದ (Hydrological features) ಅಧ್ಯಯನಗಳೇ ನಿರ್ಣಾಯಕ ಅಂಶಗಳಾಗಿವೆ. ಈ ವೈಜ್ಞಾನಿಕ ಅಂಶಗಳ ಅಧ್ಯಯನವೇ ಈ ಸಂಪ್ರಬಂಧದ ವಸ್ತು. ಮುಂದಿನ ಪ್ಯಾರಾಗಳಲ್ಲಿ ಈ ನಾಲ್ಕು ರಾಜಧಾನಿಗಳ ನಿವೇಶನಗಳ ಲಕ್ಷಣಗಳನ್ನು ಆಯಾಕಾಲ ಘಟದ ಹಿನ್ನೆಲೆಯಲ್ಲಿ ಚರ್ಚಿಸಲಾಗುತ್ತದೆ.

ಕೆಳದಿ ಸಂಸ್ಥಾನದ ನಕಾಶೆಯಲ್ಲಿ ಈ ನಾಲ್ಕು ರಾಜಧಾನಿಗಳನ್ನು ಗುರ್ತಿಸಿ ಚಿತ್ರ ೧ ರಲ್ಲಿ ತೋರಿಸಲಾಗಿದೆ. ಈ ನಾಲ್ಕು ರಾಜಧಾನಿಗಳು ಮಲೆನಾಡಿನಲ್ಲಿವೆ ಮತ್ತು ಸಂಸ್ಥಾನದ ಕೇಂದ್ರ ಸ್ಥಾನದಲ್ಲಿರದೆ ಪಶ್ಚಿಮ ಘಟ್ಟಕ್ಕೆ ಹತ್ತಿರ ಅಥವಾ ಪಶ್ಚಿಮ ಘಟ್ಟದಲ್ಲಿವೆ. ಈ ಲಕ್ಷಣ ಈ ನಾಲ್ಕು ರಾಜಧಾನಿಗಳಿಗೆ ಅನ್ವಯವಾಗುತ್ತದೆ. ಮುಂದೆ ಈ ನಾಲ್ಕು ರಾಜಧಾನಿಗಳ ವಿಶಿಷ್ಟ ಭೂವೈಜ್ಞಾನಿಕ ಲಕ್ಷಣಗಳನ್ನು ಆಯಾಕಾಲದ ಐತಿಹಾಸಿಕ ಹಿನ್ನೆಲೆಯಲ್ಲಿ ವಿವರಿಸಲಾಗುವುದು.




ಚಿತ್ರ ೧. ಕೆಳದಿ ಸಂಸ್ಥಾನ ಮತ್ತು ರಾಜಧಾನಿಗಳು


ಕೆಳದಿ (ರೇಖಾಂಶ ೭೫° ೧' : ಅಕ್ಷಾಂಶ ೧೪° ೧೨') ಕ್ರಿ.ಶ. ೧೫೦೦ರಿಂದ ೧೫೧೨ರ ವರೆಗೆ ರಾಜಧಾನಿಯಾಗಿದ್ದ ಈ ಊರು ಒಂದು ಮೈದಾನ ಪ್ರದೇಶದಲ್ಲಿದೆ. ಸಮುದ್ರ ಮಟ್ಟದಿಂದ ೬೦೦ ಮೀಟರ ಎತ್ತರದಲ್ಲಿದೆ. ಸಮೀಪದಲ್ಲಿ ಬೆಟ್ಟಗುಡ್ಡಗಳಿಲ್ಲ. ಸಣ್ಣ ಹಳ್ಳದ ಹೊರತಾಗಿ ಜಲಾಶ್ರಯವಿಲ್ಲ. ಈ ನಗರಕ್ಕೆ ಸುತ್ತಲೂ ಸುಲಭವಾಗಿ ವೈರಿಗಳು ದಾಳಿ ಮಾಡಿಗೆಲ್ಲಬಹುದಾಗಿತ್ತು. ವಿಜಯನಗರದ ಪತನದ ನಂತರ ಉತ್ತರದಿಂದ ಮುಸ್ಲಿಂ ಬಾದಶಾಹರು ಮತ್ತು ದಕ್ಷಿಣದಿಂದ ಮೈಸೂರು ಒಡೆಯರು ಸುಲಭವಾಗಿ ಕೆಳದಿಯನ್ನು ಆಕ್ರಮಿಸಲು ಸಾಧ್ಯವಾಗಿತ್ತು. ಆದ್ದರಿಂದ ಸದಾಶಿವನಾಯಕನ ಕಾಲದಲ್ಲಿ (ಕ್ರಿ.ಶ. ೧೫೧೨) ಈ ಸಮತಟ್ಟಾದ ಮೈದಾನ ಪ್ರದೇಶದಿಂದ ರಾಜಧಾನಿಯನ್ನು ಪಶ್ಚಿಮ ಘಟ್ಟಕ್ಕೆ ಹತ್ತಿರವಾದ ಇಕ್ಕೇರಿಗೆ ಸ್ಥಳಾಂತರಿಸಲಾಯಿತು.[2] (ಚಿತ್ರ ೨)

ಇಕ್ಕೇರಿ (ರೇಖಾಂಶ ೭೫ ೨: ಅಕ್ಷಾಂಶ ೧೪ ೫)

ಕೆಳದಿಯಲ್ಲಿ ರಾಜಧಾನಿಗಿರುವ ಕೊಂಚ ಲಕ್ಷಣಗಳನ್ನು ಇಂದೂ ನೋಡಬಹುದು. ಆದರೆ ಇಕ್ಕೇರಿಗೆ ಹೋದರೆ ಇಕ್ಕೇರಿಯ ಜನರಿಗೇ ಇಲ್ಲಿ ರಾಜಧಾನಿಯ ಕುರುಹುಗಳು ಗೊತ್ತಿಲ್ಲ. ಇಕ್ಕೇರಿಯ ಸುಪ್ರಸಿದ್ಧ ಅಘೋರೇಶ್ವರ ದೇವಸ್ಥಾನ ಮಾತ್ರ ಎಲ್ಲರಿಗೂ ಪರಿಚಿತ. ಈ ಗುಡಿಯ ಹಿಂದೆ ಸಣ್ಣ ಕಾಲುದಾರಿಯಲ್ಲಿ ದಟ್ಟವಾದ ಕಾಡಿನಲ್ಲಿ

* 'ಸಂಗಮ' ಎಮ್. ಐ. ಜಿ. ೬೭, ೬ನೇ ಕ್ರಾಸ್, ೬ನೇ ಮೇನ್, ಕೆಹೆಚ್‌ಬಿ. ಕಾಲೋನಿ, ೨ನೇ ಹಂತ, ಬಸವೇಶ್ವರ ನಗರ, ಬೆಂಗಳೂರು - ೫೬೦ ೦೭೯



A
ಕೆಳದಿ
C
D
ಸಾಗರ
E
ಇಕ್ಕೇರಿ
F
B



ಚಿತ್ರ 3. ಕೆಳದಿ ಮತ್ತು ಇಕ್ಕೇರಿ ಪ್ರದೇಶಗಳ ಭೂಮ್ಯಾಕೃತಿಯ ಅಡ್ಡಛೇದಿತ ಚಿತ್ರಗಳು

ನಡೆದು ಹೋದರೆ ಕೋಟೆಯ ಅವಶೇಷಗಳು ನೋಡಲು ಸಿಗುತ್ತವೆ. ಇಕ್ಕೇರಿ ನಗರ, ಸಮುದ್ರಮಟ್ಟದಿಂದ ೫೮೦ಮೀಟರ ಎತ್ತರ ದಲ್ಲಿದ್ದರೆ ಪಶ್ಚಿಮಕ್ಕೆ ಎತ್ತರ ಹೆಚ್ಚುತ್ತಾ ಹೋಗಿ ಸುಮಾರು ೭೦೦ ಮೀಟರ ಔನ್ನತ್ಯವನ್ನು (Height) ಹೊಂದಿರುವ ಭೌಗೋಳಿಕ ಹಿನ್ನೆಲೆಯನ್ನು ಹೊಂದಿದೆ. ಅಂದರೆ ರಾಜಧಾನಿಯು ಪಶ್ಚಿಮ ದಿಕ್ಕಿನಿಂದ ಸುರಕ್ಷಿತವಾಗಿದೆ. ಆದರೆ ಉಳಿದ ದಿಕ್ಕಿನಿಂದ ಅರಕ್ಷಿತವಾಗಿದೆ. ಆದ್ದರಿಂದ ಈ ಕೋಟೆಯ ಯೋಜಕರು ಕೋಟೆಯ ಸುತ್ತಲೂ (ಪೂರ್ವ ಮತ್ತು ಉತ್ತರದಲ್ಲಿ) ಕಂದಕವನ್ನು ತೋಡಿ ಪಶ್ಚಿಮದಿಂದ ಹರಿಯುವ ಹಳ್ಳವನ್ನು ತಿರುಗಿಸಿ ಈ ಕಂದಕಕ್ಕೆ ನೀರು ಹರಿದು ಬರುವಂತೆ ಮಾಡಿದ್ದಾರೆ.

ಕೋಟೆಯ ಹೊರ ಒಳಗುಗಳಲ್ಲಿ ದಟ್ಟವಾಗಿ ಕುರುಚಲ ಮುಳ್ಳಿನ ಗಿಡಗಳು ಮತ್ತು ದೊಡ್ಡಮರಗಳು ಬೆಳೆದಿರುವುದರಿಂದ ರಾಜಧಾನಿಯ ಅರಮನೆ ಇತ್ಯಾದಿ ಸ್ಥಳಗಳನ್ನು ಸ್ಪಷ್ಟವಾಗಿ ಚಿತ್ರಿಸಲು ಸಾಧ್ಯವಾಗುವುದಿಲ್ಲ. ಆದರೆ ನಾನು ಕ್ಷೇತ್ರಕಾರ್ಯ ಕೈಗೊಂಡಾಗ ಜಂಬಿಟ್ಟಿಗೆಯಲ್ಲಿ ತೋಡಲಾದ ಒಂದು ಆಳವಾದ ತೋಡು ಬಾವಿಯನ್ನು ಮತ್ತು ಗಚ್ಚಿನಿಂದ ಲೇಪಿಸಲ್ಪಟ್ಟ ಕೆಲ ಮೋಟು ಗೋಡೆಗಳನ್ನು ಗುರ್ತಿಸಲು ಸಾಧ್ಯವಾಯಿತು. ಈ ನಿವೇಶನವನ್ನು ಆರಿಸುವಾಗ ಪಶ್ಚಿಮ ಘಟ್ಟದ ರಕ್ಷಣೆ ಮತ್ತು ಯಥೇಚ್ಛವಾಗಿ ಅಂತರ್ಜಲವನ್ನು ಸಂಗ್ರಹಿಸಿಕೊಂಡು, ಪುನಃ ನೀಡುವ ಗುಣವುಳ್ಳ ಜಂಬಿಟ್ಟಿಗೆಯನ್ನು ಪರಿಗಣಿಸಿರುವದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಎರಡು ಅಂಶಗಳು ರಾಜಧಾನಿಗೆ ಬೇಕಾದ ನೈಸರ್ಗಿಕ ರಕ್ಷಣೆ ಮತ್ತು ಜಲವನ್ನು ಪೂರೈಸಿದವು ಎಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ. ಕೆಳದಿ ಮತ್ತು ಇಕ್ಕೇರಿಯ ಪ್ರದೇಶಗಳ ಅಡ್ಡ ಛೇದಿತ ಚಿತ್ರಗಳು (Cross Profiles-ಚಿತ್ರ ೩) ಮೇಲೆ ವಿವರಿಸಲಾದ ಭೂಮ್ಯಾಕೃತಿ ಲಕ್ಷಣಗಳನ್ನು ಸ್ಪಷ್ಟವಾಗಿ ವಿಷದೀಕರಿಸುತ್ತವೆ.




ಬಿದನೂರು (ರೇಖಾಂಶ ೭೫° ೨'೩೦'': ರೇಖಾಂಶ ೧೪° ೪೯')


ಇಕ್ಕೇರಿ ನಗರವೂ ಸುಲಭವಾಗಿ ಮೂರು ದಿಕ್ಕುಗಳಿಂದ ದಾಳಿಗೊಡಪಡುವದರಿಂದ ಶತ್ರುಗಳಿಂದ ಹಾಳಾದ ನಂತರ (೧೬೩೮) ವೀರಭದ್ರ ನಾಯಕನ ಕಾಲದಲ್ಲಿ (ಕ್ರಿ.ಶ. ೧೬೩೯) ರಾಜಧಾನಿಯನ್ನು ಬಿದನೂರಿಗೆ ಸ್ಥಳಾಂತರಿಸಲಾಯಿತು.[೩] ಬಿದನೂರಿನ ಪ್ರದೇಶದ ಭೂಮ್ಯಾಕೃತಿ, ನದಿಗಳು ದಟ್ಟವಾದ ಕಾಡು ಈ ಆಯ್ಕೆಗೆ ಕಾರಣವಾಗಿ ಕೆಳದಿ ಸಂಸ್ಥಾನವು ನಿರಾತಂಕವಾಗಿ ಬೆಳೆದು ಸಮೃದ್ಧ ರಾಜ್ಯವಾಗಲು ಕಾರಣಗಳಾದವು.

ಬಿದನೂರು ಕೋಟೆ (ಇಂದಿನ ನಗರ) ಸಮುದ್ರ ಮಟ್ಟದಿಂದ ೬೧೫ ಮೀಟರ ಎತ್ತರದಲ್ಲಿದೆ. ಇದು ಸುತ್ತಲಿನ ಪ್ರದೇಶದಿಂದ


A-B ದಿಕ್ಕಿನಲ್ಲಿ ಬಿದನೂರು ಕೋಟೆ ಪ್ರದೇಶ



C-D ದಿಕ್ಕಿನಲ್ಲಿ ಬಿದನೂರು ಕೋಟೆ ಪ್ರದೇಶ




ಚಿತ್ರ ೨: ಬಿದನೂರು ಪ್ರದೇಶದ ಉದ್ದ ಛೇದಿತ ಚಿತ್ರಗಳು




ಚಿತ್ರ ೮. ಕವಲೆದುರ್ಗದ ಭೂಪ್ರಾಕೃತಿಯ ಲಕ್ಷಣಗಳು

ಸುಮಾರು ೧೦೦ ಮೀ. ಎತ್ತರದಲ್ಲಿರುವುದರಿಂದ ವೈರಿ ಸೈನ್ಯದ ಚಲನವಲನಗಳನ್ನು ನಿರೀಕ್ಷಿಸಲು ಅನುಕೂಲಕರ ನಿವೇಶನವಾಗಿದೆ. ಈ ಕೋಟೆ ಪ್ರದೇಶಕ್ಕೆ ಹೋಗುವ ಹಾದಿ ಕಡಿದಾಗಿರುವುದರಿಂದ (Steep Gradient) ಅನುಭವ ಇಲ್ಲದ ವೈರಿ ಸೈನ್ಯಕ್ಕೆ ಅತ್ಯಂತ ಕಠಿಣದ ಹಾದಿ ಆಗುತ್ತದೆ. ಅಲ್ಲದೆ ಇಂದಿಗೂ ದಟ್ಟವಾದ ಅರಣ್ಯ ಇದೆ. ಬಿದನೂರನ್ನು ಉತ್ತರದಿಂದ ಅಥವಾ ಈ ಶಾನ್ಯದಿಕ್ಕಿನಿಂದ ತಲುಪಬೇಕಾದರೆ ದೊಡ್ಡ ಹಳ್ಳಗಳನ್ನಲ್ಲದೆ ಶರಾವತಿ ನದಿಯನ್ನು ದಾಟಿ ಬರಬೇಕು. ದಕ್ಷಿಣದಿಂದ ಅಥವಾ ನೈಋತ್ಯ ದಿಕ್ಕಿನಿಂದ ಬಿದನೂರನ್ನು ತಲುಪಬೇಕಾದರೆ **ಕಲಾವತಿ** ನದಿ ಮತ್ತು ಅದರ ಉಪನದಿಗಳನ್ನು ದಾಟಬೇಕಾಗುತ್ತದೆ (ಚಿತ್ರ. ೪). ಬಿದನೂರು

ಚಿತ್ರ. 2: ಕವಲೆದುರ್ಗ ಕೋಟೆ ಪ್ರದೇಶದ ಅಡ್ಡ ಛೇದಿತ ಚಿತ್ರಗಳು.





ಕೋಟೆಯ ಪ್ರದೇಶದ ಅಡ್ಡ ಛೇದಿತ ಚಿತ್ರಗಳನ್ನು (ಚಿತ್ರ. ೫) ಸೂಕ್ಷ್ಮವಾಗಿ ಪರಿಶೀಲಿಸಿದಾಗ ಎಂಥ ಕಠಿಣವಾದ ಹಾದಿಯನ್ನು ವೈರಿ ಕ್ರಮಿಸಬೇಕಾಗುತ್ತದೆಂಬ ಅಂಶ ಸ್ಪಷ್ಟವಾಗುತ್ತದೆ.

ಕೋಟೆಯು ಜಂಬಿಟ್ಟಿಗೆಯ ಪ್ರಸ್ಥಭೂಮಿಯ ಮೇಲಿರುವುದರಿಂದ ಮೇಲಿನಿಂದ ಸುರಿವ ಮಳೆ ನೀರು ಅತಿ ಹೆಚ್ಚಿನ ಪ್ರಮಾಣದಲ್ಲಿ ತುಲನಾತ್ಮಕವಾಗಿ ಬೇಗ ನೆಲದಾಳಕ್ಕೆ ಇಳಿದು ಸಂಗ್ರಹಗೊಳ್ಳುತ್ತದೆ. ಈ ಸಂಗ್ರಹಿತ ಜಲವನ್ನು ಬಾವಿಗಳನ್ನು ತೋಡಿ ಉಪಯೋಗಿಸಬಹುದು. ಈ ಮಾತಿಗೆ ಸಾಕ್ಷಿಯಾಗಿ ಕೋಟೆಯೊಳಗೆ ಮೂರು ಬಾವಿಗಳಿವೆ. ಈ ಬಾವಿ ನೀರನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಅಲ್ಲಿ ಪುರಾತತ್ವ ಅವಶೇಷಗಳಿವೆ. ಅಷ್ಟೇ ಅಲ್ಲದೆ ಕೋಟೆಗೆ ಹೊಂದಿಕೊಂಡೇ ಹರಿಯುತ್ತಿದ್ದ ಹಳ್ಳಕ್ಕೆ ಕಟ್ಟೆ ಕಟ್ಟಿ ಕೆರೆಯನ್ನು ನಿರ್ಮಿಸಿ ಕಂದಕಕ್ಕೆ ನೀರು ಬಿಡುವ ವ್ಯವಸ್ಥೆಯನ್ನು

ಮಾಡಲಾಗಿತ್ತು. ಈ ಎಲ್ಲಾ ಬಗೆಯ ನೈಸರ್ಗಿಕ ಅನುಕೂಲತೆಗಳನ್ನು ಬಳಸಿಕೊಂಡದ್ದರಿಂದ ಬಿದನೂರು ಅಂದಿನ ಕಾಲದಲ್ಲಿ ಸುಪ್ರಸಿದ್ಧ ಸುಂದರ ನಗರವಾಗಿ ಬೆಳೆಯಿತು.

ಭುವನಗಿರಿ (ರೇಖಾಂಶ ೭೫° ೭'' ಅಕ್ಷಾಂಶ ೧೪° ೪೩')

ಬಹುಶಃ ಕೆಳದಿ ಅರಸರಿಗೆ ತಮ್ಮ ಸಂಪತ್ತಿನ ಮೇಲೆ ವೈರಿಗಳ ಕೆಟ್ಟ ಕಣ್ಣಿರುವದು ಗೊತ್ತಿರಬೇಕು. ತುರ್ತು ಪರಿಸ್ಥಿತಿಗಾಗಿ ಬಿದನೂರಿಗಿಂತಲೂ ಹೆಚ್ಚು ಸುರಕ್ಷಿತವಾದ ಸ್ಥಳದ ಅವಶ್ಯಕತೆಯನ್ನು ಅವರು ಅರಿತಿರಬೇಕು. ಆದ್ದರಿಂದ ಈಗ ಕವಲೆದುರ್ಗವೆಂದು ಕರೆಯಲ್ಪಡುತ್ತಿರುವ ಭುವನಗಿರಿಯನ್ನು (ಉಪ) ರಾಜಧಾನಿಯನ್ನಾಗಿ ಆರಿಸಿಕೊಂಡರು. ಮೂಲತಃ ಈ ಭುವನಗಿರಿಯನ್ನು ಕಟ್ಟಿದವರು ಕೆಳದಿ ಅರಸರಲ್ಲ. ವೆಂಕಟಪ್ಪನಾಯಕನು, ಇಲ್ಲಿದ್ದ ತೊಲೆ ತಿಮ್ಮ ಮುಂಡಿಗೆ ತಿಮ್ಮ ಎಂಬುವರನ್ನು ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡ ನಂತರ ಕೆಳದಿ ಅರಸರು ಅದರಲ್ಲಿ ವಿಶೇಷವಾಗಿ ಚೆನ್ನಮ್ಮಾಜಿ ಇದನ್ನು ಇನ್ನಷ್ಟು ಸುಭದ್ರಗೊಳಿಸಿದ್ದಲ್ಲದೆ ಸುಂದರವಾದ ಅರಮನೆ ಮತ್ತು ದೇವಾಲಯಗಳನ್ನು ಕಟ್ಟಿಸಿದರು.[೪]

ಕವಲೆದುರ್ಗವು ಸಮುದ್ರ ಮಟ್ಟದಿಂದ ೯೨೭ ಮೀಟರ್ ಎತ್ತರದಲ್ಲಿದೆ. ಆದರೆ ಅದರ ಸುತ್ತ ಮುತ್ತಲಿನ ಪ್ರದೇಶ ಸಮುದ್ರ ಮಟ್ಟದಿಂದ ಕೇವಲ ೬೦೦ ಮೀಟರ ಎತ್ತರದಲ್ಲಿದೆ. ಅಂದರೆ ಕೇವಲ ಒಂದೆರಡು ಕೀ.ಮೀ. ಕ್ರಮಿಸುವದರಲ್ಲಿಯೇ ೩೨೭ ಮೀಟರ ಎತ್ತರವನ್ನು ಏರಬೇಕಾಗುತ್ತದೆ (ಚಿತ್ರ ೫,೬). ಇದು ಅತ್ಯಂತ ಕಡಿದಾದ (Very Steep Gradient) ಪ್ರದೇಶ. ದಟ್ಟವಾದ ಕಾಡು. ಹೀಗಾಗಿ ಇಂದಿಗೂ ಈ ಕೋಟೆಯನ್ನು ಹತ್ತುವುದೊಂದು ಸಾಹಸದ ಕೆಲಸ. ಈ ಕೋಟೆಯನ್ನು ಯಾವುದೇ ದಿಕ್ಕಿನಿಂದಲೂ ತಲುಪುವದು ಅಂದು ಅತ್ಯಂತ ಕಠಿಣದ ಕೆಲಸವಾಗಿತ್ತು. ಕಿರಿದಾದ ಕಣಿವೆದಾರಿ ದುರ್ಗಮದ ಹಾದಿ. ಇದೊಂದು ಕಣಶಿಲೆಯ ಬೆಟ್ಟದ ಪ್ರದೇಶ. ಕೋಟೆಯೊಳಗೆ ಮಳೆಯ ನೀರನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿತ್ತು. ನೀರನ್ನು ಅರಮನೆಗೆ ಕೊಳವೆ ಮೂಲಕ ಸರಬರಾಜು ಮಾಡುವ ವ್ಯವಸ್ಥೆಯ ಕುರುಹುಗಳಿವೆ. ಅರಮನೆಯ ಸೈಜುಗಲ್ಲುಗಳು ಸುಂದರ ಕೆತ್ತನೆಯ ಅಧಿಷ್ಠಾನಗಳನ್ನು ಅಲ್ಲಲ್ಲಿ ನೋಡಬಹುದು. ದೊಡ್ಡ ದೊಡ್ಡ ಮರಗಳು ದಟ್ಟವಾಗಿರುವುದರಿಂದ ಇಲ್ಲಿ ಕ್ಷೇತ್ರ ಮಾಡುವದು ಸದ್ಯಕ್ಕೆ ಅಸಾಧ್ಯದ ಕೆಲಸ. ನಾಲ್ಕು ಸುತ್ತಿನ ಕೋಟೆಯನ್ನು ಹತ್ತಿ ಒಳಗೆ ಪ್ರವೇಶ ಮಾಡಬೇಕು. ಪ್ರತಿಹಂತವೂ ಹೆಚ್ಚಿನ ಔನ್ನತ್ಯವನ್ನು ಪಡೆಯುತ್ತಾ ಹೋಗುತ್ತದೆ. ಈ ಕೋಟೆ ಪಶ್ಚಿಮಘಟ್ಟದ ತುದಿಯಲ್ಲಿದೆ ಎಂದರೆ ಸರಿಯಾದೀತು. ಈ ಪ್ರದೇಶದ ಪಶ್ಚಿಮಕ್ಕೆ ಕರಾವಳಿ ಪ್ರದೇಶ ಆರಂಭವಾಗುತ್ತದೆ. ಅಂದರೆ ಪಶ್ಚಿಮದಿಂದ ಈ ಕೋಟೆಯ ಮೇಲೆ ದಾಳಿ ಮಾಡಲು ಸುಮಾರು ೬೨೭ ಮೀಟರ ಔನ್ನತ್ಯವನ್ನು ಕೇವಲ ಒಂದೆರಡು ಕೀ. ಮೀ. ಅಂತರದಲ್ಲಿಯೇ ಕ್ರಮಿಸಬೇಕು. ಇದು ಯಾವ ಸೈನ್ಯಕ್ಕೂ ಅಸಾಧ್ಯವಾದ ಕೆಲಸ. ಈ ಭೂಮ್ಯಾಕೃತಿ ವೈಶಿಷ್ಟ್ಯತೆಯಿಂದಾಗಿಯೇ ಇಡೀ ಭಾರತವನ್ನು ಗೆದ್ದ ಔರಂಗಜೇಬನ ಸೈನ್ಯ ೧೯೬೦-೯೮ ರಲ್ಲಿ ನಡೆದ ಯುದ್ಧದಲ್ಲಿ ಕೆಳದಿಯವರಿಂ ದ ಪರಾಭವಗೊಂಡಿತು.

ಉಪಸಂಹಾರ ಮತ್ತು ಸಲಹೆಗಳು

ಮೇಲೆ ಚರ್ಚಿಸಲಾದ ಭೂವೈಜ್ಞಾನಿಕ ಲಕ್ಷಣಗಳೇ ಕೆಳದಿ ಅರಸರನ್ನು ತಮ್ಮ ರಾಜಧಾನಿಯನ್ನು ಕೆಳದಿ, ಇಕ್ಕೇರಿ, ಬಿದನೂರು ಮತ್ತು ಕವಲೆದುರ್ಗಕ್ಕೆ ಸ್ಥಳಾಂತರಿಸಲು ಪ್ರೇರೇಪಿಸಿದ ಕಾರಣಗಳು. ಇದರಿಂದ ಕೆಳದಿಯಲ್ಲಿ ದೇವಸ್ಥಾನಗಳ ಪುನರುತ್ಥಾನ ಮತ್ತು ಸಂರಕ್ಷಣಾ ಕೆಲಸಗಳಾಗಿವೆ. ಬಿದನೂರಿನಲ್ಲಿ ಪುನರುತ್ಥಾನದ ಕೆಲಸ ಸ್ವಲ್ಪ ಮಟ್ಟಿಗೆ ಆಗಿದೆ. ಆದರೆ ಸಂರಕ್ಷಣಾ ಕೆಲಸಗಳು ಮುಂದುವರೆಯಲಿಲ್ಲ. ಇಕ್ಕೇರಿ ಮತ್ತು ಕವಲೆದುರ್ಗದಲ್ಲಿ ಬೆಳೆದಿರುವ ಗಿಡಮರಗಳನ್ನು ಕಡಿದು ಉತ್ಖನನ ನಡೆಸಿದರೆ ಹಲವಾರು ಹೊಸ ಸಂಗತಿಗಳು ಖಂಡಿತವಾಗಿ ಸಿಗುತ್ತವೆ. ಹಂಪಿಯಲ್ಲಿ ನಡೆದ ರೀತಿಯಲ್ಲಿ ಇಲ್ಲಿಯೂ ಕೆಲಸಗಳು ನಡೆಯಬೇಕು. ಆದರೆ ಅರಣ್ಯ ಇಲಾಖೆಯ ಕಾನೂನಿನ ತೊಡಕುಗಳು ಅಡ್ಡಿಯಾಗಬಹುದು. ಈ ತೊಡಕುಗಳನ್ನು ನಿವಾರಿಸಿ ಪುನರುತ್ಥಾನ ಮತ್ತು ಸಂರಕ್ಷಣಾ ಕಾರ್ಯಗಳು ಜರುಗಿದರೆ ನಮ್ಮ ನಾಡಿನ ಒಂದು ಉಜ್ವಲ ಇತಿಹಾಸವನ್ನು ಹಾಗೂ ನಮ್ಮ ಪೂರ್ವಜರ ವೈಜ್ಞಾನಿಕ ಮತ್ತು ಎಂಜಿನಿಯರಿಂಗ್ ಕೌಶಲ್ಯವನ್ನು ಪುನರಾವಲೋಕಿಸಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಡಾ|| ಕೆಳದಿ ವೆಂಕಟೇಶ ಜೋಯಿಸ್., (೨೦೦೦), **ಕೆಳದಿ ಸಂಸ್ಥಾನ**, ಪುಟ ೪೧ ಮತ್ತು ೪೧ ಶ್ರೀ ಸರಸ್ವತಿ ಸೇವಾ ಸಮಿತಿ, ಕೆಳದಿ.

೨. ಅದೇ., **ಕೆಳದಿ ಸಂಸ್ಥಾನ**.

೩. ಬಿ. ಎಸ್. ರಾಮಭಟ್ಟ., (೧೯೯೪), 'ಕೆಳದಿ ಸಂಸ್ಥಾನದ ರಾಜಧಾನಿಗಳು ಮತ್ತು ನಗರಗಳು', **ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ**, (ಸಂ.) - ಡಾ|| ಎಂ. ಎಂ. ಕಲಬುರ್ಗಿ ಮತ್ತು ಬಿ. ಎಸ್. ರಾಮಭಟ್ಟ, ಪುಟ. ೭೧, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ಶ್ರೀ ಮುರುಘರಾಜೇಂದ್ರ ಮಠ, ಆನಂದಪುರ.

೪. ಅದೇ., ೧೯೯೪, ಗ್ರಂಥದ ಪುಟ. ೮೦.

ಹರಿಹರ ಶ್ರೀನಿವಾಸರಾವ್*

ಶಿವತತ್ತ್ವ ರತ್ನಾಕರದಲ್ಲಿ ಜಲಶಾಸ್ತ್ರೀಯ ಮಾಹಿತಿಗಳು

ವೇದಗಳು, ರಾಮಾಯಣ, ಮಹಾಭಾರತ, ಚಾಣಕ್ಯನ ಅರ್ಥಶಾಸ್ತ್ರ, ವರಹಾಮಿಹಿರನ ಬೃಹತ್ ಸಂಹಿತೆ, ಚಾವುಂಡರಾಯನ ಲೋಕೋಪಕಾರ, ಮುಮ್ಮಡಿ ಸೋಮೇಶ್ವರನ ಮಾನಸೋಲ್ಲಾಸ, ವಾದಿರಾಜರ ತೀರ್ಥಪ್ರಬಂಧ, ಇತ್ಯಾದಿ ಕಾವ್ಯವರ್ಣನೆಗಳಲ್ಲಿ ಭಾರತದ ನದಿ-ನದ, ಜಲಾಕರಗಳ ಬಗ್ಗೆ ನೀರಿನ ವಿವಿಧೋದ್ದೇಶಗಳ ಬಳಕೆಯ ಬಗ್ಗೆ ಸಾಕಷ್ಟು ವಿಪುಲ "ದೇಶೀಯ ಮಾಹಿತಿ" ಲಭ್ಯವಿದೆ. ಮಾನಸೋಲ್ಲಾಸದ ಇನ್ನೊಂದು ವಿಸ್ತೃತರೂಪವಾದ ವಿಶ್ವಕೋಶ "ಶಿವತತ್ವರತ್ನಾಕರ" ಮಲೆನಾಡಿನಲ್ಲಿ ಇಂದಿನಂತೆ ನೀರಿಗೆ ಕೊರತೆ ಇಲ್ಲದಿದ್ದ ಕಾಲದಲ್ಲಿಯೂ ತನ್ನ ಪರಿಸರ, ಪರಂಪರೆ, ಅನುಭವಗಳ ಗಣಿಯಿಂದ ಮೋಡದ ಉತ್ಪತ್ತಿ, ಅವುಗಳು ಮಳೆ ಸುರಿಸುವ ಕಾಲವನ್ನು "ಮೇಘಗರ್ಭ ವರ್ಣನೆ"ಯಿಂದ ಪ್ರಾರಂಭಿಸಿ, ಭಾರತದ ನದಿನದಾದಿಗಳು, ವಿವಿಧ ತೀರ್ಥಗಳು, ಜಲದುರ್ಗ, ಕೊಳ, ತಟಾಕ ನಿರ್ಮಾಣ, ಸ್ನಾನಭೋಗ ವರ್ಣನೆ, ಊಟದಲ್ಲಿ ಕುಡಿವನೀರಿನ ಮಹತ್ವ, ತಯಾರಿಸುವ ವಿಧಾನ, ಸಂಗ್ರಹಿಸುವ ರೀತಿಗಳನ್ನು ಸಮಕಾಲೀನ ಪ್ರಜ್ಞೆಯೊಂದಿಗೆ ಹೋಲಿಸಿ ಸಂಗ್ರಹಿಸಿ ಕೆಳದಿ ಬಸವರಾಜನು ಕೊಟ್ಟಿದ್ದಾನೆ. ಈ ಐತಿಹಾಸಿಕ ಗ್ರಂಥದಲ್ಲಿ ಸಂಗ್ರಹಿಸಿರುವ ಅನೇಕ ಜಲ ಸಂಬಂಧದ ಮಾಹಿತಿಗಳನ್ನು ಆಧರಿಸಿಯೇ ಜಲದುರ್ಗ ನಿರ್ಮಾಣವು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹತ್ತಿರದ ಇಕ್ಕೇರಿಯಲ್ಲಿ ಸದಾಶಿವಸಾಗರ ನಗರವನ್ನು ನಿರ್ಮಿಸಿ, ಅಲ್ಲಿ ಸುಂದರವಾದ ಜಲಕ್ರೀಡಾ ಪ್ರಸಾದವನ್ನು ನಿರ್ಮಿಸಿದ್ದಾಗಿ ೬ನೇ ಕಲ್ಲೋಲದ ೧೩ನೇ ತರಂಗದ ೧೬೪, ೧೬೫ನೇ ಶ್ಲೋಕಗಳಲ್ಲಿ ಉಲ್ಲೇಖಿಸಿದ್ದಾನೆ. ಇದೇ ರೀತಿ ವರದಾನದಿ ದಡದಲ್ಲಿ ವಿಶ್ವನಾಥಪುರ ಎಂಬ ಹೆಸರಿನ ಅಗ್ರಹಾರ ನಿರ್ಮಿಸಿದ್ದಾಗಿಯೂ ತಿಳಿದು ಬರುತ್ತದೆ. ಇದಲ್ಲದೇ ಕೆಳದಿ ಅರಸರು ಅನೇಕ ಕೆರೆಕಟ್ಟೆ ಉದ್ಯಾನಗಳನ್ನು ನಿರ್ಮಿಸಿದ್ದು, ಅವುಗಳಲ್ಲಿ ಕೆಲವು ಇನ್ನೂ ಶುದ್ಧಜಲದ ಜೀವಂತ ಆಕರಗಳಾಗಿವೆ. ಈ ಹಿನ್ನೆಲೆಯಲ್ಲಿ ಅವನ್ನು ಇಂದಿನ ವೈಜ್ಞಾನಿಕ ದೃಷ್ಟಿಕೋನಗಳನ್ನು ಅಳವಡಿಸಿ ಅವುಗಳ ಉಪಯುಕ್ತತೆಯನ್ನು ಇನ್ನೂ ಹೆಚ್ಚಿಸಿಕೊಳ್ಳಬಹುದಾಗಿದೆ.

ಶಿವತತ್ವರತ್ನಾಕರದ ಪ್ರಸ್ತುತತೆ: ಬರದಿಂದ ಬವಣೆ ಪಡುತ್ತಿರುವ ಇಂದಿನ ದಿನಗಳಲ್ಲಿ ಒಬ್ಬ ಸಾಮಾನ್ಯ ಮನುಷ್ಯನ ಬಳಕೆಗೆ ದೊರೆವ ನೀರಿನ ಪ್ರಮಾಣ ದಿನ ಒಂದಕ್ಕೆ ೨೫ರಿಂದ ೩೦ ಲೀಟರ್ ಮಾತ್ರ. ಕೆಲವು ಜಿಲ್ಲೆಗಳಲ್ಲಿ ಇದರ ಪ್ರಮಾಣ ಕೇವಲ ೮ ಲೀಟರ್; ಇದರಲ್ಲಿ ಮನುಷ್ಯನ ಅತ್ಯಂತ ಅವಶ್ಯಕತೆ ಎನಿಸಿರುವ ಸ್ನಾನ, ಪಾತ್ರೆ, ಬಟ್ಟೆ ತೊಳೆಯುವಿಕೆ, ಕುಡಿವ ನೀರು ಎಲ್ಲಾ ಸೇರಿದೆ! ನೀರಿನ ಅಭಾವ ಎಷ್ಟಿದೆ ಎಂದರೆ ತಲಕಾವೇರಿ ತೀರ್ಥೋದ್ಭವ ಸ್ಥಳದಿಂದ ಕೆಲವೇ ಮೀಟರ್ ಅಂತರದಲ್ಲಿ ಕುಡಿವ ನೀರಿಗಾಗಿ ಕೊಳವೆಬಾವಿ ಕೊರೆಯಲಾಗಿದೆ. ಬಸವರಾಜನು ಹೇಳುವ ವಿಧಾನಗಳಿಂದ ಇಂದಿಗೂ ಹೆಚ್ಚು ವೆಚ್ಚವಿಲ್ಲದೆ ಕುಡಿವ ನೀರನ್ನು ತಯಾರಿಸುವಿಕೆ, ಜಲಸೆಲೆ ಗುರ್ತಿಸುವ ಬಗೆ, ಇತ್ಯಾದಿ ಮಹತ್ವದ ಸಂಗತಿಗಳ ಬಗ್ಗೆ ಈಗ ಪರಿಶೀಲನೆ.

ಒಂದು ಗಾದೆ ಅಥವಾ ಘೋಷಣಾ ವಾಕ್ಯದಂತೆ ಕಾಣುವ ಈ ಸಾಲುಗಳನ್ನು ನೋಡಿ:

ಒಂದು ಕೊಳ ಹತ್ತು ಬಾವಿಗೆ ಸಮ;
ಒಂದು ಕೆರೆ ಹತ್ತು ಕೊಳಗಳಿಗೆ ಸಮ.
ಒಬ್ಬ ಮಗ ಹತ್ತುಕೆರೆಗೆ ಸಮ;
ಒಂದು ಮರ ಹತ್ತು ಮಕ್ಕಳಿಗೆ ಸಮ?

ವಿಜ್ಞಾನಿಗಳ ಪ್ರಕಾರ ಒಂದು ಮರದ ಬೆಲೆ ೩೩೦ ಕೋಟಿ ರೂಪಾಯಿಗಳು. ಒಬ್ಬ ಮನುಷ್ಯನಿಗೆ ೮೦ ವರ್ಷ ಉಸಿರಾಡಲು ಬೇಕಾಗುವಷ್ಟು ಆಮ್ಲಜನಕವನ್ನು ಒಂದು ಮರ ಸೃಷ್ಟಿಸುತ್ತದೆ.

ಆಧುನಿಕ ಜಲ ವಿಜ್ಞಾನವು ಜಲೋತ್ಪತ್ತಿ (Hydrological Cycle) ಜಲಚಕ್ರ, ಜಲಾಕರಗಳು, ಇದರಲ್ಲಿ ಭೂಮೇಲ್ಪದರದ ಮೇಲೆ ದೊರಕುವ ನೀರಿನ ವಿವಿಧ ಬಗೆಗಳು, ಎಂದರೆ ಕೆರೆ ಕುಂಟೆ, ಕಟ್ಟೆ, ನದಿ, ಸರೋವರಗಳು, ಭೂಮಿಯ ಒಳಗೆ ದೊರಕುವ ನೀರು- ಉದಾಹರಣೆ ಬಾವಿನೀರು ಇತ್ಯಾದಿ ಇಂತಹ ನೀರಿನ ಗುಣ ಪರೀಕ್ಷೆ, ಮನರಂಜನೆ, ಸ್ನಾನಾದಿಗಳಿಗೆ, ವ್ಯವಸಾಯ, ಕೋಟೆ ಸಂರಕ್ಷಣೆ, ಆರೋಗ್ಯಕ್ಕೆ ಬೇಕಾಗುವ ನೀರನ್ನು ತಯಾರಿಸುವ ಬಗೆಗಳನ್ನು ವಿಸ್ತಾರವಾಗಿ ದಾಖಲಿಸಿದ್ದಾನೆ ಈ ಕೃತಿಯ ಕರ್ತೃ. ಇಲ್ಲಿ ತಂದೆಯಾದ ಬಸವೇಂದ್ರ ಭೂಪತಿ, ತನ್ನ ಮಗನ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಲೋಕಜ್ಞಾನವನ್ನು ದಾಖಲಿಸಿದ್ದಾನೆ.

ಮೋಡಗಳ ಉತ್ಪತ್ತಿ

"ಜಲ ಧೂಮಾಗ್ನಿ ವಾಯೂನಾಂ ಸಂಯೋಗೌ ತ್ರ್ಯಂಭವಂತಿತೇ।

* 'ಸಮರ್ಥ' ೩೫/೧೫ ,ಹೊಸ ವಿಕಾಸ್ ಶಾಲೆ ಎದುರು, ೫ನೇ ಬ್ಲಾಕ್, ೩ನೇ ಫೇಸ್, ಬನಶಂಕರಿ ೩ನೇ ಹಂತ, ಬೆಂಗಳೂರು - ೫೬೦ ೦೮೫

ವಾರಿಣೈವತುವರ್ಷಂತಿ" ಮೋಡಗಳು ನೀರು, ಧೂಮ, ಅಗ್ನಿ ವಾಯುಗಳ ಸಂಯೋಗದಿಂದ ಉತ್ಪನ್ನವಾಗುತ್ತವೆ. ಅವು ಮಳೆಯ ರೂಪದಲ್ಲಿ ನೀರನ್ನು ಸುರಿಸುತ್ತವೆ.[೨]

ಅಪಾಂ ನಿಧಾನಂ ಜೀಮೂತಾಃಷಣ್ಮಾಸಾನಿಹ ಸುವುತಾಃ||
ವರ್ಷಂತಿ ವಾರಿ ಜಗತಾಂ ಹಿತಾಯ ಪವನಾಸ್ಪದಾಃ|
ನಭ್ರಶ್ಯಂತಿ ಯತೋಽ ಭ್ರಾಣಿ ಮೇಘಾ ಮೇಹನತಃ ಸ್ಮೃತಾಃ||
೬೧,೬೨||

ಮೋಡಗಳು ನೀರಿಗೆ ಆಶ್ರಯುವಾದವುಗಳು. ಇವು ನಿಯಮಿತವಾಗಿ ಆರು ತಿಂಗಳ ಕಾಲ ಗಾಳಿಯನ್ನು ಆಶ್ರಯಿಸಿ ಕೊಂಡು ಲೋಕಕಲ್ಯಾಣಕ್ಕಾಗಿ ಮಳೆನೀರನ್ನು ಸುರಿಸುತ್ತವೆ. ಇವು ಭ್ರಷ್ಟವಾಗದ ಕಾರಣ ಇವುಗಳಿಗೆ "ಅಭ್ರ"ಗಳೆಂದು ಹೆಸರು. ಅವು ನೀರನ್ನು ಸುರಿಸುವುದರಿಂದ ಮೇಘಗಳೆಂದು ಪ್ರಸಿದ್ಧವಾಗಿವೆ. ಇನ್ನು ಯಾವ ಕಾಲದಲ್ಲಿ ಯಾವ ಮೋಡಗಳು ಮಳೆಯನ್ನು ಸುರಿಸಿ ಭೂಮಿಯನ್ನು ತೋಯಿಸುತ್ತವೆ? ಆ ಮೋಡಗಳಿಂದ ಮಳೆ ಉಂಟಾಗುವ ಕಾರಣವೇನು ಎನ್ನುವುದನ್ನೀಗ ತಿಳಿಯೋಣ.

ಕಾರ್ತಿಕ ಮತ್ತು ಮಾರ್ಗಶೀರ್ಷ, ಮಾಸ (ನವೆಂಬರ್ - ಡಿಸೆಂಬರ್) ಅಥವಾ ಸಂಕ್ರಮಣ ಕಾಲಗಳಲ್ಲಿ ಮಳೆ ಬಿದ್ದರೆ ಮಧ್ಯಮ ಫಲದ ಸಸ್ಯಗಳು ಹುಟ್ಟುತ್ತವೆ. ಪುಷ್ಯಮಾಸದಲ್ಲಿ ಬಿದ್ದ ಮಳೆಯು ಸುಭಿಕ್ಷವಾದ ಫಸಲನ್ನು ನೀಡುತ್ತದೆ. ದೀಪಾವಳಿಯ ದಿನ, ಮಂಗಳವಾರ, ಭಾನುವಾರಗಳಲ್ಲಿ ಮಳೆ ಬಿದ್ದರೆ ಅದು ಶುಭ ತರುವುದಿಲ್ಲ ಎಂಬ ನಂಬಿಕೆ ಇದೆ. ಮಲೆನಾಡು ಮತ್ತು ಕರ್ನಾಟಕದ ಬಯಲು ಪ್ರದೇಶಗಳಲ್ಲಿ ನವೆಂಬರ್ ತಿಂಗಳಿನಲ್ಲಿ ಚಳಿ ಇರಬೇಕು. ಇತ್ತೀಚೆಗೆ ವಾಯುಭಾರ ಕುಸಿತದಿಂದ ಕೆಲವು ಕಡೆ ಮಳೆಯಾಗುವುದನ್ನು ಕಾಣುತ್ತೇವೆ. ಹಾಗೆ ಮಳೆ ಬಂದಾಗ ಜೋಳದ ತೆನೆಗಳಲ್ಲಿ ಕರಿಜಿಗಿ, ಅವರೆ, ಅಲಸಂದಿ ಇತ್ಯಾದಿ ಬೆಳೆಗಳಿಗೆ ಕರಿ ಹೊಲಸು ಕಾಣಿಸಿಕೊಂಡು ಕಾಯಿಕಟ್ಟುವಲ್ಲಿ ಸೀರುಕಾಳು ಉಂಟಾಗುವುದು ಅನುಭವ ವೇದ್ಯವೇ ಆಗಿದೆ. ಚಳಿಗಾಲದಲ್ಲಿ ಅಕಾಲದ ಮಳೆಯಾಗುವುದರಿಂದ ಮಾರಕ ಜೀವಾಣುಗಳ ಉತ್ಪತ್ತಿಗೆ ಅವಕಾಶವಾಗುತ್ತದೆ.

ಮಳೆತರುವ-ಮಳೆತರದ ಮೋಡಗಳನ್ನು ಗುರ್ತಿಸುವ ಬಗೆ

ಮೋಡಗಳು ಬಿಳಿಯ ಬಣ್ಣದವುಗಳಾದರೆ ಅಥವಾ ಹಳದಿಯ ಹೊಂಬಣ್ಣದವುಗಳಾದರೆ ಆಗ ಕೆಲವೆಡೆ ಮಳೆಯಾಗುತ್ತದೆ, ಮತ್ತೆ ಕೆಲವು ಕಡೆ ಮಳೆ ಬೀಳುವುದಿಲ್ಲ.[೩] ಇದಕ್ಕೆ ಕಾರಣ ಅವುಗಳಲ್ಲಿರುವ ನೀರಿನ ಕಣಗಳ ಸಾಂದ್ರತೆ ಕಡಿಮೆ ಯಾಗಿರುವುದು. ಕಪ್ಪು ಬಣ್ಣದ ಮೋಡಗಳು ಕೆಲವು, ಕೆಂಪುಬಣ್ಣದ ಮೋಡಗಳು ಕೆಲವು, ಕಂಚಿನ ಬಣ್ಣದ ಮೋಡಗಳು ಕೆಲವು, ಹಾಗೆಯೇ ಕೆಲವು ಸಿಂಧೂರ ಬಣ್ಣಕ್ಕೆ ಸಮಾನವಾದವುಗಳು. ಇದು ಕಾರ್ತಿಕ ಮಾಸದಲ್ಲಿ ಉಂಟಾಗುವ ಮೋಡಗಳ "ಗರ್ಭಲಕ್ಷಣ". ಅಂದರೆ : ಜಲಗರ್ಭಮೋಡಗಳ ಸ್ವರೂಪ ಹೀಗಿರುತ್ತದೆ. ಚಂದ್ರನು ಯಾವ ನಕ್ಷತ್ರದಲ್ಲಿ ಇರುವನೋ ಅದರ ಕಾರಣದಿಂದ ಮೋಡಗಳ ಉತ್ಪತ್ತಿಯನ್ನು ಹೇಳಬೇಕು. ಹದಿನೈದು ದಿವಸಗಳಲ್ಲಿಯೇ ಮೋಡಗಳ ಹುಟ್ಟುವಿಕೆಯನ್ನು ತಿಳಿಸಬೇಕು. ಶುಕ್ಲ ಪಕ್ಷದಲ್ಲಿ ಹುಟ್ಟಿದ ಮೋಡಗಳು ಕೃಷ್ಣ ಪಕ್ಷದಲ್ಲಿಯೂ, ಕೃಷ್ಣ ಪಕ್ಷದಲ್ಲಿ ಹುಟ್ಟಿದ ಮೋಡಗಳು ಶುಕ್ಲ ಪಕ್ಷದಲ್ಲಿಯೂ ರಾತ್ರಿಯಲ್ಲಿ ಹುಟ್ಟಿದ ಮೋಡಗಳು ಹಗಲಿನಲ್ಲಿಯೂ ಹಾಗೆಯೇ ಹಗಲಿನಲ್ಲಿ ಹುಟ್ಟಿದ ಮೋಡಗಳು ರಾತ್ರಿಯಲ್ಲಿಯೂ, ಸಂಧ್ಯಾಕಾಲದಲ್ಲಿ ಹುಟ್ಟಿದ ಮೋಡಗಳು ಸಂಧ್ಯಾಕಾಲದಲ್ಲಿಯೂ, ಪೂರ್ವ ದಿಕ್ಕಿನಲ್ಲಿ ಹುಟ್ಟಿದ ಮೋಡಗಳು ಪಶ್ಚಿಮದಿಕ್ಕಿನಲ್ಲಿಯೂ, ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿದ ಮೋಡಗಳು ಪೂರ್ವದಿಕ್ಕಿನಲ್ಲಿಯೂ ಮಳೆಸುರಿಸುತ್ತವೆಂದು ಪರಿಣಿತರು ತಿಳಿಸಿದ್ದಾರೆ.

ಅಶ್ವಿನಿ ನಕ್ಷತ್ರದಲ್ಲಿ ಮೋಡಗಳು ಉಂಟಾದರೆ ನಿಶ್ಚಯವಾಗಿಯೂ ಸುಭಿಕ್ಷ ಉಂಟಾಗುತ್ತದೆ. ಮಾರ್ಗಶೀರ್ಷ ಮಾಸದಲ್ಲಿ ತೃತಿಯಾದಿಂದ ಆರಂಭಿಸಿ ೪ ದಿನಗಳಲ್ಲಿ ಎಲ್ಲಿ ಮೋಡಗಳು ಉಂಟಾಗುತ್ತದೆಯೇ ಅಲ್ಲಿ ನಿಶ್ಚಯವಾಗಿಯೂ ಸುಭಿಕ್ಷ ಉಂಟಾಗುತ್ತದೆ. ಮಾರ್ಗಶಿರ ಮಾಸದ ಕೃಷ್ಣ ಪಕ್ಷ ಚತುರ್ಥೀ ತಿಥಿಯಲ್ಲಿ ಆಶ್ಲೇಷಾ ನಕ್ಷತ್ರವಿದ್ದರೆ, ಮಿಂಚು ಗುಡುಗುಗಳಿಂದ ಕೂಡಿದ ಮೋಡಗಳುಂಟಾಗುತ್ತವೆ. ಆಷಾಢಮಾಸದ ಶುಕ್ಲಪಕ್ಷದಲ್ಲಿ ಪಂಚಮೀ, ಷಷ್ಠೀ, ಸಪ್ತಮೀ ತಿಥಿಗಳಲ್ಲಿ ಯಾವಾಗಲೂ ಮಳೆಯಾಗುತ್ತದೆ.

ಮೋಡಗಳ ಲಕ್ಷಣಗಳು : ಚೈತ್ರ ಮಾಸದಲ್ಲಿ ಆಕಾಶದಲ್ಲಿ ಮೋಡಗಳು ಸೌಮ್ಯವಾಗಿದ್ದು ಶುಭಕರಗಳಾಗಿರುತ್ತವೆ. ಪುಷ್ಯ ಮಾಸದ ಮೋಡಗಳು ಗಾಳಿಯಿಲ್ಲದೆ ಶುಭಯುತವಾಗಿರುತ್ತವೆ. ಇವೆಲ್ಲವೂ ಮಿಂಚಿನಿಂದ ಕೂಡಿ ಜಲಸಹಿತವಾಗಿ ಶುಭ ಲಕ್ಷಣಗಳನ್ನು ಹೊಂದಿರುತ್ತವೆ.[೪]

ಗಾಳಿ ಬೀಸುವಿಕೆಯಿಂದ ಉಂಟಾಗುವ ಪರಿಣಾಮಗಳು

ಪೂರ್ವದಿಕ್ಕಿನಲ್ಲಿ ಗಾಳಿ ಬೀಸುವುದು ಸುಭಿಕ್ಷೆಗೆ ಕಾರಣ. ಆಗ್ನೇಯ ದಿಕ್ಕಿನಲ್ಲಿ ಗಾಳಿಬೀಸಿದರೆ ಮಳೆಯು ಹಾಳಾಗುತ್ತದೆ. ದಕ್ಷಿಣ ದಿಕ್ಕಿನಲ್ಲಿ ಬೀಸುವ ಗಾಳಿಯು ದುರ್ಭಿಕ್ಷವನ್ನು ಸೂಚಿಸುತ್ತದೆ. ನೈಋತ್ಯ ದಿಕ್ಕಿನಲ್ಲಿ ಗಾಳಿ ಬೀಸಿದರೆ ನೀರಿಲ್ಲದಾಗುತ್ತದೆ. ಪಶ್ಚಿಮದಿಕ್ಕಿನಲ್ಲಿ ಗಾಳಿ ಬೀಸಿದಾಗ ಮಧ್ಯಮ ಫಲದ ಮಳೆಯಾಗುತ್ತದೆ. ವಾಯುವ್ಯ ದಿಕ್ಕಿನಲ್ಲಿ ಗಾಳಿ ಬೀಸಿದಾಗ ತಲೆನೋವು, ಅತಿಮಳೆ ಅಥವಾ ಮಳೆ ಬೀಳದಿರುವಿಕೆಯಾಗುತ್ತದೆ. ಇಂಥ ವೈಪರೀತ್ಯದಲ್ಲಿ ಇಲಿಗಳ ಕಾಟ, ಮಿಡಿತೆಗಳ ಹಾವಳಿ, ಹಕ್ಕಿಗಳು ಫಸಲಿನ ಮೇಲೆ ಆಕ್ರಮಣ ವಾಗುವುದು ಇತ್ಯಾದಿಗಳು ಉಂಟಾಗುತ್ತವೆ.[೫]

ಇನ್ನು ಮಿಂಚಿನ ಬಗ್ಗೆ ತಿಳಿಸುತ್ತಾ ಬಲ್ಲವರು ಮಿಂಚಿನ ವಿದ್ಯುನ್ಮಂಡಲವನ್ನು ಯಾವಾಗಲೂ ಅವಲೋಕಿಸಬೇಕು.

ಮೋಡಗಳು ಆಕಾಶದಲ್ಲಿ ಸಂಚರಿಸಲು ಮಿಂಚು ಕಂಡಾಗುತ್ತದೆ. ಮೋಡಗಳು ಹೇಗೆ ಚಲಿಸುತ್ತವೆ ಎನ್ನುವುದನ್ನು ಮಿಂಚು ತೋರಿಸುತ್ತದೆ. ಮಿಂಚಿನಿಂದ ಪ್ರೇರಿತವಾದ ಮದೋನ್ಮತ್ತವಾದ ದೊಡ್ಡ ದೊಡ್ಡ ಮೋಡಗಳು ಸಿಡಿಲು-ಗುಡುಗುಗಳಿಂದ ಕೂಡಿ ಅವು ಹೆಚ್ಚಿನ ನೀರನ್ನು ಮಳೆಯ ರೂಪದಲ್ಲಿ ಸುರಿಸುತ್ತವೆ. ಮೋಡಗಳ ಘರ್ಷಣೆಯಿಂದ ಉಂಟಾಗುವ ಮಿಂಚಿನ ತೀಕ್ಷ್ಣತೆಯಿಂದಾಗುವ ಪರಿಣಾಮಗಳಿಗೆ ಉತ್ತಮ ಉದಾಹರಣೆ ಇಲ್ಲಿ ವೈಜ್ಞಾನಿಕ ಸತ್ಯದೊಂದಿಗೆ ಹೃದಯಂಗಮವಾಗಿ ಪಡಿಮೂಡಿ ನಿಂತಿವೆ (ಶ್ಲೋಕ ೪೯ರಿಂದ ೫೫)

ಮಳೆ ಮುನ್ಸೂಚನೆ : ಜ್ಯೇಷ್ಠ ಶುಕ್ಲ ತೃತೀಯೆ ಮೊದಲುಗೊಂಡು ಚಂದ್ರ ದೇವತಾನಕ್ಷತ್ರ ಮೃಗಶಿರದಿಂದ ಆರಂಭಿಸಿ ಸ್ವಾತಿವರೆಗಿನ ನಕ್ಷತ್ರಗಳನ್ನು ಮಳೆ ಸುರಿಸುವ ನಕ್ಷತ್ರಗಳೆಂದು ನಿರೀಕ್ಷಿಸಬೇಕು. ಮೃಗಶಿರಾ, ಆರಿದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ, ಮಘಾ, ಪುಬ್ಬ, ಉತ್ತರ, ಹಸ್ತ, ಚಿತ್ತ, ಸ್ವಾತಿವರೆಗಿನ ಹನ್ನೊಂದು ನಕ್ಷತ್ರಗಳಲ್ಲಿ ಗುಡುಗು ಕೇಳಿದ್ದೇ ಆದರೆ ಆಗ ಖಂಡಿತಾ ಮಳೆಯಾಗುತ್ತದೆಂದು ತಿಳಿಯಬೇಕು. ಇದರಲ್ಲಿ ಯಾವ ವಿಚಾರವನ್ನು ಮಾಡಬೇಕಾಗಿಲ್ಲ. ಜ್ಯೇಷ್ಠಮಾಸದ ಹುಣ್ಣಿಮೆಯಲ್ಲಿ ಮೂಲಾನಕ್ಷತ್ರವಿರುವಾಗ ಮಳೆ ಸುರಿದದ್ದೇ ಆದರೆ ಭೂಮಿಯ ಮೇಲೆ ಎರಡು ತಿಂಗಳು ಮಳೆ ಬೀಳದೆ ಬಿಸಿಲಿನ ತಾಪದಿಂದ ಭೂಮಿ ಬಿರಿಯುವುದು. ಸೂರ್ಯನು ಈ ಸಮಯದಲ್ಲಿ ರೋಹಿಣಿ ನಕ್ಷತ್ರದ ಮಧ್ಯದಲ್ಲಿದ್ದು ಒಂದು ವೇಳೆ ಮಳೆಯಾದರೆ ಮುಂದೆ ೨ ತಿಂಗಳುಗಳ ಕಾಲ ಮಳೆಯಾಗುವುದಿಲ್ಲ. ಅತಿ ಭೀಕರವಾದ ತೊಂದರೆಗಳು ಉಂಟಾಗುತ್ತವೆ. ಜ್ಯೇಷ್ಠಮಾಸ ಕಳೆದು ಪೂರ್ವಾಷಾಡ ನಕ್ಷತ್ರ ಪ್ರಾರಂಭದಿಂದ ಇತರ ನಕ್ಷತ್ರಗಳಲ್ಲಿ ಸಾಮಾನ್ಯವಾಗಿ ಮಳೆಯಾಗುವುದು. ಜ್ಯೇಷ್ಠಮಾಸದ ಕೃಷ್ಣಪಕ್ಷದಲ್ಲಿ ಶ್ರವಣ ಧನಿಷ್ಠಾ ನಕ್ಷತ್ರಗಳಲ್ಲಿ ಜಲಭರಿತ ಮೋಡಗಳಿಂದ ಒಳ್ಳೆಯ ಮಳೆಯಾಗುತ್ತದೆ. (ಶ್ಲೋಕ ೫೬-೬೨) ಶ್ರಾವಣ ಬಹುಳ ಚತುರ್ಥೀ ತಿಥಿಯಲ್ಲಿ ಅಥವಾ ಪಂಚಮೀ ತಿಥಿಯಲ್ಲಿ ಸಂಜೆ ಶತಭಿಷಾ ನಕ್ಷತ್ರ ಇಲ್ಲದಿದ್ದಾಗ ಅಥವಾ ಗೋಚರವಾಗದಿದ್ದಾಗ ಭೂಮಂಡಲವು ನೀರಿಲ್ಲದಾಗಿ ಆಗುತ್ತದೆ. ಇಷ್ಟೇ ಅಲ್ಲದೆ ಆವರ್ತ, ಸಂವರ್ತ, ಪುಷ್ಕರ, ದ್ರೋಣ, ಕಾಲಿಕ, ಕಾಲ, ನೀಲ, ವಾರುಣ ವಾಯ್ವಭ್ರ ಎಂಬುದಾಗಿ ಒಂಬತ್ತು ರೀತಿಯ ಮಹಾ ಮೇಘಗಳನ್ನು ಉದಾಹರಣೆಯಾಗಿ ನೀಡಿದ್ದಾನೆ. ಪೂರ್ವಾಷಾಡ ನಕ್ಷತ್ರದಲ್ಲಿ ಮಳೆಯಾಗದಿದ್ದರೆ ಆರಿದ್ರಾ ಮೊದಲಾದ ನಕ್ಷತ್ರದಲ್ಲಿ ಮಳೆಯಾಗದಿದ್ದರೆ ಆರಿದ್ರಾ ಮೊದಲಾದ ನಕ್ಷತ್ರಗಳಲ್ಲಿ ಮಳೆ ಬೀಳುವುದಿಲ್ಲ. ರೇವತಿ ನಕ್ಷತ್ರದಲ್ಲಿ ಮಳೆಬಿದ್ದರೆ ಆಗ ಮುಂದಿನ ಅಶ್ವಿನೀ, ಭರಣಿ, ಕೃತ್ತಿಕಾ, ರೋಹಿಣಿ, ಮೃಗ ಶಿರಾ, ಆರಿದ್ರಾ, ಪುನರ್ವಸು, ಪುಷ್ಯ , ಆಶ್ಲೇಷಾ, ಮಖಾ, ನಕ್ಷತ್ರಗಳಲ್ಲಿ ಮಳೆ ಬೀಳುವುದಿಲ್ಲ. ಈ ರೀತಿಯ ಕಾರಣಗಳಿಂದ ಮೋಡಗಳ ಮಳೆ ಸುರಿಸುವಿಕೆಯನ್ನು ತಿಳಿಯಬೇಕು (ಶ್ಲೋಕ ೬೩ ರಿಂದ ೬೭)

ಭಾರತದ ನದ - ನದಿಗಳು ; ನಾಲ್ಕನೇ ಕಲ್ಲೋಲ, ಮೊದಲ ತರಂಗದ ೨೨ನೇ ಶ್ಲೋಕದಿಂದ ೪೫ನೇ ತನಕ ಭಾರತದ ೨೬೧ ನದಿಗಳ ಹೆಸರನ್ನು ತಿಳಿಸುತ್ತಾನೆ. ಅವುಗಳಲ್ಲಿ ಕೆಲವು ಇಂತಿವೆ:

ಪಯೋಷ್ಣಿ	ಹಿರಣ್ವತೀ
ಇಲಾಕರೀಷಿಣಿ	ನಾದಿನೀ
ಚರ್ಮಣ್ವತೀ	ಲೂಯಿ
ಭೀಮರಥೀ	ಶೈಲೂಷಿ
ಮಂಜುಲಾ	ಮಂದನಾ
ಪಲಾಶಿನಿ	ವೈತರಣೀ
ಪಿಪ್ಪಲಾತಿ	ಕಶಾ
ಸುರಘಾ	ವೃಷ ಭಂಗಿನಿ
ಅನುಷ್ಣಾ	ಸುಪುಣ್ಯಾ
ಶುಕ್ತಿಮತೀ	ತ್ರಿದಿವಾ.... ಇತ್ಯಾದಿ

ಇವುಗಳನ್ನು ದೊಡ್ಡನದಿ, ಮಹಾನದಿಗಳು, ಯಾವಾಗಲೂ ನೀರು ತುಂಬಿರುವ ನದಿಗಳು, ಮೆಲ್ಲನೆ ಆರ್ಭಟವಿಲ್ಲದೆ ಹರಿವನದಿಗಳು, ಹೆಚ್ಚು ಪ್ರಸಿದ್ಧಿಗೆ ಬರದ ನದಿಗಳು ನೂರಾರು, ಸಾವಿರಾರು ಇವೆ. ಇಲ್ಲಿ ನೆನಪಿಗೆ ಬಂದಷ್ಟನ್ನು ನದಿಗಳನ್ನು ಮಾತ್ರ ಹೆಸರಿಸಿದ್ದೇನೆ ಎಂದು ಒಪ್ಪಿಕೊಂಡಿದ್ದಾನೆ.[೬]

ಕೊಡಚಾದ್ರಿಯ ಜಲತಾಣಗಳು

ಕುಟಚಾದ್ರಿ ಮತ್ತು ವನವಸಾ (ಕೊಡಚಾದ್ರಿ ಮತ್ತು ಬನವಾಸಿ) ದೇಶಗಳ ಮಧ್ಯೆ ಇರುವ ಪ್ರದೇಶವನ್ನು ಮಲ್ಲದೇಶವೆಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ಇರುವ ಜಲಾಕರಗಳಾದ ೧೧ ತೀರ್ಥಗಳನ್ನು ಹೆಸರಿಸುತ್ತಾ ಅವುಗಳು ಯಾವದಿಕ್ಕಿನಲ್ಲಿವೆ ಎಂದು ಉಲ್ಲೇಖಿಸಿದ್ದಾನೆ. ಕುಟಚಾದ್ರಿಯ ಪೂರ್ವ ಪಶ್ಚಿಮಗಳ ನಡುವೆ ಉತ್ತರದ ಕೋಡುಗಲ್ಲಿನ ಪ್ರದೇಶವಿದೆ. ಅದರ ಮುಂಭಾಗದಲ್ಲಿ ವಹ್ನಿತೀರ್ಥವಿದೆ. ಅದರ ಎರಡೂ ಪಕ್ಕಗಳಲ್ಲೂ ವೃಷಭಚಕ್ರವೆಂಬುದಿದೆ. ಈಶಾನ್ಯ ದಿಕ್ಕಿನಲ್ಲಿ ಚಕ್ರತೀರ್ಥವೂ ಆಗ್ನೇಯ ದಿಕ್ಕಿನಲ್ಲಿ ನಹುಷತೀರ್ಥವೂ ದಕ್ಷಿಣದಲ್ಲಿ ರಜತಾಶ್ಮವೆಂಬ ತೀರ್ಥವೂ ನೈಋತ್ಯ ದಿಕ್ಕಿನಲ್ಲಿ ವಿನಾಯಕ ತೀರ್ಥವೂ ವಾಯುವ್ಯ ದಿಕ್ಕಿನಲ್ಲಿ ವ್ಯಾಘ್ರತೀರ್ಥವೂ ಉತ್ತರ ದಿಕ್ಕಿನದಲ್ಲಿ ಕಮಂಡಲುತೀರ್ಥವೂ ಅಲ್ಲಿಂದ ಇಪ್ಪತ್ತು ಹಸ್ತ ದೂರದಲ್ಲಿ ಅತ್ರಿತೀರ್ಥವೂ ಅಲ್ಲಿಂದ ಕೆಳಗೆ ಸ್ವಲ್ಪ ಪಶ್ಚಿಮ ಭಾಗದಲ್ಲಿ ಶತಬಿಂದುತೀರ್ಥವೂ ಇದೆಯೆಂದು ತಿಳಿದಿದ್ದಾರೆ. ಅದರ ಕೆಳಗೆ ಐವತ್ತೈದು ಹಸ್ತಗಳ ಆಳತೆಯಲ್ಲಿ ಸಹಸ್ರಕ, ರೌಪ್ಯಾತ್ಮಕ ತೀರ್ಥ, ಚಕ್ರತೀರ್ಥ, ವ್ಯಾಘ್ರತೀರ್ಥ, ಕಮಂಡಲುತೀರ್ಥ, ಶತಬಿಂದು ಸಹಸ್ರತೀರ್ಥ, ಋಷಭತೀರ್ಥ, ವಹ್ನಿತೀರ್ಥ ಹೀಗೆ ಒಂಬತ್ತು

ತೀರ್ಥಗಳು ಅತ್ಯಂತ ಮುಖ್ಯವಾದವುಗಳು ಮತ್ತು ಎಲ್ಲಾ ಸಿದ್ಧಿಗಳನ್ನೂ ದೊರಕಿಸಿಕೊಡತಕ್ಕವು. (ಶ್ಲೋಕ ೧೫ ರಿಂದ ೧೯) ಕೊಡಚಾದ್ರಿ ಘಟ್ಟ ಮತ್ತು ಕಾಡುಗಳು ಇಂದಿಗೂ ತಮ್ಮತನವನ್ನು ನಿತ್ಯಹರಿದ್ವರ್ಣ ಕಾಡುಗಳನ್ನೂ ಉಳಿಸಿಕೊಂಡಿದ್ದು ಕೆಳಗಡೆ ಅರಬ್ಬೀ ಸಮುದ್ರದಿಂದ ಮತ್ತು ಸೂರ್ಯನ ಪ್ರಖರ ಶಾಖದಿಂದ ಆವಿಯಾದ ಮೋಡಗಳು ನೇರವಾಗಿ ಬೆಟ್ಟದ ಮರಗಿಡಗಳೊಂದಿಗೆ ಸಂಸರ್ಗ ಹೊಂದಿ ಉಂಟಾಗುವ ಕಲುಷ ರಹಿತ ತೀರ್ಥಗಳಿವು.

ಜಲದಿಂದ ಜೀವರಕ್ಷಣೆ : ಜಲವನ್ನು ಕೋಟೆಗೆ ಎಂದರೆ ರಕ್ಷಣೆಗಾಗಿ ಹೇಗೆ ಬಳಸುತ್ತಿದ್ದರೆನ್ನುವುದಕ್ಕೆ ಕೆಲವು ಉದಾಹರಣೆಗಳಿಲ್ಲಿವೆ. ವೈರಿಗಳಿಂದ ತಮ್ಮನ್ನೂ ಪ್ರಜೆಗಳನ್ನೂ ರಕ್ಷಿಸಿಕೊಳ್ಳಲು ೯ ತೆರನಾದ ದುರ್ಗಗಳನ್ನು ನಿರ್ಮಿಸುತ್ತಿದ್ದರೆಂದು ಅರ್ಥಶಾಸ್ತ್ರದಲ್ಲಿ ಚಾಣಕ್ಯರು ನಿರೂಪಿಸಿದ್ದನ್ನೇ ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾನೆ. ಜಲದುರ್ಗ, ಗಿರಿದುರ್ಗ, ಪಾಷಾಣ (ಕಲ್ಲಿನ) ದುರ್ಗ, ಇಷ್ಟಕಾದುರ್ಗ (ಇಟ್ಟಿಗೆಗಳಿಂದ ನಿರ್ಮಿಸಲಾದದ್ದು) ಮೃತ್ತಿಕಾ (ಮಣ್ಣಿನ) ದುರ್ಗ, ವನದುರ್ಗ, ಮರುದುರ್ಗ (ಮರದ ದಿಮ್ಮಿಗಳನ್ನು ಉಪಯೋಗಿಸಿ ರಚಿಸಲಾದದ್ದು) ಹಾಗೂ ನರದುರ್ಗ ಇವುಗಳ ಲಕ್ಷಣಗಳೇನೆಂಬುದನ್ನೂ ವಿವರಿಸಿದ್ದಾನಲ್ಲದೇ ಅವುಗಳಲ್ಲಿ ಯಾವ ದುರ್ಗ ಶ್ರೇಷ್ಠ, ಮಧ್ಯಮ ಮತ್ತು ಅಧಮ ಎಂಬ ವಿಂಗಡಣೆಯನ್ನೂ ತಿಳಿಸಿದ್ದಾನೆ.

ಆಳವಾದ ನೀರಿನಿಂದ ಸುತ್ತುವರಿದ ದುರ್ಗವೇ ಜಲದುರ್ಗ. ಉದಾಹರಣೆಗೆ ಚಿತ್ರದುರ್ಗದ ಕೋಟೆ. ಇದು ೧೦೦ ವರ್ಷದ ವರೆಗೆ ಅಭೇದ್ಯವಾಗಿತ್ತೆಂದು ಗುರ್ತಿಸಿದ್ದಾರೆ. ಬೆಟ್ಟದ ಮೇಲೆ ಬಿದ್ದ ನೀರನ್ನು ಚಂದ್ರವಳ್ಳಿಕೆರೆ, ತಿಮ್ಮಣ್ಣ ನಾಯಕನ ಕೆರೆ ಇತ್ಯಾದಿಗಳಲ್ಲಿ ಸಂಗ್ರಹಿಸಿ ಕೋಟೆಯ ಮುಂಬಾಗಿಲಿನವರೆಗೂ ಆಳವಾದ ಕಂದಕಗಳನ್ನು ನಿರ್ಮಿಸಿರುವುದನ್ನು ಸಾಮಾನ್ಯವಾಗಿಯೇ ಗಮನಿಸ ಬಹುದು. ಕೋಟೆಯೊಳಗಿನವರಿಗೆ ನೀರು ಸಿಕ್ಕುವಂತೆಯೂ ಹೊರಗಿನವರಿಗೆ ಸಿಕ್ಕಲಾರದಂತೆ ತಂತ್ರಜ್ಞಾನವನ್ನು ಅಳವಡಿಸಿ ಕಟ್ಟಿರುವ ದುರ್ಗ ಮರುದುರ್ಗ. ಈ ದುರ್ಗದ ಸುತ್ತ ಮರುಭೂಮಿ ಇರುತ್ತದೆ. ಮರದ ದಿಮ್ಮಿ ಬೊಂಬುಗಳಿಂದ ಕಟ್ಟಿದ ದುರ್ಗವಿದು. ಪುಲಿಕೇಶಿಯ ಚಿಕ್ಕಪ್ಪನಾದ ಮಂಗಲೀಶನಿಗೆ ಈ ತಂತ್ರಜ್ಞಾನ ತಿಳಿದಿದ್ದು ಅದನ್ನು ಉಪಯೋಗಿಸಿ ಮಹಾರಾಷ್ಟ್ರದಲ್ಲಿ ದ್ವೀಪವೊಂದನ್ನು ಗೆದ್ದುದಾಗಿ ಇತಿಹಾಸಕಾರರು ಗುರ್ತಿಸಿದ್ದಾರೆ. ಪುಲಿಕೇಶಿಯೂ ಒರಿಸ್ಸಾದ ಮಹಾನದಿಯನ್ನು ಮಳೆಗಾಲದಲ್ಲಿ ಮಹಾಪೂರವಿದ್ದಾಗಲೇ ಇಂತಹ ತಂತ್ರಜ್ಞಾನವನ್ನು ಉಪಯೋಗಿಸಿ ಆನೆಗಳನ್ನೂ ಸಾಗಿಸಿ ಹರ್ಷವರ್ಧನನನ್ನು ಗೆದ್ದನೆಂದೂ ತಿಳಿದಿದೆ. ಈ ಒಂಭತ್ತು ದುರ್ಗಗಳಲ್ಲಿ ಗಿರಿದುರ್ಗ, ಜಲದುರ್ಗಗಳು ಉತ್ತಮವಾದವು. ಉಳಿದ ಕೆಲವನ್ನು ಮಧ್ಯಮವೆನ್ನುತ್ತಾರೆ.[೭]

ವಾಪಿ, ಕೂಪ, ತಟಾಕ ಇತ್ಯಾದಿಗಳು[೮] ಬಾಗಿಲು ಇಲ್ಲದ್ದು ಯಾವುದೋ ಅದು ಕಲಾಪ. ಅನೇಕ ಬಾಗಿಲುಗಳಿರುವುದು ಪುಷ್ಕರಣಿ. ಉದ್ದವಾಗಿದ್ದರೆ ದೀರ್ಘಿಕಾ, ತಿಳಿಯಲ್ಲದ ನೀರು ಹರಿದರೆ ತಟಾಕಾ ಎಂದು ಕರೆಯಲಾಗುತ್ತದೆ.

ಜಲೋತ್ಪತ್ತಿಯ ಚಿನ್ಹೆಗಳು[೯] **ಭೂಪರೀಕ್ಷೆ ವಿಧಾನಗಳು; ಸಸ್ಯಕ್ಕೂ ಜಲಾಕರಗಳಿಗೆ ಇರುವ ಸಂಬಂಧಗಳು**

ಕಂದು, ಬಿಳಿ ಮಣ್ಣು, ಮರಳು, ಬೆಣಚು ಕಲ್ಲು ಇದ್ದರೆ ಅವುಗಳ ನಂತರ ನೀರಿರುತ್ತದೆ. ಎಲಚಿ ಮರದ ಪೂರ್ವಕ್ಕೆ ಹುತ್ತವಿದ್ದರೆ ಅದರ ಪಶ್ಚಿಮಕ್ಕೆ ಅರ್ಧ ಆಳುದ್ದಕ್ಕೆ ಬಿಳಿಗೋಧಿಯಂತಹ ಮಣ್ಣು, ಮೂರಾಳೊಳಗೆ ನೀರು ಕಾಣುವುದು ಮುತ್ತುಗದ ಜತೆಗೆ ಎಲಚಿ ಮರವಿದ್ದರೆ ಅದರ ಪಶ್ಚಿಮಕ್ಕೆ ಮೂರು ಆಳು ಒಳಗೆ ನೀರಿರುತ್ತದೆ. ಅದಕ್ಕೆ ಚಿನ್ಹೆ ಕಾಲು ಆಳು ಒಳಗೆ ಬಸವನ ಹುಳ. ಎಲಚಿ ಮರದ ಕೆಳಗೆ ಹುತ್ತವಿದ್ದರೆ ಪಶ್ಚಿಮದ ಕಡೆಗೆ ಹರಿಯುವ ಜಲನಾಡಿ ಮೂರು ಕಾಲು ಅಳುದ್ದಕ್ಕೆ ಸಿಗುತ್ತದೆ. ಬಿಳಿಯಿಂದ ಹಳದಿಗೆ ತಿರುಗುವ ಮಣ್ಣಿನ ಜತೆ ಗೋಮೇಧಿಕ ಬಣ್ಣದ ಕಲ್ಲಿದ್ದರೆ ಅರ್ಧ ಆಳಿಗೆ ಕನ್ನೆದಿಲೆ ಹೊಳಪಿನ ಮಣ್ಣು ಇಲ್ಲಿ ಕಾಣುತ್ತದೆ. ಹತ್ತಿರದಲ್ಲಿ ಹುತ್ತ ದಕ್ಷಿಣಕ್ಕೆ ವಿಭೀತ (ತಾರೆಗಿಡ) ಇದ್ದರೆ ಅರ್ಧ ಆಳಿಗೆ ಪೂರ್ವದಿಕ್ಕಿನ ನೀರಿನ ನಾಡಿ ಇದೆ ಎಂದು ತಿಳಿಯಬೇಕು. ಅದಕ್ಕೆ ಪಶ್ಚಿಮಕ್ಕೆ ಮೊಳದೂರದಲ್ಲಿ ಹುತ್ತವಿದ್ದರೆ ನಾಲ್ಕುವರೆ ಆಳು ಒಳಗೆ ಜಲನಾಡಿ ಎದ್ದು ತೋರುತ್ತದೆ. ಮೊದಲ ಆಳಿನಲ್ಲಿ ಬಿಳಿ, ಕುಂಕುಮ ಬಣ್ಣದ ಕಲ್ಲುಗಳಿದ್ದರೆ ಅದರ ಪಶ್ಚಿಮಕ್ಕೆ ಮೂರು ವರ್ಷದಲ್ಲಿ ಬತ್ತಿ ಹೋಗುವ ಜಲನಾಡಿ ಇರುತ್ತದೆ. ಮೊದಲ ಆಳಿನ ಅಳತೆಯಲ್ಲಿ ತಾವರೆ ಗರ್ಭದಂತಹ ಹಾವು ಕೆಂಪು ಭೂಮಿ, ಕುರುವಿಂದ ಬಣ್ಣದ ಕಲ್ಲು ಇವು ಅದಕ್ಕೆ ಚಿಹ್ನೆಗಳು. ಎಲ್ಲ ಮರಗಳ ಅಡಿಯಲ್ಲೂ ಕಪ್ಪೆ ಕಂಡರೆ ಅದರ ಒಂದು ಮೊಳದ ದೂರಕ್ಕೆ ನಾಲ್ಕುವರೆ ಆಳು ಒಳಗೆ ನೀರಿರುತ್ತದೆ. ಅತಿ ಮಧುರ ಗಿಡದ ಉತ್ತರಕ್ಕೆ, ಹುತ್ತವಿದ್ದು ಪಶ್ಚಿಮಕ್ಕೆ ಕಪ್ಪೆ ಇದ್ದರೆ ಇದರ ಐದು ಮೊಳದ ದೂರಕ್ಕೆ ಎಂಟೂವರೆ ಆಳು ಒಳಗೆ ನೀರಿದೆ ಎನ್ನಬಹುದು. ಇದರಲ್ಲಿ ಆಳುದ್ದದಲ್ಲಿ ನಾಗ, ಬೂದು ಬಣ್ಣದ ಭೂಮಿ, ಬೇಲದ ಹಣ್ಣಿನಂತಹ ಕಲ್ಲು ಇದ್ದಾಗ ಅದು ಮಾಹೇಂದ್ರೀ ನಾಡಿ. ಇದು ಸದಾ ನೊರೆ ತುಂಬಿದ ನೀರನ್ನು ಹೊಂದಿರುತ್ತದೆ. ತಾಳಿ ಮರದ ಸುತ್ತ ಹುತ್ತವಿದ್ದರೆ ಅದರ ಆರು ಮೊಳ ಪಶ್ಚಿಮಕ್ಕೆ ನಾಲ್ಕು ಆಳು ಒಳಗೆ ದಕ್ಷಿಣ ನಾಡಿ ಇದೆ. ಆಶ್ಮಾತಕ (ಇದರ ನಾರಿನಿಂದ ಮೌಂಜಿಯನ್ನು ಮಾಡುತ್ತಾರೆ) ಎಡಕ್ಕೆ ಎಲಚಿ ಮರ ಅಥವಾ ಹುತ್ತ ಕಂಡರೆ ಅದರ ಉತ್ತರಕ್ಕೆ ಆರು ಮೊಳದ ದೊರದಲ್ಲಿ ಮೂರುವರೆ ಆಳ ಒಳಗೆ ನೀರಿರುತ್ತದೆ. ಮೊದಲ ಆಳಿನಲ್ಲಿ ಆಮೆ, ಧೂಳು ಕಲ್ಲು, ಮರಳ ಮಣ್ಣು ಇದ್ದಲ್ಲಿ ಮೊದಲು ದಕ್ಷಿಣಕ್ಕೆ ಎರಡನೆಯ ಹಂತದಲ್ಲಿ ಈಶಾನ್ಯಕ್ಕೆ ಸಿರಾ (ನಾಡಿ) ಇರುತ್ತದೆ. ನೀರಿಲ್ಲದ ದೇಶದಲ್ಲಿ ಈ

ಚಿನ್ಹೆಗಳು ಕಂಡರೆ ಹುಲ್ಲುಗರಿಕೆ ಇಲ್ಲದ ಕಡೆ ಒಂದಾಳಿಗೆ ನೀರಿರುತ್ತದೆ. ತಿಲಕ, ಆಮಟಿ ಮರ, ವಲಸೆಗಿಡ, ಗೇರುಮರ, ಬಿಲ್ವ, ತುಂಬೆ, ಅಂಕೋಲೆ, ದಾಳಿಂಬೆ, ಬಾಗೆಮರ, ಈಚಲು, ಕೆಂಪುದಾಸವಾಳ ಈ ಮರಗಳ ಸುತ್ತ ಹತ್ತಿರದಲ್ಲಿ ಒತ್ತಾಗಿ ಹುತ್ತಗಳಿದ್ದರೆ ಆಗ ಅದರಿಂದ ಮೂರು ಮೊಳ ಉತ್ತರಕ್ಕೆ ನಾಲ್ಕುವರೆ ಆಳು ಒಳಗೆ ನೀರು ಇರುತ್ತದೆ. ಹುಲ್ಲಿಲ್ಲದೆ ಭೂಮಿಯ ಮಧ್ಯೆ ಹುಲ್ಲಿದ್ದರೆ ಅಥವಾ ಹುಲ್ಲು ಭೂಮಿ ಮಧ್ಯೆ ಹುಲ್ಲಿಲ್ಲದೆ ಹೋದರೆ, ಆ ನೆಲದಲ್ಲಿ ಜಲನಾಡಿ ಇದೆ ಎಂದೆನ್ನಬೇಕು. ಮುಳ್ಳಿರದ ಕಡೆ ಮುಳ್ಳು ಅಥವಾ ಅದಕ್ಕೆ ವ್ಯತಿರಿಕ್ತವಾಗಿದ್ದರೆ ಅದರ ಮೂರು ಮೊಳ ಪಶ್ಚಿಮಕ್ಕೆ ಮೂರು ಆಳು ಅಗೆದರೆ ಮೂರು ಪಾಲು ನೀರು ಇರುತ್ತದೆ. ಮರದ ಒಂದು ಕೊಂಬೆ ತುಂಬ ಬಾಗಿದ್ದರೆ ಅಥವ ಬೆಳ್ಳಗಾಗಿದ್ದರೆ ಆ ಕೊಂಬೆಯ ತುದಿಯ ನೆಲೆದಲ್ಲಿ ಮೂರೇ ಆಳಿಗೆ ನೀರಿದೆ ಎಂದು ಅರಿಯಬೇಕು. ಹೂವು ಹಣ್ಣು ವಿಕಾರವಾದ ಮರದ ಮೂರು ಮೊಳದ ಪೂರ್ವಕ್ಕೆ ನಾಡಿ ಇರುತ್ತದೆ. ನಾಲ್ಕು ಆಳಿಗೆ ಕಲ್ಲು ಕೆಳಗೆ ಹಳದಿ ಮಣ್ಣು ಇರುತ್ತದೆ. ದಿಬ್ಬವು ಮುಳ್ಳಿಲ್ಲದೆ ಶುಭ್ರ ಹೂಗಳಿಂದ ಕೂಡಿದ್ದರೆ ಆ ನೆಲದಲ್ಲಿ ಮೂರುವರೆ ಆಳಿನ ಒಳಗೆ ನೀರಿದೆ ಎಂದು ತಿಳಿಯಬೇಕು. ನೀರಿಲ್ಲದ ಪ್ರದೇಶದಲ್ಲಿ ಖರ್ಜೂರ ಮರ ಮೇಲೆ ಎರಡಾಗಿ ಸೀಳಿದ್ದರೆ ಅದರ ಪಶ್ಚಿಮಕ್ಕೆ ಮೂರಾಳು ಒಳಗೆ ನೀರು ಇದೆ ಎಂದು ಸೂಚನೆ. ಬಿಳಿ ಹೂ ಬಿಟ್ಟು ಕರ್ಣಿಕಾರ ಅಥವಾ ಮುತ್ತುಗದ ಗಿಡವಿದ್ದರೆ ಅದರ ಎರಡು ಮೊಳ ಎಡಕ್ಕೆ ಮೂರು ಆಳುಗಳ ಒಳಗೆ ನೀರು ಇರುತ್ತದೆ (ಶ್ಲೋಕ ೧೦೬-೧೧೫) ಬಿಸಿ ಹಬೆ ಅಥವಾ ಹೊಗೆ ಕಾಣುವ ನೆಲದಲ್ಲಿ ೨ ಆಳೊಳಗೆ ನೀರಿನ ನಾಡಿ ದೊಡ್ಡ ಪ್ರವಾಹದೊಂದಿಗೆ ತೋರಿಬರುತ್ತದೆ. ಹೊಲದ ಯಾವ ಮೂಲೆಯಲ್ಲಿ ಹುಟ್ಟಿದ ಸಸ್ಯ ಬೇಗ ಹಾಳಾಗುತ್ತದೋ ಅಥವಾ ತುಂಬಾ ಒತ್ತಾಗಿ ಬೆಳೆದು ಬಿಳಿಚಿ ಕೊಳ್ಳುವುದೋ ಅಲ್ಲಿ ಎರಡು ಆಳಗಳೊಳಗೆ 'ಮಹಾಸಿರಾ' (ದೊಡ್ಡ ಜಲನಾಡಿ) ಇರುತ್ತದೆ. ಕುರಟಗೆ ಗಿಡದ ಈಶಾನ್ಯಕ್ಕೆ ಹುತ್ತವಿದ್ದರೆ ಅದರ ಪಶ್ಚಿಮಕ್ಕೆ ನೀರಿರುತ್ತದೆ. ಅಲ್ಲಿ ಉತ್ತರಕ್ಕೆ ಹರಿಯುವ ಸಿರಾ ಐದು ಆಳು ಒಳಗೆ ಇರುತ್ತದೆ. ಮಂಡರಗಪ್ಪೆಯ ಗುರುತಿದ್ದು ಕಂದು ಬಣ್ಣದ ಮಣ್ಣು, ಆಮೇಲೆ ಹಸಿರು ಇದ್ದರೆ ಅದರ ಒಂದು ಆಳು ಕೆಳಗೆ ಕಲ್ಲು ಅದರ ತಳದಲ್ಲಿ ನೀರು ಇರುತ್ತದೆ. ಎಲಚಿ ಸಸಿನೆಟ್ಟು ಅದು ಸೊಂಪಾಗಿ ಬೆಳೆದರೆ ಹುತ್ತ ಇಲ್ಲದಿದ್ದರೂ ಮೂರು ಮೊಳ ಪಶ್ಚಿಮಕ್ಕೆ ಹದಿನಾರು ಆಳದ ಒಳಗೆ ನೀರು ಸಿಗುತ್ತದೆ. ಮೊದಲಲ್ಲಿ ಒಳ್ಳೆ ಸಿಹಿ ನೀರು, ಒಂದು ಸಿರಾ ದಕ್ಷಿಣದಲ್ಲಿದ್ದು ಇನ್ನೊಂದು ಉತ್ತರದಿಂದ ಹೊರಡುತ್ತದೆ. ಹಿಟ್ಟಿನಂಥ ಕಲ್ಲು ಬಿಳಿ ಮಣ್ಣು ಅರ್ಧ ಆಳಿಗೆ ಚೇಳು ಇದು ಇದರ ಗುರುತು. ಎಲಚಿಮರ ಬಿದಿರಿನ ಮೊಳಕೆ ಜತೆಗೆ ಇದ್ದರೆ ಅದರ ಮೂರು ಮೊಳ ಪಶ್ಚಿಮಕ್ಕೆ ಹದಿನೆಂಟು ಆಳದ ಒಳಗೆ ತುಂಬನೀರಿನ ಐಶಾನೇ (ಈಶಾನ್ಯ ದಿಕ್ಕಿನಿಂದ ಬರುವ) ಜಲನಾಡಿ ಅಲ್ಲಿರುತ್ತದೆ. ಕೆಂಪು ಪುತ್ತು ಮತ್ತು ಬಿದಿರು ಅಥವ ಕೆಂಪು ಮತ್ತು ಬಿಲ್ವ ಒಟ್ಟಿಗೆ ಇದ್ದರೆ ಎರಡು ಅಥವಾ ಮೂರು ಮೊಳ ಪಶ್ಚಿಮಕ್ಕೆ ಇಪ್ಪತ್ತೊಂದು ಆಳಿಗೆ ನೀರು ಇರುತ್ತದೆ. ಗಂಟು ಹೆಚ್ಚಾದ ಬನ್ನಿಮರ, ಅದರ ಉತ್ತರಕ್ಕೆ ಹುತ್ತವಿದ್ದರೆ ಅಲ್ಲಿಂದ ಐದು ಮೊಳ ಪಶ್ಚಿಮಕ್ಕೆ ಮೂರೂವರೆ ಆಳದಲ್ಲಿ ನೀರಿರುತ್ತದೆ. ಒತ್ತಾಗಿ ಎತ್ತರವಾದ ಮರಗಿಡ ಬಳ್ಳಿಗಳಿದ್ದು ಎಲೆಗಳು ಒಡೆದು ಹೋಗಿದ್ದರೆ ಅಲ್ಲಿ ಜಲನಾಡಿ ಇರುತ್ತದೆ. ಅದರ ಪೂರ್ವಕ್ಕೆ ಪದ್ಮ, ಮಂಗಾರೆ, ಲಾಮಂಚ, ಹೆಗ್ಗುಳದಗಿಡ, ಜೊಂಡು, ಕುಶ (ಹುಲ್ಲು) ಅಥವಾ ನಲಿನೀಸಕ (ಒಂದು ಜಾತಿ ತಾವರೆ) ಗುರುತಾಗಿರುತ್ತದೆ. (ಶ್ಲೋಕ ೧೧೬-೧೨೫)

ಖರ್ಜೂರ, ನೇರಳೆ, ಅರ್ಜುನ, ಕೇದಿಗೆ ಅಥವಾ ಹಾಲುಮರ, ಗಿಡ ಬಳ್ಳಿಗಳಿದ್ದರೆ, ನಾಯಿಕೊಡೆ, ಆನೆ, ಹಾವು ಕನ್ನೈದಿಲೆ, ರಾತ್ರಿ ರಾಣಿ, ಇಂದುವಾರಗಳಿದ್ದರೆ, ತಾರೆಗಿಡ ಕಾಡುಮಲ್ಲಿಗೆ ಗಿಡಗಳಿದ್ದರೆ, ಬೆಟ್ಟದ- ಮೇಲೊಂದು ಬೆಟ್ಟವಿದ್ದರೆ, ಅಲ್ಲಿ ಮತ್ತು ಜೊಂಡುನೆಲ, ಹುಲ್ಲು ತುಂಬಿದ ಕಪ್ಪು ಮಣ್ಣು ಮತ್ತು ಬೆಣಚುಕಲ್ಲು ಇರುವಕಡೆ ಮೂರು ಆಳಿಗೆ ನೀರು ಸಿಗುತ್ತದೆ. ಕಪ್ಪು ಅಥವಾ ಕೆಂಪು ಮಣ್ಣು ಇರುವಲ್ಲಿ ನೀರು ಸಿಹಿಯಾಗಿ ಇರುತ್ತದೆ. ಬೆಣಚುಕಲ್ಲು ತಾಮ್ರಭೂಮಿ ನೀರನ್ನು ಒಗರುಗೊಳಿಸುತ್ತದೆ. ಕಂದು ನೆಲ ಕ್ಷಾರಗೊಳಿಸುತ್ತದೆ. ಬಿಳಿ ಮಣ್ಣಿನಲ್ಲಿ ಉಪ್ಪು ತೋರುತ್ತದೆ. ಮತ್ತಿ, ಕೆಂಪುಮತ್ತಿ, ಬಿಲ್ವ, ಸರ್ಜ ಶ್ರೀಪರ್ಣ, ಅರಿಷ್ಟಾದವ ಮತ್ತು ಶಿಂಶುಪಾ ಮರಗಿಡಗಳ ಬಳ್ಳಿಗಳ ಎಲೆ ಛಿದ್ರವಾಗಿರುವುದು ನೀರು, ರೂಕ್ಷ (Hard) ಆಗಿರುವುದನ್ನೂ ದೂರವಿರುವುದನ್ನು ತಿಳಿಸುತ್ತದೆ. ಸೂರ್ಯ, ಅಗ್ನಿ, ಬೂದಿ, ಒಂಟೆ, ಹೇಸರ್ಗತ್ತೆ ಈ ಬಣ್ಣಗಳು ಇರುವ ನೆಲದಲ್ಲಿ ನೀರಿಲ್ಲದೆಂದು ತೋರಿಸುತ್ತವೆ. ಕೆಂಪು ಚಿಗುರು, ಹಾಲು ತುಂಬಿದ ಬಿದಿರು, ಕೆಂಪು ನೆಲ ಇದ್ದರೆ ಕಲ್ಲಿನ ಕೆಳಗೆ ನೀರು ಉಂಟು. ವೈಢೂರ್ಯ, ಮುತ್ತು, ಮೋಡ, ನೀಲದ ಹೊಳಪಿನ ಅಥವ ಕಳಿತವಾಗುತ್ತಿರುವ ಅತ್ತಿಯ ಹತ್ತಿರದಲ್ಲಿರುವ ನೆಲ ಅದರ ಕೆಳಗೆ ಕಾಡಿನ ಅಥವಾ ಕಂದು ಬಣ್ಣದ ಕಲ್ಲಿದ್ದರೆ ಹತ್ತಿರದಲ್ಲಿ ತುಂಬಾ ನೀರಿದೆ ಎಂದು ತಿಳಿಯಬೇಕು. ಪಾರಿವಾಳದ ರೆಕ್ಕೆ ಯಂತಹ ಅಥವಾ ರೇಷ್ಮೆ ಬಟ್ಟೆ ಬಣ್ಣದ ಭೂಮಿ ಸೋಮನಬಳ್ಳಿಯಂತಹ ಭೂಮಿ ಬತ್ತದೆ ಇರುವ ನೀರನ್ನು ಉಂಟುಮಾಡುತ್ತದೆ. ತಾಮ್ರದ ಜತೆಗಿದ್ದು ಬಣ್ಣದ ಚುಕ್ಕಿಗಳಿರುವ ಕಲ್ಲು, ಬಿಳಿ, ಬೂದು ಬಣ್ಣದವು ಒಂಟೆ ಅಥವಾ ಕತ್ತೆ ಬಣ್ಣದವು, ಭಂಗಿ, ಅಂಬಷ್ಟಕಾ (ಜುಗ್ಗಿ/ಅಂಬಾಡಿ) ಹೂವಿನ ಬಣ್ಣದ ಕಲ್ಲು ಕಲ್ಲು ಅಥವಾ ಸೂರ್ಯ ಬೆಂಕಿ ಬಣ್ಣದ ಕಲ್ಲುಗಳಿದ್ದರೆ ಅಲ್ಲಿ ನೀರಿರುವುದಿಲ್ಲ. ಕೆಳಗೆ ಇರುವ ನೀರನ್ನು ಹೀಗೆ ತಿಳಿದು ನಾಡಿ ಇರುವ ಕಡೆ ಲಗ್ನ ಶುದ್ಧಿ ಇರುವಾಗ ಬಾವಿ ಅಗೆಯಬೇಕು. ಹಸ್ತ, ಮಘ, ಅನುರಾಧ, ಪುಷ್ಯ ಧನಿಷ್ಠಾ, ಉತ್ತರಾ, ಅಶ್ವಿನಿ, ರೋಹಿಣಿ, ಶತಭಿಷಾ ಇವು ಬಾವಿ ತೋಡಲು ಆರಂಭಿಸುವುದಕ್ಕೆ ಒಳ್ಳೇ ನಕ್ಷತ್ರಗಳು. ಹೀಗೆ ವಿಸ್ತಾರವಾಗಿ ನೀರಿನ

ನೆಲೆಗಳನ್ನು ಗುರ್ತಿಸುವ ಬಗ್ಗೆ ಮತ್ತು ನೀರಿನ ಆಕರಗಳಿಗೂ ಮತ್ತು ಸಸ್ಯ ಸಂಕುಲಕ್ಕೂ ಇರುವ ಸಂಬಂಧವನ್ನು ವಿವರಿಸಿದ್ದಾನೆ. ಭೂ ವಿಜ್ಞಾನ, ಸಸ್ಯ ವಿಜ್ಞಾನ ಮತ್ತು ಜಲಶಾಸ್ತ್ರಕ್ಕೆ ಇರುವ ನಿಕಟ ಸಂಬಂಧಗಳ ಸ್ಪಷ್ಟ ದಾಖಲೆ ಇದಾಗಿದೆ. ಕೇವಲ ಬೇವಿನಕಡ್ಡಿ, ಗಡಿಯಾರ, ಕಬ್ಬಿಣದ ವೈ-ಆಕಾರದ ಸಲಾಕೆಗಳಿಂದ ಜಲ ನಾಡಿಯನ್ನು ಗುರ್ತಿಸುವ ಹಲವಾರು ಜಲತಜ್ಞರು ಇಲ್ಲಿ ಹೇಳಿರುವ ವಿವರಗಳನ್ನು ಗಮನಿಸಿದರೆ ಮತ್ತು ಜಲ ವಿಜ್ಞಾನಿಗಳೂ ಇಲ್ಲಿಯ ಮಾಹಿತಿಯನ್ನು ವಿಶ್ಲೇಷಿಸುವಂತಾದರೆ ಅದರಿಂದ ಹೆಚ್ಚಿನ ಉಪಯೋಗ ಹೊಂದಬಹುದಲ್ಲವೆ?

ಜಲಪ್ರಭೇದಗಳು

ನಾವು ಬಳಸುವ ನೀರಿನಲ್ಲಿ ಒಂಭತ್ತು ವಿಧಗಳಿಂತಿವೆ;

ದಿವ್ಯ ಜಲ : ಸ್ವಾತಿ ನಕ್ಷತ್ರದಲ್ಲಿ ಮೋಡದಿಂದ ಸುರಿವ "ಸೂರ್ಯ ಕಿರಣಗಳಿಂದ" ಮಿಶ್ರಿತವಾದ ನೀರು ದಿವ್ಯ ಜಲ. ಸೂರ್ಯನ ಕಿರಣಗಳು ನೀರಿನಲ್ಲಿಯ ಕ್ರಿಮಿಗಳನ್ನು ನಾಶ ಮಾಡುತ್ತವೆ. ಅಲ್ಲದೇ ಮೋಡಗಳ ಮಟ್ಟದಲ್ಲಿಯೇ ಶುದ್ಧೀಕರಣ ಪ್ರಾರಂಭವಾಗುತ್ತದೆ. ಈ ಮಳೆಯ ನೀರಿನ ಹನಿಗಳಿಂದ ಸಮುದ್ರದಲ್ಲಿ ಮುತ್ತುಗಳು ಉತ್ಪತ್ತಿಯಾಗುತ್ತವೆಂಬ ಮಾಹಿತಿಯೂ ಇದೆ.

ಆಂತರಿಕ್ಷ : ಮಳೆಗಾಲದಲ್ಲಿ ಆಕಾಶದಲ್ಲಿ ಉಂಟಾಗುವ ಮೋಡಗಳಿಂದ ಸುರಿವ ನೀರು. ತೀರ ಇತ್ತೀಚಿನವರೆಗೆ ಜಲ-ರಸಾಯನ ಶಾಸ್ತ್ರಜ್ಞರೂ ಮಳೆಗಾಲದಲ್ಲಿ ಮೋಡಗಳಿಂದ ಸುರಿವ ನೀರು ಶುದ್ಧ ಜಲವೆಂದೇ ನಂಬಿದ್ದರು. ಆದರೆ ಇತ್ತೀಚಿನ ವಾಯು ಮಾಲಿನ್ಯದಿಂದಾಗಿ ಮಲೆನಾಡಿನ ಕೆಲವು ಭಾಗಗಳಲ್ಲಿ ಆಮ್ಲೀಯ ಮಳೆಯಾಗಿರುವುದು ಕಂಡುಬಂದಿದೆ. ಈ ಅಂಶ ಸರ್ವಕಾಲೀನ ವಲ್ಲವಾದರೂ ಇದರ ಬಗ್ಗೆ ಇನ್ನೂ ವಿಸ್ತೃತ ಅಧ್ಯಯನಗಳು ನಡೆಯಬೇಕಾಗಿದೆ. ಸಹ್ಯಾದ್ರಿಯ ಎತ್ತರದ ಕಾಡುಗಳಲ್ಲಿ ಮೋಡಗಳು ಮಳೆಗಾಲದಲ್ಲಿ ವೇಗವಾಗಿ ಗಾಳಿಯ ಚಲನೆಯಿಂದ ಘರ್ಷಣೆಗೆ ಒಳಗಾಗುವಾಗ ಉಂಟಾಗುವ ಮಿಂಚಿನಿಂದಲೂ ಮಳೆಯು ಬೀಜ ಮೋಡರೂಪ (Seedling Clouds) ದಲ್ಲೇ ತಕ್ಕಮಟ್ಟಿಗೆ ಶುದ್ಧೀಕರಣಗೊಳ್ಳುವುದು. ಮೋಡಗಳು ದಟ್ಟವಾಗಿ ಅನೇಕ ವಿಧವಾದ ಸಸ್ಯರಾಶಿಯ ಮುಖಾಂತರ ಹಾದು ಹೋಗುವಾಗ ಉಂಟಾಗುವ ಔಷಧೀಯ ಗುಣಗಳಿಗೂ ತಮ್ಮದೇ ಆದ ಮಹತ್ವವಿದ್ದೇ ಇರುತ್ತದೆ. ಮಳೆಯಲ್ಲಿ ನೆನೆಯುತ್ತಲೇ ವ್ಯವಸಾಯದ ಕೆಲಸಗಳನ್ನೂ ಮಾಡುತ್ತಲೇ ಇರುವ ಇಲ್ಲಿಯ ಜನಗಳಿಗೆ ಶೀತ ಉಂಟಾಗುವುದು ಕಡಿಮೆ.

ನಾದಿಯಾ : ಬೆಟ್ಟ ಗುಡ್ಡಗಳಲ್ಲಿ ಹುಟ್ಟುವ ನದಿ ನೀರು ಇಂದ್ರ ನೀಲದಂತೆ ಇರುತ್ತದೆ ಎನ್ನುತ್ತಾನೆ ಬಸವರಾಜ. ಇಂದ್ರ ನೀಲವೆಂಬ ವಜ್ರದ ಒಂದು ರೂಪದಿಂದ, ನೀರಿನ ಖನಿಜಾಂಶಗಳು ಹೆಚ್ಚುತ್ತವೆನ್ನುವ ಹೊಸ ಅಂಶದ ಸುಳಿವು ಇಲ್ಲಿದೆ.

ನಿಶ್ಯಾಂದ : ನೀರು ಉಕ್ಕುವ ಪ್ರದೇಶದಲ್ಲಿ ಕೈಯಿಂದ ಮರಳನ್ನು ತೆಗೆದರೆ ದೊರಕುವ ಒರತೆ ನೀರು ಹೆಚ್ಚಿನ ಉಷ್ಣಾಂಶವನ್ನು ಹೊಂದಿದ್ದು ಶುದ್ಧಜಲವಾಗಿರುತ್ತದೆ. ಆದರೆ ನೀರುಕ್ಕುವ ಪ್ರದೇಶ ಮಲ, ಮೂತ್ರ ಇತ್ಯಾದಿಗಳಿಂದ ಕಲುಷಿತ ವಾಗಿರಬಾರದೆನ್ನುವುದನ್ನು ಅವಶ್ಯವಾಗಿ ತಿಳಿದಿರಬೇಕು.

ಸರಸ : ತಾವರೆ, ಲಿಲ್ಲಿ ಹೂ ಇರುವ, ನದಿ ಮತ್ತು ಬಂಡೆಗಳಲ್ಲಿ ಹರಿದು ಬರುವ ನೀರಿಗೆ ಸರಸವೆಂದು ಹೆಸರು.

ಭೌಮ : ಬಾವಿ, ಕೊಳಗಳಲ್ಲಿ ತಾವರೆ ಇತ್ಯಾದಿ ಸಸ್ಯಗಳಿರುವ ಸ್ಥಳಗಳಲ್ಲಿ ಒಳ್ಳೆಯ ರುಚಿಯುಳ್ಳ ನೈದಿಲೆಯ ಬಣ್ಣದ ಕುಡಿವ ನೀರು ಉತ್ತಮ ಗುಣ ಉಳ್ಳದ್ದಾಗಿರುತ್ತದೆ. ಇದು ವೈಜ್ಞಾನಿಕ ಸತ್ಯವೂ ಹೌದು. ಏಕೆಂದರೆ ಕೆಂದಾವರೆಯಾಗಲೀ, ನೈದಿಲೆಯಾಗಲೀ ಅಶುದ್ಧ ಜಲದಲ್ಲಿ ಬೆಳೆಯುವುದೇ ಇಲ್ಲ. ಆಕಸ್ಮಾತ್ತಾಗಿ ಇವನ್ನು ಉದ್ದೇಶ ಪೂರ್ವಕವಾಗಿ ತಂದು ಅಶುದ್ಧ ನೀರಿನಲ್ಲಿ ಹಾಕಿದರೂ ಅವು ಹೆಚ್ಚು ಕಾಲ ಇರುವುದಿಲ್ಲ. ಇವುಗಳ ಎಲೆಗಳಿಂದ ಉತ್ಪತ್ತಿಯಾಗುವ ಆಮ್ಲಜನಕದ ಪ್ರಮಾಣವು ಹೆಚ್ಚಿರುತ್ತದೆ. ನೀರಿನ ರುಚಿ ಅದರಲ್ಲಿ ಕರಗಿರುವ ಆಮ್ಲಜನಕದ ಪ್ರಮಾಣವನ್ನೇ ಅವಲಂಬಿಸಿದ್ದು ಅದು ಒಂದು ಲೀಟರ್ ನೀರಿಗೆ ೪ ರಿಂದ ೭.೫ ಮಿಲಿಗ್ರಾಂ ಆಗಿರುತ್ತದೆ.

ಕೌಂಡ : ದೊಡ್ಡ ದೊಡ್ಡ ಬಂಡೆಗಳಿಂದ ಆವೃತವಾಗಿದ್ದು ಅವುಗಳ ಮಧ್ಯದಲ್ಲಿ ಉಂಟಾದ ಕೊಳಗಳಲ್ಲಿರುವ ನೀರನ್ನು ಕೌಂಡವೆಂದು ಹೆಸರಿಸಿದ್ದಾನೆ. ಇದು ಕುಡಿಯಲು ಸಿಹಿಯಾಗಿದ್ದು 'ಅಸಾಟಿ ಪುಷ್ಪ' ಎನ್ನುವ ಔಷಧಿ ಸಸ್ಯದಿಂದ ಉಂಟಾಗುವ ಗುಣ ಮೌಲ್ಯಗಳನ್ನು ಹೊಂದಿರುತ್ತದೆ.

ತಟಾಕ : ವಿವಿಧ ಬಗೆಯ ಶಿಲೆಗಳಿಂದ ರಚಿಸಲ್ಪಟ್ಟ ಪುಷ್ಕರಣಿ, ಸರೋವರಗಳಲ್ಲಿ ಶೇಖರಿಸಲ್ಪಟ್ಟ ನೀರಿದು. ಪ್ರತಿವರ್ಷವೂ ಹೊಸ ನೀರಿನಿಂದ ತುಂಬ ಬೇಕು. ಇಂತಹ ಬೇರೆ ಬೇರೆ, ಶಿಲೆಗಳಿಂದ ರಚಿತವಾದ ತಟಾಕ ನಿರ್ಮಾಣಗಳನ್ನು ಇಂದಿಗೂ ಕಾಣುತ್ತೇವೆ. ಉದಾಹರಣೆಗೆ ಬಾದಾಮಿ, ಮಹಾಕೂಟ ಇತ್ಯಾದಿಗಳಲ್ಲಿ ಕೆಂಪು ಮರಳಿನ ಶಿಲೆಗಳು ಚಿತ್ರದುರ್ಗದ ವೇಣುಗೋಪಾಲಸ್ವಾಮಿ ಹೊಂಡ, ಚಂದ್ರವಳ್ಳಿ ಕೆರೆ, ಹಂಪೆಯ ಬಹುತೇಕ ನೀರಿನ ಕೊಳಗಳು ಗಟ್ಟಿ ಗ್ರಾನೈಟ್ ಶಿಲೆಗಳಿಂದಲೂ, ಕೆಲವು (Soap Stone) ಸೋಪ್ ಸ್ಟೋನ್‌ಗಳಿಂದಲೂ ನಿರ್ಮಿತವಾಗಿವೆ.

ನಿರ್ಝರ : ಬಂಡೆಗಳಿಂದ ಧುಮುಕುವ ಜಲ ಎಂದರೆ ತೊರೆ, ಜಲಪಾತ ಇತ್ಯಾದಿಗಳ ನೀರು. ಇದು ಮೆದು ನೀರಾಗಿದ್ದು (Soft Water) ಅದು ಬಂಡೆಗಳ ಮೂಲಕ ಬಂದಂಥ ಜಲ

ವಾಗಿರುತ್ತದೆ. ವಿವಿಧ ಶಿಲಾಕಣಗಳಲ್ಲಿ (ರಭಸವಾಗಿ) ಹರಿದು ಬರುವಾಗ ತೇಲುವ ಕಶ್ಮಲಗಳು ತಕ್ಕಮಟ್ಟಿಗೆ ಸೆರೆ ಹಿಡಿಯಲ್ಪಟ್ಟರೆ, ಸೂರ್ಯಕಿರಣಗಳಿಗೆ ಹೆಚ್ಚು ಮೈಯೊಡ್ಡಿಕೊಳ್ಳುವುದರಿಂದ ಅದರಲ್ಲಿಯ ಹಾನಿಕಾರಕ ಜೀವಾಣುಗಳು ನಾಶ ಹೊಂದುತ್ತವೆ. ಎತ್ತರದಿಂದ ಧುಮುಕುವಾಗ್ಗೆ ಗಾಳಿಯಲ್ಲಿನ ಆಮ್ಲಜನಕದ ಕರಗುವಿಕೆ ಹೆಚ್ಚಾಗಿ ರುಚಿಯಾಗಿರುತ್ತದೆ. ಜಲಚರಗಳಾದ ಕಪ್ಪೆ, ಮೀನು, ಏಡಿ, ಇತ್ಯಾದಿಗಳೂ ನೀರಿನಲ್ಲಿ ಕರಗಿರುವ ಆಮ್ಲಜನಕವನ್ನೇ ಉಪಯೋಗಿಸಿಕೊಂಡು ಉಸಿರಾಡುತ್ತವೆ. ಅಲ್ಲದೇ ಅವುಗಳೂ ನೀರಿನಶುದ್ಧೀಕರಣಕ್ಕೆ ಪರ್ಯಾಯವಾಗಿ ಸಹಕಾರಿಯಾಗಿವೆ. ಇಂದಿಗೂ ವೈಜ್ಞಾನಿಕವಾಗಿ ಶುದ್ಧವಾಗಿರುವ ನೀರನ್ನು ಇಂತಹ ಪ್ರಾಣಿಗಳ ಜೀವಂತಿಕೆಯಿಂದಲೇ ಗುರ್ತಿಸುತ್ತಾರೆಂದು ಬೇರೆ ಹೇಳಬೇಕಾಗಿಲ್ಲ. ಇದನ್ನು ಫಿಷ್‌ಕಲ್ಚರ್ (Fish culture) ಎಂದು ಕರೆಯುತ್ತಾರೆ.

ಈ ಒಂಭತ್ತು ವಿವಿಧ ರೀತಿಯ ಜಲರೂಪಗಳನ್ನಲ್ಲದೇ 'ವೃಕ್ಷ ಜಲ' "ವೃಕ್ಷಾಂಬು"ವೆಂದು ಎಳನೀರನ್ನು ಗುರ್ತಿಸಿ ಅದು ದೇಹಕ್ಕೆ ತತ್‌ಕ್ಷಣ ಪೌಷ್ಟಿಕಾಂಶಗಳನ್ನು ಒದಗಿಸಿ, ರುಚಿಕೊಟ್ಟು ಮನಸ್ಸಿಗೆ ಹೊಸ ಹುಮ್ಮಸ್ಸು ಉಂಟುಮಾಡುತ್ತದೆ ಎಂದು ಪ್ರಸ್ತಾಪಿಸಿದ್ದಾನೆ. (ಶ್ಲೋಕ ೬ನೇ ಕಲ್ಲೋಲ, ೨೦ನೇ ತರಂಗ)

ದಶಮಂ ಕೇಚಿದಿಚ್ಛಂತಿ ವಾರ್ಕ್ಷಂ ಜೀವನಮುತ್ತಮಮ್।
ನಾರಿಕೇಲ ಸಮುದ್ಭೂತಂ ಸ್ವಾದು ವೃಷ್ಯಂ ಮನೋಹರಮ್ ॥೬೫॥

ಹಂಸೋದಕ : ಸೂರ್ಯನ ಕಿರಣಗಳಿಂದ ಕಾಯಿಸಿದ ನೀರನ್ನು ಚಂದ್ರನ ಬೆಳಕಿನಲ್ಲಿ ತಣ್ಣಗಾಗಿಸಿ ಉಪಯೋಗಿಸುವುದಕ್ಕೆ ಹಂಸೋದಕವೆಂದು ಹೆಸರು. ಇದಕ್ಕೆ ಇನ್ನೊಂದು ಹೆಸರು 'ಸಂಸ್ಕಾರಿತ ಜಲ' ಮಂಗರಸನ ಸೂಪಶಾಸ್ತ್ರದಲ್ಲಿಯೂ[೧೦] ಹಂಸೋದಕವನ್ನು ತಯಾರಿಸುವ ವಿಧಾನವನ್ನು ಹೇಳಿದ್ದಾನೆ. ಬೆಳಗಿನ ಜಾವದಲ್ಲಿ ಶುದ್ಧವಾದ ನೀರನ್ನು ಒಂದು ಮಡಕೆಯಲ್ಲಿ ತಂದು ಅದನ್ನು ಮೇಲು ಮಹಡಿಯಲ್ಲಿ ಮಾರನೆಯ ಬೆಳಗಿನವರೆಗೆ ಇರಿಸಿ ಬೆಳಗ್ಗೆ ಅದನ್ನು ಗವಾಕ್ಷವಿರುವ ಮಾಳಿಗೆಯಲ್ಲಿಟ್ಟು ಶೈತ್ಯಗೊಳಿಸಿ ಅದಕ್ಕೆ ಪರಿಮಳದ ಹೂಗಳನ್ನು ಹಾಕಿ ತಣ್ಣಗಿರುವ ಮಡಕೆಗೆ ಅದನ್ನು ತುಂಬಿಸಿ ನೆಲುವಿನಲ್ಲಿ ತೂಗು ಹಾಕಿ ಬೀಸಣಿಗೆಯಿಂದ ಗಾಳಿ ಬೀಸುತ್ತಿರಬೇಕು. ಹೀಗೆ ತಯಾರಿಸಿದ ನೀರಿನ ಹೆಸರು ಹಂಸೋದಕ

ಪೂರ್ವ-ಶುದ್ಧೀಕರಣ ವಿಧಾನ : ಕುಡಿಯುವ ನೀರನ್ನು ಪೂರ್ವದಲ್ಲಿ ೩ ವಿಧಾನಗಳಿಂದ ಶುದ್ಧೀಕರಿಸಬೇಕು.

೧. **ಪಿಂಡಾವಾಸ** : ಒಂದು ಗೊತ್ತಾದ ಪ್ರಮಾಣದ ಮಣ್ಣಿಗೆ ಪಹಣ, [೧೧]ಮುಸ್ತಕ, ಮೆಣಸು [೧೨]ಉಷಿರ ಮತ್ತು ಚಂದನ (ಗಂಧ) ಇವನ್ನೆಲ್ಲ ಸೇರಿಸಿ ಬೆಂಕಿಯಲ್ಲಿ ಬೇಯಿಸಿ ನಂತರ ಶುದ್ಧ ಜಲದಲ್ಲಿ ಹಾಕಬೇಕು. ಇಂತಹ ಪೂರ್ವ ಶುದ್ಧೀಕರಿಸಿದ ಜಲವು ಎಲ್ಲ ರೀತಿಯ ಕಾಯಿಲೆಗಳಿಗೆ ಗುಣಕಾರಕ (೬೯-೭೦).

೨. **ಪುಷ್ಪಾ ವಾಸ** : ನೀರನ್ನು ಕುಡಿಯಲು ಬಳಸುವುದಕ್ಕೆ ಮುನ್ನ ಮಾವಿನ ಹಣ್ಣಿನ ರಸದಿಂದಾಗಲೀ, ಹೊಸ ಗುಲಾಬಿಯ ಪಕಳೆಗಳಿಂದಾಗಲಿ, ಉತ್ಪಲ (ತಾವರೆಹೂ) ಮತ್ತು ಸಂಪಿಗೆ (ಚಂಪಕ) ಹೂವಿನಿಂದಾಗಲೀ ಪರಿಮಳಿಸಬೇಕು. ಇದು ಇಂದಿನ ಆರೋಮ್ಯಾಟಿಕ ಥಿಯರಪಿ (Aromatic Therapy) ಎನ್ನುವ ಆಧುನಿಕ ರೋಗ ನಿಧಾನಗಳ ವಿಧಾನಗಳಲ್ಲಿ ಒಂದಾಗಿದೆ.(೭೧)

೩) ರುಚಿ ಮತ್ತು ಸಿಹಿಗಳನ್ನು ಹೆಚ್ಚಿಸಲು ಲವಂಗದ ಪುಡಿ ಲಾವಂಚ, ಉಷಿರ, ಕೇಸರಿ, ಅಗಿಲುಗಂಧ, ಶ್ರೀಗಂಧ, ಶೈಲಾ, ನೆಲ್ಲಿಕಾಯಿ, ಕರ್ಪೂರ, ಬಾಲಮೆಣಸು, ಆಳಲೆಕಾಯಿ ಇವುಗಳಿಂದ ತಯಾರಿಸಲಾದ ಮಿಶ್ರ ಇವನ್ನು ಶುದ್ಧ ಮತ್ತು ತಣ್ಣನೆ ನೀರಿಗೆ ಹಾಕಬೇಕು ನೀರಿಗೆ ಮಾಧುರ್ಯವನ್ನುಂಟುಮಾಡುವ ಈ ಕ್ರಮಕ್ಕೆ "ಚೂರ್ಣಾಧಿವಾಸ"ವೆಂದು ಹೆಸರು (೭೨, ೭೩)

ಘಣಾಮುಸ್ತಕ ಸಂಯುಕ್ತೈರೇ ಲೋಶೀರಕ ಚಂದ ನೈಃ।
ಮುದಿತಂ ಮೃತ್ತಿಕಾ ಪಿಂಡಂ ಖದಿರಾಂಗಾರ ಪಾಚಿತಮ್॥೬೯
ನಿಕ್ಷಿಪ್ತಂ ನಿರ್ಮಲೇ ತೋಯೇ ಸರ್ವದೋಷಹರೇ ಶುಭೇ।
ಕಥಿತಃ ಪಿಂಡವಾಸೋಟೀಯಂ ಸಲಿಲೇಸು ವಿಚಕ್ಷಣೈಃ॥೭೦।
ಲವಂಗೋ ಶೀರಕರ್ಪೂರ ಕಾಶ್ಮೀರಾ ಗುರು ಚಂದನೈಃ।
ಶೈಲಾಮಲಕ ತಕ್ಕೋಲ ಪಥ್ಯಾ ಕರ್ಪೂರ ಸಂಯುತೈಃ ॥೭೨॥
ವಿಚೂರ್ಣಿತೈಃ ಸಮ್ಮೈರೇಭಿಃ ಸುಶೀತಾ ಮಲ ವಾರಿಣಾ।
ಚೂರ್ಣ ಧಿವಾಸನಂ ಪ್ರೋಕ್ತಂ ಜಲಮಾಧುರ್ಯ ಕಾರಕಮ್॥೭೩॥

ಶುದ್ಧ ನೀರನ್ನು ಸಂಗ್ರಹಿಸುವ ವಿಧಾನ

ಮೃದುವಾದ, ಕೆಂಪಾದ ಜೇಡಿಮಣ್ಣಿನಿಂದ ಮಾಡಿದ ಮಡಕೆಗಳಲ್ಲಿ ಶೇಖರಿಸಬೇಕು. ಶುದ್ಧವಾದ ತಾಮ್ರದ ಪಾತ್ರೆ, ಕೊಡಗಳನ್ನು ನೀರು ತರುವ ಮೊದಲು ಮೂರು ಸಲ ತೊಳೆದು ನಂತರ ತರಬೇಕು. ಹೀಗೆ ಸಂಗ್ರಹಿಸಿದ ನೀರಿನ ಉಪಯೋಗವನ್ನು ಆನೆಗುಂದಿ ರಾಜಮನೆತನದವರು ಇಂದಿಗೂ ಅನುಸರಿಸುತ್ತಿದ್ದಾರೆ.

ತಾಮ್ರದ ಪಾತ್ರೆಗಳಿಗೆ ಬೆಳ್ಳಿ ಬಂಗಾರ ಇತ್ಯಾದಿ ಲೋಹಗಳಿಂದ ಮಾಡಿದ ಕೊಳವೆಗಳಿರಬೇಕು. ಅವನ್ನು ಒದ್ದೆ ಬಟ್ಟೆಯಿಂದ ಸುತ್ತಿರಬೇಕು. ಆಗ ನೀರು ತಂಣಗೆ ಇರುತ್ತದೆ. ನೀರನ್ನು ತಣ್ಣಗೆ ಇಡಲು ಪಾತ್ರೆಯ ಮೇಲಿನಿಂದ ಗಾಳಿ ಹಾಕುತ್ತಿರಬೇಕು. ರಾಜನಾದವನು ಬಂಗಾರದ ಪಾತ್ರೆಯಲ್ಲಿ ಮಾತ್ರ ಕುಡಿವ ನೀರನ್ನು ಸೇವಿಸಬೇಕು. (ಈಗ ನಮ್ಮ ಆರೋಗ್ಯ ಕೆಡದಂತಿರಲು ಸಾಮಾನ್ಯರೂ ಬಳಸಿದರೆ ಒಳ್ಳೆಯದು)

ವಿವಿಧ ಋತುಗಳಲ್ಲಿ ಬಳಸಲು ಯೋಗ್ಯವಾದ ನೀರಿನ ಗುಣ-ಲಕ್ಷಣಗಳು

'ಸ್ವಾತಿ' ನಕ್ಷತ್ರದಲ್ಲಿ ಆಗುವ ಮಳೆ ನೀರಿನ್ನು ಸಂಗ್ರಹಿಸಿ

ಹೇಮಂತ ಋತುವಿನಲ್ಲಿ ಬಳಸಬೇಕು. ಹೇಮಂತ ಋತುವಿನಲ್ಲಿ ನದಿ ನೀರು ಕುಡಿಯಲು ಯೋಗ್ಯ. ಮಂಜಿನಿಂದ ಸಂಸ್ಕರಿಸಿದ ಮಧ್ಯಾಹ್ನದ ಪ್ರಖರ ಬಿಸಿಲಿನಿಂದ ಶುದ್ಧೀಕರಿಸಿದ ಈ ಕಾಲದ ನೀರು ಕುಡಿಯಲು ಉತ್ತಮವಾಗಿರುತ್ತದೆ. ದಕ್ಷಿಣ ಭಾರತ ನದಿಗಳಲ್ಲಿ ಹೇಮಂತ ಋತುವಿನ ಕಾಲದಲ್ಲಿ ನೀರು ತೀರಾ ಹೆಚ್ಚೂ ಅಲ್ಲದೆ, ಕಡಿಮೆಯೂ ಅಲ್ಲದೆ ಹರಿಯುವುದರಿಂದ ಸೂರ್ಯನ ಕಿರಣಗಳು ನದಿಯ ತಳಭಾಗದವರೆಗೂ ನುಗ್ಗಿ ಅಲ್ಲಿಯ ಹಾನಿಕಾರರ ಸೂಕ್ಷ್ಮ ಜೀವಿಗಳನ್ನು (Harmful Bacterias) ನಾಶ ಮಾಡುವಷ್ಟು; ಎಂದರೆ ೨೮ ಡಿಗ್ರಿ ಸೆಲ್ಸಿಯಸ್‌ನಿಂದ ೩೨ ಡಿಗ್ರಿ ಸೆಲ್ಸಿಯಸ್ ಉಷ್ಣತೆಯಿಂದ ಕೂಡಿದ್ದು ನದಿ ನೀರನ್ನು ಕಾಯಿಸುವುದನ್ನು ನಿತ್ಯವೂ ಕಾಣಬಹುದು. ಈ ಉಷ್ಣತೆಯಲ್ಲಿ ಕೆಲವು ಸೂಕ್ಷ್ಮ ಜೀವಿಗಳು ಬದುಕಲಾರವು. ಶ್ರೀವಾದಿರಾಜರೂ ತಮ್ಮ ತೀರ್ಥ ಪ್ರಬಂಧದಲ್ಲಿ ಮಳೆಗಾಲದಲ್ಲಿ ನದಿ ನೀರು ಕುಡಿಯಲು ಯೋಗ್ಯವಲ್ಲ. ಆಗ ಬಾವಿ ನೀರನ್ನೇ ಕುಡಿಯಲು ಉಪಯೋಗಿಸ ಬೇಕೆಂದು ದಾಖಲಿಸಿದ್ದಾರೆ. ಇದನ್ನೇ ಮುಂದೆ ಬಸವರಾಜನೂ "ಭೌಮ" (ಬಾವಿಯ ನೀರು)ವೆಂದು ಕರೆದಿದ್ದು, ಅದು ಮಳೆಗಾಲದಲ್ಲಿ ಕುಡಿಯಲು ಯೋಗ್ಯವೆಂದು ತಿಳಿಸಿದ್ದಾನೆ. ಹೀಗೆ ಇಬ್ಬರು ಕರ್ನಾಟಕದ ಮಹನೀಯರು ಬೇರೆ ಬೇರೆಕಾಲಘಟ್ಟಗಳಲ್ಲಿ ಮಲೆನಾಡಿನಲ್ಲಿ ಜೀವಿಸಿದವರು ನೀರಿನ ಗುಣ ಲಕ್ಷಣಗಳನ್ನು ದಾಖಲಿಸಿರುವುದು ಸಮಾಜೋ-ಸಾಂಸತಿಕ ವಿಜ್ಞಾನಕ್ಕೆ ಸಾಕ್ಷಿಯಾಗಿವೆ. ವಸಂತ ಋತುವಿನಲ್ಲಿ 'ಸರಸ' ಎನ್ನುವ ಒಂದು ಬಗೆಯ ನೀರನ್ನು ಬಳಸಬೇಕು. 'ನಿರ್ಝರ' ಎನ್ನುವ ಪ್ರಭೇದವನ್ನು ಬೇಸಗೆ ದಿನಗಳಲ್ಲಿ ಉಪಯೋಗಿಸಬೇಕು. ಇದರಲ್ಲಿ ೨ ವಿಧವಾದ ಗುಣಗಳಿರುತ್ತವೆ

೧. ಬೇಸಗೆಯಲ್ಲಿ ಬೆವರು ಹೆಚ್ಚಾಗುವುದರ ಮೂಲಕ ನಮ್ಮ ದೇಹದ ಲವಣಾಂಶಗಳು ಕಡಿಮೆಯಾಗಿರುವುದರಿಂದ 'ನಿರ್ಝರ'ವು ನಮ್ಮ ದೇಹಕ್ಕೆ ಬೇಕಾದ ಲವಣಾಂಶಗಳನ್ನು ಹೊಂದಿರುವುದರಿಂದ ಇಂತಹ ಕೊರತೆಯನ್ನು ನೀಗಿಸುವುದರಿಂದ ಹೆಚ್ಚಿನ ಲವಲವಿಕೆ ಉಂಟಾಗುತ್ತವೆ.

೨. ಬೇಸಗೆಯಲ್ಲಿ ನೀರಡಿಕೆ ಜಾಸ್ತಿ. ಏಕೆಂದರೆ ಹೊರಗಿನ ಉಷ್ಣಾಂಶವನ್ನು ಸರಿಗಟ್ಟಲು ದೇಹದ ಒಳಗಿನ ತೇವಾಂಶವು ಹೆಚ್ಚಾಗಿ ದೇಹದಿಂದ ಹೊರದೂಡುತ್ತದೆ. ಈ 'ನಿರ್ಝರ' ಪ್ರಭೇದದ ನೀರು ಗಿರಿ, ಕಾನನ, ಕೊರಕಲುಗಳಲ್ಲಿ ಹರಿದು ಬರುವುದರಿಂದ ತಣ್ಣಗಿದ್ದು ರುಚಿಯಾಗಿಯೂ ಇರುವುದರಿಂದ ದೇಹಕ್ಕೆ ಹಿತ, ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡುತ್ತದೆ.

ಸರ್ವಋತುಗಳಲ್ಲಿಯೂ ಕುಡಿಯಲು ಯೋಗ್ಯವಾದ ನೀರಿನ ಪ್ರಭೇದಗಳೆಂದರೆ ಹಂಸೋದಕ, ವೃಕ್ಷೋದಕ (ಎಳನೀರು)ಗಳು ಇವು ಮೇಲೆ ಹೇಳಿದ ಎಲ್ಲಾ ಗುಣ ಲಕ್ಷಣ ಗಳನ್ನೂ ಹೊಂದಿರುತ್ತವೆ.

ಸಾರಾಂಶ : ಮೇಲ್ನೋಟಕ್ಕೆ ವಿಶ್ವಕೋಶವಾಗಿರುವ 'ಶಿವತತ್ವರತ್ನಾಕರ'ವು ಮಲೆನಾಡಿನ ಮೋಡ, ಮಳೆ, ತೀರ್ಥಗಳು ಇತ್ಯಾದಿ ವಿವರಣೆಗಳನ್ನು ಒಳಗೊಂಡಿದ್ದು, ಭೂಮಿಯ ಜೀವಶಕ್ತಿ ಯಾಗಿರುವ 'ಜಲಸಂಸತಿ'ಯ ವೈಜ್ಞಾನಿಕ ನೋಟಕ್ಕೆ ಹಿಡಿದ ಕನ್ನಡಿಯಂತಿದೆ. ಹೀಗೆಂದ ಮಾತ್ರಕ್ಕೆ ಎಲ್ಲ ಮಾಹಿತಿಗಳೂ ಸರಿ ಎಂದು ಒಪ್ಪಬೇಕಾಗಿಲ್ಲವಾದರೂ ಈ ಉಪಯುಕ್ತ ಮಾಹಿತಿ ಗಳನ್ನು ಇಂದಿನ ವಿಜ್ಞಾನದ ಅಳವಿಗೆ ತೆಗೆದುಕೊಂಡು ಹೋಗಿ ಪರೀಕ್ಷಿಸಲು ಸಹಾಯಕ ಆಕರಗ್ರಂಥವೆಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿ ಉಕ್ತವಾಗಿರುವ ವಿಷಯಗಳು ಅಥರ್ವಣ ವೇದ, ಚಾಣಕ್ಯನ ಅರ್ಥಶಾಸ್ತ್ರ ವರಹಾಮಿಹಿರನ ಬೃಹತ್ ಸಂಹಿತೆ, ಚಾವುಂಡರಾಯನ ಲೋಕೋಪಕಾರ, ಸೋಮೇಶ್ವರ, ಮಾನಸೋಲ್ಲಾಸ, ವಾದಿರಾಜರ ತೀರ್ಥಪ್ರಬಂಧ, ಮಂಗರಸನ ಸೂಪಶಾಸ್ತ್ರಗಳಲ್ಲಿ ಸಿಗುತ್ತವೆ. ಆದರೂ ನೀರಿನ ಶುದ್ಧೀಕರಣಕ್ಕೆ ಆಯಾ ಪ್ರದೇಶದ ಜನರು ಬಳಸುತ್ತಿದ್ದ ವಿಧಾನಗಳು ಶತಮಾನಗಳ ನಂತರವೂ ಉಳಿದು ಬಂದಿರುವುದನ್ನೂ ಕೆಲವು ಹೆಚ್ಚಿನ ಅಂಶ ಗಳನ್ನೂ ಒಳಗೊಂಡಿರುವ ಉಪಯುಕ್ತ ಚಾರಿತ್ರಿಕ ದಾಖಲೆ ಯಾಗಿದೆ.

ಬೇರೆ ಬೇರೆ ಆಕಾರದ ಜಲಾಕರಗಳು, ವಿಭಿನ್ನ ಪ್ರಭೇದಗಳು ಮತ್ತು ಅವುಗಳ ಪ್ರಮಾಣವನ್ನು ನಿರ್ಧರಿಸಲು ಸಹಾಯವಾಗುತ್ತದೆ. ಇಂದು ನಾವು ಅನುಸರಿಸುತ್ತಿರುವ ದಶಮಾಂಶ ಪದ್ಧತಿಯನ್ನೇ ಕೆಳದಿಯ ಅರಸರ ಕಾಲದಲ್ಲಿಯೂ ಅನುಸರಿಸಲಾಗುತ್ತಿತ್ತು. ಇದನ್ನು ಕೆಳದಿಯ ಅಘೋರೇಶ್ವರ ದೇವಸ್ಥಾನದ ಹಿಂಭಾಗದ ಭಿತ್ತಿಯಲ್ಲಿ ಕಂಡರಿಸಲಾಗಿರುವ "ಶಿವಪ್ಪನಾಯಕನ ಶಿಸ್ತು" ಎನ್ನುವ ಮಾನದಂಡದಿಂದ ತಿಳಿದುಕೊಳ್ಳಬಹುದು. ಇದೇ ಮಾಪನವನ್ನೇ ಬಳಸಿ ಮೇಲೆ ಉಲ್ಲೇಖಿಸಲಾಗಿರುವ ಸಂಗಳ, ಸಾಗರ, ಸೊರಬ, ಕೆಳದಿ ಶಿವಮೊಗ್ಗ ಜಿಲ್ಲೆಯ ಇತರ ಭಾಗಗಳಲ್ಲಿ ಕೆಳದಿಯ ಅರಸರಿಂದ ನಿರ್ಮಿತವಾಗಿರುವ ಕೆರೆ, ಕಟ್ಟೆ, ಸರೋವರ, ಪುಷ್ಕರಣಿ, ಬಾವಿ ಇತ್ಯಾದಿಗಳನ್ನು ಅಳತೆ ಮಾಡಿ ಅವುಗಳ ಉಪಯುಕ್ತತೆಯನ್ನು ಇನ್ನೂ ಹೆಚ್ಚಿಸಬಹುದು. ಹೀಗಾದಲ್ಲಿ ಇದು ಜಲವಿಜ್ಞಾನ -ತಂತ್ರಜ್ಞಾನಕ್ಕೆ ಇತಿಹಾಸದಿಂದ ಒಂದು ಹೊಸ ಕೊಡುಗೆ.

ಕೆಳದಿಯ ಅರಸರಿಗೂ ಫ್ರೆಂಚ್, ಡಚ್ ಇತ್ಯಾದಿ ವಿದೇಶ ಗಳವರಿಗೂ ಸಂಬಂಧವಿದ್ದುದಕ್ಕೆ ಐತಿಹಾಸಿಕ ದಾಖಲೆಗಳಿವೆ. ಇಂತಹ ದಾಖಲೆಗಳಲ್ಲಿ ಪಾಶ್ಚಾತ್ಯದೇಶಗಳಿಂದ ಇವರು ಪಡೆದ ತಂತ್ರಜ್ಞಾನ ಮತ್ತು ಸ್ಥಳೀಯ ತಂತ್ರಜ್ಞಾನದ ತೌಲನಿಕ ಅಧ್ಯಯನ ಮಾಡಲು ಸಹಾಯವಾಗುತ್ತದೆ. ಇಂದಿನ ಜಲಕ್ಷಾಮಕ್ಕೆ ಇಂತಹ ಅಧ್ಯಯನಗಳು ಉಪಯೋಗವಾಗುತ್ತವೆ. ಇಂದು ಅತ್ಯಾಧುನಿಕ ವೆಂದು ಪರಿಗಣಿತ ವಾಗಿರುವ ಸುವಾಸನಾರೋಗ ನಿಧಾನ (Aromatic Therapy) ನಮ್ಮಲ್ಲಿ ನೂರಾರು ವರ್ಷಗಳಿಂದಲೇ ರೂಢಿಯಲ್ಲಿತ್ತೆಂದು ಈ ಗ್ರಂಥದಿಂದ ತಿಳಿದುಬರುತ್ತದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ, (ಸಂ.) ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧. ಅದೇ ೬ನೇ ಕಲ್ಲೋಲ, ೧೦ನೇ ತರಂಗ ೫-೬ನೇ ಶ್ಲೋಕ.

೨. ಅದೇ ೩ನೇ ಕಲ್ಲೋಲ, ೧ನೇ ತರಂಗ ಶ್ಲೋಕ ||೫೮||.

೩ ಅದೇ ೩ನೇ ಕಲ್ಲೋಲ, ೨ನೇ ತರಂಗ, ೬ನೇ ಪದ್ಯ.

೪. ಅದೇ ೩ನೇ ಕಲ್ಲೋಲ, ೨ನೇ ತರಂಗ ಶ್ಲೋಕ ೩೫-೪೯, ೭ ಶ್ಲೋಕ ೭೩ರಿಂದ ೭೬.

೫. ಅದೇ ಶ್ಲೋಕ ೨೨ರಿಂದ ಶ್ಲೋಕ ೪೬.

೬. ಅದೇ ೨೨ನೇ ಶ್ಲೋಕದಿಂದ ೪೫ನೇ ಶ್ಲೋಕ, ೪ನೇ ಕಲ್ಲೋಲ.

೭. ಅದೇ ಶ್ಲೋಕ ೪೯-೫೫, ೫ನೇ ಕಲ್ಲೋಲ, ೬ನೇ ತರಂಗ.

೮. ಅದೇ ೬ನೇ ಕಲ್ಲೋಲ, ಹತ್ತನೇ ತರಂಗ, ಶ್ಲೋಕ ೭೫.

೯. ಅದೇ ೬ನೇ ಕಲ್ಲೋಲ, ೧೦ನೇ ತರಂಗ ೭೯-೮೧, ೮೨,-೯೪ ೯೫ರಿಂದ ೧೦೫.

೧೦. ಅದೇ ಮಂಗರಸನ **ಸೂಪಶಾಸ್ತ್ರ** (ಮೈಸೂರು ವಿ.ವಿ. ಪುಟ ೮೮).

೧೧. ಅದೇ ಮುಸ್ತಕ = ಸಿಪ್ರಸ್ ರುಟಂಡಸ್ (Cyperus rotundus).

೧೨. ಅದೇ ಉಷಿರ=ಆಂಡ್ರ್ಯೂಪೊಗನ್ ಮ್ಯೂರಿಕ್ಟಸ್ (Andropogon Murictus).

★ ★ ★ ★



ಬಾನು ತುಂಬಿದ ಮೋಡ ಮಳೆ ಹನಿಯ ತವರು
ಮಿಂಚು ಬಿಟ್ಟ ಬಾಣಕ್ಕೆ ಅದರ ಮೈಯೆಲ್ಲ ಬೆಳಕ ಬೆವರು
ನಿಸರ್ಗ ನೆಡುತ್ತಿರುವ ನಿರಂತರ ಮೋಡ ಬಿತ್ತನೆಯೆ ಮುಂಗಾರು-ಹಿಂಗಾರು
'ಜಲಶಾಸ್ತ್ರದ ಬಗೆಗಿದೆ ವಿಜ್ಞಾನದ ಮೌಲ್ಯದ ಆಕರ
ಇತಿಹಾಸದ ಈ ಆಕರ ಬಳಸೆ ಅಹುದೆ ಜಲಕ್ಷಾಮವೆ ದೂರ!

ಡಾ. ಎಚ್. ಇ. ಬಸವರಾಜಪ್ಪ*

ಚಿತ್ರದುರ್ಗದ ನಾಯಕ ಅರಸರ ನಂತರದ ಗ್ರಾಮಾಡಳಿತ ವ್ಯವಸ್ಥೆ (೧೭೯೯-೧೯೪೭)

ಚಿತ್ರದುರ್ಗವನ್ನು ದೀರ್ಘಕಾಲದವರೆಗೆ ಆಳಿದ ನಾಯಕ ಅರಸರ ನಂತರದ ಕಾಲಾವಧಿಯ ಗ್ರಾಮಾಡಳಿತ ವ್ಯವಸ್ಥೆ ಹಾಗು ಚಿತ್ರದುರ್ಗ ಪ್ರದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸತಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ೧೮ನೇ ಶತಮಾನದ ನಂತರದಲ್ಲಿ ಆಡಳಿತ ನಡೆಸಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನ ಹಾಗೂ ವಸಾಹತೋತ್ತರ ಮೈಸೂರು ಒಡೆಯರ ಕಾಲಾವಧಿಯನ್ನು ಗಮನದಲ್ಲಿಟ್ಟು ಈ ಲೇಖನದಲ್ಲಿ ಗ್ರಾಮಾಡಳಿತ ವ್ಯವಸ್ಥೆಯನ್ನು ವಿವೇಚಿಸಲಾಗಿದೆ.

ಟಿಪ್ಪು ಕಾಲದ ಕಂದಾಯ ವ್ಯವಸ್ಥೆಯನ್ನು ಸುಭೇದಾರ್ ಮತ್ತು ಅಮೀಲರು ತಾಲೂಕಿನ ಕಂದಾಯ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ವೈಯಕ್ತಿಕವಾಗಿ ನೋಡಿಕೊಳ್ಳುತ್ತಿದ್ದರು. ಹೋಬಳಿಯ ಮುಖ್ಯಸ್ಥನಿಗೆ ಪಾರುಪತ್ತೆ ಎಂದು ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಇವರು ಮುಸ್ಲಿಂ ಸಮುದಾಯದವರಾಗಿದ್ದರು. ಅವರು ಪ್ರತಿಯೊಂದು ಗ್ರಾಮಗಳಿಗೂ ಭೇಟಿ ನೀಡಿ ಸಾಗುವಳಿಯಾದ ಭೂಹಿಡುವಳಿಗಳ ಮತ್ತು ಕೆರೆಗಳ ನೀರಾವರಿಗೆ ಒಳಪಟ್ಟು ಭೂಮಿಯ ಬಗ್ಗೆ ಸಮೀಕ್ಷೆ ಮಾಡುತ್ತಿದ್ದರು. ಪಾರುಪತ್ತೆದಾರನು ಗ್ರಾಮದ ಪಟೇಲ್ ಮತ್ತು ಶಾನುಭೋಗರಿಂದ ಕಂದಾಯ ಸಂಗ್ರಹಿಸಿ ಅಮೀಲರ ಕಛೇರಿಗೆ ಸಲ್ಲಿಸುತ್ತಿದ್ದರು. ಕಂದಾಯವನ್ನು ಧಾನ್ಯ ಮತ್ತು ನಗದು ರೂಪದಲ್ಲಿಯು ಸಂಗ್ರಹಿಸಲಾಗುತ್ತಿತ್ತು. ಸಾಮಾನ್ಯವಾಗಿ ಗ್ರಾಮದ ಶಾನುಭೋಗರು ಬ್ರಾಹ್ಮಣರಾಗಿದ್ದರು. ಈ ಅಧಿಕಾರಿಗಳು ಅನುವಂಶಿಕವಾಗಿ ನೇಮಕಗೊಳ್ಳುತ್ತಿದ್ದರು. ಅಧಿಕಾರಿಗಳಿಗೆ ಹಣದ ರೂಪದಲ್ಲಿ ವೇತನ ನೀಡುತ್ತಿದ್ದರು.

ಸನ್ ೧೮೮೧ ರಿಂದ ೧೯೪೭ರ ವರೆಗಿನ ಜಿಲ್ಲಾ ಆಡಳಿತ ಸ್ವರೂಪವು ಬ್ರಿಟಿಷ ಕಮೀಷನರ್ ಕಾಲದಂತೆ ಮುಂದುವರೆದಿತ್ತು. ಈ ಅವಧಿಯಲ್ಲಿ ಮೈಸೂರು ಸಂಸ್ಥಾನದಾದ್ಯಂತ, ಏಕರೂಪದ ಗ್ರಾಮಾಡಳಿತ ವ್ಯವಸ್ಥೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. ಇಲ್ಲಿ ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯನ್ನು ಒಂಭತ್ತು ತಾಲೂಕು ಕೇಂದ್ರಗಳಾಗಿ ವಿಭಾಗ ಮಾಡಲಾಗಿದ್ದು, ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು, ತಾಲೂಕುಗಳಲ್ಲಿ ಅಮಲ್ದಾರರು, ಹೋಬಳಿ ಮಟ್ಟದಲ್ಲಿ ಶೇಕ್‌ದಾರರು, ಗ್ರಾಮಗಳಲ್ಲಿ ಪಟೇಲರು, ಮತ್ತು ಶಾನುಭೋಗರು ಆಡಳಿತಾತ್ಮಕ ಕಾರ್ಯ ನಿರ್ವಹಣೆಯನ್ನು ವಹಿಸಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೀರಗಂಟಿ, ತೋಟಿ, ತಳಾರಿ ಇನ್ನೂ ಮುಂತಾದ ಗ್ರಾಮ ನೌಕರಿಗಳು ಈ ಸಮಯದಲ್ಲಿ ಕಾರ್ಯನಿರ್ವಹಿಸಿದರೂ, ವಸಹಾತೋತ್ತರ ಕಾಲಾವಧಿಯಲ್ಲಿ ತಮ್ಮ ಹಿಂದಿನ ಮಹತ್ವವನ್ನು ಕಳೆದುಕೊಂಡಿರುವದನ್ನು ಸ್ಪಷ್ಟವಾಗಿ ಗುರುತಿಸಬಹುದು. ಗ್ರಾಮದ ಆಡಳಿತವು ತೃಪ್ತಿಕರವಾಗಿ ನಡೆಯುವಂತೆ ಮಾಡಲು ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಪಟೇಲರನ್ನು ನೇಮಿಸಲಾಗುತ್ತಿತ್ತು. ಪಟೇಲನು ತನ್ನ ಗ್ರಾಮದಲ್ಲಿ ಖಾಯಂ ವಾಸವಾಗಿರಬೇಕಿತ್ತು. ತಾಲೂಕು ಅಮಲ್ದಾರರ ಅನುಮತಿಯನ್ನು ಪಡೆಯದೆ ಪಟೇಲನಾಗಲಿ ಶಾನುಭೋಗನಾಗಲೀ ತನಗೆ ಗ್ರಾಮದಿಂದ ಏಳು ದಿನಗಳಿಗಿಂತ ಹೆಚ್ಚು ದಿನಗಳವರೆಗೆ ಗ್ರಾಮದಿಂದ ಗೈರು ಹಾಜರು ಆಗುವಂತಿರಲಿಲ್ಲಾ. "ಪಟೇಲರುಗಳಿಂದ ಸರಕಾರಕ್ಕೆ ಸಲ್ಲಬೇಕಾದ ಮುಖ್ಯವಾದ ಕರ್ತವ್ಯಗಳನ್ನು ಪರ್ಯಾಲೋಚಿಸಿ ಅವರುಗಳಿಗೆ ಸಿಗಬೇಕಾದ ಗೌರವವನ್ನು ಗಮನದಲ್ಲಿರಿಸಿಕೊಂಡು ಮೈಸೂರು ಮಹಾರಾಜರೇ ಕೆಲವು ಇನಾಂಗಳನ್ನು ಸಂಪೂರ್ಣವಾಗಿ ನೌಕರಿ ಇನಾಂಗಳಾಗಿ ಬಿಡುತ್ತಿದ್ದರು. ಪಟೇಲರುಗಳನ್ನು ಯಾವುದಾದರೂ ಜರೂರಂತೆ ಸಂದರ್ಭಗಳು ಒದಗಿದಾಗ ಪೋಲಿಸ್ ರೆವಿನ್ಯೂ ಮತ್ತು ಇತರ ಇಲಾಖೆಗಳಲ್ಲಿ ನೌಕರಿಗೆ ಕರೆಸಿಕೊಳ್ಳುವುದಕ್ಕೆ ಅರ್ಹರಾದಂಥ ಸರಕಾರಿ ನೌಕರನನ್ನಾಗಿ ಭಾವಿಸಬೇಕೆಂತಲೂ ಮತ್ತು ಅವರುಗಳಿಗೆ ೧೮೪೪ರ ಜನವರಿಯಲ್ಲಿ ಕಮೀಷನರ್ ಮಾರ್ಕ ಕಬ್ಬನ್‌ರವರಿಂದ ಕೊಡಲ್ಪಟ್ಟಿರುವ ಸನ್ನದುಗಳನ್ನು ಸಂಪೂರ್ಣವಾಗಿ ನಾಲ್ವಡಿ ಕೃಷ್ಣಾರಾಜ ಒಡೆಯರು ಜಾರಿಗೆ ತಂದಿದ್ದರು. ಗ್ರಾಮದ ಆಡಳಿತಾಧಿಕಾರಿಯಾಗಿ ಪಟೇಲನು ನಿರ್ವಹಿಸುವ ಪ್ರಮುಖ ಕಾರ್ಯಗಳೆಂದರೆ, ಲ್ಯಾಂಡ್ ರೆವಿನ್ಯೂ ನಿಬಂಧನೆಗಳಿಗೆ ಸೂಚಿಸಿರುವ ನಿಯಮಗಳಿಗೆ ಅನುಸಾರವಾಗಿ ಕಂದಾಯವನ್ನು ವಸೂಲಿ ಮಾಡಿ ಅದಕ್ಕೆ ರಸೀದಿಗಳನ್ನು ಕೊಟ್ಟು ಹಣವನ್ನು ತಾಲೂಕು ಕಛೇರಿಗೆ ಪಾವತಿಸುವುದು, ಗ್ರಾಮದ ಕೆರೆಗಳನ್ನು, ನಾಲೆಗಳನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳಲು, ಗ್ರಾಮದಲ್ಲಿರುವ ಸರಕಾರಿ ಅರಣ್ಯ ಪ್ರದೇಶವನ್ನು ನೋಡಿಕೊಳ್ಳುವುದು, ರಸ್ತೆಯ ಪಕ್ಕದಲ್ಲಿರುವ ಸಾಲು ಮರಗಳನ್ನು ನೋಡಿಕೊಳ್ಳುವುದು, ತನ್ನ ಗ್ರಾಮಕ್ಕೆ ಸೇರಿದ ಹಿಡುವಳಿಯಲ್ಲಿಲ್ಲದ ಸರಕಾರಿ ಜಮೀನುಗಳ ಬಾಂದುಗಳನ್ನು, ಪಹಣಿ, ಗುರುತು ಕಲ್ಲುಗಳನ್ನು, ಸರಿಯಾಗಿ ಇಟ್ಟುಕೊಳ್ಳಬೇಕಾಗಿತ್ತು.

* ಇತಿಹಾಸ ಉಪನ್ಯಾಸಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ; ಬಾದಾಮಿ, ಬನಶಂಕರಿ, ಬಾಗಲಕೋಟೆ ಜಿಲ್ಲೆ

ಗ್ರಾಮದ ಶಾನುಭೋಗಿಕೆ ನೌಕರಿಯನ್ನು ಮಾಡುತ್ತಿರುವ ಪ್ರತಿಯೊಬ್ಬನು ಎಷ್ಟು ಗ್ರಾಮಗಳ ಕೆಲಸವನ್ನು ನಿರ್ವಹಿಸಲು ಸಮರ್ಥನಾಗಿರುವನೋ ಅಷ್ಟು ಗ್ರಾಮಗಳ ಶಾನಭೋಗಿಕೆ ಕೆಲಸವನ್ನು ಒದಗಿಸುವುದಿತ್ತು; ಕೆಲವು ಸಂದರ್ಭದಲ್ಲಿ ಇರುವ ಶಾನಭೋಗ ಹುದ್ದೆಗಳನ್ನು ಪುನಃ ವಿಂಗಡಿಸಬಹುದಾಗಿತ್ತು. ಒಬ್ಬ ಶಾನಭೋಗನು ಕೆಲಸ ನಿರ್ವಹಿಸಲು ಸಮರ್ಥನಾಗಿರುವಷ್ಟಕ್ಕಿಂತ ಹೆಚ್ಚು ಗ್ರಾಮಗಳು ಇದ್ದರೆ ಮತ್ತೊಬ್ಬ ಶಾನುಭೋಗನನ್ನು ಸರಕಾರ ನೇಮಿಸುತ್ತಿತ್ತು. ಶಾನುಭೋಗರು ಬದಲಿ ಗ್ರಾಮವನ್ನು ಬಯಸಿದರೆ ಒಂದು ವರ್ಷ ಮೊದಲೇ ಆ ಬಗ್ಗೆ ಅರ್ಜಿಯನ್ನು ಸಲ್ಲಿಸಿರಬೇಕಿತ್ತು. ಶಾನುಭೋಗರಿಗೆ ಮಾತ್ರ ಒಂದಕ್ಕಿಂತ ಜಾಸ್ತಿ ಗ್ರಾಮಗಳ ಆಡಳಿತ ನಿರ್ವಹಣೆಯನ್ನು ವಹಿಸಲಾಗಿತ್ತು. ಶಾನುಭೋಗರು ತಮ್ಮ ಗ್ರಾಮದಲ್ಲಿ ಅಥವಾ ತಮ್ಮ ಫಿರ್ಕಾಕ್ಕೆ ಸೇರಿದ ಒಂದು ಗ್ರಾಮದಲ್ಲಿ ವಾಸವಾಗಿರಬೇಕಿತ್ತು. ತನ್ನ ಗ್ರಾಮದ ಹಿಡುವಳಿದಾರನಾಗಲಿ ಅಥವಾ ಹಿಡುವಳಿದಾರನಾಗಲು ಅಪೇಕ್ಷಿಸಿದರೆ ಯಾವ ಪ್ರತಿಫಲ ಇಲ್ಲದೇ ಶಾನುಭೋಗನು ದರಖಾಸ್ತುಗಳನ್ನು ನೀಡಬೇಕಿತ್ತು. ಗ್ರಾಮ ಮಟ್ಟದ ಕಂದಾಯ ಅಧಿಕಾರಿಗಳಾಗಿ ಪ್ರತಿ ವರ್ಷವು ಗ್ರಾಮ ಮಟ್ಟದಲ್ಲಿನ ರೈತರ ವಾರ್ಷಿಕ ಯೋಜನೆಯನ್ನು ತಯಾರಿಸುತ್ತಿದ್ದರು. ಶಾನುಭೋಗರು ಕಂದಾಯ ಭೂಮಿಯನ್ನು ಖುಷ್ಕಿ, ತರಿ, ಬಾಗಾಯ್ತು, ಎಂಬುದಾಗಿ ವಿಂಗಡಿಸಿ ನಿಗದಿತ ಕಂದಾಯವನ್ನು ಗೊತ್ತುಪಡಿಸುತ್ತಿದ್ದರು. ಗ್ರಾಮದ ಬೆಳೆಗಳ ಬಿತ್ತನೆ ಪ್ರದೇಶ ಮತ್ತು ಇಳುವರಿ ಕಂದಾಯ ವಸೂಲಿ ಮಾಡಿದ ಬಗ್ಗೆ ತನ್ನ ರಿಜಿಷ್ಟರಗಳಲ್ಲಿ ದಾಖಲಿಸಿಕೊಳ್ಳುವುದು ಶಾನುಭೋಗನಮುಖ್ಯ ಕರ್ತವ್ಯವಾಗಿತ್ತು. ಚಿತ್ರದುರ್ಗ ಪ್ರದೇಶದ ಕಂದಾಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪಟೇಲ ಮತ್ತು ಶಾನುಭೋಗರುಗಳಿಗೆ ಸಂಬಂಧಿಸಿದ ಅಂಕಿ - ಅಂಶಗಳನ್ನು ಗಮನಿಸಿದರೇ, ಸಾಮಾನ್ಯ ವಾಗಿ ಶಾನುಭೋಗರುಗಳಿಗೆ ಓದು ಬರಹ ಗೊತ್ತಿದ್ದು, ಕಂದಾಯ ಇಲಾಖೆಯ ಆಡಳಿತದಲ್ಲಿ ಸಮರ್ಥರಾಗಿದ್ದರು. ಗ್ರಾಮದ ಮುಖಂಡರಾಗಿದ್ದ ಪಟೇಲರಲ್ಲಿ ಬಹುಸಂಖ್ಯಾತರು ಓದು, ಬರಹ, ಕಲಿತವರಾಗಿದ್ದರು. ಆದರೆ ಅವರಲ್ಲಿ ಅಸಮರ್ಥರೂ ಇದ್ದರು. ಸುಮಾರು ೪೮ ಜನರಿಗೆ ಸಹಿ ಮಾಡಲು ಬಂದರೆ, ಓದಲು, ಬರೆಯಲು ಬರುತ್ತಿರಲಿಲ್ಲ. ೧೭ ಜನರಿಗೆ ಓದು, ಬರಹದ ಜೊತೆಗೆ ಸಹಿ ಮಾಡಲು ಸಹ ಬರುತ್ತಿರಲಿಲ್ಲ. ಅಂದರೆ ಗ್ರಾಮದ ಪ್ರಭಾವಿ ಭೂ ಮಾಲೀಕರು ಅವಿದ್ಯಾವಂತರಾಗಿದ್ದರು. ಸಮಾಜದ ಉನ್ನತ ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಭೂ ಹಿಡುವಳಿದಾರರ ಪ್ರಾಬಲ್ಯದಿಂದಲೂ ಹಲವು ಗ್ರಾಮಗಳು ಕೂಡಿದ್ದವು. ದೊಡ್ಡ ಭೂ ಹಿಡುವಳಿಗಳಲ್ಲಿ ಸಾಮಾನ್ಯವಾಗಿ ಅರ್ಧ ಕಿಲೋ ಮೀಟರವರೆಗೆ ಉದ್ದವಾದ ಭೂ ಹಿಡುವಳಿಗಳು ಒಬ್ಬನೇ ವ್ಯಕ್ತಿಯ ಒಡೆತನದಲ್ಲಿದ್ದವು. ಚಳ್ಳಕೆರೆ, ಜಗಳೂರು, ಹಿರಿಯೂರು, ತಾಲೂಕುಗಳಲ್ಲಿ ಹೆಚ್ಚಾಗಿ ಇದು ಕಂಡು ಬರುತ್ತದೆ. ೧೯೨೩-೨೪ ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸಾಮಾನ್ಯವಾಗಿ ಭೂ ಹಿಡುವಳಿಗಳ ಗಾತ್ರವು ಒಂದರಿಂದ ೫೦೦ ಎಕರೆ ಒಡೆತನ ಹೊಂದಿರುವ ಭೂ ಹಿಡುವಳಿದಾರರೂ ಇದ್ದರು. ಸಾಮಾನ್ಯವಾಗಿ ಪ್ರಬಲ ಭೂ ಹಿಡುವಳಿದಾರರು ಗ್ರಾಮದ ಪಟೇಲರುಗಳಾಗಿದ್ದರು.

ಅಂದಿನ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಚಿತ್ರದುರ್ಗ ಜಿಲ್ಲೆಯ ಪ್ರಮುಖ ಸಮುದಾಯಗಳೆಂದರೆ ಲಿಂಗಾಯತ, ಬೇಡ(ನಾಯಕ), ಒಕ್ಕಲಿಗ, ಆದಿಕರ್ನಾಟಕ, ಮುಸ್ಲಿಂ, ಕುರುಬ, ಗೊಲ್ಲ, ಮತ್ತು ದೇವಾಂಗ ಇನ್ನಿತರ ಸಮುದಾಯಗಳು ಇದ್ದರೂ ೧೮೮೧-೧೯೪೭ರ ಅವಧಿಯಲ್ಲಿ ಹೆಚ್ಚು ಪ್ರಾಬಲ್ಯದಿಂದ ಗ್ರಾಮಾಂತರ ಪ್ರದೇಶದ ಪ್ರಧಾನ ಜಾತಿಗಳಾಗಿ ಅಂದಿನ ರಾಜಕೀಯ ವ್ಯವಸ್ಥೆಯಲ್ಲಿ ಅಗ್ರಮಾನ್ಯತೆ ಯನ್ನು ಪಡೆದ ಸಮುದಾಯಗಳಲ್ಲಿ ಲಿಂಗಾಯತರು ಮತ್ತು ಒಕ್ಕಲಿಗ ಸಮುದಾಯಗಳು ಸೇರುತ್ತವೆ. ಸಂಖ್ಯೆಯ ದೃಷ್ಟಿಯಲ್ಲಿ ಹಾಗೂ ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಲ್ಲಿ ಪ್ರಮುಖರಾಗಿರುವ ಲಿಂಗಾಯತರು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ, ದಾವಣಗೆರೆ, ಹರಿಹರ, ಜಗಳೂರು ತಾಲೂಕುಗಳಲ್ಲಿ ಗ್ರಾಮಾಂತರ ಪ್ರದೇಶದ ಬದುಕನ್ನು, ಊರಿನ ಆಗುಹೋಗುಗಳ ದೃಷ್ಟಿಯಿಂದ ನೋಡಿದರೆ ಮಹತ್ವದ ಪಾತ್ರವನ್ನು ವಹಿಸಿದರು. ಲಿಂಗಾಯತ ಸಮುದಾಯದ ಮುಂದಾಳುಗಳು ಹೇಳಿದಂತೆ ಉಳಿದ ಸಮುದಾಯಗಳು ಕೇಳುವ ಅವರ ಕೃಪೆಗಾಗಿ ಕಾಯುವ ವ್ಯವಸ್ಥೆ ಇದ್ದಿತು. (ಈ ಕೆಲವು ತಾಲೂಕುಗಳಾದ್ಯಂತ ಕ್ಷೇತ್ರಕಾರ್ಯ ಕೈಗೊಂಡ ನನಗೆ ಈ ಬಹುತೇಕ ತಾಲೂಕುಗಳ ಮತ್ತು ಇಲ್ಲಿನ ತಾಲೂಕುಗಳ ಬಾರಬಲೂತಿ ರಿಜಿಸ್ಟಾರ್‌ಗಳ ಅಧ್ಯಯನದಿಂದಲೂ ಗ್ರಾಮದ ದೊಡ್ಡಕುಳ, ದೊಡ್ಡ ಭೂ ಮಾಲಿಕ, ದೊಡ್ಡ ರೈತ, ದೊಡ್ಡ ಬಂಧುಬಳಗವುಳ್ಳ ಕುಟುಂಬದ ಯಜಮಾನ, ಈ ಲಕ್ಷಣಗಳಿಂದಾಗಿ ಅವನ ಮಾತು ಸರಕಾರದ ಆಜ್ಞೆಗಿಂತ ಶಕ್ತಿ ಶಾಲಿಯಾಗಿತ್ತು ಎಂಬುದು ತಿಳಿಯುತ್ತದೆ.) ಗ್ರಾಮದ ಆಡಳಿತವು ಸಂಸ್ಥಾನದ ಆಡಳಿತಕ್ಕಿಂತ ದೊಡ್ಡದಾಗಿತ್ತು, ಎಂಬ ಭಾವನೆ ಬೇರೂರಿತ್ತು. ಅನೇಕ ವ್ಯಾಜ್ಯಗಳು ಎಷ್ಟೋ ಸಲ ಪಟೇಲರುಗಳಿಂದ ತೀರ್ಮಾನ ಕ್ಕೊಳಪಡುತ್ತಿದ್ದವು. ಪಟೇಲರ ನ್ಯಾಯ ಬರೀ ತಮ್ಮ ಸಮುದಾಯ ಕಟ್ಟೆಯಲ್ಲದೇ ಇಡೀ ಗ್ರಾಮವನ್ನು ನಿಯಂತ್ರಿಸುತ್ತಿತ್ತು. ಈ ಗೌಡಿಕೆಯು ತಲೆಮಾರುಗಳಿಂದ ಅನುಭವಿಸುತ್ತಾ ಬಂದ ಹಕ್ಕಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆಯ ಒಂಭತ್ತು ತಾಲೂಕುಗಳಲ್ಲಿಯೂ ಇರುವ ಗ್ರಾಮದಲ್ಲಿ ಇದೇ ರೀತಿಯಾಗಿ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು. ಇದರ ಹೊರತಾಗಿ ಯಾವುದೇ ರೀತಿಯಾದ ಬದಲಾವಣೆ ಇರಲಿಲ್ಲ. ಕಂದಾಯ ಆಡಳಿತ ವ್ಯವಸ್ಥೆಯು ಶ್ರೇಣೀಕೃತವಾಗಿರುವುದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ನನ್ನ ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಲಭ್ಯವಿರುವ ದಾಖಲೆಗಳಿಂದ ತಿಳಿದು ಬರುತ್ತದೆ. ಇಲ್ಲಿ ಅಧಿಕಾರವು ಮೇಲಿನಿಂದ

ಕೆಳಕ್ಕೂ, ಜವಾಬ್ದಾರಿಯು, ಕೆಳಗಿನಿಂದ ಮೇಲ್ಮುಖವಾಗಿಯೂ ಸಾಗುವುದನ್ನು ಗಮನಿಸಬಹುದು. ತಾಲೂಕಿನ ಅಧಿಕಾರವರ್ಗದ ಕೆಳಸ್ತರದಲ್ಲಿ ತಳವಾರ, ಶಾನುಭೋಗ, ಪಟೇಲರು, ಶೇಖದಾರ ಮತ್ತು ಅಮಲ್ದಾರರನ್ನು ಒಳಗೊಂಡಿತ್ತು. ಜಿಲ್ಲಾ ಮಟ್ಟದಲ್ಲಿ ಡೆಪ್ಯೂಟಿ ಕಮೀಷನರ್ ಉನ್ನತ ಮಟ್ಟದ ಕಂದಾಯ ಅಧಿಕಾರಿಗಳಾಗಿದ್ದರು. ೧೯೩೩ರಲ್ಲಿ ಹೊಳಲ್ಕೆರೆ ತಾಲೂಕಿನಲ್ಲಿ ೧೯೫ ಜನರು ಪಟೇಲರು, ೪೭ ಜನರು ಶ್ಯಾನುಭೋಗರು ಇದ್ದರು. ಅಂದಿನ ಪಟೇಲರುಗಳ ಸಮುದಾಯದ ಅಂಕಿ ಅಂಶಗಳನ್ನು ವಿಶೇಷವಾಗಿ ಗಮನಿಸಬಹುದಾಗಿದೆ. ಶಾನುಭೋಗರಲ್ಲಿ ೪೭ ಜನರೂ ಬ್ರಾಹ್ಮಣರೇ ಆಗಿದ್ದರು. ಏಕೆಂದರೆ ಓದು ಬರಹವನ್ನು ಕಲಿತಿರುವ ಸಮುದಾಯ ಇವರೇ ಆಗಿದ್ದರು. "ಹೊಳಲ್ಕೆರೆ ತಾಲೂಕು ಬರಾಬಲೂತಿ ರಿಜಿಸ್ಟರ್ ೧೯೩೩, ತಾಲೂಕು ಅಧಿಕಾರಿಗಳ ಕಚೇರಿ ಹೊಳಲ್ಕೆರೆ" ಎನ್ನುವ ದಾಖಲೆಯ ಪ್ರಕಾರ ಪ್ರಮುಖ ಭೂಮಾಲೀಕ ವರ್ಗ ಲಿಂಗಾಯತ ರೆಂಬುದಾಗಿಯೂ ತಾಲೂಕಿನ ಬಹುತೇಕ ಗ್ರಾಮಗಳನ್ನು ಅವರು ನಿಯಂತ್ರಿಸುತ್ತಿದ್ದಾರೆ ಎಂಬುದು ತಿಳಿದು ಬರುತ್ತದೆ. ಇಲ್ಲಿ ಸುಮಾರು ೧೧೭ ಜನ ಲಿಂಗಾಯತ ಪಟೇಲರುಗಳು ಕಾರ್ಯ ನಿರ್ವಹಿಸುತ್ತಿದ್ದರು. ಎರಡನೆ ಸ್ಥಾನವನ್ನು ಕುಂಚಟಿಗ ಲಿಂಗಾಯತರು ಹೊಂದಿರುವದು ತಿಳಿಯುತ್ತದೆ. ಇಡೀ ಜಿಲ್ಲೆಯನ್ನು ಗಮನಿಸಿದಾಗ ಜನಸಂಖ್ಯಾ ಬಾಹುಳ್ಯದಲ್ಲಿ ಮುಖ್ಯವಾಗಿ ಭೂ ಮಾಲೀಕ ವರ್ಗವಾಗಿದ್ದವರು ಲಿಂಗಾಯತರು ಮತ್ತು ಒಕ್ಕಲಿಗರು, ಎಂದರೆ ತಪ್ಪಾಗಲಾರದು. ಈ ಮೇಲಿನ ದಾಖಲೆಗಳ ಪ್ರಕಾರ ತಯಾರಿಸಿದ "ಪಟೇಲ" ಎನ್ನುವ ಅಧಿಕಾರವನ್ನು ಹೊಂದಿದ ವಿವಿಧ ಸಮುದಾಯಗಳ ಪಟ್ಟಿಯು ಈ ಕೆಳಗಿನಂತೆ ಇದೆ.

ಈ ಅಂಕಿ ಅಂಶಗಳನ್ನು ಗಮನಿಸಿದಾಗ ಎರಡು ಅಂಶಗಳು ಕಂಡು ಬರುತ್ತವೆ. ಮೊದಲನೆಯದಾಗಿ ಸಾಮಾಜಿಕವಾಗಿ ಉನ್ನತ ಸ್ಥಾನಗಳು ಪ್ರಭಾವಿ ವರ್ಗಗಳಿಗೆ ಮಾತ್ರ ದೊರಕಿರುವುದನ್ನು ನೋಡಬಹುದು. ಏಕೆಂದರೆ ಇವರಿಗೆಲ್ಲಾ ಭೂಹಿಡುವಳಿಯ ಮಾಲೀಕತ್ವದ ತತ್‌ಸಂಬಂಧಿ ಅಧಿಕಾರಗಳು ಇದ್ದವು. ಎರಡನೆಯದಾಗಿ ಈ ಎಲ್ಲಾ ವೈಪರೀತ್ಯಗಳ ಮಧ್ಯೆಯೂ ಪಟೇಲ್‌ರಂತಹ ಹುದ್ದೆಗಳನ್ನು ಎಲ್ಲ ಸಮುದಾಯದವರು ಹೊಂದಿದ್ದರೆಂಬುದು ಗಮನಾರ್ಹವಾಗಿದೆ. ಅಂದರೆ ಉನ್ನತ ಹುದ್ದೆಗಳು ಕೇವಲ ಸಾಮಾಜಿಕ

ವಿವಿಧ ಸಮುದಾಯಗಳ ಪಟೇಲರುಗಳ ಪಟ್ಟಿ

ಬಣಜಿಗರು	೦೫	ಗೊಲ್ಲರು	೧೩	ಬೇಡರು	೦೮
ಲಿಂಗಾಯತರು	೧೧೭	ಮ್ಯಾಸನಾಯಕ	೦೩	ನಾಮಧಾರಿ ಒಕ್ಕಲಿಗರು	೦೩
ಕುಂಚಟಿಗ ಲಿಂಗಾಯಿತರು	೨೫	ಬ್ರಾಹ್ಮಣರು	೦೬	ಕುರುಬರು	೦೪
ವಡ್ಡರು	೦೧	ದೇವಾಂಗ	೦೧	ಜಂಗಮರು	೨
				ಒಟ್ಟು	೧೯೫

ಹಿನ್ನೆಲೆಯನ್ನೆ ಅವಲಂಬಿಸಿ ಪ್ರಾಪ್ತವಾಗುತ್ತಿರಲಿಲ್ಲ. ಆದರೆ ಆಯಾ ಸಮುದಾಯಗಳ ಆರ್ಥಿಕ ಹಿನ್ನೆಲೆಗೆ ಅನುಗುಣವಾಗಿ ದೊರೆಯುತ್ತಿದ್ದವು ಎನ್ನುವುದು ಸ್ಪಷ್ಟ. ಈ ಹುದ್ದೆಗಳೆಲ್ಲ ಅನುವಂಶಿಕವಾಗಿ ಗ್ರಾಮಗಳ ಮುಖಂಡತ್ವವನ್ನು ಹೊಂದಿರುವುದನ್ನು ನಾವು ಇಲ್ಲಿ ಗಮನಿಸಬಹುದು. ೧೯ನೇ ಶತಮಾನದ ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾಜಿಕ ವಾಗಿ ಎಲ್ಲ ವರ್ಗಗಳ ಭಾಗವಹಿಸುವಿಕೆಯ ಮೊದಲನೆಯ ಹಂತವನ್ನು ಗುರುತಿಸಬಹುದು. ೧೯೩೧ರಲ್ಲಿ ಚಿತ್ರದುರ್ಗ ಜಿಲ್ಲೆಯ ಒಕ್ಕಲಿಗರ ಜನಸಂಖ್ಯೆ ೨.೩ ರಷ್ಟು ಇದೆ. ಇದೇ ವೇಳೆಯಲ್ಲಿ ಲಿಂಗಾಯತರ ಜನಸಂಖ್ಯೆ ೨೧.೫ ರಷ್ಟು ಇದೆ. ೧೯೩೫ರ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಗ್ರಾಮದ ಆಡಳಿತದ ಮುಖಂಡತ್ವವನ್ನು ಹೊಂದಿದ ಒಕ್ಕಲಿಗರ ಪಟೇಲರ ಸಂಖ್ಯೆ ೧೬.೭ ರಷ್ಟು ಲಿಂಗಾಯತರ ಮುಖಂಡತ್ವ ಹೊಂದಿದ್ದ ಪಟೇಲರ ಸಂಖ್ಯೆ ೫೬.೬; ಅಂದರೆ ಜಿಲ್ಲೆಯ ಶೇಕಡಾ ೨೧.೫ರಷ್ಟು ಜನಸಂಖ್ಯೆಯುಳ್ಳ ಲಿಂಗಾಯುತರು ಶೇಕಡಾ ೫೬.೬. ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಪ್ರಭಾವವನ್ನು ಬೀರುವುದನ್ನು ಕಾಣಬಹುದು. ಸ್ವಾತಂತ್ರ್ಯ ನಂತರದಲ್ಲಿ ರಾಜ್ಯ ಸರಕಾರವು ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಿಸಿ ಪಟೇಲ ಮತ್ತು ಶಾನುಭೋಗರ ಅಧಿಕಾರವನ್ನು ಸಂಪೂರ್ಣವಾಗಿ ರದ್ದುಗೊಳಿಸಿತು. ನಂತರದ ಆರ್ಥಿಕ ಸ್ಥಿತ್ಯಾಂತರಗಳಿಂದಾಗಿ ಹಲವು ಗ್ರಾಮಗಳಲ್ಲಿನ ಪಟೇಲರುಗಳು ಸಹ ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ಕಳೆದುಕೊಂಡರು.

೧೯೪೭ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಎರಡು ಭೂ ಕಂದಾಯ ಉಪ ವಿಭಾಗಗಳು ಒಂಭತ್ತು ತಾಲೂಕುಗಳು ಮತ್ತು ಮೂವತ್ತು ಹೋಬಳಿಗಳಾಗಿ ವಿಭಾಗಿಸಿದರು. ಈ ವ್ಯವಸ್ಥೆ ೧೯೫೬ರ ವರೆಗೂ ಮುಂದುವರೆಯಿತು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ವಿಭಜನೆಯಾದಾಗ ಚಿತ್ರದುರ್ಗ ಜಿಲ್ಲೆಯನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಲಾಯಿತು. ಈಗ (೧೯೯೭) ಕರ್ನಾಟಕ ಸರಕಾರವು ದಾವಣಗೆರೆಯನ್ನು ಹೊಸ ಜಿಲ್ಲಾ ಕೇಂದ್ರವನ್ನಾಗಿ ಮಾಡಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಮೈಸೂರು ಗೆಜಿಟ್.**, ಏಪ್ರಿಲ್ (೧೧-೦೩-೧೮೮೬) ಮೈಸೂರು ಸರಕಾರ, ಮೈಸೂರು
೨. ಜೇಮ್ಸ್ ಮನೋಹರ್., **ಪೊಲಿಟಿಕಲ್ ಚೇಂಜ್ ಇನ್ ನ್ಯೂ ಇಂಡಿಯನ್ ಸ್ಟೇಟ್ ಮೈಸೂರು**, ೧೯೧೭-೧೯೫೫, ಸೌತ್ ಏಷಿಯನ್ ಬುಕ್ ದೆಹಲಿ, ೧೯೭೮.
೩. ಹಾ. ಮಾ. ನಾಗೇಶ., **ಭಾರತೀಯ ಗ್ರಾಮ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬.
೪. ಹೊಳಲ್ಕೆರೆ ತಾಲೂಕು, ಬರಬಲೂತಿ ರಿಜಿಸ್ಟಾರ್ ೧೯೩೩, ಹೊಳಲ್ಕೆರೆ ತಾಲೂಕು ಅಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ.
೫. ಪಟೇಲರು ಮತ್ತು ಶ್ಯಾನುಭೋಗರು ಮಾಡಬೇಕಾದ ತುರ್ತು ರಿಪೋರ್ಟಿನ ನಮೂನೆ, ಮೈಸೂರು ಸರಕಾರ, ಮೈಸೂರು ೧೯೨೨-೨೩.

ಎಸ್. ನಾಗರತ್ನಮ್ಮ*

ತುಮಕೂರು ಜಿಲ್ಲೆಯಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು

ಬಲಿದಾನದಿಂದ ಗಳಿಸಿದ ಸ್ವಾತಂತ್ರ್ಯವನ್ನು ಘೋಷಿಸಿ ಶಾಂತಿ ಸಂವೃದ್ಧಿ ನೆಲೆಸುವಂತೆ ಸಹಾಯಕವಾಗುವುದೇ ಗಾಂಧೀಜಿಯವರ ರಚನಾತ್ಮಕ ಕಾರ್ಯದ ಕಾರ್ಯಗಳ ಉದ್ದೇಶವಾಗಿತ್ತು. ಸತ್ಯ ಮತ್ತು ಅಹಿಂಸೆಯಿಂದ ಗಳಿಸುವುದೇ ಸ್ವಾತಂತ್ರ್ಯ. ಅದು ರಚನಾತ್ಮಕ ಕಾರ್ಯಗಳ ಹೊರತಾಗಿ ಬರಲು ಸಾಧ್ಯವೇ ಇಲ್ಲ ಎಂಬುದು ಗಾಂಧೀಜಿಯವರ ನಂಬಿಕೆ.[೧] ಸಂಪೂರ್ಣ ಸ್ವಾತಂತ್ರ್ಯಗಳಿಸಲು ರಚನಾತ್ಮಕ ಕಾರ್ಯಗಳು ಅಗತ್ಯ ಅನಿವಾರ್ಯವೂ ಸಹ. ರಚನಾತ್ಮಕ ಕಾರ್ಯಗಳ ರೂಪ ರೇಷೆಗಳು ಬಹಳ ವಿಶಾಲವಾದವು. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ಅಡಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಅಸ್ಪೃಶ್ಯತಾ ನಿವಾರಣೆ, ಗೋ ಸಂರಕ್ಷಣೆ, ರಾಷ್ಟ್ರ ಭಾಷೆ ಅಥವಾ ಹಿಂದಿ ಪ್ರಚಾರ, ಶುಚಿತ್ವ ಮತ್ತು ಆರೋಗ್ಯ, ಆರ್ಥಿಕ ಸಮಾನತೆ, ಹಿಂದು ಮುಸ್ಲಿಂ ಐಕ್ಯತೆ, ಪಾನನಿರೋಧ, ಮೂಲಶಿಕ್ಷಣ, ಸ್ತ್ರೀಯರ ಏಳಿಗೆ ಇವು ಬಹಳ ಪ್ರಮುಖವಾದವುಗಳಾಗಿವೆ. ಇವುಗಳಲ್ಲಿ ಕೆಲವು ನಮ್ಮ ದೇಶದ ಜನತೆಯ ಸಮಸ್ಯೆಗಳನ್ನು ಬಗೆ ಹರಿಸಿದರೆ, ಖಾದಿ ಮತ್ತು ಗ್ರಾಮೋದ್ಯೋಗ, ಮೂಲ ಶಿಕ್ಷಣ ಇವು ಇಡೀ ಮಾನವ ಕೋಟಿಗೆ ಯೋಗ್ಯವಾಗಿವೆ. ಅಹಿಂಸಾ ಹೋರಾಟದಲ್ಲಿ ಪೂರ್ವಸಿದ್ಧತೆ ಅಗತ್ಯ. ಆದ್ದರಿಂದ ಈ ರಚನಾತ್ಮಕ ಕಾರ್ಯಗಳು ಪೂರ್ವಸಿದ್ಧತೆಗೆ ತಳಹದಿಯಾಗಿವೆ. ಗಾಂಧೀಜಿಯವರು ಕರ್ನಾಟಕಕ್ಕೆ ಬಂದಾಗಲೆಲ್ಲಾ ರಚನಾತ್ಮಕ ಖಾದಿ ಮತ್ತು ಗ್ರಾಮೋದ್ಯೋಗ, ಅಸ್ಪೃಶ್ಯತಾ ನಿವಾರಣೆ, ಹಿಂದು ಮುಸ್ಲಿಂ ಐಕ್ಯತೆ, ಗ್ರಾಮ ನೈರ್ಮಲ್ಯ ಮುಂತಾದ ರಚನಾತ್ಮಕ ಕಾರ್ಯಗಳ ಕುರಿತೇ ಮಾತನಾಡುತ್ತಿದ್ದರು. ಇದರಿಂದಾಗಿಯೂ ಸಹ ಜನತೆ ರಚನಾತ್ಮಕ ಕಾರ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾರಂಭಿಸಿದರು.

೧೯೨೦ರ ನಂತರ ಕರ್ನಾಟಕದಲ್ಲಿಯೂ ಸಹ 'ಗಾಂಧಿಯುಗ' ಆರಂಭವಾಯಿತು. ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಅಖಿಲ ಭಾರತ ಕಾಂಗ್ರೆಸ್ ರಾಷ್ಟ್ರೀಯ ಕಾಂಗ್ರೆಸ್ ಭಾಷೆಯ ಆಧಾರದ ಮೇಲೆ ಇಪ್ಪತ್ತೊಂದು ಪ್ರಾಂತೀಯ ಕಾಂಗ್ರೆಸ್‌ಗಳ ಅಸ್ತಿತ್ವಕ್ಕೆ ಅನುಮತಿಯನ್ನು ನೀಡಿತು. ಆದರೆ ರಾಷ್ಟ್ರೀಯ ಕಾಂಗ್ರೆಸ್ ಪ್ರಾಂತ್ಯಗಳ ರಾಜಕೀಯದಲ್ಲಿ ಮಧ್ಯ ಪ್ರವೇಶಿಸುವುದಿಲ್ಲವೆಂದು ಪ್ರಾಂತ್ಯಗಳು ರಚನಾತ್ಮಕ ಕಾರ್ಯಗಳ ಅಡಿಯಲ್ಲಿ ತಮ್ಮ ಗುರಿ ಸಾಧಿಸಿಕೊಳ್ಳಬೇಕೆಂದು ಸೂಚನೆಯನ್ನು ನೀಡಿತು. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಮಿತಿಗಳು ಜನ್ಮ ತಾಳಿದವು[೨]. ತುಮಕೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕೆ. ರಂಗೈಯಂಗಾರ್ ಅವರ ನೇತೃತ್ವದಲ್ಲಿ ಹುಟ್ಟಿಕೊಂಡು ರಚನಾತ್ಮಕ ಕಾರ್ಯಗಳನ್ನು ಕೈಗೊಂಡಿತ್ತು. ಮೈಸೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಮಿತಿಯು ಬೆಂಗಳೂರಿನಲ್ಲಿ ಸಭೆ ಸೇರಿ ರಚನಾತ್ಮಕ ಕಾರ್ಯ ಕ್ರಮಗಳನ್ನು ಸ್ವೀಕರಿಸುವ ಹಾಗೂ ಸ್ವದೇಶ ತತ್ವವನ್ನು ಪ್ರಚಾರ ಮಾಡುವ ಅಂಶಗಳನ್ನು ಅಂಗೀಕರಿಸಿತ್ತು. ೧೯೨೪ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾಂ ಕಾಂಗ್ರೆಸ್ ಅಧಿವೇಶನವು ರಚನಾತ್ಮಕ ಕೆಲಸಗಳ ಕಲ್ಪನೆಯನ್ನು ಸಂಪೂರ್ಣವಾಗಿ ಸ್ಪಷ್ಟಪಡಿಸಿತು. ಈ ವೇಳೆಗಾಗಲೇ ಕರ್ನಾಟಕದ ಜನತೆ ರಚನಾತ್ಮಕ ಕಾರ್ಯಗಳಿಗೆ ಸಾಕಷ್ಟು ಸ್ಪಂದಿಸಿದ್ದರು. ಗಾಂಧಿಯುಗದ ಆರಂಭದ ವರ್ಷಗಳಲ್ಲೇ ತಗಡೂರು ರಾಮಚಂದ್ರರಾಯರು, ಕುದ್ಮಲ್ ರಂಗರಾಯರು, ಇವರುಗಳ ಪ್ರಯತ್ನದಿಂದಲೇ ಖಾದಿಗೆ ಭದ್ರ ಬುನಾದಿಯನ್ನು ಹಾಕಲಾಗಿತ್ತು. ಮುಂದೆ ಸಂಸ್ಥಾನದ ಸರ್ಕಾರವೇ ಬದನಾಳದಲ್ಲಿ ಖಾದಿ ಕೇಂದ್ರವನ್ನು ತೆರೆಯಿತು. ೧೯೨೭ರಲ್ಲಿ ಗಾಂಧೀಜಿಯವರು ನ್ಯಾಷನಲ್ ಹೈಸ್ಕೂಲ್‌ನ ಮೈದನಾದಲ್ಲಿ ದಕ್ಷಿಣ ಭಾರತ ಖಾದಿ ಪ್ರದರ್ಶನವನ್ನು ಉದ್ಘಾಟಿಸಿದರು. ಇದರಿಂದಾಗಿಯೂ ಸಹ ಖಾದಿ ಕೇಂದ್ರಗಳು ಜನ್ಮ ತಾಳಿದವು.

ಜಿಲ್ಲೆಯ ಕಾಂಗ್ರೆಸಿಗರಾದ ಕೆ. ರಂಗೈಯಂಗಾರ್, ಮಾಲಿ ಮರಿಯಪ್ಪ, ಕೆ. ನಂಜುಂಡರಾವ್, ಕೆ. ಹೆಂಜೇರಪ್ಪ, ತಾಳೇಕೆರೆ ಸುಬ್ರಮಣ್ಯಂ, ಟಿ. ಆರ್. ಚನ್ನಿಗರಾಮಯ್ಯ, ಸಿ.ಟಿ. ಹನುಮಂತಯ್ಯ, ಬಿ. ಸಿ. ನಂಜುಂಡಯ್ಯ, ನೀಲಕಂಠರಾವ್, ಕೆ. ವಿ. ಸುಬ್ರಮಣಸ್ವಾಮಿ, ವಿ. ತಾರೇಗೌಡ, ಮುಂತಾದವರು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಹೆಚ್ಚಿನ ನಂಬಿಕೆ ಇಟ್ಟಿದ್ದು, ಖಾದಿ ಗ್ರಾಮೋದ್ಯೋಗ, ಪಾನ ನಿರೋಧ, ಹರಿಜನೋದ್ಧಾರ ಹಿಂದು-ಮುಸ್ಲಿಂ ಐಕ್ಯತೆ, ಗೋ ಸಂರಕ್ಷಣೆ, ಹಿಂದಿ ಪ್ರಚಾರ, ಇವುಗಳ ಯಶಸ್ವಿಗೆ ಅವಿರತವಾಗಿ ಶ್ರಮಿಸಿದ್ದಾರೆ. ರಚನಾತ್ಮಕ ಕಾರ್ಯಗಳಲ್ಲಿ ಖಾದಿ ಪ್ರಚಾರ ಕಾರ್ಯ ಜಿಲ್ಲೆಯಲ್ಲಿ ಬಹಳ ಬಿರುಸಿನಿಂದ ನಡೆಯಿತು. ಖಾದಿ ಎಂದರೆ ಒಂದು ರೀತಿಯಲ್ಲಿ

* ಉಪನ್ಯಾಸಕರು, ಇತಿಹಾಸ ವಿಭಾಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - ೫೬೦ ೦೫೬

ಸ್ವದೇಶಿ ಮನೋಭಾವ. ಭಾರತೀಯ ಏಳಿಗೆಯ ಮತ್ತು ಸಹಬಾಳ್ವೆಯ ಸಂಕೇತ.[೪] ಖಾದಿಯ ಆಂದೋಳನದಿಂದಾಗಿ ಅನೇಕರಿಗೆ ಊಟ ಬಟ್ಟೆ ದೊರೆತಿದೆ. ರಾಜಕೀಯ ಸ್ವಾತಂತ್ರ್ಯಕ್ಕೆ ಸ್ವಾವಲಂಬನೆಯು ಅಗತ್ಯ; ರಾಷ್ಟ್ರವಾದವಿಲ್ಲದ ರಾಜಕೀಯ ರಾಷ್ಟ್ರವಾದ ಪರಿಪೂರ್ಣವಾಗುವುದಿಲ್ಲ, ಎಂಬ ಅರಿವಿನಿಂದ ಜಿಲ್ಲೆಯಲ್ಲಿ ಸ್ವದೇಶಿ ಮತ್ತು ಖಾದಿ ಪ್ರಚಾರ ಕಾರ್ಯಗಳು ನಡೆದವು. ೧೯೨೭ರಲ್ಲಿ ಗಾಂಧೀಜಿಯವರು ಖಾದಿ ಪ್ರವಾಸ ಕೈಗೊಂಡಾಗ ತುಮಕೂರಿಗೂ ಬಂದಿದ್ದರು. ಈ ವೇಳೆಗಾಗಲೇ ತುಮಕೂರಿನ ಸಭೆಗೆ ಆಗಮಿಸಿದ್ದ ನಾಗರೀಕರು ಸಾಕಷ್ಟು ಖಾದಿಯನ್ನು ಧರಿಸಿದ್ದರು. ಜಿಲ್ಲೆಯ ನಾಗರೀಕರು ಎರಡು ಸಾವಿರದ ಇನ್ನೂರು ಇಪ್ಪತ್ತು ರೂಪಾಯಿಗಳನ್ನು ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಸೇರಿ ಇನ್ನೂರೈವತ್ತು ರೂಪಾಯಿಗಳ ನಿಧಿಯನ್ನು ಸಲ್ಲಿಸಿದರು.

ಜಿಲ್ಲೆಯ ಕಾಂಗ್ರೆಸ್ ನಾಯಕರು, ಸಭೆಗಳನ್ನು ಏರ್ಪಡಿಸಿ, ಪ್ರಮುಖ ನಾಯಕರಾದ, ಟಿ. ಸಿದ್ಧಲಿಂಗಯ್ಯ, ಎಸ್. ಎಸ್. ಸೆಟ್ಲೂರ್, ಎಂ. ಎನ್. ಜೋಯಿಸ್, ಕೆ. ಟಿ. ಭಾಷ್ಯಂ, ಎನ್. ಸಿ. ತಿಮ್ಮಾರೆಡ್ಡಿ, ಮುಂತಾದವರನ್ನು ಕರೆಯಿಸಿ ರಚನಾತ್ಮಕ ಕಾರ್ಯಗಳನ್ನು ಕುರಿತಾದ ಉಪನ್ಯಾಸಗಳನ್ನು ಕೊಡಿಸುತ್ತಿದ್ದರು. ಇದರಿಂದಾಗಿ ಜನತೆಯಲ್ಲಿ ರಚನಾತ್ಮಕ ಕಾರ್ಯಗಳ ಬಗ್ಗೆ ಅರಿವು ಮೂಡುತ್ತಿತ್ತು. ೧೯೨೯ರ ವೇಳೆಗೆ ಜಿಲ್ಲೆಯಲ್ಲಿ ಖಾದಿ ಆಂದೋಳನ ತುಂಬ ಬಿರುಸಿನಿಂದ ನಡೆಯಿತು. ೧೯೨೯ರ ಅಕ್ಟೋಬರ್ ೨ ರಂದು ಅಖಿಲ ಭಾರತ ಚರಕಾ ಸಂಘದವರು ತುಮಕೂರಿನಲ್ಲಿ ಖಾದಿ ವಸ್ತ್ರಾಲಯವನ್ನು ಸ್ಥಾಪಿಸಿದರು.[೬] ನೀಲಕಂಠರಾಯರು ಇದರ ಜವಾಬ್ದಾರಿಯನ್ನೊತ್ತು ಅದನ್ನು ಸ್ವಾತಂತ್ರ್ಯ ಹೋರಾಟದ ಒಂದು ಭಾಗವೆಂದೇ ಮುನ್ನಡೆಸಿದರು. ಮುಂದಿನ ದಿನಗಳಲ್ಲಿ ಈ ಖಾದಿವಸ್ತ್ರಾಲಯುವೇ ಸ್ವಾತಂತ್ರ್ಯ ಹೋರಾಟದ ಕೇಂದ್ರವಾಗಿತ್ತು. ಇಲ್ಲಿ ನೀಲಕಂಠರಾಯರು ಸಹಾಯದಿಂದ ಜಿಲ್ಲೆಯಲ್ಲಿ ತಿಪಟೂರು, ಕೊರಟಗೆರೆ, ಮಧುಗಿರಿ, ಪಾವಗಡ, ಮಿಡಿಗೇಶಿ, ಇಟಗದಿಬ್ಬನಹಳ್ಳಿ, ಶಿರಾ ಇನ್ನು ಕೆಲವು ಕಡೆಗಳಲ್ಲಿ ಸಣ್ಣ ಸಣ್ಣ ಖಾದಿ ಕೇಂದ್ರಗಳನ್ನು ತೆಗೆಯಲಾಯಿತು.[೭] ಖಾದಿ ಕೇಂದ್ರಗಳ ಮಾಲೀಕರ ಸಹಾಯದಿಂದ ಖಾದಿ ಬಜಾರುಗಳು ನಿರ್ಮಾಣಗೊಂಡವು. ಖಾದಿ ಮತ್ತು ಸ್ವದೇಶಿ ವಸ್ತುಗಳ ಪ್ರಚಾರ ವೈಭವದಿಂದ ನಡೆಯುತ್ತಿತ್ತು. ತಿಪಟೂರು, ಶಿರಾ, ಚಿಕ್ಕನಾಯಕನ ಹಳ್ಳಿ, ತುಮಕೂರುಗಳಲ್ಲಿ "ಹಾಕು ಬೆಂಕಿಲಿ, ಉರಿಸು ಧಗಧಗ, ಧರಿಸು ಪವಿತ್ರವಾ" ಎಂಬ ಲಾವಣಿಗಳನ್ನು ಹೇಳುತ್ತಾ ವಿದೇಶಿ ವಸ್ತ್ರಗಳ ಹೋಳಿಯನ್ನು ಮಾಡಿದರು. ಅಂಗಡಿಯ ಮಾಲೀಕರು ಒಪ್ಪದಿದ್ದರೆ ಅಂತಹವರ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಕಾರ್ಯಕರ್ತರು ಪೋಲೀಸರಿಂದ ಲಾಠಿ ಏಟು ಬೂಟು ಕಾಲಿನಿಂದ ಹೊಡೆತ, ಇನ್ನು ಹಲವು ರೀತಿಯ ಅಮಾನವೀಯ ಹಿಂಸೆಗಳನ್ನು ಅನುಭವಿಸಿದರೂ ಸಹ 'ಖಾದಿ ತೊಡಿ, ವಿದೇಶಿ ಬಿಡಿ' ಎಂಬ ಘೋಷಣೆಗಳಿಂದ, ಮನೆ ಮನೆಗೂ ಹೋಗಿ ಖಾದಿಯ ಬಳಕೆಯನ್ನು ವ್ಯಾಪಕಗೊಳಿಸಿದರು. ಚಿಕ್ಕಪೇಟೆಯ ಬಟ್ಟೆ ಅಂಗಡಿಗಳ ಮುಂದೆ ಪಿಕೆಟಿಂಗ್ ಸಹ ನಡೆಯಿತು.

ಗಾಂಧಿ ಜಯಂತಿ ಪ್ರಯುಕ್ತ ಸಂಸ್ಥಾನಗಳಲ್ಲಿ ಖಾದಿಯ ಮಾರಾಟ ಕಾರ್ಯವನ್ನು ಹಮ್ಮಿಕೊಳ್ಳಲಾಗಿ, ತುಮಕೂರಿನಲ್ಲಿ ನಾಲ್ಕು ನೂರ ತೊಂಬತ್ತೆರಡು ರೂಪಾಯಿ ಖಾದಿಯನ್ನು ಮಾರಾಟ ಮಾಡಲಾಯಿತು.[೮] ಜಿಲ್ಲೆಯ ತಿಪಟೂರಿನಲ್ಲಿ ದಿ|| ವೆಂಕಟಪತಯ್ಯ ನವರು ವಿದೇಶಿ ಬಹಿಷ್ಕಾರ, ವಸ್ತ್ರ ದಹನ, ನಡೆಸಲು ಕರೆ ಕೊಟ್ಟಾಗ ಎಸ್. ಆರ್. ಮಲ್ಲಪ್ಪ, ಹೆಚ್.ವಿ. ಗೋವಿಂದರಾಜು ಶೆಟ್ಟರು, ವಿ. ವಿಶ್ವನಾಥ ಶೆಟ್ಟರು ಸೇರಿ ಶ್ರೀ ಕಲ್ಲೇಶ್ವರ ಸ್ವಾಮಿ ದೇವಸ್ಥಾನದ ಮೈದಾನದಲ್ಲಿ ಬಟ್ಟೆಯನ್ನು ರಾಶಿ ಹಾಕಿ ಸುಟ್ಟು ಹಾಕಿದರು; ಅಷ್ಟೇ ಅಲ್ಲದೆ ಅಂದು ತಿಪಟೂರಿನಲ್ಲಿ ಪೂರ್ಣ ಬಂದ್ ಆಚರಿಸಿ, ಖಾದಿ ತೊಡುವ ಪ್ರತಿಜ್ಞೆಯನ್ನು ಕೈಗೊಂಡರು. ಕಾಂಗ್ರೆಸ್ ಕಮಿಟಿಗಳು ಕಾಂಗ್ರೆಸ್ ಸಪ್ತಾಹವನ್ನು ಹಮ್ಮಿಕೊಂಡರು. ಆಗ ಜಿಲ್ಲೆಯಲ್ಲಿಯೂ ಸಹ ದಿನಾಂಕ ೨೦.೫.೧೯೨೯ರಂದು ಖಾದಿ ಪ್ರಚಾರ ಸಪ್ತಾಹವನ್ನು ಆಚರಿಸಿದರು.[೯] ಅಷ್ಟೇ ಅಲ್ಲದೆ ಚರಕಾಗಳನ್ನು ಅಣಿಗೊಳಿಸಿಕೊಂಡು ಜನತೆಗೆ ಹಂಚಿದರು. ಮಧುಗಿರಿಯಲ್ಲಿ ದಿನಾಂಕ ೨೧.೧೦.೧೯೪೬ರಂದು ಹೈ ಸ್ಕೂಲ್ ಮೈದಾನದಲ್ಲಿ ಮಾಲಿ ಮರಿಯಪ್ಪನವರು ಅಧ್ಯಕ್ಷತೆಯಲ್ಲಿ ಚರಕಾ ಪ್ರಾರಂಭೋತ್ಸವ ನಡೆಯಿತು.[೧೦] ಜೊತೆಗೆ ಅಂದಿನ ಮೈಸೂರು ಸರ್ಕಾರವು ಸಹ ಖಾದಿ ಮತ್ತು ಗ್ರಾಮೋದ್ಯೋಗಗಳಂತಹ ರಚನಾತ್ಮದ ಕಾರ್ಯಗಳಿಗೆ ವಿಶೇಷವಾದ ಆಸಕ್ತಿಯನ್ನು ತೋರಿಸಿದ್ದರಿಂದ ಖಾದಿ ಮತ್ತು ಸ್ವದೇಶಿ ಗ್ರಾಮೋದ್ಯೋಗಗಳು ಹೆಚ್ಚುಹೆಚ್ಚು ಯಶಸ್ವಿಯಾದವು ಎಂದು ಹೇಳಬಹುದು.

ಗ್ರಾಮೋದ್ಯೋಗಗಳು ಅಥವಾ ಗೃಹ ಕೈಗಾರಿಕೆ

ಗಾಂಧೀಜಿಯವರು ಖಾದಿಯಷ್ಟೇ ಮಹತ್ವದ ಸ್ಥಾನವನ್ನು ಗ್ರಾಮ ಕೈಗಾರಿಕೆಗಳಿಗೂ ಸಹ ನೀಡಿದ್ದಾರೆ. ಖಾದಿ ಇಲ್ಲದೆ, ಗ್ರಾಮ ಕೈಗಾರಿಕೆಗಳು ನಿಲ್ಲಲಾರವು. ರಾಟೆಗೆ ತವರುಮನೆ ಹಳ್ಳಿಗಳೇ.

೧೯೨೦ರ ದಶಕದಲ್ಲಿ ಜಿಲ್ಲೆಯು ಗೃಹ ಕೈಗಾರಿಕೆಗಳಿಗೆ ಪ್ರಸಿದ್ಧಿ ಪಡೆದಿತ್ತು. ಪಾವಗಡ, ಕೊರಟಗೆರೆ ತಾಲ್ಲೂಕುಗಳು ಗಾಜಿನ ಬಳೆಯ ಗೃಹ ಉದ್ಯಮಕ್ಕೆ, ತಿಪಟೂರು ಎತ್ತಿನಗಾಡಿ ತಯಾರಿಕೆಗೂ ಶಿರಾ ದೇಶಿಯವಾಗಿ ತಯಾರಿಸಿದ ಬೂಟುಗಳಿಗೂ, ಸೀತಕಲ್ಲು ಮತ್ತು ಊರ್ಡಿಗೆರೆಗಳು ಹಿತ್ತಾಳೆ ಸಮಾನುಗಳ ಉದ್ಯಮಕ್ಕೂ, ಜನಪ್ರಿಯತೆ ಗಳಿಸಿದ್ದವು. ಸ್ವಾತಂತ್ರ್ಯನಂತರ ತುಮಕೂರು ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ ೧೯೫೨ರಲ್ಲಿ ಜನ್ಮ ತಾಳಿತು. ವರ್ಷಕ್ಕೆ ಸುಮಾರು

೫೦,೦೦೦ ರೂ. ಬೆಲೆ ಬಾಳುವ ಖಾದಿ ಉತ್ಪನ್ನವನ್ನು ಮಾಡಲಾಗುತ್ತಿತ್ತು.

೧೯೫೬ರಲ್ಲಿ ಕರ್ನಾಟಕರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಸ್ಥಾಪನೆಯಾಗಿ ಇದರ ಆಶ್ರಯದಲ್ಲಿ ತುಮಕೂರು, ಮೈಸೂರು, ಧಾರವಾಡ, ಗುಲ್ಬರ್ಗಗಳಲ್ಲಿ ಇದರ ಶಾಖೆಗಳು ಹುಟ್ಟಿಕೊಂಡವು. ಈ ಮಂಡಲಿಯ ವತಿಯಿಂದ ಉಣ್ಣೆ ಗ್ರಾಮೋದ್ಯೋಗದ ಅಭಿವೃದ್ಧಿಗಾಗಿ, ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೈ. ಎನ್. ಹೊಸಕೋಟೆಯಲ್ಲಿ ಉಣ್ಣೆ ಉದ್ಯಮವನ್ನು, ೧೯೬೦ರಲ್ಲಿ ತುಮಕೂರು ಜಿಲ್ಲಾ ಸಣ್ಣ ಕೈಗಾರಿಕಾ ಸಂಘ ೧೯೭೨ರಲ್ಲಿ ಜಿಲ್ಲಾ ವಾಣಿಜ್ಯ ಮತ್ತು ಸಣ್ಣ ಕೈಗಾರಿಕಾ ಇಲಾಖೆ ಸ್ಥಾಪನೆಯಾಯಿತು. ಅದು ತುಮಕೂರು, ಗುಬ್ಬಿಗಳಲ್ಲಿ ಕುಶಲಕರ್ಮಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ, ಮರಗೆಲಸ, ಕಮ್ಮಾರಿಕೆ ಕೈಮಗ್ಗ, ಹೊಲಿಗೆ ಕೆಲಸ, ಚಾಪೆ ಹಣೆಯುವಿಕೆ, ತೆಂಗಿನ ನಾರಿನ ಉತ್ಪಾದನಾ ತರಬೇತಿಯನ್ನು ನೀಡುತ್ತಿದೆ.

ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಇನ್ನೊಂದು ಪ್ರಮುಖವಾದ ಅಂಶ: ಹರಿಜನೋದ್ಧಾರ ಅಥವಾ ಅಸ್ಪೃಶ್ಯತಾ ನಿವಾರಣೆ. ಅಸ್ಪೃಶ್ಯತಾ ನಿವಾರಣೆ ಸ್ವರಾಜ್ಯಕ್ಕೆ ಅಗತ್ಯ. ಗಾಂಧಿ ಆಗಮನಕ್ಕಿಂತ ಮುಂಚೆಯೇ ಸಂಸ್ಥಾನದಲ್ಲಿ ಹರಿಜನೋದ್ಧಾರದ ಕಾರ್ಯ ಚಟುವಟಿಕೆಗಳನ್ನು ಕಾಣಬಹುದಿತ್ತು. ೧೯೩೪ರಲ್ಲಿ ಗಾಂಧೀಜಿಯವರು ಹರಿಜನೋದ್ಧಾರ ಪ್ರವಾಸವನ್ನು ಕೈಗೊಂಡು ಸಂಸ್ಥಾನದ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ್ದರು. ತುಮಕೂರಿಗೆ ಭೇಟಿ ನೀಡಿದಾಗ, ಹರಿಜನ ಕೇರಿಗಳಿಗೆ ಭೇಟಿ ನೀಡಿದರು. ಅವರಿಗೆ ಸ್ವಚ್ಛತೆ ಇರಬೇಕು; ಹೆಂಡ ಕುಡಿಯುವುದನ್ನು ನಿಲ್ಲಿಸಬೇಕೆಂದು ಎಲ್ಲರನ್ನು ಕುರಿತು ಮಾತನಾಡಿದರು. ತುಮಕೂರಿನಲ್ಲಿ ಈಗಾಗಲೇ ಆದಿಕರ್ನಾಟಕ ವಸತಿ ಮತ್ತು ಔದ್ಯೋಗಿಕ ವಸತಿ ಶಿಕ್ಷಣ ಶಾಲೆಗಳಿದ್ದವು. ಅಲ್ಲಿಗೆ ಭೇಟಿ ನೀಡಿ ಅವರ ಸ್ವಚ್ಛತೆಯನ್ನು ಕೊಂಡಾಡಿದರು. ಅಲ್ಲಿಂದ ಮಧುಗಿರಿ, ಕೊರಟಗೆರೆ, ತಿಪಟೂರು, ಕ್ಯಾತಸಂದ್ರಗಳಿಗೆ ಭೇಟಿ ನೀಡಿದರು. ಆ ಸಂದರ್ಭದಲ್ಲಿ ಮಧುಗಿರಿ ಜನತೆ ದರಿದ್ರ ನಾರಾಯಣ ನಿಧಿಗೆ ಒಂದು ಸಾವಿರ ರೂಪಾಯಿ ಗಳನ್ನು ಕೊರಟಗೆರೆಯಲ್ಲಿ ನೂರು ರೂಪಾಯಿ ನಿಧಿಯನ್ನು ಸಲ್ಲಿಸಿದರು.

ಜಿಲ್ಲೆಯ ನಾಯಕರು ಹರಿಜನೋದ್ಧಾರದ ಬಗ್ಗೆ ಬಹಳ ಕಾಳಜಿಯನ್ನು ಹೊಂದಿದ್ದರು. ಮಾಲಿ ಮರಿಯಪ್ಪ, ಕೆ. ಹೆಂಜೇರಪ್ಪ, ಟಿ. ಆರ್. ಚೆನ್ನಿಗರಾಮಯ್ಯ, ಸಿ. ಟಿ. ಹನುಮಂತಯ್ಯ ಇವರು ಸಂಸ್ಥಾನದ ನಾಯಕರನ್ನು ಆಹ್ವಾನಿಸಿ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಇದರಿಂದಾಗಿ ಜನತೆಗೆ, ಹರಿಜನೋದ್ಧಾರದ ಬಗ್ಗೆ ತಿಳುವಳಿಕೆಯನ್ನು ಮೂಡಿಸುತ್ತಿದ್ದರು. ಜಿಲ್ಲೆಯ ಸಿ. ಟಿ. ಹನುಮಂತಯ್ಯನವರು ಹರಿಜನರಿಗೆ ಸಾರ್ವಜನಿಕ ಬಾವಿ ಕೆರೆ ದೇವಾಲಯಗಳ ಪ್ರವೇಶಕ್ಕೆ ಹೋರಾಟ ನಡೆಸಿದರು. ಕೋಡಿಹಳ್ಳಿ ಹರಿಜನ ಮಠದ ಅಧಿಕಾರಿಯಾಗಿ ನೇಮಿಸಲ್ಪಟ್ಟ ಮೇಲೆ ಹರಿಜನ ಹಿತರಕ್ಷಣೆಗಳತ್ತ ಹೆಚ್ಚಿನ ಗಮನ ಹರಿಸಿದರು. ಟಿ. ಆರ್. ಚೆನ್ನಿಗರಾಮಯ್ಯ ಮತ್ತು ಸಿ.ಟಿ. ಹನುಮಂತಯ್ಯನವರು ಹರಿಜನ ರೊಂದಿಗೆ ಸಿಬಿ ನರಸಿಂಹಸ್ವಾಮಿ ದೇವಾಲಯ ಗುಬ್ಬಿಯಪ್ಪನ ದೇವಾಲಯ ಬಾಲ್ಯ ಹನುಮಂತರಾಯ ದೇವಾಲಯ, ಗೂಳೂರು ವಿನಾಯಕ ದೇವಾಲಯಗಳನ್ನು ಪ್ರವೇಶಿಸಿದರು.[೧೧] ೧೯೩೬ರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಹರಿಜನ ಸಮ್ಮೇಳನ ನಡೆಯಿತು. ಇವರ ಪ್ರಯತ್ನದಿಂದಾಗಿ ಜಿಲ್ಲೆಯಲ್ಲಿ ಹರಿಜನ ವಿದ್ಯಾರ್ಥಿಗಳಿಗಾಗಿ ಹಾಸ್ಟಲ್‌ಗಳನ್ನು ತೆರೆಯಲಾಯಿತು. ಟಿ. ಆರ್. ಚೆನ್ನಿಗರಾಮಯ್ಯನವರು ಹರಿಜನರನ್ನು ಸಂಘಟಿಸಿ, ಹರಿಜನರ ಪ್ರಾಜಾಸಂಖ್ಯೆಗೆ ಅನುಗುಣವಾಗಿ ಶಾಸನ ಸಭೆ ಸ್ಥಳೀಯ ಸಂಸ್ಥೆಗಳಲ್ಲಿ ಅವರಿಗೆ ಪ್ರಾತಿನಿಧ್ಯಕ್ಕೆ ಹೋರಾಟ ನಡೆಸಿದರು.

ಪಾನ ನಿರೋಧ ರಚನಾತ್ಮಕ ಕಾರ್ಯಗಳಲ್ಲಿ ಒಂದು. ಮದ್ಯಪಾನದ ವ್ಯಸನಕ್ಕೆ ತುತ್ತಾದ ರಾಷ್ಟ್ರಕ್ಕೆ ಆತ್ಮನಾಶವಲ್ಲದೆ ಅನ್ಯಗತಿಯಿಲ್ಲ; ಎಂಬುದು ಗಾಂಧೀಜಿಯವರ ಅಭಿಪ್ರಾಯ. ಹರಿಜನಾಭಿವೃದ್ಧಿಯಾಗಬೇಕಾದರೆ, ಉತ್ತಮ ನಾಗರೀಕ ವಾತಾವರಣ ಇರಬೇಕಾದಲ್ಲಿ, ಬೆಳೆಯುತ್ತಿರುವ ಮಕ್ಕಳ ಗುಣ, ಉತಷ್ಟ ರೂಪ ಪಡೆಯಬೇಕಾದಲ್ಲಿ, ಪಾನ ನಿರೋಧವನ್ನು ಯಶಸ್ವಿಗೊಳಿಸಬೇಕೆಂಬ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಈ ಚಳವಳಿ ಬಹಳ ಬಿರುಸಿನಿಂದ ನಡೆಯಿತು. ಈ ಚಳವಳಿಯು ಮೈಸೂರು ಸಂಸ್ಥಾನದಲ್ಲೇ ಮೊಟ್ಟ ಮೊದಲ ಬಾರಿಗೆ ೧೯೩೧-೩೨ರಲ್ಲಿ ತುಮಕೂರು ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಕೆ. ರಂಗೈಯಂಗ್ಯಾರ್ ಟಿ. ಸುಬ್ರಮಣ್ಯ, ಬಿ. ಸಿ. ನಂಜುಡಯ್ಯ, ಎ. ರೇವಣ್ಣ, ವಿ. ಎಸ್. ಸಂಗಣ್ಣ, ಎಂ. ಎಸ್. ವಿನೋಬರಾವ್ ಅವರ ನಾಯಕತ್ವದಲ್ಲಿ ನಡೆಯಿತು.

ಪೀಪಾಯಿಗಳನ್ನೊಡೆದು ಹಾಕಿ, ಮದ್ಯವನ್ನೆಲ್ಲಾ ಹೊರ ಚೆಲ್ಲುವ ಕೃತ್ಯಗಳು ಭರದಿಂದ ಸಾಗಿದವು. ಜಿಲ್ಲೆಯ ಕಾಂಗ್ರೆಸ್ ಮತ್ತು ಸಂಸ್ಥಾನದ ಕಾಂಗ್ರೆಸ್ಸಿಗರು ತಮ್ಮ ಉಪನ್ಯಾಸಗಳ ಮೂಲಕ ಕುಡಿತದಿಂದಾಗುವ ಕೆಟ್ಟ ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡುತ್ತಿದ್ದರು. ಕಾಂಗ್ರೆಸ್ ಕಾರ್ಯಕರ್ತರು, ಕಾಂಗ್ರೆಸ್ ಸಪ್ತಾಹದ ಕಾರ್ಯಕ್ರಮದಲ್ಲಿ ಪಾನನಿರೋಧವು ಒಂದಾಗಿದ್ದು, ದಿನಾಂಕ ೨೨.೫.೧೯೩೯ರಂದು ಎಲ್ಲಾ ಕಡೆ ಹರಿಜನ ಕೇರಿಗಳಿಗೆ ಭೇಟಿ ಕೊಟ್ಟು ಸಪ್ತಾಹದ ವಿವರಗಳನ್ನು ಶ್ರದ್ಧಾಸಕ್ತಿಯಿಂದ ವಿವರಿಸಿ ಪಾನನಿರೋಧಕ್ಕೆ ಹರಿಜನರನ್ನು ಸಹಕರಿಸುವಂತೆ ಕೋರಿ ಕೆಲವೆಡೆ ಅವರಿಂದ ಮದ್ಯಪಾನ ಮಾಡದಿರುವ ಹಾಗೆ ಪ್ರತಿಜ್ಞೆಯನ್ನು ಮಾಡಿಸಿದರು.[೧೨] ಇದೇ ಸಮಯದಲ್ಲಿ ತುಮಕೂರು ಮತ್ತು ಕ್ಯಾತಸಂದ್ರದಲ್ಲಿ ಸೇಂದಿ ಅಂಗಡಿಗಳ ಮುಂದೆ ಪಿಕೆಂಟಿಂಗ್

ಯಶಸ್ವಿಯಾಗಿ ನಡೆಯಿತು. ದಿನಾಂಕ ೨೬.೫.೧೯೩೯ ರಂದು ತುಮಕೂರು ಟೌನ್(ನಲ್ಲಿರುವ ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದ್ದರಿಂದ ಪೋಲೀಸರು ಮಾಗಡಿ ಆದಿರಾಜಯ್ಯನವರನ್ನು ದಸ್ತಗಿರಿ ಮಾಡಿದರು.

ಸರ್ಕಾರ ಪಾನನಿರೋಧವನ್ನು ಕಾರ್ಯರೂಪಕ್ಕೆ ತರುವಲ್ಲಿ ಅಸಮರ್ಥವಾದ್ದರಿಂದ ಮೈಸೂರು ಕಾಂಗ್ರೆಸ್ ಅರಣ್ಯ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿ ತೀರ್ಮಾನಿಸಿತ್ತು. ಆದ್ದರಿಂದ ತುಮಕೂರು ಕಾಂಗ್ರೆಸ್ ಕಮಿಟಿಯು ಸಹ ದಿನಾಂಕ ೨೮.೯.೧೯೩೯ರಂದು ಶಿರಾ ತಾಲ್ಲೂಕಿನ ಎಲಿಯೂರು, ವಡ್ಡನಹಳ್ಳಿ, ತಾವರೆಕೆರೆಗಳ ಹತ್ತಿರ ಸರ್ಕಾರ ವಲಯಕ್ಕೆ ಸೇರಿದ ಅರಣ್ಯವಿದ್ದುದರಿಂದ ಈ ಮೂರು ಪ್ರದೇಶಗಳಲ್ಲಿ ಅರಣ್ಯ ಸತ್ಯಾಗ್ರಹ ಪ್ರಾರಂಭವಾಯಿತು. ಇದರ ನಾಯಕತ್ವವನ್ನು ಮಾಲಿ ಮರಿಯಪ್ಪ ನವರು ವಹಿಸಿದ್ದರು. ಸೆಪ್ಟೆಂಬರ್ ೨೮ರಿಂದ ನವೆಂಬರ್ ೧೨ರವರೆಗೂ ಅವ್ಯಾಹತವಾಗಿ ನಡೆಯಿತು. ಈ ಸತ್ಯಾಗ್ರಹದಲ್ಲಿ ಜಿಲ್ಲೆಯ ಮುನ್ನೂರು ನಲವತ್ತು ಮಂದಿ ಸತ್ಯಾಗ್ರಹಿಗಳು ದಸ್ತಗಿರಿಯಾಗಿದ್ದು, ಬಹುಶಃ ಮತ್ತಾವ ಜಿಲ್ಲೆಯಿಂದಲೂ ಇಷ್ಟೊಂದು ಮಂದಿ ಭಾಗವಹಿಸಿ ದಸ್ತಗಿರಿಯಾಗಿರಲಿಲ್ಲ. ೧೯೪೦ರ ದಶಕದಲ್ಲಿ ಸರ್ಕಾರಕ್ಕೆ ಹಾಗೂ ಬೆಂಗಳೂರಿನ ದೀನಸೇವಾ ಸಂಘದಂತಹ ಖಾಸಗಿ ಸಂಸ್ಥೆಗಳು ಪಾನ ನಿರೋಧ ಕಾರ್ಯಕ್ರಮವನ್ನು ಹಳೆಯ ಮೈಸೂರಿನ ಪ್ರದೇಶಗಳಲ್ಲೆಲ್ಲಾ ಹಮ್ಮಿಕೊಂಡವು. ೧೯೪೭ರಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಪಾನ ನಿರೋಧವನ್ನು ಜಾರಿಗೆ ತರಲಾಯಿತು. ಗೋ ಸಂರಕ್ಷಣೆಯು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಒಂದಾಗಿದೆ. ಜಿಲ್ಲೆಯ ಜನತೆ ಈ ವಿಧಾಯಕ ಕಾರ್ಯಕ್ಕೆ ಹೆಚ್ಚಿನ ಮಹತ್ವ ನೀಡಿದರು. ಕೆ. ರಂಗೈಯಂಗಾರ್, ಎಸ್. ಕಾಮರಾಜಪ್ಪ, ಜಿ. ಪಿ. ಅನಂತರಾಜಪ್ಪ, ಗುಬ್ಬಿಹುಚ್ಚಪ್ಪ, ಹೆಚ್.ಎಂ. ಗಂಗಾಧರಯ್ಯ, ಕೆ.ಎಸ್. ರಾಜಪ್ಪನವರು ಗೋ-ಸಂರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು. ೧೯೨೬ರಲ್ಲಿ ಪ್ರಾಣಿದಯಾ ಪ್ರಚಾರ ಸಂಘವನ್ನು ತುಮಕೂರಿನಲ್ಲಿ ಸ್ಥಾಪಿಸಿದರು. ಇವರು ಗೋಹತ್ಯೆಯನ್ನು ನಿಷೇಧಿಸಲು ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ. ಗೋ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುತ್ತಿದ್ದರು. ಡಿ. ಎನ್. ಶಾಮರಾಜಪ್ಪನವರು ಗೋಧರ್ಮ ಶಾಲೆಯನ್ನು ಪ್ರಾರಂಭಿಸಿ, ಗೋ-ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು.[೧೬]

೧೯೨೭ರಲ್ಲಿ ಗಾಂಧೀಜಿಯವರು ಖಾದಿ ಪ್ರಚಾರ ಕಾರ್ಯ ನಿಮಿತ್ತವಾಗಿ ತುಮಕೂರಿಗೆ ಭೇಟಿ ನೀಡಿದಾಗ ಊರಿಗೊಂದು ಗೋ-ಶಾಲೆಯನ್ನು ನಡೆಸಬೇಕು. ಗೋಮಾಂಸ ಭಕ್ಷಿಸುವುದನ್ನು ನಿಲ್ಲಿಸಬೇಕೆಂದು ಮಾತನಾಡಿದರು. ಈ ವೇಳೆಗಾಗಲೇ ಸ್ಥಾಪಿತವಾದ "ಪ್ರಾಣಿದಯಾ ಪ್ರಚಾರಕ ಸಂಘ"ದವರು ಗೋ-ಸಂರಕ್ಷಣೆಗಾಗಿ ೨೦೦ ರೂಪಾಯಿಗಳ ನಿಧಿಯನ್ನು ಅರ್ಪಿಸಿದರು. ಗೋ-ಸಂರಕ್ಷಣಾ ಕಾರ್ಯದ ಅಂಗವಾಗಿ ಜಿಲ್ಲೆಯಲ್ಲಿ ಹಲವಾರು ದಾನಿಗಳು ಪಶುವೈದ್ಯ ಶಾಲೆಗಳಿಗೆ ದಾನ ನೀಡಿದ್ದಾರೆ. ಅಂಚಿ ನೇರಳೇಕೆರೆಯಲ್ಲಿ ದಿ। ಸಾಹುಕಾರ್ ಚನ್ನಯ್ಯನವರು, ಕಡಬದ ದೇವರಾಜ ದೊಡ್ಡೇಗೌಡರು, ಕಡಬದಲ್ಲಿಯೂ ದಿ। ಬಸವೇ ಗೌಡರು ತುರುವೇಕೆರೆಯಲ್ಲಿ ಒಂದು ಪಶುವೈದ್ಯ ಶಾಲೆಯನ್ನು ಕಟ್ಟಿಸಿದರು.

ಹಿಂದು-ಮುಸ್ಲಿಂ ಐಕ್ಯತೆ ರಾಟೆಯಷ್ಟೇ ಮಹತ್ವವಾದುದು. ಸ್ವರಾಜ್ಯ ಪ್ರಾಪ್ತಿಗೆ ಅಗತ್ಯವಾದುದು. ಜಿಲ್ಲೆಯಲ್ಲಿ ತುಮಕೂರು ಜಿಲ್ಲಾ ಕಾಂಗ್ರೆಸ್‌ವತಿಯಿಂದ ಸಾರ್ವಜನಿಕ ಸಭೆಯನ್ನು ಏರ್ಪಡಿಸಿ ಅರಿವು ಮೂಡಿಸುತ್ತಿದ್ದರು. ೧೯೩೨ ಜನವರಿ ೨೯ರಂದು ಪೇಷಾವರ ಡೇ ಪ್ರಯುಕ್ತ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದರು. ಆ ಸಭೆಯಲ್ಲಿ ಗುಬ್ಬಿ ಹುಚ್ಚಪ್ಪ, ನೆಟ್ಲೂರ ಪುಟ್ಟ ಮುದ್ದಯ್ಯ, ಗಫಾರ್ ಖಾನ್ ಇವರು ಹಿಂದು-ಮುಸ್ಲಿಂ ಐಕ್ಯತೆ ಭಾವನೆಯನ್ನು ಸಾರಿ ಸ್ವರಾಜ್ಯ ಪ್ರಾಪ್ತಿಗೆ ಪ್ರಯತ್ನ ನಡೆಸಬೇಕೆಂದು ತಿಳಿಸಿದರು. ಗಾಂಧೀಜಿಯವರು ರೂಪಿಸಿದ ರಚನಾತ್ಮಕ ಕಾರ್ಯಗಳಲ್ಲಿ ಹಿಂದಿ ಪ್ರಚಾರವೂ ಒಂದಾಗಿತ್ತು. ತುಮಕೂರು ಜಿಲ್ಲೆಯಲ್ಲಿ ಈ ಅಂಶದ ಬಗ್ಗೆ ಪ್ರಚಾರ ಕೈಗೊಂಡ ಕಾಂಗ್ರೆಸ್ಸಿಗರೆಂದರೆ, ಬಿ. ಸಿ. ನಂಜುಂಡಯ್ಯ, ಟಿ. ಸುಬ್ರಮಣ್ಯಂ, ಕೆ. ರಂಗೈಯಂಗಾರ್, ಜಿ. ವಿ. ನಾರಾಯಣಮೂರ್ತಿ, ಶ್ರೀ ಮೂರ್ತಿವಾಸುದೇವರಾಯರು. ೧೯೩೦-೩೬ರ ಅವಧಿಯಲ್ಲಿ ಕೆಲವು ಶ್ರದ್ಧಾಳುಗಳು ಪರಿಶ್ರಮದ ಫಲವಾಗಿ ಹಿಂದಿ ಪ್ರಚಾರವು ಜಿಲ್ಲೆಯಲ್ಲಿ ನಡೆಯಿತು. ಅವರೆಂದರೆ, ತುಮಕೂರಿನಲ್ಲಿ ಶ್ರೀ ಅ. ತಿ. ಶ್ರೀನಿವಾಸ ರಾಘವಾಚಾರ್ಯರು, ಮಧುಗಿರಿಯಲ್ಲಿ ಪಿ. ಕೆ. ನಾರಾಯಣಾಚಾರ್ಯರು, ತಮ್ಮ ಕ್ಷೇತ್ರಗಳಲ್ಲಿ ಪ್ರಚಾರ ನಡೆಸುತ್ತಿದ್ದರು. ಜಿ. ವಿ. ನಾರಾಯಣಮೂರ್ತಿ, ಎಂ. ನೀಲಕಂಠ ರಾಯರು ಹಿಂದೀ ಪ್ರಚಾರದ ನಿಮಿತ್ತವಾಗಿ "ವೀರ ಅಭಿಮನ್ಯು" ಮತ್ತು "ಮೇವಾಡದ ಪತನ" ಎಂಬ ಹಿಂದಿ ನಾಟಕಗಳನ್ನು ಹಿಂದಿ ಭಾಷೆಯಲ್ಲಿ ಪ್ರದರ್ಶಿಸಿದರು. ತುಮಕೂರಿನಲ್ಲಿ ೧೯೪೫ರ ಅಕ್ಟೋಬರ್‌ನಲ್ಲಿ ಹಿಂದಿ ಪ್ರಚಾರ ಸಮಿತಿ ಸ್ಥಾಪನೆಯಾಯಿತು. ಬಿ. ಸಿ. ನಂಜುಂಡಯ್ಯನವರು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಈ ಸಮಿತಿಯವರು ಪ್ರತಿವರ್ಷ ಜಿ. ವಿ. ನಾರಾಯಣಮೂರ್ತಿಯವರನ್ನು ಆಹ್ವಾನಿಸಿ ಹಿಂದಿಯಲ್ಲಿ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಹಿಂದೀ ಪ್ರಚಾರ ಸಮಿತಿಯು ೧೯೬೯ರಲ್ಲಿ ರಜತ ಮಹೋತ್ಸವವನ್ನು ಆಚರಿಸಿತು.

ರಾಷ್ಟ್ರೀಯ ಶಿಕ್ಷಣವು ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಒಂದಾಗಿದೆ. ರಾಷ್ಟ್ರೀಯ ಶಿಕ್ಷಣದ ಅಂಗವಾಗಿ

ಜಿ. ವಿ. ನಾರಾಯಣಮೂರ್ತಿಯವರು ೧೯೪೩ರಲ್ಲಿ ದೇಶೀಯ ವಿದ್ಯಾಪೀಠ ಸ್ಥಾಪಿಸಿ, ೧೯೪೪ರ ಜೂನ್ ೨ ರಂದು ಇದರ ಅಂಗವಾಗಿ ಪ್ರೌಢಶಾಲೆಯನ್ನು ಆರಂಭಿಸಿದರು.[೧೮] ಈ ಶಾಲೆಯಲ್ಲಿ ಅಧ್ಯಾಪಕರುಗಳಾದ ಜಿ.ಪ. ಈಶ್ವರನ್ ಮತ್ತು ಜಿ. ನ. ಕೃಷ್ಣರಾವ್‌ರವರು ವಿದ್ಯಾಪೀಠದ ಪ್ರಗತಿಗಾಗಿ ಸೇವೆ ಸಲ್ಲಿಸಿದರು. ಇಲ್ಲಿ ಕವಾಯಿತು, ಹಿಂದೀ ಪ್ರಚಾರ, ರಾಷ್ಟ್ರಗೀತೆಗಳ ಅಭ್ಯಾಸ, ಪ್ರಭಾತಪೇರಿ, ಖಾದಿ ಪ್ರಚಾರ ಹರಿಜನೋದ್ಧಾರ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಿಂದ ಒಂದು ಹೊಸ ತತ್ವವೇ ಮೂಡ ತೊಡಗಿತು. ಹೀಗೆ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. **ಗಾಂಧಿಯನ್ ಔಟಲುಕ್ ಅಂಡ್ ಟೆಕ್ನಿಕ್ಸ್.,** ಮೌಲಾನಾ ಅಬ್ದುಲ್ ಆಜಾದ್ (ಸಂ) : (ದೆಹಲಿ, ೧೯೬೩) ಪುಟ ೩೫೯.

೨. ವೀರತಪ್ಪ ಕೆ., ರೀಡಿಂಗ್ಸ್ ಇನ್ ಮಾಡ್ರನ್ ಹಿಸ್ಟರಿ ಆಫ್ ಮೈಸೂರು, (ನ್ಯೂ ಡೆಲ್ಲಿ, ೧೯೮೫).

೩. **ಗಾಂಧಿ ಮತ್ತು ಕರ್ನಾಟಕ.,** ಸಿದ್ದವನಹಳ್ಳಿ ಕೃಷ್ಣ ಶರ್ಮ (ಸಂ): ಗಾಂಧಿ ಸ್ಮಾರಕ ನಿಧಿ, (ಬೆಂಗಳೂರು - ೧೯೬೯) ಪುಟ ೧೮೨.

೪. ಆಶಾರಾಣಿ., **ಗಾಂಧಿಯನ್ ನಾನ್ ವೈಲೆನ್ಸ್ ಅಂಡ್ ಇಂಡಿಯನ್ ಫ್ರೀಡಂ ಸ್ಟ್ರಗಲ್,** ಶ್ರೀ ಪಬ್ಲಿಕೇಷನ್ ಹೌಸ್, (ದೆಹಲಿ - ೧೯೮೧) ಪುಟ ೨೦೮.

೫. ಟಿಪ್ಪಣಿ : ೩.

೬. **ಪ್ರಜಾವಾಣಿ,** ಬೆಂಗಳೂರು ೧೬.೮.೧೯೯೭, ಪುಟ. ೮.

೭. ಡಾ. ಸೂರ್ಯನಾಥ ಕಾಮತ್., ೧೯೭೭, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,** (ಸಂ.) ೨ ಗೀತಾ ಬುಕ್ ಹೌಸ್, ಮೈಸೂರು - ಪುಟ ೪೨೮.

೮. **ವಿಶ್ವಕರ್ನಾಟಕ** (ಬೆಂಗಳೂರು) ೨೭.೩.೧೯೨೭ ಪುಟ. ೬.

೯. ಮೇಲಿನಂತೆ.

೧೦. **ಜನವಾಣಿ** (ಬೆಂಗಳೂರು ೨೮.೧೦.೧೯೪೬).

೧೧. **ಕರ್ನಾಟಕ ರಾಜ್ಯ ಗೆಸೆಟಿಯರ್ ಸಂ. ೨.,** ೧೯೮೫, ಡಾ. ಸೂರ್ಯನಾಥ್ ಕಾಮತ್ (ಸಂ), ರಾಜ್ಯ ಸರ್ಕಾರ ಪ್ರಕಟಣೆ, ಬೆಂಗಳೂರು-

೧೨. ಟಿಪ್ಪಣಿ, ೩.

೧೩. ಟಿಪ್ಪಣಿ, ೭ ಪುಟ ೪೨೯.

೧೪. ಟಿಪ್ಪಣಿ, ೭ ಪುಟ ೪೨೭.

೧೫. **ಫಾರೆಸ್ಟ್ ಸತ್ಯಾಗ್ರಹ ಇನ್ ತುಮಕೂರ್ ಡಿಸ್ಟ್ರಿಕ್ಟ್,** ಕರಪತ್ರ ೨೬.೯.೩೯ (ಕ.ಲಾ.ಪ).

೧೬. ನಟರಾಜನ ಸಂಗ್ರಹ, **ತುಮಕೂರು ಕೈಪಿಡಿ,** ಪುಟ ೧೨೭-೧೨೮.

೧೭. **ಮಾಲಿ ಮರಿಯಪ್ಪ,** ೧೯೬೯, ಮಾಲಿ ಮುದ್ದಣ್ಣ (ಸಂ), **ಗಾಂಧಿನಗರ, ತುಮಕೂರು, ಪುಟ. ೫೬.**

೧೮. **ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರು, ಪುಟ. ೨೭.**

★ ★ ★ ★



ಇತಿಹಾಸವೆ ನಿನ್ನ ಬೆಳಕಿನಲಿ ಸಾಧನೆಯ ಕನಸು
ಇಳೆಗೊದಗಲಿ ತೋರುಗಂಬದಿ ಸಿದ್ಧಿಗೆಳೆಸುವ ನನಸು
ಗಾಂಧಿ ಸಿದ್ಧಿಗೆ ರಚನಾತ್ಮಕತೆಯೆ ವಿಪುಲ ಹುಲುಸು

ಡಾ|| ಟ.ವಿ. ನಾಗರಾಜ*

ಟ್ಯಾಂಕ್ ಪಂಚಾಯಿತಿ ಕಾಯಿದೆ (೧೯೧೧) - ಒಂದು ವಿಶ್ಲೇಷಣೆ

ಪೀಠಿಕೆ

ಅಧಿಕ ಪ್ರಮಾಣದ ಕೆರೆಗಳನ್ನು ಹೊಂದಿರುವ ಮೈಸೂರು ಸಂಸ್ಥಾನ ನೀರಾವರಿ ಭೂಪಟದಲ್ಲಿ ಮಹತ್ವಪೂರ್ಣಸ್ಥಾನ ಪಡೆದಿದೆ. ಕೃಷಿ ಪ್ರಧಾನ ಚೌಕಟ್ಟಿನಲ್ಲಿ ನೀರಾವರಿ ತುಂಬಾ ಮಹತ್ವಪೂರ್ಣವಾದುದು. ನೀರಾವರಿ ಕೃಷಿ ಚಟುವಟಿಕೆಗಳಿಗೆ ಆಧಾರವಾಗಿದ್ದಂತೆ, ಪ್ರಭುತ್ವದ ಆದಾಯದ ಮೂಲಗಳಿಗೆ ಪೂರಕವೂ ಸಹ ಆಗಿದ್ದಿತು. ಕ್ಷಾಮ ಮತ್ತು ಬರಗಾಲಗಳ ವಿರುದ್ಧ ರಕ್ಷಣೆ ನೀಡುವ, ಸಮುದಾಯದ ಬದುಕಿಗೆ ಜೀವಸೆಲೆಯಾದ ನೀರಾವರಿ ಚೌಕಟ್ಟು ಪರಂಪರಾನುಗತ ಕೊಡುಗೆಗಳಲ್ಲಿ ಪ್ರಮುಖವಾದುದು. ೧೯ನೇ ಶತಮಾನದ ಪ್ರಾರಂಭದಲ್ಲಿದ್ದ ಸರಿ ಸುಮಾರು ಕೆರೆಗಳು ೨೦ನೇ ಶತಮಾನದ ಪ್ರಾರಂಭದಲ್ಲಿಯೂ ಕಂಡುಬರುತ್ತವೆ. ಆದರೆ ಬಹುತೇಕ ಕೆರೆಗಳು ದುರಸ್ತಿ, ನಿರ್ವಾಹಣೆ ಕಾಣದೆ ದುಸ್ಥಿತಿಯಲ್ಲಿವೆ.

ಪರಂಪರಾನುಗತವಾಗಿ ಬೆಳೆದುಬಂದಿದ್ದ ಕೆರೆ ನಿರ್ವಹಣಾ ಸಂಪ್ರದಾಯಗಳು ನೆಲಕಳೆದುಕೊಂಡಂತೆ ನೀರಾವರಿ ವ್ಯವಸ್ಥೆ ಕುಸಿಯಲಾರಂಭಿಸಿತು. ಆಡಳಿತಾತ್ಮಕ ಬದಲಾವಣೆಗಳ ಪರಿಣಾಮವಾಗಿ ಕೃಷಿಕರು ನೀರಾವರಿ ಚಟುವಟಿಕೆಗಳೊಂದಿಗೆ ಇದ್ದ, ಕಾಳಜಿ ಮತ್ತು ಬದ್ಧತೆ ಮರೆತು, ವ್ಯವಹಾರಿಕವಾಗಿ ವರ್ತಿಸುವಂತಾಯಿತು. ಜನ ಸಮುದಾಯದ ಸಾಮೂಹಿಕ ಪಾಲ್ಗೊಳ್ಳುವಿಕೆ ಕ್ಷೀಣಿಸಿದಂತೆ ನೀರಾವರಿ ಚೌಕಟ್ಟು ಸಹ ಕುಸಿದು ಬಿದ್ದಿತು.

ಸಂಸ್ಥಾನದಲ್ಲಿ ನೀರಾವರಿ ಕಾಮಗಾರಿಗಳು ದುಃಸ್ಥಿತಿಯಲ್ಲಿದ್ದು ಅವುಗಳ ಪೂರ್ಣ ಸಾಮರ್ಥ್ಯ ಬಳಕೆಯಾಗಬೇಕಾದರೆ, ಕೆರೆ ದುರಸ್ತಿ ಮತ್ತು ನಿರ್ವಹಣಾ ಕಾರ್ಯ ಆದ್ಯತಾ ವಲಯದ ಪ್ರಾಮುಖ್ಯತೆ ಪಡೆಯಬೇಕಾಗಿತ್ತು. ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ಹಲವು ಪ್ರಯತ್ನಗಳು ನಡೆದಿವೆ. ಅಂತಹ ಪ್ರಯತ್ನಗಳಲ್ಲಿ ಒಂದಾಂದ ಟ್ಯಾಂಕ್ ಪಂಚಾಯಿತಿ ಕಾಯಿದೆಯ ರಚನೆ, ಉದ್ದೇಶ, ಸ್ವರೂಪ ಅನುಷ್ಠಾನ ಕುರಿತಂತೆ ಪ್ರಸ್ತುತ ಲೇಖನದಲ್ಲಿ ವಿಶ್ಲೇಷಿಸಲು ಉದ್ದೇಶಿಲಾಗಿದೆ.

ಈ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಕಾಯಿದೆ ಜಾರಿ ಮತ್ತು ಕಾರ್ಯವಿಧಾನಗಳನ್ನು ಹಾಗೂ ವೈಫಲ್ಯತೆಗೆ ಕಾರಣಗಳನ್ನು ಪರಿಶೀಲಿಸಲು ಉದ್ದೇಶಿಸಲಾಗಿದೆ.

ಟ್ಯಾಂಕ್ ಪಂಚಾಯಿತಿ ಕಾಯಿದೆಯ ವೈಶಿಷ್ಟ್ಯವೇನೆಂದರೆ, ಕೆರೆಗಳ ದುರಸ್ತಿ ಮತ್ತು ನಿರ್ವಹಣೆಯ ಕಾರ್ಯಗಳಲ್ಲಿ ಜನರ ಪೂರ್ಣ ಸಹಕಾರ ಪಡೆಯುವ ಪ್ರಯತ್ನ, ಕಾರ್ಯಯೋಜನೆಯ ರೂಪ ರೇಷೆಗಳನ್ನು ರೂಪಿಸುವ ಹಂತದಲ್ಲಿ ಜನಾಭಿಪ್ರಾಯಕ್ಕೂ ಮನ್ನಣೆ ನೀಡುವ ಹಾಗೂ ಹಣಕಾಸು ಸಂಪನ್ಮೂಲಗಳ ಮೇಲೆ ಹಿಡಿತ ಹೊಂದಿರುವ, ನೀರಿನ ಹಂಚಿಕೆ ಮತ್ತು ಅಚ್ಚುಕಟ್ಟು ನಿರ್ಧಾರ ಮತ್ತು ಮತ್ತಿತರ ಮಹೋನ್ನತ ಉದ್ದೇಶಗಳಿಗೆ ಸ್ಪಷ್ಟ ಕಾನೂನಿನ ಸ್ವರೂಪ ನೀಡುವ ಪ್ರಯತ್ನ.

ಉದ್ದೇಶ

ಕೆರೆಗಳ ದುರಸ್ತಿ ಮತ್ತು ನಿರ್ವಹಣೆಯ ಕಾರ್ಯಗಳಲ್ಲಿ ಜನರ ಪೂರ್ಣ ಸಹಕಾರ ಪಡೆಯಲು, ಕಾರ್ಯಯೋಜನೆಯ ರೂಪ ರೇಖೆಗಳನ್ನು ರೂಪಿಸುವ ಹಂತದಲ್ಲಿ, ಜನರ ಅಭಿಪ್ರಾಯಗಳಿಗೂ ಮನ್ನಣೆ ನೀಡಲು ಮತ್ತು ಹಣಕಾಸಿನ ಸಂಪನ್ಮೂಲಗಳ ಮೇಲೆ ಹಿಡಿತ ಹೊಂದಿರಲು ಹಾಗೂ ಅನುಷ್ಠಾನ ಕ್ರಿಯೆಯಲ್ಲಿ ಹತೋಟಿ ಹೊಂದುವಂತಹ ಪರಿಸ್ಥಿತಿ ನಿರ್ಮಿಸಿ, ನೀರಾವರಿ ಕಾಮಗಾರಿಗಳ ದುರಸ್ತಿ, ನಿರ್ವಹಣೆ ಸರ್ಕಾರದ್ದು ಮಾತ್ರವಲ್ಲದೆ ಜನರಿಗೂ ಸೇರಿದ್ದು ಎಂಬ ಅನಿಸಿಕೆ ರೂಪಿಸಲು ಉದ್ದೇಶಿಸಿದ ಸರ್ಕಾರ ೧೯೧೧ರಲ್ಲಿ ಟ್ಯಾಂಕ್ ಪಂಚಾಯಿತಿ ಕಾಯಿದೆಯನ್ನು ರೂಪಿಸಿತು.

ರಚನೆ

ಈ ಕಾಯಿದೆಯ ಪ್ರಕಾರ ರೂ.೩೦೦ ಮತ್ತು ಅದಕ್ಕಿಂತ ಹೆಚ್ಚಿನ ಆದಾಯದ ಮೂಲಗಳನ್ನು ಹೊಂದಿರುವ ಕೆರೆಗಳನ್ನು ಹಾಗೂ ಸರ್ಕಾರ ಯಾವುದಾದರೂ ಕಾರಣಕ್ಕಾಗಿ ಘೋಷಿಸುವ ಕೆರೆಗಳನ್ನು ದೊಡ್ಡ ಕೆರೆಗಳೆಂದು, ರೂ. ೩೦೦ಕ್ಕೂ ಕಡಿಮೆ ಆದಾಯದ ಮೂಲಗಳನ್ನು ಹೊಂದಿರುವ ಎಲ್ಲಾ ಕೆರೆಗಳನ್ನು ಸಣ್ಣ ಕೆರೆಗಳೆಂದು ಪರಿಗಣಿಸಿತು. ಈ ಕಾಯಿದೆ ಪ್ರಕಾರ ಟ್ಯಾಂಕ್ ಪಂಚಾಯಿತಿ ರಚನೆಯಾಗಲು-ಯಾವುದೇ ಗ್ರಾಮದ ೨/೩ ಭಾಗದ ರೈತರು, ಸರಾಸರಿ ಬೇಸಾಯದ ೧/೨ ಕ್ಕಿಂತ ಹೆಚ್ಚು ಭಾಗದ ಅಚ್ಚು ಕಟ್ಟುದಾರರು, ಇಷ್ಟಪಟ್ಟಲ್ಲಿ ಟ್ಯಾಂಕ್ ಪಂಚಾಯಿತಿ ಅಸ್ತಿತ್ವಕ್ಕೆ ಬರುತ್ತಿತ್ತು. ಟ್ಯಾಂಕ್ ಪಂಚಾಯಿತಿ ಗ್ರಾಮದ ಪಟೇಲ, ಶ್ಯಾನುಭೋಗ ಮತ್ತು ರೈತರಿಂದ ಚುನಾಯಿತರಾದ ೩ ಅಥವಾ

* ಇತಿಹಾಸ ಪ್ರವಾಚಕರು, ಸ.ಪ್ರ.ದ. ಕಾಲೇಜು, ಆನೇಕಲ್, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಹೆಚ್ಚಿನ ಸದಸ್ಯರಿಂದ ಕೂಡಿದ್ದಿತು. ಇವರಲ್ಲಿ ೧/೪ಭಾಗದ ಚುನಾಯಿತ ಸದಸ್ಯರು ತರಿ ಹಾಗೂ ಬಾಗಾಯ್ತಿ ಜಮೀನು ಹೊಂದಿಲ್ಲದವರಿಂದಲೂ, ಉಳಿದ ಸದಸ್ಯರು ೩/೪ ಬಾಗಾಯ್ತಿ ಜಮೀನುದಾರಾಗಿದ್ದರು. ಚುನಾಯಿತ ಸದಸ್ಯರ ಕಾಲಾವಧಿ ೩ ವರ್ಷಗಳು, ಗ್ರಾಮದ ಪಟೇಲ ಟ್ಯಾಂಕ್ ಪಂಚಾಯ್ತಿ ಅಧ್ಯಕ್ಷರಾಗಿರುತ್ತಿದ್ದರು.

ಟ್ಯಾಂಕ್ ಪಂಚಾಯಿತಿಯು, ಕೆರೆಯ ನೀರಿನ ಲಭ್ಯತೆಗೆ ಅನುಗುಣವಾಗಿ, ತರಿ ಬೇಸಾಯದ ಪ್ರಮಾಣ ನಿಗದಿ, ಅಚ್ಚುಕಟ್ಟು ನಿರ್ಧರಿಸುವ ಹೊಣೆಗಾರಿಕೆ ನಿರ್ವಹಿಸಬೇಕಾದುದಲ್ಲದೆ, ಸಾಮಾನ್ಯ ದುರಸ್ತಿ, ನಿರ್ವಹಣೆ, ಕಾರ್ಯಭಾರವನ್ನು ರೈತರ ಸಹಕಾರದಿಂದ ನಡೆಸಬೇಕಾಗಿದ್ದಿತು. ರೈತರಿಗೆ ದುರಸ್ತಿ ಕಾರ್ಯಭಾರ ಹಂಚಿಕೆ, ಅವರಿಂದ ಕಾಮಗಾರಿಗಳ ನಿರ್ವಹಣೆ ಪಡೆಯುವದಲ್ಲದೆ, ಕಾರ್ಯನಿರ್ವಹಿಸದ ಭಾಗದ ಕಾಮಗಾರಿಗಳನ್ನು ನಿರ್ವಹಿಸಿ, ಅದರ ಖರ್ಚು ವೆಚ್ಚಗಳನ್ನು ಸಂಬಂಧಿಸಿದ ರೈತರಿಂದ ವಸೂಲಿ ಮಾಡುವ ಕರ್ತವ್ಯ ನಿರ್ವಹಿಸಬೇಕಾಗಿದ್ದಿತು.

ಟ್ಯಾಂಕ್ ಪಂಚಾಯಿತಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ವಿಫಲವಾದಲ್ಲಿ ಅಥವಾ ದುರುಪಯೋಗವಾದಲ್ಲಿ ಸರ್ಕಾರ ಆದೇಶ ಹೊರಡಿಸಿ ರದ್ದು ಪಡಿಸಬಹುದಾಗಿದ್ದಿತು. ಈ ಕಾಯಿದೆಯ ಪ್ರಮುಖ ಅಂಶವೆಂದರೆ ಸ್ಥಾಪನೆಯಾಗಲಿರುವ ಕೆರೆ ನಿಧಿಯ ಮೇಲೆ ಪೂರ್ಣ ಹತೋಟಿ ಹೊಂದಿದ್ದುದು. ಈ ನಿಧಿಯ ಸಂಪನ್ಮೂಲಗಳೆಂದರೆ-(೧) ರೈತರು ತಮ್ಮ ಪಾಲಿನ ಕೆಲಸ ನಿರ್ವಹಿಸಲು ವಿಫಲರಾದ ರೈತರಿಂದ ವಸೂಲಿಯಾದ ಮೊತ್ತ ಅಥವಾ ಕಾಮಗಾರಿಯ ಕೂಲಿ ರೂಪದ ಮೊತ್ತ. (೨) ಮೀನುಗಾರಿಕೆ, ಏರಿಯ ಹುಲ್ಲು, ಮತ್ತಿತರ ಉತ್ಪನ್ನದಿಂದ ಬಂದ ಮೊತ್ತ. (೩) ಕೆರೆ ಭಾಗದಲ್ಲಿ ಬೆಳೆದ ಅಲ್ಪಾವಧಿ ಬೆಳೆ ಉತ್ಪನ್ನದ ಪಾಲು ಅಥವಾ ಬಾಡಿಗೆ. (೪) ನೀರಾವರಿ ಶುಲ್ಕ ನಿಧಿಯಿಂದ ಸರ್ಕಾರಿ ವಂತಿಗೆ. (೫) ಟ್ಯಾಂಕ್ ಪಂಚಾಯಿತಿಗಳ ಕೋರಿಕೆಗೆ ಸರ್ಕಾರಿ ಅನುದಾನ. (೬) ಸರ್ಕಾರಿ ದೇಣಿಗೆ ರೂಪದ ನಿಧಿ.

ಟ್ಯಾಂಕ್ ಪಂಚಾಯಿತಿ ಅಸ್ತಿತ್ವಕ್ಕೆ ಬರುವುದರೊಂದಿಗೆ, ರೈತರು ಸಾಂಪ್ರದಾಯಕವಾಗಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ೧೮೭೩ಹಾಗೂ ೧೯೦೪ರ ಪ್ರಕಾರ ಜಾರಿಗೊಳಿಸುವ ಅಧಿಕಾರ ಟ್ಯಾಂಕ್ ಪಂಚಾಯಿತಿಗಳಿಗೆ ದತ್ತವಾಗುತ್ತಿತ್ತು.

ಅನುಷ್ಠಾನ

ಕಾಯಿದೆಯ ಅನುಷ್ಠಾನ ಹಂತ ಹಂತವಾಗಿ ಜಾರಿಗೊಂಡಿತು. ೧೯೧೩-೧೪ರಲ್ಲಿ, ಸಂಸ್ಥಾನದಾದ್ಯಾಂತ ೩೦ ಟ್ಯಾಂಕ್ ಪಂಚಾಯಿತಿಗಳು ಮಂಜೂರಾದವವು[3]· ೧೯೧೯-೨೦ ರಲ್ಲಿ ೧೦೯ ಟ್ಯಾಂಕ್ ಪಂಚಾಯಿತಿಗಳು ಮಾತ್ರ ಅಸ್ತಿತ್ವಕ್ಕೆ ಬಂದವು[4]. ೧೯೨೦ರ ಅರ್ಧವಾರ್ಷಿಕ ವರದಿಯ ಪ್ರಕಾರ ಕೇವಲ ೯೮ ದೊಡ್ಡ ಕೆರೆಗಳು ಮಾತ್ರ ಟ್ಯಾಂಕ್ ಪಂಚಾಯಿತಿ ಅಡಿಯಲ್ಲಿ ಬಂದುದು ಅನುಷ್ಠಾನದ ಪ್ರಗತಿ ಆಶಾದಾಯಕ ವಾಗಿರಲಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ. ೧೯೩೪-೩೫ರಲ್ಲಿ ಸಂಸ್ಥಾನದಾದ್ಯಂತ ೧೨೭ ಟ್ಯಾಂಕ್ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದವು[5]. ಈ ಅಂಕಿ ಅಂಶಗಳ ಪರಿಗಣನೆಯಿಂದಾಗಿ ಒಟ್ಟಾರೆ ಪಂಚಾಯಿತಿಗಳು ಗಣನೀಯ ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬರದಿದ್ದುದ್ದನ್ನು ಹೇಳುತ್ತವೆ.

ಮಹತ್ತರ ಆಶಯಗಳನ್ನು ಹೊಂದಿದ್ದ ಟಾಂಕ್ ಪಂಚಾಯಿತಿ ಕಾಯಿದೆ ಪ್ರಕಾರ ಪೂರ್ಣ ಪ್ರಮಾಣದ ಟ್ಯಾಂಕ್ ಪಂಚಾಯಿತಿಗಳು ಅಸ್ತಿತ್ವಕ್ಕೆ ಬರಲಿಲ್ಲ. ಈ ಕಾಯಿದೆಯ ನಿಬಂಧನೆಗಳು ಸಹ ದೊಡ್ಡ ಹಾಗು ಸಣ್ಣ ಕೆರೆಗಳೆಂಬ ವಿಭಜನೆಯನ್ನು ಆಧಾರವಾಗಿಟ್ಟು ಕೊಂಡಿತು. ಪರಿಣಾಮವಾಗಿ ದೊಡ್ಡಕೆರೆಗಳನ್ನು ಮಾತ್ರ ಉದ್ದೇಶ ವಾಗಿಟ್ಟುಕೊಂಡು ಸಂಸ್ಥಾನದಾದ್ಯಂತ ಇದ್ದ ಬಹು ಸಂಖ್ಯೆಯ ಸಣ್ಣ ಕೆರೆಗಳನ್ನು ಉಪೇಕ್ಷಿಸಿತು. ಈ ಕಾಯಿದೆಯಲ್ಲಿ ಸೂಚಿಸಿದಂತೆ ಗ್ರಾಮದ ೨/೩ ಭಾಗದ ರೈತರು ಹಾಗು ತರಕಾರಿ ಬೇಸಾಯದ ೧/೨ ಭಾಗದಾದ್ಯಂತ ಹೆಚ್ಚು ಭಾಗದ ಅಚ್ಚುಕಟ್ಟುದಾರರು 'ಇಷ್ಟಪಟ್ಟಿಲ್ಲ' ಎಂದು ತಿಳಿಸಿದ್ದರೂ ನೀರಾವರಿ ಪರಂಪರಾನುಗತವಾಗಿ ಅರಿತಿದ್ದ ಜನಸಮುದಾಯ ಇಷ್ಟ ಪಡಲಿಲ್ಲ ಎಂದು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಈ ಕಾಯಿದೆ ಟ್ಯಾಂಕ್ ಪಂಚಾಯಿತಿ ರಚಿಸಲು ಗ್ರಾಮದ ಪಟೇಲ, ಶ್ಯಾನುಭೋಗ ಮತ್ತು ರೈತರಿಂದ ಚುನಾಯುತರಾದ ಸದಸ್ಯರನ್ನು ಒಳಗೊಂಡಿತ್ತು ಎಂದು ತಿಳಿಸುವ ಪರಿಚ್ಛೇದ, ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕಾಯಿದೆ. ಪ್ರಕಾರ ಚುನಾವಣೆ ಸಾಕೆನಿಸಿದಾಗ ಮಾತ್ರ ಟ್ಯಾಂಕ್ ಪಂಚಾಯಿತಿ ಸಾಂಸ್ಥಿಕ ಸಂಸ್ಥೆಯ ಸ್ವರೂಪ ಪಡೆಯುತ್ತಿತ್ತೇ ವಿನಹ ಶಾಸನ ರೂಪ ಜಾರಿಗೊಳ್ಳಲು ವಿಧಾನಗಳೇ ಅಡ್ಡಿಗಳಾಗಿದ್ದವು.

೧೯೧೧ರ ಟ್ಯಾಂಕ್ ಪಂಚಾಯಿತಿ ಕಾಯಿದೆ ಪ್ರಕಾರ ಕಡಿಮೆ ಟ್ಯಾಂಕ್ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದವು ಎಂಬುದು ಪರಿಗಣಿಸಬೇಕಾದ ವಿಚಾರ.

೨೫೪೨ ದೊಡ್ಡ ಕೆರೆಗಳಲ್ಲಿ ೧೫೯೦ ದೊಡ್ಡ ಕೆರೆಗಳು ಪುನಶ್ಚೇತನಗೊಂಡು ಅವುಗಳಲ್ಲಿ ೯೮ ದೊಡ್ಡ ಕೆರೆಗಳು ಮಾತ್ರ ಟ್ಯಾಂಕ್ ಪಂಚಾಯಿತಿ ಅಡಿಯಲ್ಲಿ ಬರುತ್ತವೆ. ಇದನ್ನು ಪರಿಗಣಿಸಿದಾಗ ಬಹುತೇಕ ಟ್ಯಾಂಕ್ ಪಂಚಾಯಿತಿಗಳು ಅಸ್ತಿತ್ವಕ್ಕೆ ಬರದಿದ್ದುದು ಗೋಚರಿಸುತ್ತದೆ.

೧೯೩೪ರಲ್ಲಿ ರಾಜ್ಯದಾದ್ಯಂತ ೧೨೭ ಟ್ಯಾಂಕ್

ಟ್ಯಾಂಕ್ ಪಂಚಾಯಿತಿಗಳ ಪ್ರಗತಿ ತಂಖ್ತೆ[೫]

ಜಿಲ್ಲೆಗಳು	ದೊಡ್ಡಕೆರೆಗಳು	ಪುನಶ್ಚೇತನಗೊಂಡ ದೊಡ್ಡಕೆರೆಗಳು	ಪಂಚಾಯಿತಿ ಆಡಿಯಲ್ಲಿ ಬಂದಂತಹ ದೊಡ್ಡ ಕೆರೆಗಳು
ಬೆಂಗಳೂರು	೩೩೦	೨೭೬	೩
ಕೋಲಾರ	೪೯೨	೨೨೪	೧೧
ತುಮಕೂರು	೪೨೪	೩೬೨	೬೦
ಮೈಸೂರು	೧೯೯	೧೪೫	೫
ಹಾಸನ	೨೩೦	೧೫೧	೨
ಶಿವಮೊಗ್ಗ	೫೮೩	೨೨೦	೬
ಕಡೂರು	೧೩೧	೭೬	೨
ಚಿತ್ರದುರ್ಗ	೧೫೭	೧೩೬	೯
	೨೫೪೨	೧೫೯೦	೯೮

ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿದ್ದರೂ, ಇವುಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದವು ಕೇವಲ ೭ ಮಾತ್ರ. ಕೆಲವೇ ಟ್ಯಾಂಕ್ ಪಂಚಾಯಿತಿಗಳು ಮಾತ್ರ ನಿಧಿ ಸಂಗ್ರಹಿಸುವ, ನೀರಿನ ಹಂಚಿಕೆ ಕಾರ್ಯದಲ್ಲಿ ಆಸಕ್ತಿತೋರಿದವು; ಹಲವು ಟ್ಯಾಂಕ್ ಪಂಚಾಯಿತಿಗಳು, ಅವು ನಿರ್ವಹಿಸಬೇಕಾದ ಕಾರ್ಯಗಳನ್ನು ನಿರ್ವಹಿಸಲಿಲ್ಲ ಎಂಬ ಕಾರಣಕ್ಕಾಗಿ ರದ್ದಾದವು[೬].

ವಿಮರ್ಶೆ

ಟ್ಯಾಂಕ್ ಪಂಚಾಯಿತಿ ಕಾಯಿದೆ ಉತ್ತಮ ಧ್ಯೇಯ ಉದ್ದೇಶಗಳನ್ನು ಹೊಂದಿದ್ದರೂ ಸಹ, ಟ್ಯಾಂಕ್ ಪಂಚಾಯಿತಿಗಳ ಕಾರ್ಯವೈಖರಿ, ವಿಫಲತೆಗೆ ಕಾರಣಗಳನ್ನು ಪರಿಶೀಲಿಸಿ ಸರ್ಕಾರ, ರೈತರಿಗೆ ಟ್ಯಾಂಕ್ ಪಂಚಾಯಿತಿಗಳ ಉಪಯುಕ್ತತೆ ಬಗ್ಗೆ ಪರಿಜ್ಞಾನ ಇಲ್ಲದಿರುವುದು ಮತ್ತು ಸ್ಥಳೀಯ ಅಧಿಕಾರಿಗಳ ನಿರಾಸಕ್ತಿಯೆ ಪ್ರಮುಖ ಕಾರಣವೆಂದು, ಈ ಕಾರ್ಯ ಯೋಜನೆಯಲ್ಲಿ ರೈತರಿಗೆ ಸ್ಪಷ್ಟ ತಿಳಿವಳಿಕೆ ಹಾಗೂ ಉಪಯುಕ್ತತೆ ಬಗ್ಗೆ ಮಾಹಿತಿ ನೀಡಿದರೆ ಯೋಜನೆ ಯಶಸ್ವಿ ಕಾಣುವುದು ಎಂಬ ನಂಬಿಕೆ ವ್ಯಕ್ತಪಡಿಸಿತು[೭]. ಕಾಯಿದೆ ರಚನೆಯಾಗಿ ೩೦ವರ್ಷಗಳಿಂದ ಜಾರಿಯಲ್ಲಿದ್ದರೂ, ಕಾರ್ಯನಿರ್ವಹಿಸಿದ ಪಂಚಾಯಿತಿಗಳಲ್ಲಿ ಹಲವೇ ಪಂಚಾಯಿತಿಗಳಾದರೂ ಹಲವು ಮುಖ್ಯ ಅಂಶಗಳನ್ನು ಬಳಸಿಕೊಳ್ಳಲೇ ಇಲ್ಲ.

ಜನರ ಅಸಹಕಾರ ಮನೋಭಾವ, ಗ್ರಾಮ ಮುಖಂಡರ ನಿರಾಸಕ್ತಿಯ ಪರಿಣಾಮವಾಗಿ ಟ್ಯಾಂಕ್ ಪಂಚಾಯಿತಿಗಳು ವಿಫಲವಾದವು ಎಂಬುದಕ್ಕಿಂತ ಅವುಗಳು ರಚನೆಯಾಗಬೇಕಾದಲ್ಲಿ ಪೂರೈಸಬೇಕಾದ ಷರತ್ತುಗಳು ಪ್ರಮುಖ ಅಡಚಣೆಗಳಾಗಿ ಪರಿಣಮಿಸಿದವು. ಟ್ಯಾಂಕ್ ಪಂಚಾಯಿತಿ ಕಾಯಿದೆ ಸಹ ಹಲವಾರು ಯೋಜನೆಗಳಂತೆ ತನ್ನ ಆಡಳಿತಾತ್ಮಕ ಕ್ಲೀಷೆಗಳಿಂದ ಹೊರತಾಗಿರಲಿಲ್ಲ. ಸಂಪನ್ಮೂಲಗಳ ಕ್ರೋಢಿಕರಣದಲ್ಲಿ ಕಾಯಿದೆ ವಿವರಣೆ ಹೊಂದಿದ್ದರೂ, ಸರ್ಕಾರಿ ಆಡಳಿತ ಯಂತ್ರದಲ್ಲಿ ಅದು ಕೇಂದ್ರೀಕೃತಗೊಂಡಿದ್ದಿತು.

ಟ್ಯಾಂಕ್ ಪಂಚಾಯಿತಿ ಕಾಯಿದೆಯ ನಿಬಂಧನೆಗಳು "Rigid and inelastic" "ಆಗಿದ್ದವು. ಈ ಕಾಯಿದೆಯ ಗುರಿ ಉದ್ದೇಶಗಳು ಉತ್ತಮವಾಗಿದ್ದರೂ ಸಹ ಕಾಯಿದೆಗೆ ಚಾಲನೆ ನೀಡುವಲ್ಲಿ ಅಗತ್ಯವಾಗಿದ್ದ ರಾಜಕೀಯ ಇಚ್ಛೆ ಮತ್ತು ಬದ್ಧತೆಯ ಕೊರತೆ ಪ್ರಮುಖವಾದ ಅಂಶವಾಗಿತ್ತು[೮].

ಆಧಾರಸೂಚಿ ಮತ್ತು ಟಿಪ್ಪಣಿಗಳು

1. *Mysore code, Volume-1 (1850-1920)* 1955, Govt. of Mysore, Bangalore. P. 623.
2. G.S. Dikshit and others., *Tank Irrigation Karnataka, A Historical Survey,* Gandhi Sahithya Sangha, Bangalore, PP. 178-179.
3. *Mysore Blue Book Journal,* Volume-3., 1920-21, P. 189.
4. File No. R. 4229-LR 230 Dated : 16-1-1936 (Karnataka State Archives, Bangalore).
5. Ibid-Cit-3.
6. G.O. No. R. 4229-LR-230-35-2. dated 16-01-1936.
7. *Mysore Blue Book Journal, Volume-V.,* 1935-36, PP. 120-121.
8. ಟಿ.ವಿ.ನಾಗರಾಜ., "ಮೈಸೂರು ಸಂಸ್ಥಾನದಲ್ಲಿ ನೀರಾವರಿ, ಕೋಲಾರ ಜಿಲ್ಲೆ ಒಂದು ಅಧ್ಯಯನ (೧೮೦೦-೧೯೫೬)" (ಮೈಸೂರು ವಿ.ವಿ. ನಿಲಯಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ) ೨೦೦೨, ಪು. ೨೦೭.

ಡಾ. ಮಾಲತಿ ಕೆ. ಮೂರ್ತಿ*

ಕರಾವಳಿ ಕರ್ನಾಟಕದಲ್ಲಿ ಹತ್ತಿ ವ್ಯಾಪಾರ- ವಸಾಹತುಶಾಹಿ ಆಡಳಿತ ನೀತಿ

ಯಾವುದೇ ಪ್ರದೇಶದ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳ ಏರುಪೇರುಗಳು ವ್ಯಾಪಾರ ಸರಕುಗಳ ಬೇಡಿಕೆ ಹಾಗೂ ವಿತರಣೆಗಷ್ಟೇ ಸೀಮಿತವಾಗಿರದೆ, ಇತರ ಅನೇಕ ಅಂಶಗಳಿಂದ ಪ್ರಭಾವಿತವಾಗಿರುತ್ತವೆ. ಕರಾವಳಿ ಕರ್ನಾಟಕದ ಪ್ರಮುಖ ಬಂದರುಗಳು ಸರಕುಗಳ ಮಾರಾಟ ಕೇಂದ್ರಗಳಷ್ಟೇ ಆಗಿರದೆ ವಿತರಣಾ ಕೇಂದ್ರಗಳೂ ಆಗಿದ್ದುವು. ಪಶ್ಚಿಮ ಕರಾವಳಿಯ ವ್ಯಾಪಾರ ಮತ್ತು ವಾಣಿಜ್ಯ ವಹಿವಾಟಿನ ಜಾಲ ವಿಸ್ತೃತವಾಗಿದ್ದು, ಅದರಲ್ಲಿ ಕರ್ನಾಟಕ ಮತ್ತು ಕೇರಳದ ಒಳನಾಡುಗಳಲ್ಲದೆ, ಮರಾಠಾ ರಾಜ್ಯಗಳು, ಪಶ್ಚಿಮ ಹಾಗೂ ಪೂರ್ವಗಳಲ್ಲಿದ್ದ ವಿದೇಶೀ ನೆಲೆಗಳು, ಕೊಲ್ಲಿ ರಾಷ್ಟ್ರಗಳು ಮತ್ತು ಇಂಗ್ಲೆಂಡ್ ಸೇರಿದ್ದುವು. ಸಾಮಾನ್ಯವಾಗಿ ಅಭಿವೃದ್ಧಿಯಲ್ಲಿ ಹಿಂದುಳಿದ ಪ್ರದೇಶಗಳಿಗೆ ಅವುಗಳದ್ದೇ ಆದ ಪರಂಪರಾಗತ ವ್ಯಾಪಾರಸರಕುಗಳಿರುತ್ತವೆ ಮತ್ತು ಅವುಗಳ ಬೆಲೆ ಯಾವಾಗಲೂ ಕೆಳಮಟ್ಟದಲ್ಲೇ ಇರುತ್ತದೆ. ಕರ್ನಾಟಕದ ಕರಾವಳಿ ತೀರ ಪ್ರದೇಶಗಳೂ ಇದಕ್ಕೆ ಹೊರತಾಗಿರಲಿಲ್ಲ. ಬಹಳ ಹಿಂದಿನಿಂದಲೇ ಅಕ್ಕಿ, ಅಡಿಕೆ, ಕಾಳುಮೆಣಸು, ಏಲಕ್ಕಿ ಮುಂತಾದುವುಗಳೇ ಇಲ್ಲಿನ ಮುಖ್ಯ ರಫ್ತುವಸ್ತುಗಳಾಗಿದ್ದುವು. ಕಾಲಕ್ರಮೇಣ ವ್ಯಾಪಾರಿಗಳ ಆಯ್ಕೆ - ಅಭಿರುಚಿಗಳಲ್ಲಿ ಬದಲಾವಣೆಗಳಾಗಿ, ವಿದೇಶೀ ಸರಕುಗಳಿಗೆ ಬೇಡಿಕೆ ಹೆಚ್ಚಿ (ಮುಖ್ಯವಾಗಿ ಇಂಗ್ಲೆಂಡಿನ - ವಸಾಹತುಶಾಹೀ ಅಧಿಪತ್ಯದ ಅನಿವಾರ್ಯ ಪರಿಣಾಮ), ವಸಾಹತುಶಾಹೀ ಸರಕಾರದ ಆಡಳಿತ ಹಾಗೂ ಸುಂಕನೀತಿಯಲ್ಲಿ ಬದಲಾವಣೆಗಳಾದಾಗ, ವ್ಯಾಪಾರೀ ಬೆಳೆಗಳ ಕೃಷಿಯತ್ತ ಒಲವು ಮೂಡಿ, ಈ ಪ್ರದೇಶದ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಪರಿಮಾಣಾತ್ಮಕ ಹಾಗೂ ಗುಣಾತ್ಮಕ ಏರುಪೇರುಗಳಾದುವು. ೧೮ನೇ ಶತಮಾನದ ಮೊದಲ ದಶಕಗಳಲ್ಲಿ ಕರಾವಳಿ ಕರ್ನಾಟಕದ ಬಂದರುಗಳಿಂದ ರಫ್ತು ಯಾ ಆಮದು ಗೊಳ್ಳುತ್ತಿದ್ದ ಪ್ರಮುಖ ಸರಕುಗಳೆಂದರೆ ಅಕ್ಕಿ, ತೆಂಗಿನಕಾಯಿ, ಕಾಳುಮೆಣಸು, ಅಡಿಕೆ, ಹತ್ತಿಬಟ್ಟೆ ಮತ್ತು ಕಬ್ಬಿಣದ ಸಲಕರಣೆಗಳು. ಪಶ್ಚಿಮ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಅತಿ ದೊಡ್ಡ ಬಂದರಾಗಿದ್ದು, ಉ.ಕನ್ನಡ ಹಾಗೂ ದ.ಕನ್ನಡ ಜಿಲ್ಲೆಗಳಲ್ಲದೆ, ಒಳನಾಡುಗಳಿಂದಲೂ ವ್ಯಾಪಾರ ಸರಕುಗಳು ಮಂಗಳೂರು ಬಂದರಿಗೆ ತರಲ್ಪಟ್ಟು, ಇಲ್ಲಿಂದ ಕರಾವಳಿಯ ಇನ್ನಿತರ ಬಂದರುಗಳಿಗೆ ರಫ್ತಾಗುತ್ತಿದ್ದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹತ್ತಿ ಬಟ್ಟೆ ಅತಿ ಕನಿಷ್ಠ ಪ್ರಮಾಣದಲ್ಲಿ ತಯಾರಾಗುತ್ತಿದ್ದು, ಇಲ್ಲಿನ ಬೇಡಿಕೆಯನ್ನು ಪೂರೈಸಲು ಸಾಕಾಗುತ್ತಿರಲಿಲ್ಲ.[೧] ಕಛ್, ರಾಜಾಪುರ ಮತ್ತಿತರ ಮಹಾರಾಷ್ಟ್ರದ ಬಂದರುಗಳಿಂದ ಇಲ್ಲಿಗೆ ಅದು ಆಮದಾಗುತ್ತಿತ್ತಲ್ಲದೆ, ಮದ್ರಾಸ್ ಪ್ರಾಂತ್ಯದಿಂದಲೂ ಇಲ್ಲಿಗೆ ಹತ್ತಿಬಟ್ಟೆಯನ್ನು ತರಲಾಗುತ್ತಿತ್ತು. ಇಲ್ಲಿನ ಅವಶ್ಯಕತೆಗಳನ್ನು ಪೂರೈಸಿದ ಬಳಿಕ ಬೇರೆ ಬಂದರುಗಳಿಗೆ ಹಾಗೂ ಮುಂಬೈಗೆ ರಫ್ತಾಗುತ್ತಿತ್ತು. ಬುಖಾನನ್‌ರ ವರದಿಯಂತೆ ಮೈಸೂರು ಮಾರ್ಗವಾಗಿ ಬೆಂಗಳೂರಿನ ವ್ಯಾಪಾರಿಗಳು ರಸ್ತೆಮಾರ್ಗದಿಂದ ಬಿಳಿ ಮತ್ತು ಬಣ್ಣದ ಹತ್ತಿ ಬಟ್ಟೆಗಳನ್ನು ಕರಾವಳಿ ಜಿಲ್ಲೆಗಳಿಗೆ ತರುತ್ತಿದ್ದರು.[೨] ಕಡತಕಲ್ಲು, ಸಿಸಿಲ, ಬಿಸಿಲೆ,ಘಾಟಿ ಮಾರ್ಗವಾಗಿ ಬಂಟ್ವಾಳ ಮುಖಾಂತರ ಮಂಗಳೂರು ಬಂದರಿಗೆ ಹಾಗೂ ಸೋಮೇಶ್ವರ್-ಕಾರ್ಕಳ ಮಾರ್ಗವಾಗಿ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಒಳಪ್ರದೇಶಗಳನ್ನು ತಲುಪುತ್ತಿತ್ತು.[೩] ಉತ್ತರ ಕನ್ನಡ ಜಿಲ್ಲೆಯ ಕುಮಟಾಕ್ಕೆ ಮಹಾರಾಷ್ಟ್ರದ ದಕ್ಷಿಣದ ಜಿಲ್ಲೆಗಳಿಂದ, ಉತ್ತರ ಕರ್ನಾಟಕದ ಧಾರವಾಡ ಮತ್ತು ಬಳ್ಳಾರಿ ಹಾಗೂ ಪೂರ್ವದ ಹೈದರಾಬಾದಿನಿಂದಲೂ ಹತ್ತಿಬಟ್ಟೆಯನ್ನು ತರಲಾಗುತ್ತಿತ್ತು.[೪] ಹೀಗೆ ತರಲಾಗುತ್ತಿದ್ದ ಹತ್ತಿಗೆ ರಸ್ತೆಸುಂಕ, ಗಡಿಸುಂಕ ಮತ್ತು ಪಟ್ಟಣಸುಂಕವೆಂದು ಒಟ್ಟು ಶೇ.೧೨ ರಷ್ಟು ಸುಂಕವನ್ನು ಹೇರುತ್ತಿದ್ದುದರಿಂದ ಹತ್ತಿಬಟ್ಟೆಯ ಬೆಲೆ ಸಹಜವಾಗಿಯೇ ಏರುತ್ತಿತ್ತು.[೫]

೧೭ ನೇ ಶತಮಾನದ ಕೊನೆಯ ಭಾಗದಲ್ಲಿ ಯುರೋಪಿಗೆ ಏಷ್ಯಾದಿಂದ ಆಮದಾಗುತ್ತಿದ್ದ ಪ್ರಮುಖ ವಸ್ತು ಕಾಳುಮೆಣಸಿನ ಆಧಿಪತ್ಯ ಕೊನೆಗೊಂಡದ್ದು, ಭಾರತದ ಹತ್ತಿಬಟ್ಟೆಗಳ ಸ್ಪರ್ಧೆ ಯಿಂದಲೇ ಹೊರತು ಯಾವುದೇ ಐರೋಪ್ಯ ಕಂಪೆನಿಗಳ ರಾಜಕೀಯ ದೊಂಬರಾಟದಿಂದಲ್ಲ. ಪೂರ್ವ ಕರಾವಳಿ ಮತ್ತು ಗುಜರಾತಿನ ಹತ್ತಿ ಬಟ್ಟೆಗಳನ್ನು ಇಂಡೋನೇಶ್ಯಾ ಪರ್ಯಾಯ ದ್ವೀಪಗಳಿಗೆ ರಫ್ತು ಮಾಡುವ ವ್ಯಾಪಾರಕ್ಕಿಂತಲೂ ಯುರೋಪಿಗೆ ಕಳುಹಿಸುವುದು ಹೆಚ್ಚು ಸುಲಭವಾಗಿತ್ತು. ೧೬೮೦ರ ದಶಕದಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿಯು ಆಮ್‌ಸ್ಟರ್‌ಡಾಂನಲ್ಲಿ ದೊಡ್ಡ ಪ್ರಮಾಣದಲ್ಲಿ ಭಾರತದ ಹತ್ತಿಬಟ್ಟೆಗಳನ್ನು ಮಾರುತ್ತಿತ್ತು.

* ಮುಖ್ಯಸ್ಥರು, ಚರಿತ್ರೆ ವಿಭಾಗ, ಎಂ. ಜಿ. ಎಂ. ಕಾಲೇಜು, ಉಡುಪಿ - ೫೭೬ ೧೦೨

೧೭ನೇ ಶತಮಾನದ ಆರಂಭದಲ್ಲಿ ಬ್ರಿಟೀಷರೇ ಹತ್ತಿ ವ್ಯಾಪಾರದಲ್ಲಿ ಡಚ್ಚರಿಗಿಂತ ಮುಂದಿದ್ದರೂ, ಅದೇ ಶತಮಾನದ ಉತ್ತರಾರ್ಧದಲ್ಲಿ ಡಚ್ಚರೇ ಮೇಲುಗೈ ಪಡೆದಿದ್ದರೆಂಬುದನ್ನು ಆಡಳಿತವರದಿಗಳು ಸ್ಪಷ್ಟೀಕರಿಸುತ್ತವೆ.[೬] ಆ ಅವಧಿಯಲ್ಲಿ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಭಾರತೀಯ ಹತ್ತಿಬಟ್ಟೆಗಳನ್ನು ಇಂಗ್ಲೆಂಡಿನ ಜನರಿಗೆ ಪರಿಚಯಿಸಲಾಯಿತು. ೧೬೦೯ರಲ್ಲಿ ವಿಲಿಯಂ ಫಿಂಚ್ ಎಂಬಾತ ಪಶ್ಚಿಮ ಭಾರತದಲ್ಲಿ ದೊರೆಯುತ್ತಿದ್ದ ವಿವಿಧ ರೀತಿಯ ಹತ್ತಿಬಟ್ಟೆಗಳಲ್ಲಿ ಬಟ್ಟೆಗಳ ಅದರಲ್ಲೂ ಯುರೋಪಿನ ಮಾರು ಕಟ್ಟೆಗೆ ಹೊಂದಿಕೊಳ್ಳಬಲ್ಲ- ಪಟ್ಟಿಯನ್ನು ಕಳುಹಿಸಿ, ಉತ್ತಮಗುಣ ಮಟ್ಟದ ಬಿಳಿಬಿಟ್ಟೆಗಳು ಮತ್ತು ಗುಜರಾತಿನ ಬಣ್ಣದ ಕ್ಯಾಲಿಕೊಗಳು ಹೆಚ್ಚು ಲಾಭತರುವವೆಂದು ಸಲಹೆಯನ್ನಿತ್ತಿದ್ದ.[೭] ಇವುಗಳಲ್ಲಿ ಬಿಳಿ ಬಣ್ಣದ ವಸ್ತ್ರಗಳನ್ನು "ಮೂರರು", "ಕಬಾಯ" ಮಾಡಲು ಉಪಯೋಗಿಸುವುದರಿಂದ ಉತ್ತರ ಆಫ್ರಿಕದ ಮಾರುಕಟ್ಟೆಗಳಿಗೆ ರಫ್ತ ಮಾಡಬಹುದು ಹಾಗೂ ಬಣ್ಣದ ಕ್ಯಾಲಿಕೊಗಳು ಇಂಗ್ಲೆಂಡಿನಲ್ಲೇ ಮೇಲುಹೊದಿಕೆಗಳಾಗಿ ಹಾಗೂ ಪರದೆಗಳಾಗಿ ಬಳಸಲ್ಪಡ ಬಹುದು ಎಂದೂ ಆತ ಅಭಿಪ್ರಾಯಪಟ್ಟಿದ್ದ. ಹೀಗೆ ೧೭ನೇ ಶತಮಾನದಲ್ಲಿ ಭಾರತದ ಹತ್ತಿಬಟ್ಟೆಗಳು ಬಹಳ ದೊಡ್ಡ ಪ್ರಮಾಣದಲ್ಲಿ ಸೂರತ್ತಿನಿಂದ ರಫ್ತಾಗುತ್ತಿದ್ದವು. ರಫ್ತಾಗುತ್ತಿದ್ದ ಹತ್ತಿಬಟ್ಟೆಗಳಲ್ಲಿ ಸಾದಾಬಿಳಿ ಬಟ್ಟೆ, ಮುದ್ರಿತ ವಿನ್ಯಾಸರಹಿತ ಬಣ್ಣದ ಬಟ್ಟೆ, ಗೆರೆ ಮತ್ತು ಚೌಕುಳಿಯ ಬಟ್ಟೆ, ಚಿಂಟ್ಜ್ (Chintz) ಅಥವಾ ಮುದ್ರಿತ ಬಣ್ಣದ ಚಿತ್ತಾರವುಳ್ಳ, ಹೊಳಪುಳ್ಳ ಚೀಟಿ ಬಟ್ಟೆ ಮತ್ತು ಕಸೂತಿಯುಳ್ಳ (embroidered) ಬಟ್ಟೆ ಮತ್ತು ರೇಷ್ಮೆಬಟ್ಟೆ ಹಾಗೂ ಹತ್ತಿ-ರೇಷ್ಮೆ ಮಿಶ್ರಿತ ಬಟ್ಟೆಗಳಿಗೆ ವಿಶೇಷ ಬೇಡಿಕೆಯಿತ್ತು. ಚಿಂಟ್ಜ್ ಬಟ್ಟೆಯು ಅದರ ಬಣ್ಣದ ಶ್ರೇಷ್ಠ ಗುಣಮಟ್ಟಕ್ಕಾಗಿ ಬಹಳ ಬೇಡಿಕೆಯಲ್ಲಿತ್ತು. ಪೂರ್ವ ಕರಾವಳಿಯ ಚಿಂಟ್ಸ್ ಮತ್ತು ಬಂಗಾಳದ ಟಫೆಲಾ ಸಿಲ್ಕ್ ಮತ್ತು ಮಸ್ಲಿನ್ ಬಟ್ಟೆ ಮಧ್ಯಮ ಮತ್ತು ಶ್ರೀಮಂತವರ್ಗದ ಉಪಯೋಗಕ್ಕೂ, ಪಶ್ಚಿಮ ಭಾರತದ ಅಗ್ಗದ ಹತ್ತಿ ಬಟ್ಟೆ ಆಫ್ರಿಕದ ಗುಲಾಮ ವ್ಯಾಪಾರದಲ್ಲೂ ಬಳಕೆಯಾಗುತ್ತಿತ್ತು.[೮] ಯುರೋಪಿನಲ್ಲಿ ತಯಾರಾಗುತ್ತಿದ್ದ ಉಣ್ಣೆಯೇತರ ಬಟ್ಟೆಗಳಿಗಿಂತಲೂ ಭಾರತದ ಹತ್ತಿಬಟ್ಟೆಗಳು ಅಗ್ಗವಾಗಿದ್ದುದರಿಂದ ಇವುಗಳಿಗೆ ಬೇಡಿಕೆ ಹೆಚ್ಚಿತ್ತು. ೧೮ನೇ ಶತಮಾನದ ಪೂರ್ವಾರ್ಧದಲ್ಲಿ ಕೆಲವು ಯುರೋಪಿಯನ್ ರಾಷ್ಟ್ರಗಳು ವಿದೇಶೀ ವ್ಯಾಪಾರದ ಸಮತೋಲನವನ್ನು ಕಾಯ್ದುಕೊಳ್ಳಲು ರಕ್ಷಣಾತ್ಮಕ ಸುಂಕ (Protectionist) ನೀತಿಯನ್ನು ಅನುಸರಿಸಿದಾಗ ಭಾರತೀಯ ಹತ್ತಿಬಟ್ಟೆಗಳಿಗೆ ಬೇಡಿಕೆ ಒಟ್ಟಾರೆ ಕುಂಠಿತಗೊಂಡರೂ, ಮೇಲೆ ಹೇಳಿದ ವಿವಿಧ ಬಟ್ಟೆಗಳ ಬೇಡಿಕೆ ಕುಗ್ಗಲಿಲ್ಲ.

ಈಸ್ಟ್ ಇಂಡಿಯಾ ಕಂಪೆನಿ ಸರಕಾರ ಮತ್ತು ಹತ್ತಿಬಟ್ಟೆ ವ್ಯಾಪಾರ ನೀತಿ

೧೮ ನೇ ಶತಮಾನದ ಉತ್ತರಾರ್ಧ ಹಾಗೂ ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಬ್ರಿಟನ್ನಿನಲ್ಲಿ ನಡೆದ ಔದ್ಯಮಿಕ ಕ್ರಾಂತಿಯಿಂದಾಗಿ ಆ ದೇಶದ ಅರ್ಥವ್ಯವಸ್ಥೆ ಹಾಗೂ ಆರ್ಥಿಕ ಸಿದ್ಧಾಂತಗಳಲ್ಲಿ ಬಹಳಷ್ಟು ಮಾರ್ಪಾಟುಗಳಾದುವು. ಹತ್ತಿಬಟ್ಟೆ ವ್ಯಾಪಾರನೀತಿಯೂ ಇದರ ಪ್ರಭಾವದಿಂದ ಹೊರತಾಗಿರಲಿಲ್ಲ. ಇಂಗ್ಲೆಂಡಿಗೆ ಭಾರತೀಯ ಹತ್ತಿಬಟ್ಟೆಗಳ ಆಮದನ್ನು ನಿಷೇಧಿಸುವಂತೆ ಯಾ ನಿಯಂತ್ರಿಸುವಂತೆ ಮತ್ತು ಇಂಗ್ಲೆಂಡಿನ ಹತ್ತಿಬಟ್ಟೆ ಉತ್ಪನ್ನಗಳನ್ನು ಭಾರತದಾದ್ಯಂತ ವ್ಯಾಪಕವಾಗಿಸುವಂತೆ ಎಲ್ಲ ಪ್ರಾಂತ್ಯಗಳಿಗೂ ಸೂಚನೆಗಳನ್ನು ಕಳುಹಿಸಲಾಯಿತು. ಬ್ರಿಟನ್ನಿನ ಉತ್ಪನ್ನಗಳನ್ನು ಭಾರತದ ಜನರ ಮೇಲೆ ಹೇಗೆ ಹೇರಬಹುದೆಂಬ ಬಗೆಗೆ ಹೌಸ್ ಆಫ್ ಕಾಮನ್ಸ್ ಸಾಕಷ್ಟು ಚರ್ಚೆ ನಡೆಸಿ ವಾರನ್ ಹೇಸ್ಟಿಂಗ್ಸ್, ಸರ್ ಥಾಮಸ್‌ಮನ್ರೊ, ಸರ್ ಜಾನ್ ಮಾಲ್ಕಂ ಮುಂತಾದವರ ಅಭಿಪ್ರಾಯವನ್ನೂ ಕೇಳಿತು. "ವ್ಯಾಪಾರದ ಸರಕುಗಳು ಜನರ ಅಗತ್ಯ ಮತ್ತು ವೈಭೋಗಕ್ಕಾಗಿ ಇವೆ. ಭಾರತದ ಬಡ ಜನರಿಗೆ ಅಗತ್ಯಗಳೇ ಇಲ್ಲ ಎನ್ನಲಾಗುತ್ತಿದೆ. ವಾಸ, ಆಹಾರ ಹಾಗೂ ಸ್ವಲ್ಪ ಮಟ್ಟಿನ ಉಡುಪುಗಳಿಗಷ್ಟೇ ಅವರ ಬೇಡಿಕೆಗಳು ಸೀಮಿತವಾಗಿದ್ದು, ಇವೆಲ್ಲವನ್ನೂ ಅವರ ಹಳ್ಳಿಗಳೇ ಪೂರೈಸುತ್ತವೆ" ಎಂಬ ವಾರನ್ ಹೇಸ್ಟಿಂಗ್ಸ್‌ನ ಮಾತುಗಳು ಬ್ರಿಟನ್ನಿನ ಉತ್ಪನ್ನಗಳಿಗೆ ಸಾಮಾನ್ಯ ಭಾರತೀಯ ಮಾರುಕಟ್ಟೆ ಸ್ಪಂದಿಸಲಾರದು ಎನ್ನುವುದನ್ನು ಸೂಚಿಸಿದ್ದವು. ಜಾನ್ ಮಾಲ್ಕಂ, "ಭಾರತೀಯರಿಗೆ ಯುರೋಪಿನ ವಸ್ತುಗಳ ಅಗತ್ಯವಿದ್ದರೂ ಅವುಗಳನ್ನು ಕೊಳ್ಳುವ ಆರ್ಥಿಕ ಶಕ್ತಿಯಿಲ್ಲ" ಎಂದು ಅಭಿಪ್ರಾಯಪಟ್ಟಿದ್ದನು. ಭಾರತೀಯ ಶಾಲೊಂದನ್ನು ೭ ವರ್ಷಗಳ ಕಾಲ ಬಳಸಿಯೂ ಅದರಲ್ಲಿ ಹೆಚ್ಚು ವ್ಯತ್ಯಾಸವಾಗದಿರುವುದನ್ನು ಗಮನಿಸಿ ಅದರ ಬಾಳಿಕೆಯ ಬಗ್ಗೆ ಅಭಿಮಾನ ಪಟ್ಟ ಸರ್ ಥಾಮಸ್ ಮನ್ರೊ, ಭಾರತೀಯ ಉತ್ಪನ್ನಗಳ ಶ್ರೇಷ್ಠಗುಣ ಮಟ್ಟದ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿ ಬ್ರಿಟಿಷ್ ಜವುಳಿಗಳ ಮಾರಾಟವನ್ನು ಬೆಂಬಲಿಸಲಿಲ್ಲ.[೯] ಹೀಗಿದ್ದೂ ಕಂಪೆನಿ ಸರಕಾರ ವ್ಯಾಪಾರದ ರೆಸಿಡೆಂಟ್‌ಗಳ ಮುಖಾಂತರ ಬ್ರಿಟಿಷ್ ಕಾರ್ಖಾನೆಗಳಲ್ಲಿ ತಯಾರಾದ ಜವುಳಿಯನ್ನು ಭಾರತಕ್ಕೆ ದಾಟಿಸಲು ಪ್ರಯತ್ನಿಸಿ ಯಶಸ್ವಿಯಾಯಿತು. ಹೆನ್ರಿ ಸೈಂಟ್ ಜಾರ್ಜ್ ಟಕರ್ ಎಂಬ ಕಂಪನಿ ಸರಕಾರದ ಅಧಿಕಾರಿ, ನಿವೃತ್ತಿ ಬಳಿಕ ಕಂಪೆನಿಯ ನಿರ್ದೇಶಕನಾದಾತ, ಕಂಪೆನಿ ಸರಕಾರದ ಈ ವ್ಯಾಪಾರ ನೀತಿಯ ವ್ಯಾಪ್ತಿ ಹಾಗೂ ಪರಿಣಾಮದ ಬಗ್ಗೆ ಬರೆಯುತ್ತ "ಭಾರತವನ್ನು ಉತ್ಪಾದಕ ಮಟ್ಟದಿಂದ ಕೃಷಿದೇಶವಾಗಿ ಹಿಂದೂಡಲಾಗಿದೆ" ಎಂದಿದ್ದಾನೆ.[೧೦] ಈ ರೀತಿಯಲ್ಲಿ ಬ್ರಿಟನ್ನಿನ ಹತ್ತಿ ಬಟ್ಟೆಗಳಿಗೆ ಭಾರತದಲ್ಲಿ ಮಾರುಕಟ್ಟೆಗಳು

ಸೃಷ್ಟಿಯಾಗಿ, ಕನಿಷ್ಠ ಬೆಲೆಗೆ ಮತ್ತು ಬೇಡಿಕೆ ಸಲ್ಲಿಸಿದದರ ಕ್ಕಿಂತಲೂ ಕಮ್ಮಿಗೆ ಬ್ರಿಟನ್ನಿನ ಹತ್ತಿಬಟ್ಟೆಗಳು ಮಾರಾಟ ವಾಗತೊಡಗಿದವು.[೧೧]

ಇದರ ಪರಿಣಾಮವಾಗಿ ಭಾರತದ ಹತ್ತಿಬಟ್ಟೆಗಳು ಬ್ರಿಟಿಷ್ ಮಾರುಕಟ್ಟೆಗಳಿಂದ ಮಾಯವಾಗತೊಡಗಿದವು. ಬ್ರಿಟನ್ನಿನ ಹತ್ತಿಬಟ್ಟೆಗಳನ್ನು ಭಾರತಕ್ಕೆ ಭರದಿಂದ ಆಮದು ಮಾಡಲಾಗುತ್ತಿದ್ದ ಕುರಿತು ೧೮೪೫ರಲ್ಲಿ ಬ್ರಿಟನ್ನಿನ ವಿದೇಶಿ ವಾಣಿಜ್ಯ ವಕ್ತಾರನು "ಈ ಹತ್ತಿಬಟ್ಟೆಗಳನ್ನು ಇಂಗ್ಲೆಂಡಿನಲ್ಲಿ ಅತಿ ಕಡಿಮೆ ದರದಲ್ಲಿ ತಯಾರಿಸಲಾಗುತ್ತಿದೆ. ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಯಾರಾಗುತ್ತಿರುವ ಇವುಗಳಿಗೆ ಮಾರುಕಟ್ಟೆಯನ್ನು ಹುಡುಕುವುದೇ ಪ್ರಯಾಸಕರವಾಗಿದ್ದು, ಆಮದಿನ ಪ್ರಮಾಣ ಹೀಗೆ ಹೆಚ್ಚುತ್ತಿರಲೆಂದೇ ಆಶಿಸಲಾಗಿದೆ. ಬರುತ್ತಿದ್ದ ಲಾಭ ಅತೀ ಕಡಿಮೆಯಾದರೂ, ಯಾವುದೇ ಪ್ರೋತ್ಸಾಹವನ್ನು ಕಡಿಮೆಮಾಡಿಲ್ಲ" ಎಂದು ಟಿಪ್ಪಣಿಸಿದ್ದಾನೆ.[೧೨]

ದ. ಕನ್ನಡದಲ್ಲಿ ಇಂಗ್ಲೆಂಡಿನ ಬಣ್ಣದ ಹಾಗು ಮುದ್ರಿತ ಚಿತ್ತಾರವುಳ್ಳ ಅಗ್ಗದ ಹತ್ತಿ ಬಟ್ಟೆಗಳು ಹಾಗೂ ನೀಳವಾದ ಬಟ್ಟೆಗಳಿಗೆ ಬೇಡಿಕೆ ಹೆಚ್ಚಿತು. ಆಗ ಕೆನರಾದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದ ಐ.ಬ್ಯಾಬಿಂಗ್ಟನ್ನನು ಸರಕಾರದ ಕಾರ್ಯದರ್ಶಿಗೆ ೧೮೨೮ರಲ್ಲಿ ಬರೆದ ಪತ್ರವು ಬ್ರಿಟನ್ನಿನ ಉತ್ಪನ್ನಗಳು ಕೆನರಾವನ್ನು ಪ್ರವೇಶಿಸಿದ್ದರ ಬಗೆಗೆ ಬೆಳಕು ಚೆಲ್ಲುತ್ತದೆ: "ಕರಾವಳಿಯ ಕೆಲವು ಅಂಗಡಿಗಳಲ್ಲಿ ಬ್ರಿಟನ್ನಿನ ಹತ್ತಿಬಟ್ಟೆಗಳು ಹೆಚ್ಚಿನ ಬೆಲೆಗೆ ಸ್ವಲ್ಪ ಪ್ರಮಾಣದಲ್ಲಿ ಮಾರಾಟವಾಗುತ್ತಿವೆಯಾದರೂ ಎಲ್ಲಾ ವರ್ಗದವರಿಂದ ಉಪಯೋಗಿಸಲ್ಪಡುತ್ತಿಲ್ಲ. ಪೇದೆಗಳು ಮತ್ತು ಸರಕಾರದ ಮೇಲ್ವರ್ಗದ ಗುಮಾಸ್ತರು, ಯುರೋಪಿನ ಅಧಿಕಾರಿಗಳೊಂದಿಗೆ ಸರ್ಕೀಟಿಗೆ ಹೋಗುವ ಸಂದರ್ಭಗಳಿಗೋಸ್ಕರ ಉದ್ದನೆಯ ಬಟ್ಟೆಗಳನ್ನು ಕೊಳ್ಳಲು ಉತ್ಸುಕರಾಗಿದ್ದಾರೆ ಮತ್ತು ಬಟ್ಟೆ ಪಡೆಯುವ ಯಾವುದೇ ಅವಕಾಶಗಳನ್ನು ಅತಿ ಸಂತೋಷದಿಂದ ಉಪಯೋಗಿಸಿ ಕೊಳ್ಳುತ್ತಾರೆ. ಈ ಪ್ರಾಂತ್ಯದಲ್ಲಿ ಬ್ರಿಟಿಷ್ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಇನ್ನಷ್ಟು ಉತ್ತೇಜಿಸಲು ಮತ್ತು ಜನರ ಆರೋಗ್ಯವನ್ನು ಸುಧಾರಿಸಲು ಹಾಗೂ ಜನರ ಅವಶ್ಯಕತೆಗಳನ್ನು ಹೆಚ್ಚಿಸಲು, (ಸರಕಾರಕ್ಕೆ ಯಾವುದೇ ಹೊರೆ ಬೀಳದಂತೆ) ಮದ್ರಾಸಿನ ಆಮದು ಗೋದಾಮಿನ ಅಧಿಕಾರಿಯು ಮೊದಲ ಸರಕು ಹಡಗಿನಲ್ಲಿ ಸಾಮಾನ್ಯ ಇಂಗ್ಲಿಷ್ ಲಾಂಗ್‌ಕ್ಲೋತ್‌ನ ಅನೇಕ ಬೇಲ್‌ಗಳನ್ನು ಕಳುಹಿಸುವಂತೆ ತಿಳಿಸುವುದು. ಅವುಗಳ ಜತೆಗೇ, ಮಾರಾಟದ ಬೆಲೆಗಳ ಪಟ್ಟಿಯನ್ನು ಕಳುಹಿಸುವುದು. ಇಲ್ಲಿನ ಕೆಲವೊಂದು ಆಸಕ್ತ ಶ್ರೀಮಂತ ವರ್ಗದವರಿಗಾಗಿ, ಸ್ವಲ್ಪ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಬಟ್ಟೆಯನ್ನು ಜತೆಗೇ ಕಳುಹಿಸುವುದು,"[೧೩] ಎಂದೆಲ್ಲ ಪತ್ರದ ಒಕ್ಕಣೆ ಆಗಿತ್ತು. ಆತನ ಇದೇ ಪತ್ರದಲ್ಲಿ ಕೆನರಾದ ಜನರಿಗೆಂದು ಸಾಮಾನ್ಯ ಗುಣಮಟ್ಟದ ಮತ್ತು ಅಗ್ಗದ ಬೆಲೆಯ ಬ್ರಿಟಿಷ್ ನೀಳ ಬಟ್ಟೆ ಹಾಗೂ ಗೌರವಾನ್ವಿತ ವರ್ಗದ ಜನರಿಗಾಗಿ ಉಣ್ಣೆಯ ಬಟ್ಟೆಗಳನ್ನು ಕಳುಹಿಸುವಂತೆಯೂ ಆತ ಕೇಳಿಕೊಂಡಿದ್ದು, ಇಲ್ಲಿನ ಜನರ ಆರೋಗ್ಯದ ಬಗೆಗಿನ ಮಾನವೀಯ ಕಾಳಜಿಯೂ ಇದಕ್ಕೆ ಕಾರಣವೆಂದು ಆತ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾನೆ. ಇಲ್ಲಿನ ಜನರು ಕನಿಷ್ಠ ಉಡುಪು ತೊಡುವವರಾಗಿದ್ದು, ಹಗಲು ಮತ್ತು ರಾತ್ರಿ ಹವಾಮಾನದಲ್ಲಾಗುವ ವೈಪರೀತ್ಯಗಳಿಂದಾಗಿ ಕೆಲವೊಮ್ಮೆ ಮರಣಾಂತಿಕವೂ ಆಗಬಹುದಾದ ಸಾಂಕ್ರಾಮಿಕ ಜ್ವರಕ್ಕೆ ತುತ್ತಾಗುತ್ತಾರೆ. ಅದಕ್ಕೆ ಪರಿಹಾರವಾಗಿ ಮೇಲೆ ಉಲ್ಲೇಖಿಸಿದ ಮಾದರಿಯ ಬಟ್ಟೆಗಳನ್ನು ಪೂರೈಸಬೇಕೆಂಬುದು ಆತನ ನಿಲುವು.[೧೪] ಆದರೆ ಇಲ್ಲಿ ಆತ ಹೇಳುವ ಹಗಲಿನ ವಿಪರೀತ ಸೆಕೆ ಮತ್ತು ರಾತ್ರಿಯ ವಿಪರೀತ ಚಳಿ ದ.ಕನ್ನಡ ಜಿಲ್ಲೆಯ ಕರಾವಳಿಯಲ್ಲಿರಲಿಲ್ಲ. ಬದಲು ಘಟ್ಟದ ಬುಡದ ಪ್ರದೇಶಗಳಲ್ಲಿ ಈ ವಾತಾವರಣವಿದ್ದು, ಆತ ಉಲ್ಲೇಖಿಸಿದ ಸಾಂಕ್ರಾಮಿಕ ಜ್ವರ - ಮಲೇರಿಯಾ ಅಲ್ಲಿನ ಜನರನ್ನು ಪೀಡಿಸುತ್ತಿತ್ತು.

ಆ ದಶಕಗಳಲ್ಲಿ ಅತಿ ಹೆಚ್ಚು ಪ್ರಾದೇಶಿಕ ಬೇಡಿಕೆಯಿದ್ದ ಬ್ರಿಟಿಷ್ ಬಟ್ಟೆಗಳು ಉತ್ತಮ ಗುಣಮಟ್ಟದ ತಾಮ್ರವರ್ಣ, ಹಳದಿ,ದಟ್ಟ ಹಸಿರು ಮತ್ತು ದಟ್ಟ ನೀಲಿಯ ಬಟ್ಟೆಗಳು ಮತ್ತು ಬಿಳಿ ಮತ್ತು ಕೆಂಪು ಉಣ್ಣೆಯ ಕಂಬಳಿಗಳು. [ಇಂದಿಗೂ ಕೆಲವು ಸರಕಾರಿ ಆಸ್ಪತ್ರೆಗಳಲ್ಲಿ ಕಾಣುವ ಈ ಬಿಳಿ - ಕೆಂಪು (ಕಂಬಳಿ)ವರ್ಣ ಸಂಯೋಜನೆ ಇದರ ಬಳುವಳಿಯೆ?] ಮೇಲೆ ಉಲ್ಲೇಖಿಸಿದ ಪತ್ರದನ್ವಯ ಕೆನರಾದಲ್ಲಿ ಹಂಚಲೆಂದು ಕಲೆಕ್ಟರನ ಬೇಡಿಕೆಯಂತೆ ಬ್ರಿಟನ್ನಿನಿಂದ ಬ್ರಿಟಿಷ್ ನೀಳ ಹತ್ತಿಬಟ್ಟೆ ಮತ್ತು ಉಲ್ಲನ್ ಬಟ್ಟೆಗಳನ್ನು ಮದ್ರಾಸಿನ ಕಮರ್ಷಿಯಲ್ ಸೂಪರಿಂಟೆಂಡೆಂಟರಿಗೆ ಕಳುಹಿಸ ಲಾಯಿತು. ಸಾದಾ ನೀಳಬಟ್ಟೆಗಳನ್ನು ಸರಕಾರೀ ನೌಕರರಿಗೂ ಹಂಚಲಾಗಿದ್ದು, ಅವರಿಗೆ ಹಣ ಪಾವತಿ ಮಾಡಲು ಅನುಕೂಲ ವಾಗುವಂತೆ ೬ ಸಮಾನ ಕಂತುಗಳಲ್ಲಿ ಸಂಬಳದಿಂದ ಕಡಿತ ಗೊಳಿಸುವ ಕಲೆಕ್ಟರನ ಸಲಹೆಯನ್ನು ಪುರಸ್ಕರಿಸಲಾಗಿತ್ತು. ಹೀಗೆ ಬ್ರಿಟಿಷ್ ಹತ್ತಿ ಉತ್ಪನ್ನಗಳು ಕೆನರಾದಂತಹ ಒಂದು ಸಣ್ಣ ಪ್ರದೇಶವನ್ನೂ ಆಡಳಿತ ನೀತಿಗನುಗುಣವಾಗಿಯೇ ಪ್ರವೇಶಿಸಿದುವು. ದ.ಕ. ಜಿಲ್ಲೆಯ ಮಂಗಳೂರು ಬಂದರು ಒಂದು ವಿತರಣಾಕೇಂದ್ರವೂ ಆಗಿದ್ದು, ಇಲ್ಲಿಗೆ ಮದ್ರಾಸಿನಿಂದ ಯಾ ಮುಂಬೈಯಿಂದ ಆಮದಿಸಲಾದ ನೀಳಬಟ್ಟೆಗಳು, ನೆಲಮಾರ್ಗ ವಾಗಿ ಕೊಡಗು, ಮೈಸೂರು ಮತ್ತು ಬೆಂಗಳೂರನ್ನು ತಲುಪುತ್ತಿದ್ದುವು.

ಬದಲಾದ ಉದ್ಯಮ ನೀತಿ ಮತ್ತು ಅದರ ಪರಿಣಾಮ

ಬ್ರಿಟಿಷ್ ಜವುಳಿ ಉದ್ಯಮಗಳಿಗೆ ಅಗತ್ಯವಾದ ಕಚ್ಚಾ ಹತ್ತಿಯ ಪೂರೈಕೆಗೆಂದು, ಕಚ್ಚಾಹತ್ತಿಯ ಆಮದನ್ನು ಪ್ರೋತ್ಸಾಹಿಸುವ ನೀತಿಯಿಂದಾಗಿ, ಭಾರತದ ಹತ್ತಿ ಉದ್ಯಮದಲ್ಲಿ ಬಹಳ ಏರು

ಪೇರುಗಳಾದವು. ೧೮೩೬ ರ ಡಾ. ವೈಟ್‌ರವರ ವರದಿಯಲ್ಲಿ ಬದಲಾದ ಉದ್ಯಮ ನೀತಿ ಮತ್ತು ಭಾರತದಲ್ಲಿ ಅದರ ಅನುಷ್ಠಾನದ ಬಗ್ಗೆ ಸ್ಪಷ್ಟ ಸೂಚನೆ ಇದೆ. "ವಿದೇಶೀ ವ್ಯಾಪಾರ ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಬ್ರಿಟನ್ನಿಗೆ ಕಚ್ಚಾವಸ್ತುಗಳ ರಫ್ತನ್ನು ಉತ್ತೇಜಿಸಲು ಎಲ್ಲಾ ಪ್ರೋತ್ಸಾಹವನ್ನು ನೀಡಬೇಕು. ಈ ನಿಟ್ಟಿನಲ್ಲಿ ಬ್ರಿಟನ್ನಿನಲ್ಲಿ ಯಾವ ನೀತಿಯನ್ನು ಅನುಸರಿಸ ಲಾಗುವುದೋ, ಅದಕ್ಕನುಗುಣವಾಗಿ ಕಚ್ಚಾ ವಸ್ತುಗಳ ಅಭಿವೃದ್ಧಿ ಮತ್ತು ರಫ್ತನ್ನು ಉತ್ತೇಜಿಸುವ ನೀತಿಯನ್ನು ಈ ದೇಶದಲ್ಲಿ ಅನುಷ್ಠಾನಿಸಲಾಗುವುದು".[೧೬] ಜತೆಗೇ ಆತ ಆಹಾರಧಾನ್ಯಗಳ ಅಧಿಕ ಉತ್ಪಾದನೆಯನ್ನು ನಿರುತ್ತೇಜಿಸುವಂತೆಯೂ ಸಲಹೆ ನೀಡುತ್ತಾನೆ. ಏಕೆಂದರೆ ಇದು ಹತ್ತಿ, ಕಬ್ಬು ಮುಂತಾದ ವ್ಯಾಪಾರೀ ಬೆಳೆಗಳ ಕೃಷಿಗೆ ತೊಡರುಗಾಲು ಆಗುತ್ತದೆಂದೂ ಆತ ಸಮರ್ಥನೆ ನೀಡುತ್ತಾನೆ.[೧೭] ಬ್ರಿಟನ್ನಿನ ಆಡಳಿತರಂಗದಲ್ಲೂ ಜವುಳಿ ಉದ್ಯಮದ ಹಿತಾಸಕ್ತಿಗಳ ಪ್ರಭಾವ ಬಲವಾಗಿದ್ದುದರಿಂದ ಕಚ್ಚಾ ಹತ್ತಿ ಆಮದಿನ ಕುರಿತ ಸರಕಾರದ ನೀತಿ ಅನುಷ್ಠಾನಕ್ಕೆ ಬಂದಿತು. ಅದಾಗಲೇ ಮುಂಬೈ ಬಂದರು ಹತ್ತಿ ರಫ್ತಿನಿಂದಾಗಿ ಕಂಪೆನಿ ಸರಕಾರಕ್ಕೆ ಮದ್ರಾಸಿಗಿಂತಲೂ ಹೆಚ್ಚು ಪ್ರಿಯವಾಗಿತ್ತು. ಗುಜರಾತ್ ಹಾಗೂ ಒಳನಾಡಿನಲ್ಲಿ ಬೆಳೆಯುವ ಕಚ್ಚಾ ಹತ್ತಿಯನ್ನು ಖಾಸಗಿ ವ್ಯಾಪಾರಿಗಳು ಮುಂಬೈ ಬಂದರಿನಿಂದ ಮತ್ತು ನೀಲಗುಂದ ಘಾಟಿ ಮುಖಾಂತರ ಕುಮಟಾದಿಂದಲೂ "ಪೂರ್ವದ ಲಿವರ್‌ಪೂಲ್" ಎನ್ನಿಸಿಕೊಂಡ ಚೀನಾದ ಕ್ಯಾಂಟನ್ನಿಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದರು.[೧೮] ೧೮೩೩ರಲ್ಲಿ ಚೀನಾದೊಂದಿನ ವ್ಯಾಪಾರ ಕೊನೆಗೊಳ್ಳುವುದರೊಂದಿಗೆ, ಇಂಗ್ಲೆಂಡಿನ ಹತ್ತಿ ಮಿಲ್ಲುಗಳಿಗೆ ಪೂರೈಸಲೆಂದು, ಕಚ್ಚಾ ಹತ್ತಿಯನ್ನು ಇಂಗ್ಲೆಂಡಿಗೇ ರಫ್ತು ಮಾಡಲು ಸುಲಭವಾಯಿತು. ಇದೇ ಸಮಯದಲ್ಲಿ ಅಮೆರಿಕದಲ್ಲಿ ಹತ್ತಿಬೆಳೆ ನಷ್ಟವಾಗಿ ಭಾರತದ ಹತ್ತಿಗೆ ಬೇಡಿಕೆ ಹೆಚ್ಚಾಗಿ ಮುಂಬಯಿ ಮತ್ತು ಇಂಗ್ಲೆಂಡಿನ ನಡುವಿನ ವ್ಯಾಪಾರವೂ ಹೆಚ್ಚಿತು. ೧೮೩೫-೩೬ ರಲ್ಲಿ ಸುಮಾರು ೪೨ ಲಕ್ಷ ರೂ ಮೌಲ್ಯದಷ್ಟಿದ್ದ ಕಚ್ಚಾ ಹತ್ತಿ ರಫ್ತು ೧೮೩೬-೩೭ ರಲ್ಲಿ ರೂ. ೫೬ ಲಕ್ಷದಷ್ಟಾಯಿತು.[೧೯] ಹೀಗೆ ಹೆಚ್ಚಾದ ರಫ್ತು ವ್ಯಾಪಾರದಲ್ಲಿ ಕರಾವಳಿ ಕನ್ನಡ ಜಿಲ್ಲೆಗಳ ಮಂಗಳೂರು ಮತ್ತು ಕುಮಟಾ ಬಂದರುಗಳು ಪ್ರಮುಖ ಪಾತ್ರ ವಹಿಸಿದವು.

ಪ. ಕರಾವಳಿಯಲ್ಲಿ ಮತ್ತು ದ. ಭಾರತದ ಒಳನಾಡಿನ ಹತ್ತಿಗಾಗಿ ನಡೆದ ಹುಡುಕಾಟ ಕರ್ನಾಟಕದ ಹತ್ತಿಯನ್ನು ಪಡೆಯುವಲ್ಲಿ ಸಫಲವಾಯಿತು. ಕಚ್ಚಾ ಹತ್ತಿಯ ರಫ್ತು ಹೆಚ್ಚಾದ ಹಿನ್ನೆಲೆಯಲ್ಲಿ ವ್ಯಾಪಾರೀ ಬೆಳೆಗಳ ಕೃಷಿಗೂ ಪ್ರತ್ಯಕ್ಷ ಪ್ರೋತ್ಸಾಹ ಹೆಚ್ಚಿತು. ಲಂಕಾಷೆಯರ್, ಮ್ಯಾಂಚೆಸ್ಟರ್ ಮತ್ತು ಯಾರ್ಕ್‌ಶೈರ್‌ನ ಹತ್ತಿಮಿಲ್ಲುಗಳ ಉತ್ಪಾದನೆ ದ್ವಿಗುಣಗೊಂಡಂತೆ ಕಂಪೆನಿ ಸರಕಾರ ಕಚ್ಚಾ ಹತ್ತಿಯ ಆಮದು ಮತ್ತು ಹತ್ತಿಬೆಳೆಯ ಕೃಷಿಗೆ ಹೆಚ್ಚು ಗಮನ ನೀಡಿತು. ಭಾರತದ ಅನೇಕ ಪ್ರಾಂತ್ಯಗಳಲ್ಲಿ ಅದರ ಗುಣಮಟ್ಟ ಹಾಗೂ ಪ್ರಮಾಣವನ್ನು ಹೆಚ್ಚಿಸಲು ಮತ್ತು ಅದರ ಸಂಸ್ಕರಣದ ಕುರಿತಂತೆಯೂ ವಿಶೇಷ ಆಸಕ್ತಿ ತೋರಿಸಿತು. ಯುರೋಪ್ ಮತ್ತು ಅಮೇರಿಕದಿಂದ ತಜ್ಞರನ್ನು ಕರೆಸಿ ಹೊಸ ತಳಿಗಳನ್ನು ಆರಂಭಿಸುವ ಪ್ರಯತ್ನವನ್ನೂ ಮಾಡಿತು. ೧೭೯೦ ರಲ್ಲೇ ಡಾ. ಆಂಡರ್‌ಸನ್ ರನ್ನು ದ.ಭಾರತಕ್ಕೆ ಕಳುಹಿಸಿ ಬೋರ್ಬನ್, ಮಾರಿಷಸ್ ಮತ್ತು ಮಾಲ್ಟಾ ತಳಿಯನ್ನು ಸೇಲಂ ತಿನ್ನವೇಲಿ ಮತ್ತು ಕೊಯಮತ್ತೂರುಗಳಲ್ಲಿ ಬೆಳೆಸಲು ಯತ್ನಿಸಿದ್ದರೂ ಅದು ಯಶಸ್ವಿ ಯಾಗಿರಲಿಲ್ಲ. ಮತ್ತೆ ೧೮೪೦ರಲ್ಲಿ ಹತ್ತು ಅಮೆರಿಕನ್ ಪ್ಲಾಂಟರ್ಸ್‌ನ್ನು ಭಾರತಕ್ಕೆ ಹತ್ತಿ ಉತ್ಪಾದನೆ ಹಾಗೂ ಸಂಸ್ಕರಣೆಯನ್ನು ಸುಧಾರಿಸಲು ಕಳುಹಿಸಿದಾಗ, ಮೂವರು ಮದ್ರಾಸ್ ಪ್ರಾಂತ್ಯಕ್ಕೆ ಬಂದರು. ಅವರಲ್ಲಿ ಮೆ. ಸಿಂಪ್ಸನ್ ಎಂಬಾತ ದ. ಕನ್ನಡಕ್ಕೆ ನ್ಯೂ ಆರ್ಲಿಯನ್ಸ್ ತಳಿಯನ್ನು ಪರಿಚಯಿಸಲು ಬಂದಿದ್ದ. ಇಲ್ಲಿನ ರೈತರು ಪ್ಲಾಂಟರ್ಸನ್ನು ತಮ್ಮಂತೆ ಕೃಷಿಕರೆಂದು ಪರಿಗಣಿಸದೆ, ಸರಕಾರದ ಯಾವುದೋ ಪ್ರಯೋಗ ಇದೆಂದು ಭಾವಿಸಿ, ತಮಗೆ ಅರ್ಥವಾಗದ್ದು ಹಾಗೂ ತಮಗೆ ಸಂಬಂಧ ಪಟ್ಟದ್ದಲ್ಲವೆಂದು ವರ್ತಿಸಿದ್ದರಿಂದ, ಈ ಪ್ರಯತ್ನ ಸಾಧ್ಯವಾಗದೆಂದು ಆತ ತನ್ನ ವರದಿಯಲ್ಲಿ ತಿಳಿಸಿದ್ದ.[೨೦] ಆದರೂ ಈ ರೀತಿಯ ಪ್ರಯತ್ನಗಳು ಆಗಿನ ಬೋರ್ಡ್ ಆಫ್ ರೆವಿನ್ಯೂ ಇದರ ಕಾರ್ಯದರ್ಶಿಯಾಗಿದ್ದ, ಸಿ. ಇ. ಟ್ರೆವಿಲಿಯಾನ್ ೧೮೪೦ರಲ್ಲಿ ನುಡಿದಂತೆ, ಇಡೀ ಮುಂಬೈ ಪ್ರಾಂತ್ಯವನ್ನೇ ಒಂದು ದೊಡ್ಡ ಹತ್ತಿ ಹೊಲವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಗಳಾಗಿದ್ದುವು.[೨೧]

ಹತ್ತಿ ಬೆಳೆಯನ್ನು ಕರಾವಳಿಯ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಕವಾಗಿಸುವ ಕಂಪೆನಿ ಸರಕಾರದ ಪ್ರಯತ್ನ ಯಶಸ್ವಿಯಾಗದೆ ಹೋದರೂ, ಉ.ಕರ್ನಾಟಕ ಹಾಗೂ ಮಹಾರಾಷ್ಟ್ರದ ದಕ್ಷಿಣ ಒಳನಾಡುಗಳಿಂದ ಹತ್ತಿಯನ್ನು ಆಮದು ಮಾಡಿಕೊಳ್ಳುವ ಪ್ರಕ್ರಿಯೆ ಯಶಸ್ವಿಯಾಯಿತು. ಈ ನಿಟ್ಟಿನಲ್ಲಿ ಕುಮಟಾ ಬಂದರು, ಹಡಗು ನಿಲುಗಡೆಗೆ ನೈಸರ್ಗಿಕ ಅನುಕೂಲತೆ ಹೊಂದಿದ್ದರಿಂದ, ಕುಮಟಾ ಬಂದರಿನಿಂದ ಮುಂಬೈ ಬಂದರಿಗೆ ಕಚ್ಚಾ ಹತ್ತಿಯನ್ನು ಸಾಗಿಸಲು ಸುಲಭವಾಯಿತು. ಉ.ಕರ್ನಾಟಕದ ಧಾರವಾಡ, ಬಳ್ಳಾರಿ ಹಾಗೂ ಹುಬ್ಬಳ್ಳಿ ಮತ್ತು ಸಮೀಪದ ಮಹಾರಾಷ್ಟ್ರದ ದಕ್ಷಿಣ ಪ್ರದೇಶಗಳಿಂದ ಕಚ್ಚಾ ಹತ್ತಿಯನ್ನು ನೆಲಮಾರ್ಗವಾಗಿ ಸಾಗಿಸುವ ಕಾರ್ಯವನ್ನು ಮುಂಬೈಯ ವ್ಯಾಪಾರಿಗಳು ಅಥವಾ ಅವರ ದಲ್ಲಾಳಿಗಳು ನಿರ್ವಹಿಸುತ್ತಿದ್ದರು. ಇದರಿಂದಾಗಿ, ಸಣ್ಣ ಹಳ್ಳಿಯಾಗಿದ್ದ ಕುಮಟಾ ೧೮೪೦ ರ ಸುಮಾರಿಗೆ ವ್ಯಾಪಾರ ಕೇಂದ್ರವಾಯಿತು.

೧೮೩೯ ರಿಂದ ೧೮೪೪ ರವರೆಗೆ ಕುಮಟಾದಿಂದ ರಫ್ತಾದ ಹತ್ತಿಯ ಪ್ರಮಾಣ ಈ ಕೆಳಗಿನಂತಿದೆ.[೨೨]

ವರ್ಷ	ಮೌಲ್ಯ (ರೂಪಾಯಿ)
೧೮೩೯-೪೦	೨೪,೭೪,೪೮೨
೧೯೪೦-೪೧	೨೪,೧೧,೧೨೫
೧೮೪೧-೪೨	೩೧,೪೭,೯೯೪
೧೮೪೨-೪೩	೩೨,೫೩,೩೩೩
೧೮೪೩-೪೪	೨೨,೪೩,೯೬೩

[೧೮೪೪ ರಲ್ಲಿ ಒಳನಾಡು ಸುಂಕಗಳನ್ನು ರದ್ದುಗೊಳಿಸಲಾಯಿತು.]

ಕುಮಟಾ-ಮುಂಬಯಿ ನಡುವೆ ಹೆಚ್ಚಿದ ಹತ್ತಿ ರಫ್ತು ವ್ಯಾಪಾರ, ಮುಂಬಯಿಗೆ ಕುಮಟಾದ ಭೌಗೋಳಿಕ ಸಾಮೀಪ್ಯ, ಮುಂಬಯಿ-ಕಾರವಾರ-ಕುಮಟಾದ ವ್ಯಾಪಾರ ವಹಿವಾಟು ಇವೆಲ್ಲ ಎಪ್ರಿಲ್ ೧೮೬೨ರಲ್ಲಿ ಕುಮಟಾ ಬಂದರನ್ನು ಹೊಂದಿರುವ ಉತ್ತರಕನ್ನಡ ಜಿಲ್ಲೆಯನ್ನೇ ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲು ಕಾರಣವಾದುವು. [ದಶಂಬರ ೧೬, ೧೮೫೯ರಲ್ಲೇ ಕೆನರಾ ಪ್ರಾಂತ್ಯವನ್ನು ದ.ಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳಾಗಿ ೨ನೇ ಬಾರಿಗೆ ವಿಭಜಿಸಲಾಯಿತು. (ಮೊದಲನೆಯದ್ದು ೧೮೦೦ ದಶಂಬರರಲ್ಲಿ -ದಕ್ಷಿಣ ಮತ್ತು ಉತ್ತರ ಆಡಳಿತ ವಿಭಾಗಗಳಾಗಿ ಆಗ ಕುಂದಾಪುರ ತಾಲ್ಲೂಕು ಉ. ಕನ್ನಡ ಜಿಲ್ಲೆಯಲ್ಲಿತ್ತು) ೧೮೬೨ರಲ್ಲಿ ಕುಂದಾಪುರ ತಾಲೂಕನ್ನು ದ.ಕನ್ನಡ ಜಿಲ್ಲೆಗೆ ಮರಳಿಸಲಾಯಿತು.] ಹೀಗೆ ಹತ್ತಿ ವ್ಯಾಪಾರದಿಂದಾಗಿ ದ.ಕ. ಜಿಲ್ಲೆ ಮತ್ತು ಉ.ಕ. ಜಿಲ್ಲೆ ಭೌಗೋಳಿಕವಾಗಿ ಹೊಂದಿಕೊಂಡಂತಿದ್ದರೂ, ಆಡಳಿತಾತ್ಮಕವಾಗಿ ಪೂರ್ವ ಮತ್ತು ಪಶ್ಚಿಮ ಕರಾವಳಿಯಲ್ಲಿ ಕೇಂದ್ರ ಕಛೇರಿಯನ್ನು ಹೊಂದಿದ್ದ ಕಂಪೆನಿ ಸರಕಾರದ ಎರಡು ಪ್ರಾಂತ್ಯಗಳಿಗೆ -ಮದ್ರಾಸ್ ಮತ್ತು ಮುಂಬಯಿಗೆ- ವರ್ಗಾಯಿಸಲ್ಪಟ್ಟವು.

ಕಚ್ಚಾ ಹತ್ತಿ ರಫ್ತಿಗೆ ಹೆಚ್ಚು ಉತ್ತೇಜನ ನೀಡಲೆಂದು ೧೮೪೪ ರಲ್ಲಿ ಕಂಪೆನಿ ಸರಕಾರ ಮುಂಬಯಿ ಪ್ರಾಂತ್ಯದ ಬಂದರುಗಳಿಂದ ರಫ್ತಾಗುವ ಹತ್ತಿ ನೂಲಿಗೆ ಸುಂಕವಿನಾಯಿತಿ ನೀಡಿತು. ಇದರಿಂದ ಮುಂಬಯಿ, ಕುಮಟಾ ಮತ್ತು ಮಂಗಳೂರಿನಲ್ಲಿ ನೆಲೆಸಿದ ಅನೇಕ ವ್ಯಾಪಾರಿಗಳಿಗೆ ಬಹಳ ತೊಂದರೆಯಾಯಿತು. ಕಾರಣ, ಕುಮಟಾದಿಂದ ಮುಂಬೈಗೆ ರಫ್ತಾಗುವ ಹತ್ತಿಯನ್ನು ಧಾರವಾಡ, ಹುಬ್ಬಳ್ಳಿ ಮತ್ತು ಮಹಾರಾಷ್ಟ್ರ ಒಳನಾಡುಗಳಿಂದ, ಇದುವರೆಗಿನ ರಸ್ತೆ ಮಾರ್ಗ ಬದಲಿಸಿ, ವಿಂಗುರ್ಲ, ಮಾಲ್ವನ್ ಮುಖಾಂತರ ಸೀದಾ ಮುಂಬೈ ಪ್ರಾಂತ್ಯದ ಬಂದರುಗಳಿಗೆ ತರಬಹುದು. "ಹೀಗಾದರೆ ಕುಮಟಾಕ್ಕೆ ಬರುವ ವ್ಯಾಪಾರಿಗಳಿಗೆ ನಷ್ಟವಾಗಿ, ವ್ಯಾಪಾರವು ಸ್ಥಗಿತಗೊಳ್ಳಬಹುದು. ಹತ್ತಿ ವ್ಯಾಪಾರದ ಜತೆಗೆ ಇನ್ನಿತರ ವ್ಯಾಪಾರಕ್ಕೂ ಧಕ್ಕೆಯಾಗುವುದು. ಈಗಾಗಲೇ ಅಲ್ಲಿ ನೆಲೆಸಿದ್ದ ವ್ಯಾಪಾರಿಗಳು ಕಟ್ಟಿರುವ ಕೋಠಿಗಳು ನಿಷ್ಪ್ರಯೋಜಕವಾಗಬಹುದು. ಬಂದರಿನ ಪ್ರಾಮುಖ್ಯತೆಗೂ ಧಕ್ಕೆಯಾಗಿ ಸರಕಾರವೂ ನಷ್ಟ ಅನುಭವಿಸೀತು"- ಈ ಎಲ್ಲ ಆತಂಕಗಳನ್ನು ಸರಕಾರದ ಗಮನಕ್ಕೆ ತರಲೆಂದು ಮುಂಬೈ, ಕುಮಟಾ ಮತ್ತು ಮಂಗಳೂರಿನ ಅನೇಕ ವ್ಯಾಪಾರಿಗಳು ತಮ್ಮ ಸಹಿಹಾಕಿ ಅರ್ಜಿಯೊಂದನ್ನು ಬೋರ್ಡ್ ಆಫ್ ರೆವಿನ್ಯೂನ ಕಾರ್ಯದರ್ಶಿ ಪೈಕ್ರಾಫ್ಟ್‌ನಿಗೆ, ಕೆನರಾದ ಕಲೆಕ್ಟರ್‌ನ ಮೂಲಕ ಕಳುಹಿಸಿ ಕೊಟ್ಟರು.[೨೩] ಪ್ರಾಂತ್ಯಗಳು ಬೇರೆಯಾದರೂ, ಆಡಳಿತ ಒಂದೇ ಆದ್ದರಿಂದ ಕಂಪೆನಿ ಸರಕಾರ ಮುಂಬೈ ಪ್ರಾಂತ್ಯದ ವಿಧೇಯಕಗಳನ್ನು ಮದ್ರಾಸ್ ಪ್ರಾಂತ್ಯಕ್ಕೂ, ಅದರ ಅಧೀನ ಬಂದರುಗಳಿಗೂ ಅನ್ವಯಿಸಬೇಕು ಎಂದು ಈ ಸಂದರ್ಭದಲ್ಲಿ ಕೆನರಾದ ಕಲೆಕ್ಟರ್, ಎಚ್. ಎಮ್. ಬ್ಲೇರ್‌ನೂ ಸರಕಾರಕ್ಕೆ ಮನವಿ ಮಾಡಿಕೊಂಡನು. ರಫ್ತು ಸುಂಕ ವಿನಾಯತಿಯಲ್ಲಿನ ಏಕರೂಪತೆ ಇಲ್ಲದಿರುವ ಕುರಿತು ಅದಾಗಲೇ ಕಂಪೆನಿಯ ಆಡಳಿತಕ್ಕೊಳಪಟ್ಟ ಅನೇಕ ಪ್ರದೇಶಗಳ ವ್ಯಾಪಾರಿಗಳ ಅಸಮಾಧಾನವನ್ನು ಗಮನಿಸಿದ ಕಂಪೆನಿ ಸರಕಾರ ೨೨-೪-೧೮೪೬ರಲ್ಲಿ ತನ್ನ ಸುಂಕದ ನೀತಿಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿತು. ಎಲ್ಲ ಪ್ರಮುಖ ವಸ್ತುಗಳ (ನೀಲಿಯ ಹೊರತಾಗಿ) ಮೇಲಿನ ರಫ್ತು, ಸುಂಕಗಳ ರದ್ದತಿ, ಬಂದರು - ಬಂದರುಗೊಳಗಿನ ವ್ಯಾಪಾರದ ಮೇಲಿನ ಸುಂಕ ರದ್ದತಿ ಮತ್ತು ವಿದೇಶೀ ಹಡಗುಗಳಲ್ಲಿ ಒಯ್ದ ವ್ಯಾಪಾರ ಸರಕುಗಳ ಮೇಲಿನ ದುಪ್ಪಟ್ಟು ಸುಂಕ ರದ್ದತಿ - ಇವು ಹೊಸ ಸುಂಕ ನೀತಿಯ ಕೆಲವು ಶಿಫಾರಸುಗಳು.

ಈ ಶಿಫಾರಸುಗಳು ೧೮೪೫ ರ Act VII ರಿಂದಾಗಿ ಅನುಷ್ಠಾನಕ್ಕೆ ಬಂದುವು. ಅದರಂತೆ ಹತ್ತಿ ನೂಲು ಸೇರಿದಂತೆ ಅನೇಕ ವಸ್ತುಗಳ ಮೇಲಿನ ರಫ್ತು ಸುಂಕವನ್ನು ರದ್ದುಗೊಳಿಸಲಾಯಿತು. ಆದರೆ ಇದರಿಂದ ಕಚ್ಚಾ ಹತ್ತಿಯ ರಫ್ತು ಹೆಚ್ಚಾಗುವಷ್ಟರಲ್ಲಿ ಅಮೆರಿಕದ ಅಂತರ್ಯುದ್ಧ ಕೊನೆಗೊಂಡು, ಅಲ್ಲಿಂದ ಇಂಗ್ಲೆಂಡಿಗೆ ಹತ್ತಿಯ ರಫ್ತು ಪುನರಾರಂಭಗೊಂಡಿತು. ಹತ್ತಿ ಬೆಳೆ ಭಾರತದಲ್ಲಿ ಕಮ್ಮಿಯಾಗಿ, ಬೆಳೆ, ಸಂಬಳ ಎರಡೂ ಇಳಿಮುಖವಾಯಿತು. ದಕ್ಷಿಣ ಬೆಳೆಗಾರರಿಗೆ ಹೊಸ ಕಂದಾಯ ನೀಡಲು ಅಸಾಧ್ಯವಾಯಿತು. ಹೀಗಾಗಿ ೧೮೬೫ರ ಬಳಿಕ, ಕುಮಟಾ ಬಂದರು ನಿಧಾನವಾಗಿ ತನ್ನ ವ್ಯಾಪಾರ ಪ್ರಾಮುಖ್ಯತೆಯನ್ನು ಕಳೆದುಕೊಂಡು ಸೊರಗತೊಡಗಿತು. ಹತ್ತಿ ವ್ಯಾಪಾರ ಇಳಿಮುಖವಾದರೂ, ಪರ್ಯಾಯ ಸರಕುಗಳ ವ್ಯಾಪಾರವನ್ನು ಉಳಿಸಿಕೊಂಡಲ್ಲಿ ಬಂದರಿನ ಪ್ರಾಮುಖ್ಯತೆ ಉಳಿಯುತ್ತಿತ್ತು. ಆದರೆ ಷಾಹುಶಾಹೀ ಸರಕಾರ ಈ ಬಗ್ಗೆ ಯಾವುದೇ ಆಸಕ್ತಿ ತೋರಲಿಲ್ಲ.

ಪ. ಕರಾವಳಿಯ ದಕ್ಷಿಣ ಹಾಗೂ ಉ. ಕನ್ನಡ ಜಿಲ್ಲೆಗಳ

ಹವಾಮಾನ ಮೊದಲಿನಿಂದಲೂ ಹತ್ತಿ ಬೆಳೆಯ ಕೃಷಿಗೆ ಯೋಗ್ಯವಾಗಿರಲಿಲ್ಲ. ಹಾಗಾಗಿ ವಸಾಹತುಶಾಹೀ ಸರಕಾರದ ಹತ್ತಿ ಕೃಷಿ ಪೋಷಕ ನೀತಿ ಯಶಸ್ವಿಯಾಗಲಿಲ್ಲ. ಇತ್ತ ಕಚ್ಚಾ ಹತ್ತಿಯ ರಫ್ತು ವ್ಯಾಪಾರವು ಅಮೆರಿಕದ ಹತ್ತಿಯ ಲಭ್ಯತೆಯಿಂದಾಗಿ ಕುಂಠಿತಗೊಂಡಾಗ, ಕುಮಟಾ ಬಂದರಿನ ರಫ್ತು ವಹಿವಾಟು ಅಲ್ಲೇ ಸ್ಥಗಿತಗೊಂಡಿತು. ಮಂಗಳೂರು ಬಂದರಿಗೆ ಆದಾಗಲೇ ಕಾಫಿ ರಫ್ತು ಹೊಸ ಚೈತನ್ಯ ನೀಡಿದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗ ೧೯ನೇ ಶತಮಾನದ ಉತ್ತರಾರ್ಧದಲ್ಲಿಯೂ ವ್ಯಾಪಾರ - ವಾಣಿಜ್ಯ ಚಟುವಟಿಕೆಗಳಿಂದ ತುಂಬಿತ್ತು. ಆದರೆ "ಕುಂದಾಪುರ ಬಂದರು" ಎಂದು ಬ್ರಿಟಿಷ್ ಆಡಳಿತ ವರದಿಗಳು ಉಲ್ಲೇಖಿಸಿದ ಗಂಗೊಳ್ಳಿ ಬಂದರು ವಸಾಹತುಶಾಹೀ ಆಡಳಿತದ ಅವಜ್ಞೆಗೆ ಗುರಿಯಾದದ್ದರಿಂದ ದ.ಕ.ಜಿಲ್ಲೆಯ ಉತ್ತರಭಾಗ ಆರ್ಥಿಕವಾಗಿ ಅಭಿವೃದ್ಧಿ ಹೊಂದಲಿಲ್ಲ. ಅದೇ ರೀತಿ ವಸಾಹತುಶಾಹೀ ಆಡಳಿತದ ಅವಜ್ಞೆಯಿಂದಾಗಿ, ಕುಮಟಾ ಬಂದರು ಸೊರಗಿ, ಉ.ಕನ್ನಡ ಜಿಲ್ಲೆಯೂ ಆರ್ಥಿಕವಾಗಿ ಹಿಂದುಳಿಯುವಂತಾಯಿತು ಎನ್ನಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಪ್ರೊಸೀಡಿಂಗ್ಸ್ ಆಫ್ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ., ೭-೧೧-೧೮೦೩, ಸಂ, ೩೬೩, ಪುಟಸಂಖ್ಯೆ: ೧೨೭೨೮, ೧೨೭೩೮, ಬೋರ್ಡ್ ಆಫ್ ರೆವಿನ್ಯೂಗೆ ಕಲೆಕ್ಟರ್ ಜೆ.ಜಿ. ರೇವನ್‌ಶಾರ ದಿ. ೧೭-೧೦-೧೮೦೩ರ ಪತ್ರ.

೨. ಬುಖಾನನ್, ಫ್ರಾನ್ಸಿಸ್, ಎಚ್., ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರು, ಕೆನರಾ ಎಂಡ್ ಮಲಬಾರ್, ಸಂ.೧.ಪು. ೩೯.

೩. ಪ್ರೊಸೀಡಿಂಗ್ಸ್ ಆಫ್ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ., ೧೬-೦೮-೧೮೦೨, ಸಂ ೩೨೪, ಪು. ೯೧೧೫, ೯೧೧೬.

೪. ಅದೇ., ೧೭-೧೧-೧೮೦೩, ಸಂ ೩೬೩, ಪು. ೧೨೭೩೮.

೫. ಅದೇ, ಪು. ೧೨೭೩೮-೧೨೭೩೯.

೬. ಕೋರ್ಟ್ ಆಫ್ ಡೈರೆಕ್ಟರ್ಸ್‌ನಿಂದ ಮದ್ರಾಸಿಗೆ, ೧೬-೦೨-೧೬೭೦, ಡಿಸ್ಪ್ಯಾಚ್‌ಬುಕ್, ಸಂ, ೮೭, ಪು. ೩೩೩, ಉಲ್ಲೇಖ : ತಪನ್ ರಾಯ್‌ಚೌಧುರಿ ಮತ್ತು ಇರ್ಫಾನ್ ಹಬೀಬ್., **ದಿ. ಕೇಂಬ್ರಿಡ್ಜ್ ಇಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ**, ಸಂ ೧, ಪು. ೪೦೦

೭. ತಪನ್ ರಾಯ್‌ಚೌಧುರಿ ಮತ್ತು ಇರ್ಫಾನ್ ಹಬೀಬ್., **ದಿ. ಕೇಂಬ್ರಿಡ್ಜ್ ಇಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ**, ಸಂ ೧, ಪು ೪೦೧.

೮. ಅದೇ ಫ ೪೦೨.

೯. ರೊಮೇಶ್ ದತ್ತ್., **ದಿ ಇಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ.** ಸಂ, ೧, ಪು. ೧೮೩, ೧೮೬.

೧೦. ಮೆಮೋರಿಯಲ್ಸ್ ಆಫ್ ದಿ ಇಂಡಿಯನ್ ಗವರ್ನಮೆಂಟ್, ಸಿಲೆಕ್ಷನ್ ಫ್ರಾಮ್ ದ ಪೇಪರ್ಸ್ ಆಫ್ ಹೆನ್ರಿ ಸೈಂಟ್ ಜಾರ್ಜ್ ಟಕರ್, ಪು. ೪೯೪.

೧೧. ಸೆಲೆಕ್ಟ್ ಕಮಿಟಿ ರಿಪೋರ್ಟ್ ೧೭೯೩, ಪು.೧೧. ಉಲ್ಲೇಖ: ಶಾರದಾರಾಜು., **ದಿ ಇಕನಾಮಿಕ್ ಕಂಡಿಷನ್ಸ್ ಇನ್‌ದ ಮದ್ರಾಸ್ ಪ್ರೆಸಿಡೆನ್ಸಿ** ೧೮೦೦ - ೧೮೫೦,

೧೨. ಅದೇ, ಪು. ೨೧೦

೧೩. ಐ. ಬ್ಯಾಬಿಂಗ್‌ಟನ್., ದ ಪ್ರಿನ್ಸಿಪಲ್ ಕಲೆಕ್ಟರ್ ಅಂಡ್ ಮ್ಯಾಜಿಸ್ಟ್ರೇಟ್ ಆಫ ಕೆನರಾ ಟು ದ ಸೆಕ್ರೆಟರಿ ಟು ಗವರ್ನಮೆಂಟ್, ಟೆರಿಟೋರಿಯಲ್ ಡಿಪಾರ್ಟ್ಮೆಂಟ್, ಫೋರ್ಟ್ ಸೈಂಟ್ ಜಾರ್ಜ್, ದಿ. ೨೪-೧-೧೮೨೮, ಕಮರ್ಶಿಯಲ್ ಕನ್ಸಲ್ಟೇಶನ್, ೨೨-೬-೧೮೨೮, ಸಂ.೫೦, ಪು.೧೩೧-೧೩೩.

೧೪. ಅದೇ, ಕಮರ್ಶಿಯಲ್ ಕನ್ಸಲ್ಟೇಶನ್, ೧೦-೧೦-೧೮೨೮, ಸಂ.೨೧, ಪು.೮೨೫.

೧೫. ಲಿಸ್ಟ್ ಆಫ್ ಪೇಪರ್ಸ್, ಕಮರ್ಶಿಯಲ್ ಕನ್ಸಲ್ಟೇಶನ್, ೩-೭-೧೮೨೯, ಸಂ.೫೨, ಪು, ೪೦೫.

೧೬. ರಿಪೋರ್ಟ್ ಆಫ್ ಡಾ.ವೈಟ್ ಟು ಗವರ್ನಮೆಂಟ್, ೨೦-೫-೧೮೩೬, ಶಾರದಾರಾಜು., **ದಿ ಇಕನಾಮಿಕ್ ಕಂಡಿಷನ್ಸ್ ಇನ್‌ದ ಮದ್ರಾಸ್ ಪ್ರೆಸಿಡೆನ್ಸಿ** ೧೮೦೦-೧೮೫೦, ಪು.೨೧೦-೨೧೧.

೧೭. ಅದೇ.,

೧೮. ಸಿ.ನಾರ್ತ್ ಕೊರ್ಟ್ ಪಾರ್ಕಿನ್ಸನ್, **ಟ್ರೇಡ್ ಇನ್ ದ ಈಸ್ಟರ್ನ್ ಸೀಸ್**, ೧೭೯೩-೧೮೧೩.

೧೯. ಶಾರದಾರಾಜು., **ದಿ ಇಕನಾಮಿಕ್ ಕಂಡಿಷನ್ಸ್ ಇನ್‌ದ ಮದ್ರಾಸ್ ಪ್ರೆಸಿಡೆನ್ಸಿ**, ೧೮೦೦-೧೮೫೦, ಪು. ೨೧೦-೨೧೧.

೨೦. ಅದೇ.,

೨೧. ಧರ್ಮಾ ಕುಮಾರ್, **ದಿ ಕೇಂಬ್ರಿಡ್ಜ್ ಇಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ**, ಸಂ.೨, ಪು. ೩೩೮.

೨೨. ಪತ್ರ ಸಂಖ್ಯೆ. ೮೮, ದಿ. ೧೬-೮-೧೮೬೫, ಪ್ರೋಸೀಡಿಂಗ್ಸ್ ಆಫ್ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ. ಆಗಸ್ಟ್ ೧೮೪೫.

೨೩. ಸೀ ಕಸ್ಟಂಸ್ ಪ್ರೋಸೀಡಿಂಗ್ಸ್, ಸಂ. ೯೮, ೧-೧೦-೧೮೪೫, ಪು.೭೪೭.

ಗುರುಮೂರ್ತಿ ಪೆಂಡಕೂರು*

ರಾಬರ್ಟ್ ಸಿವೆಲ್ಲರ-ಎ ಫರ್ಗಾಟನ್ ಎಂಪೈರ್; ಹಯವದನರಾಯರ ಮೈಸೂರು ಗ್ಯಾಸೆಟಿಯರ್‌ನ ಇತಿಹಾಸ ಸಂಪುಟಗಳು

ತಾಳಿಕೋಟೆಯ ಯುದ್ಧದ ನಂತರ ಕೊಂಪೆಯೆನಿಸಿ ಮರೆಯಾಗಿ ಹೋಗಿದ್ದ ಕರ್ನಾಟಕದ ಧರ್ಮ ಸಾಮ್ರಾಜ್ಯವೆನಿಸಿದ್ದ ವಿಜಯನಗರದ ಇತಿಹಾಸವನ್ನು ೧೯೦೦ರ ಹೊತ್ತಿಗೆ ಮೊದಲ ಬಾರಿಗೆ ಹೊರ ತೆಗೆದು ಬಳ್ಳಾರಿಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳಾಗಿದ್ದ ರಾಬರ್ಟ್ ಸಿವೆಲ್ಲರು 'ಎ ಫರ್ಗಾಟನ್ ಎಂಪೈರ್' ಗ್ರಂಥವನ್ನು ರಚಿಸಿದರು. ಅವರ ಗ್ರಂಥವು ಎಲ್ಲಾ ಇತಿಹಾಸ ಸಂಶೋಧಕರ ಗಮನ ಸೆಳೆಯಿತು.

ಸಿವೆಲ್

ಸಿವೆಲ್ಲರು ತಮಗೆ ದೊರೆತ ಮುಸ್ಲಿಂ, ಪೋರ್ಚುಗೀಸ್ ಪರ್ಶಿಯನ್ ಮತ್ತು ಇಟಾಲಿಯನ್ ಪ್ರವಾಸಿಗರ ಅನುಭವ ಕಥನಗಳನ್ನು ಆಧರಿಸಿ ವಿಜಯನಗರದ ಇತಿಹಾಸವನ್ನು ರೂಪಿಸಿದರು. ಅತ್ಯಂತ ಪ್ರೀತಿ ಮತ್ತು ಅಭಿಮಾನಗಳಿಂದ ಮತ್ತು ಅನುಪಮ ಶೈಲಿಯಲ್ಲಿ ರಚಿತವಾದ ಅವರ ಕೃತಿ ಮನ್ನಣೆ ಪಡೆಯಿತು. ಸಿವೆಲ್ ಅವರು ವಿಜಯನಗರ ಸ್ಥಾಪನೆಯಿಂದ ಆರಂಭಿಸಿ ಕ್ರಿ.ಶ. ೧೬೨೦ರವರೆಗೆ, ಅಂದರೆ ಮದ್ರಾಸಿನಲ್ಲಿ ಇಂಗ್ಲಿಷರ ಮೊದಲ ಕಾರ್ಖಾನೆಯ ಸ್ಥಾಪನೆಯವರೆಗೆ ಬರೆದಿದ್ದಾರೆ. ಮೊದಲ ಬಾರಿಗೆ ಅಪೂರ್ವ ನಕ್ಷೆಗಳನ್ನು, ಅವಶೇಷಗಳ ಚಿತ್ರಗಳನ್ನು, ತಿರುಮಲ ದೇವಸ್ಥಾನದಲ್ಲಿರುವ ಶ್ರೀ ಕೃಷ್ಣ ದೇವರಾಯರ ಚಿನ್ನಾದೇವಿ ಮತ್ತು ತಿರುಮಲದೇವಿಯರ ಪುಸ್ತಕಗಳ ಚಿತ್ರಗಳನ್ನು, ವಿಜಯನಗರ ಸಾಮ್ರಾಜ್ಯದ ವಿಸ್ತಾರವನ್ನು ತೋರಿಸುವ ನಕ್ಷೆಗಳನ್ನು ಮುದ್ರಿಸಿದ್ದಾರೆ. ಪೋರ್ಚುಗೀಸ ಮತ್ತು ಸ್ಪಾನಿಷ್ ಭಾಷೆಯಲ್ಲಿದ್ದ ಡೊಮಿಂಗೋ ಪೇಜ್ ಮತ್ತು ಪರ್ನಾವೋ ನೂನಿಜ್ ಅವರ ಕಥನಗಳನ್ನು ಸಂಪೂರ್ಣವಾಗಿ ಇಂಗ್ಲಿಷ್‌ಗೆ ಅನುವಾದಿಸಿ ನೀಡಿದ್ದಾರೆ. ಬರ್ರ್ರಾದಾಸ್‌ನ ಪುಟ್ಟ ವರದಿಯೂ ಇಲ್ಲಿದೆ. ಸುಮಾರು ನಾಲ್ಕು ನೂರು ಪುಟಗಳಲ್ಲಿ ಸಿವೆಲ್ಲರು ವಿಜಯನಗರದ, ಬಹಮನಿ ರಾಜ್ಯಗಳು ಮತ್ತು ಪೋರ್ಚುಗೀಸರ ಗೋವಾ ಆಡಳಿತಾಧಿಕಾರಿಗಳ ಬಗ್ಗೆ ಸಾಕಷ್ಟು ವಿವರಗಳನ್ನು ನೀಡಿದ್ದಾರೆ. ಅಲ್ಲಿಂದ ಆರಂಭವಾದ ವಿಜಯನಗರದ ಅನ್ವೇಷಣೆಯು ನಿರಂತರವಾಗಿ ನಡದೇ ಇದೆ.

ಅನಂತರ ಮಹನೀಯರಾದ ಕೃಷ್ಣಸ್ವಾಮಿ ಅಯ್ಯಂಗಾರ್, ಕೃಷ್ಣಶಾಸ್ತ್ರಿಗಳು, ಸಾಲೆತೂರೆ ಅವರು, ನೀಲಕಂಠಶಾಸ್ತ್ರಿಗಳು, ನೇಲಟೂರು ವೆಂಕಟರಮಣಯ್ಯ, ದೇಸಾಯಿ ಪಾಂಡುರಂಗ ರಾವ್, ಜಿ. ಎಸ್. ದೀಕ್ಷಿತರು ಅಲ್ಲದೇ ಅನೇಕ ತೆಲುಗು, ತಮಿಳು, ಇಂಗ್ಲಿಷ್, ಫ್ರೆಂಚ್, ಪೋರ್ಚುಗೀಸ್ ವಿದ್ವಾಂಸರು ವಿಜಯನಗರದ ಬಗ್ಗೆ ನಾನಾ ಚರಿತ್ರೆಗಳನ್ನು ಬರೆದಿದ್ದಾರೆ. ತರತರದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ.

೧೯೨೭ರಲ್ಲಿ ಮೈಸೂರು ಸರಕಾರದ ಆಜ್ಞೆಯಂತೆ ರಾವ್ ಸಾಹೇಬ್ ಹಯವದನರಾಯರು ಮೂರು ಬೃಹತ್ ಸಂಪುಟಗಳಲ್ಲಿ ಕರ್ನಾಟಕದ ಇತಿಹಾಸವನ್ನು ರೂಪಿಸಿದ್ದಾರೆ. ಮೊದಲ ಸಂಪುಟದ ೯೫೦ ಪುಟಗಳಲ್ಲಿ ಕ್ರಿ.ಪೂ. ೫ನೇ ಶತಮಾನದಿಂದ ಕ್ರಿ.ಶ. ೧೩೩೬ರ ವರೆಗೆ (ಸೇವುಣರವರೆಗೆ) ಭಾರತ ಮತ್ತು ಕರ್ನಾಟಕದ ಇತಿಹಾಸವಿದೆ. ಎರಡನೇ ಸಂಪುಟದ ೧೦೧೦ ಪುಟಗಳಲ್ಲಿ ಕ್ರಿ.ಶ. ೧೩೩೬ರಲ್ಲಿ ವಿಜಯನಗರದ ಸ್ಥಾಪನೆಯಿಂದ ಪ್ರಾರಂಭಿಸಿ ಕ್ರಿ.ಶ. ೧೭೭೬ರಲ್ಲಿ ಟೀಪು ಸುಲ್ತಾನನಿಂದ ಅದರ ಪರಿಸಮಾಪ್ತಿಯಾಗುವವರೆಗಿನ ಕಥೆ ಇದೆ. ಮೂರನೇ ಸಂಪುಟದ ೭೪೦ ಪುಟಗಳಲ್ಲಿ ಅಲ್ಲಿಂದ ೧೯೩೦ರ ವರೆಗಿನ ಈ ನಾಡಿನ ಚರಿತ್ರೆ ಇದೆ. ಹೀಗೆ ಶ್ರೀ ಹಯವದನರಾಯರು ೨೭೦೦ ಪುಟಗಳ ಹರವಿನಲ್ಲಿ ಕರ್ನಾಟಕದ ಚರಿತ್ರೆಯನ್ನು ಮೊದಲಬಾರಿಗೆ ಸಂಕಲಿಸಿದ್ದಾರೆ. ವಿಜಯನಗರದ ಷಟ್‌ಶತ ಸಾಮಂವತ್ಸರಿಕೋತ್ಸವ ಸಂದರ್ಭದಲ್ಲಿ ಇತಿಹಾಸ ಗೋಷ್ಠಿಯನ್ನು ಉದ್ಘಾಟಿಸಿದ ಡಾ. ಎಂ. ಎಚ್. ಕೃಷ್ಣ ಅವರು 'To scrutinise all these available sources of information and to write out a fuller history of Vijayanagar was the task which Rao saheb Hayavadana Rao set to himself while compiling the hisotorical portion of Mysore Gazetteer.

The result of his labour has received less recognition than it deserves because it is hidden in the pages of a Larger official publication. ಎಂದು ಹೊಗಳಿದ್ದಾರೆ.

ಸಿವೆಲ್ ಅವರು ಸಹಸ್ರಾರು ಸಂಖ್ಯೆಯ ಶಾಸನ ಸಂಪತ್ತನ್ನಾಗಲೀ, ತೆಲುಗು-ಕನ್ನಡ-ಸಂಸತ ಮತ್ತು ತಮಿಳು ಸಾಹಿತ್ಯ

* ರಾಮನಗರ, ಹಗರಿಬೊಮ್ಮನಹಳ್ಳಿ, ಬಳ್ಳಾರಿಜಿಲ್ಲೆ - ೫೮೩ ೨೧೨

ಮೂಲದಿಂದ ಪ್ರಾಪ್ತವಾಗುವ ಇತಿಹಾಸದ ಅಂಶಗಳನ್ನಾಗಲೀ ಪೂರ್ಣ ಪರಿಶೀಲಿಸಲು ಆಗಿಲ್ಲ. ಅನೇಕ ಸಲ ಅವರೇ ಪೂರ್ಣವಾಗಿ ನಂಬದ ವಿವರಗಳನ್ನು ಆಧರಿಸಿ ಇತಿಹಾಸ ಕಥನ ಮಾಡುತ್ತಾರೆ. ಅವರು ಮುಸ್ಲಿಂ ಇತಿಹಾಸಕಾರರನ್ನು ನಂಬಲಿಲ್ಲ. ಆದರೆ ಅವರನ್ನು ಕೈಬಿಡಲಿಲ್ಲ. ಅವರು ನೂನಿಜ್ ಮತ್ತು ಪೇಜ್ ಅವರ ವರದಿಗಳನ್ನು ನಂಬಿದರು. ಫರಿಷ್ತಾ ನೀಡುವ ವಿವರಗಳನ್ನು ಅನೇಕ ಸಲ ತಳ್ಳಿ ಹಾಕುತ್ತಾರೆ. (We must remember that the narrator is a loyal mahammodan-Sewell) ಆದರೆ ಅವರು ಉದ್ದಕ್ಕೂ ಫರಿಷ್ತಾನನ್ನೇ ಅವಲಂಬಿಸಿ ಇತಿಹಾಸ ರೂಪಿಸುತ್ತಾರ (ಉದಾಹರಣೆಗೆ-ಕೃಷ್ಣದೇವಾರಯನ ರಾಯಚೂರು ಕದನದ ಬಗ್ಗೆ ಫರಿಷ್ತಾನ ವರದಿ). ಸಿವೆಲ್ ಅಲ್ಲೊಮ್ಮೆ ಇಲ್ಲೊಮ್ಮೆ ರೈಸ್ ಅವರು ಸಂಗ್ರಹಿಸಿದ ಶಾಸನಗಳನ್ನು ಉಲ್ಲೇಖಿಸುತ್ತಾರೆ. ಆದರೂ ಸಿವೆಲ್ಲರ ಗ್ರಂಥವನ್ನು ಮುಂದಿಟ್ಟುಕೊಂಡೇ ವಿಜಯನಗರದ ಕಥೆಯನ್ನು ಪ್ರಾರಂಭಿಸಬೇಕಾಗಿದೆ.

ಹಯವದನರಾವ್

ರಾವ್ ಸಾಹೇಬ್ ಹಯವದನರಾಯರು ಮೈಸೂರು ಗ್ಯಾಸೆಟಿಯರ್‌ನ ಇತಿಹಾಸ ಸಂಪುಟಗಳನ್ನು ಸಂಕಲಿಸುವಾಗ ಒಂದು ದಿವ್ಯ ದೀಕ್ಷೆಯಿಂದ ಕರ್ನಾಟಕದ ಇತಿಹಾಸವನ್ನು ಸಮಗ್ರವಾಗಿ ರೂಪಿಸಿದರು. ಡಾ. ಷಡಕ್ಷರ ಶೆಟ್ಟರು ಹೇಳುವಂತೆ "ಹಯವದನರಾಯರು ಬರೆದ ಕರ್ನಾಟಕದ ಇತಿಹಾಸವನ್ನು ಹೊರತು ಪಡಿಸಿದರೆ, ಆ ಕಾಲದಲ್ಲಿ ಹೊರಬಂದಿರುವ ಇತಿಹಾಸ ಸಂಪುಟಗಳೆಲ್ಲಾ ನಾಲ್ಕಾರು ಅರಸು ಮನೆತನಗಳಿಗೆ ಸಂಬಂಧಿಸಿದವು ಮಾತ್ರ" (ಮುನ್ನುಡಿ - ಬಳ್ಳಾರಿ ಜಿಲ್ಲಾ ಸಾಂಸತಿಕ ಚರಿತ್ರೆ - ಡಾ. ಜಿ. ಯಂ. ನಾಗಯ್ಯ, ಲೋಹಿಯಾ ಪ್ರಕಾಶನ ಬಳ್ಳಾರಿ - ೨೦೦೨)

ಹಯವದನರಾಯರ ಕ್ರಮವೇ ಅಪೂರ್ವ. ಅವರದು ವಿವರವಾದ ಮತ್ತು ವೈಜ್ಞಾನಿಕ ಪರಿಶೀಲನೆ ಪ್ರತಿಯೊಬ್ಬ ಪಟ್ಟಾಭಿಷಿಕ್ತ ಅರಸನ ಆಳ್ವಿಕೆಯ ವಿವಿಧ ಘಟ್ಟಗಳನ್ನು ಶಾಸನಗಳ ಆಧಾರದ ಮೇಲೆ ವಿವರಿಸಿ, ಆ ಶಾಸನಗಳ ಯಾದಿಯನ್ನೇ ನೀಡುತ್ತಾರೆ. ಅರಸನ ರಾಜಕೀಯ ಜೀವನದ ರೇಖೆಗಳೊಂದಿಗೆ

೧. ಅವನ ಆಕಾರ
೨. ಅವನು ನೀಡಿದ ದತ್ತಿ, ದಾನ
೩. ಅವನ ಆಡಳಿತದ ಗುಣ
೪. ಇತರ ರಾಜರೊಂದಿಗೆ ಸಂಬಂಧ
೫. ವಿದೇಶ ನೀತಿ
೬. ಯುದ್ಧನೀತಿ - ಮುಖ್ಯ ಸಮರಗಳು, ಸೋಲು-ಗೆಲುವು
೭. ಸಚಿವರು
೮. ಗೆದ್ದ ರಾಜ್ಯಗಳ ವ್ಯವಸ್ಥೆ
೯. ರಾಜನೀತಿ
೧೦. ಕೃಷಿ, ದೇವಾಲಯ, ನೀರಾವರಿ ಅಭಿವೃದ್ಧಿ
೧೧. ನಗರಗಳ ಸ್ಥಾಪನೆ
೧೨. ಅವನ ಪರಿಪಾಲನೆಯ ಪರಿಣಾಮ
೧೩. ಸಾಹಿತ್ಯ-ಸಂಸತಿ ಸಂವರ್ಧನೆ
೧೪. ಒಟ್ಟಾರೆ ದಕ್ಷಿಣ ಭಾರತದ ಪರಿಸ್ಥಿತಿಯ ಮೇಲೆ ಪ್ರಭಾವ
೧೫. ವಿದೇಶೀಯರ ಅಭಿಪ್ರಾಯಗಳು
೧೬. ಜನ ಸಾಮಾನ್ಯರ ಸ್ಥಿತಿ-ಗತಿ
೧೭. ರಾಜ್ಯದ ಸಂಪತ್ತು
೧೮. ಧರ್ಮ - ಸಮಾಜ
೧೯. ನ್ಯಾಯ ದಾನ
೨೦. ಉತ್ಸವಗಳು
೨೧. ಮಹಿಳೆಯರ ಸ್ಥಿತಿ
೨೨. ರಾಜನ ಗುಣ-ಅವಗುಣ
೨೩. ಅರಸನ ಪರಿಪಾಲನೆಯ ಒಟ್ಟು ಪರಿಣಾಮ

ಹೀಗೆ ನಾನಾ ವಿಧವಾಗಿ ಅರಸನ ಪಾಲನೆಯನ್ನು ಒರೆಗೆ ಹಚ್ಚಿ, ವಿವರಿಸಿ, ಭಾರತೀಯ ಜೀವನಕ್ಕೆ ಅವನು ನೀಡಿದ ಕಾಣಿಕೆಯ ಮೇಲೆ ಬೆಳಕು ಚೆಲ್ಲುತ್ತಾರೆ. ಹೀಗೆ ಹೇಳುವಾಗ ಅವರು ಪರವಾದ, ವಿರುದ್ಧವಾದ ಎಲ್ಲಾ ಅಭಿಪ್ರಾಯಗಳನ್ನು ವಿವೇಚಿಸುತ್ತಾರೆ. ಅದೊಂದು ತುಲನಾತ್ಮಕವಾದ ವಿವರಣೆ ಯಾಗುತ್ತದೆ. ಉದಾಹರಣೆಗೆ ಕೃಷ್ಣದೇವರಾಯನ ಬಗ್ಗೆ ಅವರ ನಿರ್ಣಯಾತ್ಮಕ ಮಾತುಗಳು ಹೀಗಿವೆ:

1. Though Krishnadeva showed sparks of statesmanship brilliant his treatment of ismails ambassador-if Nuniz is to be believed was wholly dangerous.

2. As a general, he should have been the beloved of his feaudatories and forces. He was Alexandrian in habit.

3. He was the greatest buildor of his dynasty. He was also the most charitable princely in generosity. He gave unasked and unprompted every thing and all at once.

4. The man was certainly greater than what legend describes him to have been. He was not only great but alo good, for the endeavoured to lift off the burden on the back of the people.

5. Krishnadevaraya as a king soldier and humanist stands high indeed among the kings of south India. He merits he distnction of 'great' that has been bestowed on him

ಆದ್ದರಿಂದ ಕರ್ನಾಟಕ ಚರಿತ್ರೆಯ ಅದರಲ್ಲೂ ವಿಜಯನಗರ ಚರಿತ್ರೆಯ ಅಧ್ಯಯನ ಮಾಡುವವರು ಹಯವದನರಾಯರ ಕೃತಿಯನ್ನು ಗಮನಿಸಲೇಬೇಕು. ಅವಜ್ಞೆಗೆ ಗುರಿಯಾಗಿರುವ ಈ ಅಪೂರ್ವ ಸಂಪುಟಗಳು ವಿಜಯನಗರದ ಚರಿತ್ರೆಯನ್ನು ಸಮಗ್ರವಾಗಿ ರೂಪಿಸಿವೆ. ಸಿವೆಲ್ಲರ ಗಮನಕ್ಕೆ ಬಾರದ ಆಧಾರಗಳು, ವಿವರಗಳು ತೆಲುಗು ಮತ್ತು ಕನ್ನಡ ಸಾಹಿತ್ಯದ ಆಕರಗಳು ಹಯವನದರಾಯರ ಪರಿಶೀಲನೆಗೆ ಸಿಲುಕಿವೆ. (ತೆಲುಗು ಸಾಹಿತ್ಯದ-

೧. ರಾಯವಾಚಕಮು
೨. ಕೃಷ್ಣದೇವರಾಯ ವಿಜಯಮು
೩. ಪಾರಿಜಾತಾಪಹರಣಮು
೪. ಆಮುಕ್ತ ಮಾಲ್ಯದ
೫. ಜಾಂಬವತೀ ಕಲ್ಯಾಣಂ
೬. ಮನು ಚರಿತ್ರಮು
೭. ರಾಜಶೇಖರ ಚರಿತ್ರ
೮. ತುಕ್ಕಾ ಪಂಚಕಂ
೯. ಹರಿಕಥಾಸಾರ
೧೦. ಪ್ರಬೋಧ ಚಂದ್ರೋದಯ

ಮತ್ತು ಕನ್ನಡದ ತಿಮ್ಮಣ್ಣಭಾರತ ಅಲ್ಲದೇ ಆವರೆಗಿನ ಗೆಝೆಟಿಯರ್‌ಗಳು)

ವಿದೇಶಿ ಪ್ರವಾಸಿಗರಾದ

೧. ಬರ್‍ರಾದೋಸ್
೨. ಫರಿಸ್ತಾ
೩. ಇಬ್ನಿ ಬಟೂಟ
೪. ಬರ್ಬೋಸಾ
೫. ಅಬ್ದುಲ್ ರಜಾಕ್
೬. ನಿಕೋಲೋ ಕಾಂಟಿ ಮತ್ತು
೭. ಪೆಡರಿಸಿ

- ಅವರ ವರದಿಗಳನ್ನು ಪರಿಶೀಲಿಸಿದ್ದಾರೆ. ಹೀಗಾಗಿ ಈ ಸಂಪುಟಗಳ ಅಧ್ಯಯನದಿಂದ ವಿಜಯನಗರದ ಬಗ್ಗೆ ಪರಿಹಾರ ವಾಗಿಲ್ಲದ ಅನೇಕ ಮುಂಡಿಗೆಗಳನ್ನು ಬಿಡಿಸಲು ಸಾಧ್ಯವಾದೀತು. ಅದರಿಂದ ರಾವ್ ಸಾಹೇಬ್ ಹಯವದನ ರಾಯರ ಶ್ರಮವೂ ಸಾರ್ಥಕವಾದೀತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. *A Forgotten Empire*-Robert Sewell., (2000), Asian Educational Services, New Delhi.
2. *Mysore Gazetteer,* Voll II Mediaeval Part III., 1930 , C. Hayavadana Rao (Ed), Govt. of Mysore., New Edition.

ಎಸ್. ಎಲ್. ಶ್ರೀನಿವಾಸಮೂರ್ತಿ*

ಎಲ್. ಬೌರಿಂಗನ ಒಂದು ಅಪ್ರಕಟಿತ ಹಸ್ತಪ್ರತಿ

ಕ್ರಿ. ಶ. ೧೮೬೨ ರಿಂದ ೧೮೭೦ರ ವರೆಗೆ ಮೈಸೂರು ಸಂಸ್ಥಾನದ ಚೀಫ್ ಕಮೀಶನರ್ ಆಗಿದ್ದ ಎಲ್. ಬೌರಿಂಗ್ 'Eastern Experiences' ಮತ್ತು 'Hyder Ali and Tippu Sultan' ಎಂಬ ಎರಡು ಕೃತಿಗಳನ್ನು ಹಾಗೂ ರಾಯಲ್ ಏಷಿಯಾಟಿಕ್ ಸೊಸೈಟಿಯ ಜರ್ನಲ್‌ನಲ್ಲಿ ಕೆಲವು ಲೇಖನಗಳನ್ನು ಬರೆದಿರುವ ವಿಷಯ ಸರ್ವವಿದಿತ. ಆದರೆ ಲಂಡನ್ನಿನ ಬ್ರಿಟಿಷ್ ಲೈಬ್ರರಿಯ ಇಂಡಿಯಾ ಆಫೀಸ್ ವಿಭಾಗದಲ್ಲಿ ಈತನೇ ರಚಿಸಿರುವ A Memoir of Service in India' ಎಂಬ ಮತ್ತೊಂದು ಹಸ್ತಪ್ರತಿ ಇದ್ದು ಅದನ್ನು ಪರಿಚಯಿಸುವುದು ಪ್ರಸ್ತುತ ಲೇಖನದ ಉದ್ದೇಶ.

MSS EUR G. 91 ಎಂಬ ಸಂಕೇತವನ್ನು ಹೊಂದಿರುವ ಈ ಕೃತಿಯು Eastern Experiences ಕೃತಿಗಿಂತ ಭಿನ್ನವಾದದ್ದು ಎಂಬುದನ್ನು ಎರಡು ಕಾರಣಗಳಿಂದ ನಿರೂಪಿಸಬಹುದು. ಈಸ್ಟರ್ನ್ ಎಕ್ಸ್‌ಪೀರಿಯೆನ್ಸ್ ೧೮೭೧ರಲ್ಲಿ ಪ್ರಕಟಗೊಂಡಿದ್ದು ಇದರಲ್ಲಿ ಯಾವುದೋ ಚಿತ್ರಗಳಿಲ್ಲ. ಆದರೆ ಪ್ರಸ್ತುತ ಕೃತಿಯನ್ನು ೧೮೭೮ರಲ್ಲಿ ಬರೆದು ಮುಗಿಸಲಾಗಿದೆ ಎಂದು ಪುಸ್ತಕದ ಕೊನೆಯಲ್ಲಿ ನಮೂದಿಸಲಾಗಿದೆ. ಹಾಗೂ ಇದು ಅನೇಕ ಬಗೆಯ ವಸ್ತು-ಚಿತ್ರಗಳಿಂದ ಕೂಡಿ ವಿಶ್ವಕೋಶದ ಸ್ವರೂಪವನ್ನು ಪಡೆದುಕೊಂಡಿದೆ. ೨೭೨ ಹಾಳೆಗಳನ್ನು ಒಳಗೊಂಡಿರುವ ಈ ಪುಸ್ತಕವು ೧೦ ಅಂಗುಲ ಅಗಲ ಮತ್ತು ೧೬.೫ ಅಂಗುಲ ಉದ್ದವಾಗಿದೆ. ಪುಸ್ತಕದ ಬಲಬದಿಯಲ್ಲಿ ಬರಹವನ್ನು ಮತ್ತು ಎಡಬದಿಯಲ್ಲಿ ದಾಖಲೆಗಳನ್ನು ಅಂಟಿಸಲಾಗಿದೆ. ಈ ಕೃತಿಯಲ್ಲಿ ಒಟ್ಟು ನಾಲ್ಕು ಅಧ್ಯಾಯಗಳಿವೆ. ಅವೆಂದರೆ:

1. Early days - 1st service in India
2. Furlough time
3. Reminiscences of a private secretary
4. A Feudatory State.

ಇವುಗಳಲ್ಲಿ ನಾಲ್ಕನೆಯ ಅಧ್ಯಾಯವು ಅತ್ಯಂತ ದೊಡ್ಡದಾಗಿದ್ದು (೯೫ ಪುಟಗಳು) ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದೆ. ಈ ಅಧ್ಯಾಯದಲ್ಲಿ ಮೈಸೂರಿನ ಸಂಕ್ಷಿಪ್ತ ಇತಿಹಾಸ, ಯದುವಂಶದ ರಾಜರ ವಂಶಾವಳಿ; ಮೊಟ್ಟಮೊದಲ ಬಾರಿಗೆ ತಾನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಭೇಟಿ ಮಾಡಿದ್ದು, ಅವರ ಉಡುಗೆ-ತೊಡುಗೆ, ಮಾತುಗಾರಿಕೆಯ ಶೈಲಿ, ದರ್ಬಾರಿನ ಸ್ವರೂಪ ಇತ್ಯಾದಿಗಳನ್ನು ಬೌರಿಂಗ್ ವರ್ಣಿಸಿದ್ದಾನೆ. ತನ್ನ ಸಮಕಾಲೀನ ಅಧಿಕಾರಿಗಳಾದ ಕನ್ನಿಂಗ್ ಹ್ಯಾಂ, ಪಿಯರ್ಸ್, ಡಾಬ್ಸ್, ಟಿ. ಕ್ಲಾರ್ಕ್, ಹೇ, ಜೆ. ಎ. ಕ್ಯಾಂಪ್ ಬೆಲ್, ಡಬ್ಲ್ಯೂ, ಕ್ಯಾಂಪ್ ಬೆಲ್, ಗೊರ್ಡಾನ್ ಸ್ಯಾಂಡರ್ಸ್, ಕೋಲ್, ಸ್ಯಾಂಕಿ, ಬಿ. ಎಲ್. ರೈಸ್, ಹಡ್ಸನ್, ಕ್ರಿಕ್ ಪ್ಯಾಟ್ರಿಕ್ ಕೃಷ್ಣಯ್ಯಂಗಾರ್, ಅರುಣಾಚಲಂ ಮೊದಲಿಯಾರ್, ಸಭಾಪತಿ ಮೊದಲಿಯಾರ್, ಪಿ. ಎನ್. ಕೃಷ್ಣಮೂರ್ತಿ, ಪಿ. ಎನ್. ಪೂರ್ಣಯ್ಯ ಮುಂತಾದವರ ಬಗ್ಗೆ ಸಂಕ್ಷಿಪ್ತವಾದ, ಆದರೆ ಕರಾರುವಾಕ್ಕಾದ ಪರಿಚಯವನ್ನು ಅವರ ಅಪರೂಪದ ಛಾಯಾಚಿತ್ರಗಳೊಡನೆ ಮಾಡಿಕೊಟ್ಟಿದ್ದಾನೆ. ಉದಾಹರಣೆಗೆ ವಿದ್ಯಾಭ್ಯಾಸದ ಇಲಾಖೆಯ ಆಗಿನ ಮುಖ್ಯಸ್ಥರಾಗಿದ್ದ ಬಿ. ಎಲ್. ರೈಸರನ್ನು ಕುರಿತು ಆತ ಆಡಿರುವ ಮಾತುಗಳಿವು-"The other officers of the Commission were Scarely above par or.... of notice, except Mr. L. Rice of Educational department who rose to be its head and successfully promoted popular education. Mr. Rice afterwards rendered Signal Service in deceffering the ancient inscriptions scattered on the country. of which he published an interesting account". (ಪುಟ ೧೮೯). ಗ್ರೋವರ್ ಎಂಬಾತನ 'Folk songs of South India' ದಲ್ಲಿ ಪ್ರಕಟವಾಗಿರುವ ಕನ್ನಡ ಜನಪದ ಗೀತೆಗಳ ಇಂಗ್ಲಿಷ್ ಅನುವಾದ, ಕನ್ನಡ ಭಾಷೆ ಲಿಪಿ, ಮತ್ತು ಶಾಸನಗಳ ಬಗ್ಗೆ ಸಾಕಷ್ಟು ವಿವರವಾದ ಟಿಪ್ಪಣಿಗಳು, ೧೮೫೭ರ ಸಿಪಾಯಿದಂಗೆಯ ಬಗ್ಗೆ ತನ್ನ ಅಭಿಪ್ರಾಯ ಮುಂತಾದವನ್ನು ನಾವಿಲ್ಲಿ ಕಾಣಬಹುದು.

ಬೌರಿಂಗನ ಈ ಕೃತಿಯ ಮಹತ್ವವಿರುವುದು ಬಲಬದಿಯ ಬರಹಗಳಿಗಿಂತ ಹೆಚ್ಚಾಗಿ ಎಡಬದಿಯಲ್ಲಿ ಆತ ಅಂಟಿಸಿರುವ ವೈವಿಧ್ಯಮಯವಾದ ದಾಖಲೆಗಳಲ್ಲಿ. ಅವುಗಳಲ್ಲಿ:

೧. ಸರ್ಕಾರಿ ಆದೇಶಗಳ ಪ್ರತಿಗಳು
೨. ಪತ್ರಿಕಾವರದಿಗಳ ತುಣುಕುಗಳು


* ಮುಖ್ಯಸ್ಥ ಕನ್ನಡ ವಿಭಾಗ, ವಿಜಯ ಪದವಿ ಪೂರ್ವಕಾಲೇಜು, ಆರ್. ವಿ. ರಸ್ತೆ ಬೆಂಗಳೂರು - ೫೬೦ ೦೦೪

೩. ದಂತದ ಫಲಕಗಳ ಮೇಲೆ ಕೆತ್ತಲಾದ ಕುಸುರಿ ಕಲೆಯ ವಸ್ತುಗಳು
೪. ಛಾಯಾಚಿತ್ರಗಳ ಮೂಲ ಹಾಗೂ ಪುನರ್ಮುದ್ರಿತ ಪ್ರತಿಗಳು
೫. ಮೈಸೂರು ಸಂಸ್ಥಾನದ ಏಳು ಜಿಲ್ಲೆಗಳ ಕೈಬರಹದ ವರ್ಣರಂಜಿತ ಭೂಪಟಗಳು
೬. ಅನೇಕಗಣ್ಯರು ಬರೆದ ಪತ್ರಗಳ ಮೂಲಪ್ರತಿಗಳು.

-ಮುಂತಾದವು ಮುಖ್ಯವಾದವು. ಕೊಡಗಿನ ಕಡೆಯ ಅರಸನಾಗಿದ್ದ ಎರಡನೇ ವೀರರಾಜೇಂದ್ರನ ಜಲವರ್ಣ ಚಿತ್ರ, ಆತ ಮೈಸೂರಿನ ರೆಸಿಡೆಂಟ್‌ನಾಗಿದ್ದ ಕ್ಯಾಸಾಮೇಜರನಿಗೆ ಬರೆದ ಕಾಗದದ ಮೂಲಪ್ರತಿ, ಕಾಶ್ಮೀರಿ ಶಾಲುವೊಂದರ ನೇಯ್ಗೆಯ ವಿನ್ಯಾಸದ ಮಾದರಿ ಮುಂತಾದವುಗಳನ್ನು ನಾವಿಲ್ಲಿ ನೋಡ ಬಹುದು.

ಈ ಸಂಗ್ರಹದಲ್ಲಿ ಅನೇಕ ಅಪರೂಪದ ಛಾಯಾಚಿತ್ರಗಳಿವೆ. ಅಜಂತ, ಎಲ್ಲೋರ, ದೆಹಲಿ, ಆಗ್ರಾ, ಲಕ್ನೋ ಮುಂತಾದ ನಗರಗಳ ಚಿತ್ರಗಳು ಇಲ್ಲಿರುವುದು ನಿಜವಾದರೂ ಕರ್ನಾಟಕದ ಇತಿಹಾಸದ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾದುವೆಂದರೆ ೧೮೫೧ರಲ್ಲಿ ಮೇಜರ್ ಡಿಕ್ಸನ್ ಎಂಬಾತ ತೆಗೆದ ಬೇಗೂರು, ಬಳ್ಳಿಗಾವೆ, ಟೇಕಲ್‌ಗಳಲ್ಲಿನ ಶಾಸನಗಳು; ಚಿತ್ರದುರ್ಗದ ಕೋಟೆ, ಗೋಪುರಸಹಿತವಾದ ಬೇಲೂರಿನ ದೇವಾಲಯ, ಕೋಲಾರ, ಶ್ರವಣ ಬೆಳಗೊಳಗಳಲ್ಲಿನ ಶಿಲ್ಪಗಳು ಇತ್ಯಾದಿ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಒಂದು ಅಪರೂಪದ ಭಾವಚಿತ್ರ, ಚಾಮರಾಜ ಒಡೆಯರ್ ಅವರ ಪಟ್ಟಾಭಿಷೇಕ ಮಹೋತ್ಸವದ ದೃಶ್ಯಗಳು, ಮೈಸೂರಿನ ಹಳೆಯ ಅರಮನೆಯ ಭಾಗಗಳು; ೧೯ನೇ ಶತಮಾನದಲ್ಲಿದ್ದ ಪ್ರಮುಖ ಸಾರಿಗೆ ಸೌಕರ್ಯಗಳ ರೇಖಾಚಿತ್ರ ಇವೆಲ್ಲ ಮೈಸೂರಿನ ಇತಿಹಾಸದ ವ್ಯಾಸಂಗಕ್ಕೆ ಪೂರಕವಾಗಬಲ್ಲ ಆಕರಗಳಾಗಿವೆ.

★ ★ ★ ★



(ಕನ್ನಡದ ಕೈ ಮತ್ತು ಕಂಟ ಬರಹಗಳ ಒಂದು ರೂಪ)

ಡಾ|| ಶ್ರೀನಿವಾಸ ಹಾವನೂರ*

ಎಸ್.ಎಲ್. ಶ್ರೀನಿವಾಸ ಮೂರ್ತಿ**

ಹಳೆಗನ್ನಡ ಕೃತಿಗಳ ಪ್ರಕಟಣೆ: ಪಾಶ್ಚಾತ್ಯ ವಿದ್ವಾಂಸರು ಅನುಸರಿಸಿದ ಮಾನದಂಡಗಳು - ಒಂದು ವಿಶ್ಲೇಷಣೆ

ಹಳೆಗನ್ನಡದ ಪ್ರಮುಖ ಕೃತಿಗಳಾದ ಶಬ್ದಮಣಿದರ್ಪಣ, ಕವಿರಾಜಮಾರ್ಗ, ಪಂಪಭಾರತ, ಕಾವ್ಯಾವಲೋಕನ, ಛಂದೋಂಬುಧಿ ಮುಂತಾದವುಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ ಮೊತ್ತ ಮೊದಲಿಗೆ ಪರಿಷ್ಕರಿಸಿ ಪ್ರಕಟಿಸಿದವರು ಪಾಶ್ಚಾತ್ಯ ವಿದ್ವಾಂಸರು. ಆದರೆ ತಾವು ಸಂಗ್ರಹಿಸಿದ ಎಲ್ಲ ಹಸ್ತ ಪ್ರತಿಗಳನ್ನೂ ಅವರು ಮುದ್ರಿಸಹೊರಡದೆ ಕೆಲವು ಕೃತಿಗಳನ್ನಷ್ಟೇ ಆಯ್ದು ಪ್ರಕಟಿಸಿದರೆನ್ನುವುದು ಗಮನಾರ್ಹ ಅಂಶವಾಗಿದೆ. ಈ ಆಯ್ಕೆಯ ಪ್ರಕ್ರಿಯೆಯಲ್ಲಿ ಅವರು ಅನುಸರಿಸಿದ ಮಾನದಂಡಗಳು, ಅವರಿಗೆ ಇದ್ದ ಆದ್ಯತೆಗಳು, ಅಭಿರುಚಿ ಮತ್ತು ಅವಶ್ಯಕತೆಗಳನ್ನು ವಿಶ್ಲೇಷಿಸುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶ.

ಕನ್ನಡ ಪುಸ್ತಕ ಪ್ರಕಾಶನವನ್ನು ಕೈಗೊಂಡ ಪಾಶ್ಚಾತ್ಯರನ್ನು ೧. ಅಧಿಕಾರಿಗಳು ೨. ಧರ್ಮಪ್ರಚಾರಕರು ಮತ್ತು ೩. ಆಸಕ್ತರು ಎಂದು ವರ್ಗೀಕರಿಸಬಹುದು.

ಅಧಿಕಾರಿಗಳು

ಟಿಪ್ಪುವಿನ ಪತನಾನಂತರ ಮೈಸೂರು ಪ್ರಾಂತ್ಯವನ್ನು ಪರಿವೀಕ್ಷಿಸಲು ಯೋಜಿತನಾದ ಕರ್ನಲ್ ಮೆಕೆಂಜಿಯೇ ಕನ್ನಡದ ಅನೇಕ ಹಸ್ತ ಪ್ರತಿಗಳನ್ನು ಸಂಗ್ರಹಿಸಿದನಾದರೂ ಅವುಗಳನ್ನು ಪ್ರಕಟಿಸುವ ಗೋಜಿಗೆ ಹೋಗಲಿಲ್ಲ. ಹಾಗಾಗಿ ವಿಲಿಯಮ್ ಕೇರಿ ಎಂಬಾತ ೧೮೧೭ರಲ್ಲಿ ಪ್ರಕಟಿಸಿದ 'A Grammar of the Kurnata language' ಎಂಬ ಕೃತಿಯೇ ಕನ್ನಡದ ಅಕ್ಷರಗಳುಳ್ಳ ಆದರೆ ಕನ್ನಡಕ್ಕೆ ಸಂಬಂಧಿಸಿದ ಮೊತ್ತಮೊದಲ ಮುದ್ರಿತ ಕೃತಿ. ಇದಾದ ಮೂರು ವರ್ಷದ ನಂತರ ಕೆನರ ಪ್ರಾಂತ್ಯದ ಅಸಿಸ್ಟೆಂಟ್ ಕಮೀಶನರ್ ಆಗಿದ್ದ ಜಾನ್ ಮೆಕ್ಕೆರರ್ ಅದೇ ವಿಷಯದ ಮತ್ತೊಂದು ಕೃತಿಯನ್ನು ಶಬ್ದಮಣಿದರ್ಪಣವನ್ನು ಆಧರಿಸಿ ರಚಿಸಿದ. Unless those who govern be acquainted with the language of the Governed, a set of middle men will arise who will ultimately become the scourges of the country" ಎಂಬ ವಾರನ್ ಹೇಸ್ಟಿಂಗ್ಸನ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ತಾನು ಈ ಕೃತಿಯನ್ನು ರಚಿಸಿರುವುದಾಗಿ ಆತ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾನೆ.

ಮುಂದೆ ಧಾರವಾಡದ ಅಸಿಸ್ಟೆಂಟ್ ಕಲೆಕ್ಟರನಾಗಿದ್ದ ವಾಲ್ಟೇರ್ ಎಲಿಯಟ್ ವೈಯಕ್ತಿಕವಾಗಿ ಶಾಸನಗಳ ಅಧ್ಯಯನ ವನ್ನು ಕೈಗೊಂಡರೂ ಅಧಿಕಾರಿಯಾಗಿ ಬ್ರಿಟಿಷ್ ಆಡಳಿತಗಾರರಿಗೆ ಬೇಕಿದ್ದ ಹೊಸಗನ್ನಡ ವ್ಯಾಕರಣವನ್ನು ರಚಿಸಲು ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನನ್ನು ಪ್ರೋತ್ಸಾಹಿಸಿದ. ಹೀಗೆ ೧೯ನೇ ಶತಮಾನದ ಆದಿಭಾಗದಲ್ಲೇ ಪ್ರಾಚೀನ ಕನ್ನಡ ಹಸ್ತಪ್ರತಿಗಳ ಸಂಗ್ರಹಣ ಕಾರ್ಯ ನಡೆದಿತ್ತಾದರೂ ಅವುಗಳ ಕಾವ್ಯಗುಣ ಪಾಶ್ಚಾತ್ಯ ವಿದ್ವಾಂಸರನ್ನು ಆಕರ್ಷಿಸಿರಲಿಲ್ಲ. ಅವರ ಆಡಳಿತದ ಅಗತ್ಯಗಳಿಗೆ ಬೇಕಿದ್ದ ಪಾರಿಭಾಷಿಕ ಶಬ್ದಗಳನ್ನು, ವಾಕ್ಯರೂಪಗಳನ್ನು ಪಡೆದು ಕೊಳ್ಳಲೆಂದಷ್ಟೇ ಹಳೆಗನ್ನಡ ಕೃತಿಗಳನ್ನು ಬಳಸಿಕೊಂಡರೇ ವಿನಃ ಅದನ್ನು ಯಥಾವತ್ತಾಗಿ ಮುದ್ರಿಸಲಿಲ್ಲ. ೧೮೫೦ರ ನಂತರ ನಾಡಿನಾದ್ಯಂತ ಶಿಕ್ಷಣ ಇಲಾಖೆಯ ಕಾರ್ಯ ಚಟುವಟಿಕೆಗಳು ಆರಂಭವಾದ ಮೇಲೆ ವಿದ್ಯಾರ್ಥಿಗಳ ಸಲುವಾಗಿ ಪ್ರಾಚೀನ ಕನ್ನಡ ಕೃತಿಗಳನ್ನು ಇಡಿಯಾಗಿಯೋ ಅಥವಾ ಖಂಡ ಖಂಡವಾಗಿಯೋ ಪ್ರಕಟಿಸುವ ಪದ್ಧತಿ ಪ್ರಾರಂಭವಾಯಿತು. ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಮೊತ್ತಮೊದಲ ನಿರ್ದೇಶಕನಾಗಿದ್ದ ಜಾನ್ ಗ್ಯಾರೆಟ್ ೧೮೬೮ರಲ್ಲಿ 'ಶಬ್ದಮಣಿ ದರ್ಪಣ'ವನ್ನು ಹೀಗೆ ಇಡಿಯಾಗಿ ಪ್ರಕಟಿಸಿದನು. ಗ್ಯಾರೆಟ್ಟನ ಪರಪಂರೆಯೇ ನಂತರ ಮುಂದುವರೆಯಿತು.

ಧರ್ಮ ಪ್ರಚಾರಕರು

ಕ್ರೈಸ್ತಧರ್ಮವನ್ನು ಪ್ರಚಾರಮಾಡಲೆಂದು ಬಂದ ಪಾಶ್ಚಾತ್ಯ ಮಿಷನರಿಗಳು ಹಿಂದೂ ಧಾರ್ಮಿಕ ಕೃತಿಗಳನ್ನು ಪರಿಶೋಧಿಸಿ ಪ್ರಕಟಿಸಿದ ಸೋಜಿಗದ ಪ್ರಸಂಗಗಳಿವೆ. ಆದರೆ ಈ ಪ್ರಕಟಣೆಯ ಹಿಂದಿನ ಉದ್ದೇಶ ಕ್ರೈಸ್ತಮತ ಪ್ರಚಾರಕ್ಕೆ ಬೇಕಾಗಿದ್ದ ಅನುಕೂಲತೆ ಗಳನ್ನು ಕಲ್ಪಿಸಿಕೊಳ್ಳುವುದಾಗಿತ್ತೇ ವಿನಃ ಧರ್ಮ ಸಹಿಷ್ಣುತೆಯಲ್ಲ.

* ಕರ್ನಾಟಕ ಥಿಯಲಾಜಿಕಲ್ ಕಾಲೇಜು, ಬಲ್ಮಠ, ಮಂಗಳೂರು

** ಉಪನ್ಯಾಸಕ, ವಿಜಯ ಪದವಿಪೂರ್ವ ಕಾಲೇಜು, ಆರ್. ವಿ. ರಸ್ತೆ ಬಸವನಗುಡಿ, ಬೆಂಗಳೂರು

ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳ ಅಧ್ಯಯನ ಮತ್ತು ಪ್ರಕಾಶನವನ್ನು ಕೈಗೊಳ್ಳಲು ಮಿಷನರಿಗಳಿಗೆ ಇದ್ದ ಕಾರಣಗಳು ಪ್ರಮುಖವಾಗಿ ಎರಡು.

೧. ಬೈಬಲ್‌ನ ಅನುವಾದಕ್ಕೆ ಶಬ್ದ ಸಂಪತ್ತಿಯ ಸಂಗ್ರಹ

ರೀವ್, ಕಿಟೆಲ್, ಮುಂತಾದ ಪಾಶ್ಚಾತ್ಯ ವಿದ್ವಾಂಸರು ಹಳೆಗನ್ನಡ ಕೃತಿಗಳನ್ನು ಮುಖ್ಯವಾಗಿ ಅಭ್ಯಸಿಸಿದ್ದು ಬೈಬಲ್ ಮತ್ತಿತರ ಮತ ಸಂಬಂಧಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಲು ಅಗತ್ಯವಾದ ನಿಘಂಟನ್ನು ಸಿದ್ಧ ಪಡಿಸಲು. ಉದಾಹರಣೆಗೆ ರೀವ್ ತನ್ನ ಇಂಗ್ಲಿಷ್-ಕನ್ನಡ ಕೋಶವನ್ನು ರಚಿಸಲೆಂದು ಅಮರಕೋಶ, ಕರ್ನಾಟಕ ಶಬ್ದಮಂಜರಿ, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ ಮುಂತಾದ ಪ್ರಾಚೀನ ಕೋಶಗಳನ್ನು ಅವಲೋಕಿಸಿದ್ದಾನೆ. ಇಷ್ಟೆಲ್ಲಾ ಶ್ರಮವಹಿಸಿ ನಿಘಂಟನ್ನು ಸಿದ್ಧಗೊಳಿಸಿರುವುದು ನಿಜವಾದರೂ ಅದರ ಹಿಂದಿನ ಉದ್ದೇಶ ಏನೆಂಬುದನ್ನು ಇಂತಹುದೇ ಒಂದು ಕೋಶವನ್ನು ಮರಾಠಿಯಲ್ಲಿ ರಚಿಸಿದ ಮೋಲ್ಸ್ ವರ್ಥ್ ತನ್ನ ಪೀಠಿಕೆಯಲ್ಲಿ ಹೀಗೆ ವಿವರಿಸಿದ್ದಾನೆ. "It was undertaken not from a thirst after honour or emolument, but from an humble desire of promoting the propagation of the glorious Gospel. and it was continued by the energy of this desire, through sickness and weakness and against trouble and difficulties and grievous discouragement."[೧] ಬ್ರಿಟೀಷ್ ಆಡಳಿತ ಯಂತ್ರಕ್ಕೂ ಇಂತಹ ಶಬ್ದಕೋಶಗಳ ಅವಶ್ಯಕತೆ ಇದ್ದುದರಿಂದ ಅದು ಮಿಷನರಿಗಳ ಈ ಕಾರ್ಯಕ್ಕೆ ಬೆಂಬಲ ನೀಡಿತು.

೨. ದೇಶೀಯ ಕಾವ್ಯಗಳ ಛಂದಸ್ಸಿನಲ್ಲಿ ಕ್ರೈಸ್ತ ಸಾಹಿತ್ಯ ರಚನೆ

ದೇಶೀಯರಿಗೆ ಪರಿಚಿತವಾಗಿರುವ ಛಂದಸ್ಸಿನಲ್ಲಿಯೇ ಕ್ರೈಸ್ತ ಸಾಹಿತ್ಯವನ್ನು ರಚಿಸಿದರೆ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂಬ ಅಂಶದ ಹಿನ್ನೆಲೆಯಿಂದಲೂ ಕನ್ನಡ ಕಾವ್ಯಗಳನ್ನು ಮಿಷನರಿಗಳು ಅಭ್ಯಸಿಸಿದ್ದಿದೆ. ಈ ನಿಟ್ಟಿನಲ್ಲಿ ಮೊದಲು ಚಿಂತಿಸಿದವನೆಂದರೆ ಕಿಟೆಲ್. ಆತ Indian Evangelical Review ನ ಮೊದಲ ಸಂಪುಟದಲ್ಲಿ (೧೮೭೪)ರ ಬರೆದ 'Notes on Indian poetry and prosody' ಎಂಬ ಲೇಖನದಲ್ಲಿ "This writer's long-cherished wish is that Hindu prosody and music should be taught in all native Christian Schools, so that time may come when highly gifted youths, will enabled to compose poems" ಎಂದಿದ್ದಾನೆ.[೨] ಅಷ್ಟೇ ಅಲ್ಲದೆ ತನ್ನ 'ಕಥಾಮಾಟ' ಎಂಬ ಕೃತಿಯಲ್ಲಿ (೧೮೬೨) ೨೭೮ ಭಾಮಿನಿ ಮತ್ತು ೭೩ ವಾರ್ಧಕ ಷಟ್ಪದಿಗಳನ್ನು ಮತ್ತು ೧೭೪ ಪೂರ್ವೀರಾಗದ ಹಾಡುಗಳನ್ನೂ ರಚಿಸಿದ್ದಾನೆ.

ಕಿಟೆಲ್ ಶಬ್ದಮಣಿ ದರ್ಪಣ, ಛಂದೋಂಬುಧಿ ಮುಂತಾದ *ಪ್ರಾಚೀನ ಕೃತಿಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಮುದ್ರಿಸಿದನಾದರೂ ಹಿಂದೂ ಪರಂಪರೆಯ ಬಗ್ಗೆ ಆತನಿಗೆ ಆದರವೇನಿರಲಿಲ್ಲ.* ಭಾರತೀಯ ಪೌರಾಣಿಕ ಕಲ್ಪನೆಗಳು, ಮಿಥಿಕಗಳು, ಕವಿ ಸಮಯಗಳು ಅವನಿಗೆ ಅರ್ಥಹೀನವಾಗಿ ತೋರಿದವು. ಛಂದೋಂಬುಧಿಯನ್ನು ಸಂಪಾದಿಸುವಾಗ ಅವನು ಹಸ್ತಪ್ರತಿಗಳಲ್ಲಿದ್ದ ದೇವತಾಸ್ತುತಿಯ ಎಲ್ಲ ಪದ್ಯಗಳನ್ನೂ ಕೈಬಿಟ್ಟಿದ್ದಾನೆ. ಈ ಕುರಿತು ಆರ್. ನರಸಿಂಹಾಚಾರ್ಯರು ಪ್ರತಿಕ್ರಿಯಿಸುತ್ತಾ "It is a matter to be deeply regretted that Kittel who is one of the pioneers in the field of Kannada Language and Literature and to whose labour we owe the first publication of 'Chandombudhi' as of several other important works, has, in his solitude for leaving out everything that savoured of superstition and containing any thing adding to Hindu mythology, omitted in his edition of the above work." ಎಂದಿದ್ದಾರೆ.[೩]

ಆಸಕ್ತರು

ವೃತ್ತಿಯಿಂದ ಅಧಿಕಾರಿಗಳೋ ಅಥವಾ ಧರ್ಮ ಪ್ರಚಾರಕರೋ ಆಗಿದ್ದು ಮೊದಮೊದಲಿಗೆ ಸ್ವಂತ ಉದ್ದೇಶಗಳಿಂದ ಪ್ರಾಚೀನ ಕಾವ್ಯಗಳನ್ನು ಅಭ್ಯಸಿಸಲು ಆರಂಭಿಸಿ ನಂತರ ಅದರಲ್ಲಿಯ ಸತ್ವವನ್ನು ಕಂಡುಕೊಂಡು ಅವುಗಳ ಪ್ರಕಟಣೆಯನ್ನು ಮನಃಪೂರ್ವಕವಾಗಿ ಮಾಡಿದವರನ್ನು ಈ ಗುಂಪಿಗೆ ಸೇರಿಸಬಹುದು.

ಉದಾಹರಣೆಗೆ 'ಬಿಬ್ಲಿಯಾಥೆಕಾ ಕರ್ನಾಟಿಕ'ಮಾಲೆಯನ್ನು ಆರಂಭಿಸಿದ ಮೊಗ್ಲಿಂಗನನ್ನೇ ಪರಿಗಣಿಸಬಹುದು. ಧರ್ಮ ಪ್ರಚಾರಕನಾಗಿ ಮಂಗಳೂರಿಗೆ ಬಂದ ಆತ ಕ್ಯಾಸಮೇಜರ್ ಎಂಬ ಆಂಗ್ಲ ನಿವೃತ್ತ ನ್ಯಾಯಾಧೀಶನ ಉತ್ತೇಜನದಿಂದ ಹಳೆಗನ್ನಡ ಕೃತಿಗಳ ಪ್ರಕಟಣೆಯನ್ನು ಆರಂಭಿಸಿದ* ಕೆಸಮೇಜರ್ ಕೇಟಿಯಲ್ಲಿ ಇದ್ದುಕೊಂಡೇ ಪತ್ರಮುಖೇನ ಮಂಗಳೂರಿನಲ್ಲಿದ್ದ ಮೊಗ್ಲಿಂಗನಿಗೆ ಹಳೆಗನ್ನಡ ಕಾವ್ಯಗಳನ್ನು ಪ್ರಕಟಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ನಿರ್ದೇಶಿಸಿದ್ದಾನೆ. ಆತ ತನ್ನೊಂದು ಪತ್ರದಲ್ಲಿ ' Do you think that a proper person could by employed who would go about the canarese country, who would collect good manscripts?' ಎಂದು ವಿಚಾರಿಸಿದ್ದಾನೆ.[೪] ಆತ ತನ್ನ ಸ್ವಂತ ಖರ್ಚಿನಲ್ಲಿ ಮೊದಲಿಗೆ ಲಕ್ಷ್ಮೀನರಸಿಂಹಯ್ಯ ಎಂಬಾತನನ್ನು, ನಂತರ ಆನಂದರಾವ್

ಎಂಬುವವನನ್ನು ಶುದ್ಧಪಾಠವನ್ನು ಪ್ರತಿಮಾಡುವ ಸಲುವಾಗಿಯೇ ಮೊಗ್ಲಿಂಗನಿಗೆ ನೇಮಿಸಿಕೊಟ್ಟಿದ್ದ! ಕೇಸಮೇಜರನ ಬೆಂಬಲ, ಮಾರ್ಗದರ್ಶನದಿಂದಾಗಿಯೇ ಮೊಗ್ಲಿಂಗ್ ಜೈಮಿನಿಭಾರತ, ತೊರವೆ ರಾಮಾಯಣ, ಹರಿಭಕ್ತಿಸಾರ, ಕುಮಾರವ್ಯಾಸಭಾರತ, ಬಸವ ಪುರಾಣ, ಚನ್ನಬಸವ ಪುರಾಣಗಳಂತಹ ಪ್ರಾಚೀನ ಕೃತಿಗಳನ್ನು ಪ್ರಕಟಿಸುವುದು ಸಾಧ್ಯವಾಯಿತು.

'Missions of south India' ಎಂಬ ಗ್ರಂಥವನ್ನು ಬರೆದ ಮುಲೆನ್ಸ್ ಎಂಬುವನೇನೋ ಮೊಗ್ಲಿಂಗನ ಈ ಪ್ರಯತ್ನದ ಬಗ್ಗೆ ".... the missionaries have been printing for a considerable time numerous selections from the classical Canarese literature. The object of this little library called Bibliotheca Carnatica is to furnish the missinaries, the cate chists and scholars with complete materials for mastering the languange and for meeting idolatry, on its own ground" ಎಂದಿರುವುದು.[೫] ದಿಟವೇ. ಆದರೆ "What a joy to look through the ruins of the former Kanerese intellectual world and to free the body of the language from its dusty, smokey, dirty grove of palm leaves and scraps of paper"[೬] ಎಂಬ ಮನೋಧರ್ಮವನ್ನು ಇಟ್ಟುಕೊಂಡಿದ್ದ. ಮೊಗ್ಲಿಂಗ್ ಕೇವಲ ಧರ್ಮ ಪ್ರಚಾರದ ಸಲುವಾಗಿ ಇಷ್ಟೆಲ್ಲಾ ಕಷ್ಟಪಟ್ಟನೆನ್ನುವುದು ಸ್ವಲ್ಪ ಕಷ್ಟವೇ. ೧೮೪೬ರಷ್ಟು ಹಿಂದೆಯೇ ಜರ್ಮನ್ ಭಾಷೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದ ವೈಗಲ್, 'ಪ್ರಾಕ್ಕಾವ್ಯ ಮಾಲಿಕೆ' ಎಂಬ ಹಳೆಗನ್ನಡ ಪದ್ಯ ಸಂಕಲನವನ್ನು ಸಂಕಲಿಸಿದ್ದು, ಮಾತ್ರವಲ್ಲದೆ ಬಸವ ಪುರಾಣ ಮತ್ತು ಚನ್ನಬಸವ ಪುರಾಣಗಳ ಸುದೀರ್ಘ ಕಥಾಸಾರವನ್ನು J.R.A.S. ನಲ್ಲಿ ಪ್ರಕಟಿಸಿದ (೧೮೬೫) ವುರ್ತ್ ಮುಂತಾದ ಮಿಷನರಿಗಳೂ ಇದೇ ಮನೋಭೂಮಿಕೆಯವರೆನ್ನಬಹುದು.

ಇಂತಹುದೇ ಮನೋವೃತ್ತಿಯನ್ನು ನಾವು ಬಿ. ಎಲ್. ರೈಸ್ ಎಂಬ ಆಂಗ್ಲ ಅಧಿಕಾರಿಯಲ್ಲೂ ಕಾಣಬಹುದು. ವಿದ್ಯಾಭ್ಯಾಸದ ಇಲಾಖೆಯ ಮುಖ್ಯಸ್ಥನಾಗಿ ವಿದ್ಯಾರ್ಥಿಗಳಿಗೆ ಬೇಕಾಗಿದ್ದ 'ಕಾವ್ಯಸಾರ' ದಂತಹ ಸಂಗ್ರಹಗಳನ್ನು ಆತ ಸಿದ್ಧಪಡಿಸಿದ್ದು ಹೌದಾದರೂ 'ಬಬ್ಲಿಯಾಥೆಕಾ ಕರ್ನಾಟಕ' ಮಾಲೆಯನ್ನು ಪ್ರತ್ಯೇಕವಾಗಿ ಆರಂಭಿಸಿ ಕೆ. ಬಿ. ಪಾಠಕ್, ಆರ್. ನರಸಿಂಹಾಚಾರ್ಯ, ರಾಮರಾವ್ ಮುಂತಾದ ದೇಶೀಯ ವಿದ್ವಾಂಸರ ನೆರವಿನಿಂದ ಪಂಪರಾಮಾಯಣ, ಕವಿರಾಜಮಾರ್ಗ, ಪಂಪಭಾರತ, ಕಾವ್ಯಾವಲೋಕನ, ಭಾಷಾಭೂಷಣ ಮುಂತಾದ ಕೃತಿಗಳನ್ನೂ ಹೊರತಂದಿದ್ದನ್ನು ಮರೆಯುವಂತಿಲ್ಲ. ಕಿಟೆಲ್ ನಿಘಂಟನ್ನು ಕೊಳ್ಳಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡುತ್ತಾ ರೈಸರು ತಮ್ಮ ವರದಿಯಲ್ಲಿ "ಸರ್ಕಾರವು ಕೇವಲ ಈ ನಿಘಂಟು ಮಾತ್ರವಲ್ಲದೆ ಕನ್ನಡದ ಪ್ರಾಚೀನ ಕೃತಿಗಳನ್ನು ಮುದ್ರಿಸಲು ಒಂದು ಶಾಶ್ವತವಾದ ನಿಧಿಯನ್ನು ಸ್ಥಾಪಿಸಬೇಕು. ಇಲ್ಲದಿದ್ದರೆ ಈ ರೀತಿಯ ಅನೇಕ ಕೃತಿಗಳು ಈಗ ವಿನಾಶದ ಅಂಚಿನಲ್ಲಿದ್ದು ದೇಶೀಯ ಸರ್ಕಾರವು ಸ್ಥಾಪನೆಯಾಗುವ ವೇಳೆಗೆ ಬಹುಶಃ ಅವು ಶಾಶ್ವತವಾಗಿ ಬೆಳಕು ಕಾಣದೆಯೇ ಹೋಗಿಬಿಡುವ ಸಾಧ್ಯತೆಗಳಿವೆ" ಎಂದಿದ್ದಾರೆ.[೭] ಈ ಮಾತುಗಳು ಕನ್ನಡ ಸಾಹಿತ್ಯದ ಬಗ್ಗೆ ಅವರಿಗಿದ್ದ ಆದರದ ದ್ಯೋತಕವಾಗಿದೆ.

ಹೀಗೆ ಪಾಶ್ಚಾತ್ಯ ವಿದ್ವಾಂಸರು ಮೊದಲಿಗೆ ಸ್ವಂತ ಉದ್ದೇಶಕ್ಕಾಗಿ ಹಳೆಗನ್ನಡ ಕೃತಿಗಳನ್ನು ಮುದ್ರಿಸಿದರಾದರೂ ಸಾಹಿತ್ಯವನ್ನು ಸಾಹಿತ್ಯಕ ಕಾರಣಗಳಿಗಾಗಿಯೇ ಮೆಚ್ಚುವಂತಹ ವಿದ್ವಾಂಸರಿಂದಾಗಿ ಉತ್ತಮ ಹಳೆಗನ್ನಡ ಕೃತಿಗಳು ಬೆಳಕು ಕಂಡವು. ಇಲ್ಲಿ ಉದ್ಭವಿಸುವ ಮತ್ತೊಂದು ಕುತೂಹಲಕಾರಿ ಪ್ರಶ್ನೆಯೆಂದರೆ ೧೯ನೇ ಶತಮಾನದ ಅನಂತರ ಏಕೆ ಯಾವ ಪಾಶ್ಚಾತ್ಯ ವಿದ್ವಾಂಸರೂ ಹಳೆಗನ್ನಡ ಕೃತಿಗಳ ಪ್ರಕಟಣೆಯನ್ನು ಮುಂದುವರೆಸಲಿಲ್ಲ? ಎಂಬುದು. ಏಕೆಂದರೆ ಸರಿಸುಮಾರಾಗಿ ೨೦ನೇ ಶತಮಾನದ ಆದಿಭಾಗದಿಂದ ಯಾವುದೇ ಗಮನಾರ್ಹವಾದ ಸಾಹಿತ್ಯ ಕೃತಿ ಪಾಶ್ಚಾತ್ಯ ವಿದ್ವಾಂಸರಿಂದ ಸಂಪಾದಿತವಾಗಿಲ್ಲ ಎಂಬುದು ಗಣನೀಯ ಅಂಶ. ಈ ಸ್ಥಿತ್ಯಂತರವನ್ನು ಹೀಗೆ ವಿಶ್ಲೇಷಿಸಬಹುದು.

೧. ಪಾಶ್ಚಾತ್ಯ ಮಾದರಿಯ ಶಿಕ್ಷಣ ಕ್ರಮ ನಮ್ಮಲ್ಲಿ ಜಾರಿಗೆ ಬಂದದ್ದು ೧೮೫೦ರ ಸುಮಾರಿಗೆ. ಈ ಪದ್ಧತಿಯಲ್ಲಿ ಕಲಿತ ಬಹುಪಾಲು ಮಂದಿ ಭಾರತೀಯರು ೧೯ನೇ ಶತಮಾನದ ಕೊನೆಯ ವೇಳೆಗೆ ಪಾಶ್ಚಾತ್ಯ ವಿದ್ವಾಂಸರ ಚಿಂತನಕ್ರಮ ಕಾರ್ಯ ವಿಧಾನವನ್ನು ಕಲಿತು ತಾವು ಸ್ವತಃ ಅದನ್ನು ಪ್ರಯೋಗಿಸುವ ಹಂತವನ್ನು ತಲುಪಿದ್ದರು. ಹೀಗಾಗಿ ಪಾಶ್ಚಾತ್ಯ ವಿದ್ವಾಂಸರು ಆರಂಭಿಸಿದ್ದ ಹಸ್ತಪ್ರತಿ ಸಂಗ್ರಹಣೆ, ಗ್ರಂಥಸಂಪಾದನೆ, ಕೋಶ ನಿರ್ಮಾಣ ಶಾಸನಾಧ್ಯಯನ ಮುಂತಾದ ಸಂಸತಿ ಸಂಬಂಧಿಯಾದ ಕ್ಷೇತ್ರಗಳಲ್ಲಿ ಆಸಕ್ತರಾದ ಭಾರತೀಯ ತರುಣರ ಒಂದು ಗುಂಪು ಸಿದ್ಧವಾಯಿತು. ಆರ್. ನರಸಿಂಹಾಚಾರ್ಯ, ಎಂ. ಎ. ರಾಮಾನುಜಯ್ಯಂಗಾರ್, ಎಸ್. ಜೆ. ನರಸಿಂಹಾಚಾರ್ಯ, ಕೆ.ಬಿ ಪಾಠಕ್ ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

೨. ಪಾಶ್ಚಾತ್ಯ ವಿದ್ವಾಂಸರು ಕನ್ನಡ ಭಾಷೆ, ಸಾಹಿತ್ಯಗಳ ಬಗೆಗೆ ಸಾಕಷ್ಟು ಜ್ಞಾನವನ್ನು ಹೊಂದಿದ್ದರಾದರೂ ಭಾರತೀಯ ವಿದ್ವಾಂಸರ ನೆರವಿಲ್ಲದೆ ಪ್ರಾಚೀನ ಕನ್ನಡ ಕೃತಿಗಳನ್ನು ಪರಿಷ್ಕರಿಸಿ

ಪ್ರಕಟಿಸುವುದು ಕಷ್ಟಸಾಧ್ಯವಾಗಿತ್ತು. **ಭಾರತೀಯ ವಿದ್ವಾಂಸರೇ ನೇರವಾಗಿ ಗ್ರಂಥಸಂಪಾದನೆಯ ಕಾರ್ಯಕ್ಕೆ ತೊಡಗಿದಾಗ ಪಾಶ್ಚಾತ್ಯರು ಸದ್ದಿಲ್ಲದೆ ಈ ಉದ್ಯಮದಿಂದ ಹಿಂದೆ ಸರಿಯುವುದು ಅನಿವಾರ್ಯವಾಯಿತು.** ಅವರಲ್ಲಿ ಉದಾರಿಗಳಾದ ಪಾಶ್ಚಾತ್ಯ ವಿದ್ವಾಂಸರು ಕೆಲವರು ದೇಶೀಯ ವಿದ್ವಾಂಸರ ಪ್ರತಿಭೆಯನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸಿದ್ದೂ ಇದೆ. ಉದಾಹರಣೆಗೆ ಬಿ. ಎಲ್. ರೈಸರು ತಮ್ಮಲ್ಲಿದ್ದ ಅನೇಕ ಕೃತಿಗಳ ಹಸ್ತಪ್ರತಿಗಳನ್ನು ಎಂ. ಎ. ರಾಮಾನುಜಯ್ಯಂಗಾರ್‌ರಿಗೆ ನೀಡಿ ಅವು ಕರ್ನಾಟಕ ಕಾವ್ಯಮಂಜರಿ ಮಾಲೆಯಲ್ಲಿ ಪ್ರಕಟವಾಗಲು ನೆರವಾದರು.

೩. ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಕೇವಲ ಸರ್ಕಾರ ಮತ್ತು ಮಿಷನರಿಗಳ ವಶದಲ್ಲಿದ್ದ ಮುದ್ರಣ ಯಂತ್ರಗಳು ಕಾಲಕ್ರಮೇಣ ಖಾಸಗಿ ಜನರನ್ನೂ ತಲುಪಿದವು. ಚಾಮುಂಡೇಶ್ವರಿ ಪ್ರೆಸ್, ಗ್ರಾಜುಯೇಟ್ ಟ್ರೇಡಿಂಗ್ ಅಸೋಸಿಯೇಷನ್, ವಾಗೀಶ್ವರಿ ಪ್ರೆಸ್, ಸದ್ವಿದ್ಯಾಮಂದಿರ, ಸ್ಟಾರ್ ಪ್ರೆಸ್ ಮುಂತಾದ ಪ್ರಖ್ಯಾತ ಮುದ್ರಣಾಲಯಗಳಿಂದ ಅನೇಕ ಕೃತಿಗಳು ಪಾಠ ಪರಿಷ್ಕರಣಗೊಂಡು ಹೊರಬರತೊಡಗಿದವು. ಉದಾಹರಣೆಗೆ ಹೊಳಕಲ್ಲು ನರಸಿಂಹಯ್ಯನವರ ವಿಚಾರದರ್ಪಣ ಮುದ್ರಣಾಲಯದಲ್ಲಿ ಮೊಳೆ ಜೋಡಿಸುತ್ತಿದ್ದವರು ವಿದ್ವಾಂಸರಾಗಿದ್ದು ಅವರಿಗೆ ಗೋವಿನ ಕಥೆ, ಜೈಮಿನಿ ಭಾರತ, ಗದುಗಿನ ಭಾರತ ಮುಂತಾದ ಕಾವ್ಯಗಳು ಮುಖ್ಯವಾಗಿದ್ದುದರಿಂದ ಅವರು ಪ್ರಕಟಿಸುತ್ತಿದ್ದ ಕೃತಿಗಳು ಶುದ್ಧಪಾಠಕ್ಕಾಗಿ ಹೆಸರಾಗಿದ್ದವು ಎಂದು ಡಿ. ವಿ. ಗುಂಡಪ್ಪನವರು ಜ್ಞಾಪಿಸಿಕೊಂಡಿದ್ದಾರೆ.[೮] ಹೀಗೆ ಗ್ರಂಥ ಸಂಪಾದನಾಶಾಸ್ತ್ರವನ್ನು ಕನ್ನಡದಲ್ಲಿ ಪಾಶ್ಚಾತ್ಯ ವಿದ್ವಾಂಸರೇ ರೂಢಿಗೆ ತಂದರಾದರೂ ಒಂದು ಹಂತ ದಾಟಿದ ಮೇಲೆ ದೇಶೀಯ ವಿದ್ವಾಂಸರು ಅದನ್ನು ತಮ್ಮದಾಗಿಸಿಕೊಂಡರು.

ಇದೇ ಸಮಯದಲ್ಲಿ ವಿವೇಕಾನಂದ, ದಯಾನಂದ ಸರಸ್ವತಿ, ತಿಲಕ್ ಮುಂತಾದವರ ವಿಚಾರಧಾರೆಗಳಿಂದ ಪ್ರಭಾವಿತರಾದ ನಾಡಿನ ಯುವಜನತೆ ತಮ್ಮ ಮಾತೃಭೂಮಿಯ ಸಾಂಸತಿಕ ಪರಪಂರೆಯನ್ನು ಉಳಿಸಿ ಬೆಳೆಸುವ ಬಗ್ಗೆ ಚಿಂತಿಸಲು ಆರಂಭಿಸಿದ್ದರಿಂದ ಇಪ್ಪತ್ತನೇ ಶತಮಾನದ ಪೂರ್ವಾರ್ಧದ ವೇಳೆಗೆ ಪಾಶ್ಚಾತ್ಯ ವಿದ್ವಾಂಸರು ಕನ್ನಡದ ಪ್ರಾಚೀನ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವ ಕಾರ್ಯದಿಂದ ಪೂರ್ಣವಾಗಿ ಹಿಂದೆ ಸರಿದರೆಂದು ನಿರ್ಣಯಿಸಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಹಾವನೂರ, ಶ್ರೀನಿವಾಸ., (೨೦೦೦ ದ್ವಿ. ಮು) **ಹೊಸಗನ್ನಡದ ಅರುಣೋದಯ**, ಪು. ೧೪.
೨. ಅಲ್ಲೇ., ಪು. ೬೦೧.
೩. ಅಲ್ಲೇ., ಪು. ೬೦೧, ೬೦೨.
* ಮೊಗ್ಲಿಂಗ್ ಮತ್ತು ಕೆಸಮೇಜರ್‌ರ ಬಗ್ಗೆ ಹೆಚ್ಚಿನ ವಿವರಗಳಿಗೆ '**ಇತಿಹಾಸದರ್ಶನ**'ದ ೧೭ನೇ ಸಂಪುಟದಲ್ಲಿರುವ, 'ಮೊಗ್ಲಿಂಗನಿಗೆ ನೆರವಾದ ಕೆಸಮೇಜರ್ ಯಾರು?' ಎಂಬ ಲೇಖನವನ್ನು ಗಮನಿಸಿ.
೪. ದಿನಾಂಕ ೧೦.೭.೧೮೨೮ ರಂದು ಕೇಟಿಯಿಂದ ಬರೆದ ಪತ್ರ.
೫. ಹಾವನೂರ, ಶ್ರೀನಿವಾಸ, ಪೂರ್ವೋಕ್ತ., ಪು. ೧೧೮
೬. Gundert, Hermann., (Tr. 1997) *Herrmann Moegling* P. 157.
೭. ಹಾವನೂರ, ಶ್ರೀನಿವಾಸ ಮತ್ತು ಮೂರ್ತಿ, ಶ್ರೀನಿವಾಸ (೨೦೦೧)., 'ಬೆಂಜಮಿನ್ ಲೂಯಿರೈಸ್', **ಸಾಲುದೀಪಗಳು**, ಪು. ೭.
೮. ಗುಂಡಪ್ಪ, ಡಿ.ವಿ. (೧೯೯೬) **ಡಿವಿಜಿ ಕೃತಿ ಶ್ರೇಣಿ** (ಸಂ.-೬) **ಪು. ೨೬೭. ೨೬೮.**

ಡಾ॥ ಬಿ. ಲೀಲಾ*

ರೊನಾಲ್ಡ್‌ರಾಸ್ ಮತ್ತು ಅವರ ಮೈಸೂರಿನ ಸಂಬಂಧ

ಟಿಪ್ಪೂವಿನ ಪತನದ ನಂತರ (೧೭೯೯) ಬ್ರಿಟೀಷರು ಶ್ರೀರಂಗ ಪಟ್ಟಣದಲ್ಲಿ ಬೀಡುಬಿಟ್ಟಿದ್ದ ಸೈನ್ಯವನ್ನು ಬೆಂಗಳೂರಿನ ಪೂರ್ವಕ್ಕೆ ವರ್ಗಾಯಿಸಿದ್ದು, ಇವನ್ನು ಮಾರ್ಕ್ವಿಸ್ ವೆಲ್ಲೆಸ್ಲಿಯು ನೀರಿನ ಕಾರಣಕ್ಕಾಗಿ ವಿರೋಧಿಸಿದ್ದು ಮತ್ತು ವೈಸರಾಯ್ ವೆಲ್ಲಸ್ಲಿಯು ಇಂಡಿಯಾದಿಂದ ಹೊರಟು ಹೋದ ಮೇಲೆ (೧೮೦೯) ಪೂರ್ತಿಯಾಗಿ ಬೆಂಗಳೂರಿಗೆ ಶ್ರೀರಂಗಪಟ್ಟಣದಿಂದ ಸೇನೆಯನ್ನು ಸ್ಥಳಾಂತರಿಸಿದ್ದೂ ವಿದಿತವಾಗಿದೆ.[೧]

ಬೆಂಗಳೂರಿಗೆ ಸೇರಿದ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ರಕ್ಷಣಾಸ್ಥಾನವು ಇಂಡಿಯಾ ಸರ್ಕಾರದ ಅಧೀನದಲ್ಲಿದ್ದು ಮೈಸೂರು ಸಂಸ್ಥಾನದಲ್ಲಿ ಬ್ರಿಟೀಷ್ ರೆಸಿಡೆಂಟರು ಖುದ್ದಾಗಿ ಅದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ೧೮೯೧ರಲ್ಲಿ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್‌ನಲ್ಲಿ ೧,೦೦೦೮೧ ಜನರಿದ್ದರು.[೨] ಇದರಲ್ಲಿ ಸುಮಾರು ೫೦,೦೦೦ ಜನ ನಾಗರೀಕರಿದ್ದರು. ಮತ್ತು ರಕ್ಷಣಾ ಸೈನ್ಯವಿತ್ತು. ೧೮೮೧ರ ಸ್ಥಳಾಂತರ ಕಾಯ್ದೆಯ ಪ್ರಕಾರ ಕನ್ಟೋನ್‌ಮೆಂಟ್ ಜಾಗವನ್ನು ಮೈಸೂರಿನ ಮಹಾರಾಜರು ಬ್ರಿಟೀಷರಿಗೆ ಹಸ್ತಾಂತರಿಸಿದರು. ಆಗಿನಿಂದ ಇದು Civil and Military station, Bangalore ಎನ್ನಿಸಿ, ಈ ಮೇಲ್ವಿಚಾರಣೆ ಬರುವ ತನಕ ಮುಂದುವರಿಯಿತು. ಮೈಸೂರಿನ ರೆಸಿಡೆನ್ಸಿ ಭಾರತದ ಸ್ವಾತಂತ್ರ್ಯ (೧೯೪೭) ಕಡಿತಗಳನ್ನು ಪರಿಶೀಲಿಸಿದಾಗ, ನಮಗೆ ಹಲವಾರು ಬ್ರಿಟೀಷ್ ಹಿತೈಷಿಗಳು ಕಂಡುಬರುತ್ತಾರೆ. ಬೆಂಗಳೂರಿನ ಸ್ವಚ್ಛತೆ ಬಗ್ಗೆ ಕಾಳಜಿವಹಿಸಿ ತಮ್ಮ ಅವಧಿಯಲ್ಲಿ ತಮ್ಮ ಕೆಲಸದಲ್ಲಿ ಅದ್ಭುತ ಪರಿಣಿತಿಯನ್ನು ಕೋರಿಸಿ ಪ್ರಜೆಗಳ ಹಿತರಕ್ಷಣೆಯನ್ನು ಕೈಗೊಂಡ ಸರ್ಜನ ರೊನಾಲ್ಡ್‌ರಾಸ್‌ರವರ ಕಾಲರಾ ನಿವಾರಣಾ ಪ್ರಯತ್ನದ ಬಗ್ಗೆ ತಿಳಿಸುವದು ಈ ಪ್ರಬಂಧದ ಮುಖ್ಯ ಉದ್ದೇಶ. ರೊನಾಲ್ಡ್‌ರಾಸ್ ರವರು ಸೂಚಿಸಿದ ತಿದ್ದುಪಡಿಯನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದ್ದರಿಂದ ಕಾಲರ ಹತೋಟಿಗೆ ಬಂತು. ಮತ್ತು

THE POPULATION OF CIVIL AND MILITARY STATION IN 1891
(source: B.Lewis rice)
Mysore Gazetteer Vol II P.52

Population in 1891	Males	Females	Total
Hindus(With 176 Jains)	28,844	29,407	58,251
Muhammadans Christians	12,210	11,682	23,892
Europeans	3,262	1,723	4,985
Eurasians	1,127	1,522	2,649
Natives	4,726	5,542	10,268
Others; (23) Brahmos (6) Parsis. etc	20	16	36
	50,189	49,892	1,00,081

ಅವರ ಮುಂದಿನ ಮಲೇರಿಯಾ ಸಂಶೋಧನೆ ಬೆಂಗಳೂರಿನಲ್ಲಿ ಶುರುವಾಯ್ತು. ಡಾ॥ ರಾಸ್‌ರವರು ವೈದ್ಯಕೀಯಕ್ಕೆ ಮಾತ್ರ ಸೀಮಿತವಾಗದೆ, ಸಾಹಿತ್ಯ, ಸಂಗೀತ ಇವೆರಡರಲ್ಲೂ ಪರಿಣತಿ ಹೊಂದಿದ್ದನ್ನೂ ಮತ್ತು ಅವರ ಸಾಹಿತ್ಯ ಕೃಷಿ ಬೆಂಗಳೂರಿನಲ್ಲಿ ಬೆಳೆದದ್ದನ್ನೂ ಕಾಣುತ್ತೇವೆ.

ಕಾಲರಾ ಹಿನ್ನೆಲೆ : ೭ನೇ ಶತಮಾನದಲ್ಲಿ ಬರೆದ ಸುಶ್ರುತ ಸಂಹಿತೆಯಲ್ಲಿ 'ವಿಶುಚಿಕ' ಎಂಬ ಹೆಸರಿನಲ್ಲಿ ಕಾಲರಾ ರೋಗದ ಪೂರ್ಣ ವರ್ಣನೆ ಇದೆ. ೧೮೧೭-೨೩ ರಲ್ಲಿಯೂ ಕಾಲರಾ ಪಿಡುಗನ್ನು ನಾವು ಹಲವು ರಾಷ್ಟ್ರಗಳಲ್ಲಿ ಕಾಣುತ್ತೇವೆ. ಪಶ್ಚಿಮ ಬಂಗಾಳ, ಪಾಕಿಸ್ತಾನ ಇಲ್ಲೆಲ್ಲಾ ಕಾಲರಾ ಸಾಮಾನ್ಯ. ರೋಗ ಹಬ್ಬಲು, ಮೂರು ಅಂಶಗಳು ಕಾರಣ. ಗಾಳಿಯಲ್ಲಿ ತೇವಾಂಶ ಮತ್ತು ಉಷ್ಣಾಂಶ ಅಧಿಕವಾಗಿದ್ದು ನೀರು ಯಥೇಚ್ಛವಾಗಿರುವ ನದಿಯ ಮುಖಜ ಭೂಮಿಗಳೇ ಕಾಲರಾದ ತೌರೂರು. ಅತ್ಯಧಿಕವಾಗಿರುವ ಜನಸಾಂದ್ರತೆಯ ಸ್ಥಳಗಳು ಅಶುದ್ಧ ಜಾತ್ರಾಸ್ಥಳಗಳು, ಕಾಲರಾ ಹಬ್ಬಲು ಕಾರಣವೆಂದು ಹೇಳಲಾಗಿದೆ. ಮತ್ತು ಕ್ಷಾಮಕಾಲದಲ್ಲಿ ಆಹಾರದ ಅತ್ಯಧಿಕ ಕೊರತೆ ಇರುವುದರಿಂದ, ಕಾಲರಾ ಹರಡಲು ಕಾರಣ. ೧೮೧೮-೫೪ ವರೆಗೆ ೮೫೦೦ ಬ್ರಿಟೀಷ್ ಯೋಧರು ಕಾಲರಾದಿಂದ ಕಾಲವಾಗಿರುವುದನ್ನು ಡೇವಿಡ್ ಆರ್ನಾಲ್ಡ್‌ವರು ಹೇಳಿರುತ್ತಾರೆ. ಮೈಸೂರಿನಲ್ಲಿ ರೋಗದ ಉಪದ್ರವ ವರ್ಷಕ್ಕೆ ಎರಡು ಬಾರಿ ಅಗಸ್ಟ್ ಮತ್ತು ನವಂಬರ್ ಡಿಸೆಂಬರ್‌ನಲ್ಲಿ ಕಾಣಸಿಕೊಳ್ಳುತ್ತದೆ. "ವಿಬ್ರಿಯೋಕಾಲರೆ" ಎಂಬ ಏಕಾಣುಜೀವಿಗಳ ಸೋಂಕಿನಿಂದ ವಿಪರೀತ ಬೇಧಿ, ವಾಂತಿ, ನೀರು ಕಳೆತ, ಸ್ನಾಯುಗಳ ಸೆಳೆತ, ಮೂತ್ರಕಟ್ಟುವಿಕೆ, ಇವೇ ಮುಂತಾದ ಲಕ್ಷಣಗಳ ಮೂಲಕ

* ಫ್ಲಾಟ್ ನಂ. ೪೬, ಶಾಮಲ, ೧ನೇ ಅಂತಸ್ತು, ಮಾತುಂಗ, ಮುಂಬಯಿ - ೪೭೦ ೦೧೯

ಪ್ರಕಟವಾಗುವ ತೀವ್ರ ಸಾಂಕ್ರಾಮಿಕ ರೋಗ ಇದನ್ನು ವಾಂತಿ ಭೇದಿ ಕಾಯಿಲೆಯೆಂದೂ ಹೇಳುವುದುಂಟು."[೩] ೧೯ನೇ ಶತಮಾನದಲ್ಲಿ ಕಾಲರಾ ಉಗ್ರರೂಪ ತಳೆದು ಬೇರೆ ಬೇರೆ ದೇಶಕ್ಕೆ ಹಬ್ಬಿದ್ದನ್ನೂ ಕಾಣುತ್ತೇವೆ. (೧೮೧೭,೧೮೩೬, ೧೮೭೯, ಕಂಡಿರುವದು ೧೮೭೫, (೧೮೭೭)ಕ್ಷಾಮ ಬಂದೊದಗಿದಾಗ, (೧೮೯೯, ೧೮೯೩, ಮತ್ತು ೧೮೯೫.)

ಕಾಲ ಮೊದಲನೆ ಹಂತ


ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್

The Cholera Outbreak. (Monthly Deaths)

Year	Jan	Feb	Mar	April	May	June	July	Aug	Sept	Oct	Nov	Dec	Total
1871					9		1						10
1872													
1873													
1874													
1875									2	2	278	40	322
1876				10	15	1		5	4	2	1	4	42
1877	102	407	111	101	191	81	13	27	5		3	6	1047
1878			1						1	30	3	-	35
1879			1										1
1880			NIL								NIL		
1881			-								-		
1882			2	1									3
1883	1		2										3
1884			1						3	7	1		12
1885					31	15	3	8					57
1886		-						-				-	
1887	1	1	1						12	27	4		43
1888	1	1							2				4
1889	6	2	1			1	13	47	3	3	5		81
1890	2	1											3
1891			5	1	1	2	-	11	9	32	2		62
1892				2	7	5	42	27	2	2	-	-	82
1893								1	3				4
1894			1	2	5	2	0	2	1	-	-	1	14
1895								20	64	7			91
1896	-	-	-	-	-	-	-	-	-	-	-	-	-
										Total			1922.

[Source : file no 182-1896(A) Report on Cholera, gen-sanitation and the Saniltary Dept & Regulation in civil & Military station, Bangalore]

೧೯೯೧ ೧೯೦೩). ಕಾಲರಾ ರೋಗಕ್ಕೆ ವಿಬ್ರಿಯೋಕಾಲರೆ ಜೀವಿಗಳೇ ಕಾರಣವೆಂದು ಕಂಡುಹಿಡಿದ ಕೀರ್ತಿ ಜರ್ಮನಿಯ ಏಕಾಣು ಜೀವಿ ಪರಿಣಿತ ರಾಬರ್ಟಕಾಕೆ ಅವರಿಗೆ ಸೇರಿದ್ದು. ಬೆಂಗಳೂರಿನಲ್ಲಿ ಕಾಲರ ಉಪದ್ರವ ಹೆಚ್ಚಿನ ಪ್ರಮಾಣದಲ್ಲಿ ಹನ್ನೆರಡುವರೆ ಚದರ ಮೈಲಿ ಇದ್ದು ೧೮೯೧ರಲ್ಲಿ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಜನಸಂಖ್ಯೆ ೧೦೧೦೮೧ಕ್ಕೆ ಏರಿತ್ತು. ೧೮೯೦ರಲ್ಲಿ ವಸಾಹತಿನ ಸರ್ಕಾರ, ಇಂಡಿಯಾ ಜನರ ಸಾಮಾನ್ಯ ನಾಗರೀಕರ ಆರೋಗ್ಯ ರಕ್ಷಣೆ ಕಡೆಗೆ ಗಮನ ಹರಿಸುತ್ತಿಲ್ಲ ಎಂಬ





ಕೂಗು ಇಂಗ್ಲೆಂಡಿನಲ್ಲಿ ಕೇಳಿ ಬಂತು. ಇದರಲ್ಲಿ ಮುಖ್ಯ ಪಾತ್ರ ವಹಿಸಿದ ಫ್ಲಾರೆನ್ಸ್ ನೈಟಿಂಗೇಲ್ ಅವರ ಪ್ರಚಾರದಿಂದ ಅಲ್ಪ ಸ್ವಲ್ಪ ಗಮನ ಹರಿಸಿದರೂ ಅದು ಕೇವಲ ಸೈನ್ಯಕ್ಕೆ ಮೀಸಲಾಗಿತ್ತು ಮತ್ತು ಕಾಲರಾದಿಂದ ಸಾವು ೧೮೯೯ರಲ್ಲಿ ೧೦೦೦ಕ್ಕೆ ೧೫ ಶೇಕಡಾ ತಗುಲಿತ್ತು. ಫ್ಲಾರೆನ್ಸ್ ನೈಟಿಂಗೇಲ್ ಆತ್ಮಚರಿತ್ರೆಯನ್ನು ಬರೆದಿರುವ ಸೆಸಿಟ್ ವುಧಾಮ್ ಸ್ಮಿತ್ ಬೆಂಗಳೂರಿನ ಆರೋಗ್ಯ ರಕ್ಷಣೆಯ ಬಗ್ಗೆ ಅಭಿಪ್ರಾಯ ಪಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು. "ಬೆಂಗಳೂರಿನ ಜನರಿಗೆ ಕುಡಿಯುವುದಕ್ಕೆ ಸರಬರಾಜು ಮಾಡುತ್ತಿರುವ ನೀರು ಮಲಿನವಾಗಿದೆ. ಇದನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಯಾವ ಪ್ರಯೋಜನವಾಗಿಲ್ಲ. ತುಕ್ಕುಹಿಡಿದ ಕೊಳೆವಗಳಿಂದ ನೀರನ್ನು ಸರಬರಾಜು ಮಾಡಲ್ಪಡುತ್ತಿದೆ. ಇಲ್ಲಿ ನೀರು ಹರಿದು ಹೋಗುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ ಮತ್ತು ಬಚ್ಚಲು ನೀರು ಹೊರಗೆ ಹೋಗಲು ವ್ಯವಸ್ಥೆ ಇಲ್ಲ. ವರದಿಗಳೆಲ್ಲೆಲ್ಲಾ ಬಚ್ಚಲಗುಂಡಿಯನ್ನು, ಬಟ್ಟೆಬದಲಾಯಿಸುವ ಕೊಠಡಿಗಳಂತೆ ನಮುದಿಸಲಾಗಿದೆ.[೫]

೧೮೮೫-೮೬ರ ಸರ್ಕಾರದ ವರದಿಗಳನ್ನು ನೋಡಿದಾಗ ಬೆಂಗಳೂರಿನಲ್ಲಿ ೫೬ ಜನರು ಮೃತರಾಗಿದ್ದರೂ ಇದರ ಸಂಖ್ಯೆ (೧೮೮೪-೮೫)ರಲ್ಲಿ ೧೦ ಎಂದು ಇತ್ತು. ಕಾಲರಾ ೨೫ ಮೇ, ೧೮೮೫ರಲ್ಲಿ ತನ್ನ ಇರುವಿಕೆಯನ್ನು ಸ್ಪಷ್ಟಪಡಿಸಿದ್ದು ಮತ್ತು ತಿಂಗಳ ಕೊನೆಗೆ ಸ್ವಲ್ಪ ಕಡಿಮೆಯಾಯ್ತು. ಇದಕ್ಕೆ ತುರ್ತು ಆಸ್ಪತ್ರೆಯನ್ನು ಸರ್ಕಾರ ಏರ್ಪಡಿಸಿತು. ಮತ್ತು ಇದರ ಮೇಲ್ವಿಚಾರಣೆಗೆ ಒಬ್ಬ ಡಾಕ್ಟರ್‌ನ್ನು ನೇಮಿಸಿತು. ಆದರೆ ಕ್ಯಾಂಪ್ ಆಸ್ಪತ್ರೆ ದೂರದಲ್ಲಿದ್ದ ರಿಂದ, ಕಾಲರಾ ಬೇನೆಯಿಂದ ನರಳಿದರೂ ಆಸ್ಪತ್ರೆಗೆ ದಾಖಲಾದವರು ಬಹಳ ಕಡಿಮೆ. ಆದ್ದರಿಂದ ಈ ಸರ್ಕಾರಿ ಆಸ್ಪತ್ರೆಯನ್ನು ಮುಚ್ಚಬೇಕಾಯಿತು. ಮತ್ತು ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಯ ಸಹಾಯ ಪಡೆದು ಹೌಸ್‌ಸರ್ಜನ್ ಆಣತಿಯ ಮೇಲೆ ಮನೆಮನೆ ಜಪ್ತಿಮಾಡಿ ಮನೆಯಲ್ಲೇ ಇರುವವರಿಗೆ ಉಪಶಮನ ನೀಡಲಾಯಿತು. ೧೩ಜನ ರೋಗಿಗಳನ್ನು ಬೌರಿಂಗ್ ಹಾಸ್ಪಿಟಲ್‌ಗೆ ಕಳುಹಿಸಲಾಯ್ತು. ಇದರಲ್ಲಿ ೧೨ಜನ ಸತ್ತಿದ್ದು, ೧೦ಜನ ಅಮ್ಮ ಬಂದವರು ಸಕಾಲ ಚಿಕಿತ್ಸೆಯನ್ನು ಹೊಂದಿದ್ದನ್ನೂ ಕಾಣುತ್ತೇವೆ.[೬]

೧೮೬೧-೯೫ ವರೆಗಿನ ವರದಿಯನ್ನು ಪರಿಶೀಲಿಸಿದಾಗ, ಕಾಲರಾ ಪದೇ ಪದೆಯ ಉಗ್ರರೂಪದಿಂದಾಗಿ ಅದು ಬೆಂಗಳೂರಿನಲ್ಲಿ ಹಬ್ಬುತ್ತಾ ಹೋದಂತೆ ಸರ್ಕಾರದ ನಿರ್ಲಕ್ಷದಿಂದ ಸಾವಿನ ಸಂಖ್ಯೆ ಏರಿತು. ೧೮೯೪-೯೫ವರದಿಯ ಪ್ರಕಾರ ಬೆಂಗಳೂರಿನ ಆರೋಗ್ಯ ರಕ್ಷಣೆ ಸಮರ್ಪಕವಾಗಿರಲಿಲ್ಲ

ಬೆಂಗಳೂರಿನ ಪರಿಸರ -ಸ್ಥಿತಿ

ಬೆಂಗಳೂರಿನ ಪೆಟ್ಟಾ ಅಥವಾ ಸ್ಥಳೀಯ ನಗರ, ಕನ್ನೋನ್ ಮೆಂಟ್ ನೈರುತ್ಯಕ್ಕಿದ್ದು ಪೆಟ್ಟಾದಲ್ಲಿ ಸಾರ್ವಜನಿಕ ಆಸ್ಪತ್ರೆ, ಶಾಲೆ ಇದ್ದು ಮಿಲಿಟರಿ ಕ್ಷೇತ್ರದ ಅಂಚಿನಲ್ಲಿ ಹಲವಾರು ನಾಗರೀಕರು ತಮ್ಮ ಸೇವೆಯಿಂದ ಮಿಲಿಟರಿ ಜನರ ಕರ್ತವ್ಯಗಳನ್ನು ಪೂರೈಸುತ್ತಿದ್ದರು. ಇದರಲ್ಲಿ ಕಂಟ್ರಾಕ್ಟರ್, ದೋಬಿ, ಮರಗೆಲಸದವನು, ರೊಟ್ಟಿ ಮಾಡುವವನು ಎಲ್ಲರೂ ತೊಡಗಿದ್ದರಿಂದ ಮಿಲಿಟರಿ ಜನರಿಗೆ ಇವರಿಂದ ಅಪಾರ ಸಹಾಯವಾಗಿತ್ತು. ಇದೇ ಜನಕಾಪೇಟೆ ಅಥವಾ ಬ್ಲಾಕ್‌ಪಲ್ಲಿ ಮತ್ತು ಈಗ ಶಿವಾಜಿನಗರವೆಂದು ಕರೆಯಿಸಿಕೊಳ್ಳುತ್ತಿರುವ ಸ್ಥಳ. ಆದರೆ ಈ ಸ್ಥಳದ ಆರೋಗ್ಯ

ರಕ್ಷಣೆ ಮಾತ್ರ ಬಹಳ ಹೀನ ಸ್ಥಿತಿಯಲ್ಲಿದ್ದು ಇಲ್ಲಿದ್ದ ಜನರು ಪದೇ ಪದೇ ಸಾಂಕ್ರಾಮಿಕ ರೋಗದಿಂದ ನರಳುತ್ತಿದ್ದರು. ೧೮೯೫ ರಲ್ಲಿ ಲೀ ವಾರ್ನರ್ ರೆಸಿಡೆಂಟ್ ಆದರು. ಇವರು ನಾಗರೀಕ ಮತ್ತು ಪೌರಸಭೆ ಎರಡರ ಉಸ್ತುವಾರಿ ಹೊಂದಿದ್ದರು. ಇಂಡಿಯನ್ ಮೆಡಿಕಲ್ ಸರ್ವೀಸ್‌ಗೆ ಸೇರಿದ್ದ ದೇಶೀಯ ವಸತಿಗಳು ಅತ್ಯಂತ ಅಶುದ್ಧವಾಗಿ ಮತ್ತು ಸಾಂಕ್ರಾಮಿಕ ರೋಗಗಳಿಂದ ಮುಖ್ಯವಾಗಿ ಕಾಲರಾದಿಂದ ಪೀಡಿತವಾಗಿತ್ತು. ೧೮೯.೫ರ ಆಗಸ್ಟ್‌ನಲ್ಲಿ ಭೀಕರ ಕಾಲರಾ ಹರಡಿದಾಗ ಮುನಿಸಿಪಾಲಿಟಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಸಾಕಷ್ಟು ಕ್ರಮ ಕೈಗೊಂಡಿಲ್ಲವೆಂದು ಅವರ ಅಭಿಪ್ರಾಯವಾಗಿತ್ತು. ಅಸಮಾಧಾನವಾಗಿತ್ತು. ಆರೋಗ್ಯ ರಕ್ಷಣಾ ಸಂಬಂಧವಾದ ಸಮಿತಿಯಲ್ಲಿದ್ದ, ಒಬ್ಬ ಮೆಡಿಕಲ್ ಅಧಿಕಾರಿ, ಮತ್ತು ಪ್ರೆಸಿಡೆಂಟ್ ಎ.ಎಸ್. ಡಾಬ್‌ಸನ್, ಸೆಕ್ರೆಟರಿ ಮತ್ತು ಜ್ಯೂನಿಯರ್ ಮಿಲಿಟರಿ ಅಧಿಕಾರಿ ರೆಸಿಡೆಂಟರಿಗೆ ಅಧಿಕೃತವಾಗಿ ಪತ್ರ ಬರೆದು (No. ೬೫೦, 11.sept ೧೮೯೫) ಪೂರ್ಣವಾಗಿ ಆರೋಗ್ಯರಕ್ಷಣೆಯನ್ನು ಮುನಿಸಿಪಾಲಿಟಿ ಪುನಃ ಪರಿಶೀಲನೆ ಮಾಡಬೇಕೆಂದು ಕೋರಿತು. ಇದರಲ್ಲಿ ೨೦ ಸ್ಥಳೀಯ ನಾಗರೀಕರು, ಆರು ಅಧಿಕಾರಸ್ಥರೂ (ಇವರೆಲ್ಲಾ ಬ್ರಿಟೀಷರು) ಮತ್ತು ಒಬ್ಬ ಸಭಾಧ್ಯಕ್ಷ ಇದ್ದರೂ ಯಾವ ವಿಧವಾದ ಬದಲಾವಣೆಯೂ ಮುನಿಸಿಪಾಲಿಟಿ ಕೆಲಸದಲ್ಲಿ ಆಗದ್ದರಿಂದ ಡಾ। ಡಾಬ್‌ಸನ್ ಆಗ ರೆಸಿಡೆಂಟ್ ಆಗಿದ್ದ ಲೀವಾರ್ನರ್‌ನಿಗೆ, ಗೌರ್ನಮೆಂಟ್ ಆಫ್ ಇಂಡಿಯಾಗೆ ಬರೆದು ಸರ್ಜನ ರೊನಾಲ್ಡ್‌ರಾಸ್ ಅವರನ್ನು ಬೆಂಗಳೂರಿಗೆ ಕಳುಹಿಸಲು ಕೋರಬೇಕೆಂದೂ ಮತ್ತು ಅರ್ಧ ಕಾಲರಾದ ಕೆಲಸ ಮತ್ತು ಇನ್ನರ್ಧ ಬೆಂಗಳೂರಿನ ನಿರ್ಮಲೀಕರಣದಲ್ಲಿ ಸರ್ಜನ್‌ರಾಸ್ ಆಸಕ್ತಿ ವಹಿಸಬೇಕೆಂದೂ ಒತ್ತಾಯ ಪಡಿಸಿದರು.[೮] ಇದಕ್ಕೆ ಇಂಡಿಯಾ ಸರ್ಕಾರ ತಕ್ಷಣ ಒಪ್ಪಿ, ಸರ್ಜನ್ ರಾಸ್‌ರವರನ್ನು ಬೆಂಗಳೂರಿಗೆ ಕಳುಹಿಸಿತು.

ಮೇಜರ್ ಸರ್ಜನ್ ರೊನಾಲ್ಡ್‌ರಾಸ್ ಮತ್ತು ಬೆಂಗಳೂರು ಸಂಬಂಧ.

ಸರ್ಜನ್ ಮೇಜರ್‌ರಾಸ್ ಹುಟ್ಟಿದ್ದು ೧೩ ಮೇ ೧೮೫೭ರಂದು ಆಲ್ಮೋರದಲ್ಲಿ (ಉತ್ತರ ಪ್ರದೇಶ). ತಂದೆ ಕ್ಯಾಂಪ್‌ಬೆಲ್ ಗ್ರಾಂಟ್‌ರಾಸ್, ಸ್ಕಾಟ್ಲೆಂಡಿನವರು ಇಂಡಿಯಾದಲ್ಲಿ ಸೈನ್ಯದ ಜನರಲ್ ಆಗಿದ್ದರು. ರೊನಾಲ್ಡ್‌ರಾಸ್‌ಗೆ ೭ವರ್ಷ ಆಗಿದ್ದಾಗ ಇಂಗ್ಲೆಂಡಿಗೆ ತೆರಳಿ ಅಲ್ಲಿ ವಿದ್ಯಾಭ್ಯಾಸ ಮುಗಿಸಿದರು. ರಾಸ್‌ರವರು ವೈದ್ಯ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ (೧೮೭೯) ಮತ್ತು ಇಂಡಿಯನ್ ಮೆಡಿಕಲ್ ಸರ್ವೀಸ್‌ನಲ್ಲಿ ಕೂಡ ಪಾಸಾಗಿ (೧೮೮೧) ಮತ್ತು ಬ್ಯಾಕ್ಟೀರಿಯಾಲಜಿಯಲ್ಲಿ ಪಾಸಾದವರು ಮತ್ತು ಪಬ್ಲಿಕ್ ಹೆಲ್ತ್‌ನಲ್ಲಿ ಡಿಪ್ಲೊಮಾ ತೆಗೆದು ಕೊಂಡವರಲ್ಲಿ ಮೊದಲನೆಯವರು. ೧೮೮೪ರಲ್ಲಿ ರೊನಾಲ್ಡ್ ರಾಸ್ ಅವರನ್ನು ಬೆಂಗಳೂರಿಗೆ ವರ್ಗಮಾಡಲಾಗಿತ್ತು. ೧೮೮೩ ರಿಂದ ಆರು ತಿಂಗಳ ಕಾಲ ಬೆಂಗಳೂರಿನಲ್ಲಿ ದುರ್ಗದಲ್ಲಿರುವ ಸೈನಿಕರಿಗಾಗಿ ಸರ್ಜನ್ ಎಂದು ನೇಮಿಸಲಾಯ್ತು. ಇಲ್ಲಿ ಟೈಪಾಯ್ಡ್ ಜ್ವರದಿಂದ ನರಳುವ ರೋಗಿಗಳು ಹೆಚ್ಚು ಜನರಿದ್ದರು. ಇಲ್ಲಿ ಅವರಿಗೆ ಮಲೇರಿಯಾ ಜ್ವರದ ಬಗೆಗಿನ ಕುತೂಹಲ, ಅವರನ್ನೂ ಸಂಶೋಧನೆಯತ್ತ ತಿರುಗಿಸಿತು. ೧೮೮೪ರಲ್ಲಿ ಈ ಕೆಲಸವನ್ನೂ ಬೇರೆಯವರಿಗೆ ಒಪ್ಪಿಸಿದ್ದರಿಂದ ಮತ್ತೆ ಹಳೇ ಕೆಲಸಕ್ಕೆ ಹೋಗಬೇಕಾಯಿತು. ೨೦ ಮೇ, ೧೮೯೦ ಅವರನ್ನೂ ಮತ್ತೆ ಬೆಂಗಳೂರಿಗೆ ಹಾಕಿ ಮಿಲಿಟರಿ ಸರ್ಜನ ಎಂದು ಸರಕಾರ ನೇಮಕ ಮಾಡಿತು.

ಸರ್ಜನ್ ರೊನಾಲ್ಡ್ ರಾಸ್‌ರ ಹಿಂದಿನ ಕೆಲಸ ಕೇವಲ ರಕ್ಷಣಾ ಸೈನ್ಯಕ್ಕೆ ಮಾತ್ರ ಮೀಸಲಾಗಿತ್ತು. ಆದರೆ ರೊನಾಲ್ಡ್ ರಾಸ್‌ರವರಿಗೆ ಈ ಸಾರ್ತಿ ಸರ್ಕಾರ ಒಪ್ಪಿಸಿದ ಕೆಲಸ ಅತ್ಯಂತ ಜವಾಬ್ದಾರಿಯಾದದ್ದು ಮತ್ತು ಪೂರ್ಣ ಪ್ರಾಧಿಕಾರದ ಅಧಿಕಾರವನ್ನು ಕೊಟ್ಟಿತ್ತು: (೧) ಮುನಿಸಿಪಾಲಿಟಿಯೂ ಕೈಗೊಳ್ಳತಕ್ಕಂತ ನಿರ್ಮಲೀಕರಣದ ಮಾರ್ಗದರ್ಶನ ಮಾಡುವದು ಮತ್ತು ಇದರ ಬಗ್ಗೆ ವರದಿಯನ್ನು ರೆಸಿಡೆಂಟರಿಗೆ ಒಪ್ಪಿಸುವುದು. (೨) ಆರೋಗ್ಯ ರಕ್ಷಣಾ ಸಂಬಂಧ ಶಾಖೆಯ ಶಾಸನವನ್ನೂ ಕೂಲಂಕಷವಾಗಿ ಪರಿಶೀಲಿಸಿ, ಇದಕ್ಕೆ ಸಂಬಂಧವಾದ ಪೂರ್ಣ ತಿದ್ದುಪಡಿಗಳನ್ನು ಸೂಚಿಸಿ ವರದಿಯನ್ನು ಸಿದ್ಧಪಡಿಸುವುದು. ಡಾ।ರಾಸ್ ಅವರ ಅನುಕೂಲಕ್ಕೆಂದು ಸರ್ಕಾರ ಒಬ್ಬ ಗುಮಾಸ್ತ, ಆರೋಗ್ಯರಕ್ಷಣಾ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿ, ಗಾಡಿಯನ್ನು ಕೊಟ್ಟು ವರದಿಯನ್ನು ರಾತ್ರಿ ಹಗಲು ಕೂತು ತಯಾರಿಸಲು ಸೂಚಿಸಿತ್ತು. ಡಾ। ರಾಸ್ ಪೌರಸಭೆಗೆ ಒಂದು ಅಂತಿಮ ತೀರ್ಮಾನವನ್ನು ಕಳುಹಿಸಿ, ಮಾಡಬೇಕಾದ ಕೆಲಸ ನಿರ್ಲಕ್ಷಮಾಡಿರುವ ರೀತಿ, ದಾಖಲೆಗಳು, ಮತ್ತು ಐದು ತುರ್ತು ವರದಿಗಳನ್ನೂ ರೆಸಿಡೆಂಟರಿಗೆ ಕಳುಹಿಸಿ ಮುನಿಸಿಪಾಲಿಟಿಯಿಂದ ೫೦೦೦ ರೂಪಾಯಿಯನ್ನು ಕೊಡುವಂತೆ ಮಾಡಿ ಮಾಡಬೇಕಾದ ತುರ್ತುಕೆಲಸಕ್ಕೆ ಉಪಯೋಗಿಸಿದರು. ಆಗಸ್ಟ್‌ನಲ್ಲಿ ಆರಂಭವಾದ ಕಾಲರಾ ಅಕ್ಟೋಬರ್‌ನಲ್ಲಿ ತಹಬಂದಿಗೆ ಬಂದಿತು. ರಾಸ್ ಅವರ ಪೂರ್ಣ ಕಾಲರಾವರದಿಯನ್ನು ೨೦-ಜನವರಿ ೧೮೯೬ರಲ್ಲಿ ಸರ್ಕಾರಕ್ಕೆ ಒಪ್ಪಿಸಲಾಯ್ತು. ರಾಸ್‌ರವರನ್ನೂ ಸರ್ಕಾರ ಅವರ ವರದಿಯನ್ನು ಪೂರ್ಣ ಜಾರಿಗೊಳಿಸಲು ಬೆಂಗಳೂರಿನಲ್ಲಿ ಉಳಿಸಿ ಕೊಂಡಿತು.[೧೦] ರೊನಾಲ್ಡ್‌ರಾಸ್‌ರವರ ಪೂರ್ಣಕಾಲದ ವರದಿಯನ್ನು ಒಂದು ಚಾರಿತ್ರಿಕ ದಾಖಲೆ ಎನ್ನಬಹುದು. ಈ ದಾಖಲೆ ಸುಮಾರು ೧೨೬ ಪುಟ ಇದ್ದು ಮಹತ್ವದ್ದೆನಿಸಿದೆ. ಮೊದಲು ಯಾವುದನ್ನು ಸಂರಕ್ಷಣೆ ಮಾಡಬೇಕು ಮತ್ತು ಕಸಗಳ ವಿಲೇವಾರಣೆ, ಹೊರಚರಂಡಿ ವ್ಯವಸ್ಥೆ, ಅದಕ್ಕೆ ತಗುಲುವ ವೆಚ್ಚ. ಮತ್ತು ಸ್ಥಳೀಯ

ಆಡಳಿತದ ಕಾಯಿದೆ ಮತ್ತು ಕಟ್ಟಳೆ, ಪೌರಸಭೆಯ ಪ್ರಯೋಗಶಾಲೆ, ಆಹಾರ ಸಿದ್ಧ ಮಾಡುವವನ ನೊಂದಣಿ ಮತ್ತು ನೀರು, ಹಾಲು ಬೆರಕಿ ಇವೆಲ್ಲದರಲ್ಲಿ ಸಾಕಷ್ಟು ಸುಧಾರಣ ಕ್ರಮವನ್ನು ತರಬೇಕಿತ್ತು. ಇವರ ಸುಧಾರಣಾ ಕ್ರಮವನ್ನು ಹಲವು ಜನ ವಿರೋಧ ಪ್ರಕಟಿಸಿದ್ದೂ ಉಂಟು. ಇವರ (Cess Tax) ಕಂದಾಯ ಕಸ ವಿಲೇವಾರಿ ಮಾಡುವವದಲ್ಲದೆ ಸಾಮಾನ್ಯವಾಗಿ ದಿನನಿತ್ಯದ ಕಚಡವನ್ನೂ ಒಂದು ವಾರಕ್ಕೊಮ್ಮೆ ಗೊಬ್ಬರಕ್ಕೋಸ್ಕರ ಮಾರುವವರಿಗೆ ಅಸಮಾಧಾನವಾಯ್ತು.

ರಾಸ್ ರವರ ತಿದ್ದುಪಡಿ ಕೆಲಸವನ್ನು ಹಲವರು ಪ್ರೋತ್ಸಾಹಿಸಿದರೂ, ಹಲವರ ವಿರೋಧವಿತ್ತು. ಸರ್ಜನ್ ಮೇಜರ್‌ರಾಸ್ ಮಂಡಿಸಿದ(Bye Laws) (ಪೋರ್ಟ ಕಾಯಿದೆ) ಅಥವಾ ಒಳನಿಬಂಧನೆಯನ್ನೂ ಮುನಿಸಿಪಲ್ ಪ್ರೆಸಿಡೆಂಟ್ ಪರವಾಗಿ ಎಲ್.ಇ.ಬರ್ಕ್‌ಲಿಯವರು ರೆಸಿಡೆಂಟರವರಿಗೆ ಕಳುಹಿಸಿದರು. ಈ ಒಳನಿಬಂಧನೆಯು ಮುಖ್ಯವಾಗಿ ಖಾಸಗಿ ಸಂಡಾಸಿಗೆ ಸಂಬಂಧಪಟ್ಟಿದ್ದು. ಇದನ್ನು ಕಮೀಷನ್ನರ ಮುಂದೆ ಮಂಡಿಸಿದಾಗ, ಇದನ್ನೂ ಪರಿಶೀಲಿಸಿ ಒಪ್ಪಿಗೆ ಮತಕ್ಕೆ ಹಾಕಿದಾಗ ಇದು ಮುರಿದುಬಿತ್ತು. ಆದ್ದರಿಂದ ಸರ್ಜನ್ ಮೇಜರ್‌ರಾಸ್ ತಮ್ಮ ಠರಾವನ್ನು ಹಿಂದಕ್ಕೆ ತೆಗೆದುಕೊಂಡರು. ಆದರೆ ಇದನ್ನೂ ಪುನಃ ಮಂಡಿಸಲು ಮುಂದಿನ ಸಭೆಯಲ್ಲಿ ಅಭ್ಯಂತರವಿರಲಿಲ್ಲ. ಇದಕ್ಕೆ ಸ್ಥಳೀಯ ಕಮೀಷನ್ನರ ಒಮ್ಮತವಿರಲಿಲ್ಲ. ಇವರು ಬಳನಿಬಂಧನೆ ಯನ್ನು ಪ್ರತಿಭಟಿಸಿದರು. "ಈ ಒಳ ನಿಬಂಧನೆಯನ್ನು ಅನುಮೋದಿ ಸದಿದ್ದರೆ ಬೆಂಗಳೂರಿಗೆ ನಿರ್ಮಲೀಕರಣ ಕನಸೇ ಆದೀತು',[೧೨] ಎನ್ನುವುದಂತು ಇತ್ತು.

ಸುಧಾರಣೆ-ಪ್ರತಿಕ್ರಿಯೆ

ಪಾಯಿಖಾನೆ ವ್ಯವಸ್ಥೆಯನ್ನು ಸರಿಪಡಿಸಲು ಗುಂಡಿಯ ಕೆಳಗೆ ಬಕೆಟ್ ಅಥವಾ ಪಾತ್ರೆಯನ್ನು ತಿದ್ದುಪಡಿಯಲ್ಲಿ ಇಡುವಂತೆ ಪ್ರತಿ ಸ್ವಂತ ಮನೆಯವರಿಗೆ ಸರ್ಕಾರ ಸೂಚಿಸಿತ್ತು. ಈ ವ್ಯವಸ್ಥೆಯನ್ನು ಮಾಡುವುದರಲ್ಲಿ ತನ್ನ ಪಾಲಿನ ಖರ್ಚನ್ನು ಸರಕಾರ ಕೊಡಲು ಒಪ್ಪಿತ್ತು. ಕಾಯ್ದೆ ಪ್ರಕಾರ, ಪ್ರತಿ ಮನೆಯವರು ಪಾಯಿಖಾನೆ ಮನೆಯಲ್ಲಿ ಬಕೆಟ್ ಅನ್ನು ಇಡಬೇಕು ಮತ್ತು ಎಲ್ಲವೂ ಇದರಲ್ಲೆ ಬೀಳಬೇಕು. ಇದಕ್ಕೆ ವಿರುದ್ಧವಾಗಿ ನಡೆದವರಿಗೆ ೧೦ರೂಪಾಯಿ ಜುಲ್ಮಾನೆ ಹಾಕುವುದೆಂದು ಸರ್ಕಾರ ಘೋಷಿಸಿತು. ಇದಲ್ಲದೆ, ಸುತ್ತ ಮನೆ ಹೊಂದಿರುವವರು, ಇದಕ್ಕೆ ಪ್ರತ್ಯೇಕ ಬಾಗಿಲು ಇಡಿಸ ತಕ್ಕದ್ದು ಮತ್ತು ಇದರಿಂದ ಗುಡಿಸುವವರು ಬಂದು ಹೋಗುವುದಕ್ಕೆ ಆಡಚಣೆ ಮನೆಯವರಿಗೆ ಉಂಟಾಗುವುದಿಲ್ಲ. ಸುಮಾರು ಮನೆಗಳಲ್ಲಿ ಕೀಳ್ಜಾತಿಯವರೆಂದು, ಮನೆಯೊಳಕ್ಕೆ ಜಾಡಮಾಲಿ ಗಳನ್ನು ಮನೆಯಲ್ಲಿ ಬಿಡುತ್ತಿರಲಿಲ್ಲ. ಅಲಸೂರಿನಲ್ಲಿ ಜಾಡಮಾಲಿ ಗಳನ್ನೂ ತಮ್ಮ ಮನೆ ಬಳಿಗೆ ಬಿಡುತ್ತಿರಲಿಲ್ಲ. ಯಾಕೆಂದರೆ ಇಲ್ಲಿ ಸಂಡಾಸು, ಅಡಿಗೆ ಮನೆ, ಇರುವ ಕೋಣೆ ಒಳಗೆ ಇದೆ. ಇಲ್ಲಿ ಮೇಲ್ಜಾತಿ ಯವರಿರಲಿ, ಯಾರೇ ಆಗಲಿ ೬ ಘಂಟೆಗೆ ಮೊದಲೇ ತಿಳಿಸಿ. ಪರವಾನಗಿ ಹೊಂದಿ ಒಳಗೆ ಹೋಗಬೇಕಾಗಿತ್ತು. ಈ ನಿಯಮ ೨೦೦ರೂ ಬೆಲೆಬಾಳುವ ಮನೆಗಳಿಗೆ ಅನ್ವಯಿಸುತ್ತಿತ್ತು. ಮುಕ್ಕಾಲು ಭಾಗ ಮನೆಗಳು ಇದಕ್ಕಿಂತ ಕಡಿಮೆ ಬೆಲೆ ಬಾಳುವಂತಾದ್ದು . ಆದರೆ ಸೆಪ್ಪಿಂಗ್ ರಸ್ತೆಯ ನಿವಾಸಿಗಳು ಈ ಕಷ್ಟದಿಂದ ಬಿಡುಗಡೆ ಹೊಂದಲು ಬೇರೆ, ಬೇರೆ ಶೌಚಾಲಯಗಳನ್ನು ಕಟ್ಟಿಸಿಕೊಂಡಿದ್ದರು. ಇದರಿಂದ ಜಾಡ ಮಾಲಿಗಳ ಕೆಲಸಕ್ಕೆ ಸಹಾಯಕವಾಗಿತ್ತು.

ರೇಟ್‌ಪೇಯರ್ಸ್ ಪರವಾಗಿ ಗಜರಾಜು ಮೊದಲಿಯಾರ್ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ಬ್ರಿಟೀಷ್ ರೆಸಿಡೆಂಟರಿಗೆ ಪೋಟಾ ಕಾಯ್ದೆಯ ಬಗ್ಗೆ ಮನವಿ ಪತ್ರ ಸಲ್ಲಿಸಿತು. ಇದಕ್ಕೆ ೨೦೦ ಜನ ಸಹಿ ಹಾಕಿದ್ದರು. ಹಸ್ತ ಲಿಖಿತ ಪ್ರತಿಯನ್ನು ೬ನೇ ಡಿಸೆಂಬರ್ ೧೮೯೭ ರಂದು ರೆಸಿಡೆಂಟರಿಗೆ ಸಲ್ಲಿಸಿಯಾಯ್ತು.

ಡಾ। ಡಾಬ್‌ಸನ್, ಸ್ಲೈಟ್ ಇಬ್ಬರೂ ಹಲವಾರು ಮನೆಗಳನ್ನೂ ವೀಕ್ಷಿಸಿ, ಅಲಸೂರಿನ ವಾಸಿಗಳಾದ ಸದಾಶಿವ ಮೊದಲಿಯಾರ್ ಕಮೀಷನರ್, ಕಿರುಕುಳ ಸ್ವಭಾವದವನೆಂದೂ, ಮತ್ತು ಅರ್ಜಿ ಬರೆದ ಕೋದಂಡಪಾಣಿ ದುಡ್ಡು ಕಳವು ಮಾಡಿ ಜೈಲಿನಲ್ಲಿ ಇದ್ದು ಬಂದವನೆಂದೂ, ಮತ್ತು ಇವರ ಮನೆಗಳಲ್ಲಿ ದೊಡ್ಡಗುಂಡಿಯ ೫-೬ಫೀಟ್, ಪಾಯಿಖಾನೆ ಮನೆಯೆಂದೂ ಮತ್ತು ಬೂದಿಸುರಿದು, ಸಾಮಾನ್ಯವಾಗಿ ಇವನ್ನೆಲ್ಲಾ ಲಕ್ಷಕೊಡದ, ಜಾಡಮಾಲಿಗಳನ್ನು ಒಳಕ್ಕೆ ಬಿಡುವುದಿಲ್ಲವೆಂದೂ, ಗುಂಡಿಗಳನ್ನು ಶುಚಿಮಾಡಲಾಗದೆ ಪೂರ್ತಿಯಾಗಿ ಇದರ ಕಲ್ಮಶ ಭೂಮಿಗೆ ತಗುಲುತ್ತಿದೆ ಎಂದೂ ಸಾಬೀತು ಮಾಡಿದರು. ಮತ್ತು ಈ ವ್ಯವಸ್ಥೆಗೆ ೨೦-೩೦ ರೂಪಾಯಿ ತಗಲುವುದಕ್ಕೆ, ಈ ರೀತಿ ಗುಲ್ಲು ಎಬ್ಬಿಸಲು ಹೊರಟಿರುವದು, ಕಾಯ್ದೆಯನ್ನೂ ಸರಿಯಾಗಿ ಅರ್ಥಮಾಡಿಕೊಳ್ಳದೆ ಇರುವದೇ ಕಾರಣ ಎಂದು ಬರೆದರು. ಮತ್ತು ಸರ್ಕಾರ ಎಲ್ಲಾ ಸಹಕಾರ ಸಹಾಯ ನೀಡುವುದೆಂದು, ಬೆಂಗಳೂರಿನ ಆರೋಗ್ಯ ರಕ್ಷಣೆಯಲ್ಲಿ ಪ್ರಜೆಗಳು ಸಹಕರಿಸಬೇಕೆಂದು ಕಳಿಸಿದರು. ಮತ್ತು ಅರ್ಜಿದಾರರ ಜ್ಞಾಪಕ ಪತ್ರವನ್ನು ಹಿಂದಿರುಗಿಸಿದರು[೧೩]. ಹೀಗಾಗಿ ರೊನಾಲ್ಡ್‌ರಾಸರವರ ಸಲಹೆ ಅಂಗೀಕಾರವಾಯ್ತು. ಸರ್ಕಾರ ಪತ್ರಿಕೆಗಳಲ್ಲಿ (Daily post. Feb-೧,೧೮೯೭) ಘೋಷಣೆ ಹೊರಡಿಸಿ ಕಾನೂನು ಉಲ್ಲಂಘಿಸು ವವರಿಗೆ ದಿನಕ್ಕೆ ೧೦ರೂ. ಜುಲ್ಮಾನೆ ಹಾಕುವುದೆಂದು ಘೋಷಿಸಿತು. ಇದರಿಂದ ಮುಕ್ಕಾಲು ಪಾಲು ಜನರು ಸರ್ಕಾರದ ಆಜ್ಞೆಯನ್ನು ಪಾಲಿಸುವಂತಾಯ್ತು. ಮತ್ತು ಮುನಿಸಿಪಲ್ ಕಮೀಷನ್‌ರಿಗೆ ಪತ್ರ ಬರೆದು ಯಾವ ಮನೆಯಲ್ಲಿ ನಿತ್ಯ ಕಚಡ(ಮಲ) ದಿನ ಸಾಗಿಸಲು ಸಾಧ್ಯವಿಲ್ಲವೋ ಅನುಕೂಲವಿಲ್ಲವೋ ಆಗ ಅವರು

ಹದಿನೈದು ದಿನ ಮೊದಲೇ ಪ್ರೆಸಿಡೆಂಟರಿಗೆ ತಿಳಿಸಿ ಅವನ್ನು ಒಂದು ತಿಂಗಳಿಗೆ ಒಂದು ಸಾರ್ರಿ ತೆಗೆಯಬೇಕೆಂದೂ ಮತ್ತು ವಾಸನೆ ಬರದಂತೆ ನೋಡಿಕೊಳ್ಳ ಬೇಕೆಂದೂ ಮತ್ತು ಇದಕ್ಕೆ ವಿರುದ್ಧವಾಗಿ ನಡೆದಲ್ಲಿ ೫ರೂಪಾಯಿ ಜುಲ್ಮಾನೆ ಎಂದು ಸಾರಿತು.

ಸರ್ಕಾರದ ತಾತ್ಕಾಲಿಕ ಕ್ರಮದಿಂದ ಹಾಗು ಕಾಯ್ದೆಯಿಂದ ಬೆಂಗಳೂರಿನ ಮಲದ ಪ್ರಶ್ನೆ ಸ್ವಲ್ಪದ ಮಟ್ಟಿಗೆ ಸುಧಾರಿಸಿತು.[೧೩]

ಇದರಿಂದ ಹಲವಾರು ಅನಾಮಧೇಯ ಪತ್ರಗಳು ರಾಸ್‌ರವರಿಗೆ ಬಂದವು. ಆದರೆ ಇದ್ಯಾವುದಕ್ಕೂ ಅವರು ಧೃತಿಗಡಲಿಲ್ಲ. ಹಲವಾರು ಜನರ ಬೆಂಬಲ, ಮುಖ್ಯವಾಗಿ ಅಣ್ಣಾಸ್ವಾಮಿ ಮೊದಲಿಯಾರ, ಅಬ್ದುಲ್‌ರೆಹಮಾನ್ ಮತ್ತು ಕ್ಯಾಪ್ಟನ್ ಜಾಲಿ ಮತ್ತು ಅಧ್ಯಕ್ಷ ಸೈಟ್ ಅವರ ಬೆಂಬವಿತ್ತು. ಇವರ ತಿದ್ದುಪಡಿಗಳೆಲ್ಲಾ ಅಂಗೀಕಾರವಾಯ್ತು.

ಸ್ಥಳೀಯ ವಸತಿ, ಚರಂಡಿಸ್ಥಿತಿ ಶೋಚನೀಯವಾಗಿತ್ತು. ಈ ಚರಂಡಿಗಳು ರಸ್ತೆಯ ಹೊಲಸು ಚರಂಡಿಗೆ ಹೊಂದಿಕೆಯಾಗಿತ್ತು. ಆದ್ದರಿಂದ ರಾಸ್ ಅವರು ಹಲವು ಹೊಸ ನಮೂನೆಗಳನ್ನು ತಯಾರಿಸಿ ವಿವರಿಸಿ 'Memorandom on open Sewage Drains' -ಇದನ್ನು ಬ್ಲಾಕ್‌ಪಲ್ಲಿಯಲ್ಲಿ ಪ್ರಯೋಗಮಾಡಿ. ಅಲ್ಲಿ ಅದರ ಉಪಯೋಗ ಹೊಂದಿದ್ದು ಕಾಣುತ್ತದೆ.[೧೪] (೨೪ಸೆಪ್ಟಂಬರ್ ೧೮೯೬) ಡೊನಾಲ್ಡ್ ರಾಬರ್ಟಸನ್ ವರದಿ ಪ್ರಕಾರ ೧೮,೪೨೧ ರೂಪಾಯಿಗಳನ್ನು ಸರ್ಕಾರವು ಅಧಿಕವಾಗಿ ಅಂದರೆ ಕಚಡ ಸಾಗಿಸಲು ಬಂಡಿಗಳನ್ನು ಕೊಳ್ಳಲು, ಗುಡಿಸುವವರ ಹೆಚ್ಚುವಿಕೆ, ಮತ್ತು ಮೇಜರ್‌ರಾಸ್‌ರವರಿಗೆ ೨೩೩ರೂಪಾಯಿ ಭತ್ಯ ಮತ್ತು ಹೆಲ್ತ್ ಆಫೀಸರ ೩೦೦ರೂ ಸಂಬಳ ಮತ್ತು ಭತ್ಯ-ಇವುಗಳಿಗೆ ಖರ್ಚು ಮಾಡಿತು.[೧೫] ಇದೂ ಅಲ್ಲದೆ ಸರ್ಕಾರವು. ಡೆಲೋಟ್‌ಬಿನೀರೋ ಅವರಿಗೆ ಅವರಿಗೆ ಸಂದಾಯವಾಗಬೇಕಿದ್ದ ೨೫೦೦ರೂ ಶುಲ್ಕ ಕೊಟ್ಟು ಬಂದು ಪೂರ್ಣ ಚರಂಡಿವ್ಯವಸ್ಥೆಯ ನಕಾಶೆಯನ್ನು ತಯಾರಿಸಲು ತಿಳಿಸಿತು.

ಬೆಂಗಳೂರಿನ ಬಾವಿಗಳ ಮಲಿನತೆಯಿಂದ ಮತ್ತು ಅದರಿಂದ ಒದಗುವ ನೀರಿನಿಂದ, ಪದೇ ಪದೇ ಕಾಲರಾದ ಉಪದ್ರವ ಒದಗಿತ್ತು. ೧೯೧೬ರಲ್ಲಿ ಮೂರು ಸಾರಿ, ಕಾಲರಾ ಉಪದ್ರವದಿಂದ ೨೧೯ಜನ ನರಳಿ ೧೫೦ ಜನರ ಸಾವಿಗೆ ಈಡಾದರು. ರಾಸರವರ ಪ್ರಯೋಗಶಾಲೆಯಲ್ಲಿ ಸಾಕಷ್ಟು ನುರಿತ ಸಿಬ್ಬಂದಿಗಳು ಇರಲಿಲ್ಲ. ಒಂದೇ ಭಾವಿಯು ನೀರನ್ನೇ ಕುಡಿದು ಕಾಲರಾದಿಂದ ನರಳಿದ ಜನ, ಸರ್ಕಾರ ಎಲ್ಲಾ ಗುಮಾನಿ ಬಂದ ಕಡೆಯಲ್ಲೆಲ್ಲಾ, ಅಂಥ ಜನರನ್ನು ಹಿಡಿಯುವುದಕ್ಕೆ ಜನರನ್ನೂ ನೇಮಿಸಿತು. ಎಲ್ಲಾ ಬಾವಿಗಳನ್ನೂ ಪೊಟಾಶಿಯಮ್ ಪರಮಾಂಗನೈಟ್ ಹಾಕಿ ಶುಚಿ ಮಾಡಿಸಿತು. ಮತ್ತು ಹಲವು ಭಾವಿಗಳನ್ನೂ ಮುಚ್ಚಿಸಿ ಶುದ್ಧೀಕರಣವನ್ನು ಕೈಗೊಂಡಿತು. ತಿಂಗಳಾದ ಮೇಲೆ ಕಾಲರಾ ಹತೋಟಿಗೆ ಬಂದು ನಿಂತಿತು. ಕಾಲರಾ ವ್ಯಾಕ್ಸಿನೇಷನ್ ಅಷ್ಟಾಗಿ ಉಪಯೋಗಿಸಲ್ಪಡುತ್ತಿರಲಿಲ್ಲ. ಉತ್ತರ ಬ್ಲಾಕ್‌ಪಲ್ಲಿ ಮತ್ತು ಪೂರ್ವ ಜನರಲ್ ಬಸಾದ್‌ನಲ್ಲಿ ಅನೇಕ ಜನರು ಕಾಲರಾಕ್ಕೆ ಬಲಿಯಾಗಲು ಶುದ್ಧತೆ ಅಲ್ಲಿನ ನೀರಿನ ಶುದ್ಧತೆ ಕಾರಣ. 'ರಾಸರವರ ಪ್ರಕಾರ ಮುನಿಸಿಪಲ್ ಕಮೀಷನರ್ ಅವರು ಸಕಾಲಕ್ಕೆ ಸೂಕ್ತ ಕ್ರಮ ಕೈಗೊಳ್ಳದೆ ಗುಡಿಸಲುಗಳನ್ನೂ ಬೆಳೆಯಲು ಬಿಟ್ಟು ಮಲಿನತೆಯಿಂದ ಮಾನವನನ್ನು ಬಲಿಕೊಡುವ ರಾಜಕಾರಣಿಗಳು" ಎಂದಾಗಿತ್ತು.

ರಾಸ್ ಅವರ ಮಾನವೀಯತೆ[೧೬]

ಪರಿಯಾಗಳಂಥ (ಗುಡಿಸುವವರು) ಶ್ರಮಿಕರಿಗೆ ಸಮಾಜದಲ್ಲಿರುವ ಸ್ಥಾನ ಕಡಿಮೆ. ಆದರೆ ರೊನಾಲ್ಡ್ ರಾಸ್ ಅವರೊಡನೆ ಕಲೆಕು, ಅವರು ಪಡುವ ಶ್ರಮ ನೋಡಿ, ಅವರ ಸಂಬಳವನ್ನು ಹೆಚ್ಚಿಸಿದ್ದಲ್ಲದೆ, ಅವರಿರುವ ಹೊಲೆಗೇರಿಯನ್ನು ಶುದ್ಧಮಾಡಿಸಲು ಸಹಾಯ ಮಾಡಿದರು. ಮತ್ತು ಅವರಿಗೆ ಚಿಕ್ಕ ಪಾಯಿಖಾನೆಗಳನ್ನೂ ಕಟ್ಟಿಸಿಕೊಡುವ ಏರ್ಪಾಡು ಮಾಡಿದ್ದು ಶ್ಲಾಘನೀಯವಾಗಿತ್ತು.

ಪದೇ ಪದೇ ಬೆಂಗಳೂರಿನಲ್ಲಿ ಕಾಲರಾ ಉಪದ್ರವ ತಲೆದೋರಿದರೂ ೧೯೦೫-೧೯೩೦ರ ತನಕ ವರದಿಯನ್ನು ಗಮನಿಸಿದಾಗ ರಾಸ್‌ರವರ ಹಲವಾರು ರೋಗನಿವಾರಣ ತಿದ್ದುಪಡಿಗಳ ಉಪಯೋಗ ಕಂಡುಬರುವುದು. ಮತ್ತು ಬೆಂಗಳೂರಿನಲ್ಲಿ ಕಾಲರ ನಿಯಂತ್ರಣಕ್ಕೆ ಕ್ರಮಕೈಗೊಂಡದ್ದು ಕಾಣುತ್ತದೆ.[೧೭] ರಾಸ್ ಅವರ ಈ ಪರಿಶ್ರಮ ಮುಂದೆ ಅವರ ಮಲೇರಿಯಾ ನಿಯಂತ್ರಣದಲ್ಲಿ ಬಹುಮಟ್ಟಿಗೆ ಸಹಾಯವಾದದ್ದನ್ನೂ ಕಾಣುತ್ತೇವೆ.

ಸರ್ಜನ್ ರಾಸ್ ಮತ್ತು ಸಾಹಿತ್ಯ: ಸರ್ಜನ್‌ರಾಸ್ ಅವರ ಅಪಾರವಾದ ಸಾಹಿತ್ಯ ಕೃಷಿಯಲ್ಲಿ ಇಲ್ಲಿ ನಮಗೆ ಪ್ರಸ್ತುತವಾದನ್ನು ಮಾತ್ರ ಚರ್ಚಿಸಲಾಗಿದೆ. ರಾಸ್ ಅವರ (೧೮೮೩) ಪ್ರಕಟವಾದ ಎರಡು ಏಕಾಂಕ ಪದ್ಯನಾಟಕ 'Edgar or the New Pygmalion and the Judgement of Tithonus.' ಥಿ ತೋನಸ್‌ನಲ್ಲಿ ಮೈಸೂರಿನ ಸುತ್ತಮುತ್ತ ಹಳ್ಳಿಯ ಸೌಂದರ್ಯ ವರ್ಣನೆ ಇದ್ದು ಇದನ್ನು ಮದ್ರಾಸಿನ Higgir bothamರವರು ಪ್ರಕಟಿಸಿದರು. ಮತ್ತೊಂದು Indian shepherds. ಇದರಲ್ಲಿ ಕುರುಬರು ಸೂರ್ಯ ಮುಳುಗುವ ಮೊದಲು ಹಾಡುವ ಹಾಡು ಮನಸ್ಸಿನ ಮೇಲೆ ಬೀರುವ ಪರಿಣಾಮದಿಂದ ಗೇಯಕವನವೆನ್ನ ಬಹುದು. ಹೇಳಬಹುದು. ಇದನ್ನು ಬರೆದಿದ್ದು ಬೆಂಗಳೂರಿನ, ತಂಪಾದ ಹವಾಮಾನದಲ್ಲಿ. ಮತ್ತೊಂದು Deformed Transformed ೧೨೮ ಪೇಜಿನ ಕೃತಿ ಖಾಸಗಿಯಾಗಿ ಬೆಂಗಳೂರಿನ spectator Press ನಲ್ಲಿ ಮುದ್ರಿಸಿ (೧೮೯೦)ರಲ್ಲಿ ೧೮೯೨ chapman Hallರವರು ಪ್ರಕಟಿಸಿದರು. ಕರ್ನಲ್‌ಡಾಬಸನ್

ರಜಾದ ಮೇಲಿದ್ದಾಗ ಬೌರಿಂಗ್ ಆಸ್ಪತ್ರೆಯ ಸರ್ಜನ ಆಗಿ ಆಸ್ಪತ್ರೆಯ ಉಸ್ತುವಾರಿ ಯಲ್ಲಿದ್ದಾಗ ಬರೆದ ಪದ್ಯಗಳು (a) Indian mother (b) Indian Fever, ಇತ್ಯಾದಿ ಪದ್ಯಗಳು ಅತ್ಯಂತ ಮಾರ್ಮಿಕವಾಗಿವೆ. ತಾಯಿ ಎಂತ ಕರುಣಾಮಯಿ. ಕ್ಷಾಮಕಾಲ ದಲ್ಲೂ ತನ್ನ ಮಗುವಿನ ಸಲುವಾಗಿ ಹಾಲು ಉಣಿಸಿ ತನಗಿಲ್ಲ ದಿದ್ದರೂ ಪ್ರಾಣಬಿಡುವ ಸತ್ಯಾಂಶವನ್ನು ಪ್ರತಿಬಿಂಬಿಸುವುದು, ಎಂಬುದನ್ನು ಕವಿ ಮಾನವೀಯತೆಯ ಕಣ್ಗಳಲ್ಲಿ ನೋಡಿರುವದನ್ನು ಕಾಣಬಹುದು.

" A three year child........
Well nourished at her breast
withered with famine. still she fed and
Pressed for she was dying " I am too poor", she
said " to feed him otherwise" and with a kiss

ಇನ್ನು 'Indian fever' ಬರೆದಿದ್ದರ ಸಂದರ್ಭ, ಹಲವಾರು ಜನ ಜ್ವರ ಬಂದು ತುತ್ತಾದರೂ ಏನನ್ನೂ ಮಾಡಲಿಕ್ಕೆ ಸಾಧ್ಯವಾಗದಂಥ ಅಸಹಾಯಕತೆ.

In this, O Nature yield Pray to me
The painful faces ask, can we not cure
We answer No not yet, We Seek the laws
O God reveal thro' all this thing obscure
The unseen, Small but million Murdering cause.

ಮತ್ತೊಂದು ಬೆಂಗಳೂರು ಬಿಡುವ ಮೊದಲು ಅಂದರೆ (೧೮೯೩)ರಲ್ಲಿ In Exile part VI- ಅದರಲ್ಲಿ Death Stanza ಬರೆದದ್ದು. Exile ನಲ್ಲಿ ಬೆಂಗಳೂರಿನ ಮನೆಯ ಮಾಲಿಯನ್ನು ನೆನೆಸಿದ್ದಾರೆ. ಇದರಲ್ಲಿ ರೊನಾಲ್ಡ್ ರಾಸ್ ಅವರಿಗೆ ತಾನು ಇದುವರೆಗೂ ಅಸಾಧಾರಣವಾದದ್ದು ಏನನ್ನೂ ಸಾಧಿಸಲಿಲ್ಲ ಎಂಬ ಕೊರಗನ್ನು ಗುರುತಿಸಬಹುದು. ಗಣಿತದಲ್ಲಿ ಆಸಕ್ತಿ ಮತ್ತು ಶೋಧ ಪ್ರಿಯತೆ ಇತ್ತು. ಮತ್ತು ಸಂಗೀತದಲ್ಲಿ ಆಸಕ್ತಿವಹಿಸಿ ವಯಲಿನ್ ಕಲಿತದ್ದು ಬೆಂಗಳೂರಿನಲ್ಲಿ. ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಪ್ರೊಫೆಸರ ಟೀಟೇರವರು ಇವರ ಸ್ನೇಹಿತರು.

ಇನ್ನು ಅವರು ಮಲೇರಿಯಾ ಜ್ವರದ ಬಗ್ಗೆ ಕೈಗೊಂಡ ಸಂಶೋಧನೆ, ಬೆಂಗಳೂರಿನಲ್ಲಿ ಅವರು Garrison Medical Surgeon ಆದಾಗ ಮುಂದುವರಿದು ಮತ್ತು ಅವರನ್ನು ೧೮೯೬ರಲ್ಲಿ ಸರ್ಕಾರ ಆರೋಗ್ಯದ ಅಧಿಕಾರಿಯಾಗಿ ನೇಮಿಸಿದಾಗ, ಪೂರ್ಣ ಮಲೇರಿಯಾ ಕೆಲಸಕ್ಕೆ ಗಮನ ಕೊಡಲಾಗದಿದ್ದರೂ ಮಲೇರಿಯಾ ನಿಯಂತ್ರಣಕ್ಕೆ ಸಹಾಯ ವಾದದ್ದನ್ನು ಸ್ಮರಿಸುತ್ತಾರೆ. ಕರ್ನಲ್ ಡಾಬ್‌ಸನ್ ಅವರು ರಜಾದಲ್ಲಿ ಇದ್ದಾಗ ಹಂಗಾಮಿ ಸರ್ಜನ್ ಆದಾಗ ಇವರ ಕೆಲಸಕ್ಕೆ ಸಂಪೂರ್ಣ ಸಹಕಾರ ಬೌರಿಂಗ್ ಸಿವಿಲ್ ಆಸ್ಪತ್ರೆಯಲ್ಲಿ ಸಿಕ್ಕಿತು. ಮತ್ತು ಅವರ ಸಂಶೋಧನೆ ೧೮೯೬ Indian Medical Gazettee ನಲ್ಲಿ ಪ್ರಕಟವಾಯ್ತು. ಬೌರಿಂಗ್ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಕೆ. ಎನ್. ಅಪ್ಪಯ್ಯ ಸರ್ಜನ್ ಅವರಿಗೆ ಸಹಾಯಮಾಡಿ ಅವರ ಮಲೇರಿಯಾ ಪ್ರಯೋಗಕ್ಕೆ ಸಿದ್ಧರಾದರು. ರಾಸ್ ಅವರು ಬೆಂಗಳೂರು ಬಿಟ್ಟ ಮೇಲೆ ಕಲ್ಕತ್ತಾ ಸೇರಿ ತಮ್ಮ ಸಂಶೋಧನೆಯು ಕೊನೆಯ ಹಂತದಲ್ಲಿದ್ದಾಗ ಲಿವರ್‌ಪೂಲ್ ಆಫ್ ಟ್ರಾಪಿಕಲ್ ಮೆಡಿಸಿನ್ ಕಾಲೇಜಿನಲ್ಲಿ ಅಧ್ಯಾಪಕರಾದರು. ಮತ್ತು ೧೯೦೨ರಲ್ಲಿ ಮಲೇರಿಯಾ ಸಂಶೋಧನೆಗೆ ನೋಬೆಲ್ ಪಾರಿತೋಷಕ ದೊರೆಯಿತು. ೧೯೨೧ರಲ್ಲಿ ದೊಡ್ಡ ಪ್ರಬಂಧ ಬರೆದು ಒಂದು ಡೋಸ್ ಕ್ವಿನೈನ್ ಔಷಧಿಯಿಂದ ಮಲೇರಿಯಾ ರೋಗ ನಿವಾರಣೆ ಸಾಧ್ಯವಿಲ್ಲ ವೆಂದೂ, ಡಾಕ್ಟರ್ ರೋಗಿಯ ಸ್ಥಿತಿಯನ್ನು ಗಮನಿಸಿ ಸಾಕಷ್ಟು ದಿನ ಔಷಧ ಸೇವನೆಯನ್ನು ನಿಯಂತ್ರಿಸಬೇಕು ಎಂಬುದನ್ನು ತಿಳಿಸಿಕೊಟ್ಟರು.

ಪರಿಸಮಾಪ್ತಿ

ಹಲವಾರು ರೋಗಗಳಂತೆ ಕಾಲರಾ ಕೂಡ ಒಂದು ಸಾಂಕ್ರಾಮಿಕ ರೋಗ ರೋಗ ಮತ್ತು ಮನುಷ್ಯ ವರ್ಗಕ್ಕೆ ಇದೊಂದು ಪಿಡುಗು. ೧೯ನೇ ಶತಮಾನದ ಹಲವಾರು ಪಿಡುಗುಗಳ ಪೈಕಿ ಇದೂ ಒಂದಾಗಿ ಪ್ಲೇಗಿನಂತೆ ಇದು ಕೂಡ ಸೂಕ್ಷ್ಮವಾಗಿ ಜನರ ಮೇಲೆ ನೈತಿಕ ಮತ್ತು ರಾಜಕೀಯ ಪರಿಣಾಮವನ್ನುಂಟುಮಾಡಿತು. ಸರ್ಜನ್‌ರಾಸ್ ಅವರ ಆತ್ಮಚರಿತ್ರೆಯಲ್ಲಿ ಈ ಸೂಕ್ಷ್ಮವನ್ನೂ ಸೂಚಿಸಿರುವದಾಗಿದೆ. ಜಾತ್ರೆಗಳಾಗಲಿ ಅಥವಾ ಜನಜಂಗುಳಿ ಸೇರುವಂತಹ ಜಾಗಗಳಲ್ಲಿ ನಿಯಂತ್ರಣ ಕಷ್ಟಕರವಾದುದು. ಇದಕ್ಕೆ ಇಂಬುಕೊಟ್ಟಂತೆ ಬೆಂಗಳೂರಿನ ದಂಡಿನ ಪ್ರದೇಶದಲ್ಲಿ ಹಲವಾರು ವರುಷಗಳು ಕಾಲರಾ ಹಬ್ಬಿದಂತ ಜಾಗಗಳನ್ನೂ ಗಮನಿಸಿದಾಗ, ಇದರ ನೈಜತೆ ಸ್ಪಷ್ಟಪಡುವದು. ೧೮೫೭ರ ಸಿಪಾಯಿ ದಂಗೆಯ ನಂತರ ಕಾಲರಾ ಜ್ವರದ ಪಿಡುಗಾಗಲಿ ಅಥವಾ ಪ್ಲೇಗಿನ ದುರಂತವೇ ಆಗಲಿ ಬ್ರಿಟೀಷ್ ವಸಾಹತುಶಾಹಿಗಳಿಗೆ ಒಂದು ಕಬ್ಬಿನ ಕಡಲೆಯಾಗಿದ್ದು ಹಲವಾರು ಬ್ರಿಟೀಷ್ ಪದ್ಧತಿಯ ಔಷಧಿಯನ್ನು ಸ್ಥಳೀಯರು ಉಪಯೋಗಿಸಲು ಇಷ್ಟಪಡದೆ ಕೋಚ್ ಅವರ ಕಾಲರಾ ಸಂಶೋಧನೆಯ ಫಲ ೧೮೮೩ ರಲ್ಲಿಯೇ ಲಭ್ಯವಿದ್ದರೂ ಅದನ್ನು ಇಂಡಿಯನ್ Investigator ತಿರಸ್ಕರಿಸಿ, ಸುಮಾರು ೧೦-೧೫ ವರುಷ ಔಷಧಿಯ ಉಪಯೋಗ ಪಡೆಯದೆ ಹಲವಾರು ಜನರ ಸಾವು ನೋವು ಅನುಭವಿಸಿದ್ದನ್ನೂ ಅಂಕಿಗಳಿಂದ ದೃಢಪಡಿಸಬಹುದು. ಕಾಲರಾ ನಿವಾರಣಗೆ ಸ್ವಚ್ಛತೆ ಅತಿ ಮುಖ್ಯ ಎಂದು ಪ್ರತಿಪಾದಿಸಿದರು. ಇದನ್ನು ಪ್ರತಿಪಾದಿಸಿದ ಸರ್ಜನ್ ರೊನಾಲ್ಡ್‌ರಾಸ್ ಅವರನ್ನು

ಮರೆಯುವಂತಿಲ್ಲ. " Great is sanitation the Greatest work except discovery.......some times whole families of them crowded into one cell mixed with cattle, Vermin and ordure". ಆರೋಗ್ಯ ರಕ್ಷಣೆ ಅತ್ಯಂತ ಮುಖ್ಯವಾದ ಕೆಲಸ ಹಾಗು ಮನುಷ್ಯನ ಕರ್ತವ್ಯ- ಈ ಪಟ್ಟಣವು ಕೊಳಕು ಮತ್ತು ಖಾಯಿಲೆಯಿಂದ ನರಳುತ್ತಿದೆ. ಧರ್ಮ ರಾಜಕೀಯ ಮತ್ತು ಕಲೆಗಳನ್ನು ಈ ಗುಡಿಸಲುಗಳಲ್ಲಿ ವಾಸವಾಗಿರುವ ಜನರಿಗೆ ಬೋಧಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಹಲವು ಸಾರ್ತಿ ಒಂದೇ ಮನೆಗೆ ಸೇರಿದ ಹಲವಾರು ಜನ ಒಂದು ಚಿಕ್ಕ ಗುಡಿಸಲಿನಲ್ಲಿದ್ದಾರೆ. ಇವರ ಜೊತೆ, ಕುರಿಗಳು, ಕೀಟಗಳು ಮತ್ತು ದುರ್ಗಂಧ ಕೂಡ ಇದೆ. ಇವರಿಗೆ ಈಗ ಬೇಕಾಗಿರುವ ಸ್ವಚ್ಛತೆ, ನೀರು ಮತ್ತು ಆಹಾರ. ಆದರೆ ಬೆಂಗಳೂರು ನಗರವಾಸಿಗಳಿಗೆ ೨೧ನೇ ಶತಮಾನಕ್ಕೆ ಕಾಲಿಟ್ಟರೂ ಇದನ್ನು ಕೊಡಲಾಗಿಲ್ಲ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Hayavadana Rao., *Mysore Gazetteer,* Vol II (Modern) New (edn) 1930 p. 2817.

೨. B. Lewis Rice., Mysore Gazetteer, Vol.II, P.52

೩. *Encyclopedia Britannica* Vol. 5. P.367 N.D. and Visvakosha vol.4. P.622.

೪. David Arnold., *science Technology and Medicine in colonial* India. Delhi Pub. 2000 P. 81-86

೫. Cecil Woodham Smith., *Florence Nightingale 1820-1910,* London, 1950. P. 408-409. See also. Leela B, Plague in Karnataka. Indica. vol.35 ,1999.

೬. Lyall J.B. : *Report on the admnistration of the Civil and Military station of Bangalore for the year 1885-86.*

೭. File no 182 of 1896. *Report on cholera, general Sanitation and the sanitary department* and regulation in civil and military station. Bangalore.
ಸರ್ಜನ್ ರೊನಾಲ್ಡ್‌ರಾಸ್ ಅವರ ಪ್ರಕಾರ ಬ್ಲಾಕ್‌ಪಲ್ಲಿ ಮತ್ತು ಜನಕಲ್ ಬಸಾರ್ ಈ ಎರಡೂ ನಗರದ ಮಧ್ಯದಲ್ಲಿದ್ದು ಇದರಲ್ಲಿ ಸುಮಾರು ೫೦,೦೦೦ ಜನರು ವಾಸವಾಗಿರುವರು. ಮತ್ತು ಅಲಸೂರು ಇಲ್ಲಿಗೆ ಹತ್ತಿರ. ಇಲ್ಲಿ ಇರುವ ಮನೆಗಳು ಸಾಮಾನ್ಯವಾಗಿ ಒಂದಕ್ಕೊಂದು ಹೊಂದಿಕೊಂಡಿವೆ. ಮನೆಗಳನ್ನು ಕಟ್ಟಿರುವ ದೋಷದಿಂದ ಹರಿಯುವ ಮಲಿನ ಎಲ್ಲವೂ ಬೀದಿಗೆ ಬಂದು ಮುಖ್ಯವಾಗಿ ಮೂಲ ಬಚ್ಚಲಿಗೆ ಸೇರುತ್ತದೆ. ಇದು ಮುಚ್ಚದೆ ತೆಗದಿರುವದು. ನೀರಿನ ಸರಬರಾಜು ಹೆಚ್ಚಿಲ್ಲವಾದ್ದರಿಂದ ನಾಲೆಗಳು ಶುಚಿಯಾಗಿಲ್ಲ. ಇದಕ್ಕೆ ಸಾಕಷ್ಟು ಸಿಬ್ಬಂದಿಗಳ ಅವಶ್ಯಕತೆ ಇದೆ. ಇಲ್ಲಿನ ಕಚಡವನ್ನು ಕಸಪರಿಕೆಯಿಂದ ಗುಡಿಸುವುದರಿಂದ ಮಲಿನ, ನೀರಿನಲ್ಲಿ ಬೆರೆಯುವದು ಅಥವಾ ನಿವಾಸ ಸ್ಥಳದ ಪಾಯಿಖಾನೆಯ ಸಣ್ಣ ಮೋರಿಗಳು ಬೀದಿಯ ಮೋರಿ ಸೇರುವದು. ಮುನಿಸಿಪಾಲಿಟಿ ಇದರ ರಕ್ಷಣೆಯ ಜವಾಬ್ದಾರಿಯನ್ನು ಹೊರುವುದಿಲ್ಲ ಮತ್ತು ಇದರಿಂದ ಮಳೆಗಾಲದಲ್ಲಿ ಕಚಡವು ಹರಿದು ಮನೆಬಳಿಗೂ ಹರಿದು, ಬೀದಿಗೆ ಸೇರಿ ಊರನ್ನೆಲ್ಲಾ ಕೊಳಕು ಮಾಡುತ್ತದೆ. ಇದನ್ನೂ ಊರಿನ ಮಕ್ಕಳು- ಜನರು ಮನೆಗೆ ಒಯ್ಯುತ್ತಾರೆ. ಪದೇ ಪದೇ ಇದರ ದುರ್ವಾಸನೆ, ಮಲಿನ ರಸ್ತೆಮೇಲೆ ಓಡಾಡುವ ವಾಹನದಿಂದ ಎಲ್ಲಾ ಕಡೆಗೂ ಹರಡುತ್ತದೆ.
*ಸರ್ಜನ್ ಕರ್ನಲ್ ಎಸ್.ಬಿ.ಹಂಟ, ಸೈನಿಕ ಮೆಡಿಕಲ್ ಸರ್ವೀಸ್ ಅಧಿಕಾರಿ ಪ್ರೆಸಿಡೆಂಟ; ಡಾ। ಎ.ಎಫ್. ಡಾಬ್‌ಸನ್

೮. Ronald Ross., Memoirs. 1923. p.180
ಬೆಂಗಳೂರಿನ ಬ್ಲಾಕಪಲ್ಲಿಯ ವಿವರಣೆ ಈಗಾಗಲೇ ಕೊಟ್ಟಿದೆ. ಕಳೆದ ೨೫ ವರುಷದಲ್ಲಿ ಸರಾಸರಿ ೭೭ಸಾವು ಕಾಲರಾದಿಂದ ಸಂಭವಿಸಿದೆ. ರಾಸ್‌ರವರ ವರದಿಪ್ರಕಾರ, ಎಲ್ಲಿ ಮನೆಗಳು ಅತ್ಯಂತ ಹತ್ತಿರಿದ್ದು ಚರಂಡಿಗಳು ಮನೆಗೆ ತಾಗಿದಂತೆ, ಮತ್ತು ಹೆಣಗಳನ್ನೂ ಹೂಳುವ ಸ್ಥಳಗಳು ನಗರಕ್ಕೂ ಹತ್ತಿರವಾಗಿದ್ದು ಮತ್ತು ಹತ್ತಿರ ಚರಂಡಿ ಇರುವದು, ಅಲ್ಲೆಲ್ಲಾ ರೋಗ ಹಬ್ಬಿದ್ದನ್ನೂ ಮತ್ತು ಸಾವುಗಳನ್ನೂ ಕಾಣುತ್ತೇವೆ. ಮತ್ತು ಇದು ಊರಿಂದ ಊರಿಗೆ ಪ್ರಯಾಣ ಮಾಡುವ ಯಾತ್ರಿಕರಿಂದಲೂ ಹಬ್ಬಿದೆ. ಮದ್ರಾಸಿನಿಂದ ಬೆಂಗಳೂರಿಗೆ ಪ್ರಯಾಣಿಸಿದ ಜನರು ೧೪ ಅಗಸ್ಟ್ ೧೮೯೫ ಪೇಟ್ಟಾದಲ್ಲಿ ತಲಪಿದ ತಕ್ಷಣ ಸಾವನ್ನಪ್ಪಿರುವದು. ಮತ್ತೆ ೬ ಜನರ ಸಾವು ಇಲ್ಲೇ ಸಂಭವಿಸಿದೆ. ೨೩ಅಗಸ್ಟ್ ೯೫ರಂದು ಒಂದೇ ಸಂಸಾರದಲ್ಲಿ ಹಲವು ಸಾವುಗಳು ಮುಸ್ಲಿಂ ಮತ್ತು ಕುಟುಂಬದಲ್ಲಿ ಬ್ಲಾಕ್ ಪಲ್ಲಿಯಲ್ಲಿ ಸಂಭವಿಸಿದೆ. ಆದ್ದರಿಂದ ಅತ್ಯಂತ ದಟ್ಟ ಜಾಗಗಳಲ್ಲಿ ಕಾಲರಾ ಸಂಭವ ಹೆಚ್ಚು. [Ross Koimald; Report. file no 182-1896 surgon major (A)

೯. Surgeon major Ross (on special duty). Report on cholera, general Sanitation and the Sanitary department and regulation in Civil and Military station 1896 (ಕಾಲರಾ ಪಿಡುಗು ಬೆಂಗಳೂರಿನಲ್ಲಿ ಹಬ್ಬಿದ್ದು 23 Aug.1895-13 oct-1895)

೧೦. Megros, Ronald Ross. 1931. P.61

೧೧. Ronald Ross, Memois, 1931. p.61 1923. P.182.

೧೨. Letter from L.E Buckley ICS to First Asst. to the Resident in Mysore. Bangalore 10th Nove. 1896.

೧೩. File no 1-22 letter from President-Muncipal commission. to First asst to Resident in Mysore. Bangalore. 5/May/ 1896. see also. Muncipal notice 22/May/1896.

೧೩ಅ. 1st Resident C.M.station. to the President, Muncipal Commissioner, C.M.station. Bangalore, B/March./1897.

೧೪. Ross, Memoires. p.183

೧೫. Donald Robertson (Resident) Report on the Civil and military station for the year 1896-97 p.21

೧೬. Ronald Ross, Memoirs. P. 183 When Ronald Ross was the officiating head of Bowring hospital he was assisted by K.N. Appiah in his Malarial Researh. Administration Report of the civil & Military station. 1905-30.

೧೭. john Rowlord: *The Mosquitomah,* London 1958. p. 143.

೧೮. Ronald Ross, Memoirs P.186.

HIGHLIGHTS OF THE ARTICLES

1. **A Preview of Archaeo-relics of Gudekote in Koodligi Taluk**

   -Jayanna Ullanhalli

   Sri Jayanna has explained the availability of Archaeo-relics available at Gudekote starting from Pre-historic period. Also the descriptions of Kalleshwara Temple, Viraktmutt, Idol of Nunkappa, Mastigal etc., found in Gudekote has been furnsihed.

2. **Archaeo relics of Early historic period in Tumkur District**

   -Dr. K.B. Shivatarak

   Dr. Shivatarak has narrated the availability of the relics in different parts of Tumkur Dt from the Early historic period. He points out especially the non-availability of the symptoms of urbanised culture, in this area and furnishes the probable reason for the same.

3. **Some New spots of Megalithic culture**

   -Sasalu J.Vishwanath

   Sri Vishwanath has explained the spots of Megalithic culture found near ujjani hills and menhir groups found in Jalagere village.

4. **The archaeological relics of Kittoor**

   -K.C. Malligavad

   The author has explained the special features of the archaeo-sculptural Like, shivalinga, Bharmappa and Thirthankara Etc., found at Kittoor.

5. **The Sculptures and relics of Talikote**

   Shivappa N. Niralgi

   Sri Niralagi has Presented the sculptures and relics available at Talikote, duly explaning the special features of the same. The historical back ground of the locations has also been furnished based on inscriptions.

6. **Unknown Coins of ruling dynastices of Karnataka**

   -Mandarke Nityanada Pai

   It is interesting to know about Ramadeva Gadyana of Hoysala Shantale; and Sri Krishnarayapana of Krishnadevaraya Signhana Varaha of sevuna king and their features. The author has given the characteristics of the same with the comparitive explanations.

7. **Dugaiya the Sculpturst of Sirivalige**

   -Mr. Jagadish M.H. Agasibagilavar

   Mr. Jagadish has given out a brief description of the inscription inscribed on the base of a Bhairava Sculpture present in the Muesum of Murugamutt of Anandapura. He draws our attention towards the speciality of the Sculpturist Dugaih.

8. **The Yoga Narayana Idol and temple at Jamakhandi**

   -Keshava umargi.

   Sri Umarji has brought out the special features of the Sculpture of Yoga Narayana and its temple at Jamakhandi, adding some local affiliations to it.

9. **The Temples and inscriptions in the BurudaGunta Village**

   -Dr. B. S. Shamala Ratnakumari

   The Author has explained the special features of the temple with a technical base. The details of the both published and unpublished inscriptions in the Burudagunta village has also been clearly furnished . The

present state of affairs to these archaeo remains, has also been indicated.

10. Evolution of the Sculpture of Durga

-Dr. K. Vasantha Lakshmi

The author has dealt the subject from iconograpy point of view and cited the impressions from Agamic texts etc., in delineating the features of Durga. Also the places where Durga Idols could be seen have also been indicated.

11. Yantra Shilpa in Samarangana Sutradhara

-Dr. S. Jnanananda

The author has explained the various aspects with historical applications of 'Yantra Shilpa' citing the authorities and his experience; It is interesting to note how the varieties, Structure of Yantrashilpa and its role is usefull in the practical life.

12. Jayadurga of Kannarapadi

-K. Narayana Naik

The author has brought out the Special features of the diety Jayadurga and furnished Various interpretations given by some authorities, with due illustrations. The Spiritual aspect of the diety has been well drawn to our attention. It would have been more characteristic if the period of the Sculpture of the diety had been furnished.

13. Bramha Idol in Goa

-Smita Surebankar

Smt. Smita has drawn our attention to the special features of a sculpture of Bramha at Goa, which seems to belong to the period of Goan Kadambas. It is interesting to note the Custom of the puja to Bramha, which is not a normal tradition.

14. The hero stone sculpture of Nambi halli

-K. R. Narasimhan

Sri Narasimhan has brought to our notice a vivid new hero stone and explained the special features of sculpture of the same with a comparitive analysis.

15. Agratala Sanchara : Pada Bedha - A Perview

-Dr. Karuna Vijendra

The author while explaining the Agratala Sanchara Padabedha in the new light deals with Achalan - Nata Sevya with reference to the Scupltues and inscriptions found at Lokeshwara temple built in the name of Lokamahadevi the Queen of Chalukya King Immadi Vikramaditya. The illustrations have a bearing with the inscriptional contents and sculptural technicality.

16. Two unpublished inscriptions of Davanagere

-B. Rajashekarappa

Prof. Raja Shekharappa has discovered an inscripiton belonging to Rayapandya period Ucchangi pandya dynasty, which characterised his personality. further the origin and expansion of Gavanigana halli has also been Explained The second inscription being incomplete just purports a donation to Hari hareshwara.

17. An unpublished inscription of Veeraballala at Manne

Dr. H.S. Gopala Rao

The incription is sufficiently effaced and it is difficult to make out full meaning. Any how the author endorses the complete titles of Veeraballala mentioned in the inscription and further based on some words likes Putari he says about the practice of Basavi that might have been invogue at Manne and some indications also available at Manne.

18. An unpublished Inscription of Ramanagaram

Dr. K.G. Goapalakrishna, M.G. Nagaraja

An inscription in the excurts of Ijoor

Ramanagaram discovered by the authors which brings to our notice that one Ranamaiah Melahalli attacked Ijoor. Nathagi of Ijoor fought againist and attained heaven. This new inscription enable us to know that the inception of Ijoor took place during 11th and 12th century.

19. **An unpublished inscription of the period of Sevuna King Kannara**

-Adappa Pasodi

Mr. Pasodi has analysed the content of the incomplete unpublished inscription and draws our attention towards the Mahapradhana Nagadevarasa of Sayanahalli.

20. **An unpublished inscription of Yellambalase and Senavara Dynasty**

-Dr. P.V. Krishna Murthy
M.N. Prabhakar

The author while explaining the incomplete unpublished inscription pertaining to the period of Senavaras has detailed the history of the Samiyabbe, Udaya Vidyadhara and the role of Gamundas in the reign of Senavaras.

21. **Unpublished Hero-Stone inscriptions of Avinahalli**

-Jayadevappa Jainakeri

Sri Jainakeri has drawn our attention to the special features of two new hero-stone inscriptions of Avinahalli duly explaining the sculpture and the textual matter.

22. **An unpublished Copper Plate inscription of Nayakas of Santhi Bennur**

-Santhe Bennar Sumathindra Nadig.

The Author explains on the basis of the new inscription the diety, lands donated, and contributions of Nayaks of Santhebennur as depicted and puts forth the new information on the reign of those Nayakas.

23. **A New Herur Inscription of Alupa Kulashekhara**

-Dr. B. Jagadeesha Setty

Dr. Shetty in his Presentation brings to our attention that the new inscription discoved at Herur, belongs to Alupa Kulashekhara and helps us to understand the Political history of the Alupa dynasty at Tulunad and the reign of Kulashekara - II.

24. **Kolake Irvattur Inscription**

Dr. P. N. Narasimha Murthy

Kolake Irvattur is a village of Karkala Tq. in Udupi District. The Inscription was found inside the prakara of the Gopalakrishna temple of Irvattur, dated 1400 April 24 & belongs to the period of Vijayanagara king Hrihara-II. The Epigraph is of Socio-Political importance. It speaks of a situation of anarchy arising out of the misdeeds of a Ballala whose name is not indicated. Ballala held hereditary revenue administrative rights. To avert the situation a big council consiting of People of Seven Villages members of the councils, and outsiders met in the presence of two royal personages - the Banga and the Chauta Kings and made defensive settlement for protecting the people of seven villages againist the tyrany of Ballala. Any how the council also appealed to the Vijayanagara Governor of Majgature rajya to protect them from the hooligan activities of the Ballala. Though Political agreements, mutual settlements and the like were quite common in the Past in Dakshina Kannada, the Irvatturu settlement is unique.

25. **Hero-Stones of Tungala**

-Dr. Dhanavanth Hajauagola

The author while explaining the feature of the first hero stone opines that it pertains to a women of Heroic deed (The photo pictures are not clear to give conclusive word.)

26. **A Study of Inscriptions of North Canara and its Problems**

-Dr. K.G. Vasantha Madhave

Dr. Vasantha Madhava in his purview of the North Canara inscritptions presents the history of the Study of inscriptions of N. Canara, the Political conditions, Geographical vividty, Socio-cultural aspects, as depicted in published and unpublished inscritpions and the problems encountered regarding the place names.

27. **Nayakas in the Nagamangala Inscriptions**

-R. Venkatesha Murthy

The author has concentrated on the meaning and derivation of the word 'Nayaka' - Further he has given a comparitive explanations for the conclusions he has drawn using the Scholarly sources and inscriptions, with a particular reference to Nagamangala.

28. **The unpublished inscriptions and Archaeo-materials at Devarayana Durga and Chelur**

M.G. Nagaraja, Dr. D.R. Devaraj

The authors have explained the temples, tanks, sculptures and temples of Vijayanagara period; the Nayaka inscription discovered belongs to the period of Irugappa Nayaka and Viraballala-II.

29. **The poets and engravers of Epigraphs of Bellari District**

-Dr. S.M. Nagabhushana

The author in his essay has listed out the poets and engravers of epigraphs in Bellari District, based on the inscriptions found in Bellari District. He draws our attention towards the Service rendered, land donated to the engravers and their Socio-cultural Service.

30. **The bronze records related to the inception of Dashamapura Village.**

-M.K. Durugappa

The author has given, the details available in the bronze records and evaluated the same. He also brings to our attention the usual story of the places where the rabits resisted the hunting dogs, which ultimately used to become the places for the inception of different Royal dynasties of Karnataka. The author based on the bronze records says the village Dashamapura bears the same Kind of story in its inception.

31. **The Panchanga of Bagali**

-K.V. Raja gopal

The author has indicated the evoluation of the placename Bagali and further explained the application of Bagali panchanga in the then life of Bagali.

32. **Swadi and its Architectural Specialities (Swadi - Vastu visheshagala ondu Avalokana)**

-Dr. S. K. Joshi

Dr. Joshi brings out the special features of Architecture involved in temples, Mutts, and forts of the Swadi with various technical subdivisions, and a comparative note and drawings have been furnished.

33. **The local history and its physical base**

-S.R. Arun Kumar

The authour draws attention towards the folk - oral traditions myths etc. which can be used for the construction of local history along with the authorised sources, provided the materials attributed are scientifically subjected to forensic test.

34. **Gaza Bente Kara- a note**

-Dr. H.S. Usharani

The article explains the varieties of hunting

of Elephants with due illustrations and the Kings of different royal dynasties involved in elephant hunting.

35. **The route of Shivasharana's March in Kalaghatagi area**

-Dr. Channakka pavate

Dr. Channakka has interwoven the historical incidents with respect to Shivasharanas based on the variety of resourceful records and gives out the possible routes tred by shivasharanas after the revolution of kalyana in 12th Century and the role of Bijjala's army played in this regard.

36. **A note on the History of Madalageri Village**

-Madalageri Kotresh

Mr. Kotresh on the basis of inscriptions derives that the Village Madalageri was existing before 13th century. It was a jaina centre according to him. The Village seems to have been shifted to the present place from its original location due to flood havocs.

37. **Halu Hullur - An unknown place of historical Importance**

- Devendra Madavanara

Sri Madhavanara draws our attention towards the present state of Archaeo Materials of Halu hullur, with due explanations of the remains of the temples and their architerture now in ashes. He further suggests the actions to be taken in this regard.

38. **The Historic Monuments of Lingasugur**

-Amaresh Yatagal

The author decribes the hisotrical monuments existing in Lingasugar, and explanations have been presented for each item of Monuments.

39. **The role of Nidugal Nayakas in developing water resources**

-Dr. D.K. Chittiah Poojar

Dr. Poojar while enlisting the importance of the increase of water resource put forth, that any development of a place fundamantally rests on water resources Further he explains in this regard how the paleyagars of Nidugal had a forethought in creating water resources and developed the area they ruled.

40. **Agrahara Muttige - a Cultural perspective.**

-MaheshKumar H.Patil

Mr. Maheshkumar has explained regarding the existence of Educational institutions, Mutts etc., in Muttige agrahara and the construction of temples in the reign of different Royal dynasties in that area. A brief cultural perspective has been presented in this regard

41. **The Last date of Hoysala Vishnu vardhana - a reexamination**

-Dr. M. G. Manjunath

The author citing the views of many authorities on the last dates of Vishnuvardhana and putting forth the inscriptional data reviewed. He argues that this Vishnuvardhana survived till 1148 A.D. and he was the first emperor of Hoysala dynasty.

42. **The Kongalvas and Jainism in Coorg**

-Dr. M.G. Chandrakantt
-M.G. Nagaraja

The Authors have derived the origin of Kongalvas in the back gorund of the word Kongani pertaining to Gangas. They say that Kongalvar were their subardinates at first, later switched thier loyalty to Cholas. The Cholas installed Kongalvas in Coorg who can be deemed as later Kongalvas. 'The

jainism has flournished in the reign of Kongalvas and Kodagu Srirangapattana had it inception during their period probabaly at the behest of Cholas

43. **Vaishnavism in North Canara District**

-Dr. S Ganapthi Gowda

The author deals about the prevalance of Vaishnavism in N. Cancara Dt. based on the inscriptional evidences, Sculputres available.The encouragement provided to vaishnavism by the Royal dynasties in the different periods since the second century A.D. has also been furnished.

44. **Halasandu Family**

-V. Ramesh Karanth

Sri Karanth on the basis of records pertaining to Halasa Nadu family of Kundapur Taluk, udupi Dist. has shed light on the services rendered by different persons of the family and dynasty tree of the family has also been furnished.

45. **The Kella Kings of Tulunadu**

-Dr. Pundikai Ganapayya Bhat

Dr. Bhat has given an analytical explainations for the origin of Kella dynasty; and its survival in different districts of Karnataka. and its independent establishment by 11th century in Tulunad being the home-land of Kella dynasty The author argues that the dynasty followed Jainism. The political relationship of Kellas with Gangas and Alupas as their mahamandaleshwaras also been delineated based on inscriptional evidences and authoritative Sources. The author opines a new light has been shed as the history of Kellas which was unknown till the date.

46. **The historical bearing of the vachana of Basavanna - an analysis**

-G.S. Dikshit

Prof Dixit, has analysed a vachana of Basavanna and extracted its historical meaning and supplies a variety of support for his theory on the last date of Basavanna.

47. **Laws and Racial Conflicts in the back ground Sravana belagola inscription.**

Dr. Devarakonda Reddy

Dr. Reddy has explained the different laws and customs vague among Various communities and conflicts used to occur whenever it they have been encroached.

48. **Chandravarma an Artist in oblivion**

-G.S. Bhoosagond

The author himself being an artist has sketched out the life history and achievements of B.R. Kumbara i-e Chandravarma. He has also evaluated the artisitc work and talent of Chandravarma and argues Chandra Varma is no less a personality than Raja Ravivarma in the art world.

49. **Lavani of Chitradurga war (chitradurgada ladayi lavani)- a first published work**

Pr. Lakshman Telagavi

Prof. Telagavi has presented the first published work of 'Chitradurgada Ladai Lavani' of M.Veera Muddanna, Who was also the author of siriyala charitre, Krishnaraja pattabhisheka in lavani style. The present ladayi Lavani is the first of its kind, being a special Kind and in describing the war between Hyder and Raja Veera Madakari Nayak to the core. It is Pleasing to read the impartial charateracterisation of Madakari Nayaka and his Valour in the Lavani.

50. **Chidanandavadhoota Charitra of Ayyappa Kavi-an unpublished work**

-Dr. T. Hallikuri

Dr. Hallikeri has pictured the life history of the famous Chidanada Avadhoota, in the

avadhoota tradition, based on the literary work of the poet Ayyappa. The author has given his findings based on the field work and other Literary Sources.

51. **A revised Version of the Lavani on Muandaragi Bheema Raya -**

-Dr. B.V. Sirur

Dr. Sirur has given a revised version of the lavani on Munduragi Bheema Raya, Which depicts his heroic personaltity. The authtor has Shown the limitations of previous editions brought out by the different Editors.

52. **Sindigeri Nilamma -a life history.**

-Dr. K. M. Maitri

The authour has given a comparitive account of the life history of Nilamma a famous Shivasharane of 18th century of Sindigeri in Bellary district, as depicted in folk, and literarry Sources, Family records etc., in addition to the oral interviewes made. The characteristic personality of Neelamma is worthy of our Attention.

53. **The Gokarna records related to Sri Ramachandrapura Matha**

-Dr. A.K. Shastri

The essay by Dr. Sastry has brought the importance and influence of the Sri Ramachandrapura Mutt extended from North Canara up to kerala and the spread over of its disciples in all those areas : The religious economic and social role of the mutt has also been furnished based on traditional, historical and inscriptional evidences with a special stress on Gokarna records. Also the Corrections required to be made in the copper plate of Rama chandrapur mutt to Vijayanagara references have also been mentioned with due comments in the footnote.

54. **Archaeo-Survey of Gokarna Ramachandra pura Mutt**

Keladi Gunda Jois

Mr. Jois giving the backgound of the inception of mutts, records archaeo materials like palmleaf Scripts Manuscripts, inscriptions and historical records pertaining to the above mutt.

55. **Sri Ramachandrapura Mutt and its branches in Bilagi area**

-Vishwanatha S. Shet

The author has enlisted the branches of Sri Ramachandrapra Mutt, depicting their present state, the role and the influence of the Ramachandrapur mutt in the are a and honour endowed on it in the reign of Keladi Bilagireulers.

56. **Hasti-Danta Simhasan of Rama chandrapura Mutt**

-Dr. G. V. Kallapura

Dr. Kallapura While Explaining the History of the Throne of Ramachandrapura Mutta focusses our attention to such things like: reason for its preparation, vivid style, artistic eminence, the persons involved etc.

57. **The Tradition of Mulubagil Krishannda Mutt**

-Mr. B. Nanjunda Swamy

The author has explained the tradition of Krishnanda Mutt in detail using the various sources like inscriptions sannads, records etc.,

58. **The family life of Bharamanna Nayaka of Chitradurga**

Dr. D.N. Yogishwarappa

Dr. Yogishwarappa has given the details of family members of Bharamana of chitradurga and analysed how those relationships have helped the admisistrative and political Scenerio. The impact and the

limitatinons of having many wives and children of the Nayaka have also been presented.

59. Nolambavadi 32000 and Pandyas of Ucchangi:

-Kum. Ba.sadashivappa

The author has explained the evolution of Nolambavadi Ucchangi Pandyas and their administration citing different authorities including his own conclusions based on the inscriptions.

60. Kadamba Kamadevarasa of Chandavara- New aspects and solutions

- Y. Umanatha Shenai

The author while depicting the history of Chandavara Kadambas and Pandya Arasar has shown that they are different dynasties. Based on the new inscription found in the Raja Rajeshwari temple a hill near sandalli. Veera Kamadeva of this Chandavara Dynasty was a Shaivite and patronised Vaidika dharma and donoted Lands to the Sons of Shankara Upadhyaya and he was a great warrior bearing the title 'Subhata Chudamani.'

61. Buddivanta surappaiah in the court of Karkala Bhairava Arasaru

P. Srinivasabatta

It is intersting to note the different aspects of the attributed to epithet 'Buddivanta' that occurs in inscriptions Mr. Bhat has explained the same w.r.t Buddivanta surappaiah while furnishing the same in terms of bio-data to some extent.

62. Bidanur Nagara - a Special study

-B.S. Ramabhatta

The author has brought out an extensive historical facts in his revised study on Bidanur Nagara of Keladi dynasty. The additional information furnished by him is interesting.

63. A Geological study of the Capitals of Keladi Kingdom

Dr. H. Chandrashekahar

Has made a Scientific analysis of the Captitals and forts encircled them and the improtance of thier location from the strategic point of view.

64. The Hydralogical informations Shivatatva Rathnakara

-Haribara Srinivasa Rao

Mr. Rao has made a good analysis of formation of Clouds and the rainfall in the background of the information depicted in Shivatatva Ratnakara of Keladi Basavaraja.

65. The Rural Administration System after the Nayaka dyanasty at Chitradurga Area

-Dr. H.E. Basavarajappa

The essay brings out a good account of the rural administration during 18th centruy in Chitradurga tq. area with an indepth study of records and field work.

66. The constructive works inspired by Gandhiji in Tumkur

-S. Nagarathnamma

The author has explained the vivid constructive works taken up by the people of Tumkur Dt, who were inspired by the very action of the Gandhiji in this regard.

67. Tank Code bill-1911 : An Analysis

-Dr. T.V. Nagaraj

Sri Nagaraj has well analysed the tank system vogue in Mysore state and its execution. He has also explained the historical development of the system and its limitations.

68. The Cotton Marketing in Coastal Karnataka & Colonial Administrative Policy.

- Dr. Malathi K. Moorthy

Dr. Malathi while explaining the Cotton Marketting policy of English administration and says that its Consequences this policy neither improve a the cotton marketting nor maintain the importance of the Coastal harbour. alike etc., Kumta, in N. Canara. The author Opines that Colonial administrative negligence has resulted in the economic backwardness of North Canara and South Canara.

69. 'A Forgotten Empire' of Robert Sewell and Karanataka History Volumes of Hayavadana Rao

Gurumurthy Pendakur

Sri Pendakoor While furnishing the Contents of the works of Sewell and Hayavardana Rao in brief, compares the merits and demerits of them. Still the author draws our attentsion mainly towards the history of Vijayanagar empire in reminiscence and the History of Karnataka from 5th century B.C. to 1930 A.D. With due sub-divilgional periods.

70. An Unpublished Manuscript of L. Bowing in British Library

-S.L. Srinivasa Murthy

Mr. Murthy has thrown a Light on the works of L. Bowring, which furnishes details regarding the history of Mysore and about Mummadi Krishnaraj Wodeyar. Also the work contains notes on the contemparary personalities that Bowring met and the photograps etc . taken by him.

71. The Criteria followed by foriegn scholars in publishing classic Kannad Liturature

Dr. Srinivas Haranur
S.L. Srinivasa Murthy

The authors have analysed the coutributions of Kittel, Rice Etc., to put the Classic Kannada Literature to lime light by maintaining a criteria for the same. They also encouraged the native scluplars in editing the classic literature and the publication.

72. Ronald Ross and his relations to Mysore

-Dr.B. Leea

Dr. Leela has given a brief account of the services rendered by Ronald Ross in controlling the cholera disease in Mysore state, and researches made by him in this regard.

ಕರ್ನಾಟಕ ಇತಿಹಾಸ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸದಸ್ಯರು
(೧೯೮೬ ರಿಂದ ೨೦೦೩ರವರೆಗೆ ವಿವಿಧ ಅವಧಿಗಳಲ್ಲಿ)

೧. **ಆಜೀವ ಗೌರವಾಧ್ಯಕ್ಷರು** : ಪ್ರೊ। ಜಿ. ಎಸ್. ದೀಕ್ಷಿತ್ - ೧೯೯೬ ರಿಂದ

೨. **ಅಧ್ಯಕ್ಷರು** : ಪ್ರೊ। ಜಿ. ಎಸ್. ದೀಕ್ಷಿತ್-೧೯೮೬-೯೬, ಡಾ। ಸೂರ್ಯನಾಥ್ ಕಾಮತ್-೧೯೯೬

೩. **ಉಪಾಧ್ಯಕ್ಷರು** : ಡಾ। ಕೆ. ಆರ್. ಬಸವರಾಜ್-೧೯೮೬, ಎಂ.ಜಿ. ನಾಗರಾಜ್-೧೯೮೬-೮೮ ಮತ್ತು ೧೯೯೩ರಿಂದ
ಕೆ. ಅಭಿಶಂಕರ್-೧೯೮೮-೯೦, ಡಾ। ಅ ಸುಂದರ-೧೯೮೮-೯೦, ಡಾ। ಸದ್ಯೋಜಾತ
ಶಿವಾಚಾರ್ಯ ಸ್ವಾಮಿಗಳು-೧೯೯೧, ಡಾ। ಎ.ವಿ. ನರಸಿಂಹಮೂರ್ತಿ-೧೯೯೧
ಡಾ। ಡಿ. ವಿ. ದೇವರಾಜ್-೧೯೯೩-೯೬, ಪ್ರೊ। ಲಕ್ಷ್ಮಣ್ ತೆಲಗಾವಿ-೧೯೯೮,
ಡಾ। ಸಿ. ಎಸ್. ಪಾಟೀಲ್-೨೦೦೦, ಡಾ। ಎಚ್. ಆರ್. ರಘುನಾಥ್ ಭಟ್(೨೦೦೨)

೪. **ಪ್ರಧಾನ ಕಾರ್ಯದರ್ಶಿಗಳು** : ಪ್ರೊ। ಲಕ್ಷ್ಮಣ್ ತೆಲಗಾವಿ-೧೯೮೭, ಎಂ.ಜಿ. ನಾಗರಾಜ್-೧೯೮೮-೯೦
ಡಾ। ಎಚ್. ಎಸ್. ಗೋಪಾಲರಾವ್ - ೧೯೯೧ರಿಂದ

೫. **ಕಾರ್ಯದರ್ಶಿಗಳು** : ಲಕ್ಷ್ಮಣ ತೆಲಗಾವಿ, ಕೆ.ಆರ್. ಗಣೇಶ್-೧೯೮೬, ಡಾ। ಎಚ್.ಎಸ್. ಗೋಪಾಲರಾವ್-೧೯೮೭,
ಪ್ರೊ। ಆರ್. ಪರಿಮಳ-೧೯೮೬, ಡಾ। ಎ. ವಿ. ನರಸಿಂಹಮೂರ್ತಿ-೧೯೮೮-೯೦
ಕೆ.ಜಿ. ನಾಗರಾಜನ್-೧೯೮೮-೯೦, ಡಾ। ಅ. ಸುಂದರ-೧೯೯೧-೯೩
ಪ್ರೊ। ಕೆ. ಎನ್. ಹಿರಣ್ಣಯ್ಯ-೧೯೯೧, ಡಾ। ಎಚ್.ಆರ್. ರಘುನಾಥಭಟ್-೧೯೯೩-೯೬
ಡಾ। ದೇವರಕೊಂಡಾರೆಡ್ಡಿ-೧೯೯೩-೯೬, ಡಾ। ಕೆ. ವಸಂತಲಕ್ಷ್ಮಿ-೧೯೯೬
ಡಾ। ಚೆನ್ನಕ್ಕ ಪಾವಟೆ-೨೦೦೦

೬. **ಕೋಶಾಧ್ಯಕ್ಷರು** : ಎಸ್. ಎ. ಜಗನ್ನಾಥ್-೧೯೮೬, ಕೆ. ಆರ್. ಗಣೇಶ್-೧೯೮೬-೮೮
ಎಂ. ಬಿ. ಪಾಟೀಲ್-೧೯೮೮ರಿಂದ

೭. **ಸದಸ್ಯರು : ಸರ್ವಶ್ರೀ** :

ಡಾ। ಸೂರ್ಯನಾಥ್ ಕಾಮತ್-೧೯೮೬-೯೬
ಶ್ರೀಮತಿ ಕಮಲ ಸಂಪಳ್ಳಿ
ಡಾ। ಚೂಡಾಮಣಿ ನಂದಗೋಪಾಲ್-೧೯೮೬
ಎಚ್. ಶ್ರೀಶೈಲ ಆರಾಧ್ಯ-೧೯೮೬
ಎಸ್. ಎ. ಜಗನ್ನಾಥ-೧೯೮೬
ಡಾ। ಕೆ. ಜಿ. ವಸಂತಮಾಧವ-೧೯೮೬
ಡಾ। ಕೆ. ಆರ್. ಗಣೇಶ್-೧೯೮೮
ಡಾ। ಪರ್ವೀನ್ ಝುಕ್ಸಾನಾ-೧೯೮೮, ೧೯೯೧-೯೨

ಡಾ। ಅ. ಸುಂದರ-೧೯೮೬
ಡಾ। ಎ.ವಿ. ನರಸಿಂಹಮೂರ್ತಿ-೧೯೮೬
ಡಾ। ಎಚ್. ಪಿ. ಶಶಿಧರಮೂರ್ತಿ-೧೯೮೬
ಕೆ. ಜಿ. ನಾಗರಾಜನ್-೧೯೮೬
ಹೆಚ್. ಎಂ. ಸಿದ್ದನಗೌಡರ-೧೯೮೬
ಡಾ। ಎಸ್. ರಾಜಶೇಖರ-೧೯೮೬
ಡಾ। ಎಚ್. ಎಸ್. ಗೋಪಾಲರಾವ್-೧೯೮೮-೯೦
ಎಚ್. ರೇವಣಸಿದ್ಧಪ್ಪ-೧೯೮೮

ಶ್ರೀಮತಿ ಬಿ. ನಾರಾಯಣಮ್ಮ-೧೯೮೮
ಕೆ. ಜಗನ್ನಾಥಶಾಸ್ತ್ರಿ-೧೯೮೮
ಪ್ರೊ। ಮಾಧವನಾಕಟ್ಟಿ-೧೯೮೯
ಎಂ. ಜಿ. ನಾಗರಾಜ-೧೯೯೧
ಕೆ. ಅಭಿಶಂಕರ್-೧೯೯೧-೯೨
ಡಾ। ಆರ್. ಎಂ. ಷಡಕ್ಷರಯ್ಯ-೧೯೯೧-೯೮
ಡಾ। ರಾಜಾರಾಮಹೆಗ್ಗಡೆ-೧೯೯೧
ಪ್ರೊ॥ ವಸಂತ ಕುಷ್ಟಗಿ-೧೯೯೧-೯೪
ಕೆ.ಎಚ್.ಎ. ವಿಜಯಕುಮಾರ್-೧೯೯೧
ಪ್ರೊ॥ ವಿ.ಸಿ. ಮಾಲಗತ್ತಿ-೧೯೯೪-೯೮
ಎಸ್.ಎಂ. ನಾಗಭೂಷಣ-೧೯೯೩-೯೪
ಡಾ। ಬಸವಲಿಂಗ ಸೊಪ್ಪಿಮಠ-೧೯೯೪
ಡಾ। ಬಿ. ನಂಜುಂಡಸ್ವಾಮಿ-೧೯೯೩
ಡಾ। ಜೋತಿಬಾಯಿ-೧೯೯೩
ಎಚ್.ಎಂ. ಸಿದ್ಧನ ಗೌಡರ್-೧೯೯೪
ಕುಂ.ಬಾ. ಸದಾಶಿವಪ್ಪ-೧೯೯೪ರಿಂದ
ಡಾ। ಚೆನ್ನಕ್ಕ ಪಾವಟೆ-೧೯೯೬
ಗುರುಮೂರ್ತಿ ಪೆಂಡಕೂರು-೧೯೯೬ರಿಂದ
ಡಾ। ಎ.ಕೆ. ಶಾಸ್ತ್ರಿ-೧೯೯೬ರಿಂದ
ಕೇಶವ ಉಮರ್ಜಿ-೧೯೯೬
ಡಾ। ಎಂ.ಎಸ್. ಕೃಷ್ಣಮೂರ್ತಿ-೧೯೯೮
ಪ್ರೊ। ಬಿ. ರಾಜಶೇಖರಪ್ಪ-೧೯೯೮
ಡಾ। ಸ್ಮಿತಾ ಸುರೇಬಾನಕರ-೨೦೦೦
ಡಾ। ಎಚ್. ಚಂದ್ರಶೇಖರ್-೨೦೦೦
ಎಂ.ಕೆ. ದುರುಗುಪ್ಪ-೨೦೦೨
ಡಾ। ಎಚ್. ಎಸ್. ಉಷಾರಾಣಿ-೨೦೦೨

ಡಾ। ಎಲ್. ಆರ್. ಕುಲಕರಣಿ-೧೯೮೮
ಪ್ರೊ। ಲಕ್ಷ್ಮಣ್ ತೆಲಗಾವಿ-೧೯೮೮
ಡಾ। ಕೆ.ಜಿ. ವಸಂತಮಾಧವ-೧೯೮೯ರಿಂದ
ಶ್ರೀಮತಿ ಸಿ.ಎಸ್. ಶ್ಯಾಮಲಾಂಬಿಕಾ-೧೯೯೧-೯೨
ಡಾ। ಎಂ. ವಿ. ಕೃಷ್ಣಪ್ಪ-೧೯೯೧-೯೨
ಪ್ರೊ। ಸಿ. ವ್ಹಿ. ಮಠದ-೧೯೯೧
ಪ್ರೊ। ಜಿ. ಎಂ. ಶ್ರೀನಿವಾಸಯ್ಯ-೧೯೯೧-೯೨
ಡಾ। ಬಿ. ವಸಂತ ಶೆಟ್ಟಿ-೧೯೯೧
ಡಾ। ಶ್ರೀನಿವಾಸ ಹಾವನೂರ್-೧೯೯೧-೯೬
ಎಸ್. ರಾಜಶೇಖರಪ್ಪ-೧೯೯೩
ಡಾ। ಕೆ.ಬಿ. ಶಿವತಾರಕ್-೧೯೯೩-೯೫
ಶ್ರೀಮತಿ ಉಷಾದೇಸಾಯಿ-೧೯೯೩
ಡಾ। ಎಸ್.ಕೆ.ಕೊಪ್ಪಾ-೧೯೯೩
ಡಾ। ಸಿ. ಎಸ್. ಪಾಟೀಲ್-೧೯೯೪
ಡಾ। ಎಂ.ಬಿ. ನೇಗಿನಹಾಳ-೧೯೯೪
ಡಾ। ಕೆಳದಿ ವೆಂಕಟೇಶ್ ಜೋಯಿಸ್-೧೯೯೪
ಡಾ। ಕೆ. ಜಿ. ವಂಸತಮಾಧವ-೧೯೯೬ರಿಂದ
ಡಾ। ದೇವರಕೊಂಡಾರೆಡ್ಡಿ-೧೯೯೬
ಡಾ। ಬೆಂ.ಶಾ. ಶ್ಯಾಮಲಾ ರತ್ನ ಕುಮಾರಿ-೧೯೯೬ರಿಂದ
ಸಿದ್ಧಯ್ಯ ಹಿರೇಮಠ-೧೯೯೬
ತ.ರಂ. ಕೃಷ್ಣೇಗೌಡ-೧೯೯೮
ಡಾ। ಚನ್ನಬಸವ ಹಿರೇಮಠ-೨೦೦೦
ಡಾ। ಶೀಲಾಕಾಂತ ಪತ್ತಾರ-೨೦೦೦
ಅಮರೇಶ್ ಯತ್‌ಗಲ್-೨೦೦೨
ಎಂ. ಶಿವಶಂಕರಯ್ಯ ಹೊನ್ನಾಳಿ-೨೦೦೨
ಡಾ। ಪಿ. ವಿ. ಕೃಷ್ಣಮೂರ್ತಿ-೨೦೦೨

ಇತಿಹಾಸ ದರ್ಶನ

ಸಂಪಾದಕರು : ಡಾ॥ ಸೂರ್ಯನಾಥ್ ಕಾಮತ್-ಸಂಪುಟ ೧-೧೧., ಪ್ರೊ॥ ಲಕ್ಷ್ಮಣ್ ತೆಲಗಾವಿ - ಸಂಪುಟ. ೧-೫
ಡಾ॥ ದೇವರಕೊಂಡಾರೆಡ್ಡಿ-ಸಂಪುಟ ೬-೯., ಎಸ್. ಎ. ಜಗನ್ನಾಥ್-ಸಂಪುಟ ೬,೭
ಡಾ॥ ಪಿ. ವಿ. ಕೃಷ್ಣಮೂರ್ತಿ-ಸಂಪುಟ ೧೦-೧೮., ಎಂ.ಜಿ. ನಾಗರಾಜ್-ಸಂಪುಟ ೧೨-೧೮

ಕರ್ನಾಟಕ ಇತಿಹಾಸ ಅಕಾದೆಮಿ (ರಿ.,)

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ಬಸವನಗುಡಿ ರಸ್ತೆ
ನರಸಿಂಹರಾಜಾ ಕಾಲೋನಿ, ಬೆಂಗಳೂರು-೫೬೦ ೦೧೯

೨೦೦೨ನೆಯ ಸಾಲಿನ ವಾರ್ಷಿಕ ವರದಿ

ಆತ್ಮೀಯ ಸದಸ್ಯರೇ,

ಅಕಾದೆಮಿಯು ೧೭ ಸಾರ್ಥಕ ವರ್ಷಗಳನ್ನು ಮುಗಿಸಿ ಈಗ ತನ್ನ ೧೮ನೆಯ ವರ್ಷಕ್ಕೆ ಅಡಿಯಿಟ್ಟಿದೆ. ಕಳೆದ ವರ್ಷ ನಾವೆಲ್ಲಾ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ರಾಮಚಂದ್ರಾಪುರದ ಶ್ರೀ ಮಠದಲ್ಲಿ ೧೬ನೆಯ ವಾರ್ಷಿಕ ಸಮ್ಮೇಳನವನ್ನು ಆಚರಿಸಿದ್ದೆವು. ಈಗ, ಬಾಗಲಕೋಟೆ ಜಿಲ್ಲೆಯ ಪ್ರಮುಖ ಐತಿಹಾಸಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಒಂದಾದ ಬಾದಾಮಿಯಲ್ಲಿ, ಸ್ಥಳೀಯ ವಿಶ್ವಚೇತನ ಸಂಸ್ಥೆಯ ಆಶ್ರಯದಲ್ಲಿ ೧೭ನೆಯ ವಾರ್ಷಿಕ ಸಮ್ಮೇಳನವನ್ನು ಆಚರಿಸಲು ಸಮಾವೇಶಗೊಂಡಿದ್ದೇವೆ. ಕಳೆದ ವರ್ಷ ಅಕಾದೆಮಿಯ ಕಾರ್ಯ ಚಟುವಟಿಕೆಗಳ ಬಗೆಗೆ ನಾವು ತಿಳಿಯಬೇಕಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ - ೨೦೦೨

೨೦೦೨ನೆಯ ಸಾಲಿನ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು, ಕರ್ನಾಟಕ ಇತಿಹಾಸ ಅಕಾದೆಮಿಯು ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯಗಳ ಸಹಯೋಗದೊಂದಿಗೆ ಹಮ್ಮಿಕೊಂಡಿತ್ತು. ಬೆಂಗಳೂರು ನಗರದ ಶೇಷಾದ್ರಿಪುರದಲ್ಲಿರುವ ಕೆನ್ ಕಲಾ ಶಾಲೆಯಲ್ಲಿ ೧೬.೮.೨೦೦೨ರಂದು ಸಂಜೆ ೬ ಗಂಟೆಗೆ ನಡೆದ ಕಾರ್ಯಕ್ರಮದಲ್ಲಿ ದೀಪ ಹಚ್ಚುವ ಮತ್ತು ಈ ವರ್ಷದ ಕಾರ್ಯಕ್ರಮಗಳಿಗೆಂದೇ ಸಿದ್ಧಪಡಿಸಲಾದ ಭಿತ್ತಿ ಪತ್ರಗಳನ್ನು ಅನಾವರಣ ಮಾಡುವ ಮೂಲಕ, ಸಪ್ತಾಹದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದವರು, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರಾದ ಶ್ರೀಮತಿ ರಾಣಿ ಸತೀಶ್, ಖ್ಯಾತ ಕಲಾವಿದ ಡಾ|| ಆರ್. ಎಂ. ಹಡಪದ್ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಖ್ಯಾತ ಚಲನ ಚಿತ್ರ ನಿರ್ದೇಶಕ ಶ್ರೀ ಟಿ. ಎಸ್. ನಾಗಾಭರಣ ಆಗಮಿಸಿದ್ದರು.

ಇದೇ ಸಂದರ್ಭದಲ್ಲಿ ಅಕಾದೆಮಿಯ ಬೆಂಗಳೂರು ಘಟಕವು ಈ ವರ್ಷ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ನಡೆಸಿದ್ದ ಭಾಷಣ ಮತ್ತು ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನೂ, ಪಾಲ್ಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನೂ ನೀಡಿ ಗೌರವಿಸಲಾಯಿತು.

ಈ ವರ್ಷ ರಾಜ್ಯದ ವಿವಿಧ ಭಾಗಗಳಲ್ಲಿ ಅಕಾದೆಮಿಯ ಸದಸ್ಯರು, ಸ್ಥಳೀಯ ಸಂಘ ಸಂಸ್ಥೆಗಳ ನೆರವಿನೊಂದಿಗೆ ನಡೆಸಿರುವ ಕಾರ್ಯಕ್ರಮಗಳ ವಿವರಗಳು ಈ ಮುಂದಿನಂತಿವೆ.

'ಇತಿಹಾಸ ಪರಂಪರೆ ಉಳಿಸಿ' ಕಾರ್ಯಕ್ರಮಗಳ ವರದಿಗಳ ಪಟ್ಟಿ ೨೦೦೨-೦೩

ಕ್ರ.ಸಂ.	ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಅಧ್ಯಕ್ಷರು/ಉದ್ಘಾಟಕರು	ಮುಖ್ಯ ಅತಿಥಿ/ಉಪನ್ಯಾಸಕರು	ಇತರ ಅಂಶಗಳು
			ಸರ್ವಶ್ರೀ	ಸರ್ವಶ್ರೀ	
೧.	೧೬.೮.೨೦೦೨	ಕೆನ್ ಕಲಾ ಶಾಲೆ ಶೇಷಾದ್ರಿಪುರಂ ಬೆಂಗಳೂರು	**ಅಧ್ಯಕ್ಷತೆ** :	**ಆರ್. ಎಂ. ಹಡಪದ್** (ಕಲಾವಿದರು)	
			ಭಿತ್ತಿಪತ್ರ ಅನಾವರಣ:-	**ಮಾನ್ಯ ಸಚಿವೆಯರಾದ ಶ್ರೀಮತಿ ರಾಣಿಸತೀಶ್** (ಕನ್ನಡ - ಸಂಸ್ಕೃತಿ ಇಲಾಖೆ)	
			ಮುಖ್ಯ ಅತಿಥಿ :	**ಟಿ ಎಸ್. ನಾಗಾಭರಣ** (ಪ್ರಸಿದ್ಧ ಚಲನ ಚಿತ್ರ ನಿರ್ದೇಶಕರು)	

ನಗರ ಜಿಲ್ಲಾಘಟಕವು ಏರ್ಪಡಿಸಿದ್ದ ಅಂತರ ಪ್ರೌಢಶಾಲಾ ಭಾಷಣ ಸ್ಪರ್ಧೆ, ಅಂತರಕಾಲೇಜು ಭಾಷಣ ಸ್ಪರ್ಧೆ ಹಾಗೂ ಅಂತರ ಕಾಲೇಜು ಪ್ರಬಂಧ ಸ್ಪರ್ಧಾ ವಿದ್ಯಾರ್ಥಿಗಳಿಗೆ, ವಿಜೇತರಿಗೆ ಪರ್ಯಾಯ ಪಾರಿತೋಷಕಗಳನ್ನು ಬಹುಮಾನ ಗಳನ್ನು ನೀಡಲಾಯಿತು. ಶ್ರೀಮತಿ ಕೂ. ಸ. ಅಪರ್ಣ ವಿರಚಿತ ಇತಿಹಾಸ ಲಾವಣಿಯನ್ನು ಹಾಡ ಲಾಯಿತು.

ಕ್ರ.ಸಂ.	ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಅಧ್ಯಕ್ಷರು/ಉದ್ಘಾಟಕರು	ಮುಖ್ಯ ಅತಿಥಿ/ಉಪನ್ಯಾಸಕರು	ಇತರ ಅಂಶಗಳು
೨.	೧೬.೮.೨೦೦೨	ಕಿ.ಪ್ರೊ.ಗು ಪ್ರೌಢಶಾಲೆ ಮತ್ತು ಶ್ರೀಮತಿ ಅಕ್ಕಿ ಬಸಮ್ಮ ತೋಟಪ್ಪ ಪ.ಪೂ ಕಾಲೇಜು ತಂಬ್ರಹಳ್ಳಿ	ಕೆ. ವಿ. ಲೋಕೇಶ್ (ಪ್ರಭಾರಿ ಮುಖ್ಯೋಪಾಧ್ಯಾಯ)	ಬಾಲ ಸುಬ್ರಹ್ಮಣ್ಯಂ (ಪುರಾತತ್ವ ವಿಭಾಗ ಕನ್ನಡ ವಿ.ವಿ. ಹಂಪಿ)	ಆಯೋಜನೆ : ಶ್ರೀಗುರುಮೂರ್ತಿ ಪೆಂಡಕೂರ್
೩.	೧೬.೮.೨೦೦೨	ಶ್ರೀ ಧರ್ಮಸ್ಥಳ ಮಂಜು ನಾಥೇಶ್ವರ ಕಾಲೇಜು ಉಜಿರೆ	ಡಾ. ಬಿ. ಯಶೋವರ್ಮ (ಪ್ರಾಂಶುಪಾಲರು) ಪ್ರೊ. ಲಕ್ಷ್ಮಿ ನಾರಾಯಣಪ್ಪೆ (ನಿವೃತ್ತ ಪ್ರಾಧ್ಯಾಪಕರು)	ಪ್ರೊ. ನಾ. ಉಜಿರೆಯವರು (ಪತ್ರಕರ್ತರು)	ಇದರ ಅಂಗವಾಗಿ ಪ್ರಬಂಧ ಸ್ಪರ್ಧೆ ಯನ್ನು ನಡೆಸಿದ್ದು, ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ಗಳನ್ನು ನೀಡಲಾಗಿದೆ.
೪.	೧೬.೮.೨೦೦೨	ಸರ್ಕಾರಿ ಪದವಿ ಪೂರ್ವ ಕಾಲೇಜು, ಕುರ್ನಾಡು	ಎನ್. ಪದ್ಮನಾಭ ರೈ ಉದಯ. ಬಿ	ಎಚ್. ವಿಶ್ವನಾಥ ಕೊಂಡೆ (ಕಾರ್ಯಾಧ್ಯಕ್ಷರು ಶಾಲಾಭಿವೃದ್ಧಿ ಸಂಸ್ಥೆ)	ಕಾರ್ಯಕ್ರಮ : ಸಂಯೋಜಕರು ಪಾ. ಅನಂತರಾಜಇಂದ್ರ
೫.	೧೬.೮.೨೦೦೨ ೨೪.೮.೨೦೦೨	ಶ್ರೀ ಬಂಕನಾಥ ಸಾಹಿತ್ಯ ವೇದಿಕೆ ಬಂಕಾಪುರ		ಡಾ॥ ಜಗದೀಶ ಕಿವುಡನವರ ಮತ್ತಿತರರು ನಡೆಸಿದ ಕಾರ್ಯಕ್ರಮಗಳು	
೬.	೧೫.೮.೨೦೦೨ ೨೧.೮.೨೦೦೨	ಸರ್ಕಾರಿ ಪ. ಪೂ. ಮಹಾ ವಿದ್ಯಾಲಯ ಕುಣಿಮೆಳ್ಳಿ ಹಳ್ಳಿ ತಾ। ಸವಣೂರು; ಹಾವೇರಿಜಿಲ್ಲೆ	ಎಸ್.ಬಿ. ಚವ್ಹಾಣ್ (ಪ್ರಾಚಾರ್ಯರು)	ಸಯ್ಯದ್ ಅಜ್ಜಂಪೀರ್ ಎಸ್ ಖಾದ್ರಿ (ಶಾಸಕರು ಶಿಗ್ಗಾಂವ) ಎಲ್ಲಪ್ಪ ಎಸ್. ಸುಳ್ಳಿ ಹಳ್ಳಿ (ಸದಸ್ಯರು ತಾ. ಪಂ)	ಶ್ರೀ ಪ್ರಭಾಕರರಾವ್ ಮಂಗಳೂರು ಶ್ರೀ ನರೇಂದ್ರ ಜೈನ್ ಮತ್ತು ಶ್ರೀ ಎಂ. ಎನ್. ನಂದಿ ಮಠರವರನ್ನು ಸನ್ಮಾನಿಸಲಾಯಿತು.
೭.	೧೪.೮.೨೦೦೨	ಯು. ಕಮಲಾಬಾಯಿ ಪ್ರೌಢಶಾಲೆ ಕಡಿಯಾಳ ಉಡುಪಿ	ಡಾ. ಪಿ. ಎನ್. ನರಸಿಂಹ ಮೂರ್ತಿ	ವಿಠ್ಠಲ್‌ದಾಸ್ ಶೆಣೈ	ನಾಣ್ಯ ಸಂಗ್ರಹ ಪ್ರದರ್ಶನ ಮತ್ತು ಶಾ.ಬಿ.ರಮೇಶ್ ಭಕ್ತ ಅವರ ಕರೆನ್ಸಿ ಮತ್ತು ಸ್ಟಾಂಪ್‌ಗಳ ಸಂಗ್ರಹದ ಪ್ರದರ್ಶನ ಏರ್ಪಡಿಸಲಾಗಿತ್ತು.
೮.	೧೬.೮.೨೦೦೨	ಗದಗ್ ಜಿಲ್ಲಾಧಿಕಾರಿ ಕಛೇರಿ, ತೋಂಟದಾರ್ಯ ಮಠ ಲಕ್ಕುಂಡಿ ಗ್ರಾಮಪಂಚಾ ಯಿತಿ	ಅ.ದ.ಕಟ್ಟಿಮನೀಯವರು ಗದಗ್ ನಲ್ಲಿ ಹಲವು ಸ್ಥಳಗಳಲ್ಲಿ ಭಿತ್ತಿ ಪತ್ರ ಗಳನ್ನು ಅಂಟಿಸಿ 'ಐತಿಹಾಸಿಕ ಪರಂಪರೆ'ಯ ಜಾಗೃತಿ ಉಂಟು ಮಾಡಿದ್ದಾರೆ.		
	೧೫.೮.೨೦೦೨	ಸರಕಾರಿ ಪ.ಪೂಕಾಲೇಜು ಕುಣಿಮೆಹಳ್ಳಿ	ಸೈಯದ್ ಪೀರ್ ಖಾದ್ರಿ	ಎಸ್.ಬಿ.ಚವ್ಹಾಣ (ಪ್ರಾಂಶುಪಾಲರು)	ಕೆ. ಬಿ. ಹಿರೇಮಠ ನಿಯೋಜಿತ ಕಾರ್ಯಕ್ರಮ
೯.	೧೫.೮.೨೦೦೨	ಸರ್ಕಾರಿ ಪ.ಪೂ ಕಾಲೇಜ್ ಕುಣಿಮೆಳ್ಳಿ ಹಳ್ಳಿ	ಎಸ್.ಸಿ. ಕೋಟಿ (ಪರಿವೀಕ್ಷಕರು ಸಾ.ಶಿ. ಇಲಾಖೆ ಹಾವೇರಿ)	ವೈ. ಎಸ್. ಸುಳಿಹಳ್ಳಿ (ಸದಸ್ಯರು ತಾ.ಪಂ)	ಇತಿಹಾಸ ಪರಂಪರೆ ಉಳಿಸಿ ಭಿತ್ತಿಪತ್ರ ಅನಾವರಣ ಮಾಡ ಲಾಯಿತು.
೧೦.	೧೭.೮.೨೦೦೨	ಸೈಂಟ್ ಫಿಲೋಮಿನಾ ಕಾಲೇಜು ಪುತ್ತೂರು	ರೇಫಾ ಫೆಡ್ರಿಕ್ ಮಸ್ಕರೇ ಇಸ್ (ಪ್ರಾಂಶುಪಾಲರು)	ಪ್ರೊ.ವೈ. ಉಮಾನಾಥ ಶೆಣೈ (ಎಸ್.ಡಿ ಎಂ ಕಾಲೇಜ್ ಉಪ ನ್ಯಾಸಕರು)	ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಯನ್ನು ನಡೆಸಲಾಯಿತು.

ಕ್ರ.ಸಂ.	ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಅಧ್ಯಕ್ಷರು/ಉದ್ಘಾಟಕರು	ಮುಖ್ಯಅತಿಥಿ/ಉಪನ್ಯಾಸಕರು	ಇತರ ಅಂಶಗಳು
			ಸರ್ವಶ್ರೀ	ಸರ್ವಶ್ರೀ	
೧೧.	೧೭.೮.೨೦೦೨	ಶ್ರೀ ಗಂ.ಭಿ.ಸಂ.ಪ.ಪೂ ಕಾಲೇಜ್ ರಾಮನಗರ	ಪಿ.ಸಿ. ರೇವಣಪ್ಪ (ಪ್ರಾಂಶುಪಾಲರು)	ಕುಂಬಾ ಸದಾಶಿವಪ್ಪ (ಸಂಶೋಧಕರು)	
೧೨.	೧೭.೮.೨೦೦೨	ಕಿಟೆಲ್ ಕಲಾಮಹಾವಿದ್ಯಾಲಯ ಧಾರವಾಡ	ಪ್ರೊ. ಎಂ. ಜೆ. ಪುನೀತ (ಪ್ರಾಚಾರ್ಯರು) ಡಾ. ಚೇತನ್ ನಾಯ್ಕ (ನಿರ್ದೇಶಕರು ಆಕಾಶವಾಣಿ ಕೇಂದ್ರ)	ಡಾ. ಎಂ. ವೈ.ಸಾವಂತ್	ಸುಪ್ರಿಯಾರವರು ಸಂಗ್ರಹಿಸಿದ ''ಮಧ್ಯಕಾಲೀನ ನಾಣ್ಯಗಳ ಪ್ರದರ್ಶನ ಏರ್ಪಡಿಸಲಾಗಿತ್ತು.
೧೨ ಅ	೧೭.೮.೨೦೦೨	ವೆಂಕಟೇಶ ಹಿಂದಿ ಪ್ರೌಢ ಶಾಲೆ ಗುಳೇದಗುಡ್ಡ	ಶ್ರೀನಿವಾಸ ಪಂಚಾಕ್ಷರಿ (ಮುಖ್ಯೋಪಾಧ್ಯಾಯರು)	ಬಿಂಗೇರ ಮಲ್ಲೇಶಪ್ಪ, ಪಾಟೀಲ್ ರಾಜಶೇಖರಪ್ಪ	
೧೨ ಆ	೧೭.೮.೨೦೦೨	ಸರಕಾರಿ ಪ್ರಥಮ ದರ್ಜೆ ಕಾಲೇಜು ವಿಟ್ಲ	ಅಭಿಷೇಕಂ (ಪ್ರಾಂಶುಪಾಲರು)	ಪ್ರೊ. ವಿ. ಬಿ. ಅರ್ತಿಕಜೆ ಎಲ್.ಎನ್. ಕೂಡುರು ಮತ್ತು ಯಶುವಿಟ್ಲ	ಕಾರ್ಯಕ್ರಮದ ಅಂಗವಾಗಿ ಭಾಷಣ ಸ್ಪರ್ಧೆ ನಡೆಸಿ, ಬಹುಮಾನ ವಿತರಣೆ ಮಾಡಲಾಗಿದೆ.
೧೩.	೧೮.೮.೨೦೦೨	ಮುಂಡೂರು ದೇವಾಲಯ ಪುತ್ತೂರು ತಾಲೂಕ್	ಡಾ. ಉಮಾನಾಥಶೈಣೈರವರ ನೇತೃತ್ವ ದಲ್ಲಿ ನಡೆದ 'ಪರಂಪರೆ ಉಳಿಸಿ' ಸಪ್ತಾಹದ ಈ ಕಾರ್ಯಕ್ರಮದಲ್ಲಿ ಅಪ್ರಕಟಿತ ಶಾಸನ ವೊಂದನ್ನು ಓದಿ, ಅದರ ಮಹತ್ವವನ್ನು ತಿಳಿಸಲಾಗಿದೆ. ಸಾರ್ವಜನಿಕರಿಗ ದೇವಾಲಯದ ಬಗೆಗೆ ಅರಿವು ಮೂಡಿಸಿದ್ದಾರೆ.		
೧೪.	೧೮.೮.೨೦೦೨	ಸೇವಾಂಜಲಿ ಪ್ರತಿಷ್ಠಾನ ಫರಂಗಿ ಪೇಟೆ	ವಜ್ರನಾಭ ಶೆಟ್ಟಿ ಧರ್ಮದರ್ಶಿಗಳು ಅರ್ಕುಳಬೇರು	ಡಾ. ಶಿವರಾಮ ಶೆಟ್ಟಿ ಎಂ. ರೂಪಾಕ ರಾಜಾ ಬಂಟ್ವಾಳ ಕೆ. ಕೃಷ್ಣ ಕುಮಾರ ಪೂಂಜ	ಕ್ಷೇತ್ರಕಾರ್ಯ ಮಾಡಿದ ವಿದ್ಯಾರ್ಥಿಗಳಿಂದ ಪ್ರಬಂಧ ಮಂಡನೆಯನ್ನು ಆಯೋಜಿಸಿದ್ದರು.
೧೫.	೧೮.೮.೨೦೦೨	ಕೆ.ಪುರುಷೋತ್ತಮ ಮಾಸ್ತರ್, ಸ್ಮಾರಕ ಗ್ರಂಥಾಲಯದ 'ಪುಸ್ತಕ ಮನೆ, ಕಾಸರಗೋಡು	ಕುಂಬಳೆ ಅರಿಕ್ಕಾಡಿಮಲ್ಲಿಕಾರ್ಜುನ ರಮಾಕಾಂತ ಕುಂಬಳೆ	ಶಿವರಾಮ ಕಾಸರಗೋಡು	ಪ್ರಬಂಧಸ್ಪರ್ಧೆ ಹಾಗು ವಿಚಾರ ಸಂಕಿರಣವನ್ನು ನಡೆಸಿದ್ದಾರೆ.
೧೬.	೧೯.೮.೨೦೦೨	ಸರಕಾರಿ ಪದವಿ ಪೂರ್ವ ಕಾಲೇಜು, ವೇಣೂರು		ಡಾ. ಉಮಾನಾಥಶೆಣೈ	
			ವೇಣೂರಿನ ಜೈನಬಸದಿಯ ಶಿಲಾ ಶಾಸನದ ಪಡಿಯಚ್ಚು ತೆಗೆದು ಓದಿ ಮಹತ್ವವನ್ನು ವಿದ್ಯಾರ್ಥಿಗಳು, ಪ್ರಾಧ್ಯಾಪಕರಿಗೆ ಸಾರ್ವಜನಿಕ ತಿಳಿಸಲಾಯಿತು. ಇದೇ ಸಂದರ್ಭ ದಲ್ಲಿ ಪ್ರಬಂಧ ಸ್ಪರ್ಧೆ ಸ್ಮಾರಕಗಳ ಚಿತ್ರಕಲಾ ಸ್ಪರ್ಧೆಯನ್ನು ನಡೆಸಿ, ಬಹುಮಾನ ವಿತರಣೆ ಮಾಡಿದರು.		
೧೭.	೧೯.೮.೨೦೦೨	ಶ್ರೀಮತಿ ಪಾಟೀಲ್ ಅಂಬುಜಾ ಮಲ್ಲಿಕಾರ್ಜುನಗೌಡ ಪ್ರೌಢ ಶಾಲಾ, ಬನ್ನಿಕಲ್ಲ್	ಡಿ.ಉಮಾಪತಿ (ಮುಖ್ಯೋಪಾಧ್ಯಾಯರು)	ಡಾ। ಸಿ. ಮಹದೇವ (ಪುರಾತತ್ವ ವಿಭಾಗ ಕನ್ನಡ ವಿಶ್ವವಿದ್ಯಾಲಯ)	ವಿದ್ಯಾರ್ಥಿಗಳಿಂದ ನಾಣ್ಯ ಅಂಚೆ ಚೀಟಿ ಪ್ರದರ್ಶನ ಏರ್ಪಡಿಸಿದ್ದರು.
೧೮.	೧೯.೮.೨೦೦೨	ಸರಕಾರಿ ಪದವಿಪೂರ್ವ ಕಾಲೇಜು ಬೆಂಜನಪದವು	ಕೆ. ಗೋವಿಂದಭಟ್ (ಪ್ರಾಂಶುಪಾಲರು)	ಎಚ್. ಸಿ. ರಂಗಪ್ಪ (ಸಹಾಯಕ ನಿರ್ದೇಶಕರು ಕನ್ನಡ ಸಂಸ್ಕೃತಿ ಇಲಾಖೆ ಮಂಗಳೂರು)	
೧೯.	೧೯.೮.೨೦೦೨	ಸರಕಾರಿ ಪ.ಪೂ.ಕಾಲೇಜು ಕುಣಮೆಳ್ಳಿ ಹಳ್ಳಿ	ಪ್ರಬಂಧ ಸ್ಪರ್ಧೆಯನ್ನು ನಡೆಸಲಾಯಿತು.		
೨೦.	೨೦.೮.೨೦೦೨	ಶ್ರೀ ಲ.ಹ. ಸಾ. ಪ್ರೌಢಶಾಲೆ ಹಂಪಸಾಗರ	ಸಿ. ಶಿವನಾಗಪ್ಪ (ಮುಖ್ಯೋಪಾಧ್ಯಾಯರು)	ಚೆಲುವರಾಜು (ಬುಡಕಟ್ಟು ಅಧ್ಯಯನ ವಿಭಾಗ ಹಂಪಿ, ಕ.ವಿ.ವಿ.)	
೨೧.	೨೦.೮.೨೦೦೨	ಸೇಕ್ರೆಡ್ ಹಾರ್ಟ್. ಕಾಲೇಜು ಮಡಂತ್ಯಾರು	ರೈಫಾ ಎಫ್. ಎಕ್ಸ್. ಗೇಮ್ಸ್ (ಪ್ರಾಂಶುಪಾಲರು)	ತುಕಾರಾಮ ಪೂಜಾರಿ (ಅಧ್ಯಕ್ಷರು ರಾಣೆ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ)	
೨೨.	೨೦.೮.೨೦೦೨	ಸರಕಾರಿ ಪ.ಪೂ.ಕಾಲೇಜು ಕುಣಿಮೆಹಳ್ಳಿ	ಐತಿಹಾಸಿಕ ಗೀತೆಗಳ ಗಾಯನ ಸ್ಪರ್ಧೆ ನಡೆಸಲಾಯಿತು. ಪ್ರಭಾ ತ್‌ಫೇರಿ ನಡೆಸಿದರು. ವಿದ್ಯಾರ್ಥಿಗಳೇ ತಯಾರಿಸಿದ ಮಾದರಿಗಳಿಂದ 'ಇತಿಹಾಸ ವಸ್ತು ಪ್ರದರ್ಶನ' ನಡೆಸಲಾಯಿತು.		

ಕ್ರ.ಸಂ.	ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಅಧ್ಯಕ್ಷರು/ಉದ್ಘಾಟಕರು	ಮುಖ್ಯ ಅತಿಥಿ/ಉಪನ್ಯಾಸಕರು	ಇತರ ಅಂಶಗಳು
			ಸರ್ವಶ್ರೀ	ಸರ್ವಶ್ರೀ	
೧೩.	೨೧.೮.೨೦೦೨	"		ಅವಿನಾಶ್ ಬೈಪಡಿತ್ತಾಯ (ಮುಖ್ಯ ಉಪಸಂಪಾದಕರು ವಿಜಯಕರ್ನಾಟಕ)	
೧೪.	೨೧.೮.೨೦೦೨	ಸರಕಾರಿ ಪದವಿ ಪೂರ್ವ ಕಾಲೇಜು ಸಿದ್ಧಕಟ್ಟೆ	ಡಿ. ರಾಮಯ್ಯ (ಪ್ರಾಂಶುಪಾಲರು)	ಎಂ. ನಿತ್ಯಾನಂದ ಪೈ (ಜೊತೆ ಕಾರ್ಯದರ್ಶಿ ಕೆನರಾ ನಾಣ್ಯ ಸಂಗ್ರಹಕರ ಸಂಘ ಕಾರ್ಕಳ)	ನಾಣ್ಯ ಸಂಗ್ರಹ ಮತ್ತು ರಕ್ಷಣೆ ಕುರಿತು ಪ್ರಾತ್ಯಕ್ಷಿಕೆ ನಡೆಸಲಾಯಿತು.
೧೫.	೨೧.೮.೨೦೦೨	ಮಹಂತೇಶ್ವರ ಪ್ರೌಢಶಾಲೆ ಬಾಚಿಗೊಂಡನಹಳ್ಳಿ	ಇತಿಹಾಸ ವಸ್ತು ಪ್ರದರ್ಶನ ನಡೆಸಲಾಯಿತು. ಇದರ ಅಂಗವಾಗಿ ಗೌಸುಸಾಬನ ಲಾಘ್ ಅವರ ನೆರವಿನಿಂದ ಗ್ರಾಮದ ಮಧ್ಯದಲ್ಲಿರುವ ಧರ್ಮಶಾಲೆಯನ್ನು ಜೀರ್ಣೋದ್ಧಾರ ಮಾಡಲಾಯಿತು.		
೧೬.	೨೨.೮.೨೦೦೨	ಶಿಕ್ಷಕರ ಭವನ ನಾಗಮಂಗಲ	ಎಲ್. ಮಹದೇವ (ಇತಿಹಾಸ ಉಪನ್ಯಾಸಕರು)	ಪ್ರೊ. ಕೆ. ಪುಟ್ಟರಂಗಪ್ಪ (ಬಾಲಗಂಗಾಧರನಾಥ ಸ್ವಾಮಿ ಕಲಾ ಮತ್ತು ವಾಣಿಜ್ಯ ಕಾಲೇಜು)	ಸ್ಮಾರಕಗಳ ಛಾಯಾಚಿತ್ರ ಪ್ರದರ್ಶನ ನಡೆಸಲಾಯಿತು.
೧೭.	೨೩.೮.೨೦೦೨	ರೋಟರಿ ಕ್ಲಬ್ ಬಂಟ್ವಾಳ	ರೊ। ಎನ್. ಶ್ರೀನಿವಾಸಕುಡ್ವ (ರೋಟರಿ ಅಧ್ಯಕ್ಷರು)	ಪುಂಡಿಕಾಯ್‌ಗಣಪಯ್ಯಭಟ್ (ಧವಳಾ ಕಾಲೇಜು ಮೂಡಬಿದ್ರೆ)	
೧೮.	೨೩.೮.೨೦೦೨	ಸರ್ಕಾರಿ ಪ್ರೌಢಶಾಲೆ ಗೋತೀರಹಳ್ಳಿ	ಪಿ. ಬೆಟ್ಟನಗೌಡರು (ಪ್ರಧಾನಗುರುಗಳು)	ಜಿ. ಬಸವಂತಪ್ಪ (ಪ್ರಾಚಾರ್ಯರು ಸ.ಪ.ಪೂ ಕಾಲೇಜು ಹರಪನಹಳ್ಳಿ)	ಕುಂ.ಬಾ ಸದಾಶಿವಪ್ಪ ಪಾಲ್ಗೊಂಡಿದ್ದರು
೧೯.	೨೪.೮.೨೦೦೨	ಸರಕಾರಿ ಪ.ಪೂ. ಕಾಲೇಜು ವಾಮದಪದವು	ವಿಶ್ವನಾಥಶೆಟ್ಟಿ (ಪ್ರಾಂಶುಪಾಲರು)	ಏರ್ಯ ಲಕ್ಷ್ಮೀನಾರಾಯಣ ಆಳ್ವ (ಸಾಹಿತಿಗಳು)	ಪರಂಪರೆ ಉಳಿಸಿ ಲಾವಣಿ ಹಾಡಲಾಗಿದೆ.
೨೦.	೨೪.೮.೨೦೦೨	ಸರ್ಕಾರಿ ಪ್ರೌಢಶಾಲೆ ಹಿಕ್ಕಂಗೇರಿ ಹರಪನಹಳ್ಳಿ	ಎ.ಮಲ್ಲಿಕಾರ್ಜುನ (ಮುಖ್ಯ ಶಿಕ್ಷಕರು)	ಜಿ. ಬಸವಂತಪ್ಪ (ಪ್ರಾಚಾರ್ಯರು ಸ.ಪ.ಪೂ ಕಾಲೇಜು, ಹರಪನಹಳ್ಳಿ)	ಹೆಚ್. ಎ. ತೀರ್ಥರಾಜ್ ಕುಂ.ಬಾ. ಸದಾಶಿವಪ್ಪ ಪಾಲ್ಗೊಂಡಿದ್ದರು.
೨೧	೨೪.೮.೨೦೦೨	ಪಾಗಾಶಾಲೆ ಜಮಖಂಡಿ	ಡಾ.ಎಚ್.ಜಿ.ದಡ್ಡಿ ಎಸ್. ಎಂ. ಬೇವೂರ (ಕ್ಷೇತ್ರ ಶಿಕ್ಷಣಾಧಿಕಾರಿ)	ಎಸ್. ಆರ್. ಮಟೋಳಿ	ವಿಜಯನಗರ ಸಾಮ್ರಾಜ್ಯ ಕುರಿತು ಮಾತನಾಡಿದರು (ಸಂಘಟನೆ : ಕೇಶವ ಉಮರ್ಜಿ)
೨೧.	೨೬.೮.೨೦೦೨	ಗುರುಭವನ, ಹರಪನಹಳ್ಳಿ	ಎಸ್. ಬಸವರಾಜಪ್ಪ (ಪ್ರಾಚಾರ್ಯರು)	ಶ್ರೀಮತಿ ಟಿ. ಗಿರಿಜ, (ಲೇಖಕ ದಾವಣಗೆರೆ)	ಕುಂ.ಬಾ. ಸದಾಶಿವಪ್ಪ ಪಾಲ್ಗೊಂಡಿದ್ದರು.
೨೨.	೨೭.೮.೨೦೦೨	ಸರಕಾರಿ ಪ.ಪೂರ್ವಕಾಲೇಜು ಹಲುವಾಗಿಲು	ಬಿ. ಸಿದ್ಧಲಿಂಗಪ್ಪ	ಕುಂಬಾಸದಾಶಿವಪ್ಪ ಸಿದ್ದಪ್ಪ (ನ್ಯಾಯವಾದಿಗಳು)	
೨೩.	೨೮.೮.೨೦೦೨	ಸ.ಪದವಿ ಪೂರ್ವಕಾಲೇಜು ಕಡಬಗೇರಿ	ಎ. ಸಿದ್ದಪ್ಪ (ಮುಖ್ಯೋಪಾಧ್ಯಾಯರು)	ಬಿ. ಜಯಪ್ರಕಾಶ್	
೨೪.	೨೯.೮.೨೦೦೨	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ	ಗೌ.ಮ. ಉಮಾಪತಿ ಶಾಸ್ತ್ರಿ ವಿಘ್ನರಾಜ ಭಟ್ (ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ)		ಪ್ರಾಚೀನ ಗ್ರಂಥ ಸಂಪಾದನೆ ಮತ್ತು ಸಂರಕ್ಷಣೆಯ ಪ್ರಾತ್ಯಕ್ಷಿತೆ
೨೫.	೨೯.೮.೨೦೦೨	ಉದಯ ಮಹಿಳಾ ಸಂಯುಕ್ತ ಪಿಯು ಕಾಲೇಜು, ವಿಜಯನಗರ ಬೆಂಗಳೂರು-೪೦	ಶ್ರೀಮತಿ ಕಮಲ ಕೆ. (ಪ್ರಾಚಾರ್ಯರು)	ಡಾ. ವಸಂತಲಕ್ಷ್ಮಿ ಕೆ. ಸರ್ವೋತ್ತಮ ಪಿಯು ಕಾಲೇಜು	ಪ್ರಾಯೋಜನೆ: ಶ್ರೀ ಎಸ್. ರಾಮಸ್ವಾಮಿ ಅಪರ್ಣರವರ ಲಾವಣಿಯನ್ನು ಹಾಡ ಲಾಗಿದೆ.
೨೬.	೩೧.೮.೨೦೦೨	ಸರಕಾರಿ ಪ್ರೌಢಶಾಲೆ ಅಬ್ಬಲಗೆರೆ	ಶ್ರೀ ಮಲ್ಲಿಕಾರ್ಜುನ ಮುರುಗ ರಾಜೇಂದ್ರ ಮಹಾಸ್ವಾಮಿಗಳು	ಜಯದೇವ ಜೈನಕೇರಿ ಸಿದ್ದಯ್ಯ ಹಿರೇಮಠ ಜಯದೇವಪ್ಪ ಜೈನಕೇರಿ	
೨೭.	೩೧.೮.೨೦೦೨	ಶ್ರೀ ಬೆಕ್ಕಿನ ಕಲ್ಮಠ ಶಿವಮೊಗ್ಗ	ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳು	ಮುದ್ದು ವೀರಪ್ಪ ಆನಂದ ಪೂಜಾರ	

ಕ್ರ.ಸಂ.	ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಅಧ್ಯಕ್ಷರು/ಉದ್ಘಾಟಕರು	ಮುಖ್ಯಅತಿಥಿ/ಉಪನ್ಯಾಸಕರು	ಇತರ ಅಂಶಗಳು
			ಸರ್ವಶ್ರೀ	ಸರ್ವಶ್ರೀ	
೩೮.	೨.೯.೨೦೦೨	ಕ.ವಿ.ವಿ ಸ್ನಾತಕೋತ್ತರ ಕೇಂದ್ರ ಬಾದಾಮಿ- ಬನಶಂಕರಿ	ಡಾ.ಪಿ.ಎಸ್. ಪಾಟೀಲ್ (ಮುಖ್ಯಸ್ಥರು ಶಿಲ್ಪ-ಚಿತ್ರಕಲಾವಿಭಾಗ)	ಮಹಾದೇವ ಜಗತಾಪ್ ದೇವೇಂದ್ರ ಮಾಧವನವನರ	
೩೯.	೬.೯.೨೦೦೨	ಶ್ರೀ ರೇಣುಕಾದೇವಿ ಪ್ರೌಢ ಶಾಲೆ ಹೊಳೆಆಲೂರು ರೋಣ ತಾಲೂಕ್	ಎಸ್. ಆರ್. ಹಂಡಿ (ಮುಖ್ಯ ಅಧ್ಯಾಪಕರು) ಎಲ್. ಆರ್. ಕುರಹಟ್ಟಿ (ಇತಿಹಾಸ ಶಿಕ್ಷಕರು)	ದೇವೇಂದ್ರ ಮಾಧವ ನವರ್	
೪೦.	೧೩.೯.೨೦೦೨	ಶ್ರೀ. ಕಲ್ಮೇಶ್ವರ ಪದವಿ ಪೂರ್ವ ಕಾಲೇಜು, ಹೊಳೆ ಆಲೂರು; ರೋಣ ತಾಲೂಕ್	ಎಂ. ಜಿ. ಕುಲಕರ್ಣಿ (ಪ್ರಾಚಾರ್ಯರು) ಎಸ್. ಎಸ್. ಭೂಸರೆಡ್ಡಿ (ನಿವೃತ್ತ ಪ್ರಾಚಾರ್ಯರು)	ವ್ಹಿ. ಬಿ ಉಗಲಾಟ	
೪೧.	೧೫.೯.೨೦೦೨	ಕೆ. ಪುರುಷೋತ್ತಮ ಮಾಸ್ತರ್ ಸ್ಮಾರಕ ಗ್ರಂಥಾಲಯ 'ಪುಸ್ತಕದ ಮನೆ', ಕಾಸರ ಗೋಡು	ಕಾಸರಗೋಡು ಜಿಲ್ಲೆಯ ಇತಿಹಾಸ ಕನ್ನಡ ಸಮಾಜ ವಿಚಾರ ಗೋಷ್ಠಿ ನಡೆಸಲಾಯಿತು.		
೪೨.	೧೭.೯.೨೦೦೨	ವನಿತಾ ಹೈಸ್ಕೂಲ್ ಧಾರವಾಡ	ಸಿ. ಎ. ಹಿರೇಮಠ (ಮುಖ್ಯ ಅಧ್ಯಾಪಕರು)	ಪ್ರೊ. ವ್ಹಿ.ಜಿ ದೀಕ್ಷಿತ್	
೪೩.	೨೨.೯.೨೦೦೨	ದುರ್ಗಾದೇವಿ ದೇವಾಲಯ ಹುಬ್ಬಳ್ಳಿ	ದೇವಾಲಯದ ಪ್ರಾಂಗಣ ವನ್ನು ಸ್ವಚ್ಛಗೊಳಿಸಿದರು ಭಿತ್ತಿ ಪತ್ರ ಅನಾವರಣ ಮಾಡಿ ಡಾ. ಎಚ್. ಆರ್. ರಘುನಾಥ ಭಟ್ ಉಪನ್ಯಾಸ ನೀಡಿದರು.		
೪೩.	೨೭.೯.೨೦೦೨	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಾಗವಾರ ಪಾಳ್ಯ ಬೆಂಗಳೂರು	ಕೆ. ಎಮ್. ಹಸೀಫ್ ರವರು (ಎಸ್.ಡಿ.ಎಂ.ಸಿ) ಅಧ್ಯಕ್ಷರು	ಕೆ.ಪಿ. ಕೃಷ್ಣಪ್ಪನವರು	
೪೪.	೨೮.೯.೨೦೦೨	ಎಂ.ಎಂ. ಕಲಾ-ವಿಜ್ಞಾನ ಮಹಾವಿದ್ಯಾಲಯ, ಶಿರಸಿ	ಡಾ. ಟಿ. ಎಸ್. ಹಳೆಮನಿ (ಉಪನ್ಯಾಸಕರು)	ಪ್ರೊ. ಜಿ.ಟಿ. ಭಟ್ ಟಿ. ಎಮ್. ಹೆಗಡೆ ಅಣ್ಣಪ್ಪ ಎಸ್. ನಾಯ್ಕ ಕೇಶವ ಉಮರ್ಜಿ	
೪೫.	೧೨.೧೧.೦೨	ಗ್ರಾಮಪಂಚಾಯತಿ ಸಭಾಂಗಣ ಹುನ್ನೂರು ಸರ್ಕಾರಿ ಪ.ಪೂರ್ವಕಾಲೇಜು	ರವೀಂದ್ರ ಪಿ. ಹುಂಡಿ (ಗ್ರಾ.ಪಂ.ಅಧ್ಯಕ್ಷರು ಹುನ್ನೂರು)		ದಿ. ೨೬.೯.೦೨ ರಂದು ಇಲ್ಲಿಯ ಎನ್.ಎಸ್. ಎಸ್. ಘಟಕದವರು ಸೋಂದಾ ದಲ್ಲಿರುವ ವೆಂಕಟರಮಣ ಗುಡಿಯನ್ನು ಸ್ವಚ್ಛಗೊಳಿಸಿದರು. ಸ್ಮಾರಕಗಳ ಮಹತ್ವ ಕುರಿತು ಉಪನ್ಯಾಸ ನಡೆಯಿತು.
೪೬.	೧೮.೧೧.೦೨	ಸರ್ಕಾರಿ ಪ.ಪೂರ್ವಕಾಲೇಜು ಹಿರೇಕೋಗಲೂರು ಚನ್ನಗಿರಿ ತಾಲೂಕ್	ಜಿ. ಎಸ್. ಮೋಹನದಾಸ್ (ಪ್ರಾಚಾರ್ಯರು)	ಸಂತೇಬೆನ್ನೂರು ಸುಮತೀಂದ್ರ ನಾಡಿಗ್	
೪೭.	೨೫.೧೧.೦೨	ವಿಜಯ ಪ್ರೌಢಶಾಲೆ ಸಂತೇಬೆನ್ನೂರು ದಾವಣಗೆರೆ ಜಿಲ್ಲೆ	ಹೆಚ್. ನೀಲಪ್ಪ (ಮುಖ್ಯೋಪಾಧ್ಯಾಯರು)	ಸುಮತೀಂದ್ರ ನಾಡಿಗ್	ಕರ್ನಾಟಕ ಇತಿಹಾಸದಲ್ಲಿ 'ರಸ ಪ್ರಶ್ನೆ' ಸ್ಪರ್ಧೆ ನಡೆಸಲಾಗಿದೆ.
೪೮.	೨.೧೨.೦೨	ಬೆಸೆಂಟ್ ಪ.ಪೂ.ಕಾಲೇಜು ಕೊಡಿಯಾಲ್ ಬೈಲು ಮಂಗಳೂರು	ಹೈಸ್ಕೂಲ್- ಕಾಲೇಜುಗಳಿಗೆ ಪ್ರಬಂಧ ಸ್ಪರ್ಧೆ ನಡೆಸಿ, ಬಹು ಮಾನ ವಿತರಣೆ ಮಾಡಲಾಗಿದೆ.		
೪೯.	೧೦.೧೨.೦೨	ಶ್ರೀ ರುದ್ರೇಶ್ವರ ಪ್ರೌಢಶಾಲೆ ಪಾಂಡೋಮಟ್ಟಿ ಗೊಪ್ಪೇನ ಹಳ್ಳಿ, ದಾವಣಗೆರೆ ಜಿಲ್ಲೆ	ಎಂ. ಬಿ. ರಂಗಪ್ಪ (ಹಿರಿಯ ಶಿಕ್ಷಕರು)	ಸುಮತೀಂದ್ರನಾಡಿಗ್	
೫೦.	೧೧.೧೨.೦೨	ಶ್ರೀ ಮಹಾರುದ್ರಸ್ವಾಮಿ ಪ್ರೌಢ ಶಾಲೆ ಮಾವಿನ ಹೊಳೆ-ರಾಜಗೊಂಡನಹಳ್ಳಿ ದಾವಣ ಗೆರೆ ಜಿಲ್ಲೆ	ಎಂ.ಪಿ.ಎಂ. ಚನ್ನಬಸಯ್ಯ (ಮುಖ್ಯೋಪಾಧ್ಯಯರು)	ಸುಮತೀಂದ್ರ ನಾಡಿಗ್	
೫೧.	೪.೧೨.೦೨	ವನಿತಾ ಟ್ರೈನಿಂಗ್ ಕಾಲೇಜ್ ಧಾರವಾಡ	ಎಲ್. ಆಯ್ ತೊಗ್ಗಿ	ಎಸ್.ಎಸ್. ಮಳಗಿ	
೫೨.	೧೩.೧.೦೩	ಶ್ರೀಕೊಟ್ಟೂರೇಶ್ವರ ಪದವಿ ಪೂರ್ವ ಕಾಲೇಜು; ಗಂಗಾವತಿ	ಶ್ರೀ ಕೊಟ್ಟೂರೇಶ್ವರ ಸ್ವಾಮಿಗಳು (ಕಲ್ಮಠ, ಗಂಗಾವತಿ)	ಎಚ್. ಪ್ರಭಾಕರ (ವಕೀಲರು)	ಡಾ. ಕೆ. ರವೀಂದ್ರನಾಥ ಸಂಚಾಲಕರು

ಕ್ರ.ಸಂ.	ದಿನಾಂಕ	ಕಾರ್ಯಕ್ರಮ ನಡೆದ ಸ್ಥಳ	ಅಧ್ಯಕ್ಷರು/ಉದ್ಘಾಟಕ	ಮುಖ್ಯಅತಿಥಿ/ಉಪನ್ಯಾಸಕರು	ಇತರ ಅಂಶಗಳು
			ಸರ್ವಶ್ರೀ	*ಸರ್ವಶ್ರೀ*	
			ಡಾ.ಎಚ್.ಜೆ.ಲಕ್ಕಪ್ಪಗೌಡ (ಕುಲಪತಿಗಳು ಕ.ವಿ.ವಿ.ಹಂಪಿ)	ಡಾ. ಸಿ. ಮಹಾದೇವ (ಪ್ರವಾಚಕರು ಕ.ವಿ.ವಿ)	
೫೩.	೧೪.೧.೦೩	ಸ್ಮಯೋರ್ ವ್ಯಾಸಪುರಿ ಕಾಲೇಜು ವ್ಯಾಸನಕೆರೆ	ಶ್ರೀಮತಿ ವೈ. ಎಸ್. ಘೋರ್ಪಡೆ	ರಮೇಶ್ ನಾಯಕ (ಕನ್ನಡ ವಿವಿ.ಹಂಪಿ)	ಡಾ. ಕೆ. ರವೀಂದ್ರನಾಥ
೫೪.	೧೬.೧.೦೩	ಎಸ್.ಯಂ.ಜೆ.ಎಂ. ಕಾಲೇಜು ಹರಪನಹಳ್ಳಿ	ಎಸ್. ಬಸವರಾಜ್ (ಪ್ರಾಚಾರ್ಯರು)	ಎಂ.ಕೊಟ್ರೇಶ್ (ಯೋಜನ ಸಹಾಯಕ ಕ.ವಿ.ವಿ. ಹಂಪಿ)	"
೫೫.	೧೭.೧.೦೩	ಥಿಯಾಸಫಿಕಲ್ ಮಹಿಳಾ ಕಾಲೇಜ್ ಹೊಸಪೇಟೆ	ಜೆ. ಶಂಕರಗೌಡ (ಮಾಜಿ ಶಾಸಕರು)	ಶ್ರೀಮತಿ ಉಷಾರಾಣಿ ಶರ್ಮ (ಪ್ರಾಚಾರ್ಯರು) ಡಾ. ಎಚ್. ಎಸ್. ಅಂಗಡಿ (ಉಪನ್ಯಾಸಕ ಕ.ವಿ.ವಿ.)	"
೫೬.	೧೮.೧.೦೩	ಗುಡ್‌ನ್ಯೂಸ್ ಕಾಲೇಜ್ ಕಲಘಟಗಿ	ಶ್ರೀಮತಿ ಅಲಿಯಾಕುಟ್ಟಿ	ಬ್ರ. ಅಬ್ರಹಂ ಪ್ರಲೇಲ ಡಾ.ಕೆ. ರವೀಂದ್ರನಾಥ (ಉಪನ್ಯಾಸಕರು ಕ.ವಿ.ವಿ)	"
೫೭.	೨೦.೧.೦೩	ಶ್ರೀಮತಿ ಅಲಂ. ಸುಮಂಗಲಮ್ಮ ಕಾಲೇಜು ಬಳ್ಳಾರಿ	ಜಾನೆಕುಂಟೆ ವಿರೂಪಾಕ್ಷಪ್ಪ	ಡಾ. ಎಸ್. ಸೋಮಶೇಖರ್ (ಪ್ರಾಚಾರ್ಯರು) ಪ್ರೊ. ಇಟಗಿ ಈರಣ್ಣ	"
೫೮.	೨೧.೧.೦೩	ಸಿದ್ಧಲಿಂಗೇಶ್ವರ ಕಾಲೇಜು ಕಾನಮಡಗು	ಡಾ.ಕೆ. ವಿ. ನಾರಾಯಣ (ಕುಲಸಚಿವರು ಕ.ವಿ.ವಿ. ಹಂಪಿ)	ಶ್ರೀಮತಿ ಭಾಗೀರಥಿ ಮರುಳ ಸಿದ್ದನಗೌಡ; ಕೆ. ಎಂ. ಮಂಜು ನಾಥ; ಕೆ. ಎಂ. ತಿಪ್ಪೇಸ್ವಾಮಿ; ಡಾ. ಎಫ್.ಟಿ ಹಳ್ಳಿಕೇರಿ	ಈ ಸಪ್ತಾಹದ ಏಳೂ ಕಾರ್ಯ ಕ್ರಮಗಳನ್ನು ಡಾ. ಕೆ. ರವೀಂದ್ರ ನಾಥ್‌ರವರು ನಿಯೋಜಿಸಿದ್ದಾರೆ.
೫೯.	೫.೨.೦೩	ನ್ಯೂ ಹಾಯ್ ಸ್ಕೂಲ್ ಧಾರವಾಡ	ಎಮ್. ಎಫ್. ಬಸರಕೋಡ	ಪ್ರೊ. ವ್ಹಿ. ಜಿ. ದೀಕ್ಷಿತ್ ಎಂ. ಎಂ. ಲೋಂಡೆ	
೬೦.	೨.೫.೦೩	ಎಸ್. ಎಸ್. ಬಸವನಾಳ್ ಟೀಚರ್ಸ್ ಕಾಲೇಜ್	ಎಸ್. ಎ. ಭೋಜ, (ನಿವೃತ್ತ, ಪ್ರಾಚಾರ್ಯರು) ಪ್ರಾ. ಎಸ್.ಎಲ್. ಕಳಸದ (ಪ್ರಾಚಾರ್ಯರು)	ಚಂದ್ರಕಾಂತ ಕುಸನೂರ (ಹಿರಿಯ ಸಾಹಿತಿಗಳು)	
೬೧.	೩.೫.೦೩	ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ	ಪ್ರಾ.ಕೆ.ಎಸ್. ಅಶೋಕ್ ಕುಮಾರ್ (ಪ್ರಾಚಾರ್ಯರು)	ಡಾ. ಶ್ರೀಮತಿ ಸ್ಮಿತಾ ಸುರೇ ಬಾನಕರ್ (ಇತಿಹಾಸ ಪ್ರಾಧ್ಯಾಪಕರು)	
೬೨.	೧೨.೫.೦೩	ವಿವೇಕಾನಂದ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರ ನೆಹರೂ ನಗರ ಬೆಳಗಾವಿ	ಪ್ರೊ. ಬಿ.ಜಿ. ಧಾರವಾಡ (ಪ್ರಾಚಾರ್ಯರು)	ಡಾ. ಶ್ರೀನಿವಾಸ ಕುಲಕರ್ಣಿ (ಆರ್.ಪಿ.ಡಿ. ಕಾಲೇಜು)	ಈ ಕಾರ್ಯಕ್ರಮಗಳು ಶ್ರೀ ವ್ಹಿ ಸಿಮಾಲಗತ್ತಿಯವರ ನೇತೃತ್ವದಲ್ಲಿ ನಡೆದಿವೆ.

ಇನ್ನೂ ಹಲವು ಕಾರ್ಯಕ್ರಮಗಳು ನಡೆದಿವೆ ಎಂದು ತಿಳಿದಿದೆ. ಆದರೆ ಆ ಬಗ್ಗೆ ವಿವರವಾದ ವರದಿಗಳು ಬಂದಿಲ್ಲ.

ಹದಿನಾರನೆಯ ವಾರ್ಷಿಕ ಸಮ್ಮೇಳನ

ಅಕಾದೆಮಿಯ ಹದಿನಾರನೆಯ ವಾರ್ಷಿಕ ಸಮ್ಮೇಳನವು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ರಾಮಚಂದ್ರಾಪುರದ ಶ್ರೀ ಮಠದ ಆವರಣದಲ್ಲಿ ಧರ್ಮಚಕ್ರ ಟ್ರಸ್ಟ್ ಆಶ್ರಯದಲ್ಲಿ ೨೦೦೨ನೇ ಸೆಪ್ಟೆಂಬರ್ ೨೨, ೨೩ ಮತ್ತು ೨೪ನೇ ತಾರೀಕುಗಳಂದು ಶ್ರೀ ರಾಮಚಂದ್ರಾಪುರದ ಮಠಾಧೀಶರಾದ ಶ್ರೀ ಶ್ರೀ ರಾಘವೇಶ್ವರಭಾರತೀಸ್ವಾಮಿಗಳ ಸನ್ನಿಧಿಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಉದ್ಘಾಟನಾ ಸಮಾರಂಭದಲ್ಲಿ ಪ್ರೊ. ಎಂ. ಜಿ. ನಾಗರಾಜ್ ಹಾಗು ಡಾ. ಪಿ. ವಿ. ಕೃಷ್ಣಮೂರ್ತಿ ಸಂಪಾದಿತ '**ಇತಿಹಾಸ ದರ್ಶನ**'ದ ೧೭ನೆಯ ಸಂಪುಟವನ್ನು ಡಾ. ಅ. ಸುಂದರ ಅವರು ಬಿಡುಗಡೆ ಮಾಡಿದರು. ಶ್ರೀ ಎಂ. ಜಿ. ನಾಗರಾಜ್ ಅವರು

'ಇತಿಹಾಸ ದರ್ಶನ' ಸಂಪುಟದ ಲೇಖನಗಳ ಮಹತ್ವ ಕುರಿತು ಮಾತನಾಡಿದರು. ಖ್ಯಾತ ಇತಿಹಾಸ ತಜ್ಞ ಡಾ॥ ಬಾ. ರಾ. ಗೋಪಾಲ್ ಅವರ ಹೆಸರಿನಲ್ಲಿ ನೀಡಲಾಗುತ್ತಿರುವ, ೨೦೦೨ನೇ ವರ್ಷದ ಡಾ॥ ಬಾ. ರಾ. ಗೋಪಾಲ್ ಪ್ರಶಸ್ತಿಯನ್ನು ಶಾಸನ ತಜ್ಞ ಡಾ॥ ಶ್ರೀನಿವಾಸ ರಿತ್ತಿ ಅವರಿಗೆ ಅವರ ಅನುಪಸ್ಥಿತಿಯಲ್ಲಿ ನೀಡಿ ಗೌರವಿಸಲಾಯಿತು. ಸಮ್ಮೇಳನಾಧ್ಯಕ್ಷರಾಗಿ ಗೌರವ ಸ್ವೀಕರಿಸಿದ ಡಾ॥ ಎ. ಕೆ. ಶಾಸ್ತ್ರಿ ಅವರು ಇತಿಹಾಸದ ಅಧ್ಯಯನದಲ್ಲಿ ಹಸ್ತಪ್ರತಿಗಳ ಮಹತ್ವ ಮತ್ತು ಆ ನಿಟ್ಟಿನಲ್ಲಿ ಶೃಂಗೇರಿ, ರಾಮಚಂದ್ರಾಪುರ ಮತ್ತು ಸೋದೆಯ ಶ್ರೀಮಠಗಳು ಕೈಗೊಂಡಿರುವ ಮತ್ತು ಈಗಾಗಲೇ ಸಾಧಿಸಿರುವ ಕಾರ್ಯಗಳನ್ನು ಸ್ಮರಿಸಿದರು. ಪೂಜ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಆಶೀರ್ವಚನ ನೀಡಿ ಸಮ್ಮೇಳನ ಯಶಸ್ವಿ ಆಗಲಿ ಎಂದು ಹರಸಿದರು.

ಇದೇ ಸಂದರ್ಭದಲ್ಲಿ, ಕಳೆದ ಸಮ್ಮೇಳನದ ನಂತರ ಈವರೆಗೆ ಪಿಎಚ್.ಡಿ. ಪಡೆದಿರುಪವ ಈ ಕೆಳಕಂಡ, ಅಕಾದೆಮಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಕ್ರ.ಸಂ.	ಪಿಎಚ್.ಡಿ./ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧.	ಚಿಂಚೋಳಿ ಸುಭಾಷ್ ರಾಮಪ್ಪ	ಡಾ॥ ರವಿ ಕೋರಿ ಶೆಟ್ಟರ್	ಪ್ರಾಕ್ತನ ಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪೂರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆಯ ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೨.	ಹಳೇಮನೆ ತಿಮ್ಮಣ್ಣ ಶಿವಯ್ಯಾ	ಡಾ॥ ಎಚ್. ಆರ್. ರಘುನಾಥ ಭಟ್	Ramachandrapura matha - Its History and Antiquities	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೩.	ಎಚ್. ತಿಪ್ಪೇಸ್ವಾಮಿ	ಬಾಲಸುಬ್ರಹ್ಮಣ್ಯ	ದಾವಣಗೆರೆ ಜಿಲ್ಲೆಯ ದೇವಾಲಯಗಳು (ಪ್ರಾಚೀನ ಮತ್ತು ಮಧ್ಯಕಾಲೀನ ಯುಗ)	ಕನ್ನಡ ವಿಶ್ವವಿದ್ಯಾಲಯ ಹಂಪಿ
೪.	ಹಾಜವಗೋಳ ಧನವಂತ ಗೋವಿಂದಪ್ಪ	ಡಾ॥ ಬಿ. ವ್ಹಿ ಶಿರೂರ	ಮುಳುಗುಂದ ನಾಡು : ಒಂದು ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೫.	ಧವಳಗಿ ಸಂಗನಗೌಡ ಗೌಡಪ್ಪ ಗೌಡ	ಡಾ॥ ಎಸ್. ರಾಜಶೇಖರ್	ವಿಜಾಪುರದ ಒಂದನೆಯ ಆಲಿ ಆದಿಲ್ ಶಾಹನ ಜೀವನ ಮತ್ತು ಸಾಧನೆ	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೬.	ದೊಡ್ಡಮನಿ ಸುರೇಶ ಗುಡ್ಡಪ್ಪ	ಡಾ॥ ಎಸ್.ಎಲ್ ಲೀಲಾ ಶಾಂತಕುಮಾರಿ	ನೂರುಂಬಾಡ-ಒಂದು ಸಾಂಸ್ಕೃತಿಕ ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೭.	ಟಿ.ವಿ.ನಾಗರಾಜ	ಡಾ॥ ಶಿವಣ್ಣ	ಮೈಸೂರು ಸಂಸ್ಥಾನದಲ್ಲಿ ನೀರಾವರಿ-ಕೋಲಾರ ಜಿಲ್ಲೆ ಒಂದು ಅಧ್ಯಯನ	ಮೈಸೂರು ವಿಶ್ವವಿದ್ಯಾಲಯ ಮೈಸೂರು
೮.	ಜಿ. ಜ್ಞಾನಾನಂದ	ಡಿ.ಲಿಟ್	ಕನ್ನಡ ಮಹಾಭಾರತಗಳಲ್ಲಿ ಶಿಲ್ಪ ಮತ್ತು ಶಿಲ್ಪ	ಕನ್ನಡ ವಿಶ್ವವಿದ್ಯಾಲಯ ಹಂಪಿ

೨೨.೯.೨೦೦೨ರಂದು ಮೂರು, ೨೩.೯.೨೦೦೨ರಂದು ನಾಲ್ಕು ಮತ್ತು ೨೪.೯.೨೦೦೨ರಂದು ನಾಲ್ಕು, ಹೀಗೆ ಹನ್ನೊಂದು ವಿಚಾರ ಗೋಷ್ಠಿಗಳು ನಡೆದು, ಅಕಾದೆಮಿಯ ಸದಸ್ಯರು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಕುರಿತು ತಾವು ಶೋಧಿಸಿದ

ಹೊಸ ವಿಚಾರಗಳ ವಿನಿಮಯ ಮಾಡಿಕೊಂಡರು. ಪ್ರೊ|| ಲಕ್ಷ್ಮಣ್ ತೆಲಗಾವಿ, ಡಾ|| ದೇವರಕೊಂಡಾರೆಡ್ಡಿ, ಡಾ|| ಅ. ಸುಂದರ, ಡಾ|| ಎಸ್. ಕೆ. ಜೋಶಿ, ಡಾ|| ಎಚ್. ಆರ್. ರಘುನಾಥಭಟ್, ಪ್ರೊ|| ಎಂ. ಜಿ. ನಾಗರಾಜ್, ಡಾ|| ಸೂರ್ಯನಾಥ ಕಾಮತ್, ಡಾ|| ಎಸ್. ನಾಗರಾಜು, ಡಾ|| ಕೆ. ಜಿ. ವಸಂತಮಾಧವ, ಡಾ|| ಚೆನ್ನಕ್ಕ ಪಾವಟೆ, ಡಾ|| ಬಿ. ರಾಜಶೇಖರಪ್ಪ, ಡಾ|| ಬಿ. ವ್ಹಿ ಶಿರೂರ ಅವರುಗಳ ಅಧ್ಯಕ್ಷತೆಯಲ್ಲಿ ನಡೆದ ವಿಚಾರ ಗೋಷ್ಠಿಗಳಲ್ಲಿ ೮೦ ಸಂಶೋಧನಾ ಪ್ರಬಂಧಗಳು ಮಂಡನೆ ಆದುವು.

೨೦೦೨ರ ಡಾ|| ಬಾ. ರಾ. ಗೋಪಾಲ್ ಪ್ರಶಸ್ತಿ ಪಡೆದ ಡಾ|| ಶ್ರೀನಿವಾಸ ರಿತ್ತಿ ಅವರು ಅನಾರೋಗ್ಯದ ಕಾರಣ ಸಮ್ಮೇಳನದಲ್ಲಿ ಉಪಸ್ಥಿತರಿರಲಿಲ್ಲ. ಅವರು ಕಳುಹಿಸಿದ್ದ ವಿಶೇಷ ಉಪನ್ಯಾಸವನ್ನು ಡಾ|| ಎಚ್. ಆರ್. ರಘುನಾಥ ಭಟ್ ವಾಚನ ಮಾಡಿದರು. ೨೪.೯.೨೦೦೨ರಂದು ಸಂಜೆ ೬.೩೦ಕ್ಕೆ ಪೂಜ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಆಶೀರ್ವಚನ ನೀಡಿ ಸಮ್ಮೇಳನದ ಸಮಾರೋಪ ಮಾಡಿದರು.

ಸಮ್ಮೇಳನದ ಯಶಸ್ಸಿಗೆ ಶ್ರಮಿಸಿದ ಎಲ್ಲ ಗಣ್ಯರಿಗೂ ಅಕಾದೆಮಿಯು ಧನ್ಯವಾದಗಳೊಡನೆ ಕೃತಜ್ಞತೆಗಳನ್ನು ಸಮರ್ಪಿಸಿತು.

ಸರ್ವಸದಸ್ಯರ ಸಭೆ - ೨೦೦೧

ದಿನಾಂಕ ೨೩.೯.೨೦೦೨, ಸೋಮವಾರ ಸಂಜೆ ೬.೩೦ಗಂಟೆಗೆ ಅಕಾದೆಮಿಯ ೧೬ನೆಯ ವಾರ್ಷಿಕ ಸಮ್ಮೇಳನದ ಸಭಾಸ್ಥಾನದಲ್ಲಿ ಆ ಮೊದಲೇ ಸರ್ವಸದಸ್ಯರಿಗೂ ಪತ್ರಮುಖೇನ ತಿಳಿಸಿದ್ದ ಪ್ರಕಾರ, ಅಕಾದೆಮಿಯ ಅಧ್ಯಕ್ಷರಾದ ಡಾ|| ಸೂರ್ಯನಾಥ ಕಾಮತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯ ನಡವಳಿಕೆಗಳು ಕೆಳಕಂಡಂತಿವೆ.

ಸಭೆಯಲ್ಲಿ ೧೦೦ ಸದಸ್ಯರು ಹಾಜರಿದ್ದರು.

ಸಭೆಯ ತಿಳುವಳಿಕೆ ಪತ್ರವನ್ನು ಆ ಮೊದಲೇ ಸರ್ವಸದಸ್ಯರಿಗೂ ಅಂಚೆಯ ಮೂಲಕ ಕಳುಹಿಸಿದ್ದರೂ ಸಹ, ಸಭೆಯ ಆರಂಭಕ್ಕೆ ಮೊದಲು ಅದನ್ನು ಪ್ರಧಾನ ಕಾರ್ಯದರ್ಶಿ ಡಾ|| ಎಚ್. ಎಸ್. ಗೋಪಾಲರಾವ್ ಅವರು ವಾಚಿಸಿದರು. ನಂತರ ಡಾ|| ಸೂರ್ಯನಾಥ ಕಾಮತ್ ಅವರು ಸಭೆಯನ್ನು ಆರಂಭಿಸಲು ಅನುಮತಿ ಕೇಳಿದರು. ಸಭೆಯನ್ನು ಆರಂಭಿಸಬಹುದೆಂದು ಡಾ|| ಕೆ. ವೆಂಕಟೇಶ ಜೋಯಿಸ್ ನೀಡಿದ ಸೂಚನೆಯನ್ನು ಡಾ|| ಕೆ. ಬಿ. ಶಿವತಾರಕ್ ಅನುಮೋದಿಸಿದರು. ಶ್ರೀಮತಿ ಜಯಮ್ಮ ಕರಿಯಣ್ಣ ಅವರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭವಾಯಿತು. ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನೂ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಡಾ|| ಕೆ. ವಸಂತ ಲಕ್ಷ್ಮಿ ಸ್ವಾಗತಿಸಿದರು.

ಕಳೆದ ಸಾಲಿನ ಸರ್ವಸದ್ಯರ ಸಭೆಯ ನಂತರ ಈವರೆಗೆ ನಿಧನರಾದ ಅಕಾದೆಮಿಯ ಸದಸ್ಯರು ಮತ್ತು ಅಭಿಮಾನಿಗಳು ಹಾಗೂ ಇತಿಹಾಸಕಾರರಿಗೆ ಎರಡು ನಿಮಿಷಗಳ ಮೌನ ಶ್ರದ್ಧಾಂಜಲಿ ಅರ್ಪಿಸಲಾಯಿತು. ಶ್ರದ್ಧಾಂಜಲಿ ಸಲ್ಲಿಸಲಾದವರ ಹೆಸರುಗಳು ಈ ಕೆಳಕಂಡಂತಿವೆ.

ಸದಸ್ಯರು	ಅಕಾದೆಮಿಯ ಅಭಿಮಾನಿಗಳು ಹಾಗೂ ಇತಿಹಾಸಕಾರರು
೧. ಶ್ರೀ ಆರ್. ಆರ್. ಜೋಷಿ, ಧಾರವಾಡ	ಶ್ರೀ ಕೆ. ಜಿ. ಕೃಷ್ಣನ್ ಮೈಸೂರು
೨. ಡಾ|| ವಸಂತಕುಮಾರಿ, ಮೈಸೂರು	ಶ್ರೀ ಕೆ. ಟಿ. ರಾಮಸ್ವಾಮಿ, ಬೆಂಗಳೂರು
೩. ಶ್ರೀ ಕಿಬ್ಬಳ್ಳಿ ಗಣಪತಿಶರ್ಮ, ಬೆಂಗಳೂರು	ಡಾ|| ಕೃಷ್ಣಾನಂದ ಕಾಮತ್, ಬೆಂಗಳೂರು
೪. ಶ್ರೀಮತಿ ಕಮಲಾ ಸಂಪಳ್ಳಿ, ಬೆಂಗಳೂರು	ಶ್ರೀ ಕೆ. ಮುದ್ದಣ್ಣ, ಬೆಂಗಳೂರು
೫. ಶ್ರೀ ಸಿ. ಎಸ್. ಕಲ್ಲಪ್ಪ ಹೊದಿಗ್ಗೆರೆ	ಶ್ರೀ ಐ.ಮಾ. ಮುತ್ತಣ್ಣ, ಕೊಡಗು

೨೦೦೧ನೆಯ ಸಾಲಿನ ವರದಿ

೨೦೦೧ನೆಯ ಸಾಲಿನ ವಾರ್ಷಿಕ ವರದಿಯ ಮುದ್ರಿತ ಪ್ರತಿಗಳನ್ನು ಸಭೆಯ ಆರಂಭದಲ್ಲೇ, ಹಾಜರಿದ್ದ ಎಲ್ಲಾ ಸದಸ್ಯರಿಗೂ ನೀಡಲಾಗಿತ್ತು. ಆದ್ದರಿಂದ ವರದಿಯ ವಾಚನದ ಅವಶ್ಯಕತೆ ಇಲ್ಲವೆಂದೂ, ಅದನ್ನು ಒಪ್ಪಬಹುದೆಂದೂ ಶ್ರೀ ಕೆ. ಸಿ. ಮಲ್ಲಿಗವಾಡ ಸೂಚಿಸಿದರು. ಆ ಸೂಚನೆಯನ್ನು ಡಾ|| ಅ. ಸುಂದರ ಅನುಮೋದಿಸಿದರು. ಆ ಅನುಮೋದನೆಗೆ ಸರ್ವಾನುಮತಿಯೂ ದೊರೆಯಿತು.

೨೦೦೧ನೆಯ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳು

೨೦೦೧ನೆಯ ಸಾಲಿನ ವಾರ್ಷಿಕ ವರದಿಯ ಜೊತೆಗೆ, ೨೦೦೧ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನೂ ಸದಸ್ಯರಿಗೆ ಒದಗಿಸಲಾಗಿತ್ತು. ಅದನ್ನು ಅನುಮೋದಿಸಬಹುದೆಂದು ಡಾ|| ಪಿ. ಎನ್. ನರಸಿಂಹಮೂರ್ತಿ ಸೂಚಿಸಿದರು. ಶ್ರೀ ಕುಂ. ಬಾ. ಸದಾಶಿವಪ್ಪ ಆ ಸೂಚನೆಯನ್ನು ಅನುಮೋದಿಸಿದರು. ಸರ್ವ ಸದಸ್ಯರ ಅನುಮೋದನೆಯೂ ದೊರೆಯಿತು.

೨೦೦೨ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳು

ಡಾ|| ಬಾ. ರಾ. ಗೋಪಾಲ್ ಅವರ ಹೆಸರಿನಲ್ಲಿ ವಾರ್ಷಿಕ ಪ್ರಶಸ್ತಿಗೆಂದು ಡಾ|| ಬಾ. ರಾ. ಗೋಪಾಲ್ ಅವರ ಕುಟುಂಬದವರು ಠೇವಣಿಯಾಗಿ ಇಟ್ಟಿರುವ ರೂ. ೭೫,೦೦೦ (ಎಪ್ಪತ್ತೈದು ಸಾವಿರ) ಮತ್ತು ಶ್ರೀ ಕೆ. ಅಭಿಶಂಕರ್ ಅವರ ಹೆಸರಿನಲ್ಲಿ ಸಮ್ಮೇಳನಾಧ್ಯಕ್ಷರ ಗೌರವ ಫಲಕಕ್ಕಾಗಿ ಅವರ ಶ್ರೀಮತಿ ವಿಶಾಲಾಕ್ಷಿ ಅವರು ಠೇವಣಿಯಾಗಿ ಇಟ್ಟಿರುವ ರೂ. ೨೦,೦೦೦ (ಇಪ್ಪತ್ತು ಸಾವಿರ) ವೂ ಸೇರಿದಂತೆ ಅಕಾದೆಮಿಯ ಲೆಕ್ಕದಲ್ಲಿ ಒಟ್ಟು ರೂ. ೪,೯೫,೦೦೦ (ನಾಲ್ಕು ಲಕ್ಷ ತೊಂಭತ್ತೈದು ಸಾವಿರ) ಠೇವಣಿ ಇರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಇತಿಹಾಸದರ್ಶನದ ಮುದ್ರಣ ವೆಚ್ಚವನ್ನು ಹೊರತುಪಡಿಸಿ, ಕೊಠಡಿಯ ಬಾಡಿಗೆ, ಅಂಚೆ ವೆಚ್ಚ, ಸಮ್ಮೇಳನದ ಸಂದರ್ಭದ ವೆಚ್ಚಗಳು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಇತ್ಯಾದಿಗಳ ಖರ್ಚಿಗಾಗಿ ಅಕಾದೆಮಿಯು ವಾರ್ಷಿಕ ಕನಿಷ್ಠ ರೂ. ಒಂದು ಲಕ್ಷ ಖರ್ಚುಮಾಡುತ್ತಿದೆ, ಎಂಬ ವಿಚಾರವನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ವರ್ಷದಿಂದ ವರ್ಷಕ್ಕೆ ಅಕಾದೆಮಿಯ ಖರ್ಚು ಹೆಚ್ಚುತ್ತಿರುವುದನ್ನು ಡಾ|| ಸೂರ್ಯನಾಥ ಕಾಮತ್ ತಿಳಿಸಿದರು. ಅಕಾದೆಮಿಯ ಪದಾಧಿಕಾರಿಗಳು ವೆಚ್ಚದ ಮೇಲೆ ಮಿತಿ ಹೇರಿಕೊಂಡು ಅಕಾದೆಮಿಯ ಹಣಕಾಸು ಪರಿಸ್ಥಿತಿಯನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿರುವುದಕ್ಕಾಗಿ, ಎಲ್ಲ ಪದಾಧಿಕಾರಿಗಳನ್ನೂ ಶ್ರೀ ತ. ರಂ. ಕೃಷ್ಣಗೌಡ ಅಭಿನಂದಿಸಿದರು.

೨೦೦೨ನೆಯ ಸಾಲಿನ ಮುಂಗಡ ಲೆಕ್ಕ ಪತ್ರಗಳನ್ನು ಮಂಡಿಸುತ್ತಾ ಕೋಶಾಧಿಕಾರಿ ಶ್ರೀ ಎಂ. ಬಿ. ಪಾಟೀಲ್ ಅವರು ಪರಿಶೋಧಕರು ನೀಡಿರುವ ದೃಢೀಕರಣ ಪತ್ರವನ್ನು ವಾಚಿಸಿ, ವರಮಾನ ಇಲಾಖೆಯು ಈ ವರ್ಷ ಅಕಾದೆಮಿಯ ಠೇವಣಿಯ ಮೇಲಿನ ಬಡ್ಡಿಯಲ್ಲಿ ಟಿ.ಡಿ. ಎಸ್. ಆಗಿ ಸ್ವಲ್ಪ ಹಣವನ್ನು ಹಿಡಿದಿದೆ. ಈ ಬಗ್ಗೆ ವರಮಾನ ಇಲಾಖೆಯೊಂದಿಗೆ ವ್ಯವಹರಿಸಿ, ವರಮಾನ ತೆರಿಗೆಯಿಂದ ವಿನಾಯಿತಿ ಪಡೆಯಲು ಪ್ರಯತ್ನಿಸುವುದಾಗಿ ತಿಳಿಸಿದರು. ಆ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳುವಂತೆ ಶ್ರೀ ವ. ರಮೇಶ ಕಾರಂತ ತಿಳಿಸಿದರು.

ಮಂಡಿಸಿರುವ ಮುಂಗಡ ಲೆಕ್ಕ ಪತ್ರದಲ್ಲಿ ಆದಾಯ ಕಡಿಮೆ ಇದ್ದು, ಖರ್ಚು ಹೆಚ್ಚಿದೆ. ಇದನ್ನು ಸರಿದೂಗಿಸಲು ಇತಿಹಾಸ ದರ್ಶನದ ಪ್ರಕಟಣೆಗೆ ಸದಸ್ಯರು ನೆರವು ನೀಡಬೇಕೆಂದು ತಿಳಿಸಿದರು.

ಮಂಡಿತವಾದ ೨೦೦೨ನೆಯ ಸಾಲಿನ ಮುಂಗಡ ಲೆಕ್ಕ ಪತ್ರವನ್ನು ಒಪ್ಪಬಹುದೆಂಬ ಸೂಚನೆಯನ್ನು ಶ್ರೀ ಎಸ್. ಎಂ. ನಾಗಭೂಷಣ ನೀಡಿದರು. ಆ ಸೂಚನೆಯನ್ನು ಡಾ|| ಎ. ಕೆ. ಶಾಸ್ತ್ರಿ ಅನುಮೋದಿಸಿದರು.

೨೦೦೨ನೆಯ ಸಾಲಿಗೆ ಆಡಿಟರ್ ನೇಮಕ

ಈವರೆಗೆ ಅಕಾದೆಮಿಯ ಲೆಕ್ಕ ಪತ್ರಗಳನ್ನು ಪರಿಶೋಧಿಸಿ ಕೊಟ್ಟಿರುವ ಕೆ.ವಿ. ಆಚಾರ್ಯ (ಆಚಾರ್ಯ ಅಂಡ್ ಕಂಪೆನಿ), ಬೆಂಗಳೂರು ಅವರನ್ನೇ ೨೦೦೨ನೆಯ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಗೂ ನೇಮಿಸಿಕೊಳ್ಳಬಹುದೆಂದೂ, ಅವರಿಗೆ ಈ ವರ್ಷ ದಂತೆಯೇ ರೂ. ೪,೦೦೦ (ನಾಲ್ಕು ಸಾವಿರ) ಮಾತ್ರ ಗೌರವ ಸಂಭಾವನೆ ನೀಡಬಹುದೆಂದೂ ಡಾ|| ಪಿ. ಎನ್. ನರಸಿಂಹಮೂರ್ತಿ ಸೂಚಿಸಿದರು. ಆ ಸೂಚನೆಯನ್ನು ಶ್ರೀ ಕುಂ.ಬಾ. ಸದಾಶಿವಪ್ಪ ಅನುಮೋದಿಸಿದರು.

ಠರಾವುಗಳ ಮಂಡನೆ

೧. ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಮುಖವಾಗಿರುವ ಕೂಡಲಸಂಗಮೇಶ್ವರ ದೇವಾಲಯ ಹಾಗೂ ಇನ್ನಿತರ ಸ್ಥಳಗಳಲ್ಲಿನ ದೇವಾಲಯಗಳ ಪುನರ್ ನಿರ್ಮಾಣದ ಸಂದರ್ಭದಲ್ಲಿ ಒಳಗೋಡೆಗೆ ಹೊಳಪು ಮಾಡಿದ ಕಂದು ಬಣ್ಣದ ಕಣ ಶಿಲೆಯ ಫಲಕಗಳನ್ನು (Polished gray granite slabs) ಕೂಡಿಸುವುದು ಸ್ಮಾರಕಗಳ ಸಂರಕ್ಷಣಾ ನೀತಿಗೆ ವಿರೋಧವಾದ ಕ್ರಮ. ಇದರಿಂದ ಕಲ್ಲಿನ ನೈಜ ಸೌಂದರ್ಯ ಕಳೆದುಹೋಗಿ, ದೇವಾಲಯಗಳ ಗಾಂಭೀರ್ಯ ಮರೆಯಾಗುತ್ತದೆ. ಆದ್ದರಿಂದ ಕರ್ನಾಟಕ ಇತಿಹಾಸ ಅಕಾದೆಮಿಯ ಈ ಸಮ್ಮೇಳನವು ಇಂತಹ ಆಧುನೀಕರಣ ಕ್ರಿಯೆಯನ್ನು ತಕ್ಷಣ ನಿಲ್ಲಿಸಬೇಕೆಂದು ಸರ್ಕಾರವನ್ನು ಒತ್ತಾಯಪೂರ್ವಕವಾಗಿ ವಿನಂತಿಸುತ್ತದೆ.

ಸೂಚನೆ ಮತ್ತು ಮಂಡನೆ : **ಡಾ|| ಎಚ್. ಚಂದ್ರಶೇಖರ್** ಅನುಮೋದನೆ: **ಶ್ರೀ ತ. ರಂ. ಕೃಷ್ಣಗೌಡ**

ಈ ಠರಾವಿನ ಮಂಡನೆಯ ಸಂದರ್ಭ ನಡೆದ ಚರ್ಚೆಯಲ್ಲಿ ಶ್ರೀ ತ.ರಂ. ಕೃಷ್ಣಗೌಡ, ಶ್ರೀ ಸಿದ್ಧಯ್ಯ ಹಿರೇಮಠ, ಶ್ರೀ ಹುಲಿಕುಂಟೆ ಮೂರ್ತಿ ಮತ್ತು ಡಾ॥ ಎಸ್. ನಾಗರಾಜು ಪಾಲ್ಗೊಂಡರು. ಠರಾವಿಗೆ ಸರ್ವಾನುಮತಿ ದೊರೆಯಿತು.

೨. ವಿಜಯನಗರ ಸಾಮ್ರಾಜ್ಯದ ನಂತರ ಕರ್ನಾಟಕ ಸಂಸ್ಕೃತಿಯನ್ನು ಪೋಷಿಸಿ, ಬೆಳೆಸಿದ ಕೆಳದಿ ಅರಸರ ರಾಜಧಾನಿಯಾದ ಬಿದನೂರನ್ನು ಸದ್ಯ 'ನಗರ' ಎಂದು ಕರೆಯಲಾಗುತ್ತಿದೆ. ಈ 'ನಗರ' ಎಂಬ ಹೆಸರನ್ನು ಬದಲಾಯಿಸಿ ಪುನಃ 'ಬಿದನೂರು' ಎಂದು ಪುನರ್ ನಾಮಕರಣ ಮಾಡಬೇಕೆಂದು ಕರ್ನಾಟಕ ಸರ್ಕಾರವನ್ನು ಕರ್ನಾಟಕ ಇತಿಹಾಸ ಅಕಾದೆಮಿಯ ಈ ಸಭೆಯು ಒತ್ತಾಯ ಪೂರ್ವಕವಾಗಿ ವಿನಂತಿಸುತ್ತದೆ

ಸೂಚನ ಮಂಡನ : **ಡಾ॥ ಎಚ್. ಚಂದ್ರಶೇಖರ್.** ಅನುಮೋದನೆ : **ಡಾ॥ ಅ. ಸುಂದರ.**

ಈ ಠರಾವಿನ ಮಂಡನೆಯ ಸಂದರ್ಭ ನಡೆದ ಚರ್ಚೆಯಲ್ಲಿ ಡಾ॥ ಎಸ್. ನಾಗರಾಜು, ಡಾ॥ ಎಚ್. ಆರ್. ರಘುನಾಥ ಭಟ್, ಶ್ರೀ ಶಿವರುದ್ರಯ್ಯ ಅವರು ಮಾತನಾಡಿದರು. ಠರಾವಿಗೆ ಸರ್ವಾನುಮತಿ ದೊರೆಯಿತು.

೩. ಅಕಾದೆಮಿಯ ವಾರ್ಷಿಕ ಸಮ್ಮೇಳನಗಳಲ್ಲಿ ಮಂಡನೆ ಆಗುವ ಸಂಪ್ರಬಂಧಗಳು 'ಇತಿಹಾಸ ದರ್ಶನ'ದ ಮೂಲಕ ಮುದ್ರಣ ಮಾಧ್ಯಮದಲ್ಲಿ ಮಾತ್ರ ದಾಖಲಾಗುತ್ತಿವೆ. ಸಮಕಾಲೀನ ತಂತ್ರಜ್ಞಾನದ ಬಳಕೆಯ ಹಿನ್ನೆಲೆಯಲ್ಲಿ ಇವುಗಳನ್ನು ದೃಶ್ಯಮಾಧ್ಯಮ, ಅಂದರೆ ಸಿ. ಡಿಯ ಮೂಲಕವೂ ದಾಖಲಿಸಿದರೆ, ಇವುಗಳ ಉಪಯೋಗ ಹೆಚ್ಚುತ್ತದೆ. ಆದ್ದರಿಂದ ಅಕಾದೆಮಿಯು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕು ಎಂದು ಅಕಾದೆಮಿಯ ಈ ಸಭೆಯು ಒತ್ತಾಯಿಸುತ್ತದೆ.

ಸೂಚನೆ ಮತ್ತು ಮಂಡನೆ : **ಶ್ರೀ ಹೇಮರಾಜು** ಅನುಮೋದನೆ : **ಶ್ರೀ ಆರ್. ವೆಂಕಟೇಶಮೂರ್ತಿ**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯಕಾರಿ ಸಮಿತಿ ಸೂಚನೆ ಪಡೆದು ಕಾರ್ಯಗತಗೊಳಿಸಲು ಡಾ॥ ಎಸ್. ನಾಗರಾಜು ಸೂಚಿಸಿದರು.

ಇತಿಹಾಸ ದರ್ಶನ ಸಂಪುಟಕ್ಕೆ ನೆರವು

ಅಧ್ಯಕ್ಷರು ಇತಿಹಾಸ ದರ್ಶನ ಸಂಪುಟಕ್ಕೆ ಸದಸ್ಯರು ಕಾಣಿಕೆ ನೀಡಿ ಸಹಕರಿಸಬೇಕೆಂಬ ಪ್ರಸ್ತಾವನೆ ಮಂಡಿಸಿದರು. ವರ್ಷದಿಂದ ವರ್ಷಕ್ಕೆ ಮುದ್ರಣ ವೆಚ್ಚ ಹೆಚ್ಚುತ್ತಿದ್ದು, ಇತಿಹಾಸ ದರ್ಶನವನ್ನು ಪೂರ್ಣವಾಗಿ ಉಚಿತವಾಗಿ ಕೊಡಲು ಕಷ್ಟವಾಗುತ್ತದೆ. ಆದ್ದರಿಂದ ಸದಸ್ಯರು ಕನಿಷ್ಠ (ರೂ. ೫೦ ಐವತ್ತು) ಕಾಣಿಕೆ ನೀಡಿ, ಇತಿಹಾಸ ದರ್ಶನ ಸಂಪುಟವನ್ನು ಪಡೆಯುವುದರಿಂದ ಅಕಾದೆಮಿಯ ಹೊರೆ ಸ್ವಲ್ಪ ತಗ್ಗಿದಂತಾಗುತ್ತದೆ ಎಂದು ಅಧ್ಯಕ್ಷರು ಮನವಿ ಮಾಡಿದರು.

ಡಾ॥ ಎಸ್. ನಾಗರಾಜು ಅವರು ಇತಿಹಾಸ ದರ್ಶನವು ಮಾರಾಟಕ್ಕೆ ಲಭ್ಯವಾಗಬೇಕೆಂಬ ಸೂಚನೆ ನೀಡಿದರು. ಆದರೆ ಅಕಾದೆಮಿಯಲ್ಲಿ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದನ್ನು ಪದಾಧಿಕಾರಿಗಳು ತಿಳಿಸಿದಾಗ ಡಾ॥ ನಾಗರಾಜು ಅವರ ಸೂಚನೆಗೆ ಅನುಮೋದನೆ ದೊರೆಯಲಿಲ್ಲ.

ಮುಂದಿನ ವರ್ಷದಿಂದ, ಅಂದರೆ ಮುಂದಿನ ೧೮ನೆಯ ಸಂಚಿಕೆ ಮತ್ತು ಅನಂತರ, ಮುಂದೆ ನಿರ್ಧಾರ ಆಗುವವರೆಗೆ, ಪ್ರತಿ ಪ್ರತಿಗೆ ರೂ. ೫೦ (ಐವತ್ತು) ಕಾಣಿಕೆ ನೀಡಿ, ಇತಿಹಾಸ ದರ್ಶನದ ಸಂಪುಟಗಳನ್ನು ಪಡೆಯಲು ಎಲ್ಲ ಸದಸ್ಯರೂ ಅನುಮೋದನೆ ನೀಡಿದರು.

೨೦೦೨-೨೦೦೩, ೨೦೦೩-೨೦೦೪ನೆಯ ಸಾಲಿಗೆ ಕಾರ್ಯಕಾರೀ ಸಮಿತಿಯ ಆಯ್ಕೆ

ಹಂಪಿಯಲ್ಲಿ ೯.೭.೨೦೦೦ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ನಂತರದ ಎರಡು ವರ್ಷಗಳ ಅವಧಿಗೆ ಆಯ್ಕೆ ಆಗಿದ್ದ ಕಾರ್ಯಕಾರೀ ಸಮಿತಿಯ ಅವಧಿಯು ಮುಗಿದಿರುವ ಕಾರಣ, ಮುಂದಿನ ಎರಡು ವರ್ಷಗಳ ಅವಧಿಗೆ ಹೊಸದಾಗಿ ೨೦ ಜನರ ಕಾರ್ಯಕಾರೀ ಸಮಿತಿಯ ಆಯ್ಕೆ ಆಗಬೇಕಾಗಿದ್ದು, ಅದಕ್ಕೆ ಸಂಬಂಧಿಸಿದಂತೆ, ಬೆಂಗಳೂರಿನ ಶ್ರೀ ಆರ್. ವೆಂಕಟೇಶ ಮೂರ್ತಿಯವರು ೨೦ ಜನರ ಒಂದು ಪಟ್ಟಿಯನ್ನು ಮಂಡಿಸಿದರು. ಹಂಪಿಯ ಡಾ। ಎಚ್. ತಿಪ್ಪೇಸ್ವಾಮಿ ಅವರು ೨೦ ಜನರ ಇನ್ನೊಂದು ಪಟ್ಟಿಯನ್ನು ಮಂಡಿಸಿದರು. ಎರಡೂ ಪಟ್ಟಿಗಳಲ್ಲಿ ಕೆಲವು ಹೆಸರುಗಳು ಒಂದೇ ಆಗಿದ್ದವು.

ಸಭಾಧ್ಯಕ್ಷತೆ ವಹಿಸಿದ್ದ ಡಾ॥ ಸೂರ್ಯನಾಥ ಕಾಮತ್ ಅವರು ಶ್ರೀ ಆರ್. ವೆಂಕಟೇಶಮೂರ್ತಿ ಅವರು ಮಂಡಿಸಿದ್ದ ಪಟ್ಟಿಯನ್ನು ಒಪ್ಪುವವರು ಕೈ ಎತ್ತಲು ಕೋರಿದಾಗ, ಸಭೆಯಲ್ಲಿದ್ದ ಎಲ್ಲ ಸದಸ್ಯರೂ ಕೈ ಎತ್ತಿ ತಮ್ಮ ಸಮ್ಮತಿ ಸೂಚಿಸಿದರು. ಡಾ॥ ಎಚ್. ತಿಪ್ಪೇಸ್ವಾಮಿ ಮಂಡಿಸಿದ ಎರಡನೆಯ ಪಟ್ಟಿಯನ್ನು ಒಪ್ಪುವವರು ಕೈ ಎತ್ತುವಂತೆ ಕೋರಿದಾಗ, ಡಾ॥ ರು. ಮ. ಷಡಕ್ಷರಯ್ಯ

ಒಬ್ಬರ ವಿನಹ ಮತ್ತೆ ಯಾರೂ ಕೈ ಎತ್ತಲಿಲ್ಲ. ಪಟ್ಟಿಯನ್ನು ಮಂಡಿಸಿದ ಡಾ॥ ಎಚ್. ತಿಪ್ಪೇಸ್ವಾಮಿ ಅವರೂ ಕೈ ಎತ್ತಲಿಲ್ಲ. ಆದ್ದರಿಂದ ಹಾಜರಿದ್ದ ೧೦೦ ಸದಸ್ಯರ ಪೈಕಿ, ೯೯ ಜನ ಸದಸ್ಯರು ಅನುಮೋದಿಸಿದ, ಶ್ರೀ ಆರ್. ವೆಂಕಟೇಶ ಮೂರ್ತಿ ಅವರು ಮಂಡಿಸಿದ, ಅಂದರೆ ಮೊದಲನೆಯ ಪಟ್ಟಿಯಲ್ಲಿದ್ದ ೨೦ ಜನ ಸದಸ್ಯರನ್ನು, ಮುಂದಿನ ಎರಡು ವರ್ಷಗಳ ಅವಧಿಗೆ ಕಾರ್ಯಕಾರೀ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ಅವರ ಹೆಸರುಗಳು ಕೆಳಕಂಡಂತಿವೆ.

೧. ಡಾ॥ ದೇವರಕೊಂಡಾ ರೆಡ್ಡಿ, ಹಂಪಿ
೨. ಪ್ರೊ॥ ಲಕ್ಷ್ಮಣ್ ತೆಲಗಾವಿ, ಹಂಪಿ
೩. ಶ್ರೀ ಅಮರೇಶ ಯತಗಲ್, ಗುರುಗುಂಟಾ
೪. ಶ್ರೀ ಎಂ. ಕೆ. ದುರುಗಪ್ಪ, ಕನಕಗಿರಿ
೫. ಶ್ರೀಮತಿ ಸ್ಮಿತಾ ಸುರೇಬಾನಕರ, ಬೆಳಗಾಂ
೬. ಡಾ॥ ಡಿ. ಎನ್. ಯೋಗೀಶ್ವರಪ್ಪ, ತುಮಕೂರು
೭. ಡಾ॥ ಶೀಲಾಕಾಂತ ಪತ್ತಾರ, ಬಾದಾಮಿ
೮. ಡಾ॥ ಕೆಳದಿ ವೆಂಕಟೇಶ ಜೋಯಿಸ್, ಕೆಳದಿ
೯. ಶ್ರೀ ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ
೧೦. ಶ್ರೀಗುರುಮೂರ್ತಿ ಪೆಂಡಕೂರು, ಹಗರಿಬೊಮ್ಮನಹಳ್ಳಿ
೧೧. ಶ್ರೀ ಎಂ. ಶಿವಶಂಕರಯ್ಯ ಹೊನ್ನಾಳಿ
೧೨. ಡಾ॥ ಚೆನ್ನಕ್ಕ ಪಾವಟೆ, ಧಾರವಾಡ
೧೩. ಡಾ॥ ಎಚ್. ಆರ್. ರಘುನಾಥ ಭಟ್, ಧಾರವಾಡ
೧೪. ಡಾ॥ ಎಚ್.ಎಸ್. ಉಷಾರಾಣಿ, ಮೈಸೂರು
೧೫. ಡಾ॥ ಸೂರ್ಯನಾಥ ಕಾಮತ್, ಬೆಂಗಳೂರು
೧೬. ಪ್ರೊ॥ ಎಂ. ಜಿ. ನಾಗರಾಜ್, ಬೆಂಗಳೂರು
೧೭. ಡಾ॥ ಎಚ್. ಚಂದ್ರಶೇಖರ್, ಬೆಂಗಳೂರು
೧೮. ಶ್ರೀ ಎಂ.ಬಿ. ಪಾಟೀಲ್, ಬೆಂಗಳೂರು
೧೯. ಡಾ॥ ಎಚ್. ಎಸ್. ಗೋಪಾಲರಾವ್, ಅರಸಿನಕುಂಟೆ
೨೦. ಡಾ॥ ಕೆ. ವಸಂತಲಕ್ಷ್ಮಿ, ಬೆಂಗಳೂರು

ಅಕಾದೆಮಿಯ ೧೭ನೆಯ ಸಮ್ಮೇಳನ

ಅಕಾದೆಮಿಯ ಮುಂದಿನ, ಅಂದರೆ ೧೭ನೆಯ ವಾರ್ಷಿಕ ಸಮ್ಮೇಳನವನ್ನು ತಮ್ಮ ಆಶ್ರಯದಲ್ಲಿ ನಡೆಸುವಂತೆ, ೧. ಬಾದಾಮಿಯ ವಿಶ್ವಚೇತನ (ರಿ.,) ಸಂಸ್ಥೆಯ ಅಧ್ಯಕ್ಷರಾದ ಶ್ರೀ ಐ.ಎಸ್.ಶಿರಸಿ ಮತ್ತು ಗೆಳೆಯರು ಖುದ್ದಾಗಿ ಬಂದು ಆಹ್ವಾನಿಸಿ, ಲಿಖಿತ ರೂಪದಲ್ಲೂ ತಮ್ಮ ಆಹ್ವಾನವನ್ನು ಕೊಟ್ಟಿದ್ದಾರೆ ಮತ್ತು ೨. ಹಗರಿಬೊಮ್ಮನಹಳ್ಳಿಯ ಯುವಕರ ಸಂಘ (ರಿ.,) ದ ಕಾರ್ಯದರ್ಶಿ ಶ್ರೀ ಗುರುಮೂರ್ತಿ ಪೆಂಡಕೂರು ಅವರೂ ಸಹ ಖುದ್ದಾಗಿ ಮತ್ತು ಲಿಖಿತ ರೂಪದಲ್ಲಿ ತಮ್ಮ ಆಹ್ವಾನವನ್ನು ನೀಡಿದ್ದಾರೆ. ೩. ಹೊನ್ನಾಳಿಯ ಶ್ರೀ ಎಂ. ಶಿವಶಂಕರಯ್ಯ ಅವರೂ ಸಹ ಮೌಖಿಕವಾಗಿ ತಮ್ಮಲ್ಲಿ ಸಮ್ಮೇಳನ ನಡೆಸಲು ಆಹ್ವಾನ ನೀಡಿದ್ದಾರೆ.

ಈ ಎಲ್ಲ ಆಹ್ವಾನಗಳನ್ನು ಗಮನದಲ್ಲಿಟ್ಟುಕೊಂಡು, ಈವರೆಗೆ ಅಕಾದೆಮಿಯ ಸಮ್ಮೇಳನವು ಬಿಜಾಪುರ ಮತ್ತು ಬಾಗಲ ಕೋಟೆಯ ಪ್ರದೇಶದಲ್ಲಿ ಆಗಿಲ್ಲವಾದ್ದರಿಂದ, ಮುಂದಿನ, ಅಂದರೆ ೧೭ನೆಯ ಸಮ್ಮೇಳನವನ್ನು ಬಾದಾಮಿಯಲ್ಲಿ ನಡೆಸುವುದೆಂದು ತೀರ್ಮಾನಿಸಲಾಯಿತು.

ಅಧ್ಯಕ್ಷರ ಮಾತುಗಳು

ಎಲ್ಲ ಸದಸ್ಯರ ಸಹಕಾರದಿಂದ ಅಕಾದೆಮಿಯ ಒಳ್ಳೆಯ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿದೆ ಮತ್ತು ಈ ಸಹಕಾರ ಹೀಗೆಯೇ ಮುಂದುವರಿಯಬೇಕೆಂದು ಸಭಾಧ್ಯಕ್ಷತೆ ವಹಿಸಿದ್ದ ಡಾ॥ ಸೂರ್ಯನಾಥ ಕಾಮತ್ ಮನವಿ ಮಾಡಿದರು.

ಕೃತಜ್ಞತೆಗಳು

ಅಕಾದೆಮಿಯ ೧೬ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಆಶೀರ್ವದಿಸಿದ್ದು ಮಾತ್ರವಲ್ಲದೆ. ಮುಂದಿನ ಎಲ್ಲಾ ಸಮ್ಮೇಳನಗಳನ್ನೂ ತಮ್ಮಲ್ಲೇ ನಡೆಸಲು ಮುಕ್ತ ಆಹ್ವಾನವಿತ್ತ ಶ್ರೀ ರಾಮಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಮತ್ತು ಅವರ ಎಲ್ಲಾ ಶಿಷ್ಯರಿಗೆ, ಕೆಳದಿಯ ಶ್ರೀ ಗುಂಡಾಜೋಯಿಸ್, ಕೆಳದಿ ವಸ್ತು ಸಂಗ್ರಹಾಲಯದ ಸಿಬ್ಬಂದಿ ಮತ್ತು ಇತರ ಸ್ನೇಹಿತರಿಗೆ ಹಾಗೂ ಸಮ್ಮೇಳನದ ಯಶಸ್ಸಿಗೆ ಕಾರಣರಾದ ಎಲ್ಲರಿಗೆ ಅಕಾದೆಮಿಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಡಾ॥ ಚೆನ್ನಕ್ಕ ಪಾವಟೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಇತಿಹಾಸ ಪ್ರಶಸ್ತಿ ಪರೀಕ್ಷೆಗಳು-೨೦೦೨

೨೦೦೨ನೇ ಸಾಲಿನಲ್ಲಿ ೧೦.೩.೨೦೦೨, ಭಾನುವಾರದಂದು ಮಧ್ಯಾಹ್ನ ೧ ಗಂಟೆಯಿಂದ ೪ ಗಂಟೆಯವರೆಗೆ, ಎರಡನೆಯ ಪಿ.ಯು.ಸಿ. ಇತಿಹಾಸ ವಿದ್ಯಾರ್ಥಿಗಳಿಗಾಗಿ ಕರ್ನಾಟಕದ ಏಳು ಕೇಂದ್ರಗಳಲ್ಲಿ ನಡೆಸಿದ 'ಇತಿಹಾಸ ಪ್ರಶಸ್ತಿ' ಪರೀಕ್ಷೆಗಳಿಗೆ ಒಟ್ಟು

೪೬೪೫ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಶೇಕಡಾ ೮೦ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾಗಿದ್ದಾರೆ. ತೇರ್ಗಡೆಯಾದವರ ಪೈಕಿ ಕೆಳಕಂಡ ವಿದ್ಯಾರ್ಥಿಗಳು ಬಹುಮಾನಗಳನ್ನು ಗಳಿಸಿದ್ದಾರೆ.

ಒಂದನೇ ಬಹುಮಾನ (ರೂ. ೧,೦೦೦): ಕು। ಚನ್ನಬಸವ್ವ ಬಾರಿಕೇರ್, ಜಿ.ಎಸ್.ಎಸ್. ಗ್ರೂಪ್ ಪಿ.ಯು. ಕಾಲೇಜು, ಯೆಲಿವಾಳ, ಕುಂದಗೋಳ ತಾಲ್ಲೂಕು ೫೮೧ ೨೦೭

ಎರಡನೇ ಬಹುಮಾನ (ರೂ. ೬೦೦) : ಕು|| ರೂಪಾಂಜಲಿ ದೇವಿ ಮೈಸೂರಗಿ, ಜಿ.ವಿ. ಹಳ್ಳಿಕೇರಿ ಪಿ.ಯು. ಕಾಲೇಜು, ಹೊಸರಿತ್ತಿ ಹಾವೇರಿ ತಾಲ್ಲೂಕು ೫೮೧ ೨೧೩

ಮೂರನೇ ಬಹುಮಾನ (ರೂ. ೪೦೦) : ಮಂಜುನಾಥ ಎಸ್. ವಿ. ವಿದ್ಯಾವಾಹಿನಿ ಪಿ.ಯು ಕಾಲೇಜು, ತುಮಕೂರು

ಸಮಾಧಾನ ಮತ್ತು ಕೇಂದ್ರದಲ್ಲಿ ಅತ್ಯಂತ ಹೆಚ್ಚಿನ ಅಂಕ ಪಡೆದ ಬಹುಮಾನಗಳು (ರೂ. ೨೦೦)

೪. ಕು|| ಸೌಮ್ಯ ಎಸ್., ಬಸವೇಶ್ವರ ಪಿ.ಯು. ಕಾಲೇಜು, ನೆಲಮಂಗಲ
೫. ಶ್ರೀ ಗಿರೀಶ ಸಿ. ಆರ್., ವಿದ್ಯಾವಾಹಿನಿ ಪಿ.ಯು ಕಾಲೇಜು, ತುಮಕೂರು
೬. ಕು|| ಸರಿತಾ ರಾಠೋಡ್, ವಿದ್ಯಾನಂದ ಗುರುಕಲ ಪದವಿ ಕಾಲೇಜು, ಕುಕನೂರು
೭. ಶ್ರೀ ರುದ್ರೇಶ್ ವೀರಣ್ಣ ಚಿನಿವಾಲರ್, ಜಿ.ವಿ. ಹಳ್ಳಿಕೇರಿ ಪಿ.ಯು. ಕಾಲೇಜು, ಹೊಸರಿತ್ತಿ
೮. ಶ್ರೀ ಕೆ.ಜಿ. ಕುಳ್ಳೇಗೌಡ, ವಿಜಯಾ ಪಿ.ಯು. ಕಾಲೇಜು, ಪಾಂಡವಪುರ (ಕೇಂದ್ರಕ್ಕೆ ವಿ. ಬಹುಮಾನ)
೯. ಕು|| ಉಷಾ ಥಾಮಸ್, ಸೇಕ್ರೆಡ್ ಹಾರ್ಟ್ ಪಿ.ಯು. ಕಾಲೇಜು, ಮಡಂತ್ಯಾರ್ (ಕೇಂದ್ರಕ್ಕೆ ವಿ, ಬಹುಮಾನ)

ಪರೀಕ್ಷೆಗಳ ಯಶಸ್ಸಿಗೆ ಕಾರಣರಾದ ಬೆಂಗಳೂರಿನ ಶ್ರೀ ಸಿ. ಆರ್. ಗಾಡಗೋಳಿ, ಶೇಷಾದ್ರಿಪುರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ|| ಜಿ. ಎಸ್. ವೆಂಕಟರಾಜು ಮತ್ತು ಇತಿಹಾಸ ವಿಭಾಗದ ಪ್ರೊ|| ರಾಧಾಕೃಷ್ಣ, ಎಸ್.ಜೆ. ಆರ್. ಸಿ. ಮಹಿಳಾ ಕಾಲೇಜಿನ ಇತಿಹಾಸ ವಿಭಾಗದ ಡಾ|| ಪಂಪಾದೇವಿ ಮತ್ತು ಕನ್ನಡ ವಿಭಾಗದ ಶ್ರೀ ಸಾಸಲು ವಿಶ್ವನಾಥ್, ತುಮಕೂರಿನ ಸಿದ್ದಗಂಗಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ|| ಊರ್ಮಿಳಾ ದೇವಿ, ಇತಿಹಾಸದ ಪ್ರಾಧ್ಯಾಪಕರಾದ ಡಾ|| ಡಿ. ಎನ್. ಯೋಗೀಶ್ ಹಾಗೂ ನೆಲಮಂಗಲದ ಮುರಳಿ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾದ ಪ್ರೊ| ಹಾಲೇಶಪ್ಪ ಮತ್ತು ಇತರ ಸ್ನೇಹಿತರು. ಮೈಸೂರಿನ ಡಾ|| ಮೈ. ನಾಗರಾಜ ಶರ್ಮ, ಧಾರವಾಡದ ಡಾ|| ಅಜಿತ್ ಪ್ರಸಾದ್ ಜೈನ್ ಹಾಗೂ ಡಾ|| ಎಚ್. ಆರ್. ರಘುನಾಥ ಭಟ್, ಗುಲಬರ್ಗಾದ ಪ್ರೊ|| ವಸಂತ ಕುಷ್ಟಗಿ, ಹಾಗೂ ಮಂಗಳೂರಿನ ಪ್ರೊ|| ರಾಘವೇಂದ್ರ ಪ್ರಭು ಅವರಿಗೆ ಅಕಾದೆಮಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅಂತೆಯೇ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಪರೀಕ್ಷಾ ಸಂದರ್ಭದಲ್ಲಿ ಸಹಕರಿಸಿದ ಆಯಾ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ಅಧಿಕಾರ ವರ್ಗ ಮತ್ತು ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ಮಾಡಿದ ಇತಿಹಾಸ ಉಪನ್ಯಾಸಕರು ಹಾಗೂ ಸ್ಥಳಾವಕಾಶ ನೀಡಿದ ಬಸವೇಶ್ವರ ಶಿಕ್ಷಣ ಸಂಸ್ಥೆಗಳ ಅಧಿಕಾರ ವರ್ಗಕ್ಕೆ ಅಕಾದೆಮಿಯು ಧನ್ಯವಾದಗಳನ್ನು ಸಲ್ಲಿಸುತ್ತದೆ.

ಕಾರ್ಯಕಾರಿ ಸಮಿತಿ ಸಭೆಗಳು

೨೦೦೨ನೆಯ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರೀ ಸಮಿತಿಯು ಐದು ಬಾರಿ (೧೦.೬.೨೦೦೨, ೧೨.೮.೨೦೦೨ ೭.೯.೨೦೦೨, ೨೪.೯.೨೦೦೨ ಮತ್ತು ೯.೧೨.೨೦೦೨) ಸಭೆಸೇರಿ, ಅಕಾದೆಮಿಯ ಚಟುವಟಿಕೆಗಳು ಉತ್ತಮವಾಗಿ ನಡೆಯಲು ಕಾರಣವಾಗಿದೆ. ತಮ್ಮ ಎಲ್ಲಾ ಕಾರ್ಯಕ್ರಮಗಳ ನಡುವೆಯೂ ಬಿಡುವು ಮಾಡಿಕೊಂಡು, ಖುದ್ದಾಗಿ ಪಾಲ್ಗೊಂಡು ಅಥವಾ ಪತ್ರಮುಖೇನ ಸಲಹೆಗಳನ್ನು ನೀಡುತ್ತಾ ಅಕಾದೆಮಿಯ ಕಾರ್ಯಕಾರೀ ಸಮಿತಿಯ ಸದಸ್ಯರೆಲ್ಲರೂ ಸಹಕರಿಸಿದ್ದಾರೆ.

ಸದಸ್ಯ ಬಲ

೨೦೦೨ರ ಅಂತ್ಯಕ್ಕೆ ಅಕಾದೆಮಿಯ ಸದಸ್ಯ ಬಲವು ಈ ಕೆಳಕಂಡಂತಿದೆ.

ಅಜೀವ	ಸಾಮಾನ್ಯ	ಸಂಸ್ಥೆ	ಒಟ್ಟು
೮೮೫	೫	೧೫	೯೦೫

ಅಕಾದೆಮಿಯ ಘಟಕಗಳು

ಡಾ॥ ಬೆಂ. ಶಾ. ಶ್ಯಾಮಲಾ ರತ್ನಕುಮಾರಿ ಅವರ ಅಧ್ಯಕ್ಷತೆ ಹಾಗೂ ಡಾ॥ ಕೆ. ಬಿ. ಸುದರ್ಶನ್ ಅವರ ಪ್ರಧಾನ ಕಾರ್ಯದರ್ಶಿತ್ವದಲ್ಲಿ ಬೆಂಗಳೂರು ಜಿಲ್ಲಾ ಘಟಕ ರಚಿತವಾಗಿದೆ. ಶ್ರೀ ಮಾಧವ ನಾ. ಕಟ್ಟಿ ಅವರ ಅಧ್ಯಕ್ಷತೆ ಹಾಗೂ ಶ್ರೀ ಮೈ. ನಾಗರಾಜ ಶರ್ಮ ಅವರ ಕಾರ್ಯದರ್ಶಿತ್ವದಲ್ಲಿ ಮೈಸೂರು ಘಟಕ ಮುಂದುವರಿದಿದೆ. ಬಳ್ಳಾರಿ ಘಟಕವು ಕಳೆದ ಅವಧಿಯ ಪದಾಧಿಕಾರಿಗಳ ನೇತೃತ್ವದಲ್ಲಿಯೇ ಮುಂದುವರಿದಿದೆ.

ಬೆಂಗಳೂರಿನ ನಗರ ಘಟಕವು ಕಳೆದ ಸಾಲಿನಲ್ಲಿ ಆರಂಭಿಸಿದ ಮಾಸಿಕ ಉಪನ್ಯಾಸ ಮಾಲೆಯ ಉಪನ್ಯಾಸ ಕಾರ್ಯಕ್ರಮಗಳು ಈ ವರ್ಷವೂ ಮುಂದುವರಿದಿದೆ. ೨೦೦೨ನೆಯ ಸಾಲಿನಲ್ಲಿ ೧೨ ಮಾಸಿಕ ಉಪನ್ಯಾಸಗಳು ನಡೆದಿವೆ. ಮಾಸಿಕ ಉಪನ್ಯಾಸಗಳನ್ನು ಪ್ರತಿ ತಿಂಗಳ ಮೊದಲ ಶುಕ್ರವಾರ ಸಂಜೆ ೬ಗಂಟೆಗೆ, ಒಂದು ತಿಂಗಳು ಬೆಂಗಳೂರಿನ ಎನ್ ಆರ್. ಕಾಲೋನಿಯ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲೂ ನಂತರದ ತಿಂಗಳು ರಾಜಾಜಿನಗರದಲ್ಲಿರುವ ಬಸವೇಶ್ವರ ಪದವಿ ಕಾಲೇಜಿನಲ್ಲಿ ನಡೆಸಲಾಗುತ್ತಿದೆ. ಸ್ಥಳಾವಕಾಶ ನೀಡಿ ಸಹಕರಿಸುತ್ತಿರುವ ಬಿ.ಎಂ.ಶ್ರೀ ಪ್ರತಿಷ್ಠಾನ ಮತ್ತು ಬಸವೇಶ್ವರ ಕಾಲೇಜಿನ ಅಧಿಕಾರ ವರ್ಗ ಮತ್ತು ಸಹಕರಿಸುತ್ತಿರುವ ಬಸವೇಶ್ವರ ಶಿಕ್ಷಣ ಸಂಸ್ಥೆಗೆ ಅಕಾದೆಮಿಯು ಕೃತಜ್ಞವಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಡಿಯಲ್ಲಿ ಅಂತರ ಪ್ರೌಢಶಾಲಾ ಭಾಷಣ ಸ್ಪರ್ಧೆಗಾಗಿ, ಡಾ॥ ಸೂರ್ಯನಾಥ ಕಾಮತ್ ಪರ್ಯಾಯ ಪಾರಿತೋಷಕವನ್ನು ಪ್ರಗತಿ ಸಹಕಾರ ಬ್ಯಾಂಕ್, ಮಲ್ಲೇಶ್ವರ ಅವರು ಪ್ರಾಯೋಜಿಸಿದ್ದಾರೆ. ಇದಕ್ಕೆ ಸಹಾಯ ಮಾಡಿರುವವರು ಅಕಾದೆಮಿಯ ಕೋಶಾಧಿಕಾರಿಗಳಾದ ಶ್ರೀ ಎಂ. ಬಿ. ಪಾಟೀಲ್. ಅಂತರಕಾಲೇಜು ಭಾಷಣ ಸ್ಪರ್ಧೆಗಾಗಿ ಡಾ॥ ಜಿ. ಎಸ್. ದೀಕ್ಷಿತ್ ಪರ್ಯಾಯ ಪಾರಿತೋಷಕವನ್ನು ಪ್ರಾಯೋಜಿಸಿರುವವರು, ಅಕಾದೆಮಿಯ ಬೆಂಗಳೂರು ಘಟಕದ ಅಧ್ಯಕ್ಷರಾದ ಡಾ॥ ಬೆಂ. ಶಾ. ಶ್ಯಾಮಲಾ ರತ್ನ ಕುಮಾರಿ. ಅಂತರ ಕಾಲೇಜು ಪ್ರಬಂಧ ಸ್ಪರ್ಧೆಗಾಗಿ ಅಂಗದ ಸ್ಮಾರಕ ಪರ್ಯಾಯ ಪಾರಿತೋಷಕವನ್ನು ಶ್ರೀಯುತ ಗಾಳಿಸ್ವಾಮಿ ಅವರು ಪ್ರಾಯೋಜಿಸಿದ್ದಾರೆ. ಇದಕ್ಕೆ ದಯಾನಂದ ಜೂನಿಯರ್ ಕಾಲೇಜಿನ ಇತಿಹಾಸ ಅಧ್ಯಾಪಕಿ ಶ್ರೀಮತಿ ಭಾಗ್ಯರೇಖಾ ನೆರವಾಗಿದ್ದಾರೆ.

೨೭.೭.೨೦೦೨ರಂದು ನಡೆದ ಡಾ॥ ಸೂರ್ಯನಾಥ ಕಾಮತ್ ಪರ್ಯಾಯಪಾರಿತೋಷಕ ಅಂತರ ಪ್ರೌಢಶಾಲಾ ಭಾಷಣ ಸ್ಪರ್ಧೆಯನ್ನು ಹನುಮಂತನಗರದ ಸುಂಕೇನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಸಲಾಯಿತು. ಪರ್ಯಾಯ ಪಾರಿತೋಷಕ ಮತ್ತು ಪ್ರಥಮ ಬಹುಮಾನವನ್ನು ತ್ಯಾಗರಾಜ ನಗರದ ಎಸ್. ಎಸ್. ಎಂ. ಪ್ರೌಢಶಾಲೆಯ ಕು॥ ಎಂ. ಎನ್. ದಿವ್ಯ ಪಡೆದರು. ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ಕ್ರಮವಾಗಿ ಸುಂಕೇನಹಳ್ಳಿ ಪ್ರೌಢಶಾಲೆಯ ಶ್ರೀ ಬೀರಲಿಂಗಪ್ಪ ಮತ್ತು ಸರಸ್ವತೀ ವಿದ್ಯಾಮಂದಿರದ ಶ್ರೀ ಹೇಮಂತ್ ಪಡೆದುಕೊಂಡರು.

೩.೮.೨೦೦೨ರಂದು ಹಮ್ಮಿಕೊಳ್ಳಲಾಗಿದ್ದ ಡಾ॥ ಜಿ. ಎಸ್. ದೀಕ್ಷಿತ್ ಅಂತರ ಕಾಲೇಜು ಭಾಷಣ ಸ್ಪರ್ಧೆಯಲ್ಲಿ ರಾಜಾಜಿನಗರದ ಎಸ್.ಜೆ.ಆರ್. ಕಾಲೇಜಿನ ಶ್ರೀ ಎನ್. ಭಾಸ್ಕರ್ ಪರ್ಯಾಯಪಾರಿತೋಷಕ ಸಹಿತ ಪ್ರಥಮ ಬಹುಮಾನವನ್ನು ಪಡೆದರು. ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ಕ್ರಮವಾಗಿ ನ್ಯಾಷನಲ್ ಪದವಿ ಕಾಲೇಜಿನ ಕು॥ ಎನ್. ರೂಪಾ ಮತ್ತು ನ್ಯಾಷನಲ್ ಕಿರಿಯ ಕಾಲೇಜಿನ ಎಂ. ಎಲ್. ಚಂದ್ರಿಕಾ ಪಡೆದರು.

೧೦.೮.೨೦೦೨ ನಡೆಸಲಾದ ಅಂಗದ ಸ್ಮಾರಕ ಅಂತರ ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ರಾಜಾಜಿನಗರದ ಎಸ್. ಜೆ. ಆರ್. ಮಹಿಳಾ ಕಾಲೇಜಿನ ಕು॥ ಅನಿತಾ ಎಂ. ಪಟೇಲ್ ಪಾರಿತೋಷಕ ಸಹಿತ ಪ್ರಥಮ ಬಹುಮಾನವನ್ನು ಪಡೆದರು. ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ಕ್ರಮವಾಗಿ ಯಲಹಂಕದ ಶೇಷಾದ್ರಿಪುರಂ ಪದವಿ ಕಾಲೇಜಿನ ಕು॥ ಡಿ. ಎನ್. ಗಂಗಾ ಮತ್ತು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಕು॥ ಎಸ್. ಗಿರಿಜಾ ಪಡೆದರು.

ಪ್ರತಿಯೊಂದು ಪರ್ಯಾಯ ಪಾರಿತೋಷಕವನ್ನು ಪ್ರಾಯೋಜಿಸಿರುವ ದಾನಿಗಳಿಗೆ ಮತ್ತು ಬಹುಮಾನಗಳ ಪ್ರಾಯೋಜಕರಿಗೆ ಅಕಾದೆಮಿಯ ಬೆಂಗಳೂರು ಘಟಕವು ಕೃತಜ್ಞತೆ ಸಲ್ಲಿಸುತ್ತದೆ.

ಕೃತಜ್ಞತೆಗಳು

ಅಕಾದೆಮಿಯ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಕ್ಕೆ ನೆರವು ನೀಡುತ್ತಿರುವ ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯ, ಅಕಾದೆಮಿಯ ಹಲವಾರು ಕಾರ್ಯಗಳಿಗೆ ಸಹಯೋಗ ನೀಡಿ ಸಹಕರಿಸುತ್ತಿರುವ ಬೆಂಗಳೂರಿನ ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬಿ. ಆರ್. ಆರ್. ಫ್ಯಾಮಿಲಿ ಟ್ರಸ್ಟ್,

ಲಕ್ಷ್ಮಿ ಮುದ್ರಣಾಲಯ ಮತ್ತು ಶ್ರೀ ಅಶೋಕ ಕುಮಾರ್, ವಾಗ್ದೇವಿ ಮುದ್ರಣಾಲಯ, ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ, ಪ್ರಗತಿ ಸಹಕಾರ ಬ್ಯಾಂಕ್, ಬಸವೇಶ್ವರ ಕಾಲೇಜಿನ ಅಧಿಕಾರ ವರ್ಗ ಮತ್ತು ಸಿಬ್ಬಂದಿ, ೧೬ನೆಯ ಸಮ್ಮೇಳನಕ್ಕೆ ಆಶ್ರಯ ನೀಡಿದ್ದ ಶ್ರೀರಾಮಚಂದ್ರಾಪುರ ಮಠದ ಧರ್ಮಚಕ್ರ ಟ್ರಸ್ಟ್ ಮತ್ತು ಶ್ರೀ ಮಠದ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಮತ್ತು ೧೭ನೆಯ ಸಮ್ಮೇಳನಕ್ಕೆ ಆಶ್ರಯ ನೀಡಿರುವ ಬಾದಾಮಿಯ ತರುಣ ಮಿತ್ರರ ವಿಶ್ವಚೇತನ ಸಂಸ್ಥೆಯ ಅಧ್ಯಕ್ಷರಾದಿಯಾಗಿ ಎಲ್ಲ ಪದಾಧಿಕಾರಿಗಳು ಮತ್ತು ಅಕಾದೆಮಿಯ ಇತಿಹಾಸ ಪ್ರಶಸ್ತಿ ಪರೀಕ್ಷೆಗಳ ಸಂದರ್ಭ ಸಹಕರಿಸಿರುವ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ಮತ್ತು ಇನ್ನೂ ಅನೇಕ ವಿಶ್ವಾಸಿಗಳಿಗೆ ಅಕಾದೆಮಿಯು ಕೃತಜ್ಞವಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿಯ ಮೇರೆಗೆ

ಡಾ|| ಸೂರ್ಯನಾಥ ಕಾಮತ್
ಅಧ್ಯಕ್ಷರು

ಎಂ.ಜಿ. ನಾಗರಾಜ್, ಡಾ||ಎಚ್.ಆರ್.ರಘುನಾಥಭಟ್
ಉಪಾಧ್ಯಕ್ಷರು

ಡಾ|| ಎಚ್.ಎಸ್. ಗೋಪಾಲರಾವ್
ಪ್ರಧಾನ ಕಾರ್ಯದರ್ಶಿ

ಎಂ.ಬಿ. ಪಾಟೀಲ್
ಕೋಶಾಧಿಕಾರಿ

ಡಾ|| ಕೆ. ವಸಂತಲಕ್ಷ್ಮಿ
ಡಾ|| ಚೆನ್ನಕ್ಕ ಪಾವಟೆ
ಕಾರ್ಯದರ್ಶಿಗಳು

ACHARYA & CO.,
CHARTERED ACCOUNTANTS

'SRI KRISHNA'
13/3, Pampamahakavi Road
BANGALORE-560 004
PHONE : 6509606
FAX : 080-6618897

Date ....

AUDITOR'S REPORT

The Members of Karnataka Ithihasa Academy (R).

We have audited the Balance Sheet of Karnataka Ithihasa Academy as at 31st December 2002 and Income and Expenditure Account on that date annexed thereto and report that:

1. We have obtained all the information and explanations which to the best of our knowledge and belief were necessary for the purpose of our audit.
2. The Balance Sheet and the Income and Expenditure Account dealt with by this report are in agreement with the Books of Account.
3. In our opinion and to the best of our information and according to the explanations given to us, the accounts give a true and fair view:
   - i) in the case of Balance Sheet of the state of affairs of the Academy as at 31st December 2002 and
   - ii) in the case of Income and Expenditure Account of the Income for the year ended on that date.

FOR ACHARYA & CO.,
Chartered Accountants

Bangalore,
19th August 2003

(Sd)
(K.V. Acharya)
Partneres

KARNATAKA ITHIHASA ACADEMY (R) : BANGALORE - 560 019

Receipts And Payments Account For The Year Ended 31st December, 2002

RECEIPTS		AMOUNT (Rs.)
To Balance B/f		
To Cash in Hand	76.44	
To Cash at Syndicate Bank S.B.A/cNo 12467	12,605.70	12,682.14
To Life Membership Fees	18,050.00	
To Annual Membership Fees	50.00	18,100.00
To Donations Received		12,650.00
To 'Save Historical Heritage Week' Celebrations - Financial Assistance		25,000.00
To Financial Assistance for Printing of Ithihasa Darshana Vol. XVII (from State Govt)		15,000.00
To Loan on FD from Pragathi Co-op Bank Ltd		40,000.00
To Fixed Deposit with Pragathi Co-op Bank Ltd (Encashment of FD)		50,000.00
To Sale of Publications		2,645.00
To K.H. Exam Fees		2,32,217.00
To Interest on - F.D. A/c(P.S)	63,571.00	
- S.B. A/c	1,501.00	65,072.00
To **Miscellaneous Receipts**		
Entry fees for competitions	1,060.00	
Delegation fees for Annual Conference	800.00	
Sale of old answer books	950.00	
Others	500.00	
		3,310.00
Total Rs.		**4,76,676.14**

PAYMENTS		AMOUNT (Rs.)
By F.D. with Pragathi Co.op. Bank Ltd.,		50,000.00
By Investment in Shares of Pragathi Co-op Bank Ltd (10 Shares of Rs. 100/- each)		1,000.00
By 'Save Historical Heritage Week' Celebrations - Expenses		36,636.00
By Printing of Ithihasa Darshana Vol. XVII		93,000.00
By 16th Annual Conference Expenses		38,960.00
By Repayment of Loan to Pragathi Co-op Bank Ltd		40,000.00
By Tax Deducted at Source on FD interest		13,075.00
By K.H. Exam Expenditure		1,41,757.00
By Rent for the Year		11,550.00
By Rent Paid in advance		3,000.00
By Printing & Stationery		6,673.00
By Postage & Telegrams		9,602.00
By Conveyance		3,720.00
By Audit fees for 2001		3,000.00
By Certification Charges		1,000.00
By Interest on Bank Loan		833.00
By Bank Charges		32.00
By **Miscellaneous Expenses**		
Seminar Expenses	6,414.00	
Filing of Return	500.00	
Others	135.00	7,049.00
By **Balance C/d:**		
Cash on Hand	2,086.44	
Cash at Syndicate Bank SB A/c No. 12467	12,952.70	
Cash at Pragathi Co-op. Bank Ltd S.B.A/c No. 6609	750.00	15,789.14
Total		**4,76,676.14**

Bangalore
19th August 2003

S.U. Kamath
President

H.S. Gopal Rao
Gen. Secretary

M. B. Patil
Treasurer

for Acharya & Co.,
(K.V. Acharya)
Chartered Accountant

KARNATAKA ITHIHASA ACADEMY (R.) : BANGALORE - 560 019

Income And Expenditure Account For The Year Ended 31st December, 2002

EXPENDITURE		AMOUNT (Rs.)
To 'Save Historical Heritage Week' Celebration expenses		36,636.00
To Printing of Ithihasa Darshana Vol. XVII		93,000.00
To 16th Annual Conference Expenses		38,960.00
To K.H. Exam Expenditure		1,41,757.00
To Rent		11,550.00
To Printing & Stationery		6,673.00
To Postage & Telegrams		9,602.00
To Conveyance		3,720.00
To Audit Fees		3,000.00
To Bank Charges		32.00
To Interest on Bank Loan (Per Sch)		833.00
To Certification Charges		1,000.00
To **Miscellaneous Expenses**		
Seminar Expenses	6,414.00	
Filing of Return	500.00	
Others	135.00	7,049.00
Depreciation		229.00
Excess of Income over Expenditure		27,013.00
Total		**3,81,054.00**

INCOME		AMOUNT (Rs.)
By Annual Membership Fees		50.00
By Donations Received		12,650.00
By 'Save Historical Heritage Week' Celebrations-Financial Assistance		25,000.00
By Financial assistance for printing of Ithihasa Darshana Vol. XVII		15,000.00
By K.H. Exam Fees Receipts		2,32,217.00
By Sale of Publications		2,645.00
By Stock of Publications		25,110.00
By Interest on : FD A/c/ (P.S.)	63,571.00	
SB A/C	1,501.00	65,072.00
By **Miscellaneous Receipts**		
Entry Fees for Competitions	1,060.00	
Delegation Fees for Annual Conference	800.00	
Sale of old answer books	950.00	
Others	500.00	3,310.00
Total		**3,81,054.00**

Bangalore
19th August 2003

S.U. Kamath
President

H.S. Gopal Rao
Gen. Secretary

M. B. Patil
Treasurer

for Acharya & Co.,
(K.V. Acharya)
Chartered Accountant

KARNATAKA ITHIHASA ACADEMY (R.) : BANGALORE - 560 019

Balance Sheet As At 31st December, 2002

LIABILITIES		AMOUNT (Rs.)	ASSETS		AMOUNT (Rs.)
Endowment Fund (as Last Balance Sheet)		95,000.00	Furniture and Fixtures	2,291.47	
Life Membership Fees :			**LESS** : Depreciation. 10%	229.00	2,062.47
As per Last Balance Sheet	3,18,608.00		Investment in Pragathi Co-op Bank		
ADD : Collected during the year	18,050.00	3,36,658.00	(10 Shares of Rs. 100/- Ltd each)		1,000.00
Excess of Income over			Fixed Deposit with the		
Expenditure :			Pragathi Co.op. Bank Ltd., (per.sch)		4,95,000.00
As per last Balance Sheet	93,365.61		Stock of Publications		25,110.00
ADD : Excess of Income			Rent paid in advance		3,000.00
over Expenditure for the year	27,013.00	1,20,378.61	Tax Deducted at sources (p.s)		13,075.00
Outstanding Liabilities for			**Cash And Bank Balances:**		
Expenses - Audit Fees		3,000.00	Cash on Hand	2,086.44	
			Cash at Syndicate		
			SB A/c No. 12467	12,952.70	
			Cash at Pragathi Co-op. Bank Ltd.,		
			S.B.A/c No. 6609	750.00	15,789.14
	Total	**5,55,036.61**		Total	**5,55,036.61**

Bangalore
19th August 2003

S.U. Kamath
President

H.S. Gopal Rao
Gen. Secretary

M. B. Patil
Treasurer

for Acharya & Co.,
(K.V. Acharya)
Chartered Accountant

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ
ನರಸಿಂಹರಾಜಾ ಕಾಲೋನಿ, ಬೆಂಗಳೂರು - ೫೬೦ ೦೧೯

ಅಂದಾಜು ಆಯ-ವ್ಯಯಪಟ್ಟಿ - ೨೦೦೩

ಕ್ರ.ಸಂ.	ನಿರೀಕ್ಷಿತ ಆದಾಯ	ರೂ.	ಅಂದಾಜು ಖರ್ಚು	ರೂ.
೧.	ಆಜೀವ ಸದಸ್ಯತ್ವದ ಶುಲ್ಕ	೨೦,೦೦೦	ಪ್ರಶಸ್ತಿ ಪರೀಕ್ಷೆ (೨೦೦೩)	೧,೧೮,೩೮೨
೨.	ಸದಸ್ಯತ್ವದ ಬಾಕಿ	೨,೦೦೦	ಸರ್ವಸದಸ್ಯರ ಸಭೆ ಮತ್ತು ವಾರ್ಷಿಕ	
೩.	ಪ್ರಶಸ್ತಿ ಪರೀಕ್ಷೆ (೨೦೦೩) ನಿವ್ವಳ ಆದಾಯ	೧,೭೮,೪೧೦	ಸಮ್ಮೇಳನದ ಖರ್ಚು	೩೦,೦೦೦
೪.	ದೇಣಿಗೆ : i. (ಸಾಮಾನ್ಯ)	೧೫,೦೦೦	ಇತಿಹಾಸ ದರ್ಶನ (೧೮) ಮುದ್ರಣ	೬೦,೦೦೦
	ii. ವಿಶೇಷ (ಇ.ದ. ೧೮)	೧೦,೦೦೦	ಇತರೇ ಮುದ್ರಣವೆಚ್ಚ	೫,೦೦೦
೫.	**ಆರ್ಥಿಕ ನೆರವು**		(ಉಪನ್ಯಾಸಗಳಿಗೆ)	
	i. ಪರಂಪರೆ ಉಳಿಸಿ ಸಪ್ತಾಹ	೨೫,೦೦೦	ಲೇಖನ ಸಾಮಗ್ರಿ	೨,೦೦೦
	ii. ಇ.ದ ೧೮ರ ಮುದ್ರಣ	೧೫,೦೦೦	ಫರ್ನಿಚರ್ (ಕಛೇರಿಗೆ)	೩,೨೦೦
೬.	ಠೇವಣಿಗಳ ಮೇಲಿನ ಬಡ್ಡಿ	೪೫,೦೦೦	ಬೆರಳಚ್ಚು, ಜೆರಾಕ್ಸ್	೨,೦೦೦
೭.	ಪ್ರವಾಸಿ ಗ್ಯಾಸೆಟ್ಟಿಯರ್ ಸಂಕಲನಕ್ಕೆ	೯೮,೦೦೦	ಅಂಚೆ ಮತ್ತು ಕೋರಿಯರ್ ಸರ್ವೀಸ್	೫,೦೦೦
	ಅನುದಾನ ಸರ್ಕಾರದಿಂದ		ಪರಂಪರೆ ಉಳಿಸಿ, ಸಪ್ತಾಹ	೫೦,೦೦೦
	(ರೂ ೫೦,೦೦೦ ಬಿಡುಗಡೆಯಾಗಿದೆ)		ಪುದುವಟ್ಟು ನಿರ್ವಹಣಾ ವೆಚ್ಚ	೧೫,೦೦೦
೮.	ಇತರೇ	೩,೦೦೦	ಕಛೇರಿ ಬಾಡಿಗೆ (ಮುಂಗಡ)	೧೫,೦೦೦
		೪,೧೧,೪೧೦	(ಮಾರ್ಚ್೨೦೦೪ರವರೆಗೆ)	
	ಆದಾಯಕ್ಕಿಂತ ಹೆಚ್ಚುವರಿ ಖರ್ಚು	೧೮,೧೭೨	ಸಂಚಾರ ವೆಚ್ಚ (Conveyance)	೫,೦೦೦
			ಪ್ರವಾಸ ವೆಚ್ಚ	೨,೦೦೦
			ಲೆಕ್ಕ ತಪಾಸಣಾ ಖರ್ಚು	೪,೦೦೦
			ಪ್ರವಾಸಿ ಗ್ಯಾಸೆಟ್ಟಿಯರ್ ಸಂಕಲನ ವೆಚ್ಚ	೯೮,೦೦೦
			ಇತರೇ ಖರ್ಚುಗಳು	೧೦,೦೦೦
			ಸ್ಥಳೀಯ ಘಟಕಗಳಿಗೆ ನೆರವು	೫,೦೦೦
		೪,೨೯,೫೮೨		೪,೨೯,೫೮೨

(ಎಂ. ಬಿ. ಪಾಟೀಲ್)
ಕೋಶಾಧಿಕಾರಿ






ಕರ್ನಾಟಕ ಇತಿಹಾಸ ಅಕಾದೆಮಿ (ರಿ)






ಇತಿಹಾಸ ಸಂಶೋಧನೆ
ನಮ್ಮ ತಿಳಿವಿನ ವರ್ಧನೆ



ಕೋಟೆ ಕೊತ್ತಲದ ಕಲ್ಲು ಕಿತ್ತರೆ
ಪ್ರಾಚೀನ ಪರಂಪರೆಯ ಪಂಚಾಂಗ ಕಿತ್ತಂತೆ

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ

೨೦೦೭-೦೮

ನೆರವು: ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ

